## —: ಈ ಸಂಚಿಕೆಯಲ್ಲಿ :—


ೋಗಿಲೆ ( ಕವನ )
ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು ೩೪೧

ಂಕಾ ಸಮಾಧಾನ ( ಕವನ )
ಶ್ರೀ. 'ಕಾವ್ಯಾನಂದ' ನಾಂದೇಡ ೩೪೪

ರ್ನಾಟಕಕ್ಕೆ ೧೦೦ ಕೋಟಿಯ ಯೋಜನೆ (ಆರ್ಥಿಕ ವಿಚಾರ)
ಶ್ರೀ. ಕೃಷ್ಣಕುಮಾರ, ಎಂ. ಎ. ಅಂಧೇರಿ ೩೪೫

ದಿನೂನವನ ಚರಿತ್ರೆ ( ಸಣ್ಣ ಕತೆ )
ಶ್ರೀ. ಬಿ. ವಿ. ಕಾಟೀರಾಮಶಾಸ್ತ್ರಿ 'ಸಾಹಿತ್ಯರತ್ನ' ಮೈಸೂರು ೩೪೯

ೂಡಗಿನಲ್ಲಿ ಕನ್ನಡದ ಸಾಡು ( ವಸ್ತುಸ್ಥಿತಿದರ್ಶನ )
"ನಾರದ" ೩೫೩

ುಖ್ಯ ಪರೀಕ್ಷಕ ( ಸಣ್ಣ ಕತೆ )
ಶ್ರೀ. ಕೆ. ಅಶ್ವತ್ಥನಾರಾಯಣರಾವ್, ಬನಾರಸ ೩೫೫

ರ್ನಾಟಕ ಚಳವಳಿಯಲ್ಲಿ ಧಾರವಾಡದ ಭಾಗ (ಸಂಜಯಾಕ್ಯಕ)
ಶ್ರೀ. ಮುದವೀಡು ಕೃಷ್ಣರಾಯರು, ಧಾರವಾಡ ೩೫೯

ಗೆ ಏಕೆ? ( ಒಂದು ಸಮಸ್ಯೆ )
ಶ್ರೀ. ಎಸ್. ಆರ್. ಬೆಟಗೇರಿ, ಬಿ. ಎ., ಬಿ. ಟಿ. ಧಾರವಾಡ ೩೬೨

ರಟೆ ಎಂಬ ಹರಟೆ ( ಲಘುಪ್ರಬಂಧ )
ಶ್ರೀ. ವಿ. ಎಂ. ಇನಾಮದಾರ್, ಎಂ. ಎ. ಮುಂಬೈ ೩೬೪

ೀಜರ್ ಬೇಕನ್ ( ಜೀವನ ಪರಿಚಯ )
ಶ್ರೀ. ಕೆ. ಎಸ್. ಸವಣೂರ, ಎಂ. ಎಸ್‌ಸಿ. ಧಾರವಾಡ ೩೬೭

ಳ್ಳಾದ ಕನ್ನಡ ಸಾಹಿತ್ಯದ ಪ್ರಗತಿ (ಸಾಹಿತ್ಯಾವಲೋಕನ)
ಶ್ರೀ. ಎಚ್. ಎಸ್. ಪಾಟೀಲ, ಎಂ. ಎ., ಬಿ. ಕಾಮ್. ೩೭೯

ದೆ ಸಂಪಾದಕೀಯ, ಮುಂಗನ ಮಲ್ಲಿನಾಥನ ಮುಂತಾದುವು.

# ಸಂಪಾದಕೀಯ

## ಮದರಾಸಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

ಈ ಸಂಚಿಕೆ ನಮ್ಮ ವಾಚಕರ ಕೈಸೇರುವ ಹೊತ್ತಿಗೆ ಕನ್ನಡ ಸಾಹಿತ್ಯ ಸಮ್ಮೇಳನದ ೯೯ನೆಯ ಅಧಿವೇಶನ ಸೇರಿ ಮುಗಿದಿರುವುದು. ವೈಶಿಷ್ಟ್ಯ ಪೂರ್ಣವಾದ ಈ ಸಲದ ಈ ಅಧಿವೇಶನವು ಯಶಸ್ವಿಯಾಗಿ ಕೊನೆಗೊಳ್ಳುವುದರಲ್ಲಿ ಸಂದೇಹವಿಲ್ಲ.

ಕನ್ನಡ ನಾಡಿನ ಹೊರಗೆ ನಮ್ಮ ಸಾ. ಸಮ್ಮೇಳನ ಸೇರುವುದು ಇದೀಗ ಮೂರನೆಯ ಬಾರಿ. ಮೊದಲನೆಯ ಸಲ (೧೯೭೪) ಮುಂಬಯಿಯಲ್ಲಿ; ಎರಡನೆಯದು (೧೯೪೧) ಹೈದರಾಬಾದಿನಲ್ಲಿ; ಮೂರನೆಯದು ಇದೀಗ ಮದರಾಸ್ ನಗರದಲ್ಲಿ. ಕನ್ನಡ ನಾಡಿನ ಹೊರಗೆ ಹೀಗೆ ಸಮ್ಮೇಳನಗಳು ಸೇರುವುದಕ್ಕೆ ಮುಖ್ಯ ಕಾರಣವೆಂದರೆ ಈಗ ಬಹುಸಂಖ್ಯಾಕ ಸುಶಿಕ್ಷಿತ ಕನ್ನಡಿಗರು ಬೇರೆ ಬೇರೆ ಉದ್ಯೋಗನಿಮಿತ್ತವಾಗಿ ಬೇರೆ ಬೇರೆ ರಾಜಧಾನಿ ನಗರಗಳಲ್ಲಿ ನೆಲಸತೊಡಗಿರುವುದು. ಇಂದು ದಿಲ್ಲಿ, ಕಲಕತ್ತೆಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನೆರೆಯುವುದೂ ಸುಲಭವೆನಿಸುವಂತಾಗಿದೆ—ಅಲ್ಲಿಯ ಕನ್ನಡಿಗರ ವಸತಿಯ ಮೂಲಕ.

ಮದರಾಸ ನಗರ ಕನ್ನಡಿಗರಿಲ್ಲವೆನಿಸುವಂತಿದ್ದರೂ, ಇಂದಿನ ಆಡಳಿತದ ವಿಭಾಗಗಳ ಮೂಲಕ ಕನ್ನಡಿಗರ ಸಾಂಸ್ಕೃತಿಕ ರಾಜಕೀಯ ಹಿತ ಸಂಬಂಧ ಮದರಾಸಿನೊಂದಿಗೆ ತಮಿಳು-ತೆಲುಗರಷ್ಟೇ ಇದೆ. ಮದರಾಸ ವಿಶ್ವವಿದ್ಯಾನಿಲಯ ಕನ್ನಡವನ್ನೂ ಪ್ರಾಂತೀಯ ಭಾಷೆಯೆಂದೆಣಿಸಿ ಅದರ ಪದವಿ ಪೂರ್ವ-ಪರೀಕ್ಷೆಗಳನ್ನೂ ನಡೆಯಿಸುತ್ತಿದೆ. ಕನ್ನಡ ಪ್ರದೇಶದಲ್ಲಿರುವ ನಾಲ್ಕಾರು ಕಾಲೇಜುಗಳು ಮದರಾಸು ವಿಶ್ವವಿದ್ಯಾನಿಲಯಕ್ಕೇ ಸೇರಿದುವಾಗಿವೆ. ಆಗಾಗ ಕನ್ನಡ ಗ್ರಂಥಗಳನ್ನೂ ವಿಶ್ವವಿದ್ಯಾನಿಲಯ ಪ್ರಕಟಿಸುವುದು. ಮದರಾಸ್ ಇಲಾಖೆಯ ವಿದ್ಯಾಭ್ಯಾಸದಲ್ಲಿ ಮದ್ರಾಸ ಕರ್ನಾಟಕದಲ್ಲಿಯೂ ವಿದ್ಯಾಪ್ರಸಾರದ ಜೀಲಘಿಕಾರವನ್ನು ಹೊಂದಿದೆ. ಅದರಂತೆಯೆ ಮುಖ್ಯ ನ್ಯಾಯಾಲಯ. ಇಷ್ಟೆ ಅಲ್ಲದೆ ಮದರಾಸಿನಲ್ಲಿ ಬಹುಸಂಖ್ಯಾಕರೆ ಭಾಷೆಯಾದ ತಮಿಳು ತೆಲುಗುಗಳು ಕನ್ನಡಕ್ಕೆ ದೂರದುವೆಗಳಲ್ಲ; ನೂರೂ ಒಂದೆ ಪಾಯನುಕ್ಕಳು. ಭಾಷಾಭ್ಯಾಸಗಳು ಪರಸ್ಪರ ಭಾಷೆಯನ್ನು ಪರಸ್ಪರರು ಪಿಮರ್ಶಾತ್ಮಕವಾಗಿ ಅಭ್ಯಸಿಸಲೇ ಬೇಕಾಗುವುದು. ಇವೇ ಮೊದಲಾದ ಕಾರಣಗಳಿಂದ ಕನ್ನಡಿಗರಿಗೆ ಮದರಾಸಿನಲ್ಲಿ ತಮ್ಮ ಸಾಹಿತ್ಯ ಸಮ್ಮೇಳನ ನೆರೆಪಿಸಲಿಕ್ಕೆ ಸ್ವಾಭಾವಿಕವಾದ ಹಕ್ಕು ಉಂಟು. ಕನ್ನಡಿಗರ ಅಕ್ರಮಣ ಬುದ್ಧಿ ಇದರಲ್ಲಿಲ್ಲವೆಂಬುದನ್ನು ಸಂಪೂರ್ಣ ಅರಿತವರಾದ ಮದರಾಸಿನ ತೆಲುಗು ತಮಿಳು ಸುಶಿಕ್ಷಿತ ವರ್ಗವೂ ಈ ಸಮ್ಮೇಳನವನ್ನು ಸಂತೋಷದಿಂದ ಸ್ವಾಗತಿಸುವುದೆಂಬುದರಲ್ಲಿ ಸಂದೇಹವಿಲ್ಲ. ತಮಿಳು ನಾಡಿನ ಮುಂಬಾಳುಗಳೂ ಒಳ್ಳೆಯ ಸಾಹಿತಿಗಳೆಂದು ಹೆಸರು ವಾಸಿಗಳೂ ಆದ ಶ್ರೀಮಾನ್ ಸಿ. ರಾಜಗೋಪಾಲಾಚಾರ್ಯರು ಸಮ್ಮೇಳನವನ್ನು ಸ್ವಾರಂಭಿಸುವವರಿದ್ದುದೇ ಆ ಸಂತೋಷ ಸ್ವಾಗತದ ರುಚಿಭಾಷ್ಪೆಯು. ಬೇಜ ಬೇತನೆಂದು ಕನ್ನಡಿಗರು ಕೂಗಿಬೈದೂ ಮುರಾಟಿಗರು ಆಕ್ರಮಣ ಬುದ್ಧಿಯಿಂದ ಬೆಳಗಾಂನಿಯಲ್ಲಿ ತಮ್ಮ ಸಾಹಿತ್ಯ ಸಮ್ಮೇಳನ ನೆರೆಯಿಸಿದರು. ಬಹುತ್ವಾಯದ ವಿರೋಧವನ್ನು ತೋಲಿಸಿದರೂ ಆಂಧ್ರರು ಬಳ್ಳಾರಿಯಲ್ಲಿ ಬಲಾತ್ಕಾರದಿಂದ ತಮ್ಮ ಪುಪಾಕಳೆಯ ಅಧಿವೇಶನವನ್ನು ಕೂಡಿಸಿ ಕನ್ನಡಿಗರ ಮನಸ್ಸನ್ನು ನೋಯಿಸಿದರು. ಕನ್ನಡಿಗರಲ್ಲಿ ಈ ಬಗೆಯ ಆಕ್ರಮಣ ವೃತ್ತಿ ಇಲ್ಲ; ಅವರಿಗದು ಬೇಕಾಗಿಯೂ ಇಲ್ಲ. ತಮ್ಮ ಮನೆಯಲ್ಲಿ ತಾವು ಸುಖವಾಗಿದ್ದು, ಸರಳ ಬುದ್ಧಿಯಿಂದ ನೆರೆಯವರೊಂದಿಗೆ ಕೂಡು-ಕೊಳು ನಡೆಯಿಸಿ, ಸ್ನೇಹದಿಂದ ಜರ್ತಿಸಬೇಕೆಂಬ ಹಂಬಲು ಕನ್ನಡಿಗರದು. ಈ ಹಂಬಲಕ್ಕಾಗಿಯೇ ತಮ್ಮ ಎಷ್ಟೋ ಪ್ರದೇಶವನ್ನು ನೆರೆಯವರಿಗೆ ಬಿಟ್ಟುಕೊಡಲಾಗಿದೆ ಕೂಡ. ಆದರೂ ತೃಪ್ತಿಯಿಲ್ಲದೆ ನೆರೆಯವರು ಎಬ್ಬಟ್ಟಿಗೆ ನಡೆಯಿಸತೊಡಗಲು, ಕನ್ನಡಿಗರು ಅನಿವಾರ್ಯವಾಗಿ ಎದೆಯನ್ನು ಕಲ್ಲುಮಾಡಿಕೊಳ್ಳಬೇಕಾಯಿತು. ಆಕ್ರಮಣಕಾರರನ್ನು ತಡೆಯುವ ಪಂಚಿಕೆಗಳನ್ನು ಹುಡುಕಬೇಕಾಯಿತು. ಮದರಾಸಿನಲ್ಲಿ ನೆರೆವ ಸಮ್ಮೇಳನ ತೆಲುಗರಿಗೂ ತಮಿಳರಿಗೂ ಕನ್ನಡಿಗರ ಹೃದಯ ಬಿಚ್ಚಿ ತೋರಿಸಲಿ; ತಮಿಳರ ತೆಲುಗರ ಸ್ನೇಹ ಸಂಪಾದಿಸಿ, ಅದರ ನೆರವಿನಿಂದ ಕರ್ನಾಟಕದ ದಕ್ಷಿಣ. ಪೂರ್ವ ಪೇರೆಗಳನ್ನು ಭದ್ರಗೊಳಿಸಲು ಸಮರ್ಥವಾಗಲಿ! ಸಾಂಸ್ಕೃತಿಕ ಮಪತ್ತ್ವವನ್ನೆರಿತ ಸಾಹಿತಿ ಸಾಹಿತಿಗಳೇ ಈ ಭಾಷೆ ಭಾಷೆಗಳಲ್ಲಿಯ ನೈಮನಸ್ಯ ತೊಡೆದುಹಾಕಬಹುದಲ್ಲದೆ, ರಾಜಸಿಗಳಾದ ರಾಜಕೀಯ ಧುರೀಣರಿಂದ ಈ ಸೂತು ಸಾಧ್ಯವಾಗದು.

## ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

ಮದರಾಸಿನಂತಹ ಅಂತರ ಪ್ರಾಂತೀಯ ನಗರದಲ್ಲಿ ನೆರವ ಸಮ್ಮೇಳನಕ್ಕೆ ಶ್ರೀಮಾನ್ ಟಿ. ಪಿ. ಕೈಲಾಸಂ ಅವರಂತಹ ಅಂತರ ಪ್ರಾಂತೀಯ ಕೀರ್ತಿಶಾಲಿಗಳಾದ ಕನ್ನಡ ಸಾಹಿತಿ ದೊರೆತುದು ವಿಶೇಷ ಸಂತೋಷದ ಸಂಗತಿ. ಮದರಾಸಿನಲ್ಲಿ ಕೈಲಾಸಂ ಅವರನ್ನು ಅರಿಯದ ಸುಶಿಕ್ಷಿತರಾರೂ ಇರರು. ಅವರ ಸಾಹಿತ್ಯಿಕ ಹೃದಯವನ್ನು ಅರಿತವರೂ ಅಲ್ಲಿ ಸಾಕಷ್ಟು ಜನರು. ತಮಿಳು ಕೈಲಾಸಂರ ಮನೆಮಾತು, ಕನ್ನಡ ಕೈಲಾಸಂರ ಸಾಹಿತ್ಯದ ಮಾತು; ತೆಲುಗು ಮಲೆಯಾಳ ಭಾಷೆಗಳನ್ನೂ ಅವರು ಸ್ವಭಾಷೆಗಳಂತೆ ಅಭಿಜ್ಞರಲ್ಲರು. ಇಂಗ್ಲಿಷ್ ಭಾಷೆಯ ಮೇಲಿರುವ ಇವರ ಪ್ರಭುತ್ವಕ್ಕೆ ಇವರ ಬೇರೆ ಬೇರೆ ಇಂಗ್ಲಿಷ್ ನಾಟಕಗಳೂ ಭಾವಗೀತೆಗಳೂ ಸಾಕ್ಷಿಯಾಗಿವೆ. ಒಳ್ಳೆ ಅಭಿನಯಕಾರರು, ನಾಟಕಕಾರರು, ಸೂಕ್ಷ್ಮ ಸಾಹಿತ್ಯಾಭ್ಯಾಸಿಗಳು.

ವಿಜ್ಞಾನದ ವಿಶೇಷಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹೋಗಿ ಹಲವು ವರ್ಷಗಳಲ್ಲಿ ಉತ್ತೀರ್ಣರಾಗಿ ಬಿರುದಿನ ಸೂಚೆಗಳನ್ನು ಹಾಕಿಕೊಂಡು ಬಂದವರು ಕೈಲಾಸಮರು. ಅದರೊಂದಿಗೆ ತಮ್ಮಲ್ಲಿರುವ ಸ್ವಾಭಾವಿಕ ಸಾಹಿತ್ಯಸೂಚನ್ನೂ ಅಲ್ಲಲ್ಲಿ ಸಂವರ್ಧಿಸಿಕೊಂಡಿರುವರು. ಅದರಿಂದ ಕೈಲಾಸಮರ ಸಾಹಿತ್ಯನಿರ್ಮಿತಿಯಲ್ಲಿ ಬಾಲತೀಯ ಹೃದಯ-ಸುಸೋದರ್ಯಗಳು ಮೂಡಿಕೊಂಡಿರುವುದಲ್ಲದೆ ಪಾಶ್ಚಾತ್ಯ ಜೀವನದ ಕಸೆ (ಕಲಂ)-ಕಾಣುವುದಿಲ್ಲ. ನಮ್ಮ ಅನುನಿಕ ಬರೆಪಗಾರರಲ್ಲಿ ಅನೇಕರಿಗೆ ಒಂದು ಗೀಳು : ಒರೆದ ಭಾಷೆ ಮಾತ್ರ ಕನ್ನಡ; ಶೈಲಿ, ರಮ್ಯೋದ್ರೇಕತೆ, ವಿಷಯ ಎಲ್ಲವೂ ಪಶ್ಚಿಮದವರನ್ನು ಅನುಕರಿಸಿ ಅಂತದ ಸಾಹಿತ್ಯದಲ್ಲಿ ಕನ್ನಡಿಗರು ತಮ್ಮ ಜೀವನವನ್ನು ಕಾಣಲಾರರು. ಆದರೆ ಕೈಲಾಸಮರ ಕನ್ನಡ ಸಾಮಾಜಿಕ ನಾಟಕಗಳಲ್ಲಿ ವಿದೇಶೀಯವೆನಿಸುವಂತಹದು ಏನೂ ಇರುವುದಿಲ್ಲ. ಪಾಶ್ಚಾತ್ಯ ಜೀವನವನ್ನೇ ತಮ್ಮದೇ ಆದ ವ್ಯಂಗ್ಯಭರಿತ ರೀತಿಯಿಂದ ರೂಪಿಸುತ್ತ, ತಿಳಿಯದಂತೆಯೆ ಮನಸ್ಸು ಬುದ್ಧಿಗಳಿಗೊಂದು ಸಂಸ್ಕಾರ ಕೊಡುತ್ತ, ಅವರ್ಣದ ದರ್ಶನ ಮಾಡಿಸುವರು. ಕೈಲಾಸಮರ ಸಾಹಿತ್ಯದಲ್ಲಿ ಬರುವ ಪಾತ್ರಗಳು ಅತಿಮಾನುಷವಾದ ದೇವ ವರ್ಗವೂ ಅಲ್ಲ. ಅಮಾನುಷವಾದ ರಾಕ್ಷಸಜಾತಿಯವೂ ಅಲ್ಲ. ನಮ್ಮ ಈ ಕಣ್ಣಿಗೆ ಕಾಣುವ ನೆಲದಲ್ಲಿಯೆ ಬಾಳುವ ಮಾನವ ವರ್ಗಕ್ಕೆ ಸೇರಿದುವು. ಕತ್ತಲೆ, ಬೆಳಕುಗಳೆರಡನ್ನೂ ಕೂಡಿದುವು. ಕೈಲಾಸಮರ ಸಾಹಿತ್ಯ ವ್ಯಂಗ್ಯ ವಿನೋದ ಪ್ರಬುದ್ಧವೂ ಆದ್ದರಿಂದಲೂ ಅದು ಕೆಡಕಿನ ಬಿಡುವ ವಿಘ್ನಂಸಕ ಜಾತಿಯದಲ್ಲ; ತಪ್ಪಿದುದನ್ನು ತಿದ್ದಿಕೊಳ್ಳಲು ಹಚ್ಚ ಗುರಿಯ ದಾರಿಯನ್ನು ತೋರಿಸುವ ವಿಧಾಯಕ ಜಾತಿಯದು. ಶ್ರೇಷ್ಠ ಸಾಹಿತ್ಯಕವಿಗೊಂದು ಸ್ಥಾನಿಯ ಮನಸ್ಸನ್ನೆ ಸಲ್ಲಿಸುವುದೇ ಸಮ್ಮೇಳನಾಧ್ಯಕ್ಷರಿಪದ ಆಯ್ಕೆಯ ಉದ್ದೇಶವಾಗಿದ್ದರೆ, ಈ ಸಲ ಕೈಲಾಸರ ಆಯ್ಕೆಯಾದುದು ಯಥಾಯೋಗ್ಯವೆಂದು ಯಾರೂ ಒಪ್ಪಿಕೊಳ್ಳುವಂತೆ ಇಂತಹ ರಸಪುರುಷನನ್ನು ಅಧ್ಯಕ್ಷ ಸೀರಿದಲ್ಲಿ ಕುಳ್ಳಿರಿಸಿ, ಬರೀ ಪುಸ್ತಕದ ನಾಲ್ಕಾರು ಗೊತ್ತುವಳಿಗಳನ್ನು ಪಾಸು ಮಾಡಿಕೊಂಡು, ಅವರಿಗೆ ಕೊಡಬೇಕಾದ ಮಾನಕೊಟ್ಟು ಕರ್ತವ್ಯ ಮುಕ್ತರಾದೆವೆಂದು ತಿಳಿದುಕೊಳ್ಳುವುದಾದ ನಮ್ಮ ಈ ಮನ್ನಣೆಯಿಂದ ಕೈಲಾಸಂರು ಎಂತಹ ವೃದ್ಧ ಕಾಣುವರೋ ನಾವು ಬೇರೆ ಕಾಣೆವು. ಅಂತೂ ಸೀರಿಕ್ಕೆ ಸಲ್ಲುವ ಅಧ್ಯಕ್ಷರನ್ನು ನಿರಿತುದು ಮದರಾಸ ಸಮ್ಮೇಳನದ ಸೌಭಾಗ್ಯ.



# ಮಂಗನ ಮಲ್ಲನಾಥಲನ

## ಬೆಳಗಾಂವಿಯಲ್ಲಿ ಕನ್ನಡಕೇ ಜಯ್!

ಬೆಳಗಾಂವಿಯ ಹುಡುಗ-ಕನ್ನಡಿಗನಿಂದ ೮-೧೦ ನಗಪೆಗಳು ಬಂದಿವೆ. ಎಲ್ಲ ಕಾಗದಗಳ ಅಭಿ ಪ್ರಾಯವೂ ಒಂದೆಬಗೆಯದಾಗಿದೆ. ಅದೇನೆಂದರೆ : '. ಇತ್ತೀಚೆಗೆ ಅದೇಕೋ ನಮಗೆ 'ಕರ್ನಾ. ಟಕ ಮಾತಾಕೀ ಜಯ್ !' ಎಂದು ಕೂಗಬೇಕೆಂದು ಗಾಗ ನುನಸ್ಸಾಗುತ್ತದೆ. ಹಾಗೆ ಕೂಗಬೇಕೆಂದರೆ ಾಟಗರು ನಮಗೆ ಕೂಗಗೊಡಲೊಲ್ಲರು. ಲ್ಲಿಯ ನಮ್ಮ ಹಿರಿಯರಿಗೆ ಹೇಳಿದರ ನಮ್ಮ ತನ್ನು ಕಿವಿಯ ಮೇಲೇ ಹಾಕಿಕೊಳ್ಳಲ್ಲರು. ತ್ತೆ ದುತ್ತೆ ಹೇಳಬೇಕೆಂದು ಒಬ್ಬರಿಂಒಬ್ಬರು ಾಗಿ ಹೇಳತೊಡಗಿದರೆ, 'ನಮ್ಮನ್ನ ಹೋ. ಸ್ರೀ ಹುಂಬ ××× ಗಂಡರ್ಯಾ! ಹೇಳಿ ಕೇಳಿ ಸಂದಿ ನೀವ್ರು! ರಾಜಕಾರಣ ನಿಮಗ ತ್ತಿಲ್ಲ!' ಅಂತಾರೆ. ಈಗ ನಾನೇನು ಮೂಡ. ಬೂಬುದೇ ನಮಗೆ ತಿಳಿಯುದಾಗಿದೆ. ಅದುದ. ದೇ ಮುಕರ್ಜಿನಾಥಾ,ತರ್ಕವರೂಥಾ,ನಾವೀಗ ಅಭಿಪ್ರಾಯದಂತೆ ನಡೆಯಬೇಕೆಂದು ನಿರ್ಧ. ರಿಸ್ಬೇಕು. ದಯೆ ಮಾಡಿ ನಮಗೆ ಸಲಹೆಗಾರ. ಿ ಶಿಷ್ಯಾಕಟ್ಟಿ ಕೊಳ್ಳು ಮಂಗಮಹಾನುಭಾವ!' ಈ ಸತ್ಯಗಳನ್ನೋದಿದ ಮಂಗರಾಯ ಹುಚ್ಚು ನಕ್ಕು ಬಿಟ್ಟ. ಬೆಳಗಾಂವಿಯ ಹಿರಿಯ ಕನ್ನಡಿ. ಗರೇ ಅವನ ಹಿಲವು ಹೆಚ್ಚು. ರಾಮಾ. ಣ ಕಾಲದ ಸೂಪಣಕಿಯ ವಂಶದ ಮಂಗ. ಯು, ಈ ಮಾತಾವಿನ ಮರ್ಮಕ್ಕೆ ನಗವೆ ನ್ನೇನು ಮಾಡಬೇಕು? ರಾಜಕಾರಣದ ರಹಸ್ಯ ನಿಂಗೆ ಹೇಗೆ ಗೊತ್ತಾಗಬೇಕು? ಕಾಂಗ್ರೆಸಿನ ಡ ಹಿರಿಯರ ಕಡೆಗೆ ಹೋದರೆ ಬರಲಿರುವ ಕಾರದ ಉಬ್ಬು ಅವನನ್ನು ಆಯಿಲ ಭೂತ ರನ್ನಾಗಿ ಮಾಡಿದೆ. ಶಾಲೆ-ಕಾಲೇಜುಗಳ ಆಧಿ. ನಗಳಾದ ಕನ್ನಡ ಹಿರಿಯರೆದುರು ಹೋದರೆ, ನಾ ನಮ್ಮೀ ಶಾಲೆಗಳ ಮೇಲಾಟ ಅವರನ್ನು ಧಾಸ್ಥಾ ನಮಪರ್ತಿಗಳಾದ ಸ್ಥಿತಪ್ರಜ್ಞರನ್ನು ಿಸಿ ವ್ಯಾಪಾರಿಸ್ಥ ಕನ್ನಡ ಹಿರಿಯಂದಿರು ನಬೇಕೆಂದರೆ ಅವರು ಕರ್ನಾಟಕ ಮಾತಾ ರೆ ಯಾರೆಂದು ಕೇಳಬಹುದು. ಅಮುವರಿಂದ ಲ್ಲಿ ಹಿರಿಯರನ್ನೂ ಅವಲಂಬಿಸಿಕೊಂಡಿರುವ ನಾಗರಾಗರು ಇಲ್ಲಿದ ಹುಚ್ಚುಹಟಕ್ಕೆ ಯಾಕೆ ಬೀಳಬೇಕು? ಬೆಳಗಾಂವಿಯು ಹಿರಿಯ ಕನ್ನಡಿಗ. ರಲ್ಲಿ ಮಹಾ ಮಹಾ 'ಆಧ್ಯಾಪಕ'ರಿದ್ದಾರೆ; ದೊಡ್ಡ ದೊಡ್ಡ 'ಲಾಯ್ಯರ್ಸಾಹೇಬ'ರಿದ್ದಾರೆ; ಎಂತೆಂತಹ 'ಪಾಟೀಲ-ದೇಸಾಯಿ'ಗಳಿದ್ದಾರೆ. ಅವರಿಗಿರದ ಕರ್ನಾಟಕದ ಅಭಿಮಾನ ಹುಡುಗರಲ್ಲಿ ಹೇಗೆ ಬಂದೀತು? ನಾಳೆ ಪ್ರಾಂತಿಕ ಚುನಾವಣೆ ಪ್ರಾರಂಭ. ವಾಗಲಿ ನೋಡಿರಿ; ಅವರೆಲ್ಲರ ಕನ್ನಡದ ಕರ್ನಾಟ. ಕದ ಅಭಿಮಾನಕ್ಕೆ ಮಹಾಪೂರ ಬರುತ್ತದೆ. ಬೆಳ. ಗಾಂವಿಯ ಬಾಲ ಕನ್ನಡಿಗರೆ, ತಾಳಿರಿ, ಬಾಳಿ, ಬೇಗನೆ ಆ ಮಹಾಪೂರದಲ್ಲಿ ಈಜಾಡಲಿಕ್ಕೆ ಬಲ. ವನು ಬೆಳೆಸಿರಿ. ಆಲ್ರಯುವರ್ಸ್

**ಕರ್ನಾಟಕ ಮಾತಾಕೀ ಜಯ್**
**ಅಂದವರ್ ಬಾಯ್ ಮ್ಯಾಲ್ ಹೊಯ್!**

× × ×

## ೨. ಪ್ರಜೆಗಳ ಪಾಶವವೃತ್ತಿ

ತಮಗೆ ಅಬುದ್ಧಿಯೆಂದು ನಮ್ಮ ಅರಸರು ಪೂರ್ಣ ಬುದ್ಧಿಯ ಪ್ರಜಾನಿಗಳನ್ನು ನೇಮಿಸಿ. ಕೊಳ್ಳುತ್ತಾರೆ. ಪಿತೃಭೂಮಿ ಬೇಕಾದುದೆಲ್ಲ ಸಿಕ್ಕು. ತ್ತಿರುವಾಗ, ಅರಸರಿಗೆ ಬುದ್ಧಿಯ ಅವಶ್ಯಕತೆ ಇರು ವುದಾದರೂ ಎಲ್ಲಿ? ಆದುದರಿಂದಲೆ ಪೂರ್ಣ ಬುದ್ಧಿಯ ಪ್ರಧಾನಿಗಳು ಇವರ ಬುದ್ಧಿಯ ಕೊರತೆ ಯನ್ನು ತಮ್ಮ ಅತಿಬುದ್ಧಿಯಿಂದ ತುಂಬುತ್ತಿರು. ತ್ತಾರೆ. 'ಆಪತ್ಕರ್ತಾ ಬಂದರೆ ಅರಸನಿಗೆ, ಕರ್ತಾ ಬಂದರೆ ತನುಗೆ' ಎಂಬ ಮಂಗನೀತಿಯನ್ನು ಅವನು ಚೆನಾಗಿ ಓದಿಕೊಂಡಿರುವರು. ಅದೆಂ. ದ್ರಾವಿ ಇಬ್ಬರ ಕಾರಭಾರವೆ ಇವ್ವಾಗ, ಪ್ರಧಾನಿಯ ಕಛೇರಿಯನ್ನಾಗಿ ಸಚಿಯುತ್ತಿತ್ತು. ಅವರೆ ಇತ್ತೀಚೆ 'ಪ್ರಜೆ' ಎಂಬ ಇನ್ನೊಂದು ವಸ್ತು ರಾಜಕಾರಣದಲ್ಲಿ ತಲೆತೂಡಕಿಸಿ,ನುಂತಿಯ ಮಂಗತನದ ಹಪಹಪಿ ಕ್ಕಲಿದೆ. ಇದಕ್ಕಾಗಿ ಮಂಗನೀತಿಯ ಪುರಸ್ಕರ್ತ ಮಂಗರಾಯರಿಗೆ ತುಂಬ ನಿಷಾದವಾಗುತ್ತಲಿದೆ.

ಮುಂಬೋಳಿಯ ರಾಜಕಾರ್ಯ-ಅಲ್ಲಲ್ಲಿ-ಮಂತ್ರಿ ಕಾರ್ಯ ಎಂತಹ ಯೋಗ್ಯವಾಗಿದ್ದಿತು; ನಮಗೆ ಗೊತ್ತಿಲ್ಲವೆ? ಸಂಘ-ಸಂಸ್ಥೆಗಳ ಹೆಸರಿನಿಂದ ಜನರು ಒಬ್ಬರನ್ನೊಬ್ಬರು ವಂಚಿಸುವರೆಂದು, ಇವನ್ನು ತಪ್ಪಿಸುವ ಉಪಕಾರಬುದ್ಧಿಯಿಂದ ಎಲ್ಲ ಸಂಘ. ಸಂಸ್ಥೆಗಳನ್ನೂ ಸರಕಾರದ ನಿಯಂತ್ರಣದಲ್ಲಿರಿಸಿ, ಜನಹಿತ ಮಾಡಬೇಕೆಂದು ಮುಂಬೈ ಸರ್ಕಾರವು ಯೋಚಿಸಿದರು. ಆದರೆ ನಮ್ಮ ಜನರಲ್ಲಿ ಬುದ್ಧಿ ಯೆಲ್ಲಿದೆ? ಆದರಲ್ಲಿಯೂ ಮುಂಬೋಳಿ ಪಂಸ್ಥಾನದ ಜನರಂತೂ ಬೆಳವಲದ ಹಳ್ಳಿಯ ಹುಂಬರು ಜೋಳದ ನುಚ್ಚು ತಿನ್ನುವ ಈ ಗೂಳಿಗಳಿಗೆ ತಮ್ಮ ಹಿತ ತಮಗೆ ತಿಳಿಯುವ ಬಗೆ ಹೇಗೆ? ಬೇರೆ ಬೇರೆ ಕಣ್ಣೆಗಳನ್ನು ಮಾಡಿ ಹಬ್ಬಿಯಲ್ಲಿ ಸಾಲಾಗಿ ದನ. ಗಳನ್ನು ಕಟ್ಟಿದರೆ ನೋಡಲೆ ಅಂದವಾಗಿ ಕಂಡೀತು, ಒಂದರಿಂದ ಇನ್ನೊಂದಕ್ಕೆ ಆಗಬಹುದಾದ ತೊಂ. ದರೆಯ ಭೀತಿಯೂ ತಪ್ಪೀತು. ಹೇಳಿ ಕೇಳಿ ಹುಂಬರು; ನಿಯಂತ್ರಣ ಬೇಡವೇದು ಚಳವಳಿ ಹೂಡಿದರು. ಅವರಿಗೆ ಪಾಯತ್ತಿತ್ತವಾಗಲೆಂದು ಪ್ರಧಾನಿಗಳು ನಿಯಂತ್ರಣ ಕಾಯಿದೆಯನ್ನು ಈಗ ಹಿಂದಕ್ಕೆ ತೆಗೆದುಕೊಂಡುಬಿಟ್ಟರು. ಇದರಲ್ಲಿ ಅಹಿತ ಯಾರಿಗಿದೆ? ಪ್ರತ್ಯಕ್ಷ ಪ್ರಮಾಣವೇ ಇಲ್ಲವೇ ಈಗ? ಬೇರೆ ಬೇರೆ ನಿಯಂತ್ರಣ ಕಾಯಿದೆಗಳನ್ನು ಭಾರತೀ ಯರು ಬಿಸಿಕೊಂಡಂದಿಂದಲೇ ಬಾಂದಿನ ದಾಳಿ ಯಿಂದ ಅವರು ಪಾರಾಗಿ ಉಳಿದರು. ಮುಂಬೋಳಿಯ ಪ್ರಜರು ಇತ್ತ ಕಣ್ಣು ತೆರೆದು ನೋಡಲಿ!

'ಕೊರಳಿಗೆ ಕಣ್ಣಿಯ ಕಟ್ಟಿಸಿಕೊಂಡರೆ
ಹರಿಯುವುದೆಲ್ಲಾ ಬಡುಕಿನ ತೊಂದರೆ!'

× × ×

## ಜಿನಾ ಪಾಚ್ಚಾರವರ ಪವಾಡ

ಮುಂಗರಾಯನನ್ನೂ ಆಗಾಗ ತಮ್ಮ ಬುದ್ಧಿ. ಯಿಂದ ಬೆಂಗುಗೊಳಿಸುವ ಮಹಾನುಭಾವನೆಂದರೆ ಇಂದಿನ ಕಾಲದಲ್ಲಿ ಜನಾ ಸಾಹೇಬರೊಬ್ಬರು. ರಾಜಕಾರ್ಯಪ ಕಣವಲ್ಲಿಯ ಕುಸ್ತಿಯ ನಿಜವಾದ ಪೇಚುಗಳು ಅವರಿಗೆ ಮಾತ್ರ ಗೊತ್ತಿವೆ. ಅವನಿಗೆ ಸತ್ಯ-ಅಹಿಂಸೆಗಳ ಪುರಾಣ ಪ್ರವಚನೆಗಳ ಅಗತ್ಯ. ವಿಲ್ಲ; ಬ್ರಹ್ಮಚರ್ಯ-ಅಸ್ತೇಯಗಳು ಬೇಕಾಗಿಲ್ಲ. ಸ್ವಾರ್ಥತ್ಯಾಗ-ಸೇವೆಮನೆಯ ವಾಸನೆಯ ಸುದ್ದಿ ಅವಶ್ಯವಿಲ್ಲ.ಬೇರೆಬೇರೆ ನಿಧಿಗಳಿಗಾಗಿ ಕಂಡವರೆದುರು ಕೈಯೊಡ್ಡುವ ಕಂಗಾಲುತನ ಬೇಕಿಲ್ಲ. ಕಾಂಗ್ರೆಸಿ ನವರಿಗಿಂತ ಚಟುವಾಗಿ ಸರಕಾರವನ್ನು ಬೈದು ಸ್ವಾತಂತ್ರ್ಯವನ್ನು ಕೇಳುವ ಶೂರವೃತ್ತಿ ಅವರಲ್ಲಿ ಮನೆಮಾಡಿದೆ. ಕುಳಿತಲ್ಲಿ ಕುಳಿತಿದ್ದರೂ ಇವರ ಮುತ್ಸದ್ದಿತನಕ್ಕೆ ಮೆಚ್ಚಿ ಪ್ರಕೃತಿ ಇವರ ಮೇಲೆ ನೋಟನ ಮಳೆಗರೆಯುತ್ತಾಳೆ; ಹೊಸ್ಸಿನ ಹೊಳೆ ಹರಿಯಿಸುತ್ತಾಳೆ. ತಿಳಿಯದ ಜನ 'ಸರಕಾರದಿಂದ ೬೦೦೦೦ ರೂಪಾಯಿ ಪಾಕಿಸ್ತಾನ್ ಪ್ರಚಾರಕ್ಕಾಗಿ ಸಿಕ್ಕುತ್ತದೆ; ೭೦,೦೦೦೦ ರೂಪಾಯಿಗಳ ಆದಾಯ ಹೆಚ್ಚಾಗಿದೆ' ಎಂದು ಏನೇನನೋ ಕಿರುಚುತ್ತಾರೆ. ನಮ್ಮ ಸರಕಾರಕ್ಕೆ ಪಾಕಿಸ್ತಾನವೆಲ್ಲಿ ಬೇಕಾಗಿದೆ? ವೇವೆಲ್ ಪ್ರಭುಗಳು ಆಡುವ ಮಾತು ಯಾರಿಗೆ ಗೊತ್ತಿಲ್ಲವೆ? ಬೇಡವಾದ ಪಾಕಿಸ್ತಾನಕ್ಕಾಗಿ ಸರ. ಕಾರವೇಕೆ ಸಹಾಯ ಮಾಡಬೇಕು? ಜಿನ್ನಾರವರ ಮಂಗತನಕ್ಕೆ ಆಗುತ್ತಿರುವ ಅಪಮಾನವಿದು. ಅವ. ರನ್ನು ಹಾಕಿದರೆ ಮುಂಗರಾಯನು ನಕ್ಕೇಲಿ. ಯನ್ನು ಮುಷ್ಠಿತ್ತಾಗಿ ಮಾಡಲು ಸಿದ್ಧನಿದ್ದಾನೆ.

ಜೆನಾ ಪಾಚ್ಚಾ ಝಿಂದಾ ಬಾದ್!
ಆತನಾ ಬೈಯವರೆಲ್ಲಾ ಬಾದ್!

# ಶಂಕಾಸಮಾಧಾನ

(ಗಂಡು-ಹೆಣ್ಣಿನ ಮಾತುಕತೆ)

ಶ್ರೀ 'ಜಾಣಾನಂದ' ನಾಂದೇಡ

೧.

ನಾ ಬಲ್ಲೆ ಓ ಚೆಲುವೆ, ನಿನ್ನೆದೆಯ ಬಯಲಿನಲಿ
ಹರಿವ ಪ್ರೇಮದ ತೊರೆಯ ಒಳವನ್ನು.
ನನ್ನ ಬರಿ ಬಾಳಿನಲಿ, ಹೃದಯಾಂತರಾಳದಲಿ
ಮುಸುಕಿರುವ ಕತ್ತಲೆಯ ಕಾಳವನ್ನು !

ಪ್ರೇಮವೇ ಪ್ರೇಮದಿಂ ಕುಸುರಿಸಿದ ಒಡೆ ನೀನು.
ಕಾಮನಾ ಕಾಮನೆಯ ಕೊನರು ನಾನು !
ಚೆಲುವು-ಪಕಳೆಗಳಲ್ಲಿ ಒಲವುಗಂಪನು ತುಂಬಿ
ನಲಿನೇರಿ ಅರಳಿರುವ ಮೊಸ ಮಲರು ನೀನು !

ಮಾಡದಿರು ಓ ಚೆಲುವೆ ನನ್ನ-ನಿನ್ನಯ ಹೃದಯ-
ಪ್ರೇಮರಾಜ್ಯದ ಸಾರ್ವಭೌಮನನ್ನು:
ಕಾಡದಿರು, ಬೇಡವಿರು, ನನ್ನಲ್ಲಿ ನೀಸಿಂತು
ಅಮರರೂ ಅರಿಯದಿಹ ಪ್ರೇಮವನ್ನು !

ನೀ ಚೆಲುವೆ ನಾನೊರಟು, ನೀರಸವು ನಾಗೊರಟು.
ನೀ ಪ್ರೇಮಿ ನಾ ಕಾಮಿ ಖೀಲೆ!
ನೀನಹುದು ಸುಕುಮಾರಿ, ನಾನಿಹೆ ವಿಕಾರಿ—ತಿಳಿ
ಬೇಡೆನ್ನ ಪಡೆವಾಸೆ ಬಾಲೆ!

ಮಲ್ಲಿಗೆಯ ಬಳ್ಳಿಯನು ಮುಳ್ಳ ಬೇಲಿಯ ಮೇಲೆ
ಹಬ್ಬಿಸುವ ಮನಿತನೇ ಹೇಳೆ?
ಕೊಳೆನೀರ ಮಡುವಿನೊಳು ಕಳಹಂಸ ಬಿಡುವನೆ?
ಬೇಡೆನ್ನ ಪಡೆವಾಸೆ ಬಾಲೆ!

ನರುಗಂಪು ಸೂಸುತಿಹ ಬಿರುಮುಗುಳ ಮಾಲೆಯನು
ಕರಿಯ ಕೊರಳಿಗೆ ಹಾಕಬಹುದೆ ಹೇಳಿ:
ಕುರಿಯ ಬಟ್ಟಲದಲ್ಲಿ ಎರೆಯಬಹುದೇ ಸುಧೆಯ ?
ಬೇಡೆನ್ನ ಪಡೆವಾಸೆ ಬಾಲೆ!

ಈ ರೂಪು ಈ ಚೆಲುವು ಈ ಸೊಬಗು-ಸಿಂಗರವು
ನನಗಾಗಿ ಹುಟ್ಟಿರವು ಲೀಲೆ,
ತಿರುಕನನು ಅರಮನೆಯೊಳಿಟ್ಟು ಭ್ರಮೆಗೊಳಿಸದಿರು,
ಬೇಡೆನ್ನ ಪಡೆವಾಸೆ ಬಾಲೆ!

ತಡೆದು ನಿಲ್ಲಿಸಬಹುದೆ ಕಿರಿಯ ಕೆರೆಯೊಂದರಲಿ
ಸೂಸಿ ಹರಿಯುವ ಗಂಗೆಯನ್ನು ಲೋಲೆ ?
ನನ್ನಲ್ಲಿ ಹೃದಯದಲಿ ನಿನ್ನೊಲುಮೆಗಲ್ಲಿಡೆಯು
ಬೇಡೆನ್ನ ಪಡೆವಾಸೆ ಬಾಲೆ!

ಗುಣರೂಪ ಸಿರಿಯಲ್ಲಿ ನಿನಗೆ ಸರಿಯಾದವನ
ಕೊರಳಲ್ಲಿ ಹಾಕುವುದು ಪ್ರೇಮಮಾಲೆ!
ನಮ್ಮಿಬ್ಬರುವರದಲಿ ಮನ್ಮಥನು ಹುಟ್ಟಲಿ—
ಬೇಡೆನ್ನ ಪಡೆವಾಸೆ ಬಾಲೆ!

ನಾ ಬಲ್ಲೆ ಓ ಚೆಲುವೆ, ನಿನ್ನೆದೆಯ ಬಯಲಿನಲಿ
ಹರಿವ ಪ್ರೇಮದ ತೊರೆಯ ಒಳವನ್ನು,
ನನ್ನ ಬರಿ ಬಾಳಿನಲಿ, ಹೃದಯಾಂತರಾಳದಲಿ
ಮುಸುಕಿರುವ ಕತ್ತಲೆಯ ಕಾಳವನ್ನು !

೨.

ಒಲವನ್ನ ಕೊಳ್ಳುವೊಡೆ ಸುಕೃತ ಕೂರಲಿಗೇಕೆ ?
ಒಲ್ಲೆನೆಂಬೊಡೆ ಸಾಕು ನಲ್ಲ!
ತಲೆಬಾಗಿ ನಿಂತಿಹುದು ಪ್ರೇಮ ಹೌಸನದಿರೂ
ಸಲ್ಲಬೇಕೆಲ್ಲೆಲ್ಲೊಡೆ ಸಾವ ನಲ್ಲ!

ನಾನೊಲಿದು ಬಂದಿರುವೆ, ನೀನೊಲವರವ ಸಾಕು.
ನಾ ಪೆಚ್ಚು ನೀ ಪೆಚ್ಚು ಎಂಬುವೇನು ?
ಸುಸಕೆ ಮನ ಸರಿತಾಕ, ಎಸೆಗೆ ಎಸೆ ಸುರಿಯೋಕ,
ಪ್ರೇಮದಲಿ ಸಹ ಮೇಲು ಕೀಳ್ಗಳೀನು?

ನಾ ಚೆಲುವು ನೀ ಬಲವು. ನಾನೊಲವು ನೀ ಗೆಲವು,
ನಾ ಬಳ್ಳಿ ನೀ ಜೇಲಿ ನಾಡಿಕಾರ !
ನೀ ನೋಡ ನಾ ಮಿಂಚು, ನೀ ಫಲವು ನಾ ರಸವು,
ನಮ್ಮಿರವು ಸಮರಸವು ನೀರ !

ಒಲವಿನಲಿ ಕುಲವಿಲ್ಲ ಮೇಲು-ಕೀಳುಗಳಿಲ್ಲ
ಪ್ರೇಮಕಾಗಿಯೆ ಪ್ರೇಮ ನಲ್ಲ,
ಒಲವಿನಲಿ ಸಂಶಯವು ಸುಳಿಯಬಹುದೇ ನೀರ ?
ಫಲವೇಕೆ ಪಡೆ ಪ್ರೇಮದೆದೆಯ ನಲ್ಲ!

# ಕರ್ನಾಟಕಕ್ಕೆ ೧೦೦ ಕೋಟಿಯ ಯೋಜನೆ

ಶ್ರೀ. ಕೃಷ್ಣಕುಮಾರ, ಎಂ. ಎ. ಪ್ರಿನ್ಸಿಪಾಲ್, ಪಾಟುಕ್ ಇಂಡಸ್ಟ್ರಿಯಲ್ ಸ್ಕೂಲ್, ಅಂಧೇರಿ

೧ ಯೋಜನೆಯ ನಿರಿ

ಹಿಂದಿನ ಲೇಖನದಲ್ಲಿ ಹೇಳಿರುವ ಪೂರ್ವ ಯೋಜನೆಯನ್ನು ಸಮರ್ಥಿಸಬಲ್ಲ ಉತ್ತಮಯೋಜನೆಯ ಎಂದರೆ ನಿಜವಾದ ಆರ್ಥಿಕ ಯೋಜನೆಯ ರೂಪರೇಷೆ ಹಾಗು ಅದರ ವ್ಯಾಪ್ತಿ ಎಷ್ಟೆಂಬುದನ್ನು ನೋಡಿದರೆ, ಈ ಬರೆಹದ ಘಾಜಗಟ್ಟಿ ಮುಟ್ಟಿದಂತಾಯಿತು. ಆ ರೂಪರೇಷೆ ಹಾಗು ವ್ಯಾಪ್ತಿಗಳನ್ನು ಗಟ್ಟಿಮಾಡಿಕೊಂಡು ಕರ್ನಾಟಕದ ಆರ್ಥಿಕ ಬೆಳೆವಣಿಗೆಯ ದಾರಿಗಳನ್ನೂ ಕೋಷ್ಟಕಗಳನ್ನೂ ಕಂಡು ಹಿಡಿದು, ಅಂದಾಜುಗಳನ್ನು ಕಟ್ಟುವುದು ಎರಡನೆಯ ಘಾಜಗಟ್ಟಿ. ಈ ರೂಪರೇಷೆ ಈ ವ್ಯಾಪ್ತಿಗಳಿಗೆಲ್ಲ ಮೂಲಭೂತವಾದ ಇನ್ನೊಂದು ಮಾತನ್ನು ಮೊದಲು ಗುರಿಪಡಿಸಿಕೊಳ್ಳುವುದು ಅವಶ್ಯವಾಗಿದೆ. ಅದೆಂದರೆ ಕರ್ನಾಟಕದ ಯೋಜನೆಯ ಪರಾಮ್ಯೇಯ. ಇತ್ತೀಚಿನ ಹಲವು ಯೋಜನಾಕಾರರು ಆರ್ಥಿಕಯೋಜನೆಯ ಗುರಿಗಳನ್ನು ನಿರ್ದಿಷ್ಟವಾಗಿ ಹೇಳಿದ್ದಾರೆ. ಮುಂಬೈ ಪ್ಲ್ಯಾನಿನ ಪ್ರವರ್ತಕರು ಅದಕ್ಕೆ ಮೂರ್ತಸ್ವರೂಪ ಕೊಟ್ಟಂತೆ, ದೇಶದ ಸರಾಸರಿ ಉತ್ಪನ್ನವನ್ನು ಈಗಿದ್ದುದಕ್ಕಿಂತ ಮೂರು ಪಟ್ಟು ಹೆಚ್ಚಿಸುವುದೇ ತಮ್ಮ ಯೋಜನೆಯ ಗುರಿಯೆಂದು ಹೇಳಿದ್ದಾರೆ. ಹಿಂದುಸ್ತಾನದ ಸರಾಸರಿ ವಾರ್ಷಿಕ ಉತ್ಪನ್ನವನ್ನು ಹಲವರು ಹಲವು ಬಗೆಯಾಗಿ ಹೇಳಿದ್ದಾರೆ: ದಾದಾಭಾಯಿ ನೌರೋಜಯವರು ೧೮೭೦ ರಲ್ಲಿ, ಹಿಂದುಸ್ತಾನದ ಸರಾಸರಿ ತಲೆಯೊಂದರ ವಾರ್ಷಿಕ ಉತ್ಪನ್ನವನ್ನು ೨೦ ರೂ. ಎಂದು ಹೇಳಿದ್ದಾರೆ; ಡಿಗ್‌ಬಿಯವರು ೧೯೦೦ ರಲ್ಲಿ ಈ ಅಂಕಿ ರೂ. ೧೭-೪-೦ ಎಂದರು; ಸ್ಪೋ ವಾಡಿಯಾ ಅವರು ೧೯೩೩ರಲ್ಲಿ ಈ ಅಂಕಿಯನ್ನು ರೂ. ೪೪-೫-೬ಗೆ ಏರಿಸಿದರು. ಎಲ್ಲಕ್ಕೂ ಇತ್ತೀಚೆನವ್ರು ಡಾ. ವಿ. ಕೆ. ಆರ್. ವಿ. ರಾವ್ ಅವರು ಈ ಅಂಕಿಯನ್ನು ರೂ. ೭೭-೧೪-೬ ಎಂದು ತೋರಿಸಿದ್ದಾರೆ. ಸದ್ಯಕ್ಕೆ ಪ್ರೊ. ರಾವ್ ಅವರ ಅಂಕಿಗಳು ಮಾನ್ಯವಾಗಿವೆ. ವರ್ಷ ೧೦೦ ರೂ. ಹಿಂದುಸ್ತಾನದ ತಲೆಯೊಂದರ ವಾರ್ಷಿಕ ಸರಾಸರಿಯಾದರೆ, ಕರ್ನಾಟಕದ ಸರಾಸರಿಯೂ ಅಷ್ಟೇ ಆದೀತೇ, ಅದಕ್ಕೂ ಹೆಚ್ಚು ಆದೀತೇ? ಅಥವಾ ಕಡಮೆಯೇ ಎಂದು ಒಂದು ಪ್ರಶ್ನೆ ಏಳುತ್ತದೆ.

೨ ಯೋಜನೆಯ ಗುರಿ

ಹಿಂದುಸ್ತಾನದ ತಲೆಯೊಂದರ ವಾರ್ಷಿಕ ಸರಾಸರಿ ಉತ್ಪನ್ನವನ್ನು ಕೋಧಿಸಹೊರಟವರೆಲ್ಲ, ಈ ಸರಾಸರಿಯನ್ನು ಕೋಧಿಸುವುದಕ್ಕಿಂತ ಬ್ರಹ್ಮನನ್ನು ಶೋಸುವದು ಬಲು ಹಗುರಾದೀತೆಂದು ಒಪ್ಪಿದ್ದಾರೆ ಎಂದಮೇಲೆ ವಿಚ್ಛಿನ್ನ ಕರ್ನಾಟಕದ ನಿಯಮಬದ್ಧವಾದ ಅಂಕಿ-ಸಂಖ್ಯೆಗಳ ಅಭಾವದಲ್ಲಿ, ಕರ್ನಾಟಕದ ಇಂತಹ ಸರಾಸರಿಯನ್ನು ಕಂಡು ಹಿಡಿಯುವುದು ಅಸಾಧ್ಯವೆ; ಆದರೆ ಒಟ್ಟಾರೆ ಹಿಂದುಳಿದ, ದುರ್ಲಕ್ಷಿತವಾದ, ಆಗಾಗ ಬರಗಾಲಕ್ಕೆ ಬಲಿಯಾಗುವ, ಔದ್ಯೋಗಿಕ ಶೈಥಿಲ್ಯವುಳ್ಳ, ನಮ್ಮ ಕರ್ನಾಟಕದ ಸರಾಸರಿ, ಹಿಂದುಸ್ತಾನದ ಸರಾಸರಿಗಿಂತ ಕಡಮೆಯಾಗಿರಬೇಕೆಂಬುದು ಸರ್ವಥೈವಸಿದ್ಧವೇ ಎನ್ನಬೇಕು. ಆದರೆ ಇದು ಎಷ್ಟರಮಟ್ಟಿಗೆ ಕಡಿಮೆ ಎನ್ನುವುದು ಕಲ್ಪನೆಯಾಗದ ಮಾತು. ಕರ್ನಾಟಕದ ಅತಿನಿಕೃಷ್ಟವಾದ ಉತ್ತರ ಕನ್ನಡ ಜಿಲ್ಲೆಯ ಉಂಬಳಿಗಾರರ ವಿಷಯವನ್ನು ಅಭ್ಯಸಿಸುತ್ತ ಅಲ್ಲಿಯ ತೀರ ಬಡಜನರ ವಾರ್ಷಿಕ ಉತ್ಪನ್ನ ತಲೆಗೆ ಆರು ರೂಪಾಯಿಯೆಂದು ಶ್ರೀ. ದಿನಕರ ದೇಸಾಯಿಯವರು ಗೊತ್ತುಪಡಿಸಿದ್ದಾರೆ* ಕರ್ನಾಟಕದ ಈ ಕನಿಷ್ಠ ಸರಾಸರಿ ವರ್ಷಕ್ಕೆ ತಲೆಗೆ ೬ ರೂಪಾಯಿಯಾದರೆ ಕರ್ನಾಟಕದ ಯಾವ ಭಾಗದ ಸರಾಸರಿಯೂ ೭೮ ರೂಪಾಯಿಗಳ ಹತ್ತಿರ ಕೂಡ ಬರಲಾರದು. ಅಥವಾ ಕರ್ನಾಟಕದ ಉತ್ಕೃಷ್ಟ ಸರಾಸರಿ (ಎಂದರೆ ಚಿಕ್ಕೋಡಿ ತಾಲೂಕಿನ ಅಥವ ಇರವಿನಾ ಕ್ಯಾನಾಲಿನ ಕ್ಷೇತ್ರದ ಸರಾಸರಿ) ೭೮ ರೂಪಾಯಿಯೆಂದೇ ಹಿಡಿದರೂ, ಅಲ್ಲಿಯ ೭೮ ರೂ. ಹಾಗೂ ಉತ್ತರ ಕನ್ನಡದ ಆರು ರೂಪಾಯಿಗಳ ಮಧ್ಯವರ್ತಿಯಾದ ಸರಾಸರಿ ಸುಮಾರು ೪೨ ರೂಪಾಯಿಯಾದೀತು. ಸದ್ಯ ಈ ೪೨ ರೂಪಾಯಿಯೇ ಕರ್ನಾಟಕದ ತಲೆಯೊಂದರ ವಾರ್ಷಿಕ ಉತ್ಪನ್ನ ಎಂದಿಟ್ಟುಕೊಂಡರೆ ಬಹಳ ತಪ್ಪಾಗಲಿಕ್ಕಿಲ್ಲ. ಅತಿಶಯೋಕ್ತಿಯೆಂತೂ ಅಲ್ಲವೇ ಅಲ್ಲ. ಅಂತೂ ಕರ್ನಾಟಕದ ತಲೆಯೊಂದರ ಸರಾಸರಿ ಹಿಂದುಸ್ತಾನದ ಸರಾಸರಿಗಿಂತ ನೂರಕ್ಕೆ ೪೫ ರಷ್ಟು ಕಡಿಮೆಯೆಂದಂತಾಯಿತು. ಎಂದರೆ ಕರ್ನಾಟಕದ ಜೀವಿತದ ಮಟ್ಟ (Standard of life)ವೂ ಹಿಂದುಸ್ತಾನದ ಮಟ್ಟಕ್ಕಿಂತ ಅನ್ಯೂನವಾಗಿ ಅಷ್ಟರಮಟ್ಟಿಗೆ ಕಡಿಮೆ ಎನ್ನಲು ಅಭ್ಯಂತರವೇನಿಲ್ಲ. ಆದ್ದರಿಂದ ಹಿಂದುಸ್ತಾನದ ಸದ್ಯದ ಮಟ್ಟವನ್ನು ಮುಟ್ಟುವುದಾದರೇ ಕರ್ನಾಟಕದ ತಲೆಯೊಂದರ ವಾರ್ಷಿಕ ಉತ್ಪನ್ನದ ಸರಾಸರಿ ಈಗಿನದಕ್ಕಿಂತ ಇಮ್ಮಡಿಯಾಗಬೇಕು. ಅಥವಾ ಇಂದಿನ ಭಾರತೀಯ ಯೋಜಕರು ಹಿಂದುಸ್ತಾನದ ಜೀವಿತದ ಮಟ್ಟಕ್ಕೆ ಯಾವ ಗುರಿಯನ್ನು ಇಟ್ಟುಕೊಂಡಿದ್ದಾರೋ ಆ ಗುರಿಯನ್ನು (ಎಂದರೆ ಈಗಿದ್ದುದರ ಮುಮ್ಮಡಿ) ಕರ್ನಾಟಕವು ಮುಟ್ಟಬೇಕಾದರೆ ಕರ್ನಾಟಕದ ಉತ್ಪನ್ನ ಸರಾಸರಿ ಈಗಿದ್ದುದರ ಆರುಪಟ್ಟು ಆಗಬೇಕು ಎಂದಾಯಿತು. ಹೀಗೆಂದರೆ ಹಿಂದುಸ್ತಾನದ ಸರಾಸರಿ ೭೮ರೂ. ಇಂದ ಸುಮಾರು ೨೫೦ ರೂ. ಗಳಿಗೆ ಏರಬೇಕು ಎಂದಾಯಿತು. ಇದರಿಂದ ಕರ್ನಾಟಕದ ಯೋಜನೆಯ ಅಳ-ಜಾಗಲು ಹಿಂದುಸ್ತಾನದ ಯೋಜನೆಗಿಂತ ಹೆಚ್ಚಾಗಿರಬೇಕಾಗುವುದೆಂಬುದು ಸ್ಪಷ್ಟವಾಗುವುದು. ಇದಲ್ಲದೆ ಕರ್ನಾಟಕದ ಭೂರಚನೆ, ಭೂಸ್ಥಿತಿಗಳ ದೃಷ್ಟಿಯಿಂದಲೂ, ಅದರಲ್ಲಡಗಿರುವ ಸಂಪತ್ತನ್ನೆಲ್ಲ ಹೊರಹೊಮ್ಮುವ ದೃಷ್ಟಿ

* ಇಂಗ್ಲೆಂಡಿನ ಪ್ರಖ್ಯಾತ ಅರ್ಥಶಾಸ್ತ್ರಜ್ಞರಾದ Prof G. D. H. Cole ಅವರು ಯೋಜನೆಯ ಹಾಗೆ ಯೋಜನೆಯೆಂದರೆ- "The full utilization of the available productive resources and the planned distribution of incomes so as to promote the standards of consumption most consistent with common welfare."

ಯಿಂದಲೂ ವಿಚಾರಿಸಿದರೆ, ಕರ್ನಾಟಕದ ಯೋಜನೆ ಇನ್ನೂ ಹೆಚ್ಚು ದೊಡ್ಡ ಪ್ರಮಾಣದ್ದೂ, ಹೆಚ್ಚು ವೆಚ್ಚದ್ದೂ, (ಅದರಂತೆ ಹೆಚ್ಚು ಪ್ರತಿಫಲದಾಯಕವೂ) ಆಗುತ್ತದೆಂಬುದು ನಿರ್ವಿವಾದ.

## ೩ ಯೋಜನೆಯ ಆವಶ್ಯಕತೆ

ಇಷ್ಟು ತಿಳಿದ ಮೇಲೆ ಯೋಜನೆಯ ಆವಶ್ಯಕತೆಯ ಮಾತೇ ಉಳಿಯಲಿಲ್ಲ. ಕಟ್ಟಿದರೆ ಕರೆದರೆ ಹೆಚ್ಚು ಹಾಲು ಕೊಡುವುದೆಂಬ ಭರವಸೆಯುಳ್ಳ ಆಕಳನ್ನು ಪೋಷಿಸದವನೇ ಸಾಹಿ! ಸಂಪತ್ತಿನಾಗರವಾದ ಕರ್ನಾಟಕವನ್ನೂ ಬೆಳೆಸದಿರುವದೂ ಕರ್ನಾಟಿಗರ ಕರ್ತವ್ಯಚ್ಯುತಿ. ಆದರಿಷ್ಟೆ: ಕರ್ನಾಟಕದ ಯೋಜನೆಯು ಯಾವ್ಯಮೊನೂ ಮಾತು ಸಣ್ಣ ಪುಟ್ಟ ಯೋಜನೆಗಳಿಗೆ ಹರಿಯುವವಲ್ಲ: ಅಂಥ ಮಾತಿಗೆಯಾದದ. ಸುಮ್ಮನೆ ಸಮಾಧಾನಕ್ಕಾಗಿ ಮಾಡುವ ಯೋಜನೆಗಳು ನಿಷ್ಫಲವಾಗುವ ಸಂಭವವೇ ಹೆಚ್ಚು. ಕರ್ನಾಟಕಕ್ಕಾಗಿ ಮಾಡುವ ಯೋಜನೆಗಳು ಅಮೇರಿಕೆಯ ಕೊಲೆರಾನ್ ಅಥವಾ ಟೆನ್ನೆಸಿ ಕೊಳ್ಳಗಳ ಯೋಜನೆಗಳಂತೆ ಅದ್ಭುತ ಪ್ರಮಾಣದವೇ ಆಗಿರಬೇಕು. ನೀಸಿಯರ್ (ರಶಿಯಾ) ದಂಥ ಒಡ್ಡುಗಳೂ ಸರೋವರಗಳೂ, ಜೊಲ್ಟರ್ ಡ್ಯಾಮಿನಂತಹ ವಿದ್ಯುತ್ಕೇಂದ್ರಗಳೂ, ಸಿಬ್ಸ್‌ಬಾಗಿನಂತಹ ಬಸಿಜ ಯೋಜನೆಗಳೂ, ಬೊಲನ್‌ವಾಸಿನಂತಹ ಪಟ್ಟಿಯ ಮಾರ್ಗಗಳೂ ಕರ್ನಾಟಕದ ಆರ್ಥಿಕ ಯೋಜನೆಯಲ್ಲಿ ಆಡಕವಾಗಬೇಕು. ಇಷ್ಟು ಮೊದಲ ಪ್ರಮಾಣದ ಯೋಜನೆಗಳೇ ಕರ್ನಾಟಕದ ಸಂಪತ್ಸ್ಥಿತಿಯನ್ನು ಮೇಲೆತ್ತಬಲ್ಲವು. ಅಂತಹ ಮಹಾಯೋಜನೆಯ ಆವಶ್ಯಕತೆ, ನಾವು ನಾಡಾಗಿ ಉಳಿದು ಬಾಳಬೇಕಾದರೆ ಬೇಡಿಕೆಯಾಗಿ ಇದೆ.

## ೪ ಯೋಜನೆಯ ರೂಪರೇಷೆ

ಅಟ್ಟಕ್ಕೆ ಹಾರದ ಕರು ಬೆಟ್ಟಕ್ಕೆ ಹಾರಿದಾದರೂ ಕರ್ನಾಟಕ ಇಂದು ಅಟ್ಟವೇರಿ ನಾಳೆ ಬೆಟ್ಟವನ್ನೂ ಏರಬೇಕಾಗಿದೆ ಈಗಾಗಲೆ ಅಟ್ಟವೇರಿದ್ದ ನಾಡುಗಳಿಗಿಂತ ಕರ್ನಾಟಕ ಯೋಜನೆ ಕಠಿನವಾಗಿರುವುದು ಈ ಪರಿಸ್ಥಿತಿಗಾಗಿಯೇ; ಆದರೂ ಕರ್ನಾಟಕವು ಮೊದಲು ಮುಟ್ಟಬೇಕಾದ ಅಟ್ಟದ ಮಟ್ಟವಾವುದು, ಆ ಮೇಲೆ ಏರಬೇಕಾದ ಬೆಟ್ಟದ ಮಟ್ಟವಾವುದುಎಂಬುದನ್ನು ಇನ್ನಷ್ಟು ವಿಂಗಡಿಸುವ. ಕರ್ನಾಟಕದ ಈಗಿನ ಸಂಪತ್ತನ್ನು ಇಮ್ಮಡಿ ಮಾಡುವುದೇ ಮೊದಲ ಮಟ್ಟ; ಆ ಮೇಲೆ ಅದರ ಮುಮ್ಮಡಿ ಸಂಪತ್ತಿಗಾಗಿ ಏರ್ಪಾಡು ಮಾಡುವುದೇ ಎರಡನೆಯ ಮಟ್ಟ—ಎಂದು ಹೇಳಿಯಾಗಿದೆ ಇದೀಗ ಮೊದಲನೆಯ ಮಟ್ಟದ ವಿಚಾರವನ್ನು ಸ್ವಲ್ಪ ವಿಸ್ತಾರವಾಗಿ ಮಾಡಿ ಎರಡನೇ ಮಟ್ಟದ ಗುರಿಯನ್ನು ಮಾತ್ರ ಕಂಡು ಇಡುವ.

ಕರ್ನಾಟಕದ ಸಂಪತ್ತನ್ನೂ ಅದರೊಡನೆ ಕರ್ನಾಟಕದ ಜೀವಿತದ ಮಟ್ಟವನ್ನೂ ಪೆಚ್ಚಿಸುವಂತಹ ಕರ್ನಾಟಕದ ಆರ್ಥಿಕಯೋಜನೆಯಲ್ಲಿ ಮುಖ್ಯವಾಗಿ ಒಕ್ಕಲುತನ, ಅದಕ್ಕನುಗುಣವಾದ ನೀರಾವರಿ, ಉದ್ಯೋಗಗಳು, ಅದಕ್ಕನುಗುಣವಾದ ವಿದ್ಯುತ್ತಿನ ಪೂರೈಕೆ, ವ್ಯಾಪಾರ ಅದಕ್ಕನುಗುಣವಾದ ವಾಹಕ ಮಾರ್ಗಗಳು, ಅಲ್ಲದೆ ಗ್ರಾಮ ಸುಧಾರಣೆ, ಪಶುಸಂವರ್ಧನೆ, ಅರಣ್ಯಸಂರಕ್ಷಣೆ, ಆರೋಗ್ಯ ವಿಕಾಸ, ವಿದ್ಯಾಭಿವೃದ್ಧಿ—ಇವೆಲ್ಲವುಗಳು ಅಡಕವಾಗುತ್ತವೆ. ಅವುಗಳಲ್ಲಿ ಒಂದನ್ನು ಬಿಟ್ಟು ಮತ್ತೊಂದನ್ನು ಮುಂದೆಹಾಕಿ,ಸಾಧ್ಯವಾದಷ್ಟೆ ಯೊಜನೆ ಮಾಡಿ ಬಿಟ್ಟರಾಯಿತೆಂದರೆ ಅಂಥ ಯೋಜನೆ ಪೂರ್ಣವಾಗಿ ತಲೆಭಾರವಾಗಿ, ನಾಡಿನ ಬೆಳೆವಣಿಗೆಯ ಪ್ರಮಾಣಬದ್ಧ ಕ್ರಮಕ್ಕೆ ಕಾಲ್ತೊಡಕಾಗುತ್ತದೆ. ಇವೆಲ್ಲ ಮಾತುಗಳಲ್ಲೂ ಕರ್ನಾಟಕ ಮೊಟ್ಟ ಮೊದಲಿನ ಮಟ್ಟದಲ್ಲಿ ಬಂಗಾಲ, ಪಂಜಾಬಅಥವಾ ಮೈಸೂರಿನಷ್ಟಾದರೂ ಮುಂದುವರಿಯಬೇಕು.

ಮೇಲಿನ ಮಾತುಗಳನ್ನು ಹೀಗೆ ಗುಂಪಿಸಬಹುದು: (೧) ಒಕ್ಕಲುತನ, (ಗೊಬ್ಬರ ಸಹ) ಪಶುಸಂವರ್ಧನೆ, ನೀರಾವರಿ, ಗ್ರಾಮಸುಧಾರಣೆ ಹಾಗು ಅರಣ್ಯರಕ್ಷಣೆ; (೨) ಉದ್ಯೋಗ, ವಿದ್ಯುತ್ತು,ವ್ಯಾಪಾರ ಹಾಗು ವಾಹಕ ಮಾರ್ಗಗಳು; (೩) ಆರೋಗ್ಯವಿಕಾಸ (ಆಹಾರ, ವಿಹಾರ, ಒಟ್ಟು,ಮನೆಮಾರು, ನಗರಸ್ವಚ್ಛತೆ, ಕುಡಿಯುವ ನೀರಿನ ಪೂರಯಿಕೆ, ಔಷಧೋಪಚಾರ ಸಹ); (೪) ವಿದ್ಯಾಭಿವೃದ್ಧಿ (ಪ್ರಾಥಮಿಕ-ಉಚ್ಚ-ಸ್ನಾತಕ ಶಿಕ್ಷಣ, ಯಾಂತ್ರಿಕ ಹಾಗು ವೈಜ್ಞಾನಿಕ ಶಿಕ್ಷಣ ಹಾಗು ಇರಬೇಕು, ಶಾರೀರಿಕ ಶಿಕ್ಷಣ ಹಾಗು ತರಬೇಕು, ಲಲಿತಕಲೆಗಳು ಇತ್ಯಾದಿ). (೫) ಕಾವಳಿಯ ಬೆಳವಣಿಗೆ. ಈ ಐದೂ ಗುಂಪುಗಳ ಬೆಳವಣಿಗೆ ಮೊದಲ ಮೆಟ್ಟಿಲವರೆಗೆ ಮಾತ್ರ ಮುಟ್ಟುವಷ್ಟು ಯೋಜನೆ ಮಾಡುವುದಾದರೆ, ಅದರ ಸಾಮಾನ್ಯ ಅಂದಾಜು ಎಷ್ಟಾದೀತೆಂದು ಅನುಮಾನಮಾಡಿ ನೋಡುವ:

ಶೇಲಢಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್, ಕೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ. ಕ್ವಿನಾನ್ ಬದಲು ವೈದ್ಯ—ಡಾಕ್ಟರರು ದೇವಾಜ್ಞೆಗಳಲ್ಲಿ ವಾಡರಿಸುವರು. ೧೦೦೦ ಗುಳಿಗೆಗಳಿಗೆ ರೂ ೧೫; ೯೦ಕ್ಕೆ ೧-೧೬-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಢಾ ಕೆಮಿಕಲ್ ಕಂಪನಿ, ಸಿರಸಿ, ಉ ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪರಾವ) -ಧಾರವಾಡ.

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ಹಂಚುವವರು:

ಫ್ರೆಂಡ್ಸ್ ಸ್ಟೋರ್, ಧಾರವಾಡ

## ೫ ಯೋಜನೆಯ ಅಂದಾಜು

ಅಂತೂ ನಾವೀಗ ಮಾಡುತ್ತಿರುವುದು ಮೊದಲನುದಟ್ಟ ಅಥವಾ ಸ್ಥಾಥಮಿಕ (Basic plan) ಯೋಜನೆಯ ಅಂದಾಜುಮಾತ್ರ; ಎಂದರೆ ೧೦ ವರ್ಷದೊಂದು ಯೋಜನೆ ಎನ್ನೋಣ.

ಕರ್ನಾಟಕದಲ್ಲಿ ಒಕ್ಕಲತನಕ್ಕಾದ್ದ ಅನುವು ಮತ್ತಾವ ವ್ಯವಸಾಯಕ್ಕೂ ಇಲ್ಲ. ಕರ್ನಾಟಕದ ನೆಲಗುಣ ಕಸುವಿನದು. ಜಲ್ಲದೆ ಇಲ್ಲಿಯ ಭೂಮಿಯ ಬಹುಭಾಗ ಸಾಗುಮಾಡಲು ತಕ್ಕುದು. ಅಡವಿಯನ್ನುಳಿದ ಭಾಗದ ಮುಕ್ಕಾಲು ಪಾಲು ನೆಲ ಫಲಪ್ರದವಾಗಿದೆ. ಮುಂಬೈ ಕರ್ನಾಟಕಕ್ಕಲ್ಲಿ ಹಾಗೂ ಮೈಸೂರಲ್ಲಿ ಸಾಗು ಮಾಡಲು ತಕ್ಕುದಾದ ಜಮೀನಿನಲ್ಲಿ ಸುಮಾರು ೪ ಭಾಗ ಪ್ರತಿವರ್ಷ ಸಾಗಾಗುತ್ತಪ; ೧ ಭಾಗ ಪಡ ಬೀಳುತ್ತದೆ. ಒಕ್ಕಲುತನದ ಬೆಳೆವಣಿಗೆ ಎರಡು ಪ್ರಕಾರದ್ದು:—(೧) ಈಗಾಗಲೇ ಸಾಗಾದ ಜಮೀನಿನಿಂದ ಗೊಬ್ಬರ, ನೀರಾವರಿ ಹಾಗು ಅಧುನಿಕ ವಿಜ್ಞಾನದ ಸಹಾಯದಿಂದ ಹೆಚ್ಚು ಬೆಳಿ ಬರುವಂತೆಮಾಡುವುದು;(೨) ಬೀಳುಬಿದ್ದ ಅಥವಾ ಹೊಸ ಜಮೀನನ್ನು ಸಾಗುವಳಿಗೆ ಅಣಿಮಾಡುವುದು. ಮೈಸೂರು ಒಕ್ಕಲತನದ ಖಾತೆಯವರ ಅನುಭವದ ಮೇರೆಗೆ ಮೊದಲಿನ ಕ್ರಮವನ್ನು ಮೊದಲು ಅನುಸರಿಸಿ, ಅನಂತರ ಎರಡನೆಯ ಕ್ರಮಕ್ಕೆ ಕೈ ಹಾಕುವುದು ಹೆಚ್ಚು ಗುಣವೆಂದು ಕಾಣುತ್ತದೆ. ೧೯೪೦ ರಲ್ಲಿ ಬ್ರಿಟಿಶ್ ಹಿಂದುಸ್ತಾನದಲ್ಲಿ ೨೨ ಕೋಟಿ ಎಕರೆ ಭೂಮಿ ಸಾಗುವಳಿಯಲ್ಲಿತ್ತು. ಆ ಪ್ರಮಾಣದಿಂದ ಸರ್ವಸಾಧಾರಣ ಇಡಿ ಕರ್ನಾಟದಲ್ಲಿ ಸುಮಾರು ೧೬೦ * ಲಕ್ಷ ಎಕರೆ ಸಾಗುವಳಿಯಲ್ಲಿದೆ ಎಂದು ಹಿಡಿದರೆ, ಇದಕ್ಕೆ ನೀರಾವರಿ, ಹೊಸತರದ ಗೊಬ್ಬರ, ದನಗಳ ಅಭಿವೃದ್ಧಿ, ಒಕ್ಕಲುತನದ ತರಬೇತು ಹಾಗು ಸಾಮಾನ್ಯ ಗ್ರಾಮಸುಧಾರಣೆಗಳಿಗೆ ಕನಿಷ್ಠ ೧೫ ಕೋಟಿಯ ಅಂದಾಜು ಬೇಕಾದೀತು. ಉದಾಹರಣೆಗೆ ನೀರಾವರಿಯ ಮಾತೊಂದನ್ನ ತೆಗೆದುಕೊಂಡರೆ: ಇದರ ವಿಸ್ತಾರದ ಕಲ್ಪನೆಯಾಗಿತು. ಇಡಿ ಕರ್ನಾಟಕದಲ್ಲಿ ಮೈಸೂರೊಂದನ್ನು ಬಿಟ್ಟರೆ ಎಲ್ಲಿಯೂ ನೀರಾವರಿಯ ಕಾಲುವೆಗಳು ಹೇಳಿಕೊಳ್ಳುವಂತಹವಿಲ್ಲ. ಕರ್ನಾಟಕವು, ಹಿಂದುಸ್ತಾನದ ಅತಿಫಲದ್ರೂಪ ಭಾಗಗಳಲ್ಲೊಂದಾಗಿಯೂ, ನೀರಿನ ಅನುಕೂಲತೆ ಸಲ್ಲದುದರಿಂದ ಇಲ್ಲಿಯ ಒಕ್ಕಲುತನ ಮೂಲೆಗುಂಪಾಗಿದೆ. ವಿಜಯನಗರದ ರಾಯರು ಈ ವಿಷಯಕ್ಕೆ ಕೊಟ್ಟ ನೂರರಲ್ಲೊಂದು ಪಾಲಿನ ಗಮನವನ್ನೂ ಈಗಿನ ಸರಕಾರ ಈ ವಿಷಯಕ್ಕೆ ಕೊಟ್ಟಿಲ್ಲ. ಜಗತ್ತಿನ ನೀರಾವರಿಯ ೫೦ ಪಾಲು ನೀರಾವರಿ ಇಡಿ ಹಿಂದುಸ್ತಾನದಲ್ಲಿದೆಯೆಂತೆ; ಇದರ ಕರ್ನಾಟಕದಲ್ಲಿ (ಮೈಸೂರನ್ನುಳಿದು) ೪ ೫೦ರಲ್ಲೊಂದು; ಅದೂ ಇಲ್ಲ. ಒಟ್ಟಾರೆ ಹಿಂದುಸ್ತಾನದಲ್ಲಿ ೬ ಕೋಟಿ ಎಕರೆ ನೀರಾವರಿಯಲ್ಲಿದೆ. ಇಡಿ ಜಗತ್ತಿನ ನೀರಾವರಿಯ ಅರ್ಧದಷ್ಟಾದ ಈ ೬ ಕೋಟಿ ಎಕರೆಯಲ್ಲಿ ಮುಖ್ಯ ನೀರಾವರಿಯ ಯೋಜನೆಗಳೆಲ್ಲ (ಸಕ್ಕರ್, ಭಾಟಿಯಾ, ಭಂಡಾರಧರಾ, ನಿಝಾಮಸಾಗರ, ಮೆಟ್ಟೂರು, ಪೆನ್ನಾರ್ ಡೆಲ್ಟಾ, ಕಾವೇರಿಡೆಲ್ಟಾ, ಪಂಜಾಬ ಸಿಸ್ಟೆಮ್, ಗಂಗಾ-ಜಮುನಾ ಸಿಸ್ಟೆಮ್, ಕೃಷ್ಣಾ-ಗೋದಾವರಿ, ಕರ್ನೂಲು-ಕಡಪ,) ಕರ್ನಾಟಕದ ಹೊಂಗೇ ಇದೆ. ಮುಂಬೈ ಕರ್ನಾಟಕದ ಒಟ್ಟು ನೀರಾವರಿಯಾದ (ಮುಖ್ಯತಃ ಕೆರೆಬಾವಿಗಳಿಂದ) ಭಾಗ ೨ ಲಕ್ಷೆ ಎಕರೆ ಮಾತ್ರ. ಇದು ನೂರಕ್ಕೆ ೨ಕ್ಕಿಂತಲೂ ಕಡಿಮೆ, ಮೈಸೂರನ್ನೂ ಸೇರಿಸಿಕೊಂಡರೆ ಇದು ನೂರಕ್ಕೆ ಮೂರರಷ್ಟಾದೀತು. ಇಡೀ ಹಿಂದುಸ್ತಾನದಲ್ಲಿ ಸಾಗುವಳಿಯಾದ ಜಮೀನಿನಲ್ಲಿ ನೀರಾವರಿಯಾದ ಜಮೀನು ನೂರಕ್ಕೆ ೨೫ ಪಾಲಾದರೆ; ಈ ಕರ್ನಾಟಕದಲ್ಲಿ ಅದು ನೂರಕ್ಕೆ ಮೂರು ಮಾತ್ರ; ಎಂದರೆ ಹಿಂದುಸ್ತಾನದಈಗಿನ ಮಟ್ಟಕ್ಕೆ ಬರಬೇಕಾದರೂ ಕರ್ನಾಟಕದಲ್ಲಿ, ಈಗಿನ ೮ ಪಟ್ಟು ಹೆಚ್ಚು ನಿವಾವರಿಯ ವಿಸ್ತಾರು ಆಗಬೇಕು. ಸಾಗುವಳಿಯಾಗಬಲ್ಲ ಸುಮಾರು ೩೩ ಲಕ್ಷೆ ಎಕರೆಯ ವಿಜಾಪುರ ಜಿಲ್ಲೆಯಲ್ಲಿ ನೂರಕ್ಕೆ ೯೦ ಪಾಲು ಸಾಗಾಗುತ್ತಿರುವಾಗ, ಅಲ್ಲಿ ನೀರಾವರಿಯಾಗುತ್ತಿರುವ ಜಮೀನು ೧.೨% ಮಾತ್ರ. ೩೦೦ಇಂಚಿನ ವರೆಗೆ ಮಳೆ ಬೀಳುತ್ತಿರುವ ಉತ್ತರಕನ್ನಡದ ಗದ್ದೆಗಳು ಹಿಂಗಾರಿ ಬೆಳೆಯ ಹೊತ್ತಿಗೆ ಪಡಬೀಳುತ್ತವೆ ನೀರಿನ ಪೂರೈಕೆಯಿಲ್ಲದೆ. ಇದಕ್ಕೆಲ್ಲ ಪರಿಹಾರರೂಪವಾದ ನೀರಾವರಿಯ ಯೋಜನೆಗೆ ಕನಿಷ್ಠ ರೂ॥ ೨೦ ಕೋಟಿಯಾದರೂ ಬೇಕಾದೀತು. ಆದರೂ ನಾವು ಹಿಡಿದ ಮೊದಲ ಮಟ್ಟದ ಪೂರ್ತಿ ೮-೧೦ ಕೋಟಿ ಸಾಕು ಎಂದೂ ಒಟ್ಟು (ಪಶುಸಂವರ್ಧನೆ, ಗೊಬ್ಬರ ಸುಧಾರಣೆ, ಅರಣ್ಯ ರಕ್ಷಣೆ ಇತ್ಯಾದಿ ಸಹ) ಒಕ್ಕಲುತನದ ಖಾತೆಗೆ ೧೫ಕೋಟಿಯಿಂತೂ ಅವಶ್ಯ.

ಒಕ್ಕಲುತನದ ಮಾತು ಕರ್ನಾಟಕಕ್ಕೆ ಪ್ರಾಮುಖ್ಯವಾದುದು. ಆದರನಂತರ ಉದ್ಯೋಗ, ಖನಿಜಗಳ ಉತ್ಪಾದನೆ, ವಿದ್ಯುತ್ತಿನ ಉತ್ಪಾದನೆ ಹಾಗು ಪ್ರಸರಣೆ, ದೊಡ್ಡದೊಡ್ಡ ಕಾರಖಾನೆ (State Industris) ಗಳ ಬೆಳೆವಳಿಗೆ, ಯಾಂತ್ರಿಕ ಹಾಗು ರಾಸಾಯನಿಕ ಕೇಂದ್ರಗಳ ಸ್ಥಾಪನೆ ಸಹಕಾರಿ ಉದ್ಯೋಗಗಳ ಬೆಳೆವಣಿಗೆ ಕೈಗಾರಿಕೆಗಳ ಪ್ರೋತ್ಸಾಹ, ವ್ಯಾಪಾರದ ಪುನರ್ವಟನೆ ಹಾಗೂ ಕೇಂದ್ರೀಕರಣ, ರೇಲು, ರಸ್ತೆ, ವಿಮಾನನಿರ್ಗಮ ತಂತಿಟಪಾಲು, ಸಾಯರ್‌ಲೆಸ್‌ಗಳು ಬೆಳೆವಣಿಗೆ ಇವುಗಳಿಗೆಲ್ಲ ಮೊದಲನೆಯಮಟ್ಟದಲ್ಲೇ ೨೫ಕೋಟಿ ರೂಪಾಯಿ ಸಲ್ಲುವುವು. ಕರ್ನಾಟಕ ಈ ಎಲ್ಲ ಬಾಬತುಗಳಲ್ಲೂ ಹಿಂದೆ ಬಿದ್ದಿದೆ. ಉದಾಹರಣೆಗೆ ಸದ್ಯ ಕರ್ನಾಟಕದಲ್ಲಿ ಮೈಸೂರನ್ನುಳಿದರೆ ಎಲ್ಲೆಯೂ ವಿದ್ಯುತ್ತಿಲ್ಲ. ದೊಡ್ಡ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನುಂಟು ಮಾಡಬಲ್ಲ ಸ್ಥಳಗಳು ಕ್ಯಾನರಾದಲ್ಲಿ ೫-೬, ಮುಂಬೈಕರ್ನಾಟಕದಲ್ಲಿ (ಉ. ಕನ್ನಡ ಹೊರತು) ನಾಲ್ಕು, ನಿಝಾಮಕ ಕರ್ನಾಟಕದಲ್ಲಿ ೩, ಬಳ್ಳಾರಿಯಲ್ಲಿ ೨ ಕೊಡಗು-ನೀಲಗಿರಿ ಸುತ್ತುಮುತ್ತು ೪-೫ ಹೀಗೆ ಕನಿಷ್ಠ ೧೮-೨೦ ಆದರೂ ಇವೆ ಇವುಗಳಲ್ಲಿ ನಾಲ್ಕೈದನ್ನೆ ಮೊದಲಿಗೆ ಪ್ರಾರಂಭಿಸಬೇಕೂ ೧೫ ಕೋಟಿ ರೂಪಾಯಿಗಳು ಬೇಕಾದಾವು. ಇನ್ನೊಂದು ಉದಾಹರಣೆ ರೈಲ್ವೆಯದು ಕರ್ನಾಟಕದಲ್ಲಿ ಒಟ್ಟು ೨೦೦೦ ಮೈಲು ರೇಲ್ವೆದಾರಿಯಿದೆ. ಎಂದರೆ ೫೦ ಚದರ ಮೈಲಿಗೆ ಒಂದು ರೈಲ್ವೆ ಮೈಲು. ಕರ್ನಾಟಕದ ವಿಸ್ತಾರ ಹಾಗು ವ್ಯಾಪಾರ-ಉದ್ಯೋಗಗಳ ಭಾವೀ ಬೆಳೆವಣಿಗೆಯ ದೃಷ್ಟಿಯಿಂದ ಕರ್ನಾಟಕಕ್ಕೆ ೨೦ ಚದರ ಮೈಲಿಗೆ ಒಂದು ಮೈಲ

† ೧೯೩೭-೩೮ ರಲ್ಲಿ ಧಾರವಾಡ-ಬೆಳಗಾಂವಿ-ವಿಜಾಪುರ ಜಿಲ್ಲೆಗಳ ಒಟ್ಟು ಸುಮಾರು ೧ ಕೋಟಿ ಎಕರೆಯಲ್ಲಿ ಸುಮಾರು ೪೦ ಲಕ್ಷ ಎಕರೆ ಸಾಗುವಳಿಯಲ್ಲಿತ್ತು. ಎಂದರೆ ಕರ್ನಾಟಕದ ಅಡವಿಯನ್ನುಳಿದು ಮಿಕ್ಕ ಭಾಗದಲ್ಲಿ ಸಾಗಾದ ಜಮೀನು ನೂರಕ್ಕೆ ೪೦ ಪಾಲಿನದ್ದು; ಇಡಿ ಕರ್ನಾಟಕದಲ್ಲಿ ನೂರಕ್ಕೆ ೫೦ ಸಾಲಿನದ್ದು ಎಂದು ಹಿಡಿಯಬಹುದು.

ರೈಲಾದರೂ ಬೇಕು. ಎಂದರೆ ಇಡಿ ಕರ್ನಾಟಕಕ್ಕೆ ಒಟ್ಟು ೫೦೦೦ ಮೈಲು ರೈಲು ಬೇಕು. ಆದರೆ ಸದ್ಯಕ್ಕೆ ಈಗಿರುವುದಕ್ಕಿಂತ ೧೫೦೦ ಮೈಲು ಹೆಚ್ಚು ಹೊಸದಾಗಿ ಬೇಕೆಂದರೂ. ಇದಕ್ಕೆ ೧೦ಕೋಟಿ ರೂಪಾಯಿ ಬೇಕು. ಇದಲ್ಲದೆ ಕರ್ನಾಟಕದ ಬೇಲ್ವೆ ಪೆದ್ದಾರಿಗಳಾದ ಗುಂತಗಲ್–ಹುಬ್ಬಳ್ಳಿ, ಸೊಲ್ಲಾಪುರ–ಬಾಗಲಕೋಟೆ–ಹುಬ್ಬಳ್ಳಿ, ಬೆಂಗಳೂರು–ದಾವಣಗೆರೆ–ಹುಬ್ಬಳ್ಳಿ ಈ ಮೂರು ರೇಲ್ವೆಗಳಾದರೂ ಬ್ರಾಡ್‌ಗೇಜ್ ಆಗಬೇಕು. ಇವಂತೆ ೨೦೦೦ ಮೈಲು ರಸ್ತೆಗಳ ಬೆಳೆವಣಿಗೆ, ೧೦–೧೫ ವಿಮಾನನಿಲ್ದಾಣಗಳು ಇತ್ಯಾದಿಗಳಿಗೆಲ್ಲ ಹಾಗು ಖನಿಜಗಳ ಬೆಳೆವಣಿಗೆ. ದೊಡ್ಡ ಪ್ರಮಾಣದ ಔದ್ಯೋಗಿಕ ಕಾರಖಾನೆಗಳಿಗೆಲ್ಲ ಸೇರಿ ಒಟ್ಟು ೩೦. ೨೫ ಕೋಟಿ ಯಾದರೂ ಬೇಕು.

ಮೂರನೆಯದಾಗಿ ಆರೋಗ್ಯವಿಕಾಸದ ಖಾತೆಗೆ ೧೦ಕೋಟಿ ರೂಪಾಯಿ, ನಾಲ್ಕನೆಯದಾಗಿ ವಿದ್ಯಾಭಿವೃದ್ಧಿಯ ಖಾತೆ, (ಅಲ್ಲದೆ ಕರ್ನಾಟಕಕ್ಕೆ ಅವಶ್ಯವಾಗಿರುವ ಹಲವಾರು ತರದ ಕಾಲೇಜುಗಳಿಗೂ ವಿಶ್ವವಿದ್ಯಾಲಯದ ಸ್ಥಾಪನೆಗೂ ಸೇರಿ) ೧೦ ಕೋಟಿ ರೂಪಾಯಿಗಳು ಹತ್ತುವುವು.

ಐದನೆಯದಾಗಿ ಕರಾವಳಿಯ ಖಾತೆ. ಇದರಲ್ಲಿ ಮುಖ್ಯತಃ ಎರಡೂ ಕನ್ನಡ ಜಿಲ್ಲೆಗಳ ಬೆಳೆವಣಿಗೆಯ ಮಾತು ಸೇರಿವೆ. ಜಲೋದ್ಯೋಗ (Marine Industries) ಗಳ ವಿಕಾಸ, ಜಲಮಾರ್ಗಗಳ ಬೆಳೆವಣಿಗೆ, ನೌಕಾಶಿಕ್ಷಣ, ಹಡಗು ಕಟ್ಟುವುದು, ಅಲ್ಲದೆ ಕಾರವಾರದಂತಹ ಒಂದನೆಯ ತರಗತಿಯದೊಂದಾದರೂ ಬಂದರವಲ್ಲದೆ ಭಟ್ಕಳ, ಮಲ್ಪೆ, ಮಂಗಳೂರಿನಂತಹ ಎರಡನೆಯ ತರಗತಿಯ ೩-೪ ಬಂದರಗಳ ಕಟ್ಟುವಿಕೆ ಹಾಗು ಇನ್ನುಳಿದ ಹಕ್ಕಾರು ಮೂರನೆಯ ತರಗತಿ ಬಂದರಗಳ ಸುಧಾರಣೆ ಮುಂತಾದ ಮಾತುಗಳು ಇದರಲ್ಲಿ ಸಮಾವೇಶವಾಗುತ್ತವೆ: ಕರ್ನಾಟಕದ ಕರಾವಳಿಯಲ್ಲೆಲ್ಲ ಅತ್ಯುತ್ತಮವಾದ ಬಂದರ ಕಾರವಾರ. ಅದನ್ನು ಸದ್ಯದ ಮುಂಬಯಿಯ ಮಟ್ಟಕ್ಕೆ ಮುಟ್ಟುವಂತೆ ಬೆಳೆಸುವದು ಸಾಧ್ಯವಿದೆ. ಅಷ್ಟಾಗಲು ಕನಿಷ್ಠ ೧೦ ಕೋಟಿ ರೂಪಾಯಿಗಳಾದರೂ ಬೇಕು. ಮೊದಲನೆಯ ಯೋಜನೆಯಲ್ಲಿ ಇದಕ್ಕೆ೫ಕೋಟಿ ಎಂದರೂ,ಇನ್ನುಳಿದ ಕರಾವಳಿಯ ಬೆಳೆವಣಿಗೆಯೆಲ್ಲಾ ಸೇರಿ ಒಟ್ಟು ಕರಾವಳಿ ಖಾತೆಗೆ ೧೦-೧೫ ಕೋಟಿಯಾದರೂ ಬೇಕು.

ಇದಲ್ಲದೆ ಇತರ ಬೆಳೆವಣಿಗೆಯ ಮಾತುಗಳೂ ಹಲವುಂಟು. ಹೊಸ ರಾಜಧಾನಿಯ ನಿರ್ಮಾಣ, ಹಲವು ಹೊಸ ಔದ್ಯೋಗಿಕ ಪಟ್ಟಣಗಳ ಸ್ಥಾಪನೆ, ಈಗಿದ್ದ ಹಳ್ಳಿ-ಪಟ್ಟಣಗಳ ಪುನರ್ಘಟನೆ ಮ್ಯೂಸಿಯಂ, ಕೇಂದ್ರ ವಾಚನಾಲಯ ಇತ್ಯಾದಿ ಮಾತುಗಳೂ ಉಂಟು. ಇವು ವಿಶೇಷ ಖರ್ಚಿನ ಬಾಬತುಗಳೇ. ಅಂತೂ ಒಟ್ಟಾರೆ ಕರ್ನಾಟಕದ ಸರ್ವಾಂಗೀಣ ಉನ್ನತಿಯ ಮೊದಲ ಮೆಟ್ಟಿಲನ್ನು ಕಟ್ಟಬೇಕಾದರೆ—ಒಕ್ಕಲುತನದ ಬೆಳೆವಣಿಗೆಗೆ ೧೫ ಕೋಟಿ, ಉದ್ಯೋಗ-ವ್ಯಾಪಾರಗಳ ಬೆಳೆವಣಿಗೆಗೆ ೫೫ ಕೋಟಿ, ಆರೋಗ್ಯ ಹಾಗು ವಿದ್ಯಾಭಿವೃದ್ಧಿಗೆ ೨೦ ಕೋಟಿ, ಕರಾವಳಿಯ ಬೆಳೆವಣಿಗೆ ಹಾಗು ಇತರ ಮಾತುಗಳಿಗೆಲ್ಲಾ ಸೇರಿ ೧೫ ಕೋಟಿ—ಅಂತೂ ಒಟ್ಟು ೭೫ಕೋಟಿ ರೂಪಾಯಿಗಳಾದರೂ ಬೇಕು.

೭೫ ಕೋಟಿ ರೂಪಾಯಿಗಳೆಂದರೆ ಅತ್ಯಗಾಧದ, ಅಥವಾ ಒಂದು ಕುರುಡು ಕನಸಿನ ಮಾತು ಎನ್ನುವಂತಿದೆ. ಹೌದು ಮುರುಕು ಕರ್ನಾಟಕವೆಲ್ಲಿ? ೭೫ ಕೋಟಿಯ ಕನಸೆಲ್ಲಿ? ತಿರುಕನೊರ್ವನ ಕೊರಳಿಗೆ ಕರಿಯ ಕೈಯ ಕುಸುಮ ಮಾಲೆ ಬಿದ್ದಂತೆ! ಆದರೆ ಮೈಸೂರು ಈಗಾಗಲೇ ತನ್ನ ಅಭಿವೃದ್ಧಿಗೆ ಕೋಟಿಗಟ್ಟಲೆ ವೆಚ್ಚ ಮಾಡಿ, ಮತ್ತೀಗ ೧೫-೨೦ಕೋಟಿಯ ಯೋಜನೆ ಮಾಡಿಕೊಂಡಿಲ್ಲವೆ? ತುಂಗಭದ್ರೆಯ ಯೋಜನೆಯೊಂದಕ್ಕೇ ನಿಝಾಮ್ ಸರಕಾರ ೨೦ಕೋಟಿ ಲೆಕ್ಕ ಹಾಕಿದೆ. ಮುಂಬೈ ಪ್ರಾಂತ ಇದೀಗ ೫೦ ಕೋಟಿಯ ವ್ಯವಸ್ಥೆ ಮಾಡಿಕೊಂಡಿದೆ. ಇಡಿ ಕರ್ನಾಟಕಕ್ಕಿಂತ ಮೈಸೂರು-ಮೊಗಲಾಯಿ ಎರಡೂ ಚಿಕ್ಕವು. ಮುಂಬೈಪ್ರಾಂತ, ಭಾವಿ ಸಂಯುಕ್ತಪ್ರಾಂತಕ್ಕಿಂತ ಸ್ವಲ್ಪ ದೊಡ್ಡದು ಮಾತ್ರ. ಅದರೂ ಅವು ಹೀಗೆ ಕೋಟ್ಯಂತರ ರೂಪಾಯಿಗಳ ಯೋಜನೆ ಮಾಡಲು ಶಕ್ತವಾದಾಗ, ಸಂಯುಕ್ತ ಕರ್ನಾಟಕ ತನ್ನ ಮೊದಲನೆಯ ಯೋಜನೆಗೆ ೭೫ಕೋಟಿ ವೆಚ್ಚ ಮಾಡಲು ಶಕ್ತವಾಗಲೇಬೇಕು. ಆ ಶಕ್ತಿ ಸಂಯುಕ್ತ ಕರ್ನಾಟಕ ಒಂದು ಪ್ರಾಂತವಾದರೆಯೇ ಸಾಧ್ಯ.

ಮೊದಲನೆಯ ಯೋಜನೆ ಹೊಸದಾಗಿ ಕಟ್ಟುವ ಯೋಜನೆ ಆದರ ಮೊದಲ ಭಾಗಕ್ಕೆ ೫ ವರ್ಷವಾದರೂ ಬೇಕು. ಆದಕ್ಕೆ ನೀಲ್ಯಾಣಿಸಿದಂತೆ ೭೫ಕೋಟಿ. ಆಮೇಲೆ ಮೊದಲನೆಯ ಯೋಜನೆಯನ್ನು ಸ್ಥಿರೀಕರಿಸಿ ವಿಕಾಸಗೊಳಿಸಲು ಮತ್ತೆ ಐದು ವರ್ಷದ ಎರಡನೆಯ ಭಾಗದ ಯೋಜನೆಗೆ ಸುಮಾರು ೭೫ ಕೋಟಿ ರೂಪಾಯಿ ಬೇಕಾದೀತು. ಅಂತೂ ೧೦ ವರ್ಷದ ಒಂದು ಯೋಜನೆಗೆ ಕನಿಷ್ಠ ೧೦೦ ಕೋಟಿ ಅಥವಾ ೧ ಅಬ್ಜ ರೂಪಾಯಿಗಳ ವೆಚ್ಚ ತಗುಲೀತು. ಕರ್ನಾಟಕಕ್ಕೇ ಕಾಲಿಲ್ಲದಾಗ ಇಲ್ಲಿ ಕೊಟ್ಟ ಅಂದಾಜಿನ ಅಂಕೆಗಳಿಗೆ ಕಾಲಿವೆಯೆಂದು ನಾನು ಹೇಳಲಾರೆ. ಆದರೆ ಕರ್ನಾಟಕದಷ್ಟೇ ದೊಡ್ಡದಾದ ಬೇರೆ ಬೇರೆ ಪ್ರಾಂತಗಳು ಹಾಕುವ ಲೆಕ್ಕ ನೋಡಿದರೆ, ಕರ್ನಾಟಕದ ಪ್ರಾಥಮಿಕ ಯೋಜನೆಗೆ ಕನಿಷ್ಠ ಒಂದು ಅಬ್ಜ ರೂಪಾಯಿ ಹೆಚ್ಚಲ್ಲ. ಮುಂಬೆ ಪ್ಲಾ ನಿನವರು ಇಡಿ ಹಿಂದುಸ್ತಾನಕ್ಕೆ ೧೦,೦೦೦ ಕೋಟಿ ಬೇಕೆಂದಿದ್ದಾರೆ. ಹಿಂದುಸ್ತಾನದಲ್ಲಿ ಕರ್ನಾಟಕ ೨೦ರಲ್ಲಿ ಒಂದು ಪಾಲು ಎಂದು ಹಿಡಿದರೆ ಕರ್ನಾಟಕಕ್ಕೆ ೫೦೦ ಕೋಟಿ ಬೇಕಾಗುವುವು. ಎ. ಎನ್. ರಾಯ್ ಅವರ ಮೇರೆಗೆ ಕರ್ನಾಟಕಕ್ಕೆ ೭೫೦ ಕೋಟಿಯ ಯೋಜನೆಯಾಗಬೇಕು; ಪ್ರೀ. ಅಗ್ರವಾಲರ ಮೇರೆಗೆ ಸದ್ಯ ನಮಗೆ ೧೭೫ ಕೋಟಿ ಬೇಕು. ಈ ಲೆಕ್ಕದಿಂದಲೂ ಕರ್ನಾಟಕದ ಮೊದಲಿನ ಯೋಜನೆಗಳಿಗೆ ೧೭೦ ಕೋಟಿ ಅಗಾಧದ ಮಾತಲ್ಲ. ಅಲ್ಲಯುದ್ಯೋತ್ತರ ಯೋಜನೆಗಳಲ್ಲಿ ಕರ್ನಾಟಕಕ್ಕಿಂತ ಚಿಕ್ಕದಾ ಅಸಾಮು ೪೪ ಕೋಟಿ, ಬಿಹಾರ ೧೦೦ ಕೋಟಿ ರೂಪಾಯಿ ತೊಡಗಿಸಲು ಸಿದ್ಧವಾಗಿವೆ. ಯು. ಪಿ. ೧೫೦ ಕೋಟಿ ಬೇಕೆನ್ನುತ್ತಿದೆ. ಹಿಂದುಸ್ತಾನ ಸರಕಾರ ಮೊದಲಿನ ೫ ವರ್ಷಗಳಲ್ಲೇ ೧೦೦೦ಕೋಟಿ ರೂಪಾಯಿ ತೊಡಗಿಸಬೇಕೆನ್ನುತ್ತಿದೆ ಇವೆಲ್ಲವುಗಳ ದೃಷ್ಟಿಯಿಂದಲೂ ಹತ್ತು ವರ್ಷಗಳ ಒಂದು ಯೋಜನೆಗಾಗಿ ಕರ್ನಾಟಕಕ್ಕೆ ೧೦೦ಕೋಟಿ ಅತ್ಯವಶ್ಯವಾಗಿ ಬೇಕಾಗುವುದರಲ್ಲಿ ಸಂದೇಹವಿಲ್ಲ. ಕೇವಲ ಬ್ರಿಟಿಷ ಕರ್ನಾಟಕವನ್ನೇ ತೆಗೆದುಕೊಂಡರೆ ಒಂದು ಪ್ರಾಥಮಿಕ ಯೋಜನೆಗೆ ೫೦ ಕೋಟಿಗೆ ಮಿಕ್ಕಿದ ಹಣಬೇಕಾದೀತು. ಇಷ್ಟಾದ ಮೇಲೆ ಮಾ ಕರ್ನಾಟಕ ೫೦೦ ಕೋಟಿಯ ಇಲ್ಲವೆ (Peoples' Plan)ನ ನೇರ ೭೫೦ ಕೋಟಿಯ ಎರಡನೆಯ ಯೋಜನೆಗೆ ಯೋಗ್ಯವಾದೀತು. ಮೊದಲು ಆಟ್ಟ ಆಮೇಲೆ ಬೆಟ್ಟ.

# ಆದಿಮಾನವನ ಚರಿತ್ರೆ

## ನಿಶೆಯ ಪರಿವಾರ

(ಸುಮಾರು ಕ್ರಿ. ಪೂ. ೫೦೦೦ ವರ್ಷಗಳ ಹಿಂದೆ ನಡೆದಿರಬಹುದಾದ ಕತೆ.)

ಶ್ರೀ. ಬಿ. ವಿ. ಕಾಶೀರಾಮಶಾಸ್ತ್ರಿ 'ಸಾಹಿತ್ಯರತ್ನ' ಮೈಸೂರು ನಗರ

### ಒಂದು

ಚಳಿಗಾಲ ಕಳೆಯುತ್ತಿದೆ. ಈಗೀಗ ಹಗಲಲ್ಲಿ ಬಿಸಿಲಿನ ಸುಳಿವು ಕಾಣುತ್ತಲಿವೆ. ಇನ್ನೂ ದಿನವೆಲ್ಲಾ ಬಿಸಿಲಿರುವ ದಿನಗಳು ಬಂದಿಲ್ಲ. ಈಗ ಐದುಗಂಟೆ ಮಾತ್ರ ಸೂರ್ಯನ ಬೆಳಕು ಕಾಣುತ್ತದೆ. ಎಲ್ಲೆಲ್ಲೂ ಮಂದು ತುಂಬಿದೆ. ಕಾಡಿನಲ್ಲಿರುವ ಗಿಡಮರಗಳೂ ಮಂಜಿನಿಂದ ಮುಚ್ಚಿಹೋಗಿವೆ. ಗಿಡಗಳೂ ಇರುವುವೆಷ್ಟು! ಒಂದೆರಡರ ಮೇಲಿಲ್ಲ. ಕಾಣಬರುವುದು ಒಂದು ಉದ್ದವಾಗಿ ಈಗ ಒಣಗಿದಂತಿರುವ ದೇವದಾರು; ಇನ್ನೊಂದು ಬಿಳಿ ಬಟ್ಟೆಯುಟ್ಟು ಎಲೆ ಉದುರಿ ಬೋಳಾಗಿ ನಿಂತಿರುವ ಭೂರ್ಜ ವೃಕ್ಷ. ನೆಲ, ಬೆಟ್ಟ–ಗುಡ್ಡ, ಗಿಡ–ಮರ ಎಲ್ಲಾ ಮಂಜಿನ ಹೊದ್ದಿಕೆ ಹೊದ್ದಿರುವುವೆ. ಎಲ್ಲಿಯೂ ಹಸುರಿನ ಗುರುತಿಲ್ಲ. ಪ್ರಾಣಿಗಳ ಸುಳಿವಂತೂ ಹೇಳುವಂತೆಯೆ ಇಲ್ಲ. ಸಾಮಾನ್ಯ ಪ್ರತಿವರ್ಷವೂ ಪ್ರಾಣಿಗಳು, ಈ ಆರು ತಿಂಗಳ ಚಳಿಯ ರಾತ್ರಿ ಬರುವ ಹೊತ್ತಿಗೇ ದಕ್ಷಿಣದ ಬಯಲಿಗೆ ಹೊರಟುಹೋಗುತ್ತವೆ.

ವೋಲ್ಗಾನದಿಯ ಉತ್ತರದ ದಡ. ನದಿಯ ನೀರೂ ಗೆಡ್ಡೆಗಟ್ಟಿದೆ. ಇಂಥಾ ನಿರ್ಜನ ಪ್ರದೇಶವೇ ಆದಿಮಾನವನ ಹುಟ್ಟೂರು. ಒಂದು ಗುಹೆಯೊಳಗೆ ಕಗ್ಗತ್ತಲು. ಕತ್ತಲಿನಿಂದ ಗುಹೆಯ ಆಳತೆ ಆಕಾರ ಎಷ್ಟೆಂದು ಹೇಗೆಂದು ಹೇಳಲಾಗುವುದಿಲ್ಲ. ಮಧ್ಯೆ ಒಂದು ಬೆಂಕಿ ಕುಂಡ. ಹೊಗೆ ಎಲ್ಲೆಡೆಯಲ್ಲೂ ತುಂಬಿದೆ. ಬೆಂಕಿ ಇರುವುದಂಥ ಹೊರಗಿನ ಚಳಿ ಒಳಗಿಲ್ಲ.

ಬೆಂಕಿಯ ಮುಂದೆ ನಾಂಸದ ಗುರುತೂ ಇಲ್ಲದ ಮೂಳೆ-ಚರ್ಮಗಳ ಒಂದು ಮುದುಕಿಯ ಮೂರ್ತಿ ಕುಳಿತಿದೆ. ಸೈ; ಮುಖವೆಲ್ಲಾ ಸುಕ್ಕುಸುಕ್ಕಾಗಿ ಹೋಗಿದೆ. ಕೈಗಳು ಬತ್ತಿ ಎತ್ತಲಾರದ ಹಾಗೆ ಒಂದೆಡೆ ಬಿದ್ದಿವೆ. ಕಣ್ಣುಗಳು ಗುಂಡಿ ಬಿದ್ದಿವೆ. ಗುಡ್ಡೆಗಳು ಹೊಳಪಿಲ್ಲದಿದ್ದರೂ ವೃದ್ಧಿ, ಕಳಿಸಿಲ್ಲವೆನ್ನುವಂತಿವೆ. ಬಿಳಿಯ ಕೂದಲು. ಕಿವಿ ಮಾತ್ರ ಇನ್ನೂ ಕೇಳಿಸುತ್ತವೆ. ಪಕ್ಕದಲ್ಲಿರುವ ಮಕ್ಕಳ ಅಳು–ರಗಳೆ ಮುದುಕಿಗೆ ಗೊತ್ತಾಗುತ್ತಿವೆ.

ಐದಾರು ಮಕ್ಕಳು....ಒಬ್ಬ ಎಂಟುವರ್ಷದವನಿರಬಹುದು; ಅವನೇ ಎಲ್ಲರಿಗಿಂತ ದೊಡ್ಡವನು. ಮುದುಕಿ ಮೊದಲು ಸೂನಿ ಒಂದು ವರ್ಷದ ಎಳಮಗುವಿನ ವರೆಗೂ ಎಲ್ಲರೂ ಬೆತ್ತಲೆ ಇರುವವರೇ. ಸಾಮಾನ್ಯ ಮೈಬಣ್ಣ ಕೆಂಪು ಮಿಶ್ರ ಬಿಳುಪು. ಕೂದಲುಗಳೂ ಹೊಳಪಾಗಿ ಸ್ವಲ್ಪ ಹಳದಿ ಛಾಯೆಯುಳ್ಳವು. ಇಬ್ಬರು ಸಮವಯಸ್ಕರಾದ ಹುಡುಗ-ಹುಡುಗಿಯರು ಹಸಿದು ಅಳುತ್ತಿದ್ದಾರೆ. ಒಂದು ಮೂಳೆಯ ಜೊರಿಗಾಗಿ ಅವರಲ್ಲಿ ಜಗಳ ನಡೆದಿದೆ. ಹುಡುಗಿ ಹುಡುಗನ ಕೈಯಿಂದ ಬಲಾತ್ಕಾರವಾಗಿ ಕಿತ್ತುಕೊಂಡಿದ್ದಾಳೆ. ಹುಡುಗನು 'ಗೋಕೋ' ಎಂದು ಜೋರಾಗಿ ಕಿಳುತ್ತಿದ್ದಾನೆ. ಅಜ್ಜಿ (ಮುದುಕಿ) ಕುಳಿತಲ್ಲಿಂದಲೇ— 'ಅಗ್ನಿ! ಬಾ, ಇಲ್ಲಿ ಬಾಪ್ಪ! ಇಲ್ಲಿ....ಅಜ್ಜಿ....' ಎನ್ನುವಳು. ಅಜ್ಜಿಯಂತೆಯೆ ಹುಡುಗನೂ ಕುಳಿತಲ್ಲಿಯೆ ಚೀರಿದುತ್ತಿದ್ದಾನೆ. ದೊಡ್ಡ ಹುಡುಗ ಬಂದ. ಅಳುತ್ತಿದ್ದವನನ್ನು ಎತ್ತಿ ತಂದು ಮುದುಕಿಯ ಹತ್ತಿರ ಬಿಟ್ಟ. ಸೊಲ್ಲಗೆ ಮುದುಕಿಯ ಬತ್ತಿದ ಸ್ತನವನ್ನು ಚೀಪುತ್ತಾ ಸುಮ್ಮನಾದ.

### ಎರಡು

ಗುಹೆಯ ಹೊರಗೆ, ಮಂಜಿನ ಮೇಲೆ ಹೊಸ ಹೊಸ ಹೆಜ್ಜೆಗಳೆಲ್ಲೋ ಹೋಗಿವೆ. ಒಟ್ಟು ಐದಾರು ಜನರ ಹೆಜ್ಜೆಗಳಂತೆ ಕಾಣುತ್ತಿವೆ. ಬಹುದೂರವಾಗಿವೆ; ಅಲ್ಲೊಂದು ಬೆಟ್ಟ. ಪೊಲಿವನಂತೆಯೆ ಗಿಡಮರಗಳು. ಅಲ್ಲಲ್ಲಿ ಕಟ್ಟಿನ ಬಂಡೆಗಳು; ಒಂದು ಬಂಡೆಯ ಮೇಲೆ ಸೊಲ್ಲಗೆ ಕೈಯಿಂದ ಹಿಡಿದು ಐದಾರು ಜನ ಹತ್ತುತ್ತಿದ್ದಾರೆ. ಮುಂದೆ ಒಬ್ಬ ಹೆಂಗುಸು. ಹಿಂದೆ ನಾಲ್ಕು ಜನ ಗಂಡಸರು ಮತ್ತು ಇಬ್ಬರು ಹೆಂಗುಸರು. ಎಲ್ಲರ ಕೈಯಲ್ಲೂ ಕಲ್ಲಿನ ಜೂನಾದ ಬಿಳಿಯಕೊಡಲಿ ಇದೆ. ಜೂನಾದ ಮೊನ್ನೆಗಳೂ ಕೆಲವರ ಹತ್ತಿರ ಇವೆ. ಎಲ್ಲರ ಮುಖಗಳೂ ಅಜ್ಜಿ (ಹಿಂದಿನ ಗುಹೆಯಲ್ಲಿದ್ದವ)ಯಂತೆಯೆ ಇವೆ. ಇವರೆಲ್ಲಾ ಒಂದೇ ಕುಟುಂಬದವರು.

ಹೆಂಗುಸಿನ ವಯಸ್ಸು ನಲವತ್ತು ನಲವತ್ತೈದು ಇರಬಹುದು. ಗಂಡಸರಲ್ಲಿ ಒಬ್ಬನು ಅವಳಿಗಿಂತ ದೊಡ್ಡವನು. ಮಿಕ್ಕ ಮೂವರು ಇಪ್ಪತ್ತೈದು ಇಪ್ಪತ್ತಾರಿನವರು. ಹಿಂದೆ ಬರುತ್ತಿದ್ದ ಹೆಂಗುಸರಲ್ಲಿ ಒಬ್ಬಳು ಇಪ್ಪತ್ತೈದಾವಳು. ಮತ್ತೊಬ್ಬಳು ಹದಿನಾರು ವರ್ಷಕ್ಕಿಂತ ಕಡಿಮೆಯಿಹವಳು. ಎಲ್ಲರ ಮೈಮೇಲೂ ಮುಳ್ಳಿನಿಂದ ಹೊಲಿದ ಬಿಳಿಯ ಎತ್ತಿನ ಚರ್ಮವಿದೆ.

ಮುಂದಿನವಳು ನಿಂತು ಆಲಿಸಿದಳು. ಅವಳ ಮುಂದೆ ಒಂದು ಗುಹೆ. ಸ್ವಲ್ಪಹೊತ್ತು ಏನೂ ಕೇಳದಿರಲು, ಅವಳು ಇಬ್ಬರು ಗಂಡುಸರ ಕೊಡನೆ ಒಳಹೊಕ್ಕಳು. ಎಲ್ಲವೂ ಒಳಗಿನ ಕತ್ತಲೆಯಲ್ಲಿ ಪದನರಿಸಿ

ಹಿಂದಿಯಲ್ಲಿ ಸುಪ್ರಸಿದ್ಧ ಸಾಮ್ಯವಾದಿ ಲೇಖಕರಾದ ಪಂಡಿತ ರಾಹುಲ ಸಾಂಕೃತ್ಯಾಯನರು ಬರೆದ 'ಮಾನವನ ಪ್ರಗತಿ' ಅಥವಾ 'ವೋಲ್ಗಾಸೇ ಗಂಗಾ' ಎಂಬ ಕಥಾಸಂಗ್ರಹದಲ್ಲಿಯ ಮೊದಲನೆಯ ಕತೆಯ ಅನುವಾದವಿದು. ಇದಕ್ಕೆ ಸರಿಸುಮಾರಿಗೆ ಹಿಂದಿನ ಮಾನವನ ಮೂಲವನ್ನು ಕುರಿತ ಚಿತ್ರ ಇದರಲ್ಲಿದೆ. —ಲೇ.

ರೈಲಾದರೂ ಬೇಕು. ಎಂದರೆ ಇಡಿ ಕರ್ನಾಟಕಕ್ಕೆ ಒಟ್ಟು ೫೦೦೦ ಮೈಲು ರೈಲು ಬೇಕು. ಆದರೆ ಸದ್ಯಕ್ಕೆ ಈಗಿರುವುದಕ್ಕಿಂತ ೧೫೦೦ ಮೈಲು ಹೆಚ್ಚು ಹೊಸದಾಗಿ ಬೇಕೆಂದರೂ, ಇದಕ್ಕೆ ೧೦ ಕೋಟಿ ರೂಪಾಯಿ ಬೇಕು. ಇದಲ್ಲದೆ ಕರ್ನಾಟಕದ ರೇಲ್ವೆ ಹೆದ್ದಾರಿಗಳಾದ ಗುಂತಕಲ್–ಹುಬ್ಬಳ್ಳಿ, ಸೊಲ್ಲಾಪುರ–ಬಾಗಲಕೋಟೆ–ಹುಬ್ಬಳ್ಳಿ, ಬೆಂಗಳೂರು–ದಾವಣಗೆರೆ–ಹುಬ್ಬಳ್ಳಿ, ಈ ಮೂರು ರೇಲ್ವೆಗಳಾದರೂ ಬ್ರಾಡ್‌ಗೇಜ್ ಆಗಬೇಕು. ಇದರಂತೆ ೩೦೦೦ ಮೈಲು ರಸ್ತೆಗಳ ಬೆಳೆವಣಿಗೆ, ೧೦–೧೫ ವಿಮಾನನಿಲ್ದಾಣಗಳು ಇತ್ಯಾದಿಗಳಿಗೆಲ್ಲ ಹಾಗು ಖನಿಜಗಳ ಬೆಳೆವಣಿಗೆ, ದೊಡ್ಡ ಪ್ರಮಾಣದ ಔದ್ಯೋಗಿಕ ಕಾರಖಾನೆಗಳಿಗೆಲ್ಲ ಸೇರಿ ಒಟ್ಟು ರೂ. ೨೫ ಕೋಟಿಯಾದರೂ ಬೇಕು.

ಮೂರನೆಯದಾಗಿ ಆರೋಗ್ಯವಿಕಾಸದ ಖಾತೆಗೆ ೧೦ಕೋಟಿ ರೂಪಾಯಿ, ನಾಲ್ಕನೆಯದಾಗಿ ವಿದ್ಯಾಭಿವೃದ್ಧಿಯ ಖಾತೆ, (ಅಲ್ಲದೆ ಕರ್ನಾಟಕಕ್ಕೆ ಅವಶ್ಯವಾಗಿರುವ ಹಲವಾರು ತರದ ಕಾಲೇಜುಗಳಿಗೂ ವಿಶ್ವವಿದ್ಯಾಲಯದ ಸ್ಥಾಪನೆಗೂ ಸೇರಿ) ೧೦ ಕೋಟಿ ರೂಪಾಯಿಗಳು ಹತ್ತುವುವು.

ಐದನೆಯದಾಗಿ ಕರಾವಳಿಯ ಖಾತೆ. ಇದರಲ್ಲಿ ಮುಖ್ಯತಃ ಎರಡೂ ಕನ್ನಡ ಜಿಲ್ಲೆಗಳ ಬೆಳೆವಣಿಗೆಯ ಮಾತು ಸೇರಿವೆ. ಜಲೋದ್ಯೋಗ (Marine Industries) ಗಳ ವಿಕಾಸ, ಜಲಮಾರ್ಗಗಳ ಬೆಳೆವಣಿಗೆ, ನೌಕಾಶಿಕ್ಷಣ, ಹಡಗು ಕಟ್ಟುವುದು, ಅಲ್ಲದೆ ಕಾರವಾರದಂತಹ ಒಂದನೆಯ ತರಗತಿಯದೊಂದಾವರೂ ಬಂದರವಲ್ಲದೆ ಭಟ್ಕಳ, ಮಲ್ಪೆ, ಮಂಗಳೂರಿನಂತಹ ಎರಡನೆಯ ತರಗತಿಯ ೫-೪ ಬಂದರಗಳ ಕಟ್ಟುವಿಕೆ ಹಾಗು ಇವ್ಹುಳಿದ ಹತ್ತಾರು ಮೂರನೆಯ ತರಗತಿ ಬಂದರಗಳ ಸುಧಾರಣೆ ಮುಂತಾದ ಮಾತುಗಳು ಇದರಲ್ಲಿ ಸಮಾವೇಶವಾಗುತ್ತವೆ. ಕರ್ನಾಟಕದ ಕರಾವಳಿಯಲ್ಲಿಲ್ಲ ಅತ್ಯುತ್ತಮವಾದ ಬಂದರ ಕಾರವಾರ. ಅದನ್ನು ಸಮ್ಮದ ಮುಂಬಯಿಯ ಮಟ್ಟಕ್ಕೆ ಮುಟ್ಟುವಂತೆ ಬೆಳೆಸುವದು ಸಾಧ್ಯವಿದೆ. ಇದ್ದಾಗಲು ಕನಿಷ್ಠ ೧೦ ಕೋಟಿ ರೂಪಾಯಿಗಳಾದರೂ ಬೇಕು. ಪೂರ್ಣಯೋಜನೆಯಲ್ಲಿ ಇದಕ್ಕೆ ೫ಕೋಟಿ ಎಂದರೂ, ಇನ್ನುಳಿದ ಕರಾವಳಿಯ ಬೆಳೆವಣಿಗೆಯೆಲ್ಲ ಸೇರಿ ಒಟ್ಟು ಕರಾವಳಿ ಖಾತೆಗೆ ೧೦-೧೫ ಕೋಟಿಯಾದರೂ ಬೇಕು.

ಇದಲ್ಲದೆ ಇತರ ಬೆಳೆವಣಿಗೆಯ ಸಾಧ್ಯತೆಗಳೂ ಹಲವುಂಟು. ಹೊಸ ರಾಜಧಾನಿಯ ನಿರ್ಮಾಣ, ಹಲವು ಹೊಸ ಔದ್ಯೋಗಿಕ ಪಟ್ಟಣಗಳ ಸ್ಥಾಪನೆ. ಈಗಿದ್ದ ಹಳ್ಳಿ-ಪಟ್ಟಣಗಳ ಪುನರ್ಘಟನೆ ಮ್ಯೂಸಿಯಂ, ಕೇಂದ್ರ ವಾಚನಾಲಯ ಇತ್ಯಾದಿ ಮಾತುಗಳೂ ಉಂಟು. ಇವು ವಿಶೇಷ ಖರ್ಚಿನ ಬಾಬತ್ತುಗಳೇ. ಅಂತೂ ಒಟ್ಟಾರೆ ಕರ್ನಾಟಕದ ಸರ್ವಾಂಗೀಣ ಉನ್ನತಿಯ ಮೊದಲ ಮೆಟ್ಟಿಲನ್ನು ಕಟ್ಟಬೇಕಾದರೆ—ಒಕ್ಕಲುತನದ ಬೆಳೆವಣಿಗೆಗೆ ೧೫ ಕೋಟಿ, ಉದ್ಯೋಗ-ವ್ಯಾಪಾರಗಳ ಬೆಳೆವಣಿಗೆಗೆ ೨೫ ಕೋಟಿ, ಆರೋಗ್ಯ ಹಾಗು ವಿದ್ಯಾಭಿವೃದ್ಧಿಗೆ ೨೦ ಕೋಟಿ, ಕರಾವಳಿಯ ಬೆಳೆವಣಿಗೆ ಹಾಗು ಇತರ ಮಾತುಗಳಿಗೆಲ್ಲಾ ಸೇರಿ ೧೫ ಕೋಟಿ—ಅಂತೂ ಒಟ್ಟು ೭೫ಕೋಟಿ ರೂಪಾಯಿಗಳಾದರೂ ಬೇಕು.

೭೫ ಕೋಟಿ ರೂಪಾಯಿಗಳೆಂದರೆ ಅತ್ಯಗಾಧದ, ಅಥವಾ ಒಂದು ಕುರುಡು ಕನಸಿನ ಮಾತು ಎನ್ನುವಂತಿದೆ. ಹೀಗೆ ಮುರುಕ-

ಕರ್ನಾಟಕವೆಲ್ಲಿ? ೭೫ ಕೋಟಿಯ ಕನಸೆಲ್ಲಿ? ತಿರುಕನೂರ್ವನ ಕೊರಳಿಗೆ ಕರಿಯ ಕೈಯ ಕುಸುಮ ಮಾಲೆ ಬಿದ್ದಂತೆ! ಆದರೆ ಮೈಸೂರು ಈಗಾಗಲೇ ತನ್ನ ಅಭಿವೃದ್ಧಿಗೆ ಕೋಟಿಗಟ್ಟಲೆ ವೆಚ್ಚ ಮಾಡಿ, ಮತ್ತೀಗ ೧೫-೨೦ಕೋಟಿಯ ಯೋಜನೆ ಮಾಡಿಕೊಂಡಿಲ್ಲವೆ? ತುಂಗಭದ್ರೆಯ ಯೋಜನೆಯೊಂದಕ್ಕೇ ನಿಝಾಮ್ ಸರಕಾರ ೨೦ಕೋಟಿ ಲೆಕ್ಕ ಹಾಕಿದೆ. ಮುಂಬೈ ಪ್ರಾಂತ ಇದೀಗ ೫೦ ಕೋಟಿಯ ಏರ್ಪಾಡು ಮಾಡಿಕೊಂಡಿದೆ. ಇಡಿ ಕರ್ನಾಟಕಕ್ಕಿಂತ ಮೈಸೂರು-ಮೊಗಲಾಯಿ ಎರಡೂ ಚಿಕ್ಕವು. ಮುಂಬೈಪ್ರಾಂತ, ಭಾವಿ ಸಂಯುಕ್ತಪ್ರಾಂತಕ್ಕಿಂತ ಸ್ವಲ್ಪ ದೊಡ್ಡದು ಮಾತ್ರ. ಅದರೂ ಅವು ಹೀಗೆ ಕೋಟ್ಯಂತರ ರೂಪಾಯಿಗಳ ಯೋಜನೆ ಮಾಡಲು ಶಕ್ತವಾದಾಗ, ಸಂಯುಕ್ತ ಕರ್ನಾಟಕ ತನ್ನ ಮೊದಲನೆಯ ಯೋಜನೆಗೆ ೭೫ಕೋಟಿ ವೆಚ್ಚ ಮಾಡಲು ಶಕ್ತವಾಗಲೇಬೇಕು. ಆ ಶಕ್ತಿ ಸಂಯುಕ್ತ ಕರ್ನಾಟಕ ಒಂದು ಪ್ರಾಂತವಾದರೆಯೇ ಸಾಧ್ಯ.

ಮೊದಲನೆಯ ಯೋಜನೆ ಹೊಸದಾಗಿ ಕಟ್ಟುವ ಯೋಜನೆ. ಅದರ ಮೊದಲ ಭಾಗಕ್ಕೆ ೫ ವರ್ಷವಾದರೂ ಬೇಕು. ಅದಕ್ಕೆ ನೀಲ್ಕಾಣಿಸಿದಂತೆ ೭೫ಕೋಟಿ. ಆಮೇಲೆ ಮೊದಲನೆಯ ಯೋಜನೆಯನ್ನು ಸ್ಥಿರೀಕರಿಸಿ ವಿಕಾಸಗೊಳಿಸಲು ಮತ್ತೆ ಐದು ವರ್ಷದ ಎರಡನೆಯ ಭಾಗದ ಯೋಜನೆಗೆ ಸುಮಾರು ೭೫ ಕೋಟಿ ರೂಪಾಯಿ ಬೇಕಾದೀತು. ಅಂತೂ ೧೦ ವರ್ಷದ ಒಂದು ಯೋಜನೆಗೆ ಕನಿಷ್ಠ ೧೦೦ ಕೋಟಿ ಅಥವಾ ೧ ಅಬ್ಜ ರೂಪಾಯಿಗಳ ವೆಚ್ಚ ತಗುಲೀತು. ಕರ್ನಾಟಕಕ್ಕೇ ಕಾಲಿಲ್ಲದಾಗ ಇಲ್ಲಿ ಕೊಟ್ಯ ಅಂದಾಜಿನ ಅಂಕಿಗಳಿಗೆ ಕಾಲಿವೆಯೆಂದು ನಾನು ಹೇಳಲಾರೆ. ಆದರೆ ಕರ್ನಾಟಕದಷ್ಟೆ ದೊಡ್ಡದಾದ ಬೇರೆ ಬೇರೆ ಪ್ರಾಂತಗಳು ಹಾಕುವ ಲೆಕ್ಕ ನೋಡಿದರೆ ಕರ್ನಾಟಕದ ಪ್ರಾಥಮಿಕ ಯೋಜನೆಗೆ ಕನಿಷ್ಠ ಒಂದು ಅಬ್ಜ ರೂಪಾಯಿ ಹೆಚ್ಚಲ್ಲ. ಮುಂಬೆ ಪ್ಲಾನಿನವರು ಇಡಿ ಹಿಂದುಸ್ತಾನಕ್ಕೆ ೧೦,೦೦೦ ಕೋಟಿ ಬೇಕೆಂದಿದ್ದಾರೆ. ಹಿಂದುಸ್ತಾನದಲ್ಲಿ ಕರ್ನಾಟಕ ೨೦ನೇ ಒಂದು ಪಾಲು ಎಂದು ಹಿಡಿದರೆ ಕರ್ನಾಟಕಕ್ಕೆ ೫೦೦ ಕೋಟಿ ಬೇಕಾಗುವುವು. ಎಂ. ಎನ್. ರಾಯ್ ಅವರ ಮೇರೆಗೆ ಕರ್ನಾಟಕಕ್ಕೆ ೭೫೦ ಕೋಟಿಯ ಯೋಜನೆಯಾಗಬೇಕು; ಶ್ರೀ ಅಗ್ರವಾಲರ ಮೇರೆಗೆ ಸಹ ನಮಗೆ ೧೭೫ ಕೋಟಿ ಬೇಕು. ಈ ಲೆಕ್ಕದಿಂದಲೂ ಕರ್ನಾಟಕದ ಮೊದಲಿನ ಯೋಜನೆಗಳಿಗೆ ೧೦೦ ಕೋಟಿ ಅಗಾಧದ ಮಾತಲ್ಲ. ಅಲ್ಲಿಯ ಯುದ್ಧೋತ್ತರ ಯೋಜನೆಗಳಲ್ಲಿ ಕರ್ನಾಟಕಕ್ಕಿಂತ ಚಿಕ್ಕದಾದ ಅಸಾಮಿಗಳ ಕೋಟಿ, ಬಿಹಾರ ೧೦೦ ಕೋಟಿ ರೂಪಾಯಿ ತೊಡಗಿಸಲು ಸಿದ್ಧವಾಗಿವೆ. ಯು. ಪಿ. ೧೫೦ ಕೋಟಿ ಬೇಕೆನ್ನುತ್ತಿದೆ. ಹಿಂದುಸ್ತಾನ ಸರಕಾರ ಮೊದಲಿನ ೫ ವರ್ಷಗಳಲ್ಲೇ ೧೦೦೦ಕೋಟಿ ರೂಪಾಯಿ ತೊಡಗಿಸಬೇಕೆನ್ನುತ್ತಿದೆ. ಇವೆಲ್ಲವುಗಳ ದೃಷ್ಟಿಯಿಂದಲೂ ಹತ್ತು ವರ್ಷಗಳ ಒಂದು ಯೋಜನೆಗಾಗಿ ಕರ್ನಾಟಕಕ್ಕೆ ೧೦೦ಕೋಟಿ ಅತ್ಯವಶ್ಯವಾಗಿ ಬೇಕಾಗುವುದರಲ್ಲಿ ಸಂದೇಹವಿಲ್ಲ. ಕೇವಲ ಬ್ರಿಟಿಶ್ ಕರ್ನಾಟಕವನ್ನೇ ತೆಗೆದುಕೊಂಡರೆ ಒಂದು ಪ್ರಾಥಮಿಕ ಯೋಜನೆ ೫೦ ಕೋಟಿಗೆ ಮಿಕ್ಕಿದ ಹಣಬೇಕಾದೀತು. ಅಷ್ಟಾದ ಮೇಲೆ ಮಾ ಕರ್ನಾಟಕ ೫೦೦ ಕೋಟಿಯ ಇಲ್ಲವೆ (Peoples' Plan)ನ ಮೇರೆ ೭೫೦ ಕೋಟಿಯ ಎರಡನೆಯ ಯೋಜನೆಗೆ ಯೋಗ್ಯವಾದೀತ ಮೊದಲು ಅಟ್ಟ ಅಮೇಲೆ ಬೆಟ್ಟ.

# ಆದಿಮಾನವನ ಚರಿತ್ರೆ

## ನಿಶೆಯ ಪರಿವಾರ

( ಸುಮಾರು ಕ್ರಿ. ಪೂ. ೬೦೦೦ ವರ್ಷಗಳ ಹಿಂದೆ ನಡೆದಿರಬಹುದಾದ ಕತೆ )

ಶ್ರೀ. ಬಿ. ವಿ. ಕಾಶೀರಾಮಶಾಸ್ತ್ರಿ 'ಸಾಹಿತ್ಯರತ್ನ' ಮೈಸೂರು ನಗರ

### ಒಂದು

ಚಳಿಗಾಲ ಕಳೆಯುತ್ತಿದೆ. ಈಗೀಗ ಹಗಲಲ್ಲಿ ಬಿಸಿಲಿನ ಸುಳಿವು ಕಾಣುತ್ತಲಿದೆ. ಇನ್ನೂ ದಿನವೆಲ್ಲಾ ಬಿಸಿಲಿರುವ ದಿನಗಳು ಬಂದಿಲ್ಲ. ಈಗ ಐದುಗಂಟೆ ಮಾತ್ರ ಸೂರ್ಯನ ಬೆಳಕು ಕಾಣುತ್ತದೆ. ಎಲ್ಲೆಲ್ಲೂ ಮಂಜು ತುಂಬಿದೆ. ಕಾಡಿನಲ್ಲಿರುವ ಗಿಡಮರಗಳೂ ಮಂಜಿನಿಂದ ಮುಚ್ಚಿಹೋಗಿವೆ. ಗಿಡಗಳೂ ಇರುವುವೆಷ್ಟು! ಒಂದೆರಡರ ಮೇಲಿಲ್ಲ. ಕಾಣಬರುವುದು ಒಂದು ಉದ್ದವಾಗಿ ಈಗ ಒಣಗಿದಂತಿರುವ ದೇವದಾರು; ಇನ್ನೊಂದು ಬಿಳಿ ಬಟ್ಟೆಯುಟ್ಟು ಎಲೆ ಉದುರಿ ನೋಟಾಗಿ ನಿಂತಿರುವ ಭೂರ್ಜ ವೃಕ್ಷ. ನೆಲ, ಬೆಟ್ಟ–ಗುಡ್ಡ, ಗಿಡ–ಮರ ಎಲ್ಲಾ ಮಂಜಿನ ಹೊದ್ದಿಕೆ ಹೊದ್ದಿರುವುವೆ. ಎಲ್ಲಿಯೂ ಹಸುರಿನ ಗುರುತಿಲ್ಲ. ಪ್ರಾಣಿಗಳ ಸುಳಿವಂತೂ ಹೇಳುವಂತೆಯೆ ಇಲ್ಲ. ಸಾಮಾನ್ಯ ಪ್ರತಿವರ್ಷವೂ ಪ್ರಾಣಿಗಳು, ಈ ಆರು ತಿಂಗಳ ಚಳಿಯ ರಾತ್ರಿ ಬರುವ ಹೊತ್ತಿಗೇ ದಕ್ಷಿಣದ ಬಯಲಿಗೆ ಹೊರಟುಹೋಗುತ್ತವೆ.

ವೋಲ್ಗಾನದಿಯ ಉತ್ತರದ ದಡ. ನದಿಯ ನೀರೂ ಗೆಡ್ಡೆಗಟ್ಟಿದೆ. ಇಂಥಾ ನಿರ್ಜನ ಪ್ರದೇಶದೇ ಆದಿಮಾನವನ ಹುಟ್ಟಿದೂರು. ಒಂದು ಗುಹೆಯೊಳಗೆ ಕಗ್ಗತ್ತಲು. ಕತ್ತಲಿನಿಂದ ಗುಹೆಯ ಆಳತೆ ಆಕಾರ ಎಷ್ಟೆಂದು ಏನೆಂದು ಹೇಳಲಾಗುವುದಿಲ್ಲ. ಮಧ್ಯೆ ಒಂದು ಬೆಂಕಿ ಕುಂಡ. ಹೊಗೆ ಎಲ್ಲಿಡೆಯಲ್ಲೂ ತುಂಬಿದೆ. ಬೆಂಕಿ ಇರುವುದರಿಂದ ಹೊರಗಿನ ಚಳಿ ಒಳಗಿಲ್ಲ.

ಬೆಂಕಿಯ ಮುಂದೆ ಮಾಂಸದ ಗುರುತೂ ಇಲ್ಲದ ಮೂಳೆ-ಚರ್ಮಗಳ ಒಂದು ಮುದುಕಿಯ ಮೂರ್ತಿ ಕುಳಿತಿದೆ. ಮೈ-ಮುಖವೆಲ್ಲಾ ಸುರುಟಿಹೋಗಿದೆ. ಕೈಗಳು ಬತ್ತಿ ಎತ್ತಲಾರದ ಹಾಗೆ ಒಂದೆದೆ ಬಿದ್ದಿವೆ. ಕಣ್ಣುಗಳು ಗುಂಡಿ ಬಿದ್ದಿವೆ. ಗುಡ್ಡೆಗಳು ಹೊಳೆಯಿಲ್ಲದಿದ್ದರೂ ದೃಷ್ಟಿ, ಕಳೆಯಿಲ್ಲವೆನ್ನುವಂತಿವೆ. ಬಿಳಿಯ ಕೂದಲು. ಕಿವಿ ಮಾತ್ರ ಇನ್ನೂ ಕೇಳಿಸುತ್ತವೆ. ಪಕ್ಕದಲ್ಲಿರುವ ಮಕ್ಕಳ ಅಳು–ರಗಳೆ ಮುದುಕಿಗೆ ಗೊತ್ತಾಗುತ್ತಿವೆ.

ಐದಾರು ಮಕ್ಕಳು....ಒಬ್ಬ ಎಂಟುವರ್ಷದವನಿರಬಹುದು; ಅವನೇ ಎಲ್ಲರಿಗಿಂತ ದೊಡ್ಡವನು. ಮುದುಕಿ ಹೊರಲು ಮಾಡಿ ಒಂದು ವರ್ಷದ ಎಳಮಗುವಿನ ವರೆಗೂ ಎಲ್ಲರೂ ಬೆತ್ತಲೆ ಇರುವವರೇ. ಸಾಮಾನ್ಯ ಮೈಬಣ್ಣ ಕೆಂಪು ಮಿಶ್ರ ಬಿಳುಪು. ಕೂದಲುಗಳೂ ಹೊಳವಾಗಿ ಸ್ವಲ್ಪ ಹಳದಿ ಛಾಯೆಯಲ್ಲಿವೆ. ಇಬ್ಬರು ಸಮವಯಸ್ಕರಾದ ಹುಡುಗ-ಹುಡುಗಿಯರು ಹಸಿದು ಅಳುತ್ತಿದ್ದಾರೆ. ಒಂದು ಮೂಳೆಯ ಚೂರಿಗಾಗಿ ಇವರಲ್ಲಿ ಜಗಳ ನಡೆದಿದೆ. ಹುಡುಗಿ ಹುಡುಗನ ಕೈಯಿಂದ ಬಲಾತ್ಕಾರವಾಗಿ ಕಿತ್ತುಕೊಂಡಿದ್ದಾಳೆ. ಹುಡುಗನು 'ಗೋಕೋ' ಎಂದು ಜೋರಾಗಿ ಅಳುತ್ತಿದ್ದಾನೆ. ಅಜ್ಜಿ (ಮುದುಕಿ) ಕುಳಿತಲ್ಲಿಂದಲೇ— 'ಅಗ್ನಿ! ಬಾ. ಇಲ್ಲಿ ಬಾಪ್ಪ! ಇಲ್ಲಿ....ಅಜ್ಜಿ....' ಎನ್ನುವಳು. ಅಜ್ಜಿಯಂತೆಯೆ ಹುಡುಗನೂ ಕುಳಿತಲ್ಲಿಯೆ ಚೀರಿಡುತ್ತಿದ್ದಾನೆ. ಹೊಡ್ಡ ಹುಡುಗ ಬಂದು. ಅಳುತ್ತಿದ್ದವನನ್ನು ಎತ್ತಿ ತಂದು ಮುದುಕಿಯ ಪತ್ತಿರ ಬಿಟ್ಟ. ಮೆಲ್ಲಗೆ ಮುದುಕಿಯ ಬತ್ತಿದ ಸ್ತನವನ್ನು ಚೀಪುತ್ತಾ ಸುಮ್ಮನಾದ.

### ಎರಡು

ಗುಹೆಯ ಹೊರಗೆ, ಮಂಜಿನ ಮೇಲೆ ಹೊಸ ಹೊಸ ಹೆಜ್ಜೆಗಳೆಲ್ಲೋ ಹೋಗಿವೆ. ಒಟ್ಟು ಐದಾರು ಜನರ ಹೆಜ್ಜೆಗಳಂತೆ ಕಾಣುತ್ತಿವೆ. ಬಹುದೂರವಾಯಿತು: ಅಲ್ಲೊಂದು ಬೆಟ್ಟ. ಹೊಲಿದನಂತೆಯೆ ಗಿಡಮರಗಳು. ಅಲ್ಲಲ್ಲಿ ಕಲ್ಲಿನ ಬಂಡೆಗಳು; ಒಂದು ಬಂಡೆಯ ಮೇಲೆ ಮೆಲ್ಲಗೆ ಕೈಯಿಂದ ಏಡಿಸಿ ಐದಾರು ಜನ ಹತ್ತುತ್ತಿದ್ದಾರೆ. ಮುಂದೆ ಒಬ್ಬ ಹೆಂಗುಸು. ಹಿಂದೆ ನಾಲ್ಕು ಜನ ಗಂಡಸರು ಮತ್ತು ಇಬ್ಬರು ಹೆಂಗುಸರು. ಎಲ್ಲರ ಕೈಯಲ್ಲೂ ಕಲ್ಲಿನ ಜೂವಾದ ಬಿಳಿಯಕೊಡಲಿ ಇದೆ. ಜೂಜಾದ ಮೊನ್ನೆಗಳೂ ಕೆಲವರ ಪತ್ತಿರ ಇವೆ. ಎಲ್ಲರ ಮುಖಗಳೂ ಅಜ್ಜಿ (ಹಿಂದಿನ ಗುಹೆಯಲ್ಲಿವ್ವ)ಯಂತೆಯೆ ಇವೆ. ಇವರೆಲ್ಲಾ ಒಂದೇ ಕುಟುಂಬದವರು.

ಹೆಂಗುಸಿನ ವಯಸ್ಸು ನಲವತ್ತು ನಲವತ್ತೈದು ಇರಬಹುದು. ಗಂಡಸರಲ್ಲಿ ಒಬ್ಬನು ಅವಳಿಗಿಂತ ದೊಡ್ಡವನು. ಮಿಕ್ಕ ಮೂವರು ಇಪ್ಪತ್ತೈದು ಇಪ್ಪತ್ತಾರಿರಬಹುದು. ಹಿಂದೆ ಬರುತ್ತಿದ್ದ ಹೆಂಗುಸರಲ್ಲಿ ಒಬ್ಬಳು ಇಪ್ಪತ್ತೆರಡಿರಬಹುದು. ಮತ್ತೊಬ್ಬಳು ಹದಿನಾರು ವರ್ಷಕ್ಕಿಂತ ಕಡಿಮೆಯವಳು. ಎಲ್ಲರ ಮೈನೇಲೂ ಮುಳ್ಳಿನಿಂದ ಹೊಲಿದ ಬಿಳಿಯ ಎತ್ತಿನ ಚರ್ಮವಿದೆ.

ಮುಂದಿನವಳು ನಿಂತು ಅಲಿಸಿದಳು. ಅವಳ ಮುಂದೆ ಒಂದು ಗುಹೆ. ಸ್ವಲ್ಪಹೊತ್ತು ಏನೂ ಕೇಳದೀತಲು, ಅವಳು ಇಬ್ಬರು ಗಂಡುಸರ ರೊಪನೆ ಒಳಹೊಕ್ಕಳು. ಎಲ್ಲವೂ ಒಳಗಿನ ಕತ್ತಲೆಯಲ್ಲಿ ತಡವರಿಸಿ

• ಹಿಂದಿಯಲ್ಲಿ ಸುಪ್ರಸಿದ್ಧ ಸಾಮ್ಯವಾದಿ ಲೇಖಕರಾದ ಪಂಡಿತ ರಾಹುಲ ಸಾಂಕೃತ್ಯಾಯನರು ಬರೆದ 'ವೋಲ್ಗಾ ಸೇ ಗಂಗಾ' ಎಂಬ ಕಥಾಸಂಗ್ರಹದಲ್ಲಿಯ ಮೊದಲನೆಯ ಕತೆಯ ಅನುವಾದವಿದು. ಇಂದಿಗೆ ಸುಮಾರು ತಲೆಮಾರುಗಳ ಹಿಂದಿನ ಮಾನವ ಕುಲವನ್ನು ಕುರಿತ ಚಿತ್ರ ಇವರಲ್ಲಿವೆ. —ಲೇ.

ಕೊಂಡು ಮುಂದೆ ನಡೆದರು. ಸ್ವಲ್ಪ ಸ್ವಲ್ಪ ಕಾಣುವಂತಾಗಲು ಅಲ್ಲಿಯೆ ನಿಂತು ನೋಡಿದರು. ಮೂರು ಕರಡಿಗಳು ಮಲಗಿ ನಿದ್ರಿಸುತ್ತಿವೆ: ಗಂಡು, ಹೆಣ್ಣು ಮತ್ತು ಚಿಕ್ಕ ಮರಿಯೊಂದು. ಶಬ್ದಮಾಡದೆ ಮೂವರೂ ಒಂದೊಂದರ ಹತ್ತಿರ ಹೋಗಿ ನಿಂತು, ಒಂದೇ ಸಾರಿ ಕೋಲಿನಿಂದ ಅವುಗಳ ಹೊಟ್ಟೆ ತಿವಿದು ಅಮುಮಿದರು. ಪಾಪ ಆ ಪ್ರಾಣಿಗಳು ನಿದ್ರೆಯಲ್ಲಿದ್ದುವು; ಈಗ ಮರಳಿ ಎಚ್ಚರವೇ ಆಗದಂತಾದುವು. ಮತ್ತೆ ಮತ್ತೆ ಚುಚ್ಚಿ ಪ್ರಾಣ ಹೋಗಿದೆಯೆಂದು ದೃಢಪಟ್ಟ ಮೇಲೆ; ಅವುಗಳನ್ನು ಈಚೆಗೆ ಎಳೆದು ತಂದರು. ಮತ್ತೆ ಎಲ್ಲರೂ ಸಂತೋಷದಿಂದ ಅವುಗಳನ್ನು ಕರುಳು ಬಗೆದು ತಿಂದರು.

ಹೊಟ್ಟೆ ತುಂಬಿತು: ಸಂತೋಷವಾಯ್ತು. ಈಪೊತ್ತಿನ ಆಹಾರ ಸಿಕ್ಕಿದುದಲ್ಲದೆ, ಇನ್ನೂ ಕೆಲವು ದಿನಗಳು ಕಳೆಯಲು ತಿನ್ನುವಸ್ತು ಒಟ್ಟಿಗೆ ಸಿಕ್ಕಿದೆ; ಎಲ್ಲರ ಮುಖಗಳೂ ಅರಳಿದೆ. ಹೊಟ್ಟೆ ತುಂಬಿದ ಮೇಲೆ ಸುಖವ ಯೋಚನೆಯೇ ಯೋಚನೆ; ತರುಣಿ ಹೊರಗೆ ಹೋಗಿ ಮಂಜಿನಗೆಡ್ಡೆ ಬಾಯಿಗೆ ಹಾಕಿ ಊಟ ಮುಗಿಸಿದಳು. ದೊಡ್ಡವನೂ ಜತೆಯಲ್ಲಿಯೇ ಎದ್ದ. ತರುಣಿಯ ಕೈ ಹಿಡಿದೆಳೆದುಕೊಂಡು ಹೋದ. ಸ್ವಲ್ಪ ನಾಚಿಕೆಯಾದಂತಾದರೂ ಅಭ್ಯಾಸದ ಮೇಲೆ ಆಕೆ ಹಿಂದೆಯೆ ಹೋದಳು. ದೊಡ್ಡ ಹೆಂಗಸು (ಅವರೆಲ್ಲರ ತಾಯಿ) ಎದ್ದು ಇಪ್ಪತ್ತು ನಾಲ್ಕುವರ್ಷದವನನ್ನೆಳೆಮ ಮುತ್ತಿಟ್ಟಿಳು. ಅವರಿಬ್ಬರ ಜೋಡಿ ಒಂದೆಯಾಯಿತು. ಮತ್ತೆ ಸ್ವಲ್ಪ ಹೊತ್ತು ಎಲ್ಲರೂ ಆಲ್ಲೇ ಮಲಗಿದರು. ಬೇಗ ಎದ್ದು ಮನೆಗೆ ಹಿಂತಿರುಗುವ ಯೋಚನೆಯಿಂದ, ಕರಡಿಗಳ ಕಾಲಿಗೆ ಹಗ್ಗ ಕಟ್ಟಿ ಕೋಲಿಗೆ ನೇತುಹಾಕಿ ಹೊತ್ತು ಹೊರಟರು. ಚಿಕ್ಕವನನ್ನು ತರುಣಿ ಒಬ್ಬಳೇ ಹೊತ್ತು ನಡೆದಳು.

ಸ್ವಲ್ಪ ದೂರ ಸಾಗುವ ಹೊತ್ತಿಗೆ ಏನೋ ವಿಪತ್ತು ಒಂದಂತೆ ಇವರ ಮುಖಗಳೆಲ್ಲಾ ಗಾಬರಿಗೊಂಡುವು. ಶಬ್ದಗ್ರಹಣಶಕ್ತಿ ಅವರಲ್ಲಿ ಕಿನ್ನಾಗಿತ್ತು. ಕಷ್ಟದ ಸೂಚನೆ ತಿಳಿದೊಡನೆಯೆ ಎಲ್ಲರೂ ಎಚ್ಚರಗೊಂಡು ಸಿದ್ಧರಾದರು. ಬೇಟೆ ಮಧ್ಯದಲ್ಲಿತ್ತು. ನಾಲ್ಕುಕಡೆ ಮುಖ ಮಾಡಿ ಸುತ್ತಲೂ ನಿಂತರು. ಮಧ್ಯೆ ಚಿಕ್ಕವನು ನಿಂತಿದ್ದನು. ಸ್ವಲ್ಪ ಹೊತ್ತಿಗೆ ಏಳೆಂಟು ತೋಳಗಳು ಬಂದು ಅವರನ್ನು ಮುತ್ತಿದುವು. ಮನುಷ್ಯರೆಲ್ಲರೂ ಆಯುಧ ಹಿಡಿದು ಮೊದಲೇ ಸಿದ್ಧರಾಗಿದ್ದರು. ಆಯುಧವಿದ್ದುದರಿಂದಲೆ ತೋಳಗಳೂ ಅಂಜಿ ಏಕಾಏಕಿ ಮೇಲೆ ಬೀಳಲಾರದೆ, ಐದಾರು ಗಜ ದೂರದಲ್ಲಿ ನುತ್ತಲೂ ತಿರುಗತೊಡಗಿದ್ದುವು. ಒಂದರ್ಧ ಘಂಟೆ ಕಳೆದರೂ ಯಾರೂ ಮುನ್ನುಗ್ಗಲಿಲ್ಲ. ಆಗ ಮಧ್ಯೆ ಇದ್ದ ಹುಡುಗನು ಮರದ ಬಿಲ್ಲನ್ನು ತೆಗೆದು, ಚರ್ಮದ ದಾರವನ್ನು ಕಟ್ಟಿ, ಕಲ್ಲಿನ ತೀಕ್ಷ್ಣ ಬಾಣ ಸೇರಿಸಿ, ನುಂದಿದ್ದ ಮನುಷ್ಯನನ್ನು ಗುರಿಯಿಕ್ಕೆಳೆದು ಅವನ ಸ್ಥಾನದಲ್ಲಿ ತಾನು ನಿಂತನು. ದೊಡ್ಡವನ ಕೈಗೆ ಬಿಲ್ಲು ಬಂದಿತ್ತು. ಒಳಗಿನಿಂದ ಗುರಿಯಿಟ್ಟು ಬಾಣ ಹೊಡೆಯಲು, ಒಂದು ತೋಳಕ್ಕೆ ತಗುಲಿ ಪೆಟ್ಟಾಯಿತು. ಪೆಟ್ಟಾದದ್ದೇ ತಡ ಅದು ಇವರ ಮೇಲೆ ಬೀಳಬೇಕೆಂದು ಮುನ್ನುಗ್ಗಿತು. ಅಷ್ಟರಲ್ಲಿ ಇನ್ನೊಂದು ಬಾಣ ಅದರ ಹೊಟ್ಟೆಯಲ್ಲಿ ನುಗ್ಗಿ ಸತ್ತುಬಿದ್ದಿತು. ಆಗ ಉಳಿದ ತೋಳುಗಳೂ ಬಿದ್ದುದರ ಹತ್ತಿರ ಬಂದು, ಅದರ ಮೈಯಿಂದ ಉಗುವ ಬಿಸಿ ಬಿಸಿ ರಕ್ತವನ್ನು ನೆಕ್ಕತೊಡಗಿದುವು. ಜನರೆಲ್ಲಾ ಆ ಕಡೆ ನೋಡುತ್ತಿರಲು, ಮೂರು ತೋಳಗಳು ಒಟ್ಟಾಗಿ ತರುಣಿಯ ಮೇಲೆ ಹಾರಿ, ತೊಡೆಗೆ ಪೆಟ್ಟುಮಾಡಿ ಎಳೆದು ಬೀಳಿಸಿ, ಹೊಟ್ಟೆಬಗೆದು ಬಿಟ್ಟುವು. ಪಕ್ಕದಲ್ಲಿದ್ದ ತಾಯಿ ಒಂದು ತೋಳದ ಹೊಟ್ಟೆಗೆ ದೊಣ್ಣೆ ತಿವಿದು ಉರುಳಿಸಿದಳು. ಎಲ್ಲರ ಧ್ಯಾನವೂ ಈ ತರುಣಿಯ ಕಡೆಗಿರಲು, ಮಿಕ್ಕ ನಾಲ್ಕು ತೋಳಗಳೂ ಇಪ್ಪತ್ನಾಲ್ಕು ವರ್ಷದವನನ್ನು ಬಡಿದು ಉರುಳಿಸಿದುವು. ಅವನ ಪ್ರಾಣವೂ ಹೋದಂತೆಯೆ ಇತ್ತು. ಬದುಕಿಸುವ ಮಾರ್ಗ ಅವರಿಗೆ ಗೊತ್ತೇ ಇರಲಿಲ್ಲ. ಅಲ್ಲಿ ಎಲ್ಲರೂ ತಂತಮ್ಮ ಸಂರಕ್ಷಣೆಗೆ ತಾವೇ ಹೊಣೆಗಾರರಂತಿದ್ದರು. ತಾಯಿಯ ಅಧಿಕಾರ ಮಾತ್ರ ಎಲ್ಲರ ಮೇಲಿತ್ತು. ಹಾಗೆಯೆ ಅವರುಗಳ ರಕ್ಷಣೆಯ ಏರ್ಪಾಡೂ ಅವಳ ಕೈಯಲ್ಲಿಯೆ ಇತ್ತು. ಆದರೆ ಒಬ್ಬರನ್ನು ಕಾಪಾಡಲು ಪರಿವಾರವನ್ನೆಲ್ಲಾ ಕಷ್ಟಕ್ಕೀಡುಮಾಡುವ ನಿಯಮ ಅವರಲ್ಲಿರಲಿಲ್ಲ.

ತರುಣಿಯ ಶರೀರವನ್ನು ತಿನ್ನುತ್ತಿರಲು ಈ ಜನರು ಬಿದ್ದ ತೋಳದ ರಕ್ತ ಹೀರಿ ಅವನ್ನು ಕಟ್ಟಿ ಹೊತ್ತು ಓಟಕ್ಕಿತ್ತರು. ತರುಣಿಯ ದೇಹ ಮುಗಿಯುವವರೆಗೂ ತೋಳಗಳು ಬಿಟ್ಟು ಬರಲಾರವೆಂಬುದು ಅವರ ಸಿದ್ಧಾಂತ. ಹಿಂದೆ ಬರುತ್ತಿದ್ದ ತಾಯಿ ಹಿಂತಿರುಗಿ ನೋಡುತ್ತಾ ಹೋಗುತ್ತಿದ್ದಳು. ಹೀಗೆ ಇಬ್ಬರನ್ನು ಕಳೆದುಕೊಂಡರೂ ಆಗ ಅವಳ ಕರ್ತವ್ಯ ಇತರರ ರಕ್ಷಣೆಯೆ ಆಗಿತ್ತು. ತಾಯಿ ತರುಣನನ್ನು ಬಹಳ ಪ್ರೀತಿಸುತ್ತಿದ್ದಳು. ಆದರೂ ಅವರಲ್ಲಿ ಕಳೆದುಹೋದುದ್ದನ್ನು ಮುಂಪಿಸುವಂತಹ ಪದ್ಧತಿ ಇರಲಿಲ್ಲ.

ಈಗ ಸುರಕ್ಷಿತವಾಗಿ ಗುಹೆ ಸೇರಿದರು. ಗುಹೆಯವರೆಲ್ಲಾ ಒಂದೇ ಪರಿವಾರವೆಂದು ಹೇಳಿದೆಯಷ್ಟೆ! ಮುದುಕಿಯ ಅಧಿಕಾರ ಇದು

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ನರೆಗಿತ್ತು. ಈಗ ಅವಳು ಕೈಲಾಗದವಳಾಗಿದ್ದರೂ ಅವಳ ಅಧಿಕಾರ ಸ್ವಲ್ಪ ಸ್ವಲ್ಪ ನಡೆಯುತ್ತಿತ್ತು. ಆದರೆ ನಿಕೆ(ತಾಯಿ)ಯ ಅಧಿಕಾರವೇ ಹೆಚ್ಚು. ಇವರಿರುವ ಸ್ಥಳ ಬಹಳ ಅನುಕೂಲವಾಗಿತ್ತು. ಈಚೀಚೆಗೆ ಕಷ್ಟಬಂದಿದೆ. ಈ ಚಳಿಗಾಲದಲ್ಲಂತೂ ಬೇಟೆ ಸಿಕ್ಕುವುದೇ ಕಷ್ಟ. ಹಾಗೂ ಹೀಗೂ ಕಷ್ಟದಿಂದ ನಡೆಯುತ್ತಿದೆ. ಆಗಲೇ ಇನ್ನೂ ದಕ್ಷಿಣಕ್ಕೆ ಹೋಗಬೇಕೆಂದಿದ್ದರು. ತರುಣಿಯು ಕಾಯಿಲೆ ಬಿದ್ದಳು. ಅವಳನ್ನು ಎಲ್ಲರ ಸುಖಕ್ಕಾಗಿ ಬಿಟ್ಟು ಮುಂದೆ ಹೋಗುವುದೇ ಅನರ ನಿಯಮವಾಗಿತ್ತು. ಆದರೆ ತಾಯಿ ಒಪ್ಪಲಿಲ್ಲ.

ಇದ್ದವರೆಲ್ಲಾ ನಿಕೆಯ ಮಕ್ಕಳೇ. ದೊಡ್ಡ ಗಂಡುಸು, ನಿಕೆ—ಇಬ್ಬರು ಮುನುಕೆಯ ಮಕ್ಕಳು. ಇವರ ತಾಯಿ ಇಂಥವಳೆಂದು ಹೇಳಬಹುದಾಗಿದ್ದರೂ, ತಂದೆಯ ಗುರುತು ಗೊತ್ತಾಗುವಂತಿರಲಿಲ್ಲ. ಇವರಲ್ಲಿ ಅನೇಕರು ಭ್ರಾತೃಪತಿ, ಪುತ್ರಪತಿಗಳೂ ಉಂಟು. ಮಗನಾಗಲಿ, ಅಣ್ಣ-ತಮ್ಮಂದಿರಾಗಲಿ ತಾಯಿಯ (ಒಡತಿಯ) ಪ್ರೇಮತಿರಸ್ಕರಿಸುವಂತಿರಲಿಲ್ಲ. ಎಲ್ಲರ ಮೇಲಿನ ಮೊದಲನೆಯ ಅಧಿಕಾರ ಒಡತಿಗಿತ್ತು. ಇತರ ಹೆಂಗುಸರೂ ಅಲ್ಲಗಳೆಯುವಂತಿಲ್ಲ. ಹೀಗಾಗಿ ಇವರ ತಂದೆಯ ಪತ್ತೆ ಹತ್ತದಿದ್ದರೂ ತಾಯ ಪರಿವಾರ ಸುರಕ್ಷಿತವಾಗಿ ನಡೆದಿತ್ತು.

ಚಳಿಗಾಲದ ಕೊನೆಯೊತ್ತಿಗೆ ಪ್ರವಾಸಕ್ಕೆ ಹೊರಟಿದ್ದ ಹೋಜನರು, ಲೇಖೆಗೆ ತುತ್ತಾದವರು, ಅಕಾಲದಲ್ಲಿ ಸತ್ತ ಮಕ್ಕಳು, ವಯಸ್ಸಾಗಿ ಸತ್ತ ಅಜ್ಜಿ—ಇದೆಲ್ಲವರಿಂದ ಹದಿನಾರು ಜನರಿದ್ದ ಮನೆಯಲ್ಲಿ ಎಂಬತ್ತು ಜನರಿರುವಂತಾಯಿತು.

## ಮೂರು

ಅಜ್ಜಿ ಸತ್ತಳು. ಈಗ ನಿಕೆಯೇ ಒಡತಿ. ಚಳಿಗಾಲ ಕಳೆದು ವಸಂತ ಋತು ಬಂದಿತು. ಪೋಲ್ಗಾ ನದಿಯ ದಡದಲ್ಲಿಯೆ ಡೇರಾವಾಕಿ ಎಲ್ಲರೂ, ಇವರ ಜತೆಗೆ ಮತ್ತಿತರ ಪರಿವಾರದವರೂ ಇರುತ್ತಿದ್ದಾರೆ. ಎಲ್ಲೆಲ್ಲಾ ಹುಲ್ಲು ಹಾಸಿದಂತೆ ಹಚ್ಚಗಿದೆ. ಗಿಡಗಳೆಲ್ಲಾ ಎಲೆ-ಹೂಗಳಿಂದ ತುಂಬಿವೆ. ಒಟ್ಟಿನಲ್ಲಿ ಪ್ರಪಂಚವೆಲ್ಲಾ ನಗುವಂತಿದೆ.

× × × ×

ಈಗ ನಿಕೆಗೆ ವಯಸ್ಸಾಯಿತು. ಮನೆಯ ಜನರ ಮೇಲೆ ನಡೆಯಿದ್ದ ಅಧಿಕಾರ ಕಡಿಮೆಯಾಗುತ್ತಿದೆ. ಇದಕ್ಕೆಲ್ಲಾ ಕಾರಣ ಇವಳ ಮಗಳು ಲೇಖೆಯ ಸುಂದರವಾದ ಗಟ್ಟಮುಟ್ಟಾದ ದೇಹ. ಅವಳು ಕಷ್ಟದ ಕೆಲಸವನ್ನಾದರೂ ಮಾಡುತ್ತಾಳೆ. ಮನೆಯವರಲ್ಲದೆ ಇತರ ಪರಿವಾರದವರೂ ಲೇಖೆಯನ್ನು ಹೊಗಳುತ್ತಾರೆ. ದೊಡ್ಡ ಗಂಡುಸೂ ಲೇಖೆ ಹೇಳಿದಂತೆಯೆ ಕುಣಿಯುತ್ತಾನೆ. ನಿಕೆಗೆ ಇದನ್ನು ಸಹಿಸಲೆ ಮೈಯೆಲ್ಲಾ ಉರಿ.

ಲೇಖೆ ಬಲಿಷ್ಠಳು. ಗಂಡುಸರಾರೂ ಅವಳಿಗೆ ವಿರುದ್ಧವಾಗಿ ಏನೂ ಮಾಡುವುದಿಲ್ಲ. ಲೇಖೆಯ ತಂಗಿಯರಿಗೂ ಹೊಟ್ಟೆಕಿಚ್ಚಿದ್ದರೂ ಲೇಖೆಯ ಶಕ್ತಿಗೆ ಹೆದರಿ ಕುಳಿತಿದ್ದಾರೆ. ನಿಕೆ ಒಂದೊಂದು ಬಾರಿ ಲೇಖೆಯ ಕತ್ತು ಹಿಸುಕಿ ಸಾಯಿಸಬೇಕೆಂದು ಯೋಚಿಸುತ್ತಾಳೆ. ಆದರೆ ಅವಳಿಗೇನಾದರೂ ಸುಳಿವು ಗೊತ್ತಾದರೆ, ತನ್ನ ಪರಿಣಾಮವೇನಾಗುವುದೆಂದು ಯೋಚಿಸಿ, ಮನಸ್ಸಿನಲ್ಲೇ ನಡುಗುವಳು. ಹೀಗಾಗಿ ಒಂದು ದಿನ ಅವಳಿಗೊಂದು ಉಪಾಯ ಹೊಳೆದು, ನಿಶ್ಚಿಂತಳಾಗಿ ಸಮಯ ಕಾಯುತ್ತಿದ್ದಳು.

× × × ×

ಬೆಳಗಿನ ಹೊತ್ತು. ಬಿಸಿಲುಬಿದ್ದಿದೆ. ಎಲ್ಲರೂ ಹೊರಗೆ ಮಲಗಿ ಬಿಸಿಲನ್ನು ಕಾಯಿಸುತ್ತಿದ್ದಾರೆ. ನಿಕೆ ನದಿಯ ದಡಪಲ್ಲಿ ಕುಳಿತಿದ್ದಾಳೆ. ಎರಡು ಕೈಗಳಲ್ಲೂ ಸ್ಟೇವರಿ ಹಣ್ಣುಗಳಿವೆ. ಹತ್ತಿರವೇ ರೇಪೆಯ ಮೂರು ನರ್ಪ ಮಗ ಆಡುತ್ತಿದ್ದಾನೆ. ನೀರಿನ ಕಡೆಗೆ ದಡ ಇಳಿಜಾರಾಗಿದೆ. ನಿಕೆ ಮಗುವನ್ನು ಕೂಗಿ ನೀರಿನ ಕಡೆಗೆ ಒಂದೊಂದಾಗಿ ಹಣ್ಣುಗಳನ್ನು ಉರುಳಿಸತೊಡಗಿದಳು. ಮಗು ಬಹಳ ಚುರುಕು. ಬೇಗ ಬೇಗ ಓಡಿ ಹಣ್ಣುಗಳನ್ನು ಹಿಡಿಯುತ್ತಿದ್ದನು ಹೀಗೇ ಹಿಡಿಯುತ್ತಾ ಇರುವಾಗ ಒಮ್ಮೆಲಾರಿ, ಕಾಲುಜಾರಿ ಉರುಳಿ ನೀರಸೇರಿದನು. ಪ್ರವಾಹ ಜೋರಾಗಿತ್ತು. ನಿಕೆ ಗಾಬರಿಗೊಂಡಂತೆ ಕಿರುಚಿಕೊಂಡಳು. ಲೇಖೆ ಓಡಿ ಬಂದು ಮಗುವನ್ನು ಕಾಣದೆ ಬೇಗ ನೀರಿಗಿಳಿದಳು. ಪ್ರವಾಹ ವೇಗವಾಗಿದ್ದರೂ ಕಷ್ಟಪಟ್ಟು ಮಗುವನ್ನು ಒಂದು ಕೈಯಲ್ಲಿ ಹಿಡಿದು, ಇನ್ನೊಂದು ಕೈಯಿಂದ ನೀರು ಬಗೆಯುತ್ತಿದ್ದಳು. ಇದ್ದುದು ಇದ್ದಂತೆಯೇ ಯಾರೋ ತನ್ನ ಕತ್ತನ್ನು ಹಿಸುಕುತ್ತಿರುವಂತೆ ತೋರಿತು. ಲೇಖೆಗೆ ಊಹಿಸುವುದು ಕಷ್ಟವಾಗಲಿಲ್ಲ. ಅವಳು ಬದುಕಬಹುದಾಗಿತ್ತು. ನಿಕೆಯು ವ್ಯವಹಾರ ಬದಲಾಯಿಸಿದ್ದುದರ ಪರಿಚಯ ಅವಳಿಗೆ ಆಗಿತ್ತು. ಈಗ ಅವಳ ಕೈಯಲ್ಲಿ ಮಗುವಿತ್ತು. ಮಗುವನ್ನು ಬದುಕಿಸಲು ಹೆಣಗಾಡಿದಳು. ಅಷ್ಟರಲ್ಲೇ ನಿಕೆಯು ತನ್ನ ಎದೆಯನ್ನು ಲೇಖೆಯ ತಲೆಯಮೇಲಿಟ್ಟು ಅದುಮಿದಳು. ಲೇಖೆ ಮುಳುಗಿದಳು. ಕೈಯಿಂದ ಮಗು ಕಳಚಿಕೊಂಡಿತು. ಅವಳೂ ಮೂರ್ಛೆಗೊಂಡಳು. ಇದ್ದುದಿದ್ದಂತೆಯೆ ಲೇಖೆಯ ಬಲವಾದ ತೋಳು ನಿಕೆಯ ಕತ್ತಿಗೆ ನೇಣುಹಾಕಿತು. ಬಿಡಿಸಿಕೊಳ್ಳಲಾರದೆ ನಿಕೆಯು ಅವಳ ಜತೆಗೇ ನೀರಿನ ಪಾಲಾದಳು.

ಈಗ ಆ ಪರಿವಾರಕ್ಕೆ ಲೇಖೆಯ ತಂಗಿ ರೋಜನೆಯೆ ಒಡತಿ. ಹೀಗೆ ಆದಿಮಾನವನು ತನ್ನ ಮೊದಲಿನ ಮೆಟ್ಟಿಲನ್ನು ದಾಟುತ್ತಿದ್ದನು.


೫೦ವರ್ಷಗಳಿಂದ ಅನುಭವಪಟ್ಟ ಕರ್ಕ ಮತ್ತು ಕಂಪನಿಯ

ಜ್ವರ ಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರ ಗಡ್ಡೆಯನ್ನು ಕಳೆಯುವುದು

ವಿಳಾಸ:— ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ
ಗಿರಗಾಂವ, ಮುಂಬಯಿ

# ಕೊಡಗಿನಲ್ಲಿ ಕನ್ನಡದ ಪಾಡು

ಲೇಖಕ :
" ನಾರದ "

**ಒಂದೊಂದು ಕಾರಣದಿಂದ ಒಂದೊಂದು ಭಾಗದಲ್ಲಿ ಕನ್ನಡಕ್ಕೆ ಅರ್ಧಚಂದ್ರ. ಕಲಿತವರಿರುವ ಪ್ರದೇಶದಲ್ಲಿ ಇಂಗ್ಲಿಷಿನ ಮೋಹ, ಕಲಿಯದವರಿರುವ ಪ್ರದೇಶದಲ್ಲಿ ಅಲ್ಲಿಯ ಮುಂದಾಳುಗಳಾದ ಪರಭಾಷಿಗಳ ಭಾಷೆಯ ಆಕ್ರಮಣ. ಯಾರಿಗೂ ಬೇಕಾಗಿರವ ಕನ್ನಡ ಬದುಕುವ ಬಗೆ ಹೇಗೆ ?**

ಕೊಡಗು ಇಂಡಿಯಾ ಸರಕಾರದ ಅಧೀನದಲ್ಲಿರುವ ಒಂದು ಪ್ರತ್ಯೇಕ ಪ್ರಾಂತ. ಪ್ರಾಂತದ ಆಡಳಿತವು ಒಬ್ಬ ಚೀಫ್ ಕಮಿಶನರನ ವಶದಲ್ಲಿದೆ. ಈ ಪುಟ್ಟ ಪ್ರಾಂತದ ಜನಸಂಖ್ಯೆ ಒಂದು ಲಕ್ಷದ ಎಪ್ಪತ್ತು ಸಾವಿರವಿರಬಹುದು. ಹೀಗೆ ಕೊಡಗು ಒಂದು ಪ್ರತ್ಯೇಕ ಪ್ರಾಂತವಾಗಿರುವುದರಿಂದ, ನೆರೆಹೊರೆಯ ಕನ್ನಡ ಪ್ರಾಂತಗಳೊಡನೆ ಬಳಕೆ-ಸಂಪರ್ಕಗಳು ಬಹಳ ಕಡಿಮೆಯಾಗಿವೆ. ವ್ಯಾಪಾರದ ಸಂಬಂಧ ಮಾತ್ರ ವಿದೆ. ಈಗಿನ ಸಂಕುಚಿತ ವಾತಾವರಣವು, ವೇರಭಾಷೆಯಾದ ಕನ್ನಡದ ಉಸಿರನ್ನು ಕಟ್ಟಿಯಿದೆ ಎಂದರೆ ತಪ್ಪಾಗದು.

ಶಾಲೆಗಳಲ್ಲಿ ಕಲಿಸುತ್ತಿರುವ, ಕೋರ್ಟು ಕಚೇರಿಗಳಲ್ಲಿ ಬಳಸುತ್ತಿರುವ ಮತ್ತು ಎಲ್ಲ ವ್ಯವಹಾರದ ಭಾಷೆಯು ಕನ್ನಡವಾದರೂ ಕನ್ನಡದ ಬಗ್ಗೆ ಕೊಡಗಿನಲ್ಲಿ ಅನಾದರವಿದೆಯೆಂದು ನಾನು ಉಸುರಿದರೆ, ನಿಮಗೆ ಅದೊಂದು ಸೋಜಿಗವಾಗಿ ತೋರುವುದು ಸಹಜ. ಕೊಡಗು ಮೊದಲಿನಿಂದಲೂ ಆಳುವವರ ಸ್ನೇಹ-ಪ್ರಾಮತೆಗಳನ್ನು ಪಡೆದ ಪ್ರಾಂತ. ಇಂಗ್ಲೀಷು ಭಾಷೆಯ ಮತ್ತು ಪಡುವಲಿನ ಅನುಕರಣೆಯ ಬೇರುಗಳು ಇಲ್ಲಿ ಬಹಳ ಆಳವಾಗಿ ಬೆಳೆದಿವೆ ದಕ್ಷಿಣ ಭಾರತದ ಇನ್ನಾವ ಜಿಲ್ಲೆಗಳಲ್ಲಿಯೂ ಕೊಡಗಿನಲ್ಲಿ ತೋರುವಷ್ಟು ಅನುಕರಣೆಯು ಕಂಡುಬಾರದು. ಈ ಅನುಕರಣೆಯ ಭೇತಾಳವು ವೇಷ-ಭೂಷಣಗಳಿಂದ ಹಿಡಿದು ಮನೆಯೊಳಗಿನ ಮಾತು-ಕತೆಗಳ ತನಕ ಬೆನ್ನುಹತ್ತಿದೆ. ಎಳೆಯ ಹಸುಳೆಗಳಿಗೆ " ಪಪ್ಪ, ಮಮ್ಮ " ಎಂದು ತಂದೆ-ತಾಯಿಯರನ್ನು ಕರೆಯಲು ಕಲಿಸುತ್ತಿರುವ ನವನಾಗರಿಕರ ಸಂಖ್ಯೆಗೇನೂ ಕೊರತೆಯಿಲ್ಲ. ಎರಡನೆಯದಾಗಿ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಂದಿಯ ತಾಯ್ನುಡಿ ಶುದ್ಧ ಕನ್ನಡವಲ್ಲ. ಇಲ್ಲಿಯ ಮೂಲನಿವಾಸಿಗಳಾದ ಕೊಡಗರಿಗೆ ಅವರದೇ ಆದ " ಕೊಡಗು " ಎಂಬ ಪ್ರತ್ಯೇಕ ಭಾಷೆಯಿದೆ. ಆದರೆ ಅದು ವ್ಯವಹಾರಗಳಲ್ಲಿ ಗ್ರಂಥಸ್ಥವಲ್ಲ. ಅವರು ತಮ್ಮ ದೈನಂದಿನ ವ್ಯವಹಾರಗಳಲ್ಲಿ ತಾಯ್ನುಡಿಯನ್ನೇ ಬಳಸುತ್ತಾರೆ. ಆದರೆ ಶಾಲೆಗಳಲ್ಲಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಲೋಸುಗ ಕನ್ನಡವನ್ನು ಅಭ್ಯಾಸ ಮಾಡುತ್ತಾರೆ. ಇವರ ವಿದ್ಯಾಭ್ಯಾಸವು ಮುಗಿದೊಡನೆಯೆ, ಕನ್ನಡದಲ್ಲಿ ಅಭಿರುಚಿಯಿಲ್ಲದುದರಿಂದ, ಕನ್ನಡ ಸಾಹಿತ್ಯದೊಡನೆ ಇರುವ ಸಂಪರ್ಕವು ಅಲ್ಲಿಗೇ ಮುಗಿದುಹೋಗುತ್ತದೆ. ಕೋರ್ಟು-ಕಚ್ಚೇರಿಗಳಲ್ಲಿ ವ್ಯವಹಾರಗಳು ಬಂದೊದಗಿದಾಗ, ಕರಾರುಪತ್ರಗಳನ್ನು ಬರೆಯುವೇಕಾದಾಗ, ಲಗ್ನಪತ್ರಿಕೆಗಳನ್ನು ಅಚ್ಚು ಹಾಕಿಸಬೇಕಾದಾಗ, ಅಲ್ಲದೆ ಇತರ ಸಂದರ್ಭಗಳಲ್ಲಿ ಅವರು ಕನ್ನಡವನ್ನು ಬಳಸುವುದು ವಿರಳ.

ಕೊಡಗಿನ ಶಾಲೆಗಳಲ್ಲಿ ಕಲಿಸುತ್ತಿರುವ ಭಾಷೆಯು ಕನ್ನಡವೇ ಆಗಿದೆ. ಆದರೆ ಶಿಕ್ಷಣಕ್ರಮದಲ್ಲಿ ಕನ್ನಡದ ಕಡೆಗೆ ತಾತ್ಸಾರ. ವಿದ್ಯಾಧಿಕಾರಿಗಳೂ, ಕನ್ನಡಾಭ್ಯಾಸದ ಕಡೆಗೆ ಸಾಕಷ್ಟು ಶ್ರದ್ಧೆಯನ್ನು ವಹಿಸುತ್ತಲಿಲ್ಲ. ಶಾಲಾಧಿಕಾರಿಗಳ ಒಲವು-ಸಡ್ಡೆಗಳು ರಾಜಭಾಷೆಯಾದ ಇಂಗ್ಲೀಷಿನ ಕಡೆಗೇ ಬಾಗಿವೆ " ಕನ್ನಡವು ಎಲ್ಲರಿಗೂ ಅರ್ಥವಾಗುವ ಭಾಷೆ; ಮನೆಯಲ್ಲಿ ವಿದ್ಯಾರ್ಥಿಗಳು ಓದಿಕೊಂಡರಾಯಿತು, " ಎಂದು ಶಿಕ್ಷಕರಿಗೂ ಅನಾದರ. ಇದರ ಪರಿಣಾಮವಾಗಿ ಕೊಡಗಿನ ಕನ್ನಡದ ಮಟ್ಟವು ಕೀಳು ಎಂಬುದು, ನೆರೆನಾದಾದ ಮೈಸೂರಿನೊಡನೆ ಅಥವಾ ದಕ್ಷಿಣಕನ್ನಡದೊಡನೆ ಹೋಲಿಸಿದಾಗ ಮಂದಟ್ಟಾಗುವುದು. ಇದಕ್ಕೆ ಒಂದು ಉದಾಹರಣೆ :— ಮೈಸೂರಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಬಳಸುತ್ತಿರುವ ವ್ಯಾಕರಣವನ್ನು ಕೊಡಗಿನಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ ಉಪಯೋಗಿಸುತ್ತಿದ್ದಾರೆ. ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡವನ್ನು ಸರಿಯಾಗಿ ಕಲಿಸಬಲ್ಲ ಭಾಷಾತಜ್ಞರಾದ ಶಿಕ್ಷಕರ ಅಭಾವವು ಎದ್ದು ಕಾಣುತ್ತದೆ. ಈ ಸಂಗತಿಯು ಕೊಡಗು ಕರ್ನಾಟಕ ಸಂಘದ ದೃಷ್ಟಿಗೆ ಬಿದ್ದುದು ಸಂತೋಷಕರ. ಇತ್ತೀಚೆಗೆ ಕರ್ನಾಟಕ ಸಂಘದವರು, ಕೊಡಗಿನ ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡವನ್ನು ಕಲಿಸಲು ಶಾಲೆಗೊಬ್ಬೊಬ್ಬರಂತೆ ಕನ್ನಡ ಪಂಡಿತರನ್ನು ನೇಮಿಸಬೇಕೆಂದು ಸರಕಾರದವರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಕನ್ನಡದ ಬಗ್ಗೆ ಜನತೆಯಲ್ಲಿ ಅನಾದರಮೂಡಲು ಒಂದು ಪ್ರಧಾನಕಾರಣ ಶಾಲೆಗಳಲ್ಲಿ ಕೇವಲ ಪರೀಕ್ಷೆಗೋಸುಗ ಕನ್ನಡವನ್ನು ಅಭ್ಯಾಸ ಮಾಡುವುದಾಗಿದೆ. ವಿದ್ಯಾರ್ಥಿಗಳಿಗೆ ಕನ್ನಡ ನುಡಿಯ ಸೊಬಗು-ಮಾಧುರ್ಯಗಳ ಅರಿವು ಹುಟ್ಟಿಸಲು ಕನ್ನಡ ಅಧ್ಯಾಪಕರು ತೊಂದರೆಗಳನ್ನು ತೆಗೆದುಕೊಳ್ಳುವುದಿಲ್ಲ. ಅರಿವನ್ನು ಪಡೆವ ಜಿಜ್ಞಾಸೆಯನ್ನು ಎಳೆಯರಲ್ಲಿ ಹುಟ್ಟಿಸಿದರೆ, ಆಗ ಅವರು ಪರೀಕ್ಷೆಯ ದೃಷ್ಟಿಯನ್ನು ಬಿಟ್ಟು, ಕನ್ನಡದ ಸೊಬಗಿನ ಕಡೆಗೆ ದೃಷ್ಟಿಯನ್ನು ಹೊರಳಿಸುವರು; ಅವರಲ್ಲಿ ವಾಚನಾಭಿರುಚಿಯೂ ಬೆಳೆವುದು; ಆದರೊಡನೆ ಸ್ವಾಭಾವಿಕವಾಗಿ ಕನ್ನಡದ ಮಟ್ಟವೂ ಏರುವುದು. ಆದರೆ ದುರ್ದೈವದಿಂದ ಕೊಡಗಿನ ಶಾಲೆಗಳಲ್ಲಿ ಈ ಪರಿಸ್ಥಿತಿ ಇಲ್ಲುತ್ತದು. ಪ್ರೌಢಶಾಲೆ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡ ಗ್ರಂಥಭಾಂಡಾರಗಳು ಇವೆ ಆದರೆ ವಿದ್ಯಾರ್ಥಿಗಳು ಅವುಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳುತ್ತಲಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯೂ ಗ್ರಂಥಭಾಂಡಾರದ ಇಂತಿಷ್ಟು ಪುಸ್ತಕಗಳನ್ನು ಓದಲೇಬೇಕೆಂಬ ನಿರ್ಬಂಧವೂ ಇಲ್ಲ. ಪ್ರತಿಯೊಂದು ಶಾಲೆಯಲ್ಲಿಯೂ ಗ್ರಂಥಭಾಂಡಾರಗಳಿದ್ದರೂ, ಅಲ್ಲಿಗಳಿಂದ ಒಂದೇ ಒಂದು ಪುಸ್ತಕವನ್ನಾದರೂ ತೆಗೆದು ಓದದ ವಿದ್ಯಾರ್ಥಿಗಳೂ ಇದ್ದಾರೆ ಪರಿಣಾಮವಾಗಿ ವಿದ್ಯಾರ್ಥಿಗಳಿಗೆ ಭಾಷೆಯ ಹಿಡಿತದಲ್ಲಿ ಇಲ್ಲವಾಗಿದೆ. ಅವರು ತಮ್ಮ ಮನದ ಭಾವನೆಗಳನ್ನು ತಿಳಿಗನ್ನಡದಲ್ಲಿ ಎರಕ ಹೊಯ್ಯಲಾರರು. ಮೆಟ್ರಿಕ್ಯುಲೇಶನ್ ವರೆಗೆ

ಪಠಿಸಿದ ವಿದ್ಯಾರ್ಥಿಗಳೂ, ಯಾವುದಾದರೂ ಒಂದು ಸಾಮಾನ್ಯ ವಿಷಯವನ್ನು ಕುರಿತು ತಿಳಿಗನ್ನಡದಲ್ಲಿ ಒಂದೆರಡು ಪುಟಗಳಷ್ಟು ಒಂದು ಪ್ರಬಂಧವನ್ನು ತಪ್ಪಿಲ್ಲದೆ ಬರೆಯಲಾರರು. ಬರೆಹಗಳಲ್ಲಿ ವ್ಯಾಕರಣ ತಪ್ಪುಗಳು ಧಾರಾಳವಾಗಿ ಸಿಗುತ್ತವೆ.

ಕೊಡಗಿನ ಕೆಲವು ಹೈಸ್ಕೂಲುಗಳಲ್ಲಿ ಕನ್ನಡದ ಮಾಧ್ಯಮದಲ್ಲಿ ಕೆಲವು ವಿಷಯಗಳನ್ನು ಕಲಿಸುತ್ತಾರೆ; ಉಳಿದ ಹಲವು ವಿಷಯಗಳನ್ನು ಇಂಗ್ಲಿಷಿನಲ್ಲಿ. ಶಿಕ್ಷಣದ ಮಾಧ್ಯಮವು ಕನ್ನಡವೇ ಇರಬೇಕೆಂಬ ನಿರ್ಬಂಧವನ್ನು ಇಟ್ಟುಕೊಂಡಿಲ್ಲ; ಅನುಸರಿಸುತ್ತಿರುವ ವಿಷಯಗಳಲ್ಲಿ ಒಂದು ಕ್ರಮವೂ ಇಲ್ಲ. ಉತ್ತರ ಕೊಡಗಿನ ಹೈಸ್ಕೂಲೊಂದರ ಮುಖ್ಯಾಧ್ಯಾಪಕರಿಗೆ ಒಬ್ಬ ಸಹ ಅಧ್ಯಾಪಕರು: "ನಮ್ಮ ಹೈಸ್ಕೂಲಿನಲ್ಲಿ ಚರಿತ್ರೆಯನ್ನು ಕನ್ನಡದಲ್ಲಿ ಕಲಿಸುವುದು ಲೇಸು; ಜೆಲೋ ಪತ್ಯ-ಪುಸ್ತಕಗಳು ಕನ್ನಡದಲ್ಲಿವೆ. ಕನ್ನಡದಲ್ಲಿ ಕಲಿಸಿದರೆ ವಿದ್ಯಾರ್ಥಿಗಳಿಗೆ ಹಗುರವಾಗುವುದು." ಎಂದು ಹೇಳಿದರಂತೆ. ಆಗ ಮಿಶನರಿ ಕಾಲೇಜೊಂದರಲ್ಲಿ ನಾಲ್ಕಾರು ವರುಷ ಪಳಗಿ ಬಂದ ಮುಖ್ಯಾಧ್ಯಾಪಕರು "ಕನ್ನಡವನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವುದಾದರೆ, ಶಿಕ್ಷಣದ ಮಟ್ಟವನ್ನೇ ಕೆಳಗಿಳಿಸಿದಂತೆ" ಎಂದು ಮೂಗು ಮುರಿದುಕೊಂಡರಂತೆ.

ಶಿಕ್ಷಣ ಸಂಸ್ಥೆಗಳಲ್ಲಿಯೆ ಕನ್ನಡದ ಬಗೆಗೆ ಇನಿತೊಂದು ಅನಾದರವಾದ ಬಳಿಕ, ಹೊರಗಿನ ಪ್ರಪಂಚದಲ್ಲಿ ಕನ್ನಡದ ಸ್ಥಿತಿಯು ಹೇಗಿದೆಯೆಂದು ವಿವರಿಸಬೇಕೆ? ವಿದ್ಯಾಭ್ಯಾಸವನ್ನು ಮುಗಿಸಿ ಬಂದವನು ಕನ್ನಡ ಪುಸ್ತಕಗಳನ್ನು ಕೈಯಲ್ಲಿ ಹಿಡಿಯುವುದು ವಿರಳ. ಕನ್ನಡ ಪುಸ್ತಕಗಳನ್ನು ಓದುವುದೆಂದರೆ ತಮ್ಮ ಗೌರವಕ್ಕೆ ಕುಂದೆಂದು ಭಾವಿಸುವ ಮಹನೀಯರೂ ಇದ್ದಾರೆ. ನನ್ನ ಗೆಳೆಯರೊಬ್ಬರಿದ್ದಾರೆ; ಒಂದು ದಿನ ಅವರು ಒಂದು ಪುಸ್ತಕವನ್ನು ಕೈಯಲ್ಲಿ ಹಿಡಿದಿದ್ದರು. ಅದಾವ ಪುಸ್ತಕವೆಂದು ನಾನು ಅದನ್ನು ಅವರ ಕೈಯಿಂದ ಕಿತ್ತುಕೊಂಡೆ. ಬಿಡಿಸಿ ನೋಡಿದಾಗ ಅದು ಶ್ರೀ. ಕಾರಂತರ "ಮರಳಿ ಮಣ್ಣಿಗೆ" ಎಂದು ಗೊತ್ತಾಯಿತು ನಾನು, "ನೀವು ಕನ್ನಡ ಪುಸ್ತಕಗಳನ್ನು ಓದುತ್ತೀರಾ?" ಎಂದು ಪ್ರಶ್ನಿಸಿದೆ. ತಾವು ಕನ್ನಡ ಪುಸ್ತಕಗಳನ್ನು ಓದುತ್ತಿರುವೆವೆಂದು ಒಪ್ಪಿಕೊಳ್ಳಲು ಆ ನನ್ನ ಗೆಳೆಯರಿಗೆ ತುಂಬಾ ನಾಚಿಕೆ. ಅವರು ಗಡಿಬಿಡಿಯಲ್ಲಿ ಎಂದರು: "ಇಲ್ಲ ನಾನು ಕನ್ನಡ ಪುಸ್ತಕಗಳನ್ನು ಓದುತ್ತಿಲ್ಲ ನನ್ನ ಉತ್ತಮಾಂಗಿಗೋಸುಗ ಒಯ್ಯುತ್ತಿದ್ದೇನೆ." ತಾವು ಕನ್ನಡ ಪುಸ್ತಕಗಳನ್ನು ಓದುತ್ತಿರುವೆವೆಂದು ಒಪ್ಪಿಕೊಳ್ಳಲು ನನ್ನ ಆ ಗೆಳೆಯರು ನಾಚಿದರೂ, ಗುಟ್ಟಾಗಿ ಕನ್ನಡ ಪುಸ್ತಕಗಳನ್ನು ತಿರುವಿ ನೋಡುತ್ತಿದ್ದಾರಲ್ಲಾ ಎಂದು ನನ್ನ ಮನಸ್ಸು ತುಸ ಸಂತಸವನ್ನು ತಳೆಯಿತು.

ಸುಶಿಕ್ಷಿತರ ಮನೆಯ ಮೇಜುಗಳನ್ನು ಅನುದಿನವೂ "ಹಿಂದೂ" ಮತ್ತು "ಎಕ್ಸ್‌ಪ್ರೇಸ್ಸು"ಗಳು ಅಲಂಕರಿಸುತ್ತವೆ. ಉತ್ತರ ಕೊಡಗಿನಲ್ಲಿ ಉಪ್ಪಿತಪ್ಪಿ ನಾಲ್ಕಾರು "ತಾಯ್ನಾಡು" "ಜನವಾಣಿ"ಗಳು ಕಣ್ಣಿಗೆ ಬೀಳುತ್ತಿದ್ದುವು. ವಾರಕ್ಕೊಂದು ಸಲ ಎಂಟು ಹತ್ತು ಮಂದಿ "ಕರ್ಮವೀರ"ರ ದರ್ಶನವೂ ಆಗುತ್ತಿದ್ದಿತು. ಆದರೆ ದಕ್ಷಿಣ ಕೊಡಗಿನಲ್ಲಿ ಜನರ ಕೈಗಳಲ್ಲಿ ಕನ್ನಡ ದಿನಪತ್ರಿಕೆಗಳು ನೋಡ ದೊರೆಯುವುದೇ ಅಪರೂಪವಾಗಿದೆ. ಎಲ್ಲಿಯಾದರೂ ಮೂಲೆಗಳಲ್ಲಿ "ಪ್ರಜಾಮತ" ದ ಭೇಟಿಯಾಗುತ್ತದೆ. ಒಮ್ಮೆ ನಾನೊಬ್ಬ ಗೆಳೆಯನನ್ನು ಪ್ರಶ್ನಿಸಿದೆ: "ನೀವು 'ಹಿಂದೂ' ಓದುವ ಬದಲು ಒಂದು ಕನ್ನಡ ದಿನಪತ್ರಿಕೆಯನ್ನು ಏಕೆ ತರಿಸಬಾರದು?" ಎಂದು. ಆಗ ಅವರು ಹೀಗೆ ಮಾರ್ನುಡಿದರು: "ಹಿಂದೂ ಓದಿದರೆ ನನ್ನ ಇಂಗ್ಲಿಷು ಅಭಿವೃದ್ಧಿಯಾಗುವುದು" ಎಂಬುದಾಗಿ. 'ಇಂಗ್ಲೀಷ ಜ್ಞಾನವನ್ನು ಹೆಚ್ಚಿಸುವ ಹುಚ್ಚಿನಲ್ಲಿ ಕನ್ನಡದ ಕೈಬಿಡುತ್ತಾರಲ್ಲ!' ಎಂದು ಆಗ ನನ್ನ ಮನಸ್ಸು ಕುದಿತಕ್ಕೆ ಒಳಗಾಯಿತು.

ಇನ್ನು ಮಾತಾಡುವಾಗ ಇಂಗ್ಲಿಷನ್ನು ಉಪಯೋಗಿಸುವುದಂತೂ ಬಿಡಲಾಗದ ಒಂದು ಚಟವಾಗಿ ಬಿಟ್ಟಿದೆ. ನಾಲ್ಕು ಜನರ ಮುಂದೆ ಕನ್ನಡ ಮಾತಾಡುವುದೆಂದರೆ ಒಂದು ಕುಂದೇ ಸರಿ. ಒಂದು ವೇಳೆ ಕನ್ನಡ ವನ್ನೇ ಆಡುತ್ತಿದ್ದರೂ, ಗಾಜಿನ ಮಣಿಗಳ ಸರದಲ್ಲಿ ಹಿತ್ತಾಳೆಯ ಮಣಿಗಳನ್ನು ಪೋಣಿಸಿದಂತೆ, ಮಧ್ಯೆ ಮಧ್ಯೆ ಇಂಗ್ಲೀಷು ವಾಕ್ಯಗಳನ್ನು ಬೆರಸುವುದು; ಅದಕ್ಕಿಂತಲೂ ಹೆಚ್ಚಾಗಿ ಇಂಗ್ಲೀಷು ಶಬ್ದಗಳನ್ನು ಬೆರಸುವುದು ನಮಗೊಂದು ರೂಢಿಯಾಗಿ ಬಿಟ್ಟಿದೆ. ಆ ರೀತಿ ಇಂಗ್ಲೀಷು ಬೆರಸದಿದ್ದರೆ ಆತ ಮಾತುಬಲ್ಲ ಸುಶಿಕ್ಷಿತನೇ ಅಲ್ಲ. ಕಾಗದಗಳನ್ನು ಬರೆವಾಗಲೂ ಇಂಗ್ಲಿಷೇ ಉಪಯೋಗಕ್ಕೆ ಬರುತ್ತದೆ ನಮ್ಮಲ್ಲಿ ಹಲವರು ಇಂಗ್ಲೀಷಿನಲ್ಲಿ ಬರೆಯುವುದರಲ್ಲಿರುವ ಗೌರವವು ಕನ್ನಡದಲ್ಲಿ ದೊರಕದೆಂದು ಭಾವಿಸಿದ್ದಾರೆ. ಒಂದು ವೇಳೆ ಕನ್ನಡದಲ್ಲಿಯೆ ಬರೆದರೂ, "My dear brother" ಹೀಗೆ ಆರಂಭಿಸುವ ಚಟವಿದೆ. ಹಿಂದೆ ಯಾವುದೋ ಒಂದು ಕಾರ್ಯದ ಸಲುವಾಗಿ ಒಬ್ಬ ಕನ್ನಡ ಅಧ್ಯಾಪಕರಿಗೆ ಕಾಗದ ಬರೆಯಬೇಕಾಗಿ ಬಂತು. ನಾನು ಕನ್ನಡದಲ್ಲಿಯೇ ಬರೆದೆ; ಆದರೆ ಆ ಕನ್ನಡ ಅಧ್ಯಾಪಕರು ನನಗೆ ಇಂಗ್ಲಿಷಿನಲ್ಲಿ ಉತ್ತರಿಸಿದರು.

"ಇವೆಲ್ಲಾ ಅಲ್ಪ ಸಂಗತಿಗಳು, ಇವನ್ನು ಎತ್ತಿ ತೋರಿಸಿ ಏನು ಬ್ರಹ್ಮಾಂಡ ಮಾಡುವುದು?" ಎಂದು ನೀವು ಒಂದು ವೇಳೆ ಮೂಗು ಮುರಿಯ ಬಹುದು. ಆದರೆ ಈ ಅಲ್ಪ ಸಂಗತಿಗಳೇ ನಮ್ಮ ಅಂತರಂಗ


| | | |
|---|---|---|
| ಮುಸಲ್ಮಾನರ ಆಳಿಕೆ | (ಹಳಪೇಟೆ) | ೨— ೮—೦ |
| ಹತ್ತಿ ಚರಕ ಯಂತ್ರ | | ೨— ೮—೧ |
| ಚಾಲುಕ್ಯರ ಪುಲಿಕೇಶಿ | | ೧— ೦—೦ |
| ಸಂತಾನ ರಾಜ್ಯ | | ೧— ೪—೦ |
| ಬ್ರಹ್ಮಚರ್ಯ ಬಲಿಸೃಷ್ಟಿ | | ೦—೧೦—೦ |
| ಕೌತಾರ್ಜುನೀಯ ನಾಟಕ | | ೧— ೦—೦ |
| ಮಹಾತ್ಮಾ ಗಾಂಧಿ ಸ್ವ ಚರಿತ್ರ. | | ೧— ೬—೦ |
| ತರುಣ ಪತ್ನಿ | | ೦— ೮—೦ |
| ಕಲಿತರೆ ಹೀಗೆ ಕಲಿಯಬೇಕು. | | ೦— ೫—೦ |
| ಎಲ್. ಎಲ್. ಬಿ. | | ೦—೧೦—೦ |

ಇದು ಅಲ್ಲದೆ ಶಾಲೆಗೆ ಬೇಕಾಗುವ ಪ್ರತಿಯೊಂದು ಪುಸ್ತಕ ನಮ್ಮಲ್ಲಿ ಸಿಗುವವು. ಬೇಕಾದರೆ ಬರೆಯಿರಿ.

**ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ.**

ಗಳನ್ನು ತೆರೆದು ತೋರಿಸುವುವು. ಈ ಅಲ್ಪ ಸಂಗತಿಗಳೇ ಕನ್ನಡದ ಬಗ್ಗೆ ನಮಗಿರುವ ತಾತ್ಸಾರದ ಹೆಗ್ಗುರುತುಗಳಾಗಿವೆ. ಈ ಸಣ್ಣ ಸಂಗತಿಗಳನ್ನು ತಿದ್ದಿಕೊಳ್ಳಲು ನಾವು ಕಲಿತರೆ ಮುಂಬೆ ದೊಡ್ಡ ಕೆಲಸಗಳಲ್ಲಿಯೂ ನಮ್ಮ ಕೊರತೆಗಳನ್ನು ಮಾಣಲು ಸಾಧ್ಯವೆಂದು ನನ್ನ ಅಭಿಪ್ರಾಯ.

ಇಂದು ಕನ್ನಡದಲ್ಲಿ ಸಾಹಿತ್ಯದ ಸುಗ್ಗಿ ನಡೆಯುತ್ತಿರುವ ಕಾಲ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಾಹಿತಿಗಳ ಸಂಖ್ಯೆಯು ಕನಿಷ್ಟ ಇಪ್ಪತ್ತು, ಮೂವತ್ತಕ್ಕೆ ಮೇಲ್ಪಟ್ಟಿದೆ. ಆದರೆ ಕೊಡಗಿನಲ್ಲಿ ಸಾಹಿತಿಗಳ ಸಂಖ್ಯೆಯನ್ನು ಎಣಿಸಲು ನೀವು ತೊಂದರೆ ಪಡಬೇಕಾಗಿಲ್ಲ. ಬರೇ ಹೆಬ್ಬೆರಳುಗಳಿಂದ ಇಲ್ಲಿಯ ಸಾಹಿತಿಗಳನ್ನು ಎಣಿಸಬಹುದು. ಏಕೆ ಈ ಸಂಗತಿಯನ್ನು ಉಸುರಿದೆನೆಂದರೆ: ಸಾಹಿತಿಗಳ ಸಂಖ್ಯೆಯು ಬೇರೆ ಏನನ್ನು ತಿಳಿಸದಿದ್ದರೂ, ಆ ಪ್ರಾಂತದಲ್ಲಿ ಕನ್ನಡದ ಮೇಲಿನ ಸ್ನೇಹಾದರಗಳನ್ನು ತಿಳಿಸುತ್ತದೆ; ಜನತೆಯ ವಾಙ್ಮನಾಭಿರುಚಿಯನ್ನು ಅರುಹುತ್ತದೆ. ಅಷ್ಟು ಮಂದಿ ಸಾಹಿತಿಗಳಿಗೆ ಆ ಪ್ರಾಂತದಲ್ಲಿ ಪ್ರೋತ್ಸಾಹ ವಿದೆಯೆಂದು ಭಾವಿಸಬೇಕಾಗುತ್ತದೆ.

ಹಲವು ದಿನಗಳ ಹಿಂದೆ ನನ್ನ ಗೆಳೆಯರೊಬ್ಬರು ಹೇಳಿದರು: "ಶಿಕ್ಷಣದಲ್ಲಿ ಕೊಡಗು ಇತರ ಎಲ್ಲಾ ಪ್ರಾಂತಗಳಿಗಿಂತಲೂ ಮುಂದುವರಿದಿದೆ, ಇಲ್ಲಿರುವಷ್ಟು ಮಂದಿ ಅಕ್ಷರಸ್ಥರ ಪ್ರಮಾಣವು ತಿರುವಾಂಕೂರನ್ನು ಬಿಟ್ಟರೆ ಇನ್ನೆಲ್ಲಿಯೂ ದೊರಕದು" ಎಂಬುದಾಗಿ. ಅವರ ನುಡಿಯನ್ನು ನಾನೂ ಒಪ್ಪುತ್ತೇನೆ. "ಆದರ ಕೇವಲ ಅಕ್ಷರಜ್ಞರ ಸಂಖ್ಯೆಯು ಹೆಚ್ಚಿದುದರಿಂದ ನಾಡಿನಲ್ಲಿ ಪ್ರಗತಿಯಾಗುವುದೇ? ಸಂಸ್ಕಾರವು ಮೇಲ್ಮಟ್ಟಕ್ಕೆ ತಲುಪುವುದೇ? ಅಕ್ಷರಜ್ಞರು ತಮ್ಮ ಜ್ಞಾನವನ್ನು ಸಮರ್ಪಕರೀತಿಯಲ್ಲಿ ವಿನಿಯೋಗಿಸ ಬೇಡವೇ?" ಎಂಬಿತ್ಯಾದಿ ಹಲವು ಪ್ರಶ್ನೆಗಳು ನನ್ನ ಕಣ್ಣಮುಂದೆ ನಿಲ್ಲುತ್ತವೆ. ತನ್ನ ಅರಿವನ್ನು ಬಳಸದಿರುವ, ತನ್ನ ತಿಳುವಳಿಕೆಯನ್ನು ಅಭ್ಯಾಸ-ಅನುಭವಗಳಿಂದ ಅಭಿವೃದ್ಧಿಗೊಳಿಸದಿರುವ ಅಕ್ಷರಜ್ಞನಿಗೂ ಅವಿದ್ಯಾವಂತನಿಗೂ ಅವ ಅಂತರವಿದೆ?

ತಿಳಿವಿನ ನೀರಡಿಕೆಯನ್ನು ಸೂಚಿಸುವ ಮಾಪಕಯಂತ್ರಗಳೆಂದರೆ, ವಾಚನಾಲಯ ಮತ್ತು ಪುಸ್ತಕ ಭಾಂಡಾರಗಳು. ಇವು ಸುಶಿಕ್ಷಿತರ ಮಾನಸಿಕ ಬೆಳೆವಣಿಗೆಗೆ—ಶರೀರಕ್ಕೆ ಆಹಾರವಿರುವಂತೆ—ಅತ್ಯಗತ್ಯವಾಗಿವೆ. ಆದರೆ ಶಾಲೆಗಳಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕಿದ್ದ ಪುಸ್ತಕಭಂಡಾರಗಳಲ್ಲದೆ ಸಾರ್ವಜನಿಕ ಪುಸ್ತಕ ಭಂಡಾರಗಳು ಕೊಡಗಿನಲ್ಲಿ ಇಲ್ಲವೆಂದೇ ಹೇಳಬಹುದು. ಮಡಿಕೇರಿಯ ಲ್ಲಿ ಕೊಡಗು ಕರ್ನಾಟಕ ಸಂಘದ ಪುಸ್ತಕಭಂಡಾರವು ಮಾತ್ರ, ತಕ್ಕಮಟ್ಟಿಗೆ ಕನ್ನಡ ಓದುಗರ ತೃಷೆಯನ್ನು ಹಿಂಗಿಸುತ್ತದೆ ಕೊಡಗಿನಲ್ಲಿ ಕನ್ನಡ ಪತ್ರಿಕೆಗಳು ಇಲ್ಲವೆಂದಿಲ್ಲ. ಎರಡು ಪತ್ರಿಕೆಗಳು ಓದುಗರ ಮೆದುಳಿಗೆ ಆಹಾರವನ್ನು ಒದಗಿಸುತ್ತಲಿವೆ. ಆದರೆ ಇವು ಪ್ರಾದೇಶಿಕ ಸುದ್ದಿಗಳು, ಅಪಿಲ ಭಾರತದ ರಾಜಕಾರಣ—ಈ ಎರಡು ಗೋಡೆಗಳ ನಡುವೆ ತೊಳಲುತ್ತಿವೆ. ಇವುಗಳಿಗೆ ಕನ್ನಡದ ನೋಟವೂ ಇಲ್ಲ; ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಿಗೆ ನೀರೆರೆದು ಪೋಷಿಸುವ ಗೈಮೆಯನ್ನೂ ಇವು ಕೈಗೊಂಡಿಲ್ಲ.

ಕೊಡಗಿನಲ್ಲಿ ಕನ್ನಡಕ್ಕೋಸುಗ ದುಡಿಯುತ್ತಿರುವ ಏಕಮಾತ್ರ ಸಂಸ್ಥೆಯೆಂದರೆ ಕೊಡಗು ಕರ್ನಾಟಕ ಸಂಘವೆಂದೆನಬಹುದು. ಆದರೆ ಅದಿನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದೆ. ಅದು ಓದುಗರಿಗೆ ಹಲವು ಉತ್ತಮ ಕನ್ನಡ ಪುಸ್ತಕಗಳನ್ನು ಒದಗಿಸುತ್ತದೆ. ವರುಷದಲ್ಲಿ ನಾಲ್ಕಾರು ಸಲ ಹೊರನಾಡಿನ ಸಾಹಿತಿಗಳನ್ನು ಕರೆಯಿಸಿ ಸಾಹಿತ್ಯೋಪನ್ಯಾಸಗಳನ್ನು ಏರ್ಪಡಿಸುತ್ತದೆ. ಈ ಉಪನ್ಯಾಸಗಳು ಮತ್ತು ಸಾಹಿತ್ಯೋತ್ಸವಗಳು ಮಡಿಕೇರಿ ಕೇಂದ್ರದಲ್ಲಿ ತಕ್ಕಮಟ್ಟಿಗೆ ಕನ್ನಡದಲ್ಲಿ ಆದರ-ಅಭಿರುಚಿಗಳನ್ನು ಹುಟ್ಟಿಸಿವೆಯೆಂದೆನಬಹುದು.

ಕರ್ನಾಟಕ ಏಕೀಕರಣದ ಕೂಗು ಇನ್ನೂ ಇಲ್ಲಿಗೆ ತಲುಪಿಲ್ಲ. ಏಕೀಕರಣದ ಅವಶ್ಯಕತೆಯು ಇಲ್ಲಿಯವರಿಗೆ ಇನ್ನೂ ಹೊಳೆದಿಲ್ಲವೆನಬಹುದು. "ಕೊಡಗು ಪ್ರತ್ಯೇಕ ಪ್ರಾಂತವಾಗಿರುವುದೇ ಒಳಿತು. ಕೊಡಗಿಗೆ ತನ್ನದೇ ಆದ ಒಂದು ವಿಶಿಷ್ಟ ಸಂಸ್ಕೃತಿಯಿದೆ; ಕರ್ನಾಟಕದಲ್ಲಿ ಬೆರೆತುಹೋದರೆ ಈ ಸಂಸ್ಕೃತಿಗೆ ಶಿಥಿಲತೆ ಒದಗುವುದು; ಈಗ ಆಳರಸರ ಕೃಪೆಯಿಂದ ಪಡೆದ ಕೆಲವು ಹಕ್ಕು-ಬಾಧ್ಯತೆಗಳು ಇಲ್ಲವಾಗುವುವು; ಆದುದರಿಂದ ಭಾವಿರಾಜ್ಯಘಟನೆಯಲ್ಲಿ ಕೊಡಗು ಜವಾಬ್ದಾರಿ ಸರಕಾರವಿರುವ ಒಂದು ಪ್ರತ್ಯೇಕ ಪ್ರಾಂತವಾಗಿರುವುದು ಲೇಸು!' ಈ ಅಭಿಪ್ರಾಯಗಳು ಜನತೆಯ ಮೆದುಳನಲ್ಲಿ ತೇಲುತ್ತಿವೆ. ಆದರೆ ಅವು ಇನ್ನೂ ಸರಿಯಾಗಿ ರೂಪುಗೊಂಡಿಲ್ಲ ಈ ಅಭಿಪ್ರಾಯವನ್ನು ಕೊಡಗಿನ ಕಾಂಗ್ರೆಸಿಗರಲ್ಲಿ ಒಂದು ಜಣದವರು ಪುಷ್ಟೀಕರಿಸುತ್ತಿದ್ದಾರೆ.

ಕನ್ನಡದ ಬಗ್ಗೆ ಇರುವ ಅನಾದರಕ್ಕೆ ಕೊಡಗಿನ ಪ್ರತ್ಯೇಕತೆಯೇ ಕಾರಣವೆಂದು ಹೇಳಬಹುದು. ನಮಗೆ ಎಂದರೆ ಕೊಡಗಿನವರಿಗೆ ಅಖಿಲಕರ್ನಾಟಕದ ದೃಷ್ಟಿ ಬರಬೇಕು. ಪರಭಾಷೆಯ ಮೋಹವನ್ನು ತಗ್ಗಿಸಿ, ಕನ್ನಡದಲ್ಲಿಯೆ ಆಲೋಚಿಸಲು ನಾವೆಂದು ಕಲಿಯಬೇಕಾಗಿದೆ. ಸಂಸ್ಕಾರದಿಂದ ಜೀವನವನ್ನು ಪ್ರಸನ್ನಗೊಳಿಸಬಲ್ಲ ಗಂಗೆಯೆಂದರೆ ದೇಶಭಾಷೆಯೇ ಸರಿ; ಆದುದರಿಂದ ಕನ್ನಡದ ಬಗ್ಗೆ ನಮಗಿರುವ ಉದಾಸೀನತೆಯನ್ನು ಕಳಚಿದರೆ, ನಮ್ಮ ಮನ ಮತ್ತು ಮನೆಗಳಲ್ಲಿ ಕನ್ನಡ ದೀಪಗಳು ಬೆಳಗಿ,-ಅರಿವು ಸಂಸ್ಕಾರಗಳ ತಿಳಿಬೆಳಕನ್ನು ಹರಡುವುವು.


ಇದೀಗ ಪ್ರಕಟವಾಗಿದೆ! ತ್ವರೆ ಮಾಡಿರಿ!!

ಕರ್ನಾಟಕದ ಸುಪ್ರಸಿದ್ಧ ಪತ್ರಿಕೆಗಳೂ ಪತ್ರಿಕಾಕರ್ತರೂ ಸಮಭಿಪ್ರಾಯವನ್ನು ವ್ಯಕ್ತಗೊಳಿಸಿದ ಮುಕ್ಕಾಲು ಭಾಗ ತಮ್ಮದೇ ಆತ್ಮಕತೆಯೂಪ

ದಿವಂಗತ ವರಚ್ಚಂದ್ರ ಚಟ್ಟೋಪಾಧ್ಯಾಯರ ರಮ್ಯ ಕಾದಂಬರಿ.

ಶ್ರೀಕಾಂತ

(ಭಾಗ: ೬)

ಬೆಲೆ: ೧೫೦ ಮಾತ್ರ (ಅ. ವೆ. ಬೇರೆ)

ಆರೂ ಭಾಗಗಳು ಕೂಡಿ ಬೆಲೆ ರೂ. ೭-೧೫-೦, ಅ. ವೆ. ಬೇರೆ.

ವ್ಯಾಪಾರಿಗಳಿಗೆ ಧಾರಾಳವಾದ ಕಮೀಶನ್

ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ

# ಮುಖ್ಯ ಪರೀಕ್ಷಕ

(ಸಣ್ಣ ಕತೆ)

ಶ್ರೀ ಕೆ. ಅಶ್ವತ್ಥನಾರಾಯಣರಾಯರು
ಹಿಂದೂ ವಿ. ವಿ. ನಿಲಯ, ಬನಾರಸ

*

ಶ್ರೀಮಾನ್ ಪದ್ಮನಾಭರಾವ್ ಎಂ. ಎ., ಬಿ. ಟಿ. ಅವರು ಪಟ್ಟಣದ ಹೈಸ್ಕೂಲಿನ ಮುಖ್ಯೋಪಾಧ್ಯಾಯರು. ರಾಯರಿಗೆ ಇಂಗ್ಲಿಷ್ ಭಾಷೆಯಲ್ಲಿ ಶುಂಬ ಸ್ಫೀತಿ, ಆಸಕ್ತಿ; ಹಾಗೆಯೇ ಅದರಲ್ಲಿ ತಮಗೆ ಇದ್ದ ಪರಿಶ್ರಮದ ಬಗ್ಗೆ ಬಹಳ ಅಭಿಮಾನ, ಹೆಮ್ಮೆ. ಇವರ ಈ ವಿಶೇಷ ಗುಣವು ವಿದ್ಯಾರ್ಥಿಗಳಿಗೆ ತಲೆನೋವಾಗಿದ್ದಿತು. ಹುಡುಗರು ಚಾರೂ ತಪ್ಪು ಆಡಿದರೂ ಬರೆದರೂ ರಾಯರು ತಿದ್ದಿ, ಬಂಡಿಸಿ, ಮೂದಲಿಸಿ, ಇಂಗ್ಲಿಷಿನ ಪ್ರಾಮುಖ್ಯತೆ, ಆವಶ್ಯಕತೆ, ಅದರ ಘನತೆ, ಸೌಲಭ್ಯ, ಸೌಂದರ್ಯ—ಇವುಗಳ ವಿಷಯವಾಗಿ ಮೊದಲು ಉಪನ್ಯಾಸವನ್ನೇ ಕೊಟ್ಟು ಬಿಡುತ್ತಿದ್ದರು. ಇಂಗ್ಲಿಷಿನ ಎಡವಟ್ಟಿನ ಪತ್ರಿಕೆಗೆ ಸಂಬಂಧಿಸಿದ ಹಾಡನ್ನು ಮಾತ್ರ ಅವರು ಹೇಳುತ್ತಿದ್ದರು. ಅವರ ಸೆಜ್ಜೆಗೆ ಬರಲಿ, ಒಸ್ಸಿಗೆಯನ್ನು ಪಡೆದ ವಾಕ್ಯರಚನೆಯನ್ನು ಬರೆದ ವಿದ್ಯಾರ್ಥಿಯನ್ನೇ ಯಾರೂ ಕಾಣರು. ಪುರಾಣ ಕಥೆಯನ್ನು ತಿಳಿದ ಕೆಲವರು ಭಗೀರಥನಂತೆ ಗಂಗೆಯನ್ನಾದರೂ ತರಬಹುದು, ಆದರೆ ರಾಯರ ಇಂಗ್ಲಿಷಿನಲ್ಲಿ 'ಸೈ' ಅನ್ನಿಸಿಕೊಳ್ಳಲಾಗುವುದಿಲ್ಲ' ಎನ್ನುತ್ತಿದ್ದರು. ಶಾಲೆಕರಿಗೆ ರಾಯರ ಪಾಂಡಿತ್ಯಪೂರ್ಣತೆಯನ್ನು ಸಂಪಾದಿಸಿಕೊಳ್ಳುವುದೇ ವಿದ್ಯಾಭ್ಯಾಸದ ಗುರಿ.

ಇತರ ಪಟ್ಟಣದ ಶಾಲೆಗಳಂತೆಯೆ ಇದೂ ಕೂಡ ಮೊದ್ದಿ ಸಾಗಿದ್ದಿತು. ಪ್ರತಿಯೊಂದು ತರಗತಿಯಲ್ಲಿಯೂ ಎ. ಬಿ. ಸಿ. ಡಿ, ಇ, ಎಫ್ ಭಾಗಗಳು ಇದ್ದುವು. ಆರನೆಯ ಫಾರಂನಿನ 'ಎ' ಮತ್ತು 'ಬಿ' ಭಾಗಗಳಲ್ಲಿ ಸಾಮಾನ್ಯವಾಗಿ ಆಯ್ದ ಹುಡುಗರನ್ನು ಶುಂಬ, ರಾಯರು ಇವಕ್ಕೇ ಪಾಠ ಹೇಳುತ್ತಿದ್ದರು. ಉಳಿದ ಭಾಗಗಳಲ್ಲಿ ಇವರಿಗೆ ಕೊಂಚ ಬೇದಾಸೀನ. ಒಂದೊಂದು ವೇಳೆ ಇತರ ಭಾಗಗಳನ್ನು ಬಿಟ್ಟು "ಅಲ್ಲಿ ನಾನು ಪಾಠ ತೆಗೆದುಕೊಂಡು ಏನು ಫಲ? 'ಗೋರ್ದಲ್ಲಿ ಸೀರೆ ನುಳೆ ಸುರಿದಂತೆ' ನನ್ನ ಪಾಠ ಬುದ್ಧಿವಂತರಿಗೆ ಮಾತ್ರ!' ಅನ್ನುತ್ತಿದ್ದರು.

ಹೀಗಿದ್ದರೂ ಆ ದಿನ ಅಪರಾಹ್ನದ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಅದೇ 'ಎ' ಭಾಗದ ಹುಡುಗರಿಗೆ ಹಂಚುವಾಗ, ತರಗತಿಯಲ್ಲಿ ರಾಯರ ಟೀಕೆಯ ಮಳೆಯು ಧಾರಾಳವಾಗಿ ಸುರಿಯುತ್ತಿತ್ತು. ಹುಡುಗರೆಲ್ಲರೂ ಇವರಲ್ಲಿ ನನೆದು ಕೊಟ್ಟಿಕೊಂಡು ಹೋಗುತ್ತಿದ್ದರು. ಒಬ್ಬ ಹುಡುಗನ ಪತ್ರಿಕೆಯನ್ನು ಕೊಡುತ್ತ ರಾಯರು "ನಿನ್ನ, ನಿನ್ನ ಹೆಸರು ಮಾತ್ರ ಆನಂದಪ್ಪ, ನಿನ್ನ ಉತ್ತರ ಓದುವಾಗ ನನಗೆ ಬಲು ಸಂಕಟವಪ್ಪ!" ಎಂದರು. ಇನ್ನೊಬ್ಬನ ಸರದಿ ಬಂದಾಗ "ಏನಯ್ಯಾ, ಹೀಗೆ—ಉತ್ತರವನ್ನು ಬರೆಯುವುದು? ಸ್ವಲ್ಪ ಒಳಗೆ ನೋಡು: ಎಷ್ಟು ತಪ್ಪುಗಳನ್ನು ತಿದ್ದಿದ್ದೇನೆ!" ಎಂದರು. ಮೂರನೆಯವನನ್ನು ಕುರಿತ "ಹೀಗೆಲ್ಲ ಬರೆಯುವುದಕ್ಕೆ ಅದೇನು ಕನ್ನಡಕ್ಕೆ ಕೆಟ್ಟು ಹೋಯಿತೆ? ಇದು ಇಂಗ್ಲೀಷು! ಕೊಂಚ ನೆನಪಿಡು. ಜೋಕಾಬಿಟ್ಟೆ ಬರೆದರೆ ಆಗುವುದಿಲ್ಲ! ಮನಸ್ಸಿಟ್ಟು ಅಧ್ಯಯನ ಮಾಡಬೇಕು, ಎಚ್ಚರಿಕೆಯಿಟ್ಟು ಬರೆಯಬೇಕು, ಇಲ್ಲದಿದ್ದರೆ ಗೋವಿಂದ ತಿಳಿಯಿತೆ?" ಎಂದರು.

ನಾಲ್ಕನೆಯವನಿಗೆ "ಏನು, ನಿನ್ನ ವಾಕ್ಯರಚನೆಯೆಲ್ಲ ಕಲಸು-ಮೇಲೋಗರ ಆಗಿಬಿಟ್ಟಿದೆ? ಜೇಕಾಬ ಕಡೆ 'ಕಾಮಾ' ಇಲ್ಲ. 'ಪ್ಯಾರಾ'ದ ಗೋಜೇ ಇಲ್ಲ. ವಿಷಯ ವಿಭಜನೆಯಿಲ್ಲ. ಹೀಗಾದರೆ ನೀನು 'ಪಾಸು' ಮಾಡಿದಂತೆಯೇ ಸರಿ!"

ಐದನೆಯವನಿಗೆ "ನಿನಗಂತು ಇಂಗ್ಲಿಷ್ ವಾಕ್ಯದ ಕಟ್ಟಿನ ಸುಟ್ಟೇ ತಿಳಿಯದು. ಇಂಗ್ಲಿಷು 'idiomatic' ಆಗಿ ಇರಬೇಕು. ಇಲ್ಲದಿದ್ದರೆ ಅದನ್ನು ತಿನ್ನಿಗೆ ಒಗೆಯಬಹುದು ಅಷ್ಟೆ. ಬಹಳ ತಿಳಿದುಕೊಳ್ಳಬೇಕು!"

ಆರನೆಯವನಿಗೆ "ನಿನ್ನ 'ಕಾಲ'ಕ್ಕೇನು ಕಾಲು ಬಾಲವೇ ಇಲ್ಲ! ಹೇಗೆ ಹೇಗೋ ಹರಿಯುತ್ತದೆ. ಹೀಗಾದರೆ ನೀನು ಮುಂದಕ್ಕೆ ಹೇಗೆ ಹೋಗಬಲ್ಲೆ?"

ಇದೇ ರೀತಿ ಒಂದೆಲ್ಲ ಒಂದು ಬಾಣದಿಂದ ಪ್ರತಿಯೊಬ್ಬನನ್ನೂ ಭೇದಿಸುತ್ತ. ಮೂವತ್ತ ಒಂಬತ್ತನೆಯ ಸಂಖ್ಯೆಯ ಹುಡುಗನಲ್ಲಿಗೆ ಬಂದರು. "ಏನಯ್ಯಾ ಪದ್ಮನಾಭ! ನಿನ್ನ ನಂಬರು ಎಷ್ಟು ಗೊತ್ತೋ? ಕೇವಲ ಮೂವತ್ತೆರಡು! ತಿಳಿಯಿತೆ? 'ಛೇಲು'! ನನ್ನ ಹೆಸರಿಗೇ ಅವಮಾನ—ನನ್ನ ವಿದ್ಯಾರ್ಥಿಯಾಗಿದ್ದುದು ಒಂದು ಕಡೆ; ನನ್ನ ಹೆಸರನ್ನಿಟ್ಟುಕೊಂಡುದು ಎರಡನೆಯ ಕಡೆ! ನಿನಗೇನು ಇಂಗ್ಲಿಷ್ ಗಂಧವೇ ಹತ್ತುವ ಹಾಗೆ ಕಾಣುವುದಿಲ್ಲ. ನೀನು ಈಗಲಾದರೂ ಎಚ್ಚತ್ತುಕೊಳ್ಳದಿದ್ದರೆ 'ಅಯೆಸ್ಸೆ' ಪರೀಕ್ಷೆಯಲ್ಲಿ ಖಂಡಿತ ನಿನ್ನನ್ನು ಹಿಂದುಳಿಸುತ್ತೇನೆ. ಮೊದಲ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಕೊಡುವುದಿಲ್ಲ. ಜೋಕ್ಸಾಗಿ ತಿಳಿ!" ಎಂದು ಬೆದರಿಸಿದರು.

ಪತ್ರಿಕೆಗಳನ್ನೆಲ್ಲ ಹಂಚಿದ ಮೇಲೆ, ಎಲ್ಲರನ್ನೂ ಒಟ್ಟು ಸಂಬೋಧಿಸುತ್ತ "ಈ ಬಾರಿ ಪರೀಕ್ಷೆಯ ಉತ್ತರಗಳು ಬಹಳ ಶೋಚನೀಯವಾಗಿವೆ. ನಾನೇ ಪಾಠ ಹೇಳಿಯೂ ಕೇವಲ ನಲವತ್ತೇ 'ಪಾಸು' ಎಂದರೆ ನಿಮಗೆ. ಮೇಲಾಗಿ ನನಗೆ ಎಷ್ಟು ಹೀನಾಯವೆಂದು ನೀವೇ ಯೋಚಿಸಿಕೊಳ್ಳಿರಿ. ಇನ್ನು ಯಾರಾದರೂ ಪಾಠ ಹೇಳಿದರೆ ಇನ್ನೇನು ಗತಿಯೋ ಕಾಣೆ. ನೀವು ಬಹಳ ಶ್ರಮಪಡಬೇಕು. ನಾನು ಶೋಧಿಸುವಂತೆ ಇಂಗ್ಲಿಷಿನ ಮರ್ಮವನ್ನೆಲ್ಲ ತಿಳಿಯಬೇಕು. ಇಲ್ಲದಿದ್ದರೆ ನೀವು 'ಪುರುಷಾರು' ಹತ್ತಲಾರಿರಿ. ಭಾಷೆಯು ಒಂದೆ ಮನೋಹರವಾದುದು. ಶ್ರೇಷ್ಠವಾದುದು. ಜೆಲೆಯುಳ್ಳದ್ದು. ಆದರೆ ಕೊಂಚ ತೊಡಕಾದದ್ದು. ಅದನ್ನು ಸರಿಯಾಗಿ ಅಧ್ಯಯನ ಮಾಡಿದರೆ ಕರತಲಾಮಲಕವಾಗುತ್ತದೆ. ನನ್ನ ಪಾಂಡಿತ್ಯದ ಗುಟ್ಟೂ ಅಷ್ಟೆ. ನೀವು ಕಷ್ಟಪಟ್ಟರೆ ನನ್ನ ಹಾಗೆಯೇ ಸೊಗಸಾದ ಭಾಷೆಯನ್ನು ಬರೆಯಲು ಸಾಧ್ಯವಾಗುತ್ತದೆ. ಇಂಗ್ಲಿಷಿನ ಜ್ಞಾನ ಸರಿಯಾಗಿ ಇಲ್ಲದೆ ನೀವು ಪುನಂಚಕ್ಕೆಳವರೆ ನಿಮಗೆ ಮೂರು ಕಾಸಿನ ಬೆಲೆ ಸಿಕ್ಕುವುದಿಲ್ಲ. ಪರ-

ಕಾರಿ ಕೆಲಸಕ್ಕೆ ಸೊನ್ನೆ. ಸದ್ಯನಲ್ಲಿ S. S. L. C. ಯನ್ನೇ ನೀವು ಪಾಸುಮಾಡಲಾರಿರಿ. ಅಷ್ಟೇಕೆ? 'ಆಯ್ಕೆ' ಪರೀಕ್ಷೆಯು ಇನ್ನೂ ಕಷ್ಟವಾಗಿರುತ್ತದೆ. ಅವಕ್ಕೆ ತಯಾರಾಗಿರಿ. ಆದರಲ್ಲೇನು ವಯೆ ತೋರಿಸುವುದಿಲ್ಲ. ಸ್ಪಷ್ಟವಾಗಿ ತಿಳಿಯಿರಿ!" ಎಂದು ಪೂರ್ತಿ ಮಾಡಿದರು.

ರಾಯರು ತರಗತಿಯಿಂದ ಹೋದ ಮೇಲೆ, ಹುಡುಗರಲ್ಲಿ ಬಹಳ 'ಗುಜಗುಜ'ಕ್ಕೆ ಮೊದಲಾಯಿತು. ಪದ್ಮನಾಭನ ಸುತ್ತ ಕೆಲವು ಸಣ್ಣ ಹುಡುಗರು ಮಾತನಾಡಿಕೊಳ್ಳುತ್ತಿದ್ದರು: "ಯಾವ ಬಾರಿ ನಮ್ಮ ಉತ್ತರಗಳು ದೋಜನೀಯವಾಗಿರಲಿಲ್ಲ? ನಾಲ್ಕನೆಯ ಫಾರಮ್ಮಿನಿಂದಲೂ ಹೀಗೆಯೇ ಅನ್ನುತ್ತಿದ್ದಾರೆ!"

"ನಮಗೆ ಈ ಗ್ರಹಚಾರ ತಪ್ಪಬೇಕಾದರೆ ಈ ಪರೀಕ್ಷೆ ಇರಬಾರದು; ಇಲ್ಲವೆ ಈ ಹಾಳು ಇಂಗ್ಲಿಷನ್ನು ತೆಗೆದುಹಾಕಬೇಕು!"

"ಇಂಗ್ಲಿಷನ್ನು ತೆಗೆದುಹಾಕುವುದೇ ಸರಿಕಣೋ! ಅದೇನು ನಮ್ಮ ಭಾಷೆಯಲ್ಲ. ಇದೆಲ್ಲಿ ಎಡಬಡಂಗಿ ನಮಗೆ!"

"ಒಂದು ವೇಳೆ ಮೇಷ್ಟ್ರನ್ನೇ ತೆಗೆದುಹಾಕಿದರೆ?" ಇತರರು "ಹುಶ್! ಹುಶ್!" ಎಂದು ಬಾಯಮೇಲೆ ಬೆರಳನ್ನಿಟ್ಟುಕೊಂಡರು

"ಇವರು ಬಹಳ ಗೋಳು ಹುಯ್ದುಕೊಳ್ಳುತ್ತಾರೆ. ಇವರನ್ನು ತೃಪ್ತಿಪಡಿಸುವುದು ಬ್ರಹ್ಮನ ಹಣೆಯಲ್ಲೇ ಬರೆದಿಲ್ಲ!"

"ಎಲೇ, ಬ್ರಹ್ಮನಿಗೆ ಏನು ಗೊತ್ತೋ—ಇಂಗ್ಲೀಷು? ಅವನು ನಮ್ಮ ದೇವರಲ್ಲವೆ—ಕನ್ನಡದವ?"

"ಆಗಲಿ, ಆ ಇಂಗ್ಲಿಷ್ ಹುಟ್ಟಿಸಿದವನಿಂದಲೇ ಸಾಧ್ಯವಿಲ್ಲ ಅನ್ನು!"

"ಪಾಪ! ಅವನೂ ಬಡಪಾಯಿ ಆಗಿರಬೇಕು. ಈ ಫಜೀತಿ ಆಗ ಇದ್ದಿರಲಾರದು!"

"ಹೋಗಲಿ ಬಿಡು. ನಾವೇನು..... ...ಯಾವೋನೋ ಅವನು ಕವಿ?—ಷೇಕ್ಸಪಿಯರ್ ಆಗಬೇಕಾಗಿಲ್ಲ; ಪಾಸಾದರೆ ಸಾಕು ಸದ್ಯ!"

"ಆದೂ ಗಂಡಾಂತರವೆ—ಈ ಮೇಷ್ಟರು ಪರೀಕ್ಷಕರಾದರೆ."

"ಈ ಬಾರಿ ಆಯ್ಕೆ ಪರೀಕ್ಷೆಯಲ್ಲಿ ಎಷ್ಟು ಜನ ಹೇಗೋ ಲಗಾಟಿ"

"ಲೋ, ಪದ್ಮನಾಭ, ನೀನಾದರೂ ಗೋತಾ ಹೊಡೀಬೇಡ ಕಣೋ, ಮೇಷ್ಟರ ಹೆಸರನ್ನಿಟ್ಟುಕೊಂಡಿದ್ದೀಯೆ.. ಅವರಿಗೆ ಅವಮಾನ ಆಗುತ್ತದೆ!"

"ಚೆನ್ನಾಯಿತು ಕಣೋ! ನನ್ನ ಹೆಸರನ್ನು ನಾನಿಟ್ಟುಕೊಂಡೆನೆ? ನಮ್ಮ ಅಪ್ಪ ಅಮ್ಮ ಇಟ್ಟರು. ಅದರಲ್ಲಿ ನನ್ನದೇನು ತಪ್ಪು?"

"ಹೇಗಾದರೂ ಆಗಲಿ. ಒಳ್ಳೆ ಇಂಗ್ಲಿಷ್ ಬರೆದು ಪಾಸು ಮಾಡೋ."

"ಬಿಡೋ, ಬಿಡೋ. ನಾನೂ ಎಂ. ಎ., ಬಿ. ಟಿ. ಮಾಡಿದರೆ ಅವರ ಅಪ್ಪನ ಹಾಗೆ ಇಂಗ್ಲಿಷ್ ಬರಿತೀನಿ."

"ಓಹೋ, ಅವರ ಅಪ್ಪನ ಹಾಗೋ? ನಿಜ ನಿಜ. ಇರಬಹುದು. ಅವರ ಅಪ್ಪ ಏನು ಗೊತ್ತೊ? ಜಾನುಫೋಗರಂತೆ. 'L. S. Plucked.'"

ಇಷ್ಟು ಹೊತ್ತಿಗೆ ಲೆಕ್ಕದ ಉಪಾಧ್ಯಾಯರು ತರಗತಿಗೆ ಕಾಲಿಟ್ಟರು. ಮಾತು ನಿಂತುಹೋಯಿತು.

× × × ×

ಆಯ್ಕೆ ಪರೀಕ್ಷೆಯು ಬಂದಿತು. ರಾಯರು ಇಂಗ್ಲಿಷ್ ಎರಡನೆಯ ಪ್ರಶ್ನಪತ್ರಿಕೆಯನ್ನು ತಯಾರಿಸಿದರು. ಪಠ್ಯಪುಸ್ತಕದ ಇತರ ಪ್ರಶ್ನೆಗಳೊಂದಿಗೆ ಹುಡುಗರು, ಟೆನಿಸನ್ ಕವಿಯ "Marte-de-Arthur" ಕವಿತೆಯಲ್ಲಿ ಸರ್ ಬೆಡೀವಿಯರನು ಆರ್ಥರನನ್ನು ಬೀಳ್ಕೊಳ್ಳುವ ಸಂದರ್ಭದ ಭಾಗದ ತಾತ್ಪರ್ಯವನ್ನೂ, ಹ್ಯಾಸಲಿಟ್‌ನ "Indian Juggler"ನ ಭಾವಾರ್ಥವನ್ನೂ ಮತ್ತು 'ಇಂಗ್ಲಿಷ್ ಭಾಷೆಯ ಪ್ರಾಮುಖ್ಯತೆ' ವಿಷಯದಲ್ಲಿ ಪ್ರಬಂಧವನ್ನೂ ಬರೆಯಬೇಕಾಗಿದ್ದಿತು.

ಪ್ರಶ್ನಪತ್ರಿಕೆಯನ್ನು ಹಂಚಿದ ಮೇಲೆ ರಾಯರು ತಮ್ಮ ಗಾಂಭೀರ್ಯದ ಠೀವಿಯಿಂದ ಶಾಲೆಯ ಕೋಣೆಗಳಲ್ಲೆಲ್ಲ ಓಡಾಡಿದರು. ಜೋಲುಮುಖಗಳನ್ನು ಕಂಡು ಅವರ ಮುಖದಲ್ಲಿ ವ್ಯಂಗ್ಯ ನಗೆಯು ಮೂಡಿತು. ನೋಡಿದವರಿಗೆ ಅವರು ಆಗ ತಾನೆ ದೊಡ್ಡ ವಿಜಯವನ್ನು ಸಂಪಾದಿಸಿದವರಂತೆ ಕಾಣುತ್ತಿದ್ದರು.

ಇತರ ಉಪಾಧ್ಯಾಯರೂ ಪತ್ರಿಕೆಯನ್ನು ಚರ್ಚಿಸುತ್ತಿದ್ದರು. ಯುವಕರಾದ ಮೂರ್ತಿಯವರು ಮುದುಕರಾದ ಸುಬ್ಬಣ್ಣನವರನ್ನು "ಏನ್ರಿ, ಇದು ಈ ಹುಡುಗರಿಗೆ ಕೊಂಚ ಕಷ್ಟವಲ್ಲವೆ?" ಎಂದು ಕೇಳಿದರು. ಅದಕ್ಕೆ ಸುಬ್ಬಣ್ಣನವರು "ಅಯ್ಯೋ, ಇದೇನು ಕಷ್ಟ ಅಂತ ತಿಳಿದುಕೊಂಡ್ರಿ? ನಾವು ಪಾಸು ಮಾಡಿದ ವರ್ಷ ನೋಡಬೇಕಾಗಿತ್ತು. ಅಬ್ಬಬ್ಬಾ!" ಎಂದರು. ಮೂರ್ತಿಯವರು "ನಿಮ್ಮ ಮಾತನ್ನು ಕೇಳಿದರೆ ಅತ್ತೆ-ಸೊಸೆ ಸಾಮ್ಯ ನೆನಪಿಗೆ ಬರುತ್ತದೆ" ಎಂದು ನಕ್ಕರು.

"ಹಾಗಲ್ಲ, ಪ್ರಶ್ನೆ ಕಷ್ಟವಾಗಿದ್ದಪ್ಪೂ ಹುಡುಗರ ಒಣ್ಣ ಇನ್ನಷ್ಟು ಜೆನ್ನಾಗಿ ಗೊತ್ತಾಗುತ್ತದೆ. ಹಿಂಡಿದಪ್ಪೂ ಹಣ್ಣಿನಲ್ಲಿ ರಸ ಸೋರುತ್ತದೆ."

"ಅದು ಒಳ್ಳೇ ತೀರ್ಮಾನ, ಸಾಮ್ಯ. ನನಗೆ ಆನ್ಸಿಸುವುದು ಅವರು ಇನ್ನೂ ಹಣ್ಣಿಗೆ ಬಂದಿಲ್ಲ ಅಂತ. ಅವರು ಇನ್ನೂ ಪೊಗ್ಗುಗಳು. ಅವು ಅರಳುವುದು ಎಳಬೆಳಕು, ಸುಳಗಾಳಿ, ಮಳೆಯ ಪನಿಗಳು ಸೋಕಿದರೆ—ಬಾಣಲೆಯಲ್ಲಿ ಹುರಿದರಲ್ಲ!"

"ನಾವು ತಯಾರಾದುದು ನಾನು ಹೇಳಿದ ರೀತಿಯಲ್ಲೆ. ನನ್ನ ತಿಳಿವಳಿಕೆಯ ಮಟ್ಟವನ್ನು ನೋಡಿ. ಈಗ 'ಸುಲಭ ಸುಲಭ' ಅಂತ ದಿನೇ ದಿನೇ ಈ ಮಟ್ಟ ಇಳಿಯುತ್ತಿದೆ. ನನಗೂ ಈಗಿನವರಿಗೂ ಎಲ್ಲಿಂದ ಎಲ್ಲಿಗೆ? ಕಾಲ ಕೆಟ್ಟುಹೋಯಿತು."

"ನಮ್ಮ ಅಭಿಪ್ರಾಯಗಳು ವಿರುದ್ಧವಾಗಿವೆ" ಎಂದು ಮೂರ್ತಿಯವರು ಸುಮ್ಮಗಾದರು.

ಗಂಟೆಯಾದ ಮೇಲೆ ಪೆಚ್ಚುಮುಖ ಹಾಕಿಕೊಂಡ ಹುಡುಗುಂಪು ಗೊಣಗುಟ್ಟುತ್ತಿದ್ದಿತು.

"ನೀರಿಲ್ಲದೆ ಆಗಿಹೋಯಿತು ನನಗೆ—ಹಜಾಮತ್ತು" ಎಂದ ಪದ್ಮನಾಭ.

"ನನಗೇನೂ ತಿಳಿಯಲೇ ಇಲ್ಲವಪ್ಪ!"

"ಇದೇನು ನಮ್ಮನ್ನು ಪರೀಕ್ಷಿಸುವುದೋ, ನಮ್ಮ ಪೆ ಏನಾದರೂ ಸೇಡು ತೀರಿಸಿಕೊಳ್ಳುವುದೋ ಕಾಣೆ!"

"ಮೇಷ್ಟರು ಬರೀ ಅವರ ಬುದ್ಧಿವಂತಿಕೆಯನ್ನು ತೋರಿಕೊಳ್ಳುವುದಕ್ಕೆ ತಯಾರಿಸಿದ ಪ್ರಶ್ನಪತ್ರಿಕೆ—ಇದು!"

" ಅಜೀರ್ಣವಾಗುವಷ್ಟು ಅವರು ಬುದ್ಧಿವಂತರು, ವಿದ್ವಾಂಸರು ಎನ್ನುವುದು ನಮಗೆಲ್ಲರಿಗೂ ಗೊತ್ತೇ ಇದೆಯಲ್ಲ? ಒಪ್ಪಿಕೊಂಡೂ ಬಿಟ್ಟಿದ್ದೇವೆ!"

" ಇಲ್ಲ ಅವರಿಗೆ ಕೊಲೆಯಲ್ಲಿ ಬಹಳ ಆನಂದ!"

" ಹಾಗಾದರೆ ಈ ಯಾತನೆಯನ್ನು ಕೊಡುವ ಬದಲು ಒಂದು ಚೂರಿ ತೆಗೆದುಕೊಂಡು ನಮ್ಮ ಎದೆಗೆ ತಿವಿದು ಬಿಡೋದು ತಾನೇ?"

" ಹಾಗೆ ಮಾಡಿದರೆ ಪೋಲೀಸಿನವರು ಬಿಡುತ್ತಾರೆಯೆ?"

ಕಡೆಗೆ ಪದ್ಮನಾಭನು " ಸರಿ, ಇನ್ನೊಂದು ವರ್ಷ ಕಾಯ್ದುಕೊಂಡಿದೆ" ಎಂದ. ಎಲ್ಲರೂ " ಮುಂದಾದರೂ ಒಳ್ಳೆಯ ಅದೃಷ್ಟವನ್ನೇ ಹೇಗೋ!" ಎಂದುಕೊಂಡರು.

× × × ×

ಸಂಜೆಯಲ್ಲಿ ಮೂರ್ತಿಯವರು ಉತ್ತರ ಪುಸ್ತಕಗಳನ್ನೆಲ್ಲವನ್ನೂ ತೆಗೆದುಕೊಂಡು ರಾಯರ ಕೋಣೆಗೆ ಬಂದು " ರಾಯರೆ, ಇವುಗಳನ್ನು ಎಲ್ಲಿ ಇಡಲಿ?" ಎಂದು ಕೇಳಿದರು. ರಾಯರು ಉತ್ತರ ಪುಸ್ತಕವೊಂದರಲ್ಲಿ ಏನನ್ನೋ ಒರೆಯುತ್ತಿದ್ದವರು ಮಾತನಾಡದೆ, ಅವರ ಕುರ್ಚಿಯ ಹಿಂದಿದ್ದ ಬೀರುವನ್ನು ತೋರಿಸಿದರು. ಮೂರ್ತಿಯವರು ಪುಸ್ತಕಗಳನ್ನಿಟ್ಟು ಹಿಂದಿರುಗುತ್ತ " ರಾಯರು ಏನೋ ಬಹಳ ಕಷ್ಟದ ಕೆಲಸದಲ್ಲಿ ಮುಳುಗಿದಂತಿದೆ" ಎಂದರು. ರಾಯರು ಎಚ್ಚೆತ್ತು " ಛ! ಅದೇನು ಕಷ್ಟ. ಸುಮ್ಮನೆ ಈ ಪತ್ರಿಕೆಗೊಂದು ಮಾದರಿ ಉತ್ತರವನ್ನು ಬರೆಯುತ್ತಿದ್ದೆ" ಎಂದರು. ಮೂರ್ತಿಯವರು ಈ ಅವಕಾಶವನ್ನು ಉಪಯೋಗಿಸಿಕೊಂಡು " ಇದರಲ್ಲಿ ಯಾವ ಹುಡುಗನೂ ಚೆನ್ನಾಗಿ ಮಾಡಿದ ಹಾಗೆ ಇಲ್ಲ. ಎಲ್ಲರೂ ಬರೆಯುವಾಗ ಸುಂಕಾಗಿದ್ದರು. ಹೊರಗೆ ಹೋದಾಗ ನೋಡಿದ್ದು ಹೀಗೆ" ಎಂದು ತಿಳಿಸಿದರು. ಅವಕ್ಕೆ ರಾಯರು ' ಹ್ಹ! ಹ್ಹ! ಹ್ಹ!' ಎಂದು ನಕ್ಕು " ನಮ್ಮ ಶಾಲೆಯ ಮಟ್ಟ—ಅದರಲ್ಲೂ ಇಂಗ್ಲಿಷಿನಲ್ಲಿ—ಇತರ ಶಾಲೆಗಳದರಂತೆ ಹಲ್ಲಾ ಅಲ್ಲ; ಇದು ಎಲ್ಲರಿಗೂ ಗೊತ್ತಾಗಬೇಕು!" ಎಂದರು.

" ಅವರೆ ಹುಡುಗರು ಪಾಪ!"

" ಅಯ್ಯೋ, ಹಾಗಂದರೇನು! ನಾವೇನು ಕಡಿಮೆ ತಯಾರಿ ಕೊಟ್ಟಿದ್ದೇನೆ—ಅವರಿಗೆ? ಅದಕ್ಕೆ ತಕ್ಕಂತೆ ಪರೀಕ್ಷೆ. ಜಳ್ಳೆಲ್ಲ ಜಾರಿ ಹೋಗಲಿ. ಆವರಿಂದ ಮಾನ ಬರುವುದಿಲ್ಲ. ಗಟ್ಟಿಗರನ್ನು ಮಾತ್ರ ದೊಡ್ಡ ಪರೀಕ್ಷೆಗೆ ಆಯ್ದುಕೊಳ್ಳುವುದು. ಆಗ ಒಳ್ಳೆಯ ರೇಂಕಾದ ಸಾಸು ಬರುತ್ತದೆ!" ಎಂದು ಸುಮ್ಮನಾಗಿ, ಮತ್ತೆ ತಮ್ಮ ಬರವಣಿಗೆಯ ಕಡೆಗೆ ತಿರುಗಿದರು. ಮೂರ್ತಿಯವರು ತಲೆಯನ್ನಲ್ಲಾಡಿಸುತ್ತ ಹೊರಕ್ಕೆ ಬಂದರು.

ರಾಯರು ಬರವಣಿಗೆಯನ್ನು ಮುಗಿಸಿ ಪುಸ್ತಕವನ್ನು ಬೀರುವಿನಲ್ಲಿಟ್ಟು ಮನೆಗೆ ಬಂದರು.

× × × ×

ಪರೀಕ್ಷೆಯು ಮುಗಿಯಿತು. ಆ ದಿನ ಉತ್ತರದ ಪುಸ್ತಕಗಳನ್ನು ಹಂಚಿಕೊಳ್ಳುವುದಕ್ಕಾಗಿ ಇಂಗ್ಲಿಷಿಗೆ ಮುಖ್ಯ ಪರೀಕ್ಷಕರಾದ ರಾಯರು ಸಹಾಯೋಪಾಧ್ಯಾಯರನ್ನು ಬರಹೇಳಿದ್ದರು. ಗೊತ್ತಾದ ಹೊತ್ತಿಗೆ ಸುಂಟೆಯೆ ರಾಯರು ತಮ್ಮ ಕೋಣೆಯನ್ನು ಪ್ರವೇಶಿಸಿದಾಗ, ಬೀರುವಿನಲ್ಲಿ ಇಡಲ್ಪಟ್ಟಿದ್ದ ಕೆಲವು ಉತ್ತರ ಪುಸ್ತಕಗಳು ಅಲ್ಲಲ್ಲಿ ನೆಲದ ಮೇಲೆ, ಮೂಲೆಗಳಲ್ಲಿ ಬಿದ್ದಿದ್ದುದನ್ನು ಕಂಡರು. ಈ ಬಗೆಯ ಪದಾರ್ಥ ಪಲ್ಲಟವು ರಾಯರಿಗೇನು ಹೊಸ ಅನುಭವವಲ್ಲವಾದುದರಿಂದ ಅವರು " ಈ ಹಾಳು ಇಲಿಗಳ ಹಾವಳಿಯನ್ನು ತಡೆಯುವುದಕ್ಕೆ ಆಗದು" ಎಂದುಕೊಂಡು, ಬಗ್ಗಿ ಅಲ್ಲಲ್ಲಿ ಬಿದ್ದಿದ್ದ ಪುಸ್ತಕಗಳನ್ನು ಬೇಗ ಬೇಗ ಆರಿಸಿಕೊಂಡು, ಜತೆಗೂಡಿಸಲು ನೋಡಲು ಮಾಡಿದರು. ಈ ಕೆಲಸವು ಮುಗಿಯುವ ಹೊತ್ತಿಗೆ ಸರಿಯಾಗಿ ಇತರ ಉಪಾಧ್ಯಾಯರು ಬಂದರು. ಓಡನೆಯೇ ಹಂಚಿಕೆಗೆ ಮೊದಲಾಯಿತು.

ರಾಯರು ತಮ್ಮ 'ಎ' ಭಾಗದ ಐವತ್ತು ಪುಸ್ತಕಗಳನ್ನೂ, 'ಬಿ' ಭಾಗದ ಐವತ್ತನ್ನೂ ಸುಬ್ಬಣ್ಣನವರಿಗೆ ಒಟ್ಟಿಗೆ ಎಣಿಸಿಕೊಟ್ಟರು. 'ಸಿ' ಮತ್ತು 'ಡಿ' ಭಾಗಗಳು ಮೂರ್ತಿಯವರ ಪಾಲಿಗೆ ಬಂದುವು. ರಾಯರು 'ಇ' ಮತ್ತು 'ಎಫ್'ಗಳನ್ನು ತೆಗೆದುಕೊಂಡರು. ಅನಂತರ ಉತ್ತರಗಳಿಗೆ ಬೆಲೆ ಹಚ್ಚುವ ವಿಷಯವು ಚರ್ಚೆಗೆ ಬಂದಿತು. ಮೂರ್ತಿಯವರು ಹುಡುಗರ ಪರವಾಗಿ ವಾದಿಸುತ್ತ, ಈ ಬಾರಿ ಕಠಿಣವಾಗಿರಬಾರದೆಂದು ಹೇಳಿದರು. ನೊವ-ಮೊದಲು ರಾಯರೂ ಸಬ್ಬಣ್ಣನವರೂ ಮೂರ್ತಿಯವರನ್ನು ವಿರೋಧಿಸಿದರು. ಆದರೆ ಮೂರ್ತಿಯವರು ಪಟ್ಟನ್ನು ಬಿಡಲಿಲ್ಲ. ಅವರು ಕಡೆಗೆ " ಇಂತಹ ಪ್ರಶ್ನೆಪತ್ರಿಕೆಯಲ್ಲಿ ನಾನು ಸಹ ಜಿಪ್ಪಾಗಿ ಮಾಡುವೆನೆಂದು ಹೇಳಲಾರೆ; ಹೀಗಿರುವಲ್ಲಿ ಈ ಹುಡುಗರ ಪಾಡೇನು?" ಎಂದರು. ಸುಬ್ಬಣ್ಣನವರು ನಕ್ಕು " ಅದೇನು ಸಾಮಾನ್ಯವಲ್ಲ, ರಾಯರು ತಯಾರಿಸಿದುದು!" ಎಂದರು. ರಾಯರೂ ನಸುನಕ್ಕು " ಹೋಗಲಿ ಬಿಡಿ ಸುಬ್ಬಣ್ಣನವರೆ, ಮೂರ್ತಿಯವರೇನೋ ನೋಲುವ ಹಾಗೆ ಇಲ್ಲ; ಶುಮಾರಾಗಿಯೆ ಬೆಲೆ ಹಚ್ಚಿಬಿಡೋಣ" ಎಂದರು.

ಸಮೋಪ್ಯೋಗಿಗಳು ಹೋದ ಮೇಲೆ, ರಾಯರು ತಮ್ಮ ಕಟ್ಟನ್ನು ತೆಗೆಮಕೊಂಡು ಹೊರಡುತ್ತಿದ್ದವರು ಹಾಗೆಯೆ ಯೋಚಿಸಿ ಹಿಂದಕ್ಕೆ ಹೋಗುತ್ತ " ಅರೆ, ಆ ಮಾದರಿ ಉತ್ತರ ಪುಸ್ತಕವನ್ನೇ ತೆಗೆದುಕೊಳ್ಳಲಿಲ್ಲನಲ್ಲ!" ಎಂದುಕೊಂಡು ಬೀರುವಿಗೆ ಕೈ ಹಾಕಿದರು. ಆ ಪುಸ್ತಕವು ಅಲ್ಲಿರಲಿಲ್ಲ. ರಾಯರು ಅಲ್ಲಿ, ಇಲ್ಲಿ, ಎಲ್ಲೆಲ್ಲಿಯೂ ನೋಡಿದರು. ಅದು ಸಿಕ್ಕಲೇ ಇಲ್ಲ. ಕಡೆಗೆ ಬೀರುವನ್ನು ಎಳೆದು ಸರಿಸಿದರು. ಆದರ ಹಿಂದೆ ಉತ್ತರ ಪುಸ್ತಕವೊಂದರ ಸಣ್ಣ ಸಣ್ಣ ಚೂರುಗಳು ಮಾತ್ರ ಕಾಣುತ್ತಿದ್ದುವು. ರಾಯರು ರೇಗಿ " ಛೇ, ಅಷ್ಟು ಗಂಟೆಗಳ ಶ್ರಮವೆಲ್ಲ ಈ ಸುಡುಗಾಡು ಇಲಿಗಳ ಪಾಲಾಯಿತಲ್ಲ! ಆ ಪುರಾಣವನ್ನೆಲ್ಲ ಇನ್ನೊಂದು ಬಾರಿ ಬರೆಯಬೇಕಾಯಿತು. ಒಳ್ಳೇ ಗ್ರಹಚಾರ!" ಎಂದು ನಿಟ್ಟುಸಿರನ್ನು ಬಿಟ್ಟು, ಮೇಜಿನ ಮೇಲೆ ಇಟ್ಟಿದ್ದ ಕಟ್ಟನ್ನು ಮತ್ತೆ ತೆಗೆಮಕೊಂಡು ಮನೆಗೆ ಹೊರಟರು.

× × × ×

ಹತ್ತು ದಿನದ ಮೇಲೆ ಪರೀಕ್ಷಕರು ರಾಯರ ಕೋಣೆಯಲ್ಲಿ ಮತ್ತೆ ಸೇರಿದ್ದರು. ಪುಸ್ತಕಗಳೆಲ್ಲ ಬೆಲೆ ಕಟ್ಟಲ್ಪಟ್ಟಿದ್ದುವು. ರಾಯರು ಮಾತನಾಡುತ್ತ " ಸುಬ್ಬಣ್ಣನವರೆ, ನಿಮ್ಮ 'ಇ' ಭಾಗದ ಹುಡುಗರು ಏನೇನೂ ಪ್ರಯೋಜನವಿಲ್ಲ. ನಾನು ಎಷ್ಟೇ 'ಸಲಭ'ವಾಗಿ ನೋಡಿದರೂ ರೇಕಡಾ ನಲವತ್ತು ಸಹ ಪಾಸಾಗಿಲ್ಲ. ಮೂರ್ತಿಯವರ 'ಎಫ್' ಭಾಗವೂ ಇದಕ್ಕಿಂತ ಬಹಳ ಉತ್ತಮವಾಗಿ ಏನಿಲ್ಲ. ರೇಕಡಾ ಐದು

ಹೊಸ ಪುಸ್ತಕ!

## ಪ್ರಸವ ವಿಜ್ಞಾನ

ಬರೆದವರು: ಡಾ. ದೊಡ್ಡೇರಿ ವೆಂಕಟಗಿರಿರಾವ್

ಗರ್ಭಧಾರಣೆ, ಗರ್ಭಲಕ್ಷಣ, ಗರ್ಭಿಣಿಯ ದಿನಚರಿ, ಗರ್ಭಿಣೀ ರೋಗಗಳೂ ಅವುಗಳ ಚಿಕಿತ್ಸೆಗಳೂ, ಸಹಜ ಪ್ರಸವ ನಿರ್ಣಯರೀತಿ, ಅಕ್ರಮ ಮತ್ತು ಸಂಕೀರ್ಣ ಪ್ರಸವ ರೀತಿಗಳು, ಪ್ರಾಣಾಂತೀ ರೋಗಗಳು ಅವುಗಳ ಚಿಕಿತ್ಸೆಗಳು, ಶಿಶುಪ್ರಾಣಾಂತಿಯರ ರಕ್ಷಣ ಮೊದಲಾ. ದುವನ್ನು ಸರಳವಾಗಿಯೂ ಸಚಿತ್ರವಾಗಿಯೂ ವಿವರಿಸುವ ಪುಸ್ತಕ. ಸುಮಾರು ೬೦ ಚಿತ್ರಗಳಿವೆ. ವ್ಹಿ. ಪಿ. ಕಳಿಸುವದಿಲ್ಲ.

ರೂ. ೨—೪—೦ ಯನ್ನು ಮನಿಯಾರ್ಡರು ಮಾಡಿರಿ.

ಮಾರಾಟದ ಪೂರ್ಣಾಧಿಕಾರಿಗಳು

**ಮಾಡರ್ನ್ ಔಷಧಾಲಯ,**

ದೊಡ್ಡಬಳ್ಳಾಪುರ, (ಬೆಂಗಳೂರು).


ಮಾತ್ರ ಹೆಚ್ಚು!" ಎನ್ನುತ್ತಿರುವಲ್ಲಿ ಮೂರ್ತಿಯವರು ನಡುವೆ ಬಾಯಿ ಹಾಕಿ "ಪ್ರಶ್ನಪತ್ರಿಕೆಯು ಬಹಳ ಕಠಿಣವಾಗಿದ್ದಿತು!" ಎಂದರು. ಸುಬ್ಬಣ್ಣನವರು "ನಮ್ಮ ಭಾಗದ ಹುಡುಗರೆಲ್ಲ ಬರಿ ಮಡ್ಡಿಗಳು ರಾಯರೆ. ತಮ್ಮ 'ಎ' ಮತ್ತು 'ಬಿ' ಭಾಗಗಳ ಹುಡುಗರಂತೆ ಅಲ್ಲ!" ಎಂದರು. ರಾಯರು "ಛೇ, ಸಾಗೆಂದರೇನು" ಎಂದು ನಸುನಕ್ಕರು. ಮೂರ್ತಿಯವರು "ಈ ಬಾರಿಯ ಪ್ರಶ್ನಪತ್ರಿಕೆ ಬಹಳ ಕಠಿಣ" ಎಂದು ರಾಗ ತೆಗೆದರು. ರಾಯರು ಹುಬ್ಬನ್ನು ಗಂಟಿಕ್ಕಿ "ಅದೂ ಒಂದು ಕಾರಣ ಅಂತ ಇಟ್ಟುಕೊಂಡರೂ. ಇದು ನಾವೆಲ್ಲ ಮಟ್ಟವನ್ನೂ ಸ್ವಲ್ಪ-ಮಟ್ಟಿಗೆ ಸೂಚಿಸದೆ ಹೋಗುವುದಿಲ್ಲ. ಇವನ್ನು ಸ್ವಲ್ಪ ಇನ್ನೂ ಉತ್ತಮಗೊಳಿಸಬೇಕು!" ಎಂದು ಹೇಳಿದರು. ಮೂರ್ತಿಯವರು ಮತ್ತೇನನ್ನೋ ಹೇಳಲು ಹೊರಟರು; ಆದರೆ ರಾಯರು ಅವರನ್ನು ತಡೆದು "ಹೋಗಲಿ ಬಿಡಿ. ಸ್ವಲ್ಪ ತಾಳಿ. ಸುಬ್ಬಣ್ಣನವರೆ ನಿಮ್ಮ 'ಎ' ಮತ್ತು 'ಬಿ' ಭಾಗಗಳ ಹುಡುಗರು ಹೇಗೆ ಮಾಡಿದ್ದಾರೆ?" ಎಂದು ಪ್ರಶ್ನಿಸಿದರು. ಹಳಬರಾದ ಸುಬ್ಬಣ್ಣನವರು, ಸಮಯೋಚಿತವಾಗಿ ತಮಗೆ ಅನುಕೂಲವಾಗುವಂತೆ ಹೊಗಳುವುದರಲ್ಲಿ ತೆಗಳುವುದರಲ್ಲಿ ಪ್ರವೀಣರಾದುದರಿಂದ "ರಾಯರೆ, ತಮ್ಮ ವಿದ್ಯಾರ್ಥಿಗಳನ್ನು ಕೇಳಬೇಕೆ? ಶೇಕಡಾ ಅರವತ್ತರ ಮೇಲೇ ಪಾಸಾಗಿದ್ದಾರೆ" ಎಂದು ಹಲ್ಲನ್ನು ಕಿರಿದರು. ನಿಜವಾಗಿ ರಾಯರಿಗೆ ಸಂತೋಷವಾಗಲೆಂದೇ ಸುಬ್ಬಣ್ಣನವರು ಹೀಗೆ ಮಾಡಿದ್ದರು. ಇವರ ಮಾತನ್ನು ಕೇಳಿಯೂ ಕೇಳದಂತೆ ರಾಯರು ಪೆಚ್ಚುಮೊಗದಿಂದ ಮೂರ್ತಿಯವರನ್ನು ನೋಡಿದರು. ಅನಂತರ "ಈ ಫಲಿತಾಂಶವನ್ನು ನೋಡಿದಿರಾ?" ಎಂದರು. ಈ ಗುಟ್ಟನ್ನೆಲ್ಲ ತಿಳಿದಿದ್ದ ಮೂರ್ತಿಯವರು ಇದಿರು ಮಾತನಾಡಲಾರದೆ ಸುಮ್ಮನೆ ತಲೆತಗ್ಗಿಸಿದರು. ಸುಬ್ಬಣ್ಣನವರು ಮಾತ್ರ "ತಮ್ಮ ಪಾಠಕ್ಕೂ ನಮ್ಮ ಪರಕ್ಕೂ ಎಲ್ಲಿಂದ ಎಲ್ಲಿಗೆ?" ಎಂದು ರಾಯರನ್ನು ಮತ್ತಷ್ಟು ಅಟ್ಟಕ್ಕೇರಿಸಿದರು. ಮತ್ತೆ ಸಾಮಾನ್ಯವಾಗಿ ಮಾತನಾಡುತ್ತ ಸುಬ್ಬಣ್ಣನವರು "ಇಂತಹ ಪಾಸ ಹೊರಕಿದ್ದರೂ ಈ ಗುಂಪಿನಲ್ಲಿಯೂ ಕೆಲವು ಆಗಸನ ಕುದುರೆಗಳು ಇಲ್ಲವೆಂದಲ್ಲ" ಎಂದು ನಕ್ಕು ರಾಯರ ಮುಖವನ್ನು ನೋಡಿದರು. ರಾಯರು ಕೊಂಚ ತಣ್ಣಗಾಗಿ ಮತ್ತೆ ಜೇತರಿಸಿಕೊಂಡು "ಅವು ಎಲ್ಲೆಲ್ಲಿಯೂ ಇದ್ದೇ ಇರುತ್ತವೆ" ಎಂದು ನಸುನಕ್ಕರು. ಸುಬ್ಬಣ್ಣನವರು ಒಂದು ಉತ್ತರದ ಪುಸ್ತಕವನ್ನು ಹುಡುಕುತ್ತ "ಇವರ ಪೈಕಿ ಒಬ್ಬನು ಮಹಾ ಬೃಹಸ್ಪತಿ. ಫೇಲಾಗುವುದು ಹಾಗಿರಲಿ, ತನ್ನ ಸಂಖ್ಯೆ, ಹೆಸರುಗಳನ್ನು ಬರೆಯುವುದನ್ನು ಸಹ ಮರೆತಿದ್ದಾನೆ. ಕಾಣದ ಸಂಖ್ಯೆಯಿಂದ ಊಹಿಸಿದರೆ ಮೂವತ್ತ ಒಂಬತ್ತು ಇರಬಹುದು" ಎಂದರು. ರಾಯರು "ಏನು, ಮೂವತ್ತ ಒಂಬತ್ತೆ? ಎಲ್ಲಿ ನೋಡೋಣ!" ಎಂದು ತಮ್ಮ ಪಟ್ಟಿಯೊಂದನ್ನು ತೆಗೆದು ಪರೀಕ್ಷಿಸಿ "ಓಹೋ, ಇವನು ಅದೇ ಪದ್ಮನಾಭ!" ಎಂದರು.

ಸುಬ್ಬಣ್ಣನವರು "ತಮ್ಮ ಹೆಸರಿನವನೆ! ಆ ಹೆಸರಿಗಾದರೂ ಸೂನ ತರಬಾರದಾಗಿದ್ದಿತೆ?" ಎಂದು ಆಕ್ಷೇಪಿಸಿದರು. ರಾಯರು "ಹೋದ ಸಾರಿ ಅವನಿಗೆ ನಾನೂ ಹಾಗೆಯೆ ಹೇಳಿದ್ದೆ. ಏನು ದಡ್ಡನೋ ಏನೋ. ಎಲ್ಲಿ ಕೊಡಿ ನೋಡೋಣ, ಅವನೇ ಅಂತ ಅವನ ಅಕ್ಷರದಿಂದಲೇ ಗೊತ್ತಾಗುತ್ತದೆ!" ಎನ್ನುತ್ತ ಕೈ ನೀಡಿದರು ಸುಬ್ಬಣ್ಣನವರೇ ಹುಡುಕಿ ತೆಗೆದ ಪುಸ್ತಕವೊಂದನ್ನು ರಾಯರ ಕೈಗೆ ಕೊಟ್ಟರು.

ಕೊಟ್ಟ ಪುಸ್ತಕವನ್ನು ರಾಯರು ಬಿಚ್ಚಿ ನೋಡುತ್ತಲೆ ಬೆಚ್ಚಿದರು! ಅದೇ ಅವರ ಮಾದರಿ ಉತ್ತರ! ಮಾದರಿ ಉತ್ತರಕ್ಕೆ ಬಂದಿದ್ದ ಅಂಕಗಳು ಮೂವತ್ತು! ಆಹಾ, ಆಗ ರಾಯರ ಮುಖವನ್ನು ನೋಡಬೇಕಾಗಿತ್ತು!

ನಿಜವಾಗಿ, ಪದ್ಮನಾಭನ ಉತ್ತರ ಇಲಿಗಳ ಸಾಲಾಗಿ ರಾಯರ ಮಾದರಿ ಉತ್ತರ ಇತರ ಪುಸ್ತಕಗಳೊಂದಿಗೆ ಬೆರೆದು ಹೋಗಿದ್ದಿತು.

ಫಲಿತಾಂಶ: ಮೂರು ದಿನಗಳ ಮೇಲೆ ನೋಟೀಸು ಬೋರ್ಡಿನಲ್ಲಿ ಈ ರೀತಿ ಪ್ರಕಟನೆ ಇದ್ದಿತು.

**"ಈ ವರ್ಷ ಆರನೆಯ 'ಫಾರಂ'ನ ಎಲ್ಲಾ ವಿದ್ಯಾರ್ಥಿಗಳಿಗೂ S. S. L. C. ಪರೀಕ್ಷೆಗೆ ಕಟ್ಟಲು ಅನುಮತಿ ಕೊಡಲ್ಪಟ್ಟಿದೆ.**

**ಪದ್ಮನಾಭರಾವ್,**

**ಮುಖ್ಯೋಪಾಧ್ಯಾಯ."**

ಇದನ್ನು ನೋಡಿದ ಹುಡುಗರ—ಅದರಲ್ಲಿಯೂ ಪದ್ಮನಾಭನ—ಆನಂದಕ್ಕೆ ಪಾರವೇ ಇಲ್ಲ. ಇತರರಿಗೂ 'ಇದೇನು, ರಾಯರು ಇಷ್ಟು ಮೃದುವಾದರಲ್ಲ!' ಎಂದು ಆಶ್ಚರ್ಯ. ಆದರೆ ಇದರ ಗುಟ್ಟು ಯಾರಿಗೂ ತಿಳಿಯದು. ರಾಯರೊಬ್ಬರಿಗೆ ಮಾತ್ರ ಗೊತ್ತು. . .


ನಮ್ಮ ಸೊಲ್ಲಾಪುರದ ಏಜಂಟರು

ಶ್ರೀ. ಎನ್ ಎಚ್. ದೇಶಪಾಂಡೆ

ಬ್ರೂಂಬ್ರೇವಾಡಾ, ದಕ್ಷಿಣಕಸಬಾ, ಶಖ



# ಕರ್ನಾಟಕದ ಚಳವಳಿಯಲ್ಲಿ ಧಾರವಾಡದ ಭಾಗ

(ಒಂದಿಷ್ಟು ಸ್ಪಷ್ಟೀಕರಣ)

*

ಶ್ರೀ ಮುದವೀಡು ಕೃಷ್ಣರಾಯರು, ಧಾರವಾಡ

ಕರ್ನಾಟಕದ ಕುಲಪುರೋಹಿತರಾದ **ಶ್ರೀಮಾನ್ ಆಲೂರ ವೆಂಕಟರಾಯರು** ಈ ವಿಷಯವಾಗಿ ಬರೆದಿರುವುದನ್ನು ನಾನು ಸೊನ್ನೆ ಬೆಂಗಳೂರಲ್ಲಿದ್ದಾಗ **ಜಯಂತಿಯ ನವಂಬರ್** ಸಂಚಿಕೆಯಲ್ಲಿ ಓದಿದೆನು. ಹೊಸ ಕರ್ನಾಟಕದ ಚಳವಳಿಯ ಜನಕರಾದ ಕೆಲವು ಜನರಲ್ಲಿ ಶ್ರೀಮಾನ್ ಆಲೂರವರೂ ಒಬ್ಬರಾಗಿರುವುದರಿಂದ, ಅವರು ಧಾರವಾಡದಲ್ಲಿ ನಡೆದ ಕಾರ್ಯಗಳನ್ನು ಸಂಕಲನಮಾಡಿ ಕನ್ನಡ ಜನತಾಂಗದ ಮುಂದೆ ಮುಂಡಿಸಲು ಮಾಡಿದ ಪ್ರಯತ್ನ ಪ್ರಶಂಸನೀಯವೇ ಆಗಿದೆ. ತಮಗೆ "ನೆನಪಾಗದೆ ಬಹಳ ಸಂಗತಿಗಳು ಉಳಿದಿರುವುದು ಸಹಜವಿದೆ" ಎಂದು ಅವರೇ ಹೇಳಿ "ಗೊತ್ತಿದ್ದವರು ಜಯಂತಿಯ ಸಂಪಾದಕರ ಕಡೆಗೆ ಕಳುಹಿಸಿ" ತಮ್ಮ ಬರೆಹಕ್ಕೆ 'ಪೂರ್ಣ ಸ್ವರೂಪವನ್ನು ಕೊಡಬೇಕು" ಎಂದು ಹಾರಯಿಸಿದ್ದಾರೆ. ಅವರ ಈ ಸೂಚನೆಯನ್ನೇ ಅನುಸರಿಸಿ ನಾನು ಈ ನಾಲ್ಕು ಸಾಲುಗಳನ್ನು ಬರೆದು, ಶ್ರೀಮಾನ್ ಆಲೂರವರ ಬರೆಹದಲ್ಲಿ ಈ ನನ್ನದನ್ನೂ ಕೂಡಿಸಿಕೊಂಡು ಸರಿಪಡಿಸಿಕೊಂಡು ಇಟ್ಟರೆ, ಮುಂದೆ ಕರ್ನಾಟಕ ಚರಿತ್ರೆಯನ್ನು ಬರೆಯುವವರಿಗೆ ಸಂಶೋಧನೆಯ ತೊಂದರೆ ತಪ್ಪಬಹುದೆಂಬ ಊಹೆಯಿಂದ ಇದನ್ನು ಬರೆಯುವ ಉಪಕ್ರಮ ಕೈಕೊಂಡಿದ್ದೇನೆ. ನನ್ನಂತಿಲ್ಲೂ ಪ್ರಮಾದಗಳಾಗಿರುವ ಸಂಭವವಿಲ್ಲವೆಂದಲ್ಲ ಹಾಗಿದ್ದಲ್ಲಿ ಪಚ್ಚೆ ಬಲ್ಲವರು ಅವುಗಳನ್ನೂ ಸರಿಪಡಿಸಬೇಕೆಂಬ ವಿನ್ನಹವನ್ನೂ ಇಲ್ಲಿ ಮಾಡಲೇ ಸಲ್ಲಿಸಿ ಬಿಡುತ್ತೇನೆ.

೧೯೨೫ಕ್ಕೂ ಮೊದಲು ಧಾರವಾಡದ ಸಾರ್ವಜನಿಕ-ಜೀವನದಲ್ಲಿ ಕನ್ನಡಕ್ಕೆ ಸ್ಥಾನವೇ ಇದ್ದಿಲ್ಲವೆಂಬ ಮಾತು ಯಥಾರ್ಥವಾದದ್ದಲ್ಲ. ೧೯೨೫ಕ್ಕೂ ಮೊದಲಿನ ಧಾರವಾಡದ ಪ್ರಮುಖ ಸಾಗರಿಕರಲ್ಲರೂ ಕನ್ನಡಿಗರೇ ಆಗಿದ್ದರು ಉತ್ತರದಿಂದ ಒಬ್ಬಿಬ್ಬರು ಮರಾಠೀ ವರಿಷ್ಠಾಧಿಕಾರಿಗಳು ಬರುತ್ತಿದ್ದರೇಬುದೇನೋ ನಿಜ; ಆದರೆ ಅವರ ಪ್ರಭಾವವು ಸಾರ್ವಜನಿಕ ಜೀವನದಲ್ಲಿ ಎಷ್ಟೂ ಕಾಣುತ್ತಿರಲಿಲ್ಲ ಎಲ್ಲಿ ನೋಡಿದರೂ ಸಾರ್ವಜನಿಕ ಜೀವನದಲ್ಲಿ ವಕೀಲರೇ ಸ್ವತಂತ್ರ ವೃತ್ತಿಯವರಾಗಿ— ಮಾತುಬಲ್ಲವರಾಗಿ—ಮುಂದೆ ಬರುತ್ತಿದ್ದುದು ಜನ ಭವದ ಮಾತಾಗಿದೆ ಆ ಕಾಲದ ಧಾರವಾಡದ ವಕೀಲರೆಲ್ಲರೂ ಅಚ್ಚಕನ್ನಡಿಗರೇ. **ವಕೀಲ ಶ್ರೀನಿವಾಸರಾಯರು, ಕೃಷ್ಣರಾಯರು, ತೋಳಮಟ್ಟಿ ಸ್ವಾಮಿರಾಯರು, ಗಿಡದ ಹುಬ್ಬಳ್ಳಿ ಭೀಮರಾಯರು, ಬಿಳ್ಳಬಳ್ಳಾಪುರ ಗೋವಿಂದರಾಯರು**—ಇವರೆಲ್ಲರೂ ಹಳೆಯ ಕಾಲದ ವಕೀಲರು. **ಘಾಟಕ ಗುರುನಾಥರಾಯರು, ಅತವಲೆ ಪಾಂಡುರಂಗರಾಯರು** ಇವರಿಬ್ಬರೇ ಹೊಸಕಾಲದ ವಕೀಲರು. ಇವರು ಚಿತ್ಪಾವನ (ಕೊಂಕಣಸ್ಥ) ಮನೆತನದವರಾದುದರಿಂದ ಇವರ ಮನೆಯ ಮಾತು ಮರಾಠಿ ಆಗಿದ್ದರೂ, ನೂರಾರು ವರ್ಷಗಳಿಂದಲೂ ಮೊದಲಿನವರು ಗುತ್ತಲದಲ್ಲಿಯೂ ಎರಡನೆಯವರು ಮುಳಗುಂದದಲ್ಲಿಯೂ ಬಂದು ನೆಲಸಿಕೊಂಡಿದ್ದ ಕುಟುಂಬದವರು. ಆದುದರಿಂದ ಇವರಿಬ್ಬರಿಗೂ ವ್ಯವಹಾರಭಾಷೆ ಕನ್ನಡವೇ ಆಗಿತ್ತು. ಗುರುನಾಥರಾಯರಂತೂ ಇಲ್ಲಿಯ ಸಾರ್ವಜನಿಕ—ಜನಜೀವನದಲ್ಲಿ ಕನ್ನಡಿಗರ ಜೊತೆಗೆ ಸಮರಸರಾಗಿ ಹೊಂದಿಕೊಂಡಿದ್ದರೆಂಬುದು ಸುಪ್ರಸಿದ್ಧವಾಗಿದೆ. ಇಲ್ಲಿಯ ಆಗಿನ ನ್ಯೂ ಇಂಗ್ಲಿಷ್ ಸ್ಕೂಲಿನ (ಇದೇ ಮುಂದೆ ಗವರ್ನಮೆಂಟ್ ವಿಕ್ಟೋರಿಯಾ ರಾಣಿಯ ರಾಜ್ಯಾರೋಹಣದ ಸುವರ್ಣಮಹೋತ್ಸವದ ಕಾಲಕ್ಕೆ ವಿಕ್ಟೋರಿಯಾ ಹಾಯಸ್ಕೂಲ್ ಎಂಬ ಹೆಸರನ್ನೊತ್ತು ಇಂದಿಗೂ ನಡೆದು ಬಂದಿದೆ.) ಸಂಸ್ಥಾಪಕರಾಗಿದ್ದ ಲೇಲೇ ವಕೀಲರೂ ಇವರಂತೆಯೆ ಇದೇ ಭಾಗದಲ್ಲಿ ನೆಲಸಿದ್ದವರು. ಇವರೆಲ್ಲರ ವಕೀಲಿಯ ವ್ಯವಹಾರಭಾಷೆ ಕನ್ನಡ ಪಕ್ಷಕಾರರ ಸಂಬಂಧವೇ ಒದಗಿದ್ದರೂ ಇವರೆಲ್ಲರ ವ್ಯವಹಾರಭಾಷೆ ಕನ್ನಡವೇ ಆಗುತ್ತಿತ್ತು; ಅದೇ ಸಾರ್ವಜನಿಕ ಜೀವನದಲ್ಲಿಯೂ ಹರಿಯುತ್ತಿತ್ತು. ಇಲ್ಲಿಂದಲೆ ಶೃಂಗೇರೀಪೀಠದ ಶ್ರೀಮತ್ ಜಗದ್ಗುರುಶಂಕರಾಚಾರ್ಯರು ಇಲ್ಲಿಗೆ ತಮ್ಮ ಸಂಸ್ಥಾನದೊಂದಿಗೆ ಬಂದಾಗ, ಕನ್ನಡದಲ್ಲಿಯೆ ಪ್ರವಚನಗಳು ನಡೆಯುತ್ತಿದ್ದುದನ್ನು ನಾನು ಕೇಳಿದ್ದೇನೆ. ಧಾರವಾಡಕ್ಕೆ ಶ್ರೀಮದ್ವಿಬುಧವರ್ಧಿನೀ ಸಭೆಯನ್ನು ಇಲ್ಲಿ ಸ್ಥಾಪಿಸಿರುವ ಶ್ರೀಮದ್ಜಗದ್ಗುರು ಶಂಕರಾಚಾರ್ಯ ಸಂಸ್ಕೃತಪಾಠಶಾಲೆಯನ್ನು ಉಪಕ್ರಮಿಸುವ ಭಾಷಣವನ್ನು ಶ್ರೀ. ಘಾಟಕ ಗುರುನಾಥರಾಯರು ಕನ್ನಡದಲ್ಲಿಯೆ ಮಾಡಿದ್ದುದು ನನ್ನ ನೆನಪಿನಲ್ಲಿದೆ. ಗುರುನಾಥರಾಯರಿಗೆ ಜೊಂಬಲ ಕೊಟ್ಟು, ಮಾತನಾಡಿದವರೆಲ್ಲರೂ ಕನ್ನಡವನ್ನೇ ಬಳಸಿದ್ದುಂಟು. ಮೈಸೂರಿನ ಮಹಾರಾಜರಾಗಿದ್ದ ಶ್ರೀ ಚಾಮರಾಜ ಒಡೆಯರವರು ದಿವಂಗತರಾದಾಗ, ಧಾರವಾಡ ಕಿಲ್ಲೆಯ ಮೈದಲಲ್ಲಿ (ಈಗಿನ ಸವದತ್ತಿ ಮೋಟರ ಸ್ಟ್ಯಾಂಡಿನ ಪಕ್ಕದಲ್ಲಿ) ಕೂಡಿದ ದುಃಖಪ್ರದರ್ಶಕ ಸಭೆಯಲ್ಲಿ ಚಿಕ್ಕಬಳ್ಳಾಪುರದ ಗೋವಿಂದರಾವ ವಕೀಲರು ಅಸ್ಖಲಿತವಾಗಿ ಕನ್ನಡದಲ್ಲಿ ಮಾತನಾಡಿದುದು, ಆ ಸಭೆಗೆ ಅಧ್ಯಕ್ಷರಾಗಿದ್ದ ದಿವಂಗತ ವೆಂಕಟ ರಂಗೋ ಕಟ್ಟಿಯವರು ಶ್ರೀ ಚಾಮರಾಜರವರನ್ನು ಕನ್ನಡ ರಾಜ್ಯಲಕ್ಷ್ಮಿಯ ಪ್ರಥಮೋಪಾಸಕರೆಂದು ಸನ್ಮಾನಿಸಿದ್ದುದು ಇನ್ನೂ ನನ್ನ ಲಕ್ಷ್ಯದಲ್ಲಿದೆ. ೧೯೨೫ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಸ್ಥಾಪನೆಯು ಉಪಕ್ರಮವಾದದ್ದು ಇಲ್ಲಿಯ ಕನ್ನಡಿಗರಲ್ಲಿದ್ದ ಜಾಗೃತಿಯನ್ನು ಸುಸಂಘ-

ಟಿತಪಡಿಸಲು ಮಾಡಿದ ಪ್ರಯತ್ನವು. ಹೊಸ ಚಳವಳಿಯನ್ನು ಹೂಡುವುದಕ್ಕಲ್ಲವೆಂಬುದನ್ನು ನಾವೆಲ್ಲರೂ ಗಮನಿಸತಕ್ಕದ್ದು.

ಧಾರವಾಡಕ್ಕೆ ಮೊದಲು ರೇಲ್ವೆ ಬಂದದ್ದು ೧೮೮೪ರಲ್ಲಿ. ಆಗ ಸೊಲ್ಲಾಪುರದಿಂದ ಧಾರವಾಡದ ವರೆಗೆ ರೈಲುಬಂಡಿಗಳು ಓಡಾಡತೊಡಗಿದುವು. ಮುಂದೆ ೧೮೮೫ರ ಸುಮಾರಿಗೆ ಬೆಳಗಾಂವಿಗೆ ರೈಲಿನ ಜೋಡಣೆಯಾಯಿತು. ೧೮೮೭ರಲ್ಲಿ ಪುಣೆಯ ವರೆಗೂ ಬಂಡಿಗಳು ಹೋಗಿ ಬರಲಾರಂಭಿಸಿದುವು. ಅಲ್ಲಿಂದ ಮುಂದೆ ಮರಾಟೀ ವಕೀಲರು ಇಲ್ಲಿ ಬಂದು ನೆಲಸಹತ್ತಿದರು. ಇವರಿಗಿಂತ ಹಿಂದೆ ಶ್ರೀ. ವಿಶ್ವನಾಥರಾವ್ ಹೇರ್ಲೇಕರ ಅವರೇ ಮೊದಲಿಗರು. ೧೮೮೭ರಲ್ಲಿ ಇವರು ಇಲ್ಲಿ ಬಂದು ನೆಲಸಿದರು. ಇವರ ವಾಗ್ಮಿತೆಯು ಆಕರ್ಷಕವಾಗಿದ್ದುದರಿಂದ ಇವರ ಸಾರ್ವಜನಿಕ ಭಾಷಣಗಳು ಮರಾಟಿಯಲ್ಲಾಗಹತ್ತಿದುವು. ಇಂಥ ಮರಾಠೀ ಭಾಷಣಗಳು ಮೊದಲು ಕ್ವಚಿತ್ತಾಗಿ ಆಗುತ್ತಿದ್ದುವು ಇದೇ ವಿದ್ಯಾಧಿಕಾರಿಯು ೧೮೮೯ನೆಯ ಇಸವಿಯ ತಾರೀಖು ೮ರವಿವಾರ ದಿವಸ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ "ಒಗ್ಗೂಟದ ಕಸುವು" (Force of combination) ಎಂಬ ವಿಷಯವಾಗಿ ಇಂಗ್ಲಿಷಿನಲ್ಲಿ ಉಪನ್ಯಾಸ ಮಾಡಿದುದುಂಟು. ಮುಂಬಯಿಯ ಸರ್ ನಾರಾಯಣ ಗಣೇಶ ಚಂದಾವರಕರರು ೧೮೯೬ರಲ್ಲಿ ಇಲ್ಲಿಗೆ ಬಂದಾಗ (ಆಗ ಅವರು ಇನ್ನೂ 'ಸರ್' ಆಗಿದ್ದಿಲ್ಲ), ಇಲ್ಲಿ ಆಗ ಇದ್ದ ಗರಗದವಂ ನಾಟಕ ಗೃಹದಲ್ಲಿ "ತಾವಿರುವ ಪರಿಸ್ಥಿತಿಯನ್ನು ಅನುಲಕ್ಷಿಸಿ ಅದಕ್ಕೆ ಅನುಕೂಲವಾಗಿ ನಡೆಯುವುದಕ್ಕೆ ಪ್ರಯತ್ನಿಸುವುದೇ ಪ್ರತಿಯೊಬ್ಬ ಸುಶಿಕ್ಷಿತ ಹಿಂದೀ ಮನುಷ್ಯನ ಕರ್ತವ್ಯವಾಗಿದೆ" ಎಂಬ ವಿಷಯವಾಗಿ ಸರಸವಾದ ಇಂಗ್ಲಿಷ ಉಪನ್ಯಾಸವನ್ನು ಮಾಡಿದುದನ್ನು ನಾನು ಕೇಳಿದ್ದೇನೆ. ಆ ಕಾಲದಲ್ಲಿ ಪರಪ್ರಾಂತದವರು ಇಲ್ಲಿಗೆ ಒಂದರೆ ಇಂಗ್ಲಿಷಿನಲ್ಲಿ ವ್ಯಾಖ್ಯಾನವಾಗುತ್ತಿದ್ದುದು ಮರಾಟಿಗೆ ಆಗಲೂ ಸಾರ್ವಜನಿಕ ಜೀವನದಲ್ಲಿ ಧಾರವಾಡದಲ್ಲಿ ಅಷ್ಟೊಂದು ಸ್ಥಾನವಿರಲಿಲ್ಲ. ಬರುಬರುತ್ತ ಮರಾಟಿ ವಕೀಲರ ಸಂಖ್ಯೆ ಬೆಳೆಯತೊಡಗಿತು. ರೇಲ್ವೆ ಕಛೇರಿಗಳು ಪುಣೆಯಿಂದ ಧಾರವಾಡಕ್ಕೆ ಬಂದುವು. ಆಗ ಅಲ್ಲಿ ಕೆಲಸದಲ್ಲಿ ಸೇರಿದ್ದ ಸಾವಿರಾರು ಮರಾಟೀ ಕುಟುಂಬುಗಳು ಹೊಟ್ಟೆಯ ಪಾಡಿಗಾಗಿ ಇಲ್ಲಿ ಬಂದು ನೆಲಸಿದುವು. ಇವುಗಳ ಆಧಾರವನ್ನು ಕಂಡುಕೊಂಡು ಮರಾಟೀನಾಟಕ ಕಂಪನಿಗಳೂ ಬರತೊಡಗಿದುವು. ಮರಾಟಿಯ ಕಟ್ಟಭಿಮಾನಿಗಳಾದ ದಿವಂಗತ ಸಹಸ್ರಬುದ್ಧೆಯವರು ಎಜ್ಯುಕೇಶನಲ್ ಇನ್ಸ್‌ಪೇಕ್ಟರರಾಗಿ ಬಂದರು. ಅವರಿಗೆ ನೆರವಾಗಲು ಇಲ್ಲಿಯೆ ನೆಲಸಿದ್ದ ಮರಾಟಿಗರು ಸಜ್ಜಾಗಿ ನಿಂತರು. ಇದೇ ಕಾಲಕ್ಕೆ ಸಾತಾರೆಯ ಪಬ್ಲಿಕ್ ವರ್ಕ್ಸ್ ಖಾತೆಯಲ್ಲಿ ಕೆಲಸದಲ್ಲಿದ್ದ **ಕೃಷ್ಣಾಜಿ ಅಬಾಜಿ ಗುರುಜೀ ಮತ್ತು ಚಿತಳೆ** ಎಂಬಿಬ್ಬರನ್ನು—ಅಲ್ಲಿಯ ಅಧಿಕಾರಿಗಳಿಗೆ ರಾಷ್ಟ್ರೀಯ ವೃತ್ತಿಯವರೆಂದು ಕಂಡುಬಂದದ್ದರಿಂದ ಗಡಿಪಾರು ಮಾಡಿದಂತೆ ಧಾರವಾಡಕ್ಕೆ ವರ್ಗ ಮಾಡಿದರು. ಅವರು ಇಲ್ಲಿ ಬಂದ ಕೆಲಕಾಲದ ನಂತರ ಸಾರ್ವಜನಿಕ ಚಟುವಟಿಕೆಗಳನ್ನು ಹೂಡಿದರು. ಗೋರಕ್ಷಣವು ಅವರ ಮುಖ್ಯ ಆಧಾರವಾಗಿತ್ತು. ರಾಜಕೀಯ ಆಂದೋಲನದ ಸಂಪರ್ಕವನ್ನು ತಾರದೆ ಇದನ್ನು ನಡೆಸಿ ಶ್ರೇಯಸ್ಕರವಾಗಿ ಸಾಗಿಸುವ ಸಂಕಲ್ಪದಿಂದ ಇಲ್ಲಿ ಜನಜಾಗೃತಿಯನ್ನು ಮಾಡಿದರು. ಅವರ ಉಪನ್ಯಾಸಗಳು ಅತ್ಯಂತ ಪ್ರಭಾವಶಾಲಿಯಾಗಿ ಆಗುತ್ತಿದ್ದುವು. ಆಗಿನಿಂದ ಧಾರವಾಡದ ಸಾರ್ವಜನಿಕ ಜೀವನದಲ್ಲಿ ಮರಾಟಿಗೆ ಹೆಚ್ಚಿನ ಪ್ರಾಶಸ್ತ್ಯವು ದೊರೆಯತೊಡಗಿತು. ೧೮೯೫ರ ಮೊದಲು ಇಲ್ಲಿ ಗಣೇಶೋತ್ಸವಗಳೇ ಇರಲಿಲ್ಲ. ೧೮೯೫ರಲ್ಲಿ ಮದಿಹಾಳದಲ್ಲಿ 'ಪ್ರಾಚ್ಯಕ್ರೀಡಾಸಂವರ್ಧಕ ಮಂಡಳಿ'ಯವರು ಗಜಾನನೋತ್ಸವವನ್ನು ಆರಂಭಿಸಿದರು. ಅವರು ಕನ್ನಡ ಪದಗಳ ಮೇಳಗಳನ್ನೇ ಮಾಡಿದ್ದರು. ಕನ್ನಡ ನಾಟಕಗಳನ್ನಾಡಿದರು. ೧೮೯೮ರಲ್ಲಿ ಮದಿಹಾಳದ ಹೊರತು ಊರಲ್ಲಿ 'ಹಿಂದೂ ಐಕ್ಯವರ್ಧಕ ಮಂಡಳಿ'ಯವರಿಂದ ಮತ್ತು ವಿಕ್ಟೋರಿಯಾ ಹಾಯ್‌ಸ್ಕೂಲಿನ ವಿದ್ಯಾರ್ಥಿಗಳಿಂದ ಹೀಗೆ ಎರಡು ಗಜಾನನೋತ್ಸವಗಳು ನಿರ್ಪಟ್ಟುವು. ಮೊದಲಿನದರಲ್ಲಿ ಕನ್ನಡ ಮೇಳವೇ ಇರುತ್ತಿತ್ತು. ಮಿಕ್ಕವೆರಡರಲ್ಲಿ ಮರಾಟೀ ಕನ್ನಡ ಎರಡೂ ಭಾಷೆಗಳ ಪದಗಳು ಇರುತ್ತಿದ್ದುವು. ಆದರೆ ಮರಾಟಿ ಬಹಳ; ಕನ್ನಡ ಹೆಸರಿಗೆ ಒಂದೆರಡು. ಹೀಗೆ ೩-೪ವರ್ಷ ನಡೆಯಿತು. ಹೀಗೆ ಮರಾಟಿಯ ಪ್ರಭಾವವು ಧಾರವಾಡದ ಧಾರವಾಡದ ಸಾರ್ವಜನಿಕ ಜೀವನದಲ್ಲಿ ಬೆಳೆಯಹತ್ತಿತಾದರೂ ಇದನ್ನು ಆ ಕಾಲದ ಕನ್ನಡ ಮುಖಂಡರು ಎದುರಿಸ
ಇರಲಿಲ್ಲ ೧೮೯೬ರಲ್ಲಿಯೆ ಈ ವಿರೋಧವ
ಪ್ರಭಾವಶಾಲಿಯಾಗಿ ಎದ್ದು ಕಾಣತೊಡಗಿತ್ತು

ಧಾರವಾಡದಲ್ಲಿ ಮರಾಟಿಯ ಸ್ಥ
ಮುಂದೊತ್ತುವ ಸಂದರ್ಭವೊದಗಿದ್ದನ್ನು ಮ
ಗಂಡು ಇಲ್ಲಿಯ ಮರಾಟೀ ಪ್ರಮುಖ
"ಧಾರವಾಡ ವಕ್ತೃತ್ವೋತ್ತೇಜಕ" ಸ
ಯನ್ನು ಸ್ಥಾಪಿಸಿ, ಮುಂಬಯಿ ಉಪನ್ಯಾಸಗಳ
ಮೇಲೆ ಬಂದವರಿಗೆ ಮೆಚ್ಚು ಕೊಡುವುದನ್ನು
ಗೊತ್ತುಪಡಿಸಿದರು. ಸಭೆಯಲ್ಲಿದ್ದ ಕನ್ನಡಿ
ಗರು, ಕನ್ನಡ ವಿಷಯಗಳನ್ನೂ ಇಟ್ಟು ಕನ್ನಡ
ಮಾತುಗಾರಿಕೆಗೂ ಅವಕಾಶ ಕೊಡಬೇಕೆಂದು
ವಾದಿಸಿದರು. ಕೊನೆಗೆ ನಿರ್ವಾಹವಿಲ್ಲದೆ ಎರಡೂ
ಭಾಷೆಗಳಲ್ಲಿ ವಿಷಯಗಳನ್ನು ಕೊಟ್ಟು ಎರಡು
ತಿಂಗಳ ಅವಕಾಶವನ್ನಿಟ್ಟು, ವಕ್ತೃತ್ವಸ್ಪರ್ಧೆ
ಯನ್ನೇರ್ಪಡಿಸಿದರು. ಮರಾಟಿಯಲ್ಲಿ ಹತ್ತೆಂಟು
ಜನರೂ ಕನ್ನಡದಲ್ಲಿ ನಾಲ್ವಾರು ಜನರು
ಸ್ಪರ್ಧೆಗೆ ಬಂದರು. ಮೊದಲೇ ತಿಳಿಸಿ
ವಿಷಯಗಳ ಸ್ಪರ್ಧೆಯು ಮುಗಿದ ಬಳಿ
ತಾತ್ಕಾಲಿಕ ವಿಷಯವೊಂದನ್ನು ಮುಂಬಯಿ
ಮಟ್ಟಿಗೆ ತಿಳುಹಿ, ಮರುದಿವಸ ಸ್ಪರ್ಧೆ ನಡೆಯ
ವುದಾಗಿ ಸಭೆಯಲ್ಲಿ ಹೇಳಿದರು ಆ ಕಾಲ
ಇಲ್ಲಿಯ ಸರಕಾರೀ ಹಾಯ್‌ಸ್ಕೂಲಿನ ಹೆಡ್
ಮಾಸ್ತರರಾಗಿದ್ದ **ಹರೀಭಾವು ಕೇಸ್ಕ**
ಅವರು ಈ ಸಮಾರಂಭಕ್ಕೆ ಅಧ್ಯಕ್ಷರಾಗಿದ್ದ
ಅವರು ತಾತ್ಕಾಲಿಕ ವಿಷಯವನ್ನು ಹೇಳದ
"ಹಿಂದುಸ್ತಾನದ ಜನಸಂಖ್ಯೆಯು ಪ್ರಮಾಣ
ಬೆಳೆಯುತ್ತ ನಡೆದಿರುವುದೆಂಬ ಸಂಗತಿಯನ್
ಲಕ್ಷಿಸಿ, ಮುಂದಿನ ಪೀಳಿಗೆಗಳ ಬಡತನ ನಿವಾ
ರಣೆಗಾಗಿ ಯಾವ ಉಪಾಯಗಳನ್ನು ಕೈಕೊ
ಳ್ಳಬೇಕು?" ಎಂಬುದೆ ಆ ವಿಷಯದ ಸಾ
ವಾಗಿತ್ತು. ಮರಾಟಿಯ ಮಟ್ಟಿಗೆ ಈ ವಿಷ
ವನ್ನು ನಿರ್ಬಂಧಿಸಿ ಕನ್ನಡಕ್ಕೆ ಉದಾಸೀನ
ಯವನ್ನು ತೋರಬಾರದೆಂದು ಅಂದಿನ ಸ
ಯಲ್ಲಿದ್ದ ದಿವಂಗತ ಹೊನ್ನಾವುರ ಮಂಜ
ಗೆಯ್ಯನವರು ಆಕ್ಷೇಪಿಸಿದರು. 'ಕ
ವಿಷಯಗಳನ್ನು ಎರಡು ತಿಂಗಳು ಮೊ
ನಿಂದ ಪ್ರಕಟಿಸಿದ್ದರೂ ಸ್ಪರ್ಧೆಗೆ ಸಾಕ
ಜನರು ಬರಲಿಲ್ಲ; ತಾತ್ಕಾಲಿಕ ವಿಷಯ
ಬರುವುದು ಕಂಡಂತೆಯೆ ಇದೆ; ಅದುದರಿಂದ ಕನ್ನಡಕ್ಕೆ ಅವಕಾಶ ಕೊಡುವ ಕಾ
ವಿಲ್ಲವೆಂದು ಸಭೆಯ ಕಮಿಟಿಯವರು ಕ

ಬಾಗ ನಿರ್ಣಯಿಸಿ ಸಾರಿದರು. ಇದರಿಂದ ಸಭೆಯಲ್ಲೆಲ್ಲ ಕೋಲಾಹಲವೆದ್ದಿತು. ಉಭಯ ಪಕ್ಷಗಳ ತಿಕ್ಕಾಟವನ್ನು ಕಂಡು, ಸಭೆಯಲ್ಲಿಯೆ ಮುಂದೆ ಕೂತಿದ್ದ ಘಾಟಕ ಗುರುನಾಥರಾಯರು ಎದ್ದು ಸಂಧಾನವನ್ನು ಸೂಚಿಸಿದರು: "ಕನ್ನಡಕ್ಕೂ ಇದೇ ವಿಷಯವನ್ನಿಟ್ಟು ಸ್ಪರ್ಧೆಗೆ ಅವಕಾಶ ಕೊಡಬೇಕು; ಕಮೀಟಿಯವರು ಮರಾಟೀ ವಿಷಯಕ್ಕೆ ೧೦ರೂಪಾಯಿ ಬಹುಮಾನವನ್ನಿಟ್ಟಿದ್ದಾರೆ; ಕನ್ನಡದಲ್ಲಿ ಭಾಷಣಮಾಡಿ ೧೦೦ಕ್ಕೆ ೬೦ಕ್ಕಿಂತ ಹೆಚ್ಚು ಗುಣಗಳನ್ನು ಪಡೆದವನಿಗೆ ನಾನು ೧೫ ರೂಪಾಯಿ ಬಹುಮಾನ ಕೊಡುವೆನು" ಎಂದು ಸಾರಿದರು ಕಮೀಟಿಯವರೂ ಇದಕ್ಕೊಪ್ಪಲೇಬೇಕಾಯಿತು ಮರುದಿನ ಮೊದಲು ಕನ್ನಡಿಗರ ಸ್ಪರ್ಧೆ ನಡೆಯಿತು. ೮ ಜನರು ಸ್ಪರ್ಧೆಗೆ ಬಂದಿದ್ದರು ಹುಬ್ಬಳ್ಳಿಯಲ್ಲಿ ಮುಂದೆ ವಕೀಲರಾಗಿದ್ದ ದಿವಂಗತ ಜೋತಿ ವಿಶ್ವನಾಥರಾಯರೊಬ್ಬರು ಸ್ಪರ್ಧೆಗೆ ಬಂದಿದ್ದಂತೆ ನನಗೆ ನೆನಪಿನಲ್ಲಿದೆ. ನಾನೂ ಎಂಟನೆಯವನಾಗಿದ್ದೆನು. "ಕನ್ನಡಿಗರ ಸ್ಪರ್ಧೆ ನಡೆದು ಮರಾಟಿಗರು ಸ್ಪರ್ಧೆ ನಡೆಯಲು ಅವಕಾಶವಿರಲಾರದು, ಆದುದರಿಂದ ಮರಾಟೀ ವಿಷಯದವರು ಮರುದಿನ ಏರಬೇಕು" ಎಂದು ಕಮೀಟಿಯವರು ಹೇಳಿದರು. ಅವರಿಗೆ ಓಲೆ ತಾಸುಗಳ ಅವಕಾಶ ದೊರೆಯುವುದಲ್ಲದೆ ಕನ್ನಡದಲ್ಲಾದ ವಿಷಯ ನಿವೇದನೆಯೂ ಅವರಿಗೆ ತಿಳಿಯುವುದೆಂದು ಕನ್ನಡಿಗರು ಆಕ್ಷೇಪಿಸಿ, ಮರಾಟಿಗೆ ಈ ಬಗೆಯ ಪಕ್ಷಪಾತ ತೋರುವುದು ಸರಿಯಲ್ಲವೆಂದು ಸಭೆಯಲ್ಲೆಲ್ಲ ಪ್ರತಿಭಟನೆ ನಡೆಯಿತು. ಕಮೀಟಿಯವರು ತಮ್ಮ ನಿರ್ಣಯವನ್ನೆತ್ತಿ ಹಿಡಿದು, ಅಂದೆಯೆ ಕನ್ನಡಿಗರ ಸ್ಪರ್ಧೆಯನ್ನು ಮುಗಿಸಿ, ಮರಾಟ ಸ್ಪರ್ಧೆಯನ್ನು ಮರುದಿನ ನಡೆಯಿಸಿದರು ಮೂರನೆಯ ದಿನ ಪರಿಣಾಮ ತಿಳಿದುಕೊಳ್ಳಲು ಗರಗದವರ ನಾಟಕಗೃಹದ ತುಂಬ ಕಿಕ್ಕಿರಿದು ಜನಸಂದಣಿ ನೆರೆದಿತ್ತು. ದಿವಂಗತ ವೆಂಕಟರಂಗೋ ಕಟ್ಟಿ, ರಾಮಚಂದ್ರ ಹಣಮಂತ ದೇಸಪಾಂಡೆ, ಅಣ್ಣಾರಾವ ಸವದಿ, ಹಣಮಂತರಾವ ಶಿರಹಟ್ಟಿ ಮೊದಲಾದವರು ಕನ್ನಡ ಸ್ಪರ್ಧೆಗೆ ಪರೀಕ್ಷಕರಾಗಿದ್ದರು. ಕೊನೆಯವನಾಗಿದ್ದ ನನಗೆ ೬೭ ಗುಣಗಳು ದೊರೆತುದರಿಂದ, ಘಾಟಕ ಗುರುನಾಥರಾಯರು ಕೊಡಮಾಡಿದ ೧೫ರೂಪಾಯಿ ಬಹುಮಾನವು ನನಗೆ ಸಲ್ಲತಕ್ಕದ್ದೆಂದು ಪರೀಕ್ಷಕರು ತಮ್ಮ ನಿರ್ಣಯ ಹೇಳಿದರು. ಕಮೀಟಿಯವರು ಒಂದೆರಡು ಆಕ್ಷೇಪಗಳನ್ನು ಮುಂದೆ ಮಾಡಿದರಾದರೂ, ಗುರುನಾಥರಾಯರು ತಮ್ಮ ಸಂಕಲ್ಪದಂತೆ ೧೫ರೂಪಾಯಿಗಳನ್ನು ಅಧ್ಯಕ್ಷರ ಮುಂದಿಟ್ಟು ನನಗೆ ಬಹುಮಾನವನ್ನು ಸಲ್ಲಿಸಿದರು. ಮರಾಟಿಯಲ್ಲಿ ಮೇಲೆ ಬಂದ ಶ್ರೀ. ಮೋಡಕೆ ಎಂಬವರಿಗೆ ಕಮೀಟಿಯವರು ತಮ್ಮ ೧೦ ರೂಪಾಯಿ ಬಹುಮಾನವನ್ನು ಕೊಟ್ಟರು. ಮಿಕ್ಕ ಪಾರಿತೋಷಕ ವಿತರಣೆಯಾದ ಬಳಿಕ ಸಭೆಯ ಸಮಾರೋಪದ ಕಾಲಕ್ಕೆ ಧಾರವಾಡದಲ್ಲಿ ಅಂದು ಕನ್ನಡದ ಅಭಿಮಾನವನ್ನು ದೇವರೇ ಕಾಯ್ದನೆಂದು ಹೇಳಿದರು.

ಹೀಗೆ ಧಾರವಾಡದಲ್ಲಿ ಬೆಳೆಯಬೇಕೆಂದಿದ್ದ ಮರಾಟಿಯ ಪ್ರಭಾವವನ್ನು ಕನ್ನಡಿಗರು ಕಾಲಕಾಲಕ್ಕೆ ಎದುರಿಸಿ ಪ್ರತಿಭಟಿಸುತ್ತಲೇ ಬಂದಿರುವುದನ್ನು ಈ ಕಾಲದವರು ಸರ್ವದಾ ನೆನಪಿನಲ್ಲಿಡಬೇಕು. ಮುಂದಿನ ಸಂಗತಿಗಳನ್ನು ಮುಂದೆ ಬರೆಯುವೆನು.

## ವೀಣ

ಶ್ರೀ ಬಿ. ಎಚ್., ಶ್ರೀಧರ ಬಿ. ಎ. ಬಿಜಕಲ

ಧನಪತಿಯ ಬೀಡಿನಲಿ ನಾನು ಕೂಲಿ—
ನನಗೆ ದಿನವೂ ಕೂಲಿ ಪಾದಧೂಲಿ!

ಆದಿಯಲ್ಲಿತ್ತು ದುರ್ಗರ್ಭದಲ್ಲಿ
ಕತ್ತಲಿನ ಕಡಲಲ್ಲಿ ಪಾಪವಲ್ಲಿ;
ಆ ಬಳ್ಳಿ ಕರಿಹೂವ ಬಿಡುಕಲಿತ್ತು;
ಉಮ್ಮತ್ತನಂತೆ ಕಾಯ್ಬಿಡೆಯುತಿತ್ತು.

ಒಂದು ದಿನ ಬಿರುಗಾಳಿ ಬೀಸಿದತ್ತು;
ಕಾಯೊಡೆದು ಬೀಜಗಣ ಸಿಡಿಯು ಬಿತ್ತು.
ದೇವಲೋಕದ ಹಾದಿಯಲ್ಲಿ ಪಾಯ್ದು
ಹೋಗುತ್ತ ಹೆಕ್ಕಿದೆನು ಬಾಗಿ ಸಂದು.

ಬಾಗಿದಾಕ್ಷಣ ಜೆನ್ನ ಮೇಲೆ ಬಿತ್ತು
ಧನಪತಿಯ ಸೇವಕನ ಗುದ್ದು ಮಸ್ತು!

ಅಂದಿಂದ ಋಣ ಜೆಳೆದು ತೋರುತಿಹುದು,
ನಡ್ಡಿಬಡ್ಡಿಯ ಹತ್ತಿ ಏರುತಿಹುದು!

ಜೆನ್ನೆಲುಬು ಬಿಲ್ಲಾಗಿ ನಿಂತಮೇಲೆ
ಕಾಲೊಡನೆ ತಲೆಯಿಟ್ಟು ನಿಲುವ ಲೀಲೆ!
ಭರತನಾಟ್ಯದೊಳಿಂಥ ಭಂಗಿಯುಂಟೇ?
ಜರತಯೋಗಿಗಿದೇನು ದೊರಿವ ಗಂಟೇ?

ಮಾನವತ್ವವ ಮಾನವರ್ಧವಾಯ್ತು;
ದೀನತ್ವವೆಂದದಕೆ ಜೆಸರು ಬಂತು.
ದೀನನಾನೆಸಲಿಹುದೆ ಧೈರ್ಯ ನಿಮಗೆ?
ಸೈನ್ಯವನ್ಯಗೆ ಕೊಡೆನು, ಎಲ್ಲ ನನಗೆ!

ಏಳು ಪಾತಾಳಗಳ ಕೆಳಗೆ ಲೀನ—
ಏಳುವಂದಕೆಯಿಲ್ಲ: ನಾನು ವೀನ!

# ಹೀಗೆ ಏಕೆ?

( ಒಂದು ಕಾಮಿಡಿ )

ಶ್ರೀ. ಎಸ್. ಆಚ್. ಬೆಟಗೇರಿ
ಬಿ. ಎ., ಬಿ. ಟಿ.
ಧಾರವಾಡ

●

"ಹೀಗೆ ಏಕೆ?" ಎಂದು ಕಂಗೆಟ್ಟು ಕೇಳಿಕೊಳ್ಳಬೇಕಾದ ಸಂದರ್ಭ ಪ್ರತಿಯೊಬ್ಬ ಮನುಷ್ಯನ ಬಾಳಿನಲ್ಲಿಯೂ ಬರುವುವು. ಜ್ಞಾನಜೀವಿ ಈ ಸಂದರ್ಭಕ್ಕಾಗಿ ಬಹಳ ಕಾಲವನ್ನು ಹಾಳು ಮಾಡಿಕೊಳ್ಳುವನು; ಕಾರ್ಯಜೀವಿ ತೊಡಕನ್ನು ಬದಿಗಿರಿಸಿ ಮುಂದುವರಿಯಲು ಹವಣಿಸುವನು.

ನಾನು ವರ್ಗದಲ್ಲಿ ಹೋದಾಗ ವಿದ್ಯಾರ್ಥಿಗಳಿಗೆ 'ನಿಮ್ಮ ಜೀವನದ ಗುರಿ ಏನು?' ಎಂದು ಕೇಳಲು ಬಂದ ಉತ್ತರಗಳಲ್ಲಿ:—

"ನಾನು ಬ್ಯಾರಿಸ್ಟರನಾಗುವೆ."
"ನನಗೆ ಡಾಕ್ಟರ್ ಆಗಬೇಕೆಂದಿದೆ"
"ಎಲ್ಲಿಯಾದರೂ ಶಿಕ್ಷಕನಾದರೆ ಸಾಕು ನನಗೆ."
"ನನಗೆ ಸಾಹಿತಿ ಆಗಬೇಕೆಂದಿದೆ"
"ನನಗೆ ಸರಕಾರಿ ಕಾಲೇಜಿನ ಪ್ರಾಧ್ಯಾಪಕನಾಗಬೇಕೆಂದಿದೆ."
"ನನಗೆ ಕಿಂಗ್ಸ್–ಕಮೀಶನ್ಡ್ ಆಫೀಸರ್ ಆಗಬೇಕೆಂದಿದೆ."
"ನನಗೆ M. S. M. ನಲ್ಲಿ ಸ್ಟೇಶನ್ ಮಾಸ್ತರಾಗಬೇಕೆಂದಿದೆ"
"ನನಗೆ ಸಿಂದೀ ಅಂಗಡಿಯ ಗುತ್ತೇದಾರನಾಗಬೇಕೆಂದಿದೆ."
"ನನಗೆ ಅಸಾಮಾನ್ಯ ಗವಯಿ ಆಗಬೇಕೆಂದಿದೆ."
"ನನಗೆ ಚೀಪ್‌ಗ್ರೇನ್‌ಶಾಪಿನ ಮ್ಯಾನೇಜರ್ ಆಗಬೇಕೆಂದಿದೆ."
"ನನಗೆ ಸಿನೀಮಾದಲ್ಲಿ ನಾಯಕನಾಗಬೇಕೆಂದಿದೆ."
"ನನಗೆ ಮೋಟಾರ ಡ್ರಾಯಿವ್ಹರ್ ಆಗಬೇಕೆಂದಿದೆ." ಇತ್ಯಾದಿ. ಈ ಬಗೆಯಾಗಿ ಪ್ರತಿಯೊಬ್ಬನೂ ತನ್ನ ಮುಂಬರುವ ಜೀವನದ ಗಾಳಿ–ಗೋಪುರಗಳನ್ನು ಕಟ್ಟುತ್ತಿರುತ್ತಾನೆ.

ಆದರೆ ಒಂದು ಸಮಸ್ಯೆ ಬಂದು ಮುಂದೆ ನಿಲ್ಲುವುದು: ಎಲ್ಲರೂ ತಮ್ಮ ತಮ್ಮ ಗುರಿಯನ್ನು ಸಾಧಿಸುವರೇನು? ಯಾರಿಗೆ ಏನು ಆಗಬೇಕೆಂದು ಮನಸ್ಸಿನಲ್ಲಿದೆಯೊ ಹಾಗೆ ಆಗುವುದೇನು? ಕೆಲವರಿಗೆ–ಕೇವಲ ಬೆರಳಿನ ಮೇಲೆ ಎಣಿಸುವಷ್ಟು ಜನರಿಗೆ—ಮಾತ್ರ ಸಾಧಿಸಬಹುದು ಉಳಿದವರೆಲ್ಲರೂ ಕೇವಲ ಹೊಟ್ಟೆಯ ಹಿಟ್ಟಿಗಾಗಿ ಕೈಗೆ ಬಂದ ವ್ಯವಸಾಯವನ್ನೇ ಕಲ್ಪತರು ಎಂದು ನಂಬಿ, ಅದನ್ನೇ ಅನುಸರಿಸುತ್ತ ಹೋಗುತ್ತಿರುವುದನ್ನು ನಾವು ದಿನಾಲು ಕಾಣುತ್ತೇವೆ. ಹೀಗೆ ಏಕೆ?

× × × ×

ಮನುಷ್ಯನಲ್ಲಿ ಕರ್ತೃಮಕರ್ತೃಂ ಶಕ್ತಿ ಇದ್ದರೂ, ತನ್ನ ಜೀವನವನ್ನು ಬೇಕಾದಂತೆ ಮಾರ್ಪಾಡು ಮಾಡಿಕೊಳ್ಳುವ ಇಚ್ಛೆ ಇದ್ದರೂ, ಎಷ್ಟೋ ಪ್ರಸಂಗಗಳಲ್ಲಿ ತನ್ನ ಇಚ್ಛೆಯಂತೆ ನಡೆಯಲು ಅವನು ಅಸಮರ್ಥನಾಗುವನು. ಅವನಿಗೆ ಮಾರ್ಗವೇ ತೋಚದು. ವಿಚಾರಶೂನ್ಯನಾಗಿ ಮೂಲೆ ಹಿಡಿದುಕೊಂಡು ಕುಳ್ಳಿರಬೇಕಾಗುವುದು. ಶಕ್ತಿ ಇದ್ದೂ ಕಾರ್ಯ ಸಾಧಿಸನು. ಹೀಗೇ ಏಕೆ?

ಕೊಡುವರೇನು ಯಾರಾದರೂ ಉತ್ತರ?

ಈ ಒಗಟವನ್ನು ಬಿಡಿಬಹುದೋ? ಕೆಲವು ಜನರು ಪರಿಸ್ಥಿತಿಯ ಕಡೆಗೆ ಬೊಟ್ಟು ಮಾಡಿ ತೋರಿಸುವರು.

'ಹೀಗೆ ಏಕೆ?' ಎಂದು ವಿದ್ವಾಂಸರನ್ನು ಕೇಳಿದರೆ ಹುರುಳಿಲ್ಲದ ಪುರಾಣ ಪ್ರಾರಂಭಿಸುವರು; ಧಾರ್ಮಿಕರು 'ದೇವರ ಇಚ್ಛೆ' ಎಂದು ಸಮಾಧಾನ ಹೇಳುವರು; ಪ್ರಯತ್ನವಾದಿಗಳು 'ದೇವರೇನು ಮಾಡಿಯಾನು—ಮನುಷ್ಯನು ಪ್ರಯತ್ನ ಮಾಡುವುದನ್ನು ಬಿಟ್ಟರೆ....? ಎಲ್ಲಿಯೊ ಪ್ರಯತ್ನ ತಪ್ಪಿದೆ....ಗಾಡೀ ಸಾಗಲಿ ಮುಂದೆ' ಎನ್ನುವರು ದೇವಾವಲಂಬಿಗಳು 'ಹಣೆಬರಹ' ಎಂದು ಹಣೆಗಟ್ಟಿಸಿಕೊಳ್ಳುವರು; ಕರ್ಮವಾದಿಗಳು 'ಅವರವರ ಕರ್ಮ!' ಎಂದು ಕರ್ಮದ ಕಡೆಗೆ ಕೈಮಾಡುವರು.

ಇದಕ್ಕೆ ನಿಮ್ಮ ಉತ್ತರವೇನು?

ಮನವಿದ್ದಲ್ಲಿ ಮಾರ್ಗ ಇರುವುದೇನೊ ನಿಜ; ತೀರ ತುಸು ಜನ ಕೈಚೆಲ್ಲಿ ಆ ಮಾರ್ಗ ಸಿಕ್ಕುವುದು. ಅವರು ಇಚ್ಛಿಸಿದುದು ಲಭಿಸುವುದು. ಯಾವುದು ಒಮ್ಮೊಮ್ಮೆ ಬೇಕಾಗಿರುವುದಿಲ್ಲವೊ, ಯಾವುದಂ ವಿಷಯವಾಗಿ ಕಲ್ಪನೆ ಕೂಡ ಇರುವದಿಲ್ಲವೊ ಅಂತಹದೂ ಸಹಜವಾಗಿ ಸಾಧಿಸಿ ಬರುತ್ತದೆ. ಯಾವುದನ್ನು ಸಾಧಿಸಬೇಕಾಗಿರುತ್ತದೊ ಅದು ಸಾಧಿಸದೆ ಹೋಗುವುದು. ಹೀಗೆ ಏಕೆ?

ನಾನು ಒಂದು ಶ್ರೀಮಂತ ಮನೆತನದಲ್ಲಿ ಹುಟ್ಟಿದ್ದರೆ ನನ್ನ ಆಯುಷ್ಯ ಇದಕ್ಕೂ ಸುಖಕರವಾಗುತ್ತಿತ್ತೊ? 'ನಿಶ್ಚಯವಾಗಿ' ಎಂದು ಹೇಳಲು ಯಾರಿಗೆ ಶಕ್ಯ?

× × × ×

"ಗುಂಡು! ಮ್ಯಾಟ್ರಿಕ್ಯುಲೇಶನ್ ಆಯಿತು. ಮುಂದೇನು ನಿಚಾರ?"

"ಕಾಲೇಜಿಗೆ ಹೋಗಬೇಕೆನ್ನುವೆ. LL. B. ವರೆಗೂ ಓದಬೇಕೆಂದು ಅಕೆ ಇದೆ. ಆದರೆ.....ರೊಕ್ಕ? ಮದು! ನಿನ್ನಂತೆ ರೊಕ್ಕ ಇದ್ದರೆ ಕಾಲೇಜಿಗೆ ಹೋಗದೆ ಬಿಡುತ್ತಿರಲಿಲ್ಲ!"

"ನನ್ನದು ಮ್ಯಾಟ್ರಿಕ್ಯುಲೇಶನಿಗೆ ಹತ್ತಿದ ಬೈಕ್ಯ ಸರಿಯಲೊಲ್ಲದಾಗಿದೆಯೋ; ಏನು ಮಾಡುವುದು? ಈ ಕಲಿಯುವದು ಎಂದರೆ ತಲೆ ತಿರುಗಿ ಹೋಗುವುದು. ಮನೆಯಲ್ಲಿ ಸುಖದಿಂದ ಇರುವುದನ್ನು ಬಿಟ್ಟು ಇದನ್ನಾರು ಗಂಟು ಹಾಕಿಕೊಳ್ಳಬೇಕಾ ಅಂತ ಅನ್ನಿಸ್ತದೆ!"

ಅಂತೂ ಕಡಲೆ ಇದ್ದವನಿಗೆ ಹಲ್ಲಿಲ್ಲ; ಹಲ್ಲಿದ್ದವನಿಗೆ ಕಡಲೆ ಇಲ್ಲ. ಹೀಗೆ ಏಕೆ?

× × × ×

ಗುಂಡು ಮ್ಯಾಟ್ರಿಕ್ಯುಲೇಶನ್ ಮುಗಿಸಿದಾಗಲೇ ಆತನ ತಾಯಿ ಗೋದೂಬಾಯಿ 'ನನ್ನ ಮಗನಿಗೆ ಇನ್ನೇನು.....ಮುನಸೂಫಿಕೆ ಸಿಗತ್ತದ' ಅಂತ ಊರ ತುಂಬೆಲ್ಲ ಹೇಳುತ್ತಾ ಅಡ್ಡಾಡುತ್ತಿದ್ದಳು

ಹಾಗೂ ಹೀಗೂ ಮಾಡಿ, ಕೊನೆಗೆ ಗುಂಡೂ LL. B. ಪರೀಕ್ಷೆ ಓದಿ ಮುಗಿಸಿ ಇಂದಿಗೆ ಅರೇಳು ವರ್ಷಗಳಾಗುತ್ತ ಬಂದರೂ, ಅರೇಳು ಸಲ ಮಾತ್ರ ಕಚೇರಿಯ ಕಟ್ಟೆ ಹತ್ತಿರಬೇಕು. ಅವನ ಬೀಗ ರಂಗರಾಯ ಪ್ರ್ಯಾಕ್ಟೀಸ್ ಪ್ರಾರಂಭಿಸಿ ಇನ್ನೂ ಎರಡು-ಮೂರು ವರ್ಷಗಳು ಕೂಡ ಆಗಿಲ್ಲ; ಇಷ್ಟರಲ್ಲಿ ಕೈತುಂಬ ಕೆಲಸ

ಮಧು ಮ್ಯಾಟ್ರಿಕ್ಯುಲೇಶನ್ನಿಗೇ ಶರಣು ಹೊಡೆದು, ಒಂದು ಅಂಚೆಯ (ಜನಲ) ಅಂಗಡಿ ತೆಗೆದು, ವರ್ಷಕ್ಕೆ ಏನಿಲ್ಲವೆಂದರೂ ಮೂರು ಸಾವಿರ ರೂಪಾಯಿ ಉಳಿಸುತ್ತಿದ್ದ. ಗುಂಡುವಿಗೆ ವರ್ಷಕ್ಕೆ ಮುನ್ನೂರು ರೂಪಾಯಿ ಸಿಕ್ಕಬೇಕಾದರೆ ಸಾಕು ಬೇಕಾಗುತ್ತಿತ್ತು.

ಹೀಗೆ ಏಕೆ?

× × ×

ಕಾಮನ ಪ್ರತಿಬಿಂಬವಂತಿರುವ ಇಂದಿನ ಕಾಲೇಜು ಕುಮಾರರು ಕನಸಿನ ನಾಡಿನಲ್ಲಿ ಕುಣಿದಾಡುವುದನ್ನು ನಾವು ದಿನಾಲು ಕಾಣುತ್ತೇವೆ. ಕಣ್ಣಿಗೊಂದು ಬಗೆಯ ಸರೆ ಬಂದಂತಾಗುವುದು ಅವರಿಗೆ. ದೈನಂದಿನ ಜೀವನದ ಕಲ್ಲಿಗೆ ಹಚ್ಚಿ ತಿಕ್ಕಲು ಆ ಪರಿಯು ಹರಿದು ಹೋಗುವುದು ಕಾಲೇಜಿನ ವಿದ್ಯಾರ್ಥಿಗಳು ತಿರುಗಾಡಲು ಹೋದಾಗ ಎಲ್ಲ ವಿಷಯಗಳು ಚಲಚ್ಚಿತ್ರದಂತೆ—ಒಂದರ ಹಿಂದೊಂದು—ಅವರ ಮುಂದೆ ಒಂದು ಹೋಗುವುವು. ಇದರಲ್ಲಿ ವಿದ್ಯಾರ್ಥಿನಿಯರ ವಿಷಯ ಪೊರಟರೆ ತೀರಿಯೆ ಹೋಯಿತು.

ಪ್ರತಿಯೊಬ್ಬ ವಿದ್ಯಾರ್ಥಿನಿಯ ಇತಿಹಾಸವು ಇವರ ಸ್ಮೃತಿ ಪಟಲದಲ್ಲಿ. ಗುಂಡೂನ ದಿನವಹಿ (Diary) ಯನ್ನು ತೆರೆದು ನೋಡಿದರೆ, ಏನಿಲ್ಲೆಂದರೂ ಎಂಟ್ಹತ್ತು ವಿದ್ಯಾರ್ಥಿನಿಯರ ಫೋಟೊ ಸಿಕ್ಕದೆ ಇರಲಿಕ್ಕಿಲ್ಲ. ಅವನ ಕೋಣೆಯನ್ನಿಣಕಿ ನೋಡಿದರೆ, ಹತ್ತಿಪ್ಪತ್ತು ಸಿನೇಮಾ ನಟಿಯರ ತಬ್ಬೀರುಗಳನ್ನು ಅಂದವಾದ ಕಟ್ಟಣದಲ್ಲಿ ಕೂರಿಸಿ ತೂಗು ಬಿಟ್ಟಿದ್ದನ್ನು ಕಾಣಬಹುದು. ಅವನಿಗಂತೂ ಸೌಂದರ್ಯವೆಂದರೆ—ಬಾಹ್ಯ ಸೌಂದರ್ಯವೆ—ಹುಚ್ಚು. 'ಮದುವೆಯಾದರೆ .. ರತಿ ಇರಬೇಕು' ಎಂದು ಆಗಾಗ ಅನ್ನುತ್ತಿದ್ದ.

ರತಿಯನ್ನು ಮದುವೆಯಾಗ ಹೋಗಿ ಹಿಮೀಬೆಯನ್ನು ಮದುವೆ ಆಗುವ ಭಾಗ ಬಿತ್ತು. ಹೀಗೆ ಏಕೆ?

× × × ×

ಹಿಂದೂ ಜನರಿಗೆ ಇಪ್ಪತ್ತೊಂದು ಹಬ್ಬಗಳಿದ್ದರೂ ದೀಪಾವಳಿಯಷ್ಟು ಸೊಗಸಾದ ಹಬ್ಬ ಇನ್ನೊಂದಿಲ್ಲ. ಮನೆ ಬಿಟ್ಟು ನೂರು ಸಿಡಿದು ಹೋದವರನ್ನು ಮನೆಗೆ ಸಂತೋಷದಿಂದ ಬರಮಾಡಿಕೊಳ್ಳುತ್ತದೆ. ಹೊಸದಾಗಿ ಅಳಿಯಂದಿರಾದವರಿಗಂತೂ ಇಷ್ಟು ಉತ್ತಮವಾದ ಹಬ್ಬ ಇನ್ನೊಂದಿಲ್ಲ. ಗುಂಡೇರಾಯನಿಗೂ ದೀಪಾವಳಿಯ ಕರೆ ಬಂದಿತ್ತು. ಹೆಂಡತಿಯೊಡನೆ ಅಳಿಯತನಕ್ಕೆಂದು ಹೊರಟ. ಸರಿಯಾದ ವೇಳೆಗೆ ಮನೆಬಿಟ್ಟ; ಒಂದೆರಡು ಫರ್ಲಾಂಗಿನಷ್ಟು ಬರುವಷ್ಟರಲ್ಲಿಯೇ ಟಾಂಗಾದ ಕುದುರೆಯು ಸಾಷ್ಟಾಂಗ ನಮಸ್ಕಾರ ಹಾಕಿತು. ಎಸೆಟ್ಟೇ ಹೊತ್ತು, ಏಳಲೆ ಇಲ್ಲ. ಏನು ಪ್ರಯತ್ನ ಮಾಡಿದರೂ ಏಳಲಿಲ್ಲ. ಪಾಪ! ಪೆಟ್ಟು ಪೂರಯಿಸಿತ್ತು. ಅಂತೂ ಗುಂಡೇರಾಯನ ಗಾಡಿ ತಪ್ಪಿತು. ಇವನಿಗೂ ಪೆಟ್ಟು ಪೂರಯಿಸಿದುದರಿಂದ, ದವಾಖಾನೆಗೆ ಸಾಗಿಸುವ ಪ್ರಸಂಗ—ತಲೆಗೊಂದು ಪಟ್ಟಿ—ಬಂದಿತು. ಅಂತೂ ಅಳಿಯತನ ಸರಕಾರದ ದವಾಖಾನೆಯಲ್ಲಿಯೆ ನಡೆದು ಹೋಯಿತು. ಹೀಗಾಗುವುದೆಂದು ಯಾರಿಗೂ ಕನಸು-ಮನಸಿನಲ್ಲಿ ಕೂಡ ಇದ್ದಿರಲಿಲ್ಲ.

ಹೀಗೆ ಏಕೆ?

× × × ×

ರಕ್ತಪಿತಂಗಡಿಯ ಕಾಳಿಗವೇ ಕನ್ನಡಿಗರಿಗೆ ಕೊಡಲಿಯ ಪೆಟ್ಟು. ನಿಜವಾಗಿಯೂ ಅಂದಿನ ಯುದ್ಧದಲ್ಲಿ ಕನ್ನಡಿಗರೇ ವಿಜಯಿಗಳಾಗಿ ವಿಜಯಧ್ವಜವನ್ನೇರಿಸಿದ್ದರು. ವಿಜಯೋನ್ಮಾದದಲ್ಲಿ ರಾಮರಾಜನು ಸೈನಿಕರಿಗೆ ಜವರವರ ಯೋಗ್ಯತಾನುಸಾರವಾಗಿ ಕಾಣಿಕೆಗಳನ್ನು ಹಂಚುತ್ತಾ ನಡೆದಿದ್ದನು. ಶತ್ರುಸೈನ್ಯವು ಸೋತು ಹೋಗಿತ್ತು. ಇಷ್ಟರಲ್ಲಿಯೆ ಎಲ್ಲಿಂದಲೆ ಒಂದು ಮದ್ದಾನೆಯು ಶಿಬಿರ ಸೇರಿ, ಸೈನ್ಯವನ್ನೆಲ್ಲ ಅಲ್ಲೋಲ-ಕಲ್ಲೋಲ ಮಾಡುತ್ತ ಮುಂದುವರಿಯಿತು. ಸೈನಿಕರು ಜೀವದಾಸೆಗಾಗಿ ಸ್ಥಳ ಸಿಕ್ಕಲ್ಲಿ ಓಡಿದರು. ಮದ್ದಾನೆ ತಮ್ಮ ಕಡೆಗೇ ಬರುವುದನ್ನು ಕಂಡು ರಾಮರಾಜನ ಸಲ್ಲಕ್ಕಿಯನ್ನು ಹೊತ್ತ ಬೋಯಿಗಳು, ಪಲ್ಲಕ್ಕಿಯನ್ನು ತೆಗೆದುಕೊಂಡು ಓಡುವುದಕ್ಕಾಗದೆ ಆ ಪಲ್ಲಕ್ಕಿಯನ್ನು ಅಲ್ಲಿಯೆ ಚೆಲ್ಲಿಕೊಟ್ಟು ಓಡಿದರು. ರಾಮರಾಜನು ಶತ್ರುಗಳ ಕೈಯಲ್ಲಿ ಸಿಗಲು, ಶತ್ರುಗಳು ಅವನ ರುಂಡವನ್ನು ಭಾಲೆಗೆ ಸಿಕ್ಕಿಸಿ ಮೇಲೆ ಪಿಡಿಯಲು, ಕನ್ನಡ ಸೈನ್ಯ ಭೀತಿ—ವಿಸ್ಮಯಗಳಿಂದ ಚೆದರಿ ಹೋಯಿತಂತೆ.

ಕನ್ನಡಿಗರು ಕಲಿತನದಿಂದ ಕಾದಿ ವಿಜಯ ಹೊಂದಿದ್ದರೂ, ಒಂದೇ ಒಂದು ತಾಸಿನಲ್ಲಿ, ಮದ್ದಾನೆ ಬಂದುದರಿಂದ ಕನ್ನಡಿಗರ ಸಾಮ್ರಾಜ್ಯವು ಬೇರೆಯವರ ಕೈಸೇರಿತು.

ಹೀಗೆ ಏಕೆ?

× × × ×

ಪ್ರತಿಯೊಬ್ಬರಿಗೂ ತಮ್ಮ ದೈನಂದಿನದ ಜೀವನದಲ್ಲಿ 'ಹೀಗೆ ಏಕೆ?' ಎಂದು ಒಂದೆರಡು ಸಲವಾದರೂ ಎನ್ನಿಸಿರಲು ಸಾಕು; ಅದರ ಮೇಲೆ ವಿಚಾರ ಮಾಡಿರಲೂ ಸಾಕು. 'ಹೀಗೆ ಏಕೆ?' ಎಂಬುದು ಒಂದು ಸಮಸ್ಯೆಯಿ ಆಗುವುದು; ಈ ಸಮಸ್ಯೆಗೇನಾದರೂ ಉತ್ತರ ವಿದೆಯೆ?

---

# ಹರಟೆ ಎಂಬ ಹರಟೆ

ಶ್ರೀ

ಪ್ರೊ. ವಿ. ಎಂ. ಇನಾಮದಾರ, ಎಂ. ಎ. ಮುಂಬೈ

ಹರಟೆಯೆಂಬುದು ಸ್ವರ್ಗ-ಮರ್ತ್ಯಗಳನ್ನು ಬೆಂದುಗೂಡಿಸುವ ಏಣಿಯಂತೆ ಊರ್ಧ್ವ-ಲೌಕಿಕಗಳನ್ನು ಜೋಡಿಸುವಂತಹದು. ಹರಟೆಯೊಡೆಯನವನ ವ್ಯವಹಾರದಲ್ಲಿ ಹಲವು ಕೊಳಕು-ಕಸರು ನೆಲಸಿರುವುದು. ಹರಟೆಯು ಗಾಳಿ ಹೃದಯ-ಹೃದಯಗಳನ್ನೂ ಮನಸುಗೊಳಿಸುವಲ್ಲುದು.

ಈ ವರೆಗೆ ಹರಟೆಯ ವಿಷಯದಲ್ಲಿ ಎಷ್ಟೋ ವಿಷಯಗಳನ್ನು ಹೇಳಿದ್ದರೂ ಹರಟೆ ಎಂದರೇನೆಂಬುದನ್ನೇ ಹೇಳಲಿಲ್ಲವಲ್ಲ...ಎಂದು ಯಾರಾದರೂ ಆಕ್ಷೇಪಿಸುವಂತಿದೆ. ಈ ಆಕ್ಷೇಪಕರಿಗೆ ಸಮಾಧಾನವಾಗಬೇಕಾದಲ್ಲಿ ಹರಟೆಯ ವ್ಯಾಖ್ಯೆಯನ್ನು ಕೇಳಬೇಕು. ಅದು ಸಹಜಸಾಧ್ಯವೆಂದು ನನಗನಿಸುವುದಿಲ್ಲ. ಹಾಗೆ ನೋಡಿದರೆ ಯಾವುದರ ವ್ಯಾಖ್ಯೆಯನ್ನು ಸಹಜವಾಗಿ ಹೇಳಬಹುದು? ಜ್ಞಾನಾಭಿವೃದ್ಧಿಯ ಶತಮಾನವೆಂದು ಹೇಳಲ್ಪಡುವ ಈ ಶತಮಾನದಲ್ಲಿ ಕೂಡ ಮನುಷ್ಯ, ಪ್ರೇಮ, ಕಾವ್ಯ ಮುಂತಾದ ತೀರ (ಆ) ಸಾಮಾನ್ಯ ವಿಷಯಗಳ ವ್ಯಾಖ್ಯೆಯನ್ನು ಸಪ ಯಾರಾದರೂ ತೃಪ್ತಿಕರವಾಗಿ ಹೇಳಿದ್ದಾರೆಯೆ? ಮನುಷ್ಯನೆಂದರೆ ಯಾರು, ಪ್ರೇಮವೆಂದರೆ ಏನು, ಕಾವ್ಯ ಯಾವುದಕ್ಕೆ ಎನ್ನಬೇಕು? ಎಂಬ ಪ್ರಶ್ನೆಗಳು ಸಮಗ್ರವಾದ ವ್ಯಾಖ್ಯೆಗಳ ಚೌಕಟ್ಟಿನಲ್ಲಿ ಸಿಕ್ಕಲಾರವೆಂದು ತೋರುತ್ತದೆ. ಹತ್ತಾರು ರೀತಿಯಲ್ಲಿ ಯತ್ನವನ್ನೇನೋ ಮಾಡಿ ನೋಡಿದ್ದಾರೆ: ನೆರೆತ ಕೂದಲುಗಳಿಗೆ ಬಣ್ಣ ಬಳಿದು ವಯಸ್ಸನ್ನು ಇದ್ದುದಕ್ಕಿಂತ ಕಷಮೆ ಎಣಿಕೆ ಹೇಳುವ ಪ್ರಾಣಿಗೆ ಮನುಷ್ಯನೆನ್ನಬಹುದು; ತನ್ನ ವೇಷದ ಬೆಲೆಯ ಹತ್ತರಲ್ಲೊಂದು ಪಾಲೂ ಬೆಲೆ ಇರದ ಪ್ರಾಣಿಗೆ ಮನುಷ್ಯನೆನ್ನಬಹುದು; ಕನ್ನಡಿಯಲ್ಲಿ ನೂರು ಸಲ ನೋಡಿಕೊಂಡು ತನ್ನ ರೂಪ ಇದ್ದುದಕ್ಕಿಂತ ಇನ್ನೂರು ಪಾಲು ಒಳ್ಳೆಯದೆಂಬ ಬಗೆಯುವ ಪ್ರಾಣಿ ಮನುಷ್ಯ; ಮೂರ್ಖರ ಸಂತೆಯಾಗಿದ್ದ ಇಡಿ ಜಗತ್ತಿನಲ್ಲಿ ತಾನೊಬ್ಬನೇ ಸರ್ವಜ್ಞನೆಂದು ಸಹಜವಾಗಿಯೇ ತಿಳಿದುಕೊಳ್ಳುವವ ಮನುಷ್ಯ.....ಇತ್ಯಾದಿಯಾಗಿ ಮನುಷ್ಯನನ್ನು ವರ್ಣಿಸಬಹುದಾದರೂ, ಸಮಗ್ರ ವಾಗಿ ವ್ಯಾಖ್ಯೆ ಹೇಳುವುದು ಸಾಧ್ಯವಿಲ್ಲವೆಂದು ಖಂಡಿತವಾಗಿ ಹೇಳಬಹುದು. ಈ ಎಲ್ಲ ವರ್ಣನೆಗಳಿಗೆ ಹರಟೆಯನ್ನೂ ಸೇರಿಸಬಹುದು- ಹರಟೆ ಹೊಡೆಯಬಲ್ಲ ಪ್ರಾಣಿ. ನಗಬಲ್ಲ ಪ್ರಾಣಿಯಂತೆ ಮನುಷ್ಯನೇ ಆಗಿರಬೇಕು. ತೀರ ಸಾಮಾನ್ಯವಾದ ಮನುಷ್ಯವ್ಯಾಖ್ಯೆಯ ಬಗೆಯಲ್ಲಿಯೇ ಇನ್ನೊಂದು ತೊಂದರೆಗಳಿದ್ದಾಗ, ಅವನಿಗೆ ತೀರ ಆಪ್ತೀಯ ವಿಷಯವಾದ ಪ್ರೇಮಕ್ಕೆ ಎಂಥ ತೊಡಕುಗಳಿರಬಾರದು? ಆದರಲ್ಲಿಯೂ ಪ್ರೇಮವೆಂದರೇನು ಶಬ್ದಕ್ಕೆ ನಿಲುಕುವ ವಿಷಯವೆ? ಹೆಣ್ಣು-ಗಂಡಿನ "ಸಮಸ್ಯೆ"ಗಳ ತಾಯಿಯೇ ಪ್ರೇಮವೆಂದು ಹೇಳಬಹುದೆ? ನೂರಾರು ತೊಡಕುಗಳಿಗೆ ತಂದೆಯಾದ ಈ ಪ್ರೇಮದ ತೊಡಕಿಗೆ ನಾವು ಹೋಗದಿರುವುದೇ ಒಳ್ಳೆಯದೆಂದು ತೋರುತ್ತದೆ. ಕಾವ್ಯದ ವಿಷಯವಂತೂ ಇನ್ನೂ ದಿಗಿಲು. ಮನುಷ್ಯನಾಗಿದ್ದವನು ಗೊತ್ತಾಗಿಯೊ ಆಗದೆಯೊ ಪ್ರೇಮದಲ್ಲಿ ಸಿಲುಕಿ ಅವರ ಪೊಗಸನ್ನೋ ಸಮಸ್ಯೆಯನ್ನೋ ಎದುರಿಸಬಹುದು; ಆದರೆ ಕಾವ್ಯ! ನೂರಾರಲ್ಲಿ ತೊಂಭತ್ತು ಜನರಿಗೆ ಇದೊಂದು ದಾರಿಯಲ್ಲಿಯ ಭೂತ! ಮಾತನಾಡಿಸಿದರೆ ಮನೆ ಹೊಕ್ಕು ಮನೆಯನ್ನು ನಂದನವನವನ್ನಾಗಿ ಮಾಡುತ್ತೇನೆಂದು ಹೇಳಿ ಮಕವನ್ನಾಗಿ ಮಾಡಿ ಬಿಟ್ಟೀತು! ಕಾವ್ಯಕ್ಕೂ ಕನಸಿಗೂ ಹತ್ತಿರದ ಸಂಬಂಧವೆಂದು ಹೇಳುತ್ತಾರೆ ಬಲ್ಲವರು. ಆದುದರಿಂದ ಕಾವ್ಯವನ್ನು ಕನಸಿನಲ್ಲಿಯೇ ಕಾಣಬೇಕು. ಕಾವ್ಯದ ಆಳತೆಗೋಲಿನಿಂದ ಬದುಕನ್ನು ಅಳೆಯುಹೊರಟವರು ಬದುಕೆಯೇ ಇಲ್ಲ. ಒಟ್ಟೇನು, ಕಾವ್ಯವೆಂದರೊಂದು ಕನಸಿನ ಕೆಳದಿ. ಕನಸಿನಲ್ಲಿಯದನ್ನು ಯಾರಾದರೂ ವ್ಯಾಖ್ಯೆಮಾಡುವುದು ಸಾಧ್ಯವೆ? ಹರಟೆಯೂ ಅಷ್ಟೆ. ಅದು ಹರಟೆ, 'ಇದು ಹರಟೆ, ಇಂತಹ ಹರಟೆ, ಆಂತಹ ಹರಟೆ' ಎಂದು ವಿಂಗಡಿಸಿ ವರ್ಣನೆ ಮಾಡಬಹುದೇ ವಿನಾ ವ್ಯಾಖ್ಯೆಯ ಗೋಜಿಗೆ ಹೋದರೆ ಹರಟೆಯನ್ನೇ ಸುರಿಯಬೇಕಾಗುವುದು.

ಹಾಗೆ ನೋಡಿದರೆ 'ಹರಟೆ ಎಂದರೆ ಏನು?' ಎಂದು ಕೇಳುವವರ ಪ್ರಶ್ನೆ ಎಷ್ಟು ನಿರರ್ಥಕ! ಹರಟೆ ಹೊಡೆಯುವವ ಮನುಷ್ಯನೆಂಬ ಮಾತನ್ನು ಒಪ್ಪಿದಾಗ, ಯಾವ ಮನುಷ್ಯನಾದರೂ ಒಂದಿಲ್ಲೊಂದು ಪ್ರಸಂಗದಲ್ಲಿ ಹರಟೆ ಹೊಡೆದೇ ಹೊಡೆದಿರುವ ಮೂಲಕ, ಹರಟೆ ಎಂದರೇನೆಂಬ ಪ್ರಶ್ನೆ ಅಪ್ರಸ್ತುತವೂ ಸರಿಯೆ, ಅಧಿಕಪ್ರಸಂಗವೆಂದೂ ಹೇಳಬಹುದು. ಅಲ್ಲದೆ ಇದು ಇಂದಿನ ನಿನ್ನೆಯ ವಿಷಯವಲ್ಲ. ಸಾವಿರಾರು ವರ್ಷಗಳ 'ಮಹಿವಾಟಿ'ನ ವಿಷಯ. ಇದಕ್ಕೆ ಬೇಕಾದಷ್ಟು ಹಳೆಯ ಕಾಲದ ಉದಾಹರಣೆಗಳನ್ನೂ ಕೊಡಬಹುದು. ಈಗಿನ ಕಾಲ ಇನ್ನೂ ಎಷ್ಟೋ ವಾಸಿ ಎಂದೇ ಹೇಳಬೇಕು. ಸ್ಥಳ-ಕಾಲಾದಿಗಳನ್ನಾದರೂ ನೋಡಿಕೊಂಡು, ರಜೆ ಇದ್ದಾಗ ನಾವು ಹರಟೆ ಹೊಡೆಯುತ್ತೇವೆ. ಮೊದಲಿನ ಕಾಲದವರಿಗೆ ಇಂತಹ ಯಾವ ನಿರ್ಬಂಧಗಳೇ ಇದ್ದಿಲ್ಲವೆಂದು ತೋರುತ್ತದೆ ಬೇರೆ ಯಾವ ಕೆಲಸಗಳೂ ಇರುತ್ತಿದ್ದಿಲ್ಲ ಯಾವಾಗಲಾದರೊಮ್ಮೆ ಯುದ್ಧ ದಂತಹ ದುರ್ಧರ ಪ್ರಸಂಗ; ಆಂತಹ ಯುದ್ಧದ ಪ್ರಸಂಗದಲ್ಲಿಯೂ "ಸೇನಯೋರುಭಯೋರ್ಮಧ್ಯೇ" ನಿಂತು ಕೃಷ್ಣಾರ್ಜುನರು ಹರಿನಂಟು ಅಧ್ಯಾಯ ತುಂಬುವಷ್ಟು ಹರಟೆ ಹೊಡೆದರೆನ್ನುವುದನ್ನು ನಾವು ನೆನೆದರೆ, ನಾವಿಂದು ಹರಟೆಯನ್ನು ಯಾವ ಕೀಳುಸ್ಥಿತಿಗೆ ತಂದಿದ್ದೇವೆ ಎಂಬುದರ ಅರಿವು ಆಗದೆ ಇರಲಾರದು. ನೈಮಿಷಾರಣ್ಯವಂತೂ ಹರಟೆಯ ಕಾಲೇಜು! ಆ ಸೂತ ಮಹಾರಾಯ; ಆತನ ಬಾಯಿ ಕಟ್ಟಗೆಯದಾಗಿದ್ದರೆ ಎಂದಿಗೊ ಒಡೆದು ಹೋಗುತ್ತಿತ್ತು—ಆತನ ಕೈಯ ಎಷ್ಟು ಜನ ಹರಟೆಗಾರರು ತಯಾರಾ

ಹೊರಬಿದ್ದರೊ! ನಮ್ಮ ಪೂರ್ವಕಾಲದ ಋಷಿಗಳು ಊಟದ ಹಂಬಲವಿಲ್ಲದೆ, ನಿದ್ರೆಯ ಪರಿವೆ ಇಲ್ಲದೆ ಹರಟೆ ಹೊಡೆಯುವ ಯೋಗಿಗಳಾಗಿದ್ದರು. ಯೋಗಿಗಳಾಗಿದ್ದರೆಂದೇ ಊಟ ನಿದ್ರೆಗಳಲ್ಲಿ ವ್ಯರ್ಥವಾಗಿ ಕಳೆಯಬಹುದಾದ ವೇಳೆಯನ್ನು ಅವರು ಹರಟೆಯಲ್ಲಯೇ ಕಳೆಯುತ್ತಿದ್ದುದರ ಮೇಲಿಂದ, ಹರಟೆಯ ಮಹತ್ತ್ವವೇನು—ಅದರ ಇತಿಹಾಸ ಪರಂಪರೆ ಎಂತಹ ವಿಶಾಲವಾದ್ದು—ಎಂಬೆಲ್ಲ ವಿಷಯವನ್ನು ಸಂಗ್ರಹಿಸಿ ಹರಟೆಯ ಇತಿಹಾಸವನ್ನು ಬರೆಯಿಹೊರಟರೆ, ನಾವು ಇಡಿ ಮಾನವ ಕೋಟಿಯ ವಿಕಾಸಕ್ರಮದ ಇತಿಹಾಸವನ್ನೇ ಬರೆಯಬೇಕಾಗಿ ಬಂದೀತು!

ಇದಂತೂ ಸಾಮಾನ್ಯ ಋಷಿಗಳ ಮಾತಾಯಿತು. ದೇವಾಂಶನೋ, ದೇವ ಸಮಾನನೋ ದೇವಸಂಭೂತನೋ ಆದ ಶ್ರೀರಾಮನ ಉದಾಹರಣೆಯನ್ನೇ ತೆಗೆದುಕೊಳ್ಳಬಹುದಲ್ಲ! ರಾಮಾಯಣದ ಕಥೆಯನ್ನು ಮೊಟ್ಟಮೊದಲನೆಯ ಸಾರಿ ಕೇಳಿದಾಗಿನಿಂದ ನನ್ನ ಮನಸ್ಸಿನಲ್ಲಿ ಮೂಡಿದ ಒಂದು ಸಂಶಯಕ್ಕೆ ಸಮಾಧಾನವು, ಈ ಹರಟೆಯ ಬಗೆಯನ್ನು ಯೋಚಿಸುತ್ತಿದ್ದಾಗ ನನಗೆ ನಿನ್ನೆ ದೊರೆಯಿತು. ಆ ಸಂಶಯವೆಂದರೆ 'ಶ್ರೀರಾಮ ಹದಿನಾಲ್ಕು ವರ್ಷಗಳ ವನವಾಸವನ್ನು ಹೇಗೆ ಕಳೆದಿರಬಹುದು?' ಎಂಬುದು. ಸೀತಾ-ಲಕ್ಷ್ಮಣರು ಜೊತೆಯಲ್ಲಿದ್ದರೆ ವನವಾಸದ ಸಮಸ್ಯೆ ಬಗೆಹರಿಯಿತೆಂದೇ ಕಟ್ಟಲೆ ಇಸ್ಪಿರಬೇಕು ವನವಾಸಕ್ಕೆ. ಈ ಹದಿನಾಲ್ಕು ವರ್ಷಗಳ ಹರಟೆಯೇ ರಾಮಾಯಣವೆಂದು ಸ್ಥೂಲವಾಗಿ ಹೇಳಬಹುದು. ಏಕವಚನಿಯಾದ ಶ್ರೀರಾಮ ಈ ವನವಾಸದಲ್ಲಿ ಬಹುವಚನಿಯಾಗಿರದಿದ್ದರೆ ಮೂಕನಾಗಿ ಬಿಡುತ್ತಿದ್ದ. ಮುಖ್ಯವಾಗಿ ಯಾವುದರ ಚಿಂತೆಯೂ ಅತನಿಗಿರಲಿಲ್ಲ. ರಾಜ್ಯಭಾರದ ಕಂಟ್ರಾಕ್ಟನ್ನು ಭರತನೊಡನೆ ಮಾಡಿ ಮುಗಿಸಿದ್ದ. ಈ ಕಾಲದಲ್ಲಿ ಹಗಲು-ರಾತ್ರಿಗಳೆಂಬ ಭೇದಗಳನ್ನು ಬರೆತು ಯಾವ ರೀತಿ ಅವುವಿಬ್ಬರೂ ಹರಟೆ ಹೊಡೆದರೆಂಬುದನ್ನು ಭವಭೂತಿ ಹೇಳ್ಲಿವೆ—ತವಿದಿತ ಗತಯಾಮಾ ರಾತ್ರೀರೇನ ವ್ಯರಂಸೀತ್" ಎಂದು! ಹೀಗೆ ಹಗಲು-ರಾತ್ರಿ ಸಾಹಾಡುತ್ತಿದ್ದರಿಂದ ಮೇಲೆ ಅದು ಕೇವಲ ಗೀತಿಯ ಮುದ್ದು ಮಾತುಗಳಿರುವುದು ಸಾಧ್ಯವೇ? ಈಗ ಹಗಲುರಾತ್ರಿ ಅಖಂಡವಾಗಿ ನಡೆಯಬಹುದಾದದ್ದು ಒಂದೇ, ಅದೆಂದರೆ—ಹರಟೆ. ಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋಪಮೇಲೆಯಾದರೂ ಈ ಹರಟೆ ನಿಂತಿತೆಂದಿರಾ? ಛೆ! ಅಷ್ಟೊತ್ತಿಗೆ ಹರಟೆಹೊಡೆಯುವವರೊಂದು ಜಟ್ಟವಾಗಿ ಹೋಗಿತ್ತು ಶ್ರೀರಾಮನಿಗೆ. ಮನುಷ್ಯರನ್ನು ಬಿಟ್ಟು, ಮಂಗಗಳ ಕೂಡ ಮಾತಾಡಿದ; ಹರಟೆ ಹೊಡೆದ; ತನ್ನ 'ವಾರ್ ಎಫರ್ಟ್' (War Effort)ನ್ನು ಮುಂದುವರಿಸಿದ; ಮತ್ತೆ ಹರಟೆಗಾಗಿ ತನ್ನ ಪಡದಿಯನ್ನು ತಿರುಗಿ ತಂದ.

ಹೀಗೆ ಮಹಾಭಾರತ, ರಾಮಾಯಣ ಕಾಲದಿಂದಲೂ ನಡೆದುಬಂದ ಹರಟೆ ಮಾನವನ ಮನಸ್ಸನ್ನು 'ಯಾವಚ್ಚಂದ್ರದಿವಾಕರೌ' ಬಾಡಿಗೆಯಿಂದ ತೆಗೆದುಕೊಂಡಿದೆ ಎಂದು ನಿರ್ವಿವಾದವಾಗಿ ಹೇಳಬಹುದು. ಆದುದರಿಂದಲೇ ಹೇಳುವುದು: ಹರಟೆ ಹೊಡೆಯದ ಮನುಷ್ಯ ಅತಿವಿರಾನುಷನಲ್ಲ, ಅಮಾನುಷ ಎಂದು. ಮನುಷ್ಯನು ಮನುಷ್ಯನಾಗಿ ಬಾಳಬೇಕಾದಾಗ ಹರಟೆ ತೀರ ಅವಶ್ಯವೆಂಬುದನ್ನು ನಾನೆಷ್ಟೋ ಸಾರಿ ನನ್ನ ಸ್ವಂತ ಅನುಭವದ ಮೇಲಿಂದಲ್ಲದೆ ನನ್ನ ಗೆಳೆಯರ ಅನುಭವದ ಮೇಲಿಂದಲೂ ಮನಗಂಡಿದ್ದೇನೆ. ನನ್ನೊಬ್ಬ ಗೆಳೆಯನಿಗಂತೂ ಒಂದೊಪ್ಪತ್ತು ಊಟವಿಲ್ಲದಿದ್ದರೂ ನಡೆಯುವುದು; ಹರಟೆಯಿಲ್ಲದೆ ನಡೆಯುವುದಿಲ್ಲ. ಎಂತಹ ಅವಸರದಲ್ಲಿರಲಿ, ಯಾವ ಮಹತ್ತ್ವದ ಕೆಲಸಕ್ಕಾಗಿಯೇ ಹೊರಟಿರಲಿ, ದಾರಿಯಲ್ಲಿ ಸಿಕ್ಕಾಪಟ್ಟೆ ಕನಿಷ್ಟಕ್ಕೆ ಹದಿನೈದು ನಿಮಿಷವ ಒಂದು 'ಡೋಜು' ಆಗಲೇ ಬೇಕು. ನಾನೆಂದಾದರೂ ಸಾಯಂಕಾಲ ಆತನಮನೆ ಹೋದರೆ, ಹರಟೆಯ ಹೊರತು ಬೇರೆ ಕೆಲಸವೇ ಇಲ್ಲ. ಬಿಳಿ ಬಿಯರಾಗಿ ಮಾಡಿದ ಆಡುಗೆ ತಣ್ಣಗಾಗಿ, ತಣ್ಣಗಾಗಿದ್ದ ಮನೆಯನಳು ಬಿಸಿಬಿಸಿಯಾದರೂ ಅವನ ಹರಟೆಗೆ ಯಾವ ತಡೆಯೂ ಇರುತ್ತಿರಲಿಲ್ಲ 'ರಾತ್ರಿಯಾಯಿತು, ಹೊರಡುವೆ' ಎಂದು ನಾನು ಹೊರಟರೂ, 'ನಿನ್ನನ್ನು ಬೀಳ್ಕೊಡಲಿಕ್ಕೆಂದೆ ಅರ್ಧ ದಾರಿ ಜೊತೆಯಲ್ಲಿ ನಡೆದು ಬಂದು, ಮುಗಿಯದ ಹರಟೆಯನ್ನು ಹಾಗೂ ಹೀಗೂ ಅರ್ಧಕ್ಕೇ ಮುಗಿಸಿ, ಅರ್ಧಾಂಗಿಯ ಕೋಪವನ್ನೆದುರಿಸಲು ಅವನು ಹೊಂಟ ಪ್ರಸಂಗಗಳಿಗೆ ಎಣಿಕೆ ಇಲ್ಲ. ಇನ್ನಿಬ್ಬರ ಅರ್ಧ ಒಂದೇ: ಹರಟೆ ನಮ್ಮ ಬದುಕಿನಲ್ಲಿಯ ತೀರ ಸಾಮಾನ್ಯ ವಿಷಯಗಳಲ್ಲಿ ಒಂದಾಗಿರದೆ ಅದೊಂದು ಅಸಾಮಾನ್ಯ ಶಕ್ತಿಯಾಗಿದೆ ಎಂಬುದು. ಆದರ ನೋಹಕ್ಕೆ ಮಣಿಯದವನಿಲ್ಲ;

ಇಂತಹ ಮಹತ್ತ್ವದ ವಿಷಯದಲ್ಲಿ ಕೂಡ ನಮ್ಮ ಜನ ಸಲ್ಲದ ಅನುದಾರವಾದ ಧೋರಣೆಯನ್ನು ತಾಳಿದ್ದುದು, ಇಂದಿನ ನನ್ನ ವಿಪರೀತವಾದ ವಿಚಾರಕ್ರಮಗಳಿಗೆ ಸಾಕ್ಷಿಯಾಗುವಂತಿದೆ. ಹರಟೆ ಹೊಡೆಯುವುದು ದೊಡ್ಡ ಅಪರಾಧವೆಂದು ಪ್ರಾಯಶ್ಚಿತ್ತವಿಲ್ಲದ ಪಾಪವೆಂದು ಪರಿಗಣಿಸಲ್ಪಡುತ್ತಿದೆ. ಗೋಹತ್ಯೆಯನ್ನೂ ಮಾಡಿ ಪಾರಾಗಬಹುದು; ಬ್ರಹ್ಮಹತ್ಯೆಯನ್ನೂ ಮಾಡಿ ಸುಸುಲಬಹುದು; ಬಹಿಷ್ಕಾರದ ಬವಣೆಯನ್ನೂ ಬಲು ಸುಲಭವಾಗಿ ತಪ್ಪಿಸಿಕೊಳ್ಳಬಹುದು; ಆದರೆ ಹರಟೆ ಹೊಡೆಯುವ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲವೆಂಬ ಸಿದ್ಧಾಂತವನ್ನು ನಮ್ಮಲ್ಲಿಯ ಹಿರಿಯರು ಹೂಡಿ ಬಿಟ್ಟಿದ್ದಾರೆ. ಈ ಮಾತನ್ನು ವಿಶೇಷವಾಗಿ ಮುದುಕರು ಚಿಕ್ಕವರ ಮನಸ್ಸಿನ ಮೇಲೆ ಬಿಂಬಿಸುವುದಕ್ಕೆ ಅವ್ಯಾಹತವಾಗಿ ಯತ್ನಿಸುತ್ತಾರೆ. ಎರಡನೆಯವರಿಗೆ ಹಂಟೆ ಹೊಡೆಯ ಬೇಡಿರೆಂದು ಹೇಳುವ ಮುದುಕರು ತಾವು ಸುಮ್ಮನಿರುತ್ತಾರೆಯೆ? ಮಕ್ಕಳಿದ್ದ ಮನೆಯಲ್ಲಿ ಮುಚ್ಚಂಜೆಯ ಸಮಯದಲ್ಲಿ ಕಾಲಿಡಲು ಕಷ್ಟವಾದರೆ, ಮುದುಕರಿದ್ದ ಮನೆಯಲ್ಲಿ ಬೆಳಗು ಮುಂಜಾನೆ ಬದುಕಿರುವುದೇ ಕಷ್ಟವೆಂಬುದು ಒಂದು ಆಧುನಿಕ ಗಾದೆಯಾಗಬಹುದು ಒಂದೇ ಮನೆಯಲ್ಲಿ ಇಬ್ಬರು ಮುದುಕರು ಇದ್ದರೆ, ಅಥವಾ ಪ್ರಸಂಗವತದಿಂದ ಕೂಡಿದರೆ, ಮಾತೇ ಮುಗಿಯಿತು—ಎಂದರೆ ಮಾತು ಮುಗಿಯುವುದೇ ಕಷ್ಟ! ಇಡೀ ಹಗಲೆಲ್ಲ ಹುಡುಗರಿಗೆ ಹರಟೆ ಹೊಡೆ. ಯಬೇಡಿರೆಂದು ಹೇಳಿ, ಬೆಳಗು ಮುಂಜಾನೆ ಎದ್ದು ಮುದುಕರಿಬ್ಬರು ಊರ ವಿಷಯವನ್ನೆಲ್ಲ ಹರಟೆಯಲ್ಲಿ ಬರಿದು ಮಾಡುತ್ತಿರುವುದು ತೀರ ಸಾಮಾನ್ಯ ಅನುಭವ. ಮುದುಕತನದ ಅಧಿಕಾರದಲ್ಲಿ ಅವರಿಗೆ ಯಾವ ನಿರ್ಬಂಧವೂ ಉಳಯುವುದಿಲ್ಲವಾದ್ದರಿಂದ, ಹರಟೆ ಬಲು ರಸವತ್ತಾಗಿ ಸಾಗುವುದು. ಒಬ್ಬ ಮುದುಕನಿಗೆ ಇನ್ನೊಬ್ಬನ ಜೊತೆ ಸಿಕ್ಕದೆ ಹೋದರೆ, ಈ ಹರಟೆಯ ಹಸಿವು, ಹರಕುಮುರುಕು ಸಂಸ್ಕೃತಪ್ರೋಕರೂ ಸವಾಗಿ ಹಾಡು ಚಿಕ್ಕವನ ನಿದ್ದೆಗೆಡಿಸಿಕಾರ ವಾಗುತ್ತದೆ. ಮುಖ್ಯವಾಗಿ ಇವರ ಅರಿಯೋ

ಎಂದರೆ ಹರಟೆ ಮುತ್ತಿನಂತಹ ಹೊತ್ತನ್ನು ಹಾಳು ಮಾಡುತ್ತದೆಂಬುದು. ಈ ರೀತಿಯ ಅಕ್ಷೇಪಣೆಯಿಂದ ಪರಮೇಶ್ವರನು ಕೂಡ ಪಾರಾಗುವುದು ಕಷ್ಟವೆಂದು ತೋರುತ್ತದೆ. 'ಇಂದು ಅರಳಿ ನಾಳೆ ಬಾಡಿ ಹೋಗುವ ಹತ್ತಾರು ಸಾವಿರ ತೆರದ ಹೂವುಗಳನ್ನು ಹುಟ್ಟಿಸುವ ವೇಳೆಯನ್ನು, ಪರಮೇಶ್ವರನು ಬಾಳಿ–ಕಿತ್ತಳೆಗಳಂತಹ ಹಣ್ಣುಗಳನ್ನು ಹುಟ್ಟಿಸುವುದರಲ್ಲಿ ವಿನಿಯೋಗಿಸಿದ್ದರೆ ಒಳ್ಳೆಯದಾಗುತ್ತಿದ್ದಿಲ್ಲವೆ?' ಎಂದು ಕೇಳುವ ಜನ ಇದು. ಚೀರಾಪುಂಜಿಯಲ್ಲಿ ಐನೂರು ಇಂಚು ಮಳೆ ಕೊಡುವ ವರುಣ ಆದೇ ವೇಳೆಯನ್ನು ವಿಜಾಪೂರದಂತಹ ಬೇರೆ ಯಾವ ಸ್ಥಳಗಳಲ್ಲಿ ಇನ್ನೂ ಎಷ್ಟೋ ಕಡಮೆ ಪ್ರಮಾಣದಲ್ಲಿ ಮಳೆ ಗರೆದರೂ, ವೇಳೆಯು ಉಳಿತಾಯವಲ್ಲದೆ ಮಳೆಯ ಹಂಚುವಿಕೆಯೂ ಸರಿಯಾಗಿ ಆದೀತೆಂದು ಪರಮಾತ್ಮನಿಗೂ ಬುದ್ಧಿ ಹೇಳುವ ಜನ ಇದು! ಇದು ಕೇವಲ ವ್ಯವಹಾರ ದೃಷ್ಟಿ. ಇಂಥವರಿಗೆ ಬದುಕೆಂದರೆ ಜಮಾಖರ್ಚಿನ ಪುಸ್ತಕವಿದ್ದಂತೆ. ಸುಖವಾಗಿ ಬದುಕುವುದಕ್ಕಿಂತ ಆಯವ್ಯಯಗಳ ಕಡೆಗೆಯೇ ಗಮನ ಹೆಚ್ಚು. ಬದುಕೆಂದರೆ ಮೇಘದೂತದಂಥ ಕಾವ್ಯವೆಂದು ನಾನು ಹೇಳುತ್ತಿಲ್ಲ, ಆದರೆ ಅದುಜಮಾಖರ್ಚಿನ ಪುಸ್ತಕವಂತೂ ಅಲ್ಲವೇ ಅಲ್ಲವೆಂದು ಖಚಿತವಾಗಿ ಹೇಳುತ್ತೇನೆ. ಬದುಕನ್ನು ಯಾವುದಾದರೊಂದು ಪುಸ್ತಕಕ್ಕೆ ಹೋಲಿಸುವುದೇ ಆದರೆ ಅದು 'ಭಟ್ಟಿಕಾವ್ಯ' ದಂತಿದೆ ಎಂದು ಹೇಳಬಹುದು ರುಕ್ಷವಾದ ವ್ಯಾಕರಣದ ನಿಯಮಗಳ ಜೊತೆಯಲ್ಲಿ ಕಾವ್ಯಸೌಂದರ್ಯವೂ ಹೆಣೆಯಲ್ಪಟ್ಟಿದೆ. "ಧೂನೋತಿ ಚಂಪಕ ವನಾನಿ" ಗೊತ್ತಿಲ್ಲವೆ ನಿಮಗೆ? 'ಧೂ ಧೂ' ಎಂದು ಆ ಧಾತುವಿನ ನಾಲ್ಕಾರು ಗಣ ವಿಶಿಷ್ಟವಾದ ರೂಪಗಳನ್ನು ಎತ್ತಿ ತೋರಿಸುವ ಶ್ಲೋಕವನ್ನು ಕೇಳಿ ಸಾಮಾನ್ಯ ಓದುಗ ಧೂ, ಧೂ, ಎಂದೇ ಅಭಿಪ್ರಾಯವನ್ನು ಸೂಚಿಸಬಹುದು. ಆದರೆ ಈ ವ್ಯಾಕರಣದ ವಟ್ಟಡವಿಯಲ್ಲಿ ಚಂಪಕವನ ವಿದೆ, ಚಂದನಮಂಜರಿ ಇದೆ, ಅಶೋಕ—ಅತಿಮುಕ್ತಾದಿಗಳೂ ಇವೆ. ಬದುಕಿನಲ್ಲಿಯ ಸೌಂದರ್ಯಸ್ಥಾನಗಳು ಇಂತಹವೇ. ಗದ್ಯಮಯವಾದ ಬದುಕಿನ ಬೆಟ್ಟದಲ್ಲಿ ಹರಟೆಯೊಂದು ಕಾವ್ಯಪುಷ್ಪ....

ಹರಟೆ ಎಂದರೆ ಬಿಚ್ಚು ಮನಸ್ಸಿನ ಮಹಾಭಾರತ. ನಾವು ಇಂದಿಗೆ ಮನಸಾರೆ ಹರಟೆ ಹೊಡೆಯುತ್ತಿಲ್ಲವಾದರೆ ಅದಕ್ಕೆ ಆವಶ್ಯಕವಾದ ಬಿಚ್ಚಿದ ಮನಸ್ಸುಗಳು ನಮ್ಮಲ್ಲಿಲ್ಲವೆಂದೇ. ವ್ಯಕ್ತಿವ್ಯಕ್ತಿಗಳ ನಡುವೆ ಗುಂಪು-ಗುಂಪುಗಳ ನಡುವೆ ವ್ಯರ್ಥವಾದ ವೈಮನಸ್ಯ ಇಣಿಕಿ ನೋಡುತ್ತಿರುವಾಗ, ಹರಟೆಗೆ ಎಲ್ಲಿಯ ಅವಕಾಶ? 'ನಾನು, ನನ್ನದು' ಎಂಬ ದೃಷ್ಟಿ ಬೆಳೆದಾಗ ಹರಟೆ ಹಿಂಬಾಗಿಲಿನಿಂದಲೇ ಪಾರಾಗುವುದು. ಜನ ಒಂದಾಗುವ ಮಾತು ಅಲ್ಲಲ್ಲಿ ಕೇಳಬರುತ್ತಿದೆ; ಆ ಮಾತು ಇನ್ನೂ ನರೆಗೆ ವಾಖ್ಯಾತರ ಬಾಯಿಯಲ್ಲಿದೆಯೇ ವಿನಾ ಜನರ ಜೀವನದಲ್ಲಿ ಇಲ್ಲ. ಇದು ಸಾಧ್ಯವಾಗಬೇಕಾದರೆ ಹತ್ತು ಜನ ಒಂದೆಡೆಗೆ ಸೇರಿ ಹರಟೆ ಹೊಡೆಯಬೇಕು. ಹರಟೆ ಹುಚ್ಚು ಹಳ್ಳವಾಗಿ ಹರಿದಾಗ ಹೃದಯಗಳು ಹೊಂದಿಕೊಂಡಾವು. ಒಬ್ಬರೊಬ್ಬರಲ್ಲಿ ನಮ್ಮ ಜನಗಳಿಗೆ ವಿಶ್ವಾಸ ಹುಟ್ಟೀತು.

---

# ಪುಸ್ತಕ ವಿಮರ್ಶೆ

## ಆಜಾದ್ ಹಿಂದ

( ಸ್ವತಂತ್ರ ಭಾರತಸೇನೆಯ ಸಮಗ್ರ ಇತಿಹಾಸ )

ಸಂಪಾದಕರು : ಶ್ರೀಯುತರುಗಳಾದ ಭಾಲಚಂದ್ರ ಘಾಣೇಕರ ಮತ್ತು ಪೋವುಂಡ ಪುಲ್ಲಾರಿ ಅವರು. ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ೮. ೮೮ ಪುಟಗಳು, ಅಲ್ಲಲ್ಲಿ ಚಿತ್ರದ ಪುಟಗಳು ಬೆಲೆ ೧—೮—೦.

ವರ್ತಮಾನ ಭಾರತೀಯರ ಪರಾಧೀನ ಜೀವನದಲ್ಲಿಯ ಒಂದು ಅಭಿಮಾನಾಸ್ಪದವಾದ ಇತಿಹಾಸ ಪ್ರಕರಣವೆಂದರೆ ಆಜಾದ್ ಹಿಂದ ಸೇನೆಯ ಚರಿತ್ರೆ. ಆರ್ಡಿನೆನ್ಸುಗಳ ಈಟಿಯ ಏಟು ಎಲ್ಲಿ ನೋಡಿದಲ್ಲಿ ಕಾದು ನಿಂತಿರುವಾಗ, ಅಂತಹದರಲ್ಲಿಯೂ ಪಾರಾಗಿ ಹೋಗಿ, ಭಾರತದ ಸ್ವಾತಂತ್ರ್ಯಸಾಧನೆಗಾಗಿ ವೀರರ ಸೈನ್ಯ ಕಟ್ಟಲು ಹವಣಿಸಿದ ಸುಭಾಷ ಬಾಬುಗಳ ದೇಶಾಭಿಮಾನ, ಸ್ವಾತಂತ್ರ್ಯಪ್ರೀತಿ, ತ್ಯಾಗ, ಸಾಹಸಗಳು ಪ್ರತಿಯೊಬ್ಬ ಭಾರತೀಯನಿಗೂ ಆದರ್ಶವಾಗಿವೆ ಭಾರತದ ಮೇಲೆ ಜಪಾನಿಗಳು ಎರಿಬರದಂತೆ ತಡೆಹಿಡಿದುದು ಈ ಸ್ವಾತಂತ್ರ್ಯವೀರರ ಸೈನ್ಯ. ಅದರಂತೆಯೇ ಬ್ರಿಟಿಷರಿಂದ ಆಡಳಿತದ ಸೂತ್ರಗಳನ್ನು ಕಿತ್ತುಕೊಂಡು, ಯುದ್ಧದ ಮುಗಿತಾಯದೊಂದಿಗೆ ಭಾರತವನ್ನು ಸ್ವತಂತ್ರವನ್ನಾಗಿಸುವುದು ಈ ಸೈನ್ಯದ ಉದ್ದೇಶ. ಪ್ರಸ್ತುತ ಪುಸ್ತಕದಲ್ಲಿ ಇದೆಲ್ಲ ರೋಮಾಂಚಕಾರಿ ಕತೆಯನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

ಮೊದಲಿನ ಆರು ವಿಭಾಗಗಳಲ್ಲಿ ಸುಭಾಸ ಭೋಸ, ಕ್ಯಾ. ಶಹಾನವಾಜ, ಕ್ಯಾ. ಸೈಗಲ್, ಕ್ಯಾ ಧಿಲನ್, ರಾಸಬಿಹಾರಿ ಘೋಷ್, ಕ್ಯಾ. ಲಕ್ಷ್ಮಿ ಅವರ ವ್ಯಕ್ತಿತ್ವ ಪರಿಚಯವಿರುವುದಲ್ಲದೆ, ಎಳನೆಯ ವಿಭಾಗದಲ್ಲಿ ಇವರೆಲ್ಲರ 'ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಟ' ಹೂಡಿದ ಸಂಗತಿಯಿರುವುದು. ಮುಂದಿನ ಹದಿಮೂರು ವಿಭಾಗಗಳಲ್ಲಿ ಪೂರ್ವದ್ವೀಪಗಳಲ್ಲಿ ಆಜಾದ್ ಹಿಂದ ಸೇನೆಯು ಮಾಡಿದ ಮೈ-ಮನಸುಗಳನ್ನು ಜುಮ್ಮುದಟ್ಟಿಸುವ ವೀರಕೃತ್ಯಗಳಿಂದ ಕೂಡಿವೆ. ಆಜಾದ್ ಹಿಂದ ಸೇನೆಯ ಸಮರಗೀತ, ಧ್ವಜಗೀತಗಳನ್ನೂ ಕೊಡಲಾಗಿದೆ. ಕೊನೆಗೆ 'ಆಜಾದ್ ಹಿಂದ ಸಂಕೇತಗಳು', 'ಹೋರಾಟದ ಮಹತ್ವದ ಮಿತಿಗಳು' ಎಂದೆರಡು ಪರಿಶಿಷ್ಟ ಭಾಗಗಳಿವೆ.

ಒಂದೊಂದು ಪುಟವೂ ವಾಚಕನಲ್ಲಿ ಉತ್ಸಾಹವನ್ನು ಹುಟ್ಟಿಸುವುದು. ತರುಣರನ್ನು ಆಶಾವಾದಿಗಳನ್ನಾಗಿ ಮಾಡಿ ಸಾಹಸಪ್ರಿಯತೆಯನ್ನು ಅವರಲ್ಲಿ ತುಂಬುವುದು; ನಮ್ಮ ಜನರಿಂದ ಏನಾಗುವುದೆಂಬ 'ದೀನನಾನುತನ'ದ ಜನರು ಇದನ್ನು ಓದಿ, ಭಾರತೀಯ ಶಕ್ತಿ ಜಾಗೃತವಾದರೆ ಏನು ಮಾಡಲಾಗದೆಂಬುದನ್ನು ಪ್ರತ್ಯಕ್ಷ ಪ್ರಮಾಣಗಳಿಂದ ಅರಿತುಕೊಳ್ಳಬೇಕು. ಸಾವಿರಾರು ಜನ ಒಂದೆ ಮನ, ಒಂದೆ ಹೃದಯದವರಾಗಿ ಕೂಡಿ

'ಕದಂ ಕದಂ ಬಢಾಯೇಜಾ । ಖುಷೀಕೇ ಗೀತ್ ಗಾಯೇಜಾ
ಯಹ ಜಿಂದಗೀ ಹೈ ಕೌಮಕೇ ಲುಟಾಯೇಜಾ!'

ಎಂದು ಏಕಕಂಠದಿಂದ ಹಾಡುತ್ತಿರುವಾಗ ಆ ವೀರರು ಸಾವಿನ ನೋವಿನ ಭೀತಿಯನ್ನು ಒಂದು ಕ್ಷಣವಾದರೂ ನೆನೆದಿರಬಹುದೆ?

ನಮ್ಮ ರಾಜಕೀಯ ಪ್ರಪಂಚದಲ್ಲಿ ತರ್ಕವೀರರು ದಿನದಿನಕ್ಕೆ ದೇಶದಲ್ಲಿ ಒಡಕನ್ನು ಹೆಚ್ಚಿಸುತ್ತಿದ್ದಾರೆ. ಕಾರ್ಯವೀರರಾದ ಸುಭಾಷರು ಎಲ್ಲರನ್ನೂ ಕಾರ್ಯರಂಗಕ್ಕೆಳೆದು ಇದ್ದ ಒಡಕನ್ನೆಲ್ಲ ಒಂದುಗೂಡಿಸಿ ಬಿಸಿದರು. ಪ್ರತಿಯೊಬ್ಬ ತರುಣ ಭಾರತೀಯನೂ ಓದಿ ತನ್ನ ಹೃದಯವನ್ನು ತಿದ್ದಿಕೊಳಬೇಕಾದ ಚರಿತ್ರೆಯಿದು ಮನೆಮನೆಯಲ್ಲಿಯೂ 'ಆಜಾದ್ ಹಿಂದ' ಪುಸ್ತಕ ಕಾಣಿಸಲಿ.

ಜಯಂತ

# ರೋಜರ್ ಬೇಕನ್

(೧೩ನೆಯ ಶತಮಾನದ ಶ್ರೇಷ್ಠ ವಿಜ್ಞಾನಿ)

●

ಶ್ರೀ. ಕೆ. ಎಸ್. ಸವಣೂರ, ಎಮ್. ಎಸ್‌ಸಿ.
ಕರ್ನಾಟಕ ಕಾಲೇಜ್, ಧಾರವಾಡ

ನಮ್ಮ ಚರಿತ್ರನಾಯಕನಾದ ರೋಜರ್ ಬೇಕನ್ನನು, ೧೨ ೪೪ನೆಯ ಇಸ್ವಿಯಲ್ಲಿ ಇಂಗ್ಲಂಡ್ ದೇಶದ 'ಇಲ್ಚೆಸ್ಟರ್' ಎಂಬ ಊರಲ್ಲಿ ಹುಟ್ಟಿದನು. ಈತನು ಕುಲೀನ ಮತ್ತು ಸಿರಿವಂತಿಕೆಯ ಮನೆತನದಲ್ಲಿ ಜನಿಸಿದರೂ, ಇವನ ಮನೆತನದವರು ಮುಂದೆ, ಅರಸನಾದ ನೂರನೆಯ ಹೆನ್ರಿಯ ನಿಮಿತ್ತವಾಗಿ, ತಮ್ಮ ಸಿರಿವಂತಿಕೆಯ ಬಹು ಭಾಗವನ್ನು ಕಳೆದುಕೊಂಡರು. ಈತನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಗ್ರೀಕ್ ಭಾಷೆಯಲ್ಲಿ ನಿಷ್ಣಾತರಾದ ಪ್ರಾಧ್ಯಾಪಕರಲ್ಲಿ ತನ್ನ ಓದನ್ನು ಸಾಗಿಸಿ, ಹಲವು ವರ್ಷಗಳಲ್ಲಿ ಅರಿಸ್ಟಾಟಲನ ತತ್ತ್ವವನ್ನು ತಿಳಿದನು. ಗ್ರೀಕ್ ಭಾಷೆಯಲ್ಲಿದುವ ಎಲ್ಲ ವೈಜ್ಞಾನಿಕ ವಿಚಾರಗಳನ್ನು ಭಾಷಾಂತರಿಸುವುದರ ಮಹತ್ತ್ವವನ್ನು ತಿಳಿಯಿಪಡಿಸಿದನಲ್ಲದೆ, ತಾನಾದರೂ ಇಂತಹ ವಿಚಾರಗಳನ್ನು ತಿಳಿಯಬೇಸುಗ ಈ ಭಾಷೆಯನ್ನು ಕಲಿತನು. ನೋಡಲೇ ಆಕ್ಸ್‌ಫರ್ಡಿನಲ್ಲಿ ಅಸಾಮಾನ್ಯ ಚತುರನೆಂದು ಹೆಸರು ಗಳಿಸಿದ ಈತನು, ಯುರೋಪಖಂಡದಲ್ಲಿ ಮೊದಲನೆಯ ಕರಗತಿಯ ವಿಶ್ವವಿದ್ಯಾಲಯವೆನಿಸಿದ ಮತ್ತು ನಿಸ್ಸತ್ತೆಯ ಆಗರವೆನಿಸಿದ ಪ್ಯಾರಿಸ್ ವಿಶ್ವವಿದ್ಯಾಲಯವನ್ನು ಸೇರಿ, ಅಲ್ಲಿ ಕೂಡ ತನ್ನ ವಿದ್ವತ್ತೆಯ ಉಜ್ವಲತೆಯನ್ನು ಪ್ರಕಟಗೊಳಿಸಿದನು.

ಬೇಕನ್ನನ ಚರಿತ್ರೆಯ ಮತ್ತು ಅವನ ಕೆಲಸದ ಮಹತ್ತ್ವವನ್ನು ತಿಳಿಯಲು ಅಂದಿನ ದೇಶಗಳಲ್ಲಿಯ ಪರಿಸ್ಥಿತಿಯನ್ನು ಗಮನಿಸಲೇಬೇಕಾಗುವುದು. ನಿಜ್ಞಾನದ ಪುರಸ್ಕಾರದ ವಿಷಯವನ್ನು ಲಕ್ಷ್ಯಕ್ಕೆ ತಂದುಕೊಂಡರೆ ಅಜ್ಞಾನ, ತಪ್ಪುತಿಳಿವಳಿಕೆ ಮತ್ತು ಈ ಸಂಬಂಧದ ತಾತ್ಸಾರ ಇವುಗಳು ಒಡೆದುಕಾಣುವುವು. ರೋಮ ನಗರದ ಅವನತಿ, ಗ್ರೀಸಿನ ವಿದ್ವತ್ತೆಯ ಕಾಂತಿಹೀನತೆ ಮತ್ತು ಕಡೆಯದಾಗಿ ರೋಮ ಸಾಮ್ರಾಜ್ಯದ ಪತನ ಇವುಗಳಿಂದ ಯುರೋಪಖಂಡದಲ್ಲಿ ಅಲ್ಪ-ಸ್ವಲ್ಪವಾದರೂ ಉಳಿದಿರುವ ತಾತ್ತ್ವಿಕ ಜಿಜ್ಞಾಸೆಯು ಮಾಯಹೊಂದಿತು.

ಈ ಜಿಜ್ಞಾಸೆಯು ಯುರೋಪನ್ನು ಬಿಟ್ಟಿತಾದರೂ ಜಗತ್ತಿನ ಬೇರೊಂದು ಭಾಗದಲ್ಲಿ ಉದಯವಾಗಿ ಹೆಚ್ಚಿಚ್ಚು ಪ್ರಖರವಾಗತೊಡಗಿತು. ಇದಾವುದು ಪೂರ್ವ ದೇಶಗಳಲ್ಲಿ. ಅಂದಿನ ವಿಜಯಿಗಳಾದ ಮುಸಲ್ಮಾನ್ ಅರಸರು ಬೇರೆ ದೇಶಗಳ ಸಂಸ್ಕೃತಿ, ಜಿಜ್ಞಾಸೆ ವಿಷಯಕವಾದ ಲೇಖನಗಳನ್ನು ನಾಶಗೊಳಿಸದೆ, ಅವುಗಳನ್ನು ಅರಬೀ ಭಾಷೆಯಲ್ಲಿ ಭಾಷಾಂತರಿಸಿದರು. ಹೀಗಾಗಿ ಎಷ್ಟೋ ಬೇರೆ ಬೇರೆ ವಿಷಯಕ—ಖಗೋಲ, ವಿಜ್ಞಾನ, ಗಣಿತ, ಚಿನ್ನ ಮಾಡುವ ವಿದ್ಯೆ ಮುಂತಾದುವುಗಳ ವಿಷಯವಾಗಿ—ಹೊಸ ಶೋಧಗಳನ್ನು ಕೂಡ ನಡೆಯಿಸಿದರು. ಎಂದರೆ ಯುರೋಪಿನ ಮಟ್ಟಿಗೆ ವಿದ್ವತ್ತಿನ ಪ್ರಭೆಯು ತನ್ನ ಎಲ್ಲ ಕಾಂತಿಯನ್ನೂ ಕಳೆದುಕೊಂಡಿತ್ತು. ಎಲ್ಲಿಯೋ ಉಳಿದ ಕೆಲವು ಅನಪೇಕ್ಷಗಳು ಲ್ಯಾಟಿನ್ ಭಾಷೆಯಲ್ಲಿದ್ದು ಅವು ಸಹ ಚರ್ಚಿನ ಸ್ವಾಧೀನದಲ್ಲಿದ್ದುವು.

ಮುಂದೆ ಪರಿಸ್ಥಿತಿಯಲ್ಲಿ ಸ್ವಲ್ಪ ಬದಲಾವಣೆಯಾಗಲಾರಂಭಿಸಿ, ಪಾಶ್ಚಿಮಾತ್ಯರಿಗೂ ಇವುಗಳನ್ನು ಕಲಿಯುವ ವಿಷಯದಲ್ಲಿ ಕುತೂಹಲವು ಉತ್ಪನ್ನವಾಗತೊಡಗಿತು. ಇದಾಗಿ ಬೇರೆ ಭಾಗಗಳಲ್ಲಿ ಹೊಸ ವಿಶ್ವವಿದ್ಯಾಲಯಗಳು ಸ್ಥಾಪಿಸಲ್ಪಡಹತ್ತಿ, ಇವುಗಳು ವಿದ್ಯಾರ್ಥಿ ಮತ್ತು ಪ್ರಾಧ್ಯಾಪಕರಿಂದ ಹೆಚ್ಚೆಚ್ಚಾಗಿ ತುಂಬಹತ್ತಿದುವು. ಲ್ಯಾಟಿನು ಸಾರ್ವತ್ರಿಕ ಭಾಷೆಯಾಯಿತು ವಿಜ್ಞಾನ ವಿಷಯದಲ್ಲಿ ಪ್ಯಾರಿಸ್ ವಿಶ್ವವಿದ್ಯಾಲಯವು ಮುಕುಟಸ್ಥಾನವನ್ನು ವಹಿಸಿತು. ಇಲ್ಲಿ ಅರಿಸ್ಟಾಟಲನ ತತ್ತ್ವಪ್ರತಿಪಾದನೆಯೇ ಮುಖ್ಯವಾಗಿದ್ದು, ಯುರೋಪ ಖಂಡದ ಅಂದಿನ ಮುಖ್ಯ ಧ್ಯೇಯವೆಂದರೆ—ಸತ್ಯಾನ್ವೇಷಣೆಯಲ್ಲ—ಅಂಧಾನುಕರಣವಾಗಿದ್ದಿತು. ಈ ಅಂಧಾನುಕರಣಕ್ಕೆ ವಿಷಯಗಳೆಂದರೆ—ಅರಿಸ್ಟಾಟಲನ ತತ್ತ್ವಗಳು. ಇಂತಹ ಪರಿಸ್ಥಿತಿಯಲ್ಲಿ ಪಾಶ್ಚಿಮಾತ್ಯ ದೇಶದ ಸುಸೈವವೋ ಎಂಬಂತೆ ೧೩ನೆಯ ಶತಮಾನದಲ್ಲಿ ಕಾಂತಿಹೀನವಾದ ವಿದ್ವತ್ತ್ವಭೆಯನ್ನು ಉಜ್ವಲಗೊಳಿಸಲು ರೋಜರ್ ಬೇಕನ್ನನು ಜನಿಸಿದನು.

ಇನ್ನು ತತ್ತ್ವಜ್ಞಾನ ವಿಷಯದಲ್ಲಿ ಅಂದಿನ ಪರಿಸ್ಥಿತಿಯನ್ನು ವಿಚಾರ ಮಾಡಿದುದಾದರೆ, ಪ್ಲೇಟೊನಿಂದ ಪ್ರಾರಂಭಿಸಲ್ಪಟ್ಟು, ಅರಿಸ್ಟಾಟಲನ ತತ್ತ್ವಗಳಿಂದ ಪೋಷಿತವಾದ ಅಂದಿನ ವಿಶ್ವದ ವಿಚಾರಗಳು ಚತಿ ಸೈಚಿತ್ರ್ಯಪೂರ್ಣವಿದ್ದು—ಜಗತ್ತಿನಲ್ಲಿಯ ಯಾವುದೊಂದು ವಿಷಯದ ಬದಲಾವಣೆಗಳ ಕಾರಣಗಳನ್ನು, ಮೇಲಣ ಆಕಾಶದಲ್ಲಿಯ ಬದಲಾವಣೆಗಳಿಗೆ ಜೋಡಿಸುತ್ತಿದ್ದರು. ಹಗಲು-ರಾತ್ರಿಗಳು, ಋತುಮಾನಗಳು ಮುಂತಾದುವುಗಳು—ಎಂದರೆ ಮುಖ್ಯ ಮುಖ್ಯ ಜಗತ್ತಿನಲ್ಲಿಯ ಬದಲಾವಣೆಯ ಕಾರಣಗಳನ್ನು ಆಕಾಶದಲ್ಲಿಯ ನಕ್ಷತ್ರಗಳ ಚಲನೆಗೂ ಮತ್ತು ಅಮುಖ್ಯ ಇಲ್ಲವೆ ನಮ್ಮ ಬುದ್ಧಿಗೆ ಮೀರಿದ ಬದಲಾವಣೆಗಳನ್ನು ಗ್ರಹಗಳ ಚಲನೆಗೂ ಜೋಡಿಸುತ್ತಿದ್ದರು. ಹೀಗಾಗಿ ಫಲಜ್ಯೋತಿಷವು ಬೆಳೆದಿತ್ತು. ಇಂತಹ ನೇಲೆಯಲ್ಲಿಯೂ ಹಲವು (ಸೆಂಟ್ ಫ್ರಾನ್ಸಿಸ್ ಸಂಘದ) ಬಿಕ್ಷುಗಳು (Friars) ಮಾತ್ರ ಗಣಿತ, ನೈಸರ್ಗಿಕ ತತ್ತ್ವಜ್ಞಾನ, ಸಾಹಿತ್ಯ ಇವುಗಳ ವಿಷಯವಾಗಿ ಆಖ್ಯಾನಮಾಡಿ, ಇಲ್ಲದೆ ತಾವೇ ಹೆಚ್ಚಿನ ಶೋಧನಮಾಡಿ ಯುರೋಪದಲ್ಲಿ ಹೊಸ ಜ್ಞಾನವನ್ನೇ ಸ್ಥಾಪಿಸುವ ಕೆಲಸದಲ್ಲಿ ಮುಡಿದಿದ್ದಾರೆ. ನಮ್ಮ ಚರಿತ್ರನಾಯಕನು ಇದೇ ಗುಂಪಿನಲ್ಲಿಯ ಒಬ್ಬನಿದ್ದು, ಅಂದಿನ ಪರಿಸ್ಥಿತಿಯಲ್ಲಿ ಇವನು ಮಾಡಿದ ಕೆಲಸವು ಅಸಾಮಾನ್ಯವಾದುದು.

ಮುಂದೆ ೧೨೪೦ನೆಯ ಇಸ್ವಿಯಲ್ಲಿ ಈತನು ಪ್ಯಾರಿಸಿನಿಂದ ಆಕ್ಸ್‌ಫರ್ಡಿಗೆ ಹಿಂದಿರುಗಿದನು. ತಾನೇ ಹೇಳಿದಂತೆ ೨೦ ವರ್ಷಗಳ ಕಾಲವಲ್ಲಿ ಪುಸ್ತಕಗಳ ಮತ್ತು ಪ್ರಯೋಗ-ಸಲಕರಣೆಗಳ ನಿಮಿತ್ತವಾಗಿ ೨೦೦೦ ಪೌಂಡ್‌ಗಳನ್ನು ಖರ್ಚು ಮಾಡಿದ್ದಾನೆ. ಈತನು ಇಲ್ಲಿ ನಾಡಿದ

* (1) Makers of Science — Hart (2) Popular Science Vol. VII — Harmsworth ಈ ಎರಡು ಗ್ರಂಥಗಳ ಆಧಾರದಿಂದ ರೋಜರ್ ಬೇಕನ್ನನ ಚರಿತ್ರೆಯನ್ನು ಬರೆಯಲಾಗಿದೆ. —ಲೇ.

ತೋಧಗಳು ಇವನನ್ನೇನೋ ಕೀರ್ತಿಶಿಖರಕ್ಕೆ ಒಯ್ದುವಾದರೂ ಇವನಿಗೆ ದ್ವೇಷಿಗಳನ್ನೂ ಹುಟ್ಟಿಸಿದುವು. ಇವನು ಅಜ್ಞಾನಿಗಳಾಪ ಮತ್ತು ಜ್ಞಾನಿಗಳೆಂದು ತೋರ್ಪಡಿಸಲೆಳಸುವ ಜನರ ಮಧ್ಯದಲ್ಲಿದ್ದನು. ಅಂದಿನ ಕಾಲದಲ್ಲಿ ಅತ್ಯಂತ ಪ್ರಭಾವಯುತವಾದ ಸಂಸ್ಥೆಯೆಂದರೆ ಚರ್ಚು ಮತ್ತು ಅದನ್ನು ನಡೆಯಿಸುವವರು ಈ ದ್ವೇಷಿಗಳ ದ್ವೇಷವನ್ನು ಪ್ರಜ್ವಲಗೊಳಿಸಲು ಒಂದು ಕಾರಣವಾಯಿತು: ಬೇಕನ್ನನು ಸಾದ್ರಿಗಳ ವಿಷಯವಾಗಿ, ಚತುರತನವನ್ನು ಉಪಯೋಗಿಸದೆ ನಿಸ್ಪೃಹನಾಗಿ ಬರೆದುದೇ ಕಾರಣವು. ಈ ಜನರ ದಡ್ಡತನ, ಶೀಲ ಮುಂತಾದುವುಗಳ ವಿಷಯವಾಗಿ ಅಂದಿನ ಧರ್ಮಾಧಿಕಾರಿಗೆ ಬರೆಯುವಲ್ಲದೆ, ಇವುಗಳಲ್ಲಿಯ ಸುಧಾರಣೆಯ ಅಗತ್ಯವನ್ನೂ ತಿಳುಹಿಸಿದ್ದನು. ಈ ವಿಷಯದಲ್ಲಿ 'ಎಲ್ಲ ನಾಸ್ತಿಕವಾದವನ್ನು ನಿರ್ಮೂಲ ಮಾಡಲು ಮತ್ತು ಕ್ರೈಸ್ತ ವಿರೋಧಿಗಳನ್ನು ನಾಶಮಾಡಿ ಜನರ ಮನಸಿನಲ್ಲಿ ಧರ್ಮದ ನಿಜಕಲ್ಪನೆಯು ಮೂಡಲು ನಿಜವಾದ ತತ್ತ್ವಜ್ಞಾನದ ಪದ್ಧತಿಯು ಉಪಯುಕ್ತವಾದುದು—' ಎಂದು ಇವನ ಅಭಿಪ್ರಾಯ.

ಇದೆಲ್ಲದರ ಫಲವಾಗಿ ಇವನು ಪ್ಯಾರೀಸ್ ನಗರಕ್ಕೆ ಹೋಗಲು ಅಜ್ಞಾಪಿಸಲ್ಪಟ್ಟನು; ಮತ್ತು ಅಲ್ಲಿ ೧೬೭೭ರಿಂದ ೧೦ ವರ್ಷಗಳವರೆಗೆ ನಜರು ಕೈದಿನಲ್ಲಿ ಇರಬೇಕಾಯಿತು. ಈ ಹತ್ತು ವರ್ಷಗಳಲ್ಲಿ ಇವನಿಗೆ ಬೇರೆಯವರೊಂದಿಗೆ ಮಾತನಾಡಲು ಇಲ್ಲವೆ ತನ್ನ ಅಭಿಪ್ರಾಯಗಳನ್ನು ಬರೆಯಲು ಕೂಡ ಅಪ್ಪಣೆ ಇರಲಿಲ್ಲ. ಮುಂದೆ ೧೬೭೬ರಲ್ಲಿ, ಧರ್ಮಸಾಮ್ರಾಜ್ಯಕ್ಕೆ ಅಭಿಷಿಕ್ತನಾದ ಹೊಸ ಧರ್ಮಾಧಿಕಾರಿಯು ಆಜ್ಞೆಗನುಸಾರವಾಗಿ, ವಿಜ್ಞಾನ ವಿಷಯಕ ತನ್ನ ಅಭಿಪ್ರಾಯಗಳನ್ನು ತಿಳಿಸಲು ಅನುವಾಯಿತು. ಆದರೆ ಇವನು ಹೇಳಬೇಕಿರುವುದೆಲ್ಲವೂ ಇವನ ತಲೆಯಲ್ಲಿ ಇದ್ದಿತು. ಈ ವೇಳೆಯನ್ನು ಸಾಧಿಸಿ, ಮುಂದೆ ೧೮ ತಿಂಗಳುಗಳು ಮುಗಿಯುವುದರಲ್ಲಿಯೆ ಮೂರು ಅತ್ಯುತ್ತಮ ಗ್ರಂಥಗಳನ್ನು ಬರೆದನು. ಇವುಗಳಲ್ಲಿ ಇವನು—ಭೌತಿಕ, ನೈತಿಕ, ಬುದ್ಧಿವಿಷಯಕ ಮತ್ತು ಬ್ರಹ್ಮವಿದ್ಯೆ ಇವುಗಳನ್ನು ಕುರಿತು ಕೂಲಂಕಷವಾಗಿ ನಿರ್ಮಿಸಿದ್ದನು. ಇವೇ ಇವನ ಹೆಸರನ್ನು ಈ ತನಕ ಉಳಿಸಲು ಸಹಕಾರಿಯಾದುವುಗಳು. ಇವುಗಳಲ್ಲಿ ಪ್ರಾಮುಖ್ಯವಾಗಿ, ಚರ್ಚಿಗೆ ಸಂಬಂಧಪಟ್ಟ ಮತ್ತು ಅಧಿಕಾರಯುತರಾದ ಜನರ ಮೂರ್ಖ ಚೋದನೆಯಿಂದ ಎಲ್ಲ ರಾಷ್ಟ್ರಗಳನ್ನೂ ಬೌದ್ಧಿಕ ದೃಷ್ಟ್ಯಾ ವಿನೋಜನೆಗೊಳಿಸುವ ವಿಚಾರಗಳವೆ.

ಈಗ ಇವನಿಗೆ ಆಕ್ಸ್‌ಫರ್ಡಿಗೆ ಹೋಗಲು ಒಪ್ಪಿಗೆಯು ದೊರೆಯಿತು. ಮುಂದೆ ೧೬೬೫ರಲ್ಲಿ ಧರ್ಮಾಧಿಕಾರಿಯು ಮರಣಹೊಂದಿದ್ದರಿಂದ ಇವನಿಗೆ ಮತ್ತೆ ಬಂದಿವಾಸವು ಬಂದೊದಗಿತು. ಮಂತ್ರವಾದಿ ಮತ್ತು ನಾಸ್ತಿಕನೆಂಬ ಆಪಾದನೆಗಳು ಇವನ ಮೇಲೆ ಹೇರಲ್ಪಟ್ಟು, ಮತ್ತೆ ಈತನು ಪ್ಯಾರೀಸ್ ನಗರದಲ್ಲಿ ೧೫ ವರ್ಷಗಳವರೆಗೆ ಬಂದಿವಾಸದಲ್ಲಿ ಇಡಲ್ಪಟ್ಟನು. ಈ ೧೫ ವರ್ಷಗಳಲ್ಲಿ ಶತ್ತ್ವಜ್ಞಾನ ವಿಷಯಕವಾಗಿ ಅನೇಕ ಪುಸ್ತಕಗಳನ್ನು ಬರೆದಿದ್ದಾನೆ. ಬಂಧಮುಕ್ತನಾದ ಮೇಲೆ ಆಕ್ಸ್‌ಫರ್ಡ್ ನಗರಕ್ಕೆ ಹೋಗಿ, ವಯಸ್ಕನಾಗಿದ್ದರೂ ಬ್ರಹ್ಮವಿದ್ಯೆಯನ್ನು ಕುರಿತು ಅಲ್ಲಿ ಮತ್ತೊಂದು ಪುಸ್ತಕವನ್ನು ಬರೆದನು. ಆ ಮೇಲೆ ತನ್ನ ಅಂತಿಮ ವಯಸ್ಸಿನಲ್ಲಿ ಎಂದರೆ ೧೮೮೫ನೆಯ ಇಸ್ವಿಯಲ್ಲಿ ಅಲ್ಲಿಯೆ ಮರಣಹೊಂದಿದನು.

ರೋಜರ್ ಬೇಕನ್ನನು ಅರ್ವಾಚೀನ ವೈಜ್ಞಾನಿಕ ವಿಷಯಗಳ ಜನಕನೆಂದು ಸಂಬೋಧಿಸಲ್ಪಟ್ಟುದು ನಿಜವೆಂಬಂತೆ ತೋರುತ್ತದೆ. ಈತನ ಬರೆಹಗಳನ್ನು ಓದಿದರೆ, ಈತನು ತಾನು ಇದ್ದ ಕಾಲಕ್ಕೆಂತ ಎಷ್ಟೋ ಶತಮಾನಗಳ ಮುಂದೆ ಇದ್ದವನಂತೆ ಭಾಸವಾಗುತ್ತದೆ. ಇದೇ ಇವನ ವಿಚಾರ ಸರಣಿಯ ಸ್ಪಾಧಿಮೆಯನ್ನು ತೋರಿಸುವುದು. ಈತನನ್ನು ಮಂತ್ರವಾದಿಯೆಂದು ಆರೋಪಿಸಲು ಇವನ ಬರೆಹಗಳೇ ಕಾರಣ. 'ಜನರಿಂದಲ್ಲದೆ ಹಾಗೆಯೆ ದೊಡ್ಡ ದೊಡ್ಡ ಹಡಗುಗಳನ್ನು ನಡೆಯಿಸಲು ಸಾಧ್ಯವಾಗಬಹುದು; ಅವರಂತೆಯೆ ವಾಹನಗಳಾದರೂ ಅವುಗಳನ್ನು ಎಳೆಯಲು ಯಾವ ಪ್ರಾಣಿಯೂ ಇರದೆ ಅತಿ ವೇಗದಿಂದ ನಡೆಯಬಲ್ಲುವು; ಕೃತ್ರಿಮ ರೆಕ್ಕೆಗಳಿಂದ ಕೂಡಿದ ಮತ್ತು ಯಂತ್ರ ಶಕ್ತಿಯ ಸಹಾಯದಿಂದ ಹಾರಾಡುವ ಉಪಕರಣಗಳನ್ನೂ ರಚಿಸಲು ಸಾಧ್ಯ!' ಇದೇ ರೀತಿ ಒಂದು ವಸ್ತುವನ್ನು ಅತಿ ದೊಡ್ಡದನ್ನಾಗಿ ಮಾಡುವ ಗಾಜುಗಳ ಉಲ್ಲೇಖವೂ ಇದೆ.

ಯಾವ ೧೩ನೆಯ ಶತಮಾನದಲ್ಲಿ ಯುರೋಪವು ಜ್ಞಾನ ವಿಷಯದಲ್ಲಿ ಕಾಂತಿಹೀನವಾಗಿತ್ತೋ ಮತ್ತು ಮುಂದಿರಿವುದು ನಾಸ್ತಿಕತನವೆಂದು ಅಧಿಕಾರಿಗಳಿಂದ ತಿಳಿಯಲ್ಪಟ್ಟು, ಇಂತಹ ಮನುಷ್ಯನು ಅನೇಕ ವಿಧವಾಗಿ ಬಂಧನ, ಚಿತ್ರಹಿಂಸೆ ಮೊದಲಾದುವುಗಳಿಗೆ ಪಲೆ ಬಾಗುವುದು ಅನಿವಾರ್ಯವಾಗಿತ್ತೋ, ಇಂತಹ ಪರಿಸ್ಥಿತಿಯಲ್ಲಿ ಈ ನಮ್ಮ ಚರಿತ್ರನಾಯಕನು ವಿಜ್ಞಾನ ಪುರಸ್ಕಾರ ವಿಷಯದಲ್ಲಿ ಕಂಡ ಕನಸುಗಳು ಸತ್ಯ ಸೃಷ್ಟಿಯಲ್ಲಿಳಿಯಲು ಈ ೯ ಶತಮಾನಗಳ ಅವಧಿಯೂ ಮತ್ತು ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿಯ ಅನೇಕ ಜನರ ನಿಜವಾದ ಪ್ರಗತಿಯೂ ಅವಶ್ಯವಿತ್ತೆಂಬುದನ್ನು ನಾವು ಇಂದು ಕಾಣುತ್ತಿದ್ದೇವೆ. ಇವನು ಕಂಡ ಗಾಜಿನ ಕನ್ನಡಿಗಳ ಉಪಯುಕ್ತತೆಯ ಕನಸು ನನಸಾಗಲು ಗ್ಯಾಲಿಲಿಯೋನು ಮೂರು ಶತಮಾನಗಳ ನಂತರ ಉದಯಿಸಬೇಕಾಯಿತು. ಇದರಂತೆಯೆ ಯಂತ್ರಸಹಾಯದಿಂದ ನಡೆಯುವ ಹಡಗುಗಳು, ಪ್ರಾಣಿಗಳಿಂದಲ್ಲದೆ ಬೇರೆ ರೀತಿಯಲ್ಲಿ ನಡೆಯುವ ಮತ್ತು ಹೊಸ ಶತಮಾನದಲ್ಲಿಯೆ ಉದಯಯೊಂದಿದ ಮೋಟರು, ರೈಲುಬಂಡಿ ಮೊದಲಾದುವುಗಳೂ ಇವನ ಊಹೆಗೆ ಪ್ರತ್ಯಕ್ಷ ನಿದರ್ಶನಗಳು. ವಿಮಾನಗಳ ಕನಸು ಸತ್ಯವಾಗಲು ಏಳು ಶತಮಾನಗಳ ಅವಧಿಯು ಗತಿಸಬೇಕಾಯಿತು. ಇವೆಲ್ಲವುಗಳನ್ನು ವಿಚಾರ ಮಾಡಿದುದಾದರೆ ಇವನ ನಿವೇಚನೆಯ ಪ್ರತಿಭೆಯೂ ಮತ್ತು ಅದರ ಕೆಲಸ ಮಾಡುವ ದಿಶೆಯ ವಿಷಯವಾಗಿ ತೋರಿಬಂದ ಸತ್ಯತೆಯೂ ಇವನ ಉಜ್ವಲ ಸ್ಪಾಧಿಮೆಗೆ ನಿದರ್ಶನವಾಗಿದ್ದು, ಈತನು ತನ್ನ ಕಾಲಕ್ಕೆಂತ ಎಷ್ಟೋ ಶತಮಾನ ಮುಂದುವರಿದಿದ್ದನು. ಎಂಬುದಕ್ಕೆ ಪ್ರತೀಕಗಳು.

ಇದರಂತೆಯೇ ಈತನು ಮದ್ದಿನ ವಿಷಯವನ್ನು ತಿಳಿದಿದ್ದನೆಂದೂ, ಪಾರಜವನ್ನು ಬಂಗಾರವನ್ನಾಗಿ ಮಾಡುವ ಪ್ರಯತ್ನವನ್ನು ಮುಂದುವರಿಸಿದನೆಂದೂ ನಮಗೆ ಕಂಡುಬರುತ್ತದೆ. ಕಾಮನಬಿಲ್ಲು ಮೂಡುವ ಕಾರಣಗಳು, ಚಾಳೀಸುಗಳನ್ನು ಶೋಧಿಸಲು ಮತ್ತು ಉಪಯೋಗಿಸಲು ಬೇಕಿರುವ ಗಾಜುಗಳ ವಿಷಯದ ಪೂರ್ವಶೋಧಗಳು, ಬೆಳಕಿನ ವಿಷಯವಾದ—ವಕ್ರೀಭವನ (Refraction) ಮತ್ತು

(೩೭೨ನೆಯ ಪುಟ ನೋಡಿರಿ.)

# ೧೯೪೫ರಲ್ಲಿ ಕನ್ನಡ ಸಾಹಿತ್ಯದ ಪ್ರಗತಿ

**ಶ್ರೀ. ಎಚ್. ಎಸ್. ಪಾಟೀಲ,** ಎಂ. ಎ., ಬಿ. ಕಾಮ್. ಧಾರವಾಡ

ಯುದ್ಧವು ನಡೆದು ಬಂದ ಆರನೆಯ ವರುಷವಾದರೂ, ಈ ಸಲ ಕಾಗದ ನಿಯಂತ್ರಣವು ಕೊಂಚ ಸಡಿಲಾದುದರಿಂದ ಮತ್ತು ಅದಕ್ಕೆಂತ ಹೆಚ್ಚು ಜನರಲ್ಲಿ ಬೇಡಿಕೆಯು ಬೆಳೆದಿರುವುದರಿಂದ, ಕನ್ನಡ ಸಾಹಿತ್ಯವು ಕೂಡ ಹಿಂದುಸ್ತಾನದ ಮಿಕ್ಕ ಸಾಹಿತ್ಯಗಳ ಜೊತೆಯಲ್ಲಿಯೆ—ಸಾಕಷ್ಟು—ಮುಂದುವರಿದಿದೆ ಎಂದು ಧಾರಾಳವಾಗಿ ಹೇಳಬಹುದು. ಅದರಲ್ಲಿಯೂ ಕನ್ನಡ ಸಾಹಿತ್ಯದಲ್ಲಿ ಹಲಕೆಲವು ವೈಶಿಷ್ಟ್ಯಗಳು, ವೈವಿಧ್ಯಗಳು ಕಂಡು ಬರುತ್ತಿದ್ದು ಅದು ಕನ್ನಡ ಸಾಹಿತ್ಯದ ಸರ್ವಾಂಗೀಣ ಬೆಳೆವಣಿಗೆಯ ದ್ಯೋತಕ ಎಂದೇ ಹೇಳಬಹುದು.

ಇನ್ನು ಈ ವರುಷದಲ್ಲಾದ ಪ್ರಗತಿಯು ವಿಷಯವಾಗಿ ವಿಚಾರ ಮಾಡುವ ಉದ್ದೇಶದಿಂದ ಇಡಿಯ ವರುಷದಲ್ಲಿ ಪ್ರಕಟಿಸಲ್ಪಟ್ಟ ಪುಸ್ತಕಗಳ ಒಂದು ವಿಹಂಗಮ ದೃಶ್ಯವನ್ನು ಪಡೆದಲ್ಲಿ ಆರಂಭಕ್ಕೆ ನಮಗೆ ಒಂದು ಸಂಗತಿಯು ಗೋಚರನಾಗುವುದು. ಅದೆಂದರೆ ಕರ್ನಾಟಕದಲ್ಲಿ ಪ್ರಗತಿಶೀಲ ಲೇಖನದ ಕಾರ್ಯ. ಕಳೆದ ಸಲ ಈ ವಿಷಯವಾಗಿ ಕನ್ನಡದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಪ್ರದೀರ್ಘವಾದ ಮತ್ತು ಪ್ರಗಲ್ಭವಾದ ಚರ್ಚೆಗಳು ನಡೆದು, ಪ್ರಗತಿಪರ ಸಾಹಿತ್ಯದ ವಿಷಯವು ಜನರ ಕಣ್ಣಿಗೆ ಬಿದಿದೆ. ಆದರೂ ಪ್ರಗತಿಶೀಲ ಬರೆಹದ ಬಗೆಯಲ್ಲಿ ಭಿನ್ನಾಭಿಪ್ರಾಯವಿರದಿದ್ದರೂ ಯಾವ ಬರೆಹಕ್ಕೆ ಪ್ರಗತಿಯ ಬರೆಹ ಎನ್ನಬೇಕು ಮತ್ತು 'ನಾನು ಪ್ರಗತಿಶೀಲ' ಎಂದು ಹೇಳಿಕೊಳ್ಳುವವರ ಲೇಖನಗಳು ಪ್ರಗತಿಪರ ಲೇಖನಗಳು ಎಂದು ತಿಳಿಯಬೇಕೊ ಅಥವಾ ಆ ಲೇಖನಗಳ ಗುಣ-ಪರಿಣಾಮಗಳಿಂದ ಮೌಲ್ಯಮಾಪನಗಳಾಗಬೇಕೊ?—ಎಂಬ ವಿಷಯವು ನಿರ್ಣಯವಾಗದೆ ಉಳಿಯಿತು—ಅದು ಹಾಗೆ ಉಳಿಯುವುದೇ ಸರಿಯಾದುದು—ಎಂದು ತೀರ್ಮಾನಿಸಬಹುದು. ಉದಾಹರಣಾರ್ಥವಾಗಿ ಬೆಂಗಳೂರು ಭಾಗದ ಪ್ರಗತಿಶೀಲ ಲೇಖಕರ ಸಂಘವನವರು ಈ ವರುಷದ ಪ್ರಾರಂಭದಲ್ಲಿ ಕೆಲವು ಪುಸ್ತಕಗಳನ್ನು ಹೊರಡಿಸಿದರು. ಅದಕ್ಕಿಂತ ಮೊದಲೇ ಹೊರಟ—'ಮ್ಯಾಕ್ಸಿಂ ಗಾರ್ಕಿ ಅವರ ಜೀವನ ಮತ್ತು ಕೃತಿಗಳು', ಶ್ರೀ. ಅ. ನ. ಕೃಷ್ಣರಾಯರ 'ನನ್ನನ್ನು ನಾನೇ ಕಂಡೆ' ಎಂಬ ಪುಸ್ತಕಗಳು ಮತ್ತು ಅನಂತರದ ಶ್ರೀ. ಅ. ನ. ಕೃ. ಅವರು ಸಂಪಾದಿಸಿದ 'ಮರುಳಸಿದ್ಧನ ಕಾವ್ಯ', 'ರಸಋಷಿ' ಮತ್ತು ಶ್ರೀ. ಅರ್ಚಕ ವೆಂಕಟೇಶರ 'ಜೀವನಸಂಗ್ರಾಮ' ಹಾಗೂ ಶ್ರೀ. ಬಸವರಾಜ ಕಟ್ಟೀಮನಿ ಅವರ 'ಕಾರವಾನ್' ಈ ಪ್ರಕಟನೆಗಳು ಜನರ ಮನಸ್ಸನ್ನು ಸೆಳೆದುವು. ಆದರೆ ಅವುಗಳಲ್ಲಿ ಯಾವ ಬರೆಹವನ್ನು 'ಪ್ರಗತಿಪರ' ಎಂದು ತಿಳಿಯಬೇಕು, ಮತ್ತು ಅದನ್ನು ಹೇಗೆ ಮತ್ತು ಯಾರು ನಿರ್ಣಯಿಸುವವರು?—ಎಂಬ ಮಾತು ಸಂದಿಗ್ಧವಾಗಿಯೆ ಉಳಿಯಿತು. ಆದರೂ ಈ ಸಂಘದವರು ಇನ್ನು ಪುಸ್ತಕಗಳನ್ನು ಈ ಮುಗ್ಗಟ್ಟಿನ ಸಮಯದಲ್ಲಿ ಪ್ರಕಟಿಸಿ, ಒಂದು ಹೊಸ ವಿಷಯದ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಟ್ಟು, ಇಲ್ಲಿಯ ವಿಚಾರದ ಮಟ್ಟವನ್ನು ಸಹಿತ ಜಾಗತಿಕ ವಿಚಾರದ ಜೊತೆಯಲ್ಲಿ ಒಯ್ದುದು ಶ್ಲಾಘನೀಯವಾದ ಸಂಗತಿ.

ಇನ್ನೊಂದು ಮಹತ್ತ್ವದ ಹೆಜ್ಜೆಯೆಂದರೆ ಇತ್ತೀಚೆಗೆ ಕನ್ನಡ ಸಾಹಿತ್ಯದಲ್ಲಿ ಬಳೆಯುತ್ತಲಿರುವ ಗಾಂಧೀ ಸಾಹಿತ್ಯದ ಭಾಗ—ಎಂದು ಹೇಳಬಹುದು. ಆದರಲ್ಲಿಯೂ ೧೯೪೨ರ ಕ್ರಾಂತಿಯ ದಿನಗಳ ನಂತರ ಬಹುತರವಾಗಿ ಕಾಗದದ ನಿಯಂತ್ರಣಕ್ಕಾಗಿಯೂ, ದೇಶದೊಳಗಿನ ಪರಿಸ್ಥಿತಿಯು ಹಾಗೆಯೆ ಭೀಕರವಾಗಿ ಉಳಿದುದಕ್ಕಾಗಿಯೂ ಈ ಬಗೆಯ ಅಥವಾ ಯಾವುದೇ ಬಗೆಯ ಬರೆಹದಲ್ಲಿ ಉತ್ತೇಜನ—ಅನುಕೂಲಗಳಿರಲಿಲ್ಲ. ಆದರೆ ಅಂತಹ ತೊಡಕುಗಳು ಈಗ ತುಸು ಸರಿದು ವಾತಾವರಣವು ಹಸನಾದಕೂಡಲೆ, ಹೊರಬಲು ಬೆಳಕಿಗೆ ಬಂದ ಸಾಹಿತ್ಯವೆಂದರೆ ಗಾಂಧೀ ಸಾಹಿತ್ಯ. ಅದು ಕಳೆದ ಸಂಗ್ರಾಮದ ಮಹತ್ತ್ವವನ್ನು ತಿಳಿಸಿಕೊಡುವುದಲ್ಲದೆ ಹೇಗೆ ಅನಿವಾರ್ಯವಾಗಿ ಹೊರಹೊಮ್ಮಬೇಕಾದ ಅಂಶವಾಗಿತ್ತು ಎಂಬುದನ್ನು ಸೂಚಿಸುತ್ತದೆ. ಒಂದು ಪತ್ರಿಕೆಯನ್ನೆ ತೆಗೆದುಕೊಳ್ಳಲಿ, ಎಂದು ಪ್ರಕಟನೆಯನ್ನೆ ಹಿಡಿದು ನೋಡಲಿ, ಅದರಲ್ಲಿ ಗಾಂಧೀವಿಚಾರಗಳ ಪರಿಣಾಮ, ಭಾರತದ ಸಂಗ್ರಾಮದ ಸಂನಿವೇಶ ಇಲ್ಲವೆ ರಾಜಕೀಯ ಆಂದೋಲನದ ವಿಷಯವು ಒಂದಿಲ್ಲೊಂದು ರೂಪದಲ್ಲಿ ಕಂಡೇ ಕಾಣುವುದು ಅದರಲ್ಲಿಯೂ ಶ್ರೀ. ಸಿದ್ಧವನಹಳ್ಳಿಯ ಕೃಷ್ಣಶರ್ಮರು. ಮೊದಲೇ ಹೊರಡಿಸಿದ ತಮ್ಮ ಅನೇಕ ಗಾಂಧೀ ಗ್ರಂಥಗಳಿಗೆ ಮತ್ತೆ ಉತ್ತಮ ಗ್ರಂಥರತ್ನಗಳನ್ನು ಸೇರಿಸಿದ್ದಾರೆ. ವಿಚಾರಸಾಹಿತ್ಯ ಸಂಸ್ಥೆಯವರು ಹೊಸದಾಗಿ ಆರಂಭ ಮಾಡಿದ್ದರೂ, ಹುರುಪಿನೀವ ಗಾಂಧೀ ಸಾಹಿತ್ಯವನ್ನು ಕೂಡ ಜೊತೆಯಿಸತೊಡಗಿರುವರು. ಅವರು ಪ್ರಕಟಿಸಿದ 'ಗಾಂಧೀ ಯೋಜನೆ', ಹುಬ್ಬಳ್ಳಿಯಿಂದ ರಾಷ್ಟ್ರೀಯ ಸಾಹಿತ್ಯ ಸ್ವಾಧ್ಯಾಯ ಸಂಸ್ಥೆಯವರು ಹೊರಡಿಸಿದ 'ಗಾಂಧೀಜಿ', 'ಸತ್ಯಾಗ್ರಹ' ಮತ್ತು 'ರಾಷ್ಟ್ರೀಯ ಶಿಕ್ಷಣ', ಎಂಬ ಶ್ರೀ. ದಿವಾಕರ ರಂಗರಾಯರ ಕೃತಿಗಳು, ಶ್ರೀ. ಕಲ್ಲನಗೌಡರ 'ಅಸ್ಪೃಶ್ಯತಾ ನಿವಾರಣೆ' ಎಂಬ ಪುಸ್ತಕ ಮುಂತಾದುವು ಭಾರತೀಯ ಸಾಹಿತ್ಯದ ಮಿಕ್ಕ ಸಾಹಿತ್ಯಗಳ ಸರಿಸಮಾನವಾಗಿ ನಿಲ್ಲುವಂತೆ ಕನ್ನಡ ಸಾಹಿತ್ಯಕ್ಕೂ ಸ್ಥಾನವನ್ನು ಕಲ್ಪಿಸಿಕೊಟ್ಟಿರುತ್ತವೆ. ಅದರಂತೆಯೆ ಇಲ್ಲಿಯವರೆಗೆ ಕೇವಲ ಭಾಷಾಂತರ, ರೂಪಾಂತರಗಳಿಂದ ಮಾತ್ರ ಗಾಂಧೀ ಸಾಹಿತ್ಯದ ಸವಿಯನ್ನು ಕನ್ನಡಿಗರು ಪಡೆಯುತ್ತಿದ್ದುದು ಈಗ 'ಸತ್ಯಾಗ್ರಹ'ದಂತಹ ಸ್ವತಂತ್ರ ಮತ್ತು ಹೊಸರೀತಿಯ ಕೃತಿರತ್ನಗಳು ಕೂಡ ಕನ್ನಡದಲ್ಲಿ ಬರಹತ್ತಿದುದು ತುಂಬಾ ಸಂತೋಷಕರವಾದ ಸಂಗತಿ ಎಂದು ಖಂಡಿತವಾಗಿ ಹೇಳಬಹುದು.

ಇತ್ತ ಕರ್ನಾಟಕದ ವಿಷಯವಾಗಿಯೂ ಈ ಸಲ ಕೆಲವು ಉಪಯುಕ್ತವಾದ ಪುಸ್ತಕಗಳು—ಬರೆಹಗಳು ಬಂದಿವೆ. ಸ್ಫುಟಚಿತ್ರಗಳು ಬಳೆಯುತ್ತ ಬಂದಂತೆಯೆ ಸ್ವಾತಂತ್ರ್ಯಾಕಾಂಕ್ಷೆಯು ಕೂಡ ಜನರಿಗೆ ತಿಳಿಯುತ್ತ ಹೋಗಬೇಕು. ಮತ್ತು ಅದರಂತೆಯೆ ನಮ್ಮ ನಮ್ಮ ಸ್ವಾನೀಕ ಸಮಸ್ಯೆಗಳು, ಮೈತ್ರಿ-ಗೈಮೆಗಳು ಜನರ ಅವಗಾಹನೆಗೆ ಬರಬೇಕು ಎಂಬುದನ್ನು ಸೂಚಿಸುವಂತೆಯೆ ಈ ಸಲ ನಾಲ್ಕೈದು ರಸವಾದ ಹಾಸ್ಯಗಳು ಬೆಳಕಿಗೆ ಬಂದಿವೆ. ಅದರಲ್ಲಿ ಹೊಸ ಹಾಸ್ಯ

ಯನ್ನು ಹಿಡಿದುದು ' ಇಂದಿನ ಕರ್ನಾಟಕ 'ನಾನರೆ. ಹೊಸ ನೋಟವನ್ನು ನೀಡುವುದು ಶ್ರೀ. ಕೃಷ್ಣಶರ್ಮರ ' ಕನ್ನಡ ಸಮಸ್ಯೆ ' ಎಂದೆನ್ನಬಹುದು. ಸೊದಲನೆಯದರಲ್ಲಿ ಕರ್ನಾಟಕದ ಕೆಲವು ಗಂಡುಸೆಟ್ಟಿನ ಮತ್ತು ಹಲವು ಪಡಿಮೂಲೆಯ ಬುಮುಗಳ ಚಿತ್ರಣ. ಪರಂಪರೆ ಮತ್ತು ಆಧುನಿಕ ಸ್ಥಿತಿಯನ್ನು ಕುರಿತು ಚಿತ್ತಾಕರ್ಷಕವಾದ ಚಿತ್ರಣಗಳಿದ್ದು. ' ಕನ್ನಡ ಸಮಸ್ಯೆ ' ಮಲ್ಲಿ ಇಂದಿನ ಕರ್ನಾಟಕವನ್ನೆ ಕನ್ನಡಿಗರ ಬವಣೆಯೆಂತಹದು. ಕನ್ನಡದ ಸ್ಥಿತಿಯು ಎನ್ನು ಕಂಗೆನ್ನುಮೋಗಿರುವುದು ಎಂಬುದರ ಭೀಕರವಾದ ಚಿತ್ರವಿದ್ದಾಗೆ ಇವೆರಡೂ ಚಿತ್ರಗಳು ಸಂಕ್ರಮಣಾವಸ್ಥೆಯಲ್ಲಿರುವ ನಮ್ಮ ಬಾಳಿನ ಎಲ್ಲ ಅನ್ಯಾಯ ಅನಿಸ್ಟಗಳ ಉತ್ಪನ್ನಮೂರ್ತಿಯಂತಿವೆ. ಕರ್ನಾಟಕಕ್ಕೆ, ಮುಮ್ಮೊತ್ತಾರ ಪುನರ್ರಚನೆಯ ಕಾರ್ಯಕ್ರಮವನ್ನು ರೂಪಿಸುವ ಕಾರ್ಯವಾಗಲಿ, ಹೊಸ ರಾಜ್ಯಘಟನೆಯನ್ನು ಸಿದ್ಧಪಡಿಸುವ ಕಾರ್ಯವಾಗಲಿ, ಒಂದಾಗಿ ಸಾಗಲಿಕ್ಕೆ, ಮುಂದೆ ಬಂದು ಸೇರಲಿಕ್ಕೆ, ಬೇಕಾಗುವಷ್ಟಾದ ಸಾಮಗ್ರಿಯನ್ನು ನೀಡುತ್ತವೆ. ಇದರಂತೆಯೆ ಕರ್ನಾಟಕದ ಕೆಲ ಜನರ ವ್ಯಕ್ತಿಚಿತ್ರಗಳನ್ನು ತೆಗೆದು ಓದುಗನಿಗೆ ಸಲ್ಲಿಸಿದ ಶ್ರೀ. ಕುಲಕರ್ಣಿ ದತ್ತಾತ್ರೇಯ ಅವರು ಮತ್ತು ಕನ್ನಡ ಸಾಹಿತಿಗಳ ಬಗ್ಗೆ ಪುಟ್ಟ ಪ್ರವಾಸನವನ್ನು ಬರೆದಿಸಿದ ಶ್ರೀ. ಮಾಸ್ತಿಯವರು. ಒಳಗಡೆ ಪ್ರಸಿದ್ಧವಾದ ಶ್ರೀ. ಕೃಷ್ಣಶರ್ಮರ ' ಕಿಡಿಗಳು ' ಮತ್ತು ಶ್ರೀ. ಹಾ. ಅವರ ' ನಾನಾ ಯಾತ್ರೆ ' ಇವುಗಳ ನೆನಪನ್ನು ತಂದುಕೊಡುತ್ತಾವೆ. ಅಂತಹ ಲೇಖನಿಗಳು ಇನ್ನೂ ಬೇಕು ಎಂಬ ಬಯಕೆಯನ್ನು ಹುಟ್ಟಿಸುತ್ತಾವೆ.

ಕರ್ನಾಟಕಕ್ಕೆ ವಿಶಿಷ್ಟವೂರ್ಣವಾದ ಒಂದೆರಡು ಸಂಸಿವೇಶಗಳು ಕೂಡ ಜರುಗಿವೆ; ಜರುಗಲಿವೆ. ಅದರಲ್ಲಿ ಈಗಾಗಲೆ ಆದ ಉತ್ಸವವೆಂದರೆ **ಶ್ರೀ. ಕೈಲಾಸಂ** ಅವರ ಒಂಬತ್ತನೆಯ ವರ್ಧಂತ್ಯುತ್ಸವ ಶೀಘ್ರದಲ್ಲಿಯೆ ಜರುಗಲಿರುವುದೆಂದರೆ ಶ್ರೀ. ಬೇಂದ್ರೆ ಅವರ ಐವತ್ತನೆಯ ಹುಟ್ಟುಹಬ್ಬ. ಸೊದಲನೆಯ ಉತ್ಸವವು ಸೊನ್ನೆಸೊನ್ನೆ ಕರ್ನಾಟಕದ ಎಲ್ಲ ಕೇಂದ್ರಸ್ಥಳಗಳಲ್ಲಿ ನೆರವೇರಿತಲ್ಲವೆ. ಶ್ರೀ. ಕೈಲಾಸಂ ಅವರ ಅನೇಕ ಅಪ್ರಕಾಶಿತ ನಾಟಕ-ಬರೆಹಗಳನ್ನು ಕೂಡ ಅವೇ ಕಾಲಕ್ಕೆ ಶ್ರೀ. ಮಾಧವ ಸನ್ಸ್ ಅವರು ಜೆಳಕಿಗೆ ತಂದು ಗೌರವಕ್ಕೆ ಪಾತ್ರರಾಗಿದ್ದಾರೆ. ಈ ವಿಜೃಂಭಣೆಯ ಸಂಧಿಯಲ್ಲಿಯೆ ಶ್ರೀ. ಕಂದಾಡೆ ಕೃಷ್ಣ ಅಯ್ಯಂಗಾರೆರೆ ' ನಾನು ಕಂಡ ಕೈಲಾಸಂ ' ಮತ್ತು ಶ್ರೀ. ರಾಜರತ್ನಂ ಅವರು ಬರೆದು ಪ್ರಕಟಿಸಿದ ' ಗುಂಡೂ ಭಾಂಡಾರ ಮಹಿಮ ', ' ಕೊಳ್ಳೇಕ ರಂಗ ', ' ಕೈಲಾಸಂ ಕಾಲಿಂಗ್ ' ಮುಂತಾದ ಪುಸ್ತಕಗಳು ಕೂಡ ಒಂದು ಬಗೆಯಿಂದ ಆ ಮಹಾಪುರುಷನ ಅಲ್ಲ ಸರಿಯಾದ ಅರಿವನ್ನು ಮಾಡಿಕೊಡುವ ಕೆಲಸವನ್ನು ಮಾಡುತ್ತ ಇನ್ನೊಂದು ಬಗೆಯಿಂದ ಅವರ ಕೃತಿಗಳ ಸವಿಯನ್ನು ಹಚ್ಚುವ ಕಾರ್ಯವನ್ನೂ ಮಾಡುತ್ತವೆ. ಏನೇ ಆಗಲಿ, ಈ ಉತ್ಸವದ ನಿಮಿತ್ತವಾಗಿ ಶ್ರೀ. ಕೈಲಾಸಂ ಅವರ ಅನೇಕ ನಾಟಕ-ಲೇಖನಗಳು ಪ್ರಕಟವಾಗಿ ಜನರಿಗೆ ದೊರೆತಾದುದು ವಿಶೇಷ. ಅದರ ಜೊತೆಯಲ್ಲಿಯೆ ವಿಮರ್ಶಾತ್ಮಕವಾದ ಸಾಹಿತ್ಯವೂ ಇಷ್ಟರಲ್ಲಿ ಬರಬಹುದು. ಅವರು ಈ ಸಲದ ಮಣ್ಣಾಸ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಲು ಒಪ್ಪಿ, ಅವರ ಆಯ್ಕೆಯಾಗಿ ಸಿಕ್ಕಿದುದು ಒಂದು ಸುಯೋಗವಾದುದರಿಂದ. ಇದೇ ಸಮಯದಲ್ಲಿ ಶ್ರೀ. ಕೈಲಾಸಂ ಅವರ ವ್ಯಕ್ತಿತ್ವ, ಕೃತಿಗಳು, ಕೃತಿಗಳ ಪರಿಚಯ, ವಿಮರ್ಶಾತ್ಮಕ ಗ್ರಂಥಗಳು ಮುಂತಾದುವುಗಳ ರೂಪದಲ್ಲಿ ಇನ್ನೂ ಅನೇಕ ಪುಸ್ತಕಗಳು ಬರಲಿಕ್ಕೆ ಸಾಕು; ಬರಲಿಕ್ಕೆ ಬೇಕು. ಅದರಂತೆಯೆ ಬರುವ ಫೆಬ್ರುವರಿ ತಿಂಗಳಲ್ಲಿ ನಡೆಯಲಿರುವ ಶ್ರೀ. ಬೇಂದ್ರೆ ಅವರ ಐವತ್ತನೆಯ ವರ್ಧಂತ್ಯುತ್ಸವದ ಅವಧಿಯಲ್ಲಿ ಅವರ ವಿಷಯದ ಕೆಲವು ಕೃತಿಗಳು ಬಯಲಿಗೆ ಬರಬಹುದಾದರೂ, ಈಗಾಗಲೆ ಅವರ ' ಗರಿ ' ಮತ್ತು ' ಮೇಘದೂತ ' ಗಳ ಪುನರ್ಮುದ್ರಣಗಳು ಪ್ರಕಟವಾಗಿವೆಯಲ್ಲದೆ, ಮಿಂಚಿನಬಳ್ಳಿಯವರು ಪ್ರಕಟಿಸಿದ ಅವರ ' ವಿಚಾರಮಂಜರಿ ' ಎಂಬ ಗ್ರಂಥವು ಶ್ರೀ. ಬೇಂದ್ರೆಯವರ ಹಲಕೆಲವು ವಿಚಾರಪ್ರಚೋದಕ ಪ್ರಬಂಧಗಳು, ವೈಚಿತ್ರ್ಯಚಿತ್ರಗಳು ಮುಂತಾದ ಉಚ್ಚ ವರ್ಗದ ಬರೆಹಗಳ ಸಂಗ್ರಹವಾಗಿದೆ ಈ ರೀತಿಯಿಂದ ಇಬ್ಬರು ಕನ್ನಡ ಸಾಹಿತಿಗಳ ಗೌರವಾರ್ಥವಾಗಿ ವಿರ್ಪಡಿಸಿದ ಉತ್ಸವಗಳ ನಿಮಿತ್ತವಾಗಿ ಹಲಕೆಲವು ಉತ್ಕೃಷ್ಟ ಮತ್ತು ಸುಲಭವಾದ ಕೃತಿಗಳು ಕನ್ನಡಸಾಹಿತ್ಯಮಂಟಪವನ್ನು ಅಲಂಕರಿಸಿವೆಯೆಂಬುದು ಒಂದು ವಿಶೇಷ.

ಇತ್ತ ಇದ್ದ ಮಾಲೆಗಳ ಕಾರ್ಯವೂ ಅವ್ಯಾಹತವಾಗಿ ಸಾಗಿದೆಯಷ್ಟೇ ಅಲ್ಲದೆ ಯುದ್ಧಕಾಲದ ವಿಸ್ತೃತ ಬೇಡಿಕೆಗಳನ್ನು ಪೂರೈಸಲು ಹೊಸ ಹೊಸ ಗ್ರಂಥಮಾಲೆಗಳು ಅಸ್ತಿತ್ವದಲ್ಲಿ ಬಂದಿವೆ. ಅಲ್ಲಲ್ಲಿ ಚಿಕ್ಕವುಟ್ಟ ಪುಸ್ತಕಗಳು ಅನೇಕಾನೇಕವಾಗಿ ಪ್ರಕಟಗೊಳ್ಳಹತ್ತಿವೆ; ಮತ್ತು ಈಗಾಗಲೆ ಹತ್ತಾರು ವರುಷ ಕೆಲಸ ಮಾಡುತ್ತ ಬಂದ ಮನೋಹರ ಗ್ರಂಥಮಾಲೆ, ಪ್ರಚಾರ ಪುಸ್ತಕಮಾಲೆ, ಮಿಂಚಿನಬಳ್ಳಿ, ಕಾವ್ಯಾಲಯ, ರಂಗಮಂಗ ಪ್ರಕಾಶನ ಮುಂತಾದುವು ರಭಸದಿಂದ ಕಾರ್ಯಮುಖವಾಗಿವೆ. ಮಿಂಚಿನಬಳ್ಳಿಯ ' ಜಾಗ್ರತ ಚೀನ ', ' ವಿಚಾರಸಾಹಿತ್ಯ 'ದ ' ಆಧುನಿಕ ಚೀನ ' ಎಂಬ ಪುಸ್ತಕಗಳು ಮತ್ತು ಜಯಂತಿಯಲ್ಲಿ ಲೇಖನಮಾಲೆಯಾಗಿ ಬರುತ್ತಿರುವ ಶ್ರೀ. ನೆಗಳೂರ ರಂಗನಾಥ ಅವರ ' ಜೇತರಿಸುತ್ತಿರುವ ಚೀನ ' ಇವು ಚೀನದ ವಿಷಯವಾಗಿ ಹೊಸ ಬೆಳಕನ್ನು ಜನರಲ್ಲಿ ಹರಡಿವೆ. ಮನೋಹರ ಗ್ರಂಥಮಾಲೆಯವರ ' ಮುಲಮುಗಳು ', ' ನಟಸಾರ್ವಭೌಮ ಭಾಗ ೧ ' ' ಇಜ್ಜೋಡು ಭಾಗ ೩ ' ಇವು ಸ್ವತಂತ್ರ ಕಾದಂಬರಿಯ ಪ್ರಪಂಚದಲ್ಲಿ ಹೊಸಮುತ್ತುಗಳನ್ನು ನೀಡಿರುತ್ತವೆ. ಇತ್ತ ಲಲಿತಸಾಹಿತ್ಯ ಮಾಲೆಯವರು ಹೊರಡಿಸಿದ ' ಸಾಹಿತ್ಯರತ್ನ ' ಕಾದಂಬರಿಯು ಶ್ರೀ. ಅ. ನ. ಕೃಷ್ಣರಾಯರ ಕೃತಿರತ್ನಗಳಲ್ಲಿ ಇನ್ನೊಂದಾದರೆ, ಅವರ ' ವ್ಯಲಾಜ ', ಪ್ರತಿಭಾ ಗ್ರಂಥಮಾಲೆಯ : ಭೂಮಾತೆ—ನುಂದಿರ ಮುಂತಾದ ಪ್ರಕಟನೆಗಳು ಕೂಡ ಕನ್ನಡ ಸಾಹಿತ್ಯಕ್ಕೆ ಒಂದ ಕಳೆಯನ್ನು ತಂದುಕೊಟ್ಟಿವೆ. ಅದರಂತೆಯೆ ಪ್ರಚಾರ ಪುಸ್ತಕಮಾಲೆಯ ಹೊಸ ಹೊಸ ಪೊತ್ತಿಗೆ-ಹವಳಗಳು ಮತ್ತು ಪ್ರತಿಭಾಗ್ರಂಥಮಾಲೆಯ ಆಧುನಿಕ ಪ್ರಯೋಗಗಳು ಪ್ರಕಾಶನದ ಪ್ರಪಂಚದಲ್ಲಿ ಹೊಸ ಹಾವಿಯನ್ನು ಹಾಕಿಕೊಟ್ಟಂತಾಗಿವೆ.

ಇಲ್ಲಿ ಕಾದಂಬರಿಗಳ ರೂಪದಲ್ಲಿ ಈ ವರುಷ ಕನ್ನಡ ಸಾಹಿತ್ಯದಲ್ಲಿ ಆದ ಬೆಳವಣಿಗೆ ಮತ್ತು ಕನ್ನಡ ಕುಲದ ಚಿತ್ರಗಾರಿಕೆಗಳ ವಿಷಯವಾಗಿ ಒಂದೆರಡು ಶಬ್ದಗಳನ್ನು ಬರೆಯುವುದು ಉಚಿತವೆನಿಸುತ್ತದೆ. ಈ ಸಂದರ್ಭದಲ್ಲಿ ಈ ವರುಷದ ಗೌರವವು ಶ್ರೀ. ಕಾರಂತರಿಗೇ ಸಲ್ಲತಕ್ಕದ್ದು ಎಂದು ನಿಸ್ಸಂದಿಗ್ಧವಾಗಿ ಸಾರಬಹುದು. ' ಮರಳಿ ಮಣ್ಣಿಗೆ ', ' ಬೆಟ್ಟದ ಜೀವ 'ಗಳನ್ನು ಸಲ್ಲಿಸಿ ಶ್ರೀ. ಕಾರಂತರು ಉತ್ಕೃಷ್ಟ

ಕಾದಂಬರಿಕಾರರು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅವರು ಈ ವರೆಗೆ ನೀಡಿದ 'ಹೆತ್ತಳಾ ತಾಯಿ' ಮತ್ತು 'ಮುಗಿದ ಯುದ್ಧ' ಇವು ಗಳಿಂದ ಉತ್ತಮ ಕಲಾಕಾರರು ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ಹೆತ್ತಳಾ ತಾಯಿ' ಕಾದಂಬರಿಯ ವಿಷಯವಾಗಿ, ಅದರೊಳಗೆ ಚಿತ್ರಿತವಾದ ಪ್ರಧಾನಪಾತ್ರವಾದ 'ಕುಸುಮೆ'ಯ ವಿಷಯವಾಗಿ ಕರ್ನಾಟಕದ ತುಂಬೆಲ್ಲ ವಿಮರ್ಶಾತ್ಮಕವಾದ ಬರೆಹಗಳೂ, ಭಿನ್ನಾಭಿ ಪ್ರಾಯದ ವಾಗ್ವಾದಗಳೂ ಜರುಗಿದುವು. ಆದರೆ ಅದರಿಂದ ಶ್ರೀ. ಕಾರಂತರ ಲೇಖನಶಕ್ತಿಯ ಹೆಚ್ಚಿನ ಗೌರವವಾಯಿತೇ ಹೊರತು ಅವರ ಕೃತಿಗಳ ವಿಷಯವಾಗಿ ಅನ್ಯಥಾ ಅಭಿಪ್ರಾಯಭಿನ್ನತೆಗಳಿಲ್ಲ. ಇನ್ನು ಕನ್ನಡದಲ್ಲಿ ಕಾದಂಬರಿಗಳೇ ಇಲ್ಲದ ಈ ದಿನಗಳಲ್ಲಿ ಒಂದೇ ಭಾಗವನ್ನು ಹೊರಡಿಸಿ ತಣ್ಣಗೆ ಕುಳಿತ 'ನಟಸಾರ್ವಭೌಮ'ನ ವಿಷಯವಾಗಿಯೂ ಸುಸೋಹರವರು ಹೊರಡಿಸಿದ 'ಇಬ್ಬೊಣ್ಣು' ಕಾದಂಬರಿಯ ಮೂರನೆಯ ಭಾಗದ ವಿಷಯವಾಗಿಯೂ ಸಾಮಾನ್ಯವಾಗಿ ಜನರಲ್ಲಿ ಉತ್ಸಾಹವು ತಲೆಯೆತ್ತಿದೆ: ಅದರ ಪರಿಣಾಮವಾಗಿಯೆ ವಿನೋ ಎನ್ನುವಂತೆ ಪೀಳ್ಗೆಯಲ್ಲಿಯೆ ಕನ್ನಡದಲ್ಲಿ ಕಾದಂಬರಿಗಳ ಒಂದು ಸುಗ್ಗಿಯೆ ಆಗಬಹುದು ಎಂಬುದರ ದ್ಯೋತಕವು ಶ್ರೀ. ಎನ್. ಕೆ. ಅವರ 'ನಾವಿನ ಉಡಿಯಲ್ಲಿ' ಎಂಬುದರಿಂದ ಒಂದು ಬದಿಯಿಂದ ತಿಳಿದರೆ, ಸುಸೋಹರ ಗ್ರಂಥಮಾಲೆಯವರು ವಿಸ್ತರಿಸಿದ ಸ್ಪರ್ಧೆಯಿಂದ ಇನ್ನೊಂದು ಕಡೆಯಿಂದ—ಎಂದು ಭಾವಿಸಬಹುದು. ಆದರೂ ಇತ್ತ ಭಾಷಾಂತರಿತ ಕಾದಂಬರಿಗಳು ಕನ್ನಡದ ಕಣಜವನ್ನು ತೀರುತ್ತಿರುವ ಕಾರ್ಯವು ಅನಿರುದ್ಧವಾಗಿ ನಡೆದೆ ಇದೆ. ಅದರಲ್ಲಿಯೂ ಶ್ರೀ. ಗುರು ಭಾಷ ಜೋಶಿಯವರು ಹಿಂದಿಯಿಂದ ತರುತ್ತಿರುವ ಸಾಮಗ್ರಿ ಮತ್ತು

ನಾರಾಯಣಸ್ವಾಮಿ ಅಯ್ಯರವರು ಬಂಗಾಲಿಯಿಂದ ಬರಿಸುತ್ತಿರುವ ಸಂಗ್ರಹಭೆಳೆಯುತ್ತಲೇ ಇದೆ. ಇಷ್ಟಕ್ಕೆ ನಮ್ಮ ಬಂಡವಲು ತೀರದೆ ಇನ್ನು ಕ್ರಮೇಣ ತೆಲುಗು-ತಮಿಳು, ಗುಜರಾತಿ-ಮರಾಠಿಗಳಿಂದ ಕೃತಿ ಗಳು ಬರಹತ್ತಿ—ಅತ್ತ ಕನ್ನಡದ ಉತ್ತಮ ಗ್ರಂಥಗಳನ್ನು ಆ ಭಾಷೆ ಗಳಿಗೆ ಪರಿವರ್ತಿಸಬೇಕಾದುದೂ ಅಪೇಕ್ಷೆ ಅವಶ್ಯಕವೆನಿಸಿದೆ; ಆ ದಿನಗಳು ದೂರ ಇಲ್ಲ ಎಂಬ ಚಿಹ್ನೆಗಳೂ ಕಾಣಹತ್ತಿವೆ.

ಜೀವನಚಿತ್ರಗಳ ಬೆಳೆಯೂ ಈ ವರ್ಷ ಸಾಕಷ್ಟು ಹುಲುಸಾಗಿ ಬಂದಿದೆಯೆಂದೆನ್ನಬಹುದು. ಎಲ್ಲಕ್ಕಿಂತ ಮಿಗಿಲಾದ ಪ್ರಕಟನೆಯೆಂದರೆ ಮಹಾಕವಿಯ ರಾಷ್ಟ್ರೀಯ ವಾಙ್ಮಯ ಪ್ರಕಾರನಪವರು ಪ್ರಕಟಿಸಿದ ಸಂತ್ಯಂಥ ಗಾಂಧೀಜಿ. ಕೇವಲ ಭಾಷಾಂತರವಾದರೂ ಅವರೊಳಗಿನ ಸೆಳೆದ ಚಿತ್ರಗಳು, ಅಧಿಕವಾಗಿ ಕೂಡಿಸಿದ ಪ್ರಕರಣ ಮತ್ತು ಉತ್ತಮ ವಾದ ಭಾಷೆ ಹಾಗೂ ಸುಂದರವಾದ ಮುದ್ರಣ ಈ ವೈಶಿಷ್ಟ್ಯಗಳಿಂದ ಈ ಸುಸಂದರ ಪ್ರಕಾಶನಗಳ ಪ್ರಥಮಸ್ಥಾನವು ಆ ಪುಸ್ತಕಕ್ಕೆ ಸಿಗುತ್ತದೆ. ಇಷ್ಟ ಮಾತ್ರವಲ್ಲದೆ ಎಲ್ಲ ಭಾಷೆಗಳಿಗಿಂತ ಹೊಸಲು. ಮತ್ತು ಕಡಿಮೆ ಬೆಲೆಯಲ್ಲಿ ಹೊರಟ ಗ್ರಂಥವು ಕನ್ನಡ ಭಾಷೆಯದು ಎಂಬುದೊಂದು ಸೌಭಾಗ್ಯದ ವಿಷಯವಾಗಿದೆ. ಉಮ ಕಳೆದ ವರುಷದ ಕೊನೆಯ ಭಾಗ ದಲ್ಲಿ ಪ್ರಕಾಶಿತವಾದರೂ, ಜನರಿಗೆ ದೊರೆತು ಹೆಚ್ಚು ಪ್ರಚುರಗೊಂಡದ್ದು ಈ ವರುಷ ಎಂದು ತಿಳಿಯಬಹುದಾದ್ದರಿಂದ, ಅದನ್ನು ಈ ವರುಷದ ಲೆಕ್ಕದಲ್ಲಿಯೆ ಎಣಿಸಬೇಕಾದುದು ಯೋಗ್ಯ. ಅದಕ್ಕೆ ಪೂರಕವಾಗಿ 'ಪೂಜ್ಯ ಗಾಂಧೀಜಿ ಧನ್ಯೆ ಕಸ್ತೂರಬಾ' ಎಂಬ ಚರಿತ್ರೆ ಯೂ 'ಕಸ್ತೂರಬಾ' ಅವರ ಬೇರೆ ಒಂದು ಜೀವನ ಚರಿತ್ರೆಗಳಲ್ಲವೆ.

ಇದೇ ವಿಭಾಗದಲ್ಲಿ 'ರಾಷ್ಟ್ರಕವಿ ರ ಚರಿತ್ರೆಯಾದ ಶ್ರೀ. ಎಸ್. ಆರ್. ಶ್ರೀನಿವಾಸರಾಘವಾಚಾರ್ಯ ಮುಂತಾದವರು ಬರೆದ ಗ್ರಂಥ ಮತ್ತು ಶ್ರೀ. ಹಳಕೆರೆ ಚಿಂತಾಮಣಿರಾಯರ 'ಯುಗಪ್ರವರ್ತಕರಾದ ಶ್ರೀಬಸವಣ್ಣನವರು' ಮತ್ತು ಶ್ರೀಮತಿ ಗೌಡರ ಅವರು ಬರೆದ 'ಭಾರತದ ವೀರನಾರಿಯರು' ಎಂಬ ಪುಸ್ತಕಗಳು ಬರುವುದರಿಂದ, ಚರಿತ್ರೆಗಳು ಈ ವರ್ಷ ಹೆಚ್ಚು ಹೆಚ್ಚು ಪ್ರಮಾಣದಿಂದ ಸಿಗುವ ಸುಲಭಲಕ್ಷಣಗಳು ಈಗಾಗಲೆ ಅಲ್ಲಲ್ಲಿ ಬರುವ ರಮ್ಯಚಿತ್ರ, ಸೇಯಾಚಿತ್ರ, ವ್ಯಕ್ತಿಪರಿಚಯ ಮುಂತಾದ ಲೇಖನಗಳಿಂದ ಕಾಣುಬರುತ್ತವೆ.

ಇದೇ ಸಂದರ್ಭದಲ್ಲಿ ನೈಮಿತ್ತಿಕವಾಗಿ ಸಂಗ್ರಹರೂಪದಲ್ಲಿ ಒರುತ್ತಿದ್ದ ಲೇಖಕರಿಯರ ಕತೆಗಳು ಮತ್ತು ಚಿತ್ರಸಂಗ್ರಹಗಳು ಇವುಗಳ ವಿಷಯವಾಗಿ ಒಂದೆರಡು ರಮ್ಯಗಳನ್ನು ಹೇಳಬಹುದು ಇತ್ತಿತ್ತಲಾಗಿ ಹೆಣ್ಣುಮಕ್ಕಳಿಗೆ ಹುಟ್ಟಿನ ಲಿಕ್ಷಣವೂ ಸ್ವತಂತ್ರವಾದ ಸ್ಥಾನವೂ ಹೆಚ್ಚು ಹೆಚ್ಚಾಗಿ ಸಮಾಜದಲ್ಲಿ ಸಲ್ಲತ್ತಿವೆ ಸೂಜಿಕ, ಹೆಚ್ಚು ರಸವತ್ತಾದ ಮತ್ತು ಸ್ಫೂರ್ತಿಯುತವಾದ ಬರೆಹಗಳು ಅವರಿಂದ ಈಗ ನಮಗೆ ಸೊರೆಯಬಹುದಾಗಿದೆ. ಅದಕ್ಕಲ್ಲವೂ ಶ್ರೀಮತಿ ಎಸ್. ಆರ್. ಜಯಲಕ್ಷ್ಮಿ ಅವರ ಎರಡು ಸೂಕ್ಷ್ಮ ಕಥಾಸಂಗ್ರಹಗಳು, ಶ್ರೀಮತಿ ಗೌಡರ ಅವರು ಬರೆದ 'ಭಾರತದ ವೀರನಾರಿಯರು' ಎಂಬ ಚರಿತ್ರಗ್ರಂಥ ಮತ್ತು ಶ್ರೀಮತಿ 'ಮಾಣಿ' ಅವರ ಒಂದು ವಿಕಾಂಕ ನಾಟಕಗಳ ಸಂಗ್ರಹಗಳು ಹೆಸರಿಸಲು ಯೋಗ್ಯವಾಗಿರುತ್ತವೆ. ಇಲ್ಲಿಯವರೆಗೆ ಕೇವಲ ಒಂದೆರಡು ಕತೆಗಳನ್ನು, ಚಿಕ್ಕ ಸಂಭಾಷಣೆಗಳನ್ನು ಬರೆದು ಸಂತುಷ್ಟರಾಗುತ್ತಿದ್ದ ಸ್ತ್ರೀಯರು ಈಗ ನಾಟಕ ಸಂಗ್ರಹಗಳನ್ನು ಮೂಡಿಸುತ್ತಿದ್ದುದು ಮತ್ತು ವಿಷಂಗತೆ ಶ್ರೀಮತಿ ಬೆಳಗಾಂವ ಬಾಮಲಕ್ಷ್ಮೀಸಯವರ 'ಹೂಬಿಸಿಲು' ಕಥಾಸಂಗ್ರಹದ ಎರಡನೆಯ ಆವೃತ್ತಿಯು ಹೊರಟಿದ್ದುದು ವಿಶೇಷ ವೆಂದೇ ತಿಳಿಯಬೇಕಾದ ಅಂಶ. ಇದೇ ರೀತಿಯಾಗಿ ಚಿತ್ರಲೇಖನ ಮತ್ತು ಕಾದಂಬರೀ ವ್ಯವಸಾಯದಲ್ಲಿ ಸಹ ಸ್ತ್ರೀಯರು ಸಹಜವಾದ ಶಕ್ತಿಯನ್ನು ತೋರಿಸುವಲ್ಲರು ಎಂಬುದು ಈಗಿನ ಬರೆಹಗಳಿಂದ ತಿಳಿಯ ಬಹುದಾದ ಸಂಗತಿಯಾಗಿದೆ

ಇನ್ನು ಕೊನೆಯದಾಗಿ ಇಂದು ಕರ್ನಾಟಕದಲ್ಲಿ ಹೊರಡುತ್ತಿರುವ ವೃತ್ತಪತ್ರಿಕೆಗಳು ಮತ್ತು ನೈಮಿತ್ತಿಕವಾಗಿ ಕೆಲವು ಜನ ಸಾಹಿತಿಗಳು ನೀಡಿದ ಕೃತಿಗಳು ಇವುಗಳ ವಿಷಯವಾಗಿ ಒಂದೆರಡು ಅಂಶಗಳನ್ನು ಹೇಳಬೇಕಾಗಿದೆ. ಯುದ್ಧಕಾಲದಲ್ಲಿ ಹೆಚ್ಚಾದ ವೃತ್ತಪತ್ರಸ್ಖಲನೆಯ ಪರಿ-ಹಾರವನ್ನು ಮಾಡುವ ಮನಸ್ಸಿನಲ್ಲಿ ಹೆಚ್ಚು ಯಶಸ್ವಿಯಾದುದು ಮೈಸೂರು ಪ್ರಾಂತ ಎಂದೆನ್ನಬಹುದು ಇಲ್ಲಿ ಒಂದು ಬೆಂಗಳೂರಲ್ಲಿಯೆ ಐದಾರು ದಿನವತ್ರಿಕೆಗಳೂ, ಹತ್ತೆಂಟು ವಾರಪತ್ರಿಕೆಗಳೂ ಹೊರಬೀಳುವು ವಲ್ಲದೆ ಅನೇಕ ಮಾಸಪತ್ರಿಕೆಗಳೂ ಇವೆ. ಇದರಂತೆ ಕನ್ನಡವಾದರೂ ಹೌದೊ ಹೇಗೆ?— ಎಂಬ ಸಂಶಯವು ಬರುವಂತಹ ಕನ್ನಡದಲ್ಲಿ ಹೊರ ಡುವ ಪತ್ರಿಕೆಗಳೂ ಅಲ್ಲಿ ಇರುವುದಾದರೆ, ನಮ್ಮವನ್ನ ಕರ್ನಾಟಕ, ಕನ್ನಡ ನುಡಿಯಂತಹ ಸರಿಯಾದ ಕನ್ನಡದ ಪತ್ರಿಕೆಗಳೂ ನಮಗೆ ಅಲ್ಲಿಂದೆಲೆ ದೊರೆಯುತ್ತವೆ. ಇನ್ನು ಉತ್ತರಕರ್ನಾಟಕದಿಂದ ಒಂದು 'ಕರ್ನಾಟಕ' ಒಂದು 'ನಿರ್ಣಯ' ಎಂಬ ವಾರಪತ್ರಿಕೆಗಳು ಮಾತ್ರ ಆರಂಭವಾದುದು ಕಾಣುತ್ತವೆ. ಆದರೆ ಇವು ಕನ್ನಡದಲ್ಲಿ ವಿಭಿನ್ನವಾಗಿ ಈ ಸಾಹಿತ್ಯವನ್ನು ಒಳಗೊಯಬಹುದೇ: ನಿಜವಾದ ಕನ್ನಡವಲ್ಲಿವೆ 'ಪ್ರಜಾ' ಮತ್ತೆಯು ಕೂಡ

ಹೆಚ್ಚು ಬಲವನ್ನು ಪಡೆದಿದೆಯೆಂದೆನ್ನಬಹುದು. ಆದರೂ ಇಷ್ಟೇ: ಪತ್ರಿಕೆಗಳಲ್ಲಿ 'ಸಂಯುಕ್ತಕರ್ನಾಟಕ'ದಲ್ಲಿ ಕಾಣುವ ಅಚ್ಚುಕಟ್ಟು, ಸಮಯಕ್ಕೆ ಸರಿಯಾಗಿ ಸುದ್ದಿ ಸಿಗುವುದು ಮುಂತಾದ ಬಗೆಯಿಂದ ಸಿಗುವ ಸೌಕರ್ಯ ಮತ್ತು 'ಕರ್ಮವೀರ'ನ ಮಟ್ಟ ಇವು ಇನ್ನೂ ಮೀರಿದಂತೆ ಕಾಣುವುದಿಲ್ಲ; ಮಾತ್ರ ಎಲ್ಲ ಕನ್ನಡ ಪತ್ರಿಕೆಗಳಲ್ಲಿ ಈಗ ಭಾಷೆಯು ಪಾಕಹೊಂದುತ್ತಿರುವುದು ಸ್ಪುಟವಾಗಿ ಕಾಣುತ್ತಿದೆ. ಅದಕ್ಕೆ ಉದಾಹರಣೆಯಾಗಿ ಈ ಸಲ ದೀಪಾವಳಿಯ ಸಮಯದಲ್ಲಿ ಹೊರಟ ಪ್ರಜಾಮತ, ಜಯಂತಿ, ಉಷಾ ಮತ್ತು ಕಥಾವಳಿಗಳ ವಿಶೇಷ ಸಂಚಿಕೆಗಳನ್ನು ನೋಡಬಹುದು. ಇತ್ತ ಸ್ಫುಟವಾದ ಕರ್ನಾಟಕದ ರಜತ ಸಂಚಿಕೆಯಂತೂ ಸಂಗ್ರಾಹ್ಯವಾದ ಒಂದು ಸಂಪುಟವೆ ಆಗಿದೆ.

ವೈಯಕ್ತಿಕ ಪ್ರಕಟನೆಗಳನ್ನು ನಿರೀಕ್ಷಿಸುವಾಗ ಎಷ್ಟೋ ಪೆಸರುಗಳು ಇಲ್ಲಿ ಕಾಣಿಸಿದ್ದಂತೂ ಕೆಲವನ್ನು ಮಾತ್ರ ಕಾಣಿಸಬೇಕಾಗುತ್ತದೆ; ಅದರಲ್ಲಿ ಮಿಕ್ಕವುಗಳು ಇಲ್ಲದಿದ್ದಕ್ಕೆ ಈ ವೀಕ್ಷಕನನ್ನು ಕ್ಷಮಿಸಬೇಕೇ ಹೊರತು ಸಿಟ್ಟಾಗಬಾರದು. ಮಯೂರ ವರ್ಮನ್ಯಾಗಿ ಒಂದು ಪುಸ್ತಕವನ್ನು ಬರೆದು ಶ್ರೀ. ಕಾರಂತರು, 'ನಗೆ'ಯ ವಿಮರ್ಶಾವಿಷಯಕ ಪುಸ್ತಕದಿಂದ ಶ್ರೀ. ಪುಟ್ಟಪ್ಪನವರು, ಕಥಾಸಂಗ್ರಹ-ನಾಟಕಗಳಿಂದ ಶ್ರೀ. ಆನಂದರು, 'ಒಡನಾಡಿ'ಯಿಂದ ಶ್ರೀ. ಆನಂದಕಂದರು, 'ಐರಾವತ' ಕವಿತಾಸಂಗ್ರಹದಿಂದ ಶ್ರೀ. ಕೆ. ಎಸ್. ನರಸಿಂಹಸ್ವಾಮಿಯವರು, ಸೀಳ್ನುಡಿಯಿಂದ ಶ್ರೀ. ಎಂ. ಸೀತಾರಾಮಯ್ಯ ಇವರು, ಕಥಾಸಂಗ್ರಹದಿಂದ ಶ್ರೀ. ಆ. ನ. ಕೃ. ಬಸವರಾಜ ಕಟ್ಟೀಮನಿ, ಅರ್ಚಕ ವೆಂಕಟೇಶ, ಮುಂತಾದವರು ಹೆಸರು ಮಾಡಿಕೊಂಡಿದ್ದಾರೆ; ಹೊಸ ಹಾದಿಯನ್ನು ತೋರಿಸಿದ್ದಾರೆ, ಎಂಬುದು ಸಾಮಾನ್ಯವಾದ ಸಂಗತಿಯೆನಿಸುತ್ತಿದ್ದರೂ ಅವಶ್ಯಕವಾದುದಿರುತ್ತದೆ.

ಕನ್ನಡ ಸಾಹಿತ್ಯವು ಈ ರೀತಿಯಾಗಿ ಈ ವರುಷ—ಹುಲುಸಾಗಿ ಬೆಳೆಯದಿದ್ದರೂ ಹಸನಾಗಿ—ಬೆಳೆದಿದೆ; ಹೊನ್ನಾಗಿ ನಿಲ್ಲುವ ಗುಣವುಳ್ಳುದಾಗಿದೆ. ಬೇಗನೆ ಗಾತ್ರದಿಂದಲೂ ಹಬ್ಬುವ ಶಕ್ತಿಯುಳ್ಳುದಾಗಿದೆಯೆಂಬುದನ್ನು ಈ ವರುಷದ ಉತ್ಪಾದನೆಯಿಂದ ತಿಳಿಯಬಹುದಾಗಿದೆ. ಆದರೆ ಪ್ರಕಾಶಕನ ದೃಷ್ಟಿಯಿಂದ ನೋಡಬೇಕೆಂದರೆ ಒಂದು ಬದಿಯಿಂದ ವಿಜ್ಞಾನವಿಷಯಕ ಗ್ರಂಥಗಳ ಅಭಾವವು ಕಂಡುಬರುತ್ತಿದ್ದರೆ ಇನ್ನೊಂದು ಬದಿಯಿಂದ ಈಗ ಬರುತ್ತಿದ್ದ ಪುಸ್ತಕಗಳ ಹೊದಿಕೆ, ಅಚ್ಚು, ಕಟ್ಟು ಮುಂತಾದ ವಿಭಾಗಗಳಲ್ಲಿ ಕೂಡ ಪ್ರಗತಿಯಾಗಬೇಕಾದುದು ಅಗತ್ಯ ಎಂದು ತೋರುತ್ತದೆ. ಮಾಸಪತ್ರಿಕೆಗಳು ಮೆಲ್ಲನೆ ಆರಂಭ ಮಾಡಿದ ವೈವಿಧ್ಯವನ್ನು ಪುಸ್ತಕ ಪ್ರಕಟನೆಯಲ್ಲಿ ಕೂಡ ಬಳಸಿ ಗುಣದಿಂದಲೂ, ಗಾತ್ರದಿಂದಲೂ, ರೂಪದಿಂದಲೂ ಕನ್ನಡ ಸಾಹಿತ್ಯವು ಹೆಚ್ಚು ಹೆಚ್ಚು ಸುಂದರ, ಶುದ್ಧ ಮತ್ತು ಸುರಸವಾಗಲಿ ಎಂದು ಹಾರೈಸಿ ತಪ್ಪುತಡೆಗಳಿರಬಹುದಾದ ಈ ತಾಪೀಲನ್ನು ಮುಗಿಸುವೆ.

## ರೋಜರ ಬೇಕನ್

(೩೬ನೆಯ ಪುಟದಿಂದ ಮುಂದರಿದುದು)

ನೀರಿನ ಆಳವು ಇದ್ದುದಕ್ಕಿಂತ ಕಡಿಮೆ ಕಾಣುವುದು ಇವೇ ಮೊದಲಾದ ಸಂಗತಿಗಳು, ಕ್ಷಿತಿಜದ ಹತ್ತಿರ ಉದಯಾಸ್ತ ವೇಳೆಯಲ್ಲಿ ಇದ್ದಾಗ ಸೂರ್ಯ-ಚಂದ್ರರು ಏಕೆ ದೊಡ್ಡವರಾಗಿ ಕಾಣುವರು—ಇತ್ಯಾದಿ ಎಷ್ಟೋ ವಿಷಯಗಳು ಇವನಿಗೆ ಅವಗತವಿದ್ದುವೆಂಬುದರಲ್ಲಿ ಏನೂ ಸಂದೇಹವಿಲ್ಲ. ಖಗೋಲ ಶಾಸ್ತ್ರ ವಿಷಯದಲ್ಲಿ ಇವನಿಗೆ ಜ್ಞಾನವಿತ್ತಾದರೂ ಆ ದಿಶೆಯಲ್ಲಿ ಇವನು ಹೆಚ್ಚಿನ ಶೋಧಗಳನ್ನೇನೂ ಮಾಡಲಿಲ್ಲ. ಖಗೋಲಶಾಸ್ತ್ರದ ಬೆಳೆವಣಿಗೆಗೆ ಗಣಿತಶಾಸ್ತ್ರದ ಅವಶ್ಯಕತೆಯು ಎಷ್ಟಿದೆ ಎಂಬುದು ಇವನಿಗೆ ತಿಳಿದಿತ್ತಾದರೂ, ಇವನೇನು ಅದರಲ್ಲಿ ಆಂಥ ನಿಷ್ಣಾತನಿದ್ದಿಲ್ಲ. ಫಲಜ್ಯೋತಿಷಕ್ಕೆ ಬೇಕಿರಬಹುದಾದ ಗಣಿತ ಮತ್ತು ಖಗೋಲಶಾಸ್ತ್ರಗಳ ಜ್ಞಾನವು ಇವನಿಗಿತ್ತು. ಇಲ್ಲಿ ಸಹ ಇವನಿಗೆ ಹಲವು ತಪ್ಪು ತಿಳಿವಳಿಕೆಗಳಿದ್ದು, ಧನುದ ಉದಯವು ಗ್ರಹಗಳ ಯುತಿಗಳನ್ನು ಅವಲಂಬಿಸಿದುದು ಎಂಬ ಅಭಿಪ್ರಾಯದವನಾಗಿದ್ದನು. ಈ ವಿಷಯದಲ್ಲಿ **ಫ್ರಾನ್ಸಿಸ್ ಬೇಕನ್ನನ** ಅಭಿಪ್ರಾಯವು ಗಮನಾರ್ಹವಿದ್ದು ಅದರ ಆಶಯವು:—ಇಂದಿನ ಜ್ಞಾನೋದಯವು ಹಿಂದಿನವರ ರಸವಿದ್ಯೆಯ ಶೋಧನದ ಪ್ರಯತ್ನದ ಫಲವೆಂದೇ ಹೇಳಬಹುದು ಇಂತಹ ಮೃಗಜಲದ ಬೆನ್ನಟ್ಟೋಣವು ನಿಷ್ಫಲವಾದುದೆಂದು ತಿಳಿಯುವುದರಲ್ಲಿ ಉಳಿದ ಉಪಯುಕ್ತ ಶೋಧಗಳಾದುದನ್ನು **ಇಸೋಪ** ನೀತಿಯಲ್ಲಿಯ ಒಂದು ಕಥೆಯಿಂದ ತಿಳಿಯಬಹುದು. ಒಬ್ಬ ಒಕ್ಕಲಿಗನು ತನ್ನ ಮರಣ ಸಮಯದಲ್ಲಿ ತನ್ನ ಮಕ್ಕಳನ್ನು ತನ್ನ ಹತ್ತಿರ ಕರೆದು, ತಾನು ದ್ರಾಕ್ಷೆಯ ತೋಟದಲ್ಲಿ ಒಂದು ದೊಡ್ಡ ಬಂಗಾರದ ಪುಟ್ಟಿಯನ್ನು ಹುಗಿದಿಟ್ಟಿರುವುದಾಗಿ ಮತ್ತು ಹೀಗೆ ಇಟ್ಟಿರುವ ಸ್ಥಳವು ಮಾತ್ರ ತನಗೆ ನೆನಪಿನಲ್ಲಿಲ್ಲವಾಗಿ ಹೇಳಿದನು. ಮುಂದೆ ಈ ಮಕ್ಕಳು ತೋಟವನ್ನು ಸಂಪೂರ್ಣವಾಗಿ ಅಗಿದು ಶೋಧಿಸಿದರೂ ಬಂಗಾರವು ದೊರೆಯಲಿಲ್ಲ ಆದರೆ ಮುಂದಿನ ಫಲವತ್ತಾದ ಬೆಳೆಯು ಮಾತ್ರ ಬಂದಿತು—ಹೀಗೆ ಅದೆ. ಇದರಂತೆಯೇ ಈ ಜನರ ಕೃತ್ರಿಮ ಭಂಗಾರ ಮಾಡುವ ಶೋಧದ ಫಲವಾಗಿ ನಿಜವಾದ ಜ್ಞಾನವೂ ಮತ್ತು ನಿಸರ್ಗದ ಸಮುಪಯೋಗದ ಕ್ರಮವೂ ತಿಳಿಯಲು ಅನುಕೂಲವಾಗಿದ.

ಒಟ್ಟಿನಲ್ಲಿ ಹೇಳುವುದಾದರೆ ಆಂ ಗರ್ವಗಳ ಕಾಲ ಜೀವಿಸಿ ಬ್ರಹ್ಮಚಾರಿಯಾಗಿದ್ದು ಜ್ಞಾನಪಿಪಾಸೆಯ ಅಪರಾಧಕ್ಕಾಗಿ (?) ೨೪ ವರ್ಷಗಳ ಬಂಧನವನ್ನು ಭೋಗಿಸಿ, ತನ್ನ ಶೋಧ ಮತ್ತು ಬರೆಹಗಳಿಂದ ಯುರೋಪದಲ್ಲಿ ನಂದಲಿರುವ ಜ್ಞಾನಜ್ಯೋತಿಯನ್ನು ಪ್ರಜ್ವಲಗೊಳಿಸಲು ಕಾರಣನಾದ ನಮ್ಮ ಚಾರ್ತುನಾಯಕನು, ನಮ್ಮೆಲ್ಲರ ಆದರಕ್ಕೆ ಪಾತ್ರನು. ಇವನು ಕಂಡ ಕನಸುಗಳನ್ನು ಇಂದು ನಾವು ಸತ್ಯಸ್ಥಿತಿಯಲ್ಲಿ ಕಾಣುತ್ತಿರುವೆವು. ಇಂತಹ ಕನಸುಗಳನ್ನು ಕಾಣುವ ಜ್ಞಾನಜ್ಯೋತಿಯು ಸದಾ ಪ್ರಜ್ವಲಿಸುತ್ತಿರಲೆಂಬ ಇವನ ಚರಿತ್ರೆಯನ್ನು ನಾವು ಇಲ್ಲಿಗೆ ಕೊನೆಗಾಣಿಸುವೆವು.

# ಸಾದರ ಸ್ವೀಕಾರ

೭೧. **ಹುತಾತ್ಮ ಸಾತಪ್ಪ** (ವೀರವ್ಯಕ್ತಿತ್ವ ಪರಿಚಯ). ಲೇಖಕರು ಶ್ರೀಮಾನ್ ತಲ್ಲೂರ ರಾಯನಗೌಡರು. ಪ್ರಕಾಶಕರು ಗಾಂಧೀವಿ ಗ್ರಂಥಮಾಲಾ, ರೈಟರಗಲ್ಲಿ, ಧಾರವಾಡ. ಕ್ರೌ. ಅ. ೧೬ ಪುಟಗಳು. ಬೆಲೆ ೦-೬-೦.

೧೯೪೨ನೆಯ ಇಸ್ವಿಯಲ್ಲಿ ಪೋಲೀಸರ ಬಿಡಿಗುಂಡಿಗೆ ಬಲಿಯಾದ ತ್ಯಾಗವೀರನೊಬ್ಬನ ಚಿಕ್ಕ ಪರಿಚಯವಿದು. ಬೆಳಗಾಂವಿ ಜಿಲ್ಲೆಯ ಕಡಬೀ ಶಿವಾಪುರದ ರೈತನೊಬ್ಬನ ಮಗ; ಎಳವರಯದವ. ಭಾರತದ ಸ್ವಾತಂತ್ರ್ಯದ ಬಯಕೆ ಸಾತಪ್ಪನನ್ನು ಶಿವಾಪುರದ ಮುಂದಾಸ್ಥಾಗಿ ಮಾಡಿ, ಆ ಹಳ್ಳಿಗೆ ಎಂದೂ ಮರೆಯದ ವೀರಸ್ಮರಣ ಪ್ರೊಂದನ್ನ ಕೊಟ್ಟತು. ಸಾತಪ್ಪನ ಮರಣ, ನಾಡಿನ ನೂರಾರು ಯುವಕರಲ್ಲಿ ಜೀವನವನ್ನು ತುಂಬುವುದರಲ್ಲಿ ಸಂದೇಹವಿಲ್ಲ. ಆಗಸ್ಟ್ ಚಳವಳಿಯಲ್ಲಿಯ ಎಲ್ಲ ವೀರರ ಪರಿಚಯಗಳೂ ವಿಶದವಾಗಿ ಕನ್ನಡಿಗರ ಕೈಗೆ ಸಿಕ್ಕಬೇಕು. ಮಾದರಿಯೆಂದು ಮೊದಲಿಗರಾಗಿ ಕಾರ್ಯಕ್ಕೆ ತೊಡಗಿಕ್ಕಿದ ರಾಯನಗೌಡರು ಅಭಿನಂದನಾರ್ಹರು.

೭೨. **ಪ್ರೇಮಚೂರ್ಣ** (ಅನುವಾದಿತ ಸಣ್ಣ ಕತೆಗಳ ಸಂಗ್ರಹ). ಮೂಲ ಇಂಗ್ಲಿಷ್ ಕತೆಗಾರರು ಒ ಹೆನ್ರಿಯವರು. ಅನುವಾದಕರು ಶ್ರೀಮಾನ್ ಬಿ. ಕೆ. ರಾಮಚಂದ್ರರಾವ್ ಬಿ. ಎ., ಎಲ್ಎಲ್. ಬಿ. ವಕೀಲ, ಚಿತ್ರದುರ್ಗ. ಬೆಂಗಳೂರಿನ ಶ್ರೀ. ಸಿ. ಕೃಷ್ಣಶರ್ಮರು ತಮ್ಮ ಭಾರತ ಪ್ರಕಾಶನ ಮಂದಿರದಲ್ಲಿ ಪ್ರಕಟಿಸಿದರು. ಕ್ರೌ. ಅ. ೧೨೪ ಪುಟಗಳು. ಬೆಲೆ ೧-೪-೦.

೭೩. **ನಗುವ ನಂದ** (ಮಾಸಪತ್ರಿಕೆ, ಸಂಪುಟ ೧೩, ಸಂಚಿಕೆ ೧೧) ಸಂಪಾದಕರು ಶ್ರೀಮಾನ್ ಬಿ. ರಂಗನಾಥರಾಯರು 148 ಜಾನ್ಸನ್ ಪೇಟೆ, II ರೋಡು ಬೆಂಗಳೂರು ಸಿಟಿ. ಡೆ. ಅ ೪೦ ಪುಟಗಳು. ವಾ. ಚಂದಾ ೨-೦-೦; ಬಿಡಿ ಸಂಚಿಕೆಗೆ ೦-೨-೦.

೭೪. **ಆನಂತ** (ಸ್ವತಂತ್ರ ಕಾದಂಬರಿ). ಬರೆದವರು ಶ್ರೀಮಾನ್ 'ಸತ್ಯಬೋಧ' ಅವರು. ಧಾರವಾಡದ ಮನೋಹರ ಗ್ರಂಥಮಾಲೆಯ ೭೩ನೆಯ ಕುಸುಮ ಕ್ರೌ. ಅ. ೧೭೬ ಪುಟಗಳು ಬೆಲೆ ೧-೪-೦.

೭೫. **ಬಡತನದ ಬಾಳು** (ಕಥಾಸಂಗ್ರಹದ ೨ನೆಯ ಆವೃತ್ತಿ) ಬರೆದವರು ಶ್ರೀ. 'ಆನಂದಕಂದ'ರು. ಪ್ರಕಾಶನ ಸ್ಥಳ 'ಜಯಂತಿ' ಕಾರ್ಯಾಲಯ, ಧಾರವಾಡ ಕ್ರೌ. ಅ. ೧೧೨ ಪುಟಗಳು; ಬೆಲೆ ೧-೪-೦.

೭೬. **ತರಂಗರಂಗ** (ಮೈಸೂರು ಆಕಾಶವಾಣಿಯ ಕಾರ್ಯಕ್ರಮಸೂಚಕ ಪಕ್ಷಪತ್ರಿಕೆ). ಸಂಪಾದಕರು ಶ್ರೀ ಎ ಎನ್ ಮೂರ್ತಿರಾವ್ ಎಂ. ಎ. ಅವರು. ಮೈಸೂರು ಆಕಾಶವಾಣಿ ಕಾರ್ಯಾಲಯ, ಮೈಸೂರು. ಕ್ರೌ. ೧೬ ಪುಟಗಳು. ವಾ. ಚಂದಾ ಮೈಸೂರು ಪೇಟೆಯಲ್ಲಿ ರೇಡಿಯೊ ಸೆಟ್ ಇಟ್ಟುಕೊಂಡವರಿಗೆ ೨-೦-೦, ಇತರರಿಗೆ ೩-೦-೦. ಬಿಡಿಸಂಚಿಕೆಗೆ ೦-೧-೩.

೭೭. **ಶ್ರೀರಾಮಕೃಷ್ಣ ಲೀಲಾಪ್ರಸಂಗ** (ಗುರುಭಾವ-ಜೀವ ಭಾಗ. ಸಚಿತ್ರ). ಕನ್ನಡ ಭಾಷಾಂತರಕಾರರು ಶ್ರೀ. ಸ್ವಾಮಿ ಜಗದೀಶಾನಂದ ಅವರು. ಪ್ರಕಾರಕರು ಶ್ರೀ ರಾಮಕೃಷ್ಣಾಶ್ರಮ. ಪೋ. ಬಸವನಗುಡಿ-ಬೆಂಗಳೂರು ನಗರ. ಕ್ರೌ. ಅ. ೨೪+೨೬೨ ಪುಟಗಳು. ಬೆಲೆ ೩-೦-೦.

೭೮. **ಪ್ರಸವ ವಿಜ್ಞಾನ** (ಸಚಿತ್ರ) ಬರೆದವರು ಡಾಕ್ಟರ ದೊಡ್ಡೇರಿ ವೆಂಕಟಗಿರಿರಾಯರು. ಪ್ರಕಾಶನಸ್ಥಳ: ಸಾಧನ ಪ್ರಕಟನಾಲಯ, ಸಾಗರ—ಶಿವಮೊಗ್ಗ. ಕ್ರೌ. ಅ. ೧೬+೧೭೦ ಪುಟಗಳು. ಬೆಲೆ ೨-೦-೦.

೭೯. **ಆಧುನಿಕ ತತ್ತ್ವಶಾಸ್ತ್ರಸಮುಸ್ಕೆಗಳು** (ಪರಿಚಯಾತ್ಮಕ). ಬರೆದವರು ಶ್ರೀಮಾನ್ ಜಿ. ಹನುಮಂತರಾಯರು ಎಂ. ಎ ಯುನಿವರ್ಸಿಟಿ ಲೈಬ್ರೇರಿಯನ್, ಮೈಸೂರು. 'ಮೈಸೂರು ವಿ. ವಿ. ನಿಲಯದ ಕನ್ನಡ ಗ್ರಂಥಮಾಲೆಯ ೨೧ನೆಯ ಪ್ರಕಾಶನ. ಕ್ರೌ. ಅ. ೧೬+೨೫೬ ಪುಟಗಳು. ಬೆಲೆ ೧-೦-೦.

೮೦. **ಕರ್ಬಲಾ ಆರ್ಥಾತ್ ಇಮಾಮ್ ಹುಸೇನರ ಆತ್ಮಾರ್ಪಣ** (ಚರಿತ್ರ ವಿಷಯಕಗ್ರಂಥ). ಬರೆದವರು ಶ್ರೀ. ಹುರುಳಿ ಗದಿಗೆಪ್ಪನವರು, ಧಾರವಾಡ. ಪ್ರಕಾಶಕರು ಅಬಿದಾ ಪ್ರಿಂಟಿಂಗ್ ಪ್ರೆಸ್ ಮತ್ತು ಬುಕ್‌ಡಿಪೊ, ಧಾರವಾಡ. ಕ್ರೌ. ಅ. ೬೪ ಪುಟಗಳು; ಬೆಲೆ ೦-೧೬-೦.

೮೧. **ಶ್ರೀ ದ್ವಾರಕಾಪೀಠಾಧೀಶ್ವರ ಜಗದ್ಗುರು ಶಂಕರಾಚಾರ್ಯರವರ ಸೌರಾಷ್ಟ್ರಸಂಚಾರ ಮತ್ತು ಪೀಠಾರೋಹಣ.** (ಸಚಿತ್ರ ಪರಿಚಯಾತ್ಮಕ ಪುಸ್ತಕ) ಪ್ರಕಾಶಕರು ಶ್ರೀದ್ವಾರಕಾ ಜಗದ್ಗುರು ಸಂಸ್ಥಾನ, ಮುಳಬಾಗಲು ಕೃಷ್ಣಾನಂದಮಠ, ಪೋ ದೂರ್ವಾಸ ಪುರ, ತಾಲ್ಲೂಕು ತೀರ್ಥಹಳ್ಳಿ. ಡೆ. ೮. ೫೦ ಪುಟಗಳು ಅಲ್ಲದೆ ಚಿತ್ರದ ಪುಟಗಳು ಬೇರೆ.

ಕನ್ನಡ ನೇರದ ಸ್ವಾಮಿಗಳೊಬ್ಬರು ತಮ್ಮ ಧೀಮಂತಿಕೆಯಿಂದ ಗುರುತರ ಜೀವನದ ರಾಜ್ಯಸಾಮ್ರಾಜ್ಯವನ್ನೆ, ಪಂಡಿತವರ್ಗವನ್ನೂ ಮೆಚ್ಚಿಸಿ, ಜನಸಾಮಾನ್ಯರ ಅವರ ವಿದ್ವತ್ತಗಳನ್ನು ಗೆಳಸಿ, ದ್ವಾರಕಾಪೀಠದ ಅಧಿಕಾರವನ್ನು ಸುಪ್ರತಿಷ್ಠಿತ ಅಧಿಸಾಧನ ಸಂಗತಿಯನ್ನು ಇವರಲ್ಲಿ ಸಂಗ್ರಹಿಸಲಾಗಿದೆ. ಪರಿವಿಡಿ. ಜಾಂ ಸಾರ, ಫ್ರಾಂಗದ್ರಾ ನೊಮಲಾಪ— ಆ ಭಾಗದ —ಹಿಂದೂ ಸಂನ್ಯಾಸಿಕಲ್ಲಿಯಾ ಶ್ರೀ ಸ್ವಾಮಿಗಳನ್ನು ಕರೆದು ಸತ್ಕರಿಸಿದ್ದಾರೆ. ಎಲ್ಲ ಸಂದರ್ಭಗಳಿಗೆ ಬಾಯಾಚಿತ್ರಗಳ ಪರಿಯಚ್ಚೂ ಅಂದವಾಗಿ ಆಜ್ಞಾಗಿನೆ. ಸನ್ಮಾನ ಸಮಾರಂಭಕ್ಕೆ ಅನುಕ್ರಮಿಕ ಪರ್ಯಾಯಾಪ್ತವೆಂಬುವರ ವಿವೇಚನೆಯನ್ನರಿತು ಕೊಂಡು ಪರ್ಯಾಯಂದವನ್ನು ಸಜೆಯಿಸಿ, ಗುರುತರ ಜನರ ಅಧ್ಯಾತ್ಮಿಕ ಉನ್ನತಿಗೆ ಶ್ರೀಗಳವರು ಕಾರಣರಾಗಿದೆ, ಕನ್ನಡ ಕುಲಕ್ಕೆಲ್ಲ ಆನಂದ, ಅಭಿಮಾನ.

೮೨. **ಕಲ್ಯಾಣ** (ಗೋ ಅಂಕ) ಸಚಿತ್ರ ಹಿಂದೀ ಮಾಸಪತ್ರಿಕೆಯ ವಿಶೇಷ ಸಂಚಿಕೆ. ಸಂಪಾದಕರು ಶ್ರೀ ಹನುಮಾನಪ್ರಸಾದ ಪೋದ್ದಾರ ಮತ್ತು ಶ್ರೀ ಸಿ. ಎಲ್. ಗೋಸ್ವಾಮಿ ಎಂ. ಎ. ಶಾಸ್ತ್ರಿ. ಪ್ರಕಾಶಕರು ಶ್ರೀಮಾನ್ ಘನಶ್ಯಾಮದಾಸ ಜಾಲಾನ್, ಗೀತಾಪ್ರೆಸ್, ಗೋರಖಪುರ (ಯು. ಪಿ.). ಕ್ರೌ ೧೫೮ ಪುಟಗಳಲ್ಲದೆ ತ್ರಿವರ್ಣ ರಂಜಿತ ಚಿತ್ರದ ಪುಟಗಳು ಹಲವು. ಬೆಲೆ ೪-೦-೦.

ಕಲ್ಯಾಣ ಈ ಮೊದಲಿನ ಗೀತಾಂಕ, ಈಶ್ವರಾಂಕ, ರಾಮಾಂಕ, ಕೃಷ್ಣಾಂಕ ಮುಂತಾದ ವಿಶೇಷಸಂಚಿಕೆಗಳನ್ನು ನೋಡಿದವರಿಗೆ ಈ ಸಂಚಿಕೆಯ ಲಾಯಖ್ಯತೆಯ ಬಗೆಗೆ ಹೆಚ್ಚು ಹೇಳಬೇಕಾಗಿಲ್ಲ. ಅಕಳ ವಿಷಯವನ್ನಷ್ಟೆ ಪ್ರಧಾನವಾಗಿ ಅಧ್ಯಾತ್ಮಿಕ ಕಲ್ಪನೆಗಳನ್ನೂ ಅದಕ್ಕೆ ಸಂಬಂಧಿಸಿದ ಪುರಾಣೈತಿಹಾಸಿಕ ಕಥಾಸ್ವರೂಪಗಳನ್ನೂ, ವರ್ತಮಾನದ ಸ್ಥಿತಿಗತಿಯನ್ನೂ ಅಕಳುಗಳ ಬಗೆಗೆ ವೇದ-ವಿವೇದಗಳಲ್ಲಿರುವ ಲೌಕಿಕ ಸ್ವಾಸ್ಥ್ಯಮಾರ್ಗವನ್ನೂ ಕುರಿತು ತಜ್ಞರು ಬರೆದ ಸಲವು ಲೇಖನಗಳಿವೆ. ಎಲ್ಲ ಲೇಖನಗಳೂ ಗ್ರಂಥಪ್ರಮಾಣಗಳಿಂದ ಕೂಡಿ, ಜಿಜ್ಞಾಸುಗಳ ಅಧ್ಯಾಸಕ್ಕೆ ತಕ್ಕುದಾಗಿವೆ. ಸಂಗ್ರಹದಲ್ಲಿ ಇರಿಸಬೇಕಾದ ವಿಶೇಷಸಂಚಿಕೆ.

೮೩. **ಜರತಾರಿ ಕುಪ್ಪಸ** (ಕಥಾಸಂಗ್ರಹ). ಬರೆದವರು ಶ್ರೀಮಾನ್ ಎಚ್. ಎ. ಭಟ್ಟ ಬಿ ಎಸ್ಸಿ. ಬೆಳುಸೊಳ. ಪ್ರಕಾಶಕರು ಶ್ರೀ. ಎಚ್ ಎಸ್ ಪೊನ್ನಪ್ಪ ಬಿ. ಎಸ್ಸಿ. ಮಿತ್ರಸಂಘ. ಬೆಂಗಳೂರು ಕ್ರೌ. ಚ. ೧೭೪ ಪುಟಗಳು. ಬೆಲೆ ?

## ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!
- ಕೊದಲನೆಯ ಪ್ರೀಮ್ಯಮಾಪನದಲ್ಲಿ ( Valuation ) ಲಾಭವನ್ನು ಹಂಚುವುದಲ್ಲದೆ, ಹೊಸ ಪಿಮೂಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ಪಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸುದಾರರಿಗೆ ಖಲಿಯುವಿಲ್ಲದೆ ಹಕ್ಕಿನ ಹಣ ( Claim ) ವನ್ನು ಸಲ್ಲಿಸಿರುವುದೂಂದು ವಿಶೇಷ ನುಡಿಗೆಗೂ ಕಳ್ಯವಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹುಟಿರಿಸುವವರೂ ಕನ್ನಡಸಾಡಿನ ಹಿತಚಿಂತಕರೂ ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಎ. ಎಸ್. ಕಿಣಿ, ಮ್ಯಾನೇಜಿಂಗ ಡೈರೆಕ್ಟರ ಎಂ. ಗೋವರ್ಧನರಾವ, ಮ್ಯಾನೇಜರ್

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ!

ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಟವಾಗಿ ಇರಬೇಕು!

ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ!

ತರುಣ-ತರುಣಿಯರು ಬರಿಯೆ ಕಣ್ಣು ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆ ಇದ್ದರೂ ಅದು ವ್ಯರ್ಥವೆನಿಸುವುದು.

ಅದಕ್ಕಾಗಿಯೇ

ಮುಕುಲ

ದಿನದಿನವೂ ಉಪಯೋಗಿಸಿರಿ.

ಆಯುರ್ವೇದದ ತಜ್ಞರಿಂದ ಶುದ್ಧ ಕೊಬ್ಬರಿ ಎಣ್ಣೆಯಲ್ಲಿ ತಯಾರಿಸಲಾದ "ಮುಕುಲ" ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ನುರಿಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ

ಹುಬ್ಬಳ್ಳಿ ಶಾಖೆ: ಸ್ಟೇಶನ್ ರೋಡು, ಹುಬ್ಬಳ್ಳಿ.

ಸಂಪುಟ ೮ | ಫೆಬ್ರುವರಿ ೧೯೪೬ | ಸಂಚಿಕೆ ೯

ಸಂಪಾದಕರು:
ಬೆಟಗೇರಿ ಕೃಷ್ಣಶರ್ಮ

## ಮುಖ್ಯ ವಿಷಯಗಳು

ಕನ್ನಡದ ವೀರಶ್ರೀ (ಕವನ) .... . .... ೩೭೫
ಪ್ರೊ. ರಂ. ಶ್ರೀ. ಮುಗಳಿ, ಎಂ. ಎ., ಬಿ. ಟಿ. ಸಾಂಗಲಿ
ಬಾಳತೇರು (ಕವನ) .... .... ೩೭೬
ಶ್ರೀ. ಕೃಷ್ಣಮೂರ್ತಿ ಪುರಾಣಿಕ, ಬಿ. ಎ., ಬಿ. ಟಿ. ಗೋಕಾಕ
'ಶ್ರೀ'ಯವರಿಗೆ ಶ್ರದ್ಧಾಂಜಲಿ (ವ್ಯಕ್ತಿಪರಿಚಯ) .... ೩೭೭
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ
ಆಣುವಿನ ಮಹತಿ (ವೈಜ್ಞಾನಿಕ) .... ೩೭೯
ಪ್ರೊ. ಕೆ. ಎಸ್. ಕವಡೂತ, ಎಂ. ಎಸ್ಸಿ. ಧಾರವಾಡ
ತಿಪ್ಪಯ್ಯಂಗಾರರ ವಿದೇಹಸಂಚಾರ (ಒಂದು ಕತೆ) ೩೮೧
ಶ್ರೀ. 'ಭಾರತೀಸುತ' ವೀರರಾಜಸೇವಿ (ಕೊಡಗು)
ಸಾಹಿತ್ಯ ಮತ್ತು ಪ್ರಗತಿ (ಸಾಹಿತ್ಯನಿಮರ್ಶೆ) ... ೩೮೪
ಪ್ರೊ. ರಾ. ಯ. ಧಾರವಾಡಕರ, ಎಂ. ಎ. ಧಾರವಾಡ
ಹೆಣ್ಣೊರಕ (ಕವಿತೆ) .... .... .... ೩೯೨
ಶ್ರೀ. ಮಾನೋಳಕರ ಶ್ರೀಧರರಾಯರು, ಪುಣೆ
ವಿಜಯಶ್ರೀ (ನಡೆಮುಪೋಗಿರಬಹುದಾದ ಕತೆ) ... ೩೯೩
ಶ್ರೀ. ಮುಜರ್ ಅಣ್ಣಾರಾಯರು, ಯಾದಗಿರ
ಕರ್ನಾಟಕ ಚಳವಳಿಯಲ್ಲಿ ಧಾರವಾಡದ ಭಾಗ ೩೯೮
ಶ್ರೀ. ಮುಧವೀಜು ಕೃಷ್ಣರಾಯರು, ಧಾರವಾಡ
ಕನ್ನಡ ಯಾತ್ರೆ (ಮದರಾಸ ಸಮ್ಮೇಳನದ ವೃತ್ತ) .... ೪೦೧
ಶ್ರೀ. ರಾಘವೇಂದ್ರ ಬಾಗಲ, 'ಪೋಷಕಕುಂಜ' ಮುಬ್ಬಳ್ಳಿ
ಸಾಹಿತ್ಯವಿಹಾರ (ವಿಮರ್ಶಾತ್ಮಕ ಟಿಪ್ಪಣಿಗಳು) ... ೪೦೩
'ವಿಹಾರಿ'

## ತಿದ್ದುಪಡಿ

'ಶ್ರೀಯವರಿಗೆ ಶ್ರದ್ಧಾಂಜಲಿ' ಬರೆಹದ ೩೭೮ನೆಯ ಪುಟದಲ್ಲಿ, ೭ನೆಯ ಅಂಕಣದ ೨೫ನೆಯ ಸ್ಥಾನದಲ್ಲಿ, ಒಂದು ವಿಚಿತ್ರ ಅಚ್ಚಿನ ದೋಷವಾಗಿ ಅರ್ಥಕ್ಕೆ ವ್ಯತ್ಯಯ ಬರುವಂತಾಗಿದೆ. ದಯವಿಟ್ಟು ಅದನ್ನು ಸರಿಪಡಿಸಿಕೊಳ್ಳಿರಿ.

ಮೇಲಿನಿಂದ ಕೆಳಗೆ ೩೩ನೆಯ ಸಾಲಿನಲ್ಲಿ ಮೊದಲಿಗೆ ಬಂದ 'ಎದುರಾಳನ್ನು ಚುಚ್ಚಿ' ಎಂಬ ಮಾತನ್ನು ೨೪ನೆಯ ಸಾಲಿನಲ್ಲಿ ಮೊದಲಿಗೆ ಬಂದ 'ವ್ಯಕ್ತಪಡಿಸುವಾಗಲೂ' ಎಂಬ ಮಾತಿನ ಮುಂದೆ ಸೇರಿಸಿಕೊಂಡು ಓದಬೇಕು, ಎಂದರೆ ಅರ್ಥವು ಹೊಂದಿಕೆಯಾಗುವುದು. ಮುದ್ರಾರಾಕ್ಷಸನ ಹಾವಳಿಯಿದು.

DYESTUFFS
INTERMEDIATES
AND
CHEMICALS

SIZING AND FINISHING PRODUCTS
MACHINERIES FOR ALL INDUSTRIES

FOR

Cotton, Silk, Art Silk,
Wool, Jute, Paper,
Leather, Soap, Wax,
Coir, Varnishes, Oils.

CHEMICALS
ACCELERATORS AND
ANTI-OXIDANTS
FOR
RUBBER INDUSTRY

S. K. KABBUR LIMITED
3, BASTION ROAD
FORT, BOMBAY
Telegrams "DIAZO" Bombay Telephone 21627

CORRESPONDENTS IN ENGLAND:

KABBUR & CO., LIMITED
RADHA HOUSE
Higher Ardwick, MANCHESTER, 12.

Telegrams "Radha, Manchester."

ಮುದ್ರಕರು: — ಎಸ್. ಎಸ್. ಬೆಂಗೇರಿ, ವಿಜಯ ಮುದ್ರಣಾಲಯ, ಧಾರವಾಡ.
ಪ್ರಕಾಶಕರು — ಎಂ. ವಿ. ಸೊನ್ನಗಟ್ಟಿ, ಜಯಂತಿ ಕಾರ್ಯಾಲಯ ಧಾರವಾಡ

ಸಂಪುಟ ೮

ಸಂಚಿಕೆ ೯

ಫೆಬ್ರುವರಿ ೧೯೪೬

ವರ್ಗಣಿ ದರ

ವರುಷಕ್ಕೆ ೪—೪—೦
ಆರು ತಿಂಗಳಿಗೆ ೨—೪—೦
( ಅಂಚೆಯ ವೆಚ್ಚ ಸೇರಿ )

ಬಿಡಿ ಸಂಚಿಕೆಗೆ ೬ ಆಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

# ಕನ್ನಡದ ವೀರಶ್ರೀ

( ದಿವಂಗತ ಡಿ. ಎಂ. ಶ್ರೀಕಂಠಯ್ಯನವರಿಗೆ ಕಂಬನಿಯ ಮುಡಿಪು )

ಶ್ರೀ. ರಂ. ಶ್ರೀ. ಮುಗುಳಿ, ವಿಲಿಂಗ್ಡನ್ ಕಾಲೇಜ್, ಸಾಂಗಲಿ

೧

'ಕನ್ನಡದ ವೀರಶ್ರೀ ಕಣ್ಣುಮರೆಯಾಯಿತಿಂದು!
ನಾತುನುಡಿ ಹೆಗ್ಗಳಿಕೆಯನು ತನ್ನ ನರ-ನರದ
ನಾಳದಲಿ ತುಂತುಂಬಿ, ತಪದ ಗವಿಯಿಂದೆದ್ದು
ತನ್ನ ದುಃಖವ ತುಳಿದು, ಹೆರರ ತುಳಿತಕೆ ಸಿಕ್ಕು
ಹುಡಿಯಾದ ನಾಡುಗರ ಕೆಚ್ಚನೆಚ್ಚರಿಸಲೆಕೆ
ಕನ್ನಡದ ಬಾವುಟವ ಹಿಡಿದೆತ್ತಿ ಹಾಡುತ್ತ
ತಾಯನೋಟವ ಕಂಡು ಏಳೆಂದು ಬಾಳೆಂದು
ಹುರಿಗೊಂಡು ಕರೆಯುತ್ತ ಹಗೆಯೊಡನೆ ಹೋರುತ್ತ
ಮಿರಿಮಿಂಚಿ ಹಿರಿಮೊಳಗಿ ಮಳಿಗರೆದು ತಂಪೆರೆದ
ಕನ್ನಡದ ವೀರಶ್ರೀ ಕಣ್ಣುಮರೆಯಾಯಿತಿಂದು!'

೨

'ಕನ್ನಡದ ವೀರಶ್ರೀ ಕಣ್ಣುಮರೆಯಾಯಿತಿಂದು?
ತಿಳಿಯದೇ ಇದು, ನಿನಗೆ ಹೊರಗಣ್ಣು ಸತ್ಯವೆಂದು?
ನಾಡಿನೆದೆಯಲಿ ಹೊಕ್ಕು ಹಮ್ಮುಸೊಮ್ಮನು ನೀಡಿ
ಒಂದೆ ತಾಯಿಯ ನಿಚ್ಚ ನೋಟವನು ಕೊರೆಕೊರೆದು
ಇದಕಾಗಿ ದುಡಿಯುವೆನು, ಇದಕಾಗಿ ಮಡಿಯುವೆನು
ಎಂಬ ಕನಸನು ನಿಲಿಸಿ, ಸಂಕಲ್ಪವನು ಬಲಿಸಿ,
ಪ್ರಭೆಯೊಂದೆ ಶತಕೋಟಿ ಚಿಕ್ಕೆಯಲಿ ಚೆದರಿದೊಲು
ನೂರಾರು ಕೆಡಿಯಾಗಿ ನಾಡಿನಲಿ ಅವತರಿಸಿ
ತಾ ಹಿಂದೆ ಸರಿದಿಹುದು ತನ್ನ ಕೃತಿ ನೋಡಲೆಂದು
ಕನ್ನಡದ ವೀರಶ್ರೀ ಕಣ್ಣುಮರೆಯಲ್ಲವಿಂದು!?




## ಕರ್ನಾಟಕದಲ್ಲಿ ಹಿಂದು–ಮುಸಲ್ಮಾನ್

ಕಳೆದ ತಿಂಗಳ ಏನೆಯ ತಾರೀಖಿನ ಏನ ದಾವಣಗೆರೆ ಜಿಲ್ಲೆಯ ರಾಣೇಬೆನ್ನೂರಲ್ಲಿ ನಡೆದ ಹಿಂದು-ಮುಸಲ್ಮಾನ ಗಲಾಟೆಯನ್ನು ಕೇಳಿ ಯಾವ ದೇಶಾಭಿಮಾನಿಗೂ ಜನತಾ ಸಂಸ್ಥಿಕನಿಗೂ ಆಸಮಾಧಾನವೆನಿಸದೆ ಇರದು. ಇದುವರೆಗೆ ಹಿಂದು-ಮುಸಲ್ಮಾನ್ ಕಲಹದ ಬಗ್ಗೆ ಹೊರದ ವಾರ್ತೆಗಳನ್ನು ಕೇಳುತ್ತಿದ್ದೆವು—ಓದುತ್ತಿದ್ದೆವು, ಆ ಆನಂತರ ಬೇಕಾದಂದು ನಮ್ಮ ಮಗ್ಗಿಲಿಗೇ ಬಂದು ತನಲಿದೆಯೆಂಬ ಕೋಣಕ್ಕೆಯು ಸಂಗತಿ. ನಿಜವಾಗಿಯೂ ಹಿಂದು-ಮುಸಲ್ಮಾನ್ ಕಲಹವಾಗುವ ಪರಿಸ್ಥಿತಿ ನಮ್ಮ ಕನ್ನಡನಾಡಿನಲ್ಲಿ ಇದೆಯೆ? ಇಂತಹ ಕಲಹದ ಬೀಕಿಗೆ ಕೊಪ್ಪ್ರಹಾರಕನ ಮನೆಮುರುಕರು, ಸ್ವಹಿತಜನ್ಮಾ-ದರೂ ಇನು ಕಾಫಿಸಬಹುದೆಂಬುದನ್ನು ನಿಜಾರಿಸಿದ್ದಾರೆಯೆ?

ಕನ್ನಡನಾಡಿನ ಯಾವ ಭಾಗದಲ್ಲಿಯೂ ಮುಸಲ್ಮಾನರು ಅಲ್ಪಸಂಖ್ಯಾಕರು. ಇದ್ದಷ್ಟು ಜನರು ಕೂಡ ಕೂಲಿ-ಕೈಗಾರಿಕೆಗಳ ಬೇಲೆಯ ಜೀವಿಸಿರಬೇಕಾದುದರಿಂದ, ಹಳ್ಳಿಗಳಿಗಿಂತ ಪ್ರಧಾನ ಪಟ್ಟಣಗಳಲ್ಲಿಯೆ ಹೆಚ್ಚು ಜನರು ವಸತಿ ಮಾಡಿ-ಕೊಂಡಿರುವರು. ಇತ್ತೀಚೆಗೆ ತೀರ ಕೆಲವು ಜನರು ಕಲಿತು ಸರಕಾರಿ ನೌಕರಿ, ವಕೀಲಿ, ಡಾಕ್ಟರಿ ಮೊದಲಾದ ಉದ್ಯೋಗದಲ್ಲಿ ಕಾಣುತ್ತಿರಬಹುದು; ಆದರೆ ಹೆಚ್ಚು ಜನರು, ಬಹುಸಂಖ್ಯಾಕರೂ ಅರ್ಥಿಕ ದೃಷ್ಟಿಯಿಂದ ಅನುಕೂಲವಂತರೂ ಆದ ಹಿಂದುಜನರ ಸಹಕಾರದಿಂದಲೆ ಬದುಕಬೇಕಾಗಿದೆ. ಅವರ ಕೂಲಿ-ಕೈಗಾರಿಕೆಗಳಿಗೆ ಹಿಂದು ಜನರಿಂದಲೆ ಹೆಚ್ಚಾಗಿ ನೇತನ ಸಿಕ್ಕುತ್ತಲಿದೆ.

ಹಿಂದುಗಳಿಗೆ ನಿತ್ಯಾವಶ್ಯಕವಾದ ಅನೇಕ ಉದ್ಯಮಗಳು ಇಂದು ಮುಸಲ್ಮಾನರ ಸಹವಲ್ಲಿಯೆ ಇವೆ. ಕಾರಣಾಂತರಗಳಿಂದಲೋ ಸಿರ್ಲಕ್ಷ್ಯ-ದಿಂದಲೋ ಹಿಂದುಗಳು ಬಿಟ್ಟು ಉಪಯುಕ್ತ ಉದ್ಯಮಗಳೆಲ್ಲ ಇಂದು ನಮ್ಮ ನಾಡಿನಲ್ಲಿ ಮುಸಲ್ಮಾನರ ಕಡೆಗಿವೆ. ಟಾಂಗಾ, ಮೋಟಿಕಾ, ಬಾಡಿಗೆಯ ಎಕ್ಕಾ ಗಳನ್ನಿಟ್ಟವರೆಲ್ಲ ಮುಸಲ್ಮಾನರು. ಜಾತ್ರೆಗಳನ್ನು ಗಟ್ಟಿಮಾಡಿಕೊಡುವ ಕಲಾಯಿ ಮಾಡುವ, ಸುಗಂಧ ವಸ್ತುಗಳನ್ನು ಮಾರುವ ವ್ಯವಸಾಯ ಅವರಿಗೇ ಖಾಸಲಾಗಿವೆ. ಬಹಳವೇಕೆ, ಹಿಂದುಗಳ ಧಾರ್ಮಿಕ ವ್ರತಗಳಿಗೆ ಬೇಕಾದಂತ ಅನಂತನ ದಾರದಂತಹ ಹಲವು ಸಲಕರಣೆಗಳನ್ನು ಒದಗಿಸುವವರೂ ಮುಸ-ಲ್ಮಾನರು. ಪ್ರಾಣಿಜಾಣಿಕರೂ ಕಸ್ತೂರಿಸಹಿಸ್ಸುಗಳೂ ಸ್ವಾಮಿಭಕ್ತರೂ ಎಂಬ ವಿಶ್ವಾಸ ಇದುವರೆಗೆ ಇದ್ದುದರಿಂದಲೆ ಹಿಂದೂ ವರ್ತಕರೂ ಬೇರೆಯವರೂ ಮುಸಲ್ಮಾನ್ ಆಳುಗಳನ್ನು ಬೇಕಾಗಿಯೆ ತಮ್ಮಲ್ಲಿ ಕೆಲಸಕ್ಕಿಟ್ಟುಕೊಳ್ಳುವರು. ನಮ್ಮಲ್ಲಿಯ ಮುಸಲ್ಮಾನರಲ್ಲಿ ಬಡತನವೆ ಹೆಚ್ಚಾಗಿರುವುದರಿಂದ, ಬಹುಸಂಖ್ಯಾಕ ವಾವ ಹಿಂದು ಸಮಾಜದೊಂದಿಗೆ ಸ್ನೇಹ-ಸಹಕಾರ-ನಿಕ್ಷಾಸಗಳಿಂದ ನಡೆಯದೆ ಹೋದರೆ ಬೇರೆ ಗತಿಯೆ ಇಲ್ಲ. ಆದುದರಿಂದಲೆ ಹಿಂದು-ಮುಸಲ್ಮಾನರಲ್ಲಿ ಇದುವರೆಗೆ ನಮ್ಮಲ್ಲಿ ಯಾವ ವಿತುಷ್ಟಿಯೂ ಇಲ್ಲದೆ ಬಂದೆ ಮನದಿಂದ—ಬಂದೆ ನ್ಯಸಂಯದಿಂದ— ಬಾಳುತ್ತಿದ್ದರು.

ಹಿಂದುಗಳ ಹಬ್ಬ-ಹುಬಿನಸ, ಜಾತ್ರೆ-ಉತ್ಸವ, ನಾದುನೆ-ಮುಂಜಿಗಳು ಮುಸಲ್ಮಾನರಿಗೆ ಲಾಭದಾಯಕವಾಗಿ ಇರುತ್ತಿರುವುದರಿಂದ ಪ್ರತ್ಯಸ್ಸರ್ಕವಾಗಿ ಅವುಗಳನ್ನು ಅವರು ಹಾರಯಿಸುತ್ತಿದ್ದರು. ಆನಂದದಿಂದ ಅದರಲ್ಲಿ ಭಾಗ ವಹಿಸುತ್ತಿದ್ದರು. ಅತ್ಮೀಯ ಭಾವದಿಂದ ಸಹಕರಿಸುತ್ತಿದ್ದರು. ಆದುದರಿಂದ ಮುಸಲ್ಮಾನರೆಂಬವರು ಬೇರೆ ನಿಜಾತೀಯ ಮೂಲವಸ್ತುವೆಂದು ಇದುವರೆಗೂ ಕನ್ನಡಿಗರು ತಿಳಿದುಕೊಂಡಿರಲಿಲ್ಲ. ಆದುದರಿಂದಲೆ ಅವರ ಹಬ್ಬ-ಉರುಸು ಗಳಲ್ಲಿಯೂ ಹಿಂದುಗಳು ಪ್ರೀತಿಯಿಂದ ಸಹಕರಿಸುತ್ತಿದ್ದರು. ಈಗಲೂ ಕೂಡ ಜನಸಾಮಾನ್ಯರ ಜೀವನವನ್ನು ಅಭ್ಯಾಸಿಸಿ ನೋಡಿದರೆ, ಹಿಂದು-ಮುಸಲ್ಮಾನರ ಮನೆತನ-ಮನೆತನಗಳಲ್ಲಿಯೂ ಕುಟುಂಬ ಕುಟುಂಬಗಳಲ್ಲಿಯೂ ವ್ಯಕ್ತಿ-ವ್ಯಕ್ತಿ ಗಳಲ್ಲಿಯೂ ಕಿತ್ತಲಾರದಂತಹ ಹರಿಯಲಾರದಂತಹ ಹಿತಸಂಬಂಧಗಳೂ ಸ್ನೇಹದ ಬೇರುಗಳೂ ಇರುವುದನ್ನು ಎಲ್ಲೆಲ್ಲಿಯೂ ಕಾಣಬಹುದು. ಒಬ್ಬರ ಸುಖ-ದುಃಖಗಳು ಇನ್ನೊಬ್ಬರ ಸುಖ ದುಃಖಗಳಾಗಿರುವವೆಂಬುದನ್ನು ಎಲ್ಲಿ ಕಡೆಯಲ್ಲಿಯೂ ನೋಡಬಹುದು.

ವಸ್ತುಸ್ಥಿತಿ ಹೀಗಿದ್ದರೂ, ಜಾತಿವಿನಿಷ್ಠ ರಾಜಕೀಯ ವಿಚಾರವನ್ನೂ ಆದಕ್ಕಾಗಿ ಹಿಂದುಗಳ ವಿಷಯದಲ್ಲಿ ದ್ವೇಷಭಾವನೆಯನ್ನೂ ಪ್ರಚಾರಪಡಿಸುವ ಮುಸ್ಲಿಂ ಲೀಗು, ಕನ್ನಡನಾಡಿನಂತಹ ತಣ್ಣಗಿನ ಪ್ರದೇಶವನ್ನೂ ಕಾವಿಗೆ ಏರಿಸ-ತ್ತಲಿದೆ. ಕನ್ನಡ ಜನತೆಯ ನಿಜವಾದ ಸುಖ-ದುಃಖದ ಹೊಣೆಗಾರಿಕೆಯನ್ನು ಅರಿಯದ ಹೊರನಾಡಿನ ಲೀಗ್ ಮುಂದಾಳುಗಳು ಬಂದು, ತೀಕ್ಷ್ಣವಾದ ಜಾತೀಯ ಭಾವನೆಯನ್ನು ಅಶಿಕ್ಷಿತ ಜನರಲ್ಲಿ ಹಬ್ಬಿಸುತ್ತಲಿದ್ದಾರೆ. ಲೀಗ ಪಕ್ಷದ ವೃತ್ತಪತ್ರಿಕೆ-ಪ್ರಚಾರ ಸಾಹಿತ್ಯಗಳೂ ಹಿಂದುಗಳ ಬಗೆಗೆ ದ್ವೇಷಭಾವನೆ ಹುಟ್ಟು-ವಂತೆ ಪ್ರಚೋದಿಸುತ್ತವೆ; ಪ್ರಚೋದಿಸುತ್ತವೆ. ಮುಳ್ಳವರ್ತಿ ಸಂಘದಿಂದ ಸಿಕ್ಕುವ ಪ್ರಚಾರಧನದ ಆಶೆಯಿಂದ ನಮ್ಮ ನಾಡಿನಲ್ಲಿಯೂ ಕೆಲವು ಕಲಿತ ಕುಶಿಕ್ಷಿತರೂ ಲೀಗಿನ ವಿಚಾರಸರಣಿಯನ್ನು ಪ್ರಚಾರಗೊಳಿಸಲು ಸಿದ್ಧರಾಗಿರುವರು. ಇವರಿಗೆ ತಮ್ಮ ನಿಜವಾದ ಹಿತ ಎಲ್ಲಿದೆಯೆಂಬುದರ ಕಲ್ಪನೆಯಿಲ್ಲದೆ ತಮ್ಮನ್ನು ನಂಬಿ ನಡೆಯುತ್ತಿದ್ದ ಸ್ವಜಾತೀಯ ಜನರನ್ನೂ ಕಷ್ಟಕ್ಕೆ ಗುರಿಮಾಡುತ್ತಿದ್ದಾರೆ. ರಾಣೆಬೆನ್ನೂರಿನಂತಹ ಉದಾಹರಣೆ ಮನೆಮುರುಕರಿಂದ ಬೇಕೆಂಬ ವಿಧಾಯಕ ವ್ಯಕ್ತಿಯು ಯಾವ ಮುಸಲ್ಮಾನನಿಗೆ ಹಿತಕಾರಿಯಾಗಿ ಪರಿಣಮಿಸೀತು ನಿಷ್ಪಕ್ಷ-ಪ್ರಿಯರಾದ ಕೆಲವು ಹುಂಬ ಜನರ ದುಡುಕಿನ ಮೂಲಕ, ಸ್ನೇಹ-ಸಹಕಾರದಿಂದ ಬಾಳಿಕೊಂಡಿರುವ ಬಹುಜನ ಮುಸಲ್ಮಾನರಿಗೆ ಆಪತ್ತು ತಂದರೆ? ಹೀಗೆ ಗೊಂದಲವೆಬ್ಬಿಸಿ ಹಿಂದುಗಳ ಸೇಡು ತೀರಿಸಿಕೊಳ್ಳಬಹುದುವಾದರೆ ತಮ್ಮ ಕಾಲ ಮೇಲೆ ತಾವೆ ಕಲ್ಲು ಚೆಲ್ಲಿಕೊಂಡಂತಾಗುವುದೆಂಬುದನ್ನು ಯಾವ ಮುಸಲ್ಮಾನನೂ ಮರೆಯಲಾಗದು. ಆದರಂತೆಯೆ ಹಿಂದುಗಳೂ ನೆನಪಿ ಇಟ್ಟುಕೊಳಬೇಕಾದ ಮಾತಿದು.

ಬಹುಸಂಖ್ಯಾಕ ಸಮಾಜದವರಾಗಿ ಇದ್ದುದರಿಂದ ಕನ್ನಡನಾಡಿನಲ್ಲಿ ಇದು ವರೆಗೆ ಹಿಂದುಗಳಿಗೆ ಸ್ವಸಂಘಟನೆಯ ಅವಶ್ಯಕತೆ ಎನಿಸಿರಲಿಕ್ಕಿಲ್ಲ. ಇದುವರೆಗಿನ ಮುಸಲ್ಮಾನರೊಂದಿಗಿನ ಸ್ನೇಹ-ಸಹಕಾರ-ಸೌಹಾರ್ದಗಳ ಮೂಲಕ ತಾವು ಸಂಘಟಿತರಾಗಿ ಇರಬೇಕೆಂಬ ಕಲ್ಪನೆ ಕೂಡ ಇಲ್ಲಿಯ ಹಿಂದುಗಳಿಗೆ ಬಂದಿರಲಿಕ್ಕಿಲ್ಲ. ರಾಜಕೀಯದ ಗೊಂದಲದಂತಹ ಸಂದರ್ಭಗಳು ಸಂಘಟನೆಯ ಅನಿವಾರ್ಯತೆಯನ್ನು ಹಿಂದುಗಳಿಗೆ ಮನವರಿಕೆ ಮಾಡಿಕೊಡುವುದು ಸ್ವಾಭಾ-ವಿಕ. ಅಲ್ಪಸಂಖ್ಯಾಕರೊಂದಿಗೆ ಬಹುಸಂಖ್ಯಾಕ ಬಲಿಷ್ಠರು ಅಸಹಕಾರಕ್ಕೆ ಸಿದ್ಧರಾದರೆ, ಅಲ್ಪಸಂಖ್ಯಾಕರು ಎಂತಹ ಕಷ್ಟನಷ್ಟಗಳನ್ನು ಎದುರಿಸಬೇಕಾದೀತು ಎಂಬುದನ್ನು ನಮ್ಮಲ್ಲಿಯ ಜಾತೀಯ ವಿಚಾರಾಂಧರು ಯೋಚಿಸಿ ನೋಡಬೇಕು. ತಮ್ಮ ಜಾತಿಯವರಿಗೆ ನಿಜವಾದ ಹಿತಬೋಧೆಯನ್ನು ಮಾಡಿ ಅವರನ್ನು ಸುಖ-ಸಂತೋಷಗಳಲ್ಲಿರಿಸಬೇಕೆಂಬ ಬಯಕೆಯಿದ್ದರೆ ಮುಸ್ಲಿಂ ಲೀಗಿನ ಮುಂದಾಳು ಗಳು ತಮ್ಮ ಪಕ್ಷಪ್ರಚಾರಪದ್ಧತಿಯನ್ನು ವಿಧಾಯಕಗೊಳಿಸಬೇಕು. ಎಲ್ಲರೂ ಪಂಗಡಗಳಲ್ಲಿ ಸ್ನೇಹ-ಸೌಹಾರ್ದ ಹೆಚ್ಚುವ ಯೋಜನ ಕೈಕೊಳ್ಳಬೇಕು. ಜನಸಾಮಾನ್ಯರಲ್ಲಿ ಕೋಮುವಾದದ ಬಗ್ಗೆ ಪ್ರಚಾರ ಮಾಡಬೇಕಿಲ್ಲ ಅದು ಅವರ ಪ್ರಕೃತಿ. ಸ್ನೇಹ-ಸಹಕಾರಗಳ ಬಗ್ಗೆ ಪ್ರಚಾರ ಮಾಡಬೇಕಾಗುವುದು; ಏಕೆಂದರೆ ಇದು ಜೀವನಾವಶ್ಯಕವಾದ ಸಂಸ್ಕೃತಿ.

—ಸಂಪಾದಕರು

## ೧. ಚುನಾವಣೆಯ ಪರ್ವತಪರ್ವಣ

"ಏನು ಮುಂಗರಾಯ್ನೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಹಾಳೆಯಲ್ಲೇ ಕುರುಕ್ಷೇತ್ರದ ಕಾಳಗ ನಡೆದಿದೆಯಲ್ಲಾ! ಜಾತೀಯತೆಯನ್ನು ನುಜ್ಜುಗೂಡಿಸುವ ಸೂತ್ರ ನಾಮ ಕಾಂಗ್ರೆಸಿನ ಕನ್ನಡ ಬಂಟರು ಈ ಚುನಾವಣೆಯ ಸಂದರ್ಭದಲ್ಲಿ ಜಾತಿಯ ಪ್ರತಿನಿಧಿಕ ಹಕ್ಕುಗಳಿಗಾಗಿ ಪಾದಪಿಪಾದ ನಡೆಯಿಸುತ್ತಿದ್ದಾರಲ್ಲ! ಇಂತಹ ಬಿಕ್ಕಟ್ಟಿನ ಕಾಲದಲ್ಲಿ ಅಡಳಿತದ ಹೊಗೆ ಹೊರಲಿಕ್ಕೆ ಬೈಲಿನಿಂದ ಹೊರಬಿದ್ದ ನೇರದ ಸೈನಿಕರು ತಕ್ಷಣ-ರೆನ್ನುತ್ತಿಯೊ, ಗಳಿತರ ಉಗ್ರ ಅಂದೋಲನಕ್ಕೆ ಚಾಂಚಿ ಅಹಿಂಸಾವಾದವನ್ನು ಉಸಿರುಬೇರಿಸುತ್ತ ಮನೆಯಲ್ಲಿ ಉಳಿದ ಸಿಡುಕು-ಮುಂಡಾಳುಗಳು ತಕ್ಷಣ ರೆನ್ನುತ್ತೀಯೋ?...."

ಇನ್ನೂ ಎಸ್ಟೆಸ್ಟೋ ಪ್ರಶ್ನೆಗಳು. ಪ್ರಶ್ನೆಗಳೆಲ್ಲ ಉತ್ತರ ಕೊಡಲು ಮುಂಗರಾಯ ಸೈ ಕೆನೇ ಕೆರೆಯುತ್ತಿದ್ದಾನೆ. ಆದರೆ ವಿಚಾರದ ಕೊನೆಯಲ್ಲಿ ಈ ಪ್ರಶ್ನೆಗಳೆಲ್ಲ ಉತ್ತರ ಕೊಡುವಂತಹ ನುತ್ತರ್ಯಿಂದ ಕೂಡಿರೆಯೆಂಬು ಅವನಿಗೆ ಅನಿಸಲಿಲ್ಲವು. ಕೌರವರು ಪಾಂಡವರು ಸೇರಿದಲ್ಲೆಲ್ಲ ಕುರುಕ್ಷೇತ್ರದ ಕಾಳಗ ನಡೆಯುವುದು ಸಹಜವಿದ್ದ. ದಾಗಾದರೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸಿ ಲ್ಲಿ ಪಾಂಡವರು ಯಾರಿದ್ದಾರೆ?' ಎಂಬ ಪ್ರಶ್ನೆಯೂ ಕೇಳಬಹುದು. ಅಲ್ಲದಿದ್ದರೇನಾ-ಯತು? ಹಿಂದೆ ಕೌರವರಿಗೆ ಪಾಂಡವರು ಸಿಕ್ಕರು ಏನು ಅವರೊಂದಿಗೆ ಹೋರಾಡಿದರು. ಇಲ್ಲಿ-ಲಿ ತಮ್ಮಲ್ಲಿ ತಾವೇ ಹೋರಾಡಿ ಕುರುಕ್ಷೇತ್ರ ವನ್ನು ಮಾಡುವನ್ನು ಅವರಲ್ಲಿ ಸಾನುರ್ಧ್ಯವಿದ್ದೇ ತ್ತೆಂದು ಪ ಂಗರಾಯನ ಪಂಡಿತ ಅಭಿಪ್ರಾಯ.

* * * *

ಇನ್ನು ಜಾತೀಯ ಪ್ರಾತಿನಿಧ್ಯದ ವಿಚಾರ: ಚುನಾವಣೆಗೆ ಸ್ಪರ್ಧೆ ಬೇಕು, ಚುನಾವಣೆಗೆ ಬೇಕು!' ಎಂದು ಮುಂಗರಾಯ ಎಂದೋ ನಿರ್ಧಾರವನ್ನು ತೀರ್ಮಾನಿಸಿದ್ದಾನೆ. ಎಂತಲೆ ಮುಂ-ರಾಯನ ಅನುಯಾಯಿಗಳಾದ ಕನ್ನಡಿಗರು ಒ ಗಾವೆಯಂತೆ ನಡೆಯಬೇಡವೆ? 'ದಾನಾನುಜಾ-ಚಾರ್ಯ, ರಂಗಕಾರ್ಯಾಚಾರ್ಯ, ಜಿಸ. ಪ್ರೇಮವಾ-ನಂದ ತೀರ್ಥಾಚಾರ್ಯರು, ಆ ಮುದಾ ಬಕ-ವೇಶ್ವರರು' ಮೊದಲಾದ ಸಮ್ಮರ್ಜನರ ಮುಖಾ ಕಾರ್ಯವನ್ನು. 'ಗುರುವಿನ ಗುಲಾಮನಾಗುವ ವರಿಕ ನೂರೆಯಜ್ಞಾ ನುಕುಲ' ಎಂಬ ತತ್ತ್ವವ ತಿಳಿಸಿಸ್ಸರಿದ ಕನ್ನಡಿಗರು, ಕಾಂಗ್ರೆಸಿನಂತಹ ಲೌಕಿಕ ನಿಜಾರಕ್ಕಾಗಿ ಮುಜ್ಜುಗೂಡಿಸಬೇಕೆ? ಛೇ! ಗುರುಗಳ ಸ್ಮಾರಕವಾದ ಜಾತಿಗಳ ಧ್ವಜಗಳನ್ನು ಸೆಳೆದು ಮೇಲುಗೈ ಪಡೆದಾಗಲೇ ಗುರುಗಳ ಋಣ ತೀರಿಸಿದಂತೆ. ಈ ಸೂತ್ರವನ್ನು ಯಾವಾಗಲೂ ಕನ್ನಡಿಗರು ಜುರೆಯದಿದ್ದುದಕ್ಕಾಗಿ ಗುರುಭಕ್ತ ನಾದ ಮುಂಗರಾಯ ಅವರನ್ನು ನೈರ್ಜಾರ್ನಕ ನಾಗಿ ಅಭಿನಂದಿಸುತ್ತಾನೆ.

* * *

ಪ್ರಬಿಸರ ರಾಜಕಾರ್ಯಾನೇ ಸಮಸ್ತ ಆದರ-ನಲ್ಲವೆ? ಬ್ರಿಟಿಷ್ ಆಳರು ತನ್ನ ಪ್ರತಿನಿಧಿಯಾಗಿ ಹಿಂಮಸ್ಟಾನಕ್ಕೆ ಸೈನಿಕನಾದ ಲಾರ್ಡ್ ಕೇಸಲ್ ಸಾಹೇಬರನ್ನು ಕಳುಹಿದ್ದಾನೆ. ನಾವೂ ಮುಖ್ಯಿಗೆ ಮುಖ್ಯ ತೀರಿಸಲೇಬೇಕು. ಹಿಗ ನಾವು ಬುದ್ಧಿ, ಸಿದುಕು ಎಂದರೆಷ್ಟೂ ಜಿಜ್ಞಾರ ನೂತನ, ಉರಲ್ಲಿ ಕಾಳಗ ಮಾಡಿದ ಕಾಂಗ್ರೆಸ್ ಸೈನಿಕರನ್ನೆ ತಪ್ಪ ಆಸೆಂಬ್ಲಿಗನಿಗೆ ನಮ್ಮ ಪ್ರತಿನಿಧಿಗಳನ್ನಾಗಿ ಕಳುಹ ಬೇಕು. ನೇಪಲ್ಸರು ಬ್ರಿಟಿಷ್ ಸೈನ್ಯದ ಭಾಗ ಕೊಂಬಿನಿದೆ. ಸಪಾ-ಪುಲ್ಲರು ಲೇಪ್ಟೇ ಸೈನಿಕ-ನುನಸ್ಯ-ತಂತ್ರಿಗಳನ್ನು ಕತ್ತರಿಸುವ ಭೀಕ ಯಾಕ ಬೇಕಾಗುವುದು. ಇಷ್ಟಿನ್ನೆ ನಮ್ಮ ಆಹಿಂಸಾ ವಾದಿಗಳಾದ ಸಿಮಳ-ಮುಂಡಾಳುಗಳಿಂದ ಸಾಧ್ಯವೇನು? ಸಮುಗೀಗ ಸೂತ್ರಧಾರರು ಬೇಕಾಗಿಲ್ಲ: ಕೃತಿಧಾರರು ಬೇಕು. ಎಂದರೆ ಹೇಳಿಸದರು ಸೂತ್ರವೆಂದರೆನ್ನು ನೂಮಸಿಕರು ಬೇಕು: ಇದೇ ಕೈಯೆತ್ತು ಎಂದು ಹೇಳಿದೊಡನೆ ಎತ್ತುವವರು ಬೇಕು. ಬುದ್ಧಿವಂತರಿಗಿದು ಕಾಲವಲ್ಲ! ಬುದ್ಧಿಗ್ರ-ಗಳ ಧಾಮ ಬೆಲೆಯಿ ಇಲ್ಲ!

## ಅವತಾರೀ ಪುರುಷ್ ಅಣ್ಣಾಸಾಹೇಬ್!

ಬೆಳಗಾಂಯಿಯ ಮುರಾಟಿಯ ಮುರಿಯೊಂದು ಎಂಬು ನಿನಕ್ಕೊಮ್ಮೆ ಮುಂಗ್ಗುಡುತ್ತಲಿದೆ. ಶ್ರೀಮಾನ್ ಲಕ್ಷ್ಮ ಅಣ್ಣಾಸಾಹೇಬರು ಸಾಕಿ-ಸಲಹಿ, ಬೆನ್ನುತೀಟೆ ಆಭಯುವಸ್ತ ಖರಿಸಿದ ಮುಗುವದು. ಲಬ್ಬಿಯವರಿಗೆ ಆಭಯ ವ ಚ ನ ವ ನ್ನು ಕೊಟ್ಟ ಕರ್ನಾಟಕ ಸಿಂಹರ ಪರಕೆಯೂ ಈ ಮುರಿಗೆ ಆಮಂದಾನಾಗಿ ಇದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಲಬ್ಬಿ ಅಣ್ಣಾಸಾಹೇಬರನ್ನು ಮುರಿಯಾಳನ್ನಾಗಿ ಆರಿಸ ದಿದ್ದರೆ, ಕರ್ನಾಟಕದ ಕಾಂಗ್ರೆಸಿಗರ ಬಳಗಕ್ಕೆ ಮಾಲು-ಹಯನು ಸಿಕ್ಕದಂತೆ--ತನ್ನು ಕುಲವಲ್ಲ ಸೇರಿ-- ಪಂಚಿಕೆ ಹೂಡುವನೆಂದು ಬೆದರಿಕೆ ಮಾಕುತ್ತಿರಿಲೆ. ಅಣ್ಣಾಸಾಹೇಬರೊಬ್ಬರೇ ಬಾಂಬೇ ಪ್ರಾವಿನ್ಸಿನಲ್ಲಿ ಬುದ್ಧಿಯಿದ್ದವರಂತೆ. ಅರ್ಧಸಾಧನೆ ಮಾಡುವವರೊಗ್ಗರೆ ಅವರೊಬ್ಬರಿಗೇ ಇವರೆಂತೆ. ಬಜಾಪದ 'ರಾಜಕಾರಣ' ಎಂದರೆ ಬೇಕಾದಾಗ ಟೊಪ್ಪಿಗೆ ಬದಲಿಸುವುದನ್ನು ಅಣ್ಣಾಸಾಹೇಬರೇ ಚೆನ್ನಾಗಿ ಬಲ್ಲವರಂತೆ. ಅವರಿಗೊಂದು ಬಲಿಷ್ಠ ಪಾಕಿಯ ಬೆಂಬಲವಿದೆಯಂತೆ. ಕರ್ನಾಟಕ ಏಕೀ-ಕರಣದ ಕೂಗುಮಾರರು ಲಬ್ಬಿಯವರ ಹೆಸರಿಗೆ ಕಲ್ಲು ಒಡೆಯುತ್ತಿರುವರಂತೆ, ಅವರನ್ನು ಬಿಟ್ಟು 'ಕಾನಡೀ' ಕಲ್ಲು-ಮುಲ್ಲನಾಡರನ್ನು ಆಸೆಂಬ್ಲಿಗೆ ಆರಿಸಿ ರಾಷ್ಟ್ರಸ್ಪ್ರೇಮ ಮೂಡುತ್ತಿರುವರಂತೆ. ಮುಂಗರಾಯನು ಇವೆಲ್ಲ ಮಾತುಗಳನ್ನೂ ಒಪ್ಪುತ್ತಿರುವನು. "ಕನ್ನಡಸಾಮಿನ ಉದ್ಧಾರಕ್ಕಾಗಿಯೆ ಶ್ರೀಮಾನ್ ಅಣ್ಣಾಸಾಹೇಬರು ಅವತಾರ ಮಾಡಿ ದ್ದಾರೆ. ಅವರಿಲ್ಲದೆ ಹೋಗಿದ್ದಲ್ಲಿ ಕನ್ನಡಿಗನೆನ್ನಿಸಿ ಕೊಂಡ ಯಾರಿಗೂ ಸಮುದ್ರದ ತಳವನ್ನು ಕಾಣುತ್ತಿದ್ದರೆ: ಇವುದರಿಂದ ಲಬ್ಬಿಯವರು ಕರ್ನಾಟಕಕ್ಕಾಗಿ ಅವತರಿಸಿ ಬಂದಿರುವಂತೆ ಅವರಿಗೆ ಕಾಯಕಲ್ಪ ಚಿಕಿತ್ಸೆಯನ್ನು ಕೊಡಿಸಬೇಕು!" ಎಂದು ನನ್ನ ಆ ಬೆಳಗಾಂವಿ ಮುರಾಟಿ ಮುರಿಗೆ ಮುಂಗಸ್ಸು ಬೇಡಿ ಕೊಳ್ಳುತ್ತಾನೆ. ಲಬ್ಬಿಯವರ ಅಭಿಮಾನಾದರಕ್ಕೆ ಇವರಾರ್ ಪಲ್ಲಟ್ಟಾಯೆಯವರು ಕನ್ನಡಿಗರಲ್ಲಿ ಇಷ್ಟಾದರೂ ಪಂ ಡಿ ತ ಪ ಕ್ಕೆ ಒಪ್ಪಲಿಕ್ಕಿಲ್ಲ. ಅಮೆರಿಂದ--

ರಾಕೂರಾ ಪಸ ವೆಂಗಾಯೋ ಆಯೋ!
ಮ್ಯಾಂಗಾಮ್ಯಾ ಮಾಣಿ ಲಲ್ಕೇಯನವನ್ನಾಯೋ!

ಯಾತಿಭೇದದ ಭೂತವನೆಬ್ಬಿಸಿದವ ಜಯಿಸುವನೆಸ್ಸು
ಚುನಾವಣೆಗೆನು? ಸತ್ಯ-ಅಹಿಂಸೆಯ ವಿಜಾರ
ದಲಿ ಪಡೆದು ಸೂರಾ ಮೂತಕಾಸಿ, ಅಸತ್ಯ-
ಚಾಂಡಿಯನು ಅಚರಿಸಿ ನವಸೆ ಆಳುವ
ಕೇಳಯ್ಯಾ ಕೌನ್ಸಿಲು-ಅಸೆಂಬ್ಲಿಗಳನು!

- ಮಂಗನಚಾಣಕ್ಯ

# ಬಾಳ ತೇರು

ಶ್ರೀ. ಕೃಷ್ಣಮೂರ್ತಿ ಪುರಾಣಿಕ, ಬಿ. ಎ., ಬಿ. ಟಿ. ಗೋಕಾಕ

೧

ನಾನೊಂದು ನುಡಿಯುತಿರೆ ನೀನೊಂದು ನೆನೆಯುತಿಹೆ
ಚೆಂದವೇ ? ತೆಗೆ;
ನಾನೊಂದು ಈಗಾಲಿ, ನೀನೊಂದು ಆ ಗಾಲಿ
ಬಾಳತೇರಿಗೆ.

ಎಂದಾಗ ನಾ ನಲ್ಲೆ ಹುಸಿನಗೆಯ ನೀ ಚಿಲ್ಲೆ
ತೇರ ನೂಕಿದೆ,
ಇಂದೇಕೆ ಆ ಮಾತು ಒಮ್ಮೆಲೇ ಸಾಕಾಯ್ತು
ಆವ ನೋವಿದೆ ?

ನೀನೊಂದ ಮುಖದೊರೆ ನಾಬಿಂದು ಬಿದ್ದೇನು.
ಬಾಳ ಬವಣೆಗೆ;
ಎಂದೆಂಬ ಕಹಿಸೊಲ್ಲ ಬಲ್ಲವಳು ನೀನೆಲ್ಲ
ಬಾಗು ಬಾಳಿಗೆ,

೨

ಸರಸದಲಿ ಸಂತೋಷ ಜೀಕುತಿದೆ, ವಿರಸದಲಿ
ಬಾಳು ಬೆಂಡಾಸರ;
ಸರಸವಿರಸದ ಜೋಡು ಜೀವ ಜನ್ಮದ ಪಾಡು
ಬಾಳಿಗಾಸರ.

ಬಾಳ ಹೊಂಬೆಳಕಿನಲಿ ಪಯಣ ಬಯಸಿದರಾರು ?
ಬಾಳ ಬಳಸಿಯೆ;
ಬಾಳ ತಿಗುಬಿಗಿಯಲ್ಲಿ ಜೀವ ಹೊಸೆದಿಹರಾರು ?
ಬಾಳು ನಮಗಯೆ.

ತೇರ ತೇಲಿಸ ಗಾಲಿಗೆಲ್ಲಿಹುದು ರಹದಾರಿ
ಪಾದಗಟ್ಟಿಗೆ;
ತೇರು ತೆಲುಗಲಿದಲು ಹೊರಟದ್ದೆ ಹೊಸವಾರಿ
ಜೀವಯಾತ್ರೆಗೆ.

೩

ನಿನ್ನ ಸವಿಬಾಯಿಂದ ಬರುವ ಮಾತಿನ ಕಹಿಯು
ಬಾಳ ಬೇಸರ;
ಛೀನ್ನೆ ! ಜೀವನ ಝರಿಯು ಮರಣಕ್ಕೆ ತಿರುಗೀತು
ಎಚ್ಚರೆಚ್ಚರ !

" ಬಾಳ ಕಲಕಲದಲ್ಲಿ ಕಲಹವೇ ಗುರಿಯಾಗೆ
ಬಾಳಿಗೇನಿದೆ ?
ಸಂಸಾರ ಸಮರದಲಿ ಸನುರವೇ ಕೊನೆಯಾಗೆ
ಸೌಖ್ಯವೆಲ್ಲಿದೆ ? "

ಜೀವತೇರಿನ ದೇವ ತೇರ ಹೂಡಿಹನೆಂದು
ತೇರು ಸಾಗಲಿ;
ಕಲ್ಲಿರಲಿ ಮುಳ್ಳಿರಲಿ ಮುಗ್ಗಟ್ಟುಗಳು ಮುಂದು
ಜೀವಪಥದಲಿ.

ತೇರ ಗಾಲಿಗಳಿರಡು ತೇರನಡೆಯಿಸಲೆಂದು
ತೇರ ಜೋಲಿಗೆ;–
ತಾಳುತಿಹ ಬಾಳುತಿಹ ನಿಲುಕಸಿಗೆ ನಿಲ್ಲಿರುವ
ಭಾರ ಗಾಲಿಗೆ.

---

.....ಗೆ

ಶ್ರೀ. 'ಚಿನ್ಮಯಮೂರ್ತಿ'

ನನ್ನ ಬಾಳಿನ ಹಡಗ ಕಷ್ಟಗಳ ಬಿರುಗಾಳಿ-
ಯಲ್ಲಿ ನಡುಗಿ ಕಡಿದು ಮುಳುವುದೆಂದು ಬೆದರಿದ್ದೆ,

ಜನರ ಹೃದಯಗಳೆಲ್ಲ ಕಲ್ಲುಬಂಡೆಗಳೆಂದೆ
ಭೀತಿಯಲಿ ಕಣ್ಣು ಮುಂಜಾದಂದು ತಿಳಿದಿದ್ದೆ.
ಸನ್ನುತನೆ, ಯಮಸದನ ನಿನ್ನ ಮಂದಿರವೆಂದೆ
ನನ್ನ ಕಷ್ಟವೆ ನನ್ನ ಕೊರೆಯುತಿಹ ಕಾಲದಲಿ.
ಸುಖವ ಬೇಡಿದೆ ನಾನು ಪಾತ್ರತೆಯನರಿಯದೇ.
ಕರ್ತವ್ಯವನು ಮರೆತು ಕಂಗಾಲನಾದೆ.

ಹಾರದೆಯೆ ಮರಿಹಕ್ಕಿ ಗೂಡಿನಲಿ ಕುಳಿತಂದು
ಕೊಕ್ಕಿನಲಿ ಕುಕ್ಕುತ್ತ ಹಾರಗಲಿಸುವ ಹಾಗೆ
ಕಷ್ಟವನು ಕೊಡುತಲೇ ಬುದ್ಧಿಗಲಿಸಿದ ಇಂದು.
ಧೈರ್ಯದಲಿ ಕಷ್ಟವನು ಇದಿರಿಸಿದ ವೀರನಿಗೆ
ಜಯಸಿರಿಯು; ಎಂದೆನಗೆ ಹೊಸ ಪಾಠ ಕಲಿಸಿರುವ
ನಿನಗಿಂತ ಇನ್ನಾರು ಹೆಚ್ಚಿನವ ಗುರುದೇವ ?

# 'ಶ್ರೀ' ಯವರಿಗೆ ಶ್ರದ್ಧಾಂಜಲಿ

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ಒಳಿತಾವುದು ಕೆಡುಕಾವುದು ?—ಎಂಬುದು ತಿಳಿಯದಂತಾಗಿರುವ ಇಂದಿನ ಈ ಸಾಂಸ್ಕೃತಿಕ ಸಂಕ್ರಮಣ ಕಾಲದಲ್ಲಿ, ನಮ್ಮ ಕನ್ನಡನಾಡಿಗೆ ದಾರಿ ತೋರುತಿದ್ದ ಅನುಭವಿಕ ಹಿರಿಯರೊಬ್ಬರು ಆಕಸ್ಮಿಕವಾಗಿ ಹೊರಟು ಹೋದರು; ಮತ್ತೆ ನಮಗೆ ಕಾಣಿಸಿಗದಂತೆ ಆಗಲಿ ಹೋದರು. ಆಧ್ಯಾತ್ಮಿಕ ದೃಷ್ಟಿಯವರು ಬೇಕಾದಂತಹ ಸಮಾಧಾನದ ಮಾತುಗಳನ್ನು ಹೇಳಲಿ, ಲೌಕಿಕ ದೃಷ್ಟಿಯಿಂದಲೆ ಜೀವನವನ್ನು ಕಾಣುತ್ತಿರುವ ಜನಸಾಮಾನ್ಯರಿಗೆ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ಅಭಾವವೆಂದರೆ ತುಂಬಿ ಬರಲಾರದಂತಹ ಹಾನಿ. ಅವರ ತಿರವಾದ ಗದ್ದುಗೆಯ ಮೇಲೆ ಕುಳ್ಳರಿಸಲು ಕನ್ನಡಿಗರಿಗೆ ಸದ್ಯ ಬೇರೆಯ ಮುಂದಾಳೇ ಕಾಣದಾಗಿದ್ದಾನೆ.

'ಶ್ರೀ' ಯವರ ಅಂತ್ಯದರ್ಶನ

ನಮ್ಮಲ್ಲಿ ಎಂ. ಎ., ಬಿ. ಎಲ್. ಪದವಿ ಪಡೆದವರು ಎಷ್ಟು ಜನರಿಲ್ಲ ? ಇಂಗ್ಲಿಷ್ ಅಧ್ಯಾಪಕರಾಗಿ ಬೇರೆ ಬೇರೆ ಕಾಲೇಜುಗಳಲ್ಲಿ ಎಷ್ಟು ಜನರು ಕಲಿಸುತ್ತಿಲ್ಲ ?' ಬರೆವವರೆಷ್ಟು ಮಂದಿ ಇಲ್ಲ, ಮಾತನಾಡುವವರೆಷ್ಟು ಮಂದಿ ಇಲ್ಲ ? ಬಹುಜನರು ಇದ್ದಾರೆ. ದಿವಂಗತ ಬಿ. ಎಂ. ಶ್ರೀ. ಯವರು ಇಂತಹ ಎಲ್ಲರಲ್ಲಿಯೂ ಮೇಲುಗೈಯವರಾಗಿ ಇದ್ದರಲ್ಲದೆ ತಮ್ಮ ಈ ಎಲ್ಲ ನೈಪುಣ್ಯವನ್ನು ಕನ್ನಡ ನಾಡನ್ನು ಕಟ್ಟಬೇಕೆಂಬ ಹಿರಿಯ ಆಶಯದಿಂದ ಕೆಲಸಕ್ಕೆ ತೊಡಗಿಸಿದ್ದರು. ಅವರ ಕೆಲಸ ಕನ್ನಡಿಗರಿಗೆ ಕಲ್ಯಾಣಕಾರಿಯಾಗಿದ್ದಿತು.

ಬಿ. ಎಂ. ಶ್ರೀ. ಅವರ ಬುದ್ಧಿಮತ್ತೆ ಬೆರಗುಪಡಿಸುವಂತಹದು, ಅಭ್ಯಾಸ ಆಳವಾದುದು, ಅನುಭವ ವಿಶಾಲವಾದುದು. ಇಂತಹದು ಬರಿ ಇಂಗ್ಲಿಷಿನ ಬೆನ್ನುಹತ್ತಿ ಹೋದಾಗ ಕನ್ನಡ ಪ್ರೇಮಿಗಳು ಕೆಲವರು ಮರುಗಿದರು. 'ಬಿ. ಎಂ. ಶ್ರೀ. ಯವರನ್ನು ಇಂಗ್ಲಿಷಿಗೆ ದತ್ತು ಕೊಟ್ಟಾಗಿದೆ' ಎಂದು ಕೆಲವರು ಬಿರುನುಡಿಗಳನ್ನೂ ಆಡಿದ್ದರು. ಇಂಗ್ಲಿಷ್ ಪಾಂಡಿತ್ಯದ ಬಿಂಕದ ಮೂಲಕ ಬಿ. ಎಂ. ಶ್ರೀ. ಯವರು ಜನರೊಡನೆ ಮೊದಮೊದಲು ಹೊಂದಿಕೊಂಡಿರುತ್ತಿದ್ದಿಲ್ಲವೆಂಬ ಮಾತನ್ನೂ ಕೇಳಿದುದುಂಟು. ಅವರ ಅಂದಿನ ಏಕಾಕಿಜೀವನವು ಅಂದಿನವರಿಗೆ ವಿಪರೀತವಾಗಿ ಕಂಡರೂ ಮುಂದಿನವರಿಗೆ ಪ್ರಯೋಜನಕಾರಿಯಾಗಿ ಪರಿಣಮಿಸಿದುದು ಅನೇಕರಿಗೆ ಆಶ್ಚರ್ಯದ ವಿಷಯ. ವಿವಿಧ ಮುಖವಾದ ಜ್ಞಾನಸಂಗ್ರಹಕ್ಕೆ ಏಕಾಕಿತ್ವದ ಅಪೇಕ್ಷೆ ಅನುಕೂಲವನ್ನೊದವಿಸಿತು. ಇಂಗ್ಲಿಷು ಕಲಿತು ಸ್ವಾವೀಣ್ಯ ಪಡೆದ ಭಾಷೆ. ಭಾರತೀಯ ಸಂಸ್ಕೃತಿಯನ್ನು ಪ್ರತ್ಯಕ್ಷವಾಗಿ ಕಂಡುಕೊಳ್ಳಲು ಸಂಸ್ಕೃತ ಭಾಷೆಯನ್ನು ಅಭ್ಯಸಿಸಿದರು. ಕನ್ನಡಾಭಿಮಾನಿಗಳ ಬೀಳುಗಳಿತಕ್ಕೆ ಪಕ್ಕಾಗಿಯೋ ಕನ್ನಡ ಸಾಹಿತ್ಯದ ಆಕರ್ಷಣ ಗುಣಕ್ಕಾಗಿಯೋ ಕನ್ನಡ ಸಾಹಿತ್ಯವನ್ನೂ ಒಳಹೊಕ್ಕು ಒಳಗು ಮಾಡಿಕೊಂಡರು. ಕನ್ನಡದ ಸೋದರ ಭಾಷೆಗಳಾದ ತೆಲುಗು ತಮಿಳುಗಳನ್ನೂ ಸಾಧನವಾಗಿ ಪರಿಚಯ ಮಾಡಿಕೊಂಡರು. ಭಾಷೆಗಳಿಂದರೆ ಬರಿ ಭಾಷೆಯ ಪರಿಚಯವಲ್ಲ; ಸಾಹಿತ್ಯದ ಪರಿಚಯ. ಸರಿ, ಹದಗಾಲ ಬಂದಿತು. 'ಶ್ರೀ' ಯವರ ಹೃದಯ ಕನ್ನಡ ನಾಡು-ನುಡಿಗಳತ್ತ ತಿರುಗಿತು. ಅವರ ಅಭ್ಯಾಸದ ಉತ್ಕಟತೆ ನಾಡಿನಲ್ಲಿ ಸಂಸ್ಕೃತಿ ಹರಡಲು ಅನುಗೊಂಡಿತು.

ಶ್ರೀಯವರ ಮೂಗಿದ ಹೃದಯ-ಬುದ್ಧಿಗಳು ಅವರ ವಿಚಾರಗಳನ್ನು ಗಂಭೀರವಾಗಿಸಿದವು. ಭಾಷೆಯನ್ನು ತಿಳಿಯಾಗಿಸಿದವು. ಇವರು ಬರೆಯಲಿ, ಮಾತನಾಡಲಿ, ಹರಟೆ ಹೊಡೆಯಲಿ ಇವರ ಮಾತಿನ ರೀತಿ ಇವರದೇ ಆಗಿರುತ್ತಿದ್ದಿತು. ಇಂಗ್ಲಿಷ್ ಕವಿತೆಗಳನ್ನು ಹಲವರು ಅನುವಾದಿಸಿದ್ದಾರೆ. ಅವುಗಳೊಂದಿಗೆ ಶ್ರೀಯವರ ಇಂಗ್ಲಿಷ್ ಗೀತಗಳನ್ನು ಹೋಲಿಸಿ ನೋಡಿದರೆ, ಇವರ ಕನ್ನಡ ನುಡಿಯ ಸಾಮರ್ಥ್ಯ ಗೊತ್ತಾಗುವುದು. ಅಚ್ಚ ಕನ್ನಡದ ಸವಿ ನಾತು; ಹೇಳಬೇಕಾದ ಅರ್ಥವನ್ನು ಸಂಪೂರ್ಣವಾಗಿ ಹೊರಪಡಿಸುವಂತಹದು. ಸ್ವತಂತ್ರವಾಗಿ ಬರೆದ 'ಭರತ ನಾತೆ' 'ರಜತೋತ್ಸವ ಪ್ರಗಾಥ' 'ನಾಲುಮಡಿ ಕೃಷ್ಣನ ಸೈಸೂರು' 'ಕನ್ನಡ ತಾಯನೋಟ' ಮೊದಲಾದ ನಿಡುಕವಿತೆಗಳಲ್ಲಿ ಇವರ ರಸಹೃದಯ ತರಂಗ-ತರಂಗವಾಗಿ ಹರಿದಿದೆ.

ಸಾಹಿತ್ಯದಲ್ಲಿಯ ಜಳ್ಳನ್ನು ತೂರಿ ಕಾಳನ್ನಾಯುವ ಇವರ ದೃಷ್ಟಿ ಅಪ್ರತಿಮವಾದುದು. 'ಹಳೆಯ ಕವಿಗಳು ಬರೆದುದೆಲ್ಲ ಹುರುಳುಳ್ಳುದೇ' ಎಂದಿದ್ದ ಸಾಂಪ್ರದಾಯಿಕ ನಂಬುಗೆಯನ್ನು ಸೋಟ್ಟ ಮೊದಲಿಗೆ ಖಂಡತಿತವಾಗಿ ಟೀಕಿಸಿದವರು 'ಶ್ರೀ' ಯವರೆ. ಆದಕ್ಕಾಗಿ ಸಾಂಪ್ರದಾಯಿಕ ಕನ್ನಡ ವಿದ್ವಾಂಸರ ವಿರೋಧವನ್ನೂ ಎದುರಿಸುವ ಸಂದರ್ಭ ಇವರಿಗೆ ಬಂದುದುಂಟು. ಅವರಿಂದ ತಮ್ಮ ಕೃತಿಗಳಿಗೆ ಬೈಗುಳನ್ನು ಪಡೆದು ಕೊಂದುಕೊಂಡುದೂ ಉಂಟು. ಕೆಲದಿನ

ಕನ್ನಡದ ಬಗೆಗೆ ನಿರಾಶರಾಗಿ ಕುಳಿತುದೂ ಉಂಟು. ಆಗಲೂ ಇವರಲ್ಲಿ ಕನ್ನಡದ ಬಗೆಗೆ ಎಂತಹ ಕಳವಳ ಉರಿಯುತ್ತಿದ್ದಿತೆಂಬುದನ್ನು, ಕರ್ನಾಟಕ ವಿದ್ಯಾವರ್ಧಕ ಸಂಘ ೩೦-೩೫ ವರ್ಷಗಳಿಗೆ ಮೊದಲು ಪ್ರಕಟಿಸಿದ ಇವರ 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂಬ ವಿಚಾರ ಪ್ರಬೋಧಕ ಪ್ರಬಂಧದಿಂದ ಮನಗಾಣಬಹುದಾಗಿದೆ.

'ಶ್ರೀ' ಯನಿಸಿದ್ದು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ. ಮೈಸೂರು ಸಂಪೂರ್ಣ ಕನ್ನಡ ಪ್ರದೇಶವೇನೋ ಸರಿ; ಆದರೆ ಬ್ರಿಟಿಷ್ ಪ್ರಭುತ್ವದ ಮೂಲಕವಾಗಿಯೂ ಮೈಸೂರು ಸರಕಾರದಲ್ಲಿ ಅಂದು ಮುಖ್ಯರಾಗಿ ಒರುತ್ತಿದ್ದ ಮದರಾಸು ದೇಶದ ಅಧಿಕಾರಿಗಳಿಂದಲೂ ಕನ್ನಡ ತನ್ನ ನುನೆಯಲ್ಲಿಯೆ ತನ್ನ ಯಜಮಾನಿಕೆ ಕಳೆದುಕೊಂಡಿದ್ದಿತು. ಎಲ್ಲೆಲ್ಲಿಯೂ ಇಂಗ್ಲಿಷಿಗೆ ರಾಜಮರ್ಯಾದೆ. ಹಳೆಯ ಸಾಂಪ್ರದಾಯಿಕ ಕನ್ನಡ ಪಂಡಿತರು ಕನ್ನಡವನ್ನು ಹೇಗೋ ಕಾಪಾಡಿಕೊಂಡು ಹೊರಟಿದ್ದರು. ಈ ಪಂಡಿತರಿಗೆ ಇಂಗ್ಲಿಷ್ ಕಲಿತವರನ್ನು ಕಂಡರೆ ಭೀತಿ; ಇಂಗ್ಲಿಷ್ ಕಲಿತವರಿಗೆ ಕನ್ನಡ ಪಂಡಿತರೆಂದರೆ ಜುಗುಪ್ಸೆ. ಇಂಗ್ಲಿಷ್ ಸಂಸ್ಕೃತಿ-ಸಾಹಿತ್ಯಗಳು ಕನ್ನಡ ಸನಾತನಿಗಳಿಗೆ ಮೈಲಿಗೆಯವಾಗಿದ್ದುವು. ಇಂಗ್ಲಿಷ್ ಕಲಿತವರಿಗೆ ಕನ್ನಡ ಸಾಹಿತ್ಯ-ಸಂಸ್ಕೃತಿಗಳು ಅನಾರ್ಯರವಾಗಿದ್ದುವು. ಇಬ್ಬರೂ ಒಂದುಗೂಡಿ ನಡೆಯುವುದರಿಂದ ನಾಡಿನ —ನುಡಿಯ—ಯಾವ ಕಾರ್ಯಗಳೂ ಸುಯಂತ್ರಿತವಾಗಿ ವಿಧಾಯಕವಾಗಿ ನಡೆಯುವಂತಾಗಿದ್ದುವು. ಇಂತಹ ಕಾಲದಲ್ಲಿ ಬಿ. ಎಂ. ಶ್ರೀಯವರು ಮೈಸೂರು ದೇವನಲ್ಲಿ ಅವತರಿಸಿದಂತೆ ಕೆಲಸವಾಡತೊಡಗಿದರು. ಇವರಿಗೆ ಸಮಸ್ಕೃತ ಪ್ರಭೃತಿ, ಕನ್ನಡ ಪಂಡಿತರಿಗಿಂತ ಹೆಚ್ಚು ಪ್ರತಿಭೆಯಿಂದ ಹೆಚ್ಚು ಲೋಕವಾಗಿ ಕನ್ನಡ ಪ್ರಭುತ್ವಿಸಿದವರು; ಇಂಗ್ಲಿಷ್ ಸಾಹಿತ್ಯದಲ್ಲಿ ನುರಿತವರಾದುದರಿಂದ ಹೊಸ ಒಳನೆಯ ಸಮರ್ಥಯ ಒರಗಲ್ಲಿಗೆ ಕನ್ನಡ ಸಾಹಿತ್ಯವನ್ನು ತಿಳ್ದನೋಡಿ ಹೊಕ್ಕ ಚಿನ್ನವನ್ನು ಕಂಡವರು. ಅವರು ವಿದ್ಯಾರ್ಥಿಗಳಲ್ಲಿ ಕನ್ನಡ ಪ್ರೀತಿಯನ್ನು ತುಂಬಲು ತೊಡಗಿದರು. ಹಳೆಯ ಸಾಹಿತ್ಯದ ಸವಿಯನ್ನು ಉಣಿಸಲು ತೊಡಗಿದರು. ರನ್ನನ 'ಗದಾಯುದ್ಧ'ನಾಟಕವಾಗಿ ಪರಿವರ್ತಿತವಾದುದು ಈ ಕಾಲದಲ್ಲಿಯೆ. ಈ ಶ್ರವ್ಯಕಾವ್ಯ ಶ್ರೀಯವರಿಂದ ದೃಶ್ಯಕಾವ್ಯವಾಗಿ ಹಳಬ-ಹೊಸಬರಿಬ್ಬರನ್ನೂ ಆಕರ್ಷಿಸಿ ಒಂದೆರಂಗಕ್ಕೆಳೆಯಲು ಕಾರಣವಾಯಿತು. ಅದೇ ರೀತಿಯಲ್ಲಿ ಒಂದು 'ಅಭಿಜ್ಞಾನ' ಕೂಡ ವಸ್ತುನಿನ ಹೊಸತನದಿಂದ ಹೊಸಬರನ್ನೂ ಭಾಷೆಯ ಹಳತನದಿಂದ ಸನಾತನಿಗಳನ್ನೂ ಆಕರ್ಷಿಸಿತು. ಮಹಾರಾಜಾ ಕಾಲೇಜಿನಲ್ಲಿ, ಸೆಂಟ್ರಲ್ ಕಾಲೇಜಿನಲ್ಲಿ ಕರ್ನಾಟಕ ಸಂಘ ತಲೆಯೋರಿದವು. ಕನ್ನಡ ಸಾಹಿತ್ಯಾಭ್ಯಾಸದ ಬಗೆಗೆ ವಿದ್ಯಾರ್ಥಿಗಳಲ್ಲಿ ಪ್ರೀತಿ ಮೂಡಿತು. ಇಂಗ್ಲಿಷ್ ಸಾಹಿತ್ಯದ ವಿವಿಧ ನಾಮಧೇಯಗಳು ಕನ್ನಡದಲ್ಲಿ ಬರತೊಡಗಿ, ನಿಜವಾದ ಸಾಹಿತ್ಯಗುಣದ ಮೂಲಕ ಸನಾತನಿಗಳಿಗೂ ಆಧುನಿಕರಿಗೂ ಪ್ರಿಯವಾಗತೊಡಗಿದುವು. ಇಬ್ಬರ ಹೃದಯಗಳು ಕನ್ನಡತನದ ಸಂಬಂಧದಿಂದ ಕೂಡಲಾರಂಭಿಸಿದುವು.

ಮೈಸೂರು ಸರಕಾರದ ವಿದ್ಯಾಇಲಾಖೆಯಲ್ಲಿಯೂ ವಿಶ್ವವಿದ್ಯಾನಿಲಯದಲ್ಲಿಯೂ ದೇಶಭಾಷೆಯಾದ ಕನ್ನಡಕ್ಕೆ ತಕ್ಕ ಸ್ಥಾನವನ್ನು ಸಿಕ್ಕಬೇಕೆಂದು ಬಿ. ಎಂ. ಶ್ರೀಯವರು ಎಷ್ಟೋ ಕಾಲ ಏಕಾಕಿಗಳಾಗಿ ಹೋರಾಡಬೇಕಾಯಿತು. ಕನ್ನಡ ನಾಡಿನದಾದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕೆ ಮಾನವೇ ಇರಲಿಲ್ಲ. ಪಾರಿತೋಷಕ ಪ್ರಶಸ್ತಿಗಳು ಕನ್ನಡ ವಿದ್ಯಾರ್ಥಿಗಳಿಗೆ ಇರಲೆ ಇಲ್ಲ. ಯಾವುದು ಇಲ್ಲದಾಗ ಇವರ ಪ್ರಭೃತಿಯಿಂದ 'ರಜತೋತ್ಸವ ಸುವರ್ಣ ಸವಕ' ಕವಿತಾ ಸ್ಪರ್ಧೆ ಪ್ರಾರಂಭವಾಯಿತು. ಕನ್ನಡ ಆನರ್ಸ್ ತೆಗೆದುಕೊಂಡ ಪಾಸಾದ ಬಿ. ಎ. ಪದವೀಧರರಿಗೆ ಪಾರಿತೋಷಕ ಸಿಕ್ಕುವ ವಿಚಾರವಾಯಿತು. 'ಪ್ರಬುದ್ಧ ಕರ್ನಾಟಕ' ವಿಶ್ವವಿದ್ಯಾನಿಲಯವ ಕನ್ನಡ ಪತ್ರಿಕೆಯಾಯಿತೂ ಕನ್ನಡ ಗ್ರಂಥಗಳು ಮಾಲೆಗೊಂಡು ಪ್ರಕಟವಾ ತೊಡಗಿದುದೂ ಬಿ. ಎಂ. ಶ್ರೀಯವರ ಹವಣಿಕೆಯ ಫಲವಾಗಿ. ಪ್ರೊ. ಟಿ. ಎಸ್. ವೆಂಕಣ್ಣಯ್ಯ, ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳಂತ ಕನ್ನಡ ಅಭಿಮಾನಿಗಳ ಕನಸುಗಳೆಷ್ಟೊ ನನಸಾಗಿ ನಿಂತುದು ಬಿ. ಎಂ. ಶ್ರೀಯವರ ವಿಶ್ವಾಸದ ಜೆಂಬಲದಿಂದ.

ಕರ್ನಾಟಕ ಸಾಹಿತ್ಯ ಸಂಸತ್ತಿನ ಉಪಾಧ್ಯಕ್ಷರಾಗಿ ಇವರು ಕಾರ್ಯಮಾಡಿದುದು ಕನ್ನಡಿಗರೆಲ್ಲ ಆರಿತ ವಿಷಯವಾಗಿದೆ. ಕನ್ನಡ ನಾಡಿನ ವಿಚ್ಛಿನ್ನತೆಯ ನಷ್ಟವನ್ನೂ ಏಕೀಕರಣದ ಆಗತ್ಯವನ್ನೂ ಸಂಪೂರ್ಣವಾಗಿ ಮನವರಿಕೆ ಮಾಡಿಕೊಂಡು, ರಕ್ಷವಾದ ಸಾಧ್ಯವಾದ ರೀತಿಯಿಂದೆಲ್ಲ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಲು ಸೂಕ್ತ ಕಟ್ಟು ಸಿದ್ಧರಾಗಿದ್ದರು. ಕುಟುಂಬದ ದುಃಖ ಇವರ ಅಂತರಂಗವನ್ನು ಜರ್ಜರಗೊಳಿಸುತ್ತಿರಬಹುದಾದರೂ, ನಿರಂತರ ಮೃದುಹಾಸವನ್ನು ಕೂಡಿದ ಇವರ ಉತ್ಸಾಹದ ಮುಖ ಯಾವಾಗಲೂ ಏನಾದ ಕಾರ್ಯದ ಎಣಿಕೆಯಲ್ಲಿಯೆ ಇರುತ್ತಿದ್ದಿತು. ಸೌಜನ್ಯದ ಮೂರ್ತಿ ಎಂತಹ ಅಭಿವಾನ ಭಂಗದ ಪ್ರಸಂಗದಲ್ಲಿಯೂ ಸಂಯಮದಿಂದ ಎಮರಾಳನ್ನು ಚುಚ್ಚಿ ತುಂಬಿವ ಮೆಲುನುಡಿಗಳು; ವಿರೋಧವನ್ನು ವ್ಯಕ್ತಪಡಿಸುವಾಗಲೂ ನೋಯಿಸದಂತಹ ಮಾತಿನ ಜಾಣ್ಮೆ, ಜನನ ಸಿರಿವಂತರಲ್ಲಿ ಕಾಣದಿರಬಹುದಾದ ತ್ಯಾಗ, ಜ್ಞಾನಾಳಿಕ ಸನಾತನಿಗಳ ಸಮಾಜಸೇವೆಯ ಬಯಕೆ.... ಇವೆಲ್ಲ ಒಬ್ಬ ಯೋಗಿ ಸಾಧಿಸಬೇಕಾದ ಗುಣಗಳು ಶ್ರೀಯವರಲ್ಲಿ ಸಹಜವಾಗುವುಗಳಾಗಿದ್ದುವು.

ಇವರ ಮರಣವೂ ಒಬ್ಬ ಯೋಗಿಯ ಮರಣವಂತೆಯೆ. ಒ ನೋವಿಲ್ಲ, ಒಂದು ವ್ಯಥೆಯಿಲ್ಲ. ಮರಣವನ್ನು ಕರೆದುತರುವ ತ್ರಿದೋಷಗಳು ಯಾವ ಮೂಲೆಯಲ್ಲಿ ಕುಳಿತಿದ್ದುವೇನೊ! ಜನವರಿ ೨೫ ತಾರೀಖಿನ ೩ ಗಂಟೆಯ ನೇಕೆ, ಶ್ರೀಯವರ ಮುಖಮರಣಕ್ಕೆ ಕಾರಣವಾಯಿತು; ಕನ್ನಡಿಗರಿಗೆ ವಿಯೋಗಮುಖವನ್ನು ಒದವಿಸಿತು.

ಶ್ರೀಯವರು ಪೇದಾಂತಿಗಳು. ಸಂಕಟಕಾರಿಯಾದ ಸಾವು ಅವರ ಶಾಂತಿಗೆ ಭಂಗತರಲಿಲ್ಲವೆಂದ ಬಳಿಕ ಅವರ ಆತ್ಮವನ್ನು ಅಯ್ಯೊ ಮುಟ್ಟೀತು? ನಾವೀಗ ಆ ಋಷಿಯ ಋಣ ತೀರಿಸಬೇಕಾ ಅವರ ಜ್ಞಾನದ ದೀವಟಿಗೆಯನ್ನು ಗಂಭೀರವಾಗಿ ಅವರು ಮಾಡುತ್ತಿದ್ದ ಕಾರ್ಯವನ್ನು ಅವರಿಚ್ಛೆಯಂತೆ ಮಾಡಿಮುಗಿಸಬೇಕು. ಕನ್ನಡನಾಡನ್ನು ಒಟ್ಟುಗೂಡಿಸಲು ನಾವು ನಮ್ಮ ತನು-ಮನ ಧನಗಳನ್ನು ಅರ್ಪಿಸಲು ಸಿದ್ಧರಾಗುವುದೆಂದರೆಯೆ ನಿಜವಾದ ಶ್ರೀಯವರಿಗೆ ಶ್ರದ್ಧಾಂಜಲಿಯನ್ನು ಸಮರ್ಪಿಸಿದಂತೆ.

**ಏರಿಸಿ, ಹಾರಿಸಿ, ಕನ್ನಡದ ಬಾವುಟ!**

---

# ಅಣುವಿನ ಮಹತ್ತ್ವ

## ಸಿರಿವಂತಿಕೆಯ ಅಳತೆಗೋಲು

ಪೆಟ್ರೋಲು ಕಲ್ಲಿದ್ದಲು, ತೀರಿದರೆ ಹೇಗೆಂಬ ಭೀತಿಗೆ ಇನ್ನು ಕಾರಣವಿಲ್ಲ. ವಿಜ್ಞಾನಿಗಳು ಅಕ್ಷಯವಾದ ಅಣುಶಕ್ತಿ ಕಂಡು ಹಿಡಿದಿದ್ದಾರೆ.

●

ಪ್ರೊ. ಕೆ. ಎಸ್. ಸವಣೂರ ಎಂ. ಎಸ್ಸಿ. ಕ. ಕಾಲೇಜು. ಧಾರವಾಡ

ಇಂದು ನನ್ನ ಸಿರಿವಂತಿಕೆಯ ಅಳತೆಗೋಲು ಯಾವುದು, ಎಂದರೆ ಯಾವ ಮಾಪನಿಂದ ಸಿರಿವಂತಿಕೆಯನ್ನು ಅಳೆಯಬಹುದು ಇದು ತಿಳಿದುದಾದರೆ, ನಾವು ಅನುಭವಿಸಲಿರುವ ಸುಖದ ಕಲ್ಪನೆಯು ನನಗೆ ಬರಬಹುದಾಗಿದೆ. ಇಂದಿನ ನವನಾಗರಿಕತೆಯ ವಾತಾವರಣದಲ್ಲಿ ನನಗೆ ನನ್ನ ಕೆಲಸಗಳನ್ನು ನೆರವೇರಿಸಿಕೊಡಲು ಎಷ್ಟು ಜನ ಸೇವಕರನ್ನು ಇಟ್ಟುಕೊಳ್ಳಲು ಸಾಧ್ಯವಿದೆಯೊ ಇದೇ ನನ್ನ ಸುಖದ ಅಳತೆಗೋಲೆನಿಸಬಹುದಾಗಿದೆ. ಇದು ಹೇಗೆ ಎನ್ನುವುದನ್ನು ವಿವೇಚಿಸುವಂಥ ಕಾರ್ಯದಲ್ಲಿ ವಿಜ್ಞಾನವು ಹೇಗೆ ಸಹಕಾರಿಯಾಗಿದೆ ಇದನ್ನೂ ಸಹ ತಿಳಿಸುವುದು ಈ ಲೇಖನದ ಉದ್ದೇಶವಿದೆ.

ಇಂದು ಜಗತ್ತಿನಲ್ಲಿ ಯಾವನನ್ನಾದರೂ (ಹೌದು ಶ್ರೀಮಂತನಿರಲಿ ಇಲ್ಲವೆ ಬಡವನಿರಲಿ) ಕೇಳಿನೋಡಿ, ಜೀವನದಲ್ಲಿ ತಾನು ಅನುಭವಿಸುತ್ತಿರುವ ಸುಖವು ಎಂಥ ಹೆಚ್ಚಿನದಲ್ಲ ಮತ್ತು ಇಂದಿಗಿಂತ ನಾಳೆಯ ದಿನವು ಹೆಚ್ಚಿನ ಸುಖಕ್ಕೆ ಕಾರಣವಾಗಬಹುದೆಂಬ ಆಶೆಯಿಂದಲೆ ಇರುವನೆಂಬುದು ಕಂಡುಬರುವುದು. ಮಾನಸಿಕ ಪರಿಸ್ಥಿತಿಯನ್ನನುಸರಿಸಿಕೊಂಡಲ್ಲಿಯ ಸುಖವನ್ನು ಬದಿಗಿರಿಸಿ, ಲೌಕಿಕದ ಪರಿಸ್ಥಿತಿಯನ್ನೆಯೇ ವಿಚಾರ ಮಾಡಿದಲ್ಲಿ, ಹೆಚ್ಚು ಸೇವಕರನ್ನು ಇಟ್ಟುಕೊಂಡವನು ಹೆಚ್ಚಾಗಿ ಸುಖಪಡುತ್ತಿರುವನು ಎಂದು ಕಂಡುಬರುವುದು. ಇಲ್ಲಿ ಉಪಯೋಗಿಸಿದ 'ಸೇವಕ' ಶಬ್ದದ ವ್ಯಾಪಕತೆಯು ಬಹಳವಿದ್ದು ಕೇವಲ ಹಣದ ನಿಮಿತ್ತವಾಗಿ ಕೆಲಸ ಮಾಡುವ ಚಾಕರನೆಂಬ ಸಂಕುಚಿತ ದೃಷ್ಟಿಯಿಂದ ಉಪಯೋಗಿಸಿದುದು ಇಲ್ಲ. ಇಂದಿನ ನನ್ನ ನಾಗರಿಕತೆಯೇ ಸಹಕಾರತತ್ತ್ವವನ್ನು ಅವಲಂಬಿಸಿ ಕೆಲಸ ಮಾಡುವಂತಹದು. ಕಾರಣ ಈಗ ನನ್ನ ಸೌಕರ್ಯದ ನಿಮಿತ್ತವಾಗಿ ದುಡಿಯುವವರಿಲ್ಲರೂ ಸೇವಕರಿದ್ದಂತೆಯೆ. ಈ ತೆರದ ಮನೋಭಾವದಿಂದ ಎಲ್ಲ ಆಗು-ಹೋಗುಗಳನ್ನೂ ಪರಿಸ್ಥಿತಿಯಲ್ಲಿ ಸೇವಕ ಮತ್ತು ಸೇವ್ಯಭಾವವ ನಿಜವಾದ ಕಲ್ಪನೆಯು ಬರುವುದಲ್ಲದೆ, ಹೇಗೆ ಪರಿಸ್ಥಿತಿಯನ್ನನುಸರಿಸಿ ಯಜಮಾನನಿಗೆ ಸೇವಕನಾಗುವುದೂ ಮತ್ತು ಸೇವಕನೆ ಯಜಮಾನನೆನಿಸುವುದೂ ಹೆಚ್ಚಿನ ಸೌಕರ್ಯಕ್ಕೆ ಅನಿವಾರ್ಯ ಎಂಬ ವಿಷಯವು ಮನ ಟ್ಟಾಗುವುದಾಗಿದೆ. ಎಲ್ಲರೂ ತಾವು ತಪ್ಪುಕರ್ತವ್ಯವನ್ನೇ ಮಾಡಲಿರುವೆವು ಎಂಬ ನಿಶ್ಚಿತಕಲ್ಪನೆಯಿಂದ ದುಡಿವಲ್ಲಿ ಹೆಚ್ಚಿನ ಸುಖಕ್ಕೆ ಕಾರಣವಾಗುವುದು.

ಮೇಲೆ ವಿವೇಚಿಸಿದ ಮಾತುಗಳನ್ನು ಒಂದೆರಡು ಉದಾಹರಣೆಗಳಿಂದ ಪರೀಕ್ಷಿಸೋಣ. ಈಗ ಹಲವು ಮಕ್ಕಳನ್ನು ಪಡೆದ ಗಂತಹೆಂಡಿರಿದ್ದಾರೆಂದು ತಿಳಿಯೋಣ. ಮನೆಗೆಲಸ, ಮಕ್ಕಳ ಕೆಲಸ ಇತ್ಯಾದಿಗಳನ್ನು ಪೂರೈಸುವ ಗೃಹಿಣಿಯು ತನ್ನ ಪತಿ ಮತ್ತು ಮಕ್ಕಳ ದೃಷ್ಟಿಯಿಂದ ಸೇವಕಿ ಎಂದು ಎನಿಸಿದರೂ, ಯಜಮಾನನೆನಿಸಿದ ಪತಿ ತಾನು ಎಲ್ಲಿಯೊ ಸೇವಕನಾಗಿ ದುಡಿದು ತನ್ನ ಸಂಸಾರವನ್ನು ಸಾಗಿಸಲು ಬೇಕಿರುವ ಹಣವನ್ನು ಗಳಿಸುವ ವಿಷಯದಲ್ಲಿ-ಇವನು ಸೇವಕನೇ. ಅದರಂತೆಯೇ ತನ್ನ ಸೌಕರ್ಯಗಳನ್ನು ಹಣಕ್ಕೆ ವಿನಿಮಯವಾಗಿ ಕೊಳ್ಳುವನೇ ಹೊರತು ತನ್ನ ಧಾನ್ಯಗಳನ್ನು ಬೆಳೆಯಿಸಲು ಗೊಲ್ಲನೆ ಅರಿವೆಗಳನ್ನು ನೇಯಲು ತಾನೇನು ದುಡಿಯುವುದಿಲ್ಲ. ಹೀಗೆ ವಿಚಾರ ಮಾಡಿದಲ್ಲಿ ಯಜಮಾನತ್ವ ಮತ್ತು ಸೇವಕಭಾವ ಇವೆರಡೂ ನನ್ನ ನಾಗರಿಕತೆಯ ಅಂಗಗಳೇ ಹೇಳಬೇಕಾಗುವುದು.

ಎರಡನೆಯ ಉದಾಹರಣೆಯೆಂದು ಜಯಂತಿಯ ಸಂಪಾದಕರ ವಿಷಯವನ್ನೇ ಪರೀಕ್ಷಿಸೋಣ. ಇವರು ಪತ್ರಿಕೆಯ ಊರ್ಜಿತಸ್ಥಿತಿ, ಜನರಿಗೆ ಹಿಡಿಯುವ ವಿಷಯವನ್ನು ಪ್ರಕಟಿಸುವ ಭಾರ, ಕನ್ನಡ ನಾಡು-ನಾಡುಗಳ ಸೇವೆಯನ್ನು ಪತ್ರಿಕೆಯು ಮುಖಾಂತರ ಮಾಡುವ ಜವಾಬುದಾರಿ ಇತ್ಯಾದಿಗಳ ವಿಷಯದಲ್ಲಿ ಬೌದ್ಧಿಕ ಯಜಮಾನರು. ಅದರಂತೆಯೆ ಪತ್ರಿಕೆಯನ್ನು ಅಚ್ಚುಹಾಕಿಸುವ ಕಾರ್ಯ ಇತ್ಯಾದಿಗಳ ವಿಷಯದಲ್ಲಿ ಯಜಮಾನನೆನಿಸಿದರೂ, ಈ ಎಲ್ಲವುಗಳೂ ಸುಗಮವಾಗಿ ಸಾಗಲು ಹಣವನ್ನು ಸಲ್ಲಿಸುವ ಓದುಗರಿಗೆ ಇವರು ಸೇವಕರಿದ್ದಂತೆಯೆ ಇಲ್ಲಿ ಈ ರೀತಿಯಲ್ಲಿ ನಾವು ಯಾರ ವಿಷಯವಾಗಿ ವಿವೇಚಿಸಿದರೂ ಈ ಸೇವಕ-ಯಜಮಾನತ್ವ ವಿಷಯವನ್ನು ತಿಳಿಯಲೆ ಬೇಕಾಗುವುದು.

ಮೇಲೆ ವಿವರಿಸಿದ ಸೇವಕರನ್ನು ಹೆಚ್ಚೆಚ್ಚಾಗಿ ಉಪಯೋಗಿಸುವುದು ಹಣದ ಅನುಕೂಲತೆಯನ್ನು ಅವಲಂಬಿಸಿದೆ. ಈಗ ಹೆಚ್ಚು ಹಣವಿದ್ದವನು ತನ್ನ ಸೌಕರ್ಯಗಳನ್ನು ಹೆಚ್ಚಾಗಿ ಕೊಳ್ಳಬಹುದು ಮತ್ತು ಹೆಚ್ಚು ಸಾಧನಗಳನ್ನು ಕೊಳ್ಳುವುದೆಂದರೆ ಹೆಚ್ಚು ಸೇವಕರನ್ನು ಇಟ್ಟುಕೊಂಡಂತೆಯೆ. ಎಂದರೆ ಸಾಮಾನ್ಯ ಮನುಷ್ಯನಿಗೆ ಹೆಚ್ಚು ಸುಖವಾಗಬೇಕೆಂದು ಇಚ್ಛೆಯಿದ್ದಲ್ಲಿ, ಹೆಚ್ಚು ಹಣವಾದರೂ ಇರಬೇಕು ಇಲ್ಲವೆ ಇಂತಹ ಸೇವಕರಾದರೂ ಕಡಿಮೆಹಣದಲ್ಲಿ ದೊರೆಯುವವರಾಗಬೇಕು ಇಲ್ಲಿ ಮನುಷ್ಯನಿಂದ ಮಾಪಸ್ಟ್ ಯಾವುದೆ ಸರಕನ್ನೂ ಸೇವಕನೆಂದೇ ತಿಳಿದು ವಿವೇಚಿಸಿದ್ದಿದೆ.

ಇನ್ನು ಯಾವುದೊಂದು ಸರಕನ್ನು ಕಡಿಮೆ ಬೆಲೆಯಲ್ಲಿ ಸಿಕ್ಕುವಂತೆ ಮಾಡಲು ನಾವು ವಿಜ್ಞಾನಕ್ಕೆ ಶರಣು ಹೋಗಬೇಕಾಗುವುದು, ಏಕೆಂದರೆ ರಾಶಿರಾಶಿಯಾಗಿ (Mass production) ಉತ್ಪಾದಿಸಿದ ಸರಕು ಕಡಿಮೆ ಬೆಲೆಯಲ್ಲಿ ದೊರೆಯಲಾರದು; ಅಲ್ಲದೆ ಹೀಗೆ ಉತ್ಪಾದಿಸುವ ಕ್ರಮವು ವಿಜ್ಞಾನಕ್ಕೆ ಮಾತ್ರವೆ ಸಾಧ್ಯ. ಇದನ್ನು ತಿಳಿಯಲು ನಮ್ಮ ಸುತ್ತಲಿನ ಸಂಗತಿಗಳನ್ನು ಪರೀಕ್ಷಿಸೋಣ. ಇಂದು ನಮ್ಮ ದಿನನಿತ್ಯದ ಸೌಕರ್ಯಗಳಷ್ಟೇ ಮಹತ್ತ್ವದ ಸ್ಥಾನಕ್ಕೇರಿದ

ಪತ್ರಿಕೆಗಳ ವಿಷಯವನ್ನೇ ತಿಳಿಯೋಣ: ಪತ್ರಿಕೆಯು ಜನಾದರಣೆಗೆ ಪಾತ್ರವಾಗಲು ದೂರದೂರದ ಸುದ್ದಿಗಳನ್ನು ತೀವ್ರವೇ ಪ್ರಕಟಿಸ ಬೇಕು. ಪ್ರಕಟಿಸಿದ ಪತ್ರಿಕೆಗಳು ತೀವ್ರವೇ ಓದುಗರ ಕೈಸೇರಬೇಕು ಮತ್ತು ಪ್ರಕಟನೆಯಲ್ಲಿ ಅಚ್ಚುಕಟ್ಟಾಗಿದ್ದು ನಿಯಮಿತವಿರಬೇಕು. ಈ ಎಲ್ಲವುಗಳೂ ಸಾಧ್ಯವಾಗಲು ಮತ್ತು ಪತ್ರಿಕೆಯನ್ನು ಕಡಿಮೆ ಬೆಲೆಯಲ್ಲಿ ಪ್ರಕಟಿಸಲು ವಿಜ್ಞಾನಕ್ಕಲ್ಲದೆ ಬೇರೆ ಯಾರಿಂದಲೂ ಸಾಧ್ಯವೇ ಇಲ್ಲ. ಇದರಂತೆಯೆ ಊರಲ್ಲಿಯ ದೀಪಗಳನ್ನಾದರೂ ಪರೀಕ್ಷಿಸಿದಲ್ಲಿ-ಅವು ಎಷ್ಟೊಂದೀಪಗಳಿದ್ದಲ್ಲಿ, ಬೆಳಕನ್ನು ಕೊಡುವ ವಿಷಯದಲ್ಲಿ, ಅತಿ ಸ್ವಲ್ಪ ವೇಳೆಯಲ್ಲಿ ಹಚ್ಚುವ ವಿಷಯದಲ್ಲಿ ಮತ್ತು ಈ ಎಲ್ಲ ಕಾರಣಗಳ ಮೂಲಕ ಜನತೆಗೆ ಹೆಚ್ಚು ಸೌಕರ್ಯವನ್ನು ಒದಗಿಸುವಲ್ಲಿ ಎಷ್ಟು ಉಪಯುಕ್ತವೆನ್ನುವುದು ಕಂಡುಬರುವುದು,

ಕೆಲಸಗಳನ್ನು ಹೆಚ್ಚೆಚ್ಚಾಗಿ ಯಂತ್ರಸಹಾಯದಿಂದ ಮಾಡುವು ದೆಂದರೆ ಇದಕ್ಕೆ ಶಕ್ತಿ ಬೇಕು. ಈ ಶಕ್ತಿಯನ್ನು ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡಿದಲ್ಲಿ ಸರಕುಗಳಾದರೂ ಕಡಿಮೆ ಬೆಲೆಯಲ್ಲಿ ದೊರೆಯುವುದಲ್ಲದೆ, ಕೆಲಸ ಮಾಡುವವರಿಗೆ ಹೆಚ್ಚಿನ ವೇತನವನ್ನು ಕೊಡಲು ಸಾಧ್ಯವಾಗಬಹುದು. ಇವನಿಗೆ ಹೆಚ್ಚು ವೇತನವನ್ನು ಕೊಡುವುದೆಂದರೆ—ಹೆಚ್ಚು ಸೌಕರ್ಯಗಳನ್ನು ಹಲ್ಲನೆ ಸೇವಕರನ್ನು ಒದಗಿಸಿದಂತೆಯೆ. ಇಂದು ಅಮೇರಿಕೆಯು ನಿವಾಸಿಯು ವೈಜ್ಞಾನಿಕ ಸೌಕರ್ಯಗಳಿಂದ ಹೊಂದುವ ಶಕ್ತಿರೂಪ ಹಣವು, ಸರಾಸರಿ ಒಂಜನ ಗುಲಾಮರು ಹಗಲಿರುಳು ಅವನ ಸಲುವಾಗಿಯೆಂದೆ ದುಡಿದರೆ ಎಷ್ಟಾಗ ಬಹುದೊ ಅಷ್ಟಿದೆ. ಈ ಸೌಕರ್ಯವು ವಿಜ್ಞಾನವನ್ನು ನಿಜವಾಗಿಯೂ ಉಪಯುಕ್ತ ರೀತಿಯಲ್ಲಿ ಕೆಲಸ ಮಾಡಿಸಿದಲ್ಲಿ ದೊರೆಯುವ ಸೌಕ-ರ್ಯದ ಸಾವಿರದೊಳಗಿನ ಒಂದು ಪಾಲಿನಷ್ಟೂ ಇಲ್ಲವೆಂದು ಹೇಳ ಬಹುದು

ಎಲ್ಲ ಸೌಕರ್ಯಗಳಿಗೆ ಕಾರಣೀಭೂತವಾದ ಹಣದ ವಿಷಯವನ್ನು ವಿಚಾರಮಾಡಿದುದಾದರೆ, ಅಂತ್ಯದಲ್ಲಿ ನಾವು ಪಲ್ಲಿಸುವ ಹಣವನ್ನು ನಮಗೆ ಆ ಸೌಕರ್ಯಗಳಿಂದ ದೊರೆಯಬಹುದಾದ ಶಕ್ತಿಗೇ ನಾವ ಕೊಡುತ್ತಿರುವುದು ಕಂಡುಬರುವುದು. ಈಗ ನಾವು ಅಕ್ಕಿ, ಬೇಳೆಗಳಿಗೆ ಇಲ್ಲವೆ ಹಾಲು, ಬೆಣ್ಣೆ ಇತ್ಯಾದಿಗಳಿಗೆ ಹಣವನ್ನು ಪಲ್ಲಿಸಿ ಅವುಗಳನ್ನು ಪಸಿಮಯದರೂಪವಾಗಿ ತೆಗೆದುಕೊಂಡಲ್ಲಿ ಮತ್ತು ನಿಜವಾಗಿಯೂ ವಿಚಾರ ಮಾಡಿದಲ್ಲಿ ಈ ಹಣವು ಇಂತಹ ಸಾಧನಗಳು ಒಳಗೊಂಡ ಶಕ್ತಿಗೇ ಎಂದು ಕಂಡುಬರುವುದು. ಎಂದರೆ ಜಗತ್ತಿನಲ್ಲಿಯ ನಿಜವಾದ ಧನವೆಂದರೆ ಶಕ್ತಿಯೆ.

ಜಗತ್ತಿನಲ್ಲಿ ದೊರೆಯಬಹುದಾದ ಶಕ್ತಿಸಂಚಯವನ್ನು ಹೇಗೆ ಉಪಯುಕ್ತ ಸಾಧನಗಳಲ್ಲಿಯೆ ಹೆಚ್ಚೆಚ್ಚಾಗಿ ರೂಪಾಂತರಿಸುವ ಕಲೆಯು ವಿಜ್ಞಾನಕ್ಕೆ ಸಾಧ್ಯವಾಗಬಹುದೋ, ಅದೇ ಪ್ರಮಾಣದಲ್ಲಿ ಮಾನವಜಾತಿಯು ಸಾಂಪತ್ತಿಕ ಪರಿಸ್ಥಿತಿಯಾದರೂ ಹೆಚ್ಚೆಚ್ಚಾಗಿ ಪರಿವರ್ತಿಸುವುದು. ಈಗ ಜೋಗ-ಜಲಪಾತ ಇಲ್ಲವೆ ಇಂಥ ಅನೇಕ ನೀರಾವರಿಯ—ಅಭಿವೃದ್ಧಿ ವಿಷಯವನ್ನು ವಿಚಾರಮಾಡಿದುದಾದರೆ, ಈ ಮಾತಿನ ಸತ್ಯಾಸತ್ಯತೆಯು ಹೊಳೆದೇ ಹೋಗುವುದು. ಜಲಪಾತ ಗಳಿಂದ ಸೈಸರ್ಗಿಕ ಶಕ್ತಿಸಂಪತ್ತು. ಇಂಥ ಸಂಪತ್ತನ್ನು ನಮಗೆ ಉಪಯೋಗಿಸಲು ಸಾಧ್ಯವಾಗುವುದೆಂದರೆ ನಮ್ಮ ಸಾಮಾಜಿಕ ಸಂಪತ್ತಿನ ಅಭಿವೃದ್ಧಿಯಾದಂತೆಯೆ. ಇಲ್ಲಿ ಶಕ್ತಿಯು ನಿಸರ್ಗದತ್ತವಿದ್ದ ಅದನ್ನು ಉಪಯುಕ್ತ ಶಕ್ತಿಯಲ್ಲಿ ಪರಿಣಮಿಸುವ ಕೆಲಸವನ್ನು ನಮಗೆ ಸಾಧಿಸಬೇಕಾಗುತ್ತದೆ. ಹೀಗಾಗಿ ಕಡಿಮೆ ಹಣದಲ್ಲಿ ಹೆಚ್ಚು ಶಕ್ತಿ ಯನ್ನು ಕೊಳ್ಳಲು ಸಾಧ್ಯ. ಇಂದಿನ ಅಮೇರಿಕೆಯಲ್ಲಿಯ ಸುಧಾರಿಸಿದ ಪರಿಸ್ಥಿತಿಗೆ ವೈಜ್ಞಾನಿಕ ಎಂದರೆ ಯಾಂತ್ರಿಕ ಬೆಳೆವಣಿಗೆಯೆ ಕಾರಣ ಎಂಬ ಮಾತನ್ನು ಅರ್ಥಶಾಸ್ತ್ರಜ್ಞರೇ ಒಪ್ಪುತ್ತಾರೆ. ಸಾಮಾಜಿಕ ಪರಿಸ್ಥಿತಿಯನ್ನು ಸುಧಾರಿಸಲು, ನಿಸರ್ಗದತ್ತ ಶಕ್ತಿಯನ್ನು ಉಪಯುಕ್ತ ವಾಗುವಂತೆ ರೂಪಾಂತರಿಸಲು ಮತ್ತು ಈ ಕಾರಣಗಳ ಮೂಲಕ ಶ್ರಾಕರನಿಗೆ ಹೆಚ್ಚು ವೇತನವನ್ನು ದಯಪಾಲಿಸಲು ಮತ್ತು ಯಜ ಮಾನನಿಗೆ ಹೆಚ್ಚು ಲಾಭವಾಗಲೂ ಹಾಗೆಯೆ ಕಡಿಮೆ ಬೆಲೆಯಲ್ಲಿ ಸೌಕರ್ಯಗಳನ್ನು ಪುರಯಿಸಲೂ ವಿಜ್ಞಾನದ ಪುರಸ್ಕಾರದಿಂದ್ಲದೆ ಬೇರೆ ಏತರಿಂದಲೂ ಸಾಧ್ಯವೆ ಇಲ್ಲ.

ಇಂದು ದಾರಿದ್ರ್ಯವನ್ನು ಹೋಗಲಾಡಿಸಲು ಕಾರಣದಿಂದಲ್ಲದೆ ಬೇರೆ ಏತರಿಂದಲೂ ಸಾಧ್ಯವಿಲ್ಲ. ಇನೆರಡೂ ಶತ್ರಲೆ ವಸ್ತು ಬೆಳಕು. ಗಳದ್ದಂತೆ ವಿಜ್ಞಾನದ ಪುರಸ್ಕಾರವು ಮಾಡಿದ ಸಂಪತ್ತಭಿವೃದ್ಧಿಯು ಎಲ್ಲ ಸಾಧನೆಗಳನ್ನೂ ಮತ್ತು ಶಕ್ತಿಯನ್ನು ಹಣದಲ್ಲಿ ರೂಪಾಂತರಿ ಸುವ ಯಾಂತ್ರಿಕ ಬೆಳೆವಣಿಗೆಯನ್ನೂ ಪರೀಕ್ಷಿಸಿದಲ್ಲಿ, ಮುಂದೆ ಬರ ಲಿರುವ ದಿನಗಳು ಹೆಚ್ಚು ಅಭಿವೃದ್ಧಿಕಾರಿಗಳನೆ ಎಂದು ಕಂಡುಬರು ವುದು. ಇಂದಿನ ಎಲ್ಲ ಅಭಿವೃದ್ಧಿಗೆ ಬೆಣ್ಣೆಲುಬಿನಂತಿದ್ದ ಪೆಟ್ರೋಲು ಕಲ್ಲಿದ್ದಲಿ ಮುಂತಾದುವುಗಳಲ್ಲಿ ಅಡಕವಾದ ಶಕ್ತಿಸಂಚಯವು ತೀರಿ ದ್ದಾದರೆ ವಿಜ್ಞಾನದ ಪುರಸ್ಕಾರವು ಮುಗಿದಂತೆಯೆ. ಹೆಚ್ಚುಯಾಂತ್ರಿಕ ಬೆಳೆವಣಿಗೆಯು ಇಂಥ ಸಾಧನಗಳ ಹೆಚ್ಚು ಉಪಯೋಗವನ್ನು ಅವ ಲಂಬಿಸಿದೆ. ನಿಸರ್ಗದಲ್ಲಿ ದೊರೆಯಲಿರುವ ಈ ಸಂಚಯವು ನಮ್ಮ ಬೇಡಿಕೆಯನ್ನು ಪೂರಯಿಸುವಷ್ಟು ದೊರೆಯದಿದ್ದಲ್ಲಿ ಹೇಗೆ?—ಎಂಬ ವಿಚಾರವು ಎಲ್ಲ ಶಾಸ್ತ್ರಜ್ಞರನ್ನೂ ದಿಙ್ಮೂಢರನ್ನಾಗಿ ಮಾಡಿತ್ತು; ಆದರೆ ಇಂದು ಅಣುವನ್ನು ಭೇದಿಸಿ ಅಲ್ಲಿ ಅಡಕವಾಗಿರುವ ಶಕ್ತಿಯನ್ನು ಹೊರಗೆಡಹುವುದು ಸಾಧ್ಯವೆನ್ನುವುದು ಈಗ ತಿಳಿದಿದೆ. ಆದರೆ ಸದ್ಯಕ್ಕೆ ಇದು ದುಷ್ಕಾರ್ಯಗಳಿಗೆ ಮಾತ್ರ ಉಪಯೋಗಿಸಲ್ಪಟ್ಟಿದ್ದು ಈ ಪ್ರಚಂಡಶಕ್ತಿಯನ್ನು ರೂಪಾಂತರಿಸಿ ಉಪಯುಕ್ತ ಸಾಧನೆಗಳನ್ನಾಗಿ ಮಾಡುವ ಕ್ರಮವು ತಿಳಿದಲ್ಲಿ—ಈಗ ಶಕ್ತಿ-ಸಂಚಯಗಳೆಂದು ಉನ್ನತ ಸ್ಥಾನಕ್ಕೇರಿದ ಮತ್ತು ರಾಷ್ಟ್ರದ ಸಂಪತ್ತಿಗೆ ಕಾರಣೀ ಭೂತಗಳಾದ ಕಲ್ಲಿದ್ದಲ್ಲು, ಪೆಟ್ರೋಲು ಇತ್ಯಾದಿಗಳ ನಿಸರ್ಗದತ್ತ ಸಂಚಯವು ಮುಂ ದೆಯೂ ನಮಗೆ ವಿವಂಚನೆಗೆ ಕಾರಣವಾಗಲಾರದು ಅದರಂತೆಯೆ ಜಲಪಾತ ಇತ್ಯಾದಿಗಳಲ್ಲಿ ಅಡಕವಾದ ಶಕ್ತಿಯು ನಿರ್ಮಾಮವಾತರೂ ನಮ್ಮ ಸಾಮಾಜಿಕ ಸಂಪತ್ತಿಗೆ ಭಂಗ ಬರಲಾರದು. ಎಂದೂ ಒತ್ತಲು ಸಾಧ್ಯವಿಲ್ಲದಷ್ಟು ಶಕ್ತಿಯು ಅಣುವಿನಲ್ಲಿ ಅಡಕವಾಗಿದೆ ವಿಜ್ಞಾನವೆ ಎಷ್ಟೇ ಮುಂದರಿಯಲಿ ಆದರೆ ಶಕ್ತಿಸಂಚಯವು ಇಲ್ಲವೆಂಬ ಕಾರಣದ ವಿಂದಲೆ ಇದರ ಪುರಸ್ಕಾರವು ಮುಗಿಯಿತೆಂಬ ಪ್ರಸಂಗವೇ ಬ ರಲಾರದು. ಈ ಮಹತ್-ಶಕ್ತಿಯ ಸದುಪಯೋಗವು ನಮಗೆ ಬೇಗ ತಿಳಿಯಲಿ ಮತ್ತು ಶಾದಾಗಿ ಸಾಂಪತ್ತಿಕ ಅಭಿವೃದ್ಧಿಯು ದೇಶವ ಉದಯಿಸಿ ದಾರಿದ್ರ್ಯರೂಪ ಕತ್ತಲೆಯು ಇತರ ತೇಜಸ್ಸಿನಿಂದ ವಾಸ ವಾಗಲಿ ಎಂದು ಹಾರಯಿಸುವ.

# ತಿಪ್ಪಯ್ಯಂಗಾರರ ವಿದೇಹ ಸಂಚಾರ

( ಒಂದು ಸಣ್ಣ ಕತೆ )

ಶ್ರೀ. 'ಭಾರತೀಸುತ' ವೀರರಾಜಪೇಟೆ

●

ಕನ್ನಡದಲ್ಲಿ ತೀರ ಹೊಸಮಾದರಿಯ ಕತೆಯಿದೊಂದು. ಮನೋವಿಶ್ಲೇಷಣ ತತ್ತ್ವವನ್ನವಲಂಬಿಸಿ ಹೊರಟಿದು. ತಿಪ್ಪಣಯ್ಯಂಗಾರರಂತೆ ಎಲ್ಲರಿಗೂ ಸತ್ಯದ ಸಾಕ್ಷಾತ್ಕಾರವಾದರೆ ಜಗತ್ತು ನಡೆದೀತೆ? ಸತ್ಯಾಸತ್ಯದ ಸಂಭ್ರಾಂತಿಯಿಂದಲೇ ಭೂಲೋಕಕ್ಕೆ ಅಸ್ತಿತ್ವ.

ಈಗ ನಾನು ಹೇಳಲಿರುವ ವೃತ್ತಾಂತವನ್ನು ನೀವು ಯಾರೂ ನಂಬುವುದಿಲ್ಲವೆಂದು ನನಗೆ ಮೊದಲೇ ತಿಳಿದಿದೆ. ಏಕೆಂದರೆ ಅದು ಅಷ್ಟು ಸೋಜಿಗವಾದುದು; ಅಮಾನುಷವಾದುದು. ಆದುದರಿಂದ 'ಇದು ಕಲ್ಪನಾ ಜಗತ್ತಿನ ಸೊಗ್ಗೋಂ' ಎಂದು ನೀವು ನುಡಿದು ಬಿಡುವಿರಿ; ಅಥವಾ ನಾನು ಈಗ ಹೇಳಲಿರುವ ಸಂಭವವು ವಾಸ್ತವವಾದುದೆಂದು ಹಟ ಹಿಡಿದರೆ, ನನ್ನ ಬುದ್ಧಿಯು ಸಮತೆಯನ್ನು ಕಳೆದು ಕೊಂಡಿದೆ ಎಂದು ಭಾವಿಸುವಿರಿ. ಆದುದರಿಂದಲೇ ಈ ಯಥಾರ್ಥಗಳ ಪ್ರಪಂಚವು ಕಲ್ಪನೆಯ ನಾಡಿಗಿಂತಲೂ ಸೋಜಿಗವಾದುದೆಂದು ಮೊದಲೇ ಕೇಳಿಬಿಡುವೆನು.

ನೋಡಿ, ನಾನೊಬ್ಬ ಟ್ರಾವೆಲಿಂಗ್ ಏಜಂಟು; ಹತ್ತಾರು ಕಂಪನಿಗಳಿಗೆ ಗಿರಾಕಿಗಳನ್ನು ಒದಗಿಸಿಕೊಡುವುದರಿಂದ ನನ್ನ ಬಾಳ್ವೆಯು ಸಾಗುತ್ತಿದ್ದಿತು. ನನ್ನ ಈ ಉದ್ಯೋಗದಲ್ಲಿ ದಕ್ಷಿಣ ಹಿಂದೂದೇಶದಲ್ಲೆಲ್ಲಾ ಸಂಚರಿಸಿದ್ದೇನೆ. ನಾನು ನೋಡದ ಪಟ್ಟಣವು ದಕ್ಷಿಣ ಇಂಡಿಯದಲ್ಲೇ ಇಲ್ಲವೆನಬಹುದು. ಈ ಸಂಚಾರಗಳಲ್ಲಿ ಅನೇಕ ತರದ ಜನರನ್ನು ನೋಡಿದ್ದೇನೆ; ಅನೇಕ ತರದ ಅನುಭವಗಳನ್ನು ನಾನು ಸಂಪಾದಿಸಿದ್ದೇನೆ. ಅವುಗಳಲ್ಲಿ ಒಂದನ್ನು ನಾನು ನಿಮಗೆ ಈಗ ವಿವರಿಸಬೇಕೆಂದಿದ್ದೇನೆ.

ನನ್ನ ಸಂಚಾರಪಟ್ಟಿಯಲ್ಲಿ ಕಲ್ಲಿಕೋಟೆ ಒಂದು ಮುಖ್ಯವಾದ ಊರು. ಅಲ್ಲಿ ವ್ಯವಹಾರದ ಸಲುವಾಗಿ ಒಂದೊಂದು ಸಲ ಹದಿನೈದು ದಿನಗಳನಕ ತಳವೂರಬೇಕಾಗುತ್ತಿದ್ದಿತು. ಊಟ, ತಿಂಡಿ, ವಸತಿಗಳು ನೋಡರ್ನ್ ಹೋಟೆಲಿನಲ್ಲಿ. ಒಮ್ಮೆ ಆ ಹೋಟೆಲಿನಲ್ಲಿ ಊಟಮಾಡುತ್ತಿದ್ದಾಗ ನನಗೆ ತಿಪ್ಪಯ್ಯಂಗಾರರ ಪರಿಚಯವು ಆಯಿತು. ಅಯ್ಯಂಗಾರರು ಬೆಂಗಳೂರಿನ ಕನ್ನಡಿಗರು; ನಾನು ಕನ್ನಡಿಗನೆಂದು ಅರಿತು ನನಗೂ ಅವರಿಗೂ ಸಂತೋಷವೆನಿಸಿತು. ಅವರು ನನ್ನನ್ನು ತಮ್ಮ ವಸತಿಗೆ ಆಮಂತ್ರಿಸಿದರು. ಹೋಟೆಲಿನಲ್ಲಿ ಕೋಣೆಯ ಬಾಡಿಗೆಯನ್ನು ತೆರುತ್ತಿದ್ದ ನನಗೆ, ಅವರ ಕರೆಯು ಒಂದು ದೊಡ್ಡ ಅನುಗ್ರಹವಾಯಿತು. ನಾನು ಟ್ರಂಕ್ಕು ಹಾಸಿಗೆಗಳನ್ನು ಒಬ್ಬ ಆಳಿನ ತಲೆಯ ಮೇಲೆ ಹೊರಿಸಿ, ಅವರನ್ನು ಹಿಂಬಾಲಿಸಿದೆ.

ಅಯ್ಯಂಗಾರರಿಗೆ ವಯಸ್ಸು ಇಪ್ಪತ್ತಾರು ಇಪ್ಪತ್ತೇಳು. ಇನ್ನೂ ಮದುವೆ ಆಗಿರಲಿಲ್ಲ. ಕಲ್ಲಿಕೋಟೆಯ ಕಾಲೇಜು ಒಂದರಲ್ಲಿ ಗಣಿತ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅವರು ಬೆಂಗಳೂರಿನಿಂದ ಅಲ್ಲಿಗೆ ಬಂದು ನಾಲ್ಕು ತಿಂಗಳು ಮಾತ್ರವಾಗಿದ್ದಿತು. ತಳಯಲ್ಲಿ ಒಂದು ಮಡಿಕೆಯ ಮೇಲೆ ಎರಡು ಕೋಣೆಗಳನ್ನು ಬಾಡಿಗೆಗೆ ತೆಗೆದು ಕೊಂಡು ವಾಸಮಾಡುತ್ತಿದ್ದರು. ನಾವಿಬ್ಬರೂ ಕನ್ನಡಿಗರೇ ಆದುದರಿಂದ, ನಮ್ಮಿಬ್ಬರ ನಡುವೆ ಬಹುಬೇಗ ಸ್ನೇಹ್ರಿಜೆಳೆಯಿತು. ಕಲ್ಲಿಕೋಟೆಯಲ್ಲಿ ನನ್ನ ದಿನಗಳು ಬಹು ಸಂತೋಷವಾಗಿರುತ್ತಿದ್ದವು. ಅಯ್ಯಂಗಾರರ ಒಡನಾಟದಲ್ಲಿ. ಆದುದರಿಂದ ನನ್ನ ಸಂಚಾರಪಟ್ಟಿಯಲ್ಲಿ ಕಲ್ಲಿಕೋಟೆ ಬರುವುದು ಎಷ್ಟಾಗ....ಎಂದು ಬಹು ಉತ್ಸುಕತೆಯಿಂದ ಇದನ್ನು ನೋಡುತ್ತಿದ್ದೆ!

\+ \+ \+ \+

ವರುಷಗಳೆರಡು ಉರುಳಿದುವು. ಅಯ್ಯಂಗಾರರು ಇನ್ನೂ ಬ್ರಹ್ಮಚಾರಿಗಳಾಗಿಯೇ ಇದ್ದರು. ನನಗೆ ಕಲ್ಲಿಕೋಟೆಗೆ ತೆರಳಬೇಕಾಗಿ ಬಂತು. ಇಂತಹ ದಿನ ಬರುತ್ತೇನೆಂದು ಅಯ್ಯಂಗಾರರಿಗೆ ಓಲೆ ಬರೆದೆ. ಅವರು ಆಯು ನಿಲ್ದಾಣದಲ್ಲಿ ನನ್ನನ್ನು ಕಾದಿದ್ದರು. ನನ್ನನ್ನು ಕಂಡೊಡನೆಯೆ ಅವರು ಬಹು ಸಂತೋಷದಿಂದ ಮಾತಾಡಿಸಿದರು; ಮಾಡರ್ನ್‌ಗೆ ಕರೆದುಕೊಂಡು ಹೋಗಿ, ನನ್ನ ಹೊಟ್ಟೆಯನ್ನು ತಿಂಡಿತಿನಿಸುಗಳಿಂದ ತುಂಬಿಸಿದರು. ಅನಂತರ ಇಬ್ಬರೂ ವಸತಿಯ ಹಾದಿಯನ್ನು ಹಿಡಿದೆವು.

ಅವರ ಕೋಣೆಯಲ್ಲಿ ಮೇಜಿನ ಮೇಲೆ ಬಿದ್ದಿದ್ದ ಪುಸ್ತಕಗಳು ನನ್ನ ಕಣ್ಣುಗಳನ್ನು ಸೆಳೆದುವು. ಹತ್ತೆಂಟು ಪುಸ್ತಕಗಳನ್ನು ಬಿಚ್ಚಿ ನೋಡಿದೆ; ಎಲ್ಲವೂ ಯೋಗಶಾಸ್ತ್ರಕ್ಕೆ ಸಂಬಂಧಿಸಿದ ಹೊತ್ತಗೆಗಳು. ನಾನು ಕುರ್ಚಿಯ ಮೇಲೆ ಕುಳಿತು ಸಿಗರೇಟು ಪ್ಯಾಕನ್ನು ತೆಗೆದೆ. ಅಯ್ಯಂಗಾರರಿಗೆ ಒಂದನ್ನು ಕೊಟ್ಟು ವತ್ತೊಂದನ್ನು ನಾನು ಸೇದತೊಡಗಿದೆ. ಮೈಸೂರು, ಬೆಂಗಳೂರುಗಳ ಸುದ್ದಿಗಳನ್ನು ಚರ್ಚಿಸಿದೆವು. ಅವುಗಳೊಡನೆ ಅಖಿಲ ಕರ್ನಾಟಕಕ್ಕೆ ಸಂಬಂಧಿಸಿದ ವಿಷಯಗಳೂ ಒಂದುವು. ತುಂಬ ಸಮಯ ನಾವು ಮಾತಾಡಿದೆವು.

"ನೀವು ಯೋಗಶಾಸ್ತ್ರವನ್ನು ಕಲಿಯುತ್ತಿರುವಂತೆ ಕಾಣುತ್ತದೆ!" ಮೇಜಿನ ಮೇಲಿದ್ದ ಒಂದು ದಪ್ಪಗಿನ ಹೊತ್ತಗೆಯನ್ನು ತೆಗೆಯುತ್ತಾ ನಾನು ಪ್ರಶ್ನಿಸಿದೆ.

"ಅಹುದು, ಯೋಗಶಾಸ್ತ್ರವೆಂದರೆ ಹಿಂದಿನವರು ನಮ್ಮ ಪಾಲಿಗೆ ಬಿಟ್ಟುಹೋದ ಒಂದು ಅಮೂಲ್ಯವಾದ ಗನಿ" ನಗೆಯ ಮುಗುಳನ್ನು ಬೀರುತ್ತಿದ್ದ ಅಯ್ಯಂಗಾರರೆಂದರು: "ಯೋಗಶಾಸ್ತ್ರದ ಅಭ್ಯಾಸಮಾಡಿ, ಹಲವಾರು ಪ್ರಯೋಗಗಳನ್ನು ನಡೆಯಿಸಿ, ಒಂದು ಶಾಸ್ತ್ರೀಯ ಗ್ರಂಥವನ್ನು ನಾನು ಬರೆಯಬೇಕೆಂದಿದ್ದೇನೆ."

"ಬಹು ಉತ್ತಮವಾದ ಕೆಲಸ" ನಾನು ಮಾರ್ನುಡಿದೆ: "ನಮ್ಮ ಹಿರಿಯರ ಜ್ಞಾನಸಂಪತ್ತನ್ನು ಲೋಕಕ್ಕೆ ತಿಳಿಯಪಡಿಸಿದಂತಾಗುವುದು!"

"ಅಷ್ಟು ಮಾತ್ರವಲ್ಲ, ಯೋಗಶಾಸ್ತ್ರದ ತತ್ತ್ವಗಳನ್ನು ಅನುಸರಿಸಿ ನಾನು ನಡೆಸುತ್ತಿರುವ ಅನೇಕ ಪ್ರಯೋಗಗಳು ಯಶಸ್ವಿಯಾವವೆ, ನಮ್ಮ ಜೀವನದಲ್ಲಿಯೇ ಒಂದು ಮಹಾಕ್ರಾಂತಿಯುಂಟಾಗಬಹುದು!"

"ಅಮ ತೇಗೆ?" ನಾನು ನಡುವೆ ಬಾಯಿ ಹಾಕಿದೆ: "ಒಬ್ಬಬ್ಬರು ಯೋಗಿಗಳು ಒಂದೆರಡು ವಾರಗಳ ಮಟ್ಟಿಗ ನೆಲದಡಿಯಲ್ಲಿ ಜೀವಂತವಿರಬಲ್ಲ ಶಕ್ತಿಯನ್ನು ಪಡೆದುದರಿಂದ, ಅಥವಾ ನೀರ ಮೇಲೆ ನಡೆಯಬಲ್ಲ ಚೈತನ್ಯವನ್ನು ಹೊಂದಿದುದರಿಂದ, ಜನಜೀವನದಲ್ಲಿ ಅಂತಹ ಒಂದು ಕ್ರಾಂತಿಯುಂಟಾಗದು!"

"ಈ ವರೆಗೆ ಯೋಗಿಗಳು ಯೋಗಶಾಸ್ತ್ರದ ಗನಿಯಿಂದ ಕೆಲವು ಮಣಿಗಳನ್ನು ಮಾತ್ರ ಆರಿಸಿ ತೆಗೆದಿದ್ದಾರೆ. ಅವುಗಳಿಂದ ಜನರಿಗೆ ಹೆಚ್ಚಿನ ಉಪಯೋಗವಾಗುವಂತಿಲ್ಲ. ಆದುದರಿಂದಲೇ ಜನತೆಯು ದೃಷ್ಟಿಯು ಅತ್ತಕಡೆ ಹರಿದಿಲ್ಲ. ಈಗ ಐನೂರು ವರುಷಗಳ ಬಳಿಕ ಬದುಕಿ ಬಾಳಲು ವಿಧಾನವೊಂದು ಅರಿವಾದರೆ, ಆದು ಜನಸಾಮಾನ್ಯರಿಗೂ ತಿಳಿಯುವಷ್ಟು ಸರಳವಾಗಿದ್ದರೆ, ಆಗ ನಾವು ಐವತ್ತು ಮನುಷ್ಯರ ತನಕ ಬದುಕಿ ಬಾಳಲು ಯತ್ನಿಸುವುದಿಲ್ಲವೇ? ಆಧುನಿಕ ವಿಮಾನಗಳಿಗಿಂತಲೂ ಹೆಚ್ಚು ವೇಗವಾಗಿ ಸಂಚರಿಸಲ್ಪಟ್ಟು ಬರುವಂತಿದ್ದರೆ, ಆ ಬಗೆಯನ್ನು ಅರಿತುಕೊಳ್ಳಲು ಮನುಷ್ಯನು ಹೆಣಗುವುದಿಲ್ಲವೇ?"

"ಆದರೆ ಇವೆಲ್ಲ ಅಸಾಧ್ಯವೆನಿಸಿದ ಹಗಲುಗನಸುಗಳು" ನಾನು ನುಡಿದೆ: "ನನಗಂತೂ ಹಾಗೆ ಎನಿಸುತ್ತದೆ."

"ಈ ಲೋಕದಲ್ಲಿ ಮನುಷ್ಯನಿಗೆ ಅಸಾಧ್ಯವಾದುದು ಯಾವುದೂ ಇಲ್ಲ" ಅಯ್ಯಂಗಾರರ ಬಾಯಿಂದ ಆತ್ಮವಿಶ್ವಾಸದ ನುಡಿಗಳು ಹೊರಟುವು: "ಹಿಂದೆ ನಮಗೆ ಅಸಾಧ್ಯವೆನಿಸಿದುದು ಇಂದು ನಮಗೆ ಸಾಧ್ಯವಾಗಿದೆ. ಮನುಷ್ಯನ ಮನಸ್ಸು ಅಸಾಮಾನ್ಯ ಚೈತನ್ಯದ ಬುಗ್ಗೆ. ಆದರೆ ನನ್ನ ಮನಸ್ಸಿನ ಶಕ್ತಿಯನ್ನು ಪೂರ್ಣವಾಗಿ ನಾವು ಉಪಯೋಗಿಸಿಕೊಳ್ಳುತ್ತಲಿಲ್ಲ; ಇದಕ್ಕೆ ಕಾರಣ ಮನಸ್ಸಿನ ಅನಂತ ಚೇತನವನ್ನು ದೇಹವು ಬಳಸಲಾರದು!—"

"ದೇಹದಿಂದ ಸಾಧ್ಯವಾಗದಿದ್ದರೆ, ಮನಶ್ಶಕ್ತಿಯನ್ನು ಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದೆಂತು?"

"ಅದೇ ನಮ್ಮ ಮುಂದಿನ ಸಮಸ್ಯೆ." ಅಯ್ಯಂಗಾರರ ತುಟಿಗಳ ಮೇಲೆ ಎಳನಗೆಯು ಕಳೆಯಾಡಿತು: "ದೇಹ, ಆತ್ಮ ಮತ್ತು ಮನಸ್ಸು ಈ ಮೂರರ ಒಗಟು ಬಗೆಹರಿದರೆ, ಈ ಪ್ರಪಂಚದ ಎಲ್ಲಾ ಸಮಸ್ಯೆಗಳೂ ಪರಿಹಾರವಾದಂತೆಯೆ ಸರಿ! ನಮ್ಮ ದೇಹದೊಳಗೆ ಆತ್ಮ-ಮನಸ್ಸುಗಳಿರಿಡಿವೆ. ಆದರೆ, ಆತ್ಮ ಮತ್ತು ಮನಸ್ಸುಗಳನ್ನು ದೇಹದಿಂದ ಬೇರೆಯೆಂಬುದನ್ನು ನಾವು ಅನುಭವಗಳ ಮೂಲಕ ತಿಳಿದುಕೊಂಡಿಲ್ಲ. ಆದುದರಿಂದಲೇ ಮನಸ್ಸಿನ ಅಪಾರ ಶಕ್ತಿಯನ್ನು ನಾವು ಅಳವಡಿಸಿಕೊಳ್ಳಲಾರೆವು. ಸಾಯುವನಕ ದೇಹ ಮತ್ತು ಆತ್ಮಗಳನ್ನು ಒಂದೇ ಎಂದು ಭಾವಿಸುತ್ತೇವೆ. ದೇಹದಿಂದ ಆತ್ಮವು ಬೇರೆಯಾಗುವ ಸಂದರ್ಭವನ್ನು ನಾವು 'ಸಾವು' ಎಂದು ಕರೆಯುತ್ತೇವೆ. ನಾವು ವಾಸವಾಗಿರುವ ಮನೆಯು ಮುರಿದು ಬೀಳುವ ಸಂದರ್ಭದಲ್ಲಿ, ವಾಸಿಸಲು ಬೇರೊಂದು ಮನೆಗೆ ತೆರಳುತ್ತೇವೆ. ಅದರಂತೆಯೇ ಆತ್ಮವಾದರೂ ವಾಸಕ್ಕೆ ಅಯೋಗ್ಯವಾದ ದೇಹವನ್ನು ಬಿಟ್ಟು ಬೇರಿಡೆಗೆ ತೆರಳುತ್ತದೆ. ನಾವು ಮನೆಯನ್ನು ರಿಪೇರಿ ಮಾಡುವಂತೆ ಆತ್ಮವು ದೇಹವನ್ನು ದುರಸ್ತು ಮಾಡಿಕೊಳ್ಳುತ್ತಲಿಲ್ಲ, ಅಷ್ಟೆ!"

"ಜರೆ, ರೋಗ ಇವುಗಳಿಗೆ ತುತ್ತಾಗದೆ ದೇಹವು ಚಿರಂಜೀವಿಯಾಗಿರಬಲ್ಲುದೇ?" ಈ ಪ್ರಶ್ನೆಯು ನನ್ನ ಬಾಯಿಂದ ಹೊರಟಿತು.

"ಸಾಧ್ಯವಾಗಬಹುದು, ಅದು ಆಯುರ್ವೇದ—ವೈದ್ಯಶಾಸ್ತ್ರಗಳಿಗೆ ಸೇರಿದುದು." ಅಯ್ಯಂಗಾರರೆಂದರು: "ಆದರೆ ಅದು ನನ್ನ ಅಭ್ಯಾಸ ವಿಷಯವಲ್ಲ. ಆತ್ಮವು ಇಚ್ಛೆ ಬಂದಾಗ, ದೇಹವನ್ನು ಪರಿತ್ಯಜಿಸಿ, ಹೊರಗೆ ಸ್ವತಂತ್ರವಾಗಿ ಸಂಚರಿಸಬಲ್ಲುದು; ಮರಳಿ ದೇಹವನ್ನು ಸೇರಬಲ್ಲುದು!"

"ಇದು ಸಾಧ್ಯವೇ?"

"ಏಕೆ ಸಾಧ್ಯವಲ್ಲ?" ಅಯ್ಯಂಗಾರರು ಕೇಳಿದರು: "ದೇಹವು ವಾಸಿಸಲು ಅಯೋಗ್ಯವೆನಿಸಿದಾಗ ಆತ್ಮವು ಅದನ್ನು ಬಿಡಬಲ್ಲುದಾದರೆ ಇತರ ಸಂದರ್ಭಗಳಲ್ಲಿಯೂ ಬಿಡಬಲ್ಲುದು; ಮರಳಿ ದೇಹವನ್ನು ಸೇರಿಕೊಳ್ಳಬಲ್ಲುದು. ಆದರೆ ಆ ವಿಜ್ಞಾನವನ್ನು ನಾವು ತಿಳಿದಿಲ್ಲ ಅಷ್ಟೆ!"

"ಅಂತೂ ದೊಡ್ಡ ವೇದಾಂತಿಗಳಾದಿರಿ ನೀವು!" ಎಂದೆ ನಾನು

ಅಯ್ಯಂಗಾರರು ಹಲವು ಸಾಮ್ಯಗಳನ್ನು ಕೊಟ್ಟು ತಮ ಸಿದ್ಧಾಂತಗಳನ್ನು ನನಗೆ ಮನದಟ್ಟು ಮಾಡಲೆಣಿಸಿದರು. ಆದ ವೇದಾಂತ-ಯೋಗಶಾಸ್ತ್ರಗಳು ನನ್ನ ದಾರಿಗಳಲ್ಲ. ರೂಪಾಯಿ, ಆಗಳನ್ನು ನಾನು ತಿಳಿಯಬಲ್ಲೆ. ವ್ಯಾಪಾರದಲ್ಲಿ ಆಸಲು, ಮಾರು ಕ್ರಯ, ಲಾಭಗಳನ್ನು ಹುಡುಕಬಲ್ಲೆ; ಆದರೆ ಅಯ್ಯಂಗಾರರು ಹೇಳಿ ಸಂಗತಿಗಳು ನನ್ನ ಬುದ್ಧಿಗೆ ನಿಲುಕವು.

\+ + + +

ರಾತ್ರಿ ನಾವು ಮಾಡರ್ನಿನಲ್ಲಿ ಊಟಮುಗಿಸಿ ಕೋಣೆಗೆ ಒಂದೆವ ಅಯ್ಯಂಗಾರರು ಸಿಗರೇಟಿಗೆ ಬೆಂಕಿಯನ್ನು ಹತ್ತಿಸಿ ಹೇಳಿದರು "ನಾಳೆಯ ದಿನ ನನ್ನದೊಂದು ಅದ್ಭುತ ಪ್ರಯೋಗವನ್ನು ನಿಮತೋರಿಸಿಕೊಡಬೇಕೆಂದಿದ್ದೇನೆ!"

"ಏನದು?" ಹಾಸಿಗೆಯನ್ನು ಬಿಚ್ಚುತ್ತಾ ನಾನು ಕೇಳ

"ಆಗಲೇ ಹೇಳಿದೆನಲ್ಲ—ಮನುಷ್ಯನು ಇಚ್ಛೆ ಬಂದಾಗ ವಿದೇಯಾಗಿ ಸಂಚರಿಸುವುದು; ಮರಳಿ ದೇಹವನ್ನು ಒಂದು ಸೇರುವು ಈ ಕ್ರಿಯೆಯನ್ನು ನಾಳೆ ನಾನು ನಿಮಗೆ ಪ್ರತ್ಯಕ್ಷವಾಗಿ ತೋ ಬೇಕೆಂದಿದ್ದೇನೆ. ನಾಳೆ ಭಾನುವಾರ; ನನಗೆ ಕಾಲೇಜಿಲ್ಲ. ಮ

ಹ್ನದ ಮೇಲೆಯಲ್ಲವೇ ಗಿರಾಕಿಗಳಲ್ಲಿ ನಿಮ್ಮ ವ್ಯವಹಾರವಿರುವುದು? ಅಷ್ಟರೊಳಗೆ ನನ್ನ ಪ್ರಯೋಗವೆಲ್ಲ ಮುಗಿದುಬಿಡುವುದು."

ನಾನು ಅಯ್ಯಂಗಾರರ ಮೊಗವನ್ನೇ ನಿಟ್ಟಿಸಿದೆ, ಅದು ಗಂಭೀರವಾಗಿದ್ದಿತು. ಅವರು ಆತ್ಮಪೂರ್ವಕವಾಗಿ ನುಡಿಯುತ್ತಿರುವರೆಂದು ನಾನು ತಿಳಿದೆ. ಆದರೂ, ಯೋಗಾಭ್ಯಾಸದಲ್ಲಿ ಬುದ್ಧಿಯನ್ನು ಕೇಂದ್ರೀಕರಿಸಿದುದರಿಂದ ಅದು ತನ್ನ ಸ್ಥಿಮಿತವನ್ನು ಕಳೆದುಕೊಂಡಿರಬಹುದೇ?—ಎಂಬ ಸಂದೇಹವು ನನ್ನನ್ನು ಬಾಧಿಸಿತು. ಆದರೆ ಅವರ ಮಾತುಗಳು ಹಾಗೇನೂ ತೋರುತ್ತಿರಲಿಲ್ಲ ಅವರು ನಗುತ್ತಿದ್ದರು. ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ನೀಡುತ್ತಿದ್ದರು. ಅವರ ಪ್ರಯೋಗವನ್ನು ಕಣ್ಣಾರೆ ನಾಳೆ ಕಾಣಬಹುದಲ್ಲ—ಎಂದು ನಾನು ಸಮಾಧಾನವನ್ನು ತಳೆದೆ.

ಬೆಳಗ್ಗೆ ಆರು ಗಂಟೆಗೆ ಅಯ್ಯಂಗಾರರು ನನ್ನನ್ನು ಎಚ್ಚರಿಸಿದರು: "ಏಳಿ, ಬೇಗನೆ ಮುಖವನ್ನು ತೊಳೆದುಕೊಂಡು ಬನ್ನಿ" ಎಂದು ಅವರ ಆಣತಿಯಾಯಿತು.

ನಾನು ಅವರ ಸಲಹೆಯಂತೆ ಪ್ರಾತಃಕರ್ಮಗಳನ್ನು ತೀರಿಸಿಕೊಂಡು ಬಂದುದಾಯಿತು. ಇಬ್ಬರೂ ಹೋಟೆಲಿನೊಳಗೆ ನುಗ್ಗಿ ಕಾಫಿ-ಫಲಾಹಾರಗಳನ್ನು ಮುಗಿಸಿಕೊಂಡು ಬಂದೆವು. ಅಯ್ಯಂಗಾರರು ತಮ್ಮ ಮಂಚದ ಮೇಲೆ ಹಾಸಿಗೆಯನ್ನು ಬಿಡಿಸಿ ಪದ್ಮಾಸನ ಹಾಕಿ ಕುಳಿತರು.

"ನೀವು ಅಂಜಬೇಕಾದುದಿಲ್ಲ. ಎಲ್ಲಾ ನಾಲ್ಕು ಗಂಟೆಯ ಸಮಯ. ನನ್ನ ನೂತನ ಸಂಶೋಧನೆಯನ್ನು ನಿಮಗೆ ತೋರಿಸುವೆ. ಈ ಪ್ರಯೋಗವನ್ನು ಹಲವು ಸಲ ನಡೆಯಿಸಿದ್ದೇನೆ. ಆದರೆ ಕೋಣೆಯನ್ನು ಬಿಟ್ಟು ಹೊರಗೆ ಹೋಗಿಲ್ಲ. ದೇಹದ ಎಚ್ಚರಿಕೆಯನ್ನು ಯಾರಾದರೂ ನೋಡಬೇಕಲ್ಲ! ಈಗ ನೀವಿರುವುದರಿಂದ ದೇಹದ ಎಚ್ಚರಿಕೆಯನ್ನು ತೆಗೆದುಕೊಳ್ಳಬಲ್ಲಿರಿ. ಆದುದರಿಂದ ಹೊರಬಯಲಿನಲ್ಲಿ ನಾನು ಸಂಚರಿಸಬೇಕೆಂದಿದ್ದೇನೆ!"

"ಆಗಲಿ ತಮ್ಮ ಸೂಕ್ಷ್ಮ ಶರೀರದ ಸಂಚಾರದ ಅನುಭವಗಳನ್ನು ನನಗೆ ತಿಳಿಸಿರಿ"

"ಈ ಅನುಭವಗಳೇ ಮುಖ್ಯವಾದುವು ನಮ್ಮ ಹೊರನೋಟಕ್ಕಾ, ಅಂತರ್ದೃಷ್ಟಿಗೂ ಯಾವ ವ್ಯತ್ಯಾಸವಿದೆಯೆಂದು ತಿಳಿಯಬೇಕು. ದೇಹವನ್ನು ಬಿಡುವುದೆಂದರೆ ಸೂಕ್ಷ್ಮದೇಹವನ್ನು ಸ್ಥೂಲ ಶರೀರದಿಂದ ವಿಂಗಡಿಸುವುದಷ್ಟೆ. ನೀವು ತುಸ ತಾಳ್ಮೆಯಿಂದಿರಿ; ನಾನು ನನ್ನ ಪ್ರಯೋಗವನ್ನು ಆರಂಭಿಸುವೆನು."

ಅಯ್ಯಂಗಾರ್ಯರು ನನ್ನ ಮಾರ್ಗದಿಯನ್ನು ನಿರೀಕ್ಷಿಸಲಿಲ್ಲ ಅವರ ದೃಷ್ಟಿಯು ಮೂಗಿನ ತುದಿಯಲ್ಲಿ ನೆಲಸಿತು. ಪ್ರಾಣಾಯಾಮ ಮಾಡುವವರಂತೆ ಅವರು ಉಸಿರನ್ನು ನಿದಾನವಾಗಿ ಮೇಲಕ್ಕೆಳೆದರು, ಮೆಲ್ಲನೆ ಹೊರಬಿಡತೊಡಗಿದರು. ಹೀಗೆ ಅವರು ನಾಲ್ಕಾರುಸಲ ಆವರ್ತಿಸಿದರು. ನಾಲ್ಕು ನಿಮಿಷಗಳು ಕಳೆದುವು. ಒಂದು ದೀರ್ಘಶ್ವಾಸವು ಅವರ ಎದೆಯಿಂದ ಹೊರಟಿತು. ನಾನು ಅವರನ್ನೆ ನಿಟ್ಟಿಸುತ್ತಿದ್ದೆ. ಅವರ ಕೊರಳು ಸಡಿಲವಾಯಿತು. ತಲೆ ಹಿಂಬದಿಗೆ ಬಾಗಿತು. ಕೈಗಳು ಸಡಿಲವಾಗಿ ಕೆಳಗೆ ಬಿದ್ದುವು. ಇನ್ನೊಂದು ಕ್ಷಣದಲ್ಲಿ ದೇಹವು ಹಾಸಿಗೆಯ ಮೇಲೆ ಉರುಳಿತು. ಕೋಣೆಯೊಳಗೆ ತುಂಬಿದ್ದ ಗಾಳಿ ಹೊರಗೆ ಚಲಿಸಿದಂತಾಯಿತು. ನಾನು ದೇಹವಿದ್ದಲ್ಲಿಗೆ ಹೋದೆ. ಅಯ್ಯಂಗಾರರ ಮೂಗಿನಲ್ಲಿ ಬೆರಳಿರಿಸಿ ನೋಡಿದೆ. ಉಸಿರಾಡುತ್ತಿರಲಿಲ್ಲ. ಎದೆಯ ಬಡಿತವು ನಿಂತಿದ್ದಿತು. ನಾಡಿಸ್ಪಂದನವಿರಲಿಲ್ಲ. ಮೈಮಾತ್ರ ತುಸ ಬಿಸಿಯಾಗಿದ್ದಿತು. ಆದರೆ ಆ ಶಾಕವೂ ನಿದಾನವಾಗಿ ಆರಿತು. ನಾನು ತಲೆಯಡಿಗೆ ಒಂದು ದಿಂಬನ್ನು ಇರಿಸಿದೆ. ರಗ್ಗನ್ನು ಎಳೆದು ಮೈಗೆ ಹೊದಿಸಿದುದಾಯಿತು. ಮರಳಿ ಬಂದು ಕುರ್ಚಿಯ ಮೇಲೆ ಕುಳಿತೆ.

ಆಜಿಕೆ ಬೇಸರುಗಳು ನನ್ನನ್ನು ಆವರಿಸಿದುವು. 'ಸ್ಥೂಲ ಕಾಯವನ್ನು ತ್ಯಜಿಸಿ ಆನಂತವಾದ ವಾಯುವಿನಲ್ಲಿ ಬೆರೆತುಹೋದ ಅಯ್ಯಂಗಾರರು ಮರಳಿ ಬರುವರೆ? ಅಯ್ಯಂಗಾರರ ವೀದೇಹ ಸಂಚಾರವನ್ನು ತಿಳಿಸಿದರೂ ಯಾರೂ ನಂಬರು. ನಾನು ಕೊಲೆಗಡುಕನಾಗುವೆನೆ?..... ...ಹೀಗೆ ಅನೇಕ ಆಲೋಚನೆಯ ತರಂಗಗಳು ನನ್ನ ಚಿತ್ತವಲ್ಲಿ ಮೂಡಿದುವು. ಸಿಗರೇಟುಗಳು ಒಂದೊಂದಾಗಿ ಬೂದಿಯಾದುವು. ಕೈಗಡಿಯಾರದ ದೊಡ್ಡ ಮುಳ್ಳು ಸುತ್ತುಹಾಕುತ್ತಿದ್ದಿತು. ಒಂದು, ಎರಡು, ಮೂರು....ಹೀಗೆ ತಾಸುಗಳು ಹಲವು ಉರುಳಿದುವು. ಆದರೆ ಅಯ್ಯಂಗಾರರು ಮರಳಿ ಬರಲಿಲ್ಲ. ನಾನು ತಾಸುಗಳನ್ನು ಒಂದೊಂದಾಗಿ ಎಣಿಸುತ್ತಾ ಕುಳಿತಿದ್ದೆ. ಗಂಟೆ ಹನ್ನೆರಡಾದರೂ ಅಯ್ಯಂಗಾರರು ಬರಲಿಲ್ಲ. ಅವರು ಮರಳಿ ಬರುವ ನಂಬಿಕೆಯು ನನಗೆ ಇಲ್ಲವಾಗತೊಡಗಿತು.

ಗಂಟೆ ಒಂದಾಯಿತು. ನಾನು ಅಯ್ಯಂಗಾರರ ದೇಹದ ಕಡೆಗೆ ಕಣ್ಣು ಹೊರಳಿಸಿದೆ. ಅವರು ಈಗ ಕಣ್ದೆರೆದಿದ್ದರು. ನನ್ನ ಎದೆಯು

ಮೇಲಿದ್ದ ಒಂದು ದೊಡ್ಡ ಹೊರೆಯನ್ನು ಇಳಿಸಿದಂತಾಯಿತು. ಇನ್ನೊಂದು ಚಣದಲ್ಲಿ ಅವರು ಮಲಗಿದಲ್ಲಿಂದ ಎದ್ದುಕುಳಿತರು. ಅವರ ತುಟಿಗಳ ಮೇಲೆ ನಗೆಯು ನಿಂಚು ಮೂಡಿತು. "ತುಂಬಾ ಗಾಬರಿಗೊಂಡಿರಾ?" ಎಂದು ಅವರು ನನ್ನನ್ನು ಪ್ರಶ್ನಿಸಿದರು.

"ಆಹುದು, ನೀವು ಮರಳಿ ಬಾರದೆ ಹೋದರೆ ನನ್ನ ಸ್ಥಿತಿಯೇನೆಂದು ನೆನೆದು ನನಗೆ ದಿಗಿಲುಹುಟ್ಟಿತ್ತು."

"ಆದರೆ ದೇಹವನ್ನು ನಾನು ಮರಳಿ ಸೇರುವೆನೆಂದು ಹೇಳಿದ್ದೆನಲ್ಲ!"

"ನಿಜ, ಅಸಾಧ್ಯವೆನಿಸಿದ ಅಮಾನುಷ ಪ್ರಯೋಗ ನಿಮ್ಮದು! ಕಣ್ಣಾರೆ ಕಂಡರೂ ನಂಬಿಕೆ ಹುಟ್ಟದ ಘಟನೆ. ಅದೇಕೆ ಇಷ್ಟೊಂದು ಸಮಯವನ್ನು ತೆಗೆದುಕೊಂಡಿರಿ?"

"ಸೂಕ್ಷ್ಮದೇಹದಲ್ಲಿ ನಾನು ಮಾಡಿದ ಸಂಚಾರವನ್ನು ವಿವರಿಸಬೇಕಾದರೆ ಒಂದೆರಡು ಗುಟಿಗಳು ಬೇಕಾಗುವುವು." ಅಯ್ಯಂಗಾರರು ನುಡಿದರು: "ಪಾಪ, ನೀವು ಹಸಿದೀರಿಹುದ. ನಾವೀಗ ಊಟ ಮಾಡಿಬರೋಣ!"

ಇಬ್ಬರೂ ಮಾಡರ್ನ್ ಹೋಟಿಲಿನ ಹಾದಿಯನ್ನು ಹಿಡಿದೆವು.

× × × ×

ಮೇಜಿನ ಪಕ್ಕದಲ್ಲಿದ್ದ ಸುಖಾಸನದ ಮೇಲೆ ಅಯ್ಯಂಗಾರರ ಮುಂಡಿಸಿದ್ದರು. ಅವರ ಮಂಚದ ಮೇಲೆ, ಹಾಸಿಗೆಯನ್ನು ತಲೆದಿಂಬ ಮಾಡಿ ನಾನು ಮಲಗಿದ್ದೆ. ಇಬ್ಬರ ಕೈಗಳಲ್ಲಿಯೂ ಉರಿಯುತ್ತಿದ್ದ ಸಿಗರೇಟುಗಳಿದ್ದುವು. ಗಾಳಿಯಲ್ಲಿ ಸುರುಳಿ-ಸುರುಳಿಯಾಗಿ ಮೇಲೇರುತ್ತಿದ್ದ ಹೊಗೆಯನ್ನು ಅವರ ಕಣ್ಣುಗಳು ನೋಡುತ್ತಿದ್ದುವು ಅವರು ತಮ್ಮ ಪೂರ್ವದೇಹ ಸಂಚಾರವನ್ನು ವಿವರಿಸತೊಡಗಿದರು: "ನಾನೆನ್ನ ದೇಹ ಬೇರೆ,....ಆತ್ಮ ಬೇರೆ....ಇಚ್ಛೆ ಬಂದಾಗ ಆತ್ಮವು ದೇಹದಿಂದ ಬೇರೆಯಾಗಬಲ್ಲುದು, ಮರಳಿ ಸೇರಬಲ್ಲುದು" ಎಂದು ಏಕಾಗ್ರಚಿತ್ತದಿಂದ ಹತ್ತೇಟು ಸಲ ಜಪಿಸಿದೆ. ಆತ್ಮವು ದೇಹವನ್ನು ಬಿಟ್ಟು ಹೊರ-ಹೊರಡಬೇಕೆಂದು ಸಂಕಲ್ಪಿಸಿ, ಪ್ರಾಣಾಯಾಮವನ್ನು ಮಾಡುವಂತೆ ಉಸಿರನ್ನು ಮೇಲೆಳೆದು ನಿದಾನವಾಗಿ ಉಸಿರು ಬಿಟ್ಟೆನು. ಹೀಗೆ ಹತ್ತೇಟು ಸಲ ಆವರ್ತಿಸಿದ್ದಾಯಿತು. ಕೊನೆಗೆ ನನ್ನ ದೇಹದಿಂದ ಜೀವವು ಬೇರೆಯಾಯಿತು. ನಾನು ಗಾಳಿಯಲ್ಲಿ ತೇಲಾಡಿದೆ. ನನ್ನ ದೇಹವು ಸಡಿಲವಾಗಿ ಕುರ್ಚಿಯ ಮೇಲೆ ಉರುಳಿದುದು ನನ್ನ ಕಣ್ಣುಗಳಿಗೆ ಗೋಚರಿಸಿತು."

"ಜೀವಕ್ಕೆ ಕಣ್ಣುಗಳಿವೆಯೇ?" ನಾನು ಉತ್ಸುಕತೆಯಿಂದ ಪ್ರಶ್ನಿಸಿದೆ. "ಬೇರೊಂದು ಸೂಕ್ಷ್ಮವಾದ ಒಡಲಿದೆಯೇ?"

"ಜೀವಕ್ಕೆ ಹೊದಿಕೆಯಂತಿ ತೆಳುವಾದ ಒಂದು ಮೈ ಇದೆ. ಬೇಕಾದರೆ ಅದನ್ನು ಸೂಕ್ಷ್ಮದೇಹವೆಂದು ಕರೆಯಬಹುದು. ಅದರಿ ಅದಕ್ಕೆ ನನ್ನ ಶರೀರದಂತೆ ಒಂದು ವ್ಯವಸ್ಥಿತವಾದ ಆಕಾರವಿಲ್ಲ. ಜೀವವು ಇಚ್ಛಿಸುವುದಾದರೆ, ತೆಂಗಿನ ಮರಕ್ಕಿಂತ ದೊಡ್ಡ ಆಕಾರವನ್ನು ತಳೆಯಬಲ್ಲುದು ಅಡಿಕೆಯಂತಹ ಸಣ್ಣ ಸ್ವರೂಪವನ್ನೂ ಹೊಂದ್ರಬಲ್ಲುದು. ಉಕ್ಕಿಗಿಂತಲೂ ಹೆಚ್ಚು ಭಾರವಾಗಬಲ್ಲುದು; ಹತ್ತಿಗಿಂತ ಹಗುರವೆನಿಸಬಲ್ಲುದು."

"ಪರಸ್ಪರ ವಿರುದ್ಧವೆನಿಸಿದ ಕಾರ್ಯಗಳನ್ನು ಒಂದೇ ವಸ್ತುವು ಎಸಗಬಲ್ಲುದೇ?" ಅಯ್ಯಂಗಾರರ ನುಡಿಯ ಹೊನಲಿಗೆ ನಾನು ತಡೆಯನ್ನು ತಂದೊಡ್ಡಿದೆ.

"ನಮ್ಮ ಸ್ಥೂಲದೇಹವು ಈ ಲೋಕಕ್ಕೆ ಸಂಬಂಧಿಸಿದುದರಿಂದ ಅದು ಇಳೆಯ ನಿಯಮಗಳಿಗೆ ಬಾಗಬೇಕಾಗುವುದು. ಆದರೆ ಒಳಮೈಯು ಅಂತಹ ಕಟ್ಟುನಿಟ್ಟುಗಳಿಗೆ ಒಳಗಾಗುವುದಿಲ್ಲ. ಅದನ್ನು ಜೀವದ ಇಚ್ಛಾಶಕ್ತಿಯು ಮಾತ್ರ ನಿಯಂತ್ರಿಸುತ್ತದೆ. ನೆಲದಲ್ಲಿಯೆ ಇರಬೇಕೆಂದು ಜೀವವು ಬಯಸುವುದಾದರೆ, ಸೂಕ್ಷ್ಮದೇಹವು ನೆಲದ ಮೇಲೆಯೆ ಉಳಿಯುವುದು. ಬಗಸದಲ್ಲಿ ಹಕ್ಕಿಯಂತೆ ತೇಲಬೇಕೆಂಬುದು ಜೀವದ ಬಯಕೆಯಾದರೆ,—ಆ ದೇಹವು ಗಾಳಿಗಿಂತಲೂ ಹಗುರವೆನಿಸಿ ಬಾನಿನಲ್ಲಿಯೇ ತೇರುವುದು. ಆ ಶರೀರಕ್ಕೆ ನಮ್ಮಂತೆ ಮುಂಭಾಗದಲ್ಲಿಲ್ಲ ಕಣ್ಣುಗಳು, ಶರೀರದ ಎಲ್ಲಾ ಭಾಗಗಳೂ ಕಣ್ಣುಗಳೇ ಎಂದು ಹೇಳಬಹುದು. ಕತ್ತನ್ನು ತಿರುಗಿಸದೆ,—ತಲೆಯನ್ನು ಮೇಲಕ್ಕೆತ್ತದೆ, ಕೊರಳನ್ನು ತಗ್ಗಿಸದೆ,—ಪಾತಾಳಿನ, ಮೇಲೆ ಮತ್ತು ಕೆಳಗಿನ ಎಲ್ಲ ನೋಟಗಳೂ ತೋರಿ ಬರುವುವು. ಗಾಜಿನ ಹಲಗೆಯನ್ನು ದಾಟಿ ಬೆಳಕು ಒಳಗೆ ಹರಿಯುತ್ತೆ, ನೋಟವು ಹೊರಗಿನ ಆವರಣಗಳನ್ನೆಲ್ಲಾ ಭೇದಿಸಿ ಒಳಜೀವದಲ್ಲಿ ಪ್ರತಿಬಿಂಬಿಸುವುದು."

"ನಾನು ಹೊರಗೆ ತೇರುತ್ತಿದ್ದೆ. ಹೊಂಬಿಸಿಲು ಕಳೆಯಾಡುತ್ತಿದ್ದಿತು. ಬಿಸಿಲಿನ ಬಣ್ಣವೇನೆಂದು ಭಾವಿಸಿರುವಿರಿ?" ಅಯ್ಯಂಗಾರರು ತಮ್ಮ ವೃತ್ತಾಂತವನ್ನು ಮುಂದುವರಿಸಿದರು: "ಸೂರ್ಯನ ಕಿರಣಗಳು ಸಪ್ತವರ್ಣದವು ಎಂದು ವಿಜ್ಞಾನಿಗಳು ಹೇಳುತ್ತಾರೆ. ಅದನ್ನು ನಾನು ಪ್ರತ್ಯಕ್ಷವಾಗಿ ಕಂಡೆನು. ಸಮುದ್ರದಲ್ಲಿ ಅಲೆಗಳು ಉಕ್ಕಿ ಬರುವಂತೆ ಕಿರಣಗಳು ಒಂದರ ಹಿಂದೆ ಒಂದು ಬರುತ್ತಿದ್ದುವು; ಇಳೆಯ ಮೇಲೆ ಸಪ್ತವರ್ಣದ ಹಚ್ಚಡವನ್ನು ಹಾಸುತ್ತಿದ್ದುವು. ಭೂಮಾತೆಯು ಎರಚುತ್ತಿದ್ದ ಓಕಳಿಯ ನೀರಂತೆ ಕಿರಣಗಳು ಬೆಳಗುತ್ತಿದ್ದುವು


| | | |
|---|---|---|
| ಮುಸಲ್ಮಾನರ ಆಳಿಕೆ | (ಹಳಪೇಟಿ) | ೦— ೮—೦ |
| ಹತ್ತಿ ಅರಳಿ ಜಂತ್ರಿ | | ೨— ೮—೦ |
| ಚಾಲುಕ್ಯರ ಪುಲಿಕೇಶಿ | | ೧— ೦—೦ |
| ಸಂತಾನ ಶಾಸ್ತ್ರ | | ೧— ೪—೦ |
| ಬ್ರಹ್ಮಚರ್ಯ ಬಲಿಸೃಷ್ಟಿ | | ೦— ೧೦—೦ |
| ಕೌರಾತಾರ್ಜುನೀಯ ಸಾರ | | ೧— ೦—೦ |
| ಮಹಾತ್ಮಾ ಗಾಂಧಿ ಸ್ವ ಚರಿತ್ರ. | | ೧— ೬—೦ |
| ಶರಣ ಪತ್ನಿ | | ೦— ೮—೦ |
| ಕಲಿಶರೆ ಹೀಗೆ ಕಲಿಯಬೇಕು. | | ೦— ೫—೦ |
| ಎಲ್. ಎಲ್. ಬಿ. | | ೦—೧೮—೦ |

ಇದು ಅಲ್ಲದೆ ಶಾಲೆಗೆ ಬೇಕಾಗುವ ಪ್ರತಿಯೊಂದು ಪುಸ್ತಕ ನಮ್ಮಲ್ಲಿ ಸಿಗುವುದು ಬೇಕಾದರೆ ಬರೆಯಿರಿ

**ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ.**

ಹೆಜ್ಜೆಹೆಜ್ಜೆಗಳಿಗೂ ನುಗ್ಗೆಜ್ಜುಗಳ ಕಮಾನುಗಳನ್ನು ಬಾಟಜೇಕಾಗುತ್ತಿದ್ದಿತು. ನಾನು ಸಕ್ಕದ ತಳಿಗೊಳವನ್ನು ನೋಡಿದೆ. ಕಿರಣಗಳು ಕಮ್ಮು ನೀರನ್ನು ಮುತ್ತಿಡುತ್ತಿದ್ದುವು. ಬಂಗದಿರನು ಕಳುಹಿ ಕಟ್ಟಿದ ಒಣ್ಣಂಡಿಗೆಯನ್ನು ಕಿರಣಗಳು ಒಲವೇವಿಗೆ ಉಡುಗೊರೆ ಕೊಡುತ್ತಿರುವಂತೆ ನನಗೆ ಭಾಸವಾಯಿತು. ಎಷ್ಟವಣ ಗಳು ನೀರಲ್ಲಿ ಕರಗುತ್ತಿದ್ದುವು. ನಿವಂತ್ಯ ಉಚಿತವಾದ ತಳಿಗೆಯನ್ನು ಹಿಡಿದು ಭೂರಮೆಯು ಇವನಿಗೆ ಆರತಿಯೆತ್ತುತ್ತಿರುವಂತೆ ಕೆಳಪು ತೋರುತ್ತಿದ್ದಿತು. ಆ ದೃಶ್ಯವನ್ನು ನಿವರಿಸಲು ನಂಗೆ ನುಡಿಗಳು ನಲುಕವು. ಎಸೊಬಗು-ಪಮಣೀಯತೆಗಳನ್ನು ನನ್ನ ಜೀವವಿರುವ ತನಕ ನಾನು ನಿಸ್ಮರಿಸೆನು. ನನ್ನ ಜೀವವು ಈ ದೃಶ್ಯವನ್ನು ಕಂಡು ಹರ್ಷಿಸಿ ಒಲವಿನ ಕಡಲಲ್ಲಿ ತೇಲಿತು.....

"ನೀರಿನಲ್ಲಿ ಬಿಂಬಿಸಿದ ಕಿರಣ ಸೂರಾರು ಮುಳಿಬಿಲ್ಲುಗಳಾಗಿದ್ದುವು. ಆ ಮನೋಹರ ನೋಟವನ್ನೇ ನೆಟ್ಟಿಸುವುದರಲ್ಲಿ ಮಗ್ನವಾಗಿತ್ತು ನನ್ನ ಜೀವ. ಅನಂತರ ಸುತ್ತಲೂ ನನ್ನ ದೃಷ್ಟಿಯನ್ನು ಹರಡಿದೆ. ನನ್ನಂತೆಯೆ ಬಾನಿನಲ್ಲಿ ಬಿಂಬಿಸಿದ್ದ ನೂರಾರು ಜೀವಗಳು ಜೋರಿಬಂದುವು. ನಾನು ಅವುಗಳ ಕೆಲವನ್ನು ಸೃಷ್ಟಿಸಿದೆ. ಅವು ಕಮ್ಮ ತಮ್ಮ ಇಚ್ಛೆಗಳಂತೆ ವಿವಿಧಾಕೃತಿಗಳ ತಳೆದಿದ್ದುವು. ಕೆಲವು ಕೌಂಗುಮರದಷ್ಟು ಉದ್ದವಾದರೆ, ಇನ್ನು ಹಲವು ತುಂಬೆ ಗಿಡದಷ್ಟು ಕಿರಿಯವು! ಬಣ್ಣ ಬಣ್ಣವಾಗಿ ತೋರಿ ಬಂದ ಇನ್ನು ಹಲವು ಕಡ್ಡಿಯನ್ನು ತೆಳ್ಳಗಿನವು! ಅವುಗಳ ಆಕಾರ-ವೈವಿಧ್ಯ ನನ್ನನ್ನು ಬೆಗುಗೊಳಿಸಿತು. ಕೆಲ ಜೀವಗಳನ್ನು ಬೆಸನದ ಹುಳುಗಳಿಗೆ ಹೋಲಿಸಿದ್ದುವು. ಹಲವು ಜೀವಗಳು ಆಸೆ ಆಕಾಂಕ್ಷೆಗಳ ತೊಡರುಗಳಿಗೆ ಒಳಗಾಗಿದ್ದವು. ಇನ್ನು ಕೆಲವುಗಳನ್ನು ರಾಗ-ದ್ವೇಷಗಳ ಸಂಕೋಲೆಗಳು ಬಂಧಿಸಿದ್ದುವು. ಈ ಜೀವಗಳು ಸ್ವತಂತ್ರಗಳಲ್ಲ. ಆಸೆ-ಆಕಾಂಕ್ಷೆ, ರಾಗ-ದ್ವೇಷಗಳ ಸರಪಳಿಗಳು ಅವುಗಳನ್ನು ಈ ಲೋಕಕ್ಕೆ ಕಟ್ಟಿದ್ದುವೆಂಬುದು ಅರಿವಣದಲ್ಲಿನನಗೆ ಅರಿವಾಯಿತು. ಅವುಗಳನ್ನು ಕಂಡು ನನಗೆ ಸೋಜಿಗವೆನಿಸಿತು; ವಿಗಿಲಾಯಿತು.

"ತಮ್ಮ ಲೋಕಕ್ಕೆ ಬಂದ ಹೊಸ ಪ್ರಜೆಯೊಬ್ಬನು ನಾನೆಂದು ಬಗೆದು, ಆ ಜೀವಗಳು ನನ್ನನ್ನು ಕೈಮಾಡಿ ಕರೆದುವು. ಬಲವು ನನ್ನ ಸನಿಹಕ್ಕೆ ಬಂದುವು "ಏನು ಮುದ್ದಾದ ಪ್ರಪಂಚವನ್ನು ಬಿಟ್ಟು ಬಂದೆಯಾ?" "ಹೊನ್ನ ರಾಶಿಯನ್ನು ತ್ಯಜಿಸಿ ಬಂದೆಯಾ?" "ಹೆಗಲ ಕಾರಿಯ ಇರಿತಕ್ಕೆ ಒಳಗಾದೆಯಾ?" ಹೀಗೆ ಎಷ್ಟಾರು ಪ್ರಶ್ನೆಗಳ ಬಾಣಗಳನ್ನು ನಾನು ಇದಿರಿಸಬೇಕಾಗಿ ಬಂತು. ನನ್ನ ಮೇಲೆ ಕೆಳಗೆ, ಎಡಬಲ, ಎಲ್ಲೆಡೆಗಳಲ್ಲಿಯೂ ಈ ಜೀವಗಳು ನಿಂತು ಹಲ್ಲು ಕಿರಿಯುತ್ತಿದ್ದುವು. "ಏನೋ ಪರಿ ತಪ್ಪಿ ಬಂದೆ; ನೀವು ಯಾರು?" ಎಂದು ನಾನು ನುಡಿದೆ.

"ನಾವೆಲ್ಲರೂ ಮನುಷ್ಯರಾಗಿದ್ದವರು; ಒಮ್ಮೆ ಬಾಳಿದವರು!" ಹತ್ತಾರು ಜೀವಗಳು ಏಕಕಾಲದಲ್ಲಿ ಕಿರಿಚಿದುವು.

"ನೀನು ಹೊಸಬ, ಅದುದರಿಂದ ನಿನಗೆ ದಿಗಿಲಾಗುವುದು ಸಹಜ. ನಾಲ್ಕಾರು ದಿನಗಳಲ್ಲಿ ನಮ್ಮ ಲೋಕವು ನಿನಗೆ ಒಗ್ಗುವುದು ಇಲ್ಲಿ ಯಾವ ತೊಂದರೆಯೂ ಇಲ್ಲ!"

"ಭಂಡಾಳಿಗರ ಕಿರುಕುಳಗಳಿಲ್ಲ. ಇಲ್ಲಿ ಎಲ್ಲರೂ ಸರಿಸಮಾನರು!" ಎಂದಿತು ಒಂದು ಸಾಮ್ಯವಾದಿಯ ಜೀವ

"ಇಲ್ಲಿ ರಾಜರ, ಅರಸರ ಪುತ್ತು ಸರಕಾರಗಳ ಗೊಂದಲವಿಲ್ಲ!" ಎಂದಿತು ಅರಾಜಕವಾದಿಯ ಜೀವ.

"ದೇಗುಲ, ಗುಡಿ-ಗುಂಡಾರ, ಮಸೀದಿ, ಇಗರ್ಜಿ, ಪುರೋಹಿತ ವರ್ಗ, ಜಾತಿ-ಮತಗಳು, ಮೊದಲಾದ ಗೋಡೆಗಳು ನಮಗೆ ಅಡ್ಡ ನಿಂತಿಲ್ಲ, ಪ್ರತಿಯೊಂದು ಜೀವಕ್ಕೂ ಪೂರ್ಣ ಸ್ವಾತಂತ್ರ್ಯವಿದೆ." ಎಂದಿತು ವ್ಯಕ್ತಿಸ್ವಾತಂತ್ರ್ಯವಾದಿಯ ಪ್ರಾಣ.

ಹಿಗೆ ಜೀವಗಳೆಲ್ಲ ಒಂದಾಗಿ ಪ್ರೇತಲೋಕದ ನಾಡಿನ ಸೊಬಗು, ಸ್ವಾತಂತ್ರ್ಯಗಳನ್ನು ಬಣ್ಣಿಸುವುದರಲ್ಲಿ ನಿರತವಾಗಿದ್ದುವು. ಅವುಗಳ ಅಂಚುವಿಕೆಯಿಂದ ನನಗೆ ಉಸಿರುಕಟ್ಟುವಂತಾಗಿದ್ದಿತು. ನನಗೆ ಅವುಗಳ ಒಡನಾಟ ಬೇಕಾಗಿರಲಿಲ್ಲ. ಆದುದರಿಂದ ನಾನು ಹೇಳಿದೆ: "ನನ್ನನ್ನು ನನ್ನ ಪಾಡಿಗೆ ಬಿಡಿ. ಈ ಸ್ವಾತಂತ್ರ್ಯವನ್ನು ದಯಪಾಲಿಸಿ!"

"ಬಿಡಿರೋ ಪಾಪ, ಹೊಸ ಜೀವ. ಈಗ ತಾನೇ ನೆಲದಿಂದ ಬಂದಿದೆ; ತುಂಬಾ ಗಡಿಬಿಡಿಯಲ್ಲಿದೆ. ಇನ್ನೆರಡು ದಿನ ಕಳೆದರೆ,—ಎಲ್ಲಾ ಸಂಗತಿಗಳೂ ತೀಯುವುವು." ಎಂದು ಕೂಗಿ ಹೇಳಿತು ಒಂದು ಜೀವ.

"ಸರಿ ಮನಸ್ಸು ತುಂಬಾ ಗೊಂದಲದಲ್ಲಿದೆ. ಸ್ವಲ್ಪ ದಿನ ಒಂಟಿಯಾಗಿರಲಿ" ಎಂದು ಹೇಳಿ ಹೊರಟಿತು ಇತರ ಜೀವಗಳ ತಂಡ.

ನಾನು ಒಬ್ಬನೇ ಆದೆ. ಆವರೆ ಒಂದು ಜೀವ ಮಾತ್ರ ಕಡಲದೆ ನನ್ನ ಬಳಿಯಲ್ಲಿಯೆ ಉಳಿದಿತ್ತು. ನಾನು ಅದರ ಕಡೆಗೆ ನೋಟವನ್ನು ಹೊರಳಿಸಿದೆ. ಅದು ಒಂದು ಹೆಣ್ಣುಜೀವವೆಂದು ನನಗೆ ಅರಿವಾಯಿತು. ನನಗೂ ಪ್ರೇತರಾಜ್ಯದ ತುರು ಪರಿಚಯವನ್ನು ಸಂಪಾದಿಸಬೇಕೆಂದೆನಿಸಿತು ನನ್ನ ಬಳಿಯಲ್ಲಿದ್ದುದು ಒಂದೇ ಜೀವವಾಗಿದ್ದುದರಿಂದ ನನಗೂ ತುಸ ಧೈರ್ಯ ಬಂದಿತು "ನಿಮ್ಮ ರಾಜ್ಯದಲ್ಲಿ ಗಂಡು-ಹೆಣ್ಣುಗಳೆಂಬ ವ್ಯತ್ಯಾಸವಿದಯಿಲ್ಲವೇ?" ಎಂಬ ಪ್ರಶ್ನೆ ನನ್ನ ಕೊರಳಿಂದ ಹೊರಟಿತು.

"ಇದೆ, ಒಂದೇ ವರ್ಗವಾದರೆ ತುಂಬಾ ಬೇಸರು; ಆದುದರಿಂದ ಗಂಡು-ಹೆಣ್ಣುಗಳೆಂಬ ಭೇದವನ್ನು ಏರ್ಪಡಿಸಿಕೊಂಡಿದ್ದೇವೆ."

"ಎಂದರೆ ಗಂಡು-ಹೆಣ್ಣೇಯಾ ಸೃಷ್ಟಿಯ ನಿಯಮಕ್ಕೆ ಒಳಪಟ್ಟಿದ್ದಿಲ್ಲವೆ?" ಆ ಹೆಣ್ಣುಜೀವದ ಮಾತಿನ ಮರ್ಮವನ್ನರಿಯಬೆ ನಾನು ಪ್ರಶ್ನಿಸಿದೆ.

"ಇಲ್ಲಿ ಗಂಡು ಹೆಣ್ಣಾಗಬಹುದು; ಹೆಣ್ಣು ಗಂಡಾಗಬಹುದು. ಇಲ್ಲಿ ಇಚ್ಛಾಶಕ್ತಿಯೇ ಪ್ರಾಧಾನ್ಯವಾದುದು. ಆದುದರಿಂದ ನಾನು ಗಂಡಾಗಬೇಕೆಂದು ಏಯಸಿದರೆ ಗಂಡಾಗಬಲ್ಲೆ. ಹಿಂದೆ ಒಮ್ಮೆಕಾಲ ಗಂಡಾಗಿಯೇ ಇದ್ದೆ."

"ಭೂಮಿಯಲ್ಲಿ ಸತ್ತವರೆಲ್ಲರೂ ನಿಮ್ಮ ಲೋಕಕ್ಕೆ ಬರುತ್ತಾರೆಯೆ?"

"ಇಲ್ಲ." ಆ ಜೀವವು ತಲೆಯಲ್ಲಾಡಿಸಿತು "ನೂರರಲ್ಲಿ ಒಬ್ಬ ಇಲ್ಲಿಗೆ ಬಾರದೆ ಹೋಗುತ್ತಾನೆ. ಇತರರು ಕೆಲ ಕಾಲ ಇಲ್ಲಿ ಇದ್ದೇ ಮುಂದೆ ತೇಲುತ್ತಾರೆ

"ಇಲ್ಲಿರುವುದೇಕೆ? ಮುಂತೆರಳುವುದೆಲ್ಲಿಗೆ?" ಎಂದು ನಾನು ಪ್ರಶ್ನಿಸಿದೆ.

"ಇಲ್ಲಿ ಕೆಲಕಾಲವಿದ್ದರೆ ನಿನಗೂ ಜೀವನರಹಸ್ಯ ಅರಿವಾಗುವುದು." ಆ ಪ್ರೇತದ ತುಟಿಗಳ ಮೇಲೆ ಎಳನಗೆಯ ಕಳೆಯಾಡಿತು; "ಜೀವವು ಅನಂತಶಕ್ತಿಯುಳ್ಳದು. ಆದರೆ ಚೈತನ್ಯದ ಅರಿವು ಜೀವಕ್ಕಿಲ್ಲ. ಆ ಪೂರ್ಣಚೇತನವನ್ನು ಅಳವಡಿಸಿಕೊಳ್ಳುವುದೇ ಜೀವನದ ಗುರಿ. ಇದನ್ನು ತಿಳಿಯದುದರಿಂದಲೇ ಮನುಷ್ಯನು ತನ್ನ ಬಾಳನ್ನು ಹಾಳಾಗಿಸುವನು; ತನ್ನ ದಾರಿಯಲ್ಲಿ ಕಲ್ಲು-ಮುಳ್ಳುಗಳನ್ನು ತುಂಬಿಕೊಳ್ಳುವನು. ಅವನ ಆಸೆ ಆಕಾಂಕ್ಷೆಗಳು, ರಾಗ-ದ್ವೇಷಗಳು, ಅವನ ಜೀವನವನ್ನು ಕೆಲುಬಿಸುತ್ತವೆ. ತನ್ನ ಜೀವಮಾನದಲ್ಲಿ ಅವುಗಳನ್ನು ತೊಡೆದುಹಾಕದಿದ್ದರೆ ಅವನು ಇಲ್ಲಿಗೆ ಬರಬೇಕಾಗುವುದು."

"ಸೃಷ್ಟಿ, ಕೊನೆಗೊಳ್ಳುವ ವರೆಗೆ ಈ ಪ್ರೇತಗಳ ನಾಡಿನಲ್ಲಿ ಅವನು ಅಲೆಯುತ್ತಿರುವುದೇ"

"ಇಲ್ಲಿ ನಮ್ಮ ಜೀವಗಳನ್ನು ಹಂಬಲುಗಳು ತೊಡಕಿಸಿವೆ; ಅನ್ಯ ತಪ್ಪುವನಕ ನಾವು ಇಲ್ಲಿಯೇ ಅಲೆಯಬೇಕಾಗುವುದು ನಮ್ಮ ಅನುಭವಗಳಿಂದ ಜೀವ ಮಾಗಬೇಕು; ಪರಿವಕ್ವವಾಗಬೇಕು ಆಗ ಹೊಸ ಬಾಳುವೆಯನ್ನು ಆರಂಭಿಸಲು ಇನ್ನೊಂದು ಲೋಕಕ್ಕೆ ತೆರಳುವೆವು."

"ಇಲ್ಲಿ ನೀವು ಸರ್ವಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೀರಲ್ಲ! ಇಲ್ಲಿ ಸಂಕಟಗಳಿಗೆ ಎಡೆ ಇಡೆಯೆ?"

"ಅದೇ ಇಲ್ಲಿಯ ಒಗಟು." ಪ್ರೇತವು ವಿಕಟವಾಗಿ ನಕ್ಕಿತು: "ನಮಗೆ ಹೇಳುವವರು ಮತ್ತು ಕೇಳುವವರು ಯಾರೂ ಇಲ್ಲ; ಆದರೆ ನಾವು ಸ್ವತಂತ್ರರಲ್ಲ. ಇಳೆಯ ಮಾನವರಂತೆ ನಮಗೆ ಹಸಿವೆಯಿಲ್ಲ; ತೃಷೆಯಿದೆ. ಆದರೆ ಹಸಿವು-ನೀರಡಿಕೆಗಳನ್ನು ಆರಿಸಲು ಯಾವ ಸಾಧನವೂ ಮೊರಕದು. ಒಂದು ಅಗಳು ಅನ್ನವನ್ನಾಗಲಿ ಒಂದು ತೊಟ್ಟು ನೀರನ್ನಾಗಲಿ ಪಡೆದುಕೊಳ್ಳಲು ಸಾಧ್ಯವಿಲ್ಲ. ಆದರೆ ಹಸಿವು-ನೀರಡಿಕೆಗಳು ನಮ್ಮ ಜೀವವನ್ನು ಇಲ್ಲವಾಗಿಸವು. ವಿಷಯ ಸುಜ್ಞಾನಜವವು ನಮ್ಮ ಕೈಗಳಿಗೆ ನಿಲುಕದ ಹಣ್ಣು ಆದರೆ ನಮ್ಮ ಎದೆಗಳಲ್ಲಿ ಕಾಸುಕ್ಕೆಯ್ಲೆಯು ಕೊಂಡವಂತೆ ಸುಡುತ್ತಲಿರುತ್ತವೆ; ದ್ವೇಷವು ನಮ್ಮ ಎದೆಗಳನ್ನು ಸೀಳುತ್ತಲಿರುತ್ತದೆ. ಈ ವೇದನೆಗಳನ್ನು ಹಗಲು ರಾತ್ರಿ ನಾವು ಅನುಭವಿಸುತ್ತಿರುವೆವು ಮಡಿಲಲ್ಲಿ ಇಟ್ಟುಕೊಂಡ ಕೆಂಡವಂತೆ ಇವು ಸನಾತನಕಾಲವು ನಮ್ಮನ್ನು ಸುಡುತ್ತಲಿರುತ್ತವೆ."

"ಈ ಕುದಿತಗಳಿಗೆ ಪರಿಹಾರವಿಲ್ಲವೇ?" ನಾನು ಉತ್ಸುಕತೆಯಿಂದ ಪ್ರಶ್ನಿಸಿದೆ.

"ಪರಿಹಾರವಿದೆ. ಆದರೆ ಅದು ಜೀವಗಳ ಸಂಸ್ಕಾರವನ್ನು ಹೊಂದಿಕೊಂಡಿದೆ ತಮ್ಮ ಆಕಾಂಕ್ಷೆಗಳು ಬಹು ನಿಸ್ಸಾರವಾದುವು ಎಂಬ ಅನುಭವವು ಜೀವನಿಗಾದರೆ—ಆಗ ಈ ಸೆರೆ ತಪ್ಪುವುದು. ಪ್ರಪಂಚದ ಬಯಕೆ-ಹಂಬಲುಗಳಿಗಿಂತ ಹಿರಿಯದಾವ ಬದುಕೊಂದಿದೆ ಎಂಬುದು ಹೃದಯಗತವಾಗಬೇಕು. ಆಗ ನಮ್ಮ ದೃಷ್ಟಿಯು ಚಿಗುರುವುದು. ನಮ್ಮ ಜೀವನದ ಯಥಾರ್ಥ ಸ್ವರೂಪವು ಅರಿವಾಗುವುದು. ಆಗ ಜೀವಗಳು ಈ ಸರಪಳಿಗಳನ್ನು ಹರಿದೊಗೆದು, ದೂರದ ಲೋಕಕ್ಕೆ, ಎಂದರೆ ಮಂಗಳಗೃಹಕ್ಕೆ ನವಜೀವನವನ್ನು ಆರಂಭಿಸಲು ತೆರಳುವವು."

"ಈ ವಿವರಗಳನ್ನು ಅರುಹಿದುದು ಹಿರಿಯ ಉಪಕಾರವಾಯಿತು" ಎಂದೆ ನಾನು.

"ಉಪಕಾರವೆಂಬ ಶಬ್ದವನ್ನು ನಾವು ಬಳಸುವುದಿಲ್ಲ; ಅದರ ಉಪಯೋಗ ನೆಲವಲ್ಲಿ."

\+ \+ \+ \+

"ನಾನು ಪೇಪರು ಗಾದಿಯನ್ನು ಹಿಡಿದು ಬೀದಿಯ ಜನರಿಂದ ನಿಬಿಡವಾಗಿತ್ತು." ಆಯು ಎಂಗಾರ್ ವಾಗಳು ಮುಂದುವರಿದುದು: "ಅವರನ್ನು ಬಿಟ್ಟುಸಿದುದಾಯಿತು. ಅವರ ದೇಹಗಳನ್ನು ಮಾತ್ರವಲ್ಲ ನಾನು ನೋಡಿದ್ದು. ನನ್ನ ದೃಷ್ಟಿಗಳು [illegible] ದೇಹಗಳೊಳಗೆ ಸ್ಪರ್ಶಿಸಿದುವು. ಅವರ ಮೆದುಳು, ಶಾಸಕೋಶ, ಹೃದಯ, ರಕ್ತನಾಳಗಳು, ರಕ್ತಪರಿಚಲನೆ, ಎಲುಬುಗಳು ಇವುಗಳೆಲ್ಲಾ ನನ್ನ ನೋಟಕ್ಕೆ ಕಾಣಿಸಿಕೊಂಡವು. ಕೆಲವರ ಮೆದುಳಿನಲ್ಲಿ ಕಪ್ಪಿಟ್ಟಾಗ ಹುಟ್ಟುವಂತೆ ವಿಚಾರತರಂಗಗಳು ಜನರ ಮೆದುಳಿನಲ್ಲಿ ಮಿಂಚುತ್ತಿದ್ದುದು; ಕೆಲವರಲ್ಲಿ ಸಣ್ಣಗಳಲ್ಲಿ ಓಡಾಡುತ್ತಿದ್ದುವು ಅನೇಕ ಮನುಷ್ಯರ ಅಂತರಾಳಗಳಲ್ಲಿ ಸಣ್ಣಿನ ನಿಗೂಢ ಭಾವನೆಗಳು ಬಿರುಗಾಳಿಯಲ್ಲಿ ಬಿರುಗಾಳಿಯ ತಾಂಡವಗಳಂತೆ ನರ್ತಿಸುತ್ತಿದ್ದುವು. ಸುಸ್ತಾಜಿ ಕನಸಲ್ಲಿ ಬಿದ್ದ ತುತ್ತಿನ ಹಲವು ಅವಿವಿಕ್ತ ಭಾವನೆಗಳನ್ನು ನಾನು ನೋಡಿದೆ. ಕೆಲವು ಮನುಷ್ಯರು ಪಶುಪ್ರಾಣಿಗಳೊಡನೆ ನಿಗೂಢ ವೆಸಗುವ ಕೊರಿಕೆಯು ತನ್ನ ಕಣ್ಣುಗಳಲ್ಲಿ ನಿಲಿಸಿತು. ತಮ್ಮ ಕಬ್ಬುಗಳನ್ನು ಸಕಲ ಮನುಷ್ಯರು ಹಲವು ತರಹದಲ್ಲಿ ಮಾಡುತ್ತಿರುವ ಈ ವಿವಿಧ ಭಾವನೆಗಳು ಮನುಷ್ಯನು ನಿರ್ಮಿಸಿದ ಸಭ್ಯಾಚಾರಾಂಬೋಧವು ತುಳಿಯುತ್ತಿರುವ ಪೊಳ್ಳು ಅವುಗಳನ್ನು ಸುಪ್ತಚೇತನವು ಕಗ್ಗವಿಯಲ್ಲಿ ಸೆರೆಯಿಡಿದಿತ್ತು."

"ಪ್ರತಿಯೊಬ್ಬ ಮನುಷ್ಯನ ಭಾವನೆಗಳನ್ನೂ, ಬದುಕನ್ನೂ ವೃತ್ತಪತ್ರಿಕೆಗಳನ್ನು ಒರೆಸಿದ್ದಿಗಳನ್ನು ತಿಳಿದುಕೊಳ್ಳುವಷ್ಟು ಸುಲಭವಾಗಿ ಅರಿತುಕೊಳ್ಳಬಹುದು. ಸುಸಂಸ್ಕೃತಿಗಳಿಗೆ ಒಳಗಾದವನ ಮೆದುಳು ತುಂಬಾ ಸೂಕ್ಷ್ಮವಾಗಿರುತ್ತದೆ. ಬಿರುಗಾಳಿಗೆ ಒಳಗಾದ ಸಾಗರವು ತೆರೆಗಳಿಂದ ಅಲ್ಲೋಲಕಲ್ಲೋಲವಾಗುವಂತೆ, ಚಿತ್ತದಲ್ಲಿ ವಿಚಾರತರಂಗಗಳು ಹೊಯ್ದಾಡುತ್ತಿರುತ್ತವೆ. ಮೆದುಳಿಗೆ ಹೆತ್ತಿದ ಉರಿಯನ್ನು ಅರಿಸಲೋಸುಗ ಹೃದಯದಿಂದ ರಕ್ತವು ಮೆದುಳಿನ ಕಡೆಗೆ ಧಾವಿಸುತ್ತಲಿರುತ್ತದೆ ಆಗ ಇತರ ಅಂಗಾಂಗಗಳಿಗೆ ಅಗತ್ಯವೆನಿಸಿದ ರಕ್ತವು ದೊರಕದು ಅನ್ನ ಪೋಷಕಾಂಗಗಳಿಲ್ಲದುದರಿಂದ ಕುಂದುತ್ತವೆ. ಆಗ ಹುರುಪು ಇಲ್ಲವಾಗುವುದು ನೈಮೆಗಳಲ್ಲಿ ಅಸಡ್ಡೆಯು ತೋರುವುದು. ಇದಕ್ಕೆ ಕೆಲ ಸಮಯದಲ್ಲಿಯೆ ಆ ಮನುಷ್ಯನು ತನ್ನ ಸ್ವಾಭಾವಿಕವಾದ ಚೈತನ್ಯವನ್ನು ಕಳೆದುಕೊಳ್ಳುವನು....

ದಾರಿಯಲ್ಲಿ ಹೆಜ್ಜೆಗಳನ್ನು ಇರಿಸುತ್ತಿದ್ದ ಒಬ್ಬ ಕಲೋವಾಸಿಯನ್ನು ನಾನು ನೋಡಿದೆ ಅವನ ಜೊಲುವುನೈಮೆಗಳಿಗೆ ಸಂಭವಿಸಿಯನ್ನು ಈಯುತ್ತಿದ್ದ ಕಾರಣವನ್ನರಿಯಲು ನನಗೆ ಬಯಕೆಯಾಯಿತು. ಅವನ ಮೆದುಳಿನ ಎಲ್ಲಾ ನನ್ನ ನೋಟವನ್ನು ಹೊರಳಿಸಿದೆ. ಅವನ ಬುದ್ಧಿಯು ತೀಕ್ಷ್ಣವಾದುದಲ್ಲ; ಆದರೆ ಅವನ ಸುಪ್ತಚೇತನವು ಅಪಾರವಾದುದು. ಕಡಲಲ್ಲಿ ಮೂಡಿ ಮುಂದೆ ಹಾಯುತ್ತಿರುವ ಅಲೆಗಳಂತೆ ಎಣಿಸಲಾಗದಷ್ಟು ಭಾವತರಂಗಗಳು ಅವನ ಸುಪ್ತಚೇತನ

ದಲ್ಲಿ ಮೂಡುತ್ತಿದ್ದುವು. ಕೆಲವು ಬಿಸಿಲಕಿರಣಗಳಂತೆ ಪ್ರಕಾಶಮಾನವಾದುವು. ಇನ್ನು ಹಲವು ಹೇಯವಾದುವು; ನಾವು ಆಲೋಚಿಸಲು ಸಹ ಸಂಕೋಚಪಡುವಷ್ಟು ಅಶ್ಲೀಲವಾದುವು. ಆದರೆ ಅವನ ಮನಸ್ಸು ಕುಶಲನಾದ ಸೊನ್ನಗಾರನಂತೆ ದುಡಿಯುತ್ತಿದ್ದಿತು. ಅದು ಸುಪ್ತ-ಚೇತನದಲ್ಲಿ ಮೂಡಿದ್ದ ಭಾವನೆಗಳನ್ನೆಲ್ಲಾ ಆರಿಸಿ ತೆಗೆದು ಅವುಗಳಿಗೆ ಪನ್ನ ಕುಂಚದಿಂದ ವಿವಿಧ ಬಣ್ಣಗಳನ್ನು ಬಳಿಯುತ್ತಿದ್ದಿತು. ಹೊಸ ಕಚ್ಚಗಳಲ್ಲಿ ಎರಕ ಹೊಯ್ಯುತ್ತಿದ್ದಿತು. ಅವನ ಅಂತರಾಳದ ಉಚ್ಚ-ನೀಚ ಭಾವಗಳೆಲ್ಲಾ ಸುಂದರ ಕಲಾಕೃತಿಗಳಾಗಿ ನವರೂಪಗಳನ್ನು ತಳೆಯುತ್ತಿದ್ದುವು. ಮಾವುತನು ಒಂಟಿಗ ಆನೆಯನ್ನು ಪಳಗಿಸುವಂತೆ ಸಂಸ್ಕಾರಯುಕ್ತವಾದ ಅವನ ಚಿತ್ತವು ಸುಪ್ತಚೇತನದಲ್ಲಿ ಹುದುಗಿದ್ದ ಅಶ್ಲೀಲಭಾವನೆಗಳನ್ನು ಬಾಗಿಸುತ್ತಿದ್ದಿತು. ಆಗ ಅವನ ಕಲೆಯ ಮೂಲವಾವುದೆಂಬುದು ನನಗೆ ಅರಿವಾಯಿತು."

+ + +

"ಈಗ ದಾರಿಯಲ್ಲಿ ಸಾಗುತ್ತಿರುವ ಬರುತ್ತಿದ್ದ. ಒಂದು ನೋಟದಿಂದಲೇ ಆತ ಹೆಸರಾಂತ ಕೇಡಿಗನೆಂಬುದು ನನಗೆ ತಿಳಿಯಿತು. ಆತನ ಹೆಸರನ್ನು ಕೇಳಿದ ಮಾತ್ರದಿಂದಲೆ ಜನರು ಅಂಜಿಕೆಯಿಂದ ತಲ್ಲಣಿಸುತ್ತಿದ್ದರು. ಕೇಳ್ಮೆಗಳಲ್ಲಿ ಆತನನ್ನು ಪ್ರೇರಿಸುತ್ತಿದ್ದ ಶಕ್ತಿ ಯಾವುದೆಂದು ಅರಿಯಲು ನಾನು ಅವನ ಮನಸ್ಸಿನಲ್ಲಿ ಇಣಿಕಿ ನೋಡಿದೆ. ಅವನ ಮೆದುಳಿಗೂ, ನಾನು ಮೊದಲು ಕಂಡ ಕಲೋಪಾಸಿಯ ಮೆದುಳಿಗೂ ಹೆಚ್ಚಿನ ಅಂತರವಿಲ್ಲ ಕೇಡಿಗನಲ್ಲಿಯೂ ಉಚ್ಚ-ನೀಚ ಭಾವನೆಗಳಿದ್ದುವು. ಆದರೆ ಆತನ ಚಿತ್ತವು ಸಂಸ್ಕಾರಯುಕ್ತವಾದುದಲ್ಲ. ನುರಿತ ಲೋಹಕಾರನ ಕೈವಾದನಲ್ಲ ಅದರ ಎಸಕಗಳು. ಒಳಗಿನ ಭಾವನೆಗಳೆಲ್ಲ ಮನಸ್ಸಿನಲ್ಲಿ ಬಿಂಬಿಸುತ್ತಿದ್ದುವು. ಅವು ಕೃತಿಗಳ ಆಕೃತಿಯನ್ನು ತಳೆಯುತ್ತಿದ್ದುವು ಅವನ ಚಿತ್ತವು ಮಪ್ಪಾನೆಯನ್ನು ಪಳಗಿಸುವ ಮಾಹುತನ ಕಜ್ಜವನ್ನು ಎಸಗುತ್ತಿರಲಿಲ್ಲ. ಆದುದರಿಂದಲೇ ಜನರಿಗೆ ಉಪದ್ರವಕಾರಿಯಾದ ಕಾರ್ಯಗಳು ಆತನಿಂದ ಜರುಗುತ್ತಿದ್ದುವು."

"ಬೀದಿಯಲ್ಲಿ ದೇಶಭಕ್ತರೆನಿಸಿದ ರಾಜಕೀಯ ಮುಂದಾಳುಗಳು ಮಿಂದು ಬರುತ್ತಿದ್ದರು. ಅವರು ಜನತೆಯ ಸ್ನೇಹಾದರಗಳನ್ನು ಸಂಪಾದಿಸಿದ ಜನಸ್ತಿಯರು. ಆವ ಉದಾತ್ತ ಭಾವಗಳ, ಅವರನ್ನು ಜನಸೇವೆಗೆ ಪ್ರೇರಿಸಿದುವೆಂಬುದನ್ನು ಅರಿಯಲು ನಾನು ಪವಣಿಸಿದೆ ನನ್ನ ಬುದ್ಧಿಯು ತೀಕ್ಷ್ಣವಾದುದಾಗಿದ್ದಿತು. ಬುದ್ಧಿಯ ಅಡಿಯಲ್ಲಿದ್ದ ಮನಸ್ಸಿನೊಳಗೆ ನನ್ನ ದಿಟ್ಟಿಯನ್ನು ಚಾಲಿಸಿದೆ ಅಲ್ಲಿ ಉದಾತ್ತ ಭಾವನೆಗಳು ನೆಲೆಗೊಂಡಿದ್ದುವೇ? ಜನತಾಸೇವೆಗಾಗಿ ಬಾಳುವೆಯನ್ನು ತ್ಯಾಗಮಾಡಿಸಿದ್ದ ಆ ಹೃದಯದಲ್ಲಿ ದಿವ್ಯಭಾವಗಳು ವಿಜೃಂಭಿಸುತ್ತಿದ್ದುವೆ? ಆ ದಿವ್ಯರೂಪುಗಳು ಸುಳಿವ ಆಲ್ಲಿರಲಿಲ್ಲ. ಅತಿಕಾಂಕ್ಷೆ, ಕೀರ್ತಿಯ ಬಲೆಗಳು ಅಲ್ಲಿ ನೆಲೆಸಿದ್ದುವು. ಜನತಾಸೇವೆಯಲ್ಲಿ ಪ್ರವೃತ್ತಿಯಿಲ್ಲ ಕಾಣ ಜನತೆಯ ಮುಂದಾಳು; ಜನರು ತನ್ನನ್ನು ಆದರಿಸಬೇಕು; ಪೊರೆಯಬೇಕು, ಅನುಸರಿಸಬೇಕು. ಹೀಗೆ ಬೇಕುಗಳ ತರಂಗಗಳೇ ಅಲ್ಲಿ ಹೊಯ್ದಾಡುತ್ತಿದ್ದುವು. ದೇಶಭಕ್ತರು ಜನಸೇವೆಯು ಹೆಸರನ್ನು ಪಸೆಸುತ್ತಾ ಜೀವವಿಮೆಯ ದಲ್ಲಾಲಿಗಳಾಗಿದ್ದರು. ಜನಸೇವೆಯ ಕುಲಿಮೊಗಲು ಅವರಿಗೆ ಸಹಸ್ರಾರು ರೂಪಾಯಿಗಳನ್ನು ಸಂಪಾದಿಸಿ ಕೊಟ್ಟಿತು. ಅವರು ಡೈರೆಕ್ಟರಾಗಿದ್ದ ಬಟ್ಟೆಯ ಗಿರಣಿಯೊಂದು ಕಾಳಸಂತೆಯಲ್ಲಿ ಅರಿವೆಗಳನ್ನು ಮಾರಿ ಲಕ್ಷಾಂತರ ರೂಪಾಯಿಗಳನ್ನು ಗಳಿಸಿತ್ತು. ಜನತೆಯ ಅಭ್ಯುನ್ನತಿ, ಶ್ರೇಯಸ್ಸುಗಳಿಗಾಗಿದ್ದ ಹಂಚಿಕೆಗಳು ಅವರ ಮೆದುಳಿನಲ್ಲಿ ಪಸರಿಸಿದ್ದುವು. ಮುಂದಾಳುತನವನ್ನು ಉಳಿಸಿಕೊಳ್ಳುವ ಬಗೆ, ವಿತ್ತಸಂಗ್ರಹಗಳ ಚಿಂತೆಗಳು ಅವರ ಮೆದುಳನ್ನು ತಿನ್ನುತಿದ್ದುವು. ತಾವು ಉಸುರುತಿದ್ದ ಜನಸೇವೆಯಲ್ಲಿ ಅವರಿಗೇ ನಂಬಿಕೆ-ಶ್ರದ್ಧೆಗಳಿರಲಿಲ್ಲ. ತಾವು ನಂಬದಿದ್ದರೇನು? ಬೇರೆಯವರನ್ನು ನಂಬಿಸುವ ಹೊಣೆ ತನ್ನದು—ಎಂಬ ಘೋರಜೆ ಅವರದು."

"ನಮ್ಮ ಬಡದೇಶದಲ್ಲಿ ರಾಜಕೀಯ ಪ್ರಗತಿಯು ಏಕೆ ಆಗುತ್ತಲಿಲ್ಲವೆಂಬುದರ ಅರಿವು ಆಗ ನನಗಾಯಿತು ಆ ಗಣ್ಯ ಮುಂದಾಳುಗಳ ಹೃದಯವನ್ನು ಕಂಡು ನಾನು ನಡುಗಿದೆ. ಸ್ಥೂಲದೇಹದಲ್ಲಿದ್ದಾಗ ನನಗೆ ಇತರರು ಈ ಸಂಗತಿಗಳನ್ನು ಹೇಳಿದ್ದರೆ, ನಾನು ನಂಬುತ್ತಿರಲಿಲ್ಲ. ಗೋಡೆಯ ಮೇಲೆ ಸೇತುಹಾಕಿದ ಚಿತ್ರದಂತೆ ಅವರ ಬಾಳುವೆಯನ್ನು ನಾನು ಈಗ ಅರಿತಿದ್ದೆ!

"ದೈವಭಕ್ತರು, ಭಾವುಕರು ಎಂದು ಹೆಸರುಪಡೆದ ಶಾಸ್ತ್ರಿಗಳು ಬಂದರು. ಇವರ ಹೃದಯದಲ್ಲಿ ಪರಮಾತ್ಮನ ಇರವನ್ನು ಕಾಣಬಹುದೆಂದು ಎನಿಸಿತು ನನಗೆ. ಆದರೆ ಆ ಹೃದಯದಲ್ಲಿ ಪರಮಾತ್ಮನಲ್ಲದೆ ಇತರ ಎಲ್ಲಾ ನರಕುಗಳೂ ಇದ್ದುವು. ಮೊದಲು ಹೋದ ರಾಜಕೀಯ ಮುಂದಾಳುಗಳಿಗೆ ಜನತಾಸೇವೆಯ ಹೊದಿಕೆಯಿದ್ದಂತೆ, ಶಾಸ್ತ್ರಿಗಳು ಧರ್ಮವೆಂಬ ರಕ್ಷಾಕವಚವನ್ನು ತೊಟ್ಟಿದ್ದರು. ಅವರು ಧರ್ಮವನ್ನು ಉಸುರುತ್ತಿದ್ದರು; ಅದರಂತೆ ಆಚರಿಸುತ್ತಿರಲಿಲ್ಲ. ಧರ್ಮದ ರಕ್ಷಾಕವಚವಿದ್ದುದರಿಂದ ಅವರು ನಿರ್ಭಯರಾಗಿ ಸಂಚರಿಸುತ್ತಿದ್ದರು. ಅವರ ಮೆದುಳನಡಿಯಲ್ಲಿ ನಾನು ಮೊದಲು ನೋಡಿದ ಕೇಡಿಗನಲ್ಲಿದ್ದುದಕ್ಕಿಂತಲೂ ಕೀಳ್ಮಟ್ಟದ ನಿಂದ್ಯ ಭಾವಗಳು ಗೂಡು ಕಟ್ಟಿದ್ದುವು. ಅವರ ಚಿತ್ತದಲ್ಲಿ "ಜಾರಕೃಷ್ಣನು" ತನ್ನ ರಾಸಲೀಲೆಯನ್ನು ಎಸಗುತ್ತಿದ್ದ. ಅವರ ಎದೆಯೆಂದರೆ ಕನಕಾಪುರದ ಉಕ್ಕಿನಕೋಟೆ.

"ಕತೆ ಪುಸ್ತಕವನ್ನು ಓದುವಂತೆ ಶಾಸ್ತ್ರಿಗಳ ಬದುಕನ್ನು ನಾನು ಓದಿದೆ. ಕೊಲೆಯೊಂದಲ್ಲದೆ ಇತರ ಎಲ್ಲ ತರದ ನಿಂದ್ಯ ಪಾಳ್ಕೆಗಳನ್ನೂ ಅವರು ಎಸಗಿದ್ದರು. ಪರಮಾತ್ಮನು ಇಂತಹ ಹೃದಯಗಳ ಸೆರೆಮನೆವಾಸಕ್ಕೆ ಅಂಜಿ, ತಲೆ ತಪ್ಪಿಸಿಕೊಂಡಿದ್ದ. ಅವನು ಈ ಲೋಕವನ್ನು ಆಗಲಿ ಶತಮಾನಗಳೆಷ್ಟೊ ಗತಿಸಿದ್ದುವು."

× × × ×

"ಪರಮ ರಾಜರಾಯರೇ" ನನ್ನ ಮೊದಕಡೆಗೆ ಕಣ್ಣುಗಳನ್ನು ಹೂರಳಿಸಿ ಅಯ್ಯಂಗಾರರು ಮಾತುಗಳನ್ನು ಮುಂದುವರಿಸಿದರು. ನನ್ನ ಇಂದಿನ ಅನುಭವಗಳು ಒಮ್ಮೆ ವಿಚಿತ್ರವೆನಿಸುವು. ಅವು ನನ್ನ ಹೃದಯ ಮತ್ತು ಬುದ್ಧಿಗಳನ್ನು ಕಲಕಿವೆ. ಜನತೆ, ಧರ್ಮ, ಮುಂದಾಳುಗಳು ಇವುಗಳ ಬಗ್ಗೆ ನನಗಿದ್ದ ಅಭಿಪ್ರಾಯಗಳನ್ನೇ ತಲ್ಲಣಕೆಳಗು ಮಾಡಿವೆ. ನಮ್ಮ ಗೃಹಮೆನಗಳಲ್ಲಿ ಒಂದು ಹೊಲಸಿನಿಂದ ಇನ್ನೊಂದು ಹೊಲಸಿಗೆ ಕೈ ಹಾಕುವ ಮನಃ ಮರುಮಂಬಿಸುವ ಕಾಮ ತೃಷ್ಣೆ, ಹಿಡಿ ಹೊನ್ನಾಸೆ ಈ ನೋಡಿಗನಾಚೆ ಮಾನವನ ವೃತ್ತಿಯನ್ನು ಇನ್ನೂ ಹರಿದಿಲ್ಲ. ಆದರೆ ಮಾನವನ ಸಪ್ತ ಪ್ರವೃತ್ತಿಶೇಷಗಳನ್ನು ಒಟ್ಟಿ ತನ್ನ ಒಳಗಣ್ಣುಗಳಿಂದ ತಮ್ಮ ಈ ವರೆಗಿನ ಬಾಳುವೆಯು ಯಥಾರ್ಥ

ಸ್ವರೂಪವನ್ನು ತಿಳಿದುಕೊಳ್ಳುವುದಾದರೆ, ಅವರು ತನ್ನ ಜೀವನ ಕ್ರಮವನ್ನು ಬದಲಾಯಿಸಬಹುದು. ಹೊಸತೊಂದು ಗುರಿಯು ಅವರಿಗೆ ತೋರುವುದು. ಆಗ ತನ್ನ ಹೃದಯ-ಬುದ್ಧಿಗಳಿಗೆ ತಗಲಿದ ಕಾಯಿಲೆಗಳಿಗೆ ಅವರು ಯೋಗ್ಯ ಚಿಕಿತ್ಸೆಯನ್ನು ನಡೆಸಬಹುದು.

"ನಿನ್ನ ವಿದೇಹಸಂಚಾರವು ಅಲ್ಲಿಗೆ ಏನೆಗಂಡಿತೇ?" ನನ್ನ ಬಾಯಿಂದ ಸ್ವಲ್ಪ ಹೊರಟಿತು

"ಇಲ್ಲ- ಇನ್ನೂ ಇದೆ" ಅಯ್ಯಂಗಾರರು ಉಸುರಿದರು: "ನಾನು ನಗರದ ಬೀದಿ-ಬೀದಿಗಳಲ್ಲಿ ಸಂಚರಿಸಿದೆ. ನೋದ ಮೇಲಲ್ಲ; ಆಗಸದಲ್ಲಿ. ಬೀದಿಗಳಲ್ಲಿ ಸಂಚರಿಸುತ್ತಿದ್ದ ವಿವಿಧ ಜನರನ್ನು ನಾನು ನೋಡಿದೆ; ಅವರ ಬದುಕುಗಳನ್ನು ನಾನು ಓದಿದೆ. ಹೀಗೆ ಸಾಗುತ್ತಿದ್ದಾಗ ಗಿರಣಿಯೊಂದು ಕೂಗಿತು. ಒಳಗಿನಿಂದ ಯಂತ್ರದ ಧ್ವನಿಗಳು ಗಾಳಿಯಲ್ಲಿ ತೇಲಿಬಂದುವು. ಗಿರಣಿಯೊಳಗಿನ ಬಾಳ್ವೆಯನ್ನು ನಿರೀಕ್ಷಿಸಲೋಸುಗ ನಾನು ಒಳಗೆ ನುಗ್ಗಿದೆ. ಅರಿವೆಯ ನೇಗೆಯಲ್ಲಿ ಸೂದಾರು ಸಂಬ ದುಡಿಯುತ್ತಿದ್ದರು. ಅವರಲ್ಲಿ ಹಲವರು ಹೆಂಗುಸರು. ಅವರ ಬೀರಗಳೊಳಗೆ ನನ್ನ ಒಳದೃಷ್ಟಿಯನ್ನು ಹರಿಯಿಸಿದೆ. ಅವರ ಜೀವವೀಣೆಗಳ ಮಿಡಿತವನ್ನು ಕಿವಿಗೊಟ್ಟು ಆಲಿಸಿದೆನಾಯಿತು. ಅವರ ಹೃದಯ ಸಂಗೀತಗಳು ಹೊಮ್ಮುತ್ತಿದ್ದುವು. ಎದೆಗಳಿಂದ ಸೂಸಿದ ನರಳಿಕೆಯ ಧ್ವನಿಗಳು ಬಾನನ್ನು ಬಿರಿಯುತ್ತಿದ್ದುವು. "ಹಸಿವು" "ಬೆಳಕು" ಎಂದು ಪ್ರತಿಯೊಂದು ಜೀವವೂ ಕ್ರಂದಿಸುತಲಿದ್ದವು. ಅವರ ನಾಡಿಗಳಲ್ಲಿದ್ದ ರಕ್ತಕಣಗಳು ಜಿರಿವೆಯಾಗಿ, ನೂಡಿನ ಸಂಪತ್ತಾಗಿ ರೂಪಾಂತರವನ್ನೈದುತಿದ್ದುವು. ಇಡಿ ಜನಾಂಗದ ಹೊರೆಯು ಅವರ ಎದೆಗಳ ಮೇಲೆ ನೆಲಸಿದ್ದುದರಿಂದ, ಆ ಕೇಂದ್ರಗಳಲ್ಲಿ ರಕ್ತಪರಿಚಲನೆಯು ಸರಿಯಾಗಿ ಆಗುತ್ತಿರಲಿಲ್ಲ. ಅಂಗಾಂಗಗಳಿಗೆ ಪೋಷಕ ದ್ರವ್ಯಗಳು ಒದಗುತ್ತಿರಲಿಲ್ಲ. ಅವು ಬತ್ತಿಹೋಗಿದ್ದುವು. ಅವರ ಎದೆಯ ಅರೆ-ಅರಿವಿನ್ಗೆಗಳು ಮುರಿದಿಂದ ಕತ್ತು ಬಿಸಿಲಿಗೆ ಎದೆ ಪಡಾಂದಳಿರುಗಳಂತೆ ಅರೆಚಣದಲ್ಲಿ ಸುರುಟಿ ಹೋಗುತ್ತಿದ್ದುವು. ಅವರ ಮೆದುಳುಗಳು ತಮ್ಮ ವಿಚಾರಶಕ್ತಿಯನ್ನು ಕಳೆದುಕೊಂಡಿದ್ದುವು. ಬುದ್ಧಿಯು ಸರಿಯಾಗಿ ಓಡುತ್ತಿರಲಿಲ್ಲ. ಮನಸ್ಸಿನಲ್ಲಿ ಏಕಾಕೃತಿಯು ಕಾರ್ಯರೂಪಿಗೊಳ್ಳುವುದೇ ತೋರುತ್ತಿರಲಿಲ್ಲ. ತಮ್ಮ ಹೆಗಲ ಮೇಲೇರಿ ಕುಳಿತ ಒಡೆಯರನ್ನು ಕೆಳಕ್ಕೆ ತಳ್ಳಿಕೊಳೆಸುವುದೆಂತು? ....ಎಂಬ ವಿಚಾರವು ಅವರ ಮೆದುಳುಗಳನ್ನು ತಿನ್ನುತ್ತಿದ್ದಿತು. ಅವರನ್ನು ಬುಸಿರಾಡುತಿಹ ಯಂತ್ರಗಳೆಂದು ನಾನು ಪರಿಗಣಿಸಿದೆ.

"ಇನ್ನೂ ಆಳಕ್ಕೆ ಎಂದರೆ ಅವರ ಒಳಮನಸ್ಸಿನ ಅಡಿಗೆ ಇಳಿದು ನಾನು ನೋಡಿದೆ. ಅದು ಪಡಾಶವಾದುದಲ್ಲ; ತನ್ನ ಹೊಣೆಬರೆಹವನ್ನು ನಂಬಿ ಕುಳಿತುದಲ್ಲ. ಅಲ್ಲಿ ಜ್ವಾಲಾಮುಖಿಯಂತೆ ಒಂದು ತೀಕ್ಷ್ಣ ಜ್ವಾಲೆಯು ಧಗಧಗಿಸುತ್ತಿದ್ದಿತು; ತನ್ನ ನಾಲಗೆಗಳನ್ನು ಹೊರಚಾಚಿ ಇಡಿ ಸಮಾಜವನ್ನೇ ತುಳ್ಳುಗೊಳ್ಳಲು ಹವಣಿಸುತಿದ್ದಿತು! ಆ ಜ್ವಾಲೆಯು ಒಮ್ಮೆ ಹೊರಹೊಮ್ಮಿದರೆ ಚವನ್ನು ತಡೆಗಟ್ಟಲು ಇಳೆಯ ಯಾವ ಶಕ್ತಿಗೂ ಸಾಧ್ಯವೆನಿಸದು. ಜಡಶಕ್ತಿ, ಧರ್ಮಶಾಸ್ತ್ರಗಳು ಆ ಅಗ್ನಿಯಿಂದ ಆ ಭೀಕರ ಅಗ್ನಿಜ್ವಾಲೆಯು ಹೊರಪೂಸದಂತೆ ತಡೆಗಟ್ಟಲು ಹವಣಿಸುತಿದ್ದವು; ಶಾಂತಿರಕ್ಷಕರು ಆ ಅಗ್ನಿಕಂಡವನ್ನು ಸುತ್ತುಗಟ್ಟಿ ಮಂತ್ರಗಳನ್ನು ಪಠಿಸುತ್ತಿದ್ದರು. ದಲಿತರು ಸಹಸ್ರಸೇನೆಗಳಾಗಿ ಬರುತಿರುವ ಕಿರುಬೆಳಗಳು ಈ ಶಮ್ಯಾನಲವನ್ನು ಉದ್ದೀಪಗೊಳಿಸುತ್ತಿದ್ದುವು. ಅಳರಸರು ರಚಿಸಿದ್ದ ಪ್ರತಿಯೊಂದು ಕಾಯಿದೆಯೂ ಈ ಯಜ್ಞಕುಂಡಕ್ಕೆ ಜಜ್ಯವನ್ನೆರೆಯುತ್ತಿದ್ದಿತು. ಶಾಸ್ತ್ರಿಗಳು ಉಸುರುತಿದ್ದ ಪ್ರತಿಯೊಂದು ಧರ್ಮನೀತಿಯೂ ಲೋಕವನ್ನು ತುತ್ತುಗೊಳಲು ಈ ಪ್ರಳಯ ಶಕ್ತಿಯನ್ನು ಪ್ರೇರಿಸಿದ್ದಿತು."

"ಇಂತಹ ರುದ್ರ ಭಯಾನಕ ಜ್ವಾಲಾಮುಖಿಯು ದಲಿತರ ಮನಸ್ಸಿನ ಅಂತರಾಳದಲ್ಲಿ ನಿಗಿನಿಗಿಸುತ್ತಿರುವುದನ್ನು ನಾನು ಕಂಡೆ. ಭಾಡವಾಳಿಗರ ಈ ತೇರು ಇದೇ ರೀತಿ ಮುನ್ನುಗ್ಗುವುದಾದರೆ, ಆ ಭೀಕರ ಜ್ವಾಲಾಮುಖಿಯು ಹೊರಹೊಮ್ಮಿ ನಮ್ಮ ನಾಗರಿಕತೆ, ಆಡಳಿತ ಕ್ರಮಗಳನ್ನು ಆಹುತಿಗಳಾಗಿ ತೆಗೆದುಕೊಳ್ಳಬಹುದು."

\+ + + +

ಹೀಗೆ ಅಯ್ಯಂಗಾರರು ತನ್ನ ವಿದೇಹ ಸಂಚಾರವನ್ನು ವಿವರಿಸಿ ಮುಗಿಸಿದರು. ಅವರ ಮೊಗವು ಗೆಲುವಿನ ಬಣ್ಣವನ್ನು ತಳೆದಿತ್ತು: "ಅಸಾಧ್ಯವೆನಿಸಿದ ಕಾರ್ಯವು ಈಗ ಸಾಧ್ಯವಾಗಿದೆ. ಆದರೆ ಈ ಸ್ಫೂರ್ತಿಪ್ರದವನ್ನು ಈಗಲೇ ಜನರಿಗೆ ತಿಳಿಸಲು ಬಾರದಂತಿಲ್ಲ. ಈ ಶೋಧನೆಯನ್ನು ಜನರು ನಂಬರು. ಅವರು ನನ್ನನ್ನು ಒಬ್ಬ ತಿಕ್ಕಿರುಕನೆಂದು ಭಾವಿಸುವರು. ಈ ಶೋಧನೆಯನ್ನು ನಾವು ಉಪಯೋಗಿಸುವುದಾದರೆ, ಜೀವನದಲ್ಲಿ ಒಂದು ದೊಡ್ಡ ಕ್ರಾಂತಿಯೆ ಉಂಟಾಗುವುದು."

\+ + + +

ಮೇಲೆ ಹೇಳಿದ ಸಂಭವವು ಜರುಗಿ ಆರು ತಿಂಗಳು ಕಳೆದಿದ್ದವು. ಆಗ ನಾನು ತಿರುಚಿನಾಪಳ್ಳಿಯಲ್ಲಿದ್ದೆ. ಒಂದು ದಿನ ಬೆಳಗ್ಗೆ ದೊರೆತ ಎಕ್ಸ್‌ಪ್ರೆಸ್ಸಿನಲ್ಲಿ ಕಲ್ಲಿಕೋಟೆಯ ಸುದ್ದಿಯೊಂದು ಈಪರಿಯಾಗಿದ್ದಿತು:

"..... ಕಾಲೇಜಿನ ಗಣಿತ ಪ್ರಾಧ್ಯಾಪಕರಾದ ತಿಪ್ಪಯ್ಯಂಗಾರರು ಹೃದಯ ವಿಕಾರದಿಂದ ಮೃತರಾಗಿರುವರು. ರಾತ್ರಿ ಹನ್ನೊಂದು ಗಂಟೆಗೆ ಕೆಲ ವಿದ್ಯಾರ್ಥಿಗಳು ಅಯ್ಯಂಗಾರರನ್ನು ಕಾಣಲು ಹೋದಾಗ, ಕೋಣೆಯು ಕದಗಳು ತೆರೆದಿದ್ದವು. ಹಾಸಿಗೆಯ ಮೇಲೆ ಅವರ ಮೃತದೇಹವಿದ್ದಿತು!"

ಅಯ್ಯಂಗಾರರ ಸಂಶೋಧನೆಯ ಫಲವನ್ನು ಹೊಂದಲು ಸಮಾಜಕ್ಕೆ ಅವಕಾಶವಿಲ್ಲದೆ ಹೋಯಿತು ಅವರ ಮರಣ ವಿಚಾರದಲ್ಲಿ ನನಗೆ ತುಂಬಾ ಸಂದೇಹವಿದೆ. ಅವರು ಆ ರಾತ್ರಿ ವಿದೇಹ ಸಂಚಾರಕ್ಕೆ ಹೊರಟಿರಬಹುದು ಅವರ ಜೀವವು ದೇಹದಿಂದ ಬೇರೆಯಾಗಿ ಬಾನಿನಲ್ಲಿ ಸಂಚರಿಸುತ್ತಿದ್ದಾಗ, ವಿದ್ಯಾರ್ಥಿಗಳು ಅವರ ವಸತಿಗೆ ಬಂದಿರಬಹುದು. ಜೀವನಗರಿತ ದೇಹವನ್ನು ಕಂಡು ಆ ವಿದ್ಯಾರ್ಥಿಗಳು ದಿಗಿಲುಗೊಂಡು ಪೋಲೀಸರಿಗೆ ತಿಳಿಸಿರಲು ಸಾಕು. ಪೋಲೀಸರಾದರೂ ದೇಹವನ್ನು ನೇಣಿಗೆ ಸಾಗಿಸಿದುದರಿಂದ, ಪ್ರಾಣವು ಪುನಃ ದೇಹದೊಳಗೆ ಬಂದು ಸೇರಲು ಅವಕಾಶವು ತಪ್ಪಿಹೋಗಿರಬಹುದು.

ಈಗ ಅಯ್ಯಂಗಾರರು ತಮ್ಮ ಸೂಕ್ಷ್ಮದೇಹದಲ್ಲಿ ನಾಡಿನ ಉದ್ದಗಲಕ್ಕೂ ಸಂಚರಿಸುತಿರಬಹುದು; ಅಥವಾ ಪ್ರೇತಗಳ ನಾಡಿನಲ್ಲಿ ಇವು ಜೀವಗಳೊಂದಿಗೆ ತಮ್ಮ ಸ್ಥೂಲದೇಹವನ್ನು ಕಳಕೊಂದ ಅಳಲನ್ನು ತೋಡಿಕೊಳ್ಳುತ್ತಿರಬಹುದು!

# ಸಾಹಿತ್ಯ ಮತ್ತು ಪ್ರಗತಿ

ಪ್ರೊ. ರಾ. ಯ. ಧಾರವಾಡ, ಎಂ. ಎ.
ಕೆ. ಇ. ಬೋರ್ಡ್ಸ್ ಆರ್ಟ್ಸ್ ಕಾಲೇಜ್
ಧಾರವಾಡ

(ಪೂರ್ವಾರ್ಧ)

ಪ್ರಗತಿಯೆಂಬುದು ಕನ್ನಡಸಾಹಿತ್ಯದಲ್ಲಿ ಹೊಸಮಾತು ಅಲ್ಲ; ಕರ್ಣನ ಕವಚ-ಕುಂಡಲಗಳಂತೆ ಕನ್ನಡಸಾಹಿತ್ಯದ ಹುಟ್ಟಿನೊಡನೆಯೆ ಬಂದಿದೆಯೆಂಬುದನ್ನು ಸಾಹಿತ್ಯಚರಿತ್ರೆಯ ಪ್ರತ್ಯಕ್ಷ ಪ್ರಮಾಣದಿಂದ ಮನಗಾಣಬಹುದು.

●

ಈ ವಾದದ ರಥವು ಸಾಗಿಹೋಗಿ ಎಬ್ಬಿಸಿದ ದೂಳು ಇಂದು ಸ್ವಲ್ಪ ನೇಕ್ಕೆ ಕುಳಿತಿದೆ. ಆ ದೂಳನ್ನು ಮರೆತು ಇಂದು ಓದುಗರು ಆ ರಥದ ಸತ್ಯಸ್ವರೂಪವನ್ನು ಕಾಣಬಹುದೆಂದು ತೋರುತ್ತದೆ. ಕೊಳಗುಳವನ್ನು ಳಿದು ಬಂದ ಸೈನಿಕನು ತನ್ನ ಆವೇಶವನ್ನು ಒರಿಗಲ್ಲಿಗೆ ಹಚ್ಚಿ ನೋಡಬೇಕು. ಈ ಸ್ವರೂಪದರ್ಶನವನ್ನು ಈಗಾಗಲೇ ಅನೇಕ ಸಾಹಿತಿಗಳು ಕನ್ನಡ-ಜನತೆಗೆ ನೀಡಿದ್ದಾರೆ.....ಇಂದು ಈ ವಾದದ ಸ್ವರೂಪವೇನು? ನಾವು ಬೇಡುವುದೇನು? ಕಂಡುದು ಯಾವುದು? ಕನ್ನಡಕ್ಕೆ ಈ ಪ್ರಶ್ನೆಯ ಸಂಬಂಧ ಎಷ್ಟರಮಟ್ಟಿಗೆ? ಸಾಹಿತ್ಯ-ಪ್ರಗತಿ ಗಳೆಂದರೆ ಯಾವ ಅರ್ಥ?—ಇವನ್ನು ನಾವು ವಿಚಾರಿಸಬೇಕು.

ಭಾರತೀಯ ಪ್ರಗತಿಪರ ಸಂಸ್ಥೆಯ ಆರಂಭದ್ದೇಶಗಳೇನೇ ಇರಲಿ, ಕನ್ನಡದಲ್ಲಿ ಮಾತ್ರ ಸಾಹಿತ್ಯ ಬರಿಯ ಮುದ್ರೆ-ಅಕ್ಷತೆ-ವಿಭೂತಿ-ಸಿಗುನಾಮಗಳನ್ನು ಧರಿಸಿಯೇ ಬೆಳೆದಿದೆ. ಮೊದಲೂ. ಈಚೆಗೆ ಕೂಡ ಒಂದು ಮತವು ಸ್ತೋತ್ರವನು ಕಟ್ಟಿಕೊಂಡು ಸರ್ವಾಧಿಕಾರಕ್ಕಾಗಿ ಸಿದ್ಧತಾರೆಯುತ್ತಿದೆಯೆಂದೂ ಒಂದು ಕಡೆ-ಯಿಂದ ಹೇಳಲಾಯಿತು. ಇಷ್ಟೇ ಅಲ್ಲ, ಕನ್ನಡ ಜನಗಳಿಗೆ "ಪ್ರಗತಿ" ಪರ ದೃಷ್ಟಿ ಇಂದಿಲ್ಲಿನ್ನೋ ಎನ್ನುವ ವರೆಗೆ ಅಭಿಪ್ರಾಯ ಮಂಡಿಸಿಕ.

ಈ ಅಭಿಪ್ರಾಯದ ಅರ್ಥವೇನು? ಸಾಹಿತ್ಯ-ಪ್ರಗತಿಗಳ ಜೊತೆಯೆಂತು? 'ಪ್ರಗತಿ' ಎಂಬ ಹೆಸರಿಗೆ ತೊಡಿಸಿದ ಜರಂಕಾರವೇ ಅಥವಾ ಕರ್ಣನ ಕವಚದ ಹಾಗೆ ಹುಟ್ಟಿನೊಂದಿಗೇ ಬಂದುದೇ?-ವಿಚಾರವನ್ನು ನಾವು ಅರಿಯಲಿಕ್ಕೆ ಬೇಕಾದ್ದೇ ಈ ದೃಷ್ಟಿ ಇದ್ದಿತೇ—ಇದೆಯೇ?—ನ್ನುವುದನ್ನು ಮನಗಾಣಬೇಕು.....

ಸಾಹಿತ್ಯ ಪ್ರಗತಿಶೀಲವಾಗಿರಬೇಕೆನ್ನುವಲ್ಲಿ ನಾವು ಸ್ವಲ್ಪ "ಕೂಡಲ-ಸಂಗಮ" ವಿಚಾರ ಇಟ್ಟುಕೊಂಡ ಹಾಗೆ ಕಾಣುತ್ತದೆ. ಸಾಹಿತ್ಯ-ಪ್ರಗತಿಶೀಲವಾಗದಿದ್ದಲ್ಲಿ ಅದರ ಉದ್ದೇಶ-ವಾದರೂ ಏನು? ಬರಿಯ ಮನೋರಂಜನೆಯೆ?

ಸಾಹಿತ್ಯವು ಬರಿಯ ಮನೋರಂಜನೆಯ ಕೈಗೊಂಬೆ ಎನ್ನುವ ಉದ್ದೇಶವನ್ನು ಇಟ್ಟು-ಕೊಂಡಲ್ಲಿ ಎಷ್ಟೋ ಸುಂದರ ಸಾಹಿತ್ಯಕ್ಕೆ ನಾವು ಎರವಾಗಬೇಕಾದೀತು. ತನ್ನ ತಾಯ್-ಜಾರಿತ್ಯದ ಬಗ್ಗೆಯೇ ಸಾಶಂಕನಾಗಿ ಒರಲುವ ಹ್ಯಾಮ್ಲೆಟ್‌ನ ಆರ್ತತೆಯಲ್ಲಾಗಲಿ, ತನ್ನ ಮೂವರೂ ಹೆಣ್ಣು ಮಕ್ಕಳಿಂದ ಪರಿತ್ಯಕ್ತನಾಗಿ ವೃದ್ಧಾಪ್ಯದಲ್ಲಿ ಪ್ರತಿ ಬಾಗಿಲಿನಲ್ಲಿಯೂ ಕಾರುಣ್ಯ ಭಿಕ್ಷೆಯನ್ನು ಬೇಡುವ ಲಿಯರ್ ದೊರೆಯಲ್ಲಾಗಲಿ, ಇಜಿಪ್ತದ ಸಾಮ್ರಾಜ್ಞಿ ಕ್ಲಿಯೋಪಾತ್ರಳಿಗೆ ಹೇಳುವ ಕೊನೆಯ "Finish good lady; the right day is done, we are for the dark" ಮಾತಿನಲ್ಲಾಗಲಿ, ಅನುಕಂಪೆಯಿದೆಯೆ ವಿನಾ ಮನೋರಂಜನೆ ಎಲಮಾತ್ರವೂ ಸಿಕ್ಕದು. ಹಾಗೆಯೇ

"ದಿವಸ ದಿವಸಗಳಿಂ ಕುಂ-
ದುವುತಲ್ಲಿದೆ ಬಳೆಯವು ಆಯುವುಂ-
ವಸುವುಂ ಪೆ-
ರ್ಚುವುವಲ್ಲವು;....ಸುಮಿಕ್ಕೆ ಅವಚತ್ತೆಂ.."

"ನಿಕೃಷ್ಟನು ಈ ಸಂಸಾರಂ" ಎಂದು ಹೇಳುವ ರನ್ನನ ದರ್ಶನದಲ್ಲಿ ಮನೋರಂಜನೆ ಇದೆಯೇ? ಮನೋರಂಜನೆ ಕಾವ್ಯದಲ್ಲಿ ದ್ವಿತೀಯವಾಗಬಹುದೇ ವಿನಾ ಪ್ರಧಾನವಾಗಲಾರದು.

ಹಾಗೆಯೆ ಈ ಜಗತ್ತಿನ ಹೋರಾಟವನ್ನು ಸಹಿಸಲಾರದೆ ಎಲ್ಲೆಯಾದರೂ ಪಲಾಯನ ಬಯಸುವ "ಹೂವು-ಹೆಣ್ಣು-ಚಂದ್ರಿಕೆ"ಗಳ ಹಾಡೂ ಸಾಹಿತ್ಯವಾಗದು.

ಹಾಗಾದರೆ ಸಾಹಿತ್ಯದಿಂದ ನಾವು ಬಯಸುವುದೇನು?....ಎಂಬುದು ಪುನಃ ಪ್ರಶ್ನೆಯೆ. Raymond ಎಂಬ ಆಂಗ್ಲ ವಿಮರ್ಶಕರು ಇದನ್ನು ಸುಂದರವಾಗಿ ಹೇಳಿದ್ದಾರೆ. ಜೀವನದಲ್ಲಿ ಯಾವ ವಸ್ತುಗಳನ್ನು ನಾವು ನೋಡಿರುವುದಿಲ್ಲವೊ ಅದನ್ನು ಸರಿಯಾಗಿ ತೋರಿಸುವುದೇ ಸಾಹಿತ್ಯ. "Literature.....makes us not only feel about more things but feel more about them." ನಿಜ; ಪರಿತ್ಯಕ್ತ ವೃದ್ಧನ ಕತೆಯನ್ನು ಕಾಣಲಿಕ್ಕೆ ಲಿಯರನೇ ಬೇಕಿಲ್ಲ; ಅದರಿ ಆ ಗ್ರಂಥವನ್ನು ಓದಿದುದಿನಿಂದ ನಮ್ಮ ನಮ್ಮ ಜೀವನದಲ್ಲಿಯೆ ನಾವು ಕಾಣಬಹುದಾದ ಅಂಥ ವ್ಯಕ್ತಿಗಳ ಬಗ್ಗೆ ಅನುಕಂಪೆ ಮಿಡಿಯುತ್ತದೆ. ಬೇಂದ್ರೆ ಅವರ "ಕರಿಮರಿನಾಯಿ" ಪತಿತರಿಗಾಗಿ ನಮ್ಮ ಒಳಗಣ್ಣನ್ನು ತೆರೆಯಿಸುತ್ತದೆ.

"ಭಲರೇ ಭಟ್ಟರು! ಮನೆಯನು ಕಾಯ್ದರು
ಏನು ದಿಟ್ಟರೋ!
ಕುನ್ನಿಯು ಒಳಗೇ ಬಂದೇನೆಂದಿತು
ಭಟ್ಟರು ಬಂದರಿ ಕೊಂದೇನೆಂದರು!"

ಈ ಸಹಾನುಭೂತಿಗೆ—ಈ ಅನುಕಂಪೆಗೆ—ಕವಿಕೃತಿ 'ಸಾಹಿತ್ಯ'ವಾಗುತ್ತದೆ. Raymond ಅವರು ಹೇಳಿದ ಹಾಗೆ ನಮ್ಮ ಜೀವನದ ವೈಶಾಲ್ಯ, ವೈವಿಧ್ಯ, ಆಳವನ್ನು ತೋರಿಸದಿರುವುದು ಸಾಹಿತ್ಯವಾಗದು. ಈ ಮನೋವೈಶಾಲ್ಯ—ಈ 'ಪ್ರಗತಿ'—ಸಾಹಿತ್ಯದ ಶೀಲ. ಈ ಕಣ್ಣನ್ನು ಕೊಡದಿರುವುದು—ಈ ಅಂತಃಕರಣವನ್ನು ಮೀಟದಿರುವುದು.—ಹೀಗೆ "ಹೃದಯಸಂವಾದಿ"ಯಾಗದಿರುವುದು ನಿರಂತರ ಸಾಹಿತ್ಯವಾಗದು ಸಾಹಿತ್ಯದ ಈ ಶೀಲ

ವನ್ನನುಲಕ್ಷಿಸಿಯೇ ಮ್ಯಾಥ್ಯೂ ಅರ್ನಾಲ್ಡ್‌ನು "ಸಾಹಿತ್ಯವು ಜೀವನದ ವಿಧಾಯಕ ವಿಮರ್ಶೆ" ಎಂದೂ ಟಿ ಎಸ್. ಈಲಿಯೆಟ್‌ನು—"The Poetry of people takes its life from the peoples' speech and in turn gives life to it and represents the highest point of consciousness" ಎಂದೂ ಹೇಳಿರುವುದು.

"ಸಾಪಮಿದು ಪುಣ್ಯಮಿದು ಹಿತರೂಪವಾ ಗಿದು" ಎಂದು ತಾವ್ಯೋದ್ದೇಶವನ್ನು ಹೇಳಿದ ನೃಪತುಂಗನಿಂದ ಮೊದಲುಗೊಂಡು ಕನ್ನಡ ಕವಿಗಳಾರೂ ಈ ಲಕ್ಷ್ಯದ ವಿಶಾಲಾರ್ಥ-ವನ್ನು ಸೂರ್ಣವಾಗಿ ಬಿಟ್ಟುಸಾಗಿಲ್ಲ. ಅಲ್ಲಲ್ಲಿ ಅಲಂಕಾರ-ಧ್ವನಿಗಳಿಗೆ ಪ್ರಾಶಸ್ತ್ಯ ಸಂದಿರ-ಬಹುದು ನಿಜ—ಆದರೆ ಮೂಲ ವಿಗ್ರಹದ ಅರಿವು ಅವರಿಗಿದೆ. ಸಾಪ-ಪುಣ್ಯದ ಅರ್ಥ "ಧರ್ಮ"ದ ಕಡೆಗೆ ಹೆಚ್ಚು ಒಲವನ್ನು ತೋರಿ ಸಿರಬಹುದಾದರೂ ಈ "ಹೃದಯಸಂವಾದಿ" ತತ್ತ್ವದ ಅರಿವು ಅವರಿಗೆ ತುಂಬಾ ಇದೆ. ಅಲ್ಲದೆ ಆ ಆ ಕಾಲದ ವಿಮರ್ಶಾಸೂತ್ರ ಗಳನ್ನೂ ನಾವು ಅಷ್ಟು ಅನಾದರವಾಗಿ ಕಾಣುವ ಕಾರಣವಿಲ್ಲ ಇಂದಿನ ನಮ್ಮ "ಸೂಟು" ನಾಳೆ 'ಸಂಪ್ರದಾಯ' ವಾಗ-ಬಹುದು—ಅಧವಾ ಈಗಾಗಲೇ ಆಗಲೂ ಹತ್ತಿದೆ. ಮೊಮ್ಮಗನಿಗೂ ಅಜ್ಜನಾಗುವ ಕಾಲ ಇಂದೆ ಇಲ್ಲ.

ಈ ಕಾವ್ಯಕಲ್ಪನೆಯನ್ನು ತಿಳಿದುಕೊಂಡು ನಮ್ಮ ಕವಿಗಳು ಪಡೆದ ಸಿದ್ಧಿಯನ್ನೂ ನೋಡ ಬಹುದು.

ಕನ್ನಡ ಸಾಹಿತ್ಯವು ಪರಂಪರೆಯ ಮಹ. ಅದೇ ಮೂಲರಾಮದೇವರ ಆರಾಧನೆ, "ನಾಯಕನನ್ಯನಾಗೆ ಕೃತಿ ವಿಸ್ತೃತಮಾಗದು" ಎನ್ನುವ ಅದೇ ಪಲ್ಲವಿ, ಅದೇ ಕೊಳಜೆ ನೀರೆ 'ಸ್ನಾನಿ ಪುಸ್ಕರಿಣಿ' ಎಂಬ ಕಲ್ಪನೆ,—ಎನ್ನುವನರೆಗೂ ಅಭಿಪ್ರಾಯ ಹೋಗಿದೆ. ಆವೇಶವನ್ನುಳಿದು ಬರಿಯ ತಾತ್ತ್ವಿಕವಾಗಿ ನೋಡುವುದಾವಲೆ, ಕನ್ನಡ ಕವಿಗಳ ಪ್ರಯೋಗ ಗಳಾದರೂ 'ಪ್ರಗತಿ'ಪರವಾಗಿ ಸಾಗಿದೆ-ಯೆಂಬುದನ್ನು ಕಾಣುತ್ತೇವೆ.

ಪ್ರತಿಯೊಬ್ಬ ಕವಿಯೂ ತಾನು 'ವಿನೂತನ' ಕವಿಯೆಂದೂ, ತಾನು ಹೊಸದನ್ನು ಯತ್ನಿಸು-ತ್ತಿದ್ದಾನೆಂದೂ ಹೇಳಿಯೆ ಇದ್ದಾನೆ. ಕನ್ನಡ ಭಾಷೆಯಲ್ಲಿಯ ಪ್ರಯೋಗಗಳ ವಿಷಯ ನಮಗೆ ಉಪಲಬ್ಧವಾದ ಮೊದಲ ಗ್ರಂಥ-ದಿಂದಲೇ ದೊರಕುತ್ತದೆ. ಹಳೆ-ಹೊಸದರ ತಿಕ್ಕಾಟವನ್ನೂ ಸರಿ-ತಪ್ಪುಗಳ ನಿರ್ಣಯ ಸ್ಥಾನವನ್ನೂ—ಅಲ್ಲಿಂದಲೇ ನಾವು ಕಾಣ-ಬಹುದು. ನೃಪತುಂಗನು ತನ್ನ ಕಾಲದಲ್ಲಿ ಕನ್ನಡವನ್ನು ಪೊಲಗಿಡಿಸಿದವರ ಒಗ್ಗೆ ಹೇಳು ವುದು ಹೀಗೆ:

"ನೆಲಸಿದ ಆಶ್ಮಂ ಕಾವ್ಯಕ್ಕೆ ಲಕ್ಷಣಂ ಸತತಮುಂ ಎಂದೆ ಪಬಿಗನ್ನಡಮುಂ ಪೊಲಗಿಡಿಸಿ ನುಡಿವರ್ ದೇಸಿಯಿಲ್ಲದೆಂದು ಅಜಿದಿರ್ದಂ" ದೇಸಿಯೂ ಆಗದೆ "ಮಾರ್ಗ"ವೂ ಆಗದೆ ಬಂದ ಕೆಲವು ಪ್ರಯೋಗಗಳನ್ನು ನೃಪ-ತುಂಗನು ಕಂಡಿರಬೇಕು. ಇಲ್ಲಿಯ ಪ್ರಯೋಗದ ಬಗ್ಗೆ ಅವನಿಗೆ ಒಪ್ಪಿಗೆಯಿಲ್ಲದಿದ್ದರೆ ಮತ್ತೊಂ-ದೆಡೆಗೆ ಪ್ರಗಲಪಂವಾಗಿ ಒಂದ ಕಲವು ಹೊಸ ಛಂದೋರೂಪಗಳನ್ನು ಹೇಳುತ್ತಾನೆ—

"ನುಡಿಗೆಲ್ಲಂ ಸಲ್ಲದ ಕನ್ನಡದೊಳ್ ಚತ್ತಾ ಣಮುಂ ಬೆದಂಡೆಯುಮಂ ಎಂದು ಈಗಡಿನ ನೆಗಳ್ತೆಯ ಕಬ್ಬಟೊಳ್ ಒಡಂಬಡಂ ಮಾಡಿ-ದರ್—" ಹತ್ತನೆಯ ಶತಮಾನದ ರನ್ನನಿಗೆ "ಆರಾತೀಯ ಕವೀಶ್ವರರು" ತೋರಿಸದೆ ಇದ್ದ ಶೌರ್ಯವನ್ನು ತೋರಿಸಿದ ಹೆಗ್ಗಳಿಕೆ ಯಿಲ್ಲದೆ, ತನ್ನ 'ಮಾರ್ಗ'ದಲ್ಲಿ 'ಪೊಸದೇಸಿ' ಯನ್ನು ಸೇರಿಸಿದ ಹೊಸ ದೃಷ್ಟಿಯಿದೆ ಅಷ್ಟೇ ಅಲ್ಲ, ತಾನು ಪ್ರಗತಿಪರ ನೂತನನಾದರೂ ಪ್ರಾಚೀನರ ಒರೆಗೆ ಸಿಲ್ಲುವ ಧೈರ್ಯವಿದೆ.

"ಪುರಾಣ ಕವಿಪುಂಗವರ್ ಒಳ್ಳಿದರ್; ಈಗಳ್ ಇಲ್ಲ ಸತ್ಯವಿಗಳ್ ಎನಲ್ಕೆ ಬೇಡ—" ಇದು ಅವನ ಆಹ್ವಾನ. ಹನ್ನೊಂದನೆಯ ಶತಮಾನದ ನಾಗಚಂದ್ರನಿಗೆ, ಕಾವ್ಯಚ್ಛಲ-ದಿಂದ ಉಪದೇಶವನ್ನಿತ್ತು "ಅಖಿಲ ಧರ್ಮಂ-ಗಳಂ ಧರ್ಮಪಥ ಪ್ರಸ್ಥಾನದೊಳ್ ಯೋಜಿ ಸಿದ" ಪರಮಕವಿಗಳು ಪೂಜ್ಯರಾದರೂ, ತನ್ನ ಕಾವ್ಯವು "ಆದ್ಯರ ಅದ್ಯತನ"ವಾಗಿ ನೆರೆಯುವುದೆಂಬ ವಿಶ್ವಾಸವಿದೆ

ವಚನಕಾರರಲ್ಲಂತೂ ವಸ್ತು, ನಿರ್ವಹಣ, ಭಾಷೆ, ಉಪಮೆ, ಎಲ್ಲವೂ ನೂತನಮಾರ್ಗ-ದುವು.

"ಅತಿ ಗಂಭೀರಂ ಕಾವ್ಯಂ; ನೀರಸರ್ ಅರಿವಂತೆ ಎನಿದು ತಾರೆಲೆಯೇ? ಬೀದಿವಾಡೆ? ನೆರೆವಿಯ ತುಮುಕೆ?" ಎಂದು ಗಿರಿಜಾ-ಕಲ್ಯಾಣವನ್ನು ಬರೆದ ಹರಿಹರನಂತೂ 'ಜಲಿ' ಕುಳಿತ ಗೊಡವೆಗೆ ಕೂಡ ಹೋಗಿಲ್ಲ. ಇನ್ನೆಯ ಶತಮಾನದ ರಾಘವಾಂಕನ ಕಾವ್ಯ "ಪೊಸ ಕಾವ್ಯಕನ್ನಿಕೆ" ಪಟ್ಟದಿಯ ಪ್ರಥಮಪ್ರಯತ್ನ. "ನಡೆವರೆಡಹದೆ ಕುಳಿತರೆಡಹುವರೆ?—" ಇದು ಅವನ ಸಾಹಿತ್ಯದೃಷ್ಟಿ.

೧೭ನೆಯ ಶತಮಾನದ ಲಕ್ಷ್ಮೀಶನಂತೂ ಹಳೆಯದೆಲ್ಲ ಹೊನ್ನು ಹೊಸದು ಕಳವೆನ್ನುವ ವರಿಗೆ ಚೆನ್ನಾಗಿ ಬುದ್ಧಿ ಹೇಳಿದ್ದಾನೆ. "ಮುನ್ನ ಕಬ್ಬಗಳನುಸುರಿದರ ಲಕ್ಷಣವ್ಯಾದಿಯುಂ ಪೆರ ತೆನಗೆ ಸಲ್ಲದು" ಎಂದು ಪೂರ್ವಕವಿಗಳನ್ನು ಕೃತಜ್ಞತೆಯಿಂದ ನೆನೆದರೂ, 'ಏನೂತನ' ಕವಿತೆಯನ್ನು ಜರೆಯುವರ ವೃತ್ತಿ ಇವನಿಗೆ ಸೇರದು:

"ಕೆನೆವಾಲ ಕಡೆದು ನವನೀತಮಂ ತೆಗೆದು ಬಾಯ್ಗೆ ಇನಿದಾಗೆ ಸವಿಯದೆ, ಪುಳಿವಿಳಿದು ರಸಮನೆ ಕಿಸಿದೊಡೆ ಕರೆದ ಕು ಘೃತಪ್ಪಿಸೆ ಕೊರತೆ? ..... ವಿನೂತನ ಕವಿತೆಯೆಂದು ಕುಂದಿಟ್ಟು ಜರೆದೊಡೆ ಪೇಳ್ದವನೆಂತಾ ಅವ ದೂಷಿಯಂ? ಜಾಣರ್ ಇದನರಿದು ಮತ್ಸರ ವನುಳಿದು ಆಲಿಸುವುದು—" ಇದು ಅವನ ವ್ಯಾಖ್ಯೆ

ಕನ್ನಡ ಕವಿಗಳ ಈ ಉದ್ದೇಶಗಳೆಲ್ಲ ಬರಿಯ ಗಾಳಿಯ ಮಾತಾಗಿಯಾಗಲಿ ಫಲ ಪಡೆಯದ ಮನೋಬಯಕೆಯಾಗಿ ಆಗಲಿ ಉಳಿಯಲಿಲ್ಲ.

ಸ್ಥೂಲವಾಗಿ ಕನ್ನಡ ಸಾಹಿತ್ಯಚರಿತ್ರೆ ಯನ್ನೇ ನೋಡಿದರೆ, ಕಾಲಕಾಲಕ್ಕೆ ಹೇಗೆ ವಸ್ತು ಮತ್ತು ವಿವರಣೆ ಬೇರೆ ಬೇರೆಯಾಗುತ್ತ ಸಾಗಿವೆಯೆಂಬುದನ್ನು ಕಾಣುತ್ತೇವೆ.

೧೦–೧೧ನೆಯ ಶತಮಾನದ ತೀರ್ಥಂಕ-ರರ ಚರಿತ್ರೆಗಳು ಜನರ ಮನಸ್ಸನ್ನು ಹಿಡಿಯ ವೆಂದು ಕಂಡಾಗ, ಜನರ ಲೋಕ-ದೋಷ ಗಳನ್ನು ಬಿಚ್ಚುಮಾತಿನಲ್ಲಿ ನೇರವಾಗಿ ಹೇಳುವ 'ವಚನ' ಪದ್ಧತಿ ಬಳಕೆಯಲ್ಲಿ ಬಂದಿತು.

ವಚನಕಾರರಿಗೆ ಕಥೆ ಬೇಕಿಲ್ಲ ವಸ್ತು ಬಂದ ಹಾಗೆ ಬಟವಡೆ ಮಾಡುತ್ತಾರೆ ಎಲ್ಲವೂ ಸ್ಪಷ್ಟ ನುಡಿ.

ಹಣದ ಕುರುಡುಸೊಕ್ಕಿನ ಬಗ್ಗೆ ಅವರ ಮಾತು ಹೀಗೆ!—"ಹಾವ ತಿಂದವರ ನುಡಿಸ ಬಹುದು; ಗರ ಹೊಡೆದವರ ನುಡಿಸಲು ಬಹುದು: (ಆದರೆ) ಸಿರಿಗರ ಹೊಡೆದವನ ನುಡಿಸಲು ಬಾರದು!" ಜಾತಿಗಳ ಬಗ್ಗೆಯೂ ಅವರ ಸ್ಪಷ್ಟವಾದ ಅಭಿಪ್ರಾಯ ಸಿದ್ಧವೇ ಇ

"ಕಾಸಿ ಕಂಬಾರನಾದ ಬೀಸಿ ನುಡಿಸೂಳ ನಾದ; ಹಾಸನಿಕ್ಕಿ ಸಾಲಿಗನಾದ; ವೇದವ ನೋದಿ ಹಾರುವನಾದ; ಕರ್ಣದೊಳ್ ಜನಿಸಿದರುಂಟೇ ಜಗದೊಳಗೆ?"

ಜನರ ಮನೆಮಾತಿನಲ್ಲಿ ಅವರವರ ಜೀವನ ಸೂತ್ರಗಳನ್ನು ಅವರವರ ಹೊಸ್ತಿಲವರಿಗೆ ಒಯ್ದು ಮುಟ್ಟಿಸಿ ಬಂದರು.

"ಕಾಯಕವೇ ಕೈಲಾಸ" "ಅಯ್ಯಾ ಎಂದಡೆ ಸ್ವರ್ಗ, ಎಲವೊ ಎಂದಡೆ ನರಕ" "ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ.....ಇದೇ ಅಂತರಂಗ ಶುದ್ಧಿ ಇದೇ ಬಹಿರಂಗಶುದ್ಧಿ!" "ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿ ಕೊಳ್ಳಿ; ನಿಮ್ಮ ನಿಮ್ಮ ಮನವ ಸಂತೈಸಿ ಕೊಳ್ಳಿ!"—ಎಲ್ಲವೂ ಬಿಚ್ಚುಮಾತು. ವಚನ ಕಾರರಿಗೆ "ತತ್ತ್ವ ಹೇಳಲಿಕ್ಕಾಗಲಿ, ಸುಳ ತೆಗೆಯಲಿಕ್ಕಾಗಲಿ ಕಥೆ ಬೇಕಿಲ್ಲ." ಬಣ್ಣದ ಧಳುಕು ಅನವಶ್ಯ.

೧೩–೧೪ನೆಯ ಶತಮಾನದಲ್ಲಿ ಈ ರೀತಿಯ ಮಾತು ತೀರ ಗದ್ಯಮಯವೆನಿಸಿದಾಗ, ಕಲಾಮಯ ರೀತಿ ಪುನಃ ಅಸ್ತಿತ್ವದಲ್ಲಿ ಬಂದಿತು. ೧೪–೧೫ನೆಯ ಶತಮಾನಗಳ ವೈದಿಕ ಕಥೆಗಳು, ೧೩–೧೭ರ ವೈದಿಕ ಮತ್ತು ಶಿವಶರಣರ ಗ್ರಂಥಗಳು ಕನ್ನಡದ ನೂತನಮಾರ್ಗಗಳನ್ನು ತೋರಿಸುತ್ತವೆ.

ಚಾಮರಸನಂಥವರಿಗಂತೂ "ದೇಗುಲವೆ ಮಾತಾಡುವಂದದೊಳ್" ಬರಿಯ ಗುಹಾಧ್ವನಿಯ ಕಾವ್ಯವನ್ನು ಬರೆಯದೆ- ಹೊಸದನ್ನು ಸೃಷ್ಟಿಸುವ ಆಶೆ:

"ಸತ್ತವರ ಕಥೆಯಲ್ಲ ಜನನದ
ಕುತ್ತದಲಿ ಕುದಿಕುದಿದು ಕರ್ಮದ
ಕತ್ತಲೆಗೆ ಸಿಲುಕುವರ ಸೀಮೆಯ
ಹೊಲಬು ತಾನಲ್ಲ"

—ಇದು ಅವನ ಕಾವ್ಯದ ವಸ್ತು. ವಿವರಿಸುವ ದೃಷ್ಟಿಯಿಂದಲೂ, ೧೦–೧೧ನೆಯ ಶತಮಾನದ ಸಂಸ್ಕೃತ ಭೂಯಿಷ್ಠ ಚಂಪೂಶೈಲಿ, ೧೨ನೆಯ ಶತಮಾನದ ತಿಳಿಗನ್ನಡ ವಚನ ಶೈಲಿ, ೧೩–೧೪ರ ಹಾಡುಗಬ್ಬ, ೧೫ರ ಷಟ್ಪದಿ ಪ್ರಾಧಾನ್ಯತೆ, ೧೬–೧೭ರ ಅನೇಕ ಪ್ರಯೋಗಗಳು—ಅನೇಕ ಬದಲಾವಣೆಗಳನ್ನು ಸ್ಥೂಲವಾಗಿ ನಾವು ಗುರುತಿಸುತ್ತೇವೆ.

೧೭ನೆಯ ಶತಮಾನದ ಸರ್ವಜ್ಞನಂತೂ ಅನೇಕ ವಿಧದಲ್ಲಿ ಕ್ರಾಂತಿಪುರುಷ. ವಸ್ತು, ರೀತಿ, ಶೈಲಿ, ಛಂದಸ್ಸು, ವ್ಯಕ್ತಿತ್ವ—ಎಲ್ಲವೂ ಅವನಲ್ಲಿ ಹೊಸವು. ಅವನಿಗೂ ಸಮಾಜದಲ್ಲಿಯ ದಂಭ, ಅಹಂಕಾರ, ಅಜ್ಞಾನ, ಅಲಸ್ಯ, ಪರಾವಲಂಬನವೃತ್ತಿ—ಎಳ್ಳಷ್ಟೂ ಸೇರವು. "ನಾಯಕನನ್ಯನಾಗೆ ಕೃತಿ ವಿಶ್ರುತವಾಗದೆಂದು" ಹೇಳಿದ ನಾಗಚಂದ್ರನ ರಾಮಾಯಣದ ಕಲ್ಪನೆಗೂ ಸರ್ವಜ್ಞನ ಕಲ್ಪನೆಗೂ ಆಜಗಜಾಂತರ! "ಭಾರತಕೂ ಭಾರತವು ವಾಗಿ" ಬೆಳೆದು ಬಂದ ಮಹಾಭಾರತದ ಬಗ್ಗೆಯೂ ಅವನಿಗೆ ಅಷ್ಟೆ ಪುರಸ್ಕಾರ. ಹೆಸರುಗಳನ್ನು ಬಿಡರಿ ಆ ಕಥೆಗಳಲ್ಲಿ ಇರುವ ವಿಷಯ ಎಷ್ಟರಮಟ್ಟಿಗೆ ಸರ್ವಜನ ಸಮ್ಮತವೆಂದು ಅವನ ಸಂಶಯ:

"ಹಾದರದ ಕಥೆಯನ್ನು
ಸೋದರರ ವಧೆಯನ್ನು
ಆದರಿಸಿ ಪುಣ್ಯಕಥೆಯೆಂದು
ಕೇಳುವ—ಈ ಮಾದಿಗರ ನೋಡು!"

ಇದು ಅವನ ವಿಮರ್ಶೆ. ಸರ್ವಜ್ಞನ ಈ ವಿಮರ್ಶೆಯ ವಿತರಣೆಯಲ್ಲಿ ಬ್ರಾಹ್ಮಣ, ಜಂಗಮ, ಜೈನ—ಎಲ್ಲರೂ ತಮ್ಮ ತಮ್ಮ "ಹವಿರ್ಭಾಗ"ವನ್ನು ಪಡೆಯುತ್ತಾರೆ. .....

ಅವನಿಟ್ಟುಕೊಂಡ ಛಂದಸ್ಸುಕೂಡ ಪ್ರಗತಿಪರವೇ

ಕರಸ್ಥಲದ ನಾಗಿದೇವನ "ತ್ರಿವಿಧಿ"ಗಳಲ್ಲಿಯಂತೆ ಈ ವರೆಗೆ ಬಹುಮಟ್ಟಿಗೆ ಬರಿಯ ತಾತ್ತ್ವಿಕ ಚರ್ಚೆಗಳ ವಾಹಕವೇ ಆಗಿದ್ದ ತ್ರಿವಿಧಿ, ಮೊದಲಸಲ ಸರ್ವಜ್ಞನಲ್ಲಿ ಸಾಹಿತ್ಯಪಾತ್ರವನ್ನು ಪಡೆಯುತ್ತದೆ

ಸರ್ವಜ್ಞನ ಮಾತಿನ ರೀತಿ ಬಹುಮಟ್ಟಿಗೆ ಜನರ ನುಡಿಯಿಂದಲೇ ಬಂದುದು.

"ಬೆಳ್ಳುಳ್ಳಿ ಪೊಡೆದಿಹರೆ ಹೋಳಪ್ಪ ತೆರನಂತೆ"

"ತುಪ್ಪವಾದಾ ಮೇಲೆ ಹೆಪ್ಪನೆರೆದವರುಂಟೆ?"

ಇವು ಅವನ ಉಪಮಾ ಅಲಂಕಾರಗಳು.....

ಸರ್ವಜ್ಞನ ಕಾವ್ಯದ ವಸ್ತುವೋ? ..... ಅದು ಜೀವನದ "ವಿಧಾಯಕ ವಿಮರ್ಶೆ" ಅಲ್ಲಿ ಹೊಡೆತವೂ ಇದೆ, ಹೊಗಳಿಕೆಯೂ ಇದೆ.

ಒಕ್ಕಲಿಗರು, ಕಾರ್ಮಿಕರು ಪತಿತರು—ಎಲ್ಲರೂ ಇವನ ಕಾವ್ಯನಿಕಷದ ಒರೆಗೆ ನಿಲ್ಲುತ್ತಾರೆ. ಒಕ್ಕಲಿಗ ಅವನ ಪ್ರಕಾರ ಮಾನವ್ಯದ ಪ್ರಥಮ ಆವಶ್ಯಕತೆ. ಅವನ ವಿದ್ಯೆ: "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯು ಮೇಲು." ಅವನಿಂದಲೇ ಜಗದ ಅಸ್ತಿತ್ವ:

"ಭಂಡಾರ ತುಂಬಿ ನೀ-
ಭಂಡಿಯಲಿ ಹೇರುವರೆ
ಮಂಡಲವನಾಳಿ ಮೆರೆಯುವರೆ
ಒಕ್ಕಲನು ಕೊಂಡಾಡಬೇಕು!"

ಆತ್ಮಜ್ಞಾನವಿಲ್ಲದೆ ಬರಿಯ ಬಾಹ್ಯಾಡಂಬರಗಳನ್ನು ಇಟ್ಟುಕೊಂಡವರಿಗೆ ಅವನಲ್ಲಿ ಪುರಸ್ಕಾರವಿಲ್ಲ

"ಪಕ್ಷಕೊಂದುಪವಾಸ, ಪುಕ್ಕಟಿ
ತೀರ್ಥುಲಸಿ, ಸಿಕ್ಕಿಸಿಕ್ಕಿದಲಿ ಹರಿನಾಮ"—ಇದು ಸ್ವರ್ಗದ ದೃಢವಾದ ದಾರಿಯಲ್ಲ.

ಸರ್ವಜ್ಞನು ತೀರ ನಿಷ್ಪಕ್ಷಪಾತದ ಕವಿ. ಮಾನವ್ಯ ಅವನಿಗೆ ಮುಖ್ಯವೇ ವಿನಾ ಅದರ ವಿಭಾಗ ಕೃತಕ; ಜಾತಿ ಧರ್ಮಗಳು ಮಾನವ ನಿರ್ಮಿತ. "ಕೂಳು" ದೊರಿತನೋಲಿನ ವಿಷಯ:

"ಕೂಳಿಂದ ಕುಲ ಬೆಳೆದು
ಬಾಳಿಂದ ಬಲ ಬೆಳೆದು
ಕೂಳು ನೀರುಗಳ ಕಳೆದರಾ ಕುಲಗಳನು
ಕೇಳ ಬೇಡೆಂದ."

ಎಂತಲೇ ಅವನದು ಬರಿಯ "ಉನ್ಮೇಷ" ಪಂಥವಲ್ಲ. ಹಾಗಾದರೆ ಇಷ್ಟುದಿನ ರಾಜರನ್ನು ಹೊಗಳಿ 'ಸಂಪ್ರದಾಯಶರಣ' ಎನಿಸಿಕೊಂಡ ಸಾಹಿತ್ಯ, ನೈಗಳ್ಳ ಬಡತನವನ್ನು ಕೂಡ ವರ್ಣಿಸುವ ಸಂಪ್ರದಾಯದ ಕಂದರಕ್ಕೆ ಕಾಲಿಟ್ಟಿತು. ಕಾರ್ಮಿಕರ ಬಗ್ಗೆ ಇರುವ ಯಾವ ಕೃತಿಯಷ್ಟೇ ನೈಗಳ್ಳ ಕೂಲಿಯನ್ನು ವರ್ಣಿಸುವ "Load of wood" ಪೂ "ಪ್ರಗತಿಶೀಲ ಸಾಹಿತ್ಯ". ನೆಲ್ಲಿ ಮುಂಡಾಸುಗಳ ಹೃದಯದ ಸ್ಪಂದನವೂ ಚಿಂದಿಯನ್ನು ಧರಿಸಿದ ಹೃದಯದ ಸ್ಪಂದನವೂ ತೀರ ಭಿನ್ನವಾಗವು. ಮಾನವ್ಯ ಅನಂತವಾಗಿ ಒಂದೇ ಆಗಿದೆ. ಎಂತಲೇ ಸರ್ವಜ್ಞನು ಈ ವ್ಯಕ್ತಿಗಳ ದೋಷಗಳನ್ನು ಹೇಳಿದ್ದಾನೆ:

ಅಕ್ಕನಾತಿಯ ಪಗಿವು
ಚಿಕ್ಕದೆಂದೆನಬೇಡ
ಚಿಕ್ಕಟವು ನೈಯ ಕಡಿವಂತೆ ಚಿಮ್ಮಟನ-
ಸಿಕ್ಕುಕಲಿ ಕಳುವ"

ಮಗು ಕೂಡ ತಾಯಿಯ ಹೊಟ್ಟೆಯಲ್ಲೇ ಈ ವಿದ್ಯೆ ಕಲಿತಿದೆ.

ಗಾಣಿಗನೂ ಹಾಗೇ—

"ಗಾಣಿಗನು ಈಶ್ವರನ
ಕಾಣನೆಂಬುದು ಸಹಜ" (ಯಾಕೆಂದರೆ)
"ಏಣಾಂಕಧರನು ಧರೆಗಿಳಿಯಲನಿನಿದ
(ಕೂಡ) ಗಾಣವಾಡಿಸುವ."

ಒಟ್ಟಾರೆ ಮಾನವನ ಬೌದ್ಧಿಕ, ಆತ್ಮಿಕ ಮತ್ತು ದೈಹಿಕ ಪ್ರಗತಿಗೆ ಸರ್ವಜ್ಞನ ಕಾವ್ಯವು ತುಂಬಾ ಆಹ್ವಾನವನ್ನು ಒದಗಿಸಿಕೊಡುತ್ತದೆ. ಅವನ ದೃಷ್ಟಿ ನೂತನ; ರೀತಿ ನೂತನ:

"ಅಪ್ಪ ಹಾಕಿದ ಗಿಡವು
ಒಪ್ಪುತ್ತಲಿರುತಿರಲು
ಕಪ್ಪಿಲ್ಲವೆಂದು ಅದನೇರಿ
ಮಗನು ಉರುಳಿಕ್ಕಿಕೊಳ್ಳುವನೆ?"

ಇದು ಅವನ ಜೀವನ ದೃಷ್ಟಿ; ಮಾತಿನ ನಿರ್ದಾಕ್ಷಿಣ್ಯ ಪ್ರಾಚೀನ ಕನ್ನಡ ಸಾಹಿತ್ಯವು ಸಂಪ್ರದಾಯಶರಣವೆನ್ನುವ ಆಕ್ಷೇಪಕ್ಕೆ ಸರ್ವಜ್ಞನೊಬ್ಬನೇ ಉತ್ತರ ಸಾಕು.

ಈಚೆಗೆ ಮುದ್ದಣನ ಕಾವ್ಯದಲ್ಲೂ ಕೂಡ, ವಸ್ತು, ಕಾವ್ಯೋದ್ದೇಶ, ಕಾವ್ಯಪ್ರಾರಂಭ, ಶೈಲಿ, ವರ್ಣನೆ ಇವೆಲ್ಲದರ ಒಗ್ಗೆಯೂ ಹೊಸ ದೃಷ್ಟಿಯನ್ನು ಕಾಣಬಹುದು.

ಹೀಗಾಗಿ ವಸ್ತು, ರೂಪ, ನಿರ್ವಹಣ, ಶೈಲಿ, ಆತ್ಮಿಕ ಮತ್ತು ಭೌತಿಕ ಬೆಳೆವಣಿಗೆ ಇವುಗಳ ದೃಷ್ಟಿಯಿಂದ ಕನ್ನಡ ಕವಿಗಳು ಹೇಗೆ ಕಾಲಕಾಲಕ್ಕೆ ಮುಂದುವರಿದಿದ್ದಾರೆಂಬುದನ್ನು ನಾವು ಮನಗಾಣಬಹುದು..... ಒಂದೇ ನೆಲದಲ್ಲಿ ನಾಲ್ಕಕ್ಕೆ ಕಡಿವೆ.ಯಾಗದಷ್ಟು ಧರ್ಮತತ್ತ್ವಗಳಿಗೆ ಪೋಷಣೆಯಿತ್ತ ನಾಡಿನ ನೀರು ಕೊಳಚೆಯಿರದು. ನೆಲ ಸಾಂಪ್ರದಾಯಿಕವಾಗದು. ನಾಡಿನ ಹಿರಿಯ ಕವಿಗಳ ಪೆಸರನ್ನೇ ತೆಗೆದುಕೊಂಡರೆ ಸಾಕು.... ಅವರವರ ಕಾವ್ಯವಸ್ತು, ರೀತಿ ಕಣ್ಣಿದುರಿಗೆ ಕಟ್ಟುತ್ತದೆ. ಪಂಪ, ರನ್ನ, ಜನಪೇಶ್ವರ, ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ, ಮುದ್ದಣ—ಚಂಪೂ, ನಾಟ್ಯಕಾವ್ಯ, ವಚನ, ಭಾಮಿನಿ, ವಾರ್ಧಕ, ತ್ರಿಪದಿ, ಗದ್ಯ—ಕಣ್ಣೆದುರಿಗೆ ಮೆರೆವಣಿಗೆ ಸಾಗುತ್ತವೆ. ತೀರ್ಥಂಕರ, ವೈದಿಕ ನಾಯಕ, ಸಮಾಜ ಸತ್ತ್ವ ಭಕ್ತಿ, ಕಥೆ, ವಿಮರ್ಶೆ— ವಸ್ತುವಿನ ವೈವಿಧ್ಯ, ವಿಕಾಸ, ಪ್ರಗತಿಗೆ ಎಲ್ಲಿ-ತಡೆಯಿದೆಯೇ? ಇಷ್ಟು ಹೆಜ್ಜೆ ತಿರ ನಾವು ಅಪೇಕ್ಷಿಸುವಂತೆ ಇರದಿರಬಹುದು; ಆದರೆ ಅತಿಯಾಗಿ ಅಪೇಕ್ಷಿಸುವುದೂ ಪೀಕಾಕ್ (Peacock) ಅವರು ಹೇಳಿದಂತೆ ಒಂದು ರೋಗವಾದೀತು.

"To expect too much is a disease in the expectant for which human nature is not responsible."

ಈ ರೀತಿ ನೋಡಿದರೆ ಪ್ರಗತಿ ಕನ್ನಡ ಕಾವ್ಯಕ್ಕೆ ಅತಿಥಿಯಲ್ಲ; ಅದು ಕಾವ್ಯದ ಒಡನಾಡಿ. ಸ್ವಲ್ಪ ದುಡುಕಿ ಹೇಳಬಹುದಾದರೆ ಪ್ರಗತಿಯೇ ಕನ್ನಡ ಕಾವ್ಯದ ಪರಂಪರೆಯೇನೋ ಎನಿಸುತ್ತದೆ. ಪ್ರತಿ ಕವಿಯೂ ಒಂದು ಮಾರಾದರೂ ಮುಂದುವರಿಯಲು ಯತ್ನಿಸಿದ್ದಾನೆ.

## ಹೆಣ್ಣೊರಕೆ

ಶ್ರೀ. ಶ್ರೀಧರ, ಪುಣೆ

೧

ಹೆಣ್ಣಾನಿ ಹೆಣ್ಣೆಂಬ ಹೆಣ್ಣಿನ ಬಾಸಣೆ, ಹೆಣ್ಣೆಂಬುವುದೇ ರುಚಿ ನೋಡ!
ಹೆಣ್ಣಿನ ಜೀವವೆ ಗಂಡಿನ ಕರುಳಿಗೆ ಹದುಸವನುಣಿಸುವ ಸೆಲೆ ನೋಡ!

೨

ತಾಯಿಯ ಮೊಲೆಯಿಂದೊಸರುವ ನೊರೆಯೇ ಬಾಲನ ಬಾಯಿಗೆ ಸವಿ ನೋಡ!
ಯೌವ್ವನದೊಳಗೆಯೆ ತುಂಬಿದ ಮೊಲೆಯೇ ಕಣ್ಣಿಗೆ ಕಾಂತಿಯ ಕುಡಿ ನೋಡ!

೩

ತಾಯಿಯ ತೊಡೆಗಳ ತೊಟ್ಟಿಲಿನೊಳಗೆ ಬಾಲ್ಯದ ಬೆಳಗೆಯ ಸಿರಿ ನೋಡ!
ತರುಣಿಯ ತೊಡೆಗಳ ಬಿಡಿಗಿನ ಕಾಂತಿಯೆ ತೊಟ್ಟಿಲಿನೊಳಗಿನ ಮಣಿ ನೋಡ!

೪

ತಾಯಿಯು ಕೊಡುತಿಹ ಮುದ್ದಿನ ತುತ್ತಿಗೆ ಹೊಟ್ಟೆಯು ತುಂಬುವ ನಗೆ ನೋಡ!
ತರುಣಿಯು ಕೊಡುತಿಹ ಮುದ್ದಿನ ರಸದೊಳು ಹೊಸಹೊಸ ಜೀವದ ಕಸಿ ನೋಡ!

೫

ತಾಯಿಯು ನುಡಿಸುವ ಸ್ವರದೊಳಗೆಲ್ಲಾ ಸಂಗೀತದ ತಿಳಿಹರಿ ನೋಡ!
ಹೆಂಡತಿ ನುಡಿಯುವ ದನಿಯೊಳಗೆಲ್ಲಾ ಕಾಮನ ಬಿಲ್ಲಿನ ಸಂ ನೋಡ!

೬

ಮಾತೆಯ ಪ್ರೀತಿಯ ನೋಟದಿ ವಿಶ್ವದ ಪರಮಾತ್ಮನ ದಯೆಯನು ನೋಡ!
ಕಾಂತೆಯ ಎರಕದ ಕಡೆಗಣ್ಣಿನ ಸಂ ಭ್ರಾಂತಿಯನೊಗೆಯುವ ಕಣೆ ನೋಡ!

೭

ಅನ್ವಪ್ಪಚ್ಚಿಯ ಹೃದಯದಿ ತುಂಬಿದ ಎರಕದ ಹಾಲಿನ ಕೆನೆ ನೋಡ!
ಸೆಡವಿನ ಮಡದಿಯ ಪ್ರೇಮದೊಳುಕ್ಕುವ ಮದಿರೆಯ ತಿರುಗಣಿ ತೆರೆ ನೋಡ!

# ವಿಜಯಶ್ರೀ

ಚಿಕ್ಕ ಕಥೆ

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

**೧೯೪೨ನೆಯ ಆಗಸ್ಟ್ ನಂತರದ ಕ್ರಾಂತಿಕಾಲದಲ್ಲಿ, ಉತ್ತರ ಕರ್ನಾಟಕದ ಉತ್ತರದ ಗಡಿಯಲ್ಲಿ ನಡೆದಿರಬಹುದಾದ ಘಟನಾಚಿತ್ರವಿದು. ಹಳ್ಳಿಹಳ್ಳಿಯ ಜನರೆಲ್ಲರ ಹೃದಯವೂ ಸ್ವಾತಂತ್ರ್ಯದ ಆಕಾಂಕ್ಷೆಗೆ ಆಗರವಾಗಿರದಿದ್ದರೆ ಕ್ರಾಂತಿ ಅಷ್ಟೊಂದು ಪರಿಣಾಮಕಾರಿಯಾಗುತ್ತಿತ್ತೆ ?**

●

ಹಿರಿಯೂರು-ಹೊನ್ನೂರುಗಳ ನಡುವೆ ಸುಮಾರು ಪ್ಯೆಲು ಅಂತರ ಒಂದು ಊರಿಂದ ಮತ್ತೊಂದು ಊರಿಗೆ ಹೋಗಬೇಕಾದರೆ ಚೆನ್ನಾಗಿ ನಡೆಯುವವನಿಗೂ ಎರಡು ತಾಸು ಹಿಡಿಯುತ್ತಿತ್ತು. ಯಾಕೆಂದರೆ ದಾರಿಯು ಎರಡು ಮೂರು ಮೊರಡಿಗಳನ್ನು ಸುತ್ತು-ವರಿದು ಏರಿ ಇಳಿದು ಹೋಗುವಂತಹುದು, ಕಲ್ಲು ಮುಳ್ಳುಗಳಿಂದ ಕೂಡಿದಂತಹದು ಇಂಥ ದಾರಿಯಿಂದ ಚಿಕ್ಕಣ್ಣ ಅವಸರದಿಂದ ಹಿರಿಯೂರಿಗೆ ನಡೆದಿದ್ದಾನೆ. ಅವನ ದೃಷ್ಟಿಯು ಮೇಲಿಂದ ಮೇಲೆ ಕೈಗಡಿಯಾರದತ್ತ ಹರಿಯುವುದು ಈಗಾಗಲೆ ಎಂಟೂ ಕಾಲು ಗಂಟೆಯಾಗಿದ್ದಿತು ಒಂಬತ್ತ ಗಂಟೆಗೆ ಅವನು ಶಾಲೆಯಲ್ಲಿ ಇರಲಿಕ್ಕೆ ಬೇಕು. ಶಾಲೆಯ ಸರಿಯಾದ ಸಮಯಕ್ಕೆ ಹೋಗಬೇಕಾದರೆ ಅದಷ್ಟು ಒತ್ತರದಿಂದ ಸಾಗಬೇಕಾಗಿದ್ದಿತು ಅದರಲ್ಲೂ ಈ ಹೊತ್ತು ಊರಿಂದ ಹೊರಡಲಿಕ್ಕೆ ಸ್ವಲ್ಪ ತಡವಾಗಿದ್ದಿತವನಿಗೆ. ಆದುದರಿಂದ ಚಿಕ್ಕಣ್ಣ ಅತ್ತಿತ್ತ ನೋಡದೆ ಮುನ್ನಡೆಯುತ್ತಿದ್ದ. ಮುಖ್ಯಾಧ್ಯಾಪಕರು ಈ ವಿಲಂಬನಾದುವಕ್ಕೆ ಏನೆನ್ನುವರೊ ಎಂಬ ಯೋಚನೆಯಲ್ಲಿ ಅವನು ಹಾದಿಯನ್ನು ಹಿಂದೆ ಸರಿಸುವುದರಲ್ಲಿ ಮಗ್ನನಾಗಿದ್ದನಲ್ಲವೆ, ಮತ್ತಾವ ಕಡೆಗೂ ಅವನ ಲಕ್ಷ್ಯವಿರಲಿಲ್ಲ.

"ನಮಸ್ಕಾರರೀ ರಾಯರs" ಎಂಬ ನನೆಗುದಿಯ ಮಾತೊಂದು ಒಮ್ಮೆಲೆ ಚಿಕ್ಕಣ್ಣನ ಕಿವಿಗೆ ಬಿತ್ತು. ಚಿಕ್ಕಣ್ಣ ಮುಖವೆತ್ತಿ ನೋಡಿದ; ಸವಿಾಪದ ಹೊರಡಿಯಲ್ಲಿಯ ಕಾಲುದಾರಿಯೊಂದರಿಂದ ಶಾಂತೇಶ ಬರುತ್ತಿದ್ದನೆ. ಅವನ ಜೊತೆಯಲ್ಲಿ ಅಪರಿಚಿತ ವ್ಯಕ್ತಿಯೊಬ್ಬನಿದ್ದ. ಕೆಲಹೊತ್ತು ಮಾತನಾಡದೆ ಇಬ್ಬರೂ ಮುಂದೆ ಬಂದರು. ಅದೇಕೋ ಈ ಹೊತ್ತು ಶಾಂತೇಶನ ಮುಖ ಬಾಡಿದಂತಿತ್ತು. ನಿದ್ದೆಗೆಟ್ಟವರಂತೆ ಕಣ್ಣುಗಳು ಕೆಂಪಗಾಗಿದ್ದುವು ಜೊತೆಯವನ ಮುಖದಲ್ಲಿ ಅಂಜಿಕೆಯು ಒಡಮೂಡುತ್ತಲಿತ್ತು. ಸೂಕ್ಷ್ಮದೃಷ್ಟಿಯವನಾದ ಚಿಕ್ಕಣ್ಣನಿಗೆ ಇದು ಹೊಳೆಯದೆ ಇರಲಿಲ್ಲ

"ಏನು ಶಾಂತೇಶ, ಇಷ್ಟು ನಸುಕಿನಲ್ಲಿ ಯಾವ ಕಡೆಯಿಂದ ಬರುವುದಾಯಿತು? ಸಂಗಡ ಹೊಸಬರಾರೊ; ಇವ್ವಂಕೆ ಕಾಣುತ್ತಿದೆ!" ಚಿಕ್ಕಣ್ಣ ನಗೆಮೊಗದಿಂದ ಕೇಳಿದ. "ಹೊನ್ನೆ ಸಂಜಿಗೇನೇ ಬಂದಿದ್ದೇವೆ. ನಿಮ್ಮ ದಾರೀ ಕಾಯ್ದು ಕಾಯ್ದು ಸಾಕಾಗಿ ಹೊಯ್ತು. ನಿಮ್ಮನ್ನು ಕಾಣುವ ಆತುರ ಹೆಚ್ಚಾಗಿ 'ಈಗ ಬರಬಹುದೇನೋ' ಎಂದು ಇದೇ ದಾರಿಗುರುವ ಬಾವಿಗೆ ನ್ನಾನಕ್ಕೆಂದು ಬಂದಿದ್ದೆವು..... ... ಎಂದು ಎಳೆದ ಸ್ವರದಲ್ಲಿ ಶಾಂತೇಶ ನುಡಿದ. "ಪೊಡ್ತವರು! ಇಂಥ ಚಳಿಯಲ್ಲಿ ತಣ್ಣೀರಿನ ಸ್ನಾನ ಮಾಡಲಿಕ್ಕೇನು? ಮನೆಯಲ್ಲಿ ಮಾಡಬೇಕಿತ್ತು? ಅಜ್ಜಿಗೆ ಹೇಳಿದ್ದರೆ ನೀರು ಕಾಯಿಸಿ ಕೊಡುತ್ತಿರಲಿಲ್ಲವೆ?' ....

ಅವರು ನೀರು ಕಾಯಿಸಿದ್ದರು....ನಾವು ನಿಧಾನಸ್ಥರಲ್ಲಿ; ಆದರೆ ನಿಮ್ಮನ್ನು ಕಾಣುವ ಆತುರ ಒಂದಿತ್ತಲ್ಲ....ಅದಕ್ಕಾಗಿ ಒಂಜೆವಾಯಿತು. ..." ಶಾಂತೇಶ ನಡುನಡುವೆಯೇ ಹೇಳಿದ.

"ಎರಡು ಮೂರು ತಿಂಗಳಲ್ಲಿ ಒಮ್ಮೆಯಾದರೂ ನೋಡಬಯಸದವರಿಗೆ ಈಗ ಇಷ್ಟು ಆತುರ ಹೆಚ್ಚಾಯಿತೆ?"

"ನಮ್ಮ ಕೆಲಸ ಸುಸೂತ್ರ ಸಾಗಿದಾಗ ನಿಮ್ಮ ಕಡೆಗೆ ಯಾಕೆ ಬರಬೇಕು ನಾವು?"

"ಅದೇಕೆ ಬರಬಾರದು!" ಸ್ವಲ್ಪ ತಡೆದು ...."ಈಗ ಜನಕಾ ಸಂಘವು ಚೆನ್ನಾಗಿ ನಡೆದಿಲ್ಲವೆ? ನೊನ್ನೆ ಮಹಾತ್ಮರನ್ನು ಹಿಡಿದ ದಿವಸ ತರುಣರು ಒಳ್ಳೇ ಹುರುಪಿನಿಂದ ಕೆಲಸ ಮಾಡಿದರಂತಲ್ಲ!" ಎಂದು ಚಿಕ್ಕಣ್ಣ ಉತ್ಸುಕತೆಯಿಂದ ಕೇಳಿದ.

"ನಿಜ; ಆದರೆ ಅದರ ಸ್ವರೂಪವು ಬೇರೆಯೇ ಆಯಿತು. ನಿಮಗೂ ಕೇಳಿ ಗೊತ್ತಿರಬೇಕಲ್ಲ!"

"ಅಹುದು; ನಿನ್ನೆಯೇ ಮೋಟಾರ್ ಸ್ಟ್ಯಾಂಡಿನ ಮೇಲೆ ಯಾರೋ ಮಾತಾಡತ್ತಿದ್ದರು.....'ಬೆಳ್ಕೇರಿಗೆ ಮಿಲಿಟರಿ ಬಂದಿದೆ. ತರುಣರೆಲ್ಲ ಊರು ಬಿಟ್ಟರುವರು....' ಎಂದು."

ಮುಂಜಾನೆಯ ಹೊಗೆಮಂಜನಲ್ಲಿ ಮೊರಡಿಯ ಮೇಲೆ ಎದುರೆದುರಾಗಿ ನಿಂತ ಮೂವರ ಮುಖದಲ್ಲಿಯೂ ಆತುರವು ಹೆಚ್ಚಾಗಿದ್ದಿತು. ಮುಂಜಾನೆಯ ಮರೆಯಲ್ಲಿ ರವಿಯು ಮೆಲ್ಲಗೆ ಮೇಲಕ್ಕೇರುತ್ತಲಿದ್ದ ಮೂವರೂ ಕೂಡಿ ಹಿರಿಯೂರ ಕಡೆಗೆ ಸಾವಕಾಶವಾಗಿ ನಡೆಯತೊಡಗಿದರು.

"ಹೀಗೇನು? ಮತ್ತೇನೇನು ಆಗಿದೆಯಂತೆ...?' ಎಂದು ಚಿಕ್ಕಣ್ಣನ ಮುಖದ ಕಡೆಗೆ ನೋಡುತ್ತ ಶಾಂತೇಶ ಕೇಳಿದ.

"ನನ್ನನ್ನೇ ಕೇಳು! ನಿನಗೆ ಗೊತ್ತಿಲ್ಲವೇ ನೀವು ಮಾಡಿದ್ದು?" ಚಿಕ್ಕಣ್ಣ ನಗುತ್ತ ನುಡಿದ.

"ಅಪರಿಗೇನು ಗೊತ್ತು? ಮೂರು ದಿವಸಗಳಾಯಿತು ಅವರು ಊರುಬಿಟ್ಟು....., ಎಂದು ರಾಮು--ಇನ್ನೊಬ್ಬಾತನ ಹೆಸರು-ನಡುವೆಯೇ ಮಾತುಸೇರಿಸಿದ

"ನೀವೆಂದು ಊರು ಬಿಟ್ಟಿರಿ?" ಕೈಯೊಳಗಿನ ಕೊಡೆಯನ್ನು ಬಗಲಲ್ಲಿ ಹಿಡಿಯುತ್ತ, ರಾಮನ ಕಡೆಗೆ ಹೊರಳಿ ಚಿಕ್ಕಣ್ಣ ಕೇಳಿದ.

"ನಿನ್ನೆ ಸಂಜೆಗೆ...." ಮುಖದಲ್ಲಿ ಭಯವು ಒಡಮೂಡುತ್ತಿರಲು ರಾಮ ಹೇಳಿದ.

"ಅಲ್ಲಿ ಏನು ವಿಶೇಷ?" ಚಿಕ್ಕಣ್ಣ ಕೇಳಿದ.

"ವಿಶೇಷವೆಂದೇನು ಕೇಳುವಿರಿ? ಎಂಥ ಭಯಂಕರ ಪರಿಸ್ಥಿತಿಯದು! ನಿನ್ನೆಯ ಬೆಳಗು ಮುಂಜಾನೆ ಒಮ್ಮೆಲೇ ಹತ್ತೇಟು ಮಿಲಿಟರಿ ಮೋಟಾರುಗಳು ಬಂದವು; ಕೂಡಲೆ ಊರಲ್ಲೆಲ್ಲ ಗಡಬಡಿ ಎದ್ದಿತು. ಕೆಲವು ಜನ ಹಿರಿಯರು: 'ತರುಣರೆಲ್ಲ ಈಗಿಮೀಗ ಊರು ಬಿಟ್ಟು ಹೊಲಗಳಲ್ಲಿ ಬೆಳೆಯೊಳಗೆ ಅಡಗಿಕೊಳ್ಳಬೇಕು....' ಎಂದರು. ಮತ್ತೆ ಕೆಲವರು: 'ಎಲ್ಲಿ ಹೋದರೇನು, ಅವರು ಬಿಟ್ಟು ಹೋಗುವರೆ?' ಎಂದೆನ್ನತೊಡಗಿದರು. ಮತ್ತೊಬ್ಬರು 'ಹುಡುಗಾಟ ಸಾಕಿ ಎಲ್ಲರ ನೇಲೆ ತಂದಿಟ್ಟರು! ಮೀ ಕೂಗಿ ನೀಗಿ ಹಾವಳಿ ತಂದಿಟ್ಟಿತಂತೆ! ಆಗತಾನೆ ತಿಳಿದಿದ್ದೆ ಅವರ ಬೆನ್ನ ಹತ್ತೋದು ನೆಟ್ಟಗಲ್ಲ ಅಂತ..ಏ ಅಬಿಳಿ ಟೊಪ್ಪಿಗೀ ತಗಸು ಬಗೆದು ಪಟಕಾನಕಾ ಸುತ್ತಾಕಿಲ್ಲಾ?" ಎಂದು ತರುಣರಿಗೆ ಬೇಳ ತೊಡಗಿದರು ಇದೆಲ್ಲದರ ಪರಿಣಾಮವಾಗಿ ತರುಣರೆಲ್ಲ ಅಡಗಲೆಂದು ಅತ್ತಿತ್ತ ಓಡಾಡಲು ಪ್ರಾರಂಭಿಸಿದರು. ಕೆಲಹೊತ್ತಿನಲ್ಲಿ ಯಾತಲೆಯು ಮೇಲೆ ನೋಡಿದರೂ ಗಾಂಧಿ ಟೊಪ್ಪಿಗೆಯು ಒಂದಲು 'ಬಾದಲಿ' 'ಕೋಮು' ಪಟಕೆಗಳೇ ಕಾಣಹತ್ತಿದುವು. ಕೆಲವರು ಊರ ನೆರೆಯಲ್ಲಿರುವ ಜೋಳದ ಬೆಳೆಯಲ್ಲಿ ಸೇರಿ, ಅಲ್ಲಿಂದೆತ್ತೋ ಹೋದರು. ಹೊಸಮನಿ ಭೀಮನೂ ಹಾಗೆ ಮಾಡಬೇಕೆಂದು; ಏನಾತರ ಹಿತ್ತಲಿನಿಂದ ಬೇಲಿ ಹಾರುವುದರಲ್ಲಿದ್ದ. ಅಷ್ಟರಲ್ಲಿ ಒಬ್ಬ ಮಿಲಿಟರಿ ಸಿಪಾಯಿ ಕಾಣಿಸಿದ ಸಂತೆ, ಅವನಿಗೆ. ಅಷ್ಟರಲ್ಲಿಯೆ ಊರ ಸುತ್ತಲೂ ಮಿಲಿಟರಿ ಸಿಪಾಯಿಗಳು ವ್ಯಾಪಿಸಿವ್ದರಂತೆ. ನನ್ನ ಮೇಲೆ ಗೌಡರ ಕಣ್ಣು ಬಹಳವಾದ್ದರಿಂದ, ನಾನು ನೊನ್ನೆಯಿಂದ ಊರಲ್ಲಿಲ್ಲವೆಂಬ ಸುದ್ದಿಯನ್ನೇ ನಮ್ಮ ಮನೆಯವರು ಊರಲ್ಲೆಲ್ಲ ಹರಡಿದ್ದರು. ಈ ಶಾಂತೇಶನ ಸಂಗಡ ನಾನೂ ಹೋಗಿರಬೇಕೆಂದು ಕೆಲವರು ತರ್ಕಿಸುತ್ತಿದ್ದರು. ಆದರಿಂದ ನಾನು ಮನೆ ಬಿಟ್ಟು ಹೊರಗೆ ಬರುವುದೂ ಉಚಿತವಾಗಿರಲಿಲ್ಲ; ಅಲ್ಲೇ ಹಿತ್ತಲಲ್ಲಿ ಹೊಟ್ಟಿನ ಬಣವೆಯಲ್ಲಿ ಸೇರಿ, ಮರೆಗೆ ಕಣಿಕೆಯ ಸಿವುಡುಗಳನ್ನು ಇಟ್ಟುಕೊಂಡೆ. ಅಲ್ಲಿಂದ ನಮ್ಮೂರ ಮುಖ್ಯ ದಾರಿಯು ಕಾಣುತ್ತಿದ್ದಿತು....ಯಾರು ಊರೊಳಗೆ ಬರಬೇಕಾದರೂ ಈ ದಾರಿಯಿಂದಲೇ ಬರಬೇಕು. ಜಾವಡಿಯಿಂದ ಊರ ಹೊರಗೆ ಹೋಗಬೇಕಾದರೂ ಇದೇ ಮಾರ್ಗದಿಂದ ಹೋಗುವರು. ಎಲ್ಲವೂ ಕಾಣುವುದೆಂದು ಸ್ಪಷ್ಟವಾಗಿ ಕಾಣುತ್ತೆ. ಆದರೂ ಎದೆ ಡಾರುತ್ತಿದ್ದಿತು. ಮೂರು ನಾಲ್ಕು ಗುಂಡು ಹಾರಿಸಿದ ಸಪ್ಪಳವು ನನ್ನ ಎದೆಯನ್ನೇ ನಡುಗಿಸಿತು. ಸ್ವಲ್ಪ ಹೊತ್ತು ಎಲ್ಲವೂ ಶಾಂತವಾಗಿದ್ದಿತು. ಆ ಮೇಲೆ 'ಟಪ್-ಟಪ್' ಎಂದು ಒಟ್ಟಿನ ಸಪ್ಪಳ ಕೇಳಬರಹತ್ತಿತು. ನಾನು ಕುಳಿತಲ್ಲಿಂದಲೇ ಆ ಸಿವುಡುಗಳ ಸಂದಿಯೊಳಗಿಂದ ಸಮ್ಮೂರ ಮುಖ್ಯ ಮಾರ್ಗದ ಕಡೆಗೆ ಕಣ್ಣು ಮಿಟುಕಿಸದೆ ನೋಡುತ್ತಿದ್ದೆ. ಗೌಡರು ಯಾರೊಡನೆಯೋ ಮೆಲ್ಲಗೆ ಮಾತಾಡುತ್ತ ಓಡುತ್ತಿದ್ದರು! ತಲೆಯ ರುಮಾಲು ಬಿಚ್ಚಿತ್ತು....ಕೈನಡುಗುತ್ತಿದ್ದುವು ....ಕೋಟು ಅಸ್ತವ್ಯಸ್ತವಾಗಿತ್ತು....ಕಚ್ಚೆ ಕಳಿಯುವುದರಲ್ಲಿತ್ತು. 'ಆ ಶಾಂತೇಶನನ್ನು ತಂದುಕೊಡಿ, ಇಲ್ಲಾಪಾದೆ ಊರನ್ನೇ ಸುಟ್ಟು ಹಾಕುವೆವು.. ನುಸಿ ನುಸಿ ಪುಡುಕುವೆವು. ಸಿಕ್ಕವರಿಗೆ ಗುಂಡು ಹಾಕುವೆವು' ಎನ್ನುವರು..ಎಂದು ಏನೇನೋ ಹೇಳುತ್ತ ನಡೆದಿದ್ದರು! ಹಿಂದಿನಿಂದಲೇ ನಲುವತ್ತು ಐವತ್ತು ಜನ ಸೋಲ್ಜರರು ಕಮಾಂಡರನ ಬಿಜ್ಜೆಯ ಮೇರೆಗೆ 'ರೈಟ್ ಲೆಫ್ಟ್' ಎಂಬ ತಾಳವಗುಟ್ಟು ಹೆಜ್ಜೆಗಳನ್ನಿಡುತ್ತ ಬಂದರು...! ಎಲ್ಲರ ಹೆಗಲುಗಳ ಮೇಲೆಯೂ ಕೋವಿಗಳಿದ್ದುವು. ಸ್ವಲ್ಪ ಸ್ವಲ್ಪ ನಡೆದು ಅಳ್ಳಿಲ್ಲಿಗೆ ಸಿಂತು 'ರೈಟ್ ಲೆಫ್ಟ್' ಎಂದು ಕಾಲುಗಳನ್ನು ನಿಲಿಕ್ಕೆ ಬಡಿಯುತ್ತಿದ್ದರು!"

"ಅರ್ಧ ಮಫ್ಲ ಕಲಿತ ಕೆಲವು ಮಿಲಿಟರಿ ಸಿಪಾಯಿಗಳನ್ನು ಹಿಂದು ಹಳ್ಳಿಯ ಜನರನ್ನು ಬೆದರಿಸುತ್ತಿರಬೇಕು...." ಎಂದು ಚಿಕ್ಕಣ್ಣ ತನ್ನ ತರ್ಕವನ್ನು ತಿಳಿಸಿದ.

"ಅಲ್ಲ; ಮುಂಚೆ ಹೇಳುವೆನಾದರೂ ಕೇಳಿರಿ! ಆ ಮಿಲಿಟರಿ ಜನರು ಊರೊಳಗೆ ಒಂದಾಗಿ, ಒಂದಾವ ಮನೆಯಿಂದಲೂ ಒಂದು ಕೂಸು ಕೂಡ ಹೊರಗೆ ಬರುತ್ತಿರಲಿಲ್ಲ. ಇಷ್ಟು ಭೀಕರವಾಗಿತ್ತು, ಆ ಸಂದರ್ಭ. ಆ ಸಮಯದಲ್ಲಿ ಅವರ ಹೆಜ್ಜೆಯ ಸಪ್ಪಳವು ತಮ್ಮ ತಾಯಿಯನ್ನು ತಾವೇ ತುಳಿದೊತ್ತುವ ಪೆಟ್ಟುಗಳ ಸಪ್ಪಳದಂತೆ ಕೇಳಬರುತ್ತಿದ್ದಿತು. ಸಂಜೆಯವರೆಗೆ ಊರಲ್ಲೆಲ್ಲ ತಿರುಗಿದರು. ಮನೆಮನೆ ಹೊಕ್ಕರು, ಹೆಂಗಸರನ್ನು ಹೆದರಿಸಿದರು, ಹುಡುಗರನ್ನು ಹಿಡಿದರು, ತರುಣರನ್ನು ಹೊಡೆದರು. ಕೆಲವು ಮುದುಕರನ್ನಂತೂ ಮುಂಜಾನೆ ಜಾವಡಿಯಲ್ಲಿ ಒಯ್ದು ಕೂಡಿಸಿದವರು ಊಟಕ್ಕೂ ಮನೆಗೆ ಬಿಡಲಿಲ್ಲ. ಗೌಡರಿಗೆ 'ಶಾಂತೇಶನನ್ನು ತಂದು ಕೊಡಿರಿ, ಮುಖ್ಯ ಚಳವಳಿಯೋರನಾತ; ಇಲ್ಲದಿದ್ದರೆ ನಿಮ್ಮನ್ನು ಸಸ್ಪೆಂಡ್ ಇಡತೇನೆ...' ಎಂದು ಪೋಲಿಸ್ ಸಾಹೇಬನು ಗದರಿಸಿದನಂತೆ. ಸಂಜೆಯು ತಾನು ಹೊತ್ತು ಉಳಿಯಿತು ಊರೆಲ್ಲ ಸ್ತಬ್ಧವಾಯಿತು," ಎಂದು ಹೇಳುತ್ತಿರುವಾಗ ರಾಮನ ಸ್ವರವು ಜಗ್ಗಿದ್ದಿತು ತುಟಿಗಳು ಅದುರುತ್ತಿದ್ದುವು. ಮುಖದ ಮೇಲೆ ಭೀತಿಯ ಲಕ್ಷಣಗಳು ಕಾಣುತ್ತಿದ್ದುವು. ಕಣ್ಣುಗಳನ್ನು ಹೊರಳಿಸುತ್ತಲೂ ನೋಡತೊಡಗಿದ.

ಚಿಕ್ಕಣ್ಣನ ಮುಖವು ಶಾಂತವಾಗಿದ್ದಿತು. ಅವನು ಯಾವುದೋ ವಿಚಾರದಲ್ಲಿರುವಂತೆ ತೋರುತ್ತಿದ್ದಿತು. ಆದರೂ ಒಂದೊಂದು ಹೆಜ್ಜೆಯನ್ನು ಮುಂದಿಡುವಾಗ ರಾಮನನ್ನು ಆಶ್ಚರ್ಯಚಕಿತ ದೃಷ್ಟಿಯಿಂದ ನೋಡುತ್ತಿದ್ದ. ರಾಮು ಚಿಕ್ಕಣ್ಣನ ಕಡೆಗೆ ಹೊರಳಿದ ಅವನಿಗೆ ಮುಂದೆ ಮತ್ತೇನೇನೋ ಹೇಳಬೇಕಾಗಿದೆಯೆಂಬುದು ಆತನ ಮುಖವಿಚರ್ಯೆಯಿಂದ ತಿಳಿಯುತ್ತಿದ್ದಿತು. ಇಬ್ಬರೂ ಕುತೂಹಲ ದೃಷ್ಟಿಯಿಂದ ಅವನನ್ನು ನೋಡುತ್ತಿದ್ದರು ಆಗ ಅವನು:

"ಹೊತ್ತು ಮಳಗಿತು. ಬೆಳ್ಳನೆ ಹೊಗೆಗೆ ಒಂದೆ ಯಾರೋ ನೂತಾಡುತಿದ್ದುದು ಕೇಳಿಸಿತು. 'ಮಿಲಿಟರಿಯು ಹೊಳೆಯಾಚೆಯ ಸರಸ್ವತಪುರವನ್ನು ಸುತ್ತುಗಟ್ಟಿ ಶಾಂತೇಶನನ್ನು ಊರಲ್ಲಿ ಹುಡುಕುತ್ತಿರುವುದು, ಅಲ್ಲಿಯೂ ಸಿಕ್ಕದಿದ್ದರೆ . ಹಿಂದಕ್ಕೆ ನಮ್ಮಲ್ಲಿ ಮಾಸ್ತರನಿದ್ದನಲ್ಲ--ಚಿಕ್ಕಣ್ಣ! ಅವನಿಗೂ ಶಾಂತೇಶನಿಗೂ ಬಹಳ ಗೆಳೆತನ, ಅಲ್ಲಿಗೆ ಹೋಗಿರಬೇಕೆಂದು ಎಲ್ಲರ ತರ್ಕವಂತೆ!' ಎಂದು ಕೇಳಿದ ಕೂಡಲೆ ಇತ್ತ ಹೊಟೆ. ಊರಲ್ಲಿ ಒಡೆಯೋಣಿಗೂ

ಸೀರೆಯಿಗಳು ಮನೆಗಳೊಳಗಿಂದ ತೆಗೆದೊಗೆದ ಸಾಮಾನುಗಳು ಅಸ್ತವ್ಯಸ್ತವಾಗಿ ಬಿದ್ದಿದ್ದುವು. ಅಲ್ಲಲ್ಲಿ ಹೆಂಗುಸರೂ ಮಕ್ಕಳೂ ಗೋಳಿಡುವ ಧ್ವನಿ. ಅಡವಿಯಲ್ಲಿಯೂ ಗುಡಿಸಿಲು-ಗುಡಿಸಿಲುಗಳನ್ನು ಹೊಕ್ಕು ಹುಡುಕುತ್ತ, ಸಿಕ್ಕ ಸಿಕ್ಕ ಖೈದಿಗಳನ್ನು ಬಡಿಯುತ್ತ ಹೊಡೆಯುತ್ತ ನಡೆದಿದ್ದರು? ಎಂಥ ಅಸಹ್ಯಕರವಾದ ವರ್ತನೆಗಳವು! ಆ ಭಯಂಕರ ಪರಿಸ್ಥಿತಿಯೊಳಗಿಂದ ವಾರಾಗಿ ಇಲ್ಲಿಯ ವರೆಗೆ ಬರಬೇಕಾದರೆ, ಜೆಳತನಕ ಅಲ್ಲಲ್ಲಿ ಅಡಗಿ ಬರಬೇಕಾಯಿತು!" ಎಂದು ಹೇಳಿ ರಾಮು ಮಾತನ್ನು ಮುಗಿಸಿದ. ಎಲ್ಲರೂ ಹೆದರಿಕೆಯಿಂದ ಹೆಜ್ಜೆಗಳನ್ನು ಮೆಲ್ಲಗೆ ಇಡಹತ್ತಿದರು.

ಊರು ಇನ್ನು ಸ್ವಲ್ಪ ದೂರವಿತ್ತು. ಚಿಕ್ಕಣ್ಣನ ಮನದಲಿ ಸಿಟ್ಟು, ಉದ್ವೇಗ, ಆಶ್ಚರ್ಯಗಳ ತೆರೆಗಳು ಒಮ್ಮೆಲೇ ಎದ್ದು ನುಗ್ಗುತ್ತಿದ್ದವು. ಅದರಲ್ಲೂ ಮುಖದ ಮೇಲೆ ಆಶ್ಚರ್ಯವೇ ಹೆಚ್ಚಾಗಿ ಒಡಮೂಡಿ ತಲಿಸ್ತು. ಸುತ್ತಲೂ ಮುಂಜಿನ ಮಬ್ಬು ಮುಸುಕಿತ್ತು. "ಏಕೋ ಇಂದಿನ ಮುಂಜು ಅಸಹ್ಯವಾಗಿ ತೋರಿತು, ಚಿಕ್ಕಣ್ಣನಿಗೆ. ಮುಖದ ಮೇಲಿನ ನಂಜಿನ ಕಲೆಗಳನ್ನು ಒರಸಿಕೊಂಡು ಶಾಂತೇಶನ ಕಡೆಗೆ ತಿರುಗಿ, "ನಿಮ್ಮನ್ನು ಇಷ್ಟೊಂದು ಲಕ್ಷ್ಯವಿಟ್ಟಿಡಲು ಕಾರಣವೇನು?" ಎಂದು ಕೇಳಿದ.

"ಕಾರಣವನ್ನೇನು ಕೇಳುವಿರಿ? ಒಬ್ಬ ವ್ಯಕ್ತಿಯ ತಾರೀಪಿನ ದಿವಸ ಮುಂಬಯಿಯಲ್ಲಿ ನಮ್ಮಾತ್ಮನನ್ನೂ ಕಾಂಗ್ರೆಸಿನ ಮುಖಂಡರನ್ನೂ ಬಂಧಿಸಿದರು....ಅದು ನಮಗೆ ಐದುದಿನ ತಿಳಿಯಿತು. ಕೂಡಲೆ ನಮ್ಮಲ್ಲಿಯ ಶಾಲೆಯನ್ನು ಮುಚ್ಚಿಸಿ ಹರತಾಳ ಪಾಲಿಸಿದೆವು. ಊರಲ್ಲಿ ಪೆರೇಡಿಗೆ ಮಾಡುವುದೆಂದು ಗೊತ್ತು ಮಾಡಿದೆವು. ಭಾಷಣಗಳ ತಯಾರಿಗೆ ತೊಡಗಿದೆವು. ಸಂಜನಕೊಪ್ಪಕ್ಕೆ ಸಂತೆಗೆ ಹೋಗಿಬಂದವರು ಯಾರೋ ಹೇಳಿದರು: 'ಅಲ್ಲಿಯೂ ಸಭೆ ಆಯಿತು, ಪೆರೇಡಿಗೆ ಹೊರಟಿತ್ತು, ಪೋಲೀಸರು ಅಡ್ಡ ಮಾಡಲು ಬಂದರು, ಜನತೆ ಕೇರಿಲ್ಲ, ಹಾಗೇ ಹೊಡೆದಾಡಿದರು, ಮುಂದೆ ಸಾಗಿದರು....' ಎಂದು. ಕೇಳಿ ನಮ್ಮಲ್ಲಿಯ ಕಿವಿಗಳೂ ಹುರುಪುಗೊಂಡವು; ಮಹಾತ್ಮನನ್ನು ಬಿಡುವವರೆಗೆ ಹರತಾಳವನ್ನು ಪಾಲಿಸುವುದೆಂದು ಹಿಯಿಪಿನಲ್ಲಿ ನಿಶ್ಚಯಿಸಿದರು. ಸಂಜಗೆ ಊರಲ್ಲಿ ಮತ್ತೆ ಮೆರವಣಿಗೆ ತೆಗೆಯಲಾಯಿತು. ಡಂಗುರ ಸಾರಿತು. ಸಭೆಯಿಂದೆಯೆಂದು. ರಾತ್ರಿಯಾಯಿತು. ಬಹಳಷ್ಟು ಜನ ಬಯಲಿನಲ್ಲಿ ಕೂಡಿದ್ದಿತು. ಗೌಡರು "ಸಭೆ ಮಾಡಗೊಡುವುದಿಲ್ಲ!" ಎಂದರು. ತರುಣರು ಅವರ ಮಾತಿಗೆ ಕಿವಿಗೊಡಲಿಲ್ಲ. ಸಭೆ ಮಾಡಿದರು. ಸಭೆಗೆ ಅಧ್ಯಕ್ಷರಿರಲಿಲ್ಲ. ಮಹಾತ್ಮರ ಭಾವಚಿತ್ರವನ್ನೇ ಅಧ್ಯಕ್ಷರೆಂದು ಕುರ್ಚಿಯ ಮೇಲಿಟ್ಟಿವು. ಸೊದಲೇ ಸಿದ್ಧ ಮಾಡಿಟ್ಟು, ಕೊಡಂತೆ ..ಎಲ್ಲರೂ ಸುರುಹಿಸಿದ ಮಾತಾಡಿದರು. ಸುರುದಿನ ಮುಂಜಾನೆ ಶಾಲೆಯಲ್ಲಿ ಹುಡುಗರು ಮಾಸ್ತರರಿಗೆ ಚರಕನ ನೋಡೋ ತೆಗೆದಿಡಿರು. ಇಲ್ಲಾವರೆ ಒಡೆಯುವೆವು' ಎಂದರು. ಮುಖ್ಯಾನ್ನೊಳಗಾಗಿ ಒಡೆದೇ ಬಿಟ್ಟರು! ಸೊದಲೇ ಗ್ರಾಮಸ್ಥರು ತಿಳಿಸಿದಂತೆ ಅವೇ ದಿನದ ಸಂಜೆಯ ನಾಲ್ಕು ಗಂಟೆಗೆಂದರೆ ಪೋಲೀಸ ಸಬ್ ಇನಸ್ಪೆಕ್ಟರೂ ಪೋಲೀಸರೂ ಬಂದುನಿಟ್ಟರು. ನಾವು ಹಾಗೆಯೆ ಕರಿಸಿರಾನೆಯ ಸೆರೆವಣಿಗೆ ತೆಗೆದೆವು. ಚರಕಾ ಸಂಘದಿಂದ ಮೊದಲು ಪೆರೆವಣಿಗೆ ಹೊರಟಿತು. ಚಾವಡಿಯ ಮುಂದೆ ಬರಲು ಪೋಲೀಸರು ಅಡ್ಡಿ ಮಾಡಲು ಬಂದರು. ಕೆಲವು ಜನರು ಚಾವಡಿಗೇನೇ ಕಲ್ಲೆಸೆದು ಕೂಗಿದರು. 'ಗಾಂಧಿ ಮಹಾರಾಜಕೀ ಜೈ! ಭಾರತ ಮಾತಾಕಿ ಜೈ!!' ಎಂದು ಜಯ ಘೋಷ ಮಾಡಿದರು. ಇನಸ್ಪೆಕ್ಟರನು ಗಾಬರಿಗೊಂಡರಬೇಕು. ಜನತೆ ಚಾವಡಿಯಲ್ಲಿ ಸೇರಿತ್ತು. ಫೌಜದಾರನನ್ನು ಹೊಗೆಳೆದು ತಂದಿತು. ಎಲ್ಲರೂ ಕೂಡಿ ಅವನಿಗೂ ಖಾದಿ ಟೊಪ್ಪಿಗೆಯನ್ನು ಮಾತಿದರು. ಕೈಯಲ್ಲಿ ಕರಿಯ ಸಿರಾನೆಯನ್ನು ಕೊಟ್ಟರು. ಸರಕಾರಕ್ಕೆ ಜೈಯಲು ಹೇಳಿದರು. 'ವಂದೇಮಾತರಂ' ಯಾರು ಹೇಳಲಿಕ್ಕೆ ಹಚ್ಚಿದರು ಪೋಲೀಸರು ಸುಮ್ಮನೆ ಪೆನ್ನು ಪತ್ತಿನ್ದರು. ಫೌಜದಾರನು— ಸತ್ಯಾಗ್ರಹಿಗಳಿಗೆ ವಿರೋಧ ಮಾಡಲಿಕ್ಕಿಲ್ಲ ಎಂದು ಪ್ರತಿಜ್ಞೆ ಮಾಡಿಸಿದೆವು ಫೌಜದಾರನೂ ಮೆತ್ತಗಾಗಿದ್ದ. ಹೇಳಿದಂತೆ ಕೇಳಿದ, ಹೋದ. ನಾವು ಏನಾಲು ಕಾರ್ಯಕ್ರಮವನ್ನು ಹಾಗೆಯೇ ಇಟ್ಟಿವು. ಗುಪ್ತ ಸುದ್ದಿಯೊಂದು ಬಂತು. 'ಒಮ್ಮೆಲೇ ಮಿಲಿಟರಿಯು ಬಂದು ಎಲ್ಲ ಕಾರ್ಯಕರ್ತರನ್ನೂ ಹಿಡಿಯುವುದು' ಎಂದು. ಕೂಡಲೆ ತರುಣರೆಲ್ಲ ಒತ್ತಟ್ಟಿಗೆ ಸೇರಿದರು. ನನಗೆ ಹೇಳಿದರು: 'ನೀನು ಹಿಂದೆ ಇರಲಿಕ್ಕೆಬೇಕು ಎಂದರೆ ಮುಂದೆ ಕಾರ್ಯ ಸಾಗುವುದು' ಎಂದು. ನನ್ನನ್ನು ಅದೇ ರಾತ್ರಿಯಲ್ಲಿಯೇ ನರಸೀಪುರಕ್ಕೆ ಕಳಿಸಿದರು. ಅಲ್ಲಿಂದ ಇತ್ತ ಬಂದೆ." ಎಂದು ಒಂದೇ ಉಸುರಿನಲ್ಲಿ ಹೇಳಿ ಮುಗಿಸಿದ ಶಾಂತೇಶ.

ಚಿಕ್ಕಣ್ಣ ನಸು ಬೆವರಿದ. ಯೋಚಿಸಹತ್ತಿದ ಕೆಜ್ಜೆಗಳನ್ನು ಸಾವಕಾಶವಾಗಿ ಎತ್ತಿಡಹತ್ತಿದ. ಕಾಳಿಗಾರಳಿಯೊಮ್ಮು ಸುಳಿಯಿತು. ಚಿಕ್ಕಣ್ಣನ ಮೈಮೇರೆ ಮುಳ್ಳೆದ್ದುನ್ತು. ಊರು ಸಮೀಪಿಸಿದ್ದಿತು. "ಹೀಗೆಲ್ಲ ಆಗಿ ಬಿಡೋದೇ?" ಎಂಬ ಉದ್ಗಾರವು ಅವನ ಬಾಯಿಂದ ಅವನಿಗೆ ಗೊತ್ತಿಲ್ಲದೆಯೆ ಹೊರಟಿತು. ಶಾಂತೇಶನ ಕಡೆಗೆ ಹೊರಳಿ "ಇರಲಿ; ನೀವು ಈ ಬೀದಿಯಿಂದ ಹಾಯ್ದು ನಮ್ಮ ಮನೆಗೆ ನಡೆಯಿರಿ, ನಾನು ಶಾಲೆಗೆ ಹೋಗಿ ಮನೆಗೆ ಬರುವೆ. ಮನೆ ಸಿಕ್ಕ ಬಹುದಲ್ಲ?" ಎಂದು ಕೈಮಾಡಿ ಮನೆಯ ಹತ್ತಲಿನ ಹಾದಿಯನ್ನು ತೋರಿಸಿದ 'ಮನೆ ಸಿಗದೆ ಏನು?' ಎಂದು ಹೇಳಿ ಇಬ್ಬರೂ ಅತ್ತ ಹೋಗಿಬಿಟ್ಟರು.

ಚಿಕ್ಕಣ್ಣ ಸಾಲೆಯ ಕಡೆಗೆ ಹೊರಳಿನಡೆದ. ಅವನ ನಡಿಗೆ ಒತ್ತರದ್ದಾಗಿತ್ತು. ಅದಕ್ಕಿಂತಲೂ ಹೆಚ್ಚು ಅವನ ತಲೆಯೊಳಗಿನ ವಿಚಾರಗಳು ಓಡುತ್ತಿದ್ದವು. ಇವೇನೋ ಪುಂಡತನವಷ್ಟೇ ಮಾಡಿದ್ದಾರ! ನಿನ್ನೆ ಸಂಜೆಗೆ ಮಿಲಟರಿ ನರಸೀಪುರಕ್ಕೆ ಹೋಗಿದೆಯಂತೆ; ಎಂಬ ಮೇಲೆ ಅನರೇಸು ಇವನನ್ನು ಬಿಟ್ಟು ಹೋಗುವ ಲಕ್ಷಣ ತೋರುವದಿಲ್ಲ. ಒಂದು ವೇಳೆ ನರಸೀಪುರದಲ್ಲಿ ರಾತ್ರಿ ಮನ್ನೆರಡರ ವರೆಗೆ ಹುಡುಕಿ ಹೋಗಿದ್ದಾರೆ ಮಿಲಿಟರಿಯು ಇಸ್ಟರಲ್ಲಿಯೇ ಬರಬೇಕಾಗಿದ್ದಿತು. ಆದರೆ ಇನ್ನೂ ಒಂದಂತೆಲ್ಲ ಹಾದಿಯಲ್ಲಿ ಹೊಳೆಯೊಂದನ್ನು ದಾಟಬೇಕಾಗುತ್ತದೆ. ಇನ್ನೂ ಬರಬಹುದು....' ಎಂಬ ವಿಚಾರಮಾಲಿಕೆಯ ಮುಡಿಯೊಡನೆಯೇ ಚಿಕ್ಕಣ್ಣನ ಹೃದಯ ಹಾರತೊಡಗಿತು. 'ನನಗೂ ಹೊಸವಾದ ಊರು .... ನೊನ್ನೆ ನೊನ್ನೆಯೇ ಈ ಊರಿಗೆ ಬಂದಿರುವೆ. ಮಿಲಟರಿ ಬಂದರೆ ಶಾಂತೇಶನನ್ನು ಎಲ್ಲಿಡಬೇಕು? ಏನು ಮಾಡಬೇಕು? ಒಂದು ವೇಳೆ ಸಿಕ್ಕರೆ ಎಲ್ಲರೂ ಸಿಗಬೇಕಾಗುವುದು!' ಎಂದು ಮೊದಲಾದ ವಿಚಾರದ ಗೊಂದಲದಲ್ಲಿ ಬಿದ್ದ ಚಿಕ್ಕ-

ಣ್ಣಗೆ ಹೊಳೆಗಿನ. ಜಗತ್ತಿನ ಪರಿವೆಯೇ ಇರಲಿಲ್ಲ.

ಯಾರೋ ಕೆಮ್ಮಿದ ಸಪ್ಪಳಾಯಿತು. ಚಿಕ್ಕಣ್ಣ ಮುಖವೆತ್ತಿ ನೋಡಿದ. ಎದುರಿಗೆ ಮಿಲಿಟರಿ ಸೀಪಾಯಿ! ಉದ್ದವಾದ ನೇಪಯಷ್ಟಿ. ಹೆಗಲಮೇಲೊಂದು ಕೋವಿ ಕಾಲಲ್ಲಿ ಕರಿಯ ಬೂಟು! ಕಂಡೊಡನೆ ಚಿಕ್ಕಣ್ಣನ ಕೈಕಾಲೇ ತಣ್ಣಗಾದುವು. ಎದೆ ನಡುಗಿತ. ಮೈ ಜುಮ್ಮೆಂದಿತು ಬೆವರಿತು ' ಇದೇನಾಯಿತು? ಮಿಲಿಟರಿಯವು ಬಂದು ಬಿಟ್ಟಿವೆ! ಎಲ್ಲರೂ ಸಿಗುವೆವು! ಮುಂದೆ ನನ್ನ ಸ್ಥಿತಿ?' ಎಂಬ ವಿಚಾರಗಳು ತಲೆಯಲ್ಲಿ ಸುಳಿದೊಡನೆಯೇ ಇನ್ನೆಲ್ಲಿ ನೆಲಕ್ಕೆ ಬೀಳುವೆನೇನೊ ಎಂದು ಊರಿದ. ಕೈಯಲ್ಲಿಯ ಕೊಡೆಯನ್ನು ಆಧಾರಕ್ಕಾಗಿ ನೆಲಕ್ಕೆ ಊರಿದ. ಶಾಲೆಯ ನರೆಗೆ ಹೇಗೆ ಹೋದೆನೆಂಬುದು ಚಿಕ್ಕಣ್ಣನಿಗೆ ತಿಳಿಯಲೇ ಇಲ್ಲ. ಶಾಲೆಯ ಹೊತ್ತು ಆಗಿತ್ತು. ಹೆಡ್ ಮಾಸ್ತರೂ ಬಂದಿದ್ದರು. ಶಾಲೆಯ ಸೂಚನೆಯ ಗಂಟೆಗೆ ಎಚ್ಚತ್ತು ಚಿಕ್ಕಣ್ಣ ಶಾಲೆಯ ಕಟ್ಟೆಯನ್ನು ಏರತೊಡಗಿದ, ವಿಚಾರ ಮುದ್ರೆಯಿಂದ. ಅಷ್ಟರಲ್ಲಿ ಮುಸ್ಸಿನ ಹೆಡ್ ಮಾಸ್ತರರೇ ಅವಸರದಿಂದ ಹೊರಗೆ ಬಂದು 'ಇತ್ತ ಬಾ!' ಎಂದು ಸೂಚನೆಯೀವ ಶಾಲೆಯ ಒಂದು ಬದಿಗೆ ಕರೆದೊಯ್ದು "ಶಾಂತೇಶ ಬಂದಿದ್ದಾನೆ!" ಎಂದು ಕಳ್ಳದನಿಯಲ್ಲಿ ಹೆದರಿಕೆಯಿಂದ ಹೇಳಿದರು.

"ಯಾವ ಶಾಂತೇಶ?" ಏನೂ ತಿರಿಯದವನ ನಂತೆ ಚಿಕ್ಕಣ್ಣ ಕೇಳಿದ.

"ಬೆಕ್ಕೇರಿಯವ! ಏನು ಭಯಂಕರ ಪ್ರಸಂಗವದು! ಮಿಲಿಟರಿ ಬಂದಿದೆ, ಬೆಕ್ಕೇರಿಗೆ; ಅವರಿಗೆ ಸಿಗಲಿಲ್ಲ. ಓಡಿ ಒಂದಿದ್ದಾನೆ, ಎರಡು ದಿನವಾಯಿತು. ಮಿಲಿಟರಿ ಹುಡುಕುತ್ತ ಊರೂರು ತಿರುಗಹತ್ತಿದೆ. ನಿನ್ನೆ ನರಸೀಪುರಕ್ಕೆ ಹೋಗಿತ್ತಂತ...."

"ಹೀಗೋ" ....ಇಲ್ಲೇಕೆ ಬಂದಿದ್ದಾನೆ, ಎಲ್ಲರಿಗೂ ಕಷ್ಟ ಕೊಡಲಿಕ್ಕ...?" ಎಂದು ಸ್ವಲ್ಪ ತ್ರಾಸಿನ ಸ್ವರವನ್ನು ತಂದು ಚಿಕ್ಕಣ್ಣ ನುಡಿದ.

"ನಿಮಗೆ ಗೊತ್ತಿಲ್ಲ?"

"ಇಲ್ಲ, ನಾನು ಮೊನ್ನೆಯೇ ಊರಿಗೆ ಹೋಗಿರಲಿಲ್ಲವೇನು? ನಿನ್ನೆಗ ಬಂದೆನಲ್ಲ ಊರಿಂದ!"

"ಮೊನ್ನೆ ಬೆಳಗಿನಲ್ಲಿಯೆ ಬಂದಿದ್ದಾನೆ.... ಧ್ವನಿ ಕೇಳಬಂತು.....ಯಾರೆಂದು ಅಜ್ಜಿಯನ್ನು ಕೇಳಿದೆ .... ಆ ಮೇಲೆ ಅವಳನ್ನು ಹೊರಗೆ ಕರೆದು ಹೇಳಿದೆ: 'ಮಾಸ್ತರರು ನಾಲ್ಕು ದಿನ ಬರುವುದಿಲ್ಲ—ಎಂದು ಹೇಳಿ ಕಳಿಸಿಕೊಡು' ಎಂದರೆ, ಹುಚ್ಚು ಮುದುಕಿ 'ಬಹಳ ದಿನಕ ಬಂದಿದಾನು....ನಾಲ್ಕು ದಿನಾ ಇದ್ದು ಹೋಗಲಿ, ಮಾಸ್ತರು ಬೆಕ್ಕೇರಿಯಲ್ಲಿ ದ್ದಾಗ ಆಗಾಗ ಮನಿಗೆ ಬರತಿದ್ದ....ಚಿಕ್ಕಣ್ಣನ ಗೆಳೆಯನೀತ....' ಎಂದಿತು. ಎಲ್ಲವನ್ನೂ ತಿಳಿಸಿ ಹೇಳುವುದು ನನ್ನಿಂದಾಗಲಿಲ್ಲ. ನಾಳೆ ಪ್ರಸಂಗ ಬಂದರೆ, ಯಾರಾದರೂ ಅವಳನ್ನು ಬಯ್ದು ಕೇಳಿದರೆ ಹೀಗೇ ನನ್ನ ಹೆಸರೂ ಹೇಳೀತೆಂದು ಭಾವಿಸಿ ಸುಮ್ಮನಾದೆ...."

"ಹಾಗೆ ಮಾಡಬಾರದಿತ್ತು ನೀವು....! ನೀನೇ ಏನಾದರೂ ಹೇಳಿ ಕಳಿಸಿ ಬಿಡಬೇಕಾಗಿತ್ತು...." ಎಂದು ಚಿಕ್ಕಣ್ಣ ಹೆಡ್ ಮಾಸ್ತರರ ಮಾತಿನ ಹೊಲಬನ್ನರಿತು ನುಡಿದ.

"ಇರಲಿ, ಈಗ ಬೇಗನೆ ಇಲ್ಲಿಂದ ಅವನನ್ನು ಹೊರಗೆ ಹಾಕಿ ಬಿಡಿರಿ....ಎಲ್ಲರಿಗೂ ಉಪದ್ರವವಾದೀತು... ನೀವು ಹೊಸಬರು! ಇನ್ನೂ ನಿಮಗೆ ಈ ಊರ ಸ್ಥಿತಿ ಗೊತ್ತಿಲ್ಲ. ಈ ಊರ ಜನ ಬೇರೆ. ಒಬ್ಬರ ಬೆನ್ನು ಒಬ್ಬರಿಗೆ ಕಾಣಿಸದು. ಈಗ ನಿಮ್ಮ ನೌಕರಿ ಪ್ರಾರಂಭವಾಗಿದೆ.... ಹೋಗಿರಿ! ಹತ್ತು ಹದಿನೈದು ನಿಮಿಷಗಳಲ್ಲಿ ಎಲ್ಲಿಯಾದರೂ ಕಳಿಸಿ ಕೊಟ್ಟು ಬನ್ನಿರಿ. ಅವರು ನಮ್ಮ ಊರಲ್ಲಿಯ ಇರುವುದು ಬೇಡ...." ಎಂದು ಹೇಳಿ ಶಾಲೆಯಲ್ಲಿ ಹೋಗಿಬಿಟ್ಟರು.

ಚಿಕ್ಕಣ್ಣ ತಿರುಗಿ ಶಾಲೆಯ ಮೆಟ್ಟಿಲುಗಳನ್ನು ಇಳಿಯುತಲಿದ್ದ, ಮನೆಗೆ ಹೋಗಲೆಂದು. ಅಷ್ಟರಲ್ಲಿ ಮೂರು ನಾಲ್ಕು ಜನ ಮಿಲಿಟರಿ ಸೀಪಾಯಿಗಳು ಕುಳಿತ ಬಂಡಿಯೊಂದು ಶಾಲೆಯ ಮುಂದಿನಿಂದಲೆ ಹಾಯ್ದು ಹೋಯಿತು. ಚಿಕ್ಕಣ್ಣ ತುಂಬ ಹೆದರಿದ. ಅದರೆ ಅದನ್ನಾವುದನ್ನೂ ತೋರಗೊಡದೆ, ಗಂಭೀರವಾಗಿ ತಿರುಗಿ ಶಾಲೆಯಲ್ಲಿ ಹೋದ. ತನ್ನ ವರ್ಗದ ಹುಡುಗರನ್ನುದ್ದೇಶಿಸಿ "ನೋಡಿ ಕೊಳ್ಳಿರಿ: ಈಗ ಮೂರನೆಯ ವಾರ ಓದಿಸಿ ಕೊಳ್ಳುತ್ತೇನೆ...." ಎಂದು ಒದರಿ ಹೇಳಿದ. ಆಗ ಅವನ ಧ್ವನಿಯ ನಡುಗುವೆ ಇರಲಿಲ್ಲ. ಅವಕ್ಕೆ ಮತ್ತೊಂದು ಬಂಡಿಯು ಮಿಲಿಟರಿ ಸೀಪಾಯಿಗಳಿಂದ ತುಂಬಿ ಶಾಲೆಯ ಮುಂದಿಂದ ಹೋದುದು ಕಾರಣವಾಗಿರಬೇಕು. ಚಿಕ್ಕಣ್ಣ ಕೂಡಲೆ ಹೊರಬಿದ್ದು ಮನೆಯ ಕಡೆಗೆ ನಡೆದ. ಸ್ವಲ್ಪ ದೂರ ಹೋಗಿ ಹೊರಳಿ ನೋಡಿದ. ದೂರದಲ್ಲಿ ಆ ಮಿಲಿಟರಿ ಸೀಪಾಯಿ ಮುಂಜಾನೆ ಊರಹೊರಗೆ ಕಂಡವನು—ತನ್ನ ಜಾಡನ್ನೇ ಹಿಡಿದು ಬರುತ್ತಿರುವಂತೆ ಭಾಸವಾಯಿತವನಿಗೆ. ಊರ ಹೊರಗೆ ಹೊನ್ನೂರ ಹಾದಿಯಿಂದ ನಾವು ಮೂವರೂ ಕೂಡಿ ಬರುವುದನ್ನು ಈತ ಕಂಡನೇನೋ!—ಎಂಬ ಶಂಕೆಯಿಂದ, ಚಿಕ್ಕಣ್ಣ ಮನೆಗೆ ಹೋಗಲಿಚ್ಛಿಸದೆ ಹೊರಟ.

× × ×

"ಶಾಂತೇಶ, ಸದ್ಯ ನೀನು ಇಲ್ಲಿಂದ ಹೋದರೆ ಡುವುದು ಸುರಕ್ಷಿತ..." ಎಂದು ಮನೆಯ ಮೆಟ್ಟುಗಲ್ಲನ್ನೇರುತ್ತ ಚಿಕ್ಕಣ್ಣ ಹೇಳಿದ. ಮತ್ತು ಸ್ವಲ್ಪ ಅತ್ತಿತ್ತ ನಿರೀಕ್ಷಿಸಿ, ಮನೆಯ ಒಳಗೆ ಹೋಗಿ "ಊರಲ್ಲಿ ಏನೋ ಮಿಲಿಟರಿ ಜನರ ಓಡಾಟ ಕಾಣುತ್ತದೆ....ಅದಷ್ಟು ಬೇಗ ಇಲ್ಲಿಂದ ಸಂಸ್ಥಾನ ಸೀಮೆಯ ಚಿಕ್ಕೂರಿಗೆ ನಡೆಯಿರಿ....ಇಲ್ಲಿಂದ ಅದು ಒಂದೇ ಮೈಲಿನ ಮೇಲಿದೆ. ಶಾಲೆ ಬಿಟ್ಟ ಕೂಡಲೆ ಅಲ್ಲಿಗೆ ಬಂದು ನಿಮ್ಮನ್ನು ಕಾಣುವೆ.... ಮಧ್ಯಾನ್ಹದಲ್ಲಿ ನನ್ನ ಶಾಲೆಗೂ ಬಿಡುವು....ಮುಂದಿನ ದನ್ನು ಆ ಮೇಲೆ ನಿರ್ಧರಿಸೋಣ!"

ಶಾಂತೇಶನ ಮುಖವು ಬಾಡಿತು. ಅವನ ಮೇಲೆ ಇಂತಹ ಪ್ರಸಂಗ ಬಂದುದು ಇದೇ ಮೊದಲನೆಯ ಸಾರಿ. ಸಿರಿವಂತರ ಮಗ. ಸುಖದಲ್ಲಿ ತಿಂದುಂಡು ಬೆಳೆದವ. ಮನದೊಳಗೆ: 'ಎಲ್ಲಿ ಹೋದಲ್ಲಿ ಮಿಲಿಟರಿ ಹೀಗೆ ಬೆನ್ನಟ್ಟಿದರೆ ಅಡಗಿ ತಿರಗುವುದು ಎಷ್ಟು ದಿನ....? ಮನೆಯ ಜನರಾದರೂ ಅನುಕೂಲರಿದ್ದಾರೆಯೆ? ಅದೂ ಇಲ್ಲ. ಒಮ್ಮೆಲೇ ಸತ್ಯಾಗ್ರಹವೆಂದು ಏನೋ ಕಾರ್ಯಪ್ರವೃತ್ತನಾದೆವು....ಸಂಪೂರ್ಣ ವಿಚಾರ ಮಾಡಲಿಲ್ಲ.... ಮುಂದಿನ ಕಾರ್ಯಕ್ರಮವೇನು? ಅತ್ತ ಯುದ್ಧದಲ್ಲಿ ಮಿತ್ರಸಕ್ಷದ ಸ್ಥಿತಿ ಹೇಗಿದೆಯೋ? ಅವರ ಸ್ಥಿತಿ-ಗತಿಗಳ ಮೇಲೆಯೇ ನಮ್ಮ ಜನತೆಯ ಏಳಿಕೆಗಳು ಅವಲಂಬಿಸಿದಂತೆ ಇವೆ.' ಎಂದು ಮೊದಲಾದ ವಿಚಾರಗಳ ಗೊಂದಲದಲ್ಲಿ ಬಿದ್ದು:

"ನೀವು ಯಾವಾಗ ಬರುವಿರಿ?" ಎಂದು ಕೇಳುತ್ತ ಸಾಶಂಕ ದೃಷ್ಟಿಯಿಂದ ಚಿಕ್ಕಣ್ಣನ ಕಡೆಗೆ ನೋಡಿದ ಶಾಂತೇಶ.

"ಶಾಲೆ ಬಿಟ್ಟಕೂಡಲೆ ಬರುವೆ. ಅಲ್ಲಿಯವರೆಗೆ ಇಲ್ಲಿಯ ಒಂದಿಬ್ಬರು ಗೆಳೆಯರನ್ನು ಕೇಳಿಕೊಳ್ಳುವೆ, ಊರಲ್ಲಿಯ ನಿಜವಾದ ಪರಿಸ್ಥಿತಿ ಹೇಗೆಂಬುದನ್ನು. ಸದ್ಯಕ್ಕೆ ನೀವು ಹೊರಡಿರಿ!" ಎಂದು ಇಬ್ಬರನ್ನು ಕಳುಹಿಸಿ ಚಿಕ್ಕಣ್ಣ ಶಾಲೆಯ ಕಡೆಗೆ ನಡೆದ. ಮುಖದಲ್ಲಿ ಉದ್ವೇಗ-ಭಯಗಳು ಒಡೆದು ತೋರುತ್ತಿದ್ದುವು. ಚಿಕ್ಕಣ್ಣ ವಿಚಾರಗಳನ್ನು ಬೇರೆ ಕಡೆಗೆ ಹೊರಳಿಸಲು ಯತ್ನಿಸಿ, ಮುಖದ ಮೇಲೆ ಸ್ವಾಭಾವಿಕ ಚರ್ಯೆ ತನ್ನ ತರುವ ಪ್ರಯತ್ನದಲ್ಲಿದ್ದ, ಚಾವಡಿಯ ಮುಂದಿನಿಂದ ಹಾಯ್ದು ನಡೆದಿದ್ದ. ಚಾವಡಿಯಲ್ಲಿ ಮಿಲಿಟರಿಯವರು ಯಾರೂ ಇರಲಿಲ್ಲ; ಬಂದೂಕುಗಳು ಮಾತ್ರ ಕುಳಿತಿದ್ದರು.

"ಇಲ್ಲಿತನಕ ಬಂದು ಹೋಗದೇ ಜಾತ್ರೆಗೆ," ಎಂದು ಪಂತರು ಗಂಭೀರವಾಗಿಯೇ ಚಿಕ್ಕಣ್ಣನನ್ನು ಕರೆದರು.

ಚಿಕ್ಕಣ್ಣ ಸ್ವಲ್ಪ ಸಚಿಂತ ಮುದ್ರೆಯಿಂದ ಚಾವಡಿಯ ಕಡೆಗೆ ಹೋಗುತ್ತ "ಶಾಲೆಗೆ ಹೋಗಲು ವೇಳೆ ಆಗ್ತದೆ. ಹೋಗತೇನಿ!" ಎಂದ.

ಪಂತರು "ನಿನ್ನ ಕಡೆಗೇ ಸ್ವಲ್ಪ ಕೆಲಸ ಐತಿ ಒಮ್ಮೆ!" ಎಂದು ಹಾಸುಗುಬಳಿಯ ಮೇಲೆ ತೀರ ಸಮೀಪದಲ್ಲಿ ಕೂಡಲು ಹೇಳಿದರು. ಚಿಕ್ಕಣ್ಣ ಕುಳಿತ ಮೇಲೆ ಪಂತರು ಮೆಲ್ಲಗಿನ ದನಿಯಲ್ಲಿ "ಮನಿಯೊಳಗೆ ಏನಾದರೂ ಕಾಂಗ್ರೆಸಿಗೆ ಸಂಬಂಧಿಸಿದ ಪುಸ್ತಕ....ಕಾಗದ.. ಇದ್ದರ ಎಲ್ಲಾನ್ನಿದರೂ ಬೇರೆ ಕಡೆಗೆ ತೆಗೆದಿಡಿರಿ....ಇಂದು ನಾಳೆ ಇಷ್ಟರೊಳಗಡ ಮಿಲಿಟರಿ ಬರೋದಿದ ಅಂತ...." ಎಂದರು.

ಚಿಕ್ಕಣ್ಣನ ಮನಸ್ಸು ಮತ್ತೂ ಅಳುಕಿತು. ಕುಳಿತಲ್ಲಿಯೆ ಕೈಕಾಲುಗಳು ತಣ್ಣಗಾದುವು. ಅಲ್ಲಿಂದ ಎದ್ದು ಹೋಗುವ ಶಕ್ತಿಯೂ ಇಲ್ಲದಾಯಿತು ತನಗೆ. ಮನಸ್ಸು ಇವರು ನನಗೇ ಇದನ್ನು ಹೇಳಲು ಕಾರಣವೇನು? ನನ್ನ ಮನೆಯನ್ನೇ ತಪಾಸಿಸಲು ಮಿಲಿಟರಿ ಬರುವುದಿದೆಯೋ? - ಬಂದಿದೆಯೋ ಎನೋ! ನನ್ನ ತಂದೆ-ತಾಯಿಗಳಿಗೂ ಶಾಂತೇಶನಿಗೂ ಗೆಳೆತನ ಇದ್ದುದು. ಅವರಿಗೆ ಗೊತ್ತಾಗಿದ್ದರೆ....ನಮ್ಮ ಮನೆಯಲ್ಲಿಯೂ ಏನಾದರೂ ಕಳ್ಳಮುದ್ದಿಕೆ....ಇಂತಹದೇನೂ ಅವಳಿಗೆ ಗೊತ್ತಿಲ್ಲ...ಯಾರಾದರೂ ಸ್ವಲ್ಪ ಬಿಡರಿಸಿ ಕೇಳಿದರೆ--'ಶಾಂತೇಶ ಬಂದಿದ್ದ, ಎರಡು ದಿನ ಇದ್ದ, ಎಂದು ಹೇಳಿ ಬಿಡತಕ್ಕ ನಳು! ಆ ಮೇಲೆ ನನ್ನ ಗತಿಯೇನು?' ಎಂದು ವಿಚಾರಿಸುತ್ತಲೇ...."ಈ ಹೊತ್ತೇ ನನುಕಿನಲ್ಲ ಯಾರೋ ಬಂದಂತೆ ಕಾಣುತ್ತದಲ್ಲ!" ಎಂದು ಕೇಳಿ ತನ್ನ ಸಂಶಯವನ್ನು --ತಾನು ಕಂಡದ್ದನ್ನು ಪ್ರಮಾಣಿಸಿ ನೋಡಲು ಚಿಕ್ಕಣ್ಣ ಯತ್ನಿಸಿದ. ಪಂತರು ನಮಗೆಗೊಡಬಹುದೆಂದರೂ ಕೊಂಚ ನಡುಗದೆ ಇರಲಿಲ್ಲ.

"ಇವ್ವರೂ ಇರಬಹುದು! ಗೌತರು ನಮಗೆ ಏನೂ ತಿಳಿಸುವುದಿಲ್ಲ!" ಎಂದರು ಪಂತರು. ಪಂತರ ಮಾತಿನಿಂದ ಚಿಕ್ಕಣ್ಣನ ಮನಸ್ಸು ಮತ್ತೂ ಅಲ್ಲೋಲಕಲ್ಲೋಲವಾಯಿತು. ಮೈಯೆಲ್ಲ ಜೀವರೆಡೆಯಿತು. ಆದರೂ ಮೆಲ್ಲನೆ ಏಳುತ್ತ "ನಮ್ಮ ಮನೆಯಲ್ಲಿ ಅಂತಹ ಯಾವ ವುಸ್ತಕಗಳೂ ಇಲ್ಲ ....!" ಎಂದು ಹೇಳಿ ಹೊರಡಲನುವಾದ.

"ನಾ ಹೇಳಿನೆಂದು ಯಾರ ಮುಂದೆಯೂ ಹೇಳಬೇಡಿ, ಮತ್ತೆ!" ಎಂದು ಪಂತರು ತಮ್ಮ ಅಂಜಿಕೆಯನ್ನು ಪ್ರದರ್ಶಿಸಿ, ತಮ್ಮವನ ಕಾಲಲ್ಲಿ ಹಾವನ್ನು ಬಿಟ್ಟರು.

"ಇಲ್ಲ," ಎಂದು ಚಿಕ್ಕಣ್ಣ ಜಾಲಿಸುತ್ತ ಸಾಗಿದ ಕ್ಲಾಸಿನಲ್ಲಿ ವಿಷಯ ನಾಗಿಸುವನ್ನು ಅವನ ಮನಸ್ಸು ಸ್ಥಿರವಾಗಿರಲಿಲ್ಲ. ಕುಳಿತಲ್ಲಿಯೇ ತಲೆಯಲ್ಲಿ ಏನೇನೋ ವಿಚಾರಗಳು ಬರತೊಡಗಿದುವು. 'ನನ್ನ ಮನೆ ಸ್ಥಿತವಾಗಿದೆ ..ಇನ್ನೊಂದು ತಿಂಗಳಲ್ಲಿ ಮನೆ.... ಸುತ್ತಲೂ ಭಾರತ ಸಂರಕ್ಷಣ ಕಾಯಿದೆಯಂತೆ ಸಂಶಯ ಬಂದ ಜನರನ್ನು ಹಿಡಿಯುತ್ತಲಿದ್ದಾರೆ...! ನನ್ನನ್ನು ಹಿಡಿದರೆ ? ಹಿಡಿದರೂ ಹೋಗಲು ಆಡ್ಡಿಯಿಲ್ಲ! ಹೋಗಲು ತಕ್ಕಂತೆ ದೇಶಕಾರ್ಯವನ್ನಾದರೂ ನಾನು ಮಾಡಿರಬೇಕಲ್ಲ....! ಅತ್ತ ಇಂತಹ ದೇಶಕಾರ್ಯವನ್ನು ಮಾಡಿಲ್ಲ-ಇತ್ತ ಮದುವೆಯೂ ಇಲ್ಲ; ನಿಷ್ಕಾರಣವಾಗಿ ಸೆರೆಮನೆವಾಸ ! ಮನೆಯವರಿಗೆ ಸಂಕಟ! ನಾ ಮೊದಲೇ ಬಡವ! ಮುಂದೆ ಇಷ್ಟಕ್ಕೇ ನಿಂತಿತು. ಸೆರೆಮನೆ ಸೇರಿದ ಬಡ ಹುಡುಗನಿಗೆ....ಆ ಮೇಲೆ ಇವರು ಹೆಣ್ಣು ಕೊಡುವರೋ ಇಲ್ಲವೊ? ಹೀಗಾದರೆ ಮುಸ್ಸಿನ ತಂದೆ-ತಾಯಿಗಳು ಎಷ್ಟು ನೋದು ಕೊಂಡಾರು? ಈಗ ಮದುವೆಯ ಸಿದ್ಧತೆ ಮಾತದೆಕೋ .... ಮಾಡಬಾರದೋ .... ? ಏನು ಸದ್ಯಕ್ಕೆ ನಿಲ್ಲಿಸಿಬಿಡಬೇಕೋ....? ಸಾಮಾನು ಸಿದ್ಧಗೊಳಿಸಬೇಡಿರೆಂದು ...ಮನೆಯವರಿಗೆ ಹೇಗೆ ಹೇಳುವುದು ...ನನ್ನನ್ನು ಬಂಧಿಸುವರೆಂಬುದಾವರೂ ನಿಶ್ಚಿತವೇ ?ಒಂದು ವೇಳೆ ನಿಶ್ಚಿತವಾದರೆ ಹಿರಿಯರು ಎಷ್ಟು ನೊಂದುಕೊಂಡಾರು? ಒಬ್ಬನೇ ಒಬ್ಬ ಮಗನ ಮದುವೆ ಮಾಡುವೆನೆಂದು ಉಬ್ಬಿನಲ್ಲಿದ್ದಾರೆ! ಬಡವನ ಮದುವೆಯ ಸನ್ನಾಹವೆಲ್ಲ ಅವ ಮೇಲೆ ಒನ್ಮೈಲೇ ಹಿಡಿಮಬಟ್ಟರೆ....?' ಎಂದು ಮೊದಲಾಗಿ ತನ್ನ ವಿಚಾರದಲ್ಲಿರು ವಾಗಲೇ ಶಾಲೆ ಬಿಡುವ ಸೂಚನೆಯು ಗಂಟೆ ಯಾಯಿತು.

† † † †

ಅದೊಂದು ಜೋಳದ ಹೊಲದೊಳಗಿನ ಬೇವಿನ ಮರ. ಅವರ ಸುತ್ತಲೂ ಚೆನ್ನಾಗಿ ಜೋಳದ ನಿಲುವು ಇವೆ. ಆ ಗಿಡದ ನೆರಳನಲ್ಲಿ ಯಾರು ಕುಳಿತರೂ ಹಾದಿಯಿಂದ ಹೋಗುವವರಿಗೆ ಕಾಣುವಂತಿರಲಿಲ್ಲ. ಅಲ್ಲಿ ಕುಳಿತವರಿಗೆ ಮಾತ್ರ....ದಾರಿಯಿಂದ ಯಾರು ಹೋದರೂ ಸ್ವಲ್ಪ ತಿಳಿಯುವಂತಿತ್ತು. ಅಂತಹ ಸ್ಥಳದಲ್ಲಿ ಕುಳಿತು ಚಿಕ್ಕಣ್ಣ, ಶಾಂತೇಶ, ರಾಮು, ಮೂವರೂ ಊಟ ಮಾಡಲು ಸಿದ್ಧರಾಗಿದ್ದರು.

"ಮುಂದಿನ ಕಾರ್ಯಕ್ರಮವೇನು?" ಚಿಕ್ಕಣ್ಣ ರೊಟ್ಟಿಯ ಗಂಟನ್ನು ಬಿಚ್ಚುತ್ತ ಕೇಳಿದ. "ವಿಜಾಪುರ ಜಿಲ್ಲೆಯಲ್ಲಿ ಒಂದು ಹಳ್ಳಿಯೊಳಗೆ ನಮ್ಮ ಆಸ್ತರಿದ್ದಾರೆ.... ಅಲ್ಲಿ ಹೋಗಿ ಕೆಲವು ದಿನ ನಿಲ್ಲುವುದು ಒಳಿತೆಂದು ನನಗೆ ತೋರುವುದು. ನಾನು ಕರೆದುಕೊಂಡು ಹೋಗಿ ಇವರನ್ನು ಇಟ್ಟು ಬರುವೆ...." ಎಂದು ರಾಮು ಶಾಂತೇಶನ ಮುಖದ ಕಡೆಗೆ ನೋಡುತ್ತ ಹೇಳಿದ.

ಶಾಂತೇಶ ಏನೋ ವಿಚಾರದಲ್ಲಿರುವಂತೆ ತೋರುತ್ತಿದ್ದಿತು. ಮೂವರೂ ಮೂರು ರೊಟ್ಟಿಗಳನ್ನು ಕೈಯಲ್ಲಿ ಹಿಡಿದು ತಿನ್ನತೊಡಗಿದರು. ಎಲ್ಲರೂ ಊಟ ಮಾಡುತ್ತಿದ್ದರಾದರೂ ಯಾರ ಲಕ್ಷ್ಯವೂ ಸಂಪೂರ್ಣವಾಗಿ ಊಟದ ಕಡೆಗೆ ಇದ್ದಂತಿರಲಿಲ್ಲ. ಅಲ್ಲಿಂದ ಸಮೀಪದಲ್ಲಿಯೆ ಇದ್ದ ಹಾದಿಯಿಂದ ಯಾರಾದರೂ ಹಾಯ್ದು ಹೋದುಹಾದರೂ ಸಾಕು, ಅತ್ತ ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸುವರು. ಒಮ್ಮೆ ಅಕಸ್ಮಾತ್ತಾಗಿ ಒಂದು ವೇಲಿನ ಹೆಂಟೆಯು ಬೀಳಲು, ಚಿಕ್ಕಣ್ಣ ಜಿಟ್ಟನೆ ಎದ್ದು

(ಉಳಿಕೆಯ ಪುಟ ನೋಡಿರಿ.)



# ಕರ್ನಾಟಕದ ಚಳವಳಿಯಲ್ಲಿ ಧಾರವಾಡದ ಭಾಗ

(ಒಂದಿಷ್ಟು ಸ್ಪಷ್ಟೀಕರಣ—೩ನೆಯ ಕಂತು)

ಶ್ರೀ. ಮುದುವೀಡು ಕೃಷ್ಣರಾಯರು, ಧಾರವಾಡ

●

ಧಾರವಾಡದ ಆಧುನಿಕ ಕಾಲದ ಚರಿತ್ರೆಯನ್ನವಲೋಕಿಸಿದರೆ, ಇಲ್ಲಿಯ ಜನಜೀವನದಲ್ಲಿ ಕನ್ನಡದ ಹೊರತು ಬೇರೆ ಭಾಷೆಗೆ ಆಸರ-ಅವಸರಗಳು ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಎಂದಿನಿಂದಲೂ ಇಲ್ಲಿಯ ಮುಖಂಡರೆಲ್ಲ ಕೆಚ್ಚಿನ ಕನ್ನಡಿಗರೇ ಇರುವರು.

ಸುಮ-ಸುಮಾರಾಗಿ ೧೮೮೦ಕ್ಕೂ ಮೊದಲಿನಿಂದಲೂ ಎಂದರೆ ಇತಿಹಾಸದ ನೀರೀಕ್ಷಣೆಗೆ ನಿಲುಕುವ ಅವಧಿಯಿಂದ, ಧಾರವಾಡದಲ್ಲಿ ಕನ್ನಡನೇ ಜನಜೀವನದ ಪ್ರಧಾನ ಭಾಷೆಯಾಗಿದ್ದಿತೆಂದೂ, ೧೮೮೦ಕ್ಕೆ ತುಸು ಮೊದಲು ಇಲ್ಲಿ ಮರಾಟಿಯು ಬೆಳೆಯಹತ್ತಿತ್ತೆಂದೂ ಈ ಮೊದಲು ವಿವರಿಸಲಾಗಿದೆ. ಇಲ್ಲಿ ಜೆನ್ನಾಗಿಯೇ ಬೆಳೆಯಬೇಕೆಂಬ ಮರಾಟಿಗೆ ಬೆಳಸಬೇಕೆಂಬ ಹುಚ್ಚು ಹಂಬಲರ ಮರಾಟರಿಗೆ ಇಲ್ಲಿಯ ಕೆಚ್ಚು ಕನ್ನಡಿಗರು ಹೇಗೆ ಎದುರಾಗಿ ನಿಂತು ಕೆಪ್ಪದೆಬಿದಿದನ್ನೂ ಹಿಂದಿನ ಬರೆಹದಲ್ಲಿ ವಿವರಿಸಲಾಗಿದೆ. ೧೮೮೦ಕ್ಕೆ ಮೊದಲೂ ಮರಾಟಿ-ಕನ್ನಡಿಗಳ ಈ ಸೆಣಸಾಟವು ಹೇಗೆ ನಡೆದಿತ್ತೆಂಬುದಕ್ಕೆ ಒಂದೆರಡ್ಮ ಮಾದರಿಗಳನ್ನು ಇಲ್ಲಿ ಹೇಳುವುದು ಸ್ವಸಂಗಕ್ಕೆ ಅನುಚಿತವಾಗಲಾರದು. ಪೇಶ್ವೆಯರ ಆಳ್ವಿಕೆಯು ಇಲ್ಲಿ ಆರಂಭವಾದ ಕಾಲದಿಂದ ಇತ್ತ ಕಡೆಗೆ ಅನೇಕ ಮರಾಟಿ ಮನೆತನಗಳು ಬಂದು ನೆಲೆಗೊಂಡುವು ಗುತ್ತಲದ ಥಾಟೆ ಮನೆತನ, ಮುಳಗುಂದದ ಆತವಲೆ ಮನೆತನಗಳ ಉಲ್ಲೇಖವು ಹಿಂದಿನ ಬರೆಹದಲ್ಲಿ ಬಂದಿದೆ. ಇಲ್ಲಿಯ ಸ್ಕೂಲ್ ಇಂಗ್ಲಿಶ್ ಸ್ಕೂಲಿನ ಸಂಸ್ಥಾಪಕರಾಗಿದ್ದ ಲೇಲೇ ವಕೀಲರ ಹೆಸರೂ ಬಗಲಿ ಬಂದಿದೆ. ಕರ್ಜಗಿಯ ಜೋಗಳೇಕರ ಮನೆತನ, ಘಂಡಸಿಯ ಜೋಶಿಯವರ ಮನೆತನ ಇವೂ ಇದೇ ಮಾದರಿಯವು. ಘಂಡಸಿ ಮನೆತನದ ಜೋಶೀ ವಿನಾಯಕರಾಯರು ಧಾರವಾಡ ಹಾಯಸ್ಕೂಲಿನಲ್ಲಿ ಅಸಿಸ್ಟಂಟರಾಗಿ, ಕಮಟಾ ಹಾಯಸ್ಕೂಲಿನ ಹೆಡ್‌ಮಾಸ್ಟರಾಗಿ ಡೆಪ್ಯೂಟಿ ಎಜ್ಯುಕೇಶನಲ್ ಇನ್ಸ್‌ಪೆಕ್ಟರಾಗಿ ಇಲ್ಲಿಯ ಕನ್ನಡ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿ, ಕೊನೆಗೆ ದಕ್ಷಿಣಭಾಗದ ಎಜ್ಯುಕೇಶನಲ್ ಇನ್ಸ್‌ಪೆಕ್ಟರಾಗಿ ಸರಕಾರಿ ಸೇವೆಯಿಂದ ನಿವೃತ್ತರಾದರು. ಬಳಿಕ ಕಾಂಗ್ರೆಸ್ ಪಕ್ಷದ ಇಲ್ಲಿಯ ಅಧ್ವರ್ಯುಗಳೊಳಗೆ ಒಬ್ಬರಾಗಿ, ೧೯೩೭ರ ಅಸಹಕಾರದ ಕಾಲಕ್ಕೆ ತಮ್ಮ ವಿರಾಮವೇತನವನ್ನು ಕಳೆದುಕೊಂಡು, ಮುಂಬಯಿನ ಶಾಸನವನ್ನು ಕಷ್ಟದಲ್ಲಿ ನೂಕಿ, ೧೯೩೭ರಲ್ಲಿ ಕಾಂಗ್ರೆಸ್ಸು ಅಧಿಕಾರಗ್ರಹಣ ಮಾಡಿದಾಗ ಕಳಕೊಂಡ ಪೆನಶನನ್ನು ತರಿಸಿಕೊಡೆದು, ಮೊನ್ನೆ ಮೊನ್ನೆ ಸ್ವರ್ಗಸ್ಥರಾದುದು ಎಲ್ಲರಿಗೂ ತಿಳಿದ ಮಾತು. ಇವರು ಹಾಯಸ್ಕೂಲಿನಲ್ಲಿ ಕನ್ನಡವನ್ನು ಸರಸವಾಗಿ ಕಲಿಸುತ್ತಿದ್ದರು. ನಾನು ಹಾಯಸ್ಕೂಲಿನಲ್ಲಿ ಓದುತ್ತಿದ್ದಾಗ ಕೈ. ವಾ. ಗಂಗಾಧರ ಮಡಿವಾಳೇಶ್ವರ ತೂರಮರಿಯವರ "ಕಾದಂಬರಿಯ ಕಥೆ" ಯನ್ನು ಭಾಷಾಂತರಕ್ಕೆ ಹಚ್ಚಿ, ನಮ್ಮಿಂದ ಅದನ್ನು ಇಂಗ್ಲಿಷಿಗೆ ಪರಿವರ್ತನೆ ಮಾಡಿಸುತ್ತಿದ್ದರು. "ಗೃಹವ್ಯವಸ್ಥೆಯೂ ಆರೋಗ್ಯಶಾಸ್ತ್ರವೂ" ಎಂಬ ಅವರ ಕನ್ನಡ ಗ್ರಂಥದ ೨ ಭಾಗಗಳು ಸುಪ್ರಸಿದ್ಧವಾಗಿದೆ. ಕನ್ನಡ ಶಾಲಾಪತ್ರಿಕೆಯಲ್ಲಿ ಇವರು ಬರೆಯುತ್ತಿದ್ದ ಕನ್ನಡ ಲೇಖನಗಳು ಹೃದ್ಯವಾಗಿರುತ್ತಿದ್ದವು. ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಇವರು ಎಷ್ಟೋ ವರ್ಷ ಅಧ್ಯಕ್ಷರಾಗಿದ್ದರು. ಇವರ ಮನೆ ಮಾತು ಮರಾಟಿಯಾಗಿದ್ದರೂ ಇದು ಅಪೂರ್ವ. ಈಗೀಗ ಇವರ ವಂಶೀಕರಲ್ಲಿ ಹುಟ್ಟಿದ್ದ ಹರಿಯುತ್ತಿರುವ ಮರಾಟಿಯ ಅವಾಸ್ತವ ಅಭಿಮಾನವು ಮೊದಲು ಇವರಲ್ಲಿ ಇರಲಿಲ್ಲ. ಅದರೂ ಇತ್ತ ಕಡೆಯ ಮರಾಟರಿಗೆ ಮರಾಟಿಯಲ್ಲಿ ಸಾರ್ವಜನಿಕ ಭಾಷಣ ಮಾಡುವ ಜನ್ಮಸಿದ್ಧ ಹಕ್ಕು ಇದ್ದೇ ತೀರಬೇಕೆಂಬ ಅಭಿಮಾನದಿಂದ ಹುರಿದೆದ್ದು ತಮ್ಮ ಶಿಷ್ಯರೇ ಆಗಿದ್ದ ಕನ್ನಡ ಎದುರಾಳಿಗಳೊಂದಿಗೆ ೧೯೨೨ರಲ್ಲಿ ಹೋರಾಡಲಿಕ್ಕೆ ವಿನಾಯಕರಾಯರು ಮುಂದಾದರು. ಈ ಅವರ ಸ್ವಭಾಷಾಪ್ರೇಮವು ಸರಸ್ವತ್ಯಯನೇಯ ಬುದ್ಧಿಯ ಕನ್ನಡಿಗರ ಕಣ್ಣೊಳಗೆ ಚುರುಕಾದ ಅಂಜನ ಹಾಕುವಂತಿದ್ದಿತು. ಇದೇ ಮೇರೆಗೆ ಇತ್ತ ಕಡೆಗೆ ನೆಲಸಿದ ಜೋಗ, ಜೋಗಳೇಕರ, ಗೋಖಲೆ, ಗೋಗಟೆ ಮೊದಲಾದ ಮನೆತನಗಳು ಇಲ್ಲಿಯ ಜನಜೀವನದೊಂದಿಗೆ ಬೆರೆತು, ಕನ್ನಡವನ್ನೇ ತಮ್ಮ ವ್ಯವಹಾರದ ಭಾಷೆಯೆಂದು ಹೊಂದಿಕೊಂಡಿದ್ದುದರಿಂದ ಸಾರ್ವಜನಿಕ ಜೀವನದಲ್ಲಿ ಮರಾಟಿಗೆ ಯಾವ ಬಗೆಯ ಅನ್ಯತೆಯೂ ಇರಲಿಲ್ಲ ಇತ್ತ ಕಡೆಯ ಮರಾಟಿಗರು ತಮ್ಮ ಜಿಜ್ಞಾಸ್ವವನ್ನು ತಮ್ಮಷ್ಟಕ್ಕೆ ಕಾಯ್ದುಕೊಂಡು, ಸಾಧ್ಯವಾದಾಗ ಲಕ್ಷ್ಯವಾದಷ್ಟು ತಮ್ಮ ಭಾಷೆಯನ್ನು ಮುಂದೆ ಚಾಚುವುದಕ್ಕೆ ಅಲ್ಪ ಸ್ವಲ್ಪ ಪ್ರಯತ್ನವನ್ನೇನೋ ಮಾಡುತ್ತಿದ್ದರೆನ್ನಬಹುದು. ಇದಕ್ಕೆ ಸ್ವಭಾಷೆಯ ಪ್ರೇಮಕ್ಕಿಂತಲೂ ಚರಿತಾರ್ಥದ ಮೋಹವೇ ಹೆಚ್ಚಾಗಿ ಕಾಣುವ ಸಂಭವವೂ ಉಂಟು. ಉತ್ತರಕರ್ನಾಟಕವು ಮುಂಬಯಿ ಪ್ರಾಂತಕ್ಕೆ ಸೇರಿದಾಗಿನಿಂದ ಜನಸೇವೆಯ ಕಲ್ಪನೆಗಳ ಪ್ರವಾಹ

ಇತ್ತ ಪುಣೆ-ಮುಂಬಯಿಗಳ ಕಡೆಯಿಂದಲೆ ಇತ್ತ ಹರಿಯುತ್ತಿತ್ತೆಂಬುದು ಸ್ವಾಭಾವಿಕವೆ ಸರಿ. ಅಲ್ಲಿ ಮರಾಟಿ ವರ್ತಮಾನಪತ್ರಗಳು ಹುಟ್ಟಿದುವು. ಇಲ್ಲಿಯೂ ಶ್ರೀ. ಅಂತಾಜೀ ರಾವ್.ಚಂದ್ರ ಜೋಗಳೇಕರ ಎಂಬವರು ( ಇವರು ಮುಂದೆ ರಾವ್‌ಸಾಹೇಬರಾದರು ) ಒಂದು ಕಲ್ಲಿನ "ಛಾಪಖಾನೆ"ಯನ್ನಿಟ್ಟು 'ಧಾರವಾಡ ವೃತ್ತ' ಎಂಬ ವಾರಾಟೆ ಪತ್ರಿಕೆಯನ್ನು ೧೮೬೩ರ ಸುಮಾರಿಗೆ ಪ್ರಾರಂಭಿಸಿದರು ಧಾರವಾಡದಲ್ಲಿ ಮುದ್ರಾಟೇಪತ್ರವೆಂಬುದು ಇಲ್ಲಿಂಗು ಕನ್ನಡ ಮುಖಂಡರಿಗೆ ಕಣ್ಣಾಕಿಸುರಾಗಿ, ಮುಂದೆ ವರ್ಷಾರು ತಿಂಗಳುಗಳಲ್ಲಿಯೆ ಅವರು ಇಲ್ಲಿಯು **ಶ್ರೀ. ಹುಚ್ಚಯ್ಯಾ ಸಂಗಯ್ಯಾ ವಿಭೂತಿ** ಎಂಬ ನಂತ ಕನ್ನಡ ಬರೆಹಗಾರರನ್ನು ಮುಂದೆಮಾಡಿ "ಚಂದ್ರೋದಯ" ಎಂಬ ವಾರಪತ್ರಿಕೆಯನ್ನು ಕಲ್ಲಿನ ಮುದ್ರಣಾಲಯವನ್ನಿಟ್ಟು ಹೊರಡಿಸತೊಡಗಿದರು. ಈ ಹುಚ್ಚಯ್ಯನವರೇ ದಿವಂಗತ ಸಂಪ್ರಸಿದ್ಧ ವಕೀಲ ಸೊನ್ನಾಪುರಮಠ ಗದಿಗೆಯ್ಯನವರ ತಂದೆಯವರು.

ಮುಂದೆ ಒಂದೆರಡು ವರ್ಷಗಳಲ್ಲಿಯೆ ಶಿವನಪ್ಪಾ ಶಿವಮೂರ್ತಿಸ್ವಾಮೀಸಾಯಿ ಎಂಬವರು "ಕರ್ನಾಟಕ ಪತ್ರ" ಎಂಬ ಕನ್ನಡ ಪತ್ರಿಕೆಯನ್ನು ಹೊರಡಿಸಿದರು. ಸ್ವರ್ಗಸ್ಥ ವೆಂಕಟ ರಂಗೋ ಕಟ್ಟಿಯವರು ಇಲ್ಲಿಯ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾಗಿನಿಂದಲೇ ಸ್ವಂತ ಬುದ್ಧಿವಂತಿಕೆಯಿಂದ, ಪರಿಶ್ರಮದಿಂದ, ಕನ್ನಡ ಅಕ್ಷರಗಳ ಮೊಳೆಗಳನ್ನು ಮಾಡಿಸಿ "ಜ್ಞಾನವರ್ಧಕ" ಎಂಬ ಹೆಸರಿಗೆಳ ಮುದ್ರಣಾಲಯವನ್ನಿಟ್ಟು, ಹಲಕೆಲವು ಕನ್ನಡ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವ ಸಾಹಸವನ್ನು ನಡೆಸಿದ್ದರು. ಆಗ ಇಲ್ಲಿ ಸಂಶಿಕ್ಷಿತ ಜನರ ಕಟ-ನೋಟಗಳ ವಿಚಾರಣಾರ್ಥವಾಗಿ ಏರ್ಪಟ್ಟಿದ್ದ "ಮಿತ್ರಸಮಾಜ" ಎಂಬ ಸಂಸ್ಥೆಯು ಲೋಕಶಿಕ್ಷಣವನ್ನೂ ತನ್ನ ಗುರಿಯಾಗಿಟ್ಟುಕೊಂಡು "ಲೋಕಶಿಕ್ಷಣ"ಎಂಬ ಕನ್ನಡ ವಾರಪತ್ರಿಕೆಯನ್ನು ಈ "ಜ್ಞಾನವರ್ಧಕ" ಮುದ್ರಣಾಲಯದಲ್ಲಿಯೆ ಕೆಲದಿನ ಮುದ್ರಿಸುತ್ತಿತ್ತು. ದಿವಂಗತ ವೆಂಕಟ ರಂಗೋ ಕಟ್ಟಿಯವರೆ ಈ ಪತ್ರಿಕೆಗೆ ಮುಖ್ಯ ಸಂಪಾದಕರಾಗಿದ್ದರೆಂದು ಹೇಳಬಹುದು. ಸ್ವ. ಚುರಮುರಿ ಶೇಷಗಿರಿರಾಯರ ಕನ್ನಡ ಶಾಕುಂತಲದ ಎರಡನೆಯ ಆವೃತ್ತಿಯು ಇದೇ 'ಜ್ಞಾನವರ್ಧಕ' ಮುದ್ರಣಾಲಯದಲ್ಲಿ, ೧೮೮೮ರಲ್ಲಿ ಮುದ್ರಿತವಾಯಿತೆಂಬುದನ್ನು ನಾವಿಲ್ಲಿ ನೆನಸದಿರಲಾಗದು. ವೆಂಕಟ ರಂಗೋ ಕಟ್ಟಿಯವರು ಸೇವಾನಿವೃತ್ತರಾದ ಬಳಿಕ "ಕರ್ನಾಟಕ ಪತ್ರ"ದ ಸಂಚಾಲಕತ್ವವನ್ನು ತಮ್ಮ ಕಡೆಗೆ ತೆಗೆದುಕೊಂಡು ಸ್ವತಂತ್ರವಾಗಿಯೆ ತೆಗೆದುಕೊಂಡು ನಡೆಯಿಸತೊಡಗಿದರು. ಈ ಪತ್ರಿಕೆಯಲ್ಲಿ ಆಗ ನಡು-ನಡುವೆ ಇಂಗ್ಲಿಷ್ ಮರಾಟಿ ಲೇಖನಗಳೂ ವಿಷಯ ಅನುಸಂಧಾನದಿಂದ ಬರುತ್ತಿದ್ದವು. ೧೮೮೬ರಲ್ಲಿ ಕೈ. ವಾ. ಚಿನ್ನಪ್ಪಾ ಅನಾಡ ಎಂಬವರು "ಕರ್ನಾಟಕ ಬುಕ್‌ಡಿಪೋ ಪ್ರೆಸ್" ಎಂಬ ದೊಡ್ಡದೊಂದು ಮುದ್ರಣಾಲಯವನ್ನು ಸ್ಥಾಪಿಸಿ, ಅನೇಕ ಕನ್ನಡ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸಿದರು. ಕೈ. ವಾ. ಗಂಗಾಧರ ಶಿವಾಳೇಶ್ವರ ತೂಪದವರಿಯವರ "ಶಬ್ದಮಂಜರಿ" ಎಂಬ ದೊಡ್ಡ ಕನ್ನಡ ಕೋಶವೂ, ಅವರಿಂದೇ ಆದ "ಕಾದಂಬರಿ ಕಥೆ"ಯೂ ಇನ್ನೂ ಅನೇಕಾನೇಕ ಕನ್ನಡ ಗ್ರಂಥಗಳೂ ಶಾಲೋಪಯೋಗಿ ಚಿಕ್ಕ ದೊಡ್ಡ ಪುಸ್ತಕಗಳೂ ಈ ಮುದ್ರಣಾಲಯದಲ್ಲಿಯೆ ಮುದ್ರಿತವಾಗಿ ಪ್ರಸಿದ್ಧವಾಗಿದುಂಟು. ೧೮೯೦ರಲ್ಲಿ ಇದೇ ಚೆನ್ನವೀರಪ್ಪನವರು "ಕರ್ನಾಟಕ ವೃತ್ತ" ವಾರಪತ್ರಿಕೆಯನ್ನು ಹೊರಡಿಸಿದರು. ಇದೇ ಸುಮಾರಿಗೆ ದಿವಂಗತ ಗುರುರಾವ ರಾಘವೇಂದ್ರ ಮುಮದಾಪೂರ ಎಂಬವರು "ಪ್ರಸಾದ ರಾಘವ" ಮುದ್ರಣಾಲಯವನ್ನಿಟ್ಟು "ಲೋಕಬಂಧು" ಎಂಬ ಕನ್ನಡ ಪತ್ರಿಕೆಯನ್ನು ಹೊರಡಿಸತೊಡಗಿದರು. ೧೮೯೨ರಲ್ಲಿ "ಹಿಂದೂ ಪ್ರೀಟಿಂಗ್‌ವರ್ಕ್ಸ್" ಎಂಬುದೊಂದು ಹೊಸ ಮುದ್ರಾಲಯವು ಹುಟ್ಟಿ, ಅಲ್ಲಿ "ರಾಜಹಂಸ" ಎಂಬ ಇಂಗ್ಲಿಷ್-ಕನ್ನಡ ವಾರಪತ್ರಿಕೆಯು, ದಿವಂಗತ ರಾಮರಾವ ಬಳ್ಳಾರಿ, ವಕೀಲ ಇವರ ನೇತೃತ್ವದಲ್ಲಿ ಹೊರಡ ತೊಡಗಿತು. ಸಾರ್ವಜನಿಕ ಜೀವನದ ಹಾಗು ಲೋಕಸೇವೆಯ ಗಾಳಿಯು ಇತ್ತ ಕಡೆಗೆ ಪುಣೆ-ಮುಂಬಯಿಯತ್ತ ಕಡೆಯಿಂದ ಬೀಸುತ್ತಿದ್ದಿತೆಂಬುದನ್ನು ನೀಲೆ ಹೇಳದೆಯಷ್ಟೆ? ಪುಣೆಯಲ್ಲಿ ೧೮೮೫ರ ಸುಮಾರಿಗೆ "ನ್ಯೂ ಇಂಗ್ಲಿಶ್ ಸ್ಕೂಲ್"ನ್ನು ಕೈ. ನಾ. ಚಿಪಳೂಣಕರ ಬಾಪ್ಟಿಸ್ಟರು ಸ್ಥಾಪಿಸಿದ ಕೂಡಲೆ, ಇಲ್ಲಿಯೂ ೧೮೮೬ರಲ್ಲಿ "ನ್ಯೂ-ಇಂಗ್ಲಿಶ್ ಸ್ಕೂಲು" ಹುಟ್ಟಿದಂತೆಯೆ—ಪುಣೆಯಲ್ಲಿ "ಕೇಸರಿ" ಪತ್ರವು ಹುಟ್ಟಿದ ಕೂಡಲೆ, ಇಲ್ಲಿಯೂ ಇದರ ಮರಿಯೊಂದು "ಛಾವಾ" ಎಂಬ ಹೆಸರಿನಿಂದ ಪಾಟಕರ ಎಂಬವರ ಮುದ್ರಣಾಲಯದಲ್ಲಿ ಹೊರಡಿಸಲ್ಪಟ್ಟಿತು. ಆದರೆ ಆ ಕಾಲದಲ್ಲಿಯೂ ಕನ್ನಡತನದ ಜಂತೂ ಸ್ಫೂರ್ತಿಯಿಂದ ಸುದಿಯುತ್ತಿದ್ದ ಇಲ್ಲಿಯ ಕನ್ನಡ ಸ್ವಯಮುಖರ ಸ್ವಯತ್ನ ಹಾಗು ಇಲ್ಲಿಯ ಕನ್ನಡಮಯವಾದ ಎಲ್ಲ ಬಗೆಯ ಜನಜೀವನದ ಇವುಗಳ ಯೋಗದಿಂದಲೂ ಉತ್ತರ ಚಳವಳಿಯ ಸ್ಫೂರ್ತಿಯಿಂದಲೂ ಇಲ್ಲಿ ಮರಾಟಿಯ ಜೆಕ್ಕವಣಿಗೆಗೆ ಅವಕಾಶವೆ ಇರಲಿಲ್ಲ. ೧೮೯೦ರಿಂದ


ಅದ್ಭುತ ಇಂಡಿಯಾ ಒಯುರ್ವೇದಿಕ್ ಫಾರ್ಮಸಿಟಿಕಲ್ಸ್ ಗಾಳಿಗುರಿಲ್ಲಿ
ಬಂಗಾರದ ಮೆಡಲು ಪಡೆದಿರುವ—ಮಲೇರಿಯಾ
ರೋಗದ ಮೇಲೆ ಅಟಂ ಡಾಂಬಿಸಂತಿರುವ

ಶೇಲಧಾ



ಎಂಟೀಮಲೇರಿಯಾ ವನಸ್ಪತಿ ಸಿಲ್ಸ್

ಎಲ್ಲ ತರಹದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅರಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಚೆಳೆಯಿಸುತ್ತದೆ. ಪ್ರಖ್ಯಾತ ವೈದ್ಯ—ಡಾಕ್ಟರರು ದವಾಖಾನೆಗಳಲ್ಲಿ ಪಾರಿಸುವರು. ೧೦೦ ಗುಳಿಗೆಗಳಿಗೆ ರೂ. ೧೫; ೬೦ಕ್ಕೆ ೧-೧೨-೦ ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕೆ.

ಹೋಲ್ ಏಜೆಂಟರು:—

ಎಸ್. ಎಲ್. (ಶಿವ್ಯರಾವ) ಧಾಕಪ್ಪಾ
ಬಿದರ ಔಷಧಿ ವರ್ಕಿಸ್, ಸಿರಸಿ, ಉ. ಕಾನರಾ

ಸಂಚುವವರು:
ಕೈಂವ್ಸ್ ಸ್ವೀಕರ್, ಧಾರವಾಡ

# ಪ್ರಸವ ವಿಜ್ಞಾನ

ಗರ್ಭಧಾರಣೆ, ಗರ್ಭಲಕ್ಷಣ, ಗರ್ಭಿಣಿಯ ವಿಶೇಷಚರ್ಯೆ, ಗರ್ಭಿಣೀ ರೋಗಗಳೂ ಅವುಗಳ ಚಿಕಿತ್ಸೆಗಳೂ, ಸಹಜ ಪ್ರಸವ ನಿರ್ವಹಣರೀತಿ, ಅಕ್ರಮ ಮತ್ತು ಸಂಕೀರ್ಣ ಪ್ರಸವ ವಿಧಿಗಳು, ಬಾಣಂತೀ ರೋಗಗಳು ಅವುಗಳ ಚಿಕಿತ್ಸೆಗಳು, ಶಿಶು ಜಾಣ್ಮೆಯ ರಕ್ಷಣೆ ಮೊದಲಾದುವನ್ನು ಸರಳವಾಗಿಯೂ ಸಚಿತ್ರವಾಗಿಯೂ ನಿರೂಪಿಸುವ ಪುಸ್ತಕ.

ಸುಮಾರು ೬೦ ಚಿತ್ರಗಳಿಂದ ಪೂರ್ಣ. ಸ. ಕನ್ನಡದಲ್ಲಿ

ರೂ. ೨—೪—೦ ಅನ್ನು ಮನಿಯಾರ್ಡರು ಮಾಡಿ

ಮಾರಾಟದ ಪೂರ್ಣಾಧಿಕಾರಿಗಳು

**ಮಾಡರ್ನ್ ಔಷಧಾಲಯ, ದೊಡ್ಡಬಳ್ಳಾಪುರ, (ಬೆಂಗಳೂರು)**


ನುಡಿದ ಸ್ವಲ್ಪಮಟ್ಟಿಗೆ ಇಲ್ಲಿಯ ವಾತಾವರಣವು ಬರುಬರುತ್ತ ಬದಲಾಗುವ ಲಕ್ಷಣ ತೋರಿಬಂದನೆಯೆ ಇಲ್ಲಿಯ ಕನ್ನಡ ಕಟ್ಟಾಳುಗಳು ಅದನ್ನು ಹೇಗೆ ಎದುರಿಸಿದರೆಂಬುದನ್ನು ಮೇಲಿಯೆ ಹೇಳಲಾಗಿದೆ. ೧೯೯೬ರಲ್ಲಿ ಇಲ್ಲಿಯ ಸತ್ಕೃತ್ಯೋತ್ತೇಜಕ ಸಭೆಯು ಕಾಲಕ್ಕೆ ನಡೆದ ಕನ್ನಡ-ಮರಾಟೀ ಭಾಷೆಗಳ ವ್ಯಂಗ್ಯವಾದ ಚರ್ಚೆಯು ಮುಂಬಯಿಯಲ್ಲಿ ಆಗ ಪ್ರಸಿದ್ಧವಾಗಿತ್ತಿದ್ದ "ಬಂದೂಕ್ಕಾಸ" ಎಂಬ ಮರಾಟೀ ದೈನಿಕದಲ್ಲಿ ಮುಂಟಿಯನ್ನೂ ಮರಾಟಿಗರ ಪಕ್ಷವನ್ನೂ ಎತ್ತಿಹಿಡಿದು ಒಬ್ಬರು, ಕನ್ನಡವನ್ನೂ ಕನ್ನಡಿಗರ ನ್ಯಾಯಸಮ್ಮತವಾದ ಹಕ್ಕು ಬಾಧ್ಯತೆಗಳನ್ನು ಪ್ರತಿಪಾದಿಸುತ್ತ ಬೇರೊಬ್ಬರು—ಹೀಗೆ ಬರೆದ ನಾಲ್ಕಾರು ಲೇಖನಗಳು ಪೂರ್ವಪಕ್ಷ-ಪರಪಕ್ಷಗಳಾಗಿ ಪ್ರಕಟವಾದದ್ದು ಇನ್ನೂ ನನ್ನ ಸ್ಮರಣೆಯಲ್ಲುಂಟು. ೧೯೯೯ರಲ್ಲಿ ಬರೆದು ಮುಗಿಸಿದ ತಮ್ಮ ಶಾಕುಂತಲದ ಪರಿಷರ್ತನೆಯ ಪ್ರಸ್ತಾವನೆಯಲ್ಲಿ ಧಾರವಾಡದವರೇ ಆಗಿದ್ದ ಸ್ವ. ಜಾರಮುರಿ ಶೇಷಗಿರಿರಾಯರು:

"ಪಪ್ಪಜ್ಞಾನ ಶಕುಂತಲೀಯ ಕೃತಿಯು ಭಾಷಾಂತರಂ ತಮ್ಮ ತಮ್ಮ ಪದೋಕ್ತಿಯಿಂದ ನೂಡಿಪಿಲ್ಲ ನಾಡಿನ ಜನರ ಕರ್ನಾಟದೋಳಿಲ್ಲೆಯೆ" ಎಂದು ಉಲ್ಲೇಖಿಸಿರುವುದರಿಂದ, ಧಾರವಾಡದಿತ್ಕರ್ಷೆಯ ನಾಡಿಗೆ ಸರಕಾರದ ಅಧಿಕಾರಿಗಳೂ ಅವರ ಜೊಗಪೆಯಿಂದಲೆ ನಿರ್ವಾಹವಿಲ್ಲದೆ ನೀರು ಕುಡಿಯುವ ಸಂಕಟಕ್ಕೆ ಬಿದ್ದಿದ್ದ ಬೇರೆಯವರೂ "ದಕ್ಷಿಣ ಸುಪಾರಿಷ್ಟ" ಎಂಬ ಅಪಭ್ರಂಶ ಹೆಸರನ್ನು ಪಬ್ಲಿಸುವ ಸಾಹಸಕ್ಕೆ ಕೈಯಿಕ್ಕಿದ್ದರೂ, ಇಲ್ಲಿಯ ಜನತೆಯು ತನ್ನ ನಿರ್ಧಾರಸಿದ್ಧವಾದ ಕರ್ನಾಟಕತ್ವವನ್ನು ಕಾದಿರಿಸಿಕೊಳ್ಳುವಲ್ಲಿ ಎಂದಿನಿಂದಲೂ ಕನ್ನಡ ಮುದ್ರಣಾಲಯಗಳು ಧಾರವಾಡದಲ್ಲಿ ಹುಟ್ಟಿ ಬೆಳೆದು ಒಂದಾವು. ಮಾರವಲ್ಲಿ ಒಂದಾನು ಪ್ರತಿದಿನಕ್ಕೊಂದರಂತೆ ಕನ್ನಡಪತ್ರಿಕೆಗಳೇ ಹೊರಡುತ್ತಿದ್ದವು. "ಧಾರವಾಡವೃತ್ತ" ವೊಂದು ಮರಾಟ ಪತ್ರವು ಮಾತ್ರ ಸ್ವಲ್ಪಕಾಲ ಒಳ ಒಳಗೆ ಕನ್ನಡಿಗರ ಪರವಾಗಿ ಹಾಗೂ ಹೀಗೂ ಜೀವಧಾರಣ ಮಾಡಿ ಬದುಕಿ ಬಾಳಿತು. ಕೈ. ವಾ. ಜೋಗಳೇಕರ ಅಂತಃಪ್ರಜ್ಞಾಸಂಕಾರ ಅಧಿಕಾರಿವರ್ಗದಲ್ಲಿ ಗಳಿಸಿದ್ದ ಪ್ರೀತಿಯು ಇದಕ್ಕೆ ನೆರವಾಗಿರಬಹುದು. "ಧಾರವಾ" ಪತ್ರವು ವರ್ಷಾರು ತಿಂಗಳುಗಳಲ್ಲಿ ಸಿ ಹೇಳ ಹೆಸರಿಲ್ಲದಾಗಿ ಹೋಯಿತು. ೧೯೯೯ರ ಸುಮಾರಿಗೆ "ಕರ್ನಾಟಕ" ಎಂಬುದೊಂದು ಮರಾಟಿ ಪತ್ರವು ಹೊರಟು ವರ್ಷಾರು ತಿಂಗಳು ಬಾಳಿದುದು ನನ್ನ ಧ್ಯಾನದಲ್ಲಿದೆ. ೧೯೯೯ಕ್ಕೂ ನೂರಲಿನ ಧಾರವಾಡದ ಸಾರ್ವಜನಿಕ ಜೀವನದ ವಾತಾವರಣವನ್ನು ಈ ಎಲ್ಲ ಘಟನೆಗಳ ಅನುಸಂಧಾನದಿಂದ ನೋಡಿದರೆ, ಇಲ್ಲಿಯ ಜನಜೀವನದಲ್ಲಿ ಕನ್ನಡದ ಹೊಂತು ಬೇರೆ ಭಾಷೆಗೆ ಅವರ-ಅವಸರಂಗಳೇ ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಧಾರವಾಡದ ಮುಖಂಡರೂ ಕನ್ನಡಿಗರೇ ಆಗಿದ್ದರು. ೧೯೯೯ರ ಅನಂತರದ ಗಣೇಶೋತ್ಸವಗಳಲ್ಲಿ ಅಲ್ಪಸ್ವಲ್ಪ ಮರಾಟಿ ಭಾಷೆಯ ಪ್ರಭಾವವು ಕಾಣುತ್ತಿದ್ದಿತಾದರೂ, ಶಿವಾಜೀ ಉತ್ಸವವನ್ನು ಇಲ್ಲಿಯ ಕನ್ನಡಿಗರೇ ರಾಷ್ಟ್ರೀಯ ದೃಷ್ಟಿಯಿಂದ ನಡೆಸುತ್ತಿದ್ದರು. ಲೋಕಮಾನ್ಯ ಟಿಳಕರ ಶಿಷ್ಯಕೋಟಿಗೆ ಹೊಂದಿದ್ದ ಆಗಿನ ಕನ್ನಡ ತರುಣರು ಇದನ್ನು ಉಪಕ್ರಮಿಸಿದರು. ಇವುಗಳಲ್ಲಿ ಒಂದೆರಡು ಮಂಟೇ ಉಪನ್ಯಾಸಗಳಾಗುತ್ತಿದ್ದುದು ಇಲ್ಲಿಯ ಕನ್ನಡಿಗರು ಮರಾಟಿಗೆ ಮಾರುಹೋದ ಲಕ್ಷಣಗಳಾಗಿರಲಿಲ್ಲವೆಂಬುದು ಮರೆಯತಕ್ಕ ಮಾತಲ್ಲ. ಶಿವಾಜೀ ಉತ್ಸವದ ಅಂಗವಾಗಿ ಈಗಿನ ಕಡಪಾ ರೈಲಿನಲ್ಲಿ ಆಗ ಕುಸ್ತಿಯು ಕಣಗಳೂ ನಡೆದದ್ದುಂಟು. ಧಾರವಾಡವು ತನ್ನ ಕನ್ನಡತನವನ್ನೂ ಕರ್ನಾಟಕತ್ವವನ್ನೂ ಎಂದಿಗೂ ಮರೆಯದೆ, ಮರಾಟಿಗೆ ಮನಸೋಲದೆ, ತನ್ನ ವಿಶಿಷ್ಟತ್ವವನ್ನು ಹೀಗೆ ಅಖಂಡವಾಗಿ ಕಾಯ್ದುಕೊಂಡು ಬಂದಿದೆಯೆಂಬುದು ಸಿದ್ಧಾಂತವಾಗಿದೆ. ಆದುದರಿಂದ ಧಾರವಾಡದಲ್ಲಿ "ಕನ್ನಡದ ಪುನರುಜ್ಜೀವನ"ದ ಅವಶ್ಯಕತೆಯೆಂದೂ ಇಂದಾಗಿರಲಿಲ್ಲ. ಸುಪ್ತವಾಗಿದ್ದಂತೆ ತೋರುತ್ತಿದ್ದ, ಗುಪ್ತವಾಗಿಯೆ ಬೆಳೆಯುತ್ತಿದ್ದ, ಕನ್ನಡ ತನದ ಕೆಂಡದ ಮೇಲೆ, ನಡುನಡುವೆ ಮುಸುಕಿ ಬರುತ್ತಿದ್ದ ಬೂದಿಯನ್ನು ಊದಿ ಹಾರಿಸಿ, ಕನ್ನಡದ ಕಾವನ್ನು ಹೆಚ್ಚಿಸುವ ಸುಸಂಘಟಿತವಾದ ಪ್ರಯತ್ನವೇ "ಕರ್ನಾಟಕ ವಿದ್ಯಾವರ್ಧಕ ಸಂಘ"ದ ಸ್ಥಾಪನೆಯಿಂದ ನೋದಲಾಯಿತೆನ್ನಬಹುದು. ಅದಕ್ಕೆ ಮುಂದೆ ಚೆನ್ನಾಗಿಯೆ ಜನರ ಬೆಂಬಲ ದೊರೆತು, ಅದು ಹೆಚ್ಚು ಹೆಚ್ಚಾಗಿ ಕಾರ್ಯಕ್ಷಮವಾಗುವುದಕ್ಕೆ ತಕ್ಕ ಅವಧಿಯು ದೊರತುಹಾಡನೆಯೆ ಕನ್ನಡಿಗರ ಕರ್ನಾಟಕ ರಕ್ತಿಯು ಬಹುಮುಖವಾಗಿ ಹೊರಹೊಮ್ಮಹತ್ತಿತೆಂಬುದೇ ಧಾರವಾಡದ ವೈಶಿಷ್ಟ್ಯವಾಗಿದೆ.


ಜನಸ್ಪಂದನೆಗಳಿಂದ ಅನುಭವಪಟ್ಟ ಕರ್ಕಿ ಮತ್ತು ಕಂಪನಿಯ

ಜ್ವರದ ಔಷಧಿಗಳು

ಬಾಟ್ಲಿಗೆ ೧—೪—೦

ಎಲ್ಲ ಪ್ರಕಾರದ ಜ್ವರಗಳಿಗೂ ದಿವ್ಯೌಷಧ!

ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ

ಗಿರಗಾಂವ, ಮುಂಬಯಿ


ತಿಪ್ಪಣಿ— ಕಳೆದ ಲೇಖನದಲ್ಲಿ (ಜಾನಪದ ಪುಟದ ಎರಡನೆಯ ಅಂಕಣದ ಕೊನೆಯಲ್ಲಿ) ವಿಕ್ಟೋರಿಯಾ ಹೈಸ್ಕೂಲ್ ಎಂದು ನ್ಯೂ ಇಂಗ್ಲೀಷ್ ಸ್ಕೂಲಿಗೆ ಹೆಸರು ಬಂದುದು ೧೯೨೭ರಲ್ಲಿ ಎಂದಿದೆ. ಆದು ಮುದ್ರಣದೋಷ; '೧೯೨೭ರಲ್ಲಿ' ಎಂದು ತಿದ್ದಿಕೊಂದುಹೋಗಬೇಕು ಲೇ

# ಕನ್ನಡ ಯಾತ್ರೆ

( ಪ್ರವಾಸ-ಪ್ರಬಂಧ )

ಶ್ರೀ. ರಾಘವೇಂದ್ರ ಬಾಗಲಿ, ಮೋಹನಕುಂಜ ಹುಬ್ಬಳ್ಳಿ

ಹರಟೆಯ ಮಾತಿನಲ್ಲಿ ಜವಾಹರರ ವೀರವಾಣಿ—'ದಿಲ್ಲಿ ಚಲೋ—' ಎಂದು—ಗುಡುಗಿದ—ಗೆಳೆಯನೊಬ್ಬ. 'ಹೌದು! ಅದ್ಯಾ ನೊದಲು, ಮದ್ರಾಸ ಚಲೋ!'—ಎಂದ ಕನ್ನಡ ಕುವರ. ಸರಿ! ಕೂಡಿದ ನಾಲ್ವರು ಕೆಳೆಯರೂ ಮದ್ರಾಸ ಸಮ್ಮೇಳನಕ್ಕೆ ಹೊರಡುವ ಏರ್ಪಾಡಿಗಾಗಿ, ಚತುಷ್ಕೋನ—ಟೇಬಲ್— ಸಮ್ಮೇಳನವಾಗಿ ಕೂಡಿಯೆ ಬಿಟ್ಟರು! ಮಾತಿಗೆ—ಮೊದಲಾಯಿತು: 'ಗಾಡಿಯ ಚಾರ್ಜೆಷ್ಟು?'—ಎಂದೊಬ್ಬ. "ಹಾ—ಹಾ!....ಚಪಾತಿ ಮಾತ್ರ 'ಟಿಫಿನ್—ಕೆರಿಯರ್' 'ಫುಲ್ಲಾ'ಗಿಟ್ಟೇಕು ಮತ್ತ!"—ಹೊಟ್ಟೆ ಮುಂದಾಗಿ ಹುಟ್ಟಿದವನ 'ವಾರ್ನಿಂಗೂ!' "'ಟ್ರೆಪ್' ಹೋದ್ರ ಹ್ಯಾಂಗ-ಹೋಗ್ಬೇಕಂದಿ?....ಅಗದಿ ಸಜ್ಜಾಗಿ....ಒಂದು 'ಸೂಟ್ ಕೇಸ್'.....ಅದರಾಗ 'ಟೂತ್ ಪಾವಡರ್' ಮೊದಲ್ಕೊಂಡು 'ಎವರಿ ಥಿಂಗ್ ರೆಡ್ ಬಿ, ರೆಡಿ!' (Every thing should be ready!)" ನವ-ನಾಗರಿಕ ತರುಣರ ಸಲಹೆ. '.....ಎಲ್ಲಾ ಏರೇರೀ! ಪರಂತೂ.... ಖರ್ಚಾಳ ಬರತದರೀ..!'—ಆರ್ಥಿಕ ಮುಗ್ಗಟ್ಟಿಗಾಗಿ, ತಲೆತುರಿಸಿದರು—ತ್ರಿಶಂಕು ಸ್ವರ್ಗದ ಸದಸ್ಯರು! '—ಏನಾದ್ರೂ ಸರಿ! ಈ ಸಲ ಸಮ್ಮೇಳನ ಕಂಡು.... ಬರೋದು!'— ಕನ್ನಡ-ಕಲಿಯ ಪಜ್ರಪಂಥ ನಿರ್ಧಾರ!

ಡೊಂಕಣ ಬೇರೀಜಿಗೆಲ್ಲಿ ಕೊನೆ?—ವಾರದ ಬೇಸರನ್ನು ಕಳೆಯುವ ಭಾನುವಾರಕ್ಕೊಮ್ಮೆ ಸಮ್ಮೇಳನಕ್ಕೆ ಸುರು, ಮೋಹನ ಕುಂಜದಲ್ಲಿ. ಕೊನೆಗೊಮ್ಮೆ ಹೋಗುವ ನಿರ್ಧಾರವೂ ಆ-ಯಿ-ತು! ಆ-ದ-ರೆ? ಹೋಗಬೇಕಾದ ದಿನ ನಾಳೆ ಎನ್ನೋವಾಗ ಕನ್ನಡ ಕಲಿಯೂ ಇಲ್ಲ! ತರುಣ ನಾಗರಿಕರೂ ನಾಪತ್ತೆ! ಎಲ್ಲರೂ—ಒಂದೊಂದು ದಿಕ್ಕಿಗೆ. ಮೋಹನ ಕುಂಜದಲ್ಲಿದ್ದ ನನಗೆ ದಿಕ್ಕುಗಾಣದಾಯ್ತು. ಮುಂಕು ಕವಿಯಿತು. ಸುದಿನ ಆದೂ ಸರಿಯಿತು!—ಇನ್ನೊಬ್ಬ ಗೆಳೆಯನಿಗೆ ಹಣದ ಚಿಂತೆ ಕಾಲಿಗೆ ಜೋಡಿ ತೊಡಿಸಿದ್ದರೆ. ನನಗೆ ಮನೆಯ ತಾಪತ್ರಯ ಲಗಾಮು ಎಳೆದಿತ್ತು! **'ಹೋಗಲೇ-ಬೇಕು'**—ಎನ್ನೊ ಬಲವಾದ ಬಯಕೆ, ಬೇಡಿ ಮುರಿಯಿತು ಲಗಾಮು ಹರಿಯಿತು! ಮದ್ರಾಸ್ ಮೇಲು ಸಾಗಿತು!

\+ \- \+

ನಾವು ಕುಳಿತ 'ಕ್ಯಾರೇಜಿ'ನಲ್ಲಿ—ಕನ್ನಡ ಯಾತ್ರಿಕರೆ! 'ಎನ್ಸೆ' ಪ. ಬಾ. ಕು. ಹಳಪೇಟೆ, 'ಎಚ್. ಎಸ್', 'ನರಂಗ' ಸೂಳವಾಡಿ-ದಂಪತಿಗಳು, ಮುಳಿಮಠ—ದಂಪತಿಗಳು, ವಾಲಿ, ಇನ್ನಿಬ್ಬರು—ಮೂವರು ಕಾಲೇಜಿನ ಕೆಳೆಯರು, ನಾನು ಹಾಗೂ ಕೆಳೆಯ ಪಿಶೋಳೆ. ಹೂಬಳ್ಳಿಯಲ್ಲಿ, ಹೂ-ಬಳ್ಳಿ ಹಾರದ ಗೌರವ ಮೂಳವಾಡರಿಗಾಯ್ತು. ರೈಲು ಕೂಗಿತು! ಆಗ ರಾತ್ರಿ ಸರಿಯಾಗಿ ಹತ್ತುವರೆ ಗಂಟೆ. ಹೊರಟ ಗಾಡಿಯಲ್ಲಿದ್ದ ಎಲ್ಲರೂ ಸಲಗುವ ಸಂಧಾನದಲ್ಲಿದ್ದರು. ನಸುವೇಳೆಯ ನಂತರ. ಹರಟೆ-ಹೊಳೆ ಹರಿಯಲು, ಮೊದಲಾಯಿತು. ಕಾಂಗ್ರೆಸ್-ರೆಡಿಕಲ್ ಪಕ್ಷ ಹಿಂದು ಮಾದ-ವಿವಾದ, ಮಧ್ಯೆ ನುಗ್ಗೆ ಚುಚ್ಚುನಗೆಯ ಅಟಂ!—ಬಾಂಬುಗಳು!!.... 'ಸಿಗಾರ-ಸ್ಟಿಕ್ಕಿ'ನ—ಹೋಮ ಧೂಮ! ಗೆಳೆಯರಿಬ್ಬರೂ ಕೆಳಗಡೆ ಹುಸಿಗೆ ಹಾಸಿದೆವು. ಇನ್ನೆ'ನು?—ಮಲಗೋಣ—ಎನ್ನುವಾಗ ಬಂತು ಸ್ಟೇರನ್! ಸೊಲ್ಜರ್—ಸ್ಪೋರ್ಟ್'ಸಿಂದ ಮುನ್ನುಗ್ಗಿತು—ಪ್ರಯಾಣಿಕ ಜನ! ಮಲಗಿದ ನಮಗೆ ಕೂಡುವುದಕ್ಕೂ ಬಂತು, 'ಚಿಕ್ಕ'! 'ಸರ್ಕಸ್-ಫ್ರೀಜ'ನಲ್ಲಿ ಮುಖ ಸಿಂದ್ರಿಸಿಕೊಂಡು- ನಿಲ್ಲ ಬೇಕಾಯ್ತು! ಅನೂ-ನೂ-ಕು-ನುಗ್ಗಲಿನ ಮಧ್ಯೆ, ಮುನುರಿ-ಮುದ್ದೆಯಾಗಿ. ದೇವರ ಸಹಸ್ರ ನಾಮ. ಸಾನಿ ಸಲ ಜಪಿಸಿದ್ದಾಯಿತು, ಬೆಳತನಕ ತೂಕಡಿಕೆ. ಬಲವಾಯ್ತು ಕಣ್ಣುಗುಲಗಂಜಿ—ಎಲುಬಿನ ಮೈಯೂ—ಮಾಂಸದ ಮುದ್ದೆ!....ಇದ್ದುದರಲ್ಲಿಯೆ, ಕೆಳಗೆ ಕುಳಿತುಕೊಳ್ಳಲು ಜಾಗೆ ಮಾಡಿಕೊಂಡು,—ತೂಕಡಿಕೆ,—ಆಕಳಿಕೆಗೆ ಆರಂಭ! ನನ್ನ ನಂತರ ಆನ, ಆವನ ನಂತರ ನಾನು, ಇಬ್ಬರ ನಂತರ ಮತ್ತೊಬ್ಬ. ಹೀಗೆ ನೋಡಿದತ್ತೆಲ್ಲ ನಿದ್ದೆ-ಮುದ್ರೆಗಳು!

ಟ್ರೇನಿನಲ್ಲಿಯ ಜನವೆಲ್ಲ ಸಪ್ಪೆಯಾಗಿ, ತೆಪ್ಪಗೆ ಮುದ್ದೆಯಾಗಿ (ಕುಳಿತಿ)ದ್ದರು. 'ಮೂಡಲ ದನಿ—ಇಡ್ಲಿಯ ತೆರದಲಿ ಉದಯಿಸಿದ ..!'—ಎಂದರು. ದ. ಬಾ. ಕು. 'ಪಾ! ಹಾಗಲ್ಲ.....ಸಾಂಬರದೊಳಿದ್ದಿದ— ಇಡ್ಲಿಯ ತೆರದಲಿ, ಎದ್ದನಾ ರವಿ, ಉದಯಾಚಲ ಬೆಟ್ಟದಿಂ!'-ಎಂದು ದನಿಗೂಡಿಸಿದರು 'ಎನ್ಸೆ'. ಸರಿ! ಸರಿಯಾಗಿ, ಇಡ್ಲೀ ಟಾಯಿನಿಗೆ ಟ್ರೇನು ನುಂತಕಲ್ ಸೇರಿತು. ಎಳಲಾರದೆ ಎದ್ದು, ಬ್ಯಾಗು-ಗಂಟು ಹೊತ್ತು, ಬೀಳ್ಕೊಟ್ಟ, ಕಾಲೆಳೆದವ್ವ-ಆಕೆ ಪ್ಲಾಟ್-ಫಾರಂ-ಗೆ. ಮುಖ ತೊಳೆದು, ಜಪ ಮುಡಿದು, ಸುಸಜ್ಜಿತ-ಸೈನಿಕರಾಗಿ, ನಿಂತೆವು. ಬಂತು ಮದ್ರಾಸ ಮೇಲು!—ಗೂಡ್ಸಿನಲಿ ವಾಗಿನ ತುಂಬಿಮೊಲು ಜನ ತುಂಬಿ ತುಳುಕತ್ತು. ಫ್ಲಟ್'ಫಾರ್ಡಿನ ಮೇಲೆಯು ಜನ ಕಿಕ್ಕಿರಿದಿತ್ತು. ನಿರಾಶೆಯಾಯ್ತು. ಛೆ! ಛೆ!! ನುಂತಕಲ್ಲಿನ ವರೆಗೆ ಬಂದವರು ಹಿನ್ನಡೆಯುವರೆ...? 'ನಡೆ ಮುಂದೆ—ನಡೆ ಮುಂದೆ, ನುಗ್ಗಿನಡೆ ಮುಂದೆ..... ನಿಂತರೆ, ಕುಂತರೆ, ಸಿಕ್ಕೀತೆ ಸೀಟು?.... ...ಬೆಚ್ಚಿದರೆ ಬೆದರಿದರೆ, ಬಂದೀತು ಬ್ರೆಕ್ಕು!'—ಎಂದು ಇಬ್ಬರೂ, ನುಗ್ಗಿಯೆ ಬಿಟ್ಟೆವು—ಟ್ರೇನ್—ಕಿಟಕಿಯಿಂದ. ಒಬ್ಬರ ತಲೆ, ಇನ್ನೊಬ್ಬರ ತಲೆಗೆ ತಾಕಲಾಡಿ-ಬಾಂಬು ಸ್ಫೋಟವಾಯ್ತು! ಅವರ ಧೂಮ ಪರಸ್ಪರರ ಮುಖ ಮುಸುಕಿತು. ಅರ್ಧ ಮುಂಜಾವು ಕಳೆದು ಮಧ್ಯಾಹ್ನ ಸಮೀಪಿಸುತ್ತ ಬಂದಂತೆ—ಚಪಾತಿ ಪಲ್ಯ ಎತ್ತ ಜೇಕು ಎನ್ನೊ ಹೊಟ್ಟೆಯ ಹೆಚ್ಚಾಗ್ತಾ ಬಂತು. ಆದರೆ ಗದ್ದಲ-ಗಲಾಟೆಯಲ್ಲಿ ಅಸಾಧ್ಯವಾಗಿತ್ತು. ಕಡಪಾ ಸ್ಟೇಷನ್ ಬಂತು. ಗೆಳೆಯ ಜಿಗಿದು ಹೋಗಿ: 'ಮೊಳೆಯನ್ನ ಕೊಡಪಾ'—ಎಂದು! ಗದ್ದಲ ನುಗ್ಗಾಟದಲ್ಲಿಯೆ, ನಾಲ್ಕು ಚೂರು ಚಪಾತಿ, ಎರಡು ತುತ್ತು ಮೊಳೆಯನ್ನ ಬಾಯಿ-ಬಿಲದಲಿ ಪಾರಿವ್ವಾಯಿತು. ಒಡಲ ಜೊಂಕೆ ಶಾಂತ ನಾಯಿತು! ಓಡಿ-ಓಡಿ ದಣಿದ ಬುಗಿಬಂಡಿ 'ಉಸ್'....'—ಎಂದು ನಿಟ್ಟುಸುರುತ್ತ ಬಂತು.

ಮದ್ರಾಸಿಗೆ! ನಿಲ್ಲುವ ಮುಂಚೆ—'ಜಯ-ಕರ್ನಾಟಕ-ಜಯಕರ್ನಾಟಕ!' ಎಂಬ ಜಯ ಘೋಷ ಪ್ಲಾಟಫಾರಂ ತುಂಬಿತು! ಅವನ್ನು ಆಲಿಸಿದ ನಮಗೆ ಆದ ಆಲಸಿಕೆ ಕರಗಿ, ಚೈತನ್ಯ ಚಿಗುರಿತು, ಕರ್ನಾಟಕದ ಉದಯವಾಗುತ್ತಿರುವ ಉದಯ ಶಂಕರ-ಶ್ರೀನಿವಾಸರು-'ಎನ್ಸ್' ಯವರನ್ನು ಕಂಡೊಡನೆ, ಗೆಲುವಿನ ನಗೆಯೊಂದಿಗೆ ತಬ್ಬಿಕೊಂಡರು. ಶ್ರೀಮಾನ್ ಬೇಂದ್ರೆ, ಮೂಳವಾಡರ ಸ್ವಾಗತದ ನಂತರ ನಾವೆಲ್ಲ ಸ್ಟೇಶನ್ ಹೊರಬದಿಗೆ ಬಂದೆವು. ಸಿಸ್ತಿನ ಸ್ವಯಂಸೇವಕರ ಸಹಾಯದಿಂದ, ಟ್ರಾಮಿನಿಂದ ನೇರವಾಗಿ ಬಂದಿಳಿದೆವು. ನಮ್ಮ ಬಿಡಾರವಾದ 'ಕಾರ್ಪೊರೇಶನ್ ಗರ್ಲ್ಸ್-ಸ್ಕೂಲ್'-ಗೆ, ಹಿರಿಯ ಸಾಹಿತಿಗಳು ಜೇರೆ-ಬೇರೆ ವಿಭಾಗಕ್ಕೆ ಅಲ್ಲಿಯ ವ್ಯವಸ್ಥಾಪಕರಿಂದ 'ಸೊರ್ಟ್' (sort) ಮಾಡಲ್ಪಟ್ಟರು! ಹಸಿದು ಹುಲಿಯಾದ ೧೫೦ ವಿದ್ವಾಂಸರು ಸ್ನಾನವಿಲ್ಲದೆ ರಾತ್ರಿ ಊಟ ಮುಗಿಸಿದರು. ನಾವಿಬ್ಬರೂ, 'ಸಂಪದಾ- ಚಪತಿ ಚಟ್ಣೀ....!'— ಎಂದು ತಂದ ಡಬ್ಬಿ ದಬ್ಬಾಕಿದೆವು! ಉಳಿದ ಖಾಲಿ ಜಾಗೆಯನ್ನು ಸಾಕಷ್ಟು ನೀರಿನಿಂದ ಭರ್ತಿ ಮಾಡಿ ಮಲಗಿದೆವು.

ಮರುದಿನ ಮುಂಜಾನೆ,ಎಂಟುವರೆ ಗಂಟೆಗೆ 'ಶ್ರೀನೆಯ - ಕನ್ನಡ-ಸಾಹಿತ್ಯ-ಸಮ್ಮೇಳನ-ಸಭಾಮಂಟಪ' ಪ್ರವೇಶಿಸಿದೆವು. (ಪ್ರತ್ಯೇಕವಾದ ಸಭಾಮಂಟಪವನ್ನೇನೂ ರಚಿಸಿರಲಿಲ್ಲ) ಮುತ್ತಯ್ಯಾ ಚೆಟ್ಟಿಯಾರ್ ಹಾಯಸ್ಕೂಲಿನ ಮಹಡಿಯ ಮೇಲೆ ಹಿರಿ-ಹಾಲೇ ಸಮ್ಮೇಳನದ ಸಭಾಮಂಟಪ.

ಮಹಡಿಯ ಮೇಲೆ ನಿಂತಿರುವಾಗ, ಮೆರವಣಿಗೆ ಪ್ರವೇಶದ್ವಾರದಿಂದ ಒಳಗೆ ಬಂತು. ಬಜಂತ್ರಿವಾದ್ಯದೊಂದಿಗೆ, ಸಾಹಿತಿಗಳ ಮನೈಗುಲಾಬಿ ಹೂ-ಹಾರ, ತುರಾಯಿಯಿಂದ ಅಲಂಕೃತರಾದ 'ಕನ್ನಡಕ್ಕೊಬ್ಬನೆ ಕೈಲಾಸಂ!' —ಬಂದರು. ಧ್ವಜವಂದನೆಗಾಗಿ ಎಲ್ಲರೂ ಸುತ್ತುವರಿದು ನಿಂತರು. ನಾಡಗೀತೆಯಾಯಿತು. ಇನ್ನೇನು....ಧ್ವಜ ಹಾರಬೇಕು. 'ಕೈ' ಜಗ್ಗಿದರು. ಹಾರಲಿಲ್ಲ ಧ್ವಜ; ಕೆಳಕ್ಕೆ ಜಾರಿತು. ಕೂಡಲೆ ಧ್ವಜವನ್ನು ಪುನಃ ಮೇಲಕ್ಕೆತ್ತಿ, ಬಿಗಿದು, ಹಾರಿಸಲಾಯಿತು. ನೆರೆದ ಜನ ಒಂದೊಂದು ರೀತಿಯಲ್ಲಿ ಮಾತನಾಡತೊಡಗಿದ್ದರು: '....ಏನಪ್ಪಾ ಮೊದಲ ತುತ್ತಿಗೇ ಕಲ್ಲು....' 'Coming events cast their shadows!...' 'ಕನ್ನಡಕ್ಕೆ ಕೇಡಿಗ್ಗಾಲವೇ ಈ ವರುಷ....?' ನನ್ನ ಮನಸ್ಸಿಗೂ ನೋವಾಯಿತು. ಎದೆಯ ಹಾರುವಿಕೆ ಇಮ್ಮಡಿಯಾಗಿತ್ತು.

× × ×

ಅಧ್ಯಕ್ಷ ಪೀಠವನ್ನಲಂಕರಿಸಿದ ಕೈಲಾಸಂರನ್ನು ಕಂಡು— 'ಇವರೇನೇ ಸಮ್ಮೇಳನದ ಅಧ್ಯಕ್ಷರು!'— ಎಂದು ಮೂಗಿನ ಮೇಲೆ ಬೆರಳಿಟ್ಟರು ಒಬ್ಬರು. ನಿಜಕ್ಕೂ ಹಾಗಿತ್ತು— ಇವರ ವೇಷದ ವೈಖರಿ! ತೊಟ್ಟದ್ದೊಂದು— ಕಾಲರ್ 'ಮೈನಸ್' — ಶರಟು! ಉಟ್ಟದ್ದೊಂದು ಧೋತರ. ನಸು ನೆರೆತ ಬಾಚದ ಬಕ್ಕುತಲೆ....ಆಯಿತು. ಡ್ರೆಸ್ಸಿನ ಆಡಂಬರ! ಶ್ರೀನಿವಾಸರು ಹೇಳಿದಂತೆ— 'ಈ ಮಹಾರಾಯ್ರು ಇಂಗ್ಲಿಷು ಓದಿದಾರೆ ಅಂತ ಹೇಳೋ ಹಾಗೆ ಕೂಡ ಇಲ್ಲ!' ಹೋದ ವರುಷವೆ ಸಲ್ಲಬೇಕಾದ ಈ 'ಪಟ್ಟಾಭಿಷೇಕ' ಕೊನೆಗೆ ಜಿನ್ನಪ್ಪ, ಕತ್ತಿಗೆ ಜೋಲು ಬಿತ್ತು ಜಯಮಾಲೆಯಾಗಿ!— ರಾಮರಾಯರು, ರಾಜಾಜಿಯವರು ಎಡವುತ್ತ ಓದಿದರು. ತಮ್ಮ ಭಾಷಣ— ಪ್ರಪಿತಾಮಹರ ಪ್ರತಿಭೆ ಮಿಂಚಿತು; ಮಿನುಗಿತು; ನಾಟ್ಯವಾಡಿತು! ಭಾಷಣದ ಪ್ರತಿಯೆಡೆಗೆ ಕಣ್ಣೋಡಿಸಿದವರು ಕಂಗೆಟ್ಟರು!— ಬೆರಗಾದರು! 'ಕೈ' ಸಿಲುಕದಾಯಿತು! 'ಕೈ' ಯೆಡೆಗೆ ತೆರೆದ 'ಬಾಯ್' ಯನರಾಗಿ ನಿಟ್ಟಿಸುತ್ತಿರಬೇಕಾಯ್ತು.— ಕೇಳಿದಷ್ಟೂ ಕೇಳಬೇಕು; ನೋಡಿದಷ್ಟೂ ನೋಡಬೇಕು— ಆ ಅಭಿನಯ ಮೂರ್ತಿಯನ್ನು— ಏನ್ನೊ ಹಂಬಲು ಹೆಚ್ಚುತ್ತಿತ್ತು.

'ಕೈ'ಯನ್ನು ನಾನು ಹಲವು ಸಂದರ್ಭಗಳಲ್ಲಿ ಕಂಡೆ. ಜ್ಞಾನಮೂರ್ತಿ, ಹೃದಯ ಜೀವಿ, ಕೈಲಾಸಂ— ಒಂದು ಮಾತಿಗೆ ಉತ್ತರಿಸುವಾಗ, ತನ್ನ ಪಾತ್ರದ ಬಾಯಿಂದ ನುಡಿಸುವ ಕೈ-ಚಳಕ. ಅಲ್ಲದೆ ಅಭಿನಯದಲ್ಲಿ ಎತ್ತಿದ 'ಕೈ'. (ಸದಾ ಸಿಗರೇಟ್ ಎತ್ತಿದ ಹಾಗೂ ಹೊತ್ತಿಸಿದ 'ಕೈ' ಯೂ ಅಹುದು) 'ಕೈ'—ಭಂಡವಳ—ಜೀವ—ಎಡಗೈಯಲ್ಲಿ ಕಂಗೊಳಿಸುವ ಆ ಸಿಗಾರ್ ಟಿನ್ನು. ನನಗೊಂದು ಸಂಶಯ: ರಾತ್ರಿಯಲ್ಲಿ ಮಲಗಿದಾಗಲೂ 'ಕೈ'— ಸುಡುತ್ತಿರುವುದೆ ಏನಾರು? —ಎಂದು! 'ಕೈ'—ಯಿವ್ವಲ್ಲಿ, ಕಾಫಿ-ಕೊಳಗ ಎತ್ತಿದ ಕೈಯನನ್ನೊಬ್ಬ— ಪಾಜರಾಗಿರುತ್ತಿದ್ದ! ಐದು, ಹತ್ತು ನಿಮಿಷಗೊಮ್ಮೆ ಕಾಫಿ ಲೋಟ ತುಂಬಿ ಬರುತ್ತಿತ್ತು 'ಕೈ' ಬಾಯೆದುರು.

ಊಟದ ವ್ಯವಸ್ಥೆ— 'ಉಂಡದ್ದನ್ನಾಡಿದರೆ ಕೆಂಡದಂಥ ಕೋಪ!'— ಎಂದು ಕೊರವಂಜಿಯೆ' ಹೇಳಿಬಿಟ್ಟದ್ದಾಳೆ!— ಬಾಯಿ ಇದ್ದವ ಬದುಕಿಕೊಂಡ' ಎಂದಂತೆ —ಕೈ ಚಾಚಿದವ ಎಳಕೊಂಡ (ಚಪಾತಿ!), ತಿಪ್ಪಗೆ ಕುಳಿತವ ಸಪ್ಪಗೆ ಬಂದ! 'ಆದ್ರೂ ನೂಪೆ' ಇಂಥ 'ರೇಷನ್' ರಾಮಾಯಣ ಕಾಲದ ಜಂಜಾಟದಲ್ಲಿ 'ಬಿಳಿಯನ್ನ ಕಂಡೆವಲ್ಲ!'— ಎಂದು ಸಮಾಧಾನ. ಬೆಳಗಿನ ಉಪಾಹಾರ ರುಚಿಯಾಗಿತ್ತಂತೆ, ಕೆಲ ಕನ್ನಡಿಗರು ಮಾತನಾಡುತ್ತಿದ್ದರು. 'Yes! Yes! ಉಪ್ಪಿಟ್ is very tastefull ಉ!'.... 'But you see'...it spoils our stomach ಉ!' 'ಕೈ'— ಬಾಯಿಂದ ಹೇಳಬೇಕೆಂದರೆ— 'ಇಂಥ ಅನ್ನ ಮೂರ್ನಾಲ್ಕು ವರುಷದಿಂದ ಎಲ್ಲಿಯೂ ಕಂಡಿರಲಿಲ್ಲ. ಇಲ್ಲಿ ಒಳ್ಳೆ ಊಟವಾಯ್ತು..... ಹೀಗೆ ಊಟದ ವ್ಯವಸ್ಥೆ ಇದ್ದರೆ ಸಮ್ಮೇಳನ ಮೂರು ದಿನವೇಕೆ, ಏಳು ದಿನ ನಡೆದರೂ ಸರಿಯೆ!.... ಅನ್ನದಾತಾ ಸುಖೀ ಭವ!' ಅಲ್ಲದೆ ಅವರ ಸೂಚನೆಯೊಂದಿದೆ: ಸದಾನಕಾಲದಲ್ಲೂ ಇವರೇ ಸ್ವಾಗತ ಸಮಿತಿಯವರಾಗಿರಲಿ!'— ಇದಕ್ಕೆ ಮೊದಲ ಅನುಮೋದನೆ ನನ್ನದು!

ಇಲ್ಲಿಯ ಮಿತ್ರಮಂಡಳಿಯವರು ಕೈಕೊಂಡ ಮನರಂಜನ ಕಾರ್ಯಕ್ರಮ-ನೃತ್ಯ,ನೃತ್ಯನಾಟಕ, ನಾಟಕ, ವಿನೋದ, ಗಾಯನ, ವಾದನ-ಮೇಳ ವಿಸಿದ್ದುವು. ಕಣ್ಣಿಗೆ-ಹಬ್ಬ, ಮನಕ್ಕೆ ಉಬ್ಬು, ಹೃದಯಕ್ಕೆ ಹರ್ಷ!— ಇವನ್ನೆಲ್ಲ ಈ ಸಲದ ಸಮ್ಮೇಳನ ನಮಗೆ ನೀಡಿತು.

ಕನ್ನಡಮಾತೆಯ ಜಯಭೇರಿ ರಾಜಧಾನಿಯ ತಾಣ ಮದ್ರಾಸಿನಲ್ಲೂ ಮೊಳಗಿತು! ಊರಿನ ದಾರಿ ಹಿಡಿದಾಗ ಟ್ರೇನಿನಲ್ಲಿಯೆ ಮೆಲುಕು ಹಾಕುತ್ತಿದ್ದೆ: 'ಎಚ್ಚತ್ತ ಕನ್ನಡಿಗರ ಮೊದಲ ಹೆಜ್ಜೆ—ಇಂದು ಹಾಳುಕೊಂಪೆಯಾದ ಆ—ಹಂಪೆಯ ಅಂದಿನ ಸಿರಿ-ಸೌಭಾಗ್ಯ ಪಡೆಯಲು ಪಣತೊಟ್ಟು ಇಟ್ಟ ಮೊದಲ ಹೆಜ್ಜೆ.

'—ವಿಜಯನಗರದಲ್ಲೂ ಕನ್ನಡದ ಬಾವುಟ ಹಾರಬೇಕು! ಸಾಹಿತ್ಯ-ಸಮ್ಮೇಳನದ-ಸಂಪ್ರದಾಯವಾಗಿ ಅಲ್ಲ, ಅವಿಲ—ಕರ್ನಾಟಕದ ಒಗ್ಗೂಟವಾಗಿ, ಸ್ವಾತಂತ್ರ್ಯದ ಉಸಿರೆಳೆದು, ಏರಬೇಕು—ಹಾರಬೇಕು—

**ಕನ್ನಡದ-ಬಾವುಟ!!**

ಈ ಹಗಲುಗನಸು ನನಸೆಂದಾದೀತೊ!

—: ಜಯ ಕರ್ನಾಟಕ :—

# ಸಾಹಿತ್ಯ ವಿಹಾರ

' ವಿಹಾರಿ '

ಮದರಾಸಿನಲ್ಲಿ ನಡೆದ ಈ ಸಲದ ಸಾಹಿತ್ಯ ಸಮ್ಮೇಲನ ಎಂದಿ ಂತೆ ಯಶಸ್ವಿಯಾಗಿ ನಡೆಯಿತು. ಅಧ್ಯಕ್ಷರ ವ್ಯಕ್ತಿತ್ವ ನಾಡಿನ ಬೇರೆ ೀರೆ ಭಾಗಗಳಿಂದ ಜನರನ್ನು ಬರಮಾಡಿಕೊಂಡಿದ್ದರೆ ಆಶ್ಚರ್ಯವಿಲ್ಲ. ಾಜೆಯ ವರ್ಷ ' ಪತ್ತೆ ' ಯಾಗದ ಅಧ್ಯಕ್ಷರು ಈ ವರ್ಷ ಕೈಗೆ ಕ್ಕಿದ್ದರಲ್ಲವೆ ಅಧ್ಯಕ್ಷಭಾಷಣವನ್ನು ಸಿದ್ಧಪಡಿಸಿ ಕೊಟ್ಟಿದ್ದರು. ಂದರಾಸ ಸಮ್ಮೇಲನದ ಮುಖ್ಯವಾಪ ಅಂಶಗಳೆಂದರೆ ಈ ಅಧ್ಯ ೀಯ ಭಾಷಣ ಮತ್ತು ಸಾಹಿತ್ಯ ಗೋಷ್ಠಿಗೆ ಅಧ್ಯಕ್ಷರಾದ ಪ್ರೊ. ಾಳವಾಡರ ಭಾಷಣ. ಕೈಲಾಸಂ ಅವರ ಭಾಷಣದ ಬಗೆಯಲ್ಲಿ ನರು ಕೂನೂಹಲ ಪಟ್ಟಿರುವುದು ಸ್ವಾಭಾವಿಕ. ಈ ಸಲ ಸಮ್ಮೇ ನದಲ್ಲಿ ಅಧ್ಯಕ್ಷೀಯ ಭಾಷಣವಾಗಬಹುದೋ ಇಲ್ಲವೋ ಎಂಬಲ್ಲಿಂದ ಾಷಣವಾದರೂ ಅಷೊಂದು ಏನು.ರೂ ಸಂಪ್ರದಾಯದಿಂದ ಬೇರೆ ಾದದ್ದಾಗಿರುವುದೆಂಬುವ ವರೆಗೆ ಜನ ತಮ್ಮ ಅಭಿಪ್ರಾಯ ವ್ಯಕ್ತ ಡಿಸಿತ್ತು. ಎಷ್ಟೋಮಟ್ಟಿಗೆ ಜನರ ಎಣಿಕೆ ತಪ್ಪಲಿಲ್ಲ.

ಸಾಮಾನ್ಯವಾಗಿ ನಮ್ಮಲ್ಲಿಯ ಅಧ್ಯಕ್ಷೀಯ ಭಾಷಣಗಳಿಂದರೆ ರ್ವಧಾರಿ (ಹೋಲ್ಡಾಲ್) ಗಳದ್ದ ಹಾಗೆ. ಅದರಲ್ಲಿ ಏನು ಬೇಡಿದ್ದಾ ಗಬಹುದು. ಅದರಲ್ಲಿ ನಾಡಿನ ಸಮಸ್ಯೆಗಳು, ಇತಿಹಾಸ, ಗತಿಶ್ಯ ರಾಣಗಳು, ಉಪದೇಶ-ಉಪನ್ಯಾಸಗಳು. ಇನ್ನೂ ಏನೇನೋ ರಬಹುದು. ಇಂಥ ಇನ್ನೆಕ್ಕೋ ವಿಷಯಗಳಿಂದ ತುಂಬಿ ಹೊಟ್ಟೆ ಬ್ಬದ ಸರ್ವಧಾರಿಯನ್ನು ಸಾಹಿತ್ಯ ಸಮ್ಮೇಳನದ ' ಕಾರಕಿ ' ಕೆಯರು ಬಿಚ್ಚುವುದೇ ಒಂದು ಇರುವರೆಗೆ ನಡೆದ ಸಂಪ್ರದಾಯ ಾಗಿತ್ತು. ಬಿಚ್ಚಿದ ಹೋಲ್ಡಾಲನ್ನು ತಿರುಗಿ ಕಟ್ಟುವೆ ಮರುವರ್ಷದ ರೆಗೆ ಆದರ ಮೇಲೆಯೇ ಮಲಗಿ ಬಿಡುವುದೂ ಒಂದು ಪದ್ಧತಿ! ಆದರೆ ೀ. ಕೈಲಾಸಂ ಇಂಥ ಹೋಲ್ಡಾಲು ತರಲಿಲ್ಲ. ಎಲ್ಲಿಗೆ ಹೋದರೂ ಂದಿಗೂ ಏನೂ ಸಾಮಾನು ಒಯ್ಯದ ಕೈಲಾಸಂ ಅವರು ಸಮ್ಮೇಳನ ಕ್ಕಿದರೂ ಹೋಲ್ಡಾಲ್ ತಂದಾರೇ? ಹಿಂಗಾಗಿ ಅವರ ಅಧ್ಯಕ್ಷ ಭಾಷಣ ತೀರ ಬೇರೆಯಾಗಿತ್ತು. ಏಜಪ್ಪೊಗ್ಗೆಯ ರಬ್ಬನ್ಕೈಬಿಯೂ ರಲಿಲ್ಲ. ರಬಕವಿಯ ರುಕ್ಷ ಉಪದೇಶವೂ ಇರಲಿಲ್ಲ ಪ್ರೀ. ಕೈಲಾಸಂ ವರು ತಮ್ಮ ಭಾಷಣದಲ್ಲಿ ಯಾವ ಸಮಸ್ಯೆಗಳಿಗೂ ಪರಿಹಾರವನ್ನು ಾಚಿಸಿಬಯಸಲಿಲ್ಲ. ಈ ಕೆಲಸವನ್ನು ಮಾಡಬಲ್ಲ ' ಕರ್ಮವೀರ' ರು ಸಮಾಜ ರಥಕ್ಕೆ ಕುದುರೆಯಾಗಿ ' ನಿಲ್ಲಬಲ್ಲವರು ತಾವಲ್ಲವೆಂದು ಾದಲೇ ಹೇಳಿಕೊಂತು ತಮ್ಮಿಂದ ಸಾಧ್ಯವಾಗಿದ್ದ ಸಾಹಿತ್ಯಸೇವೆಯ ೆಯಲ್ಲಿ ಕೆಲವು ಒಳ್ಳೆಯ ಮಾತುಗಳನ್ನು ಹೇಳಿದರು. ಮುಖ್ಯವಾಗಿ ವರ ಭಾಷಣ ಅವರ ಕೃತಿಗಳ ಮೇಲೆ ಬೆಳಕು ಚೆಲ್ಲುವಂತಪದಾಗಿದೆ. ಸಂಗಿಕವಾಗಿಯೇ ಕಲೆಯ ಗುರಿಯನ್ನು ಕುರಿತು, ನಾಟಕದ ದ್ದೇಶವನ್ನು ಕುರಿತು, ನಾಟಕದಲ್ಲಿ ಹಾಸ್ಯದ ಸ್ಥಾನವನ್ನು ಕುರಿತು ಕೆಲವು ಮಾತು ಬಂದಿದೆ. ಈ ಮಾತುಗಳು ಏನುಶಾ ಗ್ರಂಥಗಳಿಂದ ಎತ್ತಿಕೊಂಡುವುಗಳಲ್ಲ. ಅನುಭವದಲ್ಲಿ ಹೊರಬಿದ್ದುವುಗಳು. ಪ್ರೀ. ಕೈಲಾಸಂ ಅವರ ಅಧ್ಯಕ್ಷ ಭಾಷಣ ಅವರ ಸಾಹಿತ್ಯ ಸೃಷ್ಟಿಯ ಬಗೆಯಲ್ಲಿ ಒಂದು ಸೂತ್ರರೂಪವಾದ ಸೃಷ್ಟೀಕರಣವಿದ್ದಂತಿದೆ. ಒಂದೆರಡು ಮಾತುಗಳನ್ನು ಎತ್ತಿ ಹೇಳಿಸಬಹುದು.

ಕಲೆಯ ವಿಷಯವಾಗಿ ಈಗ ಹಲವಾರು ಚರ್ಚೆ ನಡೆಯುತ್ತಿ ದ್ದಾಗ ಕೈಲಾಸಂ ಅವರು ತಮ್ಮ ಅಭಿಪ್ರಾಯವನ್ನು ತಮ್ಮಷ್ಟರ ಮಟ್ಟಿಗೆ ಖಂಡಿತವಾಗಿರಿಸಿಕೊಂಡಿದ್ದಾರೆ. ಅವರ ಮಾತನ್ನೇ ಕೇಳಿ. " ಕಲೆ ಯಾವುದನ್ನೂ ವ್ಯಾವಹಾರಿಕವಾದದ್ದನ್ನು ಸಾಧಿಸಲು ಕಂಕಣ ಕಟ್ಟಿದ್ದಿಲ್ಲ. ಆನಂದವೇ ಅದರ ಗಮ್ಯ, ಉಪದೇಶ, ಸಮಾಜ ಸುಧಾರಣೆ, ರಾಜಕೀಯ ಪ್ರಚಾರ— ಯಾವುದೂ ಅದರ ಕೆಲಸವಲ್ಲ. ಯಾವುದೋ ಉದ್ದೇಶಗಳಿತಿಯಲ್ಲಿ ಅದೆಲ್ಲವೂ ಸಾಹಿತ್ಯದಿಂದ ಆಗ ಬಹುದು. ಆಗುತ್ತಲೇ ಇದೆ..... ನಾಟಕ ಪ್ರಪಂಚದಲ್ಲಿ ಸಮಾಜ ಸುಧಾರಣೆಯ ಉದ್ದೇಶವನ್ನಿಟ್ಟುಕೊಂಡು, ಧರ್ಮೋಪದೇಶದ ದೃಷ್ಟಿ ಯಿಂದ ಒದಿದ ನಾಟಕಗಳು ಯಾವುವೂ ಉಳಿದಿಲ್ಲ. ಅವಕ್ಕೆ ಆನಂದ ಕೊಡುವ ಶಕ್ತಿಯೇ ಇಲ್ಲ. ಆನಂದದಾಯಕವಾದ ಭಾಸ-ಕಾಳಿದಾಸರ ಕಲೆ ಎಂದಾದರೂ ಹಾಗೆ ಕಂಡೀತೆ? ಇದಕ್ಕಿ ಕಾರಣ— ಕಾವ್ಯ ಸೃಷ್ಟಿ ಶಕ್ತಿಗೆ ಇದ್ದಂತೆ, ನಿಕಾರ ಸ್ವಯಂಕರವಲ್ಲ. ಬಿತ್ತನೆ ಬೆಳೆದಂತೆ— ಬಯಸಿದಂತಲ್ಲ "

ಸಾಹಿತ್ಯಕ್ಕೂ ಸುತ್ತಲಿನ ಜೀವನಕ್ಕೂ ಇರುವ ಸಂಬಂಧವನ್ನು ತಮ್ಮದೇ ಆದ ರೀತಿಯಲ್ಲಿ ಹೇಳಿದ್ದಾರೆ. ಇಂಗ್ಲಿಷ್ 'ಮಿಕ್ಸ್' ಮಾಡಿದ ಅವರ ಬರವಣಿಗೆಯ ಶೈಲಿಯ ವಿಷಯದಲ್ಲಿಯೂ ತಮ್ಮ ಹೇಳಿಕೆ- ಯನ್ನು ಸ್ಪಷ್ಟವಾಗಿ ಕೊಟ್ಟಿದ್ದಾರೆ. " ನಾನು ನಾಟಕ ಬರೆಯಲು ಮೊದಲು ಮಾಡಿದಾಗ ಈಗ ನನ್ನದೆಂಬ ನಾಟಕಗಳಲ್ಲಿ ಬಳಕೆಗೆ ಬಂದಿರುವ ಭಾಷೆಯನ್ನು ಕನ್ನಡಾಂಗ್ಲೋ— ಉಪಯೋಗಿಸ- ಬೇಕೆ ಬೇಡವೆ. ಬಳಸಿದರೆ ಸರಿಯೋ ತಪ್ಪೆ, ಎಂಬ ತೊಡರೇ ನನಗಿರಲಿಲ್ಲ. ಆ ಭಾಷೆ ಗ್ರಂಥಕ್ಕೆ ಯೋಗ್ಯವೆ ಅಯೋಗ್ಯವೆ ಎಂಬ ಾವ-ವಿಮರ್ಶೆ ವಿಮರ್ಶಕರ ಕೆಲಸ. ಈ ಭಾಷೆ ತಪ್ಪಾದರೆ ನಮ್ಮ ತಿಸ್ಸ ಜನ. ಅವರ ಮಾತೇ ತಪ್ಪು ತೊಳ್ಳುಗಚ್ಚೆಯ ಸಾತುಪಾತು ನನ್ನ ಮನಸ್ಸಿನ ಆಗಳದಲ್ಲಿ ಬೆಳೆದ ಹುಡುಗಿಯರಲ್ಲ. ನಮ್ಮ ಸೀಮೆ ಯಲ್ಲಿ ಅವರಿವರ ಮನೆಯಲ್ಲಿ ಕಂಡ ಹುಡುಗಿಯರು. ಅವರು ಆಡಿದ ಮಾತಿನ ವೈಖರಿ. ಅವರ ಭಾಷೆ, ನನ್ನ ಮನಸ್ಸಿನಲ್ಲಿ ಮೂಡಿ ತೊಳ್ಳು ಗಚ್ಚೆಯಕ್ಕೆ ಇಳಿಯಿತು. ಬೀದಿಯಲ್ಲಿ ಮನೆಯಲ್ಲಿ ನಮ್ಮ ಜನ ಮಾತಾಡುವಾಗ ನಾವು ಅವರ ಭಾವವನ್ನು ಗಮನಿಸುತ್ತೀವೆ, ಭಾಷಾ ವೈಖರಿಯನ್ನಲ್ಲ. ಕಲೆಗಾರ ಅದನ್ನೂ ಗಮನಿಸುತ್ತಾನೆ. ಆದೇ ಜನ ನಾಟಕದಲ್ಲಿ ಬಂದು ಮಾತಾಡಿದರೆ ಅವರ ಭಾಷೆ ಹೇಗೆ ಬದಲಾ- ಯಿತು? ಯುವಕ ವಿಮರ್ಶಕನೊಬ್ಬನು ಕೈಲಾಸಂ ಅವರನ್ನು ಕಂಡಿದ್ದಾಗ " ಏನು ಸಾರ್, ನಿಮ್ಮ ನಾಟಕಗಳಲ್ಲಿ ತುಂಬ ಇಂಗ್ಲಿಷ್ ಮಿಕ್ಸ್ ಮಾಡಿರಿತ್ತಿರಲ್ಲ? " ಎಂದು ಕೇಳಿದನಂತೆ. ಕೈಲಾಸಂ ತಟ್ಟನೆ ತಿರುಗಿ ಕೇಳಿದರಂತೆ! " ಏನು ಬುಗುಲ್ದಿ ಮಗನ, ಈಗ? " ಎಂದು. ಇದು ಅವರ ರೀತಿ. ಅವರ ನಾಟಕಗಳಿಗೆ, ಅವುಗಳನ್ನು ಬೇಳುವ ರೀತಿಗೆ ಒದುಕೇ ಒಂದು ಸಮರ್ಥನೆ, ಕಾರಣ, ನೈಜತ್ವ!

ಸಾಹಿತ್ಯಸೃಷ್ಟಿ ಒಂದು ಪ್ರತಿಸೃಷ್ಟಿಯಾದರೂ 'ತದ್ರೂಪ' ಅಲ್ಲ; 'ತಸ್ಪೀರು' ಅಲ್ಲ. ಯಾಕೆಂದರೆ, ಕೈಲಾಸಂ ಹೇಳುವಂತೆ ಪ್ರಕೃತಿಯಲ್ಲೇ ಸೃಷ್ಟಿ ಕೇವಲ ಯಃಥಾಪೂರ್ವವಲ್ಲ. ತದ್ರೂಪಲ್ಲ. ತಂದೆಯಂತೆ ಮಗನಾದರೂ ಮಗನಲ್ಲಿ ಒಂದು ಹೊಸ ವಿಲಕ್ಷಣತೆ ಇದೆ. ತಂದೆಯೇ ಅವನಲ್ಲ. ಅವನೇ ಬೇರೆ ವ್ಯಕ್ತಿ. ಹೀಗೇ ಜನರ ಜೀವನದ ರಸಭಾವದ ಬೀಜ. ಕವಿಯ ಅನುಭೂಮಿಯ ಬಸಿರಿನಲ್ಲಿ ನಿಂತು, ಮಾಗಿ ಹೊರ ಹೊಮ್ಮಿದಾಗ ಅದು ಹೊಸ ಬದುಕು, ಹೊಸ ಸೃಷ್ಟಿ."

ಸಾಹಿತ್ಯನಿರ್ಮಿತಿಯಲ್ಲಿ ರಸವೊಂದು ಸಾಧ್ಯವೂ ಹೌದು, ಸಾಧನವೂ ಹೌದು. ಕೈಲಾಸಂ ಅವರ ಮಟ್ಟಿಗೆ ಹಾಸ್ಯರಸ ಪ್ರಧಾನ. ಈ ಹಾಸ್ಯವನ್ನು ಕೈಲಾಸಂ ಅವರು ಬಳಸಿಕೊಂಡಾಗ, ಅದರ ಬಗೆಯಲ್ಲಿ ನಾಲ್ಕು ಮಾತುಗಳನ್ನು ಹೇಳಿದಾಗ, ಅವರು ತಮ್ಮ ಎಲ್ಲ ಕೃತಿಗಳ ಹಿಂದೆ ಅಡಗಿಕೊಂಡ ದೃಷ್ಟಿಯ ವಿಚಾರದಲ್ಲಿ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ತಮ್ಮ ದೃಷ್ಟಿಯ ಬಗೆಯಲ್ಲಿ ಅವರು ಹೇಳಿದ ಮಾತುಗಳು ಅವರ ಕೃತಿಗಳನ್ನು ನಿಮರ್ಶಿಸುವ ವಿಮರ್ಶಕ ಯಾವಾಗಲೂ ನೆನಪಿನಲ್ಲಿಡಬೇಕಾದವುಗಳು. ಕೈಲಾಸಂ ಹೇಳುತ್ತಾರೆ. "ನನ್ನ ಮಟ್ಟಿಗೆ ನನಗೆ ಹಾಸ್ಯದ ಮುಖವಾಡ ಬೇಕು ಎನಿಸಿತು. ನನಗೆ ಅದು ಸಹಜ. ನನಗೊಂದು ವಕ್ರದೃಷ್ಟಿಯಿದೆ. ಈ ದೃಷ್ಟಿಗೆ ದೊಡ್ಡವರೆಂಬವರ ಬಡಾಯಿ, ಬಡಬುಗ್ಗರು ಎಂಬವರ ಸಣ್ಣತನ ಕಾಣಿಸುತ್ತದೆ. ಲೋಕ ಇದು ಸರಿ ಎಂದು ಮೆಚ್ಚುವ ಕಡೆ ಎಲ್ಲೋ ಏನೋ ಇರುವುದು. ಕಾಣುತ್ತದೆ. ಅಪ್ಪ ಅಪಂಬರ ಇಲ್ಲದೆ ತನ್ನ ಕೈಲಾದ ಮಟ್ಟಿಗೂ ಯೋಗ್ಯವಾಗಿ ಬದುಕುವವನಿಗೆ ಆ ದೊಡ್ಡಸ್ತಿಕೆ ಸಿಕ್ಕುವುದಿಲ್ಲ. ಸಾಧಾರಣವಾಗಿ ನಿರ್ದೋಷವಾಗಿ ಕಂಡದ್ದರಲ್ಲಿನ ಲೋಪ ಈ ದೃಷ್ಟಿಗೆ ಎದ್ದು ಕಾಣುತ್ತದೆ. ದೋಷನೆನಸಿಕೊಂಡದ್ದರಲ್ಲಿ ಗುಣವಿದ್ದರೆ ಅದೂ ಕಾಣುತ್ತದೆ. ಬಿಳೀ ಬಣ್ಣದಲ್ಲಡಗಿದ ಏಳು ಬಣ್ಣಗಳ ಹಾಗೆ ಅನೇಕ ಪರಿ ಇವೆ ಜೀವನದಲ್ಲಿ. ಈ ದೃಷ್ಟಿಗೆ ಬಿಳಿಯದರೊಳಗಿನ ಬಣ್ಣ ಕಾಣುತ್ತದೆ.ಈ ಹಾಸ್ಯಸೃಷ್ಟಿಯ ಭೂತಗನ್ನಡಿಯಲ್ಲಿ ಜನ ನಿಸ್ಸಂಕೋಚವಾಗಿ ತಮ್ಮನ್ನು ತಾವೇ ನೋಡಿಕೊಳ್ಳಲು ಬಹಳ ಸುಲಭ, ತಮ್ಮನ್ನು ನೋಡಿ ತಾವೇ ನಗುತ್ತಾರೆ."

ತಮ್ಮ ಹಾಸ್ಯದೃಷ್ಟಿಯ ಬಗೆಯಲ್ಲಿಯಷ್ಟೆ ಸಾಮಾನ್ಯವಾಗಿ ಸಾಹಿತ್ಯ ಸ್ವರೂಪದಲ್ಲಿ ಹಾಸ್ಯ ಯಾವ ರೀತಿಯಲ್ಲಿ ಕೆಲಸ ಮಾಡಬಹುದೆಂಬುದನ್ನೂ ಅವರ ಯೋಗ್ಯವಾದ ಅರ್ಥಮಾಡಿಕೊಳ್ಳದಿದ್ದರೆ ಆಗಬಹುದಾದ ಅಪಾಯವನ್ನೂ ಕೈಲಾಸಂ ಅವರು ಸೂಚಿಸಿದ್ದಾರೆ. "ಹಾಸ್ಯವು ನಿಂಬೆಹಣ್ಣಿನಂತೆ, ಅದನ್ನು ಬೇಕಾಗಿ ಉರಿಸಲೂ ಬಹುದು. ಮುಟ್ಟಬಾರದ ವಿದ್ಯುತ್ತಂತಿಯನ್ನು ಮುಟ್ಟಿ ಪ್ರಾಣಾಪಾಯ ಮಾಡಿಕೊಳ್ಳಲೂ ಬಹುದು. ನಿಸರ್ಗವಾಗದಿದ್ದರೆ ಹಾಸ್ಯ ಅಹಾಸ್ಯವಾಗಿ, ವಿಘಾತವಾಗಿ ಪರಿಣಮಿಸುತ್ತದೆ. ಶಸ್ತ್ರವೈದ್ಯನ ಶಸ್ತ್ರದಂತೆ ಹಾಸ್ಯ ಅನನ್ಯ ಚಿತ್ತವಾಗಿರಬೇಕು, ಆಭಿಮಾನ ಸಹಾನುಭೂತಿ ಪ್ರೇರಿತವಾಗಿರಬೇಕು. ಕಂಡದ್ದು ಕಾಣಿಸದ ಹಾಗೆ ಕಾಣಿಸಿದರೆ ಕಬ್ಬಿಣದಂಥ ಸ್ನೇಹ."

ಸಾಹಿತ್ಯದಲ್ಲಿ ಹಣೆಯದು ಹೆವಸದು ಎಂಬ ವಾದಕ್ಕೆ ಎಡೆಯಿಲ್ಲ. ಸಮಸ್ಯೆಯ ದೃಷ್ಟಿ ಬೇಕೆಂದು ಕೈಲಾಸಂ ಅವರು ಹೇಳಿದ್ದನ್ನು ನಮ್ಮಲ್ಲಿ ಈ ತೆರೆದ ವಾದ ಹೂಡುವ ಕೆಲ ಹೊಸ ಬರೆಹಗಾರರು ಗಮನಿಸಬೇಕು. ಅದರಂತೆ ಹೊಸದೆಂಬುದಕ್ಕೆ ಹೆದರುವ ಸಂಪ್ರದಾಯದ ಜನುಯಾಯಿಗಳೂ ಅವರ ಹೇಳಿಕೆಯನ್ನು ಗಮನಿಸುವ ಅವಶ್ಯಕತೆ ಇದೆ. "ಹೊಸದು ಎಂಬುದು ನಮ್ಮನ್ನು ಹೆದರಿಸಬೇಕಾಗಿಲ್ಲ. ಹಳತೆಲ್ಲವೂ ಕಹಿಯೇ ಅಲ್ಲ. ಅದನ್ನೂ ಇದನ್ನೂ ಧಾರಾಳವಾಗಿ ಬಳಸಿಕೊಂಡೇ ನನ್ನ ಕೆಲಸವನ್ನು ನಾನು ಮಾಡಿದ್ದೇನೆ. ಲೋಕದ ನಿಜವಾಗಿಯೂ ಹೊಸತು ಯಾವುದು? ಹಳತು ಯಾವುದು ಸರ್ವಜ್ಞನ ಪದ್ಯ ಎಂದಿಗೆ ಹಳೆಯದಾಗಬೇಕು? ಹಳತನ್ನೂ ಹೊತನ್ನೂ ಸರಿಯಾಗಿ ಬೆರಸುತ್ತ ಹೋಗುವುದೇ ಪ್ರಗತಿಯ ಲಕ್ಷಣ. ಯಾವುದೂ ಅತಿ ಆಗಬಾರದು. ನಾಟಕದ ತುಂಬಾ ಶ್ರಮಜೀವಿಗಳನ್ನು ತುಂಬಿಸಿ, ಜನರಿಂದ ಸಡ್ಡು ಹೊಡೆಸಿದರೂ ನಿಬ್ಬೆರಗು ಬಿಡಿಸಿದರೂ ನಾಟಕ ಅನಂದದಾಯಿ ಆಗುವುದಿಲ್ಲ....."

ಸಾಹಿತ್ಯಗೋಷ್ಠಿಯ ಅಧ್ಯಕ್ಷರಾಗಿದ್ದ ಪ್ರೊ. ಮಾಳವಾಡಿ ಈ ಸನ್ಮಾನ ಎಂದಿಗೋ ಸಿಗಬೇಕಾಗಿತ್ತು. ಆದರೆ ಇಂಥ ಸನ್ಮಾನಗಳಿಗೆ ಹಾತೊರೆಯದೆ ಸದ್ದಿಲ್ಲದೆ ನಿಧಾನವಾಗಿ ಕೆಲಸ ಮಾಡುವುದು ಮಾಳವಾಡರ ರೀತಿ. ಒಂದು ಕಿರುಪೊತ್ತಗೆಯೆ ಆದ ಅವರ ಅಧ್ಯಕ್ಷ ಭಾಷಣ ಅವರ ಪಾಂಡಿತ್ಯಕ್ಕೆ ನಿದರ್ಶನ. ಸಾಹಿತ್ಯದ "ನಿರ್ಮಾಣ ಪ್ರಯೋಜನ, ಸಮೀಕ್ಷಣ, ಪ್ರಸರಣ"ಗಳ ಬಗೆಯಲ್ಲಿ ಹಲವಾರು ವಿಮರ್ಶಕರ ಅಭಿಪ್ರಾಯಗಳನ್ನು ಕೇಲಿರಿಸಿ, ತಿಳಿಹೇಳಿ, "ನಾಲ್ಕು ಬಗೆಯ ನೋಟವನ್ನು" ಓದುಗರೆದುರು ಇಟ್ಟಿದ್ದಾರೆ. ಕೊನೆಯ ಭಾಗದಲ್ಲಿ ಇತ್ತೀಚೆಗೆ ಪ್ರಕಟವಾದ ಸಾಹಿತ್ಯದ ವಿಸ್ತಾರವನ್ನು ತಿಳಿದ್ದಾರೆ. ಬೇರೆ ಬೇರೆ ವಿಮರ್ಶಕರ ಅಭಿಪ್ರಾಯಗಳನ್ನು ಹೇಳುವುದಕ್ಕಿಂತ ಸ್ವಾನುಭವವೇದ್ಯವಾದ ನಾಲ್ಕು ಮಾತುಗಳನ್ನು ಹೇಳುವ ಭಾಷಣ ಪಡಸಾಗದೆ ಸುಲಭಗುಣಗ್ರಾಹ್ಯವಾಗುತ್ತಿತ್ತೆಂದು ಕೆಲವರ ಆಕ್ಷೇಪ. ಆದರೆ ಆ ವಿಷಯ ಬರೆಹಗಾರನಿಗೆ ಸೇರಿದ್ದು. "ವಿವಿಧ ಭಾವ ಸಂಕಲನ ಮಾಡಿ, ಕಲ್ಪನಾಶಕ್ತಿಯ ಬಲದಿಂದ ಅವುಗಳಿಗೆ ಒಂದು ಸುಂದರರೂಪ ಕೊಟ್ಟು ನಿರೂಪಿಸುವುದೇ ಸಾಹಿತ್ಯ ನಿರ್ಮಾಣ"ಎಂದು ಮಾಳವಾಡರು ಹೇಳಿದ್ದಕ್ಕೆ ಎಷ್ಟೋ ಪರಿಯಿಂದ ಆಕ್ಷೇಪಣೆ ಬಂದಿದೆ. ಮೊದಲನೆಯದಾಗಿ 'ಸಂಕಲನ' ಎಂದರೇನು? ಕೊನೆಯದು ಬರುವ 'ನಿರೂಪಿಸುವುದು' ಎಂದರೇನು?—ಎಂಬ ಪ್ರಶ್ನೆಯನ್ನು ಕೇಳಿದ್ದಾರಿದೆ. ಎರಡನೆಯದಾಗಿ ಸಾಹಿತ್ಯನಿರ್ಮಾಣಕ್ಕೆ ಮೂಲ ಬಂಡವಾಳ ಕೇವಲ 'ಭಾವನೆ' ಮಾತ್ರವೆ? ಮೂರನೆಯದಾಗಿ 'ರೂಪ'ಕೊಡುವುದು ಕೇವಲ 'ಕಲ್ಪನಾಶಕ್ತಿ' ಮಾತ್ರವೇ? ಎಂದೂ ಕೇಳಲಾಗಿದೆ. ಅಲ್ಲದೆ ಈ "ರೂಪ" "ಕೊಡುವ" ಕೆಲಸ ಎಷ್ಟರಮಟ್ಟಿಗೆ ತಿಳಿದು ಮಾಡುವ ಕೆಲಸ ಎಷ್ಟರಮಟ್ಟಿಗೆ ತಿಳಿಯದೆಯೆ ಸಾಧಿಸಬಲ್ಲ ಕೆಲಸ ಎಂಬ ವಿಷಯದಲ್ಲಿಯೂ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆ ಎಂದೇ ಹೇಳಲಾಗಿದೆ. ಇದೂ ಅಲ್ಲದೆ ಇಡೀ ವ್ಯಾಖ್ಯೆಯಲ್ಲಿ ಶಬ್ದಸ್ವರೂಪ ಮಾತನ್ನೇ ಎತ್ತಲಿಲ್ಲವೆಲ್ಲ ಎಂದೂ ಕೇಳಬಹುದೆಂದು ತೋರುತ್ತದೆ. ಎಲ್ಲ ವಿಚಾರಗಳನ್ನು ಮಾಳವಾಡರು ಮನಸ್ಸು ಮಾಡಿದ್ದರೆ ಸಹಜವಾಗಿಯೆ ಹೇಳಬಹುದಾಗಿತ್ತು. ಆದರೆ ವಿಸ್ತಾರ ಭಯಕ್ಕಾಗಿ ಈ ಸಮಸ್ಯೆಗಳನ್ನು ಅವರು ಎತ್ತಲಿಲ್ಲವೆಂದು ತಿಳಿಯಬಹುದಾಗಿದೆ. ಆದರೆ ಮಾಳವಾಡರ ಭಾಷಣ ನಮ್ಮಲ್ಲಿ ಈಗ ಬೆಳೆಯುತ್ತಿರುವ ನಿಮರ್ಶಾ ಸಾಹಿತ್ಯಕ್ಕೆ ಶಕ್ತಿದಾಯಕವೇ ಇರಲಿಲ್ಲವೆ, ಅವರ ನಿಮರ್ಶಾವಿಚಕ್ಷಣೆಗೆ ಯೋಗ್ಯವಾದ ನಿದರ್ಶನವಾಗುವಂತಿದೆ.

(ಕಳೆದ ಸಂಚಿಕೆಯ ಮುಂದೆ ಸಾಗಿದ್ದು)

ನಿಂಕು ಬೆದರುಗಣ್ಣುಗಳಿಂದ ಸುತ್ತಲೂ ನೋಡಿ ಕ್ಷಿಸಿಕೊಂಡಿದ್ದ....ಶಾಂತೇರ ನಗುತ್ತ "ನಿನ್ನ ನೋಲಿನ ಕಾಗೆಯ ಗೂಡಿನಿಂದ ಬಿಟ್ಟ" ಎಂದು ಹೇಳಲು ಅವನ ಮನಸ್ಸಿಗೆ ಸ್ವಲ್ಪ ಸಮಾಧಾನ ಆಯಿತು. ಒಮ್ಮೆ ಸ್ವಲ್ಪ ಗಾಳಿ ಬೀ ಜೋಳದ ದಂಟುಗಳ ಸಪ್ಪಳವಾಗಲು, ಮೂವರೂ ಯಾರೋ ಬಂದರೆಂದೇ ಭಾವಿಸಿ ದರು. ಹೀಗೆ ಅಸ್ಥಿರ ಮನಸ್ಸಿನಲ್ಲಿಯೆ. ಊಟದ ಕಾರ್ಯವನ್ನೊಮ್ಮೆ ಮುಗಿಸಿದರು.

"ಎಲ್ಲಿಯಾದರೂ ದೂರ ಹೋಗಿ ಸುಮ್ಮನೆ ಕುಳಿತುಕೊಳ್ಳುವುದರಿಂದ ಅರ್ಥವಿಲ್ಲ. ಮನೆ ಯಿಂದ ಹೊರಬಿದ್ದ ಮೇಲೆ ಅದರಂತೆ ಏನಾದರೂ ದೇಶಕಾರ್ಯ ಮಾಡಲಿಕ್ಕೆಬೇಕು. ಜೊತೆಯವರು 'ನೀವು ಹಿಂದೆ ಇರಬೇಕು.... ಎಂದರೆ ಕೆಲಸ ಮುಂದೆ ಸಾಗುವುದು....' ಎಂದು ಹೇಳಿ, ನನ್ನನ್ನು ಬೇರೆಕಡೆ ಕಳಿಸಿಕೊಟ್ಟ ಉದ್ದೇಶವಾದರೂ ಏನು ....?" ಎಂದು ಶಾಂತೇರ ಕೈದೊಳೆಯುತ್ತ ಹೇಳಿದ.

"ನೀನೆನ್ನುವುದು ನಿಜವಾದುದೇ. ಆದರೆ ಕಾರ್ಯದ ಸ್ವರೂಪ, ಅದನ್ನು ಮಾಡುವ ರೀತಿ-ನೀತಿಗಳ ಸ್ಪಷ್ಟ ಜ್ಞಾನವಿರಬೇಕು.... ಮೇಲಾಗಿ ದೃಢನಿಶ್ಚಯವೂ ಬೇಕು. ಬೆಂಬಲಕ್ಕೆ ಜನತೆ ಬೇಕು. ಸ್ವತಃ ರಾಜದಂಡನೆಗೂ ಸೆರೆಮನೆ ವಾಸಕ್ಕೂ ಸಿದ್ಧನಿರಲಿಕ್ಕೆಬೇಕು.... ಪ್ರಸಂಗ ಬಂದರೆ ದೇಶಕ್ಕಾಗಿ ಆತ್ಮನನ್ನು ಬಲಿ ಕೊಡಲೂ ಹಿಂದೆ ಮುಂದೆ ನೋಡಲಾಗದು. ಈಗ ನೀವು ಭಾವಿಸಿರುವಷ್ಟು ಈ ಕಾರ್ಯ ಸುಲಭವಲ್ಲ. ಕೂಡಲೆ ಕೊನೆಗೊಳ್ಳುವುದೂ ಇಲ್ಲ. ಸ್ವಾತಂತ್ರ್ಯ ಬಾಗಿಲಲ್ಲಿ ಕಾಯ್ದು ನಿಂತಿಲ್ಲ. ಈಗಲೇ ಸಿಕ್ಕೇ ತೀರುವುದೆಂದು ನಂಬಿ ಕಾರ್ಯಮಾಡಿ, ಆಮೇಲೆ ನಿರಾಕೆ ಗೊಳ್ಳುವುದರಲ್ಲಿ ಅರ್ಥವಿಲ್ಲ. ಜನತೆಯನ್ನು ಸ್ವತಂತ್ರ್ಯದ ದಾರಿಯಲ್ಲಿ ಒಂದು ಹೆಜ್ಜೆ ಮುಂದಿಡಿಸುವುದಿಷ್ಟೇ .... ಇಂದಿನ ನಿನ್ನ ಹೊಸ ...ಆದುದರಿಂದ ಪೂರ್ಣ ವಿಚಾರ ಮಾಡಿ ಮುನ್ನುಗ್ಗುವುದು ಒಳಿತು." ಎಂದು ಚಿಕ್ಕಣ್ಣ ತನ್ನ ಎಚ್ಚರಿಕೆಯನ್ನು ಸೂಚಿಸಿದ.

"ಜನತೆಯ ನೆರವು ಬೇಕಾದಷ್ಟಿದೆ ಈ ಎರಡು ದಿನಗಳಲ್ಲಿ ಊರಲ್ಲಿ ಯಾರು ಯಾರನ್ನು ಹಿಡಿದರೋ ಇನ್ನೂ ಗೊತ್ತಾಗಿಲ್ಲ. ಇವರ ಕಡೆಯ ಸಮಾಚಾರ ತಿಳಿದುಕೊಂಡು ಮುಂದಿನ ಹೆಜ್ಜೆಯಿಡಬೇಕಾಗಿದೆ. ಈ ಹೊತ್ತು ಹೋಗಿ ನಮ್ಮ ಸೆರೆಯ ಊರಲ್ಲಿ ಒಂದು ಸಾರ್ವಜನಿಕಸಭೆಯನ್ನು ಮಾಡ ಬೇಕು. ಮಿಲಿಟರಿಯವರು ಈ ಭಾಗಕ್ಕೆ ಬಂದು ಹುಡುಕುವಷ್ಟರಲ್ಲಿ ಆ ದಿಶೆಗೆ ಕಾರ್ಯಮಾಡಿ ಅಧಿಕಾರಿಗಳಿಗೆ ಹುಚ್ಚು ಹಿಡಿಸಬೇಕು." ಎಂದ ಚಿಕ್ಕಣ್ಣ ಹುರುಪಿನಿಂದ.

"ನೀವು ಎಲ್ಲಿ ಹೋಗಿ ಕಾರ್ಯ ಮಾಡ ಬಯಸಿದರೂ ಆ ಹಳ್ಳಿಯ ಜನರ ಬೆಂಬಲ ನಿಮಗೆ ಬೇಕು....ಈ ದಿನಗಳಲ್ಲಿ ಒಮ್ಮೆಲೇ ಯಾರನ್ನೂ ನಂಬುವಂತಿಲ್ಲ. ನಮ್ಮನ್ನೆ ಹೋಗಿ ಸಾರ್ವಜನಿಕ ಸಭೆ ಮಾಡಿಸೆಂದರೆ ಸಾಧ್ಯವೂ ಇಲ್ಲ, ಔಪಯೋಗವೂ ಇಲ್ಲ ಒಳಗಿಂದೊಳಗೇ ಜನತೆಯ ಮನಸ್ಸನ್ನು ಸಿದ್ಧಗೊಳಿಸಲು ಬೇಕು. ದೇಶದಲ್ಲಿ ಕಾರ್ಯ ಮಾಡುವ ಹಿರಿಯ ಮುಖಂಡರಾರಾದರೂ ಸಿಗುವರೇನೋ ನೋಡಿ, ಅವರ ಹೆಜ್ಜೆ ತುಳಿಯಬೇಕು....ಇಲ್ಲವಾದರೆ ಸಂಘಟನೆಯಿಂದ ಕೆಲಸವೂ ಆಗಲಿಕ್ಕಿಲ್ಲ.... ಕೂಡಲೆ ಜೇಲನ್ನೂ ಸೇರಬೇಕಾದೀತು....."

"ಬಿಡಿರಿ; ಹೀಗೆ ಎಂದಾದರೂ ಸರಕಾರ ದವರಿಗೆ ನಾವು ಸಿಕ್ಕಬಹುದೆ? ನಮ್ಮೂರ ಸೆರೆ ಯ ಊರುಗಳಲ್ಲೆಲ್ಲ ಕಾರ್ಯಕರ್ತರಿದ್ದಾರೆ.... ಹಿಂದೆ ಚತುರ ಸಂಘಗಳನ್ನು ಸ್ಥಾಪಿಸಲೆಂದೂ, ಮಾದಿಯ ಮಾರಾಟಕ್ಕೆಂದೂ ಅಡ್ಡಾಡಿದಾಗಲೂ ಹಲವರನ್ನು ಕಂಡು ಪರಿಚಯ ಮಾಡಿ ಕೊಂಡಿದ್ದೇನೆ...." ನಡುವೆಯೆ ನುಡಿದ ಶಾಂತೇರ.

"ಹಾಗಾದರೆ ಅಡ್ಡಿಯಿಲ್ಲ. ಇಂದು ಸಂಜೆಗೆ ಆ ಭಾಗಕ್ಕೇನೆ ಹೋಗಬಹುದು....." ಎಂದು ಏನೋ ಫೇನಿಸುತ್ತ ಚಿಕ್ಕಣ್ಣ ಹೇಳಿದ.

"ಅವೆಲ್ಲ ಆಯಿತು; ಹೋಗಲಿಕ್ಕೆ ದಾರಿ ಯೊಂದು ಬೇಕಲ್ಲ....? ಅತ್ತ ಹೋಗಲಿಕ್ಕೆ ಇದ್ದುದೊಂದೇ ದಾರಿ, ಹಿರಿಯೂರಿನ ಮೇಲಿಂದ ಹೋದುದು. ಆ ದಾರಿಯಲ್ಲಿಯೆ ಮಿಲಿಟರಿ ಓಡಾಟವಿದೆ. ಅಲ್ಲಿನ ನಮ್ಮ ಸುಳುಹಿನ ಮೇಲೆಯೇ ಇದ್ದಾರಂತೀರಲ್ಲ....?"

"ಅಹುದು; ಮಿಲಿಟರಿಯವರೇ ಇಲ್ಲೆಲ್ಲ ಸುತ್ತಾಡುತ್ತಿರುವರು....ನಾನು ಮಂಜಾನೆ ನಿನ್ನನ್ನು ಸಂಸ್ಥಾನದ ಹದ್ದಿಯ ಚಿಕ್ಕೂರಿಗೆ ಹೋಗಿರೆಂದು ಕಳುಹಿಸಿದೆ; ಅದು ನನ್ನ ತಪ್ಪು ಕಲ್ಪನೆ. ಎಲ್ಲಿ ಹೋದರೂ ಅವರು ಹಿಡಿಯು ವರಂತೆ....ನೀವು ಊರಲ್ಲಿ ಹೋಗದೆ ಇಲ್ಲಿ ದಾರಿಗೇ ಬಂದ ನಿಂತುದು ಒಳ್ಳೆಯದಾ ಯಿತು....ಈಗ ನೀವು ಬೆಳಗುಂಟೆ ನಮ್ಮೂರ ಪಶ್ಚಿಮಕ್ಕಿರುವ ಕೆರೆಯ ಓಪಿನೆ ಬನ್ನಿ; ನಾನು ನಿಮ್ಮ ಸಾಮಾನುಗಳನ್ನು ಅಲ್ಲಿಗೆ ತಂದು ಮುಟ್ಟಿಸುವೆ. ಮಿಲಿಟರಿಯು ಈಗಾಗಲೆ ಊರಲ್ಲಿ ಬಂದು ಬಿಟ್ಟಿರಬಹುದೆ."ಎಂದು ಚಿಕ್ಕಣ್ಣ ಹೇಳಿದ.

"ಹಾಗೆ ಮಾಡಿರಿ; ಆದರೆ ನಮ್ಮ ಸಾಮಾನು ಗಳನ್ನು ಸ್ವಲ್ಪ ಎಚ್ಚರಿಕೆಯಿಂದಲೇ ತರ ಬೇಕು....ಅದರಲ್ಲಿ ಕೆಲವು ಅತ್ಯಾವಶ್ಯಕವಾಗಿದ್ದ ಗಳಿವೆ....ಜಲ್ಲಡೆ 'ಕ್ವಿಟ್ ಇಂಡಿಯಾ'ದ ಒಂದು ಪ್ರತಿಯೂ ಉಂಟು..."

"ಇರಲಿ, ನಾನೀಗ ಹೋಗುವೆ. ಅದಷ್ಟು ಎಚ್ಚರಿಕೆಯಿಂದ ತಕ್ಕೊಂಡು ಬರುವೆ. ಪೋಲಿ ಸಿನವರೂ ನನ್ನ ನಡೆ ನುಡಿಗಳ ಮೇಲಿಟ್ಟೇ ಲಕ್ಷ್ಯವಿಟ್ಟಿರಬಹುದೆ ಬದುವಾಗ ಎಲ್ಲಿ ನಡೆದಿರೆಂದು ವಿಚಿಕಾರಿಸಿಬಿಟ್ಟರೆ ಕೇಳಿದ....ಚಿಕ್ಕೂರ ಪೋಸ್ಟ್ ಆಫೀಸಿನಲ್ಲಿ ಸ್ವಲ್ಪ ಕೆಲಸವಿದೆಯೆಂದು ಹೇಳಿ ಬಂದೆ....ಬಹಳ ತಡವಾದರೆ....ಮತ್ತೇನಾದರೂ ತರ್ಕಕಟ್ಟಿ ನಮ್ಮ ಮನೆ ಮೊಕ್ಕಾಂ ಮಾಡಿದರೆ....ಎಲ್ಲವೂ ತಪ್ಪೀತು. ಇನ್ನೂ ನಿನ್ನ ಸಾಮಾನುಗಳೆಲ್ಲ ಮನೆಯಲ್ಲಿವೆ ಇವೆ...ನೀವೂ ಆದಷ್ಟು ಬೇಗನೆ ಬನ್ನಿ. ನಿಮಗೂ ಸುಜೆಯಾಗುವುದು....." ಎಂದು ಚಿಕ್ಕಣ್ಣ ಹಾದಿಯ ಕಡೆಗೆ ನಡೆದ.

"ಆದಷ್ಟು ಮಿಲಿಟರಿಯ ಸುಳಿದಾಟವನ್ನು ತಿಳಿದುಕೊಂಡೇ ಬರಿ?" ಎಂದು ರಾಮ ಕಳ್ಳದನಿಯಿಂದ ಕೂಗಿ ಹೇಳಿದ....

× × ×

ಚಿಕ್ಕಣ್ಣನು ಶಾಂತೇರನ ಬಿರಿದೆ-ಕಾಗದ ಗುಟುಗಳೆಲ್ಲವನ್ನೂ ಒಂದು ದೋತರದಲ್ಲಿ ಸುತ್ತಿ ಬಗಲಲ್ಲಿ ಹಿಡಿದುಕೊಂಡು, ಕೈಯಲ್ಲಿ ತಂಬಿಗೆ ತಕ್ಕೊಂಡು ಮನೆಯಿಂದ ಹೊರಬಿದ್ದ. ಮೈಯಲ್ಲೊಂದು ಹಾಪ್ ಪರ್ಟು, ತಲೆಯ ಮೇಲೆ ಟೊಪ್ಪಿಗೆ ಇತ್ತು. ಜನಿವಾರವನ್ನು ಕಿವಿಗೆ ಹಾಕಿದ್ದ. ಚಿಕ್ಕಣ್ಣನ ಈ ನೋಗನ್ನು


ಬರಲಿವೆ! ಹೊಸ ಪುಸ್ತಕಗಳು ಬರಲಿವೆ!

ಶ್ರೀ. ಪುರಾಣಿಕ ಕೃಷ್ಣಮೂರ್ತಿಯವರ

೧) ಸೈರಂಧ್ರಿ. (ಸರಳವಾಗಿಯುಲ್ಲಿ ಬರೆದ ನಾಟಕಗಳು).

೨) ರಾಮಾಯಣ ಕತೆಗಳು. (ಮಂಥನ್ನು ವಿನೋದಾವಳಿ ಪ್ರಬಂಧಗಳು).

ಕೊಂಡು....ಈತ ದ್ರೋಹದ ಒಗೆಯಲು ಕೆರೆಗೆ ನಡೆದಿದ್ದಾನೆಂದೇ ಯಾರೂ ಭಾವಿಸುವಂತಿತ್ತು...ಅವರೂ ಚಿಕ್ಕಣ್ಣ ಮನೆಯಿಂದ ಹೊರಬೀಳುತ್ತಿರುವಾಗಲೇ ಒಬ್ಬ ಪೋಲೀಸನೂ ಅವರ ಮನೆಯ ಮುಂದಿನಿಂದಲೇ ಹಾಯ್ದು ಹೋದ; ಮೇಲಾಗಿ ಅವರ ಮನೆಯ ಕಡೆಗೆ ನೋಡ್ತಾ ಹೋದ ಬೇರೆ....ಚಿಕ್ಕಣ್ಣ ನಿಗೂ ಹೆದರಿಕೆಯಾಯಿತು. ತನ್ನ ಮೇಲೆಯೆ ಇವರಿಗೆ ಪೂರ್ಣ ಸಂಶಯವಿದೆಯೆಂಬುದು ಅರಿತ ಅವರೂ ಧೈರ್ಯದಿಂದ ಹಾಗೆಯೆ ಹೋಗಿಬಿಟ್ಟ. ಚಿಕ್ಕಣ್ಣ ಸ್ವಲ್ಪದೂರ ಹೋಗುವಷ್ಟರಲ್ಲಿ ಯಾತೀರ ಒಬ್ಬರು "ಯಾಕಪ್ಪೀ ಬಿಸಲಲ್ಲಿ ಹೊರಟಿದ್ದೀರಿ?" ಎಂದು ಚಿಕ್ಕಣ್ಣನನ್ನು ಕೇಳಿದರು.

ಕೂಡಲೆ ಚಿಕ್ಕಣ್ಣನು "ನುಂಜಾನೆ ಊರಿಂದ ಬಂದೆ; ಸ್ನಾನ ಮನೆಯಲ್ಲಿ ಆಯಿತು, ದೇವರ ಒಕ್ಕೊಂಡು ಬರುವೆ..." ಎಂದು ಹೇಳಿ ಮುನ್ನಡೆದ. ಪೋಲೀಸಿನವನಿಗೂ ಅದು ಕೇಳಿಸಿತೇನೋ! ಅವನೂ ಏನನ್ನೋ ಮನದಲ್ಲಿ ಮಂಡಿಗೆ ಮಾಡಿ, ನಾಡರ ಮನೆಯತ್ತ ಅವಸರದಿಂದ ಸಾಗಿದ.

ಈಗಾಗಲೇ ಮಿಲಿಟರಿಯು ಚಿಕ್ಕಣ್ಣನ ಮನೆಯನ್ನು ಸುತ್ತುಗಟ್ಟಿ ಒಳಗೆ ಹೋಗತಕ್ಕುದು, ಆದರೆ ಮಿಲಿಟರಿ ಜನರೆಲ್ಲ ನರಸೀಪುರದಿಂದ ಬರಲು ಸ್ವಲ್ಪ ವಿಲಂಬವಾಗಿದ್ದಿತು. ಯಾಕೆಂದರೆ ಮಿಲಿಟರಿ ಮೋಟಾರುಗಳಿಗೆ ಒರಲಿಕ್ಕೆ ಅನುಕೂಲವಾದ ದಾರಿಯಿರಲಿಲ್ಲ. ನಡುವೆ ಹೊಳೆಯೊಂದನ್ನು ದಾಟಬೇಕಾಗಿದ್ದಿತು. ಹೀಗಿದ್ದರೂ ವಂಚಿತ ಟಂದ ಜನವು ಚಿಕ್ಕಣ್ಣನ ಮನೆಯ ಮೇಲೆ ಲಕ್ಷ್ಯವಿಟ್ಟೇ ಇದ್ದರು.

ಚಿಕ್ಕಣ್ಣ ಊರ ಸೊಂಟಕ್ಕೆ ಸ್ವಲ್ಪ ದೂರ ಹೋಗಿದ್ದ. ಹಿಂದಿನಿಂದ ಯಾರೋ ಕೂಗಿ ಹೇಳಿದಂತಾಯಿತು:

"ಚಿಕ್ಕಣ್ಣಾ, ನಿಮ್ಮ ಮನೆಯಲ್ಲಿ ಪೋಲೀಸಿನವರು ಹೊಕ್ಕಿರುವರು....ಅಜ್ಜಿ ಕರೆಯುತ್ತಿರುವಳು, ನಿಮ್ಮನ್ನು!"

ಚಿಕ್ಕಣ್ಣ ಕೇಳಿದವನಂತೆ ಹಾಗೆಯೆ ಮುನ್ನಡೆದ. ಮನದಲ್ಲಿ 'ಯಾಪೀ ಬರಲೊಲ್ಲರೇಕೆ? ಅಜ್ಜಿಗುತ್ತೂ ಹೆದರದಂತಿರಲು ಹೇಳಿ ಬಂದಿರುವೆ....ಮನೆಯಲ್ಲಿ ಆಕ್ಷೇಪಾರ್ಹ ವಸ್ತುಗಳೇನೂ ಇಲ್ಲ. ಹಿಂದಿನಿಂದ ಏನೇ ಆಗಲಿ,ಈಗ ಶಾಂತೇಶನೊಬ್ಬ ಪಾರಾದನಲ್ಲ...!" ಎಂ ಯೋಚಿಸುತ್ತಿರುವಾಗಲೇ ಗೊತ್ತಾದ ಸ್ಥ ವನ್ನು ತಲುಪಿದ ಚಿಕ್ಕಣ್ಣ.

ಅಷ್ಟರಲ್ಲಿ ಶಾಂತೇಶ ರಾಮು ಅಲ್ಲಿ ಬಂದಿದ್ದರು ಚಿಕ್ಕಣ್ಣ ಬರುವ ದಾರಿಯನ್ನೇ ಕಾಯುತ್ತಿದ್ದರು. ಚಿಕ್ಕಣ್ಣ ಕೆರೆಯ ಸಮೀಪದ ಮೊಡಿಯ ಒರೆಯೊಂದರಲ್ಲಿ ಅವರಿಬ್ಬರಿಗೂ ಕುಳ್ಳಿರಹೇಳಿ, ತಂಬಿಗೆಯಲ್ಲಿ ತಾನು ತಂದ ಸಕ್ಕರೆ ಹಾಕಿದ ಹಾಲು ಕುಡಿಯಲು ಕೊಟ್ಟ. ಇಬ್ಬರೂ ಹಾಲು ಕುಡಿದು ಹೊರಡಲು ಸಿದ್ಧರಾದರು.

ಮುಂದಿನ ಕಾರ್ಯಕ್ರಮ ನಿಶ್ಚಯವಾದ ಮೇಲೆ ನನಗೆ ತಿಳಿಸಿರಿ. ಆಗಾಗ ಕಾಗದ ಬರೆಯುತ್ತ ಇರ್ರಿ. ಸಾಧ್ಯವಿದ್ದಷ್ಟು ನಾನು ನೇವಾಗುವೆ. ಪತ್ರ ಬರೆಯುವಾಗ ಹೆಸರನ್ನು ಬದಲಿಸಿ ಇಟ್ಟುಕೊಳ್ಳಿ .... ಕವಿಗಳಂತೆ....! ಎಂದು ಮುಗುಳುನಗೆಯೊಡನೆ ಹೇಳಿ, ಚಿಕ್ಕಣ್ಣ ಇಬ್ಬರನ್ನೂ ಬೀಳ್ಕೊಟ್ಟನು. ಆಗ ಮೂವರ ಮುಖದ ಮೇಲೆ ವಿಜಯಶ್ರೀಯು ನಲಿಯುತ್ತಿದ್ದಳು.

---

# ನಿಸರ್ಗ ದರ್ಶನ

ಶ್ರೀ ಗಂಗಾಧರ ಚಿತ್ತಾಲ, ಬಿ. ಎ., ಮುಂಬಯಿ

(ಸಂಪಾದಕರಲ್ಲಿ ಅಗ್ರಪೂಜಾಕವಿ ವರ್ಡ್ಸ್‌ವರ್ಥ್‌ಂ ಅಗ್ರಗಣ್ಯನೆನಿಸಿಕೊಳ್ಳುವನು. ತನ್ನ ನಿಸರ್ಗವರ್ಣನೆಯ ವಿವಿಧರಂಗಗಳನ್ನು ಸುದೀರ್ಘವಾದ ಕವನಪ್ರಬಂಧದಲ್ಲಿ ಅತನು ವಿವರಿಸಿದ್ದಾನೆ. ಆ ಕವನದ ತಿರುಳು ಭಾವಗೀತೆಯ ಇಕ್ಕಿ ಸ್ವಾನುಭವದ ಉತ್ಕಟತೆಗೂ ಅನಿಬದ್ಧತೆಗೂ ಬಲಿಯುತ್ತಿ ಗ್ರಹಿಸಲಾಗಿದೆ. ಬರಿಯ ಬಾಹ್ಯಾಂಗ ಭವ್ಯತೆಯಿಂದಲೇ ಬೆರಗಾಗುವ ಯೌವನದ ಪ್ರವೃತ್ತಿಯನ್ನು ಸೂಚಿಸುವುದಾಗಿ, ನಿಸರ್ಗದ ಆಂತರಂಗದ ದಿವ್ಯತೆಯನ್ನೂ ಅನುಭವಿಸುವ ಬಲವನ್ನು ಕಾಲಗತಿಯು ಹೇಗೆ ತಂದಿತೆಂಬುದೇ ಇದ್ದಿ ಮುಖ್ಯವಾಗಿ ನಿರೂಪಿತವಾಗಿದೆ. —ಲೇ.)

ಚಿತ್ರಿಸೆನು ಅಂದು ನಾನೆಂತಿದ್ದೆನೆಂಬುದನು:
ಧರೆಯಂಕೆ ಮರುಪಸಿರ್ಗೈವ ಪ್ರಭಾತದ ನಿನಾದವದು
ಮನದಿ ನೆಲಸಿತ್ತು ಸ್ಫೂರ್ತಿಕೋನ್ಮಾದದಂತೆ; ಬಾ-
ತ್ತುಂಗ ಶಿಲೆ, ನೀಲಶ್ಯಾಮಲ ಕೈಲ, ಹಸುರು ವನ-
ಗತ್ತಲೆಯು ಜೀವಿದ ಗಭೀರ ನೀರವ ಕಾಡು;
ಅವುಗಳಾ ವೈವಿಧ್ಯಮಯ ರೂಪ ವರ್ಣದಾ
ವಿಭ್ರಾವಗಳು ಮನವ ಮೋಹಿಸಿದ್ದುವು!

ಕಳೆಯಿತಾ ಕಾಲ. ಮೆಲ್ಲನೆ ಕಳೆದುವಂದಿನಾ
ನಂದ-ತೀವ್ರೋಲ್ಲಾಸಗಳು, ಜೀವನ ಬುಸ್ಮೈನವ
ಹರ್ಷೋನ್ಮಾದಗಳು. ಇನಕಾಗಿ ದುಗುಡವೆನ್ನ-
ಸದು ಎನಗೆ; ಆ ಕೊರತೆ ತುಂಬಿ ಬಂದಿಹವಿಂದು
ಇನ್ನಿತರ ಹೃದಯ ಸರಿದಾಕಗಳು. ಯೌವನದ
ಮುಗ್ಧತೆಯೊಳಂತೊ ಅಂತಲ್ಲ, ನೈಸರ್ಗವನು
ಹೊಸ ನೋಟದಿಂ ಕಾಣುವ ಕಣ್ಣು ಪಡೆದಿಹೆನು
ಜೀವಜಾತಗಳಖಿಲ ಜೀವನಾಂತರದೊಳೋ-
ತಪ್ರೋತವಾಗಿ ಮೌನದಲಿ ಹೊಯ್ಯುವ ಶೋಕ-
ಸಂಗೀತವನು — ಮನವ ವಿದ್ರವಿಸಿ ಮೃದುಲ ಸಿರ್-
ಮಲವಾಗಿಸುವ ಮ್ಲಾನಗಾನವನು — ಅರಿಪೆನು.
ನವಭವ್ಯ ಭಾವನಾನಂದವೆಂಬಂತೆ
ಗನ ತರಂಗಮಯವಾಗಿಸನಂಗರೂಪದನು-
ಭಾವನನು ಎಂದೆಂದೊ ಪಡೆದಿಹೆನು. ಸೂರ್ಯಾಸ್ತ
ಗಳ ಸ್ವರ್ಣವರ್ಣದಲೊ, ವರ್ತುಲಾವರ್ತದಲಿ
ನರ್ತಿಪ ಮಹಾರ್ಣವದಲೋ, ನಿತ್ಯ ಪ್ರವಹಿಸುವ
ಪವನದಲೊ, ಗಗನದ ಸುನೀಲ ವೈಶಾಲ್ಯದಲೊ,
ಘನವಪ ಮನೋಮಂದಿರದಲೋ ನೆಲೆ ನಿಂತು
ಅಖಿಲ ಜಗದಣುರೇಣುವನೆ ಸ್ಫುರಿಪ ದಿವ್ಯ ಚೈ-
ತನ್ಯದಲಿ ಇಲ್ಲೇನನಾಗಿಹೆನು.....

# ಸಾದರ ಸ್ವೀಕಾರ

೪೪ **ಸ್ವತಂತ್ರ ಸುಖಮಯ ಹಿಂದೂದೇಶ** (ವಿದೇಶ-ನಾತ್ಮಕ ಕಿರುಹೊತ್ತಿಗೆ) ಮೂಲ ಇಂಗ್ಲಿಷ್ ಲೇಖಕರು ಶ್ರೀಮಾನ್ ಸಿ. ಪಿ. ಜೋಶಿಯವರು. ಅನುವಾದಕರು ಶ್ರೀಮಾನ್ ಕುಳಕುಂದ ಶಿವರಾಯರು. ಪ್ರಕಾಶಕರು: ಜನತಾಸಾಹಿತ್ಯ ಮಂದಾಕಾಗಳ್ಳಿ, ಹುಬ್ಬಳ್ಳಿ. ಕ್ರೌ. ಆ. ೩೨ ಪುಟಗಳು. ಬೆಲೆ ೦-೨-೦.

ಹಿಂದುಸ್ತಾನದ ಭಾವಿ ರಾಜಕೀಯ ಜೀವನವು ಕಮ್ಯೂನಿಸ್ಟ್ ತತ್ತ್ವವನ್ನು ಅನುಸರಿಸಿ ಸಾಗಿದರೆ, ದೇಶದಲ್ಲಿ ಎಷ್ಟೊಂದು ಸುಖ ಸಮೃದ್ಧಾನಗಳನ್ನು ನೆಲೆಗೊಳ್ಳುವುವೆಂಬ ವಿಚಾರವನ್ನು ಪ್ರಚಾರಮಾಡುವುದಕ್ಕಾಗಿ ಹೊರಟ ಕಿರುಹೊತ್ತಗೆಯಿದು. ವಿಷಯ ಪರಿಚಯಾಭಿಲಾಷಿಗಳು ಅವಶ್ಯ ಓದಬೇಕು.

೪೫ **ಸತಿ ವಿರಾಜ** (ಅನುವಾದಿತ ಕಾದಂಬರಿ) ಶ್ರೀಶರಚ್ಚಂದ್ರ ಚಟ್ಟೋಪಾಧ್ಯಾಯರು ಮೂಲ ಲೇಖಕರು ಕನ್ನಡಿಸಿದವರು ಶ್ರೀ. ನು. ವೆಂಕಟೇಶ ಅವರು. ವಾಣಿಗಾರರು ಸಾಹಿತ್ಯಭಾಂಡಾರ, ಹುಬ್ಬಳ್ಳಿ. ಕ್ರೌ. ಆ. ೧೪೪ ಪುಟಗಳು, ಬೆಲೆ ೨-೪-೦.

೪೬ **ನವವಿಧಾನ** (ಅನುವಾದಿತ ಲಘುಕಾದಂಬರಿ) ಶ್ರೀ-ರಚ್ಚಂದ್ರ ಚಟ್ಟೋಪಾಧ್ಯಾಯರು ಮೂಲಲೇಖಕರು. ಕನ್ನಡಿಸಿದವರು ಶ್ರೀ. ಮಹಾಬಲೇಶ್ವರ ಬಂಕಿಕೊಡ್ಲು ಅವರು. ಪ್ರಕಾಶಕರು ಸಾಹಿತ್ಯ ಭಾಂಡಾರ, ಹುಬ್ಬಳ್ಳಿ. ಕ್ರೌ. ಆ. ೨೪ ಪುಟಗಳು. ಬೆಲೆ ೦-೧೪-೦.

೪೭ **ಕಾಬೂಲಿವಾಲಾ ಮತ್ತು ಇತರ ಕತೆಗಳು.** (ಶ್ರೀ-ರೀಂದ್ರನಾಥ ಟಾಗೋರರ ಮೂರು ಕತೆಗಳ ಅನುವಾದ). ಅನುವಾದಕರು ಶ್ರೀ. ಆ. ನಾರಾಯಣಸ್ವಾಮಿ ಅಯ್ಯರ್, ಬೆಂಗಳೂರು. ಪ್ರಕಾಶಕರು, ಸಾಹಿತ್ಯಭಾಂಡಾರ—ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು, ಹುಬ್ಬಳ್ಳಿ. ಕ್ರೌ. ಆ. ೧೦೦ ಪುಟಗಳು. ಬೆಲೆ ೧-೮-೦.

ಇದರಲ್ಲಿ 'ಕಾಬೂಲಿವಾಲಾ (೧-೧೨)' 'ಅಕ್ಕ (೧೨-೭೬)' ಎಂಬೆರಡು ಸಣ್ಣ ಕತೆಗಳೂ, 'ಇಬ್ಬರು ಸೋದರಿಯರು (೭೬-೧೦೦)' ಎಂಬ ನಿಡುಗತೆಯೂ ಭಾಷಾಂತರಿತವಾಗಿ ಸಂಗ್ರಹಗೊಂಡಿವೆ. ಅಯ್ಯರವರು ಈ ನೊವಲೆ ಶ್ರೀರವೀಂದ್ರರ ಕಥಗರ ಎರಡನೆಯ ಗ್ರಂಥವನ್ನು ಕನ್ನಡಿಗರಿಗೆ ಕೊಟ್ಟಿದ್ದಾರೆ. ಅವುಗಳನ್ನೋದಿದವರಿಗೆ ಅನುವಾದಿಸಿದ ಕನ್ನಡಭಾಷೆ ಎಂತಹದಿದೆಯೆಂಬುದನ್ನು ಬೇರೆ ಹೇಳಕಾಗಿಲ್ಲ. ಮೂಲ ಬಂಗಾಲಿಯಿಂದಲೆ ಭಾಷಾಂತರಿಸುತ್ತಿರುವುದು ಮತ್ತೂ ವಿಶೇಷ. ಏಕೆಂದರೆ ಶ್ರೀಶರಚ್ಚಂದ್ರರ ಗ್ರಂಥಗಳೆಲ್ಲ ಕನ್ನಡಕ್ಕೆ ಬರುತ್ತಿರುವುದು ಹಿಂದೀಭಾಷಾಂತರಗಳ ಭಾಷಾಂತರಗಳಾಗಿ! ಅಯ್ಯರವರು ಭಾಷೆಯನ್ನು ಸ್ವಲ್ಪ ಶುದ್ಧೀಕರಿಸಿಕೊಂಡು ಶ್ರೀರವೀಂದ್ರರ ಗ್ರಂಥಗಳನ್ನು ಕನ್ನಡದಲ್ಲಿ ತರಲುತೊಡಗಿದರೆ, ಕನ್ನಡ ಸಾಹಿತ್ಯದ ಒಂದು ದೊಡ್ಡ ಕೊರತೆಯನ್ನು ಕಡಮೆಮಾಡಿದಂತಾಗುವುದು.

೪೮ **'ಉಷಾ' ಪ್ರಕಟನಾಲಯದ** ಗಳ್ಳಿಯ ವರ್ಷದ ಸೂಚಿ (ಕ್ಯಾಲೆಂಡರ್).

ಹಲವು ಸಂಚಾರಂಗ ಮೂಡುತಿಯನ್ನೂ ವ್ಯವಹಾರದ ಸಂಗತಿಯನ್ನೂ ಕೊಟ್ಟು, ಎರಡು ಬಣ್ಣಗಳಲ್ಲಿ ಅಂದವಾಗಿ ಮುದ್ರಿತವಾದ ಕ್ರೌ. ಫೋಲಿಯೋ ಅಳತೆಯುದು. ಪ್ರತಿಯೊಂದು ಕಾರ್ಯಾಲಯದಲ್ಲಿಯೂ ಮನೆಯಲ್ಲಿಯೂ ಇರಬೇಕಾದುದು.

೪೯ **ಕನ್ನಡ ಸಾಹಿತ್ಯಪರಿಷತ್ತಿನ** (ಗಳಿಗ) ವಾರ್ಷಿಕ ವರದಿ. ಡೆ. ಆ. ೪೬ ಪುಟಗಳು.

೫೦ Social Welfare (ಇಂಗ್ಲಿಷ್ ವಾರಪತ್ರಿಕೆಯ ಮನೆಯ ವಾರ್ಷಿಕ ಸಂಚಿಕೆ). ಸಂಪಾದಕರು ಸುಪ್ರಸಿದ್ಧ ಧುರೀಣರಾದ ಕೆ. ಎಂ. ಮುನಸಿಯವರು. ಪ್ರಕಾಶಕರು ಇಂಡಿಯನ್ ಪಬ್ಲಿಕೇಶನ್ ಲಿಮಿಟೆಡ್, ಲಾಲ್‌ಗೀರ್ ಚೆಂಬರ್ಸ್, ಟಾವಾರಿಂದ್ ಲೇನ್ ಫೋರ್ಟ್—ಮುಂಬೈ. ಕ್ರೌ. ಫೋ. ೬೦ ಪುಟಗಳು. ಬೆಲೆ ೧-೦-೦.

ಸರ್ ಮಿರ್ಜಾ ಇಸ್ಮಾಯಿಲ್, ಟಿ. ಆರ್. ವೆಂಕಟರಾಮ ಶಾಸ್ತ್ರಿ, ನಲಿನೀರಂಜನಸರಕಾರ, ಸರ್. ಸಿ. ಪಿ. ರಾಮಸ್ವಾಮಿ ಐಯ್ಯರ್, ಪಾರ್ಜೆರ್ ಸೈಕ್ಸ್, ಎ. ಡಿ ಶ್ರಾಫ್, ವಿಶ್ವನಾಥದಾಸ ಮೊದಲಾದ ಸುಪ್ರಸಿದ್ಧ ಮುಂದಾಳುಗಳು ವಿವಿಧ ವಿಷಯಗಳ ಮೇಲೆ ಬರೆದ ಲೇಖನಗಳು ಇದರಲ್ಲಿ ಸಂಗ್ರಹಗೊಂಡಿವೆ.

೫೧ **ಆಜಾದ್ ಹಿಂದ್** (ಪರಿಚಯಾತ್ಮಕ—ಸಚಿತ್ರ ವೃತ್ತಕ). ಸಂಪಾದಕರು ಶ್ರೀಯುತರುಗಳಾದ ಭಾಲಚಂದ್ರ ಭಾಣೇಕರ್ ಮತ್ತು ಮೇವುಂಡಿ ಮಲ್ಲಾರಿ ಅವರು. ಪ್ರಕಾಶಕರು ಸಮಾಜ ವೃತ್ತಕಾಲಯ, ಧಾರವಾಡ. ಕ್ರೌ. ಆ ೮೮ ಪುಟಗಳು; ಬೆಲೆ ೧-೮-೦. (ಕಳೆದ ಸಂಚಿಕೆಯಲ್ಲಿ ಇದರ ವಿಮರ್ಶೆ ಪ್ರಕಟವಾಗಿದೆ).

೫೨ **ಕತೆಗಾರ** (ಗಳಿಗನೆಯ ವಾರ್ಷಿಕ ಸಂಚಿಕೆ). ಸಂಪಾದಕರು ಶ್ರೀ. ಜಿ. ಎ. ನರಸಿಂಹಮೂರ್ತಿ ಬಿ. ಎಸ್‌ಸಿ. ಇವರು ಪ್ರಕಾಶಕರು ಮೆ. ಆರ್. ಎನ್. ನ್ಯೂಜ್ ಏಜನ್ಸಿ, ಚಿಕ್ಕಪೇಟೆ ಬೆಂಗಳೂರು ಸಿಟಿ ಕ್ರೌ. ಆ. ೧೦೦ ಪುಟ. ಬೆಲೆ ೦-೮-೦

ಕಳೆದ ಡಿಸೆಂಬರಿನಲ್ಲಿ ಬೆಂಗಳೂರಲ್ಲಿ ಸೇರಿದ ಸಣ್ಣಕತೆಗಾರರ ಸಮ್ಮೇಳನದ ಅಧ್ಯಕ್ಷರಾದ ಶ್ರೀ 'ಅನಂದ' ರ ಚಿತ್ರವು ಸಂಚಿಕೆಯ ಮುಖಪತ್ರವನ್ನು ಅಲಂಕರಿಸಿದೆ. ಹಲವು ಲೇಖಕರ ಕತೆ, ಕವಿತೆ, ಏಕಾಂಕ, ಪ್ರಬಂಧಗಳು ಸಂಗ್ರಹಗೊಂಡಿವೆ. ವಾಚನೀಯವಾದ ಸಂಚಿಕೆ.

೫೩ **ವೀರನಾಥೆ** (ಚಿಕ್ಕ ಕಾದಂಬರಿ) ಬರೆದವರು ಶ್ರೀ. ಪಾಂಡಿತ ನಿಸ್ಸೇಶ್ವರಿ ಶರ್ಮ, ಗೋಕರ್ಣ ಅವರು. ಗೋಕರ್ಣ ಕರ್ನಾಟಕ ಸಂಸ್ಥೆಯ ಪರ್ಣಕುಟಿ ಗ್ರಂಥಮಾಲೆಯ ಪ್ರಕಟನೆ. ಕ್ರೌ. ಆ. ೬೨ ಪುಟಗಳು. ಬೆಲೆ ೦-೧೫-೦.

## ಅಭಿನಂದನೆ

ಮುಖಪತ್ರದ ಮೇಲೆ ಸ್ಥಳಪಟವಾಗಿರುವ ವಿದ್ವಾಂಸರ ಪಿ. ಎಂ. ಶ್ರೀನಿವಾಸ ರೇವಾಚಾರ್ಯರವರನ್ನು ಜಯಂತಿಯಂದು ಸ್ವಯಂಸ್ಫೂರ್ತಿಯಿಂದ ಕನ್ನಡಿಗ ತರುಣ ಚಿತ್ರಕಾರರಾದ ಶ್ರೀ. ಕಾನಾಸಾಹೇಬ ಬರಾದ್ದಾರ್ ದೇವಿಯವರು ಅವರಿಗೆ ಸ್ವಹಸ್ತದಿಂದ ಅಭಿನಂದನೆಗಳು. ಶ್ರೀ ಬರಾದ್ದಾರ್ ರವರಿಗೆ ಮೇಲಾಯಿ ಯವರು ಕರವಾಲ ಜಿಲ್ಲೆಯ ಜಗತಿಯ ನಿವಾಸಿಗಳು

# ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- ನಿಮ್ಮ ಮೂಡುವ ಅನುಕೂಲವುಳ್ಳ, ಕರ್ನಾಟಕದ್ದು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!
- ಮೊದಲನೆಯ ಮೌಲ್ಯಮಾಪನದಲ್ಲಿ ( Valuation ) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಣಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ನಾಮಧೇಯದಾರರಿಗೆ ತಿಲಾಂಜಲಿಯಿಲ್ಲದೆ ಹಕ್ಕಿನ ಋಣ ( Claim ) ವನ್ನು ಸಲ್ಲಿಸಿರುವುದರಿಂದ, ಎಲ್ಲರ ಸುಬಿಗೂ ತಕ್ಕಣವಾಗಿದೆ.
- ಕರ್ನಾಟಕದ ಏಳ್ಗೆಗಾಗಿ ದುಡಿಯುವವರೂ ಕನ್ನಡನಾಡಿನ ಹಿತಚಿಂತಕರೂ ಇದೇ ಕಂಪನಿಯ ಪಾಲಿಸಿಗಳನ್ನೂ ಷೇರುಗಳನ್ನೂ ತೊಂದುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಎ. ಎಸ್. ಕೆಣಿ, ಮ್ಯಾನೇಜಿಂಗ್ ಡೈರೆಕ್ಟರ ಎಂ. ಗೋವರ್ಧನರಾಮ, ಜ್ಯೂಪೇಜರ್

ಕೆಮ್ಮನ್ನು ಅಲಕ್ಷಿಸಿದ ವಿಶೇಷ ದುಷ್ಪರಿಣಾಮಗಳಿಂದ, ಸಾವಿರಾರು ಜನರನ್ನು, ಪ್ರಸಿದ್ಧಿ ಹೊಂದಿದ ಈ ಔಷಧವು ಸಂರಕ್ಷಿಸಿದೆ.

'ಕಾಸ್ಕೊ'ದಲ್ಲಿ ಎರಡು ರೀತಿಯ ಗುಣಗಳಿವೆ:— ಹೊರಭಾಗದಿಂದ:— ಅದರ ಸವಿಯಾದ ಶಕ್ತಿಯು ಗಂಟಲೊಳಗೆ ಜಾಗಿಕೊಂಡು ಕೆಮ್ಮನ್ನು ಹೊರಡಿಸುವ ಪರೆಗಳನ್ನು ಶಾಂತಪಡಿಸುತ್ತದೆ. ಒಳಭಾಗದಿಂದ:— ಅದು ಗಂಟಲೊಳಗಿನ ಸ್ವಾಭಾವಿಕವಾದ ಒಸರುನೀರಿಗೆ ಚೈತನ್ಯವನ್ನುಂಟುಮಾಡುತ್ತದೆ. ಕಫವನ್ನು ಕತ್ತರಿಸಲು ಸಹಾಯ ಮಾಡುತ್ತದೆ. ಶ್ವಾಸೋಚ್ಛ್ವಾಸದ ನಾಳಗಳನ್ನು ಶುದ್ಧಪಡಿಸುತ್ತದೆ. ಮತ್ತು ಕೆಮ್ಮನ್ನು ಹೊರಡಿಸುವ ಸೋಂಕನ್ನು ಅಲ್ಪಕಾಲದಲ್ಲಿಯೆ ನಿರ್ಮೂಲಪಡಿಸಿ, ಎಂದೆಂದಿಗೂ ಕೆಮ್ಮಿನ ಬಾಧೆಯಮ್ಮ ನಿವಾರಿಸುತ್ತದೆ. 'ಪೆಪ್ಪರ್‌ಮಿಂಟ್'ನಂತೆ ಒಂದು ಬಿಲ್ಲೆಯನ್ನು ೧-೨ ಗಂಟೆಗೊಮ್ಮೆ ಕೆಮ್ಮು ಶಮನವಾಗುವತನಕ ತೆಗೆದುಕೊಳ್ಳುವುದು.

ಎಲ್ಲಾ ಔಷಧಾಲಯಗಳಲ್ಲಿಯೂ ದೊರಕುವುದು.




ಹುಬ್ಬಳ್ಳಿ ಶಾಖೆ:— ಸ್ಟೇಶನ್ ರೋಡ್, ಹುಬ್ಬಳ್ಳಿ

# ಕರವಳಿ

ಕಳ್ಳ ಕಾಡುವ ನಗರದ ಬೀಂಭೈಯವರು

ಸಂಪುಟ ೫ | ಮಾರ್ಚ್ ೧೯೪೬ | ಸಂಚಿಕೆ ೧೦

ಸಂಪಾದಕರು:

ಬೆಟಗೇರಿ ಕೃಷ್ಣಶರ್ಮ

## ಮುಖ್ಯ ವಿಷಯಗಳು

ಎಚ್ಚರಿಕೆ (ಕವನ)
ಶ್ರೀ. ತಿರುಮಲೇಶ 'ವಿದ್ವಾನ್' ಬಳ್ಳಾರಿ ೪೦೭

ನಾವು ಬರತೇವಿನ್ನ (ಕವನ)
" ಅಂಬಿಕಾತನಯದತ್ತ ೪೧೦

ಬೋರನ ಬಾಳು (ಒಂದು ಸಣ್ಣ ಕತೆ)
ಶ್ರೀ. ಬನ್ನಂಜೆ ರಾಮಾಚಾರ್ಯರು, ಉಡುಪಿ ೪೧೧

ಸಾಹಿತ್ಯ ಮತ್ತು ಪ್ರಗತಿ (ವಿಮರ್ಶಾತ್ಮಕ ಪ್ರಬಂಧ)
ಪ್ರೊ. ರಾ. ಯ. ಧಾರವಾಡ, ಎಂ. ಎ., ಧಾರವಾಡ ೪೧೬

ಆನಂದನೇ ಆನಂದ (ವಿಚಾರತರಂಗ)
ಶ್ರೀ. ಡಿ. ಬಿ. ಟೊಕಸಾಲಿ. ಬಿ. ಎ., ಎಲೆಲ್. ಬಿ.,
ಮುಧೋಳ ೪೨೦

ನಾಲ್ಕು ಪತ್ರಗಳು (ಪತ್ರಕಥೆ)
ಶ್ರೀ. ಕೆ. ವೆಂಕಟರಾಮ್, ಬಿ. ಎ., ಮೈಸೂರು ೪೨೧

ಮೂಲಾಕ್ಷರ (ಕವನ)
ಶ್ರೀ ವಿ. ಜಿ. ಭಟ್ಟ, ಬಿ. ಎ., ಕಡತೋಕಾ ೪೨೨

ಕ. ಚಳವಳಿಯಲ್ಲಿ ಧಾರವಾಡದ ಭಾಗ (ಇತಿಹಾಸ)
ಶ್ರೀ. ಮುದವೀಡು ಕೃಷ್ಣರಾಯರು, ಧಾರವಾಡ ೪೨೩

ಮೋಡಕಾ ಬಾಜಾರ (ಲಲಿತ ಪ್ರಬಂಧ)
ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ, ಬಿ. ಟಿ. ೪೨೭

ಮಹಾತ್ಮರಿಗೂ ಇದು ಅನಿವಾರ್ಯ (ವಿಚಾರ ಮಂಥನ)
ಶ್ರೀ. ಶಂ. ಬಾ. ಜೋಶಿ, ಧಾರವಾಡ ೪೩೯

ಅಲ್ಲದೆ 'ಸಂಪಾದಕೀಯ" "ಮಂಗನ ಮಲ್ಲಿನಾಥನನ್ನ" "ಸಾಹಿತ್ಯವಿಹಾರ" 'ಪುಸ್ತಕವಿಮರ್ಶೆ" "ನಾಲ್ಕೂ ನಿಟ್ಟಿನ ನೋಟ".

ನಮ್ಮ ಸೊಲ್ಲಾಪುರದ ಏಜಂಟರು
'ಶ್ರೀ. ಎನ್ ಎಚ್ ದೇಶಪಾಂಡೆ
ಯೂಂಬ್ರೇಲಾವಾ, ದಕ್ಷಿಣಕಸಬಾ, ಸೊಲ್ಲಾ

DYESTUFFS
INTERMEDIATES
AND
CHEMICALS

SIZING AND FINISHING PRODUCTS
MACHINERIES FOR ALL INDUSTRIES

FOR

Cotton, Silk, Art Silk,
Wool, Jute, Paper,
Leather, Soap, Wax,
Coir, Varnishes, Oils.

CHEMICALS
ACCELERATORS AND
ANTI-OXIDANTS
FOR
RUBBER INDUSTRY

S. K. KABBUR LIMITED
3, BASTION ROAD
FORT, BOMBAY
Telegrams "DIAZO" Bombay Telephone 21627

CORRESPONDENTS IN ENGLAND.

KABBUR & CO., LIMITED
RADHA HOUSE
Higher Ardwick, MANCHESTER, 12.
Telegrams "Radha, Manchester."

ಸಂಪುಟ ೫ | ಮಾರ್ಚ್ ೧೯೪೬ | ಸಂಚಿಕೆ ೧೦

ಸಂಪಾದಕರು:

ಬೆಟಗೇರಿ ಕೃಷ್ಣಶರ್ಮ

## ಮುಖ್ಯ ವಿಷಯಗಳು

ಎಚ್ಚರಿಕೆ (ಕವನ)
ಶ್ರೀ. ತಿರುಮಲೇಶ : ವಿದ್ವಾನ್ ಬಳ್ಳಾರಿ ೪೦೭

ನಾವು ಬದತೇವಿನ್ನ ( ಕವನ )
" ಅಂಬಿಕಾತನಯದತ್ತ ೪೧೪

ಬೋರನ ಬಾಳು ( ಒಂದು ಪಣ್ಣ ಕತೆ )
ಶ್ರೀ. ಬನ್ನಂಜೆ ರಾಜಾಚಾರ್ಯರು, ಉಡುಪಿ ೪೧೧

ಸಾಹಿತ್ಯ ಮತ್ತು ಪ್ರಗತಿ ( ವಿವೇಚನಾತ್ಮಕ ಪ್ರಬಂಧ)
ಪ್ರೊ. ರಾ ಯ. ಧಾರವಾಡ, ಎಂ ಎ., ಧಾರವಾಡ ೪೧೬

ಆನಂದನೇ ಆನಂದ ( ವಿಚಾರತರಂಗ )
ಶ್ರೀ. ಡಿ. ಬಿ. ಟೊಕಸಾಲಿ, ಬಿ. ಎ., ಎಲೆಲ್. ಬಿ.,
ಮುಧೋಳ ೪೨೦

ನಾಲ್ಕು ಪತ್ರಗಳು ( ಪತ್ರಕಥೆ )
ಶ್ರೀ. ಕೆ. ವೆಂಕಟೇಶ್, ಬಿ ಎ., ಮೈಸೂರು ೪೨೧

ಮೂಲಾಕ್ಷರ ( ಕವನ )
ಶ್ರೀ ವ್ಹಿ. ಜಿ ಭಟ್ಟ, ಬಿ. ಎ., ಕಡತೋಕಾ ೪೨೪

ಕ. ಚಳವಳಿಯಲ್ಲಿ ಧಾರವಾಡದ ಭಾಗ ( ಇತಿಹಾಸ )
ಶ್ರೀ. ಮುದವೀಡು ಕೃಷ್ಣರಾಯರು, ಧಾರವಾಡ ೪೨೫

ಮೋಡಕಾ ಬಾಜಾರ ( ಲಲಿತ ಪ್ರಬಂಧ )
ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ , ಬಿ. ಟಿ. ೪೩೨

ಮಹಾತ್ಮರಿಗೂ ಇದು ಅನಿವಾರ್ಯ (ವಿಚಾರ ಮಂಥನ)
ಶ್ರೀ. ಶಂ ಬಾ. ಜೋಶಿ, ಧಾರವಾಡ ೪೩೯

ಜಿಲ್ಲೆಯ ' ಸಂಸಾರಕೀಯು " "ಮಂಗನ ಮಲ್ಲಿನಾಥನ" "ಸಾಹಿತ್ಯವಿಹಾರ" "ಪುಸ್ತಕಪರಿಚಯ" "ನಾಲ್ಕೂ ನಿಟ್ಟಿನ ನೋಟ".

ನನ್ನ ಸೊಲ್ಲಾಪುರದ ಏಜಂಟರು
(ಶ್ರೀ. ಎನ್ ಎಚ್ ದೇಶಪಾಂಡೆ
ಬ್ರೂಂಬ್ರೇನಾಪಾ, ದತ್ತಪ್ರಾಕಸಭಾ, ಶಿಳ್ಳೆ

DYESTUFFS
INTERMEDIATES
AND
CHEMICALS

SIZING AND FINISHING PRODUCTS
MACHINERIES FOR ALL INDUSTRIES

FOR

Cotton, Silk, Art Silk,
Wool, Jute, Paper,
Leather, Soap, Wax,
Coir, Varnishes, Oils.

CHEMICALS
ACCELERATORS AND
ANTI-OXIDANTS
FOR
RUBBER INDUSTRY

S. K. KABBUR LIMITED
3, BASTION ROAD
FORT, BOMBAY
Telegrams " DIAZO " Bombay Telephone 21627

CORRESPONDENTS IN ENGLAND.

KABBUR & CO., LIMITED
RADHA HOUSE
Higher Ardwick, MANCHESTER, 12.
Telegrams " Radha, Manchester."

ಸಂಪುಟ ೪

ಸಂಚಿಕೆ ೧೦

ಮಾರ್ಚ್ ೧೯೫೭

ವರ್ಗಣಿ ದರ

ವರುಷಕ್ಕೆ ೪—೪—೦
ಆರು ತಿಂಗಳಿಗೆ ೨—೪—೦
( ಅಂಚೆಯ ವೆಚ್ಚ ಸೇರಿ )

ಬಿಡಿ ಸಂಚಿಕೆಗೆ ೬ ಆಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

# ಎಚ್ಚರಿಕೆ

ಶ್ರೀ ತಿರುಮಲೇಶ, ಬಳ್ಳಾರಿ

೧

ಸಿರಿಯ ಹಿರಿಮೆಗೆ ಸೋತು ಪರಿಜನದ ಪರಿವಾರ
ವರಿಕೆಯುಳಲುಗಳೆಲ್ಲ ಬರಿದಾಗಿರೆ;
ಕರುಣೆಯಿಲ್ಲದೆ ಬಡವರೊಡಲ ತಿನ್ನುವ ಬಾಳ್ಗೆ
ಧರೆಯೊಳಿನಿತೋ ಜನರು ಮುಂದಾಗಿರೆ ...

೨

ನರರ ಕರುಳಿನ ಮಾಲೆ ಕೊರಳೊಳಾಂತಿಹ ಶೂರ
ನರಸಿಂಹರಿನಿಬರೋ ಮೆರೆಯುತಿಹರು;
ಸರಿಸದಲಿ ಪರಿಕಿಸುವ ಕರುಣೆತೊರೆವಿಹ ಜನದ
ಬಿರುನೋಟ ಮಾಟಗಳನೊಂದರಿಯರು.

೩

ಮಾಡಬಾರದ ಕಜ್ಜವಾಡಿ ನಲಸಂ ಕುಣಿದು
ನಾಡಿಗರ ಮನನಡಿಪ ಬಲುಪಡೋರಿ,
ಬೇಡಿಸರು ಕಾಡಿವರು ಬಡವರನು ಕಡೆಗಣಿಸಿ
ಪೀಡಿಸುತ ದಿನದಿನವು ಕೆಡುಕುತನ ಕೂಡಿ :—

೪

ತನ್ನರಸಿ ಕುವರರನಿಬರು ಸೊಗದೊಳಿರೆ ಸಾಕು
ಇನ್ನಿತರರೇನಾದರೇನಾಗಲಿ;
ತನ್ನೊಡಲು ತುಂಬಿ ಸಂತತ ಸಂತಸದಿ ಮೆರೆಯೆ
ಬನ್ನ ಬತಲಿತರರೇ ಮಡಿಯುತಿರಲಿ ! —

೫

ಬ್ರಹ್ಮಾಂಡವುರುಳಿರಲಿ: ಬ್ರಹ್ಮಗಿರಿ ಜರಿದಿರಲಿ;
ಧರ್ಮ-ಕರ್ಮಗಳೆಲ್ಲ ಹಾಳಾಗಲಿ;
ಬ್ರಹ್ಮತಾ ಸತ್ತೊಮ್ಮೆ ಸೃಷ್ಟಿಕಾರ್ಯವೆ ನಿಲಲಿ
ನಮ್ಮ ನುಕ್ಕಳು ಮಡದಿ ಬಾಳ ಬರಲಿ !—

೬

ಬಡಜನರ ರಕುತದಿಂ ಸಿಂಗರದಿ ಮೆರೆಯುತಿಹ
ಸಡಗರದ ಮಹಡಿಮನೆಯೊಂದುಳಿಯಲಿ.
ಪೊವವಿಯಳಿದರು ತಮ್ಮ ಮಡದಿಯುಳಿದರೆ ಸಾಕು
ಕಡೆಗಾಲ ಬಂದರೆಮಗಮರತೆಯೆ ಇರಲಿ !—

೭

ಜಗವೆನ್ನ ಹೊಗಳುತಿರಲಿತರರನು ತೆಗಳುತಲಿ:
ಜಗವೆಲ್ಲನೆಮಗಾಗಿ ದುಡಿಯುತಿರಲಿ;
ಹಗಲಿರುಳು ತಾವ್ರಂಡು ಸುಖಿಯಾಗಿ ಬಾಳಲೆಂ-
ಬಗಣಿತಪ ಹೋರಿಕೆಯು ಸೇರಿಬರಲಿ. —

೮

ಅಟ್ಟಹಾಸದೆ ಸಂತಸದ ಕಡಲು ಪಡ ವಿಸಿ
ಹೊಟ್ಟೆಯುರಿಯುರಿದೆದ್ದು ಕುಡಿವೆನೆಂದು:
ದಿಟ್ಟಸುತೆ ವಿಪ್ಲವನು ಸುಡಲು ನಾಲಗೆ ಚಾಚಿ
ಕಟ್ಟಳೆಯ ಮುರಿಯೆ ಮುಂದಿನ್ವುದೆಚ್ಚರವ್ವ !




## ಹಸಿದು ಕಂಗೆಟ್ಟ ಪ್ರಾಥಮಿಕ ಶಿಕ್ಷಕರು

ನಮ್ಮ ದೇಶದ ಪ್ರಾಥಮಿಕ ಶಾಲೆಯ ಶಿಕ್ಷಕರ ಇಂದಿನ ಗೋಳನ್ನು ಇಷ್ಟೆಂದು ಬಣ್ಣಿಸಲಾಸಲ್ಲ ಸರಕಾರದ ಸುಶಿಕ್ಷಿತ ನೌಕರ ವರ್ಗದಲ್ಲಿ ಪ್ರಾಥಮಿಕ ಶಿಕ್ಷಕರಿಗಿರುವಂತಹ ಕಂಗಾಲ ಪರಿಸ್ಥಿತಿ ಇಂದು ಇನ್ನಾರಿಗೂ ಇಲ್ಲ. ಮೊದಲಿನಿಂದಲೂ ಈ ಶಿಕ್ಷಕವರ್ಗ ಸರಕಾರದಿಂದ ದುರ್ಲಕ್ಷಿತವಾದುದು. ಏಕೆಂದರೆ, ಹಿಂದುಸ್ತಾನ ಪರಾಧೀನರಾಷ್ಟ್ರ. ಲಾಭದಾಯಕವಾದ ಸಂಪತ್ ಸಮೃದ್ಧವಾದ ಈ ರಾಷ್ಟ್ರವು ತಮ್ಮ ಕೈಯಲ್ಲಿಯೆ ಉಳಿಯಬೇಕಾದರೆ ಇಲ್ಲಿಯ ಜನತೆ ಬಲಹೀನವೂ ಅಶಿಕ್ಷಿತವೂ ಆಗಿ ಉಳಿಯಬೇಕೆಂದು ಆಳುವವರ ಆಪೇಕ್ಷೆಯಿರುವುದು ಸಹಜ. ಮನೆಯನ್ನು ಕಾಯಿಸಿಕೊಳ್ಳಬೇಕಾದ ಸಿರಿವಂತ, ನಾಯಿಗೆ ರುತ್ತು ಹೊಟ್ಟೆಗೆ ಹಾಕಿ ಕಚ್ಚಲು ಕಲಿಸಿ ಸಂರಕ್ಷಿಸಬೇಕಾದುದು ಅನಿವಾರ್ಯವಾಗಿರುವಂತೆ, ಆಳುವವರು ತಮ್ಮ ಆಡಳಿತದ ಅನುಕೂಲತೆಗಾಗಿ ನವ ಪ್ರಜೆಗಳನ್ನು ದುಡಿಸಿಕೊಂಡಷ್ಟರ ಪುಟ್ಟಗೆ ನಮ್ಮ ಜನರನ್ನು ಸಾಕ್ಷರರನ್ನಾಗಿ ಮಾಡಿಕೊಳ್ಳಬೇಕಾಗಿಲ್ಲ. ಅದಕ್ಕಾಗಿ ಮಾತ್ರ ಸರಕಾರದ ಶಿಕ್ಷಣ-ಖಾತೆಯ ಯೋಜನೆಯಿದೆಯಲ್ಲದೆ, ರಾಷ್ಟ್ರೋನ್ನತಿಗೆ ಅವಶ್ಯವಾದ ಮನಸ್ಸು ಬುದ್ಧಿ ಹೃದಯಗಳ ವಿಕಾಸದ ಮಹೋದ್ದೇಶದಿಂದ ಅಲ್ಲ ಅದು ಪರಿಂದಲೆ ಶಿಕ್ಷಣಖಾತೆಯಕಡೆಗೆ ಸರಕಾರದ ದುರ್ಲಕ್ಷ್ಯ.

ಜಾಗೃತವಾದ ಜನತೆ ಸಾರ್ವತ್ರಿಕ ಶಿಕ್ಷಣ ಬೇಕೆಂದು ಕೂಗಿಕೊಳ್ಳುತ್ತಿದ್ದರೂ, ಸರಕಾರ ಅದನ್ನು ಗಣಿಸಿದಂತೆ ಬಹಿರಂಗದಲ್ಲಿ ತೋರಿಸುತ್ತಿದ್ದರೂ, ಶಿಕ್ಷಣ ಪ್ರಸಾರ ಪೆಚ್ಚಾಗದಂತೆ ಆಲ್ಲಲ್ಲಿ ಒಳಗತ್ತರಿಗಳನ್ನು ಒಡ್ಡಿರುವುದು. ಇಂತಹ ಒಳಗತ್ತರಿಗಳಲ್ಲಿ ಮುಖ್ಯವಾದುದೆಂದರೆ ಶಿಕ್ಷಕರಾಗಿ ಬರುಕಬೇಕೆನ್ನುವವರಿಗೆ ಹೊಟ್ಟಿತುಂಬ ಕೂಳು ಕೂಡ ಸಿಕ್ಕಲಾರದಂತಹ ಸಂಬಳದ ಪದ್ಧತಿ.

ಸ್ವತಂತ್ರ ರಾಷ್ಟ್ರಗಳಲ್ಲಿ ಪ್ರಾಥಮಿಕ ಶಿಕ್ಷಣದ ನಿಷಯ ಸಾಧಾರಣ ವೆಚ್ಚದ ದೃಷ್ಟಿಯಿಂದ ಹಿಂದುಸ್ತಾನದ ಕಡೆಗೆ ನೋಡಿದರೆ ಆನೆ ಆಡುಗಳ ಅಂತರ ಕಾಣದಿರದು. ಹಿಂದುಸ್ತಾನಕ್ಕಿಂತ ಲಂ ಪಾಲು ಚಿಕ್ಕದಾಗಿರುವ ಇಂಗ್ಲಂಡಿನ ಪ್ರಾಥಮಿಕ ಶಿಕ್ಷಣದ ವೆಚ್ಚವು ಹಿಂದುಸ್ತಾನದ ವೆಚ್ಚಕ್ಕಿಂತ ೧೦-೧೨ ಮಡಿಯನ್ನು ಹೆಚ್ಚಾಗಿದೆ. ಜನತೆಯು ಆಡಳಿತದ ರಾಷ್ಟ್ರವಾದ ರಷಿಯಾ ದೇಶವಂತೂ ಪ್ರಾಥಮಿಕ ಶಿಕ್ಷಣಕ್ಕಾಗಿ ನೀರಿನಂತೆ ಹಣ ಬಳಸುತ್ತಿದೆ. ನಮ್ಮಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಸರಕಾರ ಸ್ವಂತದ ಸಚ್ಚ ಮಾಡುತ್ತಲಿಲ್ಲ. ಒಕ್ಕಲಿಗರಿಂದ ಎತ್ತಿದ ಟೋಕಲ್ ಫಂಡಿನಲ್ಲಿಯು ಕೆಲವಂಶ ಮಾತ್ರ ಇದಕ್ಕೆ ವೆಚ್ಚವಾಗುವುದು. ನೆರವಾಗಿ ಸಹಾಯಧನ ಕೊಟ್ಟಂತೆ ಮಾಡಿ, ಪ್ರಜೆಗಳ ಆಡಳತಕ್ಕೆ ಕೊಟ್ಟಿದ್ದ ಈ ಅಧಿಕಾರವನ್ನೂ ತಮ್ಮ ನೇತೃತ್ವದ ಹಿನ್ನಲೆಯಿಂದ ಬಿಗಿದುಬಿಟ್ಟಿರುವುದು ಸರಕಾರ. ಹೆಚ್ಚು ಹೆಣ್ಣಾ ಹೆಚ್ಚಿನ ಸ್ವಾತಂತ್ರ್ಯವು ಇಲ್ಲಸುದಕ್ಕಾಗಿ, ಸ್ಥಳೀಯ ಶಿಕ್ಷಣ ಸಮಿತಿಗಳು ಏನನ್ನೂ ಮಾಡುವಂತಿಲ್ಲ. ಪ್ರಾಥಮಿಕ ಶಿಕ್ಷಣದ ಏರ್ಪಾದು ಇಂದು ಸಮಸ್ತವೂ ಸರಕಾರ ಮತ್ತು ಸ್ಕೂಲ್‌ಬೋರ್ಡುಗಳ ಆಡಕೊತ್ತಿನಲ್ಲಿ ಸಿಕ್ಕಿ ನುಗ್ಗಾಗುತ್ತಲಿದೆ. ಪರಕೀಯ ಸರಕಾರವಾದುದರಿಂದ ಆವರ ದುರ್ಲಕ್ಷ್ಯ, ಸ್ವಾರ್ಥಿಗಳಾದ ಸ್ಕೂಲ್‌ಬೋರ್ಡ್ ಸದಸ್ಯರ ಅವ್ಯವಸ್ಥಿತ ಆಡಳಿತ ಇವುಗಳಿಂದ ಪ್ರಾಥಮಿಕ ಶಿಕ್ಷಕರು ಹೆಣ್ಣಾಗಿ ಹೋಗಿದ್ದಾರೆ.

ದಿನದಿನಕ್ಕೆ ಕಲಸುವ ಮಾದರಿಗಳು ಹೊಸ ಹೊಸ ಬಗೆಯನ್ನು ಬರುತ್ತಲಿವೆ. ಅದಕ್ಕಾಗಿ ಪ್ರಾಥಮಿಕ ಶಿಕ್ಷಕರು ಹೆಚ್ಚು ಅಸ್ಥೆಯಿಂದ ದುಡಿಯಬೇಕಾಗುವುದು. ಅವರಿಗೆ ಸಿಕ್ಕುತ್ತಿರುವ ವೇತನವನ್ನು ನೋಡಿದರೆ, ಅಧಿಕಾರಿಗಳು ಅವರಿಂದ ಆಪೇಕ್ಷಿಸುವ ಕೆಲಸ ತೀರ ಹೆಚ್ಚು. ಪವಿತ್ರ ಭಾವನೆಯಿಂದ ಶಿಕ್ಷಣದ ಕಾರ್ಯವನ್ನು ಕೈಕೊಂಡ ಪ್ರಾಥಮಿಕ ಶಿಕ್ಷಕರು, ಹೊರಿಸಿದ ಭಾರವನ್ನೆಲ್ಲ ಸಂತೋಷದಿಂದ ಹೊತ್ತು ಕೆಲಸ ಸೂಗುವಂತಹರು. ಆದರೆ ಅವರಿಗೆ ಆನಂಗ ಹೊಟ್ಟಿತುಂಬ ಅನ್ನ, ಮೈತುಂಬ ಬಟ್ಟೆಗಳನ್ನು ಕೊಟ್ಟಾದರೂ ದುಡಿಸಿಕೊಳಬೇಕಾಗಿಲ್ಲವೇ ಅಧಿಕಾರಿಗಳು? ಬರಿಯ ಹೊಟ್ಟೆಯಿಂದ ಬಳಲುವವನು ಯಾವ ಕೆಲಸವನ್ನು ಮನಗೊಟ್ಟು ಮಾಡಬಯಸುದು?

ಶಿಕ್ಷಕನಾಗಿರುವವನು ಸಂಸಾರಿಯಾಗಿರಕೂಡದೆಂದೇನೂ ಸರಕಾರ ನಿರ್ಬಂಧ ಹಾಕಿಲ್ಲ. ಪ್ರಾರಂಭದಲ್ಲಿ ಗಂಡ-ಹೆಂಡಿರು ಇಬ್ಬರೇ ಇರುವರೆಂದು ಳಿವರೂ ಶಿಕ್ಷಕನ ಪ್ರಾರಂಭದ ಸಂಬಳ (ಅನ್‌ಟ್ರೇಂಡನಾಗಿದ್ದರೆ ೧೫ ರೂ. ಟ್ರೇಂಡನಾಗಿದ್ದರೆ ೨೦ ರೂ.) ಆತನ ಸಂಸಾರಕ್ಕೆ ಹೇಗೆ ಸಾಲಬೇಕು? ಶಿಕ್ಷಕನ ಕುಟುಂಬದ ಆರೋಗ್ಯರಕ್ಷಣೆಗಾಗಿ ಬೇರೆ ಯಾವ ಏರ್ಪಾದೂ ಇಲ್ಲ. ಆತನ ಬುದ್ಧಿ-ಮನೋ ವಿಕಾಸದ ಯಾವ ಅನುಕೂಲತೆಗಳೂ ಇರುವುದಿಲ್ಲ. ವರುಷ-ವರುಷಕ್ಕೂ ಬೆಳೆಯುತ್ತ ಹೋಗುವ ಆತನ ಕುಟುಂಬ ನೆಚ್ಚವನ್ನು ನಡೆಯಿಸುವಷ್ಟು ಸಂಬಳದ ಬೆಳೆಸಣಿಗೆಯಿರುವುದಿಲ್ಲ. ಮಿಕ್ಕ ಖಾತೆಗಳಲ್ಲಿಯಂತೆ 'ಗೋಪಾಲ-ಗೋವಿಂದ'ಗಳ ನೆರವು ಶಿಕ್ಷಕನಿಗಿರುವುದಿಲ್ಲ. ಹೀಗಾಗಿ ಶಿಕ್ಷಕರ ಸಂಸಾರಗಳೆಂದರೆ ಚಿಂತೆಯ ಆಗರ, ದುಃಖದ ಬೀಡಾರ, ರೋಗದ ಆವಾಸ, ಆಶಕ್ತತೆ-ಅಜ್ಞಾನಗಳ ನಿವಾಸ ಆಗಿರುವುದು ತನ್ನ ದೇಹ-ಮನಸ್ಸು-ಬುದ್ಧಿಗಳ ವಿಕಾಸಕ್ಕೆ ಆವಕಾಶವಿಲದ ಶಿಕ್ಷಕನು ವಿದ್ಯಾರ್ಥಿಗಳ ದೇಹ-ಮನಸ್ಸು-ಬುದ್ಧಿ ವಿಕಾಸದ ಕಡೆಗೆ ಹೇಗೆ ಲಕ್ಷ್ಯ ಕೊಡಬೇಕು? ಶಿಕ್ಷಕರ ಹೆಂಡತಿ-ಮಕ್ಕಳಾಗುವ ಸೌಭಾಗ್ಯ ಸಿಕ್ಕವರ ಆಪಸ್ಥೆಯನ್ನಂತೂ ಹೇಳಲೆ ಬೇಕಾಗಿಲ್ಲ.

ಶಿಕ್ಷಕನೆನಿಸಿಕೊಳ್ಳುವವನು ಆದರ್ಶವಾದಿಯಾಗಿರಬೇಕು, ರಸಿಕನಾಗಿರಬೇಕು, ಆಶಾವಾದಿಯಾಗಿರಬೇಕು. ಇಂತಹ ಶಿಕ್ಷಕರಿಂದ ತರಬಿಯತ್ತಾದ ವಿದ್ಯಾರ್ಥಿಗಳು ಮುಂದೆ ಒಳ್ಳೆಯ ನಾಗರಿಕರಾಗಿ ರಾಷ್ಟ್ರಕ್ಕೆ ದೊರೆಯಬಹುದು ಆದರೆ ಶಿಕ್ಷಕನ ಆರ್ಥಿಕ ದುರವಸ್ಥೆ ಆವನನ್ನು ಆದರ್ಶರಹಿತನನ್ನಾಗಿ ಮಾಡಿದೆ; ರಸಹೀನನನ್ನಾಗಿ ಮಾಡಿದೆ; ನಿರಾಶಾವಾದಿಯನ್ನಾಗಿಸಿ 'ಬಾಳುವುದು ಸಾಕು, ಎಂಬ ವೈರಾಗಿಯನ್ನಾಗಿಸಿದೆ. ಇಂತಹ ಶಿಕ್ಷಕರಿಂದ ದೇಶದ ಸಂಸ್ಕೃತಿಯ ನರನಾಡಿಗಳಲ್ಲಿ ನೆತ್ತೆರು ಹೇಗೆ ಪರಿದಾಡಬೇಕು? ಹಾಗೆ ಪರಿದಾಡದೆ ಹೋದರೆ ಪರಾಧೀನ ಭಾರತಜನತೆಗೆ ಉದ್ಧಾರದ ದಾರಿಯೆಲ್ಲಿದೆ! ಅದಕ್ಕಾಗಿ ಎಲ್ಲರೂ ಇಂದು ಹಸಿದು ಕಂಗೆಟ್ಟ ಪ್ರಾಥಮಿಕ ಶಿಕ್ಷಕನ ಸುಖ ಜೀವನವನ್ನು ಬಯಸಬೇಕಾಗಿದೆ. ಆದಕ್ಕೆ ಅವಶ್ಯಕವಿರುವ ಚಳವಳಿ ಮಾಡಬೇಕಾಗಿದೆ; ಸಲಕರಣೆಗಳನ್ನು ಒದಗಿಸಿಕೊಡಬೇಕಾಗಿದೆ.

ಅಧಿಕಾರಿಗಳು ಸಾಮಾನ್ಯತೆಯ ದೃಷ್ಟಿಯಿಂದ ಶಿಕ್ಷಕನ ಕಡೆಗೆ ಸಹಾನುಭೂತಿಯನ್ನು ಹರಿಸಬೇಕು. ಇಂದು ಶಿಕ್ಷಕನ ಸಂಸಾರಕ್ಕೆ ಸರಕಾರವೇ ಕೊಡುತ್ತಿರುವ ಸೀವಾ ಧಾನ್ಯದ ಬೆಲೆಯನ್ನೂ ಆತನಿಗೆ ಸಲ್ಲುವ ಸಂಬಳವನ್ನೂ ತುಲನೆ ಮಾಡಿ ನೋಡಬೇಕು. ಬಹಳ ಜನ ಶಿಕ್ಷಕರಿಗೆ ಸೀವಾ ಧಾನ್ಯವನ್ನು ಪೂರ್ತಿಯಾಗಿ ಕೊಳ್ಳುವಷ್ಟು ಸಂಬಳವಿರುವದಿಲ್ಲ. ಆಹಾರಧಾನ್ಯ ಹೊಟ್ಟಿತುಂಬ ಕೊಳ್ಳಲಾಗದಿರುವಾಗ, ಹಾಲು-ಬೆಣ್ಣೆಯಿಲ್ಲಿಂದ ಬರಬೇಕು ಎಣ್ಣೆ-ಸಂಬಾರ ಹೇಗೆ ಸಿಕ್ಕಬೇಕು? ಆರಿವೆ ಅಂಜಡಿಗೆ ಸಾನು ಮಾಡಬೇಕು ಬೇಣೆ ಬೇಸರಿಕೆಗಳಿಗೆ ಉಸಿಸಾರ ಎಲ್ಲಿಂದ ಬರಬೇಕು? ಸರಕಾರಕ್ಕೆ ಇವ ಗೊತ್ತಿಲ್ಲವೆಂತಲ್ಲ; ಬೇಕೆಂತಲೆ ಕಣ್ಣು ಮುಚ್ಚಿಬಿಟ್ಟಿದೆ.

ಇದುವರೆಗೆ ಮೂಕವಿದನದಂತೆ ಬಂದ ಕಷ್ಟವನ್ನೆಲ್ಲ ಸುಮ್ಮನೆ ಸಹಿಸಿ ಶಿಕ್ಷಕರು ಇಂದು ಸಹನೆ ಆತಿಯಾಗಿ, ಸಂತಾಪ ಪ್ರಕಟಿಸಲು ಸಿದ್ಧರಾಗಿದ್ದಾರೆ. ಸರಕಾರವೂ ಜನತೆಯೂ ತಮ್ಮನ್ನು ಸಹಾನುಭೂತಿಯಿಂದ ನೋಡಿ ತಮ್ಮ ಕನಿಷ್ಠ ಬೇಡಿಕೆಯನ್ನು ಪೂರಯಿಸಲಿಕ್ಕೆ ಮನಸ್ಸು ಮಾಡದಿದ್ದರೆ, ಕೇ ನಿಲ್ಲಿಸಿ ತಮ್ಮ ಅಸಹಕಾರವನ್ನು ತೋರಿಸಲು ಸಂಕಲ್ಪಿಸಿದ್ದಾರೆ. ಶಿಕ್ಷ ಇಂದಿನ ಈ ಬೇಡಿಕೆ ಇನ್ನಾವ ಸುಖ-ಸ್ವಾತಂತ್ರ್ಯಗಳ ಸಾಧನೆಗಾಗಿ ಅ ಕೇವಲ ತಮ್ಮ ಹಸಿವನ್ನು ಹಿಂಗಿಸುವುದಕ್ಕಾಗಿ ಇದೆಯೆಂಬುವನ್ನು ಎಲ್ಲರ ಲಕ್ಷ್ಯದಲ್ಲಿಡಬೇಕು. ಸರಕಾರ ಬೇಗನೆ ಕಂದಿರೆಯುವುದು ಒಳಿತು. ಹಾ ಕಂದಿರೆಯದೆ ಹೋದರೆ ಬದುಕುವ ಪಕ್ಕಿಗಾಗಿ ಹೂಡಿದ ಶಿಕ್ಷಕರ ಹೋ ಒವನ್ನು ಜನತೆ ಎತ್ತಿ ಹಿಡಿಯಬೇಕು. ತನು ಸುನೋಧನದಿಂದ ಆವ ಸೇವಿತ್ತು ಆವರ ಹೋರಾಟಕ್ಕೆ ಸೆಲವನ್ನು ಮೂರೆಕಿಸಿಕೊಡಬೇಕು.

—ಸಂಪಾದಕ



# ಮಂಗನ ಮಲ್ಲಿನಾಥತನ

## ೧. ಹುರಿಯಾಳುಗಳ ಹೃದಯ ವಿಶ್ಲೇಷಣೆ

ನೆಲೆಯೂರೊಬ್ಬನು ಮಂಗರಾಯನಿಗೆ ಕಾಗದ ಬರೆದು ತಮ್ಮ ಸಂದೇಹನಿವಾರಣೆಗಾಗಿ ಪ್ರಶ್ನೆ ಕೇಳಿದ್ದಾನೆ. ಆ ನೆಲೆಯೂರು ಜನತೆಯ ಭಕ್ತರು, ಆದರ್ಶವಾದಿಗಳು, ಭಾವಿಕರು. ಕಾಂಗ್ರೆಸಿಗರಲ್ಲಿ ಇಂಬ ನಿಷ್ಠೆಯುಳ್ಳವರು. ಅವರ ಕಾಗದ ಹೀಗಿದೆ:

"ಮಂಗರಾಯ, ನೀನು ಮನಸಿಗ ಎಂದರೆ ಮನಶ್ಶಾಸ್ತ್ರ ತಿಳಿದವನು. ಕನಸಿಗ ಎಂದರೆ ಇಂದಿಯ ಕನಸುಗಳನ್ನೆಲ್ಲ ಕಂಡುಹಿಡಿಯು ವನು. ಈಗ ಮುಂಬಯಿ ಅಸೆಂಬ್ಲಿಗೆ ಹುರಿ ಯಾಳುಗಳಾಗಿ ನಿಂತ ಕಾಂಗ್ರೆಸ್ ಕನ್ನಡ ಘುರೀಣರ ನಸ್ಸು ಯಾವ ಯಾವ ಯೋಚನೆಗಳಿಗೆ ಮನೆ ಯಾಗಿದೆ? ಅವರು ಕಾಣುವ ಕನಸಿನ ಚಿತ್ರಗಳು ಂತಹವಿರುವವು? ಇದನ್ನು ಶಾಸ್ತ್ರೀಯವಾಗಿ ೀಚಿಸುವಯಾ? ನನಗೆ ತಿಳಿದ ನುಟ್ಟಿಗೆ ಜಪ ಬರಗಾಲ, ಬಡತನ, ಅಜ್ಞಾನ, ಪರಾಧೀನ ನಿನ ಇವುಗಳ ಉತ್ಕಟ ಯೋಜನೆಗಳೇ ಅವರ ಸ್ಸನ್ನು ತೊಳ್ತುಳಿದುಳಿಯುತ್ತಿರಬಹುದು. ನ ಕನಸುಗಳೂ ಈ ಯೋಚನೆಗಳ ಪ್ರತಿ ಬಿಂಬಗಳೇ ಆಗಿರಬಹುದು:....ಅಲ್ಲವೆ ?"

ಮಂಗರಾಯನಿಗೆ ಪರಮಾನೀಪ್ಸೇತರವಿದ್ಯೆ ಯೆನೆಯೆಂಬುದು ಕಾಗದ ಬರೆದ ಗೆಳೆಯನಿಗೆ ತ್ತರಿಲ್ಲದ್ದೇನು. ಗೆಳೆಯರ ಭಾವಿಕತನದ ಜೂಪೆ ನ್ನು ಕಂಡು ಮಂಗರಾಯನಿಗೆ ಕನಿಕರವೆನಿ ಸಿತು. ಏಕೆಂದರೆ ಆ ಕಾಂಗ್ರೆಸ್‌ನಿಷ್ಠರ ಮನ ನ ನಿಷ್ಪುರಸತ್ಯದಿಂದ ನೋಯಿಸುವ ಸಂದರ್ಭ ಗಳಾಯನಿಗೆ ಬಾದುದು ವಿಷಾದದ ಸಂಗತಿ ಕಾಂಗ್ರೆಸ್ ಪಕ್ಷದ ಕನ್ನಡ ಹುರಿಯಾಳುಗಳಿಗೆ ನಾವಣೆಯಲ್ಲಿ ಅಪಜಯ ಹೊಂದುವ ಭೀತಿ ಯಿಲ್ಲವೂ ಇಲ್ಲ. ಆದುದರಿಂದಲೆ ಅವರಿಗೆ ತುಂಬ ಜ. ಈ ಆನಂದದಲ್ಲಿ ದೇಶದ ಬರಗಾಲ, ಸ, ಅಜ್ಞಾನ, ಪರಾಧೀನ ಜೀವನ ಇವುಗಳ ಚನೆ ಮರೆಯಾಗಿ ಹೋಗಿವೆ. ಈಗ ಅವರ ನ್ನು ಮುತ್ತಿದ ಚಿಂತೆಯೆಂದರೆ, ಮಂತ್ರಿ-ಪದ ನನಗೆ ಸಿಕ್ಕುವುದೋ ಇಲ್ಲವೋ?' ಎಂಬು ದೊಂದೇ ಬಂದು. ಆದಕ್ಕಾಗಿಯೆ ಮಂತ್ರಿಪದಕ್ಕೆ ತಕ್ಕ ಜೊತೆಯ ಹುರಿಯಾಳು-ಕಾಂಗ್ರೆಸಿಗೆ ಸೋಲಾ ದರೂ ಚಿಂತೆಯಿಲ್ಲ—ಆದರೆ ಬರಬಾರದೆಂದು ಪ್ರತಿ ಯೊಬ್ಬರೂ ಯಾರಯಿಸುತ್ತಿರುವರು. 'ಮಂತ್ರಿತ್ವ ನಿಲ್ಲದಿದ್ದರೂ ಹೋಗಲಿ, ಕೊನೆಗೆ ಪಾರ್ಲಮೆಂಟರಿ ಸೆಕ್ರೆಟರಿಪದವಿಯಾದರೂ ತನಗೆ ಸಿಕ್ಕರೆ ಸಾಕು'—ಎಂಬ ಅಲ್ಪಸಂತೋಷಿಗಳು ಕೆಲವರಿದ್ದಾರೆ. ಅವರು ಕೂಡ ತಮ್ಮ ಜೊತೆಯ ಹುರಿಯಾಳಿನ ಬಗೆಯ ಪುತ್ಸರದಿಂದ ಮನಸ್ಸನ್ನು ಮುಚ್ಚಿಕೊಂಡಿದ್ದಾರೆ. ಈ ಸುರಿಯಾಂಗಳಿಗೆ ಜೀಳುವ ಕನಸುಗಳೆಂದರೆ ತಾವೇ ಮಂತ್ರಿಗಳಾದಂತೆ—ಮಂತ್ರಿಗಳಾಗಿ ಕರ್ನಾ ಟಕದಲ್ಲಿ ಸಂಚಾರ ಹೊರಟಂತೆ —ಕೇಂದ್ರನಗರಗಳ ಲ್ಲಿಯ ನಾಗರಿಕರೂ ನಗರ ಸಭೆಯವರೂ ತಮಗೆ ಮಾನಪತ್ರ ಕೊಟ್ಟು ಸನ್ಮಾನ ಮಾಡುವಂತೆ— ತಮ್ಮ ತಮ್ಮ ಜನರೆಲ್ಲ ದೊಡ್ಡ ದೊಡ್ಡ ನೌಕರಿಗಳನ್ನು ಪಡೆದು ಸುಖದಲ್ಲಿ ಇರುವಂತೆ — ಮಂತ್ರಿಯ ಹೆಂಡತಿಯಾಗಿದ್ದರೂ ಇನ್ನೂ ಮನಸ್ಸಿಗೆ ತಕ್ಕ ಉಡಿಗೆ-ತೊಡಿಗೆ ಮಾಡಿಸಲೊಲ್ಲಿರೆಂದು ಮನೆಯಾಕೆ ಮುಂದೆ ಬಂದು ನಿಂತಂತೆ....ಗಾಬರಿಯಾಗಿ ಎಚ್ಚೆತ್ತು ನೋಡಿದಾಗ ಇನ್ನೂ ತನ್ನ ಆಯ್ಕೆಯೇ ಆಗಿಲ್ಲವಲ್ಲ .. ಎಂಬ ಚಿಂತೆ ಎಲ್ಲರ ಮನಸ್ಸನ್ನು ಮುತ್ತಿ ಎದೆ ಯನ್ನು ಪದಗುಟ್ಟಿಸುವುದು 'ಮನಸಿಗ ಕನಸಿಗ' ಮಂಗರಾಯನ ಹೃದಯ ವಿಶ್ಲೇಷಣೆಯು ಇತ್ಯರ್ಥ ವಿದು ಇದನ್ನು ಕೇಳಿದ ಗೆಳೆಯರು ಆತ್ಮಪತ್ರಕ್ಕೆ ಸಿದ್ಧರಾಗಬಾರದೆಂದು ಅವರನ್ನು ಮಂಗರಾಯ ಎಚ್ಚರಿಸಿದನು.

ಹುರಿಯಾಳುತನದ ಆಯ್ಕೆಯ ಕಾಲದಲ್ಲಿ ಭಕ್ತಿಯು ಏಟನ್ನು ತಿಂದವರು ಮಂತ್ರಿತನದ ಆಯ್ಕೆಯ ಕಾಲ ದಲ್ಲಿ ಮತ್ತೆಂತಹ ಏಟು ತಿಂದಾರೆಂಬುದನ್ನು ಮಂಗ ರಾಯ ಯೋಚಿಸುತ್ತಿದ್ದಾನೆ. ಸದ್ಯ ಅವನ ಕನಸು-ಮನಸಿನಲ್ಲಿ ಇವೇ ಯೋಚನೆ.

ಎಟ್ಟಿಬಪ ಸತ್ತಿಗೆಯು ಮೊತ್ತಂಗಳೆತ್ತಲುಂ
ಕೆತ್ತಲಿಸಿ ಕುತ್ತುಸುರ ಪಡುಪಂ ದಿಜಾಕರಂ

* * * *

## ೨. ಮಾಸ್ತರ ಜನರ ಮುಂದಬುದ್ಧಿ !

ಹಿಂದುಸ್ತಾನಕ್ಕೆ ಬೇಗನೆ—ಎಂದರೆ ಕೂಡಲೆ—ಸ್ವಾತಂತ್ರ್ಯ ಸಿಕ್ಕೇ ಸಿಕ್ಕುವುದೆಂದು ಮಂಗರಾಯ ಕೈಯೆತ್ತಿ ಸಾರತೊಡಗಿದ್ದಾನೆ. ಅವನ ಈ ವಿಶ್ವಾಸದ ಭವಿಷ್ಯಕ್ಕೆ ಕನ್ನಡಶಾಲೆಯ ಮಾಸ್ತರರ ಸಂಖ್ಯಾನ ಸಂಕಲ್ಪವೇ ಕಾರಣ. 'ಕೊಟ್ಟೆಪ್ಪ ತೆಗೆದುಕೊಂಡು ಬಂದಪ್ಪ ಕಲಿಸುವ 'ಬರಸಯ್ಯ'ಗಳಿಗೆ ಕೂಡ ಬಾಯಿ ಮೂಡಿತೆಂದಮೇಲೆ ಭಾರತಮಾತೆ ನಿನಗಿನ್ನು ಭಯವಿಲ್ಲ. ನಿನ್ನ ಕೀಳುದೆಸೆ ಕಳೆಯಿತೆಂದು ತಿಳಿ' ಎಂದು ಆಗಾಗ ಮಂಗರಾಯ ಧೈರ್ಯದಿಂದ ಮಾತೆಯನ್ನು ಸಾಂತ್ವನಗೊಳಿಸುತ್ತಿದ್ದಾನೆ. ಆದರೂ ಮಂಗರಾಯನಿಗೊಂದು ಒಳಭೀತಿಯಿದ್ದೇ ಇದೆ. ಏಕೆಂದರೆ ಈ ಮಾಸ್ತರ್ ಜನರು ತಮ್ಮ ದೇಶದ ಮುಂದಾಳುಗಳು ಕೊಡುತ್ತಿರುವ ಹೋರಾಟದ ಪಾಠಗಳ ಕಡೆಗೆ ಲಕ್ಷ್ಯಕೊಡದೆ, ಎಲ್ಲರೂ ಎಲ್ಲ ಜಾತಿ ಮತ-ಪಂಗಡದವರೂ ಒಟ್ಟುಗೂಡಿ ಚಳವಳಿ ನಡಿಸಲು ಸಿದ್ಧರಾಗಿದ್ದಾರೆ. ಇದರಿಂದ ಅವರು ಯಶಸ್ಸು ಪಡೆಯಬಹುದೇ?—ಎಂಬ ಸಂಶಯವೇ ಮಂಗರಾಯನ ಭೀತಿಗೆ ಕಾರಣ. ಸ್ವಾತಂತ್ರ್ಯಸಂಪಾದಿಸುವ ಉಚ್ಚ ಆದರ್ಶದಿಂದ ಹೋರಾಟಸಾಗಿಸುವ ನಮ್ಮ ದೇಶನ ಮುಂದಾಳುಗಳನ್ನು ಅನುಸರಿಸಿ ಮುಂದುವರೆಯದೆ ಶಿಕ್ಷಕ ಸಮುದಾಯಕ್ಕೆ ಒಳ್ಳೆಯದಲ್ಲವೆ? ಯಾವಾಗಲೂ ಅನುಕರಣ—ಅನುಸರಣಗಳಲ್ಲಿ ನುರಿತ ಶಿಕ್ಷಕರು, ಈಗ ತಾವೆ ಬೇರೆ ದಾರಿ ಹಿಡಿದುದು ಮಂಗರಾಯನ ಮನಸ್ಸಿಗೆ ಬಂದಿಲ್ಲ. ಈಗ ನಮ್ಮ ನಾಡಿನಲ್ಲಿ ಹೆಸರಾಂತ ಮುಂದಾಳುಗಳೆಲ್ಲ ಕಾಂಗ್ರೆಸ್, ಲೀಗ್, ಕಮ್ಯೂನಿಸ್ಟ್, ರ್ಯಾಡಿಕಲ್, ಮಹಾಸಭಾ, ಕಾಪ್ಟೀಯ ಮುಸಲ್ಮಾನ್ ಎಂಬ ಪಕ್ಷಕಟ್ಟಿ ತಮ್ಮ ಸ್ವಾತಂತ್ರ್ಯ ಜಳವಳಿಯನ್ನು ಸಾಗಿಸಿರುವುದನ್ನು ನೋಡುವು ದಿಲ್ಲವೆ? ಹಾಗೆಯೆ ಶಿಕ್ಷಕರು ಕೂಡ ಬೇರೆ ಬೇರೆ ಪಕ್ಷ ಕಟ್ಟಿಕೊಂಡು ತಮ್ಮ ಸಂಖ್ಯಾನ ಬಲವಳಿ ಹೂಡುವುದೇ ಒಳ್ಳೆಯದೆಂದು, ಮುಂದಬುದ್ಧಿಯ ಮಾಸ್ತರ್ ಜನರಿಗೆ ಮಂಗರಾಯನ ಸಲಹೆಯಿದೆ. ಸಕಾಲದಲ್ಲಿ ಈ ಸಲಹೆಯ ಉಪಯೋಗವನ್ನು ಮಾಸ್ತರರೆಲ್ಲ ಮಾಡಿಕೊಳ್ಳಲಿ.

ಮಾಸ್ತರರೆಂದೆ ಕಲಿತವರು!
ಕೂಡಿ ನಡೆದರೆಂಥಾ ಕಲಿತವರು?


ಬರಲಿವೆ! ಹೊಸ ಪುಸ್ತಕಗಳು ಬರಲಿವೆ!

ಶ್ರೀ. ಪುರಾಣಿಕ ಕೃಷ್ಣಮೂರ್ತಿಯವರ

೧) ಸೈರಂಧ್ರಿ. (ಸರಳರಗಳೆಯಲ್ಲಿ ಬರೆದ ನಾಟಕಗಳು).

೨) ರಾಮಾಯಣ ಕತೆಗಳು. (ಒಂಭತ್ತು ವಿನೋದ ಪ್ರಬಂಧಗಳು).

# ನಾವು ಬರತೇವಿನ್ನ

**(ಅಂಬಿಕಾತನಯದತ್ತ)**

ಕವಿಯು ಧಾರವಾಡವನ್ನು ಬಿಡಬೇಕಾಗಿ ಬಂದಾಗ, ಧಾರವಾಡದ ತಾಯಿಯನ್ನು ಕುರಿತು ತೋಡಿಕೊಂಡ ಪಾಡಿದು.

(ಲಾವಣಿಯ ನಡಿಗೆ)

ನಾವು ಬರತೇವಿನ್ನ, ನೆನಪಿರಲಿ ತಾಯಿ ನಮ್ಮ ನಮಸ್ಕಾರ ನಿಮಗ,
ಕಾಯ್ದಿರಿ—ಕೂಸಿನ್ಹಾಂಗ ನಮಗ—ನಾವು ಬರತೇವಿನ್ನ....

೧

ಜಗದ ಕೂಡ ಬಂದೆವು ಜಗಳಾಡಿ,
ಕೊಟ್ಟರಿ ನಿಮ್ಮ ತೊಡಿ,
ಆಲ್ಲಿ ನಿದ್ದೆಮಾಡಿ—ಎದ್ದೆವೀಗ
ಯಾವುದೋ ಹೊಸಾ ನಸುಕಿನ್ಯಾಗ

ನೀವ್ರ—ತಾಯಿತನದಿ ನಡಿಸಿದಿರಿ
ಹಾಲ ಕುಡಿಸಿದಿರಿ
ಮುರಳು ಆಡಿಸಿದಿರಿ ಕನಸಿನ್ಯಾಗ
ಬೆಳಗು—ಆತು ಭಾಳ ಬ್ಯಾಗ!

ಕಣ್ಣ ಮುಚ್ಚಿಕೊಳ್ಳತಾವ ಚಿಕ್ಕಿ
ಚಿವುಗುಡತಾವ ಹಕ್ಕಿ
ಕತ್ತಲಿ ತಲಿ ಕುಕ್ಕಿ—ಬಾನನ್ಯಾಗ.
ಬೆಳಕು—ಹಾರ್ಯಾವ ಮೂಡಲಿನ್ಯಾಗ!

ನಿಮ್ಮ ಸೆರಗ ಮರೀ ಮಾಡಿದಿರಿ,
ಲಾಲಿ ಹಾಡಿದಿರಿ
ಆಟ ಆಡಿದಿರಿ—ಏನೋ ಪಾಂಗ?
ಮರತೆವು—ಕಳೆದ ಜನ್ಮದ್ಹಾಂಗ!

ಜೋಲಿ-ಹೋದಾಗ ಆದಿರಿ ಕೋಲು
ಹಿಡಿದಿರಿ ನಮ್ಮ ತೋಲು
ಏನು ನಿಮ್ಮ ಸೋಲು—ಲೋಕದಾಗ?
ನಾವು— ಮರತೇವದನ ಹ್ಯಾಂಗ?

ಅಕ್ಕ-ತಂಗಿ-ಮಗಳು-ತಾಯಿ—ಹಡೆದ ತಾಯಿ ...
ಕನ್ನಿ-ಗೆಳತಿ-ಮಡದಿ-ದಾಯಿ—ಸಾಕುದಾಯಿ....
ಜೋಡಿ-ಸೂಳೆ ಮತ್ತೆ ಮಾಯಿ—ವಿಧ್ಯಾಯಿ....

ನೂರಾರು ವೇಷ ಕಳಿಸಿದಿರಿ,
ಮಷ್ಟ ಇಳಿಸಿದಿರಿ
ಮಾನ ಬೆಳಸಿದಿರಿ....
ಯಾಕೋ ಕರುಣ ಬಂತು ತಮಗs
ನಾವು— ಶರಣು ಬರಲಿಲ್ಲ ಸುಮಗs
ನಾವು ಬರತೇವಿನ್ನ ॥

೨

ಎಲ್ಲಿ ಹೋದರಲ್ಲಿ ನಮ್ಮ ಹತ್ರ
ನಿಮ್ಮ ಕೃಪಾ ಛತ್ರ
ಕಾರ್ಯ ಸೂಸೂತ್ರ—ನಡೀತಿರಲಿ
ನಿಮ್ಮ—ಹೆಜ್ಜಿ ಜೋಡಿಗಿರಲಿ!

ಹಗಲಾಗಲಿ ಧುರಂಧುರಿ ಚಾತ್ರಿ
ನಿದ್ದಿಗರಲಿ ರಾತ್ರಿ
ಜೀವಕ್ಕs ಯಾತ್ರಿ—ನಿಮ್ಮವರಲಿ,
ಜನ್ಮ—ಮರಣ ಏನು ಬರಲಿ!

ಮಾಡೀತೇನು ಮಣ್ಣೆನs ಗೊಂಬಿ?
ನಿಮ್ಮ ಹೆಸರ ನಂಬಿ
ಹೊತ್ತುಕೊಂಡು ಕಂಬಿ—ಕುಣೀತಿರಲಿ
ಸ್ವರ್ಗ-ನರಕ ಯಾವುದೂ ಇರಲಿ!

ಮೂರೂ ಹೊತ್ತಿನ್ಯಾಗ ನಿಮ್ಮ ಧ್ಯಾನ
ಹೊತ್ತುತಿರಲಿ ಗ್ಯಾನ
ಸುಪಲಿ ಅಜ್ಞಾನ—ಪ್ರೇಮಮುರಲಿ
ಕಿವಿಗೆ—ಆದೇ ಕೇಳಿಸತಿರಲಿ!

ನಿಮ್ಮ ಚಂದ್ರ ಜ್ಯೋತಿಯಾ ಬೆಳಕು
ಅದs ನಮಗ ಬೇಕು,
ಸುಜೋ ಸೂರ್ಯ ನಾಕು—ಯಾಕ ತರಲಿ
ಹೊತ್ತಾರ ಯಾರು ಒಡಾ ಹರಲಿ!

ಕತ್ತಲೀ ಕೆಚ್ಚಿ ಕೆದರೀ—ಕೆಚ್ಚಿ ಕೆದರಿ!
ಬಣ್ಣ ಬಣ್ಣ ಬಂತು ಜೆದರಿ—ಸುತ್ತ ಚೆದರಿ
ಸುಕ್ಕಳಾಟ ತೋರಿಸಿದಿರಿ—ಹಾರಿಸಿದಿರಿ

ನಿಮ್ಮ ಹೊಟ್ಟೀ ಕರುಳಿನಾ ತುಣುಕು
ಕಂತನs ಚುಣುಕು
ತೋರಿಸಿದಿರಿ ಮಿಣುಕು
ಮಿಣು-ಮಿಣುಕು ದೀವದಾಗ
ಚಿಕ್ಕಿಯ ಮಳೀ ಸುರಿಸಿದ್ಹಾಂಗ!
ನಾವು ಬರತೇವಿನ್ನ.....

# ಬೋರನ ಬಾಳ್ಕು

( ರತ್ನ ಹೇಳಿದ ಕತೆ )

ಶ್ರೀ. ಬನ್ನಂಜೆ ರಾಮಾಚಾರ್ಯರು, ಉಡುಪಿ

●

ಬೋರನಂತಹವರ ಬಾಳನ್ನು ಕತೆಯಲ್ಲಿ ಕಂಡು ಕಣ್ಣೀರು ಸುರಿಸುವವರು ಸಾವಿರಾರು ಜನ ಸಿಕ್ಕಬಹುದಾದರೂ, ಪ್ರತ್ಯಕ್ಷವಾಗಿ ಕಂಡಾಗ ಅಲಕ್ಷ್ಯದಿಂದಿರುವವರೇ ಬಹು ಜನರು! ಪುರಾಣವೈರಾಗ್ಯದಿಂದ ಫಲವೇನು?

೧

ರತ್ನ ರಾತ್ರಿಯೂಟಕ್ಕೆ ಬರುವೆನೆಂದು ಮೊದಲೆ ರಾಯಸ ಕಳುಹಿಸಿದಾನೆ. ಹೊತ್ತು ಒಂಬತ್ತರ ಮೇಲಾಯಿತು. 'ಇನ್ನೂ ಏಕೆ ಬಂದಿಲ್ಲವೊ ಮಹಾರಾಯ:—' ಎಂದು ನಾನು ದಾರಿ ಕಾಯುತಿದ್ದೆ.

ರತ್ನ ಒಳ್ಳೆಯ ಮಾತುಗಾರ. ಮೇಲಾಗಿ ಅವರ್ಣವಾದಿ. ಆತ ಬಂದಾಗಲೆಲ್ಲ ಏನಾದರೊಂದು ವಿಚಾರವಾಗಿ ಚರ್ಚೆಯೆತ್ತುತ್ತಲೆ ಇರುತ್ತಾನೆ. ನಾನು ಆ ಕುರಿತು ಆಕ್ಷೇಪನೆತ್ತಿದೆನಾದರೆ, ಎಲ್ಲಿಯದೊ ನೃಷ್ಟಾಂತವನ್ನು ಕತೆಗಟ್ಟಿ ಹೇಳುತ್ತಾ ತನ್ನ ವಾದವನ್ನು ಸಮರ್ಥಿಸುವುದರ ಜತೆಗೆ, ನನ್ನನ್ನೂ ತನ್ನ ವಾದದ ಪಾಟಗೆಳೆಯುತ್ತಾನೆ. ಸುಳ್ಳಿ ಇರಲಿ, ಸತ್ಯವೆ ಇರಲಿ; ರತ್ನನ ರಸವಾಣಿಯಲ್ಲಿ ಅದ್ದಿ ಬಂದ ಆ ಕತೆ ಕೇಳುವುದಕ್ಕೆ ಕೌತುಕವಾಗಿರುತ್ತದೆ. ಇವಕ್ಕೆಂತಲೆ ರತ್ನ ಬರುತ್ತಾನೆ ಎಂದರೆ ನನಗೆ ಹಿಗ್ಗು. "ರತ್ನಣ್ಣ" ಬರುತ್ತಾನೆ ಎಂದರೆ ನನ್ನ ಪೆವಿಗೂ ಬಹು ಆನಂದ. ಕತೆ ಕೇಳುವ ಅಭ್ಯಾಸವನ್ನು ಆಕೆ ತನ್ನ ಅಜ್ಜನ್ನಿಂದ ಚೆನ್ನಾಗಿ ಕಲಿತಿದ್ದಾಳೆ!

'ರತ್ನಣ್ಣ ಇನ್ನೂ ಬಂದಿಲ್ಲ—' ಎಂದಳು ನನ್ನ ಸಿಂಗಾರಿ.

'ಈ ದಿನವೆಂಥದೋ ಪೊಡ್ಡ ಕತೆಯನ್ನು ಹುಡುಕಿ ತರುವಂತೆ ಕಾಣುತ್ತೆ—' ಎಂದೆ ನಾನು.

'ಕತೆಯೇನು ಬೀದಿಯಲ್ಲಿ ಸಿಗುವಂಥ ವಸ್ತುವೆ? ಎಲ್ಲೋ ಹೋಗಿರಬೇಕು—ಬಂದಾರು' ಎಂದಳು ನನ್ನಾಕೆ.

'ಇವನಿಂದಾಗಿ ಈ ದಿನ ರಾತ್ರಿ ತಂಗಳುಣ್ಣುವಂತಾಯಿತು.'

'ನಿನ್ನಿಂದ ಒಂದು ಕತೆ—ಕೇಳಬೇಕೆಂದು ಒಯಕೆ ಇಜಿ. ರತ್ನಣ್ಣ ಬರುವ ವರೆಗೆ ನೀವೊಂದು ಕತೆ ಹೇಳಿ.'

'ಬಹು ಗಂಡಾಂತರದ ಸೂಚನೆಯಿದು. ಅಲ್ಮೇರಾದಲ್ಲಿ ಚಿತ್ರೀಸ ಪುಸ್ತಳ ಕತೆಗಳು 'ಪುಸ್ತಕವಿರಬೇಕು ಈ ಕಡೆ ತಗೊಂಡು ನಿ. ಒಂದು ಕತೆ ಓದಿ ಬಿಡುತ್ತೇನೆ.'

'ಅಷ್ಟು ಓದುವುದಕ್ಕೆ ನನಗೂ ಅಪ್ಪ ಕಲಿಸಿದ್ದಾರೆ.'

'ಹಾಗಾದರೆ ಓದಬಹುದಲ್ಲ!'

'ಅದಕ್ಕೆ ರಾಜೇಸಾಹೇಬರ ಹುಕುಂ ಬೇಕಾಗಿಲ್ಲ—'

'ಸಣ್ಣಮಕ್ಕಳ ಹಾಗೆ 'ಕತೆ ಹೇಳಿ' ಎನ್ನುವುದಕ್ಕೆ ನಾಚಿಕೆಯಾಗುವುದಿಲ್ಲವೆ?'

'ಹೀಗೆ ಹೇಳಲು ನಿಮಗೆ ನಾಚುಗೆಯಾಗುವುದಿಲ್ಲವೆ? ನಾನು ಇನ್ನೇನೂ ಕೇಳಲ್ಲ. ಬರಿಯ ಒಂದು ಕತೆ ಕೇಳಿದೆ. ಅದಕ್ಕೆಯೆ ಸೊನ್ನೆ ಎಂದರೆ.....'

ನನ್ನ ಹೂವು ಹಾವಾಗಹತ್ತಿತು!

'ನನ್ನ ಚಿನ್ನ, ವಕ್ರವಾಗಿ ಮಾತಾಡಲು ನೀನು ಬಲು ಜಾಣೆ ನಿಜ. ರತ್ನ ಬರುವ ವೇಳೆಯಾಯಿತು. ಈಗ ತೊಡಗಿದರೆ ಅರ್ಧದಲ್ಲಿ ಅವನು ಬರುತ್ತಾನೆ.....'

ಇಷ್ಟರಲ್ಲಿ ಗೇಟಿನ ಸದ್ದಾಯಿತು. ನಾನು ದೀಪ ಹಿಡಕೊಂಡು ಹೊರಗೆ ಬಂದೆ. ಹೌದು; ರತ್ನ ಬಂದ. ಆಗ ಹತ್ತರ ಸಮಯ.

೨

ಊಟ—ಆ ತರುವಾಯದ ಕೆಲಸಗಳೆಲ್ಲ ಮುಗಿದ ತರುವಾಯ ನಾನು ಪ್ರಶ್ನಿಸಿದೆ: 'ರತ್ನ, ಈ ದಿನವೇಕೆ ತುಂಬ ವೇಳೆಯಾಯಿತು?'

'ರಾನು, ಈ ದಿನ ನಿಮ್ಮಲ್ಲಿಗೆ ಬರಬೇಕೆಂದು ಬೇಗನೆ ಹೊರಟಿದ್ದೆ; ಆದರೆ ಅಕಸ್ಮಾತ್ತಾ ಒಂದು ಸಂದರ್ಭವೊದಗಿ ತಡವಾಗಿ ಹೋಯಿತು."

'ಆದು ಎಂಥ ಸಂದರ್ಭ ಅಣ್ಣ?' ಎಂದಳು ನನ್ನ ಸಂಪತ್ತಾರೆ.

'ರಾತ್ರಿ ತುಂಬಾ ಆಯಿತು. ಅದೊಂದು ದೊಡ್ಡ ಪುರಾಣ; ನಾಳೆಗೆ ಹೇಳುವೆ' ಎಂದ ರತ್ನ.

'ಇಲ್ಲಿ ಯಾರೂ ಮುದುಕರಿಲ್ಲ—ರಾತ್ರಿಯಾದರೆ. ಸೂತಪುರಾಣಿಕರು ಆ 'ಪೊಡ್ಡ ಪುರಾಣ ಹೇಳಬಹುದು' ಎಂದು ನಾನು ಹೇಳಿದೆ.

'ಹೌದು, ರತ್ನಣ್ಣ. ನನಗೂ ತುಂಬ ಕುತೂಹಲವಿದೆ—ಎಂದಳು ನನ್ನ ರಾಣಿ.

'ನಾನು ಈ ದಿನ' ರತ್ನ ಆರಂಭ ಮಾಡಿದನು:—'ನಿಮ್ಮ ಮನೆಗೆ ಬರಬೇಕೆಂದು ನಾಲ್ಕು ಗಂಟೆಗೆಯೆ ಹೊರಟೆ. ಹೊರಡುವಾಗಲೆ ರಾಜು ಸಿಕ್ಕಿದ. ಬಂದವನೆ 'ಹೊಕೆಯ ಬದಿಗೆ 'ವಾಕಿಂಗ್' ಹೋಗೋಣ' ಎಂದು ಬಲವಂತ ಮಾಡಿದ. ನನಗೆ ಮನಸ್ಸಿಲ್ಲದೆ ಇದ್ದರೂ ಉಪಾಯವಿಲ್ಲದೆ ಹೊರಟೆ. ಇಬ್ಬರೂ ಒಹು ದಿನಗಳಿಂದ ಭೇಟಿಯಾಗದೆ ಇದ್ದ ಕಾರಣ ಬಾಯಿತುಂಬ ಹರಟೆ ಹೊಡೆಯುತ್ತ ನದಿಯ ಕಡೆಗೆ ಸಾಗುತ್ತಲಿದ್ದೆವು. ಇನ್ನೇನು, ನದಿ ಸಮೀಪಿಸಿತು ಎನ್ನುವಾಗ—ಆ ಕಿಣಿಯರ ಅಂಗಡಿಯ ಬಲಭಾಗಕ್ಕೊಂದು ಆಲದ ಮರವಿದೆಯಲ್ಲ—ಅದರ ಸಮೀಪ ಬಂದು ತಲುಪಿದೆವು.

ಆ ಮರದ ಬುಡದಲ್ಲಿ ಆರೇಳು ಜನರು ಕೂತಿದ್ದರು. ಹತ್ತು ವರ್ಷಗಳೊಳಗಿನ ಹುಡುಗರು ಇಬ್ಬರು, ಹದಿನಾರರ ಹೆಣ್ಣುಮಗಳು ಒಬ್ಬಳು, ಎರಡತ್ತು ವರ್ಷದ ಆಳೊಬ್ಬ. ನಲವತ್ತರಾಕೆ ಇನ್ನೊಬ್ಬಳು. ಎಪ್ಪತ್ತರ ಗಡಿದಾಟಿದಾಕೆ ಕೊನೆಯವಳು. ಅವರ ಕೆದರಿದ ಕೂದಲು—ಬಾಡಿದ ಮುಖ—ಅತೃಪ್ತ ನಯನ—ಒಳಸೇರಿದ ಹೊಟ್ಟೆ—ಜಂಡಿ ಬಟ್ಟೆ—ಇವನ್ನೆಲ್ಲ ನೋಡಿದಾಗ, 'ಯಾವುದೋ ಬಡ ಕುಟುಂಬವೊಂದು' ಎಂದು ಯಾರೂ ಊಹಿಸಬಹುದಾಗಿತ್ತು. ಅವರ ಪಕ್ಕದಲ್ಲೆಯೆ

ಒಂದು ಬಡಕಲು ನಾಯಿಯೂ ನಾಲ್ಕಾರು ಕೋಳಿಗಳೂ—ಹರಕು ಚಿಂದಿಗಳ ಒಂದು ಮೂಟೆಯೂ—ಬುಟ್ಟಿಯಲ್ಲಿ ತುಂಬಿಟ್ಟಿದ್ದ ಹರಕು ಮುರಕು ಮಣ್ಣಿನ ಪಾತ್ರೆಗಳೂ ಅವರ ಸ್ಥಿತಿ-ಗತಿಗಳ ಪೂರ್ವಾಪರ ಗಳನ್ನು ತಿಳಿಸುತ್ತ ಬಿದ್ದಿದ್ದುವು. 'ಯಾರೋ ಗುಳೆ ಬಂದ ಭಿಕ್ಷಾರ್ಥಿ ಗಳು' ಎಂದು ನಾನು ಮೊದಲಿಗೆ ಊಹಿಸಿಕೊಂಡೆ ಆದರೆ ರಾಜ ಅವರನ್ನು ನೋಡುತ್ತಲೂ ದಂಗುಬಡಿದಂತಾಗಿ 'ಇದೇನು ಜೋರ? ಇಲ್ಲಿ— —??' ಎಂದು ಪ್ರಶ್ನಿಸಿದ. ಅದನ್ನು ಕೇಳುತ್ತಲೆ ಆತ ಎದ್ದು ನಿಂತು ನಮಗೆ ವಂದಿಸಿ, ಏನೋ ಹೇಳಲು ಬಾಯಿ ತೆಗೆದನು; ಆದರೆ ಮಾತು ಹೊರಡಲಿಲ್ಲ. ಕಣ್ಣಿನಿಂದ ಎರಡು ಹನಿ ನೀರು ಭೂಮಿ ತಾಯಿಯ ಮೇಲೆ ಉದುರಿತು; ಅಷ್ಟೆ!—'

ಇಷ್ಟು ಮಾತುಗಳನ್ನು ಹೇಳಿದ ರತ್ನ ಕೊಂಚ ಉಗ್ರವಾಗಿ ಹೇಳಿದ:—'ನೀನು ಏನೇ ಹೇಳು ರಾಮು, ನಮ್ಮಲ್ಲಿ ೧೮ನೆಯ ಶತಮಾನದ ಬುದ್ಧಿಯೆ ಇನ್ನೂ ಕೆಲವರಿಗೆ ಅಂಟಿಕೊಂಡಿದೆ. ದೇಶದ ತುಂಬೆಲ್ಲ ಜೀವಿಸಿರುವ ಕೋಟಿಗಟ್ಟಲೆ ದೀನ-ದಲಿತರ ತೀರ ದರಿದ್ರ ನೋವನ್ನು ನೋಡುವ ಕಣ್ಣಿಲ್ಲದ ಕೆಲವು ಕುರುಡು ಪಾಖಂಡಿಗಳು ಇನ್ನೂ ಒದುಕಿವ್ವಾರೆಂತಲೆ ನಮ್ಮ ಜನಪದ ಇನ್ನೂ ಅಭ್ಯುದಯವನ್ನೆ ಹೊಂದಲಿಲ್ಲ. ಈ ಕೋಟಿಗಟ್ಟಲೆ ಜನರು ಅಜ್ಞಾನ-ಅನಾರೋಗ್ಯ-ಅತೃಪ್ತಿ-ಗಳಿಂದ ಬವಣೆಯ ಬಾಳನ್ನು ತಳ್ಳುತ್ತ ಭೂಮಿತಾಯಿಯ ಮೇಲೆ ಅಶ್ರುಜಲಾಭಿಷೇಕಗೈಯುತ್ತಿರುವಷ್ಟು ಕಾಲ ನಮಗೆ ಎಂಥ ಮಂಗಲವಾದೀತು? ಆ ಸಹಸ್ರ-ಸಹಸ್ರ ಅಶ್ರುಗಳ ಶೇಂಕಾರದಿಂದ ಜಗತ್ತು ಒಂದು ದಿನ ನಡುಗಿ ಹೋದೀತು. ಆ ಜೀವಿಗಳ ಅಭಿಶಾಪ ದಿಂದ ಮಾನವ ಸಂತಾನ ಅಳದು ಹೋದೀತು. ಆವರ ಮೊರೆ ದೇವರಿಗೂ ಕೇಳಿಸಿ, ಆವನೂ ಆವರಿಗೆ ವಜ್ರಬಲವನ್ನೊದವಿಸಿಯಾನು. ಹತ್ತು ಜನ ಅಳುತ್ತಿರುವಾಗ ನಡುವಿನವನೊಬ್ಬನು ನಗುತ್ತಿರಬೇಕಾದರೆ ಆತ ಮನುಷ್ಯನಾಗಿದ್ದಾನೊ ಎಂದು ನಾನು ಅನುಮಾನಿಸುತ್ತೇನೆ.'

'ರತ್ನಣ್ಣ ಉಪನ್ಯಾಸ ಕೊಡುವ ಹಾಗಿದೆ. ಹೀಗೇ ಆದರೆ ತೂಕಡಿಸುತ್ತೆ— —' ಎಂದು ನಡುವೆ ಹಾದಿ ತಪ್ಪಿದ ವಾಗ್ಧಾರೆ ಗೊಂದು ದಿಕ್ಕುಗಾಣಿಸುವ ಯತ್ನ ಮಾಡಿದಳು ನೆನ್ನ ರತಿ.

ರತ್ನ ಮುಂದುವರೆಯಿಸಿದ:—'ನೋಡು ರಾಮು, ರಾಜುವನ್ನು ಕಂಡು ಆವರೆಲ್ಲರೂ ಗೋಳೋ ಎಂದು ಅತ್ತು ಬಿಟ್ಟರು. ಇದನ್ನು ನೋಡಿ ನಮಗೆ ಸುಂಬ ಸಂಕಟವಾಯಿತು. 'ಏನಾಯಿತು ಜೋರ— ವಿವರವಾಗಿ ಹೇಳು—' ಎಂದು ರಾಜು ಕೇಳಿದರೆ, ಆತ ತನ್ನ ಎರಡೂ ಕೈಗಳನ್ನು ಆಕಾಶದ ಕಡೆಗೂ ತನ್ನ ಹಣೆಯ ಕಡೆಗೂ ತೋರಿಸಿ 'ನಾವು ಆ ಮನೆ ಬಿಟ್ಟಿವು ಒಡೆಯಾ, ನಮ್ಮ ನೀಲಾನ ಯಜಮಾನ-ತಿಯ ಮನೆಗೆ ಹೋಗುತ್ತೇವೆ' ಎಂದು ಹೇಳಿದನು.

'ಅದೇಕೆ ಆ ಮನೆ ಬಿಟ್ಟರಿ?' ಎಂದು ರಾಜು ಕೇಳಿದ

'ನೀರಿನ ಋಣ ಮುಗಿಯಿತು' ಎಂದಿಷ್ಟೆ ಜೋರ ಉತ್ತರವಿತ್ತ.

'ಬೇರೆ ಮನೆ ಗೊತ್ತುಮಾಡಿ ಹೊರಟಿದ್ದೀರಾ?' ಎಂದು ರಾಜು ಕೇಳಿದ.

'ಇಲ್ಲ ಒಡೆಯಾ, ಬೇರೆ ಮನೆ ಗೊತ್ತುಮಾಡುವುದಕ್ಕೆ — ಈ ಮನೆ ಬಿಡಬೇಕಾಗುತ್ತದೆಂದು ನಮಗೇನು ಕನಸಿ?' ಎಂದ ಜೋರ.

'ಹಾಗೆಂದರೇನು? ಹಾಗಾದರೆ ಈಗ ಎಲ್ಲಿಗೆಂದು ಹೊರಟದ್ದು?' ರಾಜ ಕೇಳಿದ.

'ಎಲ್ಲಿಗೆನ್ನಲಿ ದೇವರೆ! ನನಗೆ ಗೊತ್ತಿದ್ದರಲ್ಲವೆ ನಿಮಗೆ ಹೇಳುವುದು! ನೀಲಾನ ಯಜಮಾನತಿ ಒಳ್ಳೆಯವರಂತೆ. ಅವರ ಹತ್ತಿರ ಹೋಗಿ 'ಒಂದು ಮನೆ ಕೊಡಿ' ಎನ್ನುವುದು. ಸಿಗದಿದ್ದರೆ 'ಭೂಮಿ ಬಹು ದೊಡ್ಡದಿದೆ, ಎಲ್ಲಾದರೂ ಸ್ಥಳ ಸಿಕ್ಕೀತು!.... ಹೀಗೆಂತ ಹೊರ ಟಿದ್ದೇನೆ—' ಎಂದು ರಾಜನಿಗೆ ಜೋರ ಹೇಳಿದ. ಆಗ ದೂರದಲ್ಲಿ ಕುಳಿತಿದ್ದ ಬೀರಮ್ಮ—ಆ ಮುದುಕಿ— ಚೀರಿಟ್ಟಿತು: 'ರಾಜದೇವರೊ ಆದು? ನಾವು ಆ ಮನೆಯನ್ನು ಬಿಟ್ಟೆವು ಒಡೆಯ! ಆವರಿಗೆ ದೇವರು ಒಳ್ಳೆಯದನ್ನು ಮಾಡಲಿ! ಆವರ ಮರಿಮಕ್ಕಳು ಸಾಸ್ವತ್ತಾಗಿ ಬಾಳಲಿ!' ಮಾತು ಆಶೀರ್ವಾದದ್ದು. ಆದರೆ ಆವರಲ್ಲಿ ಇದ್ದದ್ದು ಎಲ್ಲ ನಂಜು—ಎಲ್ಲ ಕೊಂಕು!! ರಾಜ ಆವರನ್ನೆಲ್ಲ ಕೇಳಿದ ತರುವಾಯ ನನಗೆ ವಿಷಯವೆಲ್ಲ ಗೊತ್ತಾಯಿತು. ಅದನ್ನೆ ಸಂಕ್ಷೇಪವಾಗಿಯೆ ಹೇಳುತ್ತೇನೆ:

## ೩

ಹೊಳೆಯ ಆಚೆ ಸಣ್ಣ ಊರಿದೆ. ಊರಿಗೆ ಗುರಿಕಾರರು ಪಟೇಲರು. ಆವರೆ ಅಲ್ಲಿಯ ಭೂಪ! ಆವರಿಗೆ ಎದುರಾಗುವ ಶಕ್ತಿ ಆ ಊರಿನ ಯಾವ ಹುಳಕ್ಕೂ ಇಲ್ಲ. ಕೆಲವು ದಶಮಾನಗಳ ಹಿಂದೆ ಪಟೇಲರು ಕ್ಷುದ್ರವ್ಯಕ್ತಿಗಳಾಗಿದ್ದರು. ಪಟೇಲಿಕೆ ದೊರೆತ ಮೇಲೆಯೆ ಆವರ 'ಪ್ರಗತಿ'ಯ ಪ್ರಾರಂಭ! ಆವರ ಕೈಗೆ ಪಟೇಲಿಕೆ ದೊರೆ ತರುವಾಯ ಊರಿನವರೆಲ್ಲರ ದುಡ್ಡಿನ ಚೀಲಕ್ಕೂ ಕಾಹಿಲೆ ತಗುಲಿತು ಜನಶೋಷಣೆ-ಪರಪೀಡನೆ ಇವು ಆವರಿಗೊಂದು ಆಟವೆಂತಲೂ-ಇದರಿಂದಲೆ ಆವರೊಬ್ಬ ಗಣ್ಯ ಜಮೀನ್ದಾರರಾದುದೆಂತಲೂ ಆ ಊರಿನ ಜನ ಆವರ ಇತಿಹಾಸಕ್ಕೆ ಸಾಕ್ಷಿ ನುಡಿಯುತಿದೆ. ಆ ಪಟೇಲರ ಮನೆಯ ಅಂಗಳಕ್ಕೆ ತಾಗಿಯೆ ಸಣ್ಣದೊಂದು ಗುಡಿಸಲು ಇದೆ ಶಾಸ್ತ್ರೀಯವಾಗಿ ಹೇಳುವುದಾದರೆ ಅದೊಂದು ಕೋಳಿಯ ಗೂಡು ಜೋರನ ಮಾತುಗಳಲ್ಲಿಯೆ ಹೇಳುವುದಾದರೆ 'ಬಡವರು ಸಂಸಾರ ಮಾಡಲು ಸಾಕಾಗುವಂಥ ಜಾಗೆ!' ಈ ಕುಟುಂಬ ಆ ಗುಡಿಸಿಲಿನಲ್ಲಿ ಈಚೆಗೆ ಹತ್ತು ವರ್ಷಕ್ಕೆ ಮೇಲ್ಪಟ್ಟು ಬಿಡಾರವಿತ್ತು. ಜೋರ ಯಜಮಾನ ರುಕ್ಕಿ ಅವನ ಅರ್ಧಾಂಗಿ ಬೀರಮ್ಮ ಜೋರನ ತಾಯಿ ಹದಿನಾರು ವರ್ಷದಾಕೆ—ಆ ಹೆಣ್ಣು ಇವರ ಮಗಳು ನೀಲಾ ಎಂದು ಆಕೆಯ ಹೆಸರು. ಉಳಿದುವೆರಡು ಕನ್ಯ-ತೋಸ. ನೀಲೆಯ ತಮ್ಮಂದಿರು. ಈ ಆರು ಜೀವಾತ್ಮಗಳು ಆ ಗುಡಿಸಲಿನ ತಮ್ಮ ಜೀವನಯಾತ್ರೆಯನ್ನು ಮಾಡುತ್ತಲಿದ್ದುವು. ಜೋರನ ಗುಕ್ಕಿಯೂ ದಿನ ಬೆಳಗಾದರೆ ಪಟೇಲರ ಮನೆಗೆ ಬಿಟ್ಟು ಕೂಲಿ ಹೋಗಬೇಕು. ಆ ಮಕ್ಕಳೂ ಮುದುಕಿಯೂ ಆವರಿಗೆ ನೆರವು ಬೇಕು. ಇದು ನಿತ್ಯದ ರೂಢಿ. ಆವರ ಈ ಶ್ರಮಕ್ಕಾಗಿ ಆ ಮನೆಯನ್ನು ಬಾಡಿಗೆಯಿಲ್ಲದೆ ಜೋರನಿಗೆ ಕೊಟ್ಟಿರುವುದೆ ಪಟೇಲರ ಔದಾರ್ಯ ಕಾಸು-ಕಾಲಾಣೆಗಳನ್ನು ಬೆಲ್ಲಿದ ಉದಾಹರಣೆಗಳೂ ಇವೆ. ಜೋರ ಆವರ ಮನೆಯ ಬಾವಿಯ ನೀರಿಗಿಂತಲೂ ಹೆಚ್ಚು ಬೆವರು ಸುರಿಸಿ ಹಾಟುಂಬ ಅಲ್ಲಿ ದುಡಿಯುತಲಿತ್ತು. ಪಟೇಲರ ಮನೆಯ ವಿಶಾಲ

ಶಾಂತಿ—ವ್ಯವಸ್ಥೆ—ಉಚ್ಚಾಟಕಟ್ಟುತನ—ಇವೆಲ್ಲ ಬೋರನ ದುಡಿತದ ಫಲ. ಈ ದೇಹಗಳು ಈ ತೋಳುಗಳು ದುಡಿಮುದರ ಪರಿಣಾಮವಾಗಿ ಪಟೇಲರ ಮನೆಯ ಮಂದಿಗೆ ನೆಮ್ಮದಿ ದೊರೆತಿದೆ. ಈ ದುಡಿತದಿಂದ ಆ ಕುಣಿತ!

ಇನ್ನು ಅವರ ಪೈಕಿ ನೀಲಾ ಒಬ್ಬಳು ಮಾತ್ರ ಹೊಲೆಯ ಈಜಿಗೆ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯರ ಮನೆಯಲ್ಲಿ ಕೆಲಸಕ್ಕಿದ್ದಳು. ಈ ಮನೆಯಲ್ಲಿ ಒಬ್ಬ ಗೃಹದೇವತೆಯಿದ್ದಳು. ಶಾರದಾ ಎಂದು ಆಕೆಗೆ ಹೆಸರು. ಬಹು ಗುಣವಂತೆ ಹೆಂಗುಸು. ನೀಲೆಯ ಮಾತಿನಲ್ಲಿಯೆ ಹೇಳುವುದಾದರೆ ಶಾರದೆ ಒಂದು ಚಿನ್ನ—ಒಂದು ರತ್ನ—ಒಂದು ದೇವರು! ಆಕೆಗೆ ನೀಲೆಯ ಮೇಲೆ ಬಹಳ ಆತ್ಮೀಯ ಭಾವ; ಕನಿಕರ. ದಿನವೂ ನೀಲೆಯ ಕಷ್ಟದ ಕತೆ ಕೇಳಿ ಸಹಾನುಭೂತಿ ತೋರಿಸುತ್ತಾಳೆ. ಅವಳ ಪತಿ ಕೂಡಾ ಆಧುನಿಕ ದೃಷ್ಟಿಯ ಸದ್ಗೃಹಸ್ಥ. ಈ 'ಕೆಲಸದ ಹೆಣ್ಣಿ'ನ ಗೋಳಿನ ಬಾಳನ್ನು ತಿಳಿದು ಚಿತನೂ ನೊಂದುಕೊಂಡ. ಈ ಕೃಪಾಳು ದಂಪತಿಗಳು ಆ ಹುಡುಗಿಗೆ ಉಣಲೋ ಉಡಲೋ ಕಡಿಮೆ ಮಾಡಿ ನೆರವಾಗುತ್ತಿದ್ದರು. ನಿಜವಾದ ಮಾತನ್ನು ಹೇಳುವುದಾದರೆ ನೀಲಾ ಕುಟುಂಬದ ಹೊರೆ ನಿರ್ವಹಿಸುತ್ತಿದ್ದಳು. ಅವಳ ಜೀತವೆ ಈ ಆರೂ ತುತ್ತಿನ ಚೀಲಗಳಿಗೆ ಆಧಾರ! ಪಟೇಲರ ಮನೆಯ ದುಡಿತದ ರೀತಿಯೆ ಬೇರೆ. ಇಡಿಯ ಕುಟುಂಬ ಅಲ್ಲಿ ಹಗಲಿರುಳೆನ್ನದೆ - ಮಳೆ ಬಿಸಿಲೆನ್ನದೆ—ಹಸಿವೆ ತೃಷೆಯೆನ್ನದೆ — ದುಡಿಯಬೇಕು ಪ್ರತಿಫಲ ಬಯಸಬಾರದು. ಈ ನೀತಿಗೆಂಥ ಅರ್ಥವೂ? ಇವರಿಗೂ ಹಸಿವೆಯೆಂಬುದಿದ್ದೀತು ಎಂಬ ಪ್ರಾಮುಖ್ಯ ಭಾಗವನ್ನೆ ಮರೆಯುವ ಪೈಗಗಳ ಜಾತಿಗೆ ಸೇರಿವ ಜನ ಪಟೇಲರು. ವಿಶಾದಾಯಿಗಳಾದ ಬಡವರು ಹೇಗೆ ಬದುಕಿಯಾರು ಎಂಬುದು ಇವರಂಥವರಿಗೆ ಅಲಕ್ಷಿಸಿದ ವಿಷಯವಾಗಿದೆ! ಬೋರನ ಕುಟುಂಬದ ಆಯುಷ್ಯದ ಕ್ಷಣಗಳೆಲ್ಲ ಈ ಮನೆಯ ದುಡಿತದಲ್ಲಿ ಕಳೆಯುತ್ತಿವೆಯಾದರೂ ಒಂದಾದರೂ ಸಾಂತ್ವನೆಯ ಮಾತನ್ನು ಕೇಳುವ ಭಾಗ್ಯ ಈ ಕುಟುಂಬಕ್ಕಿಲ್ಲ. ಇವರಿಗಾಗಿ ಪಟೇಲರು ಕೆಲವು ಶಬ್ದಗಳನ್ನು ಪಾಠ ಮಾಡಿಟ್ಟುಕೊಂಡಿದ್ದಾರೆ. ಅವನ್ನು ದಿನವೂ ಕೇಳುವುದು ಬೋರನಿಗೆ ಅಭ್ಯಾಸವಾಗಿ ಹೋಗಿದೆ. ದರಿದ್ರದವು! ಎಷ್ಟು ಹೇಳಿದರೂ ಒಂದೆ! ಮೂರಿಗಳು! ನನ್ನ ನೆರಳು ತಪ್ಪಿದರೆ ಮುಗಿಯಿತು—ಎಲ್ಲ ಕೊಡಾಬಟ್ಟೆ. ಇವುಗಳಿಗೆ ಸುರ್ವನವೆ ಮದ್ದು. ಶುದ್ಧ ಪೈಗಳ್ಳರು! ಮಾನಸುರ್ಯಾದೆ ಒಂದೂ ಇಲ್ಲ! ನಾಯಿಜಾತಿ!' ಇದು ಆ ಬಯ್ಗಳಲ್ಲಿ ಒಂದು ಮಾದರಿ; ಸ್ಪೆಷ್ಮೆನ್ ಪ್ರದರ್ಶನ! ಎಲ್ಲಿಂದಲೊ ಏನೋ—ಯಾಕೋ ಏನೋ—ನಾಲ್ಕು ದಿನ ಬಾಳಲು ಬಂದ ಒಂದು ಜೀವ - ತನ್ನಂಥ ಇನ್ನೊಂದು ಜೀವದ ವಿಚಾರವಾಗಿ ಹೀಗೆ ನಡಕೊಂಡು ದೇವರ ಮುಂದೆ ಎಂಥ ತಪ್ಪುಗಾರನಾಗಬೇಕಾದೀತು ಎಂಬ ಸಂಸ್ಕಾರವೆ ಇಲ್ಲಿ ನಮ್ಮ ಜನಗಳಿಗೆ. ಇದು ಬಹು ಸೋಜಿಗದ ಅಂಶ. ಬೋರ ಇದನ್ನೆಲ್ಲ ಗಮನಿಸಲಾರ. ಅವನ ಸಂಸ್ಕಾರ ಅಂಥದು. ತಾನು ದುಡಿಯಬೇಕು—ಅವರು ದುಡಿಸಬೇಕು ತಾನು ಪಾಪಿ—ಅವರು ಪುಣ್ಯವಂತರು. ಅಂಥ ತಿಳಿವಿನ ಆ ಬಡಕುಟುಂಬ ಒಂದನ್ನು ಕಿಕ್ಕಿಸಿದೆ ಮತ್ತೂ ದುಡಿಯುತ್ತಲೆ ಇತ್ತು. ಜ್ಞಾನ—ಸಂಸ್ಕಾರ—ನೆಮ್ಮದಿ ಎಂದರೆ ಆ ಗುಡಿಸಿಲಿನಿಂದ ನೂರು ಮೈಲು ದೂರದಲ್ಲಿ!! ಆದರೆ ಪ್ರಪಂಚ ಒಂದೇ ತೆರನಾಗಿಲ್ಲ. ಮುಳ್ಳಿನ ಗಿಡದಲ್ಲೂ ಹೂವಿದೆ. ನೊಣದ ಗೂಡಿನಲ್ಲೂ ಜೇನಿದೆ ಹಾಗೆಯೆ ಪ್ರಪಂಚದಲ್ಲಿ ಒಳ್ಳೆಯವರೂ ಇದ್ದಾರೆ. ಇದರಿಂದಲೆ ಬೋರ ಬದುಕುವಂತಾಗಿದೆ. ನೀಲಾ ಕೂಡಾ ಪಟೇಲರಂಥವರ ಮನೆಗೆಯೆ ಸೇರಿದ್ದರೆ ಹೇಗೆ ಸಾಗಬೇಕು ದಿನ?

ನೀಲಾ ನೋಟಕ್ಕೆ ಸೊಗಸಾದ ಹೆಣ್ಣು. ಆ ಯೌವನ ಸೊಗಸಿಗೆ ಸಿರಿಯೇರಿಸಿತ್ತು. ಅಲ್ಲದೆ ಪೇಟೆಯ ಜಿಲುಪು-ಬೆದುರುಗಳಿಂದ ಆಕೆ ಪಳಗಿ ಕಲಾಭರಿತೆಯಾಗಿದ್ದಾಳೆ. ತಾನು ದುಡಿವ ಮನೆಯ ದಂಪತಿಗಳ ಸವಿಯಾದ ಮಾತು, ಪ್ರೀತಿ, ತೋರುತ್ತಿರುವ ಅಂತಃಕರಣ—ನೆರವಾಗುವ ಕೈ ಇವು ಆಕೆಗೆ ಶಾಂತಿಯನ್ನೂ ತುಷ್ಟಿಯನ್ನೂ ಒದವಿಸಿದ್ದುವು. ಶಾರದಮ್ಮ ಈಕೆಯನ್ನು ಒಂದೊಂದು ದಿನ ತನ್ನಂತೆಯೆ ಸಿಂಗರಿಸಿ ಪಾರ್ಕಿಗೋ— ಸಿನೆಮಕ್ಕೋ—ರೇಡಿಯೋ ಕೇಳಲಿಕ್ಕೋ—ಗುಡಿಗೋ—ಕರೆದುಕೊಂಡು ಹೋಗುತ್ತಾಳೆ. ಒಂದೊಂದು ದಿನ ಸಂಜೆಯಾದಾಗ— ಗಾಳಿ ತೆಳುವಾಗಿ ತೀಡುತ್ತಿದ್ದಾಗ—ಪ್ರಕೃತಿದೇವಿ ಹಿತವಾಗಿ ಸಗುತ್ತಿದ್ದಾಗ 'ನೀಲೂ! ನಿನಗೊಂದು ಮದುವೆ ಮಾಡಿಸ್ತೀನಿ; ನೀವು ನಮ್ಮ ಮನೆಯಲ್ಲಿಯೆ ಇದ್ದು ಬಿಡಿರಿ' ಎಂದು ಮುಂದಿನ ಜೀವನದ ಅಪ್ಪಟ್ಟ—ಸಂದಿಗ್ಧ— ಚಿತ್ರವನ್ನೂ ತೋರಿ, ನೀಲೆಯನ್ನು ಬುಟ್ಟಿಗೆ ನಿಂದ ಹಿಗ್ಗಿಸುತ್ತಾಳೆ! ಒಮ್ಮೊಮ್ಮೆ:—'ನಿನ್ನ ತಂದೆಗೆ ಹೇಳು ನೀಲಾ! ಪಟೇಲರಿಗೇನು ಹೃದಯವಿಲ್ಲವೆ? ಅವರೇನು ಹುಲ್ಲೆ? ಕಲ್ಲೆ? ದುಡಿತಕ್ಕೆ ತಕ್ಕ ಫಲ ಸಿಗಲೆ ಬೇಕು! ಇಂಥ ಅನ್ಯಾಯ ಮಾಡಿದರೆ ಪ್ರಾಮಜೀವಿಗಳ ಅಂತರ್ಯಾಧೆ ಅವರ ಮನೆಯನ್ನು ಸುಟ್ಟೀತು! ಅವರಿಗೂ ಮಕ್ಕಳು-ಮರಿಗಳು ಇಲ್ಲವೆ? ತಮ್ಮ ಹಿತವನ್ನಷ್ಟೆ ಕಂಡು ಬಡಪಾಯಿಗಳನ್ನು ಹೀಗೆ ಗೋಳಾಡಿಸಬಾರದು. ನೀವಾದರೂ ಏಕೆ ಒಪ್ಪಿ ಕುಳಿತಿದ್ದೀರೊ? ಶುದ್ಧ ಗೋಡಾಮೃಗಗಳು! ಅಥವಾ ಲೋಕವೇ ಇಂಥ ಜನಗಳಿಂದ ತುಂಬಿದಾಗ ಹೋದೀರಾದರೂ ಎಲ್ಲಿಗೆ? ಇದಕೇ ಹೇಳೋದು: ಎಲ್ಲರೂ ಓದಬೇಕು ಎಂದು. ಈಗ ಜಗತ್ತು ಸುಂದರವಾಗಿ ರೂಪಿತವಾಗುತ್ತ ಬರುತ್ತಿದೆ. ಎಲ್ಲರೂ ಹಿತವಾಗಿ ಬಾಳಬೇಕು ಎಂಬುದೆ ಇಂದಿನ ತತ್ತ್ವ. ಈ ಬಗೆಯ ಕ್ರೌರ್ಯ ಇನ್ನು ಸಹ್ಯವಾಗಲಾರದು. ನಿನ್ನ ತಮ್ಮಂದಿರನ್ನು ಸುಮ್ಮನೆ ಅಲ್ಲಿ ಸಾಯಿಸಬೇಡ. ಅವನ್ನಾದರೂ ಶಾಲೆಗೆ ಕಳುಹಿಸು. ನಾಲ್ಕಕ್ಷರ ಓದಿ ಜ್ಞಾನವಂತರಾಗಲಿ. ನಾಳೆಯ ಬಾಳಿಗೆ ಕಲಿವು ತುಂಬ ಅವಶ್ಯ, ನಿಮ್ಮ ಬಾಪ್ಪೆಯನ್ನು ನೆನೆದು ನನಗೆ ಹೊಟ್ಟೆ ಚುರುಚುರು ಎನ್ನುತ್ತೆ' ಎಂದು ನೀತಿಯನ್ನು ವಿಚಾರದ ರಂಗಕ್ಕೆಳತಂದು ಕೆರಳಿಸುತ್ತಾಳೆ. ಈ ಉಪದೇಶ ನೀಲೆಯ ಮನಸ್ಸಿನ ಮೇಲೆ ಪರಿಣಾಮವನ್ನು ಮಾಡದೆ ಸೋಗಿಲ್ಲ. ತಂದೆ-ತಾಯಿಯರೊಡನೆ ಕಾಡಿ ಬೇಡಿ, ಹೇಗೂ ಒಂದು ದಿನ ಆ ಮಕ್ಕಳನ್ನು ತನ್ನ ಯಜಮಾನತಿಯ ಮಕ್ಕಳು ಹೋಗುವ ಶಾಲೆಗೆ ಸೇರಿಸಿಬಿಟ್ಟಳು. ಇಲ್ಲಿಂದ ತೊಡಕಿಗೆ ಆರಂಭವಾಯಿತು ಎಂದೆನ್ನಬಹುದು. 'ಈ ಮಕ್ಕಳನ್ನು ಶಾಲೆಗೆ ಕಳುಹಿಸಿ ಹಾಳು ಮಾಡ್ತಿ ಬೋರ. ಅವು ಇನ್ನು ಯಾವುದಕ್ಕೂ ಬಾರದ ಕುಂಬಾರರಂತೆ ಆಗುತ್ತವೆ. ಅತ್ತ ಕಲಿವೂ ಇಲ್ಲ— ಇತ್ತ ಕೆಲಸದ ಮನಸೂ ಇಲ್ಲ ಎಂಬಂತೆ ಆಗಿ ಪೂರಾ ಕೆಡುತ್ತವೆ. ನಿನಿಗೆ ಜೇವಿ ಕಸುಬಿಲ್ಲ. ನಾವ ಬೆಳೆ ಕೊಯ್ಲಿನ ಹೊತ್ತಿಗೆ ಜನ ಎಷ್ಟಿದ್ದರೂ ಸಾಕಾಗುವುದಿಲ್ಲ. ಇರಲಿ ನೋಡುವ ಮನೆಯಲ್ಲಿಯ. ಏನಾದರೂ ವಿದ್ಯ ಕೆಲಸ ಮಾಡಿ

ಕೊಂಡು ಇರುತ್ತವೆ. ನಿನ್ನದೊಂದು ಹೊಸ ಆಧಿಕಪ್ರಸಂಗ!' ಎಂದು ಪಟೇಲರು ಒಂದು ದಿನ ಬೋರನನ್ನು ಬೆದರಿಸಿದರು. ಈ ಮಾತನ್ನು ನೀಲಾ ತನ್ನ ಯಜಮಾನತಿ ಶಾರದಾದೇವಿಗೆ ಹೇಳಿದಾಗ ಆಕೆ ಉರಿದು ಹೋದಳು. 'ಅಯ್ಯೋ ಹುಚ್ಚಿ! ಅವು ನಾಯಿಯ—ಕೋಳಿಯ—ವರಿಗಳಲ್ಲವೆಂದು ನಿನ್ನ ಧಣೀರಿಗೆ ಹೇಳಬಾರದೆ? ಅವುಗಳಿಗೂ ಹೃದಯವಿದೆ ಪಾಪ—ಇನ್ನೂ ಎಳಗೂಸುಗಳು. ಎಂಥ ಕೆಲಸ ಮಾಡ್ಯಾವು? ನಾಲ್ಕಕ್ಷರ ಕಲಿಯಲಿ — ಧಣಿಯರ ಗಂಟೇನೂ ಹೋಗುವುದಿಲ್ಲ' ಎಂದು ನೀಲೆಯೊಡನೆ ವಾದಿಸಿದಳು. ಬೋರ ಅವೆ ಮಣ್ಣಿನಂತೆ. ಗುರಿಕಾರ ಹೇಗೆ ತಿರುಗಿಸಿದರೆ ಹಾಗಾಗುವುದು ಅವೆ ಮಣ್ಣು. ಬೋರ ಹಾಗೆಯೆ. ಯಜಮಾನ ಗರ್ಜಿಸುವಾಗ ಅದೂ ಹೌದಾಗಿ ತೋರುತ್ತೆ. ನೀಲಾ ವಾದಿಸುವಾಗ ಅದೂ ಹೌದಾಗಿ ತೋರುತ್ತೆ. ಆದರೂ ಮಗಳ ಮೋಹಕ್ಕೆ ಬಲಿಬಿದ್ದ ಮಕ್ಕಳನ್ನ ಸಾಲೆಯಿಂದ ಬಿಡಿಸುವ ಹವ್ಯಾಸಕ್ಕೆ ಹೋಗಲಿಲ್ಲ. ಈ ಸಂಗತಿಯನ್ನು ಪಟೇಲರು ಲಕ್ಷಿಸಿಯೆ ಲಕ್ಷಿಸಿದರು. 'ಕಾಲ ಕೆಟ್ಟುಹೋಯಿತು. ಮೇಲು-ಕೀಳು 'ಗಳನ್ನೆ ಅಡಿ ಮೇಲು ಮಾಡುವ ಗಾಳಿ ಇಂದಿನದು. ಬೋರನೂ ಸೊಕ್ಕಿದಾನೆ. ಏನೋ ಸಾಯಲಿ ಎಂದು ಸುಮ್ಮಗಿದ್ದರೂ ಅವನು ದಿನದಿನವೂ ಅಲಸನೂ ಅನಿಧೇಯನೂ ಆಗುತ್ತ ಬರುತ್ತಾನೆ' ಎಂದೆಲ್ಲಾ ಅವರ ತರ್ಕಸರಣಿ ಮುಂದುವರಿಯಿತು. ಒಂದು ದಿನ ಬೋರನೊಡನೆ ಹೇಳಿಯೂ ಹೇಳಿದರು:—'ದಿನ ಹೋದಂತೆ ಬೋರನಿಗೆ ಅಹಂಕಾರ ಸುರುವಾಯಿತು. ನಾನು ಹೇಳಿದ್ದು ಕೇಳಲಿ ಇಲ್ಲ!'

'ಅರೆಜೊಟ್ಟೆ ಉಣ್ಣಲೂ ಗತಿಯಿಲ್ಲದ ನಮಗೆಂಥ ಅಹಂಕಾರ ಬುದ್ಧಿ?' ಎಂದು ವಿನಯವಾಗಿಯೆ ಬೋರ ನುಡಿದನು.

'ಮಾತು ಜರ್ಫಾಗುತ್ತೆ ಬೋರ. ಹುಡುಗರನ್ನು ಕೊನೆಗೂ ಶಾಲೆಗೆ ಹಾಕಿಯೆ ಬಿಟ್ಟೆ. ಇಲ್ಲಿ ರಾಶಿ ಕೆಲಸ ಬಿದ್ದಿರುವುದನ್ನು ನೋಡಿಯೂ ನೋಡುತ್ತಿ. ಆದರೂ ಲಕ್ಷ್ಯವಿಲ್ಲ. ನಿನ್ನ ಅಭಿಪ್ರಾಯ ಏನೆಂದು—ನಾನೇ ಇದಕ್ಕೆಲ್ಲ ಸಾಯಬೇಕೆಂದೊ? ಹಾಗಿದ್ದರೆ ಸ್ಪಷ್ಟ ಹೇಳಿಬಿಡು. ಇನ್ನೇನು!' ಎಂದು ಮೂಕದ ಕೆಡುನುಡಿಯಾಡಿದರು ಪಟೇಲರು.

'ಯಾರು ಹಾಗೆ ಹೇಳುತ್ತಾರಿ ದೇವರೆ. ಮಕ್ಕಳು—ಮಾಡಿದ ದಿಸ್ಟು ಕೆಲಸ ಮಾಡಿಯಾರು? ನಾಲ್ಕು ದಿನ ಸಾಲೆಯ ನೆಲ ತುಳಿದು ಬರಲಿ. ಕೆಲಸಗಳಿಗೆ ನಾವಿದ್ದೀವಲ್ಲ—' ಎಂದು ವಿನಯವಾಗಿಯೆ ಹೇಳಿ ನೋಡಿದ ಬೋರ.

'ಕಲಿತು ಕಲೆಕ್ಟರಿಕೆ ನೋಡುತ್ತಾರೆ ನಿನ್ನ ಮಕ್ಕಳು!' ಎಂದು ಪಟೇಲರು ಹೊರಟುಹೋದರು.

೪

ನೀಲೆಯ ಕುರಿತು ಎರಡು ಮಾತು ಈಗ ಹೇಳಬೇಕು. ನೀಲಾ ಸುಂದರಿ ಎಂದು ಹಿಂದೆಯೆ ಹೇಳಿದೆ. ಈ ಅನ್ಯತದ ಹಣ್ಣು ಅನೇಕ ಕಾಗೆಗಳ ಬಾಯಿಯಲ್ಲಿ ನೀರನ್ನೂರಿಸಿತ್ತು. ಅಂಥವರಲ್ಲಿ ಪಟೇಲರ ಮನೆಯ ಮೇಸ್ತ್ರಿ ಜೆಂಕ ಕೂಡಾ ಒಬ್ಬ. ತನ್ನ ತಾಯಿಯಂಥ—ತನ್ನ ಅಕ್ಕತಂಗಿಯರಂಥ—ಲೋಕದ ಸ್ತ್ರೀ ಜನವನ್ನು ಕಾಮುಕ ಕಣ್ಣಿನಿಂದ ನೋಡುವುದೊಂದು ಮಹೋದ್ದೇಶವಾಗಿ ಕುಳಿತಿದೆ ನಮ್ಮ ಸ್ಲೆ. ನೀಲಾ ಇಂಥದಕ್ಕೆಲ್ಲ ಬೆದರುವಾಕೆಯಲ್ಲ. ಆಕೆಯ ಬಡತನದ ಆತ್ಮ ಶಾರದೆಯ ಆರಯಿಕೆಯಿಂದ ತೃಪ್ತಿಪಟ್ಟುಕೊಂಡಿದ್ದಂತೆ—ಯೌವನದ ಆಸೆ ಒಬ್ಬನ ನೆನಪಿನಿಂದ ತೃಪ್ತಿಹೊಂದುತಲಿತ್ತು. ಈ ಕುಟುಂಬದ ದೂರದ ನಂಟ. ನೊಬ್ಬ ಇದ್ದನು. ಏರುಜವ್ವನದ—ಈರಪ್ಪನೆ ಅವನು. ಈ ಊರಿನ 'ಮುದ್ರಣಾಲಯ'ವೊಂದರಲ್ಲಿ 'ಕಂಪೋಯಿಟರ್' ಆಗಿ ಮಡಿಯುತ್ತಿದಾನೆ. ನೀಲಾನ್ನ ಈರಪ್ಪನ ಕೈಮೇಲೆ ಹಾಕಬೇಕೆಂದು ಬೋರನೆ ನಿಶ್ಚಯಿಸಿದ್ದು. ತಂದೆಯ ಹಾಗೂ ಮಗಳ ಆಯ್ಕೆ ಏಕಸೂತ್ರದ್ದಾಗಿತ್ತು. ಈ ನಡುವೆ ಒಮ್ಮೆ ಹೀಗಾಯಿತು. ಈರಪ್ಪ ಕಾಹಿಲೆ ಬಿದ್ದ. ಏಳೆಂಟು ದಿನಗಳ ತರುವಾಯ ಈ ಸುದ್ದಿ ಬೋರನಿಗೆ ತಲುಪಿತು. ಆತನೂ ಮನೆಯವರೂ ದಿಗಿಲಾದರು. ಕೊನೆಗೆ ತಾಯಿಯೂ ಮಗಳೂ ಕೂಡಿ ಒಂದು ಸಂಜೆ ಹೋಗಿ ನೋಡಿಕೊಂಡು ಬರಬೇಕು ಎಂದು ತೀರ್ಮಾನಿಸಿದರು. ಅದೇ ದಿನ ಪಟೇಲರು ಬಂದು 'ಬೋರ' ಎಂದು ಕರೆದು ಹೇಳಿದರು:—'ಈ ದಿನ ನಮ್ಮ ಶಶಿತಲೆ ಗಂಡನ ಮನೆಗೆ ಹೋಗುತ್ತಾಳೆ. ನಿನ್ನ ಹೆಂಡತಿಯಾಗಲಿ—ನೀಲುವಾಗಲಿ ಸ್ವಲ್ಪ ಆವಳನ್ನು ಅಲ್ಲಿಯವರೆಗೆ ಮಾಡಿ ಬರಬೇಕು.'

'ಆಗಬಹುದು ಬುದ್ಧಿ. ಆದರೆ....ಆದರೆ....ಮಕ್ಕಳು ಬಂದರೆ ಸಾಲದೆ....?' ಎಂದು ಸಹಜವಾಗಿಯೆ ಬೋರ ಹೇಳಿದ. 'ಬೇಡ—ಅವರೆ ಬರಲಿ' ಎಂದು ಅವರು ಮನೆಗೆ ನಡೆದರು. ಈ ಅಚ್ಚ್ಲೆ ಮನೆಯಲ್ಲಿ ತುಂಬ ಚರ್ಚೆಗೆ ಎಡೆಗೊಟ್ಟಿತು. ನೀಲಾ ದೃಢವಾಗಿ ಹೇಳಿದಳು 'ಅವರ ಕಾಹಿಲೆ ಸುದ್ದಿ ಕೇಳಿ ನನ್ನ ಜೀವ ತಳಮಳಿಸುತ್ತಿದೆ.

ಡೊಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ನಾನೆಂತೂ ಹೋಗೋದೇ ನೈ, ತಾಯಿ ಹೇಳಿದಳು:— 'ಬಾಲ್ಯ ಮೈಲು ದೂರ ಕಾಡಿನ ಹಾದಿ; ನೀನು ಹೋಗೋದು ಹೌದೆ? ಬೇಡ ಮಗು. ನಾನೂ ನಾಳೆ ಬರುತ್ತೇನೆ; ನಾಳೆಯೆ ಹೋಗುವ.'

'ನನ್ನ ಸಂಕಟ ನಿನಗೇನು ಗೊತ್ತು ತಾಯಿ. ನನಗೇಕೋ ಭಯವಾಗುತಿದೆ. ಇಂದೆಯೆ ಹೋಗೋಣ ತನಿಯ—ತೋಮರು, ಬೇಕಾದರೆ ಆಜ್ಜಿ—ಹೋಗಲಿ. ನಾವು ಈ ದಿನ ಅಲ್ಲಿಗೆಯೆ ಹೋಗಿ ಬರಬೇಕು. ನಮಗೆ ನಮ್ಮವರೆಂಬವರು ಯಾರು ಇದ್ದಾರೆ? ಹೀಗೆಯೆ ಎಲ್ಲರನ್ನು ಅಲಪ್ಪಿಸಿ—ದುಡಿತ—ದುಡಿತ—ಎಂದು ಕಾಳತರಿ ಹೇಗೆ ಆದೀತು? ಅವರಿಗೆ ಕಾಹಿಲೆಯ ಕಾಲಕ್ಕೂ ನಾವು ಹೋಗಿ ಏನಾದರೂ ನೆರವಾಗಬೇಕೋ ಬೇಡವೊ ಎಂಬುವನ್ನು ವಿಚಾರಿಸದಿದ್ದರೆ ನಾವು ಮನುಷ್ಯರೆ—' ಎಂದು ನೀಲಾ ವಾದಿಸಿದಳು. ಕೊನೆಗೆ ನೀಲಾ ಸೂಚಿಸಿದಂತೆಯೆ ನಿರ್ಧಾರವಾಯಿತು. ಆ ಸಂಜೆ ನೀಲೆಯೂ ಆಕೆಯ ತಾಯಿಯೂ ಈರಪ್ಪನನ್ನು ಕಾಣಲು ತೆರಳಿದರು. ಪಟೇಲರ ಮನೆಗೆ ಬೀರಮ್ಮ (ಮುದುಕಿ) ಮತ್ತು ತನ್ಯ ಇವರಿಬ್ಬರು ಹೋದರು. 'ಆಯ್ಯೋ ಬೀರಮ್ಮ, ನೀನೇಕೆ ಬಂದೆ? ನೀನು ಅಲ್ಲಿಯ ವರೆಗೆ ಹೋದರೆ ಒರುವಾಗ ಹೊತ್ತು ತರುವುದು ಯಾರು? ಅವರೆಲ್ಲೆ?' ಎಂದು ಪಟೇಲರು ಕೇಳಿದರು. ಆಕೆ ಸಮಾಚಾರ ಹೇಳಿ 'ರಶಿಕಲಮ್ಮ ನನ್ನು ನನ್ನ ಜತೆಗೆ ಕಳುಹಿಸಿಕೊಡಿರಿ' ಎಂದಳು. ಪಟೇಲರಿಗೆ ಈ ಮಾತು ಪಥ್ಯವಾಗಲಿಲ್ಲ. 'ಬೋರನ ಮನೆಯವರು ತನ್ನೊಡನೆ ಈಗೀಗ ಜೂಜಾಟಕ್ಕೆ ನಿಂತಿದಾರೆ' ಎಂದೇ ಅವರಿಗಾದ ಅರ್ಥ. ಹೀಗಾಗಿ ಅವರು ಆ ಮುದುಕಿಯನ್ನು ವಾಪಾಸು ಕಳುಹಿ, ತಾವೇ ಸ್ವತಃ ಮಗಳ ಜತೆಗೆ ಹೋಗಿ ಬಂದರು. ಬರುವಾಗ ಬೋರನ ಮೇಲೆ ದೀಗಿಯೆ ಬಂದಿದ್ದರು. ಬರುವಾಗಲೆ ಬೆಂಕ-ಸಿಟ್ಟೇಲು ತಯಾರಿಸಿಯೆ ಇದ್ದ. ಅವನು ರಾಗ ಎಳೆದದ್ದು ಹೀಗೆ:-' ಆ ಬಿನ್ನಾಣಗಿತ್ತಿ ಪೇಟೆಯ ಟೀಚರ್' ಇದ್ದಂತೆ ಇದ್ದಾಳೆ. ಅಬ್ಬಾ ಅವಳ ಗರ್ವವೆ! ಅವಳ ನಡಿಗೆಯೊ—ಅವಳ ಕಣ್ಣೊ—ಅವಳ ತೀವಿ-ಕೇಂಕಾರಗಳೊ! ತಾನು ಭೂಮಿಯ ಮೇಲೋ ಭೂಮಿ ತನ್ನ ಮೇಲೋ ಎಂಬುದೂ ಅವಳಿಗೆ ಸಂದೇಹ! ಅವಳ ಕಾರುಭಾರೋ—ಇತಿಮಿತಿಯಿಲ್ಲದ್ದು. ಮಾನ ಬಿಟ್ಟರೆ ಕಾಸು ಕಾಲಾಣೆ ದೊರೆವುದು ಹೆಚ್ಚೇನೂ ಅಲ್ಲ! ಇನ್ನು ಹೊಯ್ಮಾಲೆಯಲ್ಲಿಯೊ—ಎತ್ತಿದ ಕೈ! ತಾವು ಕೃಪಣರಂತೆ—ನಿರ್ದಯರಂತೆ—ಅವಳ ತಮ್ಮಂದಿರನ್ನು ಸಾಲೆಗೆ ಸೇರಿಸಿದ್ದಕ್ಕೆ ಕೆಚ್ಚಾಗಿ ತಾವು ಜರಿದಿರಂತೆ. ಶ್ಶಿ—ಶ್ಶಿ—ಶ್ಶಿ—ಒಂದೋ ಎರಡೋ ನನಗೆ ಹೇಳಲಿಕ್ಕೆ ಬರುವುದಿಲ್ಲ. ಇವಳಂದಲೆ ಬೋರ ಪೂರಾ ಹಾಳಾದದ್ದು. ತಾವು ಪೇರುತ್ತಾ ಇವತ್ತು ಈರಪ್ಪನನ್ನು ಕಾಣಲೇಬೇಕೆಂದು ಹಟ ಹಿಡಿದು ಹೋದ ಇವಳ ಧೈರ್ಯ ದಿವಾಕರ ಎಷ್ಟರದಾಗಿರಬೇಕು? ಒಟ್ಟಾರೆ ಇವಳ್ಳೆಲ್ಲ ಕಾರಣ ಆಕೆ ಪೇಟೆಯಲ್ಲಿ ಕೆಲಸಕ್ಕಿರುವುದು. ಇಲ್ಲಿ ಕೆಲಸ ಬೇಕಾಗಿಲ್ಲದೆ. ಬೋರನೋ ಇನ್ನು ಹೆಚ್ಚು ದುಡಿಯಲಾರ. ಆ ಬಿನ್ನಾಣಗಿತ್ತಿ ಇಲ್ಲೇ ದುಡಿಯುವಂತೆ ಅಪ್ಪಣೆ ಮಾಡಿದರೆ ಕೊಂಚ ಉಳಿಬಹುದೇನೊ!—'

ಪಟೇಲರು ಮೊದಲೆ ಅರಸಂಜೆ ವಸ್ತು. ಈ 'ಹಿಯರಿಂಗ್' ಇಲ್ಲಿಗೆ ಮುಗಿವೆ ಹೋಯ್ತು. ಜೊಕನ ಕಣ್ಣಿನಲ್ಲಿ ಕಾಮವಾಸನೆಯಿದೆ ಎಂದು ಹೇಳಿದೆ. ಇಲ್ಲಿ ಕೆಲಸಕ್ಕಿರಲಿ ಎಂಬ ಮಾತಿನ ಒಳಗುಟ್ಟು ಇದು. ಅದರ ಸಮಯ ನೋಡಿ ಕಲ್ಲು ಹೊಡೆದಿದಾನೆ. ತನ್ನ ಮಗಳನ್ನು ಗಂಡನಲ್ಲಿಯ ವರೆಗೆ ಬಿಟ್ಟು ಬರಲು ತಾನೇ ಹೋಗಿ ಹೇಳಿ ಬಂದರೂ ಧಿಕ್ಕರಿಸುವಷ್ಟು ಜೋರನ ಧೈರ್ಯ ಬೆಳೆಯಿತಲ್ಲಾ...ಎಂದು ಕೆಂಡವಾಗಿದ್ದ ಸಮಯದಲ್ಲಿ ಜೊಕನ ಮಾತು ಹೌದಾಗಿ ತೋರಿದರೆ ಆಶ್ಚರ್ಯವಿಲ್ಲ! ಇದರ ಪರಿಣಾಮವಾಗಿ ಕೂಡಲೆ ರಾಜಶಾಸನ ಹೊರಟೆ ಬಿಟ್ಟತು. 'ಬೋರ-ನೀಲ ನಾಳೆಯಿಂದ ನಮ್ಮಲ್ಲಿಗೆಯೆ ಕೆಲಸಕ್ಕೆ ಬರಬೇಕು. ಬೇರೆಲ್ಲಿಗಾದರೂ ಹೋಗಬಾರದು' ಎಂದರು ಪಟೇಲರು.

'ಧನಿಯರು ಹಾಗೆಲ್ಲ ಅಪ್ಪಣೆ ಕೊಡಿಸಬಾರದು. ಮಗು ಎಲ್ಲೋ ಒಂದಿಷ್ಟು ದುಡಿದು ಗಂಜಿಪಥ ತರುತ್ತೆ....' ಎಂದ ಬೋರ.

'ಗಂಜಿಪಥ ನಾನೂ ಕೊಟ್ಟೇನು. ಒಟ್ಟಾರೆ ನೀನು ಈಗೀಗ ಬಹಳ ಸೊಕ್ಕಿ ನನ್ನ ಎದೆಯ ಮೇಲೆಯೆ ತುಳಿಯಲು ಕಲಿತಿದ್ದಿ. ಹೀಗೆಲ್ಲ ನನ್ನ ಜಾಗಾದಲ್ಲಿದ್ದೂ ನಡೆಯಲಾರದು ಜೋರ ನಾಳೆಯಿಂದ ನೀಲಾ ಕೆಲಸಕ್ಕೆ ಬರಲೆ ಬೇಕು. ಅಥವಾ ನೀವೆಲ್ಲಾ ಕೂಡಲೆ ಮನೆ ಬಿಟ್ಟು, ಎಲ್ಲಿಗಾದರೂ ಹೋಗಬೇಕು. ಬೇರೆ ಮಾತೇ ಇಲ್ಲ' ಎಂದು ಪಟೇಲರು ಹೊರಟುಹೋದರು.

ಈರಪ್ಪನಿಗೆ ವಿಷಮಶೀತಜ್ವರ. ಆ ಜೀವ ಉಚೆಯೊ ಅಚೆಯೊ ಎಂದು ತನ್ನ ಬಾಳಿನ ನೇಣನ್ನು ಕಾಲನ ಕೈಯಲ್ಲಿ ಕೊಟ್ಟು ಹೊಯ್ದಾಡುವ ಸಂಕಟಪೂರ್ಣ ಚಿತ್ರವನ್ನು ಕಂಡು ಭಾರವಾದ ಹೃದಯದಿಂದ ಮನೆ ಸೇರಿದಾಗ, ಇಲ್ಲಿ ಬೇರೆಯೆ ಒಂದು 'ವಧಶಾಸನ' ನಿರ್ಮಾಣವಾಗಿತ್ತು. ದೇವರು—ಅದೃಷ್ಟ—ಯಜಮಾನರು—ಎಲ್ಲರೂ ತಮ್ಮ ಕುಟುಂಬದ ಗೋರಿ ಮಾಡುವ ಹಾದಿಗೆಯೆ ತಿರುಗಿದರೆಂದು ಭಾವಿಸಿ ನೀಲಾ ಉರಿದು ಹೋದಳು. ಅವರಿ ಅನೇಕ ದಿನ—ಮಾಸ—ವರುಷಗಳಿಂದ ಬೆಸುಗೆ ಬಿದ್ದ ಶಾರದಾಬಾಯಿಯವರ ಚಾಕರಿಗೆ 'ಒಲ್ಲೆ' ಎನ್ನುವುದು ಸಾಧ್ಯವಿಲ್ಲದ ಮಾತಾಗಿತ್ತು. ತನಗೆ ಆಶ್ರಯವಾಗಬಹುದಾದ ಜೀವನದ ಭವಿಷ್ಯ ಎಂಥದೋ ಎಂಬ ಚಿಂತೆ ಬೇರೆ. ಹೀಗೆಲ್ಲ ಗೊಂದಲದ ನಡುವೆ ನೀಲಾ ಅರಿವುಗೆಟ್ಟು ಹೋದಳು. ಅದರೆ ಧನಿಯರ ಬಯಕೆಯಂತೆ ಶಾರದಾಬಾಯಿಯವರನ್ನು ತ್ಯಜಿಸಿ ಧನಿಯರ ಮನೆಯಲ್ಲಿ ಆಕೆ ನಿರಾಕರಿಸಿದಳು.

ದುಡಿವವರ ಶ್ರಮಕ್ಕೆ ಏನಿಲ್ಲವೆಂದರೂ ದಯೆ—ಸಹಾನುಭೂತಿ—ಕೃತಜ್ಞತೆ—ಇವಾದರೂ ಸೌಲ್ಯವಾಗಿ ಸಲ್ಲಬೇಕೇ ಬೇಡವೆ? ಎಲ್ಲರನ್ನೂ ಸಮಭಾವನೆಯಿಂದ 'ಆತ್ಮವತ್' ಕಾಣುವ ಕಣ್ಣು ಇದ್ದರೆಯೆ ಇದು ಸಾಧ್ಯ. ಪಟೇಲರ ಸಂಸ್ಕಾರಕ್ಕೆ ಇದು ತಿಳಿದೆ ಇಲ್ಲ. ಈ ಪರಿಸ್ಥಿತಿಯಿಂದ ಬೋರನೂ ಕೊಂಚ ಕರಳಿದ್ದಾನೆ. 'ಮಗಳ ಮಾತು ಸರಿ' ಎಂದು ಅವನೂ ತೀರ್ಮಾನಿಸಿದ್ದಾನೆ!

೫

ಅದರೆ ಈ ಸಂದರ್ಭ, ಮೈಗೆ ವಿಷವೇರಿದಂತೆ—ಕಾಡಿಗೆ ಕಿಚ್ಚು ಹಬ್ಬಿದಂತೆ—ಬಹು ಬಿಕ್ಕಟ್ಟನ್ನು ತಂದು ನಿಲ್ಲಿಸಿತು. ತನ್ನ ಮಾತಿಗೆ ಮೊಕೆತ ಧಿಕ್ಕಾರದಿಂದ ಪಟೇಲರು ರೊಚ್ಚಿಗೆದ್ದರು. 'ಜೋರ ಅವಿಧೇಯನಾಗಿದಾನೆ. ನೀಲಾ ಇದಕ್ಕೆ ಕಾರಣ. ಪರಿಸ್ಥಿತಿಯನ್ನು ಹೀಗೆಯೆ ಬಿಟ್ಟರೆ ಕೆಲಸ ಕೆಡುತ್ತೆ. ಇವರನ್ನು ಈಗಲೆ ಮರ್ದಿಸಬೇಕು

ಒಂದೊ ತನ್ನ ಜಾತಿನಂತಿ ನಡಯಲಿ—ಇಲ್ಲವೆ ಈಗಲೆ ಹೊರಟು ಹೋಗಲಿ' ಎಂದು ಅವನು ಫೀರ್ಮಾನಿಸಿ ಬಿಟ್ಟಿರು! ಈ ಬಗೆಯ ಸಕಾರಣವಲ್ಲದ ವೈಷಮ್ಯದಿಂದಾಗಿ, ಅನೇಕ ದಿನಗಳಿಂದ ಬೇಳೆಗಟ್ಟಿಳೆ ಬೆವರು ಸುರಿಸಿ ದುಡಿದ ದುಡಿತ ಕೂಡಾ ಕಷಪಡಾರ್ಥವಾಗಿ ಹೋಯಿತು. ಅರೆಹೊಟ್ಟೆ — ಅರೆಬಟ್ಟೆಯಾದರೂ ಮೈಮುರಿದು ದುಡಿದು, ನೋವಿನಲ್ಲಿಯೆ ಆಯುಷ್ಯದ ಅನಂತ ಕ್ಷಣಗಳನ್ನು ಸವೆಯಿಸಿದ ಆ ದರಿದ್ರ ಪಾಪೋದರನ ಮೇಲೆಯೆ ಪಟೇಲರ 'ಗದಾಪ್ರಹಾರ' ವಿದ್ಯೆಯ ಪ್ರದರ್ಶನ! ಇದಕ್ಕೇನೆನ್ನಲಿ? ಜಳಲೆ? ಸಗಲೆ? ಕೋಪಿಸಲೆ? ಒರಿಯ ಇಷ್ಟೆ ಕಾರಣದಿಂದ ಇಂದು ಈ ಕುಟುಂಬ ಅಲ್ಲಿಂದ ಹೊರಹಾಕಲ್ಪಟ್ಟಿದೆ! 'ನಾಯಿಗಳು, ಕತ್ತೆಗಳು, ಅಧಮರು, ನೀಚರು, ಕೃತಘ್ನರು. ನೀವು ಹೊಳೆಗೆ ಬಿದ್ದ ಸಾಯಿರಿ. ಇಲ್ಲಿ ನನ್ನ ಮಣ್ಣಿನಲ್ಲಿ ನಿಮ್ಮ ಹೆಣವೂ ಇರಬಾರದು—!' ಎಂದು ಇದುವರೆಗೂ ತನ್ನ ಸೇವೆ ಮಾಡಿದ ಸೋದರ ಕುಟುಂಬದ ಬಗ್ಗೆ ಕಟುತ್ತೆಯನ್ನಾಡಿ ಹೊರಹಾಕಿದಾರೆ ಪಟೇಲರು. ಇವರ ಮಣ್ಣಿನಲ್ಲಿ ಒರಲೇಬಾರದಂತೆ? ಈ ಮಣ್ಣು ಈ ನೆಲ ಯಾರದೊ? ಅವರೂ ಅಂಥ ದುರಭಿಮಾನ! ಈ ಕುಟುಂಬಕ್ಕೆ 'ಅಯ್ಯೊ—ಹೀಗಾಯಿತೆ ಬಾ' ಎನ್ನುವವರಿಲ್ಲ. ಸ್ವಂತದ್ದು ಎಂದು ಒಂದಂಗುಲ ಜಾಗವೂ ಇಲ್ಲ. ನಾಳೆಯ ಗಂಜಿಗೂ ದಾರಿಯಿಲ್ಲ. ಎಲ್ಲಿಗೆ ಹೋಗಲಿ ಎಂಬ ಚಿಂತೆ—ಅಪ್ಪಾ ದೇವರೆ, ನಾವು ಇಷ್ಟು ಕಷ್ಟಪಟ್ಟರೂ ಹೀಗಾಯಿತಲ್ಲಾ ಎಂಬ ಆಂತರ್ದಾಹ—ಈರಪ್ಪ ಏನಾದನೋ ಎಂಬ ಒಳಕುದಿ—ಇವುಗಳಿಂದ ಆ ಬೋರ—ಅವನ ಕುಟುಂಬ ಕ್ಷಿಪ್ತವಾಗಿ ಹೋಗಿದೆ. ಇವರನ್ನು ಅಡವಿ ಪಾಲು ಮಾಡಿ ಪಟೇಲರು ಯಾವ ಪುಣ್ಯವನ್ನು ಸಾಧಿಸಿಕೊಂಡರೊ? ಅಥವಾ ಆ ಗುಡಿಸಿಲಿಗೆ ಹೀಗೆಯೆ ಕಷ್ಟಪಡಿಸಲು ಇನ್ನಾವ ಕುಟುಂಬವನ್ನು ಆಹ್ವಾನಿಸುವರೊ? ಕೇವಲ ನುಡಿದೇ ಗೊತ್ತಿದ್ದು—ಮುಂದೇನು ಎಂಬುದರ ಯಾವ ಕಲ್ಪನೆಯೂ ಇಲ್ಲದ—ಈ ಸಂಕಟಾಪನ್ನ—ಅಜ್ಞಾನಿ—ಕುಟುಂಬವನ್ನು ನೋಡಿ ನಾನೂ ರಾಜುವೂ ಬಹುವಾಗಿ ನೊಂದುಕೊಂಡೆವು. 'ಇನ್ನೇನು ಮಾಡುವಿ ಬೋರ?' ಎಂದು ಕೇಳಿದರೆ 'ನದಿಗೆ ಬಿದ್ದು ಸಾಯಿರಿ' ಎಂದು ನನ್ನ ದಣಿ ದಾರಿ ತೋರಿದಾರಲ್ಲ' ಎಂದು ಅತ್ತುಬಿಟ್ಟ. 'ಯಾರಾದರೂ ಪುಣ್ಯಾತ್ಮರು ಇರಲು ಜಾಗ ಕೊಟ್ಟರೆ—ಗಂಜಿಯನ್ನು ನಾನು ಹೇಗಾದರೂ ತಂದೇನು. ನನ್ನ ಈರಪ್ಪನನ್ನು ದೇವರು ನನಗೆ ಕೊಟ್ಟರೆ—ಈ ಮಕ್ಕಳು ದೊಡ್ಡವಾದರೆ—ಮುಂದೇನಾದರೂ ಆದೀತು' ಎಂದು ಸೀತಾ ಆಸೆ ಕಟ್ಟಿಕೊಂಡಿದಾಳೆ. ತನ್ನ ತಾಯಿದಮ್ಮನ ಮನೆಗೆ ಹೋಗಿ ಜಾಗವುಟೇ ನೋಡಬೇಕು ಎಂದು ಅವಳ ಹಂಬಲ! ಬಡವರಾದರೂ ಮಾನಸಬೆಂಬಲವಿದೆ. ಈಗ ಎಲ್ಲ ಕಟ್ಟಿಕೊಂಡು ಬೀದಿಗೆ ಬಂದರೆ ಅವರಿಗೆ ನಾಚುಗೆಗೆ ಆಗುತ್ತದಂತೆ. ಅದಕ್ಕಾಗಿ ಕತ್ತಲಾಗುವುದನ್ನು ಅವರು ನಿರೀಕ್ಷಿಸುತ್ತಿದ್ದರು. ಆ ದಾರಿಯಲ್ಲಿ ಒಂದೊಂದು ಜನ ಆಚೆ ಈಚೆ ತಿರುಗುತ್ತಿದ್ದರೆ. ಆದರೆ ಈ ಕುಟುಂಬದ ವಿಚಾರ ಯಾರೂ ಮಾತೇ ಆಡಿಲ್ಲವಂತೆ. 'ಯಾರಿಗೆ ಯಾರುಂಟು.....' ದಾಸರಾಯರು ಹಾಡಿದ್ದು ಸತ್ಯ! ಆ ಮುದುಕಿ ಹೇಳುತ್ತ :—'ನಾನು ಹೇಗೂ ನಾಳೆಯೊ ನಾಡಿದ್ದೊ ಸಾಯುವವಳು; ಈ ಮಕ್ಕಳು ದೊಡ್ಡವಾದರೆ ಏನಾದರೂ ಆಗುತ್ತೆ. ಈರಪ್ಪ ಈಗ ಇಲ್ಲಿದ್ದರೆ ಎಷ್ಟೋ ಚೆನ್ನಾಗಿತ್ತು. ನಾವು ಪಾಪಿಗಳು ಈ ಸಮಯಕ್ಕೆ ಅವನಿಗೂ ಜ್ವರ! ನಾನು ಹುಟ್ಟಿ ಇಷ್ಟು ವರುಷ ಪಾಯಿತು ಸ್ವಾಮಿ. ನಮ್ಮ ಯಜಮಾನರಷ್ಟು ಕೋಪ ಯಾರಿಗೂ ನೋಡಿಲ್ಲ ಎಲ್ಲಾ ನಮ್ಮ ಸ್ಯಾರಬ್ದ!'

೬

ರತ್ನ ಕತೆಯನ್ನು ಹೀಗೆ ಮುಗಿಸಿ ನನ್ನ ತುಳಸಿಯ ಕಡೆಗೆ ನೋಡಿದಾಗ—ಕುರ್ಚಿಗೊರಗಿಕೊಂಡು ಭೀಷಾಗಿ ನಿದ್ದೆಮಾಡುತ್ತಿದಾಳೆ! 'ಸ್ಸಾರಿ! ಕತೆ ಕೇಳೋದಿಕ್ಕೆ 'ಅನ್ವಲ' '—ಬೇಷಾದ ಜನ!' ಎಂದೆ ನಾನು. ಎಷ್ಟಾದರೂ ಹೆಂಗುಸರು ಬುದ್ಧಿವಂತರು. ಅವಳು ಹೇಳಿದಳು:—'ಯಾರು ನಿದ್ದೆ ಮಾಡಿದಾರೆ? ರತ್ನಣ್ಣ! ಮುಗಿಯತಾ? ಅವರಿಲ್ಲಿಗೆ ಹೋದರು ಕೊನೆಗೆ? ಈಗ್ಲೂ ಅಲ್ಲೇ ಆಲದ ಮರದಡಿಯಲ್ಲಿಯೆ ಇದ್ದಾರೆಯೆ?' ಎಂದು ಪ್ರಶ್ನಿಸಿದಳು.

ರತ್ನ ಮುಂದುವರೆಯಿಸಿದ: 'ಆ ಬಡಪಾಯಿಗಳನ್ನು ಅಲ್ಲೆ ಬಿಟ್ಟು ಬರಲು ಯಾವನ ಕರಳು ಒಪ್ಪೀತು? ಆಲದ ಮರಕ್ಕೆ ಕೂಡಾ ಅಳು ಬರಬಹುದಾದಂಥ ನೋಟ ಅದು! ರಾಜುವಿನ ಗೆಳೆಯನ ಜಾಗೆಯಲ್ಲಿ ಖಾಲಿ ಮನೆಯೊಂದು ಇತ್ತು. ಸದ್ಯ ಅವರನ್ನು ಅಲ್ಲಿಗೆ ಸಾಗಿಸಿದೆವು. ಈಗ ಅಲ್ಲಿದಾರೆ. ಮುಂದೇನು ಮಾಡುವರೋ ಗೊತ್ತಿಲ್ಲ. ಹೀಗಾಗಿ ಇಂದು ಬರುವಾಗ ವೇಳೆಯಾಯಿತು. ರಾಮು! ಇದನ್ನೆಲ್ಲ ನೋಡಿ ನನ್ನ ಮಿದುಳು ಕಾವೇರಿದೆ—' ಹೀಗೆನ್ನುತ್ತಿರುವಾಗಲೆ ರಾತ್ರಿ ಎರಡು ಬಡಿದು ಕಾಲ ನಮ್ಮನ್ನೆಚ್ಚರಿಸಿತು!

ಇನ್ನೂ ಕತೆ ಕೇಳುತ್ತ ಕುಳಿತುಕೊಳ್ಳುವ ತಾಳ್ಮೆ ನನಗುಳಿದಿಲ್ಲ!!


| | | |
|---|---|---|
| ಮುಸಲ್ಮಾನರ ಆಳಿಕೆ | (ಪಳಪೇಟೆ) | ೦— ೮—೦ |
| ಹತ್ತಿ ತರಳಿ ಜಂತ್ರಿ | | ೨— ೮—೦ |
| ಚಾಲುಕ್ಯರ ಪುಲಿಕೇಶಿ | | ೧— ೦—೦ |
| ಸಂತಾನ ಶಾಸ್ತ್ರ | | ೧— ೪—೦ |
| ಬೃಹತ್ಕಚರ್ಯ ಬಲಿಸೃಷ್ಟಿ | | ೦—೧೦—೦ |
| ಕೆರಾತಾರ್ಜುನೀಯ ಸಾರ | | ೧— ೦—೦ |
| ಮಹಾತ್ಮಾ ಗಾಂಧಿ ಸ! ಚರಿತ್ರ. | | ೧— ೬—೦ |
| ತರುಣ ಪತ್ನಿ | | ೦— ೮—೦ |
| ಕಲಿತರೆ ಹೀಗೆ ಕಲಿಯಬೇಕು. | | ೦— ೫—೦ |
| ಎಲ್. ಎಲ್. ಬಿ. | | ೦—೧೦—೦ |

ಇದು ಅಲ್ಲದೆ ಶಾಲೆಗೆ ಬೇಕಾಗುವ ಪ್ರತಿಯೊಂದು ಪುಸ್ತಕ ನಮ್ಮಲ್ಲಿ ಸಿಗುವುದು. ಬೇಕಾದರೆ ಬರೆಯಿರಿ.

**ವಾಗ್ವಿಲಾಸ ಬುಕ್‌ಡಿಪೋ, ಧಾರವಾಡ**

# ಸಾಹಿತ್ಯ ಮತ್ತು ಪ್ರಗತಿ

( ಉತ್ತರಾರ್ಧ )

ಪ್ರೊ. ರಾ. ಯ. ಧಾರವಾಡ, ಎಂ. ಎ.

ಕೆ. ಇ. ಬೋರ್ಡ್ಸ್ ಆರ್ಟ್ಸ್ ಕಾಲೇಜ್, ಧಾರವಾಡ.

ಹೊಸಗನ್ನಡ ಸಾಹಿತ್ಯವಿಭಾಗಗಳಾದ ಕಾದಂಬರಿ, ಕತೆ, ಭಾವಗೀತ, ಪ್ರಬಂಧ, ವಿಮರ್ಶೆ, ಶಾಸ್ತ್ರೀಯ ವಿಷಯ, ಚರಿತ್ರೆ ಎಲ್ಲವೂ ಸ್ರಗತಿಯ ದೃಷ್ಟಿಯನ್ನೂ ಜಾಗೃತಿಯನ್ನೂ ಸೂಚಿಸುತ್ತವೆ.

ಸಾಹಿತ್ಯದಲ್ಲಿಯ ಪ್ರಗತಿ ಹಳಗನ್ನಡಕ್ಕಿಂತ ಹೊಸಗನ್ನಡದಲ್ಲಿ ಬರಿಯ ಮತಗಳಿಗೂ ಆವುಗಳ ಹೆಗ್ಗಣಗಳಿಗೂ ಆಶ್ರಯ ಕೊಟ್ಟಿದೆಯೆಂಬುದೂ ಬಿರುಸು ನುಡಿ "ಪಾವನ ಪಾವಕಿ" "ಪಾರಸಿಕೆರು" "ಅಶ್ವತ್ಥಾಮನ್" ನಂತಹ ವೀರ 'ಗ್ರಾಂಥಿಕ' ಪ್ರಯೋಗಗಳು ಅಲ್ಲಲ್ಲಿ ಇರಬಹುದಾದರೂ, ಹೊಸಗನ್ನಡ ಸಾಹಿತ್ಯದ ಮೂಲಸ್ಫೂರ್ತಿ ಕಾಯ್ನೆಲದಿಂದ ಬಂದಿದೆ. ಇಂದು ಕವಿ ಜಾಗೃತನಾವಸ್ಥೆ ಯಾವ ಕಾಲದಲ್ಲೂ ಆಗಿರಲಿಲ್ಲ. ಹೊರಗಿನ ಬಿಸಿಲು-ಬೆಳಕನ್ನು ನೋಡಿದ್ದಕ್ಕೆ ಇಂದಿನ ಸಾಹಿತ್ಯದ ರೂಪವೈವಿಧ್ಯಗಳೇ ಸಾಕು. ಕಾದಂಬರಿ, ಕತೆ, ಭಾವಗೀತ, ಪ್ರಬಂಧ, ವಿಮರ್ಶೆ, ಶಾಸ್ತ್ರೀಯ ವಿಷಯ, ಚರಿತ್ರೆ—ಎಲ್ಲವೂ ಈ ಹೊಸದೃಷ್ಟಿಯನ್ನೂ ಜಾಗೃತಿಯನ್ನೂ ತೋರಿಸುತ್ತವೆ.

ಪುರಾಣ ಕಾವ್ಯವು ಇಂದು ಬಹುಮಟ್ಟಿಗೆ ಪ್ರದರ್ಶನದ ವಸ್ತುವಾಗಿದೆ. ಪಾಶವೀ ನರಮೇಧ, ಶೃಂಖಲಿತ ಭಾರತ, ಕಂಗೆಟ್ಟ ಕನ್ನಡ, ಒಡವರ ಬಾಳು, ಪತಿತರ ಪಾಡು, ನೈತರ ಗೋಳು, ಕಾರ್ಮಿಕರ ಕಳವಳ—ಎಲ್ಲವೂ ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆದಿವೆ. ಸಮಾಜದ ಮಧ್ಯಮವರ್ಗದಿಂದಲೆ ಹೆಚ್ಚಾಗಿ ಸಾಹಿತಿಗಳು ಬಂದದ್ದರಿಂದ, ಸ್ವಾಭಾವಿಕವಾಗಿ ಮಧ್ಯಮವರ್ಗದ ವಿಮರ್ಶೆಯೇ ಹೆಚ್ಚಾಗಿ ಕಂಡುಬರುತ್ತದೆ.

ಈ ವರ್ಗದಲ್ಲಿಯ ಸಮಾಜದ ದಂಭ-ದುರಾಚಾರಗಳ ಉಚ್ಚಾಟಕರಾಗಿ ಶ್ರೀರಂಗ, ಕೈಲಾಸಂ, ಕಾರಂತರು ಸಿದ್ಧರಿದ್ದಾರೆ. ಚಿತ್ಕಳಾನಿಲ್ಲದೆ ಜನಿವಾರದ ಸರ್ಟಿಫಿಕೇಟಿನಿಂದಲೇ ಸ್ವರ್ಗಕ್ಕೆ ಟಿಕೇಟು ಕೊಟ್ಟಿನಿಂತ ತಾತಾಚಾರಿ, ಮುನಿಸಿಪಾಲಿಟಿ ಯಶಸ್ವಿಗಾಗಿ ಯಾವ್ದು. ಕಕ್ಕೂ ಸಿದ್ಧರಿದ್ದ ರಾಯರು, ಲಂಚನಿಗೂ ಮುದ್ದತು ಕೇಳುವ ಸಾಗಿ, ಕಲಿತು ಹೊಟ್ಟೆಗಿಲ್ಲದೆ ಸರ್ಕಸ್ಸಿನ ಪ್ರದರ್ಶನವಸ್ತುವಾಗಿ ಹೊಟ್ಟೆಹೊರೆಯುವ 'ಸರಸ್ವತಿ', ನಿರಾಹಾರವ ಗೋಳು—ಎಲ್ಲವೂ ಸಮಾಜದ ಕಾಲುಷ್ಯವನ್ನು ಹೊರಗೆಳೆಯುತ್ತಿವೆ. 'ಈ ಭೂಮೀ ಸಲಿ ಇರುವುದಕ್ಕೆ ನಾವು ದೇವರಿಗೆ ಕೊಡುವ ಬಾಡಿಗೆ ಎಂದರೆ ನಿಟ್ಟು ಜನಕ್ಕೆ ಉಪಯೋಗ ಬೀಳುವುದು' ಎಂದು ಗುಂಡುರಾವ್.

ಕಾದಂಬರಿ ಪ್ರಪಂಚದಲ್ಲಂತೂ ಮಧ್ಯಮವರ್ಗದ ಸಾವು ನೋವುಗಳಲ್ಲದೆ ರೈತರ ಮತ್ತು ಕಂಗೆಟ್ಟವರ ಬಾಳೂ ಬಂದಿದೆ. ಅಂತರ 'ಸೂಳೆಯ ಸಂಸಾರ,' 'ಜೋಗುಳ ಮಡಿ' 'ಬೆಟ್ಟದ ಜೀವ'—ಬೇರೆ ಬೇರೆ ಜೀವನದ ಚಿತ್ರಗಳು. ಇನ್ನೂ ಅನೇಕ ಉದಾಹರಣೆಗಳನ್ನು ಹೇಳಬಹುದು.

ಲಘುಕಥಾಪ್ರಪಂಚದಲ್ಲೂ ಕೂಡ ಈ ಕಂಗಾಲದ ಬೆಂಕಿಯ ನಾಲಗೆಯ ದೃಶ್ಯ ಕಂಡು ಬರುತ್ತದೆ. ನಿಜ; ಕನ್ನಡ ಸಣ್ಣಕತೆಗಳಲ್ಲಿ ಪ್ರೀತಿಯ ವಿಷಯ ಹೆಚ್ಚಾಗಿ ಬಂದಿರಬಹುದು, ಆದೂ ಸ್ವಾಭಾವಿಕ; ಮಾನವಸಹಜ. ವಿಶ್ವಮೋಹದ ಮೂಲಕವಾಗಿಯೆ ಹೆಂಡಿರನ್ನೂ ಮುದುಕಿಯನ್ನೂ ತೀರ ಬಿಟ್ಟುಬಿಟ್ಟ ಉದಾಪರಣೆಯನ್ನು ಕೇಳಿಲ್ಲವಷ್ಟೇ? ಅಂಥ ಕಥೆಗಳು ಇನ್ನು ನಿಯಮದ ಅಪವಾದಗಳು. ಹಾಗೆ ನೋಡಿದಲ್ಲಿ ಎಂತಹ ಆಘಾತ-ಪ್ರತ್ಯಾಘಾತಗಳು ಒದಗಿದರೂ ಅಗಾಧವಾಗಿ ಪ್ರೇಮಮಯವಾಗಿ ಸಾಗಿರುವುದೇ ಜೀವನದ ಗೂಢವೆಂದು ಕಾಣುತ್ತದೆ. ಪರಮಾತ್ಮನು ಮಾನವನ ಹೃದಯದ ಆಳವನ್ನಳೆದೆ ಉದ್ವೇಗಗಳನ್ನು ಮೆಚ್ಚನೆಂದು ಮಹಾಕವಿ ವಿಲ್ಟನ್ ಹೇಳಿದ್ದಾನೆ. ಜೀವನವೂ ಹಾಗೇ ಎಂದು ಕಾಣುತ್ತದೆ. ಈ ಅನಂತವಾಹಿನಿಯಲ್ಲಿ ಇಂಥ ವಿಪ್ಲವಗಳು ಅಲ್ಲೋ ಇಲ್ಲೋ ನೋವಯಾಗಿ ಹುಟ್ಟಿ ಒಂದು ಕ್ಷಣ ತೆರೆಯ ಹೆಡೆಯಲ್ಲಿ ಅಡಿ, ಪುನಃ ಲಯಹೊಂದುವ ಹಾಗೆ ಕಾಣುತ್ತದೆ. ಕೊನೆಗೆ ನಿಲ್ಲುವುದು ಪುನಃ ಮಾನವೀಯತೆಯ ಮೂಲ ಭಾವನೆಗಳೇ ಹೊರತು ಬುದ್ಧಿಯ ಈ ನೆಲಲು-ಬೆಳಕಾಟವಲ್ಲವೆಂದು ಕಾಣುತ್ತದೆ. ಹಾರ್ಡಿ ಕವಿಯು ಇಂತಹ ಒಂದು ಸಂದರ್ಭದಲ್ಲಿಯೇ ಒಂದು ಸುಂದರವಾದ ಭಾವಗೀತೆಯನ್ನು ಬರೆದಿದ್ದಾನೆ. ಮಹಾಯುದ್ಧದ ಆರ್ಭಟೆ ನಿಂತು ಶಾಂತಿ ತನಿನುಳಿಯಾಗಿ ಸುರಿದಾಗಿನ ವರ್ಣನೆಯಿದು:

> "Yonder a maid and her night
> Come whispering by; wars annals
> Will cloud into night ere their
> Story die."

ಅವನ ಪ್ರಕಾರ ಕೊನೆಗೆ ನಿಲ್ಲುವುದು—ಮಾನವ ಪ್ರಣಯ—ನಿರಂತರ ಪ್ರಣಯ—ಹೆಣ್ಣುಗಂಡಿನ ಜೆಲುವು. ಇದು ಶಿಲಾಸ್ಪಿಪ್ತಾಕ್ಷರ; ಉಳಿದ ದೆಲ್ಲ ಜಲಲಿಪಿ. ಈ ದರ್ಶನ ಕೊನೆಯದಿರಲಿ ಬಿಡಲಿ; ಆದರೆ ಕನ್ನಡ ಕತೆಗಾರರಿಗೆ ಇದೊಂದರಿಂದ ಮಾತ್ರ ಕಲ್ಲೆಸೆಯುವುದು ಸರಿಯಾಗಲಿಕ್ಕಿಲ್ಲ

ಇವನ್ನು ಳವರೂ ಬೇರೆ ಬೇರೆ ವರ್ಗದ ಜೀವನವನ್ನೂ ಸಮಸ್ಯೆಗಳನ್ನೂ ಕನ್ನಡ ಕತೆಗಳಲ್ಲಿ ಕಾಣುತ್ತೇವೆ. "ಗಂಗೆಯ ಗುತ್ತಿಗೆ" ಅಗಸರ ಜೀವನವನ್ನು ತೋರಿಸಿದರೆ, ದಿವಂಗತ ವಾಸುದೇವಾಚಾರ್ಯರ "ಮುಲ್ಲೀತಿಯ ನಲ್ಲೆಯರು." ಒಕ್ಕಲು ಜನರ ಪರ್ವ-ಉತ್ಸವಗಳನ್ನು

ತೋರುತ್ತದೆ. 'ಭಟ್ಟರ ಬಂದಾ' ಒಂದು ಸುಂದರ ಜೀವನಚಿತ್ರ. ಉಪಕಾರದ ಹೊರೆಯನ್ನು ತಾಳಲಾರದೆ ತನ್ನ ದಾರಿಯನ್ನೇ ಹಿಡಿಯಲು ಯತ್ನಿಸಿದ 'ಮೋಚಿ'ಯ ಕತೆ ಸುಂದರ ವಾಸ್ತವಚಿತ್ರವಾಗಿದೆ. ರಾಜಕೀಯ ಅಪರಾಧಕ್ಕಾಗಿ ಜೇಲಿಗೆ ಹೋಗಿ ಬಂದ ರಾಜ ಸಂಪ್ರದಾಯವಂತ "ಮುದುಕಿ" ತಾಯಿಯ ಕಣ್ಣಲ್ಲಿ ಪತಿತ. ಆನಂದ-ಕಂದರ ಕಥೆಗಳಂತೂ ಬಡತನದ—ದೈತರ—ಉದ್ದಿಮೆಗಾರರ ಉರಿಯುವ ಚಿತ್ರಗಳಾಗಿವೆ ಇವರ ಬಹುಮಟ್ಟಿನ ಚಿತ್ರಫಲಕ ಇಂತಹ ದೈತರ ಸಮಸ್ಯೆಗಳಿಂದಲೇ ತುಂಬಿದೆ. ಅಕ್ಕಿ ಮತ್ತು ನೀರನ್ನ ಕೂಡಿಸಿಟ್ಟರೆ ಐದು ನಿಮಿಷದಲ್ಲಿ ಅನ್ನವಾಗಬಹುದಾದ ವಿಜಯಪುರ ಜಿಲ್ಲೆಯಲ್ಲಿ, ಹೊಟ್ಟೆ ಬೆನ್ನಿನ ಬೆನ್ನನ್ನು ಸೇರುವಂತೆ ಬೇರೊಬ್ಬರ ಸುಖಕ್ಕಾಗಿ ದುಡಿಯುತ್ತಿದ್ದ ಸಾತಮ್ಮ-ಲಿಂಗಪ್ಪರಿಗೆ ಗಡಿನಿನಲ್ಲಿಯ ಎಂಡು ಬಾಳಿಯ ಗೊನೆಗೂ ಅಧಿಕಾರವಿಲ್ಲವೇ? ಅದು ಯಾವ ಕಾರಣಕ್ಕಾಗಿ?... ಅಥವಾ ಈ ಉರಿನಾಡಿನಲ್ಲಿ ರಾಯರಿಗೆ "ಮಾಲ್ಕಿಹಕ್ಕು" ದೊರೆತಾಗಿದರೂ ಎಂತು? "ಹಿಂದೆ ಎಂದೋ ಒಂದು ಕಾಲದಲ್ಲಿ ನಮ್ಮ ಪೂರ್ವಜರು ಸ್ವಾತಂತ್ರ್ಯಪ್ರೀತಿಯ ದಾಯಾದಿಯೊಬ್ಬನನ್ನು ಸೆರೆಹಿಡಿದು ಕೊಟ್ಟದ್ದಕ್ಕಾಗಿ" ಹಾಗೆಯೇ "ಮಲ್ಲಮ್ಮನ ಮುಪ್ಪಾ ಭಾರತ"— ಬಾಳ ದುಃಖಕ್ಕೆ ಯಾವಾಗಲೂ ಕರ್ಣಪರ್ಯವಸಾನವೇ ಆಗಲಿ ಅಥವಾ ದ್ರೌಪದೀ ಪರಿಭವವೇ ಆಗಲಿ ಬೇಕಿಲ್ಲ; ಈ ದುರಂತತೆಯ ಕರಾಳ ಮುಖ ನಮ್ಮ ಜೀವನದ ಪ್ರತಿಕ್ಷಣದಲ್ಲೂ ಕೇಕೆ ಹಾಕಿ ನುಂದು ನಿಲ್ಲುತ್ತದೆ. ಜೀವನದಲ್ಲಿ ಪ್ರತಿದಾರಿಯ ಕೊನೆಗೂ ಕಣ್ಣೀರ ಕಾಲುವೆಯನ್ನು ಕಾಣಲು ಕಷ್ಟಪಡಬೇಕಿಲ್ಲ.... ರುದ್ರಪ್ಪನ ಕೀಜಕವೃತ್ತಿಗೆ ಬೇಸತ್ತು, ಅವನ ಕಾಗೆದೃಷ್ಟಿಗಾಗಿ ನೊಂದು, ಗಂಡನಿಗೆ ಭಾರವಾಗದೆ ತನ್ನ ಬಾಳ ಕತೆಯನ್ನು ಮುಗಿಸಿದ ಚೆಲುವೆ—ಕಾಶಿಯ ಚತ್ರಿ ಮಲ್ಲಮ್ಮನದೂ ಒಂದು ಮಹಾಭಾರತವೇ. ಕೆಲಕಾಲದ ಹಿಂದೆ ಸಾರ್ವಭೌಮನಾಗಿ ಮೆರೆದ ಜಾಂಡರ ಜಾನಪ್ಪನು ಗಿರಣಿಗಳ ಮೂಲಕ ತನ್ನ ಉದ್ಯೋಗವೆಲ್ಲ ನಷ್ಟವಾಗಿ ಅಲೆಯುವುದೂ ಒಂದು ಮನಕರಗಿಸುವ ಚಿತ್ರ. ಕಲೆಕ್ಟರರಾಗಬೇಕೆಂಬ ಹಂಬಲದಿಂದ ಕಿರುದಾರಿ ಹುಡುಕಿ ತೆಗೆದ ಅಕೀಪ್ರಹಾರದ ನಾಗೇಂದ್ರರಾಯರು ತಮ್ಮ "ಮಮತೆಯ ಮುಡಿಪನ್ನೇ" ಸಲ್ಲಿಸಬೇಕಾಗುತ್ತದೆ. ಈ ಕ್ರೂರವಾದ ಅರ್ಪಣೆ ಇಂದಿನ ರಾಜಕೀಯದಲ್ಲಿ ಪಾಪವೀ ಜೀವನದ ಚಿತ್ರವಾಗಿದೆ. ರಂಗನಾಥರ "ಕೂಟಪ್ರಶ್ನೆ" ನಿರುದ್ಯೋಗದ ಜ್ವಾಲಾಮುಖಿಯಾಗಿದೆ. .... .... ಸಾವಿರಾರು ಉದಾಹರಣೆಗಳನ್ನು ಹೇಳಬಹುದು. ..... ..

ಕವಿತೆಗಳಲ್ಲಂತೂ ಹೊಸದೃಷ್ಟಿ, ತುಂಬಾ ಕಂಡುಬರುತ್ತದೆ. ಚಂಪು-ಷಟ್ಪದಿಗಳಂದ "ಶರಧಿಗೆ ಕೊಡದಿರು ಷಟ್ಪದಿಯ ದೀಕ್ಷೆಯನು" ಎಂದು ಸ್ವಚ್ಛಂದಛಂದಕ್ಕೆ ತಿರುಗಿದ ರಚನೆಯೇ ಈ ದೃಷ್ಟಿಯ ದೃಷ್ಟಾಂತವಾಗಿದೆ .... "ಮಳೆ ಬೀಳುತಲಿತ್ತು" "ಸಾಂಬ ಶಿವಾಹರ" "ಪತಿತ"— ಇವೆಲ್ಲ ಪತಿತರ ಮತ್ತು ಭಿಕ್ಷುಕರ ಜೀವನವನ್ನು ಚಿತ್ರಿಸಿದರೆ, ಬೇಂದ್ರೆ ಅವರ "ಕಿರುಕ" ನಮ್ಮನ್ನು ಆತ್ಮಾನ್ವೇಷಣೆಗೆ ಹಚ್ಚುತ್ತದೆ.

"ನಾಡಾಡಿ ಕತ್ತೆಗೆ ಹಾಳು ಗೋಡೆಯ ನೆರಳು,
ಬೀಡಾಡಿ ನಾಯಿಗೆ ಬೀದಿಗಾವಲಿ ನೀರು,
.... .... .... .... ....
ತಿರುಕಾ—ಏ ತಿರುಕಾ— ಮನುಜನಾದರೆ ಏನು
ಮರುಕವಿಲ್ಲದ ಜಗವೆ ನರಕಾ—ಕಾಣೊ ನರಕಾ"

ಸಮಾಜದ ಅಂಧಪರಂಪರೆಗೆ ಸ್ಮಾರಕವಾಗಿ "ವಿಧವೆ" "ಬೆಂದೊಡಲ ಬಿಸಿಯುಸಿರು" ನಿಂತಿವೆ.

ಮಾನವನ ಅಸ್ತಿತ್ವವನ್ನೇ ಕೆಣಕುತ್ತಿರುವ ಕೂಳಿನ ಕಳವಳ "ಬಾಳ ಗರುಡಿ" 'ಮನುವಿನ ಮಕ್ಕಳು" "ತುತ್ತಿನ ಚೀಲ" ಗಳಲ್ಲಿ ಕೆರಳಿ ನಿಂತಿದೆ, "ದೈವುಳ್ಳವರಿಗೆ ದಯವೇ ಇಲ್ಲಾ; ಹಸಿದನ ಬಲ್ಲ ಹಸಿವೆಯ ಶೂಲ..." ಪ್ರಚಂಡ ಘಂಟಾನಾದ! ಹತ್ತು ಅವತಾರಗಳ ಸಂಕಟಕ್ಕೆ ಸಿಕ್ಕಿಕೊಳ್ಳುವುದಕ್ಕಂತ ಪರಮಾತ್ಮನು ಒಂದು ಅನ್ನದ ಮುದ್ದೆಯಾಗಿ ಬಂದಿದ್ದರೆ ಒಳಿತಾಗುತ್ತಿದ್ದಿಲ್ಲವೇ ಎಂದು ನಿತ್ರಾಣನಾದ ಪ್ರಾಣದೇವನ ಕೂಗು: "ಪ್ರಾಣದೇವನು ನಿತ್ರಾಣನಾಗುತ ಅಂದ ಅನ್ನದೇವರು ಮಾತ್ರ ಇನ್ನೂ ಬರಲಿಲ್ಲೋ— ಇನ್ನೂ ಬರಲಿಲ್ಲ!"

ತಿಗ್ಗಿದ್ದಲ್ಲಿ ಪುನಃ ನೀರು; ಧನವಿದ್ದಲ್ಲಿ ಪುನಃ ಲಕ್ಷ್ಮಿಯ ವಾಸ್ಯ ಅವರ ಮನೆ ಹೊಸ್ತಿಲ ಡಾಟಲಾರದ ಕುಂಟು. ಇಂಥ ದೂಳಿಯ ಭಂಡಾರ ಬಡೆದುಕೊಂಡ ನಡೆಸಿದ ಈ ಉನ್ಮತ್ತ ನೃತ್ಯದ ಕೊನೆಗಾಲ "ಕುರುಡು ಕಾಂಚಾಣದ ಕಥಾವಸ್ತು." : 'ಕಲ್ಕಿ'ಯೂ ಅಷ್ಟೇ.

"ನೇಗಿಲ ಯೋಗಿ' "ಭೂಮಿತಾಯಿಯ ಚೊಚ್ಚಲು ಮಕ್ಕಳು" ಇಂದಿನ ಕಂಗೆಟ್ಟ ರೈತರ ವರ್ಣನೆ.

"ದಿನವೂ ಸಂಜೆಗೆ ಬೆವರಿನ ಜಳಕ
ಉಸಿರಿನ ಕೂಳಿಗೆ ಕಂಬನಿ ನೀರು
ಹೊಟ್ಟೆಯು ಹತ್ತಿತು ಬೆನ್ನಿನ ಬೆನ್ನು
ಸಾವಿನ ಬೆಳಕದು ಕಾಣುವುದೆಂದೋ?"

ಸಾಹಿತ್ಯದ ಇತರ ವಿಭಾಗಗಳಲ್ಲಿಯಂತೆಯೆ ಭಾರತದ ರಾಜಕೀಯ ಜೀವನದ ಬಗ್ಗೆಯೂ ಕನ್ನಡ ಕವಿಯು ತುಂಬಾ ಜಾಗೃತವಾಗಿದ್ದಾನೆ. 'ಪ್ರೇ' ಅವರು ಭರತಮಾತೆಯು ತಲೆಯೆತ್ತಿ ಬಾಳುವಂತಾಗಲೆಂದು ಹಾರೈಸಿದರೆ, ಬೇಂದ್ರೆ ಅವರ "೩೩ ಕೋಟಿ" ಪ್ರಜಾಭಾರವನ್ನು ವರ್ಣಿಸುತ್ತದೆ. ಎಲ್ಲ ಸ್ವಾತಂತ್ರ್ಯ ಪ್ರಯತ್ನಗಳನ್ನು ಸದೆಬಡೆದು ಸ್ಮಶಾನಶಾಂತಿಯನ್ನು ನೆಲಸಿದ ದೃಶ್ಯ "ನರಬಲಿ"ಯಲ್ಲಿದೆ.

"ಮುದಿ ತಂದೆಗಳೇ ಕೈಕೈ ತಾಳ
ಬಡಿಯಿರಿ ಬಾಜಿಸಿರಿ,
ಚಿಕ್ಕವುಕ್ಕಳೇ ಚೀರುಪನಾದಿಯ
ಅಕ್ಕ ತಂಗಿಯರೆ, ಉಳಿಲಿನ ಕೊಳಲ
ಊದಿರಿ ಉಸುರಿಸಿರಿ!"

ಬಿಂಕದ ಪೊಳ್ಳು ಮೂಗನ್ನೇ ಮೆರೆಸಿ ನಲಿದ "ದಬ್ಬಾಳಿಕೆಗೆ" "ಅಂತಃಸಿಕಾಚಿಯ" ಬಿಲ್ಲಿತ್ತು ಕೊಡಲಾಗಿದೆ:

"ನೆತ್ತಿಗೇರಿದ ಕಣ್ಣುಕುರುಡು ದಬ್ಬಾಳಿಕೆಯೆ,
ಪೊಳ್ಳು ಬಿಂಕದ ಮೂಗ ಮೇಲೆ ಮಾಡಿ
.... .... ....

ಸಾವವರ ನರಳಿಕೆಯ ಕಿವುಡುಗೇಳಿ
ಇಲ್ಲಿಯೂ ಅಲ್ಲಿಯೂ ಕೊನೆಗಾಣದಾಸೆಗಳ
ಅಂತರಪಿಶಾಚಿಯೇ!
ರಕ್ಷಕನು ಎಂದು ತಿಳಿಕೊಂಡ ರಾಕ್ಷಸನು ನೀನು."

ಅವತಾರಕ್ಕೊಂದೊಂದು ಅಭಿಷೇಕ ಕಂಡರೂ ಇನ್ನೂ ರಕ್ತಕ್ಕಾಗಿ ಹಾತೊರೆಯುವ ರಣಪಿಪಾಸೆ ಮೊದಲಗಿತ್ತಿಗೆ ತಾಯ್ತನವನ್ನರಿಯಲು ಬಿನ್ನವಿಸಲಾಗಿದೆ.

"ಮುನ್ನಿಲ್ಲ; ಇನ್ನಾರೆ ಮಕ್ಕಳ ದಿನವೆಂದು
ಮೂಡೀತು ಹೇಳವ್ವ ಬನ್ನವಿಸುವೆ....
ಎಂದು ಮೀಗಲ ನಿನ್ನ ದೇವಗರ್ಭಕೆ ತಾಯಿ?"

.....ಇನ್ನೂ ಉದಾಹರಣೆಗಳು ಬೇಕೆ? ಇದೆಲ್ಲ "ಪ್ರಗತಿಪರ" ವಲ್ಲವೇ? ಎಲೆಯಲ್ಲಿಯ ಅನ್ನ ಕಸಿ ಹೋಗುತ್ತಿರುವಾಗ, ನಮ್ಮ ಕವಿಗಳೇನು ಕಣ್ಣುಮುಚ್ಚಿ ಗಾಯತ್ರಿ ಜಪಿಸುತ್ತ ಇಲ್ಲ....

ಹೀಗೆ ಅನೇಕ ಕವಿಗಳು ಪ್ರಚಲಿತ ವಿಷಯಗಳ ಬಗ್ಗೆ ಬರೆದ ಹಾಗೆಯೇ, ಮಾಸ್ತಿ-ಅನಂದರು ಆತ್ಮದ ವಿಕಾಸದ ಕತೆಗಳನ್ನು ಬರೆದಿದ್ದಾರೆ. ಈ ರೀತಿಯ ಬರಹ ಸಾಕು ಎಂದ ದಿನವೇ ಸಾಹಿತ್ಯಕ್ಕೆ ಗುದ್ದಲಿ ಬಿದ್ದಿತೆಂದೇ ತಿಳಿಯಬೇಕು. ಯಾಕೆಂದರೆ ಮನುಷ್ಯನಿಗೆ ದೇಹದಷ್ಟೇ—ಅಥವಾ ಅದಕ್ಕೂ ಹೆಚ್ಚು—ಆತ್ಮವೂ ಇದೆಯೆಂಬುದನ್ನು ಮರೆಯಲಾಗದು. ಒಂದು ರೀತಿಯಿಂದ ನೋಡಿದರೆ ದೇಹದ ಕಷ್ಟಗಳೆಲ್ಲ ಆತ್ಮದ ರೀತಿಯಿಂದ ನೋಡಿದರೆ ದೇಹದ ಕಷ್ಟಗಳೆಲ್ಲ ಆತ್ಮದ ಕೊಳೆತವೇ ಆಗಿರಬಹುದು. ಗಯಟೆ ಕವಿಯು ಹೇಳುವಂತೆ ಆ ಕೊಳೆತ ಸ್ಥಾನವನ್ನು ನಾವು ಸರಿಪಡಿಸಿಕೊಳ್ಳಬೇಕು. ಯುದ್ಧ ರೀಶನುಗಳ ಬಗ್ಗೆ ಕವಿತೆ ಬೇಕೆಂದು, "ಒಂದು ಕತೆ" "ಒಂದು ಹಳೆಯ ಕಥೆ" "ನಾನು ಕೊಂದ ಹುಡುಗಿ" "ಪೆನುಗೊಂಡೆಯ ಕೃಷ್ಣಮೂರ್ತಿ"—ಇಂತಹ ಕತೆಗಳನ್ನು ಮರೆಯಲಾಗದು. ಇವು ಹೃದಯದ ನಿತ್ಯ ನಂದಾದೀಪ. ಬರಿಯ ದೇಹ ಬೆಳೆದು ಆತ್ಮ ಕುಸಿದರೆ ನರಕ ಇನ್ನೂ ಸನಿಹ. 'ಪೈಲ್ವಾನ'ರ ಮೆದುಳಿನಂತಾದೀತು. ಆತ್ಮ, ದೇಹ ಒಂದೇ ಲತೆಯ ಎರಡು ಹೂಗಳು. ಗಂಡಭೇರುಂಡದ ಎರಡು ಮುಖ. ಜೀವನದ ಎರಡು ಕಣ್ಣು. ಯಾವ ಕಣ್ಣು ಹೋದರೂ ಅಷ್ಟೇ ನೋವು ಸಹಿಸದು.....ಒಂದು ಬೇಕು ಎಂದು ಹೇಳುವಲ್ಲಿ ಮತ್ತೊಂದು ಬೇಡ ಎನ್ನುವಷ್ಟು ಬುದ್ಧಿ ನೂಕಲಾಗದು. ಆ ಕಡೆಗೆ ಕಂದರವಿರಬಹುದು.

ನಿಜ; 'ಕಾರ್ಮಿಕ'ಜೀವನ ಇನ್ನೂ ನಮ್ಮಲ್ಲಿ ಅಷ್ಟಾಗಿ ಬಂದಿಲ್ಲ. 'ಕೂಲಿ' 'ತಪಸ್ವಿನಿ' 'ಭಪ್ಪರ್‌ಬಂದ'ದಂತಹ ಕೃತಿಗಳದ್ದರೂ ಗಿರಣಿ ಕೂಲಿಕಾರರ ಬಾಳು ಇನ್ನೂ ಅಷ್ಟಾಗಿ ಚಿತ್ರಿತವಾಗಿಲ್ಲ, ಚಿತ್ರಿತವಾಗಬೇಕು. ಆದರೂ ಈ ವಿಮರ್ಶೆಯನ್ನು ಅತಿ ಅವಧಾನಿ ಕೊಟ್ಟು ಹೇಳುವಾಗ ಒಂದು ಮಾತನ್ನೂ ಲಕ್ಷದಲ್ಲಿಡಬೇಕು—ಆ ಆ ತರದ ಜೀವನ ನಮ್ಮಲ್ಲಿ ಅಷ್ಟಾಗಿ ಬೆಳೆದ ಹೊರತು ಅಂತಹ ಸಾಹಿತ್ಯ ನಿರ್ಮಿತಿಯೊದದು. ಅದು ನಮ್ಮಲ್ಲಿ ಬರಿಗಿ —ಅರಳ--ಬರಬೇಕು. ಗಿರಣಿ ಕೂಲಿಕಾರರ ಜೀವನ ನಮ್ಮಲ್ಲಿ ಬರಬೇಕಾದರೆ ಮೊದಲು ಅಂತಹ ಜೀವನ ನಮ್ಮಲ್ಲಿ ಬರಬೇಕು. ಅವೇಲೆ ಅದರ ಅಭಿವ್ಯಕ್ತಿ. ಅಂತಹ ಗಿರಣಿಗಳಾದರೂ ನಮ್ಮಲ್ಲಿ ಇರುವುವೆನ್ನು? ಉತ್ತರ ಕರ್ನಾಟಕದಲ್ಲಂತೂ ಹುಬ್ಬಳ್ಳಿ-ಗದಗುಗಳನ್ನು ಬಿಟ್ಟರೆ ಹೆಚ್ಚು ಕಡಿಮೆ ನರಸಿಂಗಸಾ, ಸಿಸ್ತ್ರಿಲ ಭಾಟಿನ ಫ್ಯಾಕ್ಟರಿಗಳೇ. ಊರಿಗೊಂದು ಹಣಮಪ್ಪ ಎಂದ ಹಾಗೆ ಹಿಟ್ಟಿನ ಗಿರಣಿ ಮಾತ್ರ ತಲೆಯೆತ್ತಿ ನಿಂತಿವೆ. ಎಂದಮೇಲೆ ಇಲ್ಲದ ಜೀವನವನ್ನು ವರ್ಣಿಸ ಬೇಕೆಂಬ ವಿಮರ್ಶೆ ಹಿಂದಿನ ಆಸ್ಥಾದಶ ವರ್ಣನೆಗಳ ಸಂಪ್ರದಾಯವನ್ನು ಹಳಿದು ಹೊಸದೊಂದನ್ನು ನಿರ್ಮಿಸಿಕೊಂಡ ಹಾಗಾದೀತು. ಶ್ಯಂಖಿಲೆ ಕೈಯಿಂದ ಕಾಲಿಗಿಳದಷ್ಟೇ! ಬೆಂಗಳೂರು, ಬೈಖಲಾ, ವರ್ಲಿಗಳ ಜೀವನ — ಮದಿಹಾಳ ಮಾಳಾಪೂರಗಳಲ್ಲಾಗಲಿ — ಅಖಂಡ ಕರ್ನಾಟಕದಲ್ಲಾಗಲಿ, ಎದ್ದು ಕಾಣುವಷ್ಟು ಸಾರ್ವತ್ರಿಕವಾಗಿಲ್ಲ. ಆ ರೀತಿ ಜೀವನ ಬೆಳೆದಾಗ ಸಾಹಿತ್ಯವೂ ಹಾಗೆ ಬೆಳೆದೀತು; ಬೆಳೆಯಬೇಕು. ಪ್ರಾದೇಶಿಕ ಆಗತ್ಯಗಳಿಗೆ ಮೊದಲು ಅಭಿವ್ಯಕ್ತಿ. ಮುಂಬಯಿ, ಅಹಮದಾಬಾದಗಳ ಸಮಸ್ಯೆ ತೀರ ನಮ್ಮ ಸಮಸ್ಯೆಯಾಗವು. ಮಲಬಾರ-ಹಿಲ್ಲಿನ ಭಿಕ್ಕುಲಾಲಿಸಿಗೆ ಹಾಲು ಸಿಗುವುದು ಭಯ್ಯಾನಿಂದ ಎಂದು ಮಾತ್ರ ಗೊತ್ತಿದ್ದರೆ, ಮದಿಹಾಳದ ಬಸಪ್ಪನಿಗೆ "ಟ್ರಾಂ" ಚಿತ್ರಪಲ್ಲ ಮಾತ್ರ ಪರಿಚಿತ..... ಆದ್ದರಿಂದ ಗಿರಣಿ ತುಕಾರಾಮನ ಜೀವನವನ್ನು ಚಿತ್ರಿಸುವ ಮಾತ್ರಕ್ಕೇ ನಾವು ನಮ್ಮ ಕಥಾನಾಯಕನನ್ನು ೀಧರ್ ದಿನಸಗಳಲ್ಲಿ ಮುಂಬಯಿಗೆ ಓಡಿಸಿ ನರಳಿಸುವ ಕಾರಣವಿಲ್ಲ. ಹಾಗೆ ಮಾತುವುದು ಸೂಳೆಗೇರಿಯ ವರ್ಣನಾಚಾಪಲ್ಯಕ್ಕಾಗಿ ರಾಘವಾಂಕನು ಹರಿಶ್ಚಂದ್ರನನ್ನು "ಉದ್ಧಾರ" ಮಾಡಿದ ಹಾಗಾದೀತು.....ಜಾಗತಿಕ ಸಾಹಿತ್ಯದ ಯಾವ "ಪ್ರಗತಿಪರ" ಗ್ರಂಥವನ್ನು ನೋಡಿದರೂ ಇದೇ ಮಾತು ಕಂಡುಬರುತ್ತದೆ. ಇಂಗ್ಲಿಷ್ ಸಾಹಿತ್ಯದ "Trial of a Judge" ಆಗಲಿ, ಅಥವಾ ಅಧುನಿಕ ಅಮೇರಿಕೆಯ "Manhattan Transfer"ವೇ ಆಗಲಿ, ಅಥವಾ ಸ್ಪೆನಿಶ್‌ದ "Seven Red Sundays" ಎಂಬುದೇ ಆಗಲಿ—ಎಲ್ಲವೂ ಆ ಆ ಜೀವನದ ತಾಯ್ನೆಲದಿಂದ ಅರಳಿವ ಹೂಗಳು.

ಹಿಂದಿನದೆಲ್ಲವೂ ಸರಿಯಲ್ಲವೆಂಬ ಅಭಿಪ್ರಾಯವೂ ಹೊಂದದು. ಇತರ ಸಾಹಿತ್ಯಗಳಲ್ಲೂ ಕಂಡುಬಂದ ಈ ವೃತ್ತಿಯ ಬಗ್ಗೆ ವ್ರೈ ಸ್ಲೇಟರ್ ಅವರು ಒಳ್ಳೆಯ ಜಾಗೃತಿಯ ಮಾತನ್ನು ಹೇಳಿದ್ದಾರೆ. "Progressive literature is doomed if young writers and readers are going to be satisfied with *any stuff written about the workers*.... Any biography of Marx and Lenin will show how much they both loved the great authors of the past." (Progress in Writing—Past and Present ಪು. ೯೨.)

ಒಟ್ಟಾರೆ, ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳುವಷ್ಟು, ನಾವು "ಪ್ರಗತಿಪರ"ರಾಗಿರದಿದ್ದರೂ, ಪ್ರಗತಿಯ ಅರ್ಧ ಕಾಲಕಾಲಕ್ಕೆ ಭಿನ್ನವಾಗುತ್ತ ನಡೆದಿದೆಯಾದರೂ, ನಾವೇನೂ ಮತದ ಹೆಗ್ಗಣಗಳಾಗಿಲ್ಲ ವೆಂಬುದನ್ನು ಮಾತ್ರ ಅರಿತುಕೊಳ್ಳೋಣ. ವಿವಿಧ ಜೀವನ ಬೆಳೆದು ಆ ಆ ಸಾಹಿತ್ಯವನ್ನು ನಿರ್ಮಿಸೋಣ; ಮಗು ಹುಟ್ಟಿದ ಮೇಲೆ ಅರಿವೆ ಒಳತೆಯ ಕೆಲಸ ಬಹಳ ವೇಳೆ ಹಿಡಿಯಲಾಗದು; ಹೊಲಿಸಿ ಇಟ್ಟ ಅಂಗಿಗಾಗಿ ಕೂಸಿನ ಅಳತೆ ಹೆಚ್ಚು ಕಡಿಮೆ ಮಾಡಲಾರೆವು. ಮೊದಲು ಜೀವನ ಬರಲಿ; ಬಿಮೇಲೆ ಅಂತಹ ಸಾಹಿತ್ಯ. ಮೊದಲು ಸಾಹಿತ್ಯ, ಅನಂತರ ವಿಮರ್ಶೆ; ಮೊದಲು ಕೃತಿ, ಆನಂತರ ಶಾಸ್ತ್ರ.

# ಆನಂದವೇ ಆನಂದ

( ವಿಚಾರ ತರಂಗ )

●

ಶ್ರೀ. ಟಂಕಸಾಲಿ ಧ್ರುವರಾಯರು, ಬಿ. ಎ., ಎಲ್‌ಎಲ್. ಬಿ.
ಮುಧೋಳ

೧

ಯುನಿವರ್ಸಿಟಿಯವರು ಹೊಸ ಆರ್ಟ್ಸ್ ಕಾಲೇಜಿನ ಉದ್ಘಾಟನೆ ಮಾಡಲಿಕ್ಕೆ ಒಪ್ಪಿದ ದಿವಸ ನಮ್ಮೆಲ್ಲರಿಗೂ ಆನಂದವೇ ಆನಂದ. ಭವ್ಯವೂ ಸುಂದರವೂ ಆದ ಕಟ್ಟಡದಿಂದಲೂ ವಿಶಾಲವಾದ ಕ್ರೀಡಾಂಗಣದಿಂದಲೂ ಪರಿಶೋಭಿತವಾದ ಆ ವಿದ್ಯಾಮಂದಿರವು ವಿದ್ಯಾದಾನದ ಕಾರ್ಯವನ್ನು ಸ್ಪೃಹಣೀಯವಾಗಿ ಪ್ರಾರಂಭ ಮಾಡಿತು.

೨

ಸರಸ್ವತಿದೇವಿಯು ಅವಿಶ್ರಾಂತವಾದ ಆರಾಧನೆಯಿಂದ ತಪ್ತಳಾದ ವಿದ್ಯಾರ್ಥಿಗಳ ವೇದನೆಯನ್ನು, ವಿಶ್ರಾಂತಿ ಸಮಯದಲ್ಲಿ ಶಾಂತಪಡಿಸಲಿಕ್ಕೆ, ವಿಶಾಲವಾದ ಕಾಲೇಜಿನ ಪಟಾಂಗಣದಲ್ಲಿ ಒಂದು ಉಪಹಾರಗೃಹವನ್ನು ತೆಗೆಯಲು, ಓರ್ವ ಉಡುಪಿಯವರು ಮುಖ್ಯಾಧ್ಯಾಪಕರನ್ನು ಕಂಡು, ವಿನ್ನಹ ಮಾಡಿ, ಅಪ್ಪಣೆಯನ್ನು ಪಡೆದರು. ಅಂದು ನಮ್ಮೆಲ್ಲರಿಗೂ ಆನಂದವೇ ಆನಂದ!

೩

ಹೃದಯದಲ್ಲಿ ಚುಚ್ಚುವ ತಂತಿಗಳ (Telegrams) ತೀಪ್ರ ವೇದನೆಯನ್ನು ಸಹಿಸದೆ, ಸಾಹುಕಾರರ ಸಾಲಗಳನ್ನು ತಪ್ಪಿಸಿ, ಸಾಹುಕಾರಿಗೆ ಕರಜೋಡಿಸಿ, ಮಮತೆಯು—ಕಂದನ ಬಂಗಾರದ ಉಡುದಾರವನ್ನು ಪತ್ನಿಯ ಕಣ್ಣೀರಿನಲ್ಲಿ ತೊಳೆದು, ಕಳಿಸಿದ ಮನಿಯಾರ್ಡರು ತಲುಪಿದ ಕೂಡಲೆ, ಟಿಫಿನ್, ಕೋ, ಸಿಗ್ರೇಟು, ಟಾಯಲೇಟ್‌ಗಳ ಸುಂಪಳಿ ಸುರಿದಾಗ ನಮಗೆ ಆನಂದವೇ ಆನಂದ!

೪

ಅರ್ಧನಗ್ನ, ಅರೆಹೊಟ್ಟೆಯ ಚಳಿಮಳಿಗಳಿಗೆ ನಡುಗುವ ಅಸ್ಥಿ ಪಂಜರದ ದೇಹವನ್ನು, ಸಾಹೇಬರ ಬಾರುಕೋಲಿನ ಏಟು ತಿಂದು, ಅವರ ಕೆಂಪಾದ ಕಣ್ಣುಗಳಿಂದ ಹಾರುವ—ಕಿಡಿಗಳಲ್ಲಿ ಕಾಸಿ, ಜೊಂಚಿ ಹೂವಿನ ದೇಟಿನಂತೆ ತೆಳುವಾದ ಕಂಠದಿಂದ ಹೊರಸೂಸುವ ಆರ್ತ ಸ್ವರದ ಮಧುರ ಧ್ವನಿಯಲ್ಲಿ, ಜನ್ಮತಾಳದ ಅಸಾಮಿಯ ಚಹರೆಯನ್ನು, 'Good Luck' ಎಂಬ ಅಕ್ಷರಗಳಿಂದ ಶೋಭಿತವಾದ ನಯನ ಮನೋಹರ ಕಪ್ಪುಗಳಲ್ಲಿ, ಹಾಸ್ಯವಿನೋದದಿಂದ ಗುಟುಕಿಸಿ ಆಸ್ವಾದವನ್ನು ತಕ್ಕೊಳ್ಳುವಾಗ ನಮಗೆ ಆನಂದವೇ ಆನಂದ!

೫

ಅದೇ ಕಾಲೇಜಿನ ವಿಸ್ತಾರವಾದ ಪಟಾಂಗಣದಲ್ಲಿ ಒಂದು ಕಬ್ಬಿನ ಗಾಣ ಹಾಕಲ್ಪಟ್ಟಿತ್ತು. ಸುತ್ತುಮುತ್ತಲಿನ ಹಳ್ಳಿಗಳಿಂದ ರಸಭರಿತವಾದ ಕಬ್ಬಿನ ರಾಶಿಯು ಬಂದು ಬೀಳುವುದನ್ನು ಕಂಡು ನಮಗೆ ಆನಂದವೇ ಆನಂದ!

೬

ಆನೆಯು ಸೊಂಡೆಯಂತೆ ಉದ್ದವಾದ ಬಿರುದಾಲಂಕಾರಿತ ಪ್ರೊಫೆಸರುಗಳ ಹೆಸರಿಗೆ ಮೋಹಿತರಾಗಿ ಬಂದ ವಿದ್ಯಾರ್ಥಿಗಳ ಸಂಖ್ಯೆಯಿಂದ ಬೆಳೆಯುತ್ತಿದ್ದ ಕಾಲೇಜನ್ನು ಕಂಡು ನಮಗೆ ಆನಂದವೇ ಆನಂದ!

೭

ಗಾಣದ ಎತ್ತಿನ ನಾಲ್ಕೇ ಸುತ್ತಿನಲ್ಲಿಯೇ, ದಂಡುದಂಡಾದ ಕಬ್ಬಿನ ರಸಗಳಿಂದ ಕೆಳಗಿಟ್ಟ ಪಾತ್ರೆಯು ತುಂಬುತ್ತಿತ್ತು. ಹಿಂಡಿ ಹಿಪ್ಪೆಯಾದ ಕಬ್ಬಿನ ಸೊಪ್ಪೆಯನ್ನು ಬೀಸಾಡಿ ಒಗೆಯುತ್ತಿದ್ದರು. ಆ ಸವಿಯಾದ ರಸವನ್ನು ನಿಂಬೆಹಣ್ಣಿನ ರಸದಲ್ಲಿ ಬೆರೆಯಿಸಿ ಕುಡಿಯುವಾಗ್ಗೆ ನಮಗೆ ಆನಂದವೇ ಆನಂದ!

೮

ಆಗಣಿತ ಸಂಭ್ರಮ, ಅಪಾರ ಉತ್ಸಾಹ, ಪರಿಮಿತ ಸ್ವಾತಂತ್ರ್ಯ, ಅಮರ್ಯಾದಿತ ಮುಕ್ತಾಭ್ಯಾಕಾಂಕ್ಷೆ, ಸಂಸಾರದಲ್ಲಿ ತುಂಬಿ ತುಳುಕುವ ತಾರುಣ್ಯ, ಉಚ್ಚ ಧ್ಯೇಯ, ತತ್ತ್ವನಿಷ್ಠೆ, ಆಶಾಮಯವಾದ ಹೃದಯಂಗಮ ಭವಿಷ್ಯತ್ಕಾಲ. ಕಲ್ಪನಾಸೃಷ್ಟಿಯಲ್ಲಿಯ ನಯನ ಮನಗಳನ್ನು ಸೆಳೆಯುವ ಪತ್ನಿ—ಹಣದ ರಾಶಿ, ಕಲ್ಪನಾತೀತ ಕೀರ್ತಿಯ ಮೋಹ, ಮೊದಲಾದುವುಗಳು ಆ ಯಂತ್ರದ ನಾಲ್ಕೇ ಸುತ್ತಿನಲ್ಲಿ, ಹಿಂಡಿ ಹಿಪ್ಪೆಯಾಗಿ ಆರ್ಟ್ಸ್ ಕಾಲೇಜಿನ ಸುತ್ತು ಮುತ್ತಲೂ ಬಿಸಾಡಲ್ಪಡುತ್ತಿದ್ದುವು. ಉತ್ಸಾಹಹೀನ, ಕರ್ತವ್ಯಶೂನ್ಯ, ಜಾತಿ-ಭಾವೆಗಳ ದುರಭಿಮಾನ, ಸ್ವಾರ್ಥಪರಾಯಣತೆ, ಸುಖಲೋಲುಪತೆ, ಪ್ರೇಮದ ಆಡಂಬರದಲ್ಲಿ ನೀತಿಯ ಹೋಮ, ವ್ಯಸನಗಳ ನಿರ್ವ್ಯಸನತೆಯ ಪ್ರತಿಪಾದನೆ, ಹೊಣೆಗಾರಿಕೆಯ ಅಭಾವ, ಪಾಶವ ತತ್ತ್ವಗಳ ವರ್ಚಸ್ಸು, ಒಳಹೊಕ್ಕ ಕಣ್ಣು, ಎಣ್ಣೆ ಬಸಿವ ಪೋರೆ, ಪಚ್ಚುಬಿದ್ದ ಗಲ್ಲ, ಮೊದಲಾದ ರಸಹೀನ ರಸದಿಂದ ಹಿಂದಮಾತೆಯು ಪಾತ್ರ ತುಂಬುವುದನ್ನು ನೋಡಿ ನಮಗೆ.....?


# ಪ್ರಸವ ವಿಜ್ಞಾನ

ಗರ್ಭಧಾರಣೆ, ಗರ್ಭಲಕ್ಷಣ, ಗರ್ಭನಿಯಮ ವಿನಃಜೆರಿ, ಗರ್ಭಿಣೀ ರೋಗಗಳೂ ಅವುಗಳ ಚಿಕಿತ್ಸೆಗಳೂ, ಸಹಜ ಪ್ರಸವ ನಿರ್ವಹಣವಿಧಿ, ಆಕ್ರಮ ಮತ್ತು ಸಂಕೀರ್ಣ ಪ್ರಸವ ವಿಧಿಗಳು, ಬಾಣಂತೀ ರೋಗಗಳು ಅವುಗಳ ಚಿಕಿತ್ಸೆಗಳು, ಶಿಶು ಪ್ರಾಣರಕ್ಷಣ ಮೊದಲಾದುವನ್ನು ಸರಳವಾಗಿಯೂ ಸಚಿತ್ರವಾಗಿಯೂ ವಿವರಿಸುವ ಪುಸ್ತಕ. ಸುಮಾರು ೫೦ ಚಿತ್ರಗಳಿಂದ ಪ್ರ. ಪ. ಕಳಿಸುವದಿಲ್ಲ

ರೂ. ೨--೪--೦ ಯನ್ನು ಮನಿಯಾರ್ಡರು ಮಾಡಿರಿ

ಮಾರಾಟದ ಪೂರ್ಣಾಧಿಕಾರಿಗಳು

**ಮಾಡರ್ನ್ ಔಷಧಾಲಯ, ದೊಡ್ಡಬಳ್ಳಾಪುರ, (ಬೆಂಗಳೂರು)**

# ನಾಲ್ಕು ಪತ್ರಗಳು

ಶ್ರೀ. ಕೆ. ವೆಂಕಟರಾಮ್, ಬಿ ಎ.

ತಂದೆ, ಮಾವ, ಗೆಳೆಯ, ಹೆಂಡತಿ ಒಬ್ಬೊಬ್ಬರ ಒಂದೊಂದು ಪತ್ರಗಳು ಕ್ರಮವಾಗಿ ಇಲ್ಲಿ ಇವೆ. ಎಲ್ಲರೂ ಬೇಕಾದವರು; ಒಬ್ಬೊಬ್ಬರ ಆಸೆ ಒಂದೊಂದು ವಿಧ. ಹೊಸ ಕಾಲದ ತರುಣ ಯಾರ ಮಾತನ್ನು ಕೇಳಬೇಕು?

೧

ಚಿರಂಜೀವಿಗೆ ಆಶೀರ್ವಾದಗಳು,

ನಿನ್ನ ಪತ್ರವು ತಲುಪಿತು. ನಿನ್ನ ಪರೀಕ್ಷೆಯ ಫಲಿತಾಂಶವು ಹೊರಬಿದ್ದು ಎರಡು ತಿಂಗಳುಗಳಾದುವು. ಆದರೂ ನೀನಿನ್ನೂ ಕೆಲಸ ಹುಡುಕುವುದರಲ್ಲೇ ಕಾಲ ಕಳೆಯುತ್ತಿದ್ದೀಯೆ ಎಂದು ಬರೆದಿದ್ದಿ. ಈಗಿನ ಕಾಲದಲ್ಲಿ ಕೆಲಸಕ್ಕೇನು ಕೊರತೆ? ಏನಾದರೂ ಸರ್ಕಾರದ ಕೆಲಸಕ್ಕೆ ಸೇರಿದರೆ ಒಳ್ಳೆಯದು. ನನಗೂ ವಯಸ್ಸಾಯಿತು. ನೀನು ಬೇಗ ಯಾವುದಾದರೂ ಕೆಲಸಕ್ಕೆ ಸೇರಿ ಸಂಸಾರದ ಭಾರ ವಹಿಸಿಕೊಳ್ಳುವ ಯೋಚನೆ ಮಾಡು. ದೂರ ದೇಶದಲ್ಲಿ ಸಿಕ್ಕಬಹುದಾದ ನೂರಾರು ರುಪಾಯಿಗಳಿಗಿಂತಲೂ ಮನೆಯ ಬಾಗಿಲಲ್ಲಿ ಸಿಕ್ಕುವ ಹತ್ತು ರೂಪಾಯಿಗಳೇ ಮೇಲು. ಇದರ ಮೇಲೆ ನಿನ್ನಿಷ್ಟ. ನಿನಗೂ ಮದುವೆಯಾಗಿದೆ ಮೇಲಾಗಿ ಗ್ರಾಜುಯೇಟು. ನಿನ್ನ ಜವಾಬ್ದಾರಿ ನಿನಗೆ ತಿಳಿದಿದೆ. ನಿನಗೆ ತಿಳಿದಿರುವುದಕ್ಕಿಂತಲೂ ಹೆಚ್ಚು ನಾನೇನು ಹೇಳಬಲ್ಲೆ? ತಂದೆತಾಯಿಗಳ ಸೇವೆಯನ್ನು ಅವರ ಮುಪ್ಪಿನಲ್ಲಿ ಮಾಡಬೇಕಾದುದು ನಿನ್ನ ಧರ್ಮ. ಯೋಚಿಸಿ ನೋಡು.

ಯಾವುದಕ್ಕೂ ಕಾಗದ ಬರಿ.

ಇಂತೀ ಆಶೀ:

'.....'

೨

ಆಶೀರ್ವಾದಗಳು,

ನಿನ್ನ ಪರೀಕ್ಷೆ ಫಲಿತಾಂಶವು ಹೊರಬಿದ್ದು, ನೀವು ಬೆಂಗಳೂರಿಗೆ ಹೋಗಿ ಎರಡು ತಿಂಗಳ ಮೇಲಾಯಿತು. ಇನ್ನೂ ಯಾವ ಕೆಲಸಕ್ಕೂ ಸೇರಿಲ್ಲವೆಂದು ತಿಳಿದು ಆಶ್ಚರ್ಯವಾಯಿತು. ನಿಮ್ಮ ಜವಾಬ್ದಾರಿ ನಿಮಗೆ ತಿಳಿದಿದೆ. ಆದರೂ ನಿಮಗೆ ನನ್ನ ಮಗಳನ್ನು ಕೊಟ್ಟಿರುವುದರಿಂದ, ನನ್ನ ಹೆಗಲಿನ ಮೇಲಿನ ಜವಾಬ್ದಾರಿಯನ್ನು ಕಳೆದುಕೊಳ್ಳಲು ಈ ನಾಲ್ಕು ಹಿತವಾಕ್ಯಗಳನ್ನು ಬರೆಯುತ್ತಿದ್ದೇನೆ. ಈಗಿನ ಕಾಲದಲ್ಲಿ ಎಂದು ಕೆಲಸ ಹುಡುಕಲು ಎರಡು ತಿಂಗಳು ಬೇಕೆ? ಬೆಂಗಳೂರಿನಲ್ಲಿ ವೈಟ್‌ಫೀಲ್ಡ್, ಏರೋಪ್ಲೇನ್ ಫ್ಯಾಕ್ಟರಿ ಎಲ್ಲಾ ಹಾಳಾದುವೆ?

ನೀವು ಸ್ವಲ್ಪ ಕಷ್ಟಪಟ್ಟು ಸರ್ಕಾರಿ ಕೆಲಸಕ್ಕೆ ಸೇರಿದರೆ ಬಹಳ ಸಂತೋಷ. ಅದರಲ್ಲೂ, ರೆವಿನ್ಯೂ ಅಥವಾ ಎಕ್ಸೈಸ್ ಇಲಾಖೆಗೆ ಸೇರಿದರೆ ಸಂಸಾರದಲ್ಲಿ ಜೀನ್ನಾಗಿರುತ್ತದೆ. ಮೊನ್ನೆ ಗೆಜೆಟ್ಟಿನಲ್ಲಿ ಪೋಲಿಸ್ ಸಬ್ ಇನ್ಸ್‌ಪೆಕ್ಟರ ಕೆಲಸಗಳಿಗೆ ಅರ್ಜಿ ಹಾಕಬಹುದೆಂದು ಬರೆದಿದ್ದರು. ಆ ಬಾಬಿನಲ್ಲಿ ಉಪ್ಪತ್ತಿ ಜಾಸ್ತಿ. ಯಾವುದಕ್ಕೂ ಪ್ರಯತ್ನಪಡಿ. ಆಫೀಸರುಗಳನ್ನು ಅವರ ಮನೆಯಲ್ಲಿಯೇ ನೋಡಿದರೆ, ಕೆಲಸ ಸುಲಭವಾಗಿ ಆಗಬಹುದು. ಸಮಯಾನುಸಾರ ಜೇಬನ್ನು ಸಡಿಲು ಬಿಡಬೇಕಾಗಬಹುದು. ಅದಕ್ಕೆ ಹಿಂಜರಿಯಬಾರದು. ಕೆಲಸಕ್ಕೆ ಬಾರದ ಭ್ರಾಂತನ್ನು ತಲೆಯಲ್ಲಿ ತುಂಬಿಕೊಂಡು 'ಐಡಿಯಲ್' ಎಂದರೆ ಜೀನ್ನಾಗಿರುವುದಿಲ್ಲ. 'ಈಸಬೇಕು ಇದ್ದು ಜೈಸಬೇಕು' ಸ್ಕೂಲು ಮೇಷ್ಟರ ಕೆಲಸದ ವಿಷಯ ಬರೆದಿದ್ದಿರಿ. ಆ ಬಾಬಿನಲ್ಲಿ ಸುಖವಿಲ್ಲ. ಬರುವ ಸಂಬಳ ಸಂಸಾರ ನೀಗಿಸುವುದಕ್ಕಾಗಿ ವುದಿಲ್ಲ. ಜತೆಗೆ ಅಧಿಕಾರಿಗಳ ಹಾವಳಿ ಬೇರೆ. ಮೇಲುಸಂಪಾದನೆ ಅಷ್ಟಕ್ಕಷ್ಟೆ?

ಚಿ ಸಾ ಪ್ರಭಾ ಪ್ರಸನ್ನವಾಗಿದ್ದಾಳೆ. ನೀವು ಕೆಲಸಕ್ಕೆ ಸೇರುವ ದಿನವನ್ನು ಎದುರು ನೋಡುತ್ತಿದ್ದಾಳೆ. ಅವಳಿಗೂ ನಾಲ್ಕು ಜನರಂತೆ ಒಳ್ಳೆಯ ಒಟ್ಟೊಟ್ಟೆ ಹಾಕಿಕೊಳ್ಳಬೇಕೆಂಬ ಆಸೆ ಇರುವುದಿಲ್ಲವೇ? ಅವನ್ನೆಲ್ಲಾ ತಂದೆಯನ್ನೇ ಕೇಳಲು ಅವಳಿಗೂ ಸಂಕೋಚವಾಗುವುದಿಲ್ಲವೇ? ನಾನು ಬರೆದಿರುವ ವಿಷಯ ತಮಗೆ ಬೇಸರವನ್ನುಂಟು ಮಾಡಬಹುದು. ಆದರೆ ಅದೆಲ್ಲವೂ ನಿಮ್ಮ ಮುಂದಿನ ಏಳಿಗೆಯೆಂಬ ವಿಷಯ ನೆನಪಿನಲ್ಲಿರಲಿ.

ತಿಳಿದವರಿಗೆ ನಿವೇದನ ಬರೆಯಲಾತಿ.

ಇತೀ ಆಶೀರ್ವಾದಗಳು.

'.....'

೩

ಗೆಳೆಯನಿಗೆ,

ನಿನ್ನ ಪತ್ರವು ತಲುಪಿತು. ಕೆಲಸಕ್ಕೆ ಸೇರುವ ವಿಷಯ ಬರೆದಿದ್ದೆ. ವಿದ್ಯಾರ್ಥಿಗಳಾಗಿದ್ದಾಗ ನಾವು ಮಾತನಾಡಿಕೊಳ್ಳುತ್ತಿದ್ದ ಧ್ಯೇಯ, ಪೂರ್ಣ ಜೀವನದ ವಿಷಯ ಮರೆಯಬೇಡ. ನಿನಗೂ ಸಂಸಾರದ ಹೊರೆಯಿದೆ. ನಿಜ. ಆದರೆ ನಾಲ್ಕು ಕಾಸಿಗಾಗಿ ನಾವು ನಮ್ಮನ್ನು ಮಾರಿಕೊಳ್ಳುವುದೇ? ಹಣವಿಲ್ಲದೆ ಉಪವಾಸವಿದ್ದರೂ ಸರಿ. ಸರ್ಕಾರದ ಗುಲಾಮನಾಗಬೇಡ. ಇನ್ನು ನಾಲ್ಕು ಕಾಸು ಸಂಬಳ ಬರುವುದೆಂದು ಏರ್‌ಕ್ರಾಫ್ಟ್ ಇತ್ಯಾದಿಗಳ ಹೊಲಸು ಗೊಡವೆ ಬೇಡ. ನಮ್ಮ ಧ್ಯೇಯಗಳನ್ನು ಕಾಲೇಜು ಬಿಟ್ಟ ಕೆಲವು ದಿನಗಳಲ್ಲಿ ಮರೆಯುವುದು ಸರಿಯೇ? ನಮ್ಮ ನಾಡನ್ನು ಗುಲಾಮಗಿರಿಯಿಂದ ಉದ್ಧರಿಸಲು ಕಾಯಾ ವಾಚಾ ಮನಸಾ ದುಡಿಯುವೆನೆಂದು ಪ್ರತಿಜ್ಞೆ ಮಾಡಿದುದನ್ನು ಮರೆಯಬೇಡ. ನಮ್ಮ ಧ್ಯೇಯ ಕೈಗೂಡಬೇಕಾದರೆ,

ಪತ್ರಿಕಾವೃತ್ತಿಯೇ ಒಳ್ಳೆಯದೆಂದು ನನಗೆ ತೋರುತ್ತದೆ. ಈಗ ಸದ್ಯದಲ್ಲಿ ಅದರಿಂದ ಬರುವ ಹಣ ಕಡಿಮೆ ಇರಬಹುದು. ಈ ಕಾಲ ಬಹಳ ಉಳಿಯಲಾರದು. ಒಟ್ಟಿನಲ್ಲಿ ನಮ್ಮ ದೇಶದ ಸ್ವಾತಂತ್ರ್ಯಸಂಗ್ರಾಮಕ್ಕೆ ಅಡ್ಡಿ ಬರದ ಯಾವ ಕೆಲಸಕ್ಕೆ ತೊಡಗಿದರೂ ನನಗೆ ಸಂತೋಷ.

ಇಂತು ನಿನ್ನ ನೆಚ್ಚಿನ ನೇಹಿಗ

'.....'

೪

..... .....ರಿಗೆ,

ಇಂದೇ ನಿಮ್ಮ ಪತ್ರ ತಲುಪಿತು. ಕೆಲಸಕ್ಕೆ ಸೇರುವ ವಿಷಯ ಬರೆದಿದ್ದಿರಿ. ಇಷ್ಟು ದಿನವೇ ಕಳೆದಾಯಿತು. ಇನ್ನು ನಾಲ್ಕು ದಿನವಾದರೇನಂತೆ? ಹಣದ ಆಸೆಗೆ ಯಾವುದೋ ಕೆಲಸಕ್ಕೆ ಸಿಕ್ಕಿಕೊಂಡು ಅನಂತರ ನರಳುವುದಕ್ಕಿಂತ ಮೊದಲೇ ಯೋಚನೆ ಮಾಡಿ, ಮನೋಧರ್ಮಕ್ಕೆ ಒಪ್ಪುವ ಕೆಲಸಕ್ಕೆ ಸೇರಿದರಾಯಿತು.

ನೀವು ಕೆಲಸಕ್ಕೆ ಸೇರುವ ವಿಷಯದಲ್ಲಿ ನನ್ನ ಸಲಹೆ ಕೇಳಿದ್ದಿರಿ. ನಾನಾದರೂ ನಿಮಗೆ ಸಲಹೆ ಕೊಡುವುದೇನಿದೆ? ನೀವು ನನ್ನ ವಿಷಯದಲ್ಲಿ ಹೆಚ್ಚು ಯೋಚನೆ ಮಾಡುವ ಕಾರಣವಿಲ್ಲ. ನಾನೆಂದಾದರೂ ನಿಮ್ಮನ್ನು ಹಣಕ್ಕಾಗಿಯಾಗಲಿ ಒಡವೆಗಾಗಿಯಾಗಲಿ ಪೀಡಿಸಿದ್ದೇನೆಯೇ? ಹೆಚ್ಚು ಹಣ ಸಂಪಾದಿಸುವಂತೆ ನಿಮಗೆ ಕಾಗದ ಬರೆಯಲು ತಂದೆಯೇನೋ ನನ್ನೊಡನೆ ಹೇಳುತ್ತಿದ್ದರು. ಈ ವಿಷಯದಲ್ಲಿ ನನಗೂ ಅವರಿಗೂ ಸ್ವಲ್ಪ ಮಾತು ನಡೆಯಿತು. ಅವರಿಗೆ ಪ್ರಪಂಚದಲ್ಲಿ ಹಣವೇ ಮುಖ್ಯವೆಂದು ಕಾಣುತ್ತದೆ. ನಾನು ಹೇಳುವುದಿಷ್ಟೇ: ನಾಲ್ಕು ಕಾಸು ಕಡಿಮೆ ಸಿಕ್ಕಿದರೂ ಸರಿ, ನಿಮ್ಮ ಮನಸ್ಸಿಗೊಪ್ಪದ ಕೆಲಸಕ್ಕೆ ಕೈಹಾಕಬೇಡಿ. ನಾನೇನು ಬಡತನಕ್ಕೆ ಹೆದರಬೇಕಾಗಿಲ್ಲ. ಬಡತನವು ಪಾಪವಲ್ಲ. ನಮ್ಮ ಪ್ರೀತಿಯೊಂದು ನೆಟ್ಟಗಿದ್ದರೆ ಹಸಿವಿನದೇತರ ಭಯ? ಈ ವಿಷಯದಲ್ಲಿ ನಾನು ಹೇಳುವುದು ಅದರೂ ಏನಿದ್ದೀತು?

ನೀವು ಹಣ-ಒಡವೆಗಳನ್ನು ಕಳುಹಿಸದಿದ್ದರೂ ಆಯಿತು, ಆದರೆ ಈಗಿನಂತೆ ಮೂರು ದಿನಕ್ಕೊಂದು ಕಾಗದವನ್ನು ಮಾತ್ರ ತಪ್ಪದೆ ಕಳುಹಿಸುತ್ತಿರಿ.

ಇತ

ನಿಮ್ಮ

'.....'

## ಮೂ ಲಾ ಕ್ಷ ರ!

(ಚಿಕ್ಕದೊಡ್ಡ ಮುಕ್ಕಳಿಗಾಗಿ)

●

ಶ್ರೀ. ಜಿ. ಜಿ. ಭಟ್ಟ

'ಕಲಿ'ಯು ಮಾಂಸ-ಮುದ್ದೆ ಮಗು
ಅಲ್ಪನವಗೆ ನಿದ್ದೆ ನಗು;
ಹುಬ್ಬು ಗಂಟು ಹಾಕಿಕೊಂಡು
ಒಬ್ಬನೆಯೇ ಬೂಮಿ-ಚೆಂಡು
ಒದೆಯುತಿದ್ದನೆಂದಿಗೂ!
ಸಾಲೆ ಸೇರೆ ಗುರು ಯಮನು
ಕಲಿಸಿ ಧೂಳಯಕ್ಕರವನು,
'ನಾಳೆ ಬರೆದು ಪಾಟ ತುಂಬ
ಮೂಲಾಕ್ಷರಗಳನು ಹುಂಬ
ಬಾ' ಎನೆ ಮಾರನೆ ದಿನ—
'ಬೇಡ'ಯೆಂದು ತೊವಲಿನ-
ಹೊತ್ತಿಗೆಯಲಿ ಎಲುಬುಟಾಕು
ನೆತ್ತರಿಂದ ಬರೆದು ತೇಕು-
ತಪನು ನಡೆದ ಸಾಲಿಗೆ.
'ಏನು ಬರೆದಿ ಮೂರ್ಖ ಪುಂಡ,
ನಾನು ಕಲಿಸಲಿಲ್ಲವಿದನು'
ಎಂದು ಬೈದು ಕೋಪಗೊಂಡ
ಯಮನು ಇವಗೆ ಬಾರ ಹದನು
ಎನುತ ಹೊಡೆದು, ಕವಿಯ ಹಿಂಡಿ
ಗೋಡೆಗೂಟಕವನ ಚಂಡಿ-
ಕೆಯನು ಕಟ್ಟಿ, ನಾನು ಹೇಳಿ
ಕೊಟ್ಟೆನಂದು ನಿನಗೆ ಧೂಳಿ-
ಯಕ್ಕರವನು ಮರೆತೆಯೇನು?
'ಬೇಡ'ಯೆಂಬ ಶಬ್ದ ಕಲಿಸಿ
ಕೊಟ್ಟರಾರು ಎಂದು ಥಳಿಸಿ
ನಾಲ್ಕಕ್ಷರ ಬಿಡಿಗಡೆಯೇ
ಮೂಲಾಕ್ಷರ ಕಲಿ ಕಲಿಯೇ
ಎಂದು ಚಂಡಿತೆ ಬಿಟ್ಟಿದ;
'ಕಲಿ'ಯ ಬೆನ್ನಿಗೆ ಬಾರ ಸಲಿಗಳ
ಕಂಡು ಎಣ್ಣೆಯ ಹಚ್ಚಿದ!



# ಕರ್ನಾಟಕದ ಚಳವಳಿಯಲ್ಲಿ ಧಾರವಾಡದ ಭಾಗ

( ಸ್ಪಷ್ಟೀಕರಣದ ಮೂರನೆಯ ಕಂತು )

ಶ್ರೀ. ಮುದವೀಡು ಕೃಷ್ಣರಾಯರು, ಧಾರವಾಡ

ಹರಿದು ಹಂಚಿ ಚೆಲ್ಲಿಬಿಟ್ಟಿದ್ದ ಕನ್ನಡನಾಡು ಒಂದಾಗಬೇಕೆಂಬ ಅಂತರ್ಜ್ಞಾನ ಕನ್ನಡಿಗರಿಗೆ ಮೊದಲು ಹೊಳೆದುದು, ಕನ್ನಡದ ಹೃದಯದಂತಿದ್ದ ಧಾರವಾಡದಲ್ಲಿಯೆ. ನಲವತ್ತುಮೂರು ವರುಷಗಳಿಗೆ ಮೊದಲೇ ಏಕೀಕರಣ ಮಹಾಕಾರ್ಯದ ಮಂಗಲಾಚರಣ ಧಾರವಾಡದ ಒಂದು ಸಭೆಯಲ್ಲಿ ನೊಳಗಿತ್ತು!.

ಧಾರವಾಡದ ಅನಾದಿಸಿದ್ಧ ಕರ್ನಾಟಕತ್ವವನ್ನು ಇಲ್ಲಿಯ ಜನರು ಎಷ್ಟೊಂದು ದಕ್ಷತೆಯಿಂದ ಕಾಲಕಾಲಕ್ಕೆ ಕಾಯ್ದುಕೊಳ್ಳುತ್ತ ಬಂದಿರುವ ರೆಂಬುದನ್ನು ಹಿಂದಿನ ಎರಡು ಕಂತುಗಳಲ್ಲಿ ತಕ್ಕಮಟ್ಟಿಗೆ ತಿಳಿಸಿದ್ದೇನೆ. ಸಾರ್ವಜನಿಕ ವ್ಯವಹಾರಗಳಲ್ಲಿ ಪ್ರಯತ್ನಪೂರ್ವಕ ಮರಾಟಿಯನ್ನು ಮುನ್ನುಗ್ಗಿಸ ಹವಣಿಸಿದ ಇಲ್ಲಿಯ ಆಗಂತುಕ ಮಹಾರಾಷ್ಟ್ರೀಯರ ಆಟ ಸಾಗದಂತೆ ಇಲ್ಲಿಯ ಕನ್ನಡ ಕುಲಜರು ಆಗಾಗ ಪ್ರತಿಭಟಿಸುತ್ತಲೆ ಬಂದಿರುವರು. ಹೀಗೆ ಇಲ್ಲಿ ನಿರುಪಾಯರಾದ ಮರಾಟಿಗರು ತಮ್ಮ ಪ್ರಯತ್ನಕ್ಕೆ ಸಂಕಾರದ ವಿದ್ಯಾಖಾತೆಯ ಬೆಂಬಲ ಪಡೆಯುವ ಹಂಚಿಕೆ ಹಾಕಿದರು. ೧೯೦೩ರಲ್ಲಿ ಮುಂಬಯಿ ವಿದ್ಯಾಶಾಖೆಯ ಪಠ್ಯಪುಸ್ತಕ ಗಳನ್ನೆಲ್ಲ ತಿದ್ದಿ ಬರೆಯಿಸಿ, ಹೊಸತವುಗಳನ್ನು ಪ್ರಕಟಿಸುವ ಉಪಕ್ರಮ ಪಾಯಿತು. ಇದರೊಂದಿಗೆ ದೇಶಭಾಷೆಗಳ ಶಾಲೆಗಳ ಅಭ್ಯಾಸಕ್ರಮ ದಲ್ಲಿಯೂ ಬದಲಾವಣೆಯಾಗಬೇಕೆಂದು ವಿಚಾರ ಹೊರಟಿತು. ಮುಂಬಯಿ ಅಧಿಪತ್ಯಕ್ಕೆ ಒಳಗಾಗಿದ್ದ ನಾಲ್ಕು ದೇಶಭಾಷಾ ವಿಭಾಗ. ಗಳಿಗೆ ನಾಲ್ಕು ಜೇರೆ ಜೇರೆ ಮಂಡಲಗಳು ರಚಿಸಲ್ಪಟ್ಟುವು. ನಮ್ಮ ಕನ್ನಡ ಭಾಗದ "ಪಠ್ಯಪುಸ್ತಕ ಪುನರ್ನಿಯೋಜನ ಮಂಡಲ"ಕ್ಕೆ ಆಗ ನಮ್ಮ ಕನ್ನಡ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ದಿವಂಗತ ರಾವಜಿ ಬಾಳಾಜಿ ಕರಂದಿಕರರವರು ಅಧ್ಯಕ್ಷರಾಗಿದ್ದರು. ಇವರು ಒಳ್ಳೆ ಕರ್ತೃತ್ವಶಾಲಿಗಳೆಂದು ಖ್ಯಾತಿವಂತರಾಗಿದ್ದರು. ಇವರ ಸಲಹೆಸೂಚನೆಯೂ ಬಹುಕಾಲದಿಂದ ಇತ್ತ ಕಡೆಗೇ ನೆಲಸಿದ್ದಿತಾದರೂ ಇವರ ಸಲಹೆಮಾತು ಮರಾಟಿ. ಆಗ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್ಸಪೆಕ್ಟರರಾಗಿದ್ದ "ಸಹಸ್ರಬುದ್ಧೆ" ಎಂಬವರು ಪುಣೆಯ ಜಬ್ಬಾ ಟ್ಟಿನ ಮಹಾರಾಷ್ಟ್ರೀಯರು. ಹೀಗೆ ಇಬ್ಬರು ವರಿಷ್ಠಾಧಿಕಾರಿಗಳು ತಮ್ಮ ವಿಶಿಷ್ಟ ವರ್ಚಸ್ಸ್ವವನ್ನು ಉಪಯೋಗಿಸಿ, ಇಲ್ಲಿಯ ಶಾಲೆಗಳಂತ ಯಾವುದೋ ಕಾಲು ಕೆತ್ತಿದ ಮರಾಟಿಗೆ ಮತ್ತೆ ಪ್ರವೇಶ ಹೊರೆಯುವಂತೆ ಮಾಡಬೇಕೆಂದು ಹವಣಿಕೆ ಹಾಕಿದರು. ಈ ಅನುಸಂಧಾನದಿಂದ ಇನ್ನ ಶಾಲೆಗಳಲ್ಲಿ ಒಂದೆರಡು ವರ್ಷಗಳನ್ನು ನೂಕಿದ ಹುಡುಗರಿಗೆ ಮರಾಟಿ ಅಕ್ಷರಗಳನ್ನು ಕಲಿಸಿ ಮರಾಟಿ ಪುಸ್ತಕಗಳನ್ನು ಓದಿಸಬೇಕೆಂಬ ತಿದ್ದುಪಡೆಯನ್ನು ಅಭ್ಯಾಸಕ್ರಮದಲ್ಲಿ ಸೂಚಿಸಿದರು. ವಿದ್ಯಾಶಾಖೆಯ ಮೇಲಧಿಕಾರಿಗಳಿಂದ ಇದಕ್ಕೆ 'ಹೋಕಾರ' ದೊರೆತ ಸುದ್ದಿಯೂ ಹಬ್ಬಿತ್ತು. ಮೂವತ್ತು ನಾಲ್ವತ್ತು ವರ್ಷಗಳ ವರೆಗೆ ಅಖಂಡವಾಗಿ ಕನ್ನಡವಾಗಿದ್ದುಕೊಂಡು ಬಾಳ ಬೆಳೆದು ಬಂದಿದ್ದ ಶಾಲೆಗಳಲ್ಲಿ ಮತ್ತೆ ಮರಾಟಿಯ ಜುಂಚುಪ್ರವೇಶವೇಕೆಂದು ಇತ್ತ ಕಡೆಯ ಕನ್ನಡ ಜನಾಂಗವು ಹುಯಿಲಿಬ್ಬಿಸಿತು. ಇಲ್ಲಿಯ ವಿದ್ಯಾವರ್ಧಕ ಸಂಘವು ಮುಖಂಡತ್ವ ವಹಿಸಿ ಚಳವಳಿ ನಡಿಸಿತು. ವಿದ್ಯಾಧಿಕಾರಿಗಳಿಗೂ ಸರಕಾರಕ್ಕೂ ಮನವಿಗಳು ಹೋದುವು. ಈ ಪ್ರತಿಭಟನೆಗೆ ಕಮೀಟಿಯವರ ಸಮಂಜಸ ತೋರುವ ಸಮಾಧಾನವೂ ಇತ್ತಂತೆ! 'ಇಂಗ್ಲೀಷ ನಾಲ್ಕನೆಯ ಇಯತ್ತೆಯಲ್ಲಿ ಸಂಸ್ಕೃತಕ್ಕೆ ಆರಂಭವಾಗುವ ಮರಾಠಿ ಅಕ್ಷರಗಳನ್ನು ಸಂಸ್ಕೃತಕ್ಕಾಗಿ ಕಲಿಯಬೇಕಾಗುತ್ತದೆ. ಚಿಕ್ಕಂದಿನ ಅಭ್ಯಾಸವಿಲ್ಲದ ಮೂಲಕ ಅಕ್ಷರಗಳು ನೆಟ್ಟಗಾಗುವುದಿಲ್ಲ. ಪರೀಕ್ಷಕರಿಗೆ ತಿಳಿಯುವುದೂ ಬಿಗಿಯಾಗುತ್ತದೆ. ಆದ್ದರಿಂದ ಮೊದಲಿನಿಂದಲೇ 'ಬಾಳಬಂದು (ಬಾಲಬೋಧದ ತದ್ಭವ)' ಕಲಿಸುವುದು ಪ್ರಗತಿಗೆ ಸಾಧಕ—ಎಂಬುದೇ ಕಮೀಟಿಯವರ ಪ್ರತಿಪಾದನೆ. ಕೊನೆಗೆ ವಿದ್ಯಾವರ್ಧಕ ಸಂಘದ ಶಿಷ್ಟಮಂಡಳವು ಶಿಕ್ಷಣಾಧಿಕಾರಿಗಳಾದ ಡಾಯರೆಕ್ಟರರನ್ನು ಪ್ರತ್ಯಕ್ಷ ಕಂಡು "ಬಡಕನ್ನಡಿಗರ ಗುಡಿಸಿಲಿನಲ್ಲಿ ಮರಾಟಿಯ ಒಂಟಿಯು ಮರಿಯನ್ನು ಹೊಗಿಸುವ ಅನ್ಯಾಯ ಮಾಡಬಾರದು" ಎಂದು ಸ್ಪಷ್ಟವಾಗಿ, ತುಸು ಬಿರುಸಾಗಿ ಹೇಳಿ, ಪಣೆಯಿಕ್ಕುತ್ತಿದ್ದ ವಿಪತ್ತನ್ನು ದೂರಮಾಡಿಕೊಳ್ಳಬೇಕಾಯಿತು. ಕನ್ನಡಿಗರ ನಿಸರ್ಗ ಸಿದ್ಧ ಕನ್ನಡತನವನ್ನು ಕಾಯ್ದುಕೊಳ್ಳುವ ಕೆಲಸದಲ್ಲಿ ಧಾರವಾಡದ ನರು ಇದನ್ನು ಸಾಧಿಸಿದುದೂ ಒಂದು ಹೆಚ್ಚಿನ ವಿಜಯವಾಗಿದೆ.

ಹಿಂದುಸ್ಥಾನದ ವಾಯಸರಾಯರಾಗಿದ್ದ ಲಾರ್ಡ್ ಕರ್ಜನರು ೧೯೦೫ರಲ್ಲಿ ಬಂಗಾಲವನ್ನು ಇಕ್ಕಿದಿಗೈದರು. ಇದು ತಮ್ಮ ಏಕ ರಾಷ್ಟ್ರೀಯತ್ವಕ್ಕೆ ಘಾತಕವಾದುದೆಂಬ ವಿಚಾರದಿಂದ ಬಂಗಾಲಿಗಳೆಲ್ಲ ಉರಿದೆದ್ದರು. ಇಡಿ ಬಂಗಾಲದಲ್ಲಿ ಚಳವಳಿಯಾಯಿತು ಬ್ರಿಟಿಷ್ ಸರಕಾರದ ಈ ಭೇದನೀತಿಯನ್ನು ಪ್ರತಿಭಟಿಸಲು ಬ್ರಿಟಿಷ್ ಸರಕಾರಕ್ಕೆ

ಬಹಿಷ್ಕಾರ ಹಾಕುವ ಅರ್ಥಾತ್ ಸ್ವದೇಶೀ ಸರಕುಗಳನ್ನೇ ಉಪಯೋಗಿಸುವ ದೃಢನಿರ್ಧಾರವನ್ನು ಬಂಗಾಲಿಗಳು ಮಾಡಿದರು. ಬಂಗಾಲ ಕ್ಕೊದಗಿದ ಈ ವಿಪತ್ತು ಇಡಿ ದೇಶಕ್ಕೆ ಬಂದ ಆಪತ್ತೆಂಬ ಭಾವನೆಯಿಂದ ರಾಷ್ಟ್ರೀಯ ಮಹಾಸಭೆಯೂ ಸ್ವದೇಶೀ–ಬಹಿಷ್ಕಾರಗಳ ಗೊತ್ತುವಳಿಗಳನ್ನು ೧೯೦೫ರಲ್ಲಿ ಕಾಶಿಯಲ್ಲಿ ಗೋಪಾಳ ಕೃಷ್ಣ ಗೋಖಲೆಯವರ ಅಧ್ಯಕ್ಷತೆಯಲ್ಲಿ ಅಂಗೀಕರಿಸಿತು. ವಂಗಭಂಗದ ಚಳವಳಿಯ ಪ್ರಭಾವದಿಂದಾಗಿ ಹುಟ್ಟಿದ ಸ್ವದೇಶೀ—ಬಹಿಷ್ಕಾರ—ರಾಷ್ಟ್ರೀಯ ಶಿಕ್ಷಣ—ಸ್ವರಾಜ್ಯ—ಎಂಬೀ ನಾಲ್ಕು ಬಗೆಯ ರಾಷ್ಟ್ರ ಜಾಗೃತಿಯ ಆಂದೋಲನವು ದೇಶದಲ್ಲೆಲ್ಲ ವ್ಯಾಪಿಸಿತು. ಇವುಗಳೊಳಗಿನ ರಾಷ್ಟ್ರೀಯ ಶಿಕ್ಷಣದ ಮುಖಾಂತರವಾಗಿ ದೇಶಭಾಷೆಗಳಿಗೆ ಹೆಚ್ಚಾಗಿ ಚೈತನ್ಯಾಗಿ ಪ್ರೋತ್ಸಾಹ ದೊರೆಯಹತ್ತಿತೆಂಬುದೇನೋ ನಿಜ; ಆದರೆ ಈ ಚಳವಳಿಯೇ ದೇಶಭಾಷೋಜ್ಜೀವನದ ಮೂಲವೆಂದು ಹೇಳಲಾಗದು. ಆತ್ತ ಉತ್ತರ ಹಿಂದುಸ್ತಾನದಲ್ಲಿ ಬಂಗಾಲ, ಸಂಯುಕ್ತ ಪ್ರಾಂತ, ಬಿಹಾರ ಮೊದಲಾದ ಪ್ರದೇಶಗಳಲ್ಲಿಯೂ ಇತ್ತ ಮಹಾರಾಷ್ಟ್ರ, ಗುಜರಾತ, ತಮಿಳನಾಡು, ಆಂಧ್ರದೇಶಗಳಲ್ಲಿಯೂ ಎಷ್ಟೋ ವರ್ಷಗಳ ಮೊದಲಿನಿಂದಲೂ ಸ್ವಭಾಷೆಗಳನ್ನು ಎತ್ತಿ ಹಿಡಿದು ಅವುಗಳ ಉದ್ಧಾರ ಕಾರ್ಯಕ್ಕೆ ಆರಂಭವಾಗಿ ಸತತ ಪ್ರಯತ್ನ ನಡೆದದ್ದುಂಟು. ಹಾಗೆಯೇ ನಮ್ಮ ಕನ್ನಡನಾಡಿನಲ್ಲಿ ಬೇರೆ ಬೇರೆ ಭಾಗಗಳಲ್ಲಿಯೂ ಪ್ರಾಚೀನ ಕನ್ನಡ ಗ್ರಂಥಗಳ ಸಂಶೋಧನ-ಸಂಸ್ಕರಣ-ಮುದ್ರಣ-ಪ್ರಕಾಶನಾದಿ ಮಹತ್ತ್ವದ ಕಾರ್ಯಗಳು ಹತ್ತಿಪ್ಪತ್ತು ವರ್ಷ ಮೊದಲಿನಿಂದಲೇ ನಡೆದಿದ್ದುವು. ಇತ್ತಕಡೆಗೆ ವಿದ್ಯಾವರ್ಧಕ ಸಂಘದ ಮುಖಾಂತರ ಹೊಸ ಹೊಸ ಲೇಖಕರಿಗೂ ಕವಿಗಳಿಗೂ ಪ್ರೋತ್ಸಾಹ ದೊರೆತು ಕೆಲಸ ನಡೆದರೆ, ಬೆಂಗಳೂರು ಮೈಸೂರುಗಳ ಕಡೆಗೆ **ಎಸ್. ಜಿ. ನರಸಿಂಹಾಚಾರ್ಯ, ರಾಮಾನುಜಯ್ಯಂಗಾರ್** ಮೊದಲಾದವರು ಈ ಉದ್ಯೋಗವನ್ನು ನಡೆಸಿದ್ದರು. ಬಿ. ವೆಂಕಟಾಚಾರ್ಯರ ಕೃತಿಗಳು ಸುಪ್ರಸಿದ್ಧವಾಗಿವೆ ಆತ್ತ ಮಂಗಳೂರ ಭಾಗದಲ್ಲಿಯೂ **ಪಂಜೆ ಮಂಗೇಶರಾಯರು, ಬೆನಗಲ್ ರಾಮರಾಯರು, ಕಡೇಕಾರ ರಾಜಗೋಪಾಲಕೃಷ್ಣರಾಯರು, ಕೆದೋಡಿ ಸುಬ್ಬರಾಯರು** ಮೊದಲಾದವರು ಕನ್ನಡದ ಪುನರುಜ್ಜೀವನದ ಸಾಹಸಕ್ಕೆ ಕೈಯಿಕ್ಕಿದ್ದರು. ಆದರೆ ಕನ್ನಡ ಜನಾಂಗದ ದುರ್ದೈವದ ಮೂಲಕ ರಾಜಕೀಯ ಆಡಳಿತದಲ್ಲಿ ಹರಿದುಹಂಚಾಗಿ ಬಿದ್ದಿದ್ದ ಕನ್ನಡನಾಡಿನಲ್ಲಿ ತಮ್ಮ ನುಡಿಯ ಏಳಿಗೆಗಾಗಿ ಮಾಡತಕ್ಕ ಪ್ರಯತ್ನಗಳಿಗೆ ಏಕಸೂತ್ರತೆಯಾಗಲಿ ಸಂಸ್ಫೂರ್ತಿ ದೊರೆಯುತ್ತಿರಲಿಲ್ಲ. ಕನ್ನಡನಾಡಿನ ಬೇರೆ ಬೇರೆ ಕಡೆಗೆ ನಡೆದ ಈ ಪ್ರಯತ್ನಗಳೆಲ್ಲ ಒಮ್ಮುಖವಾಗಬೇಕೆಂಬ ವಿಚಾರವು ಧಾರವಾಡದಲ್ಲಿ ೧೯೦೩ರಲ್ಲಿಯೇ ಪ್ರಾದುರ್ಭವಿಸಿತು. ಆದುದರಿಂದ ವಂಗಭಂಗದ ಚಳವಳಿಯಿಂದ ಕನ್ನಡಿಗರೂ ಕಣ್ಣು ತೆರೆದು, ತಮ್ಮ ನಾಡು-ನುಡಿಗಳ ಉನ್ನತಿಗಾಗಿ ಸಾಹಸ ಮಾಡಲನುವಾದರೆಂಬ ಅಪವಾದನೆಯಿಂದ "ಕನ್ನಡಿಗರಲ್ಲಿ ಅಂತಃಸ್ಫೂರ್ತಿಯಿಲ್ಲ; ಸ್ವಯಂ-ಸ್ಫೋರಣೆಯಿಲ್ಲ; ಪರಪ್ರತ್ಯಯನೇಯ ಒದ್ದಿಯವರಂದ ಇವರಲ್ಲಿ ಅನುಸರಣವೃತ್ತಿಯೇ ತುಂಬಿದೆ" ಎಂಬ ಹೀನಾಯ ಭಾವನೆಯನ್ನು ಕನ್ನಡ ಜನಾಂಗದ ಕೊರಳಿಗೆ ಕಟ್ಟುವದು ಯೋಗ್ಯವಲ್ಲ. ಕರ್ನಾಟಕ ದೊರೆಗಳ ಚಿತ್ತಕ್ಕೆ ವಂಗಭಂಗದ ವಿಚಾರವು ಹೊಳೆಯುವ ಮೊದಲೇ ರಾಜಕೀಯ ಆಡಳಿತಗಳ ಅನುಕೂಲಕಾಗಿ ಹರಿದು ಹಂಚಿ ಕೆಡವಲಾಗಿದ್ದ ಕರ್ನಾಟಕವು ಒಂದಾಗಬೇಕೆಂಬ "ಅಂತರ್ಜ್ಞಾನ"ವು ಕನ್ನಡಿಗರಿಗೇ ಹೊಳೆದು, ಆಗಲೇ ಅದರ ಅವಿಷ್ಕರಣವು "ತಿರುಳ್ಗನ್ನಡ" ನಾಡಿನ ಹೃದಯದಂತಿದ್ದ ಧಾರವಾಡದಲ್ಲಿಯೇ ಆಗಿ, ಆಗಲೇ "ಕರ್ನಾಟಕ ಏಕೀಕರಣ" ಸುಮಂಗಲ ಕಾರ್ಯದ ಮಂಟಪ ದೇವತಾಸ್ಥಾಪನೆಯಾಗಿ ಹಂದರಗಂಬವು ನಿಲ್ಲಿಸಲ್ಪಟ್ಟಿತೆಂಬ ಸಂಗತಿಯು ಪರಿಜ್ಞಾನವು ಈಗಿನ ಹೊಸಗನ್ನಡ ಜನಾಂಗಕ್ಕೆ ಮನೋವೇಧಕವೂ ಬೋಧಪ್ರದವೂ ಆಗುವುದೆಂಬುದಕ್ಕೆ ಅನುಮಾನವಿಲ್ಲ.

ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕ ವಾರಿತೋಷಕ ಸಮಾರಂಭವು ೧೯೦೩ರಲ್ಲಿ ವಿಕ್ಟೋರಿಯಾ ಹಾಯಸ್ಕೂಲಿನ ಜಗಿಸಿನ ಚಿತ್ರಕಲಾ ವರ್ಗ (ಡ್ರಾಯಿಂಗ್ ಹಾಲ್) ದಲ್ಲಿ ಎಂದರೆ ಈಗ ಬಾಲೆಯ ಪ್ರಾಕಾರದೊಳಗೆ ಹೊಕ್ಕ ಕೂಡಲೆ ಬಲಬದಿಗೆ ಎರಡು ವರ್ಗಗಳಿಗೆ ಅನುಕೂಲ ಮಾಡಿಕೊಂಡಿರುವ ಕಟ್ಟಡದಲ್ಲಿ ನಡೆಯಿತು. ಆಗ ವಿಶಾಲವಾಗಿದ್ದ ಈ ಭವನವು ಧಾರವಾಡದ ಪ್ರಮುಖ ಪ್ರಮಿತ ನಾಗರಿಕರಿಂದ ತುಂಬಿಹೋಗಿತ್ತು. ಧಾರವಾಡದ ಗಿನೆಯ ವರ್ಗದ ಸಬ್‌ಜಜ್ಜರಾಗಿದ್ದ ರಾವಬಾಹದ್ದೂರ್ ಗಂಗೊಳ್ಳಿ ರಾಘವೇಂದ್ರರಾಯರು ಸಮಾರಂಭಕ್ಕೆ ಅಧ್ಯಕ್ಷರಾಗಿದ್ದರು. ಇವರು ಮೂಲತಃ ಕಾರವಾರ ಜಿಲ್ಲೆಯವರು. ಬಹುದಿವಸಗಳಿಂದ ಸಂಘದ ಕಾರ್ಯದರ್ಶಿತ್ವದ ಹೊಣೆ ಹೊತ್ತು ಕೆಲಸ ಮಾಡಿ ಅದನ್ನು ಸುಸ್ಥಿತಿಗೆ ತಂದಿದ್ದ ದಿವಂಗತ ಕಲಿಗುದರಿ ನಾರಾಯಣರಾವ ವಕೀಲರೇ ಕಾರ್ಯದರ್ಶಿಗಳಾಗಿದ್ದರು. ಆ ವರ್ಷ ಭಾಷಣಸ್ಪರ್ಧೆಗೆಂದು ನೇಮಿಸಲಾಗಿದ್ದ ಎರಡು ವಿಷಯಗಳೊಳಗೆ ಒಂದಕ್ಕೆ ನಾನೂ ಇನ್ನೊಂದಕ್ಕೆ ನನ್ನ ಮಿತ್ರ ದಿವಂಗತ ರೊದ್ದ ವ್ಯಾಸರಾಯರೂ ಸ್ಪರ್ಧಿಸಿದ್ದರಿಂದ ನಮ್ಮ ಪರಿಣಾಮಗಳನ್ನು ತಿಳಿದುಕೊಳ್ಳಲೆಂದೂ ನಾವು ಸಮಾರಂಭದಲ್ಲಿ ಕಲೆತಿದ್ದೆವು. ಅಧ್ಯಕ್ಷರ ಎಡಗಡೆಯ ಆಸನದ ಮೇಲೆ ಕಾರ್ಯದರ್ಶಿಗಳೂ ಬಲಗಡೆಗೆ ಒಳ್ಳೆ ತೇಜಸ್ವಿಯಾದ ಒಬ್ಬ ಕನ್ನಡ ಯುವಕರೂ ಆಸೀನರಾದದ್ದನ್ನು ನಾವು ಕಂಡೆವು ಗಿಡ್ಡ ಆಕಾರದ ತುಂಬಿದ ಮೈಕಟ್ಟುಳ್ಳ ಕೆಂಪು ಬಣ್ಣದ ಆ ಯುವಕರು ತಮ್ಮ ಹೊಳಪಿನ ಕಣ್ಣುಗಳಿಂದ ನಮ್ಮ ಚಿತ್ತಗಳನ್ನೇ ಆಕರ್ಷಿಸಿದರು. ತಮ್ಮ ಚೂಪಾದ ಮೂಗಿನಿಂದ ಅಂದಗೊಂಡ ಅವರ ಮೋರೆಯ ಮೇಲೆ ಅಭೂತಪೂರ್ವ ವಿದ್ಯಾಸಂಸ್ಕಾರದ ವರ್ಚಸ್ಸುವು ತುಂಬಿ ಹೊರಸೂಸುವಂತಿತ್ತು. ಕಾರ್ಯದರ್ಶಿಗಳು ಸಭೆಯ ಉಪಕ್ರಮವಾಡಿ, ಸಂಘದ ಕಾರ್ಯ-ವಿವರಗಳನ್ನು ತಿಳಿಸಿ ಪರೀಕ್ಷೆಯಿಂದ ಬಂದ ಪರಿಣಾಮಗಳನ್ನು ಹೇಳಿದ್ದರಲ್ಲಿ ನನಗೂ ವ್ಯಾಸರಾಯರಿಗೂ ಬಹುಮಾನ ದೊರೆತದ್ದು ಗೊತ್ತಾಯಿತು. ಅಧ್ಯಕ್ಷರು ಬಹುಮಾನಗಳನ್ನು ಹಂಚಿದ ಬಳಿಕ ತಮ್ಮ ಭಾಷಣವನ್ನು ಆರಂಭಿಸಿ ತಮ್ಮ ಪಕ್ಕದಲ್ಲಿ ಕೂತವರ ಪರಿಚಯ ಮಾಡಿಕೊಟ್ಟರು. ಅವರೇ ಮುಂದೆ ಕನ್ನಡನಾಡಿನಲ್ಲೆಲ್ಲ ತಮ್ಮ ಗದ್ಯಪದ್ಯ ಲೇಖನ-ಗ್ರಂಥಕರ್ತೃತ್ವಗಳಿಂದಲೂ ಸರಕಾರದ ಅಧಿಕಾರ ಗೌರವಗಳಿಂದಲೂ (ಅರ್ಹವಾಗಿ) ಕನ್ನಡನಾಡಿನ ಏಕನಿಷ್ಠ ಭಕ್ತರಾಗಿ ಅನೇಕ ಬಗೆಯ ಸೇವೆಗೈದು ಪ್ರಸಿದ್ಧರಾಗಿ ಈಗ ಕೀರ್ತಿಶೇಷರಾಗಿರುವ ಶ್ರೀ. ಬೆನಗಲ್ ರಾಮರಾಯರು. ಮದರಾಸು ವಿದ್ಯಾಪೀಠದ ಬಿ. ಎ ಆಗಿ ಎಂ. ಎ. ಕ್ಕೆ ಕನ್ನಡ, ತೆಲುಗು ಈ ಎರಡು ದೇಶಭಾಷೆಗಳನ್ನು ಐಚ್ಛಿಕವಾಗಿ ತೆಗೆದುಕೊಂಡು ತೆಲುಗಿನ ಅಭ್ಯಾಸವನ್ನು ವಿದ್ಯಾರ್ಥಿನಿಲ್ಲೇ ಪೂರೈಸಿ, ಕನ್ನಡದ ಅಧ್ಯಯನಕ್ಕೆಂದು

ಮೈಸೂರಿಗೆ ಹೋಗಿ ಅಲ್ಲಿ ಸೆಕ್ರೆಟರಿಯೇಟಿನಲ್ಲಿ ಕೆಲಸಕ್ಕೆ ಸೇರಿಕೊಂಡು, ಕನ್ನಡದ ಅಭ್ಯಾಸವನ್ನು ಮುಂದುವರಿಸಿದರು. ಅಲ್ಲಿ ಅವರಿಗೆ ಸಂತೃಪ್ತಿಯಾಗದ್ದರಿಂದ ವರ್ಷಾರು ತಿಂಗಳುಗಳಲ್ಲಿಯೆ ಸರಕಾರದ ಸೇವೆಗೆ ಶರಣು ಹೊಡೆದು ಇಲ್ಲಿಯ ಸಂಘದ ಗ್ರಂಥಾಲಯದ ಆಧಾರದಿಂದ ಕನ್ನಡದ ಅಭ್ಯಾಸವನ್ನು ಮುಂದೆ ಸಾಗಿಸಲು ಧಾರವಾಡದಲ್ಲಿ ಬಂದು ನಿಂತಿದ್ದರು. ಹೀಗೆ ಕನ್ನಡದ ವಿಷಯವಾಗಿ ಒಳ್ಳೇ ಆಸ್ಥೆಯುಳ್ಳವರಾಗಿದ್ದ ತರುಣ ಪದವೀಧರರು ಸಂಘದ ಅಂದಿನ ಉತ್ಸವ ಪ್ರಸಂಗದಲ್ಲಿ ಕನ್ನಡದ ಬೆಳವಣಿಗೆಯ ವಿಚಾರದಲ್ಲಿ ತಮ್ಮ ನಾಲ್ಕೂ ದಿಕ್ಕಿನ ನೋಟಗಳಿಂದ ಕಂಡುಕೊಂಡ ಮಾತುಗಳನ್ನು ಹೇಳುವುದು ಕಾಲೋಚಿತವಾಗಿರುವುದೆಂದು ಪ್ರಸ್ತಾಪವನ್ನೆತ್ತಿ, ಅಧ್ಯಕ್ಷರು ಶ್ರೀ. ರಾಮರಾಯರಿಗೆ ಮಾತನಾಡಲು ಸೂಚಿಸಿದರು. ಆಗ ಶ್ರೀ. ರಾಮರಾಯರು ತಮ್ಮ ಮನೋಹರವಾದ ದಕ್ಷಿಣ ಕನ್ನಡದ ಹೊಸಗನ್ನಡ ಶೈಲಿಯಲ್ಲಿ, ತಮ್ಮ ಸೀಮೆಯಲ್ಲಿ—ಹಾಗೆಯೇ ಮೈಸೂರು ದೇಶದಲ್ಲಿ ಇತ್ತ ಧಾರವಾಡ ನಾಡಿನಲ್ಲಿ ಕನ್ನಡದ ಉಜ್ಜೀವನಕ್ಕಾಗಿ ಮಾಡಲಾಗುತ್ತಿದ್ದ ಪ್ರಯತ್ನಗಳನ್ನು ಸೂಕ್ಷ್ಮವಾಗಿ ನಿವೇದಿಸಿ, ಕನ್ನಡನಾಡು ಖಂಡಿತವಾಗಿ ಬೇರೆ ಬೇರೆ ಆಡಳಿತಗಳಿಗೆ ಒಳಗಾಗಿರುವುದರಿಂದ ಕನ್ನಡ ಜನಾಂಗದ ಭಾಷೆಯ ಅಭಿವೃದ್ಧಿಗೆ ಅಖಂಡವಾದ ಏಕಮುಖವಾದ ಪ್ರಯತ್ನ ಮಾಡಲು ಯಾವ ಭಾಗದವರಿಗೂ ಅವಕಾಶ ದೊರೆಯದಾಗಿದೆ; ಬಳ್ಳಾರಿ, ಅನಂತಪುರ, ಕಡಪಾ, ಕರ್ನೂಲು ಕಡೆಯ ಕನ್ನಡ ಮಾತನಾಡುವ ವಿದ್ಯಾರ್ಥಿಗಳ ಪೈಜಯವು ತಮಗೆ ಮದರಾಸಿನ ವಿದ್ಯಾಲಯಗಳಲ್ಲಿ ಆಗಿರುವುದರಿಂದ ಅವರ ಭಾಷೆಯ ಪಡಿಪಾಟಲವನ್ನು ಬಣ್ಣಿಸಲಾಸ್ಯ; ಕನ್ನಡ ಅಕ್ಷರ ಜ್ಞಾನವೂ ಅವರಿಗಿಲ್ಲ; ಸೇಲಂ, ನೀಲಗಿರಿ, ಕೊಯಿಮತ್ತೂರಿನತ್ತ ಕಡೆಯ ಕನ್ನಡಿಗರ ಸಂಕಷ್ಟವೂ ಹೀಗೇ ಇದೆ; ಕನ್ನಡ ದಾಸರ ಪದಗಳನ್ನು ಅವರು ತಮಿಳು ಲಿಪಿಯಲ್ಲಿ ಬರೆದುಕೊಂಡದ್ದೂ ಉಂಟು..... ಎಂಬಿವೇ ಮೊದಲಾದ ತಮ್ಮ ಅನುಭವದ ಸಂಗತಿಗಳನ್ನು ವಿವರಿಸಿ, ಕನ್ನಡನಾಡಿನ ಬೇರೆ ಬೇರೆ ಭಾಗಗಳಲ್ಲಿಲ್ಲಕಡೆಗೆ ಕೆಲ ಕಾಲ ಇದ್ದು ಅಲ್ಲಿಲ್ಲಿಯವರಿಂದ ನಡೆದ ಪ್ರಯತ್ನಗಳನ್ನು ನಿರೀಕ್ಷಿಸಿದ ತಮಗೆ ಕನ್ನಡನಾಡು ಒಂದಾಗಿ ಒಂದೇ ಆಡಳಿತದಲ್ಲಿ ಬಾರದೆ, ಕನ್ನಡಿಗರೆಲ್ಲ ಒಂದೆಂಬ ಭಾವನೆ ಒಡಮೂಡದೆ, ತಮ್ಮ ಜನಾಂಗದ ಭಾಷೆಗೆ ಬರಬಹುದಾದ ಆಳಿಗಾಲವನ್ನು ತಪ್ಪಿಸುವುದಕ್ಕಾಗಿ ಅಲ್ಲಲ್ಲಿಯ ಸ್ವಭಾಷಾ ಪ್ರೇಮಿಗಳು ಮಾಡುತ್ತಿದ್ದ ಅಲ್ಪಸ್ವಲ್ಪ ಪ್ರಯತ್ನಗಳಿಗೆ ಯಶಸ್ಸು ದೊರೆಯಲಾರದೆಂದು ತಾವು ನಂಬಿಕೊಂಡಿರುವುದಾಗಿ ನಿಃಸಂದಿಗ್ಧವಾಗಿ ಸಾರಿದರು; ಮತ್ತು ಕನ್ನಡನುಡಿಯ ಏಳಿಗೆಯಾಗಿ ಅದು ತನ್ನ ಹೊದಲಿನ ಗೌರವ ಸ್ಥಾನ-ಮಾನಗಳನ್ನು ಪಡೆಯಬೇಕೆಂದು ಬಯಸುವ ಮಹನೀಯರು, ಹರಿದು ಹಂಚಿಹೋಗಿರುವ ಕನ್ನಡನಾಡನ್ನು-ಕನ್ನಡ ಜನಾಂಗವನ್ನು-ಒಂದುಗೂಡಿಸುವ ಪ್ರಯತ್ನಕ್ಕೆ ಮೊದಲು ಕೈಯಿಕ್ಕದೆ ಬೇರೆ ದಾರಿಯೇ ತಮಗೆ ಕಾಣುವುದಿಲ್ಲೆಂದು ಸ್ಪಷ್ಟವಾಗಿ ಹೇಳಿದರು ಸಭಾಸ್ಥಾನದಲ್ಲಿದ್ದ ಪ್ರತಿಯೊಬ್ಬರಿಗೂ ಶ್ರೀ. ರಾಮರಾಯರ ಈ ವಿಧಾನವು ಕಣ್ಣಿಗೆ ಆಜನ ಹಾಕಿ ಹೊಸ ದೃಷ್ಟಿಯನ್ನು ಹುಟ್ಟಿಸಿದಂತಾಯಿತೆಂಬುದನ್ನು ನಾನು ಕಣ್ಣಾರೆ ಕಂಡು ಬಲ್ಲೆನು. ಕನ್ನಡಿಗರಿಗೆಲ್ಲರಿಗೂ ಇದೊಂದು ಹಿಗ್ಗಿನ ಸುದ್ದಿಯಾಯಿತು. ಆದರೆ ಧಾರವಾಡದ ಮರಾಠಿ ಶಾಲೆಯಲ್ಲಿ ಹೆಡ್


ಆಲ್ ಇಂಡಿಯಾ ಆಯುರ್ವೇದಿಕ್ ಕಾನ್ಫರೆನ್ಸ್ ೧೯೪೫ರಲ್ಲಿ
ಬಂಗಾರದ ಪದಕ ಪಡೆದಿರುವ—ಮಲೇರಿಯಾ
ರೋಗದ ಮೇಲೆ ಆಟಂ ಬಾಂಬಿನಂತಿರುವ

ಪೈಲಾಫ್ರಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ರಕ್ತಹೀನತೆಗೂ ಮೇಲೆ ರಾಮಬಾಣ! ಲಿವರ್, ಕೊಟ್ಟಿನೋವು, ಗುಲಬುದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ. ಕ್ವಿನ್ಯಾನ್ ಬದಲು ವೈದ್ಯ—ಡಾಕ್ಟರರು ಧಾರಾಳವಾಗಿ ಉಪಯೋಗಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೬೦ಕ್ಕೆ ೧-೧೫-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಪೇಲಫಾ ಕೆಮಿಕಲ್ ಕಂಪನಿ, ಸಿರಸಿ, ಉ ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪಿರಾವ) ಧಾಕಪ್ಪಾ.
ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ಪಂಜುವವರು:
ಫ್ರೆಂಡ್ಸ್ ಸ್ಟೋರ್, ಧಾರವಾಡ


ಮಾಸ್ತರರಾಗಿ ಬಹು ವರ್ಷಗಳಿಂದ ಕೆಲಸ ಮಾಡುತ್ತ ಇಲ್ಲಿಯೇ ನೆಲಸಿ ಕನ್ನಡವನ್ನು ವ್ಯವಹಾರದ ಮಟ್ಟಿಗೆ ಮೈಗೂಡಿಸಿಕೊಂಡಿದ್ದ ಶ್ರೀ. ಗೋವಿಂದ ದಾನೋದರ ದೀಕ್ಷಿತರೆಂಬವರು ಶ್ರೀ. ರಾಮರಾಯರ ಈ ವಿಧಾನವನ್ನು ಅಪ್ರಯೋಜಕವೆಂದು ಖಂಡಿಸುವ ಮಾತನ್ನು ಕನ್ನಡದಲ್ಲಿಯೆ ಆಡಿದರು. "ಮಹಾರಾಷ್ಟ್ರವೂ ಅನೇಕ ಕಡೆಗೆ ಹರಿದು ಹಂಚಲಾಗಿದೆ; ಮಧ್ಯಪ್ರಾಂತ್ಯ, ವರ್ಹಾಡಗಳಲ್ಲಿ ಮಾತ್ರವಲ್ಲದೆ ಬಡೋದಾ, ಇಂದೂರು, ಗ್ವಾಲ್ಹೇರ ಮುಂತಾದ ಸಂಸ್ಥಾನಗಳೂ ಮಹಾರಾಷ್ಟ್ರದ ತುಂಡುಗಳೇ ಆಗಿದ್ದರೂ ಮರಾಟೇ ಜನರು ಸ್ವಭಾಷಾಭಿಮಾನ ಪ್ರೇರಿತರಾಗಿ ಬಹುಜನ ಕಾರ್ಯಕರ್ತರು ಮಡಿಯುತ್ತಾರೆ; ಕನ್ನಡಿಗರಿಗೆ ಭಾಷಾಭಿಮಾನವಿಲ್ಲದ ಮೂಲಕ ಅವರಿಂದ ಕರುಳಿನ ಪ್ರಯತ್ನವೇ ಆಗುವುದಿಲ್ಲ; ಆದುದರಿಂದ ಕನ್ನಡವು ಬೆಳೆಯಲೊಲ್ಲದು; ಕರ್ನಾಟಕವು ಅಖಂಡತೆಯ ದೃಷ್ಟಿಯಿಂದ ಹರಿದು ನಾಲ್ಕಾರು ಕಡೆಗೆ ಹಂಚಲಾಗಿದ್ದರೂ ಅದರಿಂದ ಕನ್ನಡದ ಉತ್ಕರ್ಷಕ್ಕೆ ಅಡಚಣೆವಾಗುವ ಕಾರಣವಿಲ್ಲ; ಶ್ರೀ. ರಾಮರಾಯರ ಪ್ರತಿಪಾದನೆಯು ಹುರುಳಿಲ್ಲದ್ದು" ಮುಂತಾದ ಬಗೆಯಲ್ಲಿ ಶ್ರೀ. ದೀಕ್ಷಿತರು ಮಾತನಾಡಿದರು ಶ್ರೀ ದೀಕ್ಷಿತರ ಈ ವಾದಕ್ಕೆ ನಾನೇ ಮೊದಲು ಆಗ ನನಗೆ ತಿಳಿದ ಮಟ್ಟಿಗೆ ಉತ್ತರ ಕೊಟ್ಟೆನು. ನನ್ನ ಮಿತ್ರ ದೊಡ್ಡ ವ್ಯಾಸರಾಯರೂ ನನಗೆ ಜೊತ್ತಾಗಿ ಜೊಬಲ ಕೊಟ್ಟು ಮಾತನಾಡಿದರು. ಅಧ್ಯಕ್ಷರಾಗಿದ್ದ ರಾವ್ ಬಹಾದ್ದೂರ್ ಗುಂಗೊಳ್ಳಿಯವರು ಸಭೆಯ ಮುಗಿತಾಯ ಮಾಡುತ್ತ, "ಬೆನ್ನಲ್ ರಾಮರಾಯರ ಅನುಭವದ ನುಡಿಗಳಿಗೆ ಕನ್ನಡಿಗರೆಲ್ಲ

ಬೆಲೆ ಕೊಡುವುದು ಇಷ್ಟವೂ ಆಗತ್ಯವೂ ಆಗಿದೆ' ಎಂದು ಹೇಳಿ, ಕರ್ನಾಟಕದ ಏಕೀಕರಣ ವಿಚಾರಕ್ಕೆ ತಮ್ಮ ಬೆಂಬಲವನ್ನು ಸೂಚಿಸಿದರು. ಹೀಗೆ ಕನ್ನಡ ನಾಡುನುಡಿಗಳ-ಉರ್ಧಾರ್ತ ಕನ್ನಡ ಜನಾಂಗದ-ಉದ್ಧಾರಕ್ಕೆ ಕನ್ನಡನಾಡು ಒಂದುಗೂಡುವುದೊಂದೇ ಒಂದು ಉಪಾಯವೆಂಬ ಮಹಾಸಿದ್ಧಾಂತವು ಧಾರವಾಡದಲ್ಲಿ. ವಿದ್ಯಾವರ್ಧಕ ಸಂಘದ ವಾರ್ಷಿಕ ಸಮಾರಂಭದಲ್ಲಿ—೧೯೩೩ರಲ್ಲಿ ಅಂದರೆ ೪೨ ವರ್ಷಗಳಿಗಿಂತ ಮೊದಲು, ಕಾರವಾರದ ಒಬ್ಬ ದೊಡ್ಡ ಮಹನೀಯರು ಅಧ್ಯಕ್ಷರಾಗಿದ್ದ ಸಭೆಯಲ್ಲಿ ಮುಂಗಳೂರಿನ ಒಬ್ಬ ಕನ್ನಡ ಭಾಷಾನಿಷ್ಠರವರು, ಇಂಗ್ಲಿಷ್ ಪದವೀಧರ ಪ್ರಬುದ್ಧಪುರುಷರಿಂದ ಉದ್ಘೋಷಿಸಲಾಯಿತೆಂಬುದೂ ಆಗಲೂ ಇಲ್ಲಿಯ ಮರಾಠಿ ಭಾಷಾಪ್ರೇಮಿಗಳೊಬ್ಬರು ವಿರೋಧಿಸುವ ಎದೆಗಾರಿಕೆಯನ್ನು ತೋರಿಸಿದರೆಂಬುದೂ ಈಗಿನ ಅಖಂಡ ಕನ್ನಡ ನಾಡಿನ ಜನರೆಲ್ಲರೂ ಹೆಮ್ಮೆಯಿಂದ ಚಿರಕಾಲ ನೆನಸಿನಲ್ಲಿಡತಕ್ಕ ಸಂಗತಿಯಾಗಿದೆ. ಹೀಗೆ ಶ್ರೀ. ಬೆನೆಗಲ್ ರಾಮರಾಯರಿಗೂ ನನಗೂ ಕನ್ನಡದ ಮೂಲಕ ಉಂಟಾದ ಆಕಸ್ಮಿಕ ಪರಿಚಯವು ವಿಶೇಷತ್ವವಾಗಿ ಬೆಳೆದು, ಮುಂದೆ ಪರಿಶುದ್ಧವಾದ ಆತ್ಮೀಯತೆಯ ರೂಪವನ್ನು ಹೊಂದಿ, ಅವರ ಜೀವನಾವಧಿ ಅವ್ಯಾಹತವಾಗಿ—ಅಕೃತ್ರಿಮವಾಗಿ ಬೆಳೆಯಿತೆಂಬುದನ್ನು ನಾನೀಗ ಏನೆಂದು ಹೇಳಲಿ? ಈ ಬಾಂಧವ್ಯದ ಕುರುಹೇ ಎಂಬಂತೆ ಶ್ರೀ. ರಾಮರಾಯರೊಡನೆ ನಾನೂ ರೊದ್ದ ವ್ಯಾಸರಾಯರೂ ನನ್ನ ಪರಮಪೂರಾತನ ಸ್ನೇಹಿತರಾಗಿದ್ದ ಸಂಸ್ಕೃತ ಸಾಹಿತ್ಯ ನರಾಯಣ ಆಶುಕವಿ, ಕಾವ್ಯಾನಂದ ಪುಣೇಕರ ನರಸಿಂಹಾಚಾರ್ಯರೂ, ಕುರ್ತಕೋಟೆಯ ಸಂಸ್ಕೃತ ವಿದ್ಯಾಭೂಷಣ ಶ್ರೀಮಾನ್ ಲಿಂಗೇಶ ಶರ್ಮರು (ಈಗ ಪರಮಹಂಸ ಡಾ. ಕುರ್ತಕೋಟಿ ಶ್ರೀಶಂಕರಾಚಾರ್ಯರಾಗಿರುವವರು) ಹೀಗೆ ನಾವೈದು ಜನರು ತೆಗೆಸಿದ ಭಾವಚಿತ್ರವೊಂದು ಇಂದಿಗೂ ಸಂಘದಲ್ಲಿ ರಾಂತೇಶ ವಾಚನಾಲಯದಲ್ಲಿ ಇರಬೇಕೆಂದು ಹೇಳಬಲ್ಲೆ. ಡಾ. ಕುರ್ತಕೋಟೆಯವರೂ ಇದ್ದಂತೆ ಸ್ಮರಣೆಗೆ ಬರುತ್ತದೆ. ನಿಶ್ಚಿತ ಹೇಳಲಾರೆ.

"ಕರ್ನಾಟಕ ಏಕೀಕರಣದ ಮೂಲಕವಾಗಿ ಕನ್ನಡದ ಉನ್ನತಿ" ಎಂಬ ಮೂಲಸೂತ್ರವು "ತಿರುಳ್ಗನ್ನಡ ನಾಡಿನ ಹೃದಯದಂತಿರುವ ಧಾರವಾಡದಲ್ಲಿ" ಹೀಗೆ ಆಕಸ್ಮಿಕವಾಗಿ ಆವಿರ್ಭವಿಸಿ, ಧಾರವಾಡಕ್ಕೆ ಒಂದು ವಿಶಿಷ್ಟ ಸ್ಥಾನವನ್ನು ಹೊಸಗನ್ನಡ ನಾಡು ಕಟ್ಟುವ ಮಹತ್ಕಾರ್ಯದಲ್ಲಿ ಉಂಟುಮಾಡಿತೆಂಬುದು ಧಾರವಾಡದವರಿಗೆಲ್ಲ ಆನಂದದ ಅಭಿಮಾನದ ಸಂಗತಿಯಾಗಿದೆ. ಈ ಬಗೆಯ ವಿಶಿಷ್ಟ ಸ್ಥಾನಕ್ಕೆ ಧಾರವಾಡವು ತನ್ನ ಪಾತ್ರತೆಯನ್ನು ಮೊದಲಿನಿಂದಲೂ ಸಿದ್ಧಮಾಡಿಕೊಡುತ್ತ ಒದಿತ್ತೆಂಬುದು ಈ ಮೊದಲಿನ ಬರೆಹಗಳಲ್ಲಿ ವಿವರಿಸಲಾಗಿದೆ. ಈಸ್ಟ್ ಇಂಡಿಯಾ ಕಂಪನಿಯ ಆಳಿಕೆಯ ಶಿಕ್ಷಣಕ್ರಮದ ಮುರಾಟಿಯನ್ನು ಹಾಕಿ ಕನ್ನಡಕ್ಕೆ ಅಮೂಲಾಗ್ರ ಅವಕಾಶವನ್ನು ಕಲ್ಪಿಸಿಕೊಟ್ಟ ಧಾರವಾಡವೇ—ಮುಂದೆ ಕನ್ನಡಕ್ಕೆ ಬಂದ ಎಡರು-ತೊಡರುಗಳನ್ನೆಲ್ಲ ಎದೆಗಾರಿಕೆಯಿಂದ ಎದುರಿಸಿ ತನ್ನ ಅಚ್ಚಗನ್ನಡತನವನ್ನು ಅಚ್ಚಳಿಯದಂತೆ ಉಳಿಸಿಕೊಳ್ಳಲು ಹೆಣಗಿ ಶ್ರೇಯೋವಂತವಾದ ಧಾರವಾಡವೇ ಕನ್ನಡ ಜನಾಂಗದ ಭವಿತವ್ಯಕ್ಕೆ ಭವ್ಯತೆಯನ್ನೂ ನವ್ಯತೆಯನ್ನೂ ತಂದುಕೊಡುವುದಕ್ಕೆ ಅಗತ್ಯವಾದ ಕರ್ನಾಟಕದ ಏಕೀಕರಣ ವಿಚಾರದ ಆವಿಷ್ಕರಣಕ್ಕೆ ಯೋಗ್ಯವಾದ ಪವಿತ್ರವಾದ ಕ್ಷೇತ್ರವೆಂಬ ಭಾವನೆಯಿಂದಲೇ, ರಾಷ್ಟ್ರಗಳ ಗತಿಯನ್ನಾಳ್ವ ಪರಾತ್ಪರ ಶಕ್ತಿಯು ಎಲ್ಲೆಲ್ಲಿಯವರನ್ನೂ ಕನಸು-ಮನಸಿನೊಳಗೂ ಹೊಳೆಯದಂತೆ ಇಲ್ಲಿಗೆ ತಂದು ಒಂದುಗೂಡಿಸಿ ತನ್ನ ಅನ್ಯೂನ ಮಾಯೆಯಿಂದಲೆ ಇದರ ಉದ್ಘೋಷಣೆಗೆ ಅವಸರವನ್ನುಂಟುಮಾಡಿತೆಂದು ನಂಬದೆ ನಿರ್ವಾಹವಿಲ್ಲ ಈ ಅದ್ಭುತ ಘಟನೆಯನ್ನು ಈಗ ೧೫ ವರುಷಗಳಿಂದ ನಾನು ಪ್ರಸಂಗ ಬಂದಾಗಲೆಲ್ಲ ಪ್ರಚಾರಪಡಿಸುತ್ತಲೇ ಬಂದಿರುವೆನಾದರೂ, ಹೊಸಗನ್ನಡ ನಾಡನ್ನು ಕಟ್ಟುವ ಹೊಸ ಹುಮ್ಮಸ್ಸಿನಿಂದ ಮುಂದಾಗಿ ಪ್ರಯತ್ನಿಸಬೇಕೆನ್ನುವವರು ಈ ಮುಖ್ಯ ಸಂಗತಿಯನ್ನು ಮರೆತಂತೆಯೋ ದುರ್ಲಕ್ಷಿಸುತ್ತಿರುವಂತೆಯೋ ಮುಂದುವರಿಯುತ್ತಿರುವುದು ನಿದರ್ಶನಕ್ಕೆ ಬರುತ್ತದೆ. ಮುಂದಿನ ಕಾಲದ ಇತಿಹಾಸಜ್ಞರಿಗೆ ಯಥಾರ್ಥ ಸಂಗತಿಗಳ ಪರಿಚಯವಾಗುವುದು ಇಷ್ಟವೆಂದು ತಿಳಿದು ಈ ವಿಷಯವನ್ನು ಇಷ್ಟು ವಿಸ್ತಾರವಾಗಿ—ಬರೆಯುವ ಸಾಹಸ ಮಾಡಿದ್ದೇನೆ. ಮುಂದಿನ ಸಂಗತಿಗಳನ್ನು ಸಂಕ್ಷೇಪವಾಗಿಯೆ ಬರೆಯುವ ವಿಚಾರದಿಂದ ಸವ್ಯಕ್ಕೆ ಸಾಕುಮಾಡುತ್ತೇನೆ.


ದಿ ವಸಂತ ಇನ್ಶುರನ್ಸ್ ಕಂಪನಿ, ಲಿಮಿಟೆಡ್

ದಿವಾನ್ ಬಹಾದ್ದೂರ್ ಹೀರಾಲಾಲ ಕಾಜೀ: ಅಗ್ರಸ್ಥರು

ಸಹಕಾರಿ ಸಂಘದ ಸಭಾಸದರಿಗೆ ಪಷ್ಟೆಯಲ್ಲಿ ೭॥ ಮತ್ತು ೩॥ ಟಕ್ಕೆ ಸೂಟ ಕೊಡಲಾಗುವುದು.

ಗಳಿಸಲ್ಪಟ್ಟ ಪೂರ್ಣ ಮೂಡಲಾದ ವಿಮೆ .... ೪೫,೫೦,೦೦೦
ಈ ವರೆಗಿನ ವಿಮೆ .... .... ೧,೦೦,೦೦,೦೦೦
} ಕ್ಕೆ ಮಿಕ್ಕಿದೆ.

ನಾವೀನ್ಯ ಪೂರ್ಣ
ಮತ್ತು
ಲೋಕಪ್ರಿಯ
ವಿಮಾ ಯೋಜನೆಗಳು.

ಪ್ರಭು ಎಂಡ್ ಸನ್ಸ್
ಚೀಫ್ ಏಜಂಟ್
೭೬—ಅ ಸರ್ ಫಿರೋಜಶಹಾ ಮೇಥಾ ರೋಡ್,
ಕೋಟೆ, ಮುಂಬಯಿ ೧.

ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ ಧಾರಾಳ ವೇತನದ ಮೇಲೂ, ಬೋನಸ್ ಕಮಿಶನ್ನಿನ ಮೇಲೂ, ಆರ್ಗನೈಜರರೂ ಏಜಂಟರೂ ಬೇಕಾಗಿದ್ದಾರೆ. ಸುಶಿಕ್ಷಿತ-ಅನುಭವಿಕ ಸದ್ಗೃಹಸ್ಥರು ಮೇಲಿನ ವಿಳಾಸಕ್ಕೆ ಬರೆದುಕೊಳ್ಳುವುದು.



೫೨ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ
ಕಳೆಯುವುದು.

ವಿಳಾಸ:—
ಗಣೇಶ ರಾಮಚಂದ್ರ ಕರ್ಕ
ಮತ್ತು ಕಂಪನಿ
ಗಿರಗಾಂವ, ಮುಂಬಯಿ.

# ಮೋಡಕಾಬಾಜಾರ

(ಲಲಿತ ಪ್ರಬಂಧ)

●

ಶ್ರೀ ಎಸ್ಕೆ. ಕುಲಕರ್ಣಿ, ಎಂ. ಎ., ಬಿ. ಟಿ. ಧಾರವಾಡ

ನಿಮಗೆ ಅಪರೂಪದ ವಸ್ತುಗಳೇನಾದರೂ ಬೇಕಾದಲ್ಲಿ, ಈ ಯುದ್ಧೋತ್ತರ ಸಂಕ್ರಮಣ ಕಾಲದಲ್ಲಿ ಪೇಟೆಗೆ ಹೋಗಿ ಫಲವಿಲ್ಲ; ನಿತ್ಯವೂ ಮೋಡಕಾಬಾಜಾರಿನ ಯಾತ್ರೆ ಮಾಡುತ್ತಿರಬೇಕು.

ನನಗೆ ಪುಸ್ತಕ ಓದುವುದಕ್ಕಿಂತ ಪುಸ್ತಕ ಸಂಪಾದಿಸುವಲ್ಲಿಯೆ ಹೆಚ್ಚಿನ ಆಸ್ಥೆ. ಇದಕ್ಕೊಂದು ಮಹತ್ತರವಾದ ಕಾರಣವುಂಟು. ನನ್ನ ಮನೆಯ ಪುಸ್ತಕಾಲಯದ ಮುಕ್ಕಾಲು ಭಾಗ ಸಂಗ್ರಹವಾದುದು ಮೋಡಕಾಬಾಜಾರಿನಿಂದಲೆ. ಕಿರಿಯ ಕಾಸಿನಲ್ಲಿ ಸಿರಿಯ ಕೃತಿಗಳು ದೊರೆಯಹತ್ತಿದುದರಿಂದಲೆ, ಪುಸ್ತಕಪರಿಚಯಮಾಡಿಕೊಳ್ಳುವುದಕ್ಕಿಂತ ಪುಸ್ತಕ 'ಪರಚೇಜ' ಮಾಡುವಲ್ಲಿಯೆ ನನ್ನ ಆಸಕ್ತಿ ವಿಶೇಷ ಬೆಳೆಯುತ್ತ ಬಂತು. ನನ್ನ ಸುದೈವವೊ ಸಾಹಿತಿಗಳ ದುರ್ದೈವವೊ, ಇಂತೂ ಮೋಡಕಾಬಾಜಾರಿನಲ್ಲಿ ಮುಖಾಕವಿಗಳ ಬೆಲೆ ಇಳಿದುದು ಶೋಚನೀಯ ಸಂಗತಿಯೆಂಬುದು ಸುಳ್ಳಲ್ಲ

ಮಾರ್ಕೆಟ್ಟಿನಲ್ಲಿ ಹಾಯಿಸು ಬರುವಾಗೆಲ್ಲಿ ಮೋಡಕಾಬಾಜಾರಿನ ಮುಂದೆ ಕೆಲವೇ ನಿಂತು ಗ್ರಂಥಪರೀಕ್ಷಣ ಮಾಡಿಯ ಮುಂದೆ ಸಾಗುವುದೊಂದು ಚಟವಾಗಿ ಬಿಟ್ಟಿವೆ ನನಗೆ. ಆ ಮೋಡಕಾಬಾಜಾರಿನ ಮಾಲಕನಿಗೂ ಗೊತ್ತು. ನಾನು ಅನವರದಿಂದ ಸಾಯಿಕಲ್ ಸವಾರನಾಗಿ ಹೋಗುತ್ತಿದ್ದರೂ ನನ್ನ ರಥವನ್ನು ನಿಲ್ಲಿಸಿ— 'ರಾಯರ ಬುಕ್ಸು ಬಂದಾವ್ರೀ' ಎಂದು ಕರೆಯುತ್ತಾನೆ. ಕನ್ನಡಿಗರ ವಾಚನಾಭಿರುಚಿಯ ಮಟ್ಟ ಎಷ್ಟು ಎತ್ತರವಾಗಿದೆಯೆಂಬುದನ್ನು ಆ ಗ್ರಂಥರಾಶಿಯಿಂದಲೆ ಕಂಡುಕೊಳ್ಳಬಹುದಾಗಿರುತ್ತದೆ. ಸಾಹಿತ್ಯರಸದ ರುಚಿಯನ್ನು ಕನ್ನಡಿಗರಿಗಿಂತ ಕನ್ನಡದ ಕಿಸುನೆಲದ ಗದ್ದಲಿಗಳೆ ಹೆಚ್ಚು ಅರಿತಿವೆಯೇನೊ ಎಂಬಂತೆ ಪುಸ್ತಕಗಳ ಅಂಚುಗಳನ್ನೂ ಮಧ್ಯಾನುಧ್ಯದ ಮಹತ್ತ್ವದ ಭಾಗಗಳನ್ನೂ ಅವು ಜೀರ್ಣಿಸಿಕೊಂಡುದು ಕಂಡುಬರುತ್ತದೆ.

'ಕನ್ನಡ ಬಾವುಟ'ವು ಒಮ್ಮೆ ನನಗೆ ಇಲ್ಲಿ ತರುಕಾಸಿಗೆ ಕೈವಶವಾಗಿದೆ. ಇಷ್ಟೇಕೆ, ಒಮ್ಮೆ ಮುಚ್ಚಂಬೆಯಾದಾಗ ಕಾಯಿದಲ್ಲೆ ತರಲು ಹೊರಟಿದ್ದೆ. ಮೋಡಕಾಬಾಜಾರಿನ ಆ ಘಟೋತ್ಕಚ 'ರಾಯರ, ಒಂದು ಎತ್ತಲಾರದಂಥಾ ಪುಸ್ತಕ ಐತಿ'—ಎಂದು ಎತ್ತಿ ಕೂಗಿದ. ಬಂದು ನೋಡುತ್ತೇನೆ— 'ಕಿಟೆಲ್' ಶಬ್ದಕೋಶ! 'ಯಾವ ಪುಣ್ಯಾತ್ಮ ಈ ಪುಸ್ತಕವನ್ನು ನಿನಗೆ ಮಯಟಾಲಿಸಿದ್ದಾನಪ್ಪಾ'— ಎನ್ನುತ್ತಿ ಪುಟ ತರುವಹತ್ತಿದೆ. ಪುಟಕ್ಕೊಬ್ಬರು ಸಹಿ ಇತ್ತು. ಅಚ್ಚಾಗದಿದ್ದ ನೊದಲ ಪುಟದ ತುಂಬೆಲ್ಲಾ ಸಹಿಗಳನ್ನು ಕೆತ್ತಿಬಿಟ್ಟಿದ್ದರು. 'ಅಂಥಾ ಇಪ್ಪತ್ತನೆ ಈ ಪುಸ್ತಕವನ್ನು ಮುಟ್ಟಿದ್ದಾರಲ್ಲಾ' ಎಂದಿಷ್ಟೆ, ಸಮಾಧಾನಪಟ್ಟುಕೊಂಡೆ. 'ಏನಪ್ಪಾ, ಏನು ಕೊಡಬೇಕು?' ಎಂದೆ.

'ಏನು ನೀವು ನೋಡ್ರಿ. ನನಗೂ ಓದು ತಲುಬಾಗಿದ್ರು,' ಅವನ ತಲಬು ನನಗೆ ತರುವಾಯ ಅರ್ಥವಾಯಿತು. ಸರಿ, ನನ್ನ ಸಾಮರ್ಥ್ಯದ ತಲಬಿಗಿಂತ ಅವನ ಕಳ್ಳ'ನ ತಲಬೇ ವಿಶೇಷವಾಗಿರುವಾಗ ಕೇಳಿದಷ್ಟಕ್ಕೆ ಪುಸ್ತಕ ಕೊಟ್ಟೇ ಕೊಡುವನೆಂಬ ಭರವಸೆಯಿಂದ ಹೇಳಿದೆ—

'ಏನೊ ನಿನ್ನ.... ಪುಸ್ತಕ ಎಲ್ಲಾ ಹರದುಹೋಗೇತಿ. ಮ್ಯಾಲೆ ನೋಡಿದು, ಬರೇ ಶಬ್ದಾರ್ಥದ ಬುಕ್ಕು. ಒಂದು ಕತಿ ಇಲ್ಲಾ ಒಂದು ಕಾದಂಬರಿ ಒಲ್ಲ!'

'ಯೇಬಾರ ಕೊಡಬೇಕಂತೀರಿ?'

ಈ ತಲಬಿನ ಸಾಹಿತ್ಯವ್ಯಾಪಾರಿಗೆ ಏಟೇ ಕೊಡಬೇಕೆಂದುಕೊಂಡೆ ಹೆಚ್ಚು ಪಾಡೆ ಇಲ್ಲ.

'ನಾಲ್ಕಾಣೆ ಕೊಡುತೀನಿ ನೋಡು!'

'ಏನ್ರೀ ರಾಯರ?'

'ಅದೆಲ್ಲಾ ಇಲ್ಲಾ. ಕಾಯಿಪಲ್ಲೆಗಾಗಿ ತಂದ ನಾಲ್ಕಾಣೆ ಅವೆ. ಅಷ್ಟೆ ಕೊಡೋದು' ಎಂದವನೆ ಮುಂದಿರಡು ಹೆಜ್ಜೆ ಇಟ್ಟೆ.

'ಹೂಂ. ತೆಗೀರಿ—ತೆಗೀರಿ. ಚೆ ಜ ಯಾಕೀವ್ರು. ಆಗ್ಯಾರ ಹೋಗ್ಲಿ ಸುತ್ತ ಯಾಂವ ಹೊತುಗೋಡು ಹೋಗಬೇಕು ಅಲ್ಲೇಮಟಾ!' ಎಂದು ಭಾರವಾದ ಆ ಗ್ರಂಥವನ್ನು ನನ್ನ ಕೈಗೆ ನೀಡಿದ. ನಾಲ್ಕಾಣೆಗೆ ಎಂತಹ ಅಪರೂಪ ಕಾಯಿಪಲ್ಲೆ ಸಿಕ್ಕಿತಲ್ಲ—ಎಂದು ಹಿಗ್ಗಿ ಮುಂದೆ ಸಾಗಿದೆ. 'ಕಾವ್ಯದ ರಸದೂಟಕ್ಕೆ ಈ ಶಬ್ದಕೋಶವು ಉತ್ತಮ ಕಾಯಿಪಲ್ಲೆ' ಎಂದುಕೊಂಡೆ. ಬಗಲೊಳಗೆ ಪುಸ್ತಕವನ್ನಿಟ್ಟುಕೊಂಡು ನನ್ನ ಮನೋರಥವನ್ನೇರಿದೆ. ಹಾದಿಯಲ್ಲಿ ಇನ್ನೊಂದು ವಿಚಾರ:— "ನನಗೇನೊ ಈ ಮಹಾಪೊತ್ತಿಗೆ ನಾಲ್ಕಾಣೆಯಲ್ಲಿ ದೊರಕಿತು. ಪಾಪ, ಆ ಮೋಡಕಾಬಾಜಾರಿನ ಮಾಲಕನಿಗೇನು ಲಾಭವಾಯಿತು?"— ಎಂದುಕೊಂಡೆ. ಕಟ್ಟಿ ತನ್ನ ಲೆಕ್ಕ ಒಟ್ಟು ಇರುವನೆ? ಇನ್ನೊಬ್ಬರಿಂದ ಅವನು ಆ ಪುಸ್ತಕವನ್ನು ಎರಡಾಣೆಗೆ ಕೊಂಡಿರದಿದ್ದರೆ ಅದನ್ನು ನಾಲ್ಕಾಣೆಗೆ ಕೊಂಡಿರದಿದ್ದರೆ ಅದನ್ನು ನಾಲ್ಕಾಣೆಗೆ ಮಾರುವುದು ಸಾಧ್ಯವಿದೆಯೆ? ಅದನ್ನು ನಾಲ್ಕಾಣೆಗೆ ಮಾರುವುದು ಸಾಧ್ಯವಿದೆಯೆ? ಅದನ್ನು ಎರಡಾಣೆಗೆ ಮಾರಿದ ಮಹಾರಾಯನ ತಲಬು ಎಂತಹದಿರಬೇಕು?.... ಅಥವಾ, ಮತ್ತೊಂದು ವಿಚಾರ: ಇವನೇನಾದರೂ 'ಕಳ್ಳ' ಆಗಾಗಿ ಈ ಕಳ್ಳಪೇಟೆ ಕೂಡಿದ್ದಾನೊ? ಈ ಕಳ್ಳನಿಗೆ ಇದರ ಬೆಲೆ ತಿಳಿಯದೆ ಹೋದರೂ, ಇದನ್ನು ಮಾರಿದ ಆ ಸತ್ಯಸಂಧನಿಗಾದರೂ ಇದರ ಬೆಲೆ ತಿಳಿದಿರಬೇಡವೆ? ತಸ್ಮಾತ್ ಇದು ಕಳ್ಳ ವ್ಯಾಪಾರವೇ... ಎಂದುಕೊಂಡೆ. ಅವರಿಗೆ ಹೀಗೆ ಕಳ್ಳಪೇಟೆಗೆ ಪ್ರೋತ್ಸಾಹ ಕೊಡುತ್ತಿರುವ ನಾನು ನನ್ನ ಸಭ್ಯ ನಾಗರಿಕತೆಯನ್ನೆ ಮಾರಿಕೊಳ್ಳು.

ತಿಲ್ಲವೆ?' ಎನಿಸಿತು. 'ಈಗಿನ ಜಗತ್ತು ನೀತಿರುವುದೆ ಕಳ್ಳಪೇಟೆಯ ಮೇಲೆ' ಎಂಬ ಸಮಾಧಾನವೂ ಕೂಡಲೆ ಬಂದರೂ ಮನಸ್ಸು ವಿಚಾರ ಕಲ್ಲೋಲದಿಂದ ಸ್ತಿಮಿತವಾಗಲಿಲ್ಲ..... ಅಥವಾ ಇದನ್ನು ಆತ ಕದಿಯುವುದಕ್ಕಾದರೂ ಹೇಗೆ ಸಾಧ್ಯವಾಗಿದ್ದಿರಬೇಕು?.....ಇಷ್ಟು ವಿಚಾರಿಸುತ್ತಿರುವಾಗಲೆ ಹೊತ್ತಿಗೆಯನ್ನು ತಂದು ಮೇಜಿನ ಮೇಲೆ ಅಪ್ಪಳಿಸಿದೆ. ಕಾಯಿಪಲ್ಲೆಯ ಸಪ್ಪಳಕ್ಕೆ ನನ್ನವಳು ಒಳಗೆ ಪುಟಿದು ಬಿದ್ದುಹೊರಗೆ ಬಂದಳು. ಸಾಹಿತ್ಯಭಕ್ತನ ಈ ಕಾಯಿಪಲ್ಲೆಗೆ ಮೂಗು-ಮುರಿದು 'ಫಿಸ್'ಗರೆದು ಒಳಗೆ ನಡೆದಳು.

ಸಂಶೋಧಕರು ಪ್ರಾಚ್ಯ-ಕ್ಷೇತ್ರವನ್ನಗಿಯುತ್ತಾರೆ. ಯಾವಾಗಲೂ ತಿಪ್ಪೆಯಲ್ಲಿ ಉಪ್ಪರಿಗೆ ಸಿಕ್ಕೀತೆಂದು ಹೇಳಲಾಗದು. ಆದರೆ ಮೋಡಕಾ ಬಾಜಾರಿನ ತಿಪ್ಪೆಯಲ್ಲಿ ಉಪ್ಪರಿಗೆಯೇಕೆ, ರತ್ನಗಳು ಸಿಗುತ್ತವೆ—ಕೃತಿರತ್ನಗಳು. ಸಂಪೂರ್ಣ ಕೆಕ್ಸ್‌ಪಿಯರನ್ನು ಎರಡಾಣೆಗೆ ಈ ಮೋಡಕಾಬಾಜಾರಿನಲ್ಲಿ ಹುಡುಕುವುದೇನೆರೆ ಸಾಮಾನ್ಯ ಶೋಧವೆ? ನಿಮಗೆ ಯಾವಾಗಲೂ ಇಂತಹ ಅಮೌಲ್ಯ ರತ್ನಗಳೇ ಸಿಗುತ್ತವೆಂದು ಹೇಳಲಾಗದು. ಒಮ್ಮೆ ನನ್ನ ಮಿತ್ರನೂ ನನ್ನಂತೆಯೆ ಪ್ರಯತ್ನಿಸಿ ಹೋದಾಗ—ಔಷಧಿಯ ಕ್ಯಾಟಲಾಗಿಗೆ ಎಂಟಾಣೆ ಕೇಳಿದನಂತೆ ಆ ವ್ಯಾಪಾರಿ. ಕಾರಣ ಇಷ್ಟೆ: ಆ ಪುಸ್ತಕದಷ್ಟು ಅಚ್ಚುಕಟ್ಟಾದ ಪೂರ್ಣವಾದ ಹಾಳೆಗಳುಳ್ಳ, ಅನೇಕ ರಹಸ್ಯದ ಚಿತ್ರಗಳುಳ್ಳ ಗ್ರಂಥ ಇನ್ನೊಂದಿದ್ದಿಲ್ಲ. ಎಂದ ಮೇಲೆ ಸರಿಯಲ್ಲವೆ? ಒಂದೂ ಚಿತ್ರವಿಲ್ಲವು, ಹಾಳೆಗಳೆಲ್ಲಾ ಗೆದ್ದಲಿಗಳಿಂದ ಜೀರ್ಣವಾಗಿ ಉಳಿದ ಲಕ್ಷ್ಮೀಕ್ಷಭಾರತದ ಹಳೆಯ ಬಾರಲ್ ಮಿಶನ್, ಪ್ರಕಟನೆಯೆ ಇಲ್ಲವೆ ಅಲ್ಪ ಬೆಲೆಗೆ ದೊರೆಯಬಹುದಾದದ್ದು? ಆದರೆ ಯಾವುದೆ ಅಪೂರ್ವ ವಸ್ತುವನ್ನು ಶೋಧಿಸುವುದಕ್ಕೆ ಸಂಶೋಧಕನ ಕಣ್ಣು ಬೇಕೆಂಬುದು ಸುಳ್ಳಲ್ಲ. ಮೋಡಕಾಬಾಜಾರಿನಂತಹ ಹೊತ್ತಿಗೆಗಳ ರಾಶಿಯ ತಿಪ್ಪೆಯಲ್ಲಿ ಕೃತಿ-ರತ್ನಗಳನ್ನು ಶೋಧಿಸಬೇಕಾದರೆ ರವಿಯ ಕಣ್ಣಿಗೂ ಸಾಧ್ಯವಿಲ್ಲ. ಕಳ್ಳಪೇಟೆಯ ಎಲ್ಲ ರೇಪೆಗಳನ್ನೂ ಬಲ್ಲ ಚಾಣಾಕ್ಷ ಕಣ್ಣೇ ಬೇಕು. ಹಾಗಲ್ಲದಿದ್ದರೆ ನನ್ನ ಮಿತ್ರನಿಗೆ ಯಾವ ಅಪರೂಪ ವಿರೂಪ ಗ್ರಂಥವೂ ಸಿಗದೆ, ಮರುದಿನವೇ ನನಗೇ ಯಾಕೆ ವಿ.ಲ್ಸನ್ ಕವಿಯ 'ಶೆರಡಾಯಿಜ್‌ಲಾಸ್ಟ್' ದೊರಕಬೇಕು? ಇವಕ್ಕೆ ಅದೃಷ್ಟವೆನ್ನುವೆರೊ ದೃಷ್ಟಿಯೆನ್ನುವೆರೊ?

ಇದೇ ಸಂಶೋಧಕ ದೃಷ್ಟಿಯಿಂದಲೆ 'ಮೋಡಕಾಬಾಜಾರಿ'ನ ವ್ಯೆಕ್ತಿತ್ವವನ್ನೂ ನೋಡುವುದು ಇದೀಗ ವಿಹಿತವಾಗಿ ತೋರುತ್ತದೆ. ಮಹಾಭಾರತದಲ್ಲಿ ಘಟೋತ್ಕಚನಂತಹ ಪುರಾಣಪುರುಷನೂ ಕಳ್ಳಪೇಟೆಯನ್ನು ನಡೆಸಿದ ಆಧಾರ ನಮಗಿರಲಾಗಿ ಕಳ್ಳಪೇಟೆಗೆ ವಿಶೇಷದ ವೈಪನ್ನಿನಗತ್ಯವೇನು? ಆದರೆ ಸರಕಾರದ ಕಣ್ಣುತಪ್ಪಿಸಿ ನಡೆಸುವ ಕತ್ತಲೆಯ 'ಕಳ್ಳಪೇಟೆ'ಗೂ, ಸೂರ್ಯನ ಬೆಳಕಿನಲ್ಲಿ ಸಾರ್ವಜನಿಕರ ಕಣ್ಣುಸೆಳೆಯುವಂತೆ ನಡೆಸಿದ ಸರಸ್ವತಿಯನ್ನು ಪೇಟೆಯಲ್ಲಿ ಮಾರಾಟಮಾಡುವುದಕ್ಕೂ ಮಹದಂತರವಿದೆ ಕಳ್ಳಪೇಟೆಯಲ್ಲಿ ಸರಕಿನ ಬೆಲೆ ಇಮ್ಮಡಿ ಮುಮ್ಮಡಿ ಹೆಚ್ಚಿರಬಹುದು. ಈ ಮೋಡಕಾ ಬಾಜಾರಿನ ಸರಸ್ವತಿಯ ಬೆಲೆ ಇಷ್ಟು ಮಟ್ಟಿಗೆ ಕಡಿಮೆ. ಇಲ್ಲಿ ಸರಕಾರವು ಸರಸ್ವತಿಯ ಬೆಲೆಗೆ ಕಂಟ್ರೋಲ್ ಮಾಡಿರುವ ಕಾರಣವೇ ಇಲ್ಲ.

ಈ ಮೋಡಕಾಬಾಜಾರಿನ ಸ್ವರೂಪವೇ ಒಂದು ವಿಚಿತ್ರ ರೀತಿಯದು. Secondhand Book Depot—ಎಂದು ಇರುತ್ತವೆ. ಪುನರ್ವಿವಾಹವಾದ ಸ್ತ್ರೀಯಂತೆಯೆ ಇಲ್ಲಿ ಗ್ರಂಥಗಳೂ ಹಣೇಬರಹ ಒಬ್ಬ ಒಡೆಯನನ್ನು ಕಳೆದುಕೊಂಡು ಇನ್ನೊಬ್ಬನಿಗಾಗಿ ದಾರಿಕಾಯುತ್ತಿರುತ್ತವೆ. ಇಲ್ಲಿಯ ಗ್ರಂಥಗಳಿಗೂ ಅರ್ಧ ಬೆಲೆಯಿಂದರೂ ನಿರ್ಧಾರವಾದ ಒಂದು ಕ್ರಯವಿದೆ. ಮೋಡಕಾಬಾಜಾರು ಎಂದೊಡನೆಯೆ 'ಅನಾಥ ಬಾಲಿಕಾಶ್ರಮ' ಇದ್ದಂತೆ—ಕೈಗೆ ಸಿಕ್ಕವರನ್ನು ಕೈಗೆ ಬಂದಂತೆ ಮಾರುವುದು. ಈ ಅನಾಥಾಶ್ರಮದಲ್ಲಿ ಹೇಗೆ ಒಮ್ಮೊಮ್ಮೆ ಪೆಣ್ಣಾಣೆಗಳೂ 'ಬೀದಿಯ ನಾರಿ'ಯರಾಗುತ್ತಾರೊ ಹಾಗೆ ಮೋಡಕಾಬಾಜಾರಿನಲ್ಲಿ ಕೃತಿರತ್ನಗಳೂ ಕಸವಾಗುತ್ತವೆ.

'ಮೋಡಕಾಬಾಜಾರ' ಎಂಬ ಹೆಸರಿನಿಂದಲೆ ಇದು ಮಹಾರಾಷ್ಟ್ರದಿಂದ ಬಂದ ಹೆಸರು ಎಂದು ಕಂಡುಬರುತ್ತದೆ. 'ಮೋಡಕಾ' ಎಂಬ ಹೆಸರಿನಿಂದಲೆ ಮುರುಕುತನ ವ್ಯಕ್ತವಾಗುತ್ತದೆ ಮುರುಕು ಜೀನಸುಗಳಿಂದ ಸುಂದರ ವಸ್ತುವನ್ನು ರಚಿಸುವ ಕೈವಾಡ ಮರಾಟಿಗರಿಗೆ ಜೆನ್ನಾಗಿ ಸಾಧಿಸಿದೆ ಅಥವಾ ಇನ್ನೊಂದು ಗಾದೆಯಲ್ಲಿ ಹೇಳಬೇಕೆಂದರೆ, 'ಚವಲಿಯಲ್ಲಿಯ ಡವಲು' ಎಂದು ಹೇಳುವರಲ್ಲ—ಹಾಗೆ. ಈ ಮೋಡಕಾಬಾಜಾರು ವಸ್ತುಕ, ಕಬ್ಬಿಣ ಸಾಮಾನು, ಚಪ್ಪಲಿ—ಯಾವುದರದೂ ಇರಬಹುದು.

ಮುರುಕು ಸಾಮಾನುಗಳನ್ನೆಲ್ಲಾ ಬೀದಿಗೆಸೆದು ಬಿಡುವುದು ನಮ್ಮ ಧೂರಾಳತನ ಇದು ಇನ್ನೊಂದು ತುದಿ. ನನ್ನವಳು ಮನೆಯನ್ನು ಸ್ವಚ್ಛವಾಗಿಡುವ ಸಂಭ್ರಮದಲ್ಲಿ ಕಣ್ಣಿಗೆ ಅಂದವಾಗಿ ಕಾಣದ ಸಾಮಾನುಗಳನ್ನೆಲ್ಲ ಹೊರಗೆ ಹಾಕಿ ಬಿಡುತ್ತಿದ್ದಳು. ಒಮ್ಮೆ ನನ್ನ ಪುಸ್ತಕಗಳನ್ನೆಲ್ಲ ಸರಿಯಾಗಿ ಹಚ್ಚುವಾಗ ನಾಲ್ಕೈಂಟು ಗ್ರಂಥಗಳು ನೋಡುವುದಕ್ಕೆ ಬಹಳ ಅಸಹ್ಯವಾಗಿದ್ದುವೆಂದುಕೊಂಡು ಅವನ್ನು 'ಕೈಹಿಡಿ'ಯಲಿಕ್ಕೆಂದು ಒಲೆಯ ಸಂದಿಗೆ ಹಾಕಿಬಿಟ್ಟಿದ್ದಳು. ಅವಳ ಈ ಸ್ವಚ್ಛತನ ಕಡಿಮೆಯಾದುದು ನಾವು ಜಾಳಿನಲ್ಲಿರು ಮನೆಗೆ ಬಂದಾಗ. ನನ್ನ ಬಲಪಕ್ಕಕ್ಕೆ ಮರಾಟೀ ದಂಪತಿಗಳಿದ್ದರು. ಅವರ ಮನೆಯಲ್ಲಿ ಒಂದು 'ಕಚರಾ ಸಾಮಾನು'ಗಳ ಕಪಾಟೇ ಮಾಡಿದ್ದರು. ಅದರಲ್ಲಿ ಕಬ್ಬಿಣದ ಮುರುಕು ವಸ್ತುಗಳು, ಹರಕು ಚಪ್ಪಲಿಗಳು, ನುಶ್ಯಳ ಹಳೆಯ ಪುಸ್ತಕಗಳು ಅಂತೂ ಅದು ಒಂದು ಪ್ರಾಚ್ಯವಸ್ತು ಸಂಗ್ರಹಾಲಯವಾಗಿತ್ತು. ಆಗಾಗ ಮೋಡಕಾಬಾಜಾರಿನ ಮನುಷ್ಯ ಬರಬೇಕು, ಅವನ್ನೆಲ್ಲ ಅತನಿಗೆ ಯೋಗ್ಯ ಬೆಲೆಗೆ ಮಾರಬೇಕು. ಇದರಿಂದ ಅವರು ಸಾಕಷ್ಟು ಹಣ ಗಳಿಸುತ್ತಿದ್ದರೆಂದು ತೋರುತ್ತದೆ. ಇವನ್ನರಿತು ನನ್ನವಳೂ ಒಂದು ಕಪಾಟು ಸಿದ್ಧಪಡಿಸಿದಳು. ಅದರಲ್ಲಿ ಸ್ವಲ್ಪ ಸೋರುತ್ತಿದ್ದ ಸ್ಟೋವ್, ಗ್ಲಾಸಿಲ್ಲದ ಕಂದೀಲು, ಪುಳಿಗಾಲಕ್ಕೆಂದು ನಾನು ಇಟ್ಟಿದ್ದ ರಬ್ಬರ ಬೂಟು....ಅಂತೂ ಇವಳ ಮೋಡಕಾಬಾಜಾರು ಮುಂಬಯಿಯ 'ಫ್ಲಾಯಿಟ್‌ವೇ ಲೇಡಲಾ'ದಂತೆಯೆ ಆಗಿತ್ತು. ಮೋಡಕಾಬಾಜಾರಿನ ಸರಕುಗಳನ್ನು ಸಿದ್ಧಪಡಿಸುವಲ್ಲಿ ತಿಂಗಳು ಹತ್ತಿಪ್ಪತ್ತು ಸೊಸ ಸಾಮಾನುಗಳನ್ನು ಮನೆಗೆ ತಂದೇ ತೀರುವಂತಹ ಪ್ರಸಂಗ ಬಂತು ಅವೇಳೆ ನಾನು ಆ ಜಾಳನ್ನೇ ಬಿಟ್ಟು ಹೊರತು ಬೇರೊಂದು ಉಪಾಯ ತೋರಲಿಲ್ಲ.

(ಅಭಿನವಯ ಸ್ಫುಟಪಡ ಅಡಿಯಲ್ಲಿ ನೋಡಿರಿ.)

# ಮಹಾತ್ಮರಾದವರಿಗೂ ಇದು ಅನಿವಾರ್ಯ !

( ಒಂದು ವಿಚಾರಮಂಥನ )

ಶ್ರೀ. ಶಂ. ಬಾ. ಜೋಶಿ, ಧಾರವಾಡ

## ಮಹಾತ್ಮರು ಶ್ರೀಪೂನ್ ರಾಜಗೋಪಾಲಾಚಾರ್ಯರನ್ನು ಪುರಸ್ಕರಿಸುತ್ತಿರುವುದು ರಾಜಕಾರ್ಯದೃಷ್ಟಿಯಿಂದ ಉಚಿತವೆ, ಅನುಚಿತವೆ ?

ಮಹಾಪುರುಷರ ಚರಿತ್ರಗಳನ್ನು ಬರೆಯ ಹಿಂದಿನ ಒಂದು ರೀತಿಯು ಆ ಯುಗದ ಜನಜೀವನಕ್ಕೆ ಸರಿಯೋಗುತ್ತಿರಬಹುದು. ಆದರೆ ಈಗಿನ ಜಗತ್ತಿಗೆ ಅದು ಒಗ್ಗುವುದಿಲ್ಲವಾದುದರಿಂದ, ಅದರ ತಂತ್ರದಲ್ಲಿ ಕೆಲವೊಂದು ಮಾರ್ಪಾಟುಗಳು ಆಗಲೇ ಬೇಕು.

ಹಿಂದಿನ ಕಾಲದ ತಂತ್ರದ ಒಂದು ಮಹತ್ತ್ವದ ಸೂತ್ರವೆಂದರೆ ಆ ಚಾರಿತ್ರಿಕ ಮಹಾಪುರುಷನು ಪವಾಡಪುರುಷನಿರಲೇಬೇಕು ಅತಿಮಾನುಷ ಕೃತಿಗಳನ್ನು ಅಸಂಭಾವ್ಯ ರೀತಿಯಲ್ಲಿ, ಲೋಕವು ಬೆರಗಾಗುವಂತೆ ಅವನ್ನು ವಿವರಿಸುವುದು ಅಂದಿನ ಪಾಡಿಕೆಯಾಗಿತ್ತು.

ಮಹಾತ್ಮನು ಅಯೋನಿಸಂಭವನೆಂದು ಹೇಳುವ ಹಂಬಲವೊಂದು. ಅತನ ಅವತಾರದ ಮೊದಲು ಸ್ವರ್ಗದಲ್ಲಿ ಸೇರಿದ ದೇವತೆಗಳ ಸಭೆಯ ವೃತ್ತಾಂತವು ಇನ್ನೊಂದು. ಒಂದೊಂದು ದೇವತೆಯು, ಆ ಸಭೆಯಲ್ಲಿ ಗೊತ್ತಾದ ಮೇರೆಗೆ ಭೂಲೋಕದಲ್ಲಿಳಿದು ಬಂದು ನೂಡಿದ ಲೀಲೆಗಳು ಮತ್ತೊಂದು. ಇಂತಿವೆಲ್ಲ ವಿಶೇಷಗಳು ಇಲ್ಲದ ಮಹಾಪುರುಷರ ಚರಿತ್ರಗಳೆ ಇಲ್ಲ.

ಆದರೆ ಗಾಂಧಿ-ಮಹಾತ್ಮರು ತಮ್ಮ ಜೀವನಚರಿತ್ರವನ್ನು ತಾವೇ ಬರೆದಿರುವುದರಿಂದ ಅದರಲ್ಲಿ ಇನ್ನು ಮೇಲೆ ಈ ಬಗೆಯ ಬದಲಾವಣೆಗಳು ಆಗುವ ಹೆದರಿಕೆಯಿಲ್ಲ.

ಆದರೆ ಇನ್ನೂ ಒಂದು ಅಂಜಿಕೆಯಿದೆ: 'ಮಹಾತ್ಮರು ಮಾಡುವು ಪೆಲ್ಲವೂ ಸರಿ' ಎಂಬ ಹಲವರ ಆಗ್ರಹ. ಮಹಾತ್ಮರು ಕೆಲವು ಪ್ರಸಂಗಗಳಲ್ಲಿ ನಡೆದುಕೊಂಡುದು ಅನಿವಾರ್ಯವಾಗಿರಬಹುದು: ಆದರೆ ಅನಿವಾರ್ಯವಾದುದೆಲ್ಲವೂ ಸರಿಯೇ ? ಎಂಬ ಸಂದೇಹವಿದೆ.

ಈ ಬಗೆಯ ಚರ್ಚೆಯ ಆವಶ್ಯಕತೆಯೇನು ?— ಎಂದು ಕೆಲರು ಕೇಳಬಹುದು. ಇದು ಬುದ್ಧಿಭೇದವನ್ನು ಮಾಡುವ ಚರ್ಚೆ, ಆದ ಕಾರಣ ಇದನ್ನು ಆರಂಭಿಸದೆ ಇರುವದೇ ಲೇಸೆಂದು ಮತ್ತೆ ಕೆಲರಿಗೆ ಎನಿಸಬಹುದು. ಅವತಾರೀ ಪುರುಷರು, ಪವಾಡಪುರುಷರು, ಮಹಾತ್ಮರು ಇತ್ಯಾದಿ ಕಲ್ಪನೆಗಳಿಂದ ನಮ್ಮಲ್ಲಿ ಜನಗಳು ಗತಾನುಗತಿಕರಾಗಿದ್ದಾರೆ. ಸಂಪ್ರದಾಯ ಶರಣರೂ ರೂಢಿದಾಸರೂ ಆಗಿದ್ದಾರೆ. ಇವರಿಂದ ಲಾಭಕ್ಕಿಂತ ಹಾನಿಯೆ ಹೆಚ್ಚಾಗಿದೆ.

ನಮ್ಮ ಈ ಚರ್ಚೆಯ ಗುರಿ, ಕೆಲವು ಪಕ್ಷಾಂಧರಂತೆ ಮಹಾತ್ಮರನ್ನು ಹಳಿಯುವುದಲ್ಲ. ಮಹಾತ್ಮರು ತತ್ತ್ವನಿಷ್ಠರೆಂಬುದು ನಿಜವಿದ್ದರೂ ಕಾಲಸಂದರ್ಭಿಸ್ಥಿತಿಯಂತೆ ಆ ತತ್ತ್ವಗಳನ್ನು ಆಚರಣೆಯಲ್ಲಿಳಿಸುವಾಗ ಅದಕ್ಕೆ ಕೆಲವೊಂದು ಅಪವಾದಗಳನ್ನೂ ಕಲ್ಪಿಸಿಕೊಳ್ಳುವ ಎದೆಗಾರಿಕೆಯನ್ನು ಅವರು ಹೇಗೆ ಲೋಕದ ನಿದರ್ಶನಕ್ಕೆ ತರುವುದೇ ಈ ಚರ್ಚೆಯ ಉದ್ದೇಶವಾಗಿದೆ. ತತ್ತ್ವನಿಷ್ಠೆಯ ವಿಚಾರಗಳನ್ನು ಗಿಳಿ ಓದಿನಂತೆ ಕಂಠಪಾಠ ಮಾಡಿ, ವ್ಯವಹಾರದಲ್ಲಿ ಅವ್ಯವಹಾರ್ಯವೆನಿಸುವ ಪುಸ್ತಕೀ ಜ್ಞಾನದ ಪಂಡಿತರಿಂದ ಅಂತಹ ಹಲವು ಆದರ್ಶಗಳನ್ನೇ ಅನೇಕರು ತಮ್ಮ ಮುಂದಿಟ್ಟುಕೊಂಡುದರಿಂದ, ಭಾರತಕ್ಕೆ ಹೇಳಲಿಕ್ಕಾಗದಷ್ಟು ಅಪಾರವಾದ ಹಾನಿಯಾಗಿದೆ. ಈ ಬಗೆಯ ಹಾನಿಗೆ ಇನ್ನು ಮುಂದಿನ ಪೀಳಿಗೆಯು ಎದೆಗೊಡಬಾರದೆಂದು ಇಂತಹ ಕೆಲವೊಂದು ವಿಮರ್ಶೆಯು ಅವಶ್ಯವೆನಿಸಿ ಈ ಕಟುಸತ್ಯವನ್ನು ಆಡುವ ಸಾಹಸವನ್ನು ಮಾಡುತ್ತಿದ್ದೇನೆ.

ಶ್ರೀವೇದವ್ಯಾಸರು ಈ ಕಟುಸತ್ಯವನ್ನು ಭಾರತದಲ್ಲಿ ಅತಿ ಸೂಕ್ಷ್ಮವಾಗಿ ಸೂಚಿಸಿದ್ದಾರೆ. ಸತ್ಯಸಂಧನಾದ ಧರ್ಮರಾಜನ ತೇರು ನೆಲಬಿಟ್ಟು, ನಾಲ್ವೆರಳು ಅಂತರದಿಂದಲೇ ಯಾವಾಗಲೂ ನಡೆಯುತ್ತಿದ್ದಿತಂತೆ! 'ಆಕಾಶತತ್ತ್ವ; ಕೇವಲ ತತ್ತ್ವನಿಷ್ಠೆ ಭೂಲೋಕದ್ದಲ್ಲ', ಎಂದು ಈ ಮಾತಿನ ಧ್ವನಿಯಾಗಿದೆ. ಇದಕ್ಕೆ 'ಅವ್ಯವಹಾರ್ಯ' ಎಂದು ಉಪನಿಷತ್ತಿನಲ್ಲಿಯೂ ಹೇಳಿದೆ. ವ್ಯವಹಾರ ನೆಲದ ಮೇಲಣ ಬಾಳು. ಅತ್ಯಂತಿಕ ಸತ್ಯವು ಭೂಲೋಕದಿಂದ ಕೆಲವೊಂದು ಅಂತರದಲ್ಲಿಯೇ ನಡೆಯುತ್ತಿರುತ್ತದೆಂಬುದನ್ನು ಶ್ರೀವ್ಯಾಸರು ಅಲ್ಲಿ ಬಹಳ ಸುಂದರವಾಗಿ ಸೂಚಿಸಿದ್ದಾರೆ.

ದ್ರೋಣಾಚಾರ್ಯರ ಕೊಲೆಯ ಕಾಲದಲ್ಲಿ ಧರ್ಮನು 'ಅಶ್ವತ್ಥಾಮ' ಎಂಬ ಆನೆ ಸತ್ತುದನ್ನು ಅರಿತಿದ್ದರೂ 'ತನ್ನ ಮಗನು ಮಡಿದನೇ? ಧರ್ಮನೇ ಹೇಳು' ಎಂದು ಆಚಾರ್ಯರು ಕೇಳಿದಾಗ ಮೊದಲು-'ಅಹುದು' ಎಂದು, ಮುಂದೆ 'ಆನೆಯೊ ಅಶ್ವತ್ಥಾಮನೊ?' ಎಂದು ನುಡಿದನಂತೆ. ಅದು ಪಾಂಡವರ ರಣಗರ್ಜನೆಗಳಲ್ಲಿ ಕೇಳದೆ ಹೋಯ್ತು ಎಂದು ಮುಂತಾಗಿ ನರ್ಣನೆ ಬರುತ್ತದೆ. ಈ ಪ್ರಸಂಗವು ಒದಗಿದ ಬಳಿಕ ಮುಂದೆ ಧರ್ಮನ ತೇರು ನೆಲಕ್ಕೆ ಹತ್ತಿ ನಡೆಯಲಾರಂಭಿಸಿತಂತೆ!

ಈ ಮಾತು ಈಗ ನೆನಪಾಗಲು ಕಾರಣವೆಂದರೆ 'ಹರಿಜನ'ದಲ್ಲಿ 'Curious' ಎಂಬ ತಲೆಬರಹದಲ್ಲಿ ಬಂದ. ಪೂಜ್ಯಶ್ರೀ ಮಹಾತ್ಮರ ಲೇಖ. ಮಹಾತ್ಮಾಜಿಯವರ ನಡೆ-ನುಡಿ ಅತ್ಯಂತ ಸೂಕ್ಷ್ಮಾರ್ಥವುಳ್ಳದು. ಅದಕ್ಕೆ ಯೇಗೆ ಅರ್ಥ ಮಾಡುವುದೊ ವಿಗಿಲಿನ ಮಾತು. 'ಓಡಿದರೆ

ಕಚ್ಚುವುದು; ಬಿಟ್ಟರೆ ಓಡುವುದು' ಎಂಬ ಗಾದೆ ಇವರ ವಿಚಾರದಲ್ಲಿ ಸಂಪೂರ್ಣವಾಗಿ ನಿಜವಿದೆ. ಆದರೂ ಕೆಲವೊಂದು ಹಿಂದುಮುಂದಿನ ಸಂದರ್ಭದಿಂದ ಅವರ ಮಾತಿಗೆ ಒಂದು ಅರ್ಥವನ್ನು ಹೇಳಬಹುದಾಗಿದೆ.

'Curious' 'ವಿಲಕ್ಷಣ!' ಲೇಖನವೂ ಹಾಗೆಯೇ ಇದೆ. ಶ್ರೀ. ರಾಜಾಜಿ ಅವರ ವಿಷಯದಲ್ಲಿ ಅವರಿಗೆ ಮತ್ತೆ ಪಟ್ಟಗಟ್ಟಲು ತಾನು ದಕ್ಷಿಣದ ಯಾತ್ರೆಗೆ ಬಂದಿಲ್ಲವೆಂದು ಗಾಂಧಿಜಿಯವರು ಸಾರಿದ್ದಾರೆ. 'ತಾನು ರಾಷ್ಟ್ರೀಯ ಸಭೆಯ ನಾಲ್ಕಾಣೆಯ ಸದಸ್ಯನೂ ಇಲ್ಲ, ತನಗೆ ಚುನಾವಣೆಯ ಚಟುವಟಿಕೆಗಳಲ್ಲಿ ನಂಬುಗೆಯೂ ಇಲ್ಲ' ಎಂದು ಉಸಿರಿದ್ದಾರೆ. ಆದುದರಿಂದ ಈ ಅವರ ಪೂರ್ವಪೀಠಿಕೆಯಂತೆ ಮಹಾತ್ಮಾಜಿಯವರ ಮುಂದಿನ ಮಾತು 'ಯಾರನ್ನು ನೀವು ಆರಿಸಿದರೂ ನನಗೆ ಇಷ್ಟೇ' ಎಂದು ಬರಬೇಕಾದುದು ವಾಸ್ತವ.

ಆದರೆ ಈ ಮಾತು ನೇರವಾಗಿ ಮುಂದೆ ಸಾಗದೆ ಗಕ್ಕನೆ ತಿರುಗಿ, ಉತ್ತರಾಭಿಮುಖವಾಗಿ ಹರಿವ ಗಂಗೆ ಒಮ್ಮೆಲೆ ದಕ್ಷಿಣಕ್ಕೆ ಹೊರಳಿದಂತಾಗಿದೆ! ಮಹಾತ್ಮಾಜಿಯವರು ಮುಂದೆ ರಾಜಾಜಿಯವರ ಪ್ರಚಾರ ಕಾರ್ಯವನ್ನು ಸೊಗಸಾಗಿ ನೆರವೇರಿಸಿದ್ದಾರೆ! 'ರಾಜಾಜಿಯಂತಹ ಮನುಷ್ಯನನ್ನು ಕಳಕೊಳ್ಳಬೇಡಿರಿ' ಎಂದು ತಮಿಳುನಾಡಿನ ಜನಗಳಿಗೆ ಎಚ್ಚರಿಕೆ ಕೊಟ್ಟಿದ್ದಾರೆ; ಅಥವಾ ಪ್ರಾರ್ಥಿಸಿಕೊಂಡಿದ್ದಾರೆ!

ಇಷ್ಟು ಬಿಚ್ಚುಮಾತಿನಿಂದ ಮಹಾತ್ಮಾಜಿಯವರು ಹೇಳಬಯಸಿದ್ದೇ ವ್ಯಾಘಾತಕ್ಕೆ ಒಂದು ಒಳ್ಳೆಯ ದೃಷ್ಟಾಂತವಾಗಿದ್ದಾರೆ. ಅವರು ಹೀಗೆ ಸ್ಪಷ್ಟವಾಗಿ ಹೇಳಲು ಒಂದು ಕಾರಣವೂ ಇದೆ. ಹಿಂದೆ ತ್ರಿಪುರಿಯ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷೆಯ ಆಯ್ಕೆಯ ಕಾಲದಲ್ಲಿ, ಮಹಾತ್ಮಾಜಿಯವರು ಶ್ರೀ. ಸುಭಾಸಚಂದ್ರರ ವಿರುದ್ಧ ಶ್ರೀ. ಪಟ್ಟಾಭಿಯವರನ್ನು ಹರಸಿದ್ದರು; ಆದರೆ ಅದು ಹೊರಗಿನ ಜನಗಳಿಗೆ ತಿಳಿದಿರಲಿಲ್ಲ. ಆದರಿಂದ ಜನಗಳು ಶ್ರೀ. ಸುಭಾಸರನ್ನೇ ಆರಿಸಿದರು! ಮಹಾತ್ಮಾಜಿಯವರ ತೂಕ ತಪ್ಪಿತು. ಶ್ರೀ. ಸುಭಾಸರು ಆರಿಸಿ ಬಂದುದು ಅಸಹ್ಯವಾಯಿತು. ಜನಗಳು ಶ್ರೀ. ಬೋಸರನ್ನು ಆರಿಸಿ ತಪ್ಪು ಮಾಡಿದರೆಂಬಂತೆ ಕವ್ಯ ಲೇಖನಗಳಿಂದ ಸೂಚಿಸಿದರು! ಒಟ್ಟೊಂದು ವಿಷಮ ಘಟನೆಯೇ ನಡೆದು ಹೋಯಿತು. ಮಹಾತ್ಮಾಜಿಯವರ ನೇತೃತ್ವವು ನಾಡಿಗೆ ಇನ್ನೂ ಅವಶ್ಯವಿದ್ದುದರಿಂದ ಶ್ರೀ. ಸುಭಾಸರಿಗೆ ಸ್ಥಾನಭ್ರಷ್ಟರಾಗಬೇಕಾಯಿತು. ಅವರ ಭಾರತಹಿತದ ಕಾರ್ಯಗಳವು ಅತ್ಯಂತ ಉಜ್ವಲ; ಮತ್ತು ತೀವ್ರವಾಗಿದ್ದಿತು. ಆದುದರಿಂದ ಶ್ರೀ. ಸುಭಾಸರು ಆಗ ಅಸ್ತಮಿಸಿದಂತೆ ಕಂಡರೂ ಈಗ ಮತ್ತೆ ಲೋಕವನ್ನೇ ಬೆರಗುಗೊಳಿಸುವ ರೀತಿಯಲ್ಲಿ ತೊಳಗಿ ಬೆಳಗಿ ಮೆರೆದರು. ಆ ಮಾತು ಬೇರೆ.

'ನಿಮಗೆ ಯೋಗ್ಯ ಕಂಡ ಜೇಕಾದವರನ್ನು ನೀವು ಆರಿಸಿಕೊಳ್ಳಿರಿ' ಎಂದು ಜನಗಳಿಗೆ ಬರಿ ಸೂಚ್ಯವಾಗಿ ಹೇಳಬಿಟ್ಟರೆ ಶ್ರೀ ರಾಜಗೋಪಾಲಾಚಾರ್ಯರಿಗೆ ಸ್ಪಷ್ಟವಾಗಿಯೂ ಸ್ಥಾನ ದೊರೆತೀತೆಂದು ಮಹಾತ್ಮಾಜಿಯವರಿಗೆ ಎನಿಸಿರಲಿಕ್ಕಿಲ್ಲ; ಆದುದರಿಂದಲೇ ಹಿಂದೆ ಶ್ರೀ. ಪಟ್ಟಾಭಿಯವರ ಕಾಲಕ್ಕೆ ಮೊದಲು ಮೌನ ತಾಳಬಳಿಕ ಸಶ್ಚಾತ್ತಾಪಪಡಬೇಕಾದಂತೆ. ಈ ಬಾರಿ ಶ್ರೀ ರಾಜಗೋಪಾಲಾಚಾರ್ಯರ ವಿಷಯದಲ್ಲಿಯೂ ಆಗಬಾರದೆಂದು, ಮಹಾತ್ಮಾಜಿಯವರ ಒಳಕೆಯನು (ಅಂತರ್ಯಾಮಿಯು) ಈ ಮುಂಜಾಗ್ರತೆ ವಹಿಸಿರಬೇಕೆಂದು ಸ್ಪಷ್ಟವಾಗಿ ಕಂಡುಬಿಡಿಯಲಾಗಿದೆ. ಆ ಮುಂಜಾಗ್ರತೆಯೆ ಮಹಾತ್ಮಾಜಿಯವರಿಂದ ಬಾಯಿಬಿಟ್ಟು ಈ ಸಾರೆ ಮಾತಾಡಿಸಿ ಬಿಟ್ಟಿತು.

ಈ ಕೃತಿ ಮಹಾತ್ಮಾಜಿಯವರಂತಹರಿಗೇ ಚೆಂದ. ಅವರಂತಹ ಅಪೂರ್ವವಾದ ತ್ಯಾಗದ ಒಲವಿಲ್ಲದವರಿಗೆ ಇದು ದಕ್ಕುವ ತುತ್ತಲ್ಲ. ಸಾಮಾನ್ಯರ ಇಂತಹ ಕೃತಿಯ ಮೇಲೆ ಸ್ವಾರ್ಥದ ಆರೋಪ ಬರಲು ಬೇಕಾದಷ್ಟು ಎಡೆಯಿದೆ. ಆದರೆ ಮಹಾತ್ಮಾಜಿಯವರಿಗೆ ಸಾಧಿಸ ಬೇಕಾದ ಸ್ವಾರ್ಥವೇನಿದೆ ಇಲ್ಲಿ? ಭಾರತದ ಅರ್ಥವೇ ಅವರ ಸ್ವಾರ್ಥ: 'ಸರ್ವಮೇಧ' ಯಾಗ ಮಾಡಿ ಲೋಕದ ಸಾಮ್ರಾಟ ಪದದಲ್ಲಿರುವ ಅವರಿಗೆ ಇನ್ನು ಈ ಲೋಕದಲ್ಲಿ ಪಡೆಯಬೇಕಾದುದು ಏನೂ ಇಲ್ಲ. 'ಸ್ವಾರಾಟ್ ಭವತಿ' ಎಂಬ ಆ ಯಜ್ಞದ ಫಲವನ್ನು ವೇದದಲ್ಲಿ ಹೇಳಿದೆ ಅದರ ಸತ್ಯತೆಯನ್ನು ನಾವಿಂದು ಮಹಾತ್ಮಾಜಿಯವರಲ್ಲಿ ಕಾಣುತ್ತಲಿದ್ದೇವೆ. ಮಹಾತ್ಮರ ಈ ನಡೆ ವಿಪರೀತ ಗತಿಯಲ್ಲಿ 'ವಿಚಿತ್ರ(Curious)' ಹೆಜ್ಜೆ ಹಾಕುತ್ತ ನಡಸಿದ ಲಾಸ್ಯ—ತಾಂಡವವಾಗಿದೆ! ಉಳಿದವರು ಹಿನ್ನೆಲೆಯಿಲ್ಲದೆ ಈ ಗತಿಯಲ್ಲಿ ಕುಣಿದರೆ ಅವರಿಗೆ ದುರ್ಗತಿಯೇ ಸರಿ. ಮಹಾತ್ಮಾಜಿಯವರು ಹೀಗೆ 'ಆಡಿದುದು', ಒಂದು ಶುದ್ಧರಾಗವನ್ನು ಹೇಳುವಾಗ ಅದರಲ್ಲಿ ಭಿನ್ನರಾಗದ ಸ್ವರಗಳ ಛಾಯೆಗಾಣಿಸಿ ಹೇಳುವ ವೀಕ್ಷಣ (Curious) ಮಹಾ 'ಕೃತಿ' ಯಂತೆ ರವ್ಯವೂ 'ಮುದ್ದ'ಗೊಳಿಸುವಂತಹದೂ ಆದುದು; ಆದರೆ ಇದು ಹೆಂದವಾದರೂ ಶುದ್ಧ 'ಕೃತಿ' (ಹಾಡು-ಹಾಡು) ಎಂದು ಹೇಳಬಹುದೆ?

'ಹೇಳಬಹುದು', ಎಂಬುದನ್ನು ಈ ಮೇಲಣ ಪ್ರಶ್ನೆಯ ದಲ್ಲಿಯೆ ಹೇಳಿದೆ. ಆದರೆ 'ಹೇಳುವುದೂ ಕಷ್ಟ' ಎಂಬ ಇನ್ನೊಂದು ಉತ್ತರವೂ ಈ ಪ್ರಶ್ನೆಗೆ ಇದೆ.

ಈ ಬರೆಹದಲ್ಲಿ ಮಹಾತ್ಮಾಜಿಯವರು, ಮದರಾಸು ಇಲಾಖೆಯಲ್ಲಿ ಶ್ರೀ. ರಾಜಾಜಿಯವರ ವಿರುದ್ಧ ಒಂದು 'ಸಣ್ಣ ಕೂಟ'(Clique) ಇದೆ ಎಂದು ಬರೆಯುತ್ತಾರೆ. ಶ್ರೀ. ರಾಜಾಜಿಯವರ ವಿರುದ್ಧ ಸ್ವಲ್ಪ ಜನ ಒಳಸಂಚುಗಾರರು ಇರುವರೆಂದು ಸೂಚಿಸಿ ಮುಂದೆ ಮಹಾತ್ಮಾಜಿಯವರು ಅದೇ ಮಾತಿನ ಸ್ಥಾಪನೆಗಾಗಿ ಒಂದು ಪ್ರತ್ಯಕ್ಷ ಪ್ರಮಾಣವನ್ನು ಹೇಳಿದ್ದಾರೆ. ತಮ್ಮ ಈ ಯಾತ್ರೆಯಲ್ಲಿ ದಾರಿಯುದ್ದಕ್ಕೂ ಕೂಡಿದ ಅನಂತ ಲೋಕಸಮುದಾಯವೇ ಇದಕ್ಕೆ ಸಾಕ್ಷಿ ರಾಜಾಜಿಯವರ ಪ್ರಭಾವವು ಇಷ್ಟಿದ್ದಲ್ಲಿ ಇಷ್ಟು ಜನರ ನೆರವಿ ಸೇರುತ್ತಿದ್ದಿಲ್ಲವೆಂದು ಹೇಳಿದ್ದಾರೆ!

ಆದರೆ ಮಹಾತ್ಮಾಜಿಯವರ ಈ ಮಾತು ಓದಿ ನನಗೂ ವಿಲಕ್ಷಣ (Curious) ಎನಿಸಿತು. ಸೂಕ್ಷ್ಮಬುದ್ಧಿಯ ಧೂರ್ತ ಶ್ರೀ. ರಾಜಾಜಿಯವರೂ ಹಾಗೆ ಬಗೆದಿರಲಿಕ್ಕಿಲ್ಲವೆಂದು ನಾನು ನಂಬಿದ್ದೇನೆ. ಲಕ್ಷಾನುಜನರು ಕಿಕ್ಕಿರಿದು ನೆರೆವುದು ಯಾವ .....ಜೇಜೀಗಳಿಗೂ ಅಪೂರ್ವ ಕೇವಲ ಮಹಾತ್ಮಾಜಿಯವರಿಗಾಗಿ. ಅವರ ಅಪೂರ್ವ ವ್ಯಕ್ತಿತ್ವಕ್ಕೆ ತನ್ನ ಭಕ್ತಿಯ ಕಾಣಿಕೆಯನ್ನು ಸಲ್ಲಿಸುವುದಕ್ಕಾಗಿ. ಶ್ರೀ. ರಾಜಾಜಿಯವರು ಮಹಾತ್ಮಾಜಿಯವರು ಹೇಳುವಂತಹ ಅದ್ಭುತ ಪ್ರಭಾವವು ಲೋಕದ ಮೇಲಿದ್ದರೆ, ಅವರು ಗಳಿಸಿರಲ್ಲಿ ನಜೆದ ಅಂದೋಳನದ ಕೆಲವೊಂದು

ಕೃತಿಗಳನ್ನು ತಡೆಯಲು ಎಷ್ಟೊಂದು ಕೂಗಾಡಿದರೂ ಏನೂ ಉಪಯೋಗವಾಗಲಿಲ್ಲವೇಕೆ? ಶ್ರೀ. ರಾಜಾಜಿಯವರ ಪಾಕಿಸ್ತಾನದ ಕೂಗು ಲೋಕವನ್ನೆಲ್ಲ ಕೆರಳಿಸಿತು. ಅದೇ ಮಾತು ಮಹಾತ್ಮಾಜಿಯವರ ಬಾಯಿಂದ ಬರುತ್ತಲಿ ಜನ ಹೇಗೂ ಸಹಿಸಿಕೊಂಡಿತು. ಈ ತಾರತಮ್ಯವೆ ಮಹಾತ್ಮಾಜಿಯವರ ಗಮನಕ್ಕೆ ಬಂದಿರಲಾರದೆ?

ತಮಿಳುನಾಡಿನಲ್ಲಿ ಶ್ರೀ. ರಾಜಾಜಿಯವರಿಗೆ ವಿಶೇಷ ಬೆಂಬಲವಿಲ್ಲ ಎಂಬುದು ಅಲ್ಲಿಯ ಪತ್ರಿಕೆಗಳಿಂದ ಗೊತ್ತಾಗುವಂತಿದೆ. ಅಲ್ಲಿಯ ಕಾಂಗ್ರೆಸ್ ಕಮಿಟಿಗಳ ಆಯ್ಕೆಯಿಂದ ಸಿದ್ಧವಾಗಿದೆ. **ಶ್ರೀ ನಾಡರ್** ಎಂಬವರು ತಮಿಳುನಾಡ ಪ್ರಾಂ. ಕಾಂ ಕಮಿಟಿಯ ಅಧ್ಯಕ್ಷರೆಂದು ಯಥಾನ್ಯಾಯವಾಗಿ ಆರಿಸಿ ಬಂದಿದ್ದಾರೆ. ಅವರು ದಕ್ಷಿಣದ ಯಾತ್ರೆಯಲ್ಲಿ ಮಹಾತ್ಮಾಜಿಯವರೊಡನೆಯೆ ಎಲ್ಲೆಡೆಗಳಲ್ಲಿಯೂ ಅಲೆದಿದ್ದಾರೆ. ಬಳಿಯಲ್ಲಿಯೆ ಇರುವ ಶ್ರೀ. ನಾಡರರಿಗೆ ಮಹಾತ್ಮಾಜಿಯವರು ತಪ್ಪು ತ್ಪದಯದೊಳಗಿನ ಯಾವ ಒಂದು ಮಾತನ್ನೂ ಬಿಚ್ಚಿ ಹೇಳದೆ, ತಪ್ಪು ಪತ್ರಿಕೆಯಲ್ಲಿ ಶ್ರೀ. ರಾಜಾಜಿಯವರ ವಿರುದ್ಧ ಒಳ್ಳೊಂದು ಸಣ್ಣ ಕೂಟವಿದೆಯೆಂದು ಬರೆಯುತ್ತಾರೆ! ಈ ಸಂದರ್ಭದಲ್ಲಿ ಈ ಶ್ರೀ. ನಾಡರ್ ಅವರ ಮನಸ್ಸಿನ ಪಾಡು ಏನಾಗಿರಬೇಕು? ಜಯ್ಯೋ ಅದನ್ನು ಕಲ್ಪಿಸುವುದೂ ಅಸಾಧ್ಯ. ಅತನ ಸಾರ್ವಜನಿಕ ಜೀವನವನ್ನೆ ಕೂಲಕ್ಕೇರಿಸಿದಂತಾಗಲಿಲ್ಲವೆ? ಶಿವನು ತಾಂಡವದಲ್ಲಿ ದಂಡಮಾಲಾಧರನಂತೆ! ಸತ್ಯ. ಸತ್ಯ. ತ್ರಿಕಾಲಾಬಾಧಿತ ಸತ್ಯ! ಮಹಾತ್ಮಾಜೀ, ನೀವು ಸುಭಾಸ, ನಾಡರ್ ಮೊದಲಾದ ಹಲವರ ರುಂಡಮಾಲಾಧರ ಶಿವನು: ನಿಮ್ಮ ಸ್ವಾರ್ಥದ ಸರ್ವಸ್ವವನ್ನೂ ಹೋಮಿಸಿ, ಅದರ ಬೂದಿ ಬಳಿದುಕೊಂಡು ಭಾರತದ ಪಾರತಂತ್ರ್ಯದ ನಾಶಕ್ಕಾಗಿ ನವಸೃಷ್ಟಿ ನಿರ್ಮಾಣಕ್ಕಾಗಿ ಪ್ರಳಯ ತಾಂಡವ ನಡಿಸಿದ್ದೀರಿ. ನಿಜ. ರುದ್ರಮೋಹನ ನಿನಗೆ ನಮೋ ನಮೊ!

ಆದರೂ ಒಣವರೊಡನೆ ಹಸಿದೂ ಸುಡುವುದು ಅನಿವಾರ್ಯವೇನೊ ನಿಜ; ಆದರೆ ಸುಭಾಸರಂತಹರ ಗತಿ ನೋಡಿ ಜೀವ ಬೇಗುದಿಗೊಂಡಿದೆ ಅದಕ್ಕಾಗಿ ನಾನು ಇದನ್ನು, ತ್ರಿಪುರಿ ರಾಷ್ಟ್ರೀಯ ಮಹಾಸಭೆಯಿಂದಿನಿಂದಲೂ ಪಟ್ಟಿರುವ ವೇದನೆಗಳನ್ನು ಬಚ್ಚಿಡಲಾರದೆ ಉಸಿರಿದ್ದೇನೆ. ಕ್ಷಮಿಸಿ.

ತಮಿಳುನಾಡಿನಲ್ಲಿ ಅಷ್ಟೇ ಅಲ್ಲ; ಆಂಧ್ರದಲ್ಲಿಯೂ ಶ್ರೀ. ರಾಜಾಜಿಯವರ ಆಯ್ಕೆಯ ವಿರುದ್ಧ ಜನರಿದ್ದಾರೆ ಆದ ಕಾರಣ ಅವರಿಗೆಲ್ಲ 'ಸಣ್ಣ ಕೂಟ' (Clique) ಎಂಬುದು ಸರಿಯಲ್ಲ. ಶ್ರೀ. ಪ್ರಕಾಶಂ ಮೊದಲಾದ ಗಣ್ಯರೂ ಆ ಕೂಟಕ್ಕೆ ಸೇರಿರುವಾಗ, ಅದು 'ಅಲ್ಪಕೂಟ' ವಾಗಲಾರದು.

ಅಲ್ಲದೆ. ಲೋಕಮತದ ಬೆಂಬಲದಿಂದ ಆರಿಸಿ ಬಂದವರಲ್ಲಿ ಸುಭಾಸರಂತೆ ತೇಜಸ್ವಿಗಳು ಇರಲಿಕ್ಕಿಲ್ಲವೆಂದು ಯಾರು ಹೇಳಬೇಕು? ಮಹಾತ್ಮಾಜಿಯವರಿಗೆ ಶ್ರೀ. ರಾಜಾಜಿಯವರಷ್ಟು ನಿಕಟ ಸಹವಾಸದಲ್ಲಿ ಇನ್ನು ಮುಂದಿನ ಪೀಳಿಗೆಯವರು ಬರುವುದು ಸಾಧ್ಯವಿಲ್ಲ. ಹಾಗೆ ಅದು ಸಾಧ್ಯವಿಲ್ಲದ್ದರಿಂದ ಉದಯೋನ್ಮುಖ ತರುಣ ಪೀಳಿಗೆಯ ತೇಜಸ್ಸಿನ ನೀಚಯ-ಪರೀಕ್ಷೆ ಮಹಾತ್ಮಾಜಿಯವರಿಗೆ ಆಗುವುದಕ್ಕೆ ಅವಕಾಶವೇ ಇಲ್ಲ

ಮಹಾತ್ಮಾಜಿಯವರು ಭಾರತದ ಆಂದೋಲನದ ಸೂತ್ರಗಳನ್ನು ವಹಿಸಿರುವುದರಿಂದ ಅವರಿಗೆ ಪ್ರತಿಯೊಂದು ಪ್ರಾಂತದಲ್ಲಿಯೂ ಅವರ ಸಂಪೂರ್ಣ ನೆಚ್ಚಿಕೆಯ ನಾಯಕನಿರುವುದು ಅತ್ಯಂತ ಆವಶ್ಯಕ. ಹೊಸಬನು ಹೇಗೊ, ಈಗ ಸಂಧಿಕೊಟ್ಟು ಪರೀಕ್ಷಿಸಲು ಅವಕಾಶವಿಲ್ಲ. ಪರಕೀಯ ಸರಕಾರದೊಡನೆ ಘನಘೋರ ಸಂಗ್ರಾಮವು ನಡೆದಿದೆ. ಇಂತಹ ಸಂದರ್ಭದಲ್ಲಿ ಮಹಾತ್ಮಾಜಿಯವರಿಗೆ ಹಳಬರಿಗೇ ಜೀವದಾನ ಮಾಡುವುದು ಅನಿವಾರ್ಯವಾಗುತ್ತದೆಂಬುದೂ ನಿಜ.

ಆದರೂ ಉದಯೋನ್ಮುಖ ತರುಣರಿಗೆ ಹೀಗೆ ಕುತ್ತು ಸಿರು ಬಿಡುವ ಹೊತ್ತು ಬರುವುದು, ಇದಾದರೂ ಭಾರತದ ಏಳ್ಗೆಯ ದೃಷ್ಟಿಯಿಂದ ಸರಿಯೆ?

---

(ಲತೆಯ ಪುಟದಿಂದ ಮುಂದುವರೆದದ್ದು)

ಕಸದಿಂದ ರಸವಾಡುವುದೇ ಮೋಡಕಾಬಾಜಾರಿನ ರಹಸ್ಯ. ಅದಕ್ಕೆ ತಕ್ಕ ಕಣ್ಣು ಬೇಕು. ಕವಿಯ ಸಂಸ್ಕಾರ ಬೇಕು. ಇತ್ತೀಚೆಗೆ ನಮ್ಮೂರಿನಲ್ಲಿಯೂ ಮೋಡಕಾಬಾಜಾರುಗಳು ಬೆಳೆಯುತ್ತಿವೆ. ಮಾರ್ಕೆಟ್ಟಿನ ಮುಖ್ಯ ಬೀದಿಗುಂಟ ಇವನ್ನು ನೋಡಬಹುದು. ಬಯಲೇ ಇವರ ಬಾಜಾರು ತುಂಬೆಲ್ಲ ಮುರಕು ಸಾಮಾನು- ರಾಶಿ— ಕಬ್ಬಿಣದ ಸೊಳಿಗಳಿಂದ, ಯಂತ್ರದ ಸಾಮಾನು—ಪಲ್ಲಂಗಗಳ ಎರೆಗೂ ಎಲ್ಲ ಸಾಮಾನು ಸಿಗುತ್ತವೆ. ಮುರಿದು ಬೀಕಲಾದ ಒಂದು ಹಳೆಯ ಬಸ್ಸಿನ body ಯೆ ಅವರ ಮನೆಯಾಗಿ ಬಿಟ್ಟಿರುತ್ತದೆ. ಅಲ್ಲಿಯೆ ಊಟ, ಅಲ್ಲಿಯೆ ನಿದ್ರೆ. ಇಂತಹವು ಸ್ವಾಯಿಯಾಪ ಅಂಗಡಿಗಳೇ ಎಂದು ಹೇಳಬಹುದು. ಕೆಲವು ಸಂಚಾರಿ ಅಂಗಡಿಗಳೂ ಇರುತ್ತವೆ. ಒಂದೆರಡು ಗ್ಲಾಸಿನ ದೀಪಗಳು, ನಾಲ್ಕೆಂಟು ಗೈಡು:—ಕೈಪಿಡಿಗಳಂತಹ ಹೊತ್ತಗೆಗಳು ವ್ಯಾಪಾರ ಮುಗಿಯುತ್ತಲೆ ಇದ್ದಷ್ಟು ಸಾಮಾನು ಬುಟ್ಟಿಗೆ ಸೇರಿಸಿ ಎದ್ದು ಬಿಡುವರು.

ಹಿಂದೊಮ್ಮೆ ಕೆಲವು ಜಪಾನೀ ಯಾತ್ರಿಕರು ಬಂದಿದ್ದರು. ಅವರ ಕೈಯ ಕುಶಲತೆಯೆಂದರೆ ಬೆರಳು ಕಚ್ಚುವಂತಹದು. ಪುರುಷರೂ ಹಾಗೇ, ಸ್ತ್ರೀಯರೂ ಹಾಗೇ ಒಂದಾಣೆಯ ಕಬ್ಬು ಕೊಂಡು, ಇವನ್ನು ತಿಂದು ರಸವುಂಡು ಉಳಿದ ದೆಂಡಿನಿಂದ, ಕಬ್ಬಿನ ಸಿಗುರಿನಿಂದ ಸುಂದರವಾದ ಹೂಗಳನ್ನು ರಚಿಸಿ ನಮ್ಮ ಮುಂದೇ ಆಡಿಗೊಂದರಂತೆ ಮಾರಾಟ ಮಾಡಿದರು. ಕಸದಲ್ಲಿ ರಸವನ್ನು ತುಂಬುವ ಅವರ ಕೌಶಲ್ಯಗಳಿಗೆ ನಾನು ತಲೆಬಾಗಿದೆ. ಯಾವ ಮೋಡಕಾಬಾಜಾರು ಈ ಸೃಷ್ಟಿಗೆ ಸಮತೂಕವಾದೀತು?

---

## ತಿದ್ದುಪಡೆ

ಈ ಸಂಚಿಕೆಯ ಲತೆಯ ಪುಟದ ಎನೆಯ ಅಂಕಣದ ತಿಳನೆಯ ಸಾಲೂ, ಎಗನೆಯ ಸಾಲಿನಲ್ಲಿಯ ಮೊದಲಿನ 'ಸಾಧ್ಯವಿದೆಯೆ? ಅದನ್ನು' ಎಂಬ ಪದಗಳೂ ದ್ವಿರುಕ್ತಿಯಾಗಿ ಬಂದು ಅರ್ಥಕ್ಕೆ ಸಂದೇಹವನ್ನುಂಟು ಮಾಡುತ್ತವೆ. ವಾಚಕರು ಆ ಭಾಗವನ್ನು ಬಿಟ್ಟು ಓದಬೇಕು. — ಸಂ. ಜ.




## ಮರೆತು ಬಿಟ್ಟ ಕೆರೂರ ಆಚಾರ್ಯರು; ಕವಿ ಬೇಂದ್ರೆಯವರಿಗೆ ಕನ್ನಡಿಗರ ಮನ್ನಣೆ.

ಕಳೆದ ಎರಡು ತಿಂಗಳಲ್ಲಿ ಕನ್ನಡ ಸಾಹಿತ್ಯಪ್ರಪಂಚಕ್ಕೆ ಎರಡು ಉತ್ಸವ ಸಮಯಗಳು ಬಂದುಹೋದುವು. ಒಂದನ್ನು ಕನ್ನಡ ಜನ ವಿಜೃಂಭಣೆಯಿಂದ ನೆನೆದೇರಿಸಿತು. ಇನ್ನೊಂದರ ಹೆಸರನ್ನೂ ಎತ್ತಲಿಲ್ಲ. ಜನವರಿ ತಿಂಗಳ ೧೧ನೆಯ ದಿನಾಂಕಕ್ಕೆ ಕೆರೂರ ವಾಸುದೇವಾಚಾರ್ಯರು ಗತಿಸಿ ೩೫ ವರ್ಷಗಳಾದುವು. ಫೆಬ್ರುವಾರಿ ೧೭ನೆಯ ತಾರೀಖಿಗೆ ಶ್ರೀ. ಬೇಂದ್ರೆಯವರ ೫೧ನೆಯ ಹುಟ್ಟುಹಬ್ಬ. ನಾಡಿನ ಬೇರ ಬೇರೆ ಭಾಗಗಳಲ್ಲಿ ವರ್ಷಟ್ಟ ಸತ್ಕಾರಸಮಿತಿಯವರು ಎರಡನೆಯ ಉತ್ಸವವನ್ನು ಯಥಾವತ್ತಾಗಿ ನಡೆಸಿಕೊಟ್ಟರು.

ವಾಸುದೇವಾಚಾರ್ಯರು ಗತಿಸಿದ ನಂತರದ ಇಪ್ಪತ್ತೈದು ವರ್ಷಗಳಲ್ಲಿ ಕನ್ನಡ ಸಾಹಿತ್ಯ ಹೊಸದೊಂದು ರೀತಿಯಲ್ಲಿ ಬೆಳೆದು ಬೇಕಾದಷ್ಟು ಪ್ರಶಸ್ತಿಯನ್ನೂ ವೈವಿಧ್ಯವನ್ನೂ ಗಳಿಸಿದ್ದರೂ, ಆಚಾರ್ಯರಿಂದ ಸಂದ ಸೇನೆಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಒಂದು ಮೇಳೆ ಹೀಗೂ ಹೇಳಬಹುದು: ನಮ್ಮ ಭಾಗದಲ್ಲಿ ಆಚಾರ್ಯರು ಕನ್ನಡ ಸಾಹಿತ್ಯಕ್ಕಾಗಿ ಮಾಡಿದ ಕೆಲಸವನ್ನು ಮಾಡದೆ ಹೋಗಿದ್ದರೆ ಇತ್ತೀಚಿನ ಸಾಹಿತ್ಯದ ಇತಿಹಾಸವನ್ನು ಬಹುಮಟ್ಟಿಗೆ ಬೇರೆಯಾಗಿಯೆ ಬರೆಯಬೇಕಾಗುತ್ತಿತ್ತೆಂದು ಹೇಳಿದರೆ ಯಾವ ಅತಿಶಯೋಕ್ತಿಯೂ ಆಲ್ಲ. ಹೀಗಿದ್ದರೂ ಆಚಾರ್ಯರ ೨೫ನೆಯ ಪುಣ್ಯದಿನವನ್ನು ಯಥೋಚಿತವಾಗಿ ಆಚರಿಸದಿದ್ದುದು ನಮ್ಮ ಸಾಹಿತ್ಯಾಭಿಮಾನಿಗಳಿಗೆ ಭೂಷಣವಲ್ಲವೆಂದು ವೇದದಿಂದ ಹೇಳಬೇಕಾಗಿದೆ. ಸಾಂಗಲಿಯಲ್ಲಿ ಪ್ರೊ. ಮುಗಳಿಯವರು ಈ ವಿಷಯದಲ್ಲಿ ಒಂದು ಯೋಜನೆಯನ್ನು ಕೈಕೊಂಡಿದ್ದರೆಂದು ಹೇಳಲ್ಪಾಗಿತ್ತು. ಆದರೆ ಅದರ ನಂತರ ಹೆಚ್ಚೇನೂ ಹೊರಬರಲಿಲ್ಲ. ಒಂದು ಮೇಳೆ ಸಾಂಗಲಿಯಲ್ಲಿ ೮ ದಿನಾಚರಣೆಯನ್ನು ನಡಸಿದ್ದರೂ ಅದಕ್ಕೆ ಸಾಕಷ್ಟು ಪ್ರಚಾರ ಸಿಕ್ಕಲಿಲ್ಲ. ನಾಡಿಗೆ ನಾಡೇ ಈ ದಿನಸವನ್ನು, ವಾಸುದೇವಾಚಾರ್ಯರಿಗೆ ನಾವು ಸಲ್ಲಸಬೇಕಾದ ಸ್ಮರಣೆಯ ಕೃತಜ್ಞತೆಯ ಕಾಣಿಕೆಯನ್ನು ಸಲ್ಲಸಲಿಕ್ಕೆ ಯೋಗ್ಯವೆಂದು ತಿಳಿದು ಕೆಲಸ ಮಾಡಬೇಕಾಗಿತ್ತು. ಆದರೆ ನಮ್ಮಲ್ಲಿ ದಿವಂಗತರು ದಿವಂಗತರೇ!

ದಿವಂಗತ ವಾಸುದೇವಾಚಾರ್ಯರು ಕಥೆಗಾರರು, ಕಾದಂಬರಿಕಾರರು, ನಾಟಕಕಾರರು, ಹರಟೆಗಾರರು. ಅಲ್ಲದೆ ವೃತ್ತಪತ್ರಿಕೆಕಾರರು ಕೂಡ. ಇವರ 'ಇಂದಿರೆ' ವಿಶೇಷವಾಗಿ ಕನ್ನಡ ಮಹಿಳಾ ಸಮಾಜಕ್ಕೆ ಒಚ್ಚುವೆಚ್ಚಿನ ತಂಗಿ. ಅವರ ಸೀಳ್ನುಡಿಗಳು ಇತ್ತೀಚೆಗೆ ಬೆಳೆದು ಒಂದು ಸಣ್ಣ ಕತೆಗಳಿಗೊಂದು ಕಳಾಯ. ಅವರ 'ಸರತ ನಗರದ ಶ್ರೇಷ್ಠಿ' ಯಾಗಲಿ, 'ಪತಿ ವಶೀಕರಣ'ವಾಗಲಿ, ಭಾವಾನುವಾದದ ಕೆಲಸಕ್ಕೆ ಆದರ್ಶಸ್ಥಾಯವಾದ ಕೃತಿಗಳು. ಅವರ 'ನಲದಮಯಂತಿ' ಆ ಕಾಲಕ್ಕೆ ಲೋಕಪ್ರಿಯವಾದ 'ಸಾಗ್ರಸಂಗೀತ' ನಾಟಕಕ್ಕಿಂದ ಉತ್ತಮ ನಿದರ್ಶನ ಅಲ್ಲದೆ ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ಅವರ ನೂರಾರು ನಗೆಬರಹಗಳು ಅವರ ಹಾಸ್ಯಪ್ರಜ್ಞೆಯ ಮತೆಗೆ, ಅಣಕುಮಾತಿಗೆ, ಆ ಅಣಕು ಹಾಸ್ಯಗಳ ಹಿಂದೆ ಅಡಗಿದ ಸಾಮಾಜಿಕ ವಿಮರ್ಶೆಗೆ ಸಾಕ್ಷಿ. ಪತಿವಶೀಕರಣವನ್ನು ಓದಿಯಾಗಲಿ, ರಂಗಭೂಮಿಯ ಮೇಲೆ ನೋಡಿಯಾಗಲಿ, ಅದು ಗೋಲ್ಡ್‌ಸ್ಮಿತ್‌ನ 'ಶಿ ಸ್ಟೂಪ್ಸ್ ಟು ಕಾಂಕರ್'ದ ಕನ್ನಡ ಅನುವಾದವೆಂದು ಯಾರು ಹೇಳಯಾರು? ನಮ್ಮ ಸಮಾಜದ ನಡೆ-ನುಡಿಗಳಿಗೆ, ಆಗು-ಹೋಗುಗಳಿಗೆ ಅಲ್ಲಿಯ ಕಥಾವಸ್ತುವನ್ನು ಸರಿಪಡಿಸಿಕೊಂಡು, ತಮ್ಮದೇ ಆದ ಒಂದು ಸ್ವತಂತ್ರ ಕೃತಿಗಿಂತಲೂ ಸ್ವತಂತ್ರ ಕೃತಿಯನ್ನು ಕನ್ನಡಕ್ಕೆ ನೀಡಿ, ನಿಧಾನವಾಗಿ ಆ ಕಾಲದಲ್ಲಿ ಮುಂದೆ ಹೆಜ್ಜೆ ಇಕ್ಕುತ್ತಿದ್ದ ಕನ್ನಡ ನಾಟಕಕ್ಕೆ ಬಹಳ ಬೊಡ್ಡ ಸೇವೆ ಮಾಡಿದರು. ಕನ್ನಡ ನಾಟಕದ ಇತಿಹಾಸದಲ್ಲಿ ಈ ಕೃತಿಗೆ ಬಹಳ ಮಹತ್ತ್ವದ ಸ್ಥಾನವಿದೆ. ಟೊಳ್ಳುಗಟ್ಟಿ'ಯನ್ನು ಆ ಮೇಲೆ ಬರೆದ ಕೈಲಾಸಂ ಅವರಾಗಲಿ, 'ಶಿಕ್ಷಣಸಂಭ್ರಮ'ವನ್ನೂ 'ಸ್ತ್ರೀಧರ್ಮರಹಸ್ಯ'ವನ್ನೂ ಬರೆದ ಹುಯಿಲಗೋಳ ನಾರಾಯಣರಾಗಲಿ ಈ ಕೃತಿಯಿಂದಲೆ ನೇರವಾಗಿ ಎಷ್ಟರ ಮಟ್ಟಿಗೆ ಸ್ಫೂರ್ತಿ ಪಡೆದರೆಂಬುದು ಹೇಳುವುದು ಸಾಧ್ಯವಿಲ್ಲದಿದ್ದರೂ, ವಾಸ್ತವತೆಯ ದಾರಿಯನ್ನು ಮೆಟ್ಟಿ ಬೆಳಸುತ್ತಿದ್ದ ಕನ್ನಡ ನಾಟಕ 'ಪತಿವಶೀಕರಣ'ದ ಮೂಲಕವಾಗಿ ತನ್ನ ಮೂರದ ಗುರಿಯನ್ನು ಸ್ಪಷ್ಟವಾಗಿ ಕಂಡುಕೊಂಡಿತೆಂಬುದು ನಿರ್ವಿವಾದ ವಿಷಯವಾಗಿದೆ. ಅವರ ಈ ಅನುವಾದ ಕಾರ್ಯವನ್ನು ಬೇರೊಂದು ದೃಷ್ಟಿಯಿಂದ ನೋಡುವುದೂ ಸಾಧ್ಯವಿದೆ. ಪಾಶ್ಚಿಮಾತ್ಯ ನಾಟಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುವ ಕೆಲಸ ಸುಮಾರು ಗಿಲಜಿರ ಸುಮಾರಿಗೆ ಮೊದಲಾಗಿದ್ದರೂ, ಆಚಾರ್ಯರು ತಮ್ಮ ಲೆಕ್ಕಣಿಕೆಯನ್ನು ಎತ್ತುವ ವರೆಗೆ ಈ ತರ್ಜುಮೆಯ ಕೆಲಸ ಕೇವಲ ತರ್ಜುಮೆಯ ಕೆಲಸವಾಗಿತ್ತಲ್ಲದೆ ಕಥಾಭಾಗವನ್ನು ನಮ್ಮಲ್ಲಿಯ ಸ್ಥಿತಿಗತಿಗಳಿಗೆ ಸರಿಪಡಿಸಿಕೊಂಡು ಬರೆದ ಕೃತಿ—ತರ್ಜುಮೆಯಂತೆ ಕಾಣದ ರೀತಿಯಲ್ಲಿ ಅದನ್ನು ನಡಸಿಕೊಂಡು ಹೋಗುವುದನ್ನು ಕೇವಲ ವಾಸುದೇವಾಚಾರ್ಯರೇ ನೋದಲು ಮಾಡಿದರು. 'ಸುರತ ನಗರದ ಶ್ರೇಷ್ಠಿ'ಯೆ ಆಗಲಿ, 'ವಸಂತಯಾಮಿನಿ'ಯೆ ಆಗಲಿ, ಅನುವಾದಗಳಿದ್ದರೂ ಹೊಸ ರೀತಿಯ ಅನುವಾದಗಳು. ನಾಟಕ ಹೊಸ ರೀತಿಯಲ್ಲಿ ಬೆಳೆಯುವಂತೆ ಅನುವು ಮಾಡಿಕೊಟ್ಟ ಕ್ರಾಸ್ತುಭಗಳು.

ಕನ್ನಡ ಸಣ್ಣಕತೆಯ ಜನಕತ್ವದ ವಿಚಾರದಲ್ಲಿ ಒಮ್ಮೊಮ್ಮೆ ವಾದವಿವಾದ ನಡೆಯುವುದುಂಟು. ಈ ಸನ್ಮಾನ ವಾಸುದೇವಾಚಾರ್ಯರಿಗೆ ಸಲ್ಲಬೇಕೋ, ವೆಂಕಟೇಶ ಅಯ್ಯಂಗಾರ್ಯರಿಗೆ ಸಲ್ಲಬೇಕೋ, ಪಂಜೆ ಮಂಗೇಶರಾಯರಿಗೆ ಸಲ್ಲಬೇಕೋ, ಎಂ. ಎನ್. ಕಾಮತ್ ಅವರಿಗೆ ಸಲ್ಲಬೇಕೋ ಎಂಬ ಬಗೆಯಲ್ಲಿ ಭಿನ್ನಾಭಿಪ್ರಾಯ ವಿರಬಹುದೆಂದು ತೋರುತ್ತದೆ. ಮೊಟ್ಟಮೊದಲಿಗೆ ಸಣ್ಣ ಕತೆಯನ್ನು ಬರೆದವರು ಯಾರು, ಪ್ರಸಿದ್ಧಪಡಿಸಿದವರು ಯಾರು, ಪ್ರಚಾರದಲ್ಲಿ ತಂದವರು ಯಾರು, ಎಂಬ ಹಲವಾರು ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ಹೇಳಿದೆ ಕನ್ನಡ ವಿಮರ್ಶಕರು ಈ ಜನಕತ್ವವನ್ನು ಒಬ್ಬರ

ಮೇಲಾಗಲಿ, ಇನ್ನೊಬ್ಬರ ಮೇಲಾಗಲಿ ಆರೋಪಿಸಿ ಹಾರಾಗಿದ್ದಾರೆ ನುಗುವು ತನ್ನದಲ್ಲದಿದ್ದರೂ ಮುಸ್ಲಿಂ ಕಾನೂನಿನನ್ವಯ ಜನಕತ್ವ ನನ್ನು ಒಪ್ಪುವುದು ಸಾಧ್ಯವಿದೆಯಂತೆ. ಹಾಗೆಯೆ ಇಲ್ಲಿಯೂ ಸಾಧ್ಯವೆ? ಆದರೆ ಈ ಜನಕತ್ವದ ಪ್ರಶ್ನೆಗಿಂತ ಕಥೆಗಳನ್ನು ಜನ ಮೆಚ್ಚಿದುದು ಹೆಚ್ಚಿನ ಮಾತು. ಜನರ ಮೆಚ್ಚುಗೆಯಲ್ಲಿಯೆ ಸಣ್ಣ ಕತೆಯು ಒಂದು ವಿಶಿಷ್ಟ ಸಾಹಿತ್ಯರೂಪವಾಗಿ ಬೆಳೆದು ನಿಂತುದು ಇನ್ನೂ ಹೆಚ್ಚಿನ ಮಾತು. ಆ ಸಾಹಿತ್ಯ ಪ್ರಕಾರಕ್ಕೆ ಜನರ ಮೆಚ್ಚುಗೆ ಸಿಗುವಂತೆ ಮಾಡಿದವರು, ಆ ಮೆಚ್ಚುಗೆಯ ಮೂಲಕವಾಗಿ ಆ ಸಾಹಿತ್ಯಪ್ರಕಾರ ಬೆಳೆಯುವಂತೆ ಮಾಡಿದವರು ವಾಸುದೇವಾಚಾರ್ಯರು. 'ಅವರ ಕತೆಗಳು ನೀಳ್ಗತೆಗಳು, ಸಣ್ಣ ಕತೆಯಲ್ಲಿ ಇರಕೂಡದ ವಿಸ್ತಾರ ಅವುಗಳಲ್ಲಿದೆ' ಎಂದು ಆಕ್ಷೇಪಿಸುವವರು, ಇತ್ತೀಚಿನ ನಮ್ಮ ಸಣ್ಣಕತೆ ತೀರ ಸಣ್ಣದಾಗುತ್ತ ನಡೆದಿದೆಯೆಂಬು ದನ್ನೂ, ಅವಶ್ಯವಾದ ವಿಸ್ತಾರವನ್ನು ಕಳೆದುಕೊಂಡು ಕೆರುಗತೆಯಾಗ ತೊಡಗಿದೆ ಎಂಬುದನ್ನೂ ಗಮನಿಸಬೇಕು. ವಿಸ್ತಾರದ ಮಾತನ್ನೆತ್ತು ವುದಕ್ಕಿಂತ ಅದರಲ್ಲಿಯ ವಿಷಯದ ಏಕಮುಖತೆಯ ಕಡೆಗೆ ನಾವು ಲಕ್ಷ್ಯ ಹೊರಯಿಸಿ, 'ಮಲ್ಲೇಶಿಯ ಸಲ್ಲೆಯರು' ಕತೆಯನ್ನಾಗಲಿ, 'ಪ್ರಕೃತಿ ಬಲ'ವನ್ನಾಗಲಿ ವಿಮರ್ಶಿಸಿ ನೋಡಿದರೆ, ನಾವು ಮೇಲ್ನುಡಿ ಸಿದ ಆಕ್ಷೇಪಣೆಯನ್ನು ಹಿಂದಕ್ಕೆತ್ತಿಕೊಳ್ಳಬೇಕಾದೀತೆಂದು ತೋರು ತ್ತದೆ. ಆಚಾರ್ಯರ ಕತೆಗಳು ಮಾಸ್ತಿಯವರ ಕತೆಗಳಿಂದಾಗಲಿ, ಪಂಜೆ-ಕಾಮತರ ಕತೆಗಳಿಂದಾಗಲಿ ಬೇರೆಯಾಗಿರಬಹುದು. ವಿಷಯ ವಲ್ಲಿಯಂತೆ ತಂತ್ರದಲ್ಲಿಯೂ ಬೇರೆ ದಾರಿಯವಾಗಿರಬಹುದು. ಅದು ಮುಖ್ಯವಲ್ಲ. ವಾಸುದೇವಾಚಾರ್ಯರು ಅವಲಂಬಿಸಿದ ತಂತ್ರ ಸಣ್ಣ ಕತೆಗಳ ತಂತ್ರಕ್ಕೆ ಅಥವಾ ವಿಷಯವಿಸ್ತಾರಕ್ಕೆ ವಿಸಂಗತವಾದುದಲ್ಲ ವೆಂಬುದೇ ಮುಖ್ಯ. ಈ ಮಾತನ್ನು ನಾವು ಇನ್ನಷ್ಟು ಲಕ್ಷ್ಯಪೂರ್ವಕ ವಾಗಿ ಬಿಡಿಸಿ ನೋಡಿದರೆ, ಕನ್ನಡದಲ್ಲಿಯ ಸಣ್ಣಕತೆಯ ಜನಕತ್ವದ ಪ್ರಶ್ನೆಯೂ ಬಗೆಹರಿಯಬಹುದು.

'ಹಾಗೆ ನೋಡಿದರೆ ಈ ಜನಕತ್ವದ ಪ್ರಶ್ನೆ ನಿರರ್ಥಕ. ಸಾಹಿತ್ಯದ ಇತಿಹಾಸದಲ್ಲಿಯ ಯಾವ ಘಟನೆಯೂ, ಬದುಕಿನಲ್ಲಿಯ ಇನ್ನಾವ ಘಟನೆಯಂತೆಯೂ ಆಕಸ್ಮಿಕವಾಗಿ ಸಂಭವಿಸುವುದಿಲ್ಲ. ಒಂದಿಲ್ಲೊಂದು ತೆರದ ಹಿಂದುಮುಂದಿನ ಸಂಬಂಧವಿದ್ದೇ ತೀರಬೇಕು. ಒಂದು ಸಾಹಿತ್ಯ-ರೂಪ ಒಪ್ಪತ್ತಿನಲ್ಲಿ ಬೆಳೆದು ನಿಲ್ಲುವ ಮಾತಲ್ಲ; ಹತ್ತಿಪ್ಪತ್ತು ಜನರ ಕೈಯಲ್ಲಿ ಹತ್ತಿಪ್ಪತ್ತು ರೂಪಗಳಲ್ಲಿ ವಿಸ್ತಾರವನ್ನು ವೈವಿಧ್ಯವನ್ನು ಪಡೆದು ಬೆಳೆಯಬಲ್ಲದು. ಜನಕತ್ವದ ಮಾತಿಗಿಂತ ಈ ಸ್ವರೂಪಕ್ಕೆ ಈ ವಿಸ್ತಾರವನ್ನೂ, ಈ ವೈವಿಧ್ಯವನ್ನೂ ಹೆಚ್ಚಾಗಿ ಯಾರು ಒದಗಿಸಿದರು ಎಂಬುದೇ ಹೆಚ್ಚಿನ ವಿಷಯ. ಮುಖ್ಯವಾಗಿ ವಾಸುದೇವಾಚಾರ್ಯರು ಕಥೆಗಳನ್ನು ಒರೆದರಲ್ಲದೆ, ಕಥೆಗಳಿಗೆ ಓದುಗರ ಹೃದಯದಲ್ಲಿ ಒಂದು ಜಾಗ ಹಿಡಿದುಕೊಟ್ಟರು. ಉಳಿದವರು ಆ ಜಾಗ ಹಿಡಿದು, ಅದನ್ನೇ ಬೆಳಸಿ ಬಣ್ಣ ಹಚ್ಚಿ ಅಚ್ಚುಕಟ್ಟಾಗಿಸಿರಬಹುದು. ಉಳಿದವರು ಅಚ್ಚುಕಟ್ಟಾಗಿಸಿದರೆಂದ ಮಾತ್ರಕ್ಕೆ ಮನೆ ಕಟ್ಟಿದವರನ್ನು ಮರೆಯ ಬಹುದೆ?

ಕತೆಗಳ ಬಗೆಯಲ್ಲಿ ಹೇಳಿದ ಮಾತನ್ನೇ ಕಾದಂಬರಿಗಳ ಬಗೆ ಯಲ್ಲಿಯೂ ಹೇಳಬಹುದು. ಆದರೆ ಸಾಮಾಜಿಕ ಕಾದಂಬರಿಗಳನ್ನು ಸ್ವತಂತ್ರವಾಗಿ ಬರೆದವರಲ್ಲಿ ಆಚಾರ್ಯರು ಮೊದಲಿಗರಲ್ಲ. ಮೈಸೂರು ಕಡೆಗೆ ಪುಟ್ಟಣ್ಣನವರು, ಧಾರವಾಡದ ಕಡೆಗೆ ಗಳಗನಾಥರು ಆ ಕಾರ್ಯವನ್ನು ಮೊದಲಿಗೇ ಸ್ವಾರಂಭಿಸಿದ್ದರು. ಆದರೆ ಕನ್ನಡ ಕಾದಂಬರಿಗೆ ಸುತ್ತಲಿನ ಸಾಮಾಜಿಕ ಜೀವನವನ್ನೇ ಮುಖ್ಯ ವಿಷಯ ವನ್ನಾಗಿಟ್ಟುಕೊಂಡು, ಕಾದಂಬರಿಯನ್ನು ವಾಸ್ತವಿಕತೆಯ ಹೆದ್ದಾರಿ ಯಲ್ಲಿ ಗಟ್ಟಿಮುಟ್ಟಾಗಿರಿಸಿದವರು ವಾಸುದೇವಾಚಾರ್ಯರು. ಇಂದಿರೆಯು ಉತ್ತರ ಕರ್ನಾಟಕದಲ್ಲಿ ಅಪೂರ್ವವಾಗಿ ಲೋಕಪ್ರಿಯವಾಗಲಿಕ್ಕೆ ಇದೇ ಮುಖ್ಯವಾದ ಕಾರಣವೆಂದು ಹೇಳಬಹುದು. ಕೆರೂರರವರ ಹಾಸ್ಯ, ಕೊಂಕುನುಡಿ, ಕನ್ನಡ ಗದ್ಯದ ವಿಸ್ತಾರವನ್ನು ಸಾಧಿಸಿದುವು. ಇಂದಿನ ಗದ್ಯದ ಮಟ್ಟವನ್ನು ನಾವು ಲಕ್ಷ್ಯದಲ್ಲಿಟ್ಟುಕೊಂಡು ನೋಡಿದರೆ; ಆಚಾರ್ಯರ ಗದ್ಯ ಸೆಸಸಾಗಿಯೆ ಕಾಣಬಹುದು; ಆದರೆ ಆ ಕಾಲಕ್ಕೆ ಅದೇ ಹೆಚ್ಚು. ಗದ್ಯ ಹೊಸ ದಾರಿಗಳಲ್ಲಿ ಹೊರಟಿತ್ತು. ಆ ಹೊಸ ದಾರಿಯಲ್ಲಿಯ ಎಡರುಗಳನ್ನು ಬದಿಗಿರಿಸಿ ಮುಂದುವರಿದವರಲ್ಲಿ ಅವರು ಮುಖ್ಯರು. ಈ ಮಾತನ್ನು ಮನಗಾಣಬೇಕಾದವರು ಅವರ ನಾಟಕ ಕಾದಂಬರಿಗಳಿಗಿಂತ ಅವರ ಲಘುನಿಬಂಧಗಳನ್ನು, ಅವರ ನಗೆಬರೆಹ ಗಳನ್ನು ನೋಡಬೇಕು.

ಇಂಥವರ ಜನ್ಮದಿನವು ಪುಣ್ಯದಿನವನ್ನು ಯೋಗ್ಯವಾದ ರೀತಿಯಲ್ಲಿ ನಡಸುವುದು ತೀರ ಆವಶ್ಯವೆಂದು ಬೇರೆಯಾಗಿ ಹೇಳಬೇಕಿಲ್ಲ. ಇಂಥ ಸ್ಮರಣೆಯಿಂದ ಅವರಿಗಿಂತ ನಮ್ಮನ್ನು ನಾವೇ ಗೌರವಿಸಿಕೊಂಡಂತೆ. ವಾಸುದೇವಾಚಾರ್ಯರ ಕೃತಿಗಳ ಬಗೆಯಲ್ಲಿ,ಸಾಹಿತ್ಯದ ಇತಿಹಾಸದಲ್ಲಿ ಅವರ ಸ್ಥಾನಮಾನದ ಬಗೆಯಲ್ಲಿ ಕನ್ನಡ ವಿಮರ್ಶಕರು ಇನ್ನೂ ಕೆಲಸ ಮಾಡಬೇಕಾಗಿದೆ. ಮೊದಮೊದಲು ಮುಂದಾಗಿ ಕೆಲಸ ಮಾಡಿದ ಈ ಮಹಾನುಭಾವರ ಪರಿಚಯ ಹೆಚ್ಚೆಚ್ಚಾಗಿ ಆಗುವುದು ಬೇಕಾಗಿದೆ. 'ವಾಸುದೇವ ವಿನೋದಿನಿ' ಸಭೆಯವರು ಈ ಕೆಲಸವನ್ನು ಎತ್ತಿಕೊಳ್ಳಬೇಕೆಂದು ಸೂಚಿಸಬಹುದಾಗಿದೆ. ಮನೋಹರ ಗ್ರಂಥ ಮಾಲೆಯವರಿಂದ ಈ ಬಗೆಯಲ್ಲಿ ಕೆಲಸ ನಡೆಯಬಹುದೆಂಬ ಭರವಸೆ ಯನ್ನು ಇತ್ತೀಚೆಗೆ ಪ್ರಕಟವಾದ 'ನಳದಮಯಂತಿ'ಯ ಮೇಲಿಂದ ಇಟ್ಟುಕೊಳ್ಳಬಹುದಾಗಿದೆ. ಆದರೆ ಈಗಾಗಲೆ ಪೂರ್ವಾಲೋಚನೆ ಮಾಡಿಕೊಂಡು ಬಯಕೆ ಕೃತಿಯಾಗಬೇಕಿತ್ತು. ಒಂದು ಸ್ಮಾರಕದ ಮಾತಂತೂ ಇರಲಿ; ಆದರ ಬದಲಾಗಿ ನಾಡಿನ ವಿದ್ವಾಂಸರು ವಿಮರ್ಶಕರು ಸೇರಿ ಒಂದು ಪ್ರಶಸ್ತ ಗ್ರಂಥವನ್ನಾದರೂ ಅವರು ಗತಿಸಿ ಇಪ್ಪತ್ತಾರು ವರ್ಷಗಳು ಮುಗಿಯುವುದರೊಳಗಾಗಿ ಸಿದ್ಧಪಡಿಸುವ ರೆಂದು ಆಶಿಸಬಹುದೇ? ನಮ್ಮ ಪ್ರಕಾರಕರು ಇತ್ತ ಗಮನಿಸುವ ಅವಶ್ಯಕತೆ ಇದೆ.

× × × ×

ಶ್ರೀ. ಬೇಂದ್ರೆಯವರ ಕವಿತಾಸಾಮರ್ಥ್ಯದ ವಿಷಯದಲ್ಲಿ ಯಾಗಲಿ, ಅವರ ಕೃತಿಗಳ ಲೋಕಪ್ರಿಯತೆಯನ್ನು ಕುರಿತಾಗಲಿ ಹೆಚ್ಚು ಹೇಳುವ ಅನಿವಾರ್ಯಕತೆಯಿಲ್ಲ. 'ಕವಿ ಎಂದರೆ ಬೇಂದ್ರೆ' ಎಂಬುದು ಕನ್ನಡದ ಮನೆಮಾತಿನಲ್ಲೊಂದಾಗಿದೆ. ಜನಪದ ಸಾಹಿತ್ಯದ ಸೊಗಸಿಗೆ ಅಪ್ರತಿಮವಾದ ಶಬ್ದಮಾಧುರ್ಯ ಸೇರಿಕೊಂಡು ಒನ್ನೆ, ಅನುಭವದ ಭಾವಗೀತವಾಗಿ ಹರಿಯುತ್ತದಾದರೆ,ಇನ್ನೊಮ್ಮೆ ಅನುಭಾವದ ಉರ್ಧ

(ಉಳಿದದ್ದು ಮುಂದಿನ ಪುಟದಲ್ಲಿ ನೋಡಿರಿ.)




ಗೃಹಿಣಿ : (ಅನುವಾದಿತ-ಸಾಮಾಜಿಕ ಕಾದಂಬರಿ) ಧಾರವಾಡದ ಲಲಿತ ಸಾಹಿತ್ಯಮಾಲೆಯ ೧೪ನೆಯ ಕುಡಿ. ಮೂಲಲೇಖಕರು : ಡಿ. ಹನುಮಂತರಾಯರು. ಅನುವಾದಕರು : ಕೆ. ಈಶ್ವರರಾಯರು, ಬೆಂಗಳೂರು

ಕಾಳಿ ವಾಸುವಿನೊಡನೆ ನಾಟಕಕ್ಕೆ ಹೋದಾಗ, ಅಲ್ಲಿಯ ನಟಿಯೊಬ್ಬಳ ರೂಪಕ್ಕೆ ಮೋಹಿಸುವನು. ಈ ಅಪ್ಸರೆಯನ್ನು ಹೇಗೆ ಸಂದರ್ಶಿಸಿ ಕಣ್ತುಂಬ ನೋಡಿ ಪರಿಚಯ ಮಾಡಿಕೊಂಡೇನೆಂಬ ಹಂಬಲವಿರುವಾಗ ಹಾರ್ಮೋನಿಯಮ್‌ವಾಲಾ ಕಾಣುವನು. ಸಿಗರೇಟ್ ಪಾನೀಯಗಳ ಮುಖಾಂತರ ಪ್ರಣಾರ್ಥದಲ್ಲಿ ನಟಿ 'ಅನಸೂಯೆ'ಯ ಮುಂದೆ ಕಾಳಿ ನಿಲ್ಲುವನು. ಕಾಳಿ ಎಂ. ಬಿ, ಬಿ. ಎಸ್. ವಿದ್ಯಾರ್ಥಿ; ತನ್ನನ್ನು ಮೋಹದ ಪುತ್ಥಳಿಯೆಂದು ತಿಳಿದಿರುವ—ಎಂಬ ಕಲ್ಪನೆಯಾದಾಗ ಆಕೆ ಸಲಿಗೆಯಿಂದ ಹರಟೆ ಪ್ರಾರಂಭಿಸುವಳು. 'ನಾಟ್ಯವೈಖರಿಗೆ ನಾನು ಮನಸೋತಿರುವೆ. ನಿಜವಾಗಿಯೂ ನಿನಗೆ ಇನ್ನೂ ಕೆಲವು ಮಾತು ಕೇಳುವುದಿದೆ' ಎಂದು ಕಾಳಿ ಹೇಳುವನು. ನಾಟಕ ಮುಗಿದ ಮೇಲೆ ಮಾತುಕತೆಯೆಂದು ನಿರ್ಧಾರವಾದಾಗ, ಪ್ರತಿವೃತ್ತಿಯೂ ತಾಸಿನ ಮುಳ್ಳಿನಂತೆ ಹೇಗೆ ಸಾಗುತ್ತದೆ ಎಂದು ಅವನಿಗೆ ಎನಿಸಿರಲು ಸಾಕು. ಅಂತೂ ಒಮ್ಮೆ ಕಾಳಿ ಅನಸೂಯೆಯ ಮನೆಯಲ್ಲಿ! ರಾತ್ರಿಯೆಲ್ಲ ಉನ್ಮಾದ, ಉಲ್ಲಾಸ. ಆದರೆ ಭೀರಪಲ್ಲಿ ಅನಸೂಯೆಗೆ 'ರಮಾ' ಎಂದು ಹೆಸರು ಮರುದಿನ ಕಾಳಿ ಕಾಣಲು ಬಂದಾಗ, ರಮೆಯ ಮನೆಯಲ್ಲಿ ಗಲಭೆ. ಮನೆಯ ಮಾಲಕನಿಗೂ ಆಕೆಗೂ ಬಾಡಿಗೆಯ ಬಗೆಗೆ ತಕರಾರು. ಕಾಳಿ ಅವನ ಸಾಲ ತೀರಿಸಿದಾಗ ರಮೆಯ ದುಃಖವು ಧಾರೆಧಾರೆಯಾಗಿ ಹರಿಯುವುದು. 'ನನ್ನ ಸಂಗಡ ಸಿಮ್ಲಾಗೆ ಬೇಡ; ನನ್ನನ್ನು ಎಸ್ಟೋ ಜನರು ಮಾಯಿಸಿದವರು' ಎಂದು ಅಕೆ ಹೇಳಿಕೊಂಡಾಗಲೂ 'ನಿನ್ನೊಡನೆಯೇ ನನಗೆ ಸುಖಸಂಸಾರ ಬರೆದಿದೆ' ಎಂದು ಕಾಳಿಯು ಮರುನುಡಿದನು.

ಬಾಣಕಾದಂಬರಿಯು ಮುನಿಸುಪುತ್ರರನ್ನು ಕುರಿತು ವಾಸು, ಕೆಳದಿಯ ನೀತಿ ಮಾರ್ಗಕ್ಕೆ ಧಿಕ್ಕಾರವೆಂದು ಹೇಳಿ ಅವನ ಮನಸ್ಸನ್ನು ತಿರುಗಿಸಲು ಯತ್ನಿಸುವ. ಮುಂದೆ ಕೆಲವು ದಿನ ಕಾಳಿ-ರಮೆಯರಿಗೆ ಪ್ರಣಯಕಲೆ ಯಾಗದಿದ್ದರೂ, ವಾಸುವಿನ ಬಾಯಿಂದ ಅವನ ಜೀವನೋದ್ದೇಶವು ತಿಳಿಯುವುದು. 'ಹೋಗಲೋ ಬೇಡವೋ' ಎಂದು ಲಕ್ಷಾಂತರ ಕೊನೆಗೊಮ್ಮೆ ರಮೆ ಕಾಳಿಯ ಕೊರಳಿಗೆ ಬಿದ್ದಳು. ಕ್ಷಣಕಾಲ ಕಾಳಿಗೆ ದಿಗ್ಭ್ರಮೆ! ಎಸ್ಟೋ ಪ್ರೇಮದ ಪರೀಕ್ಷೆಯಾದ ಮೇಲೆ 'ಅಭ್ಯಾಸವನ್ನು ಬಿಡುವುದು ಬೇಡ' ಎಂದು ಅನಸೂಯೆಯನ್ನು 'ಸುಖದಿಂದಿರಬೇಕಾದರೆ ಹೊಸಮನೆ ಚೆನ್ನ' ಎಂದೆಬ್ಬಿಸಿ, ರಮೆ ಕಾಳಿ ಈಗ ಒಳ್ಳೆಯ ಮನೆಯಲ್ಲಿ ಅಚ್ಚುಮೆಚ್ಚಾಗಿರುವರು. ವಾಸು ಮಾತ್ರ ಬಿಡುವಿನಲ್ಲಿ ಹಳ್ಳಿಗೆ ಹೋಗಿ, ರಾಜಮ್ಮನವರ ಮುಂದೆ ಮಗನಾದ ಳಿಯ ದುರ್ಮಾರ್ಗದ ಪುರಾಣ ಬಿಚ್ಚುವನು. 'ಕಾಳಿ ಹೇಗಾದರೂ ನ್ನನ್ನು ಒಮ್ಮೆ ಕಾಣುವಂತೆ ಮಾಡು' ಎಂದು ರಾಜಮ್ಮನವರು ಸೇಳಿಕೊಂಡು, ಹಣವೇನಾದರೂ ಬೇಕಾಗಬಹುದೆಂದು ತಿಳಿದು ೨೦೦೦ ರೂಪಾಯಿಯ ಆಸೆ ಹುಟ್ಟಿಯಾದರೂ ಕಾಳಿ-ರಮೆಯರು ಅಗಲುವಂತೆ ಮಾಡೆಂದು ಬಿನ್ನವಿಸುವರು. ತಾಯಿಯ ನಿಸ್ಸಾರ್ಥಬುದ್ಧಿಯ ಬಗೆಯನ್ನು ವಾಸು ವರ್ಣಿಸಿದಾಗ, ಕಾಳಿಯು ಹಳ್ಳಿಗೆ ಹೊರಡುವನು.

ನಿರಹಂಕಾರಿಯಾದರೂ ಚಿಂತೆ ಇಲ್ಲ; 'ಇಂದಿಲ್ಲ ನಾಳೆ ಕಾಳಿ ಬರುವನು; ನನ್ನ ಸಂಕಟ ಕಳೆಯುವನು' ಎಂದು ರಮೆ ಗಾಳಿಗೋಪುರ ಕಟ್ಟುವಳು. ಕಾಳಿ ಇಲ್ಲದ ಈ ಸೇಳೆ ಸಾಧಿಸಿ ವಾಸು ರಮೆಯ ಮನೆಗೆ ಬರುವನು. ಕಾಳಿಯ ಸಹವಾಸ ನಿನಗೆ ಬೇಡವೆಂದು ಅಕೆಗೆ ತಿಳಿಹೇಳುವನು. 'ನಿನ್ನಿಂದಲೇ ಕಾಳಿ ಹಾಳಾದ' ಎಂಬ ಮಾತು ಕೇಳಿ ರಮೆಯ ಹೃದಯಕ್ಕೆ ಆಘಾತವಾಯಿತು. ಸೂಳೆಯಾದರೇನು? — ತನಗೂ ಹೃದಯವಿಲ್ಲವೇ? — ಎಂದು ವಾಸು ಕೊಡಬಂದ ಕರನ್ಸಿ ನೋಟುಗಳನ್ನು ಬಿಸಾಕುವಳು. ರುದ್ರರೂಪ ತಾಳುವಳು. ಇಷ್ಟಾದರೂ ರಮೆಯ ಕಾರುಣ್ಯಾವಸ್ಥೆಗೆ ವಾಸು ಮಿಡುಕಲಿಲ್ಲ.

ಇತ್ತ ಹಳ್ಳಿಯಲ್ಲಿ ಕಾಳಿಯ ಕೈ ಬರಿದು. ಮದ್ರಾಸಿಗೆ ಹೋಗುವುದಕ್ಕಾಗಿ ರೈತನ ಕಡೆಯಿಂದ ಸಾಲ ಕೇಳಿದುದಕ್ಕೆ ರಾಜಮ್ಮನವರಿಗೆ ಅಸಂತೋಷ. ಕೊನೆಗೆ ಇಡೀ ಮನೆಯೆ ನಿನ್ನದೆಂದು ಹಣದ ತಿಜೂರಿಯ ಬೀಗದ ಕೈ ಕೊಡುವಳು. ತಾಯಿಯ ತ್ಯಾಗಬುದ್ಧಿ ಈಗ ಕಾಳಿಯ ಹೃದಯವನ್ನು ಒಂದೇ ಸವನೆ ಕೊರೆಯತೊಡಗಿತು. ತನಗಾಗಿ ಅವಳು ಸೋಸಿದ ಆಪತ್ತುಗಳೆಷ್ಟು?—ಎಂಬ ಕಲ್ಪನೆಯ ಕನಸು ಕಾಣುವಾಗ ಮದ್ರಾಸ ನಿಲ್ದಾಣ ಬಂದಿತು.

ಲಗುಬಗೆಯಿಂದ ಮನೆಗೆ ಬಂದು ನೋಡಿದಾಗ ಅಲ್ಲೇನಿದೆ? ಬಾಗಿಲಿಗೆ ಬೀಗ. ರಮೆ ಎಲ್ಲಿ ಹೋದಳು?—ಎಂದು ತಿಳಿದುಕೊಳ್ಳುವುದಕ್ಕಾಗಿ ಟ್ಯಾಕ್ಸಿಯಲ್ಲಿ ಕುಳಿತು ಕಾಳಿ ಎಷ್ಟೆಷ್ಟೋ ಹುಡುಕಿದ. ನಿರಾಸೆ. ಬೇಜಾರು ಬಂದು ಸುತ್ತಲೂ ದಿಟ್ಟಿ ಚೆಲ್ಲಿದಾಗ, ಮೇರಿ ನೇಪ್ಯೆಯ ಅವಾಸ ಕಣ್ಣಿಗೆ ಬೀಳುವುದು. ರಾತ್ರಿಯೆಲ್ಲ ಬೇಕಾದಷ್ಟು ಕುಡಿದರೂ ನೇರಿಯ ಸಹವಾಸ ಬೆಳಸುವಷ್ಟು ಕೀಳುಬುದ್ಧಿ ಅವನಿಗೆ ಇರಲಿಲ್ಲ.

ಕಾಳಿಯು ಹೀಗೆ ಮದ್ರಾಸಿನಲ್ಲಿ ನಿರಾಸೆಗೆ ತುತ್ತಾದಾಗ, ಪರೀಕ್ಷೆಯಲ್ಲಿ ತಾನು ಪಾಸಾದ ಸುದ್ದಿ ತಿಳಿಯಿತು. ರಮೆ ಇಲ್ಲದ ಜೀವನವು ಮರುಭೂವಿಯೆಂದು ದಿನ ಹಾಕುವಾಗ, ಹಳ್ಳಿಯಲ್ಲಿ ರಾಜಮ್ಮ ಮಗನನ್ನೇ ಧ್ಯೇಸಿಸುತ್ತಾ ಪ್ರಾಣಬಿಡುವರು.

ಮುಂದಿನ ಹತ್ತು ಪರುಷಗಳ ಕಾಳಿ ಪೇರ ಫಿಜ್ಞ. ಪ್ರಸಿದ್ಧ ಬ್ಯಾರಿಸ್ಟರನಾಗಿ ಸುಖಮಯ ಸಂಸಾರ ಸಾಗಿಸುತ್ತಿರುವ. 'ರಮೆ ರಮಾಣೋ ಏನೋ' ಎನ್ನುವಷ್ಟು ಅವನ ಹೃದಯವೆಂದಿರ ಪ್ರಶಾಂತ ಬಾಗಿದೆ. ಅದರೆ ಒಂದು ದಿನ ಬಡಹುಡುಗನೊಬ್ಬ ಬಂದು ತನ್ನ ತಾಯಿಗೆ ಭಯಂಕರ ಕಾಯಿಲೆ ಎಂದು ಕಾಳಿಯನ್ನು ಕರೆದುಕೊಂಡು ಹೋಗುವನು. ದೀಪದ ಮಿಣಿ ಮಿಣಿ ಬೆಳಕಿನಲ್ಲಿ ಅಕೆ ರಮೆಯೆಂಬುದು ಗೊತ್ತಾಯಿತು. ಚಿಕಿತ್ಸೆ ಮಾಡಿದರೂ ಕೊನೆಗೆ ಅಕೆ ಸಾಯುವಳು. ಮಗುವೂ ಮೋಟರಿನ ಗಾಲಿಗೆ ತುತ್ತಾಗಿ ಮಡಿಯುವುದು. ಇದಿಷ್ಟು ಕಾದಂಬರಿಯ ವಿಸ್ತೃತ ವಸ್ತು.

ಕಾಳಿಯ ರಸಿಕತೆ-ಹಟಮಾರಿತನ, ರಮೆಯ ತ್ಯಾಗಬುದ್ಧಿ-ರೂಪರಾಶಿ, ರಾಜಮ್ಮನವರ ಸ್ವಾಭಿಮಾನ-ಪುತ್ರಪ್ರೇಮ, ವಾಸುವಿನ ದರ್ಪ-ಮಿತ್ರಪ್ರೇಮ—ಎಲ್ಲವೂ ಮೊದಲಿನಿಂದ ಕೊನೆಯವರೆಗೂ ಓದುಗರ ಮನ ಸೆರೆಹಿಡಿಯುವುವು. ಆದರೆ ವೃಚ್ಛಕಟಕದ ವಸಂತಸೇನೆಯನ್ನು ಸರಿಗಟ್ಟುವ ರಮೆಯ- ಕೊನೆಯ ಅನಾಥಾವಸ್ಥೆ ಎಲ್ಲರ ಹೃದಯ-ದಲ್ಲೂ ಕಲಮಲ ಉಂಟುಮಾಡಿದರೂ, ಕಾಳಿಯು ಸ್ಥಿತಪ್ರಜ್ಞನ-ಹೇಗಾದನೊ! ಅದೊಂದು ಒಡೆಯಲಾಗದ ಒಗಟು. ಗೆಳೆಯನನ್ನು ನೀತಿಮಾರ್ಗಕ್ಕೆ ಹಚ್ಚುವ ಹೊಣೆ ಹೊತ್ತ ವಾಸು ನಾಪಾಸಾದರೆ ಅನ್ಯಾಯವಲ್ಲ; ಆದರೆ ಗಂಡು-ಹೆಣ್ಣು ಎಂಬ ಸಮಸ್ಯೆಯ ತಿರುಗಣಿ ಮಡುವಿನಲ್ಲಿ ಸಿಕ್ಕು ಕಿಂಕರ್ತವ್ಯತಾಮೂಢನಾದ ಕಾಳಿಯು ವಾಸಾದನೆಂಬ ಸುದ್ದಿ ಎಲ್ಲರಿಗೂ ಆಶ್ಚರ್ಯ ಹುಟ್ಟಿಸಿರಲು ಸಾಕು. ಪಾತ್ರಪರಿಪೋಷಣೆಯಲ್ಲಿ ಹೀಗೆ ಒಂದೆರಡು ಕುಂದೆನಿಸಿದರೂ, ವರ್ಣನೆಗಳಲ್ಲಿ ತುಂಬ ಔಚಿತ್ಯವಿದೆ. ಕಾಳಿಯ ಅಚ್ಚಳಿಯದ ನೆನಹು, ಕರನ್ಸಿ ನೋಟು ಕೊಟ್ಟಾಗಿನ ರಮೆಯ ಕಾರುಣ್ಯಾವಸ್ಥೆಯ ರುದ್ರಸೌಂದರ್ಯದ ಬಣ್ಣನೆ, ಬೇಜಾರ-ಕ್ಕೆಡೆಗೊಡದ ಪ್ರೇಮದ ತಾತ್ತ್ವಿಕ ಚರ್ಚೆ, ಕಾಶಿಯ ಮನಸ್ಸಿನ ವಿಚಿತ್ರ ಗಲಭೆ, ಪಟ್ಟಣದ ಜನಜಂಗುಳ-ಪ್ರಕೃತಿ ಬಣ್ಣನೆ—ಎಲ್ಲವೂ ಓದುಗನನ್ನು ಮುಗ್ಧನನ್ನಾಗಿಸುವುವು. ಮಾನವ ಜೀವನದ ವಿರಳತಗಳ ನೈಜಕಲ್ಪನೆ ಮಾಡಿಕೊಡುವುವು.

ಇನ್ನು ಅನುವಾದಕರ ಶೈಲಿ. ಸಾಮಾನ್ಯನಾಗಿ ತಿಳಿಗನ್ನಡದ ಪದಗಳೇ ಕತೆಯ ಓಟಕ್ಕೆ ರಂಗವೆರಚಿದರೂ, ಸಂಸ್ಕೃತ ಬಾಹುಲ್ಯದಿಂದ ಕೊಂಚ ಅಡೆತಡೆ. ಅದರಿಂದ ಓದುಗನ ರಸಾಸ್ವಾದನೆಗೆ ಅತಂಕವಿಲ್ಲ. ಭಾವಗರ್ಭಿತವಾದ ಚಿಕ್ಕ ಚಿಕ್ಕ ವಾಕ್ಯಗಳು ಕನ್ನಡ ನುಡಿಯ ಒಳ್ಗಂ-ಪನ್ನು ತೋರುವುವು. ಆದರೆ ಅಚ್ಚಿನ ದೋಷಗಳನ್ನು ಮರೆಯುವಂತಿಲ್ಲ. ಸಲಿಗೆಯ ಶೈಲಿ, ನಗೆಮುಗುಳ್ನಗೆ ಹರಿಸುವ ಇಲ್ಲೆಯ ತಿಳಿಹಾಸ್ಯ—ಲಂಗ್ಲ ಲೇಖಕ ಗೋಲ್‌ಸ್ಮಿಥ್‌ನ ಸಂಸರ್ಗವನ್ನು ನೆನಸಿಗೆ ತರುವುವು. ಸಂಸ್ಕೃತ ಸಾಹಿತ್ಯದಲ್ಲಿ ಪ್ರಚಲಿತವಿರುವ ಸುಭಾಷಿತಗಳಂತಹ ಹಲವು ಮಾರ್ಮಿಕ ನುಡಿಗಳು ನಿಜವಾಗಿಯೂ ಇಲ್ಲಿಯ ಶೈಲಿಗೆ ಸ್ವಾಭಾವಿಕತೆಯ ಒಪ್ಪ ಹಾಕಿವೆ. —ಎನ್. ಎಸ್. ನಡಗಕ

**ಪ್ರೇಮಚೂರ್ಣ:** (ಓ ಹೆನ್ರಿಯ ಕತೆಗಳ ಅನುವಾದ) ಅನುವಾದಕರು: ಶ್ರೀ. ಬಿ. ಕೆ. ರಾಮಚಂದ್ರರಾವ್, ಬಿ ಎ, ಎಲ್‌ಎಲ್. ಬಿ, ಪ್ರಕಾಶಕರು: 'ಪ್ರಭಾತ ಸಾಹಿತ್ಯ, ಬೆಂಗಳೂರು.

ಅಮೇರಿಕೆಯ ಸುಪ್ರಸಿದ್ಧ ಕತೆಗಾರನಾದ ಓ. ಹೆನ್ರಿಯ ಹನ್ನೆರಡು ಕತೆಗಳು ಇಲ್ಲಿ ಅನುವಾದಿತವಾಗಿವೆ. ಇದರಲ್ಲಿ ಅನುವಾದಕರ ಒಂದು ಸ್ವತಂತ್ರ ಕತೆಯೂ ಸೇರಿದುದು ಯುಕ್ತವೆನಿಸುವುದಿಲ್ಲ.

ಕತೆಯ ತಂತ್ರ ಹೆಣೆಯುವಲ್ಲಿ ಓ ಹೆನ್ರಿಯದು ಪಳಗಿದ ಕೈ. ಅತನವು ನಿಜವಾಗಿಯೂ ಚಿಕ್ಕ-ಚೊಕ್ಕ ಕತೆಗಳು. ಕತೆಯನ್ನು ಕೊನೆಗಾಣಿಸುವ ಹದವಂತೂ ಓ ಹೆನ್ರಿಯ ಸೊತ್ತಾಗಿದೆ. ಎಲ್ಲ ಕತೆಗಳಲ್ಲಿಯೂ ಒಂದು ಅನಿರೀಕ್ಷಿತ ಕೊನೆ ನಮ್ಮ ಕುತೂಹಲವನ್ನು ಕೆಣಕಿ ಅಚ್ಚರಿಯನ್ನು ಹುಟ್ಟಿಸುತ್ತದೆ. 'ಮಲ್ಲಯ್ಯನ ಪ್ರೇಮ-ಚೂರ್ಣ'ವೇ ಇವಕ್ಕೊಂದು ಉತ್ಕೃಷ್ಟ ಮಾದರಿಯಾಗಿದೆ

ಈ ಬಗೆಯ ಹೊಸತನ ನಮ್ಮ ಸಾಹಿತ್ಯದ ಸಣ್ಣ ಕತೆಗಳಲ್ಲಿ ಇನ್ನೂ ಹೆಚ್ಚಾಗಿ ಮೂಡಬೇಕು. ದಿ ಹ. ಸಿ. ಜೋತಿಯವರಿಗೆ ಈ ಕಲೆ ಕೆಲಮಟ್ಟಿಗೆ ಸಾಧಿಸಿತ್ತು. ಸಣ್ಣ ಕತೆ ಸಣ್ಣದೇ ಆಗಿದ್ದು ಘನವಾದ ಪರಿಣಾಮವನ್ನು ಮಾಡಬಲ್ಲದೆಂಬುದಕ್ಕೆ ಓ ಹೆನ್ರಿಯವರ ಕತೆಗಳು ಆದರ್ಶಪ್ರಾಯವಾಗಿವೆ. ಅವರ ಸಣ್ಣ ಕತೆಗಳಲ್ಲಿ ಸಂಸಾರದ ವಿಸ್ತಾರವಾದ ಅನುಭವ ಬಣ್ಣವೆತ್ತು ಬಂದಿದೆ. ಪ್ರೇಮದ ಕಹಿ-ಸಿಹಿಯೊಂದಿಗೆ ದಾಂಪತ್ಯದ ರಸಿಕತೆ ಓದುಗರನ್ನು ಮುಗ್ಧಗೊಳಿಸುವಂತೆ ಚಿತ್ರಿತವಾಗಿದೆ.

ಅನುವಾದಕರ ಅನುವಾದಿತ ಕತೆಗಳ ಪರಿಚಯ, ಗುಣವಿಮರ್ಶೆಗಳೊಡನೆ ಅನುವಾದವು ಭಾಷಾಂತರವೆ, ರೂಪಾಂತರವೆ—ಯಾವುದು ವೇಲು? ಎಂಬ ಮಾತನ್ನಿಷ್ಟೆ ಮುಟ್ಟಿ ಮುನ್ನುಡಿಕಾರರಾದ ಶ್ರೀ. ಬೆಟಗೇರಿ ಕೃಷ್ಣಶರ್ಮರು ಅದರ ಚರ್ಚೆಯನ್ನು ಬೆಳೆಯಿಸಲು ಹೋಗಿಲ್ಲ. ಅನುವಾದವು ರೂಪಾಂತರವಾದರೆ ನಮ್ಮ ಜೀವನದ ವಾತಾವರಣದಲ್ಲಿ ಅದು ಬಣ್ಣವೆತ್ತು ಬರುವುದರಿಂದ ನಮಗೆ ಸಮೀಪವಾಗಿ ಮನವುಗುತ್ತದೆಂಬ ಮಾತು ಕೆಲಮಟ್ಟಿಗೆ ನಿಜವಾಗಬಹುದು. ರೂಪಾಂತರ ಮಾಡುವಲ್ಲಿ ಅನುವಾದಕನು ತನ್ನ ಕೌಶಲ್ಯವನ್ನೂ (ಕೈಗಂಟನ್ನೂ?) ಬೆರೆಯಿಸಹೋಗಿ ಮೂಲದ ಹದವನ್ನು ಕೆಡಿಸಬಹುದು, ಮೂಲದ ರಸವನ್ನ ಅಭಾಸಗೊಳಿಸಬಹುದು ಎಂಬ ಭಯವೂ ಇರುವುದು. ಈ ಮಾತಿಗೆ ಈ ರೂಪಾಂತರಗಳಲ್ಲಿಯೂ ಕೆಲವು ದೃಷ್ಟಾಂತಗಳು ಸಿಕ್ಕಬಹುದು.

ಕನ್ನಡಿಗರಿಗೆ ಮುಖ್ಯವಾಗಿ ಕನ್ನಡ ಕಥಾಪ್ರಪಂಚಕ್ಕೆ ಶ್ರೀ. ಬಿ. ಕೆ. ರಾಮಚಂದ್ರರಾಯರು ಓ ಹೆನ್ರಿಯನ್ನು ಕನ್ನಡಿಸಿದುದು ಒಂದು ವಿಶೇಷ ಉಪಕೃತಿ. ಅನುವಾದದಲ್ಲಿ ಇಳಿದಿರುವ ಶೈಲಿಯ ಸಹಜತೆ ಒಮ್ಮೊಮ್ಮೆ ಕೇವಲ ಭಾಷಾಂತರದಿಂದ ಆಗಬಹುದಾದ ಪೀರಸತೆಯನ್ನು ಹೋಗಿಸಿದೆ. ಅಲ್ಲಲ್ಲಿ ಕಾವ್ಯದ ವಿಂಚಿನಂತೆ ಕೆಲ ಕೆಲವು ವಾಕ್ಯಗಳು ಹೃದ್ಯವಾಗಿ ಬಂದಿವೆ.

ಒಂದೆರಡು ದೋಷಗಳನ್ನಳಿದರೆ 'ಪ್ರೇಮಚೂರ್ಣ'ವು ಹಕೀಮನ ಜೀವನ್ಮೂಲಿಕೆಯಲ್ಲ, ರಸಾನಂದವನ್ನುಂಟುಮಾಡುವ ಕಾವ್ಯಗುಟಿಕೆ.

—ಎನ್ಕೆ

---

(ಲಹರಿಯ ಪುಟದಿಂದ ಮುಂದರಿದುದು.)

ವಂತಿಕೆಯನ್ನು ಪಡೆಯುತ್ತದೆ. ಶ್ರೀ. ಬೇಂದ್ರೆಯವರ ಕಾವ್ಯಪ್ರತಿಭೆಯನ್ನು ವಿಮರ್ಶೆಯ ನಾಲ್ಕು ಮಾತಿನಲ್ಲಿ ಹಿಡಿದಿಡುವುದು ಸಾಧ್ಯವಿಲ್ಲ. ಅದರ ವಿಷಯದಲ್ಲಿ ಮಾತನಾಡುವುದಕ್ಕಿಂತ ಅದರ ದರ್ಶನವನ್ನು ಅವರ ಕಾವ್ಯಗಾಯನದಲ್ಲಿಯೆ ಹೊಂದಬೇಕು. ಶ್ರೀ. ಬೇಂದ್ರೆಯವರು ಕವಿಗಳಲ್ಲದೆ ರಸಿಕರು, ಹರಟೆಗಾರರು, ವಿಮರ್ಶಕರು, ನಾಟಕಕಾರರೂ ಹೌದು. ಅವರಿಂದ ಕನ್ನಡ ಕವಿತೆ ಹೊಸ ಮಟ್ಟವನ್ನು ಮುಟ್ಟಿತು. ಅವರ ಉತ್ತಮೋತ್ತಮವಾದ ಕೃತಿಗಳು ಇನ್ನಾವ ಭಾಷೆಯಲ್ಲಿಯ ಉತ್ತಮ ಕೃತಿಗಳನ್ನೂ ಸರಿಗಟ್ಟಬಹುದು.

ಇಂಥವರ ಋಣವನ್ನು ಹುಟ್ಟುಹಬ್ಬವನ್ನು ಶ್ರೀ ಬೇಂದ್ರೆಯವರ ಅಭಿಮಾನಿಗಳು ಕನ್ನಡ ನಾಡಿನ ತುಂಬ ಆಚರಿಸಿದ್ದು ಯೋಗ್ಯವೇ ಸರಿ. ಶ್ರೀ. ಬೇಂದ್ರೆಯವರಿಂದ ಕನ್ನಡಕಾವ್ಯಕ್ಕೆ, ಬೇಕಾದಷ್ಟು ಸೇವೆ ಸಂದಿದೆ. ಅವರಿಂದ ಸ್ಫೂರ್ತಿ ಪಡೆದವರೂ ಎಷ್ಟೋ ಜನ. ಸಚ್ಚಾರ ಸಮಿತಿಯ ಕೆಲಸ ಯಥೋಚಿತವಾಗಿ ಕವಿ ಬೇಂದ್ರೆಯವರನ್ನು ಸನ್ಮಾನಿಸಿದ್ದು ಕನ್ನಡದ ಕಾವ್ಯಸಂಪತ್ತಿಯನ್ನು, ಕಾವ್ಯಶಕ್ತಿಯನ್ನು ಸನ್ಮಾನಿಸಿದಂತೆಯೆ ಅಲ್ಲವೆ?

—'ವಿಹಾರಿ'




## ಸಮರೋತ್ತರ ಸಂಕ್ರಮಣ ಕಾಲ

ಮಹಾಯುದ್ಧ ಮುಗಿದುಹೋಯಿತೆಂದು ಜನರು ತೀರ್ಮಾನಿಸಿಕೊಂಡಿದ್ದರೂ, ಅದರ ದುಷ್ಪರಿಣಾಮವಿಂದು ಜಗತ್ತನ್ನೆ ತಿಕ್ಕಿಮುಕ್ಕುತ್ತಲಿದೆ. ಎಲ್ಲರೂ ಭವಿಷ್ಯದ ಶಾಂತಿಯನ್ನು ಬಯಸುವರಾದರೂ ಅದಕ್ಕೆ ಅತ್ಯಂತ ಅವಶ್ಯವಾದ ಮಾನವಬಂಧುತ್ವದ ಭಾವನೆಯನ್ನು ಎಲ್ಲರೂ ದುರ್ಲಕ್ಷಿಸುತ್ತಿದ್ದಾರೆ. ಸೋತ ರಾಷ್ಟ್ರಗಳು ಅಪಮಾನ ಸಂತಾಪ-ಅರ್ಥಹಾನಿ-ಪ್ರಾಣಹಾನಿಗಳಿಂದಲೂ, ಇಂದಿಲ್ಲ ನಾಳೆ ಮುಯ್ಯಿ ತೀರಿಸಿಕೊಳ್ಳಬೇಕೆಂಬ ಆಂತರ್ನಿರ್ಧಾರದಿಂದಲೂ ಮನುಷ್ಯತ್ವವನ್ನು ಮರೆತಿವೆ. ಗೆಲವಿನಿಂದ ಮೂಗು ನೇಲೆ ಮಾಡಿ ನಿಂತ ಮಹಾರಾಷ್ಟ್ರಗಳು ಅಧಿಕಾರ ಸ್ಪರ್ಧೆಯಿಂದ-ಗೆಲವಿನ ಸೊಕ್ಕಿನಿಂದ-ಮನುಷ್ಯತ್ವವನ್ನು ಮರೆತಿವೆ ಹಿಂದೊಮ್ಮೆ ಧರ್ಮತತ್ತ್ವಪ್ರಚಾರಕ್ಕಾಗಿ ಮಾನವ ರಕ್ತವನ್ನು ಹರಿಸಬೇಕಾಗಿ ಬಂದಂತೆ, ಇಂದು ಒಂದೊಂದು ರಾಷ್ಟ್ರ ಸ್ವೀಕರಿಸಿದ ರಾಜಕೀಯ ತತ್ತ್ವಕ್ಕಾಗಿ ಮತ್ತೆ ಮತ್ತೆ ಮಾನವ ರಕ್ತದ ಹೊಳೆ ಹರಿಯುವ ಸೂಚನೆಗಳು ಕಾಣುತ್ತಲಿವೆ. ರಷ್ಯದ ಸಮತಾವಾದದ ಮೂಲಕ ಇಂಗ್ಲಂಡ್-ಅಮೇರಿಕೆಗಳಿಗೆ ಇದರ ಬಗ್ಗೆ ಪ್ರೀತಿ-ವಿಶ್ವಾಸಗಳಿಲ್ಲ. ಅಮೇರಿಕದ ಆರ್ಥಿಕ ಪ್ರಗತಿ, ವ್ಯಾಪಾರೀ ಧೋರಣ, ಜಗತ್ತಿನ ಪೇಟೆಯನ್ನು ತನ್ನ ಕಡೆಗಿಟ್ಟುಕೊಳ್ಳಬೇಕೆಂಬ ಹಂಬಲು ಇವು ರಷ್ಯ-ಇಂಗ್ಲಂಡುಗಳಿಗೆ ಬರಪಣಾಪ್ಪೆ. ಇಂಗ್ಲಂಡಿನ ಸ್ವಾರ್ಥಸಾಧನೆ, ಕುಟಿಲ ರಾಜಕಾರಣ, ಅಧಿಕಾರಲಾಲಸೆ, ಸಂಪ್ರದಾಯಪ್ರೀತಿ ಇವುಗಳಿಗಾಗಿ ರಷ್ಯ-ಅಮೇರಿಕೆಗಳು ಯಾವಾಗಲೂ ಅದನ್ನು ಸಾಶಂಕ ದೃಷ್ಟಿಯಿಂದ ನೋಡುತ್ತಲಿವೆ. ಹೀಗಾಗಿ ಈ ಮೂರು ರಾಷ್ಟ್ರಗಳ ಸ್ವಾರ್ಥದ ಎಳೆದಾಟದಿಂದ ಮಾನವಕುಲವನ್ನೇ ಮಂಥನ ಮಾಡುತ್ತಲಿದೆ. ಸಣ್ಣಪುಟ್ಟ ರಾಷ್ಟ್ರಗಳಲ್ಲಿಯ ಅಡಳಿತಗಳ ಒದಲಾವಣೆ, ಅಧಿಕಾರಿಗಳ ಬದಲಾವಣೆ, ಒಳಜಗಳ, ಬಂಡು, ದೊಂಬೆ, ಸಂಪು ಇನೆಲ್ಲ ವಿಷಯಗಳು ಹೊರಕ್ಕೆ ಬಂದು ಜನತೆಯ ಅಶಾಂತಿಯನ್ನು ಹೆಚ್ಚಿಸುತ್ತಲಿವೆ. ಯುದ್ಧಮಾನ ಮಹಾರಾಷ್ಟ್ರಗಳು, ತಮ್ಮ ಅಧೀನದಲ್ಲಿರುವ ಪ್ರದೇಶಗಳಿಂದ ಅನ್ನಸಾಮಗ್ರಿಗಳನ್ನು ಹೀರ್ತುಕೊಂಡು ಒಯ್ದುದರಿಂದ, ಜಗತ್ತಿನ ಬಹುಭಾಗದಲ್ಲಿಂದು ಬರದ ಮಾರಿ ಬಾಯ್ದೆರೆದ. ನಿಂತು, ನಿಂತಸ್ತ ಜನತೆಯನ್ನು ಕಾಸ್ಮಿಸ್ಸು ಕೆಣಕಿ ಕೆರಳಿಸುತ್ತಲಿದೆ. ಎಲ್ಲೆಲ್ಲಿಯೂ ಹಸಿವೆಯ ಕೂಗು, ಅನ್ನದ ಕೆರಿಜಾಟ.

## ಒಣತತ್ತ್ವಕ್ಕಾಗಿ ಒಳಜಗಳ

ಜಯಶಾಲಿ ಮಹಾರಾಷ್ಟ್ರಗಳ ರಾಜಕೀಯ ಕೈಚಳಕ, ಇಂದು ಪೂರ್ವ-ಪಶ್ಚಿಮ ಗೋಲಾರ್ಧಗಳಲ್ಲಿಯ ಬೇರೆ ಬೇರೆ ದೇಶಗಳ ರಾಜಕೀಯ, ಸಾಮಾಜಿಕ ಸಂಸ್ಕೃತಿಗಳನ್ನೆ ಬುಡಮೇಲು ಮಾಡುವುದರಲ್ಲಿ ಇವೆ. ಎಲ್ಲ ದೇಶಗಳಲ್ಲಿ ಬಂಡವಾಳವಾದಿಗಳಿದ್ದಾರೆ; ಸಮತಾವಾದಿಗಳಿದ್ದಾರೆ; ಪ್ರಜಾಪ್ರಭುತ್ವವಾದಿಗಳಿದ್ದಾರೆ. ಇವರೆಲ್ಲರೂ ತಂತಮ್ಮ ರಾಜಕೀಯ ತತ್ತ್ವವನ್ನು ಎತ್ತಿ ಹಿಡಿಯುವ ಮಹಾರಾಷ್ಟ್ರದ ಅಭಿಮಾನಿಗಳಾಗಿರುವರು. ಅದುದರಿಂದ ಆಯಾ ಮಹಾರಾಷ್ಟ್ರಗಳ ರಾಜಕೀಯ ಧುರೀಣರ ಸೂತ್ರಚಾಲನೆಯಂತೆ ಅವರು ವರ್ತಿಸುವುದರಿಂದ ಪ್ರತಿಯೊಂದು ದೇಶದಲ್ಲಿಯೂ ದೇಶಪ್ರೀತಿಗಿಂತ ಹೆಚ್ಚಾಗಿ ಅಂತಃಕಲಹ ಬೆಳೆಯುತ್ತಲಿವೆ ಗ್ರೀಸ್, ಇರಾಣ, ತುರ್ಕಸ್ತಾನ, ಪಾಲಿಸ್ತೈನ್, ಇಜಿಪ್ತ ಇಲ್ಲೆಯ ಜನರ ರಾಜಕೀಯ ಆತ್ಮಶಕ್ತಿ ವಿರೋಧಶಕ್ತಿಯೊಂದಿಗೆ ಅಖಂಡ ಹೋರಾಟ ನಡಸಿರುವುದು. ಪೂರ್ವಭಾಗದ ಸಯಾಮ, ಇಂಡೋನೇಸಿಯಾ, ಆಸ್ಟ್ರೇಲಿಯಾ, ಚೀನಾಗಳೂ ಈ ಹೋರಾಟದಿಂದ ಹೊರಗಿಲ್ಲ ಹಿಂದುಸ್ತಾನದಂತಹ ಪರಾಧೀನ ರಾಷ್ಟ್ರವಂತೂ ಸ್ವಾತಂತ್ರ್ಯ ಸಂಪಾದನೆಗಾಗಿ ಪ್ರಬಲಶಕ್ತಿಯೊಂದಿಗೆ ಕಾಳಿಗವಾಡಬೇಕಾಗಿದೆಯಲ್ಲದೆ, ರಾಜಕೀಯ ತತ್ತ್ವಾಭಾಸದ ಪಕ್ಷ-ಪಂಗಡಗಳ ಮೂಲಕ ಒಳಜಗಳಗಳಿಗಾಗಿಯೂ ಶಕ್ತಿಹ್ರಾಸ ಮಾಡಿಕೊಳ್ಳಬೇಕಾಗಿದೆ. ಹಿಂದೊಮ್ಮೆ ಐಧ್ಯಾತ್ಮಿಕ ಪ್ರಪಂಚದಲ್ಲಿ ನಾವು ದ್ವೈತ, ಅದ್ವೈತ ವಿಶಿಷ್ಟಾದ್ವೈತ, ಶುದ್ಧಾದ್ವೈತ ಎಂದು ಕದನವಾಡಿ ಕಾಲ ಕೆಡಿಸಿದಂತೆ, ಇಂದು ರಾಜಕೀಯ ಪ್ರಪಂಚದಲ್ಲಿ ಅಖಂಡ ಹಿಂದುಸ್ತಾನವಾದ, ಪಾಕಿಸ್ತಾನ ವಾದ, ಸರ್ವಾಧಿಕಾರಿವಾದ, ಪ್ರಜಾಪ್ರಭುತ್ವವಾದ, ಬಂಡವಳ ವಾದ, ಸಮತಾವಾದ ಮೊದಲಾದ ರಾಜಕೀಯ ತತ್ತ್ವಗಳಿಗಾಗಿ ಜಗಳ ನಡೆಸಿದ್ದೇವೆ. ಇದೆಲ್ಲ ಮುಗಿಯಾಗಿ ಶಾಂತಿಕಾಲವೆಂದು ಬರುವುದೋ ಎಂದು ಸಾನಾನ್ಯ ಜನತೆ ದೈನ್ಯದಿಂದ ಹಾರಯಿಸುತ್ತಲಿದೆ; ಗಾಬರಿಯ ಕಣ್ಣುಗಳಿಂದ ಸುತ್ತಲೂ ನೋಡುತ್ತಲಿದೆ.

## ಭಾರತದ ಬರಗಾಲ—ಬ್ರಿಟಿಷರ ಹೊಣೆ

ಸದ್ಯ ಭಾರತದ ಜನತೆಯ ಮನಸ್ಸನ್ನು ತುಡಿಯುತ್ತಿರುವ ಮುಖ್ಯ ಸಂಗತಿಗಳೆಂದರೆ ಅನ್ನಾಭಾವದ ಹೆದರಿಕೆ, ಪ್ರಾಂತೀಯ ಶಾಸನ ಸಭೆಗಳ ಚುನಾವಣೆಯ ಕುತೂಹಲ. ಬೇರೆ ಬೇರೆ ಕಾರಣಗಳಿಂದ

ಬೇರೆ ಬೇರೆ ವರ್ಗದವರು ಕೈಕೊಂಡಿರುವ ಕೈಕೊಳ್ಳಲಿರುವ ಸಂಪ್ರ-ಮುಸ್ಕರಗಳು. ಯಾವಾಗಲೂ ಧಾನ್ಯದ ಉಗ್ರಾಣವಾಗಿರುವ ಹಿಂದು ಸ್ತಾನ, ಮಿತ್ರರಾಷ್ಟ್ರಗಳಿಗೆ ಆಹಾರವನ್ನು ಪೂರಯಿಸಿ ಪೂರಯಿಸಿ ಬರಿದ್ಗೆಯಾಗಿ ಕುಳಿತಿದೆ; ಅದರಲ್ಲಿ ಮಳೆಯ ಅಭಾವದಿಂದ ಹಿಂದು-ಸ್ತಾನದ ಬಹುಭಾಗದಲ್ಲಿ ಈ ಸಲ ಬೆಳೆಯೆ ಇಲ್ಲ. ಸರಕಾರದ ಅಂದಾಜಿನಂತೆ ಬೇಕಾಗುವ ಆಹಾರಧಾನ್ಯಗಳಲ್ಲಿ, ಎಷ್ಟು ಪ್ರಯತ್ನ ಪಟ್ಟರೂ ಸುಮಾರು ಒಂದುಮೂರಾಂಶದಷ್ಟು ಕೊರತೆ ಬೀಳುವುದೆಂದು ಸಿದ್ಧವಾಗಿದೆ. ಅದಕ್ಕಾಗಿ ಇದ್ದುದರಲ್ಲಿ ಹಂಚಿಕೊಡಬೇಕೆಂಬ ಏರ್ಪಾಡಾಗಿ, ಯುದ್ಧಕಾಲದಲ್ಲಿ ಮೊದಲೆ ಕಡಿಮೆ ಕೊಡುತ್ತಿದ್ದ ಹೆಸುಗೆ (ರೇಶನಿಂಗ್) ಯನ್ನು ಮೂರುನಾಲ್ಕಾಂಶಕ್ಕೆ ಇಳಿಸಲಾಗಿದೆ. ಇಟ್ಟು, ಕೆಟ್ಟು ಹುಳು ತಿಂದ ಧಾನ್ಯ; ಅದೂ ಹೊಟ್ಟೆ ತುಂಬುವಂತೆ ಇಲ್ಲ; ಅಷ್ಟನ್ನೂ ಕೊಳ್ಳಬೇಕಾದರೆ ಭಾರತದಲ್ಲಿಯಃ ಬಹುಸಂಖ್ಯಾಕ ಬಡವರಿಗೆ ಎಷ್ಟೊಂದು ಸಾಧ್ಯವೊ! ಈ ರೀತಿಯ ಅನ್ನವ್ಯವಸ್ಥೆಯಲ್ಲಿ ನಾವು ಜೀವನವನ್ನು ನೂಕಬೇಕಾಗಿದೆ. ಇದ್ದಲ್ಲಿಂದ ಕಾಳು ತಂದು ಹಾಕಲು ಸರಕಾರಕ್ಕೆ ವಾಹನಸೌಕರ್ಯವಿಲ್ಲವಂತೆ. ಹಿಂದುಸ್ತಾನದಿಂದ ಹತ್ತು ಕಡೆಗಳಿಂದಲೂ ಹೊರಗೆ ಒಯ್ಯುವಾಗಿದ್ದ ವಾಹನಸೌಕರ್ಯ ಹಿಂದುಸ್ತಾನಕ್ಕೆ ತರಬೇಕಾದಾಗ ಇಲ್ಲದಿರುವುದು ಸಮಂಜಸ ಸರಕಾರದ ಕರ್ತವ್ಯದ ಲಕ್ಷಣವೆ? ತಾಯಿ ಸತ್ತ ಸವತಿಯ ಮಗುವನ್ನು ಮಲ ತಾಯಿ ಎಷ್ಟೊಂದು ಅಕ್ಕರೆಯಿಂದ ಸಲಹಬಹುದು? ಬ್ರಿಟಿಷರಿಗೆ ಭಾರತದ ವೈಭವ ಬೇಕಾಗಿದೆ, ಜನತೆ ಬೇಕಾಗಿಲ್ಲ. ತತ್ತ್ವದ ಮಾತಿನ ಸುರಿಮಳೆಯಲ್ಲಿ ಬ್ರಿಟಿಷ್ ಮುತ್ಸದ್ದಿಗಳು ಸಕ್ಕರೆಯಂ ನುಳಿ ಸುರಿಸುವರಾದರೂ, ಕೃತಿಯ ಕಾಲದಲ್ಲಿ ಭಾರತೀಯರಿಗೆ ಕೊಡುವುದು ಕಹಿ ಕುಂಬಳಕಾಯಿಯನ್ನೆ? ಭಾರತದ ಸಂರಕ್ಷಣೆಯ ಹೊಣೆ ತಮ್ಮ ಮೇಲಿದೆಯೆಂದು ಪ್ರಪಂಚದಲ್ಲಿ ಸಾರಿ ಸಾರಿ ಹೇಳುವ ಬ್ರಿಟಿಷರು, ಭಾರತದ ಬರಗಾಲದ ಜವಣೆಯ ನಿವಾರಣೆಯ ಹೊಣೆಯನ್ನೂ ತೂರಬೇಕಾಗಿಲ್ಲವೆ?

## ಮುಸ್ಲಿಂ ಲೀಗಿನ ಶಕ್ತಿಗೆ ಮಾನದಂಡ

ಪ್ರಾಂತೀಯ ಶಾಸನ ಸಭೆಗಳ ಚುನಾವಣೆ ಸಿಂಧ, ಅಸಾಮ, ಸರಹದ್ದು ಪ್ರಾಂತಗಳಲ್ಲಿ ಮುಗಿದಿದೆ. ಪಂಜಾಬಿನಲ್ಲಿ ಮುಗಿಯುವುದರಲ್ಲಿದೆ. ಸಂಯುಕ್ತ ಪ್ರಾಂತ, ಬಂಗಾಲ, ಮುಂಬಯಿಗಳಲ್ಲಿ ಪ್ರಾರಂಭವಾಗಿದೆ; ಮಿಕ್ಕ ಪ್ರಾಂತಗಳಲ್ಲಿ — ಪ್ರಾರಂಭವಾಗಲಿದೆ. ಚುನಾವಣೆ ಮುಗಿದ ಪ್ರಾಂತಗಳಲ್ಲಿ ಅಸಾಮ್ ಪ್ರಾಂತದಲ್ಲಿ ಕಾಂಗ್ರೆಸ್ ಮಂತ್ರಿಮಂಡಳ ಸ್ಥಾಪನೆಯಾಗಿ ಅಧಿಕಾರ ಕೈಕೊಂಡಿದೆ. ಸರಹದ್ದು ಪ್ರಾಂತದಲ್ಲಿ ಕಾಂಗ್ರೆಸಿಗರು ಬಹುಸಂಖ್ಯೆಯಲ್ಲಿ ಆರಿಸಿ ಒಂದಿದ್ದು ಒಳ್ಳೆ ಕಾಂಗ್ರೆಸಿಗರ ಅಡಳಿತ ನಡೆವುದರಲ್ಲಿ ಸಂದೇಹವಿಲ್ಲ. ಸಿಂಧದಲ್ಲಿ ಸದ್ಯ ಗವರ್ನರರ ಕಾರಸ್ಥಾನದ ಮುಖಂಡ ಲೀಗಿನ ಮಂತ್ರಿಮಂಡಲ ತಲೆದೋರಿರುವುದಾದರೂ, ಬಹುಸಂಖ್ಯೆಯ ಜಂಬಲ ಅದಕ್ಕಿರುವುದರಿಂದ ಬೇಗನೆ ತಲೆ ಕೆಳಗಾಗುವುದರಲ್ಲಿ ಸಂದೇಹವಿಲ್ಲ. ಪಾಕಿಸ್ತಾನದ ಗುಡುಮೆಟ್ಟಿಂದು ಪ್ರಸಿದ್ಧವಾದ ಪಂಜಾಬದಲ್ಲಿ ಕೂಡ ಸಮ್ಮಿಶ್ರ ಮಂತ್ರಿಮಂಡಳವಾದರೆಯೆ ನಾಲ್ಕೊಪ್ಪತ್ತು ಬಾಳೀತಲ್ಲದೆ, ಮುಸ್ಲಿಂ ಲೀಗಿನ ಮಂತ್ರಿಮಂಡಲಕ್ಕೆ ಅಸ್ಪದವಿಲ್ಲದಂತೆ ಚುನಾವಣೆಯ ಪರಿಣಾಮವಿದೆ. ಬಂಗಾಲದಲ್ಲಿ ಕಾಂಗ್ರೆಸ್ ಮಂತ್ರಿಮಂಡಳವೇ ಆಗ ಬರಬಹುದು; ಆದರೆ ಸಂಪೂರ್ಣ ರಾಷ್ಟ್ರೀಯ ವೃತ್ತಿಯ ಮಂತ್ರಿಮಂಡಳ ಆಗುವುದರಲ್ಲಿ ಸಂದೇಹವಿಲ್ಲ. ಮಿಕ್ಕ ಪ್ರಾಂತಗಳಂತೂ ಕಾಂಗ್ರೆಸಿನ ಬಹುಸಂಖ್ಯಾಕ ಪ್ರಾಂತಗಳು. ಅಲ್ಲಿ ಕಾಂಗ್ರೆಸಿನ ಮಂತ್ರಿಮಂಡಳವೆ ಸ್ಥಾಪನೆಯಾಗುವುದು ಸಹಜ. ಈ ಚುನಾವಣೆಯಿಂದ ಮುಸ್ಲಿಂ ಲೀಗಿನ ಲೋಕಪ್ರಿಯತೆಗೊಂದು ಅಳೆಗೋಲು ದೊರೆತಂತಾಯಿತು. ಪಾಕಿಸ್ತಾನಕ್ಕೆ ಸೇರಬೇಕೆಂದಿರುವ ಪ್ರಾಂತಗಳಲ್ಲಿಯೆ ಲೀಗಿಗೆ ಬಾಗಿ ಹೊಡೆಯುವ ಪ್ರಸಂಗ ಬಂದು, ಜಗತ್ತಿಗೆ ಅದರ ಜೊಳ್ಳು ರಾಜನೀತಿಯ ಅರ್ಥವಾಪಂತಾಯಿತು. ಪಾಕಿಸ್ತಾನವನ್ನು ಮನಸಾರೆ ಅಪೇಕ್ಷಿಸುವ ಇಸ್ಲಾಂ ಧರ್ಮಾಭಿಮಾನಿ ಸೈಯದ (ಸಿಂಧ) ರಂತಹರೂ, ಲೀಗಿನ ಅನುಯಾಯಿಗಳ ಸ್ವಾರ್ಥವನ್ನೂ ತತ್ತ್ವಹೀನತೆಯನ್ನೂ ಕಂಡು ಬೇಸತ್ತು ಹೇಸಿ, ಹೇಗೆ ಲೀಗಿನಿಂದ ಹೊರಬಿದ್ದರೆಂಬುದನ್ನು ಅವರ ಪ್ರಕಟನೆಯಿಂದ ಎಲ್ಲರೂ ಅರಿತುಕೊಳ್ಳಬಹುದಾಗಿದೆ. ಮುಸ್ಲಿಂ ಲೀಗು ಜನಸಾಮಾನ್ಯರ ಹಿತಕ್ಕಾಗಿ ಹೊರಟ ಸಂಸ್ಥೆಯಲ್ಲ; ಸರ್ವಾಧಿಕಾರಿತ್ವವನ್ನು ಪ್ರಚಾರಗೊಳಿಸುವ ಸ್ವಾರ್ಥಿಗಳಾದ ಕೆಲವು ಬಂಡವಾಳಗಾರರ ಸಂಸ್ಥೆಯೆಂದು ಅವರೆ ಒತ್ತಿ ಒತ್ತಿ ಹೇಳಿರುವರು. 'ರಾಜಕೀಯ ಜೀವನದಲ್ಲಿ ಮತಧರ್ಮ ಮುಖ್ಯವಲ್ಲ, ಮಾನವ ಧರ್ಮ ಮುಖ್ಯ!' ಎಂಬ ಮಾತನ್ನು ಒಪ್ಪಿ ನಡೆದರೆ, ಲೀಗಿನ ನೈತಿಕ ಸಾಮರ್ಥ್ಯ ಹೆಚ್ಚೀತು, ಅದರಿಂದ ರಾಷ್ಟ್ರಕ್ಕೂ ಕಲ್ಯಾಣವಾದೀತು. ಅದನ್ನು ಬಿಟ್ಟು ಅಡ್ಡದಾರಿಯಿಂದ ನಡೆದು, ಪ್ರಗತಿಪ್ರಿಯರಿಗೆ ಅಡ್ಡಗಾಲು ಹಾಕುತ್ತ ಕುಳಿತುಕೊಳ್ಳುವುದರಲ್ಲಿ ಮುಸ್ಲಿಂ ಲೀಗಿಗೂ ಹಿತವಿಲ್ಲ; ಅದನ್ನು ನಂಬಿದ ಜನ ಸಾಮಾನ್ಯರಿಗೂ ಹಿತವಿಲ್ಲ: ಅಂತಹರನ್ನೊಳಗೊಂಡ ಭಾರತಕ್ಕೂ ಹಿತವಿಲ್ಲ.

## ಮಹಾಸಭೆ ಮುನಸಿಪಾಲಿಟಿಯಾಗಬೇಕೆ?

ಚುನಾವಣೆಯ ಪರೀಕ್ಷಾ ಕಾಲದಲ್ಲಿ ಕಾಂಗ್ರೆಸ್ ಕೆಲಸಗಾರರ ಹೃದಯ ಪರೀಕ್ಷೆಯಾದುದೂ ವಿಷಾದದ ಸಂಗತಿಯಾಗಿದೆ. ಭಾರತದ ಸ್ವಾತಂತ್ರ್ಯಯ ಧ್ಯೇಯವನ್ನು ತ್ಯಾಗಪೂರ್ವಕ ಸಿಸ್ತಿನಿಂದ — ಮೊದಲಿನಿಂದಲೂ — ನಡಿಸಿಕೊಂಡು ಬಂದವರು ಕಾಂಗ್ರೆಸಿಗರೇ ಎಂಬ ಅರಿಕೆ ಭಾರತೀಯರಿಗೆ ಪೂರ್ಣವಾಗಿ ಇದೆ. ಆದುದರಿಂದಲೆ ಅವರ ಶ್ರದ್ಧೆಯ — ಕಳವಳದ — ನೋಟ ಕಾಂಗ್ರೆಸ್ ಸಂಸ್ಥೆಯ ಕಡೆಗೇ ಇರುವುದು ಆ ಸಂಸ್ಥೆ ಹೇಳಿದಂತೆ ಕೇಳಲು — ಹಾಕಿಕೊಟ್ಟ ಕಾರ್ಯಕ್ರಮದಂತೆ ನಡೆದುಕೊಳ್ಳಲು — ಜನರು ಸಿದ್ಧರಾಗಿರುವರು. ಇಂತಹ ಕಾಲದಲ್ಲಿ ಕಾಂಗ್ರೆಸಿನ ಧುರೀಣರು ತಮ್ಮಲ್ಲಿರುವ ಯಾವ ಅಶಕ್ತತೆಯನ್ನೂ ಜನರ ಕಣ್ಣಿಗೆ ಇರಿಸಕೂಡದು ವೈಯಕ್ತಿಕ ಸ್ವಾರ್ಥದ ಆಭಾಸವನ್ನುಂಟುಮಾಡುವಂತಹ ಕಾರ್ಯವೂ ಕಾಂಗ್ರೆಸ್ ಕೆಲಸಗಾರರಿಂದ ಆಗಕೂಡದು. ಅದರೆ ಪ್ರಾಂತೀಯ ಚುನಾವಣೆಯ ಪರಿಯಾಳುಗಳನ್ನು ಅರಿಸುವ ಸಂದರ್ಭದಲ್ಲಿ ಎಲ್ಲಲ್ಲಿ ನಡೆದ ಆಕಸ್ಮಿಕಗಳನ್ನೂ ಜರುಗಾತುರ್ಯಗಳನ್ನೂ ನೋಡಿದರೆ, ಕಾಂಗ್ರೆಸ್ ಕೆಲಸಗಾರರಲ್ಲಿ ಬಹುಜನರು ಜನಸೇವೆಗಿಂತಲೂ ರಾಜಕೀಯ ಅಧಿಕಾರಕ್ಕೆ ಹೆಚ್ಚಾಗಿ ಮನಸೋತವರಿದಿವರೆಂಬ ಮಾತು ವ್ಯಕ್ತವಾಯಿತು: ಇನ್ನೂ ವ್ಯಕ್ತವಾಗುವುದರಲ್ಲಿದೆ. ಕರ್ನಾಟಕದಲ್ಲಿ ಪಾರ್ಲಮೆಂಟರಿ

ಬೋರ್ಡಿನ ಕಾರ್ಯದರ್ಶಿಗಳನ್ನು—ಸಭೆಯ ಕೆಲಸ ನಡೆದಾಗಲೆ ಬಂದುಗೊಂದಲ ಹಾಕಿ—ಹೊಡೆದುದೂ? ತಮಿಳುನಾಡಿನಲ್ಲಿ ನಾಡರ್ ಅವರಂತಹರು ರಾಜೀನಾಮೆಯಿತ್ತುದೂ - ಜನರು ಉಂಡಾಟ ನಡಿಸಿದುದೂ ನಾಗಪುರ ಪ್ರಾಂತದಲ್ಲಿ ಶ್ರೀ. ಅಣಾರಿಯಂತಹರು ಉಪವಾಸವನ್ನು ಆರಂಭಿಸಿದುದೂ, ಏತರ ದ್ಯೋತಕ? ಕಾಂಗ್ರೆಸ್ ಪರವಾಗಿ ನಾಮಪತ್ರ ಕೊಟ್ಟು, ಪಾರ್ಲಮೆಂಟರಿ ಬೋರ್ಡಿನಿಂದ ಆಯ್ಕೆಯಾಗದಿರುವಾಗ ಬೇರೆ ಪಕ್ಷದಿಂದ ಹುರಿಯಾಳಾಗಿ ನಿಲ್ಲುವುದು ಎಂತಹ ಕರ್ತವ್ಯನಿಷ್ಠೆಯ ಲಕ್ಷಣ? ಇಂತಹ ಕೆಲವು ಕೆಲಸಗಾರರ ಮೂಲಕ ಕಾಂಗ್ರೆಸ್ ಮಹಾ ಸಂಸ್ಥೆಯ ಇದುನರೆಗಿನ ತೇಜಸ್ಸಿಗೆ ಕಲಂಕ ತೊಡೆದಂತಾಗುವುದೆಂಬುದನ್ನು ಸ್ವಾರ್ಥದಾಸೆಯ ಮುಂದಾಳುಗಳು ಲಕ್ಷ್ಯದಲ್ಲಿ ತಂದುಕೊಳ್ಳಬೇಕು. ತ್ಯಾಗ, ಸೇವೆ, ಸಿದ್ಧಿಗಳೇ ಕಾಂಗ್ರೆಸಿಗೊಂದು ವ್ಯಕ್ತಿತ್ವವನ್ನೂ ಬಹುಜನ ಪ್ರೀತಿಯನ್ನೂ ತಂದುಕೊಟ್ಟಿವೆಯೆಂಬುದನ್ನು ಯಾರೂ ಮರೆಯುಲಾಗದು. ಬ್ರಿಟಿಷರಂತಹ ಒಲಿಷ್ಠರೊಂದಿಗೆ ಕಾದಬೇಕಾಗಿರುವ ಕಾಂಗ್ರೆಸು, ಮ್ಯುನಸಿಪಾಲಿಟಿಗಳ ಮಟ್ಟಕ್ಕೆ ಇಳಿದರೆ ಅದು ಕಾರ್ಯ ನಿರ್ವಹಿಸುವ ಬಗೆ ಹೇಗೆ?

## ರಾಷ್ಟ್ರೀಯ ಸಭೆಯ ಹುರಿಯಾಳುಗಳಿಗೇ ಮತ ಕೊಡಿರಿ!

ಜನಹಿತದ ಕಾರ್ಯವನ್ನು ಮನಮುಟ್ಟಿ ಮಾಡಿರುವ—ಮುಂದೆಯೂ ಮಾಡಲಿರುವ ಸಂಸ್ಥೆಯೆಂದರೆ ಕಾಂಗ್ರೆಸ್ಸೊಂದೆ ಎಂದು ನೇಲಿ ಹೇಳಲಾಗಿದೆ ಮುಸ್ಲಿಂ ಲೀಗು, ಹಿಂದುಮಹಾಸಭೆಗಳಂತಹ ಜಾತೀಯ ಸಂಸ್ಥೆಗಳು ದೇಶದಲ್ಲಿ ತೊಡಕನ್ನು ಹೆಚ್ಚಿಸಬಹುದಲ್ಲದೆ ಶಾಂತಿಯ ಸೀಮೆಗೆ ಜನತೆಯನ್ನು ಒಯ್ಯಲಾರವು. ಕಮ್ಯೂನಿಸ್ಟ್, ರ್ಯಾಡಿಕಲ್ ಡೆಮೊಕ್ರ್ಯಾಟಿಕ್ ಪಕ್ಷಗಳವರ ರಾಜಕೀಯ ಕರ್ತವ್ಯಜ್ಞಾನ, ಇಂದಿನ ಹಿಂದುಸ್ತಾನದಲ್ಲಿ ಬಹುಜನರಿಗೆ ಒಪ್ಪಿಗೆಯಾಗುವಂತಿಲ್ಲ ಅಲ್ಲದೆ ಎಲ್ಲಕ್ಕಿಂತ ಮೊದಲು ನಮಗೆ ಪರಕೀಯರನ್ನು ಹೊರಕ್ಕೆ ಹಾಕಬೇಕಾಗಿದೆ. ಸದ್ಯದ ಎಲ್ಲ ಪಕ್ಷಗರ್ಜ್ಜನೆಯೂ ಕಾಂಗ್ರೆಸ್ಸೇ ಈ ಕಾರ್ಯಕ್ಕೆ ತಕ್ಕ ಸಂಘಟನೆಯನ್ನೂ ಸಾಮರ್ಥ್ಯವನ್ನೂ ಗಳಿಸಿದೆ ಅದುದರಿಂದ ಭಾರತೀಯರೆಲ್ಲರೂ ತಮ್ಮ ಮನಸ್ಸಾಕ್ಷಿಯ ಜೊಂಲತನ್ನು ಕೊಟ್ಟು, ಕಾಂಗ್ರೆಸಿನ ನೈತಿಕ ಬಲವನ್ನೂ ಸಂಘಟನಾ ಬಲವನ್ನೂ ಬೆಳೆಸಿ, ಬ್ರಿಟಿಷರೊಂದಿಗೆ ಅದನ್ನು ಹೋರಾಡಲು ತೊಡಗಿಸಬೇಕಾಗಿದೆ. ಪರಕೀಯರು ನಾಡಿನಿಂದ ಕಾಲು ಕಿತ್ತದರೆಂದರೆ, ನಮ್ಮ ನಮ್ಮಲ್ಲಿ ನಾವು ಚರ್ಚಿಸಿ, ದೇಶ-ಕಾಲ-ಪರಿಸ್ಥಿತಿಗೆ ಅನುಗುಣವಾದ ಶಾಸನಕ್ರಮವನ್ನು ಅನುಸರಿಸಲು ಬಂದೀತು ಅದುದರಿಂದ ಭಾರತಕ್ಕೆ ಹಿತವನ್ನೂ ಭಾರತ ಜನತೆಗೆ ಸುಖ-ಶಾಂತಿಗಳನ್ನೂ ಬಯಸುವ ಪ್ರತಿಯೊಬ್ಬ ಮತದಾರನೂ, ಪ್ರತಿಯೊಂದು ಪ್ರಾಂತದಲ್ಲಿ ಕಾಂಗ್ರೆಸ್ ಹುರಿಯಾಳು ಆರಿಸಿಬರುವಂತೆ ದಕ್ಷತೆಯಿಂದ ನೋಡಿಕೊಳಬೇಕು.

## ಸಂಪೋ, ಸ್ವಾತಂತ್ರ್ಯಯುದ್ಧವೊ?

ಹಿಂದುಸ್ತಾನದ ತುಂಬ ಅಲ್ಲಲ್ಲಿ ಮುಷ್ಕರಗಳು ನಡೆದಿರುವುವು. ಪ್ರಾಥಮಿಕ ಶಿಕ್ಷಕರು, ಅಂಚೆಯ ಆಳುಗಳು ಗಿರಣಿ-ರೈಲ್ವೆ ಕೂಲಿಕಾರರು ಇವರೆಲ್ಲ ಕೇವಲ ಹೊಟ್ಟೆಕುಂಬ ಉಂಡು ಬಾಳಬೇಕೆಂಬ ಉದ್ದೇಶದಿಂದ ಸಂಪು ಹೂಡಿರಬಹುದಾದರೂ, ಹಿಂದಿ ವೈಮಾನಿಕರೂ ನಾವಿಕರೂ ಹೂಡಿದ ಸಂಪುಗಳು ಒಂದು ರೀತಿಯಿಂದ ಭಾರತ ಸ್ವಾತಂತ್ರ್ಯದ ಸಣ್ಣ ಸಣ್ಣ ಯುದ್ಧಗಳೆಂದೆ ಹೇಳಬಹುದಾಗಿದೆ. ಹಿಂದುಸ್ತಾನದ ಜನ-ಧನ-ಅನ್ನ ಸಹಾಯವಿಲ್ಲದೆ ಬ್ರಿಟಿಷರು ಈ ಮಹಾಯುದ್ಧದಲ್ಲಿ ಜಯ ಪಡೆಯುವುದೇ ಶಕ್ಯವಿರಲಿಲ್ಲ. ಯುದ್ಧದಲ್ಲಿ ತಾವು ತೋರಿಸಿದ ಶೌರ್ಯಕ್ಕಾಗಿ ಬಂದ ಪರಾಕ್ರಮ ಸಾಹಸಗಳಿಂದ ಭಾರತೀಯ ಸೈನಿಕರಲ್ಲಿಯೂ ಸೇನಾಧಿಕಾರಿಗಳಲ್ಲಿಯೂ ವೈಮಾನಿಕರಲ್ಲಿಯೂ ನಾವಿಕರಲ್ಲಿ ಎಂಥ ಒಂದು ಬಗೆಯ ಆತ್ಮವಿಶ್ವಾಸ ಮೂಡಿಕೊಂಡಿದೆ. ಸ್ವಸ್ವರೂಪದ ಅರಿವು ಉಂಟಾಗಿದೆ. ಗುಲಾಮಗಿರಿ, ವರ್ಣದ್ವೇಷ, ಮಾನಭಂಗ ಇವು ಅಡಿಗಡಿಗೂ ಅವರ ಪ್ರತ್ಯಯಕ್ಕೆ ಬರತೊಡಗಿವೆ. ಮಾಡಬೇಕಾದ ಕಾರ್ಯ, ಹೊರಿಸುವ ಹೊಣೆ ಇವು ಬ್ರಿಟಿಷರಿಗಿಂತ ಹೆಚ್ಚಿನವು. ಆದರ ಕೊಡುವ ಸಂಬಳ, ನಡೆಸಿಕೊಳ್ಳುವ ರೀತಿ, ನೀಡುವ ಆಹಾರ ಬ್ರಿಟಿಷರಿಗಿಂತ ಹೀನ ತರಗತಿಯವು. ಬಾಯಿಬಿಟ್ಟು ಕೇಳಿದರೆ 'ನೀಯಿ ಮಕ್ಕಳಿ!' 'ಕೂಲಿಯ ಕುನ್ನಿಗಳಿ!' ಎಂಬ ಬೈಗಳು. ಯಾವ ಮಾನಿನ ಪ್ರಾಣಿಗೆ ಈ ಅಪಮಾನವನ್ನು ಸಹಿಸಲಿಕ್ಕಾದೀತು? ತನ್ನ ಗುಲಾಮಗಿರಿಯ ನಿವೃತ್ತಿಗಾಗಿ ಅಲ್ಲದೆ ತಮ್ಮ ದೇಶದ ಪರಾಧೀನತೆಯನ್ನು ತೊಡೆದುಹಾಕುವ ವೀರ ಪ್ರತಿಜ್ಞೆಯಿಂದಲೆ ವೈಮಾನಿಕರೂ ನಾವಿಕರೂ ಸಂಪನ್ನು ಹೂಡಿರಬಹುದು. ಆದರೆ ದೇಶದ ಮುಂದಾಳುಗಳ ಅಹಿಂಸಾತ್ಮಕ ಮುದ್ದಾದ ಉಪದೇಶವನ್ನೊಪ್ಪಿ, ನಾವಿಕವೀರರು ಸದ್ಯದ ಗಂಡಾಂತರವನ್ನು ತಪ್ಪಿಸಿ, ಶಸ್ತ್ರ ಕೆಳಗೆ ಇರಿಸಿದುದು ಸ್ತುತ್ಯವಾದ ಕೆಲಸವಾಗಿದೆ. ಜನರಲ್ಲಿ ಸ್ವಸ್ವರೂಪ ಜಾಗೃತವಾಗಿದೆ ಸಾಕು; ಯುದ್ಧ ಭಾರತಕ್ಕೆ ಮಾಡಿದ ಉಪಕಾರವೊಂದಿದು. ಈ ಜಾಗೃತಿಯ ಅರಿವು ಉಂಟಾಗದಿರೆಯೆಂದೇ ಬ್ರಿಟಿಷ್ ಮಂತ್ರಿಗಳು ಹೂತೆಗೆದು ಹಾರಿ ಬರಲಿರುವರು ಹಿಂದುಸ್ತಾನಕ್ಕೆ. ಆದರೆ ಹಿಂದೆ ಕೆಲವು ಸಲ ಮೋಸ ಹೋದಂತೆ ಭಾರತೀಯರು ಮತ್ತೆ ಮತ್ತೆ ಮೋಸಹೋಗುವುದು ಬೇಡ!


## ಅಲ್ಲಲ್ಲಿಯ ನಮ್ಮ ಏಜಂಟರು

ಮೈಸೂರು ನಗರ

**ಶ್ರೀ. ಪದಕಿ, ಜಯ ಸ್ಟೋರ್ಸ್**

ಬುಕ್‌ಸೇಲರ್ ಮತ್ತು ನ್ಯೂಜ್ ಏಜಂಟ್

ಜಗನ್ಮೋಹನ ಪ್ಯಾಲೇಸ್ ರೋಡ್.

ಬೆಂಗಳೂರು ನಗರ

**ಕೆ. ಶಾಮಣ್ಣ**

ಬುಕ್‌ಸೇಲರ್ ಮತ್ತು ನ್ಯೂಜ್ ಏಜಂಟ್

ಬಳೇಪೇಟೆ.



ಮುದ್ರಕರು:

ಶ್ರೀ. ಎನ್. ಎಸ್. ಬೆಂಗೇರಿ, ವಿಜಯ ಮುದ್ರಾಲಯ, ಧಾರವಾಡ.

ಪ್ರಕಾಶಕರು:

ಶ್ರೀ. ಎಂ. ವಿ. ಮೆಳ್ಳಿಗಟ್ಟಿ, ಜಯಂತಿ ಕಾರ್ಯಾಲಯ, ಧಾರವಾಡ.

# ಸಾದರ ಸ್ವೀಕಾರ

೧೪೪ **ವೈಜ್ಞಾನಿಕ ಪ್ರಬಂಧಗಳು**— ಬರೆದವರು ಶ್ರೀಮಾನ್ ಪದ್ಮನಾಭ ಪುರಾಣಿಕ ಎಂ.ಎಸ್ಸಿ. ಹೈದರಾಬಾದ್ ಅವರು. ಪ್ರಕಾಶಕರು ಕರ್ನಾಟಕ ಸಾಹಿತ್ಯಮಂದಿರ, ಹೈದರಾಬಾದ್. ಕ್ರೌ. ಅ. ೮೦ ಪುಟಗಳು. ಬೆಲೆ ೧-೮-೦.

೧೪೫ **ಅಂತರಂಗ** (ವಾರ ಪತ್ರಿಕೆಯ ಆಯುರ್ವೇದ ಸಮ್ಮೇಳನಾಂಕ) ಸಂಪಾದಕರು ಶ್ರೀಯುತರುಗಳಾದ ಕೆ. ಎಚ್. ಪುಟ್ಟು ಎಂ. ವಿ. ಹೆಗಡೆ ಅವರು. ಮಂಗಳೂರಿನ ನವಯುಗ ಮುದ್ರಣಾಲಯದಲ್ಲಿ ಮುದ್ರಿತವಾಗಿರುವುದು. ಕ್ರೌ. ೧೪೪ ರಿಂದ ೧೪೮ ಪುಟಗಳು. ಬೆಲೆ ೧-೦-೦.

೧೪೬ **ಕರ್ನಾಟಕ ಸಂಜೀವಿನಿ**— ೧೯೪೪ನೆಯ ಡಿಸೆಂಬರ್ ತಿಂಗಳಿಂದ ೧೯೪೫ರ ವರೆಗೆ ಉಡುಪಿಯ ಮಣಿಪಾಲದಲ್ಲಿ ಸೇರಿದ ಅಖಿಲಭಾರತದ ಆಯುರ್ವೇದೀಯ ಮಹಾಸಭೆಯ ಸಂದರ್ಭದಲ್ಲಿ ಪ್ರಕಟವಾಗಿದೆಯಿದು. ಆಯುರ್ವೇದ ತಜ್ಞರಾದ ಸುಪ್ರಸಿದ್ಧ ಕನ್ನಡ ವೈದ್ಯರು ವೈದ್ಯಶಾಸ್ತ್ರದ ಬೇರೆ ಬೇರೆ ವಿಷಯಗಳನ್ನು ಕುರಿತು ಬರೆದ ವಿವಿಧ ಲೇಖನಗಳು ಇಲ್ಲಿ ಪ್ರಕಟವಾಗಿವೆಯಲ್ಲದೆ, ಮಹಾಸಭೆಯಲ್ಲಿ ನಡೆದ ಕೆಲವು ಭಾಷಣಗಳೂ ಇಲ್ಲಿವೆ. ಆರೋಗ್ಯಜೀವನವನ್ನು ಬಯಸುವ ಪ್ರತಿಯೊಬ್ಬ ಕನ್ನಡಿಗ-ಕನ್ನಡಿತಿಯರೂ ಓದಬೇಕಾದ ಲೇಖನ ಸಂಕಲನವಿದು. ಪ್ರಕಾಶಕರ ಶ್ರಮ ಸಾರ್ಥಕವೆನಿಸಿದೆ ಈ ಪುಸ್ತಿಕೆಯ ಪ್ರಕಟನೆಯಿಂದ.

೧೪೭ **ಸೊಗಸಿನ ಕತೆ** (ಅನುವಾದಿತ ಕಥಾ ಸಂಕಲನ) ಮೂಲ ಮರಾಠಿ ಕತೆಗಾರ ಶ್ರೀ. ಸಾನೇ ಗುರುಜಿಯವರು. ಅನುವಾದಕರು ಶ್ರೀ. ಭಾಸ್ಕರ ಗೋವಿಂದ ಗೋಖಲೆ ಎ., ಎಲ್‌ಎಲ್. ಬಿ., ವಕೀಲರು. ಪ್ರಕಾಶಕರು ಬಸವಣ್ಣೆಪ್ಪಾ ಗುರುಲಿಂಗಪ್ಪಾ ಸಂಕೇಶ್ವರ ಊರ್ಫ್ ತುಬಚಿ; ಸರಸ್ವತೀ ಪುಸ್ತಕ ಭಂಡಾರ, ಗದಗ. ಕ್ರೌ. ಅ. ೮೦ ಪುಟಗಳು, ಬೆಲೆ ೧-೮-೦.

೧೪೮ **ಬಡವರ ಬಂಧು** (ವಾರ ಪತ್ರಿಕೆ ಆಯುರ್ವೇದ ಸಮ್ಮೇಳನಾಂಕ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಮಂಗಳೂರು ಜಾರಪ್ಪ, 'ಬಡವರ ಬಂಧು' ಪ್ರಿಂಟಿಂಗ್ ಪ್ರೆಸ್, ಲಿ., ಮಂಗಳೂರು. ಕ್ರೌ. ಫೋ. ೨೪ ಪುಟಗಳು. ಬೆಲೆ ೦-೧೬-೦.

ಇದು ಕೂಡ ಉಡುಪಿಯಲ್ಲಿ ಸೇರಿದ ಅಖಿಲ ಭಾರತ ಆಯುರ್ವೇದೀಯ ಮಹಾಸಭೆಯ ಸಂದರ್ಭದಲ್ಲಿ ಪ್ರಕಟವಾಗಿದ್ದು, ವೈದ್ಯಶಾಸ್ತ್ರವನ್ನು ಕುರಿತ ಹಲವು ಲೇಖನಗಳಿಂದ ಕೂಡಿದೆ.

೧೪೯ **ತಮಾಷ್** (ಇಂಗ್ಲಿಷ್-ಕನ್ನಡ ಮನೋರಂಜಕ ಮಾಸಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಎಂ. ಎಸ್. ಮಾಧವರಾವ್, ಒಲಂ ರಾಮಾನುಜ ರೋಡು ಮೈಸೂರು. ಕ್ರೌ. ಫೋ. ೪-೬ ಪುಟ; ಚಂದಾ ಸೇರಿ ೩-೧೬-೦ ಜಂಬಾ. ಪಿಡಿ ಸಂಚಿಕೆ ೦-೨-೦.

ನಮ್ಮ ಕಡೆಗೆ ಬಂದಿರುವ ೩-೪ ಸಂಚಿಕೆಗಳು ವಾರ-ಪಾರಕ್ಕೂ ತಪ್ಪದೆ ಬಂದಿರುವುವು; ಆದುದರಿಂದ ವಾರಪತ್ರಿಕೆಯೇನೋ ಸರಿ. ಆದರೆ 'ಮನೋರಂಜಕ' (ಎಂಟರ್ ಟೈನ್‌ಮೆಂಟ್) ಎಂಬ ವಿಶೇಷಣ ಗುಣವನ್ನು ಹೊಸದೆದರೆ ಈ ಸಂಚಿಕೆಗಳಲ್ಲಿ ಹೆಚ್ಚಾಗಿ ಸಿಕ್ಕಲಿಲ್ಲ. ಹೆಚ್ಚಾಗಿ ಸಿಕ್ಕುವಂತಾಗಿ ಕನ್ನಡಿಗರಿಗೆಲ್ಲ ಪ್ರಿಯವಾಗಿ ಬಹುಕಾಲ ಬಾಳಲೆಂದು ನಮ್ಮ ಹಾರೈಕೆ.

೧೫೦ **ನಿಸರ್ಗ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ ಬಿರ್ಜೆ ಅಣ್ಣಾರಾಯರು, ಬಾಗಾರ. ಧಾರವಾಡದ ಮನೋಹರ ಗ್ರಂಥಮಾಲೆಯ ೭೧-೭೨ನೆಯ ಪ್ರಕಟನೆ. ಕ್ರೌ. ಅ. ೪೧೦ ಪುಟಗಳು. ಬೆಲೆ ೩-೮-೦.

೧೫೧ **ಅಯ್ಯನ್ನೆ** (ಕಥಾಸಂಕಲನ). ಲೇಖಕರು ಕುಳಕುಂದ ಶಿವರಾಯರು; 'ಜನತಾ ಸಾಹಿತ್ಯ' ಮಾರಾಗಲ್ಲಿ, ಹುಬ್ಬಳ್ಳಿ. ಕ್ರೌ. ಅ. ೪೨ ಪುಟಗಳು. ಬೆಲೆ ೧-೦-೦.

೧೫೨ **ಗೃಹಿಣಿ** (ಅನುವಾದಿತ ಕಾದಂಬರಿ). ಮೂಲ ತೆಲುಗುಲೇಖಕರು ಶ್ರೀ. ವಿ. ಪಸುಮಂತರಾವ್; ಅನುವಾದಕರು ಶ್ರೀ. ವಿ. ಬಿ. ಈಶ್ವರರಾವ್, ಬೆಂಗಳೂರು. ಧಾರವಾಡದ ಲಲಿತಸಾಹಿತ್ಯಮಾಲೆಯ ೧೪೬ನೆಯ ಕುಡಿ. ಕ್ರೌ. ಅ. ೧೧೪ ಪುಟಗಳು. ಬೆಲೆ ೧-೮-೦.

೧೫೩ **ಹಗಲುಗನಸುಗಳು** (ಲಲಿತ ಪ್ರಬಂಧ ಸಂಕಲನದ ಎರಡನೆಯ ಆವೃತ್ತಿ). ಬರೆದವರು ಶ್ರೀಮಾನ್ ಎ. ಎನ್. ಮೂರ್ತಿರಾವ್ ಎಂ. ಎ. ಮೈಸೂರು. ಮೈಸೂರಿನ ಕಾವ್ಯಾಲಯದ [೩ನೆಯ ಪ್ರಕಾರನೆ. ಕ್ರೌ. ಅ. ೬೦ ಪುಟಗಳು. ಬೆಲೆ ೧-೪-೦.

೧೫೪ **ಮುಗುದೆಯರ ಪತ್ರಗಳು** (ಪತ್ರಸಾಹಿತ್ಯ ಸಂಗ್ರಹ) ಬರೆದವರು ಶ್ರೀ. ಸಿ. ಕೃಷ್ಣ ಆವರು. ಮೇಲಿನ ಕಾವ್ಯಾಲಯದ ೪೬ನೆಯ ಪ್ರಕಾರನೆ. ಕ್ರೌ. ಅ. ೧೬೦ ಪುಟಗಳು. ಬೆಲೆ ೧-೮-೦.

೧೫೫ **ಸುಬೋಧ** (ಮಾಸಪತ್ರಿಕೆಯ ೨೯ನೆಯ ವರ್ಷಾರಂಭದ ವಿಶೇಷ ಸಂಚಿಕೆ). ಸಂಪಾದಕರು ಶ್ರೀಮಾನ್ ಎಂ. ರಾಮರಾಯರು. ಪ್ರಕಾಶಕರು ಸುಬೋಧ ಪ್ರಕಟನಾಲಯ, ಬೆಂಗಳೂರು ಸಿಟಿ. ಡೆ. ಅ. ಸುಮಾರು ೨೦೦ ಪುಟಗಳು.

ಸುಬೋಧದ ೨೪ನೆಯ ಸಂಚಿಕೆಯಿದು. ಬಹಿರಂಗ ಮನೋಹಾರಿಯಾಗಿದೆ. ಪ್ರಾರಂಭದಲ್ಲಿ ಕೊಟ್ಟ 'ಎಂದೇ ಕರ್ನಾಟ ನಾಮ' ಎಂಬ ಮೂವರ್ಣದ ಚಿತ್ರ ಕನ್ನಡ ಕಲಾವಿದನೊಬ್ಬನ ಕಲಾಕೃತಿಯಾಗಿದ್ದು, ಕನ್ನಡಿಗರಲ್ಲಿ ಅಭಿಮಾನ ಹುಟ್ಟಿಸುವಂತಿದೆ. ಲೇಖಕವರ್ಗದಲ್ಲಿ ಶ್ರೀಯುತರುಗಳಾದ ಬೇಲೂರು ರಾಮಾನುಜಾಚಾರ್, ವಿ. ಸಿ., ಶಂ. ಬಾ. ಜೋಶಿ, ಪೇಜಾವರ ನರಸಿಂಹಶಾಸ್ತ್ರಿ, ಮೊರೆಸ್ವಾಮಿ ಅಯ್ಯಂಗಾರ್ಯ, ಎಂ. ಜಿ. ವೆಂಕಟೇರಯ್ಯ, ಡಾ. ಎಂ. ಎಚ್. ಕೃಷ್ಣ, ವಿನಾಯಕ, ಗೋವಿಂದ ಪೈ, ಡಿ. ಕೆ. ಭಾರದ್ವಾಜ, ಪಿರಿಯಪಟ್ಟಣ ತಾತಾಚಾರ್ಯ ಶರ್ಮ ಮೊದಲಾದ ಸುಪರಿಚಿತರ ಹೆಸರುಗಳಿರುವುದಲ್ಲದೆ, ಹಲವು ಹೊಸ ಲೇಖಕರೂ ಕಾಣುತ್ತಿರುವರು. ಅನೇಕ ಲೇಖಕರು ಬರೆದ ವಿವಿಧ ವಿಚಾರದ ಲೇಖನ, ಕಥೆ, ಕವನ, ಪ್ರಬಂಧ, ಏಕಾಂಕ ನಾಟಕಗಳ ಸಂಕಲನವೇ ಇವರ ವೈಶಿಷ್ಟ್ಯ.


**ಬಡತನದ ಬಾಳು**

'ಆನಂದಕಂದ'ರ ಕಥಾಸಂಗ್ರಹ

ಕನ್ನಡ ಜನತೆಯ ಜೀವನದ ನಿಜವಾದ ಚಿತ್ರ ಇದರಲ್ಲಿ ಮೂಡಿವೆ.

ಬೇಕಾದವರು

'ಜಯಂತಿ' ಕಾರ್ಯಾಲಯಕ್ಕೆ

ಒರೆಯಿರಿ.

ದಿ ಯುನಾಯಿಟೆಡ್ ಕಮರ್ಷಿಯಲ್ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

೧ ನಿಮ್ಮ ಮಾಮೂಲಿನ ಅಡುಗೊಂಡುಸ್ತಿಗಳ ಬೆಲೆಯಲ್ಲಿ ಹೆಚ್ಚಳವಾಗಿರುವ ಈ ಕಷ್ಟದ ಕಾಲದಲ್ಲಿ ಖರ್ಚಿನಲ್ಲಿ ಉಳಿತಾಯ ಮಾಡಲಿಕ್ಕೆ ಏನು ಮಾಡಬೇಕು?

೨ ಕೊಡಬೇಕಾದ ಬಿಲ್ಲಿನ ಹಣವನ್ನು (ಪೇಮೆಂಟ್) ಬಾಕಿಯಲ್ಲಿ ಇಟ್ಟುಕೊಳ್ಳುವುದು, ಹೊಸ ಸಾಮಾನುಗಳನ್ನು ಕೊಳ್ಳುವವರಿಗೆ ತೊಂದರೆ ಮಾಡಿ, ಅವು ಬೇಕಾದಾಗ ಸಿಗದಂತೆ ಮಾಡುವುದಲ್ಲವೆ?

೩ ಮಾಡಬೇಕಾದ ಮಾಮೂಲಿನ ಕಾರ್ಯಕ್ರಮಗಳಿಗೆ ತಿಲಾಂಜಲಿಯನ್ನಿಟ್ಟರೆ ಕಷ್ಟದ ಕಾಲ (ರೈನಿ ಡೇ) ಬಂದಾಗ ಏನು ಮಾಡಿಕೊಳ್ಳುವುದು?

೪ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ ಹಣವು ಕಡ್ಡಾಯವಾಗಿ ಇಟ್ಟುಕೊಳ್ಳಬೇಕಾದ ಕನಿಷ್ಠ ಮೊತ್ತವನ್ನು ಕಾಯ್ದುಕೊಳ್ಳಲು ಸಾಧ್ಯವಾಗದಿದ್ದರೆ ಏನು ಮಾಡಬೇಕು?

ಮೇಲಿನ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರವನ್ನು ಕೊಡಲಾಗುವುದು.

ಎ. ಮಹಾದೇವ ಮ್ಯಾನೇಜಿಂಗ್ ಡೈರೆಕ್ಟರ್ ಎಂ. ಗೋವಿಂದಪ್ಪ ಸೆಕ್ರೆಟರಿ, ಮ್ಯಾನೇಜರ್



ಪಲಿಗೂಸಲು ಜೀವಾಳಗಿದ್ದರೆ ಜೀವವಿಗೊಂದು ಬೆಲ!
ಹಾಗೆ ಜೀವಾಳಗಿರುವಷ್ಟರಿಂದಲೇ?
ಕಲಿಗೂಡಲು ಎಲ್ಲರಿಗೆ ಬಲುಬೇಕು, ಚೆಲ್ಲಾಪಿಲ್ಲಿಯಾಗಿ ಇರಬೇಕು!
ಹಾಗಾಗಬೇಕಾದರೆ "ಪಲಿಗೂಲ್ಲಿ" ಉಪಯೋಗಿಸಿರಿ!

ಪಲಿಗೂಲ್ಲಿ

ಹಾಲಿನಲ್ಲಿ ಉಪಯೋಗಿಸಿರಿ.

ಪಲಿಗೂಲ್ಲಿಯ ಸದ್ಗುಣಗಳನ್ನು ಬಣ್ಣಿಸಲು ಕಷ್ಟ ಹೊಗಳಲು ಬಣ್ಣಗಳಿಂದ ಪೆನ್ಸಿಲ್‌ಗಿದ್ದರೆ ಸಾಧ್ಯವಿಲ್ಲ? ಪಲಿಗೆ ಬಾಯಿಲು ಚೆನ್ನಾಗಿರದಿದ್ದರೆ ನಿಮ್ಮ ಬೆಲೆಯೂ ಇದ್ದೀತು ಗಾದೆ ಪೂರ್ಣ ವಿರಾಮವಲ್ಲ.

ಯಾವುದೇ ಪದ್ಯಗಳಾಗಲಿ ಬಿಡಿ ಪೊಲ್ಲಿನ ಎಲ್ಲೆಯಲ್ಲಿ ಪರಿಪೂರ್ಣವಾಗಿ "ಪಲಿಗೂಲ್ಲಿ" ಎಂಬ ಎರಡಕ್ಷರಗಳ ಕೈಲಾಸವನ್ನು ಯಶಸ್ವಿಯಾಗಿ "ಪಲಿಗೂಲ್ಲಿ"ದ್ದರೆ ಬಿಟ್ಟು ಬೇರಿಲ್ಲ ಪೂರ್ಣಾಂಶ ಪಡೆಯಲಾಗುವುದೆಂಬುದನ್ನು ಖಂಡಿತವಾಗಿ ಹೇಳಬಲ್ಲೆವು.

ಪಲಿಗೂಲ್ಲಿಯ ಸದ್ಗುಣಗಳನ್ನು ಪೂರ್ಣವಾಗಿ ಬಣ್ಣಿಸಲು ಲಿ., ಆಯಸ್ಕ್ರೀಮ್‌ಗಳಿಗೆ
ಸೇರಿದ ಸೇವಿಂಗ್ಸ್ ಬ್ಯಾಂಕು ಪುಟ್ಟಿಗೆ.

ಪುಟಗಳು

ಆರು ಆಣೆ



— [illegible] —

ಸಂಪುಟ ೮ | ಏಪ್ರಿಲ್ ೧೯೪೬ | ಸಂಚಿಕೆ ೧೧

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮ

## ಮುಖ್ಯ ವಿಷಯಗಳು

ಆ ತಿರುಕ (ಕವನ)
ಶ್ರೀ. 'ಕಾವ್ಯಾನಂದ' ಪರಭಣಿ (ಸ್ಕಾಟ್ಲಂಡ್) ೬೩೯

ಸಂಪಾದಕೀಯ (ರಾಜಕಾರ್ಯ, ಮತಧರ್ಮ)
ಸಂಪಾದಕರು ೬೪೦

ಮಂಗನ ಮಲ್ಲಿನಾಥಕನ
'ಮಲ್ಲಿನಾಥ' ೬೪೧

ಸ್ವಾತಂತ್ರ್ಯ ಸೂರ್ಯ (ಕವನ)
ಶ್ರೀ. ಎಂ. ಸಂಗಣ್ಣ, ತರಪನಹಳ್ಳಿ ೬೪೨

ಹಳೆಯ ನೋಟಗಳು (ಒಂದು ಸಣ್ಣ ಕತೆ)
ಶ್ರೀ ಭಾರತೀಸುತ, ವೀರರಾಜಪೇಟೆ ೬೪೩

ನಿನ್ನ ನೆನಪು (ಕವಿತೆ)
ಶ್ರೀ. ತಿರುಮಲೇಶ, ಬಳ್ಳಾರಿ ೬೪೯

ಪರಿವರ್ತನ ಘನರೂಪ (ವಿಚಾರ ಪ್ರಚೋದಕ ಪ್ರಬಂಧ)
ಶ್ರೀ. ಜೋಶಿ ಶಂಕರರಾಯರು, ಧಾರವಾಡ ೬೫೦

ಡಾಕ್ಟರಾಯಣ (ವಿನೋದ ಸಂಭಾಷಣ)
ಶ್ರೀ. ವೆಂಕಣ್ಣಾಚಾರ್ಯ ಪಪ್ಪು ಎಲ್.ಎಲ್. ಬಿ. ೬೫೪

ಭಾಷಾವಿಜ್ಞಾನ (ಭಾರತದಲ್ಲಿ ಭಾಷೆಗಳ ಅಭ್ಯಾಸ)
ಶ್ರೀ. ಕೆ. ಟಿ. ಪಾಂಡುರಂಗಿ ಬಿ.ಎ.ಎಲ್. ಧಾರವಾಡ ೬೫೬

ನಾಗರಿಕತೆಯ ಜನಕ (ವಿಜ್ಞಾನ ವಿಚಾರ)
ಶ್ರೀ. ಕೆ. ಎಸ್. ಸವಣೂರ ಎಂ. ಎಸ್ಸಿ. ಧಾರವಾಡ ೬೬೯

ಬಾಳಿನ ನರಕ (ಸಣ್ಣ ಕತೆ)
ಶ್ರೀ. ವಾಸುದೇವ ಸಿಗ್ಗಾಂವಿ, ಹುಬ್ಬಳ್ಳಿ ೬೭೧

ಕರ್ನಾಟಕ ಚಳವಳಿಯಲ್ಲಿ ಧಾರವಾಡದ ಭಾಗ (೪)
ಶ್ರೀ. ಮುದವೀಡು ಕೃಷ್ಣರಾಯರು, ಧಾರವಾಡ ೬೭೩

ಪುಸ್ತಕ ವಿಮರ್ಶೆ
ಬೇರೆ ಬೇರೆ ವಿಮರ್ಶಕರು ೬೭೬

ನಾಲ್ಕಾ ನಿಟ್ಟಿನ ನೋಟ
'ನಿರೀಕ್ಷಕರು' ೬೭೮

ಶ್ರೀ. ಹಳಪೇಟಿಯವರು ಬರೆದ
'ಸೂಚಿ-ಶಿಲ್ಪಕಲೆ'
ಅಚ್ಚಿನಲ್ಲಿದೆ. ಬೇಗನೆ ಪ್ರಗಟವಾಗುವುದು.

DYESTUFFS
INTERMEDIATES
AND
CHEMICALS

SIZING AND FINISHING PRODUCTS
MACHINERIES FOR ALL INDUSTRIES
FOR

COTTON, SILK, ART SILK,
WOOL, JUTE, PAPER.
LEATHER, SOAP, WAX,
COIR, VARNISHES, OILS.

Chemicals
Accelerators and
Anti-Oxidants
for
Rubber Industry

S. K. KABBUR LIMITED

3, BASTION ROAD
FORT, BOMBAY

Telegrams: "DIAZO" Bombay. Telephone: 21627

CORRESPONDENTS IN ENGLAND:
KABBUR & Co., LIMITED

RADHA HOUSE
Higher Ardwick, MANCHESTER, 12.

Telegrams: " Radha," Manchester.

ಸಂಪುಟ ೮

★

ಸಂಚಿಕೆ ೧೧

★

ಏಪ್ರಿಲ್ ೧೯೪೬

ವರ್ಗಣಿ ದರ

★

ವರುಷಕ್ಕೆ ೪—೪—೦
ಆರು ತಿಂಗಳಿಗೆ ೨—೪—೦
( ಅಂಚೆಯ ವೆಚ್ಚ ಸೇರಿ )

★

ಬಿಡಿ ಸಂಚಿಕೆಗೆ ೬ ಆಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

# ಆ ತಿರುಕ

ಶ್ರೀ. 'ಕಾವ್ಯಾನಂದ' ಪರಭಣಿ

ಅದೇ ಹರಕು ಮುರುಕು ಮರ—
ಅದೇ ವಿಕೃತ ದೀನ ನರ—
ದಿನದಿನವೂ ಕಾಣುವೆ ;
ಅದೇ ಕರುಣ ದುಃಖಸ್ವರ
ಅನುದಿನವೂ ಕೇಳುವೆ. ೧

ನೆರಳೆ ಬರಲಿ ಬಿಸಿಲೆ ಇರಲಿ,
ಮಳೆ ಸುರಿಯಲಿ ಚಳಿ ಕೊರೆಯಲಿ,
ಅದುವೆ ಅವನ ಸ್ಥಾನ
ಅಲ್ಲಿಯೆ ಕೊನೆಗೊಂದು ದಿನ
ಬಿಡುವನೇನೊ ಪ್ರಾಣ ! ೨

ಹುಡಿಮಣ್ಣಿನ ಮೇಲೆ ಒಂದು
ಹಳೆಯ ಚಾಪೆ-ಚಿಂದಿ
ನಡುವಿಗೊಂದು ಕೊಳಕು ಬಟ್ಟೆ
ಇದುವೇ ಸಿಬ್ಬಂದಿ !
ಕುಳಿತಿಹನದೊ ದೀನಪ್ರಾಣಿ
ಒಂದು ಕಾಸಿಗಾಗಿ
ಧಾವಿಸುತಿದೆ ಜನವು ಸುತ್ತು
ಧನದ ರಾಶಿಗಾಗಿ.
ಕಳೆಯುವರೋ ಕೆಲರು ಹೊನ್ನ
ಕಂಚಿ-ಕಾಸಿಗಾಗಿ—
ಸುರಿಯುವರೋ ಕೆಲರು ಸಿರಿಯ
ಬಾಸಿ-ವೇಷಿಗಾಗಿ. ೩

ಕುಳಿತಿಹನು ಅವನಲ್ಲಿ
ನಿಸ್ಸಹಾಯತೆಗೊಂದು
ನೀಳ್ಗವಿತೆಯಾಗಿ—
ಪರತಂತ್ರ ಭಾರತದ
ನಿಸ್ಸೀಮ ಸಹನೆಯೂ
ಕರುಣಾಕತೆಯಾಗಿ ! ೪

ಪದದಲಿತ ಮಾನವರ
ಪತಿತ ಬಾಳಿನ ಮೂಕವ್ಯಥೆಯಾಗಿ—
ಬರಲಿರುವ ವಿಪ್ಲವದ
ವಿಲಯಾಗ್ನಿಗೊಂದಿಪ್ಪ ಚಿತೆಯಾಗಿ. ೫

ಬಾಳಬಟ್ಟೆಯ ಬೀಳು-ಮಣ್ಣು-ಮುದ್ದೆಯ ತೆರದಿ
ತಳಕಿಳಿದ ನಿರ್ಗತಿಕ ಮಾನವನ ಪೊರೆಯಾಗಿ
ಜೀವಕಂಟಿಹ ಅಸ್ಥಿ-ಚರ್ಮಗಳ ಹೊರೆಯಾಗಿ
ಹತಭಾಗ್ಯ ಭಾರತದ ಕನಿಕರದ ಕರೆಯಾಗಿ—
ಎನಿತು ಜೀವಿಗಳಂತು ನೂಕುತಿರುವವೊ ಬಾಳು ?
ಎನಿತು ಈ ನಾಡಿನಲಿ ಹೊಟ್ಟೆ-ಒಟ್ಟೆಯ ಗೋಳು ?
ಹೀಗಿದ್ದರೂ ನಮ್ಮ ನಾಡಿಗರು ಹೋಳು ಹೋಳು !
ಎನಿತುದಿನ ಸಹಿಸುವುದೊ ಜನತೆಯಿಂ ಹಾಳುಬೀಳು !
ಅದೇ ಹರಕು ಮುರುಕು ಮರ
ಅದೇ ದೈನ್ಯ ದುಃಖ ಸ್ವರ
ದಿನದಿನವೂ ಕಾಣುವೆ,
ಅನುದಿನವೂ ಕೇಳುವೆ.




## ರಾಜಕಾರ್ಯ, ಮತಧರ್ಮ

ಇಂದು ಭಾರತದಲ್ಲಿ ಇವೆರಡರ ಕಲಸುಮೇಲೋಗರವೆ ಹೆಚ್ಚಾಗಿ ಕಾಣುತ್ತಲಿದೆ. ಕಾಂಗ್ರೆಸ್ಸೊಂದನ್ನು ಬಿಟ್ಟರೆ ಭಾರತದ ಯಾವ ಸಾಮಾಜಿಕ ಸಂಸ್ಥೆಯೂ ರಾಜಕಾರ್ಯ-ಮತಧರ್ಮಗಳನ್ನು ತಳುಕು ಹಾಕಿಕೊಂಡೇ ಹೊರಟಿರುವುದು. ಹಿಂದೂ ಮಹಾಸಭೆ, ಮುಸ್ಲಿಂಲೀಗು, ಅಕಾಲಿಲೀಗು ಇವು ಒಂದುಬಗೆಯವಾದರೆ, ಹಿಂದುಗಳಲ್ಲಿಯೂ ಜಾತಿವಿನಿಷ್ಠ ಸಂಸ್ಥೆಗಳಾದ ಬ್ರಾಹ್ಮಣೇತರ ಲೀಗ, ಬ್ರಾಹ್ಮಣಸಭೆ, ವೀರಶೈವ ಮಹಾಸಭೆ, ಜೈನ ಮಹಾಸಭೆ, ಕುರುಬರ ಮಹಾಸಭೆ, ರಡ್ಡಿಗಳ ಮಹಾಸಭೆ, ಹರಿಜನ ಮಹಾಸಭೆ ಮೊದಲಾದುವು ಇನ್ನೊಂದು ಬಗೆಯವು. ಇವೆರಡನ್ನೂ ಕಟ್ಟಿಕೊಂಡು ಹೊರಟಿರುವುದರಿಂದ, ಹಿಂದೊಂದು ಮುಂದೊಂದು ಎಂಜಿನು ತೊಡಕಿಸಿದ ಉಗಿಬಂಡಿಯ ಸ್ಥಿತಿಯೊದಗಿದೆ ಈ ಸಂಸ್ಥೆಗಳಿಗೆ. ಒಂದು ಪೂರ್ವಕ್ಕೆಳೆದರೆ ಇನ್ನೊಂದು ಪಶ್ಚಿಮಕ್ಕೆಳೆಯುವುದು. ಈ ಪರಸ್ಪರ ವಿರುದ್ಧ ಶಕ್ತಿಗಳ ಎಳೆದಾಟದ ಮೂಲಕ, ಸಂಸ್ಥೆಗಳು ಮುಂದುವರಿಯದೆ ನಿಂತಲ್ಲಿಯೆ ನಿಂತುಬಿಟ್ಟಿರುವುವು. ವ್ಯರ್ಥ ಶಕ್ತಿವ್ಯಯ ಇದರಿಂದ ದೇಶದ ಪ್ರಗತಿ ದಿನದಿನಕ್ಕೂ ಕುಂಠಿತವಾಗುತ್ತಲಿದೆ.

ಸರ್ವಾಜನ ಶಾಂತಿ-ಪುಷ್ಟಿ ರಾಜಕಾರ್ಯವನ್ನೆ ಪಲಂಬಿಸಿದೆ; ಮೇಲ್ನೋಟಕ್ಕೆ ಕೆಲವು ವ್ಯಕ್ತಿಗಳ ಅತ್ಯತ್ಸಾಹ ಮತಧರ್ಮವನ್ನೆ ಪಲಂಬಿಸಿದೆ. ಮತಧರ್ಮದ ಅನುಯಾಯಿಗಳ ಗುಂಪುಗಳು ನಮ್ಮಲ್ಲಿ ಕಾಣುತ್ತಿದ್ದರೂ ಆಯಾ ಮತಧರ್ಮಗಳ ತಿರುಳನ್ನು ತಿಳಿದುಕೊಂಡು, ಅದನ್ನು ಜೀವನಕ್ಕೆ ಅನ್ವಯಿಸಿಕೊಂಡು ಬಾಳುವ ವ್ಯಕ್ತಿ ಹತ್ತುಸಾವಿರದಲ್ಲಿ ಒಂದಾದರೂ ಸಿಕ್ಕುವುದೋ ಇಲ್ಲವೋ ಎಂಬುದು ಸಂದೇಹದ ವಿಷಯ. ರಾಜಕಾರ್ಯದ ವಿಷಯ ಹಾಗಲ್ಲ ಉಂಡು ತಿಂದು ಸುಖಶಾಂತಿಯಿಂದ ಬದುಕಬೇಕೆಂಬ ಪ್ರತಿಯೊಬ್ಬ ಪಂಡಿತ-ಪಾಮರನಿಗೂ ಇದು ಬೇಕಾದ ಸಂಗತಿ. ರಾಜಕಾರ್ಯ ಕಲ್ಪನಾಲೋಕದ—ಕಣ್ಣಿಗೆ ಕಾಣದ—ಸ್ವರ್ಗಸಾಧನೆಗಾಗಿ ಅಲ್ಲ; ತಿಳಿವಳಿಕೆಯಿಂದ ತೃಪ್ತಿ ಪಡೆಯುವ ಆಧ್ಯಾತ್ಮಿಕ ಮುಕ್ತಿಗಾಗಿ ಅಲ್ಲ. ಅದು ಇರುವ ಲೋಕವನ್ನೆ ಸ್ವರ್ಗದಂತೆ ಮಾಡಲು ಹವಣಿಸುವಂತಹದು; ಒತ್ತಾಯದ ವಿರೋಧಕ ಶಕ್ತಿಗಳನ್ನು ಇಲ್ಲದಂತೆ ಮಾಡಿ, ಲೌಕಿಕ ಸ್ವಾತಂತ್ರ್ಯವನ್ನು ಮಾನವನಿಗೆ ದೊರಕಿಸಿಕೊಡಲು ಹೆಣಗುವಂತಹದು

ಹುಟ್ಟಿ ಬೆಳೆದು ಬಾಳುವ ಪ್ರತಿಯೊಬ್ಬನಿಗೂ ಹಸಿವೆಗೆ ಅನ್ನಬೇಕು; ಬಲಿಷ್ಠರಿಂದ ಬಲಹೀನರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಬೇಕು; ಸಾಮಾಜಿಕನಾಗಿ ಸಭ್ಯರೀತಿಯಿಂದ ವರ್ತಿಸಲು ಸಂಸ್ಕೃತಿ ಸ್ವಭಾವ ಬೇಕು; ನಾಗರಿಕನಾಗಿ ಬದುಕುವಂತಹ ಸುಖ-ಸೌಕರ್ಯಗಳು ಬೇಕು. ರಾಜಕಾರ್ಯ ಇವೆಲ್ಲವುಗಳ ಅನುಕೂಲತೆಗಾಗಿ ಇರುವುದು.

ಎಲ್ಲ ಮತಧರ್ಮದ ಅನುಯಾಯಿಗಳಿಗೂ ಹುಟ್ಟು, ಹಸಿವು, ಸುಖದ ಬಯಕೆ, ಮದುವೆ, ಮಕ್ಕಳು, ರೋಗ, ನೋವು, ಪರಪೀಡೆ, ಸಾವು ಇವೆಲ್ಲ ಇರುವುವು. ಇವೆಲ್ಲವುಗಳ ಸುವ್ಯವಸ್ಥೆಯನ್ನು ರಾಜಕಾರ್ಯ ಕೈಕೊಂಡಿರುವುದು. ಕಳವು ಯಾವ ಮತಧರ್ಮಿಗೆ ಒಪ್ಪಿಗೆಯಿಸ್ಟೀತು? ಹಿಂಸೆಯನ್ನು ಯಾವ ಮತಾನುಯಾಯಿ ಬೇಕೆಂದಾನು? ಒಬ್ಬರದು ತುಂಬಿ ತೀಗುವ ಹೊಟ್ಟೆ, ಇನ್ನೊಬ್ಬರದು ಬರಿಯ ಹೊಟ್ಟೆ ಇದನ್ನು ಯಾವ ಮತಾಭಿಮಾನಿ ಮೆಚ್ಚುವನು? ಒಬ್ಬ ಕುಳಿತಿರುವುದು ಇನ್ನೊಬ್ಬ ದುಡಿದು ಅವನ ಬಂಡವಾಳ ಬೆಳೆಸುವುದು—ಇದನ್ನು ಯಾವ ಮತಪಂಥಿ ಬೇಕೆಂದಾನು? ಹೆಣ್ಣು-ಗಂಡಿನ ಒತ್ತಾಯದ ಸಂಬಂಧವನ್ನು ಯಾವ ಮತಪ್ರೇಮಿ ಇರಲೆಂದಾನು? ಇವೆಲ್ಲ ಎಲ್ಲ ಮತಧರ್ಮಿಗಳಿಗೂ ಬೇಡವಾದುವುಗಳಾದರೂ, ಸಾಮೂಹಿಕವಾಗಿ ನಿಯಂತ್ರಿಸುವ—ತಪ್ಪಿದವರನ್ನು ಶಿಕ್ಷಿಸುವ—ಸಾಮರ್ಥ್ಯ, ಅಧಿಕಾರಗಳು ಮತಧರ್ಮಗಳಲ್ಲಿರುವುದಿಲ್ಲ. ಈ ನಿಯಂತ್ರಣ—ದಂಡಸಾಮರ್ಥ್ಯ ರಾಜಸವ್ಯವಸ್ಥಿತಿಪ್ರಧಾನವಾದ ರಾಜಕಾರ್ಯದಲ್ಲಿಯೆ ಇರುವುದು. ಆದುದರಿಂದಲೆ ಬೇರೆ ಬೇರೆ ಮತಧರ್ಮಿಗಳು ಒಂದು ರಾಜಕಾರ್ಯದ ಆಧಿಪತ್ಯದಲ್ಲಿ ಸುಖವಾಗಿ ಬದುಕಬಹುದು. ಹಾಗೆ ಬದುಕಿದ ಉದಾಹರಣೆಗಳು ಇತಿಹಾಸದಲ್ಲಿಯೂ ಸಿಕ್ಕುವುವು; ವರ್ತಮಾನ ಜಗತ್ತಿನಲ್ಲಿಯೂ ಸಿಕ್ಕುವುವು.

ಕನ್ನಡನಾಡಿನ ಚರಿತ್ರೆಯನ್ನೆ ನೋಡೋಣ: ಚಾಲುಕ್ಯ, ರಾಷ್ಟ್ರಕೂಟ, ಗಂಗ ರಾಜವಂಶಗಳಲ್ಲಿ ವೈದಿಕಧರ್ಮಾಭಿಮಾನಿಗಳಾಗಿಯೂ ಒಳ್ಳೆಯ ರೀತಿಯಿಂದ ರಾಜ್ಯವಾಳಿದವರಿದ್ದಾರೆ; ಜೈನಧರ್ಮವನ್ನವಲಂಬಿಸಿಯೂ ಒಳ್ಳೆಯ ರೀತಿಯಿಂದ ರಾಜ್ಯವಾಳಿದವರಿದ್ದಾರೆ. ಹೊಯ್ಸಳರನ್ನು ತೆಗೆದುಕೊಂಡರೆ ಇವರಲ್ಲಿ ಶೈವರು ಉಂಟು, ಜೈನರು ಉಂಟು, ವೈಷ್ಣವರೂ ಉಂಟು. ವಿಜಯನಗರದ ರಾಜವಂಶವೂ ಕೂಡ ಶೈವ, ವೀರಶೈವ, ವೈಷ್ಣವ ಮತಗಳನ್ನು ಅನುಸರಿಸಿ, ಪ್ರಸಂಕುಲ ಸುಖ-ಸಂತಥಾವಿನೋದದಿಂದಿರುವಂತೆ ಅಡಳಿತ ನಡೆಯಿಸಿದುದುಂಟು. ಪ್ರಜೆಗಳು ಕೂಡ ಬೇರೆ ಬೇರೆ ಮತಧರ್ಮಾನುಯಾಯಿಗಳೆ ಆಗಿದ್ದರು.

ಇಂದಿನ ಪಶ್ಚಿಮದ ರಾಷ್ಟ್ರಗಳಲ್ಲಿ ಎಲ್ಲರೂ ಒಂದೆ ಧರ್ಮದವರಿರುವ ರಾಷ್ಟ್ರಗಳು ತೀರ ಕಡಿಮೆ. ಅಮೇರಿಕದಂತಹ ರಾಷ್ಟ್ರವಂತೂ ಜಗತ್ತಿನ ಧರ್ಮ-ಕುಲಗಳ ದೃಷ್ಟಿಯಿಂದ ಎಲ್ಲಿಯೂ ಇಲ್ಲದಷ್ಟು ಭಿನ್ನತೆಯಿಂದ ಕೂಡಿದುದು. ರಸಿಯದಲ್ಲಿ ನಾಸ್ತಿಕ ಕಮ್ಯುನಿಸ್ಟರಿದ್ದಾರೆ; ಆಸ್ಟ್ರಿಯಾದಲ್ಲಿ ಕ್ರೈಸ್ತ, ಯಹೂದಿ, ಮಹಮ್ಮದೀಯರಿದ್ದಾರೆ. ಈ ರಾಷ್ಟ್ರಗಳಲ್ಲಿಯು ರಾಜಕಾರ್ಯದಲ್ಲಿ ಎಲ್ಲೆಲ್ಲಿಯೂ ಮತಧರ್ಮದ-ಜಾತಿಗಳ ಕಲಹಗಳು ತಲೆದೋರುತ್ತಲಿಲ್ಲ. ಆದರೆ ಹಿಂದುಸ್ತಾನ ಮಾತ್ರ ಇನ್ನಾನುದಕ್ಕೆ ಸ್ವಾತಂತ್ರ್ಯವಿರದಿದ್ದರೂ ಮತಧರ್ಮ ಸಲುವಾಗಿ ಹೊಡೆದಾಡಲಿಕ್ಕೆ ಸಮಯ ಅಡಚಣೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದೆ. ಇಷ್ಟೇ ಅಲ್ಲ, ಮತಧರ್ಮದ ಜಾತಿ-ಕುಲಗಳ ಕಲಹ ಹೆಚ್ಚುವುದಕ್ಕೆ ಬೇಕಾದ ಪರಿಸ್ಥಿತಿಯನ್ನೂ ಉಂಟುಮಾಡಿಕೊಂಡಿದೆ

(೪೪೨ನೆಯ ಪುಟಕ್ಕೆ ಮುಂದುವರಿದಿದೆ)

# ಮಂಗನ ಮಲ್ಲಿವಾಧೀನ

## ಧಾರವಾಡದಲ್ಲಿ ಅವಲಕ್ಕಿ

ಕವಿಗಳೆಂದರೆ ಮನುಷಿಗಳೆಂದೂ ಅವರ ಮಾತೆಂದರೆ ತ್ರಿಕಾಲಾಬಾಧಿತ ಸತ್ಯವೆಂದೂ ನಮ್ಮಲ್ಲಿ ನಂಬುಗೆಯುಂಟು. ಹಾಗೆ ನಂಬಬೇಕೆಂದು ನಮ್ಮ ಹಿರಿಯರು ಸಾರಿಹೇಳುತ್ತ ಬಂದಿದ್ದಾರೆ. ಆದರೆ ಮಂಗರಾಯನ ಅನುಭವವೆಂದರೆ ಸರಕಾರದ ಕಾಯಿದೆಗಳು ಎಂತಹ ತ್ರಿಕಾಲಾಬಾಧಿತ ಸತ್ಯವನ್ನೂ ಬಾಧಿತಗೊಳಿಸುವುವೆಂದು. ಇದಕ್ಕೆ ಪ್ರತ್ಯಕ್ಷವಾದ ಉದಾಹರಣೆಯೆಂದರೆ ಧಾರವಾಡದಲ್ಲಿಯ ಅವಲಕ್ಕಿಯ ಅಭಾವ.

ನಮ್ಮ ರಾಷ್ಟ್ರೀಯ ಕವಿಯೊಬ್ಬ 'ಧಾರವಾಡದಲ್ಲಿ ಅವಲಕ್ಕಿ' ಎಂದು ಕೈಯೆತ್ತಿ ಹಾಡಿದ, ಆದರೆ ಇಂದು ಆ ಕವಿ ಸತ್ತು ಹೋಗಿರುವನೆಂದು ಬದುಕಿಕೊಂಡ. ಇಲ್ಲವಾದರೆ ಧಾರವಾಡದ ಅವಲಕ್ಕಿಪ್ರಿಯರೆಲ್ಲರೂ 'ನಿನ್ನ ಕವಿವಚನವನ್ನು ತ್ರಿಕಾಲಾಬಾಧಿತಗೊಳಿಸದಾ!' ಎಂದು ಅವನನ್ನು ಮುತ್ತಿಗೆ ಹಾಕಿ ಬಿಡಬಹುದಾಗಿತ್ತು.

ಇಂದಿನ ಸರಕೀಯ ಸರಕಾರ ನಮ್ಮ ಸಂಸ್ಕೃತಿಯನ್ನು ಹಾಳು ಮಾಡಲಿಕ್ಕೆ ಬಂದಿದೆಯೆಂಬುದಕ್ಕೆ ಧಾರವಾಡದಲ್ಲಿಯ ಅವಲಕ್ಕಿಯ ಅಭಾವ ಸ್ಪಷ್ಟವಾದ ದೃಷ್ಟಾಂತ. ನಮ್ಮ ಕವಿಯ ಸತ್ಯಾನುಭವವನ್ನು ಸುಳ್ಳುಗೊಳಿಸಿ ತೋರಿಸುವುದೆಂದರೆ, ನಮ್ಮ ಸಂಸ್ಕೃತಿಯ ಮೇಲೆ ಆಘಾತವಲ್ಲದೆ ಇನ್ನೇನು?

ಇಂದು ಧಾರವಾಡದಲ್ಲಿ, ನಿತ್ಯವೂ ಕಾಣುತ್ತಿದ್ದ ಅವಲಕ್ಕಿ ನಿರ್ಮಾಣ ಯಜ್ಞದ ಧೂಮರಾಶಿಯಿಲ್ಲ. ಅವಲಕ್ಕಿ ಕುಟ್ಟುವ 'ಲಾರಿ'ಯ ಕರ್ಣಮಧುರ ಲಯಬದ್ಧವಾದ ಸಪ್ಪಳವಿಲ್ಲ. ಹೋಟಲುಗಳಲ್ಲಿ ಕರಿದ ಅವಲಕ್ಕಿಯಿಲ್ಲ, ಹುರಿದವಲಕ್ಕಿಯಿಲ್ಲ, ಹಚ್ಚಿದವಲಕ್ಕಿಯಿಲ್ಲ. ಪೊಸರವಲಕ್ಕಿಯೆ ಒಪ್ಪೊತ್ತಿನ ಆಹಾರವಾದವರೆಲ್ಲ, ಅದರ ಸ್ಮರಣೆಯಿಂದ ಊರಿದ ನಾಲಗೆಯ ನೀರನ್ನೇ ಗುಟುಗರಿಸುತ್ತ ಮಲಗಿ ನಿಟ್ಟುಸಿರುಬಿಡುತ್ತಿದ್ದಾರೆ. ಅವಲಕ್ಕಿಯನ್ನು ಕಳೆದುಕೊಂಡ ವಿಷಾದವಿಂದು ಕೇವಲ ವಿಧುರನಂತೆ ದೈನ್ಯಮುಖಿಯಾಗಿ ಕಾಣುತ್ತಿದೆ. ಪೊರಪೊರಗಟ್ಟಲೆ ಅವಲಕ್ಕಿ ಮುಕ್ಕದೆ ಮೇಲೇಳದ ಜನವೆಲ್ಲ ಇಂದು ಚಳವಳಿ ಹೂಡಬೇಕೆಂದು ಮಹಾಸಭೆ ಕೂಡಿಸುವುದರಲ್ಲಿದ್ದಾರೆ. ಸಂಪಿನ ಸುಗ್ಗಿಯಾದ ಈ ಕಾಲದಲ್ಲಿ ಅವಲಕ್ಕಿಗಾಗಿ ಸಂಪುಗಳು ಸುರುವಾವರೂ ಆಶ್ಚರ್ಯವಿಲ್ಲ.

ಮಂಗರಾಯ ಧಾರವಾಡದ ಜನತೆಗಾಗಿ ಕೂಗಿ ಕೂಗಿ ಹೇಳುತ್ತಿದ್ದಾನೆ:

"ಅವಲಕ್ಕಿ ನಮ್ಮ ಜನ್ಮಸಿದ್ಧ ಹಕ್ಕು!
ಅದನ್ನು ನಾವು ದೊರಕಿಸಿಕೊಳ್ಳಲೇ ಬೇಕು!
ಏಳಿರಿ, ಎಚ್ಚರಾಗಿರಿ, ಬೇಕಾದುದನ್ನು ಪಡೆಯಲು ಹೋರಾಡಿರಿ, ಅವಲಕ್ಕಿ ಮತ್ತೆ ಪಡೆಯಿರಿ!"

* * *

## ಮಕ್ಕಳ ಪಾಲಕರ ಪೊರೆ

ಮಕ್ಕಳ ತಂದೆಯೊಬ್ಬರು ಮಂಗರಾಯನೆದುರು ತಮ್ಮ ದುಃಖವನು ತೋಡಿಕೊಂಡು ಹೀಗೊಂದು ಕಾಗದ ಬರೆದಿದ್ದಾರೆ:

"ಮಂಗರಾಯಾ, ಇದೆಂತಹ ಕಠಿಣ ಕಾಲ ಬಂದು ಬಿಟ್ಟಿದೆಯಲ್ಲಾ. ಮನೆಯಲ್ಲಿ ಅತ್ತು ಕರೆದು ಗೊಂದಲ ಪಾಕ ತೊಂದರೆ ಕೊಡುವುದೆಂದು ನಡೆಯಲಿಕ್ಕೆ ಬಂದೊಡನೆ ಮಕ್ಕಳನ್ನು ಶಾಲೆಗೆ ಅಟ್ಟುತ್ತಿದ್ದೆವು. ಸರಕಾರ ಶಾಲೆಗಳನ್ನು ತೆಗೆದು ಮಕ್ಕಳ ತಾಯ್ತಂದೆಗಳಿಗೆ ಎಷ್ಟೊಂದು ಉಪಕಾರ ಮಾಡಿದೆಯವ್ವಾ— ಎಂದು ನಿತ್ಯವೂ ಸರಕಾರಕ್ಕೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೆವು. ಆದರೆ ಇಂದು ಎಂತಹ ಪರಿಸ್ಥಿತಿ? ಕಾರಿಗಳಂತಪ ಕ. ಪಾ. ಮಾ. ಗಳು ಇಂದು "ಸಂಜೆ ಸಂಪು!" ಎಂದು ಕೂಗುತ್ತ ಶಾಲೆಗಳಿಗೆ ಜೀಗಬಿಗಿದು ಒಬ್ಬರಿಂದೊಬ್ಬರು ಹೊರಟು ಬಿಟ್ಟಿದ್ದಾರೆ. ಕೆಲಸವಿಲ್ಲದೆ ಮನೆಯಲ್ಲಿ ಕುಳಿತ ಹುಡುಗರು ಹಗಲು ಹನ್ನೆರಡುತಾಸೂ ಓಡಾಡಿ ಗೊಂದಲ ಪಾಕುಚ್ಚಾರೆ. ಮನೆಯೆಂಬುದು ಅರಾಂತಿಯ ಬೀಡಾರವಾಗಿದೆ. ಹೆಚ್ಚಾಗಿ ಓಡಾಡುವುದರಿಂದ ಹುಡುಗರಿಗೆ ಹೆಚ್ಚಾಗಿ ಪಸಿವೆಯಾಗುವುದು. ಆಗಾಗ ತಿನ್ನಲಿಕ್ಕೆ ಉಣ್ಣಲಿಕ್ಕೆ ಬೇಡುವರು. ರೇಶನಿಂಗಿನವರು ಕೊಡುತ್ತಿದ್ದ ಆಹಾರಧಾನ್ಯ ಎರಡು ಹೊತ್ತಿನ ಊಟಕ್ಕೇ ಸರಿಯಾಗಿ ಸಾಲದಿರುತ್ತಿರುವಾಗ, ಮಕ್ಕಳಿಗೆ ಹೆಚ್ಚಿನ ಆಹಾರವೆಲ್ಲಿಂದ ಸಿಕ್ಕಬೇಕು? ಚುರಮುರಿ-ಅವಲಕ್ಕಿಗಳು ಕೂಡ ಬೇಟಿಯಲ್ಲಿ ಕಾಣದಾಗಿವೆ. ಮಕ್ಕಳ ತಂದೆ-ತಾಯಿಗಳಿಗೆ ಮಾಸ್ತರ್ ಜನರ ಸಂಪೆಂದರೆ ಮಹಾಯಮಬಟ್ಟಕ್ಕಿಂತ ಹೆಚ್ಚಿನ ತೊಂದರೆಯಾಗಿದೆ? ಈಗ ನಾನು ಮತ್ತು ನನ್ನಂತಹ ಬೇರೆ ತಾಯ್ತಂದೆಗಳು ಏನು ಮಾಡಬೇಕು? ಜಗತ್ತಿಗೇ ಸಲಹೆಗಾರನಾದ ನೀನು ನಮಗೆ ಸಲಹೆ ಕೊಡಲಾರೆಯಾ ವಾತಾತ್ಮಜವಂಶಜಾ?"

ಮಂಗರಾಯನಿಗೆ ಇದೊಂದು ದೊಡ್ಡ ಪ್ರಶ್ನೆಯಾಗಿ ತೋರುತ್ತಿಲ್ಲ. ಈಗಾಗಲೇ ಅನೇಕ ಸ್ಕೂಲುಬೋರ್ಡು-ಮ್ಯುನಸಿಪಾಲಿಟಿಗಳು ಹೊಸ ಶಿಕ್ಷಕರು ಬೇಕೆಂದು ಪ್ರಕಟನೆ ಹೊರಡಿಸಿವೆ. ಸಾಧ್ಯವಿದ್ದ ತಾಯ್ತಂದೆಗಳು ಸ್ವತಃ ಶಿಕ್ಷಕರಾಗಿ ಮುಂದೆ ಬರಬೇಕು. ಸಾಧ್ಯವಿರದವರು ದೇಶ ಸೇವೆ, ಸಮಾಜಸೇವೆ, ಸಂಸ್ಕೃತಿ ಪ್ರಸಾರ, ಸ್ವಾರ್ಥತ್ಯಾಗ, ಮೊದಲಾದುವುಗಳ ಹೆಸರನ್ನು ಹೇಳುತ್ತ ವ್ಯಾಖ್ಯಾನ ಕೊಡುತ್ತ ತರುಣರನ್ನು ಶಿಕ್ಷಕರಾಗುವಂತೆ ಪ್ರಚೋದಿಸಬೇಕು. ಅದಕ್ಕಾಗಿ ಅಲ್ಲಲ್ಲಿ ಸಭೆ, ಕಾನ್‌ಫರನ್ಸ್, ಪರಿಷತ್ತುಗಳನ್ನು ನೆರೆಯಿಸಬೇಕು. ಇದರ ವೆಚ್ಚಕ್ಕಾಗಿ ಸರಕಾರವನ್ನೂ ಸ್ಕೂಲ್‌ಬೋರ್ಡುಗಳನ್ನೂ ಕೇಳಿದರೆ ಧನಸಹಾಯ ಸಿಕ್ಕಬಹುದು. ಹೀಗೆ ಮಾಡಿ ಹೊಸ ಶಿಕ್ಷಕರನ್ನು ಒದಗಿಸಿ ಕೊಟ್ಟರೆ, ಅವರಲ್ಲಿ ಸಂಪು ಹೂಡುವ ಬುದ್ಧಿ ಮೂಡುವ ವರೆಗೂ ಶಾಲೆಗಳು ಸುಸೂತ್ರವಾಗಿ ಸಾಗಬಹುದು. ಮಕ್ಕಳು ಮನೆಯಲ್ಲಿ ಹಾಕುವ ಗೊಂದಲ ಸದ್ದ ತಪ್ಪಬಹುದು. ರೇಶನಿಂಗ್ ಧಾನ್ಯವನ್ನೂ ಇದ್ದುದರಲ್ಲಿ ಸಾಕಾಗಿಸಿಕೊಳ್ಳಬಹುದು.. ಇತಿ ಮಂಗಾಭಿಪ್ರಾಯಃ

* * *

## ಭಾಷಣ ಉತ್ತರರಾಮಚರಿತ್ರೆ

ಸಾಹಿತ್ಯಾಭ್ಯಾಸಿಗಳಾದ ತರುಣವಾಚಕರೊಬ್ಬರು ಮಂಗರಾಯನಿಗೆ ಒಂದು ಕಾಗದ ಬರೆದು ಸಾರ್ವಜನಿಕವಾಗಿ ಉತ್ತರ ಬರೆಯಲು ವಿನ್ನಪಿಸಿಕೊಂಡಿದ್ದಾರೆ. ಪತ್ರದಲ್ಲಿಯ ವಿಷಯ ಹೀಗಿದೆ:

"ಸಾಹಿತ್ಯಕೋವಿದನಾದ ಮಂಗಣ್ಣಾ, ಬೆಳಗಳೂರಿನ ಪತ್ರಿಕೆಯೊಂದರಲ್ಲಿ ಸ್ವಯಮೇವ ಸುಪ್ರಸಿದ್ಧ ಸಂಭಾವಿತರಾದ ಲೇಖಕರೊಬ್ಬರು, ಬೇಂದ್ರೆಯವರ ಬಗ್ಗೆ ಒಂದು ಲೇಖನ ಬರೆದಿದ್ದಾರೆ. ಅದರಲ್ಲಿ ಕೆ. ವಿ. ಪುಟ್ಟಪ್ಪನವರನ್ನು ಬೈಯಬೇಕಾದ ಸಂದರ್ಭ ಕಲ್ಪಿಸಿಕೊಂಡು "ಪುಟ್ಟಪ್ಪ ಕಣ್ವ ಪ್ರಧಾನವಾದ ಕವಿ—ಎಂದು ನನ್ನ ತಿಳಿವಳಿಕೆಯಾಗಿತ್ತು. ಕೇವಲ ಸಿಡಿಲು-ಮಿಂಚುಗಳಂತಹ

( ಳಳಂ ನೆಯ ಪುಟದಿಂದ ಮುಂದುವರಿದಿದೆ )

ದೇಶಕ್ಕೆ ಹಿತವಾಡುವಂತಹ ರಾಜಕಾರ್ಯ ನಮ್ಮಲ್ಲಿದ್ದರೆ, ಇಂತಹ ಕಲಹಗಳೇಳುವುದಕ್ಕೆ ಅವಕಾಶವೇ ಇರಲಿಲ್ಲ. ರಾಜಧರ್ಮಾಂಧ ಜನಸಾಮಾನ್ಯರಲ್ಲಿ ಅಗ್ಗದ ಮುಂದಾಳುತನ ದೊರೆಯುದೆಂದು, ಮತಧರ್ಮದ ಮೂಲಕ್ಕೆ ಬಂದೇ ರಾಷ್ಟ್ರದಲ್ಲಿ ವಿಭಾಗಗಳನ್ನು ಮಾಡುದ ಮೂರ್ಖತನದ ಹಟ ಹಿಡಿವುದೆಂದರೆ ರಾಜಕೀಯ, ಸಾಮಾಜಿಕ ಸುಖಶಾಂತಿಗಳನ್ನು ಅಪೇಕ್ಷಿಸುವ ಯಾವ ಮತಾಭಿಮಾನಿಯೂ ಪ್ರಗತಿಯನ್ನು ಪಡೆಯಲಾರ. ಅಗ್ಗದ ಮಾನಕ್ಕಾಗಿ ಹಿಗ್ಗಿ ಹುಚ್ಚು ಹಿಡಿದ ಮುಂದಾಳುಗಳು ಹಾದಿಗೆ ಬರಬೇಕಾದರೆ ಪೊಡಲು ಅನುಯಾಯಿಗಳಾದ ಜನಸಾಮಾನ್ಯರನ್ನೇ ಎದ್ದಬೇಕು. ಅವರಿಗೆ ಹೇಳಿದರೆ ಅವರು ಹಿತದ ಹಾದಿಯನ್ನು ಸಹಜವಾಗಿ ತಿಳಿದುಕೊಳ್ಳಬಹುದು. ಆದರೆ ಹೀಗೆ ಎದ್ದಬಯಸುವ ಸ್ವಯಂಸೇವಕರು ನಿಜವಾದ ಸ್ವಾರ್ಥತ್ಯಾಗಿಗಳಾಗಿರಬೇಕು; ಜನಸೇವೆಯ ತಿರುಳನ್ನು ತಿಳಿದವರಿರಬೇಕು. ರಾಜಕಾರಣ-ಮತಧರ್ಮಗಳನ್ನು ಕೂಡಿ ಹೊಸೆಯುವುದು ದೇಶಕ್ಕೆ ಘಾತಕವೆಂಬುದನ್ನು ಮನಗಂಡವರಿರಬೇಕು. ಮತಧರ್ಮ ವ್ಯಕ್ತಿಯ ಮನಸ್ಸಿನ ರುಚಿ; ರಾಜಕಾರ್ಯ ಸಮಾಜ ಸಂರಕ್ಷಣೆಯ ಆವಶ್ಯಕ ಉಪಕರಣ—ಎಂಬುದನ್ನು ಎಲ್ಲರೂ ಯಾವಾಗಲೂ ಮನದೆದುರು ಇರಿಸಿಕೊಂಡು ನಡೆಯಬೇಕು. ಕನ್ನಡಿಗರಂತೂ ಈ ಮಾತನ್ನು ಎದೆಯಲ್ಲಿ ಮೂಡಿಸಿಕೊಳ್ಳಬೇಕು.

—ಸಂಪಾದಕರು

---

( ಪುಟ ಳಳಂ ರಿಂದ ಮುಂದುವರಿದಿದೆ )

ಕಬ್ಬಗಳೇ ಬೇಕಾಗಿದ್ದರೆ ಬಾಣನ ಕಾದಂಬರಿಯನ್ನೂ, ದಂಡಿಯ ದಶಕುಮಾರ ಚರಿತವನ್ನೂ ಭಾಸನ ಉತ್ತರ ರಾಮಚರಿತವನ್ನೂ ಏಕೆ ಓದಬಾರದು?—ಎಂದು ಕೇಳುತ್ತಲಿದ್ದೆ." ಎಂದು ಬರೆದಿದ್ದಾರೆ ನನಗೆ ಪ್ರಶ್ನೆಯವರ ಶಬ್ದ ಪ್ರಧಾನತೆಯೂ ಬೇಕಾಗಿಲ್ಲ. ಪ್ರಶ್ನೆಯವರ ಕೃತಿಗಳಿಗೆ ಈ ಹೋಲಿಕೆ ಸರಿಯಾಗುವುದೇ?—ಎಂಬುದೂ ಬೇಕಾಗಿಲ್ಲ. ಭಾಸನದೊಂದು ಉತ್ತರ-ರಾಮಚರಿತವಿದೆಯೇ?—ಎಂಬುದನ್ನು ತಿಳಿದುಕೊಳ್ಳುವ ಕುತೂಹಲ ನನಗೆ. ಶ್ರೀರಾಮದೂತಪಂಕ್ತಿಸಂಭೂತನಾದ ನನಗೆ, ರಾಮಚರಿತ ಗ್ರಂಥಗಳೆಲ್ಲದರ ಪರಿಚಯವಿರಬಹುದು. ಹೇಳು ಕವಿವರಾ, ಭಾಸನ 'ಉತ್ತರರಾಮಚರಿತ' ಮಹಾಕಾವ್ಯವೋ, ಚಂಪೂಕಾವ್ಯವೊ, ನಾಟಕವೊ? ಭಾಷೋಚಿತ ಶಬ್ದಗಳ ಹಿತವಾದ ವಿನಿವಾದ ಬಳಕೆಯಲ್ಲಿ ಭಾಸನ ಹೆಸರು ಪ್ರಸಿದ್ಧವಾಗಿರುವಾಗ, ಅದೇ ಭಾಸ ಉತ್ತರರಾಮಚರಿತದಂತಹ ಶಬ್ದಪ್ರಧಾನ ಕಾವ್ಯ ಬರೆದಿದ್ದಾನೆಯೆ? ಇದೇನು ಅಭಾಸ?...."

### ಮುಂಗರಾಯನ ಉತ್ತರವಿದು:

" ನಮಗೆ ಕಾಗದ ಬರೆವುದಕ್ಕಿಂತ ಆ ಲೇಖಕರನ್ನು ಬರೆದು ಕೇಳಿದ್ದರೆ ಚೆನ್ನಾಗಿತ್ತು. ಆದರೂ ಮುಂಗರಾಯನಿಗೊಂದು ವಿನಯ ಗೊತ್ತಾಗಿದೆ: ಹೊಸದೊಂದು 'ಪ್ರಗತಿಶೀಲ ಕವಿಚರಿತ್ರೆ' ಬೇಗನೆ ಅಚ್ಚಾಗುವುದರಲ್ಲಿದೆ. ಅದರಲ್ಲಿ ಈ ವಿಷಯ ಬಂದಿರುವುದಲ್ಲದೆ, ಬಂಕೀಮ್ ಬಾಬುಗಳ 'ದೇವದಾಸ' ಕಾದಂಬರಿಯ ವಿಚಾರವೂ, ನಾಗಚಂದ್ರನ 'ಅಭಿನವಸಂಸ ಪುರಾಣ'ದ ವಿಷಯವೂ ಬಂದಿರುವುದಂತೆ. ಅದು ಪ್ರಕಟವಾಗುವ ವರೆಗೆ ಸಮಾಧಾನ ಮಾಡಿಕೊಂಡು ಇರ್ರಿ!"

# ಸ್ವಾತಂತ್ರ್ಯ ಸೂರ್ಯ

ಶ್ರೀ. ಎಂ. ಸಂಗಣ್ಣ, ಹರಪನಹಳ್ಳಿ

★

೧

ಮೂಡುತಿಹ ನೋಡಲ್ಲಿ ಭಾರತದ ನಾಡಲ್ಲಿ
ದಾಸ್ಯದಿರುಳನು ಹರಿದು ಸ್ವಾತಂತ್ರ್ಯಸೂರ್ಯ;
ಕತ್ತಲೆಯ ಕಳೆಯುತ್ತ ಬೆಳಕನುರೆ ಬೀರುತ್ತ
ತುಂಬುತಿಹ ಜೀವದಲಿ ಹೊಸತನದ ಶೌರ್ಯ!

೨

ಓಡುತಿದೆ ನೋಡದೋ ಜಡತನದ ಮಂಜಲ್ಲಿ,
ಬರುತಿಹುದು ಓಡೋಡಿ ಕಲಿತನದ ಕೆಚ್ಚು;
ಹೊನಲಂತೆ ಹರಿಯುತಿದೆ ಬುಗ್ಗೆಯೊಲು ಪುಟಿಯುತಿದೆ
ನಾಡಿನಾ ಬಾವುಟವ ಮೆರೆಯಿಸುವ ನಚ್ಚು!

೩

ನಾಡ ಶಿಲೆ-ಶಿಲೆಗಳಿಂ ಕಾಡ ಮರ-ಮರಗಳಿಂ
ಹೊರಡುತಿದೆ ದೇಶದಭಿಮಾನಭಾವ—
'ಭಾರತವೆ ತನುಮನವು ಭಾರತವೆ ತವನಿಧಿಯು
ಭಾರತವೆ ಜೀವ, ನಮಗೆಲ್ಲ ಪರದೈವ!'

೪

ಜೀವಿಗಳ ಜೀವದಲಿ, ಹೃದಯಾಂತರಾಳದಲಿ
ಮಿಂಚುತಿದೆ ನಿರ್ಭಯದ ನಿಷ್ಠೆಯದು ಉದಿಸಿ,
ಭೇದಗಳ ಸಂಘಟಿಸಿ ಗೆಳತನವ ಸಿಂಗರಿಸಿ
ಬೆಳಗುತಿಹ ಸೂರ್ಯ ತಾ ನಾಡನ್ನೆ ಮೆರಸಿ!

೫

ಎಲ್ಲರೂ ಎದ್ದರೈ, ತ್ಯಾಗಕ್ಕೆ ಸಿದ್ಧರೈ
ಬಂದಿತ್ತೈ ಬಂದಿತ್ತೈ ಬಯಸಿದಾ ಕಾಲ,
ಬಿಡುಗಡೆಯ ಗುರಿಯಿಟ್ಟು ಬಿಡುಗಡೆಯ ಪಣತೊಟ್ಟು
ಹೊರಟಿಹುದು ಮುಮ್ಮುಂದೆ ಭಾರತದ ಮೇಳ!

* * *

ಮೂಡುತಿಹ ನೋಡಲ್ಲಿ ನಮ್ಮ ಈ ನಾಡಲ್ಲಿ
ದಾಸ್ಯದಿರುಳನು ಹರಿದು ಸ್ವಾತಂತ್ರ್ಯ ಸೂರ್ಯ;
ಕತ್ತಲೆಯ ಕಳೆಯುತ್ತ ಬೆಳಕನೇ ಹರಡುತ್ತ
ತುಂಬುತಿಹ ಜೀವಸಂಕುಲದಿ ಶೌರ್ಯ!

# ಹಳೆಯ ನೋಟಗಳು

( ಒಂದು ಕಣ್ಣಕತೆ )

ಶ್ರೀ. 'ಭಾರತೀಸುತ' ವೀರರಾಜ ಪೇಟೆ, ಕೊಡಗು

★

ಬಸ್ಸಿನಿಂದ ಇಳಿದುಹೋದ ಕುರುಡನನ್ನು ಶಾಲಿನಿ ನೋಡಿದಳು; ತನ್ನ ಬಾಳಿನ ನಾಟಕದ ಒಂದೊಂದೆ ಅಂಕಗಳು ಕಣ್ಣೆದುರು ಬಂದುಬಂದು ಹೋಗುವುದನ್ನು ಒಳಗಣ್ಣು ನೋಟದಲ್ಲಿ ಕಂಡಳು.

★

ಶಾಲಿನಿ ಬಸ್ಸಿನಲ್ಲಿ ಪ್ರಯಾಣಮಾಡುತಿದ್ದಳು. ಆಕೆ ಕೊಡ್ಲಿಪೇಟೆಯ ಶಾಲೆಯಲ್ಲೊಬ್ಬ ಅಧ್ಯಾಪಕಿ. ಜೀಸಿಗೆ ರಜವನ್ನು ತಮ್ಮನ ಮನೆಯಲ್ಲಿ ಕಳೆದು, ಅಂದು ಶಾಲೆಗೆ ಹಾಜರಾಗಲು ಹೊರಟಿದ್ದಳು.

ಶನಿವಾರ ಸಂತೆಯಲ್ಲಿ ಬಸ್ಸು ನಿಂತಿತು. "ಶನಿವಾರ ಸಂತೆ, ಇಳಿಯಿರಿ!" ಎಂದು ಕ್ಲೀನರು ಕೂಗಿದ. ಯಾತ್ರಿಕರು ತಮ್ಮು, ತಮ್ಮ ಗಂಟು-ಕೊಡೆಗಳನ್ನು ತೆಗೆದುಕೊಂಡು ಬಸ್ಸಿನಿಂದಿಳಿಯ ಪ್ರಾರಂಭಿಸಿದರು. ಸೀಟಿನ ಬಂದು ತುದಿಯಲ್ಲಿದ್ದ ಕುರುಡನ ಸರದಿಯೂ ಬಂದಿತು. ಅವನು ಕೈಗೋಲಿನಿಂದ ತಡವುತ್ತಾ, ಕಬ್ಬಿಣದ ಸರಳನ್ನು ಹಿಡಿದು ಇಳಿದ. ಅವನ ಇನ್ನೊಂದು ಕೈಯಲ್ಲಿ ಸಾಮಾನು ತುಂಬಿದ ಚೀಲವಿತ್ತು. ಪ್ರಾಯ ಮೂವತ್ತೈದು ಇರಬಹುದು; ಜೆನ್ನು ತುಸ ಬಾಗಿದೆ. ಬಡಕಲು ಮೈ. ಮೊಗವು ಬಿಳಿದು. ಮೊಗದಲ್ಲಿ ಎರಡು ಸುಟ್ಟ ಕಲೆಗಳು ತೋರುತ್ತಿವೆ. ತಲೆಗೂದಲಲ್ಲಿ ಅಲ್ಲಲ್ಲಿ ನೆರೆ ಇಣಕಿದೆ. ಉದ್ದವಾದ ತೋಳುಗಳು.

ಶಾಲಿನಿ ಕುರುಡನ ಮೊಗದಿಂದ ಕಣ್ಣುಗಳನ್ನು ಕೀಳದೆ ದಿಟ್ಟಿಸಿದಳು. ಆ ಮೊಗವನ್ನು ಮೊದಲು ನೋಡಿದ ನೆನಪು ಆಕೆಯ ಚಿತ್ತದಲ್ಲಿ ಮೂಡಿತು. ಆದರೆ ಯಾವಾಗ, ಎಲ್ಲಿ — ಎಂಬುದು ಹೊಳೆಯಲೊಲ್ಲದು.

"ಜೆನ್ನಪ್ಪಾ, ಬಂದಿರಾ? ಅಕ್ಕನ ಮನೆಯಲ್ಲಿ ಬಿಡುವಿನ ದಿನ ಕಳೆದಂತೆ ತೋರುತ್ತದೆ?" ಎಂದರು ಮಾರ್ಗದಲ್ಲಿ ಇದ್ದ ಒಬ್ಬರು. "ಜೀಸರಿಕೆ ಹುಟ್ಟಿದಾಗ ದಿನಗಳೆಯಲು ಅಕ್ಕನ ಮನೆಯಲ್ಲದೆ ಬೇರೆನ್ನಾವ ಎಡೆಯಿದೆ ನನಗೆ?" ಎಂದು ಮಾತನಾಡಿದ ಕುರುಡ.

ಈ ಮಾತುಗಳನ್ನು ಶಾಲಿನಿ ಮನಸ್ಸಿಟ್ಟು ಆಲಿಸಿದಳು. 'ಜೆನ್ನಪ್ಪ ಜೆನ್ನಪ್ಪ!' ಆ ಹೆಸರು ಆಕೆಯ ಚಿತ್ತದಲ್ಲಿ ತೇಲಿತು. ಅದು ಸೂತನ ಯಾದ ಹೆಸರಲ್ಲ. ಹಳೆಯದು. ಇರುಳು ಕವಿಯಲು ಪ್ರಾಂದಳದಿ ಮಿನುಗುವ ಕಿರುತಾರೆಗಳಂತೆ, ಆಕೆಯ ಚಿತ್ತದಲ್ಲಿ ಗತಜೀವನದ ಸ್ಮೃತಿಗಳು ಮೂಡಿದುವು; ಮಿನುಗಿದುವು. ಅಗಾಧದಲ್ಲಿ ಚಿಕ್ಕಿಗಳು ಮೇಳಯಿಸಿದ ತಣ್ಣದಿರನ ಬಿಂಬದಂತೆ ಒಂದು ವ್ಯಕ್ತಿಯ ಸುತ್ತಲೂ ಆ ನೆನಪುಗಳು ಸುಳಿದುವು.

ಬಸ್ಸು ಮುಂದೆ ಸಾಗಿತು. ಆಕೆಯ ಚಿತ್ತವು ಹಳೆಯ ದಿನಗಳನ್ನು ಮೆಲಕು ಹಾಕುವುದರಲ್ಲಿ ನಿರತವಾಯಿತು.

* * *

ಶಾಲಿನಿ ಶಾಲೆಯ ಕೆಲಸಗಳನ್ನು ಮುಗಿಸಿ ಮನೆಗೆ ಬಂದಳು; ಕೈಯಲ್ಲಿದ್ದ ಪುಸ್ತಕಗಳನ್ನು ಮೇಜಿನ ಮೇಲಿರಿಸಿದಳು. ಮುತ್ತಿನ ಮಣಿಗಳಂತೆ ಬೆವರ ಹನಿಗಳು ಹಣೆಯ ಮೇಲೆ ಮೂಡಿದ್ದುವು. ಕೆನ್ನೆಗಳು ತುಸ ಕೆಂಪೇರಿದ್ದುವು. ಆಕೆ ಕರವಸ್ತ್ರದಿಂದ ಮೊಗವನ್ನು ಒರಸಿಕೊಂಡಳು. "ಪದ್ದೂ" ಎಂದು ಅಡಿಗೆಯ ಹುಡುಗಿಯನ್ನು ಕರೆದುದಾಯಿತು. ಶಾಲಿನಿಯ ವಯಸ್ಸು ತಲೆ-ತರ ಮನೆಯಲ್ಲಿದೆ. ಎಣ್ಣೆಗೆಂಪಿನ ಮೊಗ. ಪರರ ಇಂಗಿತವನ್ನು ಅರಿಯಬಲ್ಲ ಜೊಗಸೆ-ಕಣ್ಣುಗಳು; ಆವೆದಿರಿದ ಮುಗುಳುಗಳಂತಿಹ ತುಟಿಗಳು. ಆಕೆ ಬಿಳಿ ಸೀರೆಯನ್ನು ಉಟ್ಟಿದ್ದಳು; ಅದೇ ಬಣ್ಣದ ಬ್ಲೌಸನ್ನು ತೊಟ್ಟಿದ್ದಳು. ಕೈಗಳಲ್ಲಿ ಎಂಡೆರಡು ಗಾಜಿನ ಒಳಗೆಳಲ್ಲದೆ ಇನ್ನಾವ ಒಡವೆಗಳೂ ಇರಲಿಲ್ಲ. ಉಡಿಗೆ-ತೊಡಿಗೆಗಳು ಸರಳತೀರಿಯವು.

ಪದ್ದು ಚಹಾ ತಂದಳು. ಅವಳ ಪ್ರಾಯ ೧೮ ಇರಬಹುದು. ಕಪ್ಪು ಮೈ ಅವಳದು. ಉಡಿಗೆ-ತೊಡಿಗೆಗಳು ಒಣಕೆಯಂತೆಯೆ ಸರಳ ರೀತಿಯವು. ಪದ್ದು ಕೊಟ್ಟ ಚಹವನ್ನು ಶಾಲಿನಿಯ ಕೈಗಳು ಸ್ವೀಕರಿಸಿದುವು. ಕಣ್ಣುಗಳು ಮಾತ್ರ ಕಪ್ಪು-ಬಿಸಿಗಳನ್ನು ನೋಡುತ್ತಿದ್ದುವು. ಆದರೆ ಆಕೆಯ ಒಳಗಣ್ಣು ಅಲ್ಲಿ ನೆಲಸಿದಲಿಲ್ಲ. ಬೇರೆಲ್ಲಿಯೊ ಅಲೆದಾಡುತಿದ್ದಿತು. ಶನಿವಾರ ಸಂತೆಯಲ್ಲಿ ಬಸ್ಸಿನಿಂದ ಇಳಿದ ಕುರುಡ ಆಕೆಯ ಚಿತ್ತದಲ್ಲಿ ಮೂಡಿದ. ಆಕೆಯ ತುಟಿಗಳು ಚಹಾಕಪ್ಪಿನಂಚನ್ನು ಮುತ್ತಿಟ್ಟುವು. ಶಾಲೆಯ ಜಾಲಕರ ಮುಂದೆ ಒದರಿ ಬಿಣಗಿದ ಗಂಟಲು, ಚಹಾ ನೀರಿನಿಂದ ತನ್ನ ದಣಿವನ್ನು ಅರಸಿಕೊಂಡಿತು.

ಚಹಾಕಪ್ಪನ್ನು ಜರಿದು ಮಾಡಿದುದಾಯಿತು. ಕಣ್ಣುಗಳು ಗೋಡೆಯ ಮೇಲಿದ್ದ ಫೋಟೋದಕಡೆಗೆ ತಿರುಗಿದುವು. ಹದಿನಾಲ್ಕು ವರುಷಗಳ ಹಿಂದೆ ತೆಗೆದ ಫೋಟೋ ಅದು. ತಾಯ್ತಂದೆ ಮತ್ತು ಸೋದರರದು. ಅವರ ಮಧ್ಯದಲ್ಲಿಯ ಆ ಮನುಷ್ಯನು ಆಕೆಯ ನೋಟವನ್ನು ನೆಲೆದ. ಆತನ ಹೆಸರೇನು? ಜೆನ್ನಪ್ಪ! ಜೆನ್ನಪ್ಪ ವಾಸು ಮತ್ತು ಕಮಲಾಕಾಂತ ಇವರ ನಡುವೆ ನಿಂತಿದ್ದಾನೆ. 'ಜೆನ್ನಪ್ಪ ಜೆನ್ನಪ್ಪ' ಎಂದು ಆಕೆಯ ನಾಲಗೆಯು ಆ ಹೆಸರನ್ನು ಜಪಿಸಿತು. ಆಕೆಯ ನೈನವಿರೆದ್ದಿತು. ಹೃದಯವು ವಿವಿಧ ಭಾವಗಳ ರಂಗಮಂಟಪವಾಯಿತು. ಆ ಹಳೆಯ ದಿನಗಳು ಆಕೆಯ ಕಣ್ಣುಮುಂದೆ ನಿಂತುವು. ಕಾಲವುರುಪನೆಳೆದ ಜವನಿಕೆಯನ್ನು ಓಸರಿಸಿ, ಗತಜೀವನದ ಚಿತ್ರಗಳನ್ನು ನೋಡಿದಳಾಕೆ.

* * *

ಆಗ ಶಾಲಿನಿಯ ವಯಸ್ಸು ಹದಿಮೂರು; ಸೀರೆಗೂ ಲಂಗಕ್ಕೂ ನಡುವಿನ ಪ್ರಾಯವದು. ಕೆಲವೊಮ್ಮೆ ಲಂಗವನ್ನು ಹಾಕಿಕೊಂಡು, ಹಲವು ಸಲ ಸೀರೆಯನ್ನುಟ್ಟುಕೊಂಡು, ಕೈಗಳಲ್ಲಿ ಪುಸ್ತಕಗಳನ್ನು ಹಿಡಿದು ಆಕೆ ಶಾಲೆಗೆ ಓಡುತ್ತಿದ್ದಳು. ಜತೆಗೆ ವಾಸು, ಕಮಲಾಕರ, ದಿವ್ಯ, ಪಂಕಜ ಮೊದಲಾದವರು. ಓದು, ಆಟ-ವಿನೋದಗಳಲ್ಲಿ ಆ ಸೋದರ ಸೋದರಿಯರು ನಲಿವಿನ ನಂದನದಲ್ಲಿ ದಿನಗಳನ್ನು ದೂಡುತಿದ್ದರು.

ಆ ಚಿಲುವುದಿನಗಳಲ್ಲಿ ಒಮ್ಮೆಯಾಗಿದ್ದಿತು— ಹೊಸ ಮಾಸ್ತರರು ತಮ್ಮ ಮನೆಯಲ್ಲಿ ಕಾಲಿಟ್ಟದ್ದು. ಆ ದಿನ ಈಗಲೂ ಶಾಲಿನಿಯ ನೆನಪಿನಲ್ಲಿದೆ. ಅವರಿಗೆ ೨೬-೨೪ ವರುಷ ಪ್ರಾಯ; ತಾರುಣ್ಯವನ್ನು ಹೊರಸೂಸುತ್ತಿಹ ದೇಹ; ತುಂಬಿದ ಕೆನ್ನೆಗಳು; ಹೊಳೆವ ಕಂಗಳು; ಚಟುವಟಿಕೆಗಳನ್ನು ಸೂಚಿಸುತಿಹ ಕೈಕಾಲುಗಳು; ಅಗಲವಾದ ಎದೆ; ಪೆಲುನಗೆಯ ತಂಗಾಳಿಯನ್ನು ಹರಹುವ ಮೋರೆ. ಇವು ಅಂದು ಶಾಲಿನಿಯ ಚಿತ್ತದಲ್ಲಿ ನೆಲೆಗೊಂಡುವು.

ಮಾಸ್ತರರು ಕೆಲವು ದಿನಗಳ ಮಟ್ಟಿಗೆ ಉಳಿದುಕೊಳ್ಳಲು ತಮ್ಮಲ್ಲಿಗೆ ಬಂದಿದ್ದರು. ಅವರು ಊರಿಗೆ ಹೊಸಬರು. ಯಾರ ಪರಿಚಯವೂ ಇಲ್ಲ. ಕೆಲವು ದಿನಗಳ ಮಟ್ಟಿಗೆ ಬಂದು ವಸತಿಯನ್ನು ಅರಸುತಿದ್ದರು. ಅಂತಹ ಸಂದರ್ಭದಲ್ಲಿ ಶಾಲಿನಿಯ ತಂದೆ ವಕೀಲ ಸಿದ್ದಪ್ಪನವರು, ಮಾಸ್ತರ ಚೆನ್ನಪ್ಪನವರಿಗೆ ಗಂಟು ಬಿದ್ದರು. "ನಮ್ಮ ಮನೆಗೆ ಬಂದು ಬಿಡಿ," ಎಂದು ತಂದೆ ಮಾಸ್ತರರನ್ನು ಆಮಂತ್ರಿಸಿದರು.

ಮಾಸ್ತರರ ಆಗಮನದೊಡನೆಯೆ ಆ ಮನೆಯಲ್ಲಿ ಹೊಸ ಕಳೆ ಮೂಡಿತು. ಅವರ ನಗುಮಾತುಗಳು ಎಲ್ಲರಿಗೂ ಮೆಚ್ಚಿಕೆಯೆನಿಸಿದುವು. ವಾಸು, ಕಮಲ, ದಿವ್ಯ ಈ ಮೂವರೂ ಆಗಾಗ 'ಕತೆಯನ್ನು ಹೇಳಿ' ಎಂದು ಮಾಸ್ತರರನ್ನು ಪೀಡಿಸುತ್ತಿದ್ದರು. ಅವರ ನಿರ್ಬಂಧಕ್ಕೆ ಒಳಗಾದ ಮಾಸ್ತರರು ಸಂಜೆಹೊತ್ತು ಕತೆ ಹೇಳುತಿದ್ದರು. ಎಳೆಯರು ತುಟಿಗಳನ್ನು ಬಿಚ್ಚದೆ, ಸದ್ದಿಲ್ಲದೆ ಅವರ ಬಾಯಿಂದ ಹೊರಟ ನುಡಿಗಳನ್ನು ಮನದಿಂದ ಈಂಟುತಿದ್ದರು. ಅವರು ಹೇಳುತಿದ್ದ ಕತೆಯ ಬಗೆಯಲ್ಲಿ ನಾವೀನ್ಯವಿರುತಿದ್ದಿತು. ಅಲ್ಲಲ್ಲಿ ಹಾಸ್ಯದ ತಂಬೆಲರು ಬೀಸುತಿರುತಿದ್ದಿತು. ಎಳೆಯ ಎದೆಗಳಲ್ಲಿ ಹಿಗ್ಗಿನ ಹೂಗಳನ್ನು ಅರಳಿಸುವ ಕತೆಗಳವು. ಶಾಲಿನಿಯೂ ತಮ್ಮಂದಿರೊಡನೆ ಕತೆಗಳನ್ನು ಆಲಿಸುತಿದ್ದಳು.

ಮಾಸ್ತರರು ಕೊನೆಗೊಂದು ದಿನ ತಮ್ಮದೇ ಆದ ಒಂದು ವಸತಿಯನ್ನು ಹೂಡಲು ಹವಣಿದರು. ಎಳೆಯರೆಲ್ಲರನ್ನು ಅಗಲಿ ಅವರು ಹೋಗುತಿದ್ದರೇನೊ; ಆದರೆ ತಂದೆ ಅವರನ್ನು ಬಿಡಲಿಲ್ಲ. ಮಾಸ್ತರರು ಬೇರೊಂದು ಮನೆ ನೋಡುವ ಸುದ್ದಿಯನ್ನೆತ್ತಿದಾಗ ತಂದೆ ಯವರೆಂದರು: "ನಿಮಗೆ ಹೆಂಡತಿ-ಮಕ್ಕಳಿಲ್ಲ, ಒಬ್ಬಂಟಿಗರಾದ ನಿಮಗೆ ಮನೆಯೇಕೆ? ನಮ್ಮಲ್ಲಿಯೇ ಇದ್ದು ಬಿಡಿ, ಮಕ್ಕಳು ಮರಿಗೆ ಒಂದಿಷ್ಟು ಓದುಬರೆಹ ಹೇಳಿಕೊಡಿ; ನಮ್ಮ ಪೈಕಿ ನೀವೂ ಒಬ್ಬರು!"

ತಂದೆಯ ಒತ್ತಾಯಕ್ಕೆ ಮಾಸ್ತರರು ತಲೆಯನ್ನು ಬಾಗಿಸಲೆ ಬೇಕಾಯಿತು. ಈಗ ಕೇವಲ ಕತೆಹೇಳುವವರು ಮಾತ್ರವಲ್ಲದೆ ಪಾಠಗಳನ್ನು ಹೇಳುವವರೂ ಅವರಾದರು. ಅವರು ಪಾಠ ಹೇಳುವ ಬಗೆಯೇ ಅದೊಂದು ರೀತಿಯದು. ಇತರ ಉಪಾಧ್ಯಾಯರಂತೆ ಬೇಸರ ತರುವಂತಹದಲ್ಲ ಅವರ ಕ್ರಮ. ಅವರ ಪಾಠಗಳು, ನೂತನ ಉದಾಹರಣೆಗಳಿಂದ, ಹಾಸ್ಯದ ನರುಗಂಪಿನಿಂದ ಕೂಡಿದ್ದುವಾಗಿದ್ದುವು. ವಾಸು ಆಗಾಗ ಹೇಳುತಿದ್ದ:—"ಎಲ್ಲಾ ಉಪಾಧ್ಯಾಯರೂ ನಮ್ಮ ಮಾಸ್ತರರಂತೆಯೆ ಆಗಿದ್ದರೆ ಎಷ್ಟು ಸುಲಭದಲ್ಲಿ ನಾನು ಪಾಠಗಳನ್ನು ಕಲಿಯುತಿದ್ದೆ!"

ಕೇವಲ ಪಾಠ ಮತ್ತು ಕತೆಗಳಲ್ಲಿ ಮಾತ್ರವಲ್ಲ ಮಾಸ್ತರರದು ಪಳಗಿದ ಕೈ. ಸಂಜೆಹೊತ್ತು ಹೂದೋಟದಲ್ಲಿ ಮುಕ್ತಳೊಡನೆ ನಗೆ-ಮಾತಾಡುತ್ತಾ ಅವರು ಕಳೆ ಕೀಳುತಿದ್ದರು; ಗಿಡಗಳಿಗೆ ನೀರು ತಂದು ಎರೆಯುತಿದ್ದರು; ಪಾತಿಗಳನ್ನು ಅಗೆದು ಗೊಬ್ಬರ ಹಾಕುತಿದ್ದರು. ಮಾಸ್ತರರ ಈ ಗೈಮೆಯನ್ನು ಕಂಡು ತಂದೆ ಹಲವು ಸಲ ಹೇಳಿದುದುಂಟು: "ಇದೇನು ಮಾಸ್ತರ, ಕೈ ಮೈಗಳನ್ನು ಹೊಲಸುಮಾಡಿಕೊಳ್ಳುವ ಕೆಲಸ? ಆಳು ನಿಂಗನಿದ್ದಾನಲ್ಲ!"

"ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆ ನಿಮಗೆ ಗೊತ್ತಿಲ್ಲವೇ?" ಎಂದು ಮಾಸ್ತರರು ನಗುತ್ತಾ ಪೂರ್ಣಾಡಿಯುತಿದ್ದರು.

ಆಟಗಳಲ್ಲಿಯೂ ಮಾಸ್ತರರು ಹುಡುಗರೊಡನೆ ಬೆರೆಯುತಿದ್ದರು. ಲಗ್ಗೆ-ಚೆಂಡು, ಚಿನ್ನಿ-ಕೋಲಾಟಗಳು ಅವರಿಲ್ಲದೆ ನಡೆಯುವಂತಿಲ್ಲ. ಗೋಲಿಯಾಟಕ್ಕೂ ಸೇರಿ ಮಾಸ್ತರರು ತಮ್ಮ ಕೈ, ಬಟ್ಟೆ-ಬರೆಗಳನ್ನು ಹೊಲಸು ಮಾಡಿಕೊಳ್ಳುತಿದ್ದರು. ದೊಡ್ಡವರೆನಿಸಿಕೊಂಡವರು ಎಳೆಯರೊಡನೆ ಈ ರೀತಿ ಬೆರೆಯಬಲ್ಲರು— ನಲಿಯಬಲ್ಲರೆಂಬುದು ಶಾಲಿನಿಗೊಂದು ಆಶ್ಚರ್ಯ.

ಪಾಕಶಾಸ್ತ್ರದಲ್ಲಿಯೂ ತಮ್ಮದು ನುರಿತ ಕೈ ಎಂಬುದನ್ನು ಮಾಸ್ತರರು ತೋರಿಸಿಕೊಡುತ್ತಿದ್ದರೇನೋ; ಆದರೆ ಆ ಕುಟುಂಬವು ಅಂತಹ ಒಂದು ಸನ್ನಿವೇಶಕ್ಕೆ ಎಡೆಗೊಡಲಿಲ್ಲ.

ಹೊಸಬರು ಮನೆಗೆ ಬಂದಾಗ ಅವರ ಬಗ್ಗೆ ಗೌರವಾದರಗಳು ಹುಟ್ಟುವುದು ಸಹಜ. ಆದರೆ ಅವರು ಮನೆಯಲ್ಲಿಯೆ ನೆಲಸಿ ಕುಟುಂಬದವರಲ್ಲಿ ಒಬ್ಬರು ಎನಿಸಿಕೊಂಡಾಗ, ಹಿಂದಿನ ಆದರವು ಮಾಯವಾಗಿ ಅವರು ಸಾಮಾನ್ಯರಾಗಿ ಹೋಗುವರು. ಹಲವು ಸಲ ಅಂತಹರ ಬಗ್ಗೆ ಜುಗುಪ್ಸೆ ತಿರಸ್ಕಾರಗಳು ಜನಿಸುವುದೂ ಉಂಟು. ಆದರೆ ಮಾಸ್ತರರ ಸ್ಥಿತಿಯು ಇದಕ್ಕೆ ಪ್ರತಿಯಾಗಿತ್ತು. ದಿನಕಳೆದಂತೆ ಹುಡುಗರು ಅವರ ಒಗ್ಗೆ ಹೆಚ್ಚು ಆತ್ಮೀಯತೆಯನ್ನು ತೋರಿಸುತಿದ್ದರು. ಅವರಲ್ಲಿ ಗೌರವಾದರಗಳು ಬಳೆಯುತಿದ್ದುವು.

* * *

ವಾಸುಗೆ ವಿಷಮಜ್ವರಬಂತು. ಮೂರು ವಾರಗಳನಕ ಹಾಸಿಯನ್ನು ಬಿಟ್ಟು ಕದಲಲಿಲ್ಲ ಆತ. ವೈದ್ಯರು ಸಹ ಆತ ಬದುಕುವನೆಂಬ ಆಸೆಯನ್ನು ತೊರೆದಿದ್ದರು. ಆದರೆ ಮಾಸ್ತರರ ಆರೈಕೆಯು

ಹುಡುಗನ ಜೀವವನ್ನು ಉಳಿಸಿತು. ವಾಸು ಹಾಸಿಗೆ ಹಿಡಿದಿದ್ದಾಗ ಮಾಸ್ತರರು ರಾತ್ರಿ ಅವನ ಕೋಣೆಯನ್ನು ಬಿಟ್ಟು ಕದಲುತ್ತಿರಲಿಲ್ಲ. ರಾತ್ರಿಯೆಲ್ಲ ಅವರು ಎಚ್ಚರವಾಗಿದ್ದು, ಹುಡುಗನನ್ನು ನೋಡಿಕೊಳ್ಳುತ್ತಿದ್ದರು. ವೈದ್ಯರು ಕೊಟ್ಟ ಔಷಧಿಯನ್ನು ಕುಡಿಸುತ್ತಿದ್ದರು. ಬಾಯಾರಿಕೆಯಾದಾಗ ಕಿತ್ತಳೆಹಣ್ಣಿನ ರಸವನ್ನು ಕುಡಿಸುತ್ತಿದ್ದರು. ರೋಗಿಯನ್ನು ಎತ್ತಿ ಹಾಸಿಗೆಯನ್ನು ತಾವೇ ಸರಿಪಡಿಸುತ್ತಿದ್ದರು.

ಒಮ್ಮೆ ನಡು ಇರುಳು; ವಾಸುವಿನ ಸ್ಥಿತಿಯು ವಿಷಮಾವಸ್ಥೆಗೆ ತಲುಪಿತು. ಮಾಸ್ತರರೇ ವೈದ್ಯರಲ್ಲಿಗೆ ಓಡಿಹೋದರು; ವೈದ್ಯರನ್ನು ಕರೆತಂದರು ವೈದ್ಯರು ರೋಗಿಯ ದೇಹಸ್ಥಿತಿಯನ್ನು ಪರಿಶೋಧಿಸಿ ಔಷಧಿಯನ್ನು ಹೇಳಿದಾಗ, ಅದನ್ನು ತರಲು ಹೋದವರೂ ಮಾಸ್ತರರೇ. ರಾತ್ರಿ ವೈದ್ಯರಿತ್ತ ಮದ್ದನ್ನು ತಂದು ರೋಗಿಗೆ ಕುಡಿಸಿದರು. ಅವರು ರಾತ್ರಿ ರೆಪ್ಪೆಗಳನ್ನು ಒಂದುಗೂಡಿಸದೆ, ರೋಗಿಯ ಹಾಸಿಗೆಯ ಬಳಿಯಲ್ಲಿ ಕುಳಿತು ಉಪಚರಿಸಿದರು. ಬೆಳಗಿನ ಜೊತ್ತು ರೋಗಿಗೆ ಮೂತ್ರವಿಸರ್ಜನೆ ಮಾಡಬೇಕಾಗಿ ಬಂತು. ಆಗ ಮಾಸ್ತರರೇ ಹುಡುಗನನ್ನು ಹಾಸಿಗೆಯಿಂದೆತ್ತಿ ಬೋಗುಣಿಗೆ ಒಯ್ದರು; ಪುನಃ ಎತ್ತಿ ಹಾಸಿಗೆಯಲ್ಲಿ ಮಲಗಿಸಿದರು. ಬೋಗುಣಿಯಲ್ಲಿದ್ದ ಮೂತ್ರವನ್ನು ದೂರ ಚೆಲ್ಲಿ, ಅವರು ಪಾತ್ರೆಯನ್ನು ತೊಳೆದುಕೊಂಡು ಮರಳಿ ಕೋಣೆಗೆ ಬಂದಾಗ, ತಂದೆ ಕೋಣೆಯಲ್ಲಿದ್ದರು. ಅವರ ಕಣ್ಣುಗಳು ಮಾಸ್ತರರ ಕೈಯಲ್ಲಿದ್ದ ಬೋಗುಣಿಯ ಕಡೆಗೆ ಹರಿದುವು: "ಇದೇನು ಮಾಸ್ತರೆ?" ಎಂಬ ಪ್ರಶ್ನೆಯು ಹೊರಟಿತು ತಂದೆಯ ಬಾಯಿಂದ.

"ಏನೂ ಇಲ್ಲ!" ಎಂದರು ಮಾಸ್ತರರು

"ನೀವೇಕೆ ಈ ಕೀಳುಕೆಲಸಕ್ಕೆ ಕೈಹಾಕಿದಿರಿ? ಆಳು ನಿಂಗನನ್ನು ಕರೆದರೆ ಆಗುತ್ತಿರಲಿಲ್ಲವೇ?"

"ಗೈಮೆಯಲ್ಲಿ ಕೀಳು—ಮೇಲೆಂದಿದೆಯೇ?" ಮಾಸ್ತರರ ಮೊಗದಿಂದ ಮೆಲುನಗೆಯ ಅಲರ ಕಂಪು ಹೊರಸೂಸಿತು. "ನಿದ್ದೆಯಲ್ಲಿದ್ದ ಆಳನ್ನೇಕೆ ತೊಂದರೆಗೊಳಿಸಬೇಕು? ವಾಸುವನ್ನು ನನ್ನ ತಮ್ಮನೆಂದು ತಿಳಿದುಕೊಳ್ಳಿ; ಆಗ ನಾನು ಮಲ-ಮೂತ್ರಗಳನ್ನು ಬಾಚಿದುದರಲ್ಲಿ ದೋಷವೇನಿದೆ?"

ತಂದೆ ಮಾನ್ಯಡಿಯಲಿಲ್ಲ.

ಇರುಳು ನಿದ್ದೆಗೆಟ್ಟುದರಿಂದ ಮಾಸ್ತರರು ಬಳಲಿದ್ದರು. ಅವರು ಬಳಲಿಕೆಯಿಂದ ಶಾಲೆಯಲ್ಲಿ ಸರಿಯಾಗಿ ಪಾಠಹೇಳಲಾರರೆಂದು ಶಾಲಿನಿಯ ಎಣಿಕೆ. ಆದರೆ ಮಾಸ್ತರರು ತರಗತಿಯೊಳಗೆ ಕಾಲಿಟ್ಟೊಡನೆಯೆ, ತನ್ನ ಊಹೆಯು ತಪ್ಪೆಂದು ಆಕೆಗೆ ಅರಿವಾಯಿತು. ಎಂದಿನಂತೆ ಅವರ ಮೊಗವು ಸುಪ್ರಸನ್ನವಾಗಿತ್ತು. ನಿದ್ದೆಗೇಡಿನ ಯಾವ ಸುಳಿವೂ ಅಲ್ಲಿರಲಿಲ್ಲ. ಎಂದಿನಂತೆ ಉತ್ಸಾಹದಿಂದ ಅವರು ಪುಸ್ತಕವನ್ನು ನಿಚ್ಚಿದರು; ಅವರ ಕೊರಳುಲಿಯು ಕೋಣೆಯ ನಾಲ್ಕು ಗೋಡೆಗಳಲ್ಲಿ ಮಾರ್ದನಿಗೊಂಡಿತು. ಒಂದು ವಿಷಯವನ್ನು ತಿಳಿಸಲು ಹತ್ತಾರು ಉದಾಹರಣೆಗಳನ್ನು ಎಳೆದು ತಂದರು; ನಗುಮಾತುಗಳಿಂದ ವಿದ್ಯಾರ್ಥಿಗಳ ಬೇಸರಿಕೆಯನ್ನು ಕಳಿದರು; ತಮ್ಮೊಡನೆ ಬಳಲುರನ್ನೂ ವಿಚಾರದ ಹೊನಲಲ್ಲಿ ಮುಂದಕ್ಕೆ ಕರೆದೊಯ್ದರು.

ಅಂದು ಶಾಲಿನಿಗೆ ಅರಿವಾಯಿತು:—ಮಾಸ್ತರರ ಜೀವವ್ಯಥೆಯು ಬಳಲಿಕೆಗಳಿಗೆ ಬಗ್ಗದ ಚಿರೋತ್ಸಾಹದ ಬುಗ್ಗೆಯೆಂಬುದು. ಅವರ ಶರೀರದ ದಣಿವು ಮನಸ್ಸಿನ ಹುಮ್ಮಸವನ್ನು ಕುಗ್ಗಿಸದು.

ಹಾಸಿಗೆ ಹಿಡಿದ ವಾಸು ಮಾಸ್ತರರ ಆರೈಕೆಯಿಂದ ಜೀವರಿಸಿ ಹತ್ತಿದ. ಅವನ ಕಾಹಿಲೆ ಗುಣವಾಯಿತು. ಹಾಸಿಗೆಯನ್ನು ಬಿಟ್ಟು ಕದಲುವಷ್ಟು ಜೀವನವನ್ನು ಅವನ ಕಾಲುಗಳು ಪಡೆದುವು. ತಂದೆಗಾದ ಆನಂದವನ್ನು ಬಣ್ಣಿಸಲಳವಲ್ಲ. ಅವರು ಮಾಸ್ತರರ ಕೈ ಹಿಡಿದುಕೊಂಡು ನುಡಿದರು: "ಮಾಸ್ತರ್, ಹುಡುಗನ ಜೀವವನ್ನು ಉಳಿಸಿದವರು ನೀವು; ನಿಮ್ಮ ಈ ಮಾಳ್ಕೆಗೆ ಏನು ಕೊಟ್ಟರೂ ಕಡಿಮೆಯೇ ಸರಿ."

ತಂದೆಯ ಕಣ್ಣುಗಳಲ್ಲಿ ಕೃತಜ್ಞತೆಯ ಕಣಗಳು ತೇಲುತಿದ್ದುವು.

"ನನಗೊಬ್ಬ ತಮ್ಮನಿದ್ದು ಆತ ಕಾಹಿಲೆಯಿಂದ ಹಾಸಿಗೆ ಹಿಡಿದಿದ್ದರೆ—ಯಾವ ರೀತಿ ವರ್ತಿಸುತಿದ್ದೆನೋ,—ಹಾಗೆ ಮಾಡಿದೆನಿಷ್ಟೆ!" ಎಂದು ಮಾಸ್ತರರು ತಗ್ಗಿದ ದನಿಯಲ್ಲಿ ಹೇಳಿದರು.

ಮಾಸ್ತರರ ಈ ಮಾತುಗಳು ತಂದೆಯ ಕೊರಳಿಂದ ಹೊರಡಲಿದ್ದ ಹೊಗಳಿಕೆಯ ಹೊನಲನ್ನು ತಡೆಗಟ್ಟಿದುವು.

* * *

ವರುಷವೊಂದು ಉರುಳಿತು. ಶಾಲಿನಿ ಮೆಟ್ರಿಕ್ಯುಲೇಶನ್ ಪಾಸಾದಳು. ಆಕೆ ಮನೆಯಲ್ಲಿಯೆ ಉಳಿದಳು. ಇತರರು ಶಾಲೆಗೆ ಹೋಗುತ್ತಿದ್ದರು; ಮಾಸ್ತರರಿಂದ ಪಾಠಗಳನ್ನು ಹೇಳಿಸಿಕೊಳ್ಳುತ್ತಿದ್ದರು. ಶಾಲಿನಿ ಮನೆವಾರ್ತೆಯ ಮೊದಲ ಪಾಠಗಳನ್ನು ಕಲಿಯತೊಡಗಿದಳು.

ಹಲವು ದಿನಗಳಿಂದ ಮಾಸ್ತರರು ಬರೆವ ಕೆಲಸಕ್ಕೆ ಕೈ ಹಚ್ಚಿದ್ದರು; ಬಿಡುವುನೇಳೆಯನ್ನು ಅವರು ಒರೆವಣಿಗೆಯಲ್ಲಿ ವಿನಿಯೋಗಿಸುತ್ತಿದ್ದರು. ಅವರೇನು ಬರೆಯುತಿರುವರೆಂಬುದು ಶಾಲಿನಿಗೆ ತಿಳಿಯದು. ಮೊದಮೊದಲು ಶಾಲೆಯ ಪಾಠಗಳ ಟಿಪ್ಪಣಿಯನ್ನು ಅವರು ತಯಾರಿಸುತ್ತಲಿರುವರೆಂದು ಆಕೆ ಊಹಿಸಿದಳು. ಆದರೆ ಅವರ ಬರೆವಣಿಗೆಯು ಎಡೆಬಿಡದೆ ಮುಂದೆ ಹರಿಯತೊಡಗಿತು. ಏನೆಂದು ತಿಳಿಯಲು ಕುತೂಹಲ ಆಕೆಯ ಎದೆಯಲ್ಲಿ ಮೂಡಿತು. ಆದರೆ ಅವರನ್ನು ಪ್ರಶ್ನಿಸಲು ಆಕೆಗೆ ಮನಸ್ಸು ಬಾರದು. ಅವರು ಯಾವುದೋ ಒಂದು ಹೊಸ ಕಜ್ಜಕ್ಕೆ ಕೈ ಹಾಕಿದ್ದಾರೆಂದು ಆಕೆಗೆನಿಸಿತು.

ಒಂದು ದಿನ ಶಾಲಿನಿ ಮಾಸ್ತರರ ಕೋಣೆಯ ಕಡೆಗೆ ಬಂದಳು. ಮಾಸ್ತರರು ಶಾಲೆಯಿಂದ ಇನ್ನೂ ಬಂದಿರಲಿಲ್ಲ. ಕದವು ಅರ್ಧ ತೆರೆದಿತ್ತು. ಆಕೆಯ ಕಣ್ಣುಗಳು ಕೋಣೆಯೊಳಕ್ಕೆ ಹೊರಳಿದುವು. ಮೇಜಿನ ಮೇಲೆ ಕಾಗದಗಳ ಸಣ್ಣ ಗುಚ್ಚೆಯೊಂದಿದ್ದಿತು. ಶಾಲೆಗೆ

ಹೋಗುವ ಆತುರದಲ್ಲಿ ಅವರು ೪ ಹಾಳೆಗಳನ್ನು ಮೇಜಿನೊಳಗಿರಿಸಲು ಮರೆತಿದ್ದರು. ಮಾಸ್ತರರ ಬರೆಹಗಳನ್ನು ನೋಡಲು ಆಕೆಗೆ ಕುತೂಹಲ ಹುಟ್ಟಿತು. ಆಕೆ ಕೋಣೆಯೊಳಗೆ ಹೆಜ್ಜೆಗಳನ್ನಿರಿಸಿದಳು. ಮೇಜಿನ ಮೇಲಿನ ಹಾಳೆಗಳನ್ನು ತೆಗೆದುಕೊಂಡಳು. ಕಾಗದಗಳ ಮೇಲೆ ಮೂಡಿದ್ದ ಬರೆಹಗಳನ್ನು ಆಕೆಯ ಕಣ್ಣುಗಳು ನೋಡಿದುವು. ಆರೆಜಣದಲ್ಲಿ ಮಾಸ್ತರರ ಬರೆಹವೇನೆಂಬುದನ್ನು ಆಕೆ ತಿಳಿದಳು. ಕತೆ. ಮಾಸ್ತರರು ಕತೆ ಬರೆಯುತ್ತಿದ್ದಾರೆ!

ಬೇರೆ ಮನೆಗೆಲಸಗಳು ಆಕೆಯನ್ನು ಇದಿರು ನೋಡುತ್ತಿರಲಿಲ್ಲ. ಶಾಲೆಯಿಂದ ಮಾಸ್ತರರು ಮರಳಲು ಇನ್ನೂ ಬೇಳೆಯಿತ್ತು. ಅವರ ಬರೆಹವನ್ನು ಓದಿ ನೋಡಬೇಕೆಂದೆನಿಸಿತು ಶಾಲಿನಿಗೆ. ಹಾಳೆಗಳನ್ನು ಹಿಡಿದುಕೊಂಡು ಆಕೆ ತನ್ನ ಕೋಣೆಯೊಳಕ್ಕೆ ಹೋದಳು. ಮುಂಜದ ಮೇಲೆ ಹೊರಳಿ ಮಾಸ್ತರರ ಕತೆಯನ್ನು ಓದತೊಡಗಿದುದಾಯಿತು. ಕತೆ ಸೊಗಸಾಗಿತ್ತು. ಕತೆಯ ಪಾತ್ರಗಳು ಶಾಲಿನಿಯ ಚಿತ್ತದಲ್ಲಿ ಮೂಡಿದುವು. ಕಾಗದಗಳ ಮೇಲೆ ಮೂಡಿದ್ದ ಶಬ್ದಗಳು ಮಾಸ್ತರರ ವ್ಯಕ್ತಿತ್ವವನ್ನು ಆಕೆಗರುಹಿದುವು. ಅವಳ ಜೀವವು ತನ್ನ ರೆಕ್ಕೆಗಳನ್ನು ಆಗಲಿಸಿ, ಇದುವರೆಗೆ ನೋಡದಿಪ ಅವಿವಿತ ಭಾವಗಳ ಬಾಂದಳದಲ್ಲಿ ಹಾರಾಡಿತು.

ಮಾಸ್ತರರು ಬರುವ ಮುನ್ನ ಹಾಳೆಗಳನ್ನು ಒಪ್ಪುದ ಅವರ ಮೇಜಿನ ಮೇಲಿರಿಸಿದುದಾಯಿತು. ಐದು ಗಂಟೆಯಾಗಲು ಮಾಸ್ತರರ ನಗುಮೊಗದ ದರ್ಶನವಾಯಿತು ಆಕೆಗೆ. ಶಾಲಿನಿ ಚಹಾ-ತಿಂಡಿಗಳನ್ನು ತಂದಾಗ ಮಾಸ್ತರರು ಮೇಜಿನ ಮುಂದೆ ಕುಳಿತಿದ್ದರು. ಆದರೆ ಅವರ ಮುಂದೆ ಕಾಗದದ ಗುಡ್ಡೆ ಇರಲಿಲ್ಲ. ಅದು ಮೇಜಿನೊಳಗೆ ಮರೆಯಾಗಿತ್ತು. ಮಾಸ್ತರರ ಕೈಯು ಟ್ರೆಯಿಂದ ತಿಂಡಿಯನ್ನು ತೆಗೆದು ಬಾಯೊಳಗೆ ಸೇರಿಸಿತು. ಕಣ್ಣುಗಳು ಶಾಲಿನಿಯ ಮೊಗದಲ್ಲಿ ನೆಲಸಿದ್ದುವು. ತುಟಿಗಳ ಮೇಲೆ ಜಿರವರಜಿಯದ ಎಳನಗೆಯ ಮುಗುಳು ಮೂಡಿತ್ತು. ಗೋಡೆಯ ಪಕ್ಕದಲ್ಲಿ ನಿಂತು ಶಾಲಿನಿ ಮಾಸ್ತರರ ಜಪಾಪಾಸವನ್ನು ನಿರೀಕ್ಷಿಸುತ್ತಿದ್ದಳು.

"ನೀವು ಕತೆ ಬರೆಯುತ್ತೀರಲ್ಲವೇ ಮಾಸ್ತರ್?" ಶಾಲಿನಿಯ ಕೊರಳಿಂದ ಪ್ರಶ್ನೆ ಹೊರಟಿತು.

ಮಾಸ್ತರರು ಮುಂದಿದ್ದ ತಟ್ಟೆಯಿಂದ ತಮ್ಮ ಕಣ್ಣುಗಳನ್ನು ಮೇಲಕ್ಕೆತ್ತಿದರು. ಅವರ ಮೊಗವು ಕೆಂಪಡರಿತು. ಯಾವುದೋ ಒಂದು ಹಿರಿಯ ಅಪರಾಧವನ್ನು ಗೈದವರಂತೆ ಅವರು ಕುಗ್ಗಿದ ದನಿಯಲ್ಲಿ "ಛೇ! ಇಲ್ಲ!" ಎಂದರು

"ಯಾಕೆ ಸುಳ್ಳು ಹೇಳುತ್ತೀರಿ ಮಾಸ್ತರ್!" ಎಳನಗೆಯೊಡನೆ ಶಾಲಿನಿ ಎಂದಳು. "ನಿಮ್ಮ ಬರೆಹವನ್ನು ಮೇಜಿನ ಮೇಲಿಸಿ ಹೋಗಿದ್ದಿರಿ; ನಾನು ಅದನ್ನು ಓದಿ ನೋಡಿದೆ!"

"ಓದಿ ನೋಡಿದೆಯಾ?"

"ಹೂಂ, ಕತೆ ಚೆನ್ನಾಗಿದೆ ಮಾಸ್ತರ್; ಯಾ ಪತ್ರಿಕೆಗಾದರೂ ಒಂದು ಮಾಸಿಕಕ್ಕೆ ಕಳುಹಿಸಿ."

"ನೋಡುವಾ," ಎಂದರು ಮಾಸ್ತರರು.

ಮಾಸ್ತರರು ಒಪ್ಪದಿದ್ದರೂ ಶಾಲಿನಿ ಅವರ ಕತೆಯನ್ನು ನಕಲು ಮಾಡಿ ಯಾವುದೋ ಒಂದು ಮಾಸಿಕಕ್ಕೆ ಕಳುಹಿದಳು. ಅದು ಅಚ್ಚಾಗಿ ಬಂದಿತು. ಅಚ್ಚಾಗಿ ಬಂದ ಕತೆಯನ್ನು ಓದಲು ಮಾಸ್ತರರಿಗಿಂತಲೂ ಶಾಲಿನಿಗೇ ಅಸಕ್ತಿ ಹೆಚ್ಚು. ಅದನ್ನು ಆಕೆ ಕನಿಷ್ಟ ಪಕ್ಷ ನಾಲ್ಕು ಸರತಿ ಓದಿರಬಹುದು. ಏಕೆ ಮರಳಿ ಮರಳಿ ವಾಚಿಸಿದುವೆಂಬುದು ಅಂದು ಆಕೆಗೆ ತಿಳಿಯದು.

ಆದರೆ ಇಂದು! ಅಂದಿನದನ್ನು ನೆನೆಯುತ್ತಲೆ ಕುರ್ಚಿಯಲ್ಲಿ ಕುಳಿತಿದ್ದ ಶಾಲಿನಿಯ ಕಣ್ಣುಗಳಲ್ಲಿ ಹನಿಗಳು ತುಂಬಿದುವು.

ಮಾಸ್ತರರ ಲೇಖನಿಯಿಂದ ಇನ್ನೂ ನಾಲ್ಕಾರು ಕತೆಗಳು ಮೂಡಿದುವು. ಅವುಗಳನ್ನು ನಕಲು ಮಾಡಿ ಮಾಸಿಕಗಳಿಗೆ ಕಳುಹುವ ಪೊರೆಯನ್ನು ಶಾಲಿನಿ ಹೊತ್ತಳು.

* * *

ಯಾವುದೋ ಒಂದು ಶಕ್ತಿಯು ಶಾಲಿನಿಯನ್ನು ಮಾಸ್ತರರ ಎಡೆಗೆ ಒಯ್ಯುತ್ತಿದೆ. ಮಾಸ್ತರರ ಬರೆಹ-ಗೈಮೆಗಳಲ್ಲಿ ಮೊದಲಿಗಿಂತಲೂ ಅಸಕ್ತಿ ಹೆಚ್ಚಿದೆ. ಮಾಸ್ತರರು ಹೂದೋಟದಲ್ಲಿ ಕೆಲಸ ಮಾಡುತ್ತಿದ್ದರೆ, ನೀರೆರೆಯಲೆಂದು ಆಕೆ ತೋಟಕ್ಕೆ ಹೋಗುವಳು. ಅವರು ಎಳೆಯರೊಡನೆ ಗೋಲಿಯಾಟವಾಡುತ್ತಿದ್ದರೆ ಜಗಲಿಯ ಮೇಲೆ ಕುಳಿತು ಆಟವನ್ನು ನಿರೀಕ್ಷಿಸುವಳು. ಈಗ ಆಕೆ ಮಾಸ್ತರರೊಡನೆ ಹೆಚ್ಚು ಮಾತನಾಡಳು. ಆಕೆಯ ನಾಲಗೆಯ ಕೆಲಸವನ್ನು ಕಣ್ಣುಗಳು ನಿರ್ವಹಿಸುತ್ತಿದ್ದುವು. ಕಿವಿಗಳು ಮಾಸ್ತರರ ನುಡಿಗಳನ್ನು ಆಲಿಸುವುವು. ಅವರು ಆಕೆಯ ಕಡೆಗೆ ಕಣ್ಣುಗಳನ್ನು ಹೊರಳಿಸಿದರೆ, ಮೊಗವು ಕೆಂಪೇರುವುದು. ಕಣ್ಣುಗಳು ನೆಲದ ಮೇಲೆ ನೆಲಸುವುವು.

ಮಾಸ್ತರರು ಎಂದೂ ತಮ್ಮ ಆರಿವೆಗಳನ್ನು ಆಗಸನಿಗೆ ಕೊಟ್ಟವರಲ್ಲ. ಅವರು ತಾವೇ ಒಗೆಯುತ್ತಿದ್ದರು. ಭಾನುವಾರ ಮಧ್ಯಾಹ್ನ ಮನೆಗಿನ ಕೆಲಸವು ಅದೆಂದರೆ ತಪ್ಪಾಗದು. ಹುಡುಗರು "ಬಟ್ಟೆಗಳನ್ನು ಆಗಸನಿಗೆ ಹಾಕಬಾರದೇ ಮಾಸ್ತರ್?" ಎಂದು ಹೇಳುವುದುಂಟು.

"ನನ್ನ ತೋಳುಗಳಿಗೆ ವಾರಕ್ಕೊಮ್ಮೆಯಾದರೂ ಕೆಲಸ ಕೊಡಬೇಡವೇ?" ಎಂದು ಮಾಸ್ತರರ ಮಾರು ಬರುತ್ತಿದ್ದಿತು.

ಆದೊಂದು ಶನಿವಾರ! ಕಸಗುಡಿಸಲೋಸುಗ ಶಾಲಿನಿ ಮಾಸ್ತರರ ಕೋಣೆಗೆ ಹೋಗಿದ್ದಳು ಸ್ಟ್ಯಾಂಡಿನ ಮೇಲೆ ಅವರ ಕೊಳೆ ಆರಿವೆಗಳು ಬಿದ್ದಿದ್ದುವು. ಆ ಆರಿವೆಗಳನ್ನು ನೋಡಲು ಶಾಲಿನಿಯ ಚಿತ್ತದಲ್ಲಿ ಒಂದು ಆಲೋಚನೆ ಉದಿಸಿತು. ಆಕೆ ಆ ಆರಿವೆಗಳನ್ನು ತೆಗೆದುಕೊಂಡಳು. ಜುಬ್ಬಗಳಿಂದ ಬೆವರಿನ ನಾತವು ಆಕೆಯ ಮೂಗಿಗೆ ಹೊಡೆಯಿತು.

ಶಾಲಿನಿಯ ಕೈಗಳು ಮಾಸ್ತರರ ಆರಿವೆಗಳನ್ನು ಒಗೆದು ಪುನಿ ಮಾಡಿದುವು ಸಂಜೆಗೆ ಮಾಸ್ತರರು ಮನೆಗೆ ಬಂದಾಗ, ಮಡಿಸಿ

ಮುಡಿ ವಸ್ತ್ರಗಳು ಸ್ಯಾಟಿಂಡನ್ನು ಅಲಂಕರಿಸಿದ್ದುವು. ಶಾಲಿನಿ ನಿತ್ಯದಂತೆ ಚಪಾತಿಂಡಿಗಳನ್ನು ತಂದಾಗ, ಮಾಸ್ತರರ ಕಣ್ಣುಗಳು ಸೋಜಿಗದಿಂದ ಸ್ಯಾಟಿಂಡಿನ ಮೇಲಿನ ಶುಭ್ರವಸ್ತ್ರಗಳನ್ನು ನೋಡುತ್ತಿದ್ದುವು. ಶಾಲಿನಿಯನ್ನು ಕಾಣಲು ಅವರು "ಯಾರು ನನ್ನ ಬಟ್ಟೆಗಳನ್ನು ಒಗೆದವರು?" ಎಂದು ಪ್ರಶ್ನಿಸಿದರು.

"ಯಾಕೆ ಮಾಸ್ತರ್? ನಾನು!" ಮೇಜಿನ ಮೇಲೆ ತಿಂಡಿಯ ತಟ್ಟೆಯನ್ನಿರಿಸುತ್ತಿದ್ದ ಶಾಲಿನಿ ನುಡಿದಳು. ನಾಚಿಕೆಯಿಂದ ಆಕೆಯ ಕೆನ್ನೆಗಳು ಕೆಂಪಾದುವು.

"ಛೇ! ನನ್ನ ಅರಿವೆಗಳನ್ನು ನೀನು ಒಗೆಯುವುದೇ?"

"ಏಕಾಗ ಬಾರದು?" ಶಾಲಿನಿಯು ಕಾಲಪೆಟ್ಟಿಗೆಯ ನೆಲವನ್ನು ಬರೆಯುತ್ತಿದ್ದಿತು.

* * *

ತನ್ನಂತೆಯೆ ಮಾಸ್ತರರಲ್ಲಿಯೂ ಹಲವು ಮಾರ್ಪುಗಳುಂಟಾಗಿವೆಯೆಂದು ಶಾಲಿನಿ ಊಹಿಸಿದಳು. ಆಕೆಯು ನೋಟ ಅವರ ಕಡೆಗೆ ಹೊರಳುತ್ತಲೆ, ಅವರು ತನ್ನ ಮೊಗದಿಂದ ಕಣ್ಣುಗಳನ್ನು ಬೇರೆಡೆಗೆ ಹೊರಳಿಸುತ್ತಿದ್ದರು. ಆಗಾಗ ಹಣೆಯ ಮೇಲೆ ಚಿಂತೆಯ ಗೆರೆಗಳು ಮೂಡುತ್ತಿದ್ದುವು. ಕಣ್ಣುಗಳು ಹೆಚ್ಚು ಕಾಂತಿಯುಕ್ತವಾಗಿದ್ದುವು. ಹಲವು ಸಲ ಅವರ ಎದೆಯಿಂದ ನಿಟ್ಟುಸಿರು ಸೂಸುವುದನ್ನು ಶಾಲಿನಿ ಕಂಡಿದ್ದಳು. ಮೊದಲಿನಂತೆ ಶಾಲಿನಿಯು ಸಂಗಡ ಅವರು ಹೆಚ್ಚು ಮಾತಾಡುತಿರಲಿಲ್ಲ.

ಒಂದು ದಿನ ಸಂಜೆಯ ಸಮಯ. ಜಾನ್ಡೇವಿಯು ತನ್ನ ನಾವಿರ ಕಣ್ಣುಗಳನ್ನು ಅಗಲಿಸಿದ್ದಳು. ತಣ್ಣಗಿರಲು ಪೂರಣದಿ ಉದಿಸಿ ಪಾಲುಜೆಳಕನ್ನು ಚೆಲ್ಲುತ್ತಿದ್ದ. ತಂಗಾಳಿಯು ನೈದಿಲೆ ಅಡಿಗಳನ್ನು ಇರಿಸುತ್ತ ಮುಂದೆ ಸಾಗುತಿದ್ದಿತು. ಹುಡುಗರು ಜಲಚ್ಚಿತ್ರ ನೋಡಲು ಹೋಗಿದ್ದರು. ತಂದೆ ಕ್ಲಬ್ಬಿನಿಂದ ಇನ್ನೂ ಬಂದಿರಲಿಲ್ಲ. ಶಾಲಿನಿ ಮನೆಗೆಲಸಗಳನ್ನು ಮುಗಿಸಿ, ಮಾಸ್ತರರು ಬರೆದ ಹೊಸ ಕತೆಯನ್ನು ಕೇಳಲು ಅವರ ಕೋಣೆಗೆ ಬಂದಳು. ಅವರಿಗೆ ಎದುರಾಗಿ ಒಂದು ಕುರ್ಚಿಯ ಮೇಲೆ ಆಕೆ ಕುಳಿತಳು. ಮೇಜಿನ ಮೇಲೆ ದೀಪವು ಉರಿಯುತ್ತಿದ್ದಿತು; ಕೋಣೆಯನ್ನು ಮುತ್ತಲು ಪವಣಿಸುತಿರುವ ಕತ್ತಲೆಯನ್ನು ಹೊಡೆದು ಹಿಂದಕ್ಕಟ್ಟುತಿದ್ದಿತು. ಎದುರಿನಲ್ಲಿ ಮಾಸ್ತರರಿದ್ದರು; ಅವರ ಕೈಗಳು ಹಾಳೆಗಳನ್ನು ಹಿಡಿದಿದ್ದುವು. ಕಣ್ಣುಗಳು ಕಾಗದದ ಮೇಲಿನ ಬರೆಹವನ್ನು ನೋಡುತಿದ್ದುವು. ಅವರ ಕೊರಳಿಂದ ಇನಿನುಡಿಗಳು ಸೂಸುತಿದ್ದುವು, ಶಾಲಿನಿಯ ಎದೆಯನ್ನು ಸೇರುತಿದ್ದುವು.

ಮಾಸ್ತರರು ಕತೆಯನ್ನು ಓದಿ ಮುಗಿಸಿ ಹಾಳೆಗಳನ್ನು ಮೇಜಿನ ಮೇಲಿರಿಸಿದರು. ಅವರ ಕಣ್ಣುಗಳು ಅರೆಜಡ ಶಾಲಿನಿಯ ಮೊಗದಲ್ಲಿ ನೆಲಸಿದುವು. ಅನಂತರ ಒಂದು ನಿಟ್ಟುಸಿರನ್ನು ಬಿಟ್ಟು ಅವರು ಹೇಳಿದರು: "ಶಾಲಿನಿ, ನಿನ್ನಲ್ಲಿ ಒಂದು ಮಾತು ಬೇಳಬೇಕೆಂದಿರುವೆ!"

"ಏನು?" ಎಂದಳು ಶಾಲಿನಿ.

"ಬೇರೆಯೂ ತಿಳಿದುಕೊಳ್ಳುವುದು ಬೇಡ; ಆ ಸಂಗತಿ ನನಗರಿವಾಗಿ ಕೆಲವು ದಿನಗಳಾದುವು; ನೀನೇನೆಂದು ಭಾವಿಸುವೆಯೋ"

"ನಾನು ಆಲೋಚಿಸುವುದೇನು? ನೀವು ನಿಸ್ಸಂಕೋಚವಾಗಿ ಹೇಳಿ!"

"ನೋಡು ಶಾಲಿನಿ, ನನ್ನ ಎದೆಯು ನಿನ್ನನ್ನು ಪ್ರೀತಿಸುತ್ತಿದೆ. ನೀನೆನ್ನ ಬಾಳುವೆಯ ಬೆಳಕು. ನೀನು ನನ್ನ ಜೀವನದ ಜೊತೆಗಾತಿಯಾಗಲು ಒಪ್ಪುವುದಾದರೆ,-ಇಲ್ಲದಿದ್ದರೆ ನಾನೀ ಸ್ಥಳವನ್ನು ಬಿಡಬೇಕಾಗುವುದು!"

ಶಾಲಿನಿ ನುಡಿಯಲಿಲ್ಲ. ಎದೆಯು ರಕ್ತವೆಲ್ಲ ಆಕೆಯ ಮೊಗದ ಕಡೆಗೆ ಹರಿಯಿತು. ಕಣ್ಣುಗಳು ಹೊಳೆದವು. ತಲೆಯು ಬಾಗಿತು.

"ನೀನು ನನ್ನನ್ನು ಪ್ರೀತಿಸುವುದಾದರೆ—"

"ಹೂಂ"

ಮಾಸ್ತರರು ಶಾಲಿನಿಯ ಕೈಯನ್ನು ತೆಗೆದುಕೊಂಡರು. ಇನ್ನೊಂದು ಅರೆಕ್ಷಣದಲ್ಲಿ ಅವರೆದೆಯ ಬಲವು ಜುಂಬನಾಕೃತಿಯನ್ನು ತಳೆದು, ಶಾಲಿನಿಯ ಮುಂಗೈಯ ಮೇಲೆ ನೆಲಸಿತು.

* * *

ಅಂದು ತಂದೆ ಕ್ಲಬ್ಬಿನಿಂದ ಬಂದಾಗ ಬಹು ಸಂತೋಷದಲ್ಲಿ ಇದ್ದರು. ಮಾಸ್ತರರು ಕುರ್ಚಿಯೊಂದರ ಮೇಲೆ ಕುಳಿತು ಪೇಪರು ಓದುತಿದ್ದರು. ತಂದೆಯು ಕುರ್ಚಿಯೊಂದರ ಮೇಲೆ ಕುಳಿತು ಚುಟ್ಟಕ್ಕೆ ಬೆಂಕಿಹಚ್ಚಿದರು. ಅವರು ಹೊಗೆಬಿಡುತ್ತಾ ಹೇಳಿದರು: "ಮಾಸ್ತರ, ನಮ್ಮ ಶಾಲಿನಿಗೆ ಮದುವೆ ಮಾಡಬೇಕೆಂದಿರುವೆನು!"

"ಅಹುದು, ಯೋಗ್ಯವಿಚಾರ." ಮಾಸ್ತರರು ಪತ್ರಿಕೆಯಿಂದ ತಮ್ಮ ಕಣ್ಣುಗಳನ್ನು ಮೇಲಕ್ಕೆತ್ತಿದರು.

"ಈ ಬೇಸಗೆಯಲ್ಲಿಯೆ ಮಾಡಿಬಿಡಬೇಕೆಂದು ನನ್ನ ಆಲೋಚನೆ; ಎಲ್ಲಾ ಸಿದ್ಧತೆಗಳೂ ಆಗಿವೆ!" ಹೊಗೆಬಿಡುತ್ತಾ ನುಡಿದರು ತಂದೆ.

"ವರನನ್ನು ನೋಡಿದಿರಾ?"

"ಅನುರೂಪನಾದ ವರನೇದೊರೆತಿದ್ದಾನೆ."

"ಯಾರಾತ?" ಕುಗ್ಗಿದ ಸ್ವರದಲ್ಲಿ ಮಾಸ್ತರರು ಪ್ರಶ್ನಿಸಿದರು.

"ಆತನನ್ನು ಆರಸಬೇಕಾಗಿಯೆ ಬರಲಿಲ್ಲ. ಹುಡುಕುತಿದ್ದ ಮದ್ದಿನ ಬಳ್ಳಿ ಕಾಲಿಗೇ ತೊಡಕಿದಂತಾಯಿತು!"

"ಯಾರೆಂದು ನನಗೆ ತಿಳಿಯಲಿಲ್ಲ!" ಮಾಸ್ತರರು ಮೇಜಿನ ಮೇಲೆ ಉರಿಯುತಿದ್ದ ದೊಡ್ಡ ದೀಪವನ್ನು ನೋಡಿದರು.

"ಆತ ಯಾವಾಗಲೂ ನನ್ನ ಕಣ್ಣಮುಂದೆಯೆ ಇರುತ್ತಾನೆ."

ತಂದೆಯು ಮಾತಿನ ಹೊಲಬು ಗೊತ್ತಾಗದೆ ಅವರು ತಂದೆಯ ಮೊಗವನ್ನೇ ನೋಡಿದರು.

"ಬೀರಿನ್ನಾರೂ ಅಲ್ಲ ಮಾಸ್ತರ್," ತಂದೆ ನಗುತ್ತಾ ನುಡಿದರು! "ನಾನು ಆರಿಸಿದ ವರ ನೀವೇ. ಒಪ್ಪುತ್ತೀರೋ ಹೇಳಿ!"

ಮಾಸ್ತರರ ಕೊರಳ್ಳಿಂದಲೂ ನಗೆ ಹೊರಸೂಸಿತು. ಅದರ ಮಾರ್ದನಿ ಬಾಗಿಲ ಮರೆಯಿಂದ ಕೇಳಿಬಂತು.

* * *

ಅಂದು ರಾತ್ರಿ ಶಾಲಿನಿ ತನ್ನ ಕೋಣೆಯಲ್ಲಿ ಪವಡಿಸಿದ್ದಳು. ನಿದ್ದೆಯೂ ಬಂದಿತ್ತು. ಆದರೆ ಭಯಂಕರ ಕನಸು. ಯಾವುದೋ ಒಂದು ಕರಾಳ ವ್ಯಕ್ತಿಯು ತನ್ನ ಪಕ್ಕದಿಂದ ಮಾಸ್ತರರನ್ನು ಸೆಳೆದು ಕೊಂಡು ಹೋಗಲು ಯತ್ನಿಸುತಿದ್ದಿತು. ಆ ಭೀಮಕಾಯನ ಹಿಡಿತದಿಂದ ತಪ್ಪಿಸಿಕೊಳ್ಳಲಾಗದೆ ಮಾಸ್ತರರು ತನ್ನ ಕಡೆಗೆ ಕರುಣೆಯ ನೋಟವನ್ನು ಜೆಲ್ಲುತ್ತಿದ್ದರು. ಶಾಲಿನಿಗೆ ಭಯವಾಯಿತು; ಚೀರಿದಳು; ಕಂದೆರೆದು ನೋಡಿದಳು. ಎಂತಹ ಕೆಟ್ಟ ಕನಸು!

ಆಡರೆ ಕಣ್ಣುಗಳು ಉರಿದುವು. ಕೋಣೆತುಂಬಾ ಹೊಗೆ. ಶಾಲಿನಿ ಎದ್ದು ಬಾಗಿಲಬಳಿಗೆ ಹೋದಳು. ಹೊರಗಿನಿಂದ ಅಳಲು ಕೇಳಿಬರುತಿದ್ದಿತು. ಬಾಗಿಲನ್ನು ತೆರೆದಳು. ಹೊರಗೇನು? ಬೆಂಕಿಯು ಧಗಧಗನೆ ಉರಿಯುತಿದ್ದಿತು. ಬಾಗಿಲಲ್ಲಿ ಕಾದು ನಿಂತಿದ್ದ ಅಗ್ನಿದೇವನು ಕೋಣೆಯೊಳಕ್ಕೆ ನೆಗೆದನು....ಉಸಿರು ಕಟ್ಟಿತು....ನಿಲ್ಲಲಾಗಲಿಲ್ಲ....ಕೆಳಗೆ ಬಿದ್ದಳು....ಮುಂದೆ ಏನಾಯಿತೆಂಬುದು ಶಾಲಿನಿಗೆ ತಿಳಿಯದು.

ಮರಳಿ ಎಚ್ಚತ್ತಾಗ ಶಾಲಿನಿ ಮಂಚದಲ್ಲಿ ಮಲಗಿದ್ದಳು. ಮೈಯಲ್ಲಿ ಉರಿ. ತನಗೆ ಆಪರಿಚಿತವಾದ ಕೋಣೆ. ತಾನೆಲ್ಲಿರುವೆನೆಂಬುದು ಶಾಲಿನಿಗೆ ಅರಿಯದು. ತಲೆಯ ಪಕ್ಕದಲ್ಲಿ ವಾಸು ಕುಳಿತಿದ್ದ. ಬೀಸಣಿಕೆಯಿಂದ ಗಾಳಿ ಹಾಕುತಿದ್ದ: "ಎಲ್ಲಿದೇನೆ ವಾಸು?" ಎಂದಳಾಕೆ.

"ನೀನು ಜೆನ್ನಾಗಿದ್ದಿ; ಏನೂ ಭಯವಿಲ್ಲವೆಂದು ವೈದ್ಯರು ಹೇಳಿದಾರೆ ಆಕ್ಕಾ!"

"ನನಗೆ ಏನಾಗಿದೆ?" ಎಂದಳು ಶಾಲಿನಿ.

"ಇರುಳು ಮನೆಗೆ ಬೆಂಕಿಹಿಡಿಯಿತು. ಮನೆ ಮಂದಿಯನ್ನೂ ಸಾಮಾನುಗಳನ್ನೂ ಮಾಸ್ತರರೇ ಉಳಿಸಿದರು" ವಾಸು ಹೇಳಿದ. "ಆ ಕೊಂಡಲ ಗಡಿಬಿಡಿಗಳಲ್ಲಿ ನಿನ್ನ ನೆನಪೇ ಯಾರಿಗೂ ಬರಲಿಲ್ಲ. ನೀನು ಮನೆಯೊಳಗಿರುವಿ—ಎಂಬುದು ಕೊನೆಗೆ ತಿಳಿದುಬಂತು. ಉರಿವ ಬೆಂಕೆಯಲ್ಲಿ ಮಾಸ್ತರರು ನೆಗೆದರು; ನಿನ್ನನ್ನು ಉಳಿಸಿದರು."

"ಮಾಸ್ತರರೆಲ್ಲಿ? ಅವರಿಗೆ ಅವಾಯವಿಲ್ಲ ತಾನೆ?"

"ಅವರ ಮೈ-ಕೈಗಳು ಬೆಂದು ಹೋಗಿವೆ ಆಸ್ಪತ್ರೆಗೆ ಅವರನ್ನು ಸಾಗಿಸಿದಾರೆ."

ಶಾಲಿನಿ ಒಮ್ಮೆ ಚೀರಿದಳು. ಮೂರ್ಛೆಯ ಮಡಿಲನ್ನು ಅವಳ ಜೀವವು ಮರಳಿ ಆಶ್ರಯಿಸಿತು.

* * *

ಹತ್ತು ದಿನಗಳಲ್ಲಿ ಶಾಲಿನಿ ಎದ್ದು ನಡೆಯುವಂತಾದಳು. ಮಾಸ್ತರರು ಆಸ್ಪತ್ರೆಯಿಂದ ಬಂದಿರಲಿಲ್ಲ. ನಡೆಯಲು ಕಾಲುಗಳಿಗೆ ಬಲ ಬಂದೊಡನೆಯೆ ಶಾಲಿನಿ ಆಸ್ಪತ್ರೆಗೆ ಹೋದಳು. ಮಾಸ್ತರರು ಮಂಚದಲ್ಲಿ ಮಲಗಿದ್ದರು. ಮೈತುಂಬಾ ಪಟ್ಟಿಗಳು. ಕಣ್ಣುಗಳನ್ನೂ ಪಟ್ಟಿಗಳು ಮುಚ್ಚಿದ್ದುವು. ಹಾಸಿಗೆಯಿಂದ ಅವರು ಕದಲುವಂತಿಲ್ಲ. ಆಕೆಯ ಹೆಜ್ಜೆಗಳ ಸಪ್ಪಳನ್ನು ಕೇಳಿದೊಡನೆಯೆ ಅವರು "ಯಾರದು?" ಎಂದು ಕ್ಷೀಣ ಸ್ವರದಲ್ಲಿ ಕೇಳಿದರು.

"ನಾನು, ಶಾಲಿನಿ!"

"ಬೆಂಕೆಯ ಗಾಯ ವಾಸಿಯಾದುವು ತಾನೆ? ನೀನು ಹುಷಾರಾದೆಯಲ್ಲ; ಅದೇ ಸಂತೋಷ!"

"ನನ್ನನ್ನು ದೇವರು ನೋಡಿಕೊಳ್ಳುತಾನೆ; ಆ ಪಿಸನ ಬೇಡ!"

ಮಾಸ್ತರರ ತಲೆಯ ಹತ್ತಿರ ಕುಳಿತು ಶಾಲಿನಿ ಅರ್ಧ ತಾಸು ಕಂಬನಿಯ ಹೊನಲನ್ನು ಹರಿಸಿದಳು.

ಕಣ್ಣುಗಳಿಗೆ ಬೆಂಕಿ ಕೆಂಡಗಳು ಬಿದ್ದುದರಿಂದ, ಮಾಸ್ತರರ ಕಣ್ಣು ಕುರುಡಾಗುವುವೆಂದೂ, ಆವರು ಹಾಸಿಗೆಯಿಂದ ಕದಲಬೇಕಾದರೆ ಇನ್ನೂ ಒಂದು ತಿಂಗಳು ಬೇಕಾಗುವುದೆಂದೂ ಆಸ್ಪತ್ರೆಯ ವೈದ್ಯರು ತಿಳಿಸಿದರು. ತನ್ನ ಜೀವವನ್ನು ಉಳಿಸಲೋಸುಗ ಮಾಸ್ತರರು ಕಣ್ಣುಗಳನ್ನು ಕಳೆದುಕೊಂಡರು!



ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಒಂದು ತಿಂಗಳ ಅನಂತರ ಮಾಸ್ತರರು ಮನೆಗೆ ಬಂದರು. ಕಣ್ಣು ಕುರುಡು. ಮೋರೆಯಲ್ಲಿ ಸುಟ್ಟ ಕಲೆಗಳು ಮೂರು. ಅವರ ಸ್ಥಿತಿಯನ್ನು ನೆನೆದು ಶಾಲಿನಿ ಮರುಗಿದಳು; ಕಣ್ಣೀರು ಸುರಿಸಿದಳು. ಆ ಬೆಂಕಿಯಲ್ಲಿ ತಾನು ಬಿಂದು ಹೋಗಿದ್ದರೆ ಚೆನ್ನಾಗಿತ್ತೆಂದು ತನ್ನನ್ನೇ ಹಳಿದುಕೊಂಡಳು.

ಮಾಸ್ತರರು ಆಕೆಯನ್ನು ಸಮಾಧಾನಪಡಿಸಿದರು: "ಶಾಲಿ, ನನ್ನನ್ನು ಮರೆತುಬಿಡು. ನಾನು ಕುರುಡ....ಯಾವುದೂ....ನನ್ನಿಂದ ಸಾಗದು; ಹೊಸ ಬಾಳುವೆಯನ್ನು ನೀನು ಆರಂಭಿಸು...." ಮುಂದೆ ಮಾತಾಡಲು ಅವರಿಗೆ ದನಿ ಬರಲಿಲ್ಲ.

"ಇಲ್ಲ-ಇಲ್ಲ. ನೀವು ನನ್ನ ಕೈ ಬಿಡಬಾರದು. ಕುರುಡರಾದರೂ ನೀವು ನನ್ನ ಪಾಲಿನ ದೇವರು!"

"ಶಾಲಿ, ನಿನಗೆ ಅನುಭವವಿಲ್ಲ. ಮುಂದೆ ನಿನಗೆ ತೋರುವುದು, ಅದು ದೊಡ್ಡ ತಪ್ಪೆಂದು!"

* * *

ಒಂದು ದಿನ ಮಾಸ್ತರರು ತಮ್ಮ ಊರಿಗೆ ಹೊರಟರು ಜತೆಗೆ ತಂದೆ ಒಬ್ಬ ಆಳನ್ನು ಕಳುಹಿದರು. ಆವನು ಅವರನ್ನು ಅವರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟನು. ತಂದೆ ಮಾಸ್ತರರಿಗೆ ಎರಡು ಮೂರು ಕಾಗದ ಬರೆದರು. ಆದರೆ ಮಾರು ಬರಲಿಲ್ಲ. ಒಮ್ಮೆ ಐವತ್ತು ರೂಪಾಯಿಗಳನ್ನು ಮನಿಯಾರ್ಡರು ಮಾಡಿದರು. ಆದರೆ ಅದು ಮರಳಿ ಬಂದಿತು. ಅವರ ಊರಿಗೆ ತಂದೆ ಆಳು ಕಳುಹಿದಾಗ, ಮಾಸ್ತರರು ಊರಲ್ಲಿಲ್ಲವೆಂದು ತಿಳಿಯಿತು. ಅವರು ಎಲ್ಲಿ ಹೋದರೆಂಬುದು ಯಾರಿಗೂ ತಿಳಿಯದು.

ಕಾಣದ ಕೈ ಮಾಸ್ತರರನ್ನು ಆಕೆಯಿಂದ ಅಗಲಿಸಿತು. ತನ ಗೋಸುಗ ಮಾಸ್ತರರು ಹಿರಿಯ ತ್ಯಾಗವನ್ನು ಗೈದರೆಂದು ಶಾಲಿನಿಗೆ ಎನಿಸಿತು.

* * *

ಅನಂತರ ಮಾಸ್ತರರ ಮೊಗ ನೋಡಿದುದು ಇಂದು. ಅದೂ ಬಸ್ಸಿನಲ್ಲಿ; ಒಂದು ಮಾತಾಡಲೂ ಅವಕಾಶ ಸಿಗಲಿಲ್ಲ!

ಶಾಲಿನಿಯ ಕಣ್ಣುಗಳಲ್ಲಿ ಹನಿಗಳು ತುಂಬಿದುವು. ಸೀರೆಯ ಸೆರಗಿನಿಂದ ಕಣ್ಣುಗಳನ್ನು ಒರಸಿಕೊಂಡಳು. ಗೋಡೆಯಮೇಲಿನ ಫೋಟೋದ ಕಡೆಗೆ ಕಣ್ಣುಗಳು ಹೊರಳಿದುವು.

ಆದರೆ ಸಂಜೆಯಾಗಿತ್ತು....ಇರುಳು ಕವಿಯುತ್ತಿತ್ತು. ಬಾನಿನಲ್ಲಿ ಎಂದಿನಂತೆ ಚಿಕ್ಕೆಹಡಗುಗಳು ತೇಲತೊಡಗಿದ್ದುವು. "ಪದ್ದೂ ದೀಪ ಹಚ್ಚು!" ಎಂಬ ನುಡಿಗಳು ಶಾಲಿನಿಯ ಕೊರಳಿಂದ ಹೊರಟುವು.

# ನಿನ್ನ ನೆನಪು

ಶ್ರೀ. ತಿರುಮಲೇಶ, ಬಳ್ಳಾರಿ

*

೧

ಇರುಳು ಹಗಲು ನಿನ್ನ ನೆನಹು ಹೃದಯ ತುಂಬಿತು:
ಮರುಳುಗೊಳಿಸಿ ಎನ್ನ ಮನವ ಕುಣಿಸಿ ದಣಿಸಿತು;
ಕಣ್ಣನೀರ ಪರಿವೆಯಲ್ಲಿ ನಿನ್ನ ಮೊಗವ ನಿಲಿಸಿತು;
ನದಿಯ ದನಿಯ ಮಳಲಿನಲ್ಲಿ ನಿನ್ನ ಹೆಜ್ಜೆ ಮೂಡಿಸಿತು

೨

ಹಾಲನೆತ್ತಿ ಕುಡಿಯಲಲ್ಲಿ ನಿನ್ನ ನಗೆಯೆ ಕಂಡಿತು;
ಊಟವ ಬಟ್ಟಲಲ್ಲಿ ನಿನ್ನ ಮೊಗದ ಭಾವ ಹೊಳೆಯಿತು;
ಎಲ್ಲಿ ನೋಡಲಲ್ಲಿ ನಿನ್ನ ರೂಪ ಕಾಣತೊಡಗಿತು;
ಎಲ್ಲಿ ಹೋಗಲಲ್ಲಿ ನೀನೆ ಬೇಕೆ ಬೇಕೆನಿಸಿತು!

೩

ಗಾಳಿ ಮೆಲನೆ ಬೀಸುವಾಗ ನಿನ್ನ ಸೆರಗ ನಲಿಸಿತು;
ಗಿಳಿಗಳಾಡಿ ಓಡುವಲ್ಲಿ ನಿನ್ನ ನುಡಿಯ ತರಿಸಿತು;
ಎಂತು ಮುದ್ದು ಎಂತು ಚೆನ್ನು ನಿನ್ನ ನಗುವದು;
ಎಂತು ನುಣುಪು ಎಂತು ಹೊಳಪು ನಿನ್ನ ಕರುಳದು.

೪

ಎಂದು ನಿನ್ನ ಕಾಂಬೆನೆಂದು ಮನಸು ಮರುಗಿತು;
ಬಂದ ಜನುಮ ಕಳೆದರೊಳ್ಳಿತೆಂದು ಮನಕೆ ಬಂದಿತು;
ನಿನ್ನ ಸನಿಹಕಿಂತ ನಿನ್ನ ನೆನಹೆ ದೊಡ್ಡದೆನಿಸಿತು;
ನಿನ್ನ ನೆನಪು ಎನ್ನ ಮನಕೆ ಹರಿಸವನ್ನೆ ತಂದಿತು!

# ಪರಶಿವನ ಘನರೂಪ:

## ರುದ್ರ-ಮೋಹನ

ಶ್ರೀ. ಶಂ. ಬಾ. ಜೋಶಿ, ಧಾರವಾಡ

★

ಶಾಶ್ವತ ಸತಾತನ ಸತ್ಯದ ಒಂದೊಂದು ಅಂಗವನ್ನು ಒಂದೊಂದು ಸಂಕೇತದ ಪರಿಭಾಷೆಯಲ್ಲಿ ನಮ್ಮ ಪುರಾತನರು ಬಹಳ ಸೊಗಸಾದ ರೀತಿಯಲ್ಲಿ ಒಣ್ಣಿಸಿದ್ದಾರೆ. ಮಾತಿಗೆ ಸಂಪೂರ್ಣವಾಗಿ ಹಿಡಿದಿಡಲು ಅಸಾಧ್ಯವಾದ ಆ ಸತ್ತತ್ವವನ್ನು ವಿವರಿಸಲು ಈ ಬಗೆಯಾದ ಸಂಕೇತಗಳು ಅನಿವಾರ್ಯ. ಏಕೆಂದರೆ ಸಾವಿರ ಮಾತಿನಲ್ಲಿ ಹೇಳಲಿಕ್ಕಾಗದುದನ್ನು ಸಂಕೇತ (symbol) ದಿಂದ ಸೂಕ್ಷ್ಮವಾಗಿ ಸ್ವಲ್ಪದರಲ್ಲಿ ಸೂಚಿಸಲು ಸಾಧ್ಯವಾಗುತ್ತದೆ. 'ಕಿರಿದರೊಳು ಪಿರಿದರ್ಥಮಂ' ಹೇಳುವ ಶಕ್ತಿ ಇದರಲ್ಲಿದೆ. ಅವುದೇ ಶಾಸ್ತ್ರದ, ಅನುಭವನದ ಕೊನೆಯ ಮಾತುಗಳನ್ನು ಸಂಕೇತದಿಂದಲ್ಲದೆ ಬೇರೆ ಅಂದದಿಂದ ಹೇಳುವುದು ಸಾಧ್ಯವಿಲ್ಲ. ಅತ್ಯಂತಿಕ ಸತ್ಯವನ್ನು ಹೇಳುವಲ್ಲಿ ಶಬ್ದಗಳು ಸೋಲನ್ನು ಒಪ್ಪಿಕೊಳ್ಳುವುವು. ಅಲ್ಲಿ ಸಂಕೇತವೇ ಮುಂದೆ ಬರಬೇಕಾಗುತ್ತದೆ.

ಆದರೆ ಸಂಕೇತದಲ್ಲಿ ಈ ಅನುಕೂಲದೊಡನೆ ಒಂದು ಕೊರತೆಯೂ ಇದೆ. ಸಂಕೇತದ ಅರ್ಥವನ್ನು ಬಲ್ಲವರೆ ಬಲ್ಲರು. ಅದನ್ನು ಅರಿತವರ ಪರಂಪರೆಯು ಕಟ್ಟಾಗುತ್ತಲೇ ಆ ಸಂಕೇತವು ಅರ್ಥವಿಹೀನ—ನಿರರ್ಥಕ—ನಿರುಪಯುಕ್ತವಾಗುತ್ತದೆ. ಹಾಗಾಗ ಬಾರದೆಂದೇ ನಮ್ಮ ಹಿರಿಯರು ಆ ಸಾಂಕೇತಿಕ ಸೂತ್ರವನ್ನು ಅರಿತು ಕೊಳ್ಳುವುದಕ್ಕಾಗಿ, ಆಖಂಡ ಮನನ ನಿಧಿಧ್ಯಾಸಗಳ ಆವಶ್ಯಕತೆಯನ್ನು ಒತ್ತಿ ಒತ್ತಿಹೇಳಿದ್ದಾರೆ. ಆ ಸಾಂಕೇತಿಕ ಚಿಹ್ನ, ಚಿತ್ರ ಅಥವಾ ಮೂರ್ತಿಯನ್ನು ಎಡೆಬಿಡದೆ ಕಣ್ಣೆದುರು ಇರಿಸಿಕೊಂಡು ಧ್ಯಾನ-ಧಾರಣಾದಿ ಸಾಧನದ ಅನಿವಾರ್ಯತೆಯನ್ನು ಪ್ರತಿಪಾದಿಸಿದ್ದಾರೆ. ಆದರೆ ಅರ್ಥಪ್ರತೀತಿಯಾಗದೆ ನಡೆದ ನಾಮಸ್ಮರಣ, ಮಂತ್ರ ಅಥವಾ ಪೂಜೆಗಳೆಲ್ಲವೂ ವ್ಯರ್ಥ. ಇದಕ್ಕೆ ನಮ್ಮ ನಾಡಿನ ಇಂದಿನ ದೈನ್ಯಾವಸ್ಥೆಯೆ ಸಾಕ್ಷಿ. ಗೀತಾಪಾರಾಯಣ ಮಾಡುವಲ್ಲಿ ಧನ್ಯತೆಯನ್ನು ತಾಳುವ ಜನಾಂಗವು ನಮ್ಮದು. "ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಪರಾಣಿ; ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ" ಎಂಬುದಿಂದು ನಮ್ಮ ಒರಿ ಜಾದ್ಯಾತಾಗಿಲ್ಲವೆ? ಇದರಲ್ಲಿ ನಿಜವಾದ ನಂಬುಗೆಯಿದ್ದ ಜನಾಂಗವು ಹೇಡಿಯಂತೆ ಪರದಾಸ್ಯದಲ್ಲಿ ಹೊರಳಾಡುತ್ತಲಿದ್ದೀತೆ? ತಾನು ಪೊತ್ತುಕೊಂಡು ಒಯ್ಯುತ್ತಲಿರುವ ನುಡಿತ್ತು-ರತ್ನಗಳ ಪರಿಮಳ ದ್ರವ್ಯಗಳ ಜೆಲೆಯು ಅರಿವು ಅನುಭಾವವಿಲ್ಲದ ಪಶುವಿಗೆ ಅವು ಎಷ್ಟು ಅವೌಲಿಕವಾಗಿದ್ದರೂ ಅದರಿಂದೇನು ಲಾಭವಾಗಬೇಕಾಗಿದೆ?

ಅನಂತಸ್ವರೂಪ ಪರಮಾತ್ಮನು ಶೇಷಶಾಯಿಯೆ ಎಂಬುದರ ರಹಸ್ಯವು ತಿಳಿದರೆ ಸರಿ. ತಿಳಿಯದೆ ನಡೆವ, ನಡೆಯಿಸಿದ ಪೂಜೆಯಿಂದ ಮನಸಿನ ಅಲ್ಪಸ್ಸಲ್ಪ ಸಮಾಧಾನವೇನೋ—ಅನ್ಯಕಾರಣಗಳಿಗಾಗಿ ಆಗಬಹುದು. ಆದರೆ ನಿಜವಾದ ಮುಖ್ಯಲಾಭವು ದೂರವೆ ಉಳಿಯುವುದು. ನಿತ್ಯ ಧ್ಯಾನಪೂಜೆಗೆಂದು ನಮ್ಮವರು ಹಲವು ದೇವತಾಮೂರ್ತಿಗಳನ್ನು ಕಲ್ಪಿಸಿಕೊಂಡಿದ್ದಾರೆ. ಅವುಗಳ ಗೂಢಾರ್ಥವನ್ನು ತಿಳಿದುಕೊಳ್ಳಲು ಸಾಧ್ಯವಾದಷ್ಟೂ ವಿಚಾರ-ವಿಮರ್ಶೆಗಳು ಜೇರೆಜೇರೆ ದೃಷ್ಟಿಯಿಂದ ಆಗುವುದು ಅವಶ್ಯವಾಗಿದೆ; ಇದರಿಂದ ಅವುಗಳಲ್ಲಿ ಹೆಚ್ಚು ಸಮರ್ಪಕವೂ ಅನುಭವಗಮ್ಯವೂ ಆದುವು ಉಳಿದು, ವಿಕ್ಕುವ ಬಿದ್ದುಹೋಗುವುವು.

ಈಗ ರುದ್ರಶಿವನ ಚಿತ್ರವನ್ನೆ ನೋಡುವ. ವೇದದಲ್ಲಿ ಬಂದ 'ರುದ್ರ-ಶಿವ' ಮತ್ತು 'ವಿಷ್ಣು' ವಿನ ವರ್ಣನೆಗಳಲ್ಲಿ ಅವರ ಇಂದಿನ ಸ್ವರೂಪವನ್ನು ನಾವು ಕಾಣಲಾರೆವು ರುದ್ರಾಧ್ಯಾಯದಲ್ಲಿ ಬಂದ ವರ್ಣನೆಯನ್ನು ನೆನೆದರೆ, ಅಲ್ಲಿ ಎಲ್ಲಿಯೂ ಪಾರ್ವತೀದೇವಿಯ ಸುಳಿವಿಲ್ಲ. ಗಣಪತಿ-ಷಣ್ಮುಖರ ದರ್ಶನವಿಲ್ಲ. ರುದ್ರ, ವಿಷ್ಣುಗಳ ವಿಚಾರದಲ್ಲಿ ಅಲ್ಲಿ ಎಲ್ಲಿಯೊ ಬೀಜರೂಪದಿಂದ ಇರುವ ಕಲ್ಪನೆಯನ್ನು ಆಗಮಕಾರರೂ ಪುರಾಣಕಾರರೂ ಬೆಳಸಿಕೊಂಡಿರುವರೆಂದು ಹೆಚ್ಚಾದರೆ ಹೇಳಬಹುದು. ನಮಗಿಂದು ಲಭಿಸಿರುವ ಶಿವ, ವಿಷ್ಣುಗಳ ಮೂರ್ತಿಗಳನ್ನು ನಿರ್ಮಿಸಿದ ಶ್ರೇಯಸ್ಸು, ಕೇವಲ ಆಗಮಿಕರ—ಪೌರಾಣಿಕರ—ಪ್ರತಿಭೆಗೇ ಸಲ್ಲುವುದೆಂದರೆ ತಪ್ಪಲ್ಲ.

ನಟರಾಜ-ಶಿವನ ಚಿತ್ರದಲ್ಲಿ ಎಂತಹ ನಿತಾಂತ ರಮಣೀಯ ಸತ್ಯದರ್ಶನ! ಹಳೆಯ ಕೊಳೆಯನ್ನೆಲ್ಲ ತೊಳೆದು ನವಸೃಷ್ಟಿ ನಿರ್ಮಾಣಕ್ಕಾಗಿ ತಾಂಡವಲೀಲೆಯನ್ನು ನಡಿಸಿದ ಸತ್ಯಮೂರ್ತಿ ಅದು. ಎಣ್ಣೆಸೆಗಳಲ್ಲಿ ಅದರ ಕಾರ್ಯವು ನಡೆದುದು ಆ ಮೂರ್ತಿಯ ಜಾಹುಗಳು ಹರಡಿದ ಬಗೆಯಿಂದ ಸೂಚಿತವಾಗುತ್ತದೆ. ಒಂದು ಕೈಯು (ಸತ್ಯ) ಭಕ್ತರಿಗೆ ಅಭಯವನ್ನು ಹೇಳುತ್ತಲಿದೆ. ತನ್ನ (ಈ ವಿಶ್ವಸತ್ಯದ) ಆಡಿಯಲ್ಲಿ ಲೀನರಾಗಿರಲು ಇನ್ನೊಂದು ಕೈಯು ಸೂಚಿಸುತ್ತಲಿದೆ. ಒಂದು ಕೈಯಲ್ಲಿ ಸತ್ಯದ ಸ್ವರೂಪ ರುದ್ರವೂ ಅಹುದು, ಮೋಹನವೂ ಅಹುದು. ವೃಂದಾರಕರಿಗೆ ಅದು ಆನಂದದಾಯಿ; ದೈತ್ಯರಿಗೆ ಅದೇ ದುಃಖದಾಯಿ. ಇಂದಿನ ಸತ್ಯದ ನಿಜವಾದ ಉಪಾಸಕರಾದ ಮಹಾತ್ಮಾ ಗಾಂಧಿಯವರೂ. ಲೋಕಕ್ಕೆ ರುದ್ರನಾಗಿಯೂ ಮೋಹನನಾಗಿಯೂ ಕಂಡರೆ ಅದೇನೂ ಅಸ್ವಾಭಾವಿಕವಲ್ಲ!

★

ಡಮರು; ಇನ್ನೊಂದರಲ್ಲಿ ಅಗ್ನಿಪಾತ್ರ. ಈ ರುದ್ರ-ಶಿವನು ಕಾಲ್ಕೆಳಗೆ ಮೆಟ್ಟಿ 'ಅಪಸ್ಮಾರ' ಪುರುಷನನ್ನು ತೊತ್ತಳದುಳಿಯುತ್ತಲಿರುವನು. ತಲೆಡವಗೆಯನ್ನೊಂದು ಅಲಂಕಾರದಂತೆ ಧರಿಸಿದ್ದಾನೆ. ಇದೊಂದು ಶಿವನ ಅಂದದ ನಿಲವು.

ಇವನ ಇನ್ನೊಂದು ಅಂದ: ದಿಗಂಬರ ಅಥವಾ ಗಜಚರ್ಮಧಾರಿಯಾದ ಮೂರ್ತಿ; ಗಜಾಸುರಸಂಹಾರಿ; ಚಿತಾಭಸ್ಮಭೂಷಿತ; ಕಾಮಾರಿರೂಪ; ತ್ರಿನೇತ್ರನು; ಗಂಗಾಧರನು; ಅರ್ಧನಾರೀಶ್ವರ; ವೃಷಭವಾಹನ; ಪಶುಪತಿ; ಸ್ಥಾಣು .....ಪುಂ.

ಇವನ ಹೆಂಡತಿ ಗೌರಿ; ಸತಿ; ಅರ್ಧಾಂಗಿ....

'ಇದೇನು ವಿಚಿತ್ರ ರೂಪ; ವಿಕೃತ ಪ್ರಕೃತಿ?' ಎಂದು ಯಾರಾಗಲಿ ಬೆಗಡುಗೊಂಡು ಬಿವ್ವಾಗುವಂತಿದೆ ಈ ಕಲ್ಪನೆ. ಆದರೆ ಇದೂ ಸತ್'ಸ್ವರೂಪವೆಂಬಲ್ಲಿ ಸಂದೇಹವಿಲ್ಲ.

ಬಿಂದುವಿನ ಅನುಭವವು ಬಿಂದುಸ್ವರೂಪದಲ್ಲಿ ಆಗಲಾರದು. ಅದು ರೇಷೆಯಾಗಿ, ರೇಷೆಯು ಪಾತಳಿಯಾಗಿ, ಪಾತಳಿಯು ಒಂದು ಘನ (ವಸ್ತು)ವಾಗಿ ವಾಸ್ತವ ಸ್ವರೂಪವನ್ನು ತಾಳಿದಾಗಲೆ ಅದರ ಸತ್ಯತೆಯ ಮನವರಿಕೆಯಾಗಬಲ್ಲದು. ಅಲ್ಲಿಯ ವರೆಗೆ ಅದು ಕೇವಲ; ಭಾವಗಮ್ಯ. ನಮ್ಮ ದೇವಸ್ವರೂಪಗಳನ್ನು ಮನಗಾಣಲು ಅವುಗಳ ಅವತಾರವೊಂದೇ ಸಾಧನವು. ಇಲ್ಲವಾದರೆ ಅದು ಕೇವಲ ಸ್ಥಿತಿಯಲ್ಲಿ ಮಾತ್ರ ಮಿನುಗಿ ಮಾಯವಾಗುವುದು. ಒಳಗಣ್ಣಿಗೆ ಮಾತ್ರ ಕಾಣಬಲ್ಲದು.

ಅವತಾರಗಳಲ್ಲಿ ಮೂರು ಬಗೆಗಳು: ಆವೇಶ, ಅಂಶಾವತಾರ, ಪೂರ್ಣಾವತಾರ. ಅನ್ನಬ್ರಹ್ಮನನ್ನು ಬಿಂಬಿತ್ತಿದ ಜನಗಳೇ ಎಲ್ಲೆಡೆಗೂ ಹೆಚ್ಚಾಗಿದ್ದರೂ ಅಷ್ಟರಿಂದಲೆ ಮಾನವರಿಗೆ ಎಂದೂ ತೃಪ್ತಿಯಿಲ್ಲ. ಆದುದರಿಂದ ಅವರವರ ಮಟ್ಟದಂತೆ, ಬಲ-ಯೋಗ್ಯತೆಗಳಂತೆ ಪ್ರತಿಯೊಬ್ಬರೂ ಅನ್ನಲೋಕವನ್ನು ದಾಟಿ ಮುಂದಿನ ದಾರಿಯನ್ನು ತುಳಿಯುವ ಹಂಬಲವುಳ್ಳವರಾಗಿರುತ್ತಾರೆ. ಅನೇಕರಿಗೆ ತಮ್ಮ ಈ ಗೊತ್ತು-ಗುರಿಗಳ ಅರಿವು ಏನೊಂದು ಬಾಹ್ಯನಿಮಿತ್ತದಿಂದ ಅಗೀಗೊಮ್ಮೆ ಫಕ್ಕನೆ ಆಗಿ, ಆ ಕ್ಷಣದಲ್ಲಿ ಮೈತುಂಬಿದವರಂತೆ, ಗಾಳಿಹೊಕ್ಕವರಂತೆ ಅವರು ಆವೇಶವುಳ್ಳವರಾಗುವರು. ಆಗ ಅದ್ಭುತ ಕೆಲಸಗಳನ್ನು ನೆರವೇರಿಸಲು ಕಾರಣರಾಗುವರು. ಈ ಗಾಳಿಯು ಇಳಿದೊಡನೆ ಅವರು ಮತ್ತೆ ಮಣ್ಣು ಮುದ್ದೆ; ಅನ್ನದ ಕುಳು.

ಜೀವಶಕ್ತಿಯು ಎಷ್ಟೇ ದೊಡ್ಡದಿದ್ದರೂ ದೇಹದೌರ್ಬಲ್ಯವಿರುವ ಅಥವಾ ಪರಿಪುಷ್ಟ ದೇಹವಿದ್ದರೂ ಜೀವದ ಯೋಗ್ಯತೆಯೆ ಸಾಮಾನ್ಯವಿರುವ ವ್ಯಕ್ತಿಗಳು ಹಲವರು, ಯಾವುದೊಂದು ತತ್ತ್ವದ ನಿತ್ಯ ಅನುಸಂಧಾನದಿಂದ ಕೆಲವೊಂದು ಸಿದ್ಧಿಯನ್ನು ಪಡೆಯುತ್ತಾರೆ. ಇಂತಹವರಲ್ಲಿ ಆ ಘನತತ್ತ್ವದ ಒಂದರ್ಧ ಅಂಶವು ಮಾತ್ರ ಆವಿರ್ಭವಿಸುವುದರಿಂದ ಇದು ಅಂಶಾವತಾರ.

ಹುಟ್ಟಿನಿಂದಲೆ ಹಿರಿದಾದ ಅಂತಃಶಕ್ತಿಯುತರು ಅಲ್ಲಿ ಇಲ್ಲಿ ಆಗ ಈಗ ಕಾಣಿಸಿಕೊಳ್ಳುವರು. ಆದರೆ ಆ ಶಕ್ತಿಯನ್ನು ಸರಿಯಾದ ರೀತಿಯಿಂದ ವಿಕಾಸಗೊಳಿಸಿ, ಅದನ್ನು ಲೋಕಕಲ್ಯಾಣಕ್ಕಾಗಿಯೆ ವಿನಿಯೋಗಿಸುವ ದೃಢನಿಶ್ಚಯದ ಧೀರರು ತೀರ ವಿರಳ. ಆ ಶಕ್ತಿಯನ್ನು, ತಮ್ಮ ಪ್ರತಿಷ್ಠೆ-ಜಘ್ಯತೆಗಳನ್ನು ಹೆಚ್ಚಿಸಿಕೊಳ್ಳಲು — ಸ್ವಾರ್ಥ ಸಾಧಿಸಲು ಬಳಸುವ ನರಬುದ್ಧಿಯ ಧೂರ್ತರೆ ಬಹಳ. (೧) ಇಂತಹವರಲ್ಲಿ ಕೆಲರು, ತಮ್ಮ ಅಪೂರ್ವ ವ್ಯಕ್ತಿತ್ವ, ಶಕ್ತಿಗಳಿಂದ ಲೋಕದ ನರಗುರಿಗಳನ್ನು ಮಬ್ಬುಗೊಳಿಸಿ, ಅವರಿಂದ ಹಣ ಕಿತ್ತುಕೊಳ್ಳುವವರು; (೨) ಕೆಲರು ಧರ್ಮ-ದೇಶ-ಸಾಹಿತ್ಯಗಳ ಹೆಸರಿನಲ್ಲಿ ಕೈಜಳಕ, ಬಾಯ್ಜಳಕ ನಡಸಿ ಕೇವಲ ಕೀರ್ತಿಲಂಪಟರಾಗಿ ಗಾಳಿಬಂದಂತೆ ಹೊರಳುತ್ತ ಹಾರಾಡುವರು; ಆಗಿನ ಕಾಲಕ್ಕಂತೂ ಹೆಸರು ಮಾಡಿಕೊಳ್ಳುವರು. ಮೇಲಣ ಎರಡು ವರ್ಗಗಳಲ್ಲಿ ಮೊದಲಿನವರಿಗಿಂತಲೂ ಎರಡನೆಯವರು ಉತ್ತಮರು. ಇವರಿರ್ವರಲ್ಲಿ ಅನೇಕರು ಸಜ್ಜನರೂ ಇಲ್ಲವೆಂತಲ್ಲ. ಸುರಾಸುರರು ಧಾರಣ ಮಾಡಲು ತಕ್ಕುವಾದ ದೇಹಗಳು ಇವೇ.

ಯಾವುದೊಂದು ಉಚ್ಚ, ಶಾಶ್ವತ ತತ್ತ್ವದ ಆರಾಧನೆಯೆ ಮುಖ್ಯವೆಂದು ಬಗೆದು ಭಾವಿಸಿ, ಆ ತತ್ತ್ವದ ಸ್ಥಿರವಾದ ಭೂಮಿಕೆಯ ಮೇಲೆ ದೃಢವಾಗಿ ನಿಂತು, (ನಡುವೆ ಯಾವ ಧನ-ಮಾನಗಳ ಮೋಹಕ್ಕೂ ಬಲಿ ಬೀಳದೆ) ತಮ್ಮ ಜೀವನವನ್ನು ಆ ತತ್ತ್ವಾನುಸಂಧಾನದಿಂದ ಅಡಿಗಡಿಗೂ ಮಾರ್ಪಡಿಸಿಕೊಳ್ಳುತ್ತ, ತನ್ನ ಹಾಗೂ ತನ್ನ ಸುತ್ತಲಿನವರ ಬಾಳನ್ನು ಉಜ್ವಲಗೊಳಿಸುವವನೇ ಕಾರಣಪುರುಷನು; ಅವತಾರಿಯು; ಇವನು ಆ ಯುಗಪುರುಷನೂ ಆಗಬಹುದು. ಇವರಲ್ಲಿ ಹಿರಿದಾದವರೇ ಪೂರ್ಣಾವತಾರಗಳು. ಇಂತಹವರಲ್ಲಿ ಆ ಒಂದು ಮಹಾತತ್ತ್ವವು ಹೆಚ್ಚು ಪೂರ್ಣಾಂಶದಿಂದ ತೊಳಗಿ ಬೆಳಗುತ್ತಿರುತ್ತದೆ. ಯಾವುದೊಂದು ಅವ್ಯಕ್ತ ಮಹಾತತ್ತ್ವವು ಒಂದು ವ್ಯಕ್ತಿಯನ್ನಾಶ್ರಯಿಸಿ ಭೂಲೋಕದಲ್ಲಿ ಕಾಣಿಸಿಕೊಳ್ಳುವುದು—ಆ ತತ್ತ್ವವು ಇಳಿದು ಬರುವುದು—ಇದುವೆ ಅವತಾರವೆಂಬುದಕ್ಕೆ ಅರ್ಥ. ತತ್ತ್ವವು ಅಯೋನಿಸಂಭವ; ಅದು ಆವಿರ್ಭವಿಸಿದ ಮಾನವ ಶರೀರ ಎಂದೂ ಯೋನಿಸಂಭವವೆ. ತತ್ತ್ವರೂಪಿಯಾದ ವಿಯದ್-ಗಂಗಾವತರಣವಿದು. ಉಗ್ರ ತಪಸ್ಸು, 'ಭಗೀರಥ' ಪ್ರಯತ್ನಗಳಿಲ್ಲದೆ ಈ ತತ್ತ್ವಗಂಗೆಯನ್ನು ಒಲಿಸಿಕೊಂಡು ಭೂಲೋಕಕ್ಕೆ ತರುವುದು ಸಾಧ್ಯವಿಲ್ಲ. ಆ ಯಾವನೊಬ್ಬ ಮಹಾತ್ಮನ ಪುಣ್ಯದಿಂದ ನೆಲಕ್ಕಿಳಿದು ಬಂದ ಆ ಗಂಗೆಯು, ಅದರಲ್ಲಿ ಮಿಂದ ಆ ಕಾಲದವರನ್ನು ಪಾವನಮಾಡುವಳು, ಉದ್ಧರಿಸುವಳು, ಎಂದರೆ ಮೇಲಕ್ಕೆತ್ತುವಳು. ಆದರೆ ಈ ಗಂಗೆ ಮುಂದೆ ನಾಲ್ಕು ಹೆಜ್ಜೆ ಹೋಗುವಷ್ಟರಲ್ಲಿ (ಆ ಪುಣ್ಯಪುರುಷನೊಂದಿಗೇ) ಮತ್ತೆ ಅದೃಶ್ಯಳಾಗುವಳು! ಮುಂದಿನ ಕಾಲದಲ್ಲಿ ಜನಗಳೇನೊ ಹಳೆಯದನ್ನು ನೆನೆದು ಇಲ್ಲಿ ಆ ಗಂಗೆ ಹರಿದಿದ್ದಳೆಂದು ಆ ಎಡೆಯಲ್ಲಿ ಹೊರಳಾಡಿ ತಾವು ಧನ್ಯರಾದೆವೆಂದು ಭ್ರಮಿಸುವುದುಂಟು. ಆದರೆ ಅಲ್ಲಿಯ ಜೀವನಗಂಗೆಯು ಬತ್ತಿರುವುದರಿಂದ ಆ ಬಳಿಕಿನ ಜನಜಂಗುಳಿಯು ಆ ಬರುದೊರೆಯ ಮಳಲಲ್ಲಿ ಹೊರಳಾಡಿ, ಏಂದೆವೆಂದು ಮುಖ ಚಿನಲ್ಲಿರುವುದನ್ನು ಕಂಡು, ಕಾಲಪುರುಷನು ನಗುತ್ತಿರುತ್ತಾನೆ!

* * *

ಪ್ರಸ್ತುತ, ಮಹಾತ್ಮಾ ಮೋಹನದಾಸ ಗಾಂಧಿಯವರ ಜೀವನವನ್ನು ನಿಡಿದಾಗಿ ನೋಡುವಲ್ಲ, ಮೇಲಣ ಮಾತುಗಳು ನನ್ನ ಮಟ್ಟಿಗಂತೂ ಅನುಭವಕ್ಕೆ ಬಂದಿವೆ. ಪುರಾಣಿಕರ ರುದ್ರ-ಶಿವನ ಸಾಂಕೇತಿಕ ಪರಿಭಾಷೆಯ ಅರ್ಥಸ್ಪಷ್ಟೀಕರಣಕ್ಕೆ ಮಹಾತ್ಮಾಜಿಯವರ ಚರಿತೆಯಷ್ಟು ಸಮರ್ಪಕವಾದ ಬೇರೊಂದು ಐತಿಹಾಸಿಕ ದೃಷ್ಟಾಂತವು ದೊರೆಯುವುದು ದುರ್ಲಭ. ಪುರಾತನರ ಪರಿಭಾಷೆಯಲ್ಲಿ ಹೇಳುವುದಾದರೆ ಶ್ರೀಮೋಹನದಾಸರು ರುದ್ರ-ಶಿವನ ಅಪರಾವತಾರವೆಂಬಲ್ಲಿ ಸಂದೇಹವೆ ಇಲ್ಲ. ಈ 'ರುದ್ರ-ಮೋಹನನ' ಸಾಕ್ಷಾತ್ಕಾರದಿಂದ, ಹಿಂದೆ ನಮ್ಮ ನಾಡಿಗರು ಶ್ರೀಅಲ್ಲಮ ಪ್ರಭುವಿಗೂ ಶಿವನ ಅವತಾರವೆಂದು ಹೇಳಿದುದು ಏಕೆ ಸರಿ—ಎಂಬ ಮಾತೂ ನಿಚ್ಚಳವಾಗಿ ಗೊತ್ತಾಗುತ್ತದೆ. ಇನ್ನು ಈ ಅವತಾರವನ್ನು ಸದ್ಯಕ್ಕೆ ಮೂರು ಭಂಗಿಗಳಲ್ಲಿ ಅರಿತುಕೊಳ್ಳಲು ಪಡಣಿಸುವ.

೧. **ಗಂಗಾವತರಣ :** ಇದರ ಸಾಧಕರು ಹಲವರಿರಬಹುದು. ಇದ್ದಾರೆ. ಆದರೆ ಸಿದ್ಧಿಯನ್ನು ಪಡೆದ ಭಗೀರಥರು ಸ್ವಲ್ಪ ಜನ. ಮಹಾತ್ಮಾಜಿಯವರು ಸತ್ಯ-ಅಹಿಂಸೆಗಳ ದಿವ್ಯಲೋಕದ ತತ್ತ್ವ-ಗಂಗೆಯನ್ನು ಭೂಮಿಗೆ ತರುವುದಕ್ಕಾಗಿ ಮಾಡಿರುವ ಉಗ್ರ ತಪಸ್ಸನ್ನು ಕಂಡು ಲೋಕವೇ ಬೆರಗಾಗಿದೆ. ಆ ವಿಯದ್‌ಗಂಗೆ ಪೂರ್ಣ ಸ್ವರೂಪದಲ್ಲಿ ಭೂಮಿಗೆ ಇಳಿಯುವುದು—ಇಳಿದರೂ ಭೂಮಿ ಅದನ್ನು ಧರಿಸುವುದು ಅಸಾಧ್ಯ. ಮಹಾತ್ಮಾಜಿಯವರು ನಡುವೆ ಅದಕ್ಕೆ ತಲೆಗೊಟ್ಟು ನಿಂತಿರುವರು. ಅವರಿಗೂ ಕೆಲಬಾರಿ ಆ ಗಂಗೆಯ ಭಾರ ಅಸಹನೀಯವೆನಿಸದೆ ಇಲ್ಲ. ಆ ಗಂಗೆಯನ್ನು ಮೊದಲು ತಮ್ಮ ತಲೆಯಲ್ಲಿ ಸಾಧ್ಯವಾದಷ್ಟು ಧರಿಸಿ, ಬಳಿಕ ಅದನ್ನು ಲೋಕದಲ್ಲಿ ಕೆಲವೊಂದು ಅಂಶದಲ್ಲಿ ಹರಿಬಿಡುವರು. ಆದರೆ ಅಷ್ಟು ಭಾಗದ ವೇಗದಿಂದಲೂ ನೆಲ ನಡುಗುವುದು. ಹಾಗೆ ಹೊರಟ ಈ ಗಂಗೆ ನಡುನಡುವೆ ಕೆಲಕಾಲ ಕಾಣಬಾಗುವಳು. ಆಗ ಮತ್ತೆ ತಪಸ್ಸು; ಘೋರ ಉಪವಾಸ; ಪ್ರಾರ್ಥನೆ; ಇವುಗಳ ಬಲದಿಂದ ಆ ಲೋಕಾವನೆ ಮತ್ತೆ ಮೂಡಿ ಮೃತಭಾರತಕ್ಕೆ ಅಮೃತಸೇಚನೆಯುದ್ದನ್ನು ಕಾಣುತ್ತೇವೆ. ಇಂತಿದು ರುದ್ರ-ಮೋಹನನ ಗಂಗಾವತರಣದ ಅಂಶ.

(೨) **ನಟರಾಜ :** ಲೋಕದ ನಡೆ-ನುಡಿ 'ಅಪಸ್ಮಾರ ಪುರುಷ'ನಂತೆ ಇದಾಗ, ರುದ್ರಶಿವನ ಈ ಲೀಲೆಯು ಅನಿವಾರ್ಯಕತೆಯುಂಟಾಗುತ್ತದೆ. ಅಪಸ್ಮಾರ ಎಂದರೆ ಮಲಬದ್ಧರೋಗ. ಮಲಬದ್ಧರೋಗಿಗೆ ಆರಿವಿನ ಇರವು ಸಾಧ್ಯವಿಲ್ಲ. ಕೆಲಹೊತ್ತು ಎಚ್ಚರವಿದೆಯೆಂಬುವಷ್ಟರಲ್ಲಿ ಥಕ್ಕನೆ ಅರಿವುಗೇಡಿಯಾಗಿ ಬರಲುವನು. ಇವನ ನಡೆನುಡಿಗಳಲ್ಲಿ ತಾಳ-ಮೇಳ ತಪ್ಪುವುದು. ಈ ಒಗೆಯಾದಲ್ಲಿ ಲೋಕದ ಸ್ಥಿತಿಯು ಕೆಡುವುದು. ಅದನ್ನು ಪರಿಪಡಿಸಲಕ್ಕೆ ಈ ಅಪಸ್ಮಾರ ಪುರುಷನನ್ನು ತಿದ್ದುವುದಕ್ಕಾಗಿ ಶಿವನು ತಾಲಿಬದ್ಧವಾದ ತಾಂಡವ ನೃತ್ಯವನ್ನಾರಂಭಿಸುವನು. ಶಿವನ ಕೈಯಲ್ಲಿರುವ ಅಗ್ನಿಕುಂಡವು ಲೋಕವನ್ನು ಸುಡುವುದಕ್ಕಲ್ಲ; ಅದನ್ನು ಪರಿಶುದ್ಧಗೊಳಿಸಿ ಪೂರ್ಪಡಿಸುವುದಕ್ಕೆಂದು ಆಗಮಗಳಲ್ಲಿ ವರ್ಣನೆಯಿದೆ.

ಶ್ರೀ ಗಾಂಧಿಜಿಯವರ ಈ ನಿಲವು ನಿತಾಂತ ರಮಣೀಯವಾಗಿದೆ. ಅವರು ನಮ್ಮ ನಾಡಿನಲ್ಲಿಯೆ ಏಕೆ, ಈ ಭೂಲೋಕದಲ್ಲಿಯೆ ನಡೆದಿರುವ ಬೇ-ತಾಳದ ಪಿಡುಗನ್ನು ಹೊಡೆದೋಡಿಸಿ, ಲೋಕವನ್ನು ಸುಸಂಬದ್ಧವಾಗಿ, ತಾಳ-ಮೇಳದಿಂದ ಒಡಗೂಡಿಸಿ, ಎಲ್ಲರೂ ಒಬ್ಬರೊಬ್ಬರೊಡನೆ ಕಲೆತು, ಕೆಲೆದು ಸುಖಿಗಳಾಗಲೆಂದು ಸತ್ಯಾಗ್ರಹದ ಲೀಲೆಯನ್ನು ನಡೆಯಿಸಿದ್ದಾರೆ. ಕೈಯಲ್ಲಿ ಅವರು ಹಿಡಿದಿರುವ ಅಹಿಂಸೆಯ ಅಗ್ನಿಕುಂಡದಿಂದ ಲೋಕವನ್ನೆ ಮಾರ್ಪಡಿಸಬೇಕೆಂಬುದು ಅವರ ಹಂಬಲ. 'ಹರಿಜನ' (ಅಥವಾ 'ಯಂಗ್ ಇಂಡಿಯಾ') ಪತ್ರಿಕೆಯು, ಲೋಕಕ್ಕೆ 'ನವಜೀವನ'ದ ಅಗಮನದ ಬಗೆಯನ್ನು ಸಾರುತ್ತಿರುವ ರುದ್ರ-ಮೋಹನನ ಡಮರುವಾದ್ಯವು. ಈ ವಾದ್ಯದ ನಿನಾದವು ದಿಕ್ತಟಗಳೆಲ್ಲೆಲ್ಲ ಮೊಳಗಿದೆಯೆಂಬುದು ಅಕ್ಷರಶಃ ಸತ್ಯ. ಈ ರುದ್ರ-ಮೋಹನನು 'ಅಪಸ್ಮಾರ-ಪುರುಷನ' ತಲೆಮೆಟ್ಟಿ ಆತನನ್ನು ತುಳಿದಾಗಿನ ಪದಾಘಾತಕ್ಕಾಗುವ ಅಲ್ಲಾಟದಿಂದ ಇಂಗ್ಲಂಡ್-ಅಮೇರಿಕೆಗಳ ವರೆಗಿನ ನೆಲವೂ ನಡುಗುವುದು! ಇಂತಿದು ಶ್ರೀಮೋಹನನ ರುದ್ರಲೀಲಾವಿಲಾಸ!

(೩) **ಇನ್ನುಳಿದ ಕೆಲವು ಭಂಗಿಗಳು :** ಶ್ರೀ ಗಾಂಧಿಜಿಯವರು ತಮ್ಮ ಸರ್ವಸ್ವದ ಹೋಳಿ ಮಾಡಿ, ಅದರ ಬೂದಿಯನ್ನು ಬಳೆದುಕೊಂಡು ಆಶ್ರಮವಾಸಿಗಳಾದುದನ್ನು ಲೋಕವೆಲ್ಲ ಬಲ್ಲದು. ಅವರ ಬಿಡಾರ ಊರ ಹೊರಗೆ. ನಗ್ನಸತ್ಯದ ಆರಾಧಕರು. ಚಿತ್ತವೆಂಬ ಅಂಬರದಲ್ಲಿ ಸದಾ ವಿಹರಿಸುವ ಚಿದಂಬರ ಪುರುಷರು; ದಿಗಂಬರ ಯತಿಗಳು. ಕಾಮದಹನನಾಡಿ, ಚಿತಾಭಸ್ಮ ಧಾರಣ ಮಾಡಿದವರಾದರೂ ತಮ್ಮ ಸತಿಯನ್ನು—ಅರ್ಧಾಂಗಿಯನ್ನು ಎಂದೂ ದೂರವಿರಿಸಿದವರಲ್ಲ. ಸತಿಯೊಡನೆ ಇದ್ದು ಬ್ರಹ್ಮಚರ್ಯವ್ರತದ ಉಗ್ರತಪಸ್ವಿಗಳು. ಲೋಕದೊಡೆಯನಾದರೂ ಶಿವನು ತಪಸ್ವಿಯೆಂದು ಪುರಾಣಗಳು ಹೇಳುವುದು ವಿಚಿತ್ರವೆನಿಸುವಂತಿದೆ. ಆದರೆ ಅದರ ಸತ್ಯತೆಯನ್ನು ಈ ರುದ್ರ-ಮೋಹನನಲ್ಲಿ ಮನಗಾಣಬಹುದಾಗಿದೆ. ತನಗೆ ವ್ಯಕ್ತಿಶಃ ಪಡೆಯುವೇಕಾದುದು ಏನೂ ಎಳ್ಳಷ್ಟಾದರೂ ಇಲ್ಲವಾದರೂ, ಲೋಕಕಲ್ಯಾಣಕ್ಕಾಗಿ ಮತ್ತೆ ಮತ್ತೆ ತಪಸ್ಸನ್ನಾಚರಿಸುವ—ಪ್ರಯೋಪವಾಸಗಳನ್ನು ಕೈಕೊಳ್ಳುವ ಗಾಂಧಿಜೀವನ ಚರಿತೆಯು, ಈ ದೃಷ್ಟಿಯಿಂದ ತುಂಬ ಉದ್ಬೋಧಕವಾಗಿದೆ.

ಶಿವನು ಗಜಾಸುರಮರ್ದನನಂತೆ. ನಮ್ಮ ರುದ್ರ-ಮೋಹನನಾದರೂ ಅವನೂ ಗಜಾಸುರ ಧ್ವಂಸನು. ಪ್ರಬಲಶಕ್ತಿಯ ಪ್ರತೀಕ ಗಜವು. ಬ್ರಿಟಿಶ್ ಸಾಮ್ರಾಜ್ಯಶಕ್ತಿಯೆ ಇಲ್ಲಿ ಗಜಶಕ್ತಿ. ಅದನ್ನು ನುಗ್ಗು-ನುಸಿಯಾಡಿದ ಶ್ರೇಯಸ್ಸು ಗಾಂಧಿಜಿಯವರಿಗೆ ಉಂಟೆಂದು ಎಲ್ಲರೂ ಒಪ್ಪುವರು. ಬಾದಿಯು ಪಂಜೆಯನ್ನುಟ್ಟು ಮಾಂಚೆಸ್ಟರಿನ ಸುಲಿಗೆಯಿಂದ ಭಾರತವನ್ನು ಬಿಡಿಸಿದುದರಿಂದ ಈ ರುದ್ರ-ಮೋಹನನು ಗಜಚರ್ಮಧಾರಿಯೂ ಆಹುದು.

ಜನಸಾಮಾನ್ಯರಿಗೆ ಎರಡೇ ಕಣ್ಣು. ಪರಶಿವನು ಮುಕ್ಕಣ್ಣನು. ಗಾಂಧಿಜಿಯವರು ಅಂತರ್ದೃಷ್ಟಿಯುಳ್ಳವರು. ಇದುವೆ ಇವರ ತೃತೀಯ ನೇತ್ರ. ಇದಕ್ಕೆ ಮಹಾತ್ಮಾಜಿಯವರು 'ಒಳದನಿ' ಎನ್ನುವರು. ಇದುವೆ ಅವರಿಗೆ ಕಾಣುವ ಒಳಬೆಳಕು. 'ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ, ಕೈಹಿಡಿದು ನಡೆಸೆನ್ನನು' ಎಂದು ಯಾವ ಬೆಳಕಿಗೆ ಆರ್ತ ಭಕ್ತರುವೊರೆಯಿಟ್ಟು ಬೇಡಿಕೊಳ್ಳುವರೊ, ಆ ಬೆಳಕು ಇದು. ಮಹಾತ್ಮಾಜಿಯವರು ಕಾಲಕಾಲಕ್ಕೆ ಈ ಕಣ್ಣಿಂದ ನೋಡಿ, ಇಟ್ಟ ಮುಂದಡಿ ಎಂತಹ ಅದ್ಭುತಕಾರ್ಯಗಳನ್ನು ಮಾಡಿಸಿದೆಯೆಂಬುದಕ್ಕೆ ಈ ವರೆಗಿನ ಹಲವು ಘಟನೆಗಳೇ ಸಾಕ್ಷಿ.

ಶಿವನು ವೃಷಭವಾಹನನು. 'ವೃಷಭ' ಎಂದರೆ ಎತ್ತು ಎಂದು ಬರಿ ಅರ್ಥವಲ್ಲ. ವೇದಾದಿಗಳಲ್ಲಿ ವೃಷಭನೆಂದರೆ 'ವರ್ಷಯಿತೃ' —ದಾತಾರನೆಂಬ ಉದಾತ್ತವಾದ ಅರ್ಥವಿದೆ. ಶ್ರೀಮದಲ್ಲಮ ಪ್ರಭುವಿನ ಬಸವಣ್ಣನೂ ಈ ಮಾತಿಗೆ ದೃಷ್ಟಾಂತ. ಬಸವಣ್ಣನೆಂಬುದು ಆತನ ಅಂಕಿತನಾಮವಿರಬಹುದೆ?—ಎಂಬ ಬಗೆಗೆನಗೆ ತುಂಬ ಸಂದೇಹ. ಶ್ರೀಅಲ್ಲಮನ ತಾಯ್ತಂದೆಗಳ ಸುಜ್ಞಾನಿ, ನಿರಹಂಕಾರಿಗಳೆಂಬ ಹೆಸರೂ, ಆತನನ್ನು ಮೋಹಿಸಲು ಬಂದವಳು ಮಾಯಾಂಗನೆ ಎಂಬ ಹೆಸರಿನವಳಾಗಿರುವುದೂ ವಿಚಾರಾರ್ಹವಾಗಿದೆ. ಭಾರತದಲ್ಲಿ ಬಂದ ಧೃತ-ರಾಷ್ಟ್ರ, ಧರ್ಮ, ಭೀಮ ಮೊದಲಾದ ಹೆಸರುಗಳೂ ಇದೇ ಬಗೆಯವಾಗಿವೆ. ಇದು ನಮ್ಮ ದೇಶದ ಪುರಾತನ ಗ್ರಂಥಗಳಲ್ಲಿ ಬರುವ ಹೆಸರುಗಳ ಒಂದು ವೈಶಿಷ್ಟ್ಯ. ಆ ದೃಷ್ಟಿಯಿಂದ ವಿಚಾರಿಸಿದರೆ ಶಿವನ ವಾಹನ 'ವೃಷಭ' ಎಂಬುದರಲ್ಲಿ ಒಂದು ಗೂಢಾರ್ಥವಿದೆಯೆಂದು ಒಪ್ಪಬೇಕಾಗುತ್ತದೆ.

ತ್ಯಾಗ ಮೂರ್ತಿಯಾದ, ಸರ್ವಸ್ವದ ಹೋಮ ಮಾಡಿ ಅದರ ಬೂದಿಯನ್ನು ಮೈಗೆಲ್ಲ ಬಳಿದುಕೊಂಡು ಗಜಚರ್ಮಧಾರಿಯಾಗಿ ಹೊರಟ ಈ 'ರುದ್ರ-ಮೋಹನ'ನಿಗೆ ಇರಲು ಆಧಾರವೇನಾದರೂ ಬೇಕಲ್ಲವೆ? ಆತನನ್ನು ವರ್ಷಯಿತೃಗಳು (ದಾತಾರರು) ಅದ ಬಜಾಜ್-ಬಿರ್ಲಾಗಳಂತಹ ವೃಷಭರಲ್ಲದೆ ಬೇರೆ ಯಾರು ತಾನೆ ಆಶ್ರಯವಾಗ ಬಲ್ಲರು? ಇಲ್ಲವಾದರೆ ಈ ಬಗೆಯ ಸರ್ವಮೇಧಿಯೂ ಆಪರಿಗ್ರಹವ್ರತಸ್ಥರೂ ಆದವರು ಲೋಕದಲ್ಲಿ ಒಂದರೆಗಳಿಗೆಯಾದರೂ ಬದುಕಲು ಸಾಧ್ಯವೆ? ಅಂದು ಬಸವಣ್ಣನಂತಹ ವರ್ಷಯಿತೃವು ದೊರೆಯದೆ ಹೋಗಿದ್ದರೆ ಶ್ರೀಅಲ್ಲಮಪ್ರಭುವಿನ ಅವತಾರಲೀಲೆಗೆ ಆಧಾರವೆ ಇಲ್ಲದಾಗುತ್ತಿತ್ತು. ಅದುದರಿಂದ ತ್ಯಾಗಮೂರ್ತಿ ಶಿವನ (ಅವತಾರದ) ಆಧಾರವು ಬಸವಣ್ಣನೇ ಎಂಬಲ್ಲಿ ಸಂದೇಹವೆ ಇಲ್ಲ.

ಶಿವನಿಗೆ 'ಪಶುಪತಿ' ಎಂಬ ಇನ್ನೂ ಒಂದು ಸೊಗಸಾದ ಹೆಸರಿದೆ. ಬಸವನೆಂದರೆ ಪಶುವು. 'ಪಶುಪತಿ' ಎಂದರೂ ವೃಷಭವಾಹನನೇ ಎಂದು ಕೆಲವರು ಅರ್ಥ ಹೇಳಬಹುದು. ಇವೆರಡರಲ್ಲಿ ಏನೂ ಅರ್ಥವ್ಯತ್ಯಾಸವೇ ಇಲ್ಲವಾಗಿದ್ದರೆ, ಈ ಮಾತು ತಲೆದೋರುವುದಕ್ಕೆ ಕಾರಣವಿಲ್ಲ. ಹಾಡಿದ್ದೇ ಹಾಡುವ—ದಾಸರೊಬ್ಬರು ಈ ವಿಷಯದಲ್ಲಿ ದೋಷವನ್ನು ಮಾಡಿದರೆಂದು ಹೇಳಬೇಕಾಗುತ್ತದೆ.

ಆದರೆ 'ಪಶು' ಎಂಬುದಕ್ಕೆ 'ನಿರ್ಬುದ್ಧ ಜಡಪ್ರಾಣಿ' ಎಂದು ಅರ್ಥವನ್ನಿಟ್ಟುಕೊಂಡರೆ 'ವೃಷಭ' ಎಂಬುದಕ್ಕೆ ಇರುವ ವೈದಿಕ ಉದಾತ್ತ ಅರ್ಥದಿಂದ ಇದನ್ನು ಬೇರ್ಪಡಿಸಬೇಕಾಗುತ್ತದೆ. ಇವೆರಡೂ ಒಂದೇ ಕಾಲಕ್ಕೆ ಒಂದೇ ಪ್ರಾಣಿಗೆ ಹೆಸರು ಇರಲಾರವು. ಇಲ್ಲಿ ಪಶುವೆಂದು ದೇಹಕ್ಕೆ ಸಂಕೇತವಿರಬೇಕು. ಈ ದೇಹವೆಂಬುದು ಒಂದು ಪಶುಸ್ವರೂಪ. ಆಹಾರ-ನಿದ್ರಾ-ಮೈಥುನಗಳಲ್ಲಿ ಸುತ್ತಾಡುವ ಪ್ರಾಣಿ. ಜೀವಾತ್ಮನು ಈ ಪಶುವಿನ ಪತಿ ಎಂದರೆ ಒಡೆಯನಾಗಬೇಕು. ಇದನ್ನು ತನ್ನ ಅಂಕೆಯಲ್ಲಿರಿಸಿ ತನ್ನ ಆಜ್ಞೆಯಂತೆ ಅದನ್ನು ನಡಸಿಕೊಳ್ಳಲು ಸಮರ್ಥನಾಗಬೇಕು. ದೇಹಧರ್ಮಗಳ ಜಾಲದಲ್ಲಿ ಸಿಕ್ಕಿಕೊಂಡಿರುವ ಕರ್ಮಿಯು ಎಂತಹ ವಿಮಿಲಾದವನೆನಿಸಿದರೂ ಆತನು 'ಪಶುಪತಿ' 'ಶಿವ'ನೆನಿಸಲಾರನು.

ಈ ದೃಷ್ಟಿಯಿಂದ ಮಹಾತ್ಮಾಜಿಯವರು ಪಶು-ಪತಿಗಳೆಂಬುದನ್ನು ಲೋಕಸೇ ಒಪ್ಪಿಕೊಂಡಿದೆ. ಅವರು ತಿನ್ನುವುದಕ್ಕಾಗಿ ಬದುಕಿಲ್ಲ; ಬದುಕುವುದಕ್ಕಾಗಿ ತಿನ್ನುವರು. ಈ ಪಶುವು ತನ್ನನ್ನು ಸರಿಯಾಗಿ ಹೊತ್ತುಕೊಂಡು ನಡೆಯಲೆಂದು ದಿನಾಲು ಅದರ ಮೈತಿಕ್ಕಿ ವಿಾವ ಬಗೆ, ಅದಕ್ಕೆ ಹೊತ್ತು ಹೊತ್ತಿಗೆ ಮೇವು ಹಾಕಿ ಮೇಯಿಸುವ ದಕ್ಷತೆ ಕೌತುಕಾಸ್ಪದವಾಗಿದೆ. ವೈಸ್‌ರಾಯರ ಅರಮನೆಯಲ್ಲಿರಲಿ, ಹರಿಜನರ ಗುಡಿಸಿಲಿನಲ್ಲಿರಲಿ ಸಕಾಲಕ್ಕೆ ಈ ಪಶುವಿನ ಆರಯಿಕೆಮಾಡಲು ಗಾಂಧಿಜಿಯವರು ಎಂದೂ ತಪ್ಪುವುದಿಲ್ಲ. ಮತ್ತು ಅದಕ್ಕೆ ಕೊಬ್ಬು ಬರದಂತೆ ಅದು ಕೇವಲ ಕೂಳಿಗೂಳೆಯಾಗಿ ಮಾರ್ಮಲೆದು ಹಾರಾಡದಂತೆ ಹಲವು ವ್ರತೋಪವಾಸಗಳ ಮೂಗುದಾರ ಹಾಕಿ, ತಮ್ಮ ಕೈಯಲ್ಲಿರಿಸಿಕೊಂಡಿರುವ ಪದವು ಲೋಕಕ್ಕೆ ಒಂದು ಮೇಲ್ಪಂಕ್ತಿಯೆ ಆಗಿದೆ.

ಶಿವನು ಲೋಕಸಂಚಾರಿಯಾದರೂ ಸ್ಥಾಣುವು. ಸ್ಥಿರನು. ಅವಿಚಲನು. ತನ್ನ ಭದ್ರವಾದ ಆಸನದಿಂದ ಕದಲದವನು. ಗಾಂಧಿಜಿಯವರು ತಮ್ಮ ಸತ್ಯ ಮತ್ತು ಅಹಿಂಸೆಯ ಭದ್ರಾಸನದಲ್ಲಿ ಸ್ಥಾಣುವಿನಂತೆ ವಿರಾಜಮಾನರಾಗಿದ್ದಾರೆ.

ಇಂತಹ ಶಿವನ ಜೊಡಗು ಲೋಕವನ್ನು ಬೆಗಡು (ಬೆಪ್ಪು) ಗೊಳಿಸುವುದು. ಇದು ರುದ್ರ-ಮೋಹನನ ರುದ್ರಸೌಂದರ್ಯ.*

ಶಿವನ ಈ ಅಂದಕ್ಕೆ ರತಿ, ಲಕ್ಷ್ಮಿಯರು ಮೆಚ್ಚಲಾರರು. ಇವನ ಅರ್ಧಾಂಗಿ ಗೌರಿ. ನಿಸರ್ಗಪುತ್ರಿ—ಪಾರ್ವತಿ; ಪರ್ವತರಾಜನ ಮಗಳು. ಇವಳದು ಲೋಕವಿಭ್ರಮ ಸೌಂದರ್ಯವಲ್ಲ. ತಾಯಿಯ ಜೆಲುವು. ಜಗನ್ಮಾತೆ. ಆದರ್ಶ 'ಸತಿ'. ಆದುದರಿಂದಲೆ, ಮುದುವೆಯ ಮೊದಲು 'ಗೌರಿ' ಉಪಾಸನೆಯು ಹಿಂದೂದೇಶದಲ್ಲೆಲ್ಲ ಎಂದಿನಿಂದಲೂ ನಡೆಯುತ್ತ ಬಂದಿದೆ.

ಮಹಾತಾಯಿ ಕಸ್ತೂರಿದೇವಿಯವರು ಈ 'ಉಗ್ರ'ನೊಡನೆ

(೪೫೮ ನೆಯ ಪುಟದ ಅಡಿಯಲ್ಲಿ ನೋಡಿರಿ)

# ಡಾಕ್ಟರಾಯಣ

( ಕದ್ದು ಕೇಳಿದ ಮಾತು-ಕತೆಯೊಂದು )

ಶ್ರೀ. ವೆಂಕಣ್ಣಾಚಾರ್ಯ ಪಪ್ಪು, ಬಿ. ಎ., ಎಲ್‌ಎಲ್. ಬಿ.
ಹುಬ್ಬಳ್ಳಿ

★

**ಅಜೀರ್ಣವಂತ:**— ಏನ್ ಡಾಕ್ಟರ್ ಸಾಹೇಬ್, ಹಜಾಮತ ನಡದಂದ ?

**ಡಾಕ್ಟರು:**— ಹೌದ್ರೀ.

**ಅ :**— ಹತ್ತಿತಲ್ಲಾ !

**ಡಾ :**— ರೇಟ್ಸುರ್ ಸಿಗವೊಲ್ಲವು ! ಹಳೇವಕ, ನಡಸೇವಿ.

**ಅ :**— ರೇಟ್ಸುರಾರಕ ಹೌದೊ ಅಲ್ಲೊ ? ಮಹಿಷಾಸ್ತ್ರದ್ಹಾಂಗ ಕಾಣಸ್ತಕದ, ಅಥವಾ ಜಾಮನಗರದ ಸಾದಾ ಅಡಕೋತಲೇನಕ ಹಜಾಮತಿ ನಡದಂದೊ ?

**ಡಾ :**— ಯುದ್ಧ ಪೂರ್ವದ ರೇಟ್ಸುರು!

**ಅ :**— ಗಣಗಳ ನೇ ಯುದ್ಧ ಪೂರ್ವದ್ದಿರಬಹುದು. ಬೇಬೀ ಕಾರ್ ನೋಡೊ ಅವರಿಗೆ ಫ್ಲೋರ್ಡಗಾಡಿ ...

**ಡಾ :**— ಗಳಗಂ ನೇ ಇಸ್ಕಿ ಮೊಡೆಲ್ !

**ಅ :**— ಕಂಡ್ಷಾಂಗೆ ಆಗತಕದ ಸಣ್ಣ....ಸೇಫ್ಟೀ ಉಪಯೋಗ ಮಾಡೋ ನಮಗ.

**ಡಾ:** — ಎಂಥಾ ಚೆಲೊ ರೇಟ್ಸುರ್ ಇದ್ದರೂ, ಎಂಥಾ ಕುಶಲರಿದ್ದರೂ ರಕ್ತಹೀನ ಹಜಾಮತು ಶಕ್ಯ ಇಲ್ಲಾ.

**ಅ :**— ರಕ್ತಹೀನ ( bloodless ) ಕ್ರಾಂತಿ ಆಗ್ಯಾವ ಅಂತ ಇತಿಹಾಸ ಪಾಂಚಜನ್ಯ ಮಾಡತಕದ; ನೀವಂತೀರಿ ರಕ್ತಹೀನ ಹಜಾಮತಿ ಶಕ್ಯ ಇಲ್ಲಾ !

**ಡಾ:**— ಇತಿಹಾಸ ಕೆಳಿಕೇ ಪುರಾವೆ.

**ಆ:**— ಏರೆ, ಇದು ಮಾತ್ರ ನೋಡಿಕೇ ಪುರಾವೆ.

**ಡಾ:**— ನಮ್ಮ ದವಾಖಾನಿಗೆ ಜೊಂಗಿ ಬಂದಿರೇನು ?

**ಅ:**— ಆ! ಹೇಳೋದೇ ಮರ್ತೆ. ನಿಮ್ಮ ದವಾಖಾನಿಗೆ ಹೋಗಿದ್ದೆ. ಒಂದು ರಟ್ಟಿನ ಗಡಿಯಾರದ ಮ್ಯಾಲೆ ೧೧ ಘಂಟೇಕ್ಕೆ ಮುಳ್ಳು ನಿಂದರಿಸಿ 'ಡಾಕ್ಟರು ಒಬ್ಬವರು' ಅಂತ ತೂಗುಬಿಟ್ಟಿತ್ತು. ಅದನ್ನೇನೂ ದಾದು ಮಾಡಲಿಲ್ಲಾ !

**ಡಾ:**— "ಕೆಲಸ ಜಾಲು, ರಶ್ಶ ಬಂದ" ಅಂತ ಪಲಗಿ ಬಿದರಿನ್ನಾಂಗ ನಿಂದರಿಸಿದ್ದರೂ ನಾನೆಲ್ಲಿ ಕೇಳ್ತೀನಿ ?

**ಅ:**— ಹೇಳತೇನಿ ನಿಂತಿರ್ರಿ. ಒಳಗ ಜೊಂಡೆ, ನಿಮ್ಮ ಆಪರೇಶನ್ ಟೇಬಲ್ ಮ್ಯಾಲೆಲ್ಲಾ ಪುರಿ ಭಾಜಿ ಇಟ್ಟುಕೊಂಡು ಮುಂದಿ ತಿಲ್ಲಿಕ್ಕೆ ಹತ್ತಿದ್ದರು. ಡಾಕ್ಟರೂ ಯುದ್ಧಕ್ಕ ಜೊಂಗ್ಯಾರೇನೋ!—ಅನಿಸಿತು.

**ಡಾ :**— ನಿಮ್ಮ ಅನುಮಾನ ಪೂರಾ ತಪ್ಪಿಲ್ಲಾ; ನಮ್ಮ ಹೊಸಾ ಕಾಂಪೌಂಡರ್ ಹೊಗ್ಯಾನ. ಅದಕ ಪಂಚೇತಿ ಬಂದಕದ; ಒಬ್ಬ ಕಾಂಪೌಂಡರನ್ನ ನೇಮಿಸಿ ಕೊಂಡೇವಿ. ಅವಾ ಟೀಲರಿಂಗ್ ಕಾಲೇಜದಾಗ ೧೧ ಘಂಟೇದ ತನಕಾ ಕೆಲಸ ಮಾಡಿ ಇಲ್ಲೆ ಬರತಾನ, ಬಂದ ಮ್ಯಾಲೆ ನಮ್ಮ ದವಾಖಾನಿ ಸುರು !

**ಅ:**— ಆದಾತ್ರೀ ; ಒಪರೇಶನ್ ಟೇಬಲ್ ಮ್ಯಾಲೆ ಪುರಿ ಭಾಜಿ ಯಾಕ ?

**ಡಾ :**— ಶಹರದೂರು, ಜಾಗಾದ ತುಟಾಗ್ರತಾ ! ನಮ್ಮ ಬಾಜೂದ ಚಹಾದ ಅಂಗಡಿಯನನ ವ್ಯಾಪಾರ ಮುಂಜಾನೆ ಬಲು ಜೋರು. ಅಂಗಡಿ ಹಿಡಿಸಲಾರದಷ್ಟು ಗಿರಾಕಿ. ಹಿಂದಿನಿಂದ ಅವನಂಗಡಿಗೂ ನಮ್ಮ ದವಾಖಾನಿಗೂ ಬಾಗಲದ, ಹಿಂಗಾಗಿ ೧೧ ಘಂಟೇದ ತನಕಾ ಫರ್ನಿಚರ್ ಸಹಿತ ಅವಗ ಉಪಬಾಡಿಗಿ-ಕೊಟ್ಟೀನಿ.

**ಅ:**— ಉಪಬಾಡಿಗಿ ದವಾಖಾನಿ, ಉಪಧಂದೇದ ಕಾಂಪೌಂಡರು ! ಬೇಶ್ !! ( ಕಮರುದೇಗುವನು ).

**ಡಾ:**— ಕಮರದೇಗು ! ಕಮರದೇಗು !! ಆಹಾರಮಂತ್ರಿ ಜರ್ ಇದನ್ನ ನೋಡಿದ್ರ. ಅಂದರ ಕೇಳಿದ್ರ ನಿಮ್ಮ ಕಮರದೇಗು ಸ್ವರಗ್ರಾಹಕ ತಟ್ಟಿಯೊಳಗ ಹಿಡದು ಚರ್ಚಿಲ್ ಸಾಹೇಬರಿಗೆ ಕಳಿಸತಿದ್ರು ಪಾರ್ಲಿಮೆಂಟಿನೊಳಗ ಅದನ್ನ ಹಚ್ಚಿ 'ತಿಂದೂ ತಿಂದೂ ಹಿಂದುಸ್ಥಾನ ತೇಗತಕದ ; ದೇಶದಾಗ ಕೂಳಿಲ್ಲದ ಪಟಾಪಟಾ ಮಂದಿ ಸಾಯತಕದ ಅಂಬೋದು ಸುಳ್ಳು!' ಅಂತ ಅವರು ಗುಡುಗಿಸುತ್ತಿದ್ದರು.

**ಅ:**— ಪಾಪ ಚರ್ಚಿಲ್ ಸಾಹೇಬರಿಗೆ ಯಾಕ ದೋಷ ಕೊಡತೀರಿ. ಆಹಾರಮಂತ್ರಿನ್ನಂತೂ ಬಿಟ್ಟು ಬಿಡ್ರಿ, ಸರಕಾರೇತರ ಆಹಾರ ಸಲಹೆಗಾರ ಮಂಡಲಿಯವರು ಸಹಿತ ಸರಕಾರಕ್ಕ ಸೂಚನಾ ಕೊಡತಾರ: "ಸಕ್ಕರಿ ಪ್ರಮಾಣ ಕಡಿಮಿ ಮಾಡ್ರಿ, ಯಾಕಂದರ ಮಧುಮೇಹ ಹೆಚ್ಚಾಗತಕದ." "ಜೋಳಾ ಕೊಡಬ್ಯಾಡ್ರಿ; ಜೋಳದಿಂದ ಜುಲಾಬು ಆಗತಕದ." "ಅಕ್ಕಿಯಿಂದ ಪಕ್ಕಿಶೂಲಿ ಎಳತಕದ."

**ಡಾ :**— ಕಾಂಗ್ರೇಸಿನ ನಮೂನೆ ಮಾತಾಡಲಿಕ್ಕೆ ಹತ್ತಿದ್ರಿ, ಜುನಾವಣೇ ಪ್ರಚಾರಕ್ಕ ಬಂದಿರೊ ? ಜುನಾವಣೇ ಫಂಡಿಗೆ ಬಂದಿರೊ ?

**ಅ:**— ಬಂದರ ಕೊಡತೀರೇನು ?

**ಡಾ:**— ಓಹೋ, ಕಾಂಗ್ರೇಸ್ಸು ಅಥವಾ ಖಿಲಾಫತ್ ನೋಟು ಕೊಡತೇನಿ. ಸರಕಾರದವರ ವಾರಫಂಡು ಬೇಡಿದ್ದಾಗ ಸರಕಾರಿ ನೋಟು ಕೊಟ್ಟೆ.

**ಅ:**— ನಿಮ್ಮನ್ನ ಬೇಡಬೇಕ್ಕಾಕ, ಅವರಿಗೆ ಅಷ್ಟು ಹೆಚ್ಚು ನೋಟು ಛಾಪಿಸಲಿಕ್ಕೆ ಬರತಿತ್ತು. ಟ್ರಿಂಕೆಟ್ಟು ಫಂಡ್ ಅಂದರ ಬಂಗಾರದ ಮುರಕ ಗೋಟು,ಪಾಟ್ಲಿ ಕೊಟ್ಟರ ಫಂಡ್ ಕೊಟ್ಟಾಂಗ!

ನಿಮ್ಮ ದಾನಶೂರತನಕ್ಕ ಒಂದು ಸಲಾಮು. ಕಾಂಗ್ರೇಸ್ ನೋಟು ಬ್ಯಾಡಾ....ನಾ ಫಂಡಿಗೂ ಬಂದಿಲ್ಲಾ !

ಡಾ:— ಯಾತಕ್ಕ ಬಂದೀರಿ ಹಂಗಾರ ?

ಅ:— ನಿಮ್ಮಲ್ಲೆ ಅಂದರ ಡಾಕ್ಟರಲ್ಲೆ ಜನರು ಯಾತಕ್ಕ ಬರತಾರ....ಅದಕ್ಕ ಬಂದೇನಿ.

ಡಾ:— ಏನಾಗೇದ ನಿಮಗ ?

ಅ:— ಆಗಳೇನs ಕಮರದೇಗು ನಿಮಗ ಕೇಳಸಲಿಲ್ಲs. ಅಜೀರ್ಣ ಆಗೇದ !

ಡಾ:— ಅಜೀರ್ಣ! ಈ ಕೇಸು ರಿಪೋರ್ಟ್ ಮಾಡಬೇಕಾಗತ್ತದ.

ಅ:— ಏನ್ರೀ, ರಿಪೋರ್ಟು ಮಾಡಲಿಕ್ಕೆ ಇದೇನು ಪ್ಲೇಗಕೇಸs, ಕಾಲರಾ ಕೇಸs !

ಡಾ:— ಹಾಂಗಲ್ಲಾ, ನೀವs ಅಂತೀರಿ, ಈಗ ಕೊಡೂ ರೇಶನ್ ಹೊಟ್ಟಿಗೆ ಸಾಲೂದಿಲ್ಲಾ ಅಂತ; ಮ್ಯಾಲೆ ಅಜೀರ್ಣ, ಕಮರದೇಗು!

ಅ:— ಈಗೇನು ರಿಪೋರ್ಟ ಮಾಡಿದ್ರು ಯುದ್ಧಿಲ್ಲಾ ಗಿದ್ದಿಲ್ಲಾ, ನಿಮಗೇನು ಸರಕಾರದವರು ಮಿಲ್ಟ್ರಿ ನೌಕರೀ ಕೊಡುದಿಲ್ಲಾ. ಇವ್ವಾಗಿ ಕಾಂಗ್ರೇಸ್ ಸರಕಾರ ಬರತsದ.

ಡಾ:— ಯಾವ ಸರಕಾರ ಬಂದರೇನು ? ನಾವ್ರ "ಸರಕಾರ ಮಹಾರಾಜಕೀ ಜಯ" ಪಕ್ಷದವರು ! ರಾಮಾಯ ಸ್ವಸ್ತಿ, ರಾವಣಾಯ ಸ್ವಸ್ತಿ !

ಅ:— ರಿಪೋರ್ಟು ಮಾಡಿದ್ರು ನಮಗೇನಾದರೂ ಮಾಡತಾರೇನು?

ಡಾ:— ನಿಮಗೇನ್ ಮಾಡತಾರ? ಈಗ ಕಾಲರಾ ಆಗಲಿ, ಪ್ಲೇಗ ಬಂದವಗಾಗಲಿ ಎನ್ ಮಾಡತಾರ ?

ಅ:— ನಮ್ಮ ಅಜೀರ್ಣಕ್ಕಷ್ಟು ಔಷಧ ಕೊಟ್ಟು ಬಿಡ್ರಿ !

ಡಾ:— ರೊಕ್ಕಾ ಇಡ್ರಿ. "Cash and Carry"

ಅ:— ಕ್ಯಾಶ್ ಆ್ಯಂಡ ಕ್ಯಾರಿ ಆಗಲಿಕ್ಕೆ ನಿಮ್ಮವೇನು ಬ್ಲಾಕಿಕ ಮಾರ್ಕೆಟ್ಟಿನ್ಯಾಗಿನ ಔಷಧ s....ಕೇಳಿದ್ದು ಕೊಟ್ಟು ಕಿಸೇದಾಗ ಮುಚ್ಚಿ ಬಾಟ್ಲಿ ಇಟುಕೊಂಡು ದಾರೀ ಹಿಡಿಲಿಕ್ಕೆ ?

ಡಾ:— ಛೇ ಛೇ ನೀವು ರಾಜಕೀಯ ರೋಗಿ (Political patient) ಕಾಣ್ಸತೀರಿ. ನಿಮ್ಮ ಅಜೀರ್ಣಕ್ಕ ಪೆನಸಿಲಿನ್ ಇಂಜೆಕ್ಶನ್ ಮಾಡತೇನಿ. ತಗೀರಿ ನೋಟಿನ ಪುಡಿಕಿ.

ಅ:— ಅಲ್ಲರೀ, ಹಿಂದೀ ಗೃಹಸ್ಥನ ಸಹಿಯಿಂದ ನೋಟು ಹೊರಡಲಿಕ್ಕೆ ಸುರುವು ಆದುವು ಅಂತ ತಿಳಿದು, ಸಿಕ್ಕ ಸಿಕ್ಕಾ೦ಗs ಖರ್ಚು ಮಾಡಲಿಕ್ಕೆ ಬರತsದೇನ್ರೀ? ಡಾಕ್ಟರಿಗೆ ಕೊಡಲಿಕ್ಕೆ ಸರಕಾರದವರು ನೋಟು ಛಾಪಿಸ್ಯಾರೇನ್ರೀ ?

ಡಾ:— ಇಲ್ರೀ, ರೇಶನ್ ಆಫಿಸರಿಗೆ ಕೊಟ್ಟು ಹೆಚ್ಚು ಆಹಾರ ಖರೀದಿ ಮಾಡಿ ತಿಂದು, ಅಜೀರ್ಣ ಮಾಡಿಕೊಂಡು ತೇಗಲಿಕ್ಕೆ ಛಾಪಿಸ್ಯಾರ !

ಅ:— ಅಲ್ರೀ ಡಾಕ್ಟರ್, ನಮಗೂ ನಿಮಗೂ ಹ್ಯಾಂಗ ಗೆಳೆತನಾ ಹಾಂಗ ಔಷಧಕ್ಕೂ ಉದ್ದರಿಗೂ ಗೆಳೆತನಾ ! ಡಾಕ್ಟರ ಬಿಲ್ಲು ಆವೇನು ಕೊಡೊವೇನ್ರೀ, ನೀವs ಹೇಳ್ರಿ !

ಡಾ:— ಉದ್ದರಿ ಸಾಕಾತು....ಆನೇಗುಂದಿ ಅರಸರ್ಹಾಂಗ ಜಮಾಖರ್ಚು ಮಾಡಿ ಮಾಡಿ. ನಿಮ್ಮಜ್ಜನ ಅಜ್ಜಾ ನಮ್ಮ ಅಜ್ಜನ ಅಜ್ಜನ ಕಡಿಂದ ಔಷಧ ತಗೊಂಡಿದ್ರು. ಬಾಕೀ ಬುಕ್ಕಿನ್ಯಾಗ ಅದ ನೋಡ್ರಿ ಬೇಕಾರ.

ಅ:— ಕಾಗದದ ಶೋಧ ಆವಾಗ ಆಗಿತ್ತೇನು ?

ಡಾ:— ಆದು ತಗೊಂಡು ಏನ್ ಮಾಡತೀರ್ರಿ ? ಇವತ್ತಿಗೂ ನಿಮ್ಮ ರಕ್ತ ದಾಗ ಆ ಔಷಧ ಹರಿದಾಡತsದ, ಪರೀಕ್ಷಾ ಮಾಡ್ರಿ.

ಅ:— ಆ ಬಾಕೀ ಪೊಲ್ಲ ಜುಕ್ತಾ ಮಾಡ್ಲಾ ?

ಡಾ:— ಬ್ಯಾಡ, ಬ್ಯಾಡ, ಆ ಹಳೆ ಬಾಕಿ ಎಲ್ಲಾ ಕೂಡಿ ಹತ್ತು ಸಾವಿರ ರೂಪಾಯಿ ಆಗತಿತ್ತು; ಆದನ್ನೆಲ್ಲಾ ಒಬ್ಬ ಪರಾಣಗ ಎರಡು ಸಾವಿರ ರೂಪಾಯಿಗೆ ಮಾರಲಿಕ್ಕೆ ಕೊಟ್ಟೀನಿ ! ಆವಾ ವಸೂಲಿಗೆ ಬಂದಾಗ ಅವಗs ಕೊಡ್ರಿ !

ಅ:— ಸಾಮಾನು ಸಹಿತ ಕಂಟ್ರೋಲ್ ಧಾರಣೇಕಿಂತಾ ಕಡಮಿಗೆ ಮಾರಲಿಕ್ಕೆ ಬರೂದಿಲ್ಲಾ, ನೀವು ಹತ್ತು ಸಾವಿರ ರೂಪಾಯಿ ಎರಡು ಸಾವಿರ ರೂಪಾಯಿಗೆ ಹ್ಯಾಂಗ ಮಾರಿದ್ರಿ ?

ಡಾ:— ಹಾಂಗ ಕಾಯಿದೇನs ಆದ !

ಅ:— ಇದನ್ನ ಕೇಳಿ, ನನ್ನ ಅನ್ನಾ ಜೀರ್ಣಾತು; ಔಷಧೇನೂ ಬ್ಯಾಡ ಬಿಡ್ರಿ ಡಾಕ್ಟರಸಾಹೇಬ್; ಅಛ್ಹಾ "ಜಯ ಹಿಂದ್ !"


| | | |
|---|---|---|
| ಮುಸಲ್ಮಾನರ ಅಳಿಕೆ | (ಹಳವೇಟಿ) | ೦- ೮-೦ |
| ಪತ್ತಿ ಅರಳಿ ಜಂತ್ರಿ | | ೨- ೮-೦ |
| ಚಾಲುಕ್ಯರ ಪುಲಕೇಶಿ | | ೧- ೮-೦ |
| ಸಂತಾನ ಶಾಸ್ತ್ರ | | ೧- ೪-೦ |
| ಬ್ರಹ್ಮಚರ್ಯ ಬಲಿಸೃಷ್ಟಿ | | ೦-೧೦-೦ |
| ಕಿರಾತಾರ್ಜುನೀಯ ಸಾರ | | ೧- ೦-೦ |
| ಮಹಾತ್ಮಾ ಗಾಂಧಿ ಸಂ. ಚರಿತ್ರ | | ೧- ೬-೦ |
| ತರುಣ ಪತ್ನಿ | | ೦- ೮-೦ |
| ಕಲಿತರೆ ಹೀಗೆ ಕಲಿಯಬೇಕು. | | ೦ - ೫-೦ |
| ಎಲ್. ಎಲ್. ಬಿ. | | ೦-೧೦-೦ |

ಇದು ಅಲ್ಲದೆ ಶಾಲೆಗೆ ಬೇಕಾಗುವ ಪ್ರತಿಯೊಂದು ಪುಸ್ತಕ ನಮ್ಮಲ್ಲಿ ಸಿಗುವವು. ಬೇಕಾದರೆ ಬರೆಯಿರಿ.

**ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ.**

# ಭಾಷಾವಿಜ್ಞಾನ–

ಲೇಖಾಂಕ ೧

# ಭಾರತದಲ್ಲಿ ಭಾಷೆಗಳ ಅಭ್ಯಾಸ

ಶ್ರೀ. ಕೆ. ಟಿ. ಪಾಂಡುರಂಗಿ ಬಿ ಓ ಎಲ್. ಧಾರವಾಡ

★

ಮನುಷ್ಯನಿಗೆ ಮನುಷ್ಯತ್ವವನ್ನು ತಂದುದು ಭಾಷೆ; ಅವನ ಜೀವನವನ್ನು ಪೂರ್ಣತ್ವಕ್ಕೆ ಮುಟ್ಟಿಸಲಿರುವುದೂ ಭಾಷೆ. ಆದುದರಿಂದ ಭಾಷೆಯ ಅಭ್ಯಾಸ ಎಲ್ಲರಿಗೂ ಅತ್ಯಂತ ಆವಶ್ಯಕ?

★

ಪಾಶ್ಚಾತ್ಯರಿಗೆ ಸಂಸ್ಕೃತ ಮತ್ತು ಇತರ ಭಾರತೀಯ ಭಾಷೆಗಳ ಪರಿಚಯವಾದಂದಿನಿಂದ ಭಾಷೆಗಳ ಅಭ್ಯಾಸದಲ್ಲಿ ಹೊಸದೊಂದು ಯುಗವು ಪ್ರಾರಂಭವಾಗಿದೆ. ಭಾಷೆಗಳನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡುವುದು ಭಾರತೀಯರಿಗೆ ಅಪರಿಚಿತವೇನಲ್ಲ; ಆದರೆ ಅನೇಕ ಭಾಷೆಗಳ ತುಲನಾತ್ಮಕ ಅಭ್ಯಾಸವು ಇಲ್ಲಿ ಇದೀಗ ಪ್ರಾರಂಭವಾಗಿದೆ.

### ವಾಚಮುಪಾಸ್ಸ!

"ಭಾಷೆಯನ್ನು ಅಭ್ಯಾಸಮಾಡಿರಿ" ಎಂಬುದು ಅತಿ ಪ್ರಾಚೀನ ಕಾಲದಲ್ಲಿಯೆ ಭಾರತೀಯರಿಗೆ ವೇದದ · ಸಂದೇಶವಾಗಿತ್ತು. "ವಾಗ್ವೈ ಸಪರಾಟ್ ಪರಮಂ ಬ್ರಹ್ಮ" ಎನ್ನುವ ಭಾರತೀಯರು ಭಾಷೆಯ ಮಹತ್ತ್ವವನ್ನರಿತಿದ್ದರು. "ಕಿಂ ಪ್ರಭಾಷೇತ" ಎಂಬ ಜಿಜ್ಞಾಸೆಯು ಅವರಲ್ಲಿ ಯಾವಾಗಲೂ ಜಾಗರೂಕವಾಗಿತ್ತು. ಈಗಿನ ದೃಷ್ಟಿಯಿಂದ ಅವರ ಅಭ್ಯಾಸದಲ್ಲಿ ಅನೇಕ ಕೊರತೆಗಳನ್ನು ನಾವು ಕಾಣುತ್ತಿದ್ದರೂ ಅಂದಿನ ಗ್ರೀಕ ಅಥವಾ ಇನ್ನಿತರ ಭಾಷಾಭ್ಯಾಸಿಗಳಿಗಿಂತ ಎಷ್ಟೋ ಪಾಲು ಅವರು ಮುಂದುವರಿದಿದ್ದರು. ನಿರ್ದಿಷ್ಟ ದೇಶದ ನಿರ್ದಿಷ್ಟ ಭಾಷೆಯನ್ನು ಮಾತ್ರ ಅವರು ಅಭ್ಯಾಸಕ್ಕೆ ತೆಗೆದುಕೊಂಡದ್ದರಿಂದ, ಇನ್ನಿತರ ಭಾಷೆಗಳ ಸಂಪರ್ಕವು ದೃಷ್ಟಿಯಲ್ಲಿ ಇಲ್ಲದುದರಿಂದ ಆಗಬಹುದಾದ ಅಪೂರ್ಣತೆಯು ಅನಿವಾರ್ಯವಾಗಿದೆ. ಆದರೂ ಜಗತ್ತಿನ ಅತಿ ಪ್ರಾಚೀನ ಭಾಷೆಯನ್ನೇ ಅವರು ಅಭ್ಯಾಸಮಾಡಿದುದರಿಂದ, ಅವರ ಸಿದ್ಧಾಂತಗಳು ಬಹುಮಟ್ಟಿಗೆ ಸಮರ್ಪಕವಾಗಿವೆ. ಭಾಷಾವಿಜ್ಞಾನಕ್ಕೆ ಇಂದಿಗೂ ಅಡಿಗಲ್ಲುಗಳಂತಿವೆ.

ಅತಿ ಪ್ರಾಚೀನಕಾಲದಲ್ಲಿಯೆ "ಭಾಷೆಯ ಹುಟ್ಟು, ಭಾಷೆಯ ಅಂಗಗಳು, ವರ್ಗೀಕರಣ, ಧ್ವನಿನಿಯಮ, ಪದಗಳ ನಿಷ್ಪತ್ತಿ-ಪ್ರಕಾರ ಇಂತಹ ಭಾಷಾವಿಜ್ಞಾನದ ಮೂಲಭೂತ ಪ್ರಶ್ನೆಗಳಲ್ಲಿ ಭಾರತೀಯರು ಮನಸ್ಸು ಹಾಕಿದ್ದರು.

### ವೇದಕಾಲದಲ್ಲಿ

ಭಾರತೀಯರ ಹೆಮ್ಮೆಯ ತತ್ತ್ವಶಾಸ್ತ್ರದ ಉಗಮವನ್ನು ತೋರಿಸುವ ಋಗ್ವೇದದ ಹತ್ತನೆಯ ಮಂಡಲದ **ನಾಸದೀಯ ಸೂತ್ರ**ದಲ್ಲಿಯೆ ಭಾಷಾಶಾಸ್ತ್ರದ ಉಗಮವನ್ನೂ ಕಾಣಬಹುದಾಗಿದೆ. ಕೃಷ್ಣಯಜುರ್ವೇದದಲ್ಲಿ ದೇವತೆಗಳ ಪ್ರಾರ್ಥನೆಯಂತೆ ಇಂದ್ರನು ಭಾಷೆಯ ಅಂಗಗಳನ್ನು ವಿಂಗಡಿಸಿದನೆಂದಿದೆ. ಕುಮಾರಿಲನು ತನ್ನ ವಾರ್ತಿಕದಲ್ಲಿ "ವೇದೇ ವ್ಯಾಕರಣಾದೀನಿ ಸಂತ್ಯೇವಾಭ್ಯಂತರಾಣೀನಃ" ಎಂದು ಮೇಲಿನ ಮಾತನ್ನು ಬಲಪಡಿಸುತ್ತಾನೆ ಸಂಹಿತೆಯ ರೂಪದಲ್ಲಿದ್ದ ವೇದಗಳಿಗೆ ಪದಪಾಠರಚನೆಯು ಭಾರತದಲ್ಲಿಯ ಭಾಷೆಯ ಅಭ್ಯಾಸದ ಮೊದಲನೆಯ ದೊಡ್ಡ ಹೆಜ್ಜೆಯೆನ್ನಬಹುದು. "ವಾಗ್ವೈ ಪರಾಚ್ಯವ್ಯಾಕೃತಾ" ಎಂಬ ತೈತ್ತರೀಯ ಸಂಹಿತೆಯ ವಾಕ್ಯವು ಭಾಷೆಯ ಮೊದಲ ಮೆಟ್ಟಿಲಿನ ಕಲ್ಪನೆಯನ್ನು ತಂದುಕೊಡುತ್ತದೆ. ಪದಗಳನ್ನು ವಿಂಗಡಿಸಿಕೊಂಡಂತೆ ಸ್ವರನಿಯಮಗಳನ್ನೂ ಪದಗಳ ಜೋಡಣೆಯ ರೀತಿ ಅಥವಾ ಸಮಾಸಗಳನ್ನೂ ಅಭ್ಯಾಸಮಾಡುವುದು ಆವಶ್ಯಕವಾಯಿತು. ಹೀಗೆ ಭಾಷಾಶಾಸ್ತ್ರದ ಮುಖ್ಯ ಅಂಗವಾದ ಧ್ವನಿಪದ್ಧತಿಯ ಕಡೆಗೆ ಸಹಜವಾಗಿಯೆ ಭಾರತೀಯರ ಲಕ್ಷ್ಯವೆಳೆಯಿತು. ಅಕ್ಷರಗಳ ಸ್ವರೂಪ, ಪ್ರಮಾಣ, ಉಚ್ಚಾರಣೆ, ಸ್ವರನಿರ್ದೇಶ ಇವುಗಳ ವಿವರವಾದ ಅಭ್ಯಾಸವನ್ನು ಮಾಡತೊಡಗಿದರು. ಈ ದಿಶೆಯಲ್ಲಿ ಮಾಡಿದ ಅನೇಕ ಆಚಾರ್ಯರ ಪ್ರಯತ್ನಗಳ ಫಲವಾಗಿ **ಶಿಕ್ಷಾ** ಮತ್ತು **ಪ್ರಾತಿಶಾಖ್ಯ**ಗಳು ಉದಯಿಸಿದವು. ಈಗ ನಮಗೆ ದೊರೆಯುವ ಪ್ರಾತಿಶಾಖ್ಯಗಳು ಪರಿಪೂರ್ಣವಾಗಿವೆ. ಬಹುಶಃ ಪಾಣಿನಿಯನಂತರ ಅವು

ರೂಪವನ್ನು ತಾಳಿದುವೆಂದು ಊಹಿಸಬಹುದಾಗಿದೆ. ಪ್ರಾತಿ. ಶಾಖ್ಯಗಳು ವೈದಿಕಪದಗಳನ್ನು ನಾಲ್ಕು ವಿಧವಾಗಿ ವಿಂಗಡಿಸುತ್ತವೆ. ಪಾರಿಭಾಷಿಕ ಪದಗಳನ್ನು ಗೊತ್ತುಪಡಿಸುತ್ತವೆ. ಪದಗಳನ್ನು ಪ್ರಕೃತಿ, ಪ್ರತ್ಯಯಗಳನ್ನಾಗಿ ವಿಂಗಡಿಸುವ ಪೂರ್ವಸೂಚನೆಯನ್ನು ತೋರಿಸುತ್ತವೆ.

ಭಾಷೆಯು ಕಾಲಕ್ರಮದಲ್ಲಿ ಮತ್ತು ಪ್ರಾದೇಶಿಕ ಕಾರಣಗಳಿಂದ ರೂಪಾಂತರಗೊಳ್ಳತೊಡಗಿತೆಂದರೆ ಅದರ ಅಭ್ಯಾಸಕ್ಕೆ ಇನ್ನೂ ಮಹತ್ತ್ವ ಬರುತ್ತದೆ; ಮತ್ತಿಷ್ಟು ಅವಶ್ಯಕವೆನಿಸುತ್ತದೆ. ವೇದದ ಭಾಷೆಗೂ ಬಳಕೆಯ ಭಾಷೆಗೂ ಹೀಗೆ ಹೆಚ್ಚುಕಡಿಮೆಯಾದುದರಿಂದಲೆ ವೇದಗಳ ಅರ್ಥನಿವರಣೆಗೆಂದು ಬ್ರಾಹ್ಮಣಗಳು ಬರೆಯಲ್ಪಟ್ಟವು. ಅನಿವಾರ್ಯವಾಗಿಯೆ ವೇದಗಳಲ್ಲಿಯ ಪದಗಳಿಗೆ ನಿಷ್ಪತ್ತಿಯನ್ನೂ ಅರ್ಥವನ್ನೂ ಕಲ್ಪಿಸುವುದು ಬ್ರಾಹ್ಮಣಗಳ ಕೆಲಸವಾಯಿತು. ಹೀಗೆ ಭಾಷಾವಿಜ್ಞಾನದ ಇನ್ನೊಂದು ಅಂಗವಾದ ಪದನಿಷ್ಪತ್ತಿಶಾಸ್ತ್ರಕ್ಕೆ ಭಾರತೀಯರು ಕೈಹಾಕಿದರು. ಅನೇಕ ಶಬ್ದಗಳನ್ನು ಹೋಲಿಸಿ ತೂಗಿನೋಡಿ, ಅವೆಲ್ಲದರಲ್ಲಿಯೂ ಇರುವ ಸಾಧಾರಣ ಅಂಶವನ್ನು ಹೊರತೆಗೆದರು; ಅವುಗಳನ್ನು ಬೇರೆ ಬೇರೆ ಮಾಡುವ ಭಾಗವನ್ನು ಬೇರೆ ತೆಗೆದರು. ಬೇರೆ ಬೇರೆ ಸಂದರ್ಭಗಳಲ್ಲಿ ಅವುಗಳ ಕ್ರಮಿಕ ಬದಲಾವಣೆಯನ್ನೂ ಪರೀಕ್ಷಿಸಿದರು. ಹೀಗೆ ವಿಂಗಡಿಸುತ್ತ ವ್ಯವಸ್ಥಿತವಾದ ವ್ಯಾಕರಣವನ್ನು ಬರೆಯಲು ಬೇಕಾದ ಪೂರ್ವಸಿದ್ಧತೆಗಳನ್ನು ಮಾಡಿದರು.

## ಭಾಷೆಗಳ ಅಭ್ಯಾಸವೇಕೆ?

ಒಂದು ಕಡೆಗೆ ಭಾಷೆಯ ಅಭ್ಯಾಸವೂ ಪ್ರಥಕ್ಕರಣವೂ ಅವರಿಗೆ ತಿಳಿಯದಂತೆಯೆ ಮುಂದುವರಿದಾಗ, ಇನ್ನೊಂದು ಕಡೆಗೆ ಭಾಷೆಗಳ ಅಭ್ಯಾಸವನ್ನೇಕೆ ಮಾಡಬೇಕೆಂದು ಅವರು ತೀಕ್ಷ್ಣವಾಗಿ ಚರ್ಚಿಸಿದರು. ಮಾನವನು ಅನ್ನ-ನೀರುಗಳನ್ನು ತೆಗೆದುಕೊಳ್ಳುವಂತೆ, ಉಸಿರಾಡಿಸುವಂತೆ ಭಾಷೆಯನ್ನು ಉಪಯೋಗಿಸಲು ಕಲಿಯುವನು; ಅದರ ಸ್ವರೂಪ-ರಚನೆಯನ್ನರಿಯುವನು; ಅದರ ಅಭ್ಯಾಸವೇಕೆ? ಅದಕ್ಕೊಂದು ಶಾಸ್ತ್ರವೇಕೆ? ಮಾತುಗಳನ್ನಾಡುವವರಿಗೆ ಮಾತುಗಳನ್ನು ಹೇಗೆ ಆಡಬೇಕೆಂದು ಕಲಿಸುವ ಅವಶ್ಯಕತೆಯಿದೆಯೇ? ಭಾಷೆಯನ್ನು ಅಭ್ಯಾಸ ಮಾಡಿರುವೆವೆನ್ನುವವರೂ ತಪ್ಪುವರಲ್ಲ! ಕುದುರೆಯನ್ನು ಪತ್ತಿದವರು ಕುದುರೆಯನ್ನೇ ಮುರಿಯುವುದು ಹೇಗೆ? ಆದ್ದರಿಂದ "ಲೋಕಾದೇವಾಧಿಗಂತವ್ಯಾ" ವ್ಯವಹಾರದಿಂದಲೆ ತಿಳಿಯುವರು. ಅಭ್ಯಾಸಬೇಡವೆಂಬುದು ಅವರ ವಾದದ ಸರಣಿಯಾಗಿತ್ತು. ಆದರೆ ಭಾರತೀಯರ ಭಾಷೆಗಳ ಅಭ್ಯಾಸದ ಕಾರಣವೇ ಬೇರೆಯಾಗಿತ್ತು. ವೇದಗಳನ್ನು ಸಂರಕ್ಷಿಸುವ ಭಾರವು ಅವರಮೇಲಿತ್ತು. ಪತಂಜಲಿಯು ತನ್ನ ಮಹಾಭಾಷ್ಯದ ಆರಂಭದಲ್ಲಿ—"ರಕ್ಷೋಹಾಗಮ ಲಘ್ವಸಂದೇಹಾಃ ಪ್ರಯೋಜನಂ" ಎಂದು ಅಭ್ಯಾಸದ ಉದ್ದೇಶವನ್ನು ವಿವರಿಸುತ್ತ ವೇದಗಳ ರಕ್ಷಣೆಗೆ ಮೊದಲನೆಯ ಸ್ಥಾನವನ್ನು ಕೊಟ್ಟಿದ್ದಾನೆ. ಮೊದಲಿನ ಮೂರು ಪ್ರಯೋಜನಗಳು ವೈದಿಕ ವಾಙ್ಮಯಕ್ಕೆ ಸಂಬಂಧಪಟ್ಟಿವೆ. ತನ್ನ ವಿಚಾರಗಳನ್ನು ಚಿಕ್ಕವಾಗಿಯೂ ಸ್ಪಷ್ಟವಾಗಿಯೂ ಮಾತುಬಲ್ಲವನೇ ಹೇಳಬಲ್ಲನೆಂದು ಮುಂದಿನ ಎರಡರಿಂದ ಸೂಚಿಸುತ್ತಾನೆ. ಭಾಷಾಭ್ಯಾಸವು ವೇದಾಭ್ಯಾಸದ ಒಂದ ಅಂಗವಾಯಿತು. "ನಿಷ್ಕಾರಣಃ ಷಡಂಗೋ ವೇದೋ ಅಧ್ಯೇಯಃ" ಯಾವ ಉದ್ದೇಶವಿಲ್ಲದಿದ್ದರೂ ವೇದ-ವೇದಾಂಗಗಳನ್ನು ಅಭ್ಯಾಸಮಾಡಬೇಕೆಂದರು. "ಏತಃ ಶಬ್ದಃ ಸಮ್ಯಕ್ ಪ್ರಯುಕ್ತಃ ಶಾಸ್ತ್ರಾನ್ವಿತಃ ಸ್ವರ್ಗೇ ಲೋಕೇ ಕಾಮಧುಕ್ ಭವತಿ" ಎಂದು ಅದಕ್ಕೆ ಧಾರ್ಮಿಕಸ್ವರೂಪವನ್ನು ಕೊಟ್ಟರು. ಅಪಶಬ್ದವನ್ನು ಉಪಯೋಗಿಸಿದರೆ ಅರ್ಥವಾಗುವುದಂತೂ ಇರಲಿ, ಉಚ್ಚರಿಸಿದವನಿಗೆ ಅಪಾಯವಾಗುತ್ತದೆಂದು ಅಂಜಿಕೆ ಹಾಕಿದರು. ಇಂದ್ರಶತ್ರು ಎನ್ನುವಾಗ ಸ್ವರದಲ್ಲಿ ತಪ್ಪಿದ್ದರಿಂದ, ಇಂದ್ರನು ಶತ್ರುವಾಗುವುದರ ಬದಲು ಇಂದ್ರನಿಗೆ ಶತ್ರುವಾದನು ಎಂಬುದು—ಧ್ವನಿ, ನಿಷ್ಪತ್ತಿ, ಅರ್ಥ. ಹೀಗೆ ಭಾಷೆಯ ಎಲ್ಲ ಅಂಗಗಳನ್ನು ಎಷ್ಟು ಜಾಗರೂಕತೆಯಿಂದ ಅಭ್ಯಾಸಮಾಡುತ್ತಿದ್ದರೆಂದುದನ್ನು ತೋರಿಸುತ್ತದೆ. ಭಾಷೆಯನ್ನು ಏಕೆ ಅಭ್ಯಾಸಮಾಡಬೇಕೆಂಬ ಈ ಪ್ರಶ್ನೆಯನ್ನು ಪತಂಜಲಿಯಂತೆ ಅನೇಕರು ಚರ್ಚಿಸಿದ್ದಾರೆ. ಕುಮಾರಿಲನು ತನ್ನ ತಂತ್ರವಾರ್ತಿಕದಲ್ಲಿ ವಿಶದವಾಗಿ ಚರ್ಚಿಸಿದ್ದಾನೆ. ಭಾಷೆಯು ಬೆಳೆಯುವ ವಸ್ತು, ಅದರ ರಚನೆ-ಬೆಳವಣಿಗೆಗಳನ್ನು ಅವುಗಳ ಹಿನ್ನೆಲೆಯನ್ನು ಗೊತ್ತುಮಾಡಿಕೊಳ್ಳದಿದ್ದರೆ ಒಂದು ಕಾಲದ ಭಾಷೆಯು ಇನ್ನೊಂದು ಕಾಲದವರಿಗೆ ತಿಳಿಯದ ಪರಭಾಷೆಯಾಗುವುದು. ಅವರು ಪರಿಶ್ರಮಪಟ್ಟು ನಿರ್ಮಿಸಿದ ವಾಙ್ಮಯವು ಇವರಿಗೆ ನಿರುಪಯೋಗಿಯಾಗುವುದು. ಆದ್ದರಿಂದ ಹಿಂದೆ ನೋಡಿ ಮುಂದೆ ಹೆಜ್ಜೆಯಿಡುವ ಮಾನವನು ಸಹಜವಾಗಿಯೆ ಭಾಷೆಯ ಅಭ್ಯಾಸಕ್ಕೆ ತೊಡಗಿದನು. ಭಾಷೆಯ ಅಭ್ಯಾಸಕ್ಕೆ ಧಾರ್ಮಿಕ ಮಹತ್ತ್ವವನ್ನು ಕೊಟ್ಟು ವೈದಿಕವಾಙ್ಮಯವನ್ನು ಉಳಿಸಿಕೊಳ್ಳಬೇಕೆಂಬ ಭಾರತೀಯರಿಗೂ ಇಂಥ ಪ್ರೇರಣೆಯೆ ಕಾರಣವಾಗಿದೆ. ಭಾಷೆಗಳನ್ನು ಶಾಸ್ತ್ರೀಯವಾಗಿಯೂ ಕೂಲಂಕಷವಾಗಿಯೂ ಅಭ್ಯಾಸಮಾಡಿದ ಭಾರತೀಯರು, ವ್ಯಾವಹಾರಿಕ ಮತ್ತು ಧಾರ್ಮಿಕ ಭಾವನೆಗಳನ್ನು ಹೊಂದುಗೂಡಿಸಿಕೊಂಡಿರುವರು.

## ಕನ್ನಡಿಗರು

ಭಾಷೆಗಳ ಅಭ್ಯಾಸದ ಬಗ್ಗೆ ಕನ್ನಡಿಗರ ಕಲ್ಪನೆಯು ಚಿತ್ತಾಕರ್ಷಕವಾಗಿದೆ. ನೃಪತುಂಗನ ಹೇಳಿಕೆಯಂತೆ "ಪದನರಿದು ನುಡಿಯಲುಂ ನುಡಿದುದನರಿಯಲುಂ" ಕನ್ನಡಿಗರು ಬಲ್ಲಿದರು. ಭಾಷೆಯನ್ನು ಕಲಿಯಬೇಕೇಕೆ?—ಎನ್ನುವವನಿಗೆ "ಪ್ರಗಲ್ಭವಚನ ಪ್ರಪ್ಯಕ್ತಿನೆಗಟ್ಟುಂ ಸಹಜಂ" ಎಂದು ಅವರ ಉತ್ತರ. "ನುಡಿವಲ್ಮೆ" ಅವನಿಗೆ ಜೇಕು ಅದಿಲ್ಲದೆ ಗಿಳಿಗಳುಂ ಪುರುಳಿಗಳುಂ ಓದುವುದಲ್ತೆ ಎಂದು ಹಾಸ್ಯಮಾಡುವರು. 'ತೃಣಸಸ್ಯಘಾನವಿಷಯ ಪ್ರಣಯಂ' ಮೃಗಗಳಿಗೂ ಮಾನವರಿಗೂ ಸಮ ಎಂದಮೇಲೆ

ಮೋಹನ್ನರಿಯುವುದೇ ಮಾನವನ ಮೇಲ್ಮೆಯಲ್ಲವೇ? ಕೃತಿಯೊಳ್ ನದಧೊಳ್ ಚಾಣುಂ ಬೆಡಂಗುಂ ಬೇಕೆನ್ನುವ ಕನ್ನಡಿಗರಿಗೆ ಬಹುಶಃ ಭಾಷೆಯ ಅಭ್ಯಾಸವನ್ನು ಮಾಡಬೇಕೇ ಬೇಡವೇ ಎಂಬ ಪ್ರಶ್ನೆಯೇ ಸರಿದೋರಿರಲಿಕ್ಕಿಲ್ಲ. ನಾಗವರ್ಮನು ಶಬ್ದಸ್ಮೃತಿಯಲ್ಲಿ ಸಂದೇಹ-ಧ್ವಾಂತೌಘವು ಹಿಂಗಲೂ, ಅಭಿಮತಶಬ್ದ ಸಂಸ್ಮರಣೆಯಾಗಲಿಕ್ಕೂ ಕಾವ್ಯಕಲಾವಿದರು ಭಾಷೆಯ ಅಭ್ಯಾಸವನ್ನು ಮಾಡಬೇಕೆನ್ನುತ್ತಾನೆ. "ವ್ಯಾಕರಣದಿಂದೆ ಪದಮಾ | ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವ || ಲೋಕಂ ತತ್ತ್ವಲೋಕದಿನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ ||" ಎಂದು ಕೇಶಿರಾಜನು, ಭಾಷೆಯ ಅಭ್ಯಾಸವು ಹೇಗೆ ಮಾನವನನ್ನು ತನ್ನ ಅಂತಿಮ ಗುರಿಗೆ ಮುಟ್ಟಿಸುತ್ತದೆಂದು ಹೇಳಿದ್ದಾನೆ.

### ಯಾಸ್ಕನ ನಿರುಕ್ತ

ಮೇಲೆ ಹೇಳಿದಂತೆ ವ್ಯವಸ್ಥಿತವಾದ ವ್ಯಾಕರಣವೊಂದನ್ನು ಬರೆಯುವ ಪೂರ್ವಸಿದ್ಧತೆಯಾದ ಮೇಲೆ, ಯಾಸ್ಕನು ನಿರುಕ್ತವನ್ನು ಬರೆದನು. ಯಾಸ್ಕನು ಐದು ಅಧ್ಯಾಯಗಳಲ್ಲಿ ಐದು ನಿಘಂಟುಗಳ ಶಬ್ದಗಳನ್ನು ವಿವರಿಸುತ್ತಾನೆ. ಒಂದೊಂದಾಗಿ ಶಬ್ದಗಳನ್ನು ತೆಗೆದುಕೊಂಡು, ಅವುಗಳಿರುವ ವೇದವಾಕ್ಯಗಳನ್ನು ಉದಾಹರಿಸಿ, ಅವುಗಳ ಮೂಲಧಾತುಗಳನ್ನು ತೋರಿಸಲು ಪ್ರಯತ್ನಿಸುವನು. ಅವುಗಳ ಅರ್ಥವನ್ನು ನಿರ್ಣಯಿಸುವನು. ನಾಲ್ಕನೆಯ ಅಧ್ಯಾಯದಲ್ಲಿ ಕೆಲವು ಕಠಿನಶಬ್ದಗಳ ಅರ್ಥಗಳನ್ನು ಹೇಳುವನು. ಐದನೆಯ ಅಧ್ಯಾಯದಲ್ಲಿ ವೈದಿಕ ದೇವತೆಗಳ ಪಟ್ಟಿಯೊಂದನ್ನು ಕೊಡುವನು. ಯಾಸ್ಕನು ಗಾರ್ಗ್ಯ, ಗಾಲವ, ಔದುಂಬರಾಯಣ, ಶಾಕಟಾಯನ, ಹೀಗೆ— ತನಗಿಂತಲೂ ಮೊದಲಿನ—ಅನೇಕ ವ್ಯಾಕರಣಕಾರರ ಹೆಸರು ಹೇಳುವುದರಿಂದ ಯಾಸ್ಕನ ಕಾಲಕ್ಕೆ ಭಾಷೆಯ ಅಭ್ಯಾಸವು ಬಹಳ ಬೆಳೆದಿತ್ತೆಂದು ಹೇಳಬಹುದು. ಅರಿಸ್ಟಾಟಲನು ಪದಗಳನ್ನು ವಿಂಗಡಿಸುವುದಕ್ಕಿಂತ ಶತಮಾನಗಳಿಗೆ ಮುಂಚೆ ಯಾಸ್ಕನು "ಚತ್ವಾರಿ ಪದಜಾತಾನಿ ನಾಮಾಖ್ಯಾತ ನಿಪಾತೋಪಸರ್ಗಾಃ" ಎಂದು ಪದಗಳನ್ನು ವಿಂಗಡಿಸಿದ್ದನು. ಪದನಿಷ್ಪತ್ತಿಯ ಮೂಲತತ್ತ್ವಗಳನ್ನು ವಿವರಿಸಿದನು. ಬ್ರಾಹ್ಮಣಗಳಲ್ಲಿಯ ಪದನಿಷ್ಪತ್ತಿಯ ರೀತಿಯು ಕೇವಲ ಕಲ್ಪನಾವೈಚಿತ್ರ್ಯವನ್ನು ತೋರಿಸುತ್ತದೆ. ಆ ದೃಷ್ಟಿಯಿಂದ ಯಾಸ್ಕನ ಪ್ರಯತ್ನವು ಹೆಚ್ಚು ಶಾಸ್ತ್ರೀಯವಾಗಿದೆ. ಎಲ್ಲ ಪದಗಳನ್ನೂ ಒಂದಿಲ್ಲೊಂದು ಧಾತುವಿನಿಂದ ಸಿದ್ಧಪಡಿಸುವುದು ಯಾಸ್ಕನ ವೈಶಿಷ್ಟ್ಯವಾಗಿದೆ. ಪಾಣಿನಿಯ ಪದ್ಧತಿಯು ಇದನ್ನೇ ಅವಲಂಬಿಸಿದೆ. ಆಧುನಿಕ ಭಾಷಾವಿಜ್ಞಾನ ಪದ್ಧತಿಯಲ್ಲಿಯೂ ಇದು ಬಹುಭಾಗವನ್ನು ವ್ಯಾಪಿಸಿದೆ.

---

( ೪೫೩ ನೆಯ ಪುಟದಿಂದ ಮುಂದುವರಿದುದು )

ತಾಳಿ ಬಾಳಿದುದು ಅವರ ಸತೀತ್ವದ ಮಹಿಮೆಯನ್ನೆ ಸಾರುತ್ತಲಿದೆ. ಇವರಲ್ಲಿ ರತಿ ಅಥವಾ ಲಕ್ಷ್ಮಿಯ ಅಂಶವು ಹೆಚ್ಚಾಗಿದ್ದಲ್ಲಿ, ಶ್ರೀ ಅರವಿಂದಘೋಷರ ಪತ್ನಿಯವರಂತೆ ಎಂದೂ ಏಡುಗಡೆಯಾಗಿ ಹೋಗಬಹುದಾಗಿತ್ತು.

ಶಿವನ ಪರಿವಾರ ಋಷಿಗಳು, ಭೂತ ಪ್ರೇತಾಳಗಣ! ಎಂದರೆ ಜ್ಞಾನಿಗಳೂ ಜನಸಾಮಾನ್ಯರೂ ಎಂದರ್ಥ. ಉಳಿದವರು ದೂರ ನಿಂತು ಆತನಿಗೆ ಕೈಮುಗಿದು ತಮ್ಮ ಆದರವನ್ನು ವ್ಯಕ್ತಪಡಿಸುವರೆ ಹೊರತು ಅನುಸರಿಸುವವರಲ್ಲ. ಗಣಂಗಳಲ್ಲಿ ವಿಚಾರ, ತೂಕ ಕಡಿಮೆ ಎಂದು ಸೂಚಿಸುವುದಕ್ಕಾಗಿಯೆ ಅವರಿಗೆ ಭೂತ (ವಿಕೃತ) ರೆಂದು ಹೇಳಿರುವರು. ಈ ಅನುಯಾಯಿಗಳು ತಿರಸ್ಕೃತರಾಗಲು, ಮರುತರು. ಆವೇಶ, ಆರ್ಭಟ ಅವರ ಸ್ವಭಾವ. ರುದ್ರನಿಗೆ ತನ್ನವರ ಈ ಸ್ವಭಾವವು ತಿಳಿದೂ ಅವರಲ್ಲಿ ಆತನಿಗೆ ಕರುಣೆ. ಕಾಲಕಾಲಕ್ಕೆ ಅವರ ತಪ್ಪನ್ನು ಹೇಳಿ, ಇನ್ನು ಮುಂದೆ ಹಾಗಾಗದೆಂದು ಎಚ್ಚರಿಸುವುದು ಶಿವನ ಪಾಡಿಕೆ.

ಶಿವನು ಪನ್ನಗಾಭರಣ. ನಂಜು, ಹಾವು, ಹುಲಿ ಈತನ ಹತ್ತಿರ ಇದ್ದೂ ಅವುಗಳು ಇವನನ್ನು ಬಾಧಿಸವು. ಇವನ ಪ್ರಭಾವಲಯದಲ್ಲಿ ಅವುಗಳಿಂದ ಲೋಕಕ್ಕೆ ಯಾವ ವಿಶೇಷ ಬಾಧೆಯೂ ಆಗದೆ, ಅವುಗಳಿಂದ ಲೋಕಕ್ಕೆ ಹಿತವೇ ಆಗುವಂತೆ ಕೆಲಸ ತಕ್ಕೊಳ್ಳುವ ಯೋಗಶಕ್ತಿ ಶಿವನಂತೆ ಈ ರುದ್ರ-ಮೋಹನನಲ್ಲಿಯೂ ಇದೆ.

ಇಂತೀ ಬಗೆಯಾಗಿ ಆ ಪರಶಿವನೇ, ಭಾರತದ ಭಾಗ್ಯೋದಯಕ್ಕಾಗಿ ಈ ಭೂಲೋಕದಲ್ಲಿ ಶ್ರೀಮೋಹನರೂಪದಿಂದ ಮಹಾತ್ಮಾಜಿಯವರ ದೇಹವನ್ನಾಶ್ರಯಿಸಿ ನಡಸಿರುವ ಅದ್ಭುತ ಲೀಲೆಗಳನ್ನು ಕಾಣುವ ಸುದೈವವು ದೊರೆತುದೂ, ಆ ಲೀಲೆಗಳಲ್ಲಿ ತಮ್ಮ ಅಳವಿಗೆ ತಕ್ಕಂತೆ ಆಳಿಲು ಸೇವೆ ಸಲ್ಲಿಸುವ ಸಂಧಿ ದೊರೆತುದೂ ಇಂದಿನ ಭಾರತೀಯನ ಅಸಾಧಾರಣವಾದ ಪರಮ ಪುಣ್ಯವೇ ಸರಿ.

ಓಂ ನಮೋ ರುದ್ರ-ಮೋಹನಾಯ

ಶಾಂತಿಃ ಶಾಂತಿಃ ಶಾಂತಿಃ

ಸದ್ಯ ಏಜಂಟರಿಲ್ಲದ ಊರುಗಳಲ್ಲಿ, ಜಯಂತಿಗಾಗಿ ಉತ್ಸಾಹಿಗಳೂ, ಪ್ರಾಮಾಣಿಕರೂ ಆದ ಏಜಂಟರು ಬೇಕು. ಪತ್ರವ್ಯವಹಾರಮಾಡಿ ಏಜನ್ಸಿ ಕರಾರು ತಿಳಿದುಕೊಳ್ಳಬೇಕು.

# ಅಣುವಿನ ಮಹತ್ತಿ

卐

## ೨ ನಾಗರಿಕತೆಯ ಜನಕ *

ಡಿ. ಕೆ. ಎಸ್. ನವಣೂರ ಎಮ್. ಎಸ್‌ಸಿ.
ಕರ್ನಾಟಕ ಕಾಲೇಜ್, ಧಾರವಾಡ

★

ಭಾರತೀಯರು ಎಲ್ಲಕ್ಕಿಂತ ಹೆಚ್ಚಾಗಿ ಸೂರ್ಯಶಕ್ತಿಯನ್ನು ಪೂಜಿಸುತ್ತಿದ್ದುದರ ರಹಸ್ಯವೇನು? ಇಂದಿನ ವಿಜ್ಞಾನಸಂಶೋಧನೆ ಅವರ ಆಚಾರದ ಮೇಲೆ ಸಂಪೂರ್ಣ ಬೆಳಕನ್ನು ಕೆಡಹಿ, ಅದರ ಪ್ರಯೋಜನವನ್ನು ಲೋಕದಲ್ಲಿ ಪ್ರಕಟಿಸುತ್ತಿದೆ.

★

ಕಳೆದ ಲೇಖನದಲ್ಲಿ — ಜಗತ್ತಿನಲ್ಲಿಯ ನಿಜವಾದ ಹಣವೆಂದರೆ ಶಕ್ತಿಯೆ ಎಂದೂ ಮತ್ತು ಇಂತಹ ಶಕ್ತಿಯನ್ನು ಹೆಚ್ಚೆಚ್ಚಾಗಿ ಉಪಯೋಗಿಸುವಂತಾಗುವುದೆಂದರೆ ಹೆಚ್ಚಿನ ಸರಿವಂತಿಕೆಯ ಪ್ರತೀಕವೆಂದೂ ಪ್ರತಿವಾದಿಸಲಾಗಿದೆ. ಮೇಲಾಗಿ ಯಾಂತ್ರಿಕ ಳವಣಿಗೆಯು ಶಕ್ತಿಯನ್ನು ಅವಲಂಬಿಸಿದೆಯೆಂಬ ಈ ಮಾತನ್ನು ಕ್ಷ್ಯದಲ್ಲಿಟ್ಟು ವಿಚಾರಮಾಡಿದಲ್ಲಿ, ನಮ್ಮ ಇಂದಿನ ನವನಾಗರಿಕತೆಯು ಶಕ್ತಿಯನ್ನೇ ಅಡಿಗಲ್ಲಾಗಿಸಿ ಬೆಳೆಯುವುದರಲ್ಲಿದೆ ಂಬುದು ವಿದಿತವಾಗುವುದು.

ಇನ್ನು ನಮಗೆ ದೊರೆಯಲಿರುವ ಶಕ್ತಿವಿಷಯವನ್ನು ವಿಚಾರ ನಾಡಿದುದಾದರೆ, ನಮ್ಮ ಜೀವಿತವನ್ನು ಮೊದಲುಮಾಡಿ ಎಲ್ಲ ೀಕಾರ್ಯಗಳೂ ಶಕ್ತಿಯನ್ನೇ ಅವಲಂಬಿಸಿವೆ—ಎಂದು ಕಂಡುಬರುವುದು. ಇದೇ ಮಾತನ್ನು **ಪ್ರೊಫೆಸರ್ ಹ್ಯಾರಿಸನ್**‌ರು ತ್ಯಂತ ಮಾರ್ಮಿಕವಾಗಿ ಮತ್ತು ವಿಶಾಲದೃಷ್ಟಿಯಿಂದ ವಿವೇಚಿಸಿದ್ದಾರೆ: "ಯಾವುದೇ ಭೌತಿಕ ಸಮಸ್ಯೆಯನ್ನು ಕುರಿತು ವೂ ವಿವೇಚಿಸಿದರೂ, ಪರೀಕ್ಷಾಂತ್ಯದಲ್ಲಿ ಇದು ನಿಜವಾಗಿಯೂ ನಿಯಂತ್ರಣದ ಸಮಸ್ಯೆಯೆಂದೇ ಹೇಳಬೇಕಾಗುವುದು; ನ್ನ ನಾಗರಿಕತೆಯ ಜಕ್ರವು ತಿರುಗಲಿರುವುದು ಶಕ್ತಿಬಲದಿಂದಲೆ; ಶಕ್ತಿಯು ನಮಗೆ ಪೆಟ್ರೋಲ್ ಇಲ್ಲವೆ ಕಲ್ಲಿದ್ದಲಿಂದ ದೊರೆತರೂ ಸ್ಟೀ, ಅಥವಾ ಧಾನ್ಯ-ದವಸ, ಬಿಣ್ಣಿ ಮುಂತಾದುವುಗಳಿಂದ ರೆತರೂ ಅಷ್ಟೇ! ಇದೆಲ್ಲವೂ ನಮಗೆ ದೊರೆಯುತ್ತಿರುವುದು ಸೂರ್ಯನಿಂದಲೇ. ಶಕ್ತಿಯೆ ನಿಜವಾದ ಹಣವಿದ್ದು—ಸೂರ್ಯನಿಂದ ದೊರೆಯಲಿರುವ ಶಕ್ತಿಯು—ಇಂತಹ ಶಕ್ತಿಯನ್ನು ಹಿಡಿದು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಸಾಧ್ಯವಿದ್ದ ಯಾವನಿಗಾದರೂ—ವಿನಾಮೂಲ್ಯವಾಗಿಯೆ ದೊರೆಯುವುದು".

ಹೀಗೆ ವಿಚಾರಮಾಡಿದಲ್ಲಿ, ನಿಸರ್ಗವು ಹೇಗೆ ನಮ್ಮೆಲ್ಲರ ಜೀವಿತವು ಸುಗಮವಾಗಿ ಸಾಗಲೋಸುಗ ಶಕ್ತಿ-ಭಾಂಡಾರವನ್ನೇ ಕಲ್ಪಿಸಿದೆ ಎನ್ನುವುದು ಕಂಡುಬರುವುದು. ಹೇಗೆ ವಾರಣಾಸಿಯ ಜನರಿಗೆ ಅತಿಪವಿತ್ರಯದ ಮೂಲಕ ಗಂಗಾನದಿಯು ಮಹತ್ತ್ವದ್ದೆನಿಸುವುದಿಲ್ಲವೊ (ಎಲ್ಲರಿಗೂ ಅಲ್ಲ) ಅಥವಾ ನಮ್ಮವನೇ ಆದವನು ನಿಜವಾಗಿಯೂ ಯೋಗ್ಯನಿದ್ದರೂ ಅವನ ಮಹತ್ತ್ವವನ್ನು ನಾವು ಕಾಣುವುದಿಲ್ಲವೊ, ಹಾಗೆಯೆ ನಿತ್ಯವೂ ವೇಳೆಗೆ ತಪ್ಪದೆ ಸೃಷ್ಟಿಕ್ರಮವನ್ನನುಸರಿಸಿ ಅನಂತ ವರುಷಗಳಿಂದ ಉದಯಿಸುತಿರುವ ಮತ್ತು ನಮ್ಮ ಪೃಥ್ವಿಗೆ ಅವ್ಯಾಹತವಾದ ಶಕ್ತಿಯನ್ನು ಪೂರಯಿಸುತ್ತಿರುವ ಸೂರ್ಯನ ಮಹತ್ತ್ವವನ್ನು ನಾವು ತಿಳಿಯದೆ ಹೋಗಿದ್ದೇವೆ. ಇವನೇ ನಮ್ಮ ನಿಜವಾದ ಶಕ್ತಿ-ಸಂಚಯವು, ನಮ್ಮ ಜೀವನಾಧಾರನು; ನಿಸರ್ಗವು ನಮಗೋಸುಗ (ಎಲ್ಲರಿಗೂ-ಬಡವರಿರಲಿ, ಸಿರಿವಂತರಿರಲಿ) ಕೊಡಲಿರುವ ಶಕ್ತಿರೂಪ ಹಣವು ಎಂದರೆ ಇವನೇ! ನಮ್ಮ ನಾಗರಿಕತೆಯ ಜಕ್ರವನ್ನು ತಿರುಗಿಸಲು ಶಕ್ತಿಯನ್ನು ಉಚಿತವಾಗಿ ಒದಗಿಸಲಿರುವ ಅತ್ಯಂತ ದಯಾಳುವಾದ ಜನಕನು ಈತನೆ!

ನಮ್ಮ ಈ ವಿಶ್ವಜನಕನನ್ನು 'ಅತ್ಯಂತ ದಯಾಳು' ಎಂದು ಸಂಬೋಧಿಸಿದ್ದಿದೆ. ಹೀಗೆ ಸಂಬೋಧಿಸಲು ಕಾರಣವಿಲ್ಲವೆಂದಲ್ಲ. ಈಗ ಒಬ್ಬ ಸರಿವಂತನಿದ್ದಾನೆಂದೂ ಮತ್ತು ಅವನು ತನ್ನ ಎಲ್ಲ ಹಣವನ್ನು ಎಲ್ಲರಿಗೋಸುಗ ನೀಡಲಿರುವನೆಂದೂ ನಾವು ಕಲ್ಪಿಸಿದಲ್ಲಿ, ಇಂತಹ ಹಣದಿಂದ ಅವನು ಬಹಳವಾದರೆ ಹಲವು ಜನರನ್ನು ಪೋಷಿಸಬಹುದು; ಅಥವಾ ಜಗತ್ತಿನಲ್ಲಿಯ ಎಲ್ಲ ಹಣವನ್ನೂ ಇಂತಹ ಪೋಷಣಕಾರ್ಯಕ್ಕೆ ಉಪಯೋಗಿಸಿದಲ್ಲಿ—ಎಲ್ಲರನ್ನೂ ಹಲವು ವರುಷಗಳ ವರೆಗೆ ಪೋಷಿಸಬಹುದು. ಆದರೆ ಈ ಕಾರ್ಯವು ಅವ್ಯಾಹತವಾಗಿ ಮಾತ್ರ ಸಾಗಲಾರದು. ಇದೇ ಮಾತನ್ನು ನಮ್ಮ ಜನಕನ ವಿಷಯವಾಗಿ ವಿಚಾರಮಾಡಿದಲ್ಲಿ—ಇವನಿಂದ ಕೇವಲ ಚರಿತಾಸುಗಳಲ್ಲಿ ನಮಗೆ ಸಿಕ್ಕುತ್ತಿರುವ ಶಕ್ತಿರೂಪ ಹಣವು, ಮಾನವ ಜನಾಂಗಕ್ಕೇ ನೂರಾರು ವರುಷಗಳ ವರೆಗೆ ಸಾಕಾಗುವಷ್ಟಿದೆ. ಎಂದರೆ ಇದು ನಾಗರಿಕತೆಯ ಜಕ್ರವನ್ನು ಇಂದು ತಿರುಗಿಸುವುದಲ್ಲದೆ, ಮುಂದೆ ತಿರುಗಿಸಲು ಬೇಕಿರುವ ಸಾಧನಗಳ ಉತ್ಪತ್ತಿಗೆ ಸಹ ಕಾರಣವಾಗುವುದು. ನಮ್ಮ ಜನಕನು ಒಂದು ದಿನದಲ್ಲಿ ಒದಗಿಸುವ ಶಕ್ತಿರೂಪ ಹಣವನ್ನು, ನಮ್ಮಿಂದ ನಮ್ಮ ನೂರು ವರುಷಗಳ ಜೀವಿತದಲ್ಲಿ ಸಹ ಪೂರ್ಣವಾಗಿ ಉಪಯೋಗಿಸಲು ಸಾಧ್ಯವಿಲ್ಲ. ಇವನಲ್ಲವೆ ನಿಜವಾದ ದಯಾಳುವು? ನಿಸರ್ಗದ ಪ್ರಯೋಗಶಾಲೆಯಿಂದ ನಮಗೆ ದೊರೆಯಲಿರುವ ಶಕ್ತಿಯು ಇವನಿಂದಲೆ.

* ಈ ಲೇಖನವನ್ನು ಬರೆಯಲು ಪ್ರೊ. ಹ್ಯಾರಿಸನ್‌ರ ವಿಚಾರಗಳನ್ನು ಎಷ್ಟೋ ಕಡೆಯಲ್ಲಿ ಉಪಯೋಗಿಸಿದ್ದೇನೆ. —ಲೇ.

ಇನ್ನು ನಮ್ಮ ಜನಕನ ವಿಷಯವನ್ನು ಹೆಚ್ಚಾಗಿ ತಿಳಿಯಲು ಪ್ರಯತ್ನಿಸೋಣ: ಇಂದು ನಮಗೆ ದೊರೆತ ಜ್ಞಾನದಿಂದ ವಿಚಾರ-ಮಾಡಿದಲ್ಲಿ, ಆಕಾಶದೊಳಗಿನ ಶಕ್ತಿಶಾಲೆಯು ಇನ್ನೂ ಲಕ್ಷಕೋಟಿ ವರುಷಗಳ ವರೆಗೆ ಕೆಲಸಮಾಡಬಹುದೆಂದೂ ಮತ್ತು ಈ ನಿಮಿತ್ತ-ವಾಗಿ—ನಾಗರಿಕತೆಯ ಬೆಳವಣಿಗೆಯು ಈ ಶಕ್ತಿವ್ಯಯದ ಮೂಲಕ ಕುಂಠಿತವಾಗಲಾರದೆಂದೂ ಎನಿಸುವುದು; ಆದರೆ ನಾವು ನಮ್ಮ ನಾಗರಿಕತೆಯನ್ನು ಊರ್ಜಿತಸ್ಥಿತಿಗೆ ತರಲು ಪ್ರಯತ್ನ ಮಾಡ-ಲಿರುವುದು, ಕಳೆದ ಅನಂತ ವರುಷಗಳಲ್ಲಿ ಪೃಥ್ವಿಯು ಕಲ್ಲಿದ್ದಲು ಮತ್ತು ಎಣ್ಣೆಗಳ ರೂಪದಲ್ಲಿ ಮಾಡಿದ ಉಳಿತಾಯದಿಂದ. ಆದರೆ ಇತ್ತೀಚೆಗೆ ಮತ್ತು ಎಷ್ಟೋ ಸಲ ಮೇಲಿಂದ ಮೇಲೆ ಇಂತಹ ಸಂಚಯದ ಅಪವ್ಯಯವನ್ನು— ಯುದ್ಧ ಮುಂತಾದ ರೀತಿಗಳಲ್ಲಿ ಮಾಡಿರುವೆವು—ಮಾಡಲಿರುವೆವು. ಹೀಗಾಗಿ ನಮ್ಮ ಪರಿಸ್ಥಿತಿಯು ದಿವಾಳಿಯನ್ನು ತೆಗೆಯಲಿರುವ ಬ್ಯಾಂಕಿನಂತಾಗಿರುವುದು ದುರ್ದೈವದ ಸಂಗತಿಯು. ನಿತ್ಯದಲ್ಲಿ ನಮಗೆ ಸೂರ್ಯನಿಂದ ದೊರೆಯುತ್ತಿರುವ ಶಕ್ತಿಯು ನಾವು ಉಪಯೋಗಿಸುತ್ತಿರುವ ಶಕ್ತಿಗಿಂತ ೨೦೦,೦೦೦ ಪಾಲು ಹೆಚ್ಚಿದ್ದು, ಈ ಅಪವ್ಯಯವನ್ನು ನಿಲ್ಲಿಸಬೇಕು. ಇಂದು ನಿರುಪಯೋಗವಾಗಲಿರುವ ಶಕ್ತಿಯನ್ನು ಉಪಯುಕ್ತ-ವಾಗಿ ಮಾರ್ಪಡಿಸಲಿರುವ ಸಾಧನಗಳು ಮಾತ್ರ ಇನ್ನೂ ಲಭ್ಯ-ವಾಗಿಲ್ಲ. ಹೀಗಾದಲ್ಲಿ ನಾವು ಪೃಥ್ವಿಯ ಶಕ್ತಿರೂಪ ಉಳಿತಾಯ-ದಿಂದ ನಾಗರಿಕತೆಯನ್ನು ಬೆಳೆಯಿಸಲಿರುವುದು ತಪ್ಪುವುದಲ್ಲದೆ ನಮ್ಮ ಗಳಿಕೆಯಿಂದಲೆ ಜೀವನವನ್ನು ಸಾಗಿಸುವಂತಾಗುವುದು.

ಯಾವುದೊಂದು ನುರುಭೂಮಿಯಲ್ಲಿಯ ೨೦ ಜದರು ಮೈಲಿ-ನಷ್ಟು ಸ್ಥಳದಲ್ಲಿ ದಿನಾಲು ದೊರೆಯುತ್ತಿರುವ ಸೂರ್ಯಕಿರಣರೂಪ ಶಕ್ತಿಯು—ನಿಜವಾಗಿಯೂ ಇದನ್ನು ಉಪಯುಕ್ತವಾಗಿ ಮಾರ್ಪ-ಡಿಸುವುದು ಸಾಧ್ಯವಿಲ್ಲ—ಇಂದು ಅತ್ಯಂತ ಮುಂದುವರಿದ ರಾಷ್ಟ್ರವೆಂದು ಕರೆಯಲ್ಪಡುತಿರುವ ಅಮೇರಿಕೆಯ ಜನರಿಗೆ ಶಾಶ್ವತವಾಗಿ ಸಾಕಾಗುವಷ್ಟಿದೆ. ಆದರೆ ಇಂದು ಈ ತೆರದ ಶಕ್ತಿಯು ಅಪವ್ಯಯವಾಗುತ್ತಿದೆ. ಮೋಡಗಳಿಲ್ಲದ ದಿನದಲ್ಲಿ ೧ ಜದರು ಮೈಲಿನಲ್ಲಿ ಒಂದೇ ದಿನದಲ್ಲಿ ದೊರೆಯುವ ಶಕ್ತಿ-ರೂಪ ಜಣವು, ೧೦೦ ಟನ್ ಇದ್ದಲಿನಿಂದ ದೊರೆಯುವಷ್ಟಿದೆ. ಸೂರ್ಯನಿಂದ ದೊರೆಯುವ ಎಲ್ಲ ಶಕ್ತಿಯನ್ನು ೩| ಮೈಲು ವ್ಯಾಸದಷ್ಟು ಭೂಮಿಯ ಮೇಲೆ ಕೇಂದ್ರೀಕರಿಸಿದಲ್ಲಿ—೩| ಮೈಲು ವ್ಯಾಸದ ಮತ್ತು ಪೃಥ್ವಿಯಿಂದ ಸೂರ್ಯನ ವರೆಗೆ ಎಂದರೆ ೯೩,೦೦೦,೦೦೦ ಮೈಲುಗಳಷ್ಟು ಎತ್ತರದ ಒರ್ಜದ ಕಂಬವು ಕೇವಲ ೧ ಸೆಕಂದಿನಲ್ಲಿ ಕರಗಿ ನೀರಾಗುವುದು. ಈ ಜೋಲನ ಎರಡು ಉದಾಹರಣೆಗಳು ನಮಗೆ ಸೂರ್ಯನಿಂದ ದೊರೆಯುವ ಮತ್ತು ಅದರಂತೆಯೆ ಅಪವ್ಯಯವಾಗುವ ಶಕ್ತಿಯ ಕಲ್ಪನೆಯನ್ನು ಕೊಡುವುವು. 'ಈ ತೆರನ ನಿಜವಾಗಿಯೂ ಶಕ್ತಿಯನ್ನು ಸೃಷ್ಟಿಸು-ವವನು ಸೂರ್ಯನೇ' ಎಂದು ಪ್ರತಿಪಾದಿಸಿದೆ. ಹೀಗಿದ್ದರೂ ಸೂರ್ಯನಿಂದ ನೇರವಾಗಿ ದೊರೆಯುವ ಶಕ್ತಿ ಮತ್ತು ಇಂತಹ ಶಕ್ತಿಯಿಂದ ದೊರೆಯಬಹುದಾದ ಕಲ್ಲಿದ್ದಲು ಮುಂತಾದುವುಗಳ ಸಂಚಯಿಸಲ್ಪಟ್ಟ ಶಕ್ತಿ ಇವುಗಳಲ್ಲಿ ಅಂತರವುಂಟು. ನೀರು ಗಾಳಿಗಳು ಸಹ ಇಂತಹ ಶಕ್ತಿಯ ರೂಪಾಂತರಗಳೇ ಎಂದು ಹೇಳಬಹುದು.

ಅಣುವಿನಲ್ಲಿ ಶಕ್ತಿಯು ಹೇಗೆ ಅಡಕವಾಗಿದೆ ಮತ್ತು ಆ ಶಕ್ತಿಯು ಎಷ್ಟಿದೆ ಮುಂತಾದುವುಗಳನ್ನು ಜೆನ್ನಾಗಿ ಪುನರಾವರ್ತಿಸಿ-ಗಲು, ನಮಗೆ ದೊರೆಯುತ್ತಿರುವ ಪರಮಾವಧಿಯ ಕಲ್ಪನೆಯು ಇರಲೇ ಬೇಕು. ಹೀಗಾಗದಿದ್ದಲ್ಲಿ ಅದರ ನಿಜವಾದ ಯೋಗ್ಯತೆಯು ನಮಗೆ ತಿಳಿಯಲಾರದು. ಈಗ ನಮಗೆ ಶಕ್ತಿಯನ್ನು ಒದಗಿಸು-ವಲ್ಲಿ ಅನೇಕ ಮುಖ್ಯ ಮೂಲದ್ರುವಿಗಳಿವೆ. ಈ ಎಲ್ಲ ಮೂಲ ದ್ರುವಿಗಳ ಪರಮಾವಧಿ ಯೋಗ್ಯತೆಯನ್ನು ನಾವು ಮೊದಲು ವಿಚಾರಿಸುವುದು ಸೂಕ್ತವೆನಿಸುವುದು. ಆ ಮೇಲೆ ಅಣುವಿ ದ್ರುವಿಯನ್ನು ತುಲನಾತ್ಮಕ ದೃಷ್ಟಿಯಿಂದ ವಿವೇಚಿಸಿದಲ್ಲಿ, ಅದ ಮಹತಿಯನ್ನು ಎತ್ತಿ ತೋರಿಸಲು ಸಾಧ್ಯವಾವುದು.

ಈ ಎಲ್ಲ ಮೂಲದ್ರುವಿಗಳಿಗೆ ಮೂಲವೆಂದರೆ ಸೂರ್ಯನ ಅದರಂತೆಯೇ ಅಮುಖ್ಯ ದ್ರುವಿಗಳಾದ ಪೃಥ್ವಿ, ಗಾಳಿ, ನವುಲ್ಲಿದ್ದಲು, ಎಣ್ಣೆ, ಜಲಪಾತಗಳು ಮುಂತಾದ ನೈಸರ್ಗಿಕ ಶಕ್ತಿ ಸಂಪತ್ತನ್ನು ಕುರಿತು ಸಹ ವಿವೇಚಿಸೋಣ.

ಸೂರ್ಯನಿಂದ ದೊರೆಯುವ ಶಕ್ತಿ ವಿಷಯವನ್ನು ವಿವೇಚಿಸ ಪೂರ್ವದಲ್ಲಿ, ಈ ವಿವೇಚನೆಯ ವ್ಯಾಪಕತೆಯನ್ನು ಸೂಚಿಸುವ ಯುಕ್ತವೆನಿಸುವುದು. ಮೊದಲನೆಯದಾಗಿ ಈ ಶಕ್ತಿಯು ನವ ಪೃಥ್ವಿಯಿಂದ ದೊರೆಯಬಹುದಾದ ಶಕ್ತಿ-ದ್ರುವಿಗಳನ್ನು ನಿರ್ಮಿಸ ಕಾರಣವಾಗುವುದೆಂಬುದು ಈ ಮೊದಲೆ ತಿಳಿಸಲ್ಪಟ್ಟಿದೆ. ಇ ನಮಗೆ ಸೂರ್ಯನಿಂದ ಬರಬಹುದಾದ ಮತ್ತು ಇಂದು ನಿಯಂ ಸಲು ಸಾಧ್ಯವಿಲ್ಲದಿರುವ ಶಕ್ತಿಯನ್ನು ಉಪಯುಕ್ತ ರೀತಿಯ ರೂಪಾಂತರಿಸುವುದು ಸಾಧ್ಯವಾದಲ್ಲಿ, ನಾಗರಿಕ ಜೀವನವು ಹ ಬದಲಾಗಬಹುದೆಂಬುದನ್ನು ಊಹಿಸಲು ಸಹ ಸಾಧ್ಯವಿ ಉದಾಹರಣೆಗೆಂದು: ಈಗ ಹಗಲು ವೇಳೆಯಲ್ಲಿ ಬರಲಿ ಸೂರ್ಯನ ಕಿರಣಗಳಲ್ಲಿ ಅಡಕವಾದ ಮತ್ತು ಬೆಳಕನ್ನು ಬೀ ವಲ್ಲಿ ಉಪಯುಕ್ತವಾದ ಶಕ್ತಿಯನ್ನು ಹಿಡಿದಿಡಲು ಸಾಧ್ಯವ ಈ ಶಕ್ತಿಯನ್ನು ನಾವು ರಾತ್ರಿವೇಳೆಯಲ್ಲಿ ಉಪಯೋಗಿ ವಂತಾದರೆ, ಎಂತಹ ಕ್ರಾಂತಿಯು ಉದ್ಭವಿಸಬಹುದು? ಇ ಊಹಿಸಲು ಮಾತ್ರ ಸಾಧ್ಯ. ಅದರಂತೆಯೆ ಇಂತಹ ಶಕ್ತಿಯ ಸಂಚಯಿಸಲು ಸಾಧ್ಯವಾದಲ್ಲಿ. ಯಾಂತ್ರಿಕ ಬೆಳವಣಿಗೆಗೆ ಅ ಸಹಕಾರಿಯಾಗುವುದು.

ಈ ಶಕ್ತಿಯ ವಿಷಯವಾಗಿ ನಾವು ಒಂದು ಮಾತನ್ನು ಲ ದಲ್ಲಿಡಬೇಕು. ಈ ಶಕ್ತಿಯು ಯಾವನಿಗೆ ಹಿಡಿದು ಉಪಯೋ ಗಿಸಲು ಸಾಧ್ಯವಾಗಬಹುದೊ ಅವನಿಗೆ ಉಚಿತವಾಗಿ ದೊರೆ

(೪೬೨ನೆಯ ಪುಟಕ್ಕೆ ಮುಂದುವರಿದಿದೆ)

# ಬಾಳಿನ ನರಕ

ಶ್ರೀ. ವಾಸುದೇವ ಸಿಗ್ಗಾವಿ, ಹುಬ್ಬಳ್ಳಿ

★

**ಬಡವ ಹಾರಯಿಸಿದುದೆಲ್ಲ ಹಳವಂಡವಾಗುವುದೇ ಸರಿ! ಬಡವನ ಹತ್ತಿಕ್ಕಿದ ಬಯಕೆಗಳು ಅವನ ಬಾಳನ್ನು ಬೇಯಿಸುವುವಲ್ಲದೆ, ಲೋಕದ ಸುಖ-ಶಾಂತಿಗಳನ್ನೂ ಹೋಳಿ ಮಾಡುವವು!**

★

"ಉಸ್ಸಽಽಽ, ಬವಣೆಯ ಬಾಳುವೆಗೆ ಕೊನೆ ಎಂದು? ಶ್ರೀಮಂತರ ಸೊಕ್ಕಿನ ಸೊಲ್ಲಿನಲ್ಲಿ ಬಡವರ ಕರುಳಿನ ಕಾರುಣ್ಯದ ಕೂಗು ಕರಗಿ ಹೋಗಿದೆ. ಬಡತನದ ಬಾಳುವೆಯಲ್ಲಿಯೆ ಜೀವನದ ಸಮಗ್ರ ಅನುಭವ ಎನ್ನುತ್ತಿದ್ದಾರೆ ಅನುಭವಿಕರು. ಅದೆಂತೋ! ಸಾಕು, ಈ ಸಮಗ್ರ ಅನುಭವದ ಸವಿ! ಸುಖವನ್ನು ಸವೆಯಲು ಸಮುದುವಿಲ್ಲವೆ? ಕನಸಿನಲ್ಲಿಯೆ?"

ಒಂದು ಕಾಲಕ್ಕೆ ರಾಯರ ಜೀವ ಬದುಕಬೇಕೆಂಬಾಸೆಯಿಂದ ಬಡತನದ ಬವಣೆಯೊಂದಿಗೆ ಬಡಿದಾಡುತ್ತಿದ್ದಾಗ, ಮೇಲಿನ ಮಾತುಗಳು ರಾಯರ ನೊಂದ ಬೆಂದ ಹೃದಯದಿಂದ ಹೊರಬರುತ್ತಿದ್ದುವು. ಆದರೆ ಈಗ ರಾಯರು ಕಷ್ಟವನ್ನು ಕಳೆದುಕೊಂಡು ಹಾಯಾಗಿ ಬಾಳುವ ಒಬ್ಬ ಸುಖಜೀವಿಯಾಗಿದ್ದಾರೆ. ಅವರ ಹಿಂದಿನ ಬಾಳಿನ ಗೋಳು ಇಂದಿನ ಸುಖದ ಬಾಳಿನಲ್ಲಿ ಮರೆಯಾಗಿದೆ. ಬಟ್ಟೆಯ ಗಿರಣಿಯಲ್ಲಿ ಐವತ್ತು ರೂಪಾಯಿ ಸಂಬಳದ ಕೆಲಸದಲ್ಲಿದ್ದಾರೆ ರಾಯರು. ಕೂಲಿಯಾಳುಗಳ ಮೇಲ್ವಿಚಾರಣೆ ಇವರ ಬಳಿಗೆ ಬಂದ ಕೆಲಸ. ರಾಯರೆಂದರೆಯೆ ನನ್ನ ತಂದೆ.

*

ಅಂದು ತಂದೆಯೊಡನಾದ ಮಾತಿನ ಕಾದಾಟದಿಂದ ಕಾಯ್ದು-ಲೆ ನನ್ನನ್ನು ಊರ ಹೊರಗೆ ಎಷ್ಟೋ ದೂರದ ವರೆಗೆ ಎಳೆದು-ಂಡು ಹೋಯ್ತು. ತಲೆಯಲ್ಲಿ ಅದೇ ವಿಚಾರದ ತಿಕ್ಕಾಟ. ಣ್ಣಲ್ಲಿ ನೀರು ಒರಸಿಕೊಂಡರೆ ಬೆಚ್ಚಗೆ. "ಛೆ! ಈ ತರದ ಬಾಳುವೆ ರ್ಥ; ಇದ್ದರೂ ಅಷ್ಟೆ, ಸತ್ತರೂ ಅಷ್ಟೆ! ಹೀಗಿದ್ದ ಮೇಲೆ ನು ಕಾಲೇಜಿಗೆ ಹೋಗುವುದು ಹೇಗೆ! ನನಗೆ ಉಡಲು ಕಾದಷ್ಟು ನೂಲಿನ ಬಟ್ಟೆ ಇದ್ದುದು ನಿಜ; ಆದರೆ ಉಣ್ಣೆಯ ೀಟು-ಸೂಟುಗಳನ್ನು ಹೊಲಿಸಿರೆಂದರೆ ತಂದೆಯವರಿಗೆ ಇಷ್ಟು ೀಪವೆ? ಹೊಲಿಸಲು ಯೋಗ್ಯತೆ ಇಲ್ಲವಂತೆ. ನನ್ನಂತಹ ನ ಮನುಷ್ಯ ನಾನೇ!" ಎಂದುಕೊಂಡೆ; ಸಾಗಿದೆ—ಸಾಗಿದೆ—ಗಿದೆ. ಇಲ್ಲಿಗೆ ನಿಂತುಬಿಟ್ಟೆ. ಒಂದು ಹೆಜ್ಜೆಯನ್ನು ಕೂಡ ಂದಿಡಲಾಗಲಿಲ್ಲ— ವಿಶಾಲ ಬಯಲು, ಉಬ್ಬು ತಗ್ಗುಗಳು. ತ್ತಲೂ ಸಣ್ಣ ಸಣ್ಣ ಮುಳ್ಳುಕಂಟಿಗಳ ಗುಂಪು. ಇವುಗಳ ನಡುವೆ ಸುಮಾರು ಮೂವತ್ತನ್ನು ಮುಟ್ಟುವ ಗುಡಿಸಿಲುಗಳು. ಾದರೋ ಬಿಸಿಲು, ಮಳೆ, ಗಾಳಿಗಳು ಒಂದೆ ಕಾಲಕ್ಕೆ ಮನ-ದಂತೆ ಪ್ರವೇಶ ಮಾಡಲು ಬರುವಂತಿವೆ. ಭದ್ರವಲ್ಲದ ಬಾಗಿಲು. ್ನ ಜನರು: ಮರ್ಯಾದೆ ಮುಚ್ಚುವಷ್ಟು ಬಟ್ಟೆ; ಸೃಷ್ಟಿಯ ಗುಳ್ಳೆದಲ್ಲಿಯೇ ಜೋಪಾನವಾದ ಅವರ ಮೈಬಣ್ಣ ಕರಿಯ ಕಲ್ಲಿಗೆ ಎಣ್ಣೆಯನ್ನು ತೀಡಿದಂತಿದ್ದುವು. ಉಟ್ಟ ಬಟ್ಟೆಯಿಂದ ಗಂಡು, ಹೆಣ್ಣು ಎಂದು ತಿಳಿಯಬಹುದೇ ಹೊರತು ಆವರ ರೂಪದಿಂದಲ್ಲ. ಒರಿಪ್ಯೆ, ಸಿಂಬುಳು ಸುರಿವ ಮೂಗು,ಸಾಲಿ-ಗ್ರಾಮವನ್ನೂ ನಿಮಾರುವ ಮೈಬಣ್ಣ—ಈ ತರದ ಮಕ್ಕಳು ಕೆಲವು ಆಗಾಗಾಕುತ್ತಿದ್ದುವು. ಹಲವು ಅಳುತ್ತಿದ್ದುವು. ಹಲವು ಕೆಲವು ಸುಮ್ಮನೆ ಬಿದ್ದುಕೊಂಡಿದ್ದುವು. ಎಲ್ಲ ಮಕ್ಕಳ ತಲೆಯ, ಕೂದಲು ಹಜಾಮನೂ ಎಂಣೆಯೂ ಜಗತ್ತಿನಲ್ಲಿ ಇಲ್ಲದ ವಸ್ತುಗಳೆಂದೇ ಪ್ರತಿಪಾದಿಸುತ್ತಿದ್ದುವು.

ಇಲ್ಲಿಗೆ ದಿನಾಲು ಬರುವುದೇ ನನಗೊಂದು ಅಭ್ಯಾಸವಾಯ್ತು, ಇಲ್ಲಿ ಬಂದು ನಿಂತಾಗ ಅಂದಿನ ಉಣ್ಣೆಯ ಸೂಟಿನ ನ್ಯಾಯದ ಪ್ರಸಂಗ ನೆನಪಿಗೆ ಬರುವುದು. ಕಣ್ಣುಗಳು ಕಂಬನಿಯ ಮಳೆ-ಯನ್ನೆ ಕರೆಯುತ್ತವೆ. ಬೆಚ್ಚಗಿದ್ದ ಅಂದಿನ ಕಣ್ಣೀರು ಇಂದು ಎಸರಾಗಿ ಬರುತ್ತವೆ. 'ಅಯ್ಯೋ! ನನ್ನ ಸಮೀಪದವರೇ, ನನ್ನ ಬಾಂಧವರೇ ಮರ್ಯಾದೆ ಮುಚ್ಚಲೂ ಆಟವೆ ಇಲ್ಲದೆ 'ದೇಹಿ, ದೇಹಿ' ಎಂದು ದೈನಾಸ ಪಡುತ್ತಿರುವಾಗ, ಬೇಕಾದಷ್ಟು ಅರಿವೆ ಇದ್ದೂ 'ನನ್ನಂತಹ ಹೀನ ನಾನೇ' ಎಂದುಕೊಂಡಿದ್ದೆನಲ್ಲಾ. ನಿಜ, ನನ್ನ ಬಾಂಧವರು ಬಹುಭಾಗ ದೀನ-ದರಿದ್ರರದೇ ಎಂದು ತಿಳಿಯದ ನಾನು, ನಿಜವಾಗಿಯೂ ನನ್ನಂತಹ ಹೀನ ನಾನೇ....

ಇಲ್ಲಿಯೇ ಚಿನ್ನ-ಚೆನ್ನಿಯರ ಸಂಸಾರ. 'ಆಸೆ' ಎಂಬುದು ಸರ್ವರಿಗೂ ಉಂಟು. ಶ್ರೀಮಂತ ತನ್ನ ಮುಂಗೈಜೋರಿನಿಂದ ತೃಪ್ತಿಪಡಿಸುತ್ತಾನೆ ತನ್ನ ಆಸೆಯನ್ನು ಅನಾಯಾಸವಾಗಿ; ಆದರೆ ಬಡವನಿಗೆ ನಿಸರ್ಗ ನೀಡಿದರೆ ಉಂಟು. ನಿಸರ್ಗ ಮುನಿದರೆ ತನ್ನ ಮನದಾಸೆಯನ್ನಷ್ಟೇ ಅಲ್ಲ, ಸುನವನ್ನೂ ಮುದುಡಿಕೊಂಡಿರ-ಬೇಕಾಗುತ್ತದೆ. ಚೆನ್ನಿಗೂ ಹುಟ್ಟಿಸು ಒಂದಾಸೆ. ಇದು ಇಂದಿನ-ದಲ್ಲ, ಅನೇಕ ದಿನಗಳಿಂದಲೂ ಬೆಳೆದು ಬಂದ ಆಸೆ. ಹೇಳು, ಹೇಳು ಎಂಬಾಸೆ ಅವಳನ್ನು ಮುಂದೆ ನೂಕುತ್ತಿತ್ತು! 'ಅನರ್ಥ-ಸಂಭವಿಸಿದರೆ?' ಎಂಬ ಹೆದರಿಕೆ ಅವಳನ್ನು ಹಿಂದೆ ಜಗ್ಗುತ್ತಿತ್ತು. ಆದರೆ ಇಂದು ಅವಳ ತುದಿನಾಲಗೆಗೆ ಬಂದ ಆಸೆಯ ವಿಷಯ ಚಿನ್ನನ ಕಿವಿಯನ್ನು ಸೇರಿತು. ಮೊದಲು ಚಿನ್ನನಿಗೆ ಕಠಿಣವಾದ ವಿಷಯವೆಂದೇ ತೋರಿತು. 'ಯಾಕೆ ಹೇಳಿದ್ದೇನು?' ಎಂಬ ಭೀತಿ ಚೆನ್ನಿಯ ಮನಸ್ಸಿನಲ್ಲಿ ಭೇರಿ ಹೊಡೆಯಹತ್ತಿತು. ಸ್ವಲ್ಪ ಸಮಯದನಂತರ 'ಓ! ಇದೇನು ಮಹಾಕಠಿಣದ ಕೆಲಸ?' ಎಂಬ ಗೆಲುವಿನ ಕಳೆ ಅವನ ಮೋರೆಯ ಮೇಲೆ ಒಟ್ಟಿ. ಒಟ್ಟಿ ಬರತೊಡಗಿತು. ಚೆನ್ನಿ ನಸುನಕ್ಕಳು. ತನ್ನ ಮಗುವಿನ ನಲವಿನ

ಕುಣಿತದ ಕನಸನ್ನು ಈಗಾಗಲೆ ಕಾಣತೊಡಗಿದಳು ಭಾವಲೋಕದಲ್ಲಿ. ಆದರೆ ಈ ಯಮಲೋಕದಲ್ಲಿ ಗತಿ ಹೀಗಾಗುವುದೆಂಬುದನ್ನು ಹೇಗೆ ತಿಳಿಯಬೇಕು ಆ ಮುಗ್ಧ ಜೀವ?

* * *

"ಫಡ್ ಫಡ್, ಫಟ್ ಫಟ್, ಭರ್, ಭರ್" ಸಪ್ಪಳದ ಸಮ್ಮಿಶ್ರದಿಂದ ಒಂದೇ ಕರ್ಕಶ ಧ್ವನಿ ಮಾಡಿಕೊಂಡು ಬಡಬಡಿಸುತ್ತಿದೆ ಗಿರಣಿ. ವಿಪರೀತ ಶಕೆ. ಅರಿವೆಗೆ ಬಳೆಯುವ ಗಂಜಿಯ ಕೆಟ್ಟ ವಾಸನೆ. ಯಂತ್ರಕ್ಕೆ ಎಲ್ಲವೂ ಅಲಕ್ಷ್ಯ. 'ಬಡವರ ರಕ್ತ ಹೀರಬೇಕು, ಬಲ್ಲಿದರ ದುಡ್ಡು ಸೆಳೆಯಬೇಕು, ತನ್ನವನ ಜೊಳ್ಳನ್ನು ಬಿಳಿಯಿಸಬೇಕು' ಎಂಬುದೊಂದೇ ಲಕ್ಷ್ಯ ಅದಕ್ಕೆ. ಇತ್ತ ಒಂದು ಮನುಷ್ಯಯಂತ್ರವೂ ತನ್ನ ಕಾರ್ಯಸಿದ್ಧಿಗಾಗಿ ಏನೇನೋ ಕಲ್ಪನೆಗಳನ್ನು ಕಟ್ಟುತ್ತಿದೆ. ಹೌಹಾರಿದ ಕಣ್ಣುಗಳಿಂದ ಆಗಾಗ ಆತ್ತಿತ್ತ ನೋಡುತ್ತಲಿದ್ದಾನೆ. ಅಂತು ಕೊನೆಗೊಮ್ಮೆ 'ಕಾರ್ಯಸಾಧಿಸಿದೆ' ಎಂಬ ಅತ್ಯುತ್ಸಾಹದಲ್ಲಿ ಗಿರಣಿಯ ಗಂಟಲಿನ ಕಡೆಗೇ ನೋಡುತ್ತ ಕುಳಿತ: ಯಾವಾಗ 'ಹೋಗಿರಿನ್ನು' ಎನ್ನುತಿದೆ ಎಂದು.

ತನ್ನ ಬಿಸಿಲಿನ ತಾಪದಿಂದ ಬಡವರಿಗೆ ಕಣ್ಣೀರನ್ನೂ, ಸಿರಿವಂತರಿಗೆ ಪಾನಕವನ್ನೂ ಕುಡಿಸಿ, ವಿಶ್ರಾಂತಿಗಾಗಿ ಹೊರಟಿದ್ದಾನೆ ಸೂರ್ಯ. ಹಕ್ಕಿಗಳು ಸೂರ್ಯನ ಅಭಾರ ಮುನ್ನಿಸುತ್ತವೆ. ಎಣ್ಣೆಯಿಂದ ಗಬಟವಾದ ಅರಿವೆ. ತಲೆಯಮೇಲೆಲ್ಲ ಆರಳೆಯ ಚೂರು. ಎಣ್ಣೆ ಬಸೆಯುವ ನೋರೆ. ಒಬ್ಬರ ಮುಖದ ಮೇಲೂ ಚೈತನ್ಯದ ಕಳೆ ಕಾಣದು. ಇಬ್ಬರು ಪೋಲೀಸರ ಕಣ್ಣಲ್ಲಿ ಸಾಗಿ ಬರುತ್ತಿದೆ ಕೂಲಿಕಾರರ ತಂಡ. ಮನೆ ಮುಟ್ಟಬೇಕು ಎಂಬುದೊಂದೇ ವಿಚಾರ ಅವರಿಗೆ. ಬೀದಿಯ ಇಕ್ಕೆಲಗಳಲ್ಲಿದ್ದ ತಿನಿಸುಗಳ ಕಡೆಗೆ ಅವರ ಮನಸ್ಸು ತಿರಿಯದು. 'ಓ! ಬದ್ಮಾಶ್' ಎಂದನು ಒಬ್ಬ ಯಮದೂತ. ಪೋಲೀಸರಿಂದರೆ ಪ್ರತ್ಯಕ್ಷವಾಗಿ ಯಮದೂತರು. ಎಲ್ಲರೂ ಮನೆಗೆ ಹೊರಟು ಹೋದರು. ಕೆಲವರು ವಿಶ್ರಮಿಸಿದರು. ಹಲವರು ತಮ್ಮ ಜೀವನಸಂಗ್ರಾಮದ ಸಾಹಿತ್ಯ ಸಂಗ್ರಹಿಸಲು ಪೇಟೆಗೆ ಹೊರಟು ಹೋದರು. ಆದರೆ ಒಬ್ಬನಿನ್ನೂ ಗಿರಣಿಯಲ್ಲಿಯೇ ಇದ್ದಾನೆ. ಸ್ವಲ್ಪ ಸಮಯದ ವರೆಗೆ ಎಲ್ಲೆಲ್ಲೂ ಶಾಂತತೆ. ಒಮ್ಮೆಲೆ 'ಅಯ್ಯೋ! ಯಪ್ಪಾ ಮಾರಾಯ್ರು' 'ಚಿಳ್ ಚಿಳ್' ಎಂಬ ಹೃದಯವಿದ್ರಾವಕವಾದ ಧ್ವನಿ ಹವೆಯಲ್ಲೆಲ್ಲಾ ಕೋಲಾಹಲವನ್ನುಂಟುಮಾಡಿತು. ತಂದೆಯವರ ಬಳಿ ಕೆಲಸವಿದ್ದ ಕಾರಣ ನಾನು ಗಿರಣಿಗೆ ಹೋಗಿದ್ದೆ. ಆಲ್ಲಿಗೆ ಧಾವಿಸಿದೆ. ಪೋಲೀಸರ ಕೈಯೊಳಗಿನ ಬೆತ್ತಗಳು ಒಂದೇ ಸವನೆ ತಿರುಗಲಾರಂಭಿಸಿದ್ದುವು. ಅವರ ಮೈಮೂಳೆ ಮೇಲೆಲ್ಲಾ ಕುಕ್ಕಡಿಗಳೆದ್ದು ಹೋಗಿದ್ದುವು. ಬಾಯಿಂದ ರಕ್ತ ಸುರಿಯುತ್ತಿತ್ತು. ನನ್ನ ತಂದೆಯವರೂ ಅಲ್ಲಿಯೆ ನಿಂತಿದ್ದರು. 'ತಂದೆ, ಬಡವ....' ಎಂದು ನಾನೆನ್ನುವಷ್ಟರಲ್ಲಿ ತಂದೆಯವರ ಕಣ್ಣಾ ಜಿಡ್ಡಿಯಾಗಿದ್ದುವು. 'ಮಾಡಬೇಕೇನು? ನಾನೂ ಅನುಭವಿಸಿದ್ದೇನೆ, ಆದರೆ ಮಾಲಕರ ಮರ್ಜಿ ಕಾಯ್ದರೆ ಹೊಟ್ಟೆಯು ತಾಂತಿ' ಎಂದು ಸುಮ್ಮನಾಗಿಬಿಟ್ಟರು. ಏರಡು ಗಜ ಅಂತರ ಕದ್ದಕಳ್ಳ ಎಂದು ತಿಳಿದು ಬಂತು—ಹಣಿಕೆಕ್ಕಿದೆ. ಅಯ್ಯೋ, ಚಿನ್ನ! ನಾಲ್ಕು ಗೋಡೆಗಳ ಮಧ್ಯೆ ಮರೆಯಾದ ಜೆನ್ನ. 'ಗಂಡ ಎರಡುಗಜಾ ಅರಿವೆ ತರತೈತಿ ಕೂಸು ಒಸಾ ಅಂಗಿ ತೊಟ್ಕೊಂಡು ಗಿಣಿಕ್ಕಿಂತಾ ಮುದ್ದಾಕ್ಕೈತಿ. ಎಂದು ಜೆನ್ನಿ ಆಶೆಯ ಗೋಪುರವನ್ನು ಬಹುದೂರ ಎತ್ತರಿಸಿದ್ದಳು. ಹೊಸ ಅಂಗಿಯ ಮುಬ್ಬಿನಲ್ಲಿ ಕೊಟ್ಟಿ ಸುಡುವುದನ್ನು ಕೂಡ ಮರೆತಿದ್ದಳು ಜೆನ್ನಿ. ಎಲ್ಲ ಜನ ಬಂದು ಡಣಿದ ದೇಹವನ್ನು ನಿದ್ರಾದೇವಿಗೆ ಒಪ್ಪಿಸಿದ್ದರಿಂದ ಎಲ್ಲೆಡೆಯಲ್ಲೂ ಮೌನವು ಮುಸುಕಿ ನಿಂತಿತ್ತು. ಆಗಾಗ ನಡುನಡುವೆ 'ಚಿರ್' ಎಂದು ಹುಳುಗಳು ಕ್ಷಣಕಾಲ ಮೌನವನ್ನು ಮುರಿಯುತ್ತಿದ್ದುವು. ಜೆನ್ನಿ ದಾರಿ ಕಾಯ್ದು ಕಾಯ್ದು ಬೇಸತ್ತಳು. 'ಬಡವಿ, ದೀಪಕ್ಕೆ ಗತಿ ಇಲ್ಲವೆ' ಎಂದು ಗುಡಿಸಿಲಿನ ಕಿಂಡಿಯೊಳಗಿಂದ ತುಂಬಿಲ್ಲ ಬೆಳಕು ಹರಡಿದ ಚಂದ್ರ ಅಸೆಯು ಮೆಟ್ಟಲು ಒಂದೊಂದೇ ಕತ್ತರಿಸತೊಡಗಿತು. ಎಷ್ಟೋ ಕೆಟ್ಟ ಕಲ್ಪನೆಗಳು ಅವಳ ಮುನದಲ್ಲಿ ನುಸುಳಿದುವು. ಏನಾದರೂ ಸ್ವಲ್ಪ ಸಪ್ಪಳವಾದರೆ ಜಿನ್ನ ಬಂದನೆಂದೇ ಸರಕ್ಕನೆ ಬಿದರು ಗಣ್ಣುಗಳಿಂದ ಬಾಗಿಲ ಬಳಿ ದೃಷ್ಟಿ ಜೆಲ್ಲುವಳು. ಕಡೆಗೆ ನಿರಾಶೆಯಲ್ಲಿ ಚಂದ್ರನನ್ನೇ ನಿಟ್ಟಿಸುತ್ತ ಕುಳಿತಳು. ಕೂಸು ಅರಚಿ ಅರಚಿ ನಿದ್ರೆಯಲ್ಲಿ ಬೆರೆತು ಹೋಯ್ತು. ಚಂದ್ರನೂ ಜೆನ್ನಿಯ ಸಾಕ್ಷ್ಯ ನುಡಿಯಲಿಲ್ಲ. ಕಡೆಗೆ—ಕಡೆಗೆ—ಬಂಡವಲು-ಶಾ ಚಿನ್ನನಿಗೆ ಇಡಿಸಿದ ಚಿನ್ನದುಂಗರದ ಸುದ್ದಿ ತಿಳಿದು ಬಂದಾಗ ಜೆನ್ನಿಯೊಬ್ಬಳು ಮಹಾಮಾರಿಯಂತೆ ಕಾಣುತ್ತಿದ್ದಳು.

ಅವಳು ರಾತ್ರಿಯೆಲ್ಲವೂ ಚೀರಾಡಿದಳು: "ಈ ಬಾನರಕದಲ್ಲಿ ಬಂಡವಲುಗಾರರ ಬಂಡಾಟಿಕೆಯು ನಾಶವೆಂದಿಗೆ?

ಆದರೆ ಅವಳ ಚೀರನ್ನು ಯಾರು ಕೇಳುವವರು?

---

(೪೬೦ನೆಯ ಪುಟದಿಂದ ಮುಂದೆಸಾಗಿದ್ದು.)

ವುದು. ಹೀಗೆ ಮಾಡಿದಲ್ಲಿ ಯಾವ ಬಡಮನುಷ್ಯನನ್ನೂ ಸುಲಿಬ ಆಗದು ಮತ್ತು ಯಾವ ಸಿರಿವಂತನಿಗೂ ಕರವನ್ನು ಕಟ್ಟು ಅಗತ್ಯವಿಲ್ಲ. ಮೇಲಾಗಿ ಇಂದು ನಾವು ಸುಖದ ಶಪ್ಪುಕಲ್ಪ ಯಿಂದ ಪೃಥ್ವಿಯು ತನ್ನ ಮಕ್ಕಳಿಗೆ ಕಾದಿರಿಸಿದ ಶಕ್ತಿಸಂಚಯವನ್ನು—ನಮ್ಮ ಮಕ್ಕಳು-ಮರಿಗಳ ಹಿತವನ್ನು ಸಹಿತ ಲಕ್ಷಿಸದೆ ಹಾಳು ಮಾಡುತ್ತಲಿದ್ದೇವೆ. ಅಣುವಿನಲ್ಲಿ ಅಡಗವಾದ ಶಕ್ತಿಯ ಸದುಪಯೋಗವು ಬೇಗನೆ ತಿಳಿಯದಿದ್ದಲ್ಲಿ ಮತ್ತು ನಾವು ಹೀಗೆ ದಿವಾಳಿಯಾಗುವ ವ್ಯವಹಾರವನ್ನು ಸಾಗಿಸದಲ್ಲಿ, ನಮ್ಮ ಮುಂ ನವರು, ದುಂದುಗಾರರೂ ತಮ್ಮ ಹಿತವನ್ನೆ ತಿಳಿಯದವರೂ ನಮ್ಮನ್ನು ದೂಷಿಸುವುದರಲ್ಲಿ ಏನೂ ಸಂದೇಹವಿಲ್ಲ. ಕೆ ಪೊದಲು ಜನ್ಮವೆತ್ತಿದ್ದೇವೆ ಎಂಬ ಒಂದೇ ಕಾರಣದ ಮೂ ಪೃಥ್ವಿಯ ಶಕ್ತಿ-ಸಂಚಯವನ್ನು ನಿರ್ನಾಮ ಗೊಡುವ ಹಕ್ಕು ನ ಗಿಲ್ಲ. ನಮ್ಮಷ್ಟೇ ಹಕ್ಕು ಮುಂದಿನವರಿಗಾದರೂ ಉಂಟಲ್ಲ

ಸೂರ್ಯನಿಂದ ಉದ್ಭೂತವಾದ ಶಕ್ತಿ-ಝರಿಗಳನ್ನು ಕು ಮುಂದೆ ವಿವೇಚಿಸೋಣ.

---



# ಕರ್ನಾಟಕದ ಚಳುವಳಿಯಲ್ಲಿ ಧಾರವಾಡದ ಭಾಗ

( ಸ್ವಸ್ಥೀಕರಣದ ನಾಲ್ಕನೆಯ ಕಂತು )

★

ಶೀ. ಮುದವೀಡು ಕೃಷ್ಣರಾಯರು, ಧಾರವಾಡ

ಬ್ರಿಟಿಷರು ಕರ್ನಾಟಕಕ್ಕೆ ಕಾಲಿಕ್ಕತೊಡಗಿದಾಗ ಉತ್ತರ ಕರ್ನಾಟಕದ ರಾಜಕೀಯ ಪರಿಸ್ಥಿತಿ ಹೇಗಿತ್ತು? ಇಲ್ಲಿಯ ಕನ್ನಡಿಗರ ಸ್ವಾತಂತ್ರ್ಯ ಯಾರು ಅಪಹರಿಸಿದ್ದರು? ಕನ್ನಡ ಭಾಷೆ-ಸಂಸ್ಕೃತಿಗಳ ಸಂರಕ್ಷಣೆಗೆ ಅವಕಾಶವೇನಾದರೂ ಇದ್ದಿತೆ?

★

ವಿಜಯನಗರದ ವೈಭವಸಂಪನ್ನ ಸಾಮ್ರಾಜ್ಯದ ವಿನಾಶದೊಂದಿಗೆ ಕನ್ನಡ ಜನಾಂಗದ ಭಾಗ್ಯಭಾನುವು ಅಸ್ತಂಗತನಾದನು. ಕನ್ನಡನಾಡಿನ ನಭೋಮಂಡಲದಲ್ಲಿ ಆಗ ಹಬ್ಬಿಕೊಂಡ ಕಾರ್ಗತ್ತಲೆಯಲ್ಲಿಯೂ, ಅಲ್ಲಲ್ಲಿ ರಾಜಕೀಯಾಧಿಕಾರವನ್ನು ತಮ್ಮ ತಮ್ಮ ಮಟ್ಟಿಗೆ ಅಳವಡಿಸಿಕೊಂಡು ಮಿನುಗುವ ಚಿಕ್ಕಪುಟ್ಟ ತಾರೆಗಳು ಮಿನುಗುತ್ತಿದ್ದುದು ಕಂಡುಬರುತ್ತದೆ. ಆದರೆ ಪ್ರಬಲವಾದ ಬಲಿಷ್ಠವಾದ ಕರ್ತೃತ್ವಸಂಪನ್ನವಾದ ಪ್ರಭಾವಶಾಲಿಯಾದ ಕೇಂದ್ರ ಪ್ರಭುತ್ವದ ನಿಯಮ-ನಿಯಂತ್ರಣಗಳ ಅಭಾವದ ಮೂಲಕ, ಜನ-ಜೀವನದಲ್ಲಿ ಒಂದುಬಗೆಯ ಅನವಸ್ಥೆಯುಂಟಾಗಿ, ಕನ್ನಡ ಜನಾಂಗದ ಸುಸಂಘಟಿತ ಬಾಳುವೆಗೆ ಅವಕಾಶವೇ ಇಲ್ಲವಾಯಿತು. ಹೀಗೆ ಪುರಾತನಕಾಲದಿಂದಲ ಪ್ರಸಿದ್ಧವಾಗಿದ್ದ ಕನ್ನಡನಾಡು, ಕೀರ್ತಿ-ಶೇಷ— ನಾಮಶೇಷವಾಗುವ ಹೊತ್ತು ಒಂದು. ಮುಂದೆ ಮೈಸೂರೊಡೆಯರ ಮನೆತನವು ಉದಯವಾಗಿ "ಕರ್ನಾಟಕ ರತ್ನ ಸಿಂಹಾಸನಾಧೀಶ್ವರ" ರೆಂಬ ಬಿರುದನ್ನು ಒಳಿಯಿಸಿಕೊಂಡು ಬಹು-ಮಟ್ಟಿಗೆ ಉತ್ಕರ್ಷದ ಮಾರ್ಗವನ್ನನುಸರಿಸುವುದು ಕಂಡುಬಂದಾಗ, ಕನ್ನಡಜನಾಂಗದ ಇಳಿಗಾಲದಲ್ಲಿಯೂ ಒಂದು ಉಳಿಗಾಲದ ಆಶಾಕಿರಣದ ಮುಂಬೆಳಗು ತೋರಹತ್ತಿತು; ಆದರೆ ದುರ್ವಿಧಿ-ಘಟನೆಯಿಂದ ಈ "ಕರ್ನಾಟಕ ರತ್ನಸಿಂಹಾಸನ" ಕ್ಕೂ ಬಾಳಿ ಬಂದು, ಹೈದರಾಲಿ-ಟೀಪೂಸುಲ್ತಾನರ "ಸುಲ್ತಾನೀ" ಪ್ರಭಾವಕ್ಕೆ ಕನ್ನಡನಾಡು ಒಳಗಾಗಬೇಕಾಯಿತು. ಮುಂದೆ ಶ್ರೀರಂಗಪಟ್ಟಣದ ಯುದ್ಧದಲ್ಲಿ ಟೀಪುವಿನ ಪರಾಭವವಾದಮೇಲಂತೂ ಕನ್ನಡನಾಡಿನ ಹೆಸರು ಎಲ್ಲೆಲ್ಲಿಯೂ ಕೇಳಿಬರದಂಥ ಪ್ರಸಂಗಬಂದುದು ಇತಿಹಾಸ ಬಲ್ಲವರಿಗೆ ಅರಿಯದ ಮಾತಲ್ಲ. ಈಸ್ಟ್‌ಇಂಡಿಯಾ ಕಂಪನಿಯ ದಂಡಾಧಿಕಾರಿಗಳು ಹೈದರಾಲಿ--ಟೀಪೂಸುಲ್ತಾನರಮೇಲೆ ನಡೆಯಿಸಿದ ಆಭಿಯೋಗಗಳಿಗೆ "ಮೈಸೂರಿನ ದಂಡಯಾತ್ರೆ" ಗಳೆಸರಿಟ್ಟು ಇತಿಹಾಸದಲ್ಲಿ ಬಣ್ಣಿಸಿರುವುದುಂಟು. ಮುದರಾ ಬೆಳೆಯುತ್ತ ನಡೆದಿದ್ದ ಈ ಕಂಪನಿಯು ಕಾರಭಾರದ ಕೇಂದ್ರ ಈ ದಂಡಯಾತ್ರೆಗಳ ನಿಯಮನ-ನಿಯಂತ್ರಣ ನಡೆಯುತ್ತಿದ್ದ ಮೂಲಕ, ಇಲ್ಲಿಯ ವಸ್ತುಸ್ಥಿತಿಯನ್ನರಿಯದ ಕಂಪನಿಯ ಅಧಿಕಾರಿಗಳ ಆಜ್ಞಾನದಿಂದ ಆಗಲೇ ಕನ್ನಡನಾಡಿನ ಹೆಸರಿಗೆ ಅರಿದಾಳ ಬಡಿದಂತಾಯಿತು. ಟೀಪುವಿನ ಕೊನೆಗಾಲದ ಕರ್ನಾಟಕರಾಜ್ಯವನ್ನು ಈಸ್ಟ್‌ಇಂಡಿಯಾ ಕಂಪನಿಯು ಆಕ್ರಮಿಸಲಣಿಯಾದಾಗ, ಟೀಪುವನ್ನು ಮುರಿಯಲು ತನಗೆ ಸಹಕಾರಿಗಳೆಂಬ ಭಾವನೆಯಿಂದ ಬಗಲೊಳಗೆ ಹಿಡಿದಿದ್ದ ಮರಾಟರಿಗೂ ನಿಜಾಮನಿಗೂ ಸಾಲು ಕೊಡದೆ ನಡೆಯುವಂತಿರಲಿಲ್ಲ. ಹೀಗೆ ಆ ಕಾಲಕ್ಕೆ ಗೆಳತನದ ಹೆಸರಿನಿಂದ ಒಂದಾಗಿದ್ದಂತೆ ನಟಿಸುತ್ತಿದ್ದ ಮೂರು ರಾಜಕೀಯ ಪ್ರಭುತ್ವಗಳು ತಮ್ಮೊಳಗೆ ಹರಿದು ಹಂಚಿಕೊಂಡಿದ್ದರಿಂದ, ಅಂದಿನ ವರೆಗೂ ಉಳಿದುಬಿದ ಪುರಾತನಪರಂಪರಾಗತ ಕರ್ನಾಟಕ ರಾಜ್ಯವಿಚ್ಛೇದನಕಾರ್ಯವು ಸಂಪೂರ್ಣವಾಗಿ, ಕನ್ನಡನಾಡು "ಹೆಸರಾದರೂ ಕೂಡ ಹೇಳಹೆಸರಿಲ್ಲ" ಎಂದು ನಮ್ಮ ನಾಡಕವಿಗಳು ಹಾಡಬೇಕಾದ ಮಹಾವಿಪತ್ತಿಗೆ ಒಳಗಾಯಿತು.

ಇಂಥ ವಿಪನ್ನಾವಸ್ಥೆಯಲ್ಲಿಯೂ ಅಖಂಡ ಕನ್ನಡನಾಡಿನ ವಿಶಿಷ್ಟಸಂಸ್ಕೃತಿಯ ಹೆಗ್ಗುರುತಾದ "ಕರ್ನಾಟಕತ್ವ" ವು ನಶಿಸಿ ಹೋಗದಂತೆ, ಅದನ್ನು ಒಂದುಬಗೆಯ ಪರಂಪರೆಯಿಂದಲೇ ಉಳಿಸಿಕೊಂಡು ಬೆಳಸಿಕೊಂಡುಬಂದ ಹಿರಿಹೆಮ್ಮೆಯು ಧಾರವಾಡಕ್ಕೆ ಹೇಗೆ ವೀಸಲಾಗಿರುವುದೆಂಬುದನ್ನು ಹಿಂದಿನ ಬರೆಹಗಳಲ್ಲಿ ವಿವರಿಸಲಾಗಿದೆ. ಈ ಹಿರಿಮೆಯು ಧಾರವಾಡಕ್ಕೇ ಸಲ್ಲುವಂತೆ ೧೮ನೆಯ ಶತಮಾನದ ಕೊನೆಗೆ ಹಾಗು ೧೯ನೆಯ ಶತಮಾನದ ಆರಂಭಕ್ಕೆ

ಯಾವ ಐತಿಹಾಸಿಕ ಘಟನೆಗಳು ನೆರವಾದುವೆಂಬುದನ್ನು ಈಗಿನ ಕನ್ನಡ ಜನಾಂಗವು ಸೂಕ್ಷ್ಮನಿರೀಕ್ಷಣೆಯಿಂದ ಅರಿತುಕೊಳ್ಳುವುದು ಅಗತ್ಯವಾಗಿದೆ. ಯಾಕೆಂದರೆ ಆಗ ಮಾತ್ರ, ಅಖಂಡ ಕನ್ನಡನಾಡು ನುಡಿ-ಜನಾಂಗಗಳ ಪ್ರಾಚೀನ ಪ್ರಾಶಸ್ತ್ಯಕ್ಕೆ, ಶ್ರೇಷ್ಠತೆಗೆ, ಕೀರ್ತಿಗೆ, ಒಪ್ಪುವಂತಹ ಹೊಸಗನ್ನಡನಾಡನ್ನು ಕಟ್ಟಬೇಕಾದ ಮಹತ್ಕಾರ್ಯದಲ್ಲಿ ಧಾರವಾಡವೇ ಮುಂದಾಗಿ, ಕನ್ನಡನಾಡಿಗೆಲ್ಲ ದಿಗ್ದರ್ಶಕವಾಗಿ, ಕನ್ನಡಿಗರ ಸರ್ವತೋಮುಖ ಉತ್ಕರ್ಷಕ್ಕೆ—ಉನ್ನತಿಗೆ—ಅಭ್ಯುದಯಕ್ಕೆ—ಬೀಜಭೂತವಾದ, ಮೂಲಭೂತವಾದ, ಅನೇಕ ಉಪಕ್ರಮಗಳನ್ನು ಕಾಲಕಾಲಕ್ಕೆ ನಿಷ್ಕರ್ಷಿಸಿ, ಕೈಕೊಂಡು, ಅವುಗಳ ಪ್ರಚಾರಪ್ರಸಾರಮಾಡಿ, ಕನ್ನಡ ಜನಾಂಗದ ಸುಸಂಘಟಿತ ಸುಸಂಸ್ಕೃತ ಜೀವನದ ಯಥಾರ್ಥಪರಿಚಯವು ನಾಡಿನಲ್ಲೆಲ್ಲ ಕಡೆಗೆ ಪಬ್ಬುವಂತೆ ವಿವಿಧಬಗೆಯ ಪ್ರಯತ್ನಮಾಡಿ "ಸಂಯುಕ್ತಕರ್ನಾಟಕರಾಷ್ಟ್ರ" ಪುನರ್ನಿರ್ಮಾಣಕ್ಕೆ ಆಗತ್ಯವಾಗಿ ಬೇಕಾದ ತಕ್ಕುದಾದ ಗಟ್ಟಿಮುಟ್ಟಾದ ಅಸ್ತಿವಾರವನ್ನು ನಿರ್ಮಿಸುವ ಮಹತ್ಕಾರ್ಯದಲ್ಲಿ ತನಗೆ ಎದುರಾಗಿಬಂದ ಅಸಂಖ್ಯ ಎಡರು-ತೊಡರು ತೊಡಕು-ತೊಂದರೆಗಳನ್ನು ಎದೆಗಾರಿಕೆಯಿಂದ ಎದುರಿಸಿ, ದಾಟಿ, ಬಿಡಿಸಿ, ಬಡಿದೊತ್ತಿ, ಪೆಟ್ಟಿ ಮುನ್ನುಗ್ಗುತ್ತ ನಡೆದಿರುವುದರ ಗುಟ್ಟು ನಿಚ್ಚಳವಾಗಿ ಮನದಟ್ಟಾಗುವುದು. ಆದುದರಿಂದ ಈ ಹಿನ್ನೆಲೆಯನ್ನು ಮೊದಲು ಕೊಂಚ ನೋಡಿಕೊಂಡು, ಮುಂದಿನ ಸಂಗತಿಗಳಕಡೆಗೆ ಗಮನಕೊಡುವುದು ಅತ್ಯಂತ ಇಷ್ಟವೂ ಅವಶ್ಯಕವೂ ಆಗಿರುವುದು.

ಸಾವಿರವರ್ಷಗಳ ಹಿಂದೆಯೆ ಚಕ್ರವರ್ತಿ ನೃಪತುಂಗನು "ಕನ್ನಡದ ತಿರುಳ್" ಎಂದು ಕೊಂಡಾಡಿದ ಈ ನಮ್ಮ ಧಾರವಾಡ ಸೀಮೆಯ ಕನ್ನಡನಾಡು, ನೃಪತುಂಗನ ಕಾಲಕ್ಕಿಂತಲೂ ಎಷ್ಟು ಮೊದಲಿನಿಂದಲೂ ತನ್ನ "ಕನ್ನಡದ ತಿರುಳ್ತನ" ವನ್ನು ಬೆಳೆಯಿಸಿಕೊಂಡು ಬಂದಿರಬೇಕೆಂಬುದನ್ನು ಯಾರು ಊಹಿಸಬಲ್ಲರು? ಹೀಗೆ ಇತ್ತಕಡೆಯ ಜನಜೀವನದ ಏಳುಬೀಳುಗಳಲ್ಲಿ ರಕ್ತನಾಳಗಳಲ್ಲಿ ಸಾವಿರಾರು ವರ್ಷಗಳ ಸತತಸಂಸ್ಕಾರದಿಂದ, ಅಭ್ಯಾಸದಿಂದ, ಪರಿಶ್ರಮದಿಂದ ಅಖಂಡವಾಗಿ ಬೆಳೆದು ಮೈಗೂಡಿ ಸಮರಸವಾಗಿ ಬೆರೆತುಕೊಂಡಿದ್ದ ಕನ್ನಡತನವು, ನೂರಿನ್ನೂರುವರ್ಷಗಳ ಪರಕೀಯರ—ಪರಭಾಷೆಯವರ ದಾಳಿ-ದಾವಳಿಗಳಿಂದ ನಿರ್ನಾಮವಾಗುವುದು ಅಶಕ್ಯಕೋಟಿಯು ಮಾತು. ಕ್ರಿಸ್ತಶಕದ ಹದಿನಾರನೆಯ ಶತಕದ ಉತ್ತರಾರ್ಧದಲ್ಲಿ ವಿಜಯನಗರದ ಪ್ರಭುತ್ವವು ವಿಲಯವಾಗಿಹೊಂದಿದ ನಂತರದಲ್ಲಿಯೂ ಇತ್ತಕಡೆಯ ನಾಡ ಧುರೀಣರು ಒಂದು ಪ್ರಕಾರದ ಸ್ವತಂತ್ರವೃತ್ತಿಯಿಂದಲೆ ತಮ್ಮತಮ್ಮ ಅಂಕಿತಸೀಮೆಗಳ ಆಡಳಿತವನ್ನು ಹೊದಲಿನಂತೆಯೆ ನಡಿಸುತ್ತಿದ್ದರು. ವಿಜಾಪುರದ ಆದಿಲ್‌ಶಾಹಿಯ ದಂಡಾಧಿಕಾರಿಗಳ ಉಪಟಳವಾಗಲಿ, ವಿಜಯನಗರ ಸಾಮ್ರಾಜ್ಯದ ಸುನಿಯಂತ್ರಿತ ರಾಜ್ಯಭಾರಕ್ರಮದಿಂದ ಸ್ಫೂರ್ತಿಗೊಂಡು ಸ್ವಧರ್ಮಸಂರಕ್ಷಣೆಯ ಸಂಕಲ್ಪದಿಂದ ಸ್ವರಾಜ್ಯಸಂಸ್ಥಾಪನೆಗೆ ಬದ್ಧಕಂಕಣನಾಗಿ ಕೈಯಿಕ್ಕಿದ ಛತ್ರಪತಿ ಶ್ರೀಶಿವಾಜೀ ಮಹಾರಾಜನ ತಾತ್ಕಾಲಿಕ ಆಧಿಯೋಗಗಳಾಗಲಿ, ದಿಲ್ಲಿಯ ಮೊಗಲ್ ಸಾಮ್ರಾಜ್ಯದವರು ಇತ್ತಕಡೆಗೆ ಕೈಕೊಂಡ ದಂಡಯಾತ್ರೆಗಳಾಗಲಿ, ಪೇಶ್ವೆಯರ ಕಾಲದ ದಾಳಿಗಳಾಗಲಿ, ಹೈದರಲ್ಲಿ ಟೀಪೂ ಸುಲ್ತಾನರ ರಾಜ್ಯವಿಸ್ತರಣದ ದಿಗ್ವಿಜಯಗಳಾಗಲಿ, ಇತ್ತಕಡೆಯ ನಾಡಿನ ಜನರ ಜೀವನಪ್ರವಾಹದಲ್ಲಿ ಯಾವ ಅಭ್ಯಂತರವನ್ನೂ ಉಂಟುಮಾಡಲಿಲ್ಲ. ತಮ್ಮನ್ನು ಸುತ್ತಿಕೊಂಡು ಬಂದ, ಮುತ್ತಿಕೊಂಡು ಬಂದ, ಪರಚಕ್ರದೊಡನೆ ಸ್ವಸಂರಕ್ಷಣೆಗಾಗಿ ಕೈಯಲ್ಲಾದಷ್ಟು ಹೆಣಗಿ ಹೋರಾಡುವುದು, ಮೀರಿ ಬಂದರೆ ಅವರಿಗೆ ಅಧೀನರಾಗಿ ಅವರ ಹಿರಿತನಕ್ಕೆ ತಲೆತಗ್ಗಿಸಿ ಕಪ್ಪ-ಕಾಣಿಕೆಗಳನ್ನು ಸಲ್ಲಿಸಲು ಒಪ್ಪಿಕೊಂಡು, ತಮ್ಮಪ್ರಾದೇಶಿಕ ಒಡೆತನವನ್ನೂ ಆಧಿಕಾರವನ್ನೂ ವರ್ಚಸ್ಸುವನ್ನೂ ಉಳಿಸಿಕೊಂಡು ನಾಡಿನ ಸಾಮಾನ್ಯ ಜನರ ಜೀವನಯಾತ್ರೆಯಲ್ಲಿ ಯಾವ ವಿಧದದ ವ್ಯತ್ಯಾಸವಾಗದಂತೆ ನಾಡಿನ ಮುಖಂಡರಾದವರು ನೋಡಿಕೊಳ್ಳುತ್ತಿದ್ದರು. ಸಾತಾರೆ-ಕೊಲ್ಹಾಪುರಗಳ ರಾಜಮನೆತನಗಳ ದಾಯಾದ ಮತ್ಸರದ ಮೂಲಕ ಹಾಗು ಪುಣೆಯ ಪೇಶವೆಯರ ಮನೆತನದಲ್ಲುಂಟಾದ ತೊಡಕುಗಳ ಮೂಲಕ, ಮೈಸೂರಿನ ಹೈದರಾಲಿ ಟೀಪುಸುಲ್ತಾನರ ಉಪಟಳಕ್ಕೆ ಕೃಷ್ಣಾ-ತುಂಗಭದ್ರಾ ನದಿಗಳ ನಡುವಿನ ಈ ಪ್ರದೇಶವು ಒಂದು ಬಗೆಯಿಂದ ಪ್ರತ್ಯಕ್ಷ ಕಾಳೆಗದ ಕಣವಾಗಿದ್ದಂತೆ ಕಂಡರೂ, ಪೇಶ್ವೆಯರ ದಂಡನಾಯಕರಾದೂ ಕೃಷ್ಣೆಯ ದಕ್ಷಿಣಕ್ಕೆ ಬಂದು ನೆಲಸಿ, ಮಹಾರಾಷ್ಟ್ರ ರಾಜ್ಯದ ಗಡಿಗಾವಲಿನ ಹೊಣೆಯನ್ನು ಹೊತ್ತು ನಿಲ್ಲಲಿಲ್ಲ. ಶ್ರೀರಂಗಪಟ್ಟಣದಲ್ಲಿ ಟೀಪುವಿನ ಪರಾಭವವಾದನಂತರ, ಕೃಷ್ಣಾ-ತುಂಗಭದ್ರಾ ನಡುವಿನ ಈ ಪ್ರದೇಶವು ಪೇಶ್ವೆಯರಿಗೆ ನಿಷ್ಕಂಟಕವಾಗಿ ಒಪ್ಪಿಸಲ್ಪಟ್ಟರೂ, ಮದ್ರಾಸಿನ ಈಸ್ಟ್ ಇಂಡಿಯಾ ಕಂಪನಿಯ ದಂಡಾಧಿಕಾರಿಗಳ ನೆರವಿಲ್ಲದೆ ಈ ಭಾಗದಲ್ಲಿ ಮರಾಠರ ಸುವ್ಯವಸ್ಥಿತ ರಾಜ್ಯಭಾರಕ್ಕೆ ಅವಕಾಶವೆ ಉಂಟಾಗಲಿಲ್ಲ. ಕ್ರಿಸ್ತಾಬ್ದ ೧೭೦೦ ರಲ್ಲಿ ಮೈಸೂರುಸೀಮೆಯೊಳಗಿದ್ದ ಈಸ್ಟ್ ಇಂಡಿಯಾ ಕಂಪನಿಯ ಪ್ರಮುಖ ದಂಡಾಧಿಕಾರಿಯಾಗಿದ್ದ ಕರ್ನಲ್ ವೆಲೆಸ್ಲಿಯು ತನ್ನ ವರಿಷ್ಠಾಧಿಕಾರಿಗಳಿಗೆ ಬರೆದ ವಿವರಣೆಯಲ್ಲಿ ಈ ಮಾತು ಸ್ಪಷ್ಟವಾಗಿದೆ: ಆ ಕಾಲಕ್ಕೆ ಧುಂಡಿಯಾ ವಾಘನೆಂಬವನ ಪುಂಡಾಟಿಕೆಯು ಈ ಪ್ರದೇಶದಲ್ಲಿ ಮಿತಿಮೀರಿತ್ತಂತೆ. ಪೇಶ್ವೆಯರ ಸುಪ್ರಸಿದ್ಧ ಸೇನಾನಿಗಳಾಗಿದ್ದ ಪರಶುರಾಮಭಾವು ಪಟವರ್ಧನರೇ ಮೊದಲಾದವರು ಪುಣೆಯ ಪೇಶವಾಯಿಯನ್ನು ಉಳಿಸುವುದಕ್ಕೆ ತೊಡಗಿದಾಗ, ಇತ್ತ ಧುಂಡಿಯಾ ವಾಘನ ಉಪಟಳಕ್ಕೆ ಅಡ್ಡಂಕಿಯನ್ನು ಒಡ್ಡಿ, ಅವನನ್ನು ಹಣ್ಣುಮಾಡುವುದು ಮರಾಠರ ದಂಡಾಧಿಪತಿಗಳಿಗೆ ಶಕ್ಯವಾವಂತೆ ತೋರಲಿಲ್ಲ. ಆದುದರಿಂದಲೆ ಕರ್ನಲ್ ವೆಲಸ್ಲಿಯು ಟೀಪುವಿನ ಮರಣದ ನಂತರ ಕಂಪನಿಗೆ ಅಂಕಿತವಾಗಿದ್ದ ಕನ್ನಡಜಿಲ್ಲೆಯ ಉತ್ತರಪ್ರದೇಶದ ಸುಂಡಾ (ಸ್ವಾದಿ) ವಿಭಾಗದಲ್ಲಿಯೂ, ಮರಾಟರಿಗೆ ಒಪ್ಪಿಸಲ್ಪಟ್ಟ ಭಾಗದ

ಗಡಿಸೀಮೆಯಲ್ಲಿಯೂ ಸುಖ-ಸಮಾಧಾನ-ಶಾಂತಿಗಳನ್ನು ನೆಲೆಗೊಳಿಸಲು ತನ್ನ ವರಿಷ್ಠ ಅಧಿಕಾರಿಗಳ ಆದೇಶವನ್ನು ಪಡೆದು ಕೊಂಡು, ತುಂಗಭದ್ರೆಯನ್ನು ದಾಟಿ, ಮರಾಟರ ವಶವರ್ತಿಯಾಗಿದ್ದ ಈ ಭಾಗದಲ್ಲಿ ಹೊಕ್ಕು, ಧುಂಡಿಯಾವಾಘನನ್ನು ಬಿನ್ನಟ್ಟಿ, ಕೊನೆಗೆ ನಿಜಾಮರ ರಾಜ್ಯದಲ್ಲಿ ಒಂದು ಹಳ್ಳಿಯಲ್ಲಿ ಅಕಸ್ಮಾತ್ತಾಗಿ ಸೆರೆಹಿಡಿದು, ಆತನನ್ನು ಕೊಂದು ಹಾಕಿದಂತೆ ಉಲ್ಲೇಖವಿದೆ. ಪುಣೆಯ ಪೇಶವಾಯಿಯು ಅದಕ್ಕೆ ಅಂಕಿತಗಾಗಿದ್ದ ದಂಡಾಧಿಪರ ಅಸೂಯೆ, ಮತ್ಸರ ಮುಂತಾದುವುಗಳ ಮೂಲಕ ಹೊಯ್ದಾಡಹತ್ತಿದ ಕಾಲಕ್ಕೇ ಹೀಗೆ ಈಸ್ಟ್ ಇಂಡಿಯಾ ಕಂಪನಿಯು ಮದ್ರಾಸಿನತ್ತ ಕಡೆಯ ದಂಡನಾಯಕರು ಈ ಸೀಮೆಯನ್ನೆಲ್ಲ ರಾಜಕಾರಣದ ನಿಮಿತ್ತದಿಂದ ನಿರೀಕ್ಷಿಸಿ, ಮುಂದೆ ಇದನ್ನು ಕಬಳಿಸಲು ತಕ್ಕ ಸನ್ನಿವೇಶವನ್ನುಂಟು ಮಾಡಿದ್ದರೆಂದೂ ಹೇಳಬಹುದು.

ಹೀಗೆ ನಮ್ಮೀ ಧಾರವಾಡ ಸೀಮೆಯು ಪ್ರದೇಶವು ಹೆಸರಿಗೆ ಪೇಶವೆಯರ ವಶಕ್ಕೆ ಹೋದಂತಾದರೂ ಮದರಾಸಿನಲ್ಲಿ ನೆಲಸಿದ್ದ ಬ್ರಿಟಿಶರ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳ ಸಂಪರ್ಕವೆ ನಮ್ಮಿತ್ತಕಡೆಗೆಲ್ಲ ಆಗಿನಿಂದಲೂ ಪ್ರಸ್ಥಾಪಿತವಾಗಿತ್ತೆಂಬುದು ಸ್ಪಷ್ಟವಾಗಿದೆ. ಪೇಶವೆಯರ ನರದಾರದ ಅನಾಯಕ ಆಡಳಿತಕ್ಕೆ ಬೇಸತ್ತು, ಇತ್ತಕಡೆಯ ಜನಾಂಗವು ಕ್ರಾಂತಿಯನ್ನು ಬಯಸುತ್ತಿರುವುದೆಂದೂ, ಪ್ರಜಾರಕ್ಷಣ ನಮರ್ಥವಾದ ಬೇರೆ ಪ್ರಭುತ್ವವನ್ನು ಮಹಾರಾಷ್ಟ್ರದಲ್ಲಿ ನೆಲೆಗೊಳಿಸುವುದಾದರೂ ಕೃಷ್ಣಾನದಿಯ ದಕ್ಷಿಣ ಪ್ರದೇಶವನ್ನೆಲ್ಲ ಬ್ರಿಟಿಶರಿಗೆ ಬಿಟ್ಟುಕೊಡುವಂತೆ ಮೊದಲೆ ವ್ಯವಸ್ಥೆಯಾಗಬೇಕೆಂದೂ, ೧೮೧೭ ರಲ್ಲಿ ಇತ್ತಕಡೆಗೆ ಕಂಪನಿಯ ಸೇನಾಧಿಕಾರಿಯಾಗಿ ಬಂದಿದ್ದ ಕರ್ನಲ್ ಮನ್ರೊ ಇವನು, ಬ್ರಿಟಿಶ್ ಕಂಪನಿಯ ಗವ್ಹರ್ನರ್ ಜನರಲ್‌ನಿಗೆ (೩೮-೧೧-೧೮೧೭ ಕ್ಕೆ) ಬರೆದ ಪತ್ರದಲ್ಲಿ ಕಾಣಿಸಿರುವನು. ಈ ಒಳಗಾಗಿಯೆ ಧಾರವಾಡ ಭಾಗವು ಕಂಪನಿಯ ದಂಡಿನ ವೆಚ್ಚಕ್ಕೆಂದು ಪೇಶವೆ ಬಾಜೀರಾಯನಿಂದ ಬ್ರಿಟಿಶರಿಗೆ ಒಪ್ಪಿಸಲ್ಪಟ್ಟಿತ್ತು. ಇಲ್ಲಿಯ ಜನಸಾಮಾನ್ಯರ ವಿವರಣೆಯನ್ನು ಆತನು ತನ್ನ ಬರೆಹದಲ್ಲಿ ಹೀಗೆ ವಿವರಿಸಿದ್ದಾನೆ: "ಈ ಪ್ರದೇಶದಲ್ಲಿ ಮರಾಟರ ಜಿರಕೆಯು ಹೆಚ್ಚಾಗಿ ಕಂಡುಬಂದರೂ, ಇದು ಮರಾಠಾ ಪ್ರದೇಶವಾಗಲಾರದು. ಜನರೆಲ್ಲರೂ ಕನ್ನಡಿಗರಾಗಿದ್ದಾರೆ. ಇಲ್ಲಿ ನೆಲಸಿರುವ ಮರಾಠಾ ಭೂಮಿಯೊಡೆಯರು (ಎಂದರೆ ಜಹಾಗೀರುದಾರರು) ಮತ್ತು ಅವರ ಮುಖ್ಯ ಪರಿಚಾರಕರು ಇತ್ತ ಕಡೆಯವರಿಗೆ ಹೊರಗಿನವರಾಗಿ— ಗೆದ್ದು ತಮ್ಮನ್ನಾಳಲು ಬಂದವರಾಗಿ— ತೋರುತ್ತಾರೆ. ಇವರ ಅಶ್ವದಳಗಳೆಲ್ಲ ಮರಾತರವಾಗಿವೆ. ಅವೆಲ್ಲವೂ ತಮ್ಮ ಸ್ವಾಮಿಗೆ ಹೊಂದಿಕೊಂಡಿವೆ. ಆದರೆ ಕೋಟೆಗಳಲ್ಲಿಯೂ ಹಳ್ಳಿಗಳಲ್ಲಿಯೂ ಇರುವ ಕ್ಷಾಲ್ಬಲವೆಲ್ಲವೂ ಕನ್ನಡಿಗರದಾಗಿದೆ. ಇವರು ತಮಗೆ ಸಂಬಳಕೊಡುವ ಯಾರಿಗಾದರೂ ದುಡಿಯಲು ಯಾವಾಗಲೂ ಸಿದ್ಧರು. ಇಲ್ಲಿಯ ಎಲ್ಲ ವ್ಯವಹಾರಸ್ಥರಂತೂ ಮರಾಟರನ್ನು ಇಲ್ಲಿಂದ ಕಾಲು ಕೆತ್ತಿಸಲು ಹಾತೊರೆಯುತ್ತಿರುವರು. ಮರಾಟರ ಮನಸೋಕ್ತ ಸುಲಿಗೆಗೆ ಇವರೆಲ್ಲ ಬಲಿಯಾಗಿದ್ದಾರೆ. ಇವರ ಆಸ್ತಿಪಾಸ್ತಿಗಳೆಲ್ಲ ಎಷ್ಟೋಸಾರೆ ಮರಾಟರ ಹಾವಳಿಯಿಂದ ಮುಳುಗಿ ಹೋಗಿವೆ. ವ್ಯಾಪಾರಸ್ಥರಿಗಿಂತ ಪ್ರಬಲರಾಗಿರುವ ಗ್ರಾಮಾಧಿಕಾರಿಗಳು ಕೂಡ ಮರಾಟರ ಆಳಿಕೆಯು ಕೊನೆಗೊಂಡರೆ ಪಾರಾದೇವೆಂದು ಬಹುಶಃ ಬಯಸುತ್ತಾರೆ." (ಧಾರವಾಡದ ಗ್ಯಾಝಿಟಿಯರು, ಇಂಗ್ಲಿಷ್ ಆವೃತ್ತಿ, ಪುಟ ೪೭೮).

ಈ ಬರೆಹವು ಈಗಲೇ ಜೋಡಿದ ಮೂಲಕ, ಸದ್ಯಕ್ಕೆ ಇಷ್ಟಕ್ಕೆ ಬಿಟ್ಟು ಮಿಕ್ಕಿದುದನ್ನು ಮುಂದೆ ವಿವರಿಸುವ ಆಶ್ವಾಸನ ಕೊಡುತ್ತೇನೆ.

## ತಿದ್ದುಪಡಿ

ಮಾರ್ಚ್ (೧೯೪೬) ಸಂಚಿಕೆಯಲ್ಲಿ ಪ್ರಕಟವಾದ ೩ ನೆಯ ಲೇಖನಾಂಕದಲ್ಲಿ, ೪೩ ನೆಯ ಪುಟದ ಮೊದಲನೆಯ ಅಂಕಣದ ೨೪ ನೆಯ ಸಾಲುಗಳು ಮುಗಿದನಂತರ "ತೋರುತ್ತದೆ. ಅಂದಿನ ಸಭೆಯಲ್ಲಿ ದಿ. ಪುಣೇಕರ ನರಸಿಂಹಾಚಾರ್ಯರು ನನ್ನೊಡನೆ ಇದ್ದರೆಂದು" ಎಂಬ ಶಬ್ದಗಳು ಮುದ್ರಣವಾಗದೆ ಉಳಿದಿವೆ ವಾಚಕರು ಈ ಮಾತು ಸೇರಿಸಿಕೊಳ್ಳಬೇಕಾಗಿ ಬಿನ್ನಹ.


ಆಲ್ ಇಂಡಿಯಾ ಆಯುರ್ವೇದಿಕ ಕಾನ್‌ಫರನ್ಸ್, ೧೯೪೫ ರಲ್ಲಿ
ಬಂಗಾರದ ಪದಕ ಪಡೆದಿರುವ—ಮಲೇರಿಯಾ
ರೋಗದ ಮೇಲೆ ಅಟಂ ಬಾಂಬಿನಂತಿರುವ

ಶೇಲಢಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅವಕ್ತತೆಯ ಮೇಲೆ ರಾಮಬಾಣ! ಲಿವರ್, ಪೊಟ್ಟಿನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ. ಕ್ವಿನಾಯಿನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ಪಾಪರಿಸುವರು ೧೦೦೦ ಗುಳಿಗೆಗಳಿಗೆ ರೂ. ೧೫; ೧೦ ಕ್ಕೆ ೧-೧೬-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಢಾ ಕೆಮಿಕಲ್ ಕಂಪನಿ, ಸಿರಸಿ, ಉ ಕ.

ಸೋಲ್ ಏಜಂಟರು:—

ಎಸ್. ಎಲ್. (ಅಪ್ಪುರಾವ) ಧಾಕಪ್ಪಾ.
ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ
ಹಂಚುವವರು:
ಫ್ರೆಂಡ್ಸ್ ಸ್ಟೋರ್, ಧಾರವಾಡ.




## ೫೦. ರತಿದೇವಿ ಮತ್ತು ಇತರ ಕಥೆಗಳು

( ಕಥಾಸಂಗ್ರಹ )

ಬರೆದವರು : ಶ್ರೀ. ಎಂ. ವಿ. ಸೀತಾರಾಮಯ್ಯನವರು.

ಪ್ರಕಾಶಕರು : ಸತ್ಯಶೋಧನ ಪುಸ್ತಕಭಾಂಡಾರ, ಬೆಂಗಳೂರು ನಗರ.

ಇದರಲ್ಲಿ ಏಳು ಕತೆಗಳು ಸಂಗ್ರಹಗೊಂಡಿವೆ. ಮೂರನೆಯದಾಗಿರುವ 'ಟೊಲೆಸ್ಟೊ' ಎಂಬುದು ರಷ್ಯದ ಪ್ರಸಿದ್ಧ ಸಾಹಿತ್ಯಿಕ ಮ್ಯಾಕ್ಸಿಂ ಗಾರ್ಕಿಯ ಕತೆಯೊಂದರ ಅನುವಾದ! ಇದೇ ಕತೆ ಹಿಂದೊಂದು ಸಲ, ಜಯಕರ್ನಾಟಕದಲ್ಲಿ — ಇನ್ನಾರಿಂದಲೊ ಭಾಷಾಂತರಿತವಾಗಿ — ಬಂದಿದ್ದುದುಂಟು. ಕುರೂಪಿಯಾದ ಹೆಂಗುಸೊಬ್ಬಳ ಒಲವಿನಾತೆಯ ಆಕೃಷ್ಟಿ, ಕಲ್ಪಿತ ನಲ್ಲನೊಬ್ಬನೊಂದಿಗೆ ಪ್ರೇಮಪತ್ರವ್ಯವಹಾರ ನಡೆಯಿಸಿ ಹೇಗೆ ಸಮಾಧಾನ ಪಡುತಿದ್ದಿಕೆಂಬುದರ ಸಹಜಚಿತ್ರ ಈ ಕತೆಯಲ್ಲಿ ಮೂಡಿದೆ. ಮನೋವಿಶ್ಲೇಷಣಾತ್ಮಕ ಕತೆಗಳಲ್ಲಿ ಮಾದರಿಯ ಕತೆಯೊಂದಿದು. ಮಿಕ್ಕ ಆರು ಕತೆಗಳು ಲೇಖಕರ ಸ್ವತಂತ್ರ ಕೃತಿಗಳು.

ಮೊದಲನೆಯದಾದ 'ರತಿದೇವಿ' ಎಂಬ ಕತೆ ಪುಸ್ತಕದ ಅರ್ಧ ಪುಟಗಳನ್ನು ತುಂಬಿನಿಂತಿದೆ. ಶ್ರೀಕಾಂತನೆಂಬ ಕಲಾವಿದನ ಜೀವನ ಈ ಕತೆಯ ವಸ್ತು. ಕಲೆಯ ಪ್ರೀತಿ, ಪ್ರಣಯ ಇವುಗಳ ಸೆಣಸಾಟ ಶ್ರೀಕಾಂತನ ಜೀವನವನ್ನು ಕರುಣೆಯಲ್ಲಿ ಕೊನೆಗೊಳಿಸಿದೆ. ಸ್ತ್ರೀ-ಸೌಂದರ್ಯದ ಉತ್ತಮ ಪ್ರತೀಕವೊಂದನ್ನು ನಿರ್ಮಿಸುವ ಹುಚ್ಚಿನಲ್ಲಿ ಸೌಂದರ್ಯನಿಧಿಯಾದ — ಹೃದಯವನ್ನು ಸೂರೆಗೊಂಡ ಸ್ತ್ರೀರತ್ನವೊಂದನ್ನು ಶ್ರೀಕಾಂತ ಕಳೆದುಕೊಳ್ಳುತ್ತಾನೆ; ಆದರ ವ್ಯಥೆಯಲ್ಲಿ ತಾನೂ ಸಾಯುತ್ತಾನೆ. ಕಥಾವಸ್ತು ಅಸ್ವಾಭಾವಿಕವಾಗಿಲ್ಲವಾದರೂ, ಕತೆಯನ್ನು ಬೆಳಸಿರುವ ಸಂಕೇತಪೂರಿತ ತಂತ್ರವು ಕತೆ ಅಸ್ವಾಭಾವಿಕವೆನಿಸುವಂತೆ — ಕನಸಿನ ಸಂಗತಿಯೆನಿಸುವಂತೆ — ಆಗಿದೆ. ಶ್ರೀಕಾಂತನ ಕಲಾಸೃಷ್ಟಿಯ ಉತ್ಕಟತೆಯ ಅನ್ಯಪಾರ್ಶ್ವ ಬಣ್ಣನೆ ವಾಚಕರ ಸಹಾನುಭೂತಿಯನ್ನೇನೂ ಸೆಳೆದುಕೊಳ್ಳುವುದಿಲ್ಲ.

'ಕಡಲೆಪುರಿಯ ಕೆಂಪಮ್ಮ' ಈ ಸಂಗ್ರಹದಲ್ಲಿಯ ಒಂದು ಒಳ್ಳೆಯ ಕತೆ. ನಮ್ಮ ನಾಡಿನ ಸಾಮಾನ್ಯ ಸ್ತ್ರೀಯರೂ ಸಾಮಾಜಿಕ ರಸಿಕತನವನ್ನೂ ಗೃಹಿಣೀತ್ವದ ಪಾವಿತ್ರ್ಯವನ್ನೂ ಹೇಗೆ ಅಚ್ಚುಕಟ್ಟಾಗಿ ಹೊಂದಿಕೊಂಡಿರುವರೆಂಬುದಕ್ಕೆ ಒಳ್ಳೆಯ ದೃಷ್ಟಾಂತವಾಗಿದ್ದಾಳೆ ಕೆಂಪಮ್ಮ. ಬರಿಯ ನೋಟ-ನಗೆಗಳಿಂದ ಹೆಂಗುಸಿನ ಅಂತರಂಗವನ್ನು ತಿಳಿದುಕೊಳ್ಳುವೆವೆನ್ನುವ ಸಂಭ್ರಾಂತರಿಗೆ ಸತ್ಯದ ನಿಷ್ಠುರದರ್ಶನದಿಂದ ಏಟುತಿನ್ನುವುದು ಎಲ್ಲೆಲ್ಲಿಯೂ ಕಾಣುವ ಸಂಗತಿ.

'ಕನ್ನಡಿಯಲ್ಲಿ ಕಂಡದ್ದು' ಇದೊಂದು ಕತೆಯೆ? ಕತೆಯಂತೆ ಹೇಳಿದ ಒಂದು ವಿಚಾರತರಂಗ ಮಾತ್ರ. 'ಚಿತ್ರಪಟತಾರೆ'ಮನೋಪಾರಿಯಾಗಿದೆಯಲ್ಲದೆ, ನಮ್ಮ ಸಮಾಜದಲ್ಲಿಯ ಹೆಣ್ಣಿನ ಸಮಸ್ಯೆಯೊಂದನ್ನು ವಾಚಕರ ಮುಂದೆ ಇರಿಸುತ್ತದೆ. ಪ್ರೇಕ್ಷಕವೃಂದವನ್ನು ತನ್ನ ಸೌಂದರ್ಯದಿಂದಲೂ ಗೀತ-ಅಭಿನಯಗಳಿಂದಲೂ ಮಾರುಗೊಂಡ ನಟಿ ಸ್ವರ್ಣಲತೆಯ ಹೃದಯದಲ್ಲಿ ಆರದ ಬೆಂಕಿ ಉರಿಯುತ್ತಿದೆ. ನಮ್ಮ ಸಾಮಾಜಿಕ ಮಡಿವಂತಿಕೆ ಆ ಉರಿಯನ್ನು ಆರಿಸಲು ಒಪ್ಪಿಗೆ ಕೊಡದೆ ಹೋಗುವುದರಿಂದ, ಅಂತಹ ರಸದೇವಿಯ ಒಲವಿಗೆ ಎಡೆಯೆಸಿಕ್ಕದೆ ಹೋಗುವುದು. 'ಇದು ಸರಿಯೆ?' ಎಂಬ ಪ್ರಶ್ನೆಯೆದ್ದು ವಾಚಕರ ಹೃದಯತಂತ್ರಿಯನ್ನು ಮಿಡಿಯಿಸುವುದೇ ಈ ಕತೆಯ ಗುರಿ.

'ಹಸ್ತ ಪರಿಗ್ರಹಣ' ಕತೆ ವಿದೂಷಕ ಸನ್ನಿವೇಶದಿಂದ ಪ್ರಾರಂಭವಾಗಿ ಮುಂದಿಯ ಬಾಯಲ್ಲಿ ಬೆಳೆದಕತೆಯೆಂದು ಕತೆಗಾರರು ಹೇಳಿರುವುದರಿಂದ, ಇದರಲ್ಲಿಯ ಕುಂದುಕೊರತೆಗಳ ಹೊಣೆಯನ್ನು ಅವರ ತಲೆಯಮೇಲೆ ಹಾಕಲುಬಂದೀತೆ? ಕೊನೆಯ ಕತೆ 'ಸಿನಿಮಾ ಹುಚ್ಚು' ಎಂಬುದು ಸಂಪಾದಕರೊಬ್ಬರ ಒತ್ತಾಯಕ್ಕಾಗಿ ಬರೆದು ಮುಗಿಸಿದ ಕತೆಯೆಂದು ತೋರುವುದು.

ಶ್ರೀ. ಎಂ. ವಿ. ಸೀತಾರಾಮಯ್ಯನವರಿಗೆ ಒಳ್ಳೆಯ ಭಾಷೆಯಿದೆ. ವಿಮರ್ಶಕ ಬುದ್ಧಿಯಿದೆ. ದೇಶ-ವಿದೇಶಗಳ ಶ್ರೇಷ್ಠ ಕತೆಗಾರರ ಕೃತಿಗಳ ಅಭ್ಯಾಸವೂ ಇದೆ. ಇವರಿಂದ ಕನ್ನಡಿಗರು ಇನ್ನೂ ಹೆಚ್ಚಾಗಿ ಒಳ್ಳೆಯ ಕತೆಗಳನ್ನು ಬಯಸಬಹುದಾಗಿದೆ.

—ಬಿ. ಪಿ. ಎಸ್. ರಾವ್.

## ೫೬ ಪ್ರತಿಧ್ವನಿ

( ಕಥಾಸಂಗ್ರಹ )

ಲೇಖಕರು : ಶ್ರೀಮಾನ್ ಬಿ. ನರಸಪ್ಪ 'ಬಡವರ ಬಂಧು' ಪ್ರಿಂಟಿಂಗ್ ಪ್ರೆಸ್ ಲಿಮಿಟೆಡ್, ಮಂಗಳೂರು.

ಇದು ೨೬ ಕತೆಗಳ ಸಂಕಲನ. ಕತೆಗಳಲ್ಲಿ ಕೆಲವು ಸಣ್ಣ ಕತೆಗಳು; ಮಿಕ್ಕುವು ಕಿರುಗತೆಗಳು — ಎಂದರೆ ಶ್ರೀ. ರಾಜರತ್ನಂ ಅವರ 'ಹನಿ'ಗಳಂತಹವು. ಮಂಗಳೂರಿನ 'ಪ್ರಭಾತ' ಪತ್ರಿಕೆಯ ಸಂಪಾದಕರೂ ವಿನೋದ ಲೇಖನಗಳನ್ನು ಬರೆವುದರಲ್ಲಿ ಹೆಸರುವಾಸಿಯಾದವರೂ ಆದ ಶ್ರೀಮಾನ್ ಕುದ್ಪಿ ವಾಸುದೇವ ಶೆಣೈಯವರು ವಿಮರ್ಶಾತ್ಮಕ ಮುನ್ನುಡಿ ಬರೆದಿದ್ದಾರೆ. ಅವರು ಕತೆಗಾರರ ಪರಿಚಯವನ್ನು ಮಾಡಿಕೊಡುವಾಗ 'ನರ್ಸಪ್ಪನವರು ಜೀವನದ ಸಿಹಿ-ಕಹಿಗಳೆರಡನ್ನೂ ಉಂಡವರು. ಆರಂಭದಲ್ಲಿ ಬಡತನದ ಕಹಿಯನ್ನುಣ್ಣುವಾಗ, ಅವರಿಗೆ ಸಮಾಜದ — 'ಬಂಧು'ಗಳ-ಶ್ರೀಮಂತರ — ವಿವಿಧ ವ್ಯಕ್ತಿಗಳ ಗುಣಸ್ವಭಾವವು ಚೆನ್ನಾಗಿ ಅನುಭವವಾಗಿದೆ. ಜೀವನ ಸೌಕರ್ಯಗಳೊದಗಿದಮೇಲೆ, ಅವರ ಹಿಂದಿನ ಅನುಭವವು ಅವರಿಗೆ ದೀವಟಿಗೆಯಾಗಿದೆ.....' ಎಂದು ಹೇಳುವರು.

ಮುಂಬಯಿ ನೋಡಬೇಕೆಂಬಾಶೆಯಿಂದ ಅಜ್ಜಿಯ ಚಿನ್ನದ ಆಭರಣವನ್ನಾರಿ, ಮುಂಬಯಿಗೆ ಹೊರಟು ದಾರಿಯುದ್ದಕ್ಕೂ ಬೆದರಿ ಬಿದ್ದ 'ಕಳ್ಳರಂಗ'ನ ಕತೆ; ಹೆಂಡತಿಯ ಮಾತುಕೇಳಿ 'ಬಿಜ್ನೆಸ್' ಮಾಡಲು ಕುದುರೆಗಾಡಿ ಕೊಂಡು ಫಜೀತಿಪಟ್ಟ 'ನಗುವನಂದದಲ್ಲಿ' ಕಥೆ; ನಾಟಕದಲ್ಲಿಯ ಪಾತ್ರದ ಮಾತೆಂದು ತಿಳಿಯದೆ ಬಾಗಿಲಿಕ್ಕಿದ ಮನೆಯಲ್ಲಿ ತಂಗಿಯ ಕೂಗನ್ನು ಕೇಳಿ, ಪೋಲೀಸರನ್ನು ಕರೆದುತಂದು ನಗೆಗೀಡಾದ ವೀರಪ್ಪನ ಚರಿತ್ರ—ಈ ಮನೋರಂಜಕ ಕತೆಗಳನ್ನು ಬಿಟ್ಟರೆ, ಮಿಕ್ಕುವೆಲ್ಲ ಸಮಾಜದಲ್ಲಿಯ ದೋಷಗಳನ್ನು ಬೆದಕಿ-ಕೆದಕಿ ತೋರಿಸಲು ಹೊರಟ ಕತೆಗಳಾಗಿವೆ. ಹೆಣ್ಣು-ಗಂಡಿನ ತೊಡಕು ಎಷ್ಟು ರೀತಿಯವು? ಸಾಧ್ವಿ ಶೀ(?)ಪುವಿನ ಬಾಳನ್ನು ದುರಂತವಾಗಿಸಿದ ವೆಂಕಜ್ಜನ ಕಾಮುಕವೃತ್ತಿಯ ವರದಿ 'ಪ್ರತಿಧ್ವನಿ' ಎಂಬ ಕತೆಗೆ ವಸ್ತುವಾಗಿದ್ದರೆ, ಮಡಿವಂತ ವೈಂದಜಿಟ್ಟರು ಬೀರಿಯೆಂಬ ಹರಿಜನ ಹುಡುಗಿಯೊಂದಿಗೆ ಸರಸವೆಸಗಿ, ತಮ್ಮ ಮಾನ ಉಳಿಸಿಕೊಳ್ಳಲು ಅವಳ ಬದುಕನ್ನು ಮಣ್ಣುಗೂಡಿಸಿದ ಸಂಗತಿ 'ತನ್ನ ಮಾನ' ಎಂಬ ಕತೆಗೆ ಮೂಲವಾಗಿದೆ. ಹಣಕ್ಕಾಗಿ ರೋಗಿಯ ಕೊರಳಿಗೆ ಹೆತ್ತ ಕರುಳನ್ನು ಕಟ್ಟುವ ರಾಜಣ್ಣನವರ ಸ್ವಾರ್ಥ ಒಂದೆಡೆ ಹೃದಯ ಹಿಂಡಿದರೆ, ತನ್ನ ಜಾರತನ ಮರೆಮಾಡಿ ತನ್ನ ಮಗನಿಗೆ ಮಡಿವಂತಿಕೆ ಕಲಿಸುವ ಅಪ್ಪಯ್ಯನವರ ಧರ್ಮವ್ಯಭಿಚಾರ ಇನ್ನೊಂದೆಡೆ ಕಂಗೆಡಿಸುತ್ತದೆ. ಕ್ಷಯರೋಗಿ ಹೆಂಡತಿಯನ್ನು ಕಾಮತೃಷೆಯಿಂದ ಕೊಂದ ದೈವಭಕ್ತ ಸಾಲಿಯಾನರ ಚಿತ್ರ ಒಮ್ಮೆ ಕರುಳಿಗೆ ಮುಳ್ಳಾಗುಚ್ಚಿದರೆ, ಮಗುವಿನ ಕೊಲೆಮಾಡಿ ಉಗ್ಗುವಿಗೆ ಹುಚ್ಚು ಹಿಡಿಸಿದ ಶಾಂತರಾಯರ ಸಾಮಾಜಿಕ ದೊಡ್ಡಿತಿ ಹೃದಯದಮೇಲೆ ಏಟನ್ನು ಹಾಕುವುದು. ನಂಬಿದ ನಲ್ಲನನ್ನು ವಂಚಿಸಿದ ನಟಿ ಪ್ರೇಮಲತೆ, ಇನ್ನೊಬ್ಬನಿಂದ ವಂಚಿತಳಾಗಿ ಬೀದಿಯ ಭಿಕ್ಷುಕಿಯಾದುದು ಒಂದು ಸಮಸ್ಯೆಯನ್ನು ಕೇಬಿಸುತ್ತಿದ್ದರೆ, ವರದಕ್ಷಿಣೆಯ ಐದುಸಾವಿರ ಹಣದಲ್ಲಿ ಒಂದು ಸಾವಿರ ಬಾರದೆ ಹೋದುದಕ್ಕಾಗಿ ಸೊಸೆಯನ್ನು ಸಾವಿಗೆ ಗುರಿಮಾಡಿದ ತಿಪ್ಪಯ್ಯನವರು ಇನ್ನೊಂದು ಸಮಸ್ಯೆಯನ್ನು ಚಿತ್ರಿಸುತ್ತಾರೆ. ಐವತ್ತೇಳು ವರ್ಷದ ಕೇಶವಭಟ್ಟರು ಹೆಂಡತಿ ಸತ್ತಾಗ ಇನ್ನೊಂದು ಹುಡುಗಿಯೊಂದಿಗೆ ಲಗ್ನವಾಗಿ ಬಾಳುವುದನ್ನು ನೋಡುತ್ತ ಅವರ ಹನ್ನೆರಡು ವರ್ಷದ ವಿಧವೆಯಾದ ಮಗಳು ತಪಸ್ವಿನಿಯಾಗಿ ಬಾಳಬೇಕು. ಕೊನೆಯ ಕತೆ 'ಪ್ರತಿಧ್ವನಿ' ಎಂಬುದರಲ್ಲಿಯ ಕಾಮುಕ ರಮೇಶನು, ಕಾಮದ ಬೇಟೆಯಾಡುವಾಗ, ದಳ್ಳಾಳಿ ಅವನ ಹೆಂಡತಿಯನ್ನೇ ಬೇಟೆಗಾಗಿ ಆರಿಸಿತಂದೆ ಸನ್ನಿವೇಶ ಮನಮಿಡಿಗಳನ್ನು ನಡುಗಿಸುವಂತಹದಿದೆ.

ಮಿಕ್ಕ ನಾಲ್ಕೈದು ಕತೆಗಳಲ್ಲಿ ಸಮಾಜದ ಇನ್ನೊಂದು ಮುಖ್ಯವಾದ ಸಮಸ್ಯೆಯಾದ ಬಡತನ-ಸಿರಿತನಗಳ ಪರಿಣಾಮಗಳು ಬೇರೆ ಬೇರೆ ರೀತಿಯಲ್ಲಿ ರೂಪುಗೊಂಡಿವೆ. ಸುಳ್ಳುವಾದು ಕಳ್ಳ ಕೇಶವನಿಗಾದ ಜೈಲುಶಿಕ್ಷೆ ವಾಜಕರನ್ನು ಕಳವಳಗೊಳಿಸಿದರೆ, 'ಏರು-ತಗ್ಗು' ಎಂಬುದರಲ್ಲಿಯ ಅಧಿಕಾರಪ್ರಿಯ ಉದ್ಧತ ರಾಮರಾಯನ ಕೊನೆಗಾಲದ ದೈನ್ಯಾವಸ್ಥೆ ಸಮಾಧಾನಕ್ಕೆ ಕಾರಣವಾಗುತ್ತದೆ. 'ಕಾಲಗತಿ' ಯಂತಹ ನೀರಸ ಕತೆಗಳು ಒಂದೆರಡು ಇದ್ದರೂ, ಒಟ್ಟಿನಲ್ಲಿ ಇದು ಒಳ್ಳೆಯ ಕಥಾಸಂಗ್ರಹವೆಂದು ಯಾವ ವಿಮರ್ಶಕರೂ ಒಪ್ಪುವಂತಹದಾಗಿದೆ.

ಪರಂಪರಾ ಪ್ರಿಯರಿಗೆ ಹೆಣ್ಣು-ಗಂಡಿನ ಸಮಸ್ಯೆಯ ಕತೆಗಳು ಅಶ್ಲೀಲವೆಂದು ತೋರಬಹುದು. ಭಾವಾಶುದ್ಧಿಯನ್ನು ಅಪೇಕ್ಷಿಸುವವರಿಗೆ ಹಲವಾರು ವ್ಯಾಕರಣದೋಷ ಸಿಕ್ಕಬಹುದು. ಪಾತ್ರೋಚಿತ ಭಾಷೆಯನ್ನು ಬಯಸುವವರು ಇಲ್ಲಿಯ ಒಂದೇ ಒಗೆಯ ಭಾಷಾಸರಣಿಗಾಗಿ ಮುಖ ಮುದುರಿಸಬಹುದು. ಆದರೂ ಹೃದಯ ಬುದ್ಧಿಗಳನ್ನು ಕೆಣಕಿ ಕೆರಳಿಸುವ ವಿಚಾರಗಳು ಇಲ್ಲಿಯ ಕತೆಗಳಿಗೆ ನೆಲಗಟ್ಟಾಗಿರುವುದರಿಂದ, ಬಹುಜನರ ಮೆಚ್ಚಿಕೆಯನ್ನು ಪಡೆಯದಿರವು. ಶ್ರೀ. ಬಿ. ನರಸಪ್ಪನವರು ಕನ್ನಡಕ್ಕೆ ತಮ್ಮ ಕತೆಯ ಕಾಣಿಕೆಯನ್ನು ಇನ್ನೂ ಹೆಚ್ಚಾಗಿ ಕೊಡಲಿ.

—ಬಿ. ಪಿ. ಎಸ್. ರಾವ್.


ದಿ ವಸಂತ ಇನ್ಶುರನ್ಸ್ ಕಂಪನಿ, ಲಿಮಿಟೆಡ್

ದಿವಾನ್ ಬಹಾದ್ದೂರ್ ಹೀರಾಲಾಲ ಕಾಜಿ: ಆಗ್ರಸ್ಥರು

ಸಹಕಾರಿ ಸಂಘದ ಸಭಾಸದರಿಗೆ ಹಪ್ತೆಯಲ್ಲಿ ೭॥ ಮತ್ತು ೨॥ ಟಕ್ಕೆ ಸೂಟು ಕೊಡಲಾಗುವುದು.

ಗಳಿಸಲ್ಲಿ ಪೂರ್ಣ ಮಾಡಲಾದ ವಿಮೆ .... ೪೫,೩೦,೦೦೦
ಈ ವರೆಗಿನ ವಿಮೆ .... .... ೧,೦೦,೦೦,೦೦೦
} ಕ್ಕೆ ಮಿಕ್ಕಿದೆ.

ನಾವೀನ್ಯ ಪೂರ್ಣ ಮತ್ತು ಲೋಕಪ್ರಿಯ ವಿಮಾ ಯೋಜನೆಗಳು.

ಪ್ರಭು ಎಂಡ್ ಸನ್ಸ್
ಚೀಫ್ ಏಜಂಟ್
೩೭ — ಆ ಸರ್ ಫಿರೋಜಶಹಾ ಮೇಥಾ ರೋಡ್,
ಕೋಟೆ, ಮುಂಬಯಿ ೧

ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ ಧಾರವಾಡ ಪೇತನದ ಮೇಲೂ, ಯೋಗ್ಯ ಕಮೀಷನ್ನಿನ ಮೇಲೂ, ಆರ್ಗನೈಸರರೂ ಏಜಂಟರೂ ಬೇಕಾಗಿದ್ದಾರೆ. ಸುಶಿಕ್ಷಿತ-ಅನುಭವಿಕ ಸದ್ಗೃಹಸ್ಥರು ಮೇಲಿನ ವಿಳಾಸಕ್ಕೆ ಬರೆದುಕೊಳ್ಳುವುದು.

೫೭ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರದ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಲ್ಲ ಜ್ವರಗಳಮೇಲೂ
ಮಹೌಷಧ.
ವಿಳಾಸ:—
ಗಣೇಶ ರಾಮಚಂದ್ರ ಕರ್ಕ
ಮತ್ತು ಕಂಪನಿ
ಗಿರಗಾಂವ, ಮುಂಬಯಿ.




## ಚುನಾವಣೆಯ ಫಲಶ್ರುತಿ

ಕನ್ನಡ ರಾಜಕಾರ್ಯಕ್ಕೆ ಸಂಬಂಧಿಸಿದ ಮುಂಬಯಿ ಪ್ರಾಂತದ ಸಾಮಾನ್ಯ ಮತದಾರಸಂಘದ ಮಹತ್ತ್ವದ ಆಯ್ಕೆಯೂ ಮುಗಿದಂತಾಯಿತು. ೧೧೪ ಸ್ಥಳಗಳಲ್ಲಿ ೧೧೩ ಕಾಂಗ್ರೆಸಿಗೆ ದೊರೆತಿರುವುದಲ್ಲದೆ, ಇದುವರೆಗಿನ ಕಾಂಗ್ರೆಸ್ ಪಕ್ಷದ ಸಂಖ್ಯೆಯು ೧೩೪ ರಷ್ಟಿದೆ. ಕೆಲವು ಮುಸ್ಲಿಂ ಸ್ಥಳಗಳೂ ವಿಶ್ವವಿದ್ಯಾಲಯ ಮೊದಲಾದ ಬೇರೆ ಸ್ಥಳಗಳೂ ಇನ್ನೂ ಈ ಸಂಖ್ಯೆಯನ್ನು ೧೪೦-೪೫ ಕ್ಕೆ ಮುಟ್ಟಿಸಬಹುದು. ಕಾಂಗ್ರೆಸಿನವರು ಮಂತ್ರಿಮಂಡಲ ಸ್ವೀಕರಿಸಿದರೆ ಮುಂಬಯಿ ಪ್ರಾಂತದಲ್ಲಿ ಅಪ್ರತಿಹತ ಬಹುಮತ ಪಕ್ಷದ ಮಂತ್ರಿಮಂಡಲವಾಗುವುದರಲ್ಲಿ ಸಂದೇಹವಿಲ್ಲ. ಕಾಂಗ್ರೆಸನ್ನು ಬಿಟ್ಟರೆ ಇನ್ನೊಂದು ಯಾವುದಾದರೂ ಪಕ್ಷದ ಸದಸ್ಯರು ಹೆಚ್ಚು ಸಂಖ್ಯೆಯಲ್ಲಿ ಇರಬಹುದಾದರೆ, ಅವರು ಜಾತೀಯ ಭಾವನೆಯ ಅನೈಸರ್ಗಿಕ ಪ್ರೇರಣೆಯಿಂದ ಪ್ರಜ್ಞೋದಿತರಾದ ಮುಸ್ಲಿಂ ಲೀಗಿನವರು. ಮುಂಬಯಿ-ಅಸೆಂಬ್ಲಿಯಲ್ಲಿ ಮುಸ್ಲಿಂ ಪ್ರತಿನಿಧಿಗಳ ಸಂಖ್ಯೆಯೆ ೫೦ನ್ನು ಮಿಕ್ಕಿಲ್ಲ. ಅವರಲ್ಲಿ ಕೆಲವರಾದರೂ ರಾಷ್ಟ್ರೀಯ ಪಕ್ಷದ— ಸ್ವತಂತ್ರ ಪಕ್ಷದ ಸದಸ್ಯರು ಬರಬಹುದಾಗಿದೆ. ಮಿಕ್ಕ ರಾಜಕೀಯ ಪಕ್ಷಗಳಲ್ಲಿ ಹಿಂದು ಮಹಾಸಭೆಯವರು ಒಬ್ಬರು, ರ‍್ಯಾಡಿಕಲ್ ಪಾರ್ಟಿಯಿಂದ ಒಬ್ಬರು (ಇನ್ನು ಬರಲಾರದೆ ಬಂದಿದ್ದಾರೆ), ಕಮ್ಯುನಿಸ್ಟ್ ಪಾರ್ಟಿಯಿಂದ ಇಬ್ಬರು ಹೀಗೆ ಇದುವರೆಗೆ ಆಯ್ಕೆಯಾಗಿ ಬಂದಿದ್ದಾರೆ. ಕಾಂಗ್ರೆಸನ್ನುಳಿದ ಮಿಕ್ಕ ಎಲ್ಲ ಪಕ್ಷದವರೂ ಒಬ್ಬರುಳಿಯದಂತೆ ಒಂದುಗೂಡಿದರೂ, ಕಾಂಗ್ರೆಸಿನವರ ಅರ್ಧವನ್ನೂ ಮಿಕ್ಕಲಾರರು. ಆದುದರಿಂದ ಮುಂಬಯಿಯಲ್ಲಿ ಕಾಂಗ್ರೆಸ್ಸು ಭದ್ರವಾದ ತಳಹದಿಯ ಸರಕಾರವನ್ನು ಕಟ್ಟುವುದು ಸಹಜವಾಗಿದೆ. ಕನ್ನಡ ನಾಡಿಗೆ ಸಂಬಂಧಿಸಿದ ಇನ್ನೊಂದು ಪ್ರಾಂತವಾದ ಮದರಾಸ್ ಪ್ರಾಂತದಲ್ಲಿಯೂ ಇದುವರೆಗೆ (೨೮-೩-೪೬) ಕಾಂಗ್ರೆಸ್ ಪಕ್ಷದ ಸದಸ್ಯರ ಸಂಖ್ಯೆ ೧೪೦ ಕ್ಕೆ ಮುಟ್ಟಿದೆ. ಮುಂಬಯಿಯಂತೆ ಮದ್ರಾಸಿನಲ್ಲೂ ಕಾಂಗ್ರೆಸ್ಸು ತನ್ನ ಭದ್ರವಾದ ಗದ್ದುಗೆಯನ್ನು ಸ್ಥಾಪಿಸುವುದರಲ್ಲಿ ಸಂದೇಹವಿಲ್ಲ.

## ಕನ್ನಡಿಗರ ಕಾಂಗ್ರೆಸ್ ನಿಷ್ಠೆ

ಕರ್ನಾಟಕದ ಪಾರ್ಲಿಮೆಂಟರಿ ಬೋರ್ಡಿನ ವಿಷಯದಲ್ಲಿ ಎದ್ದ ವಿರೋಧದ ಬಿರುಗಾಳಿಯ ಉಪಯೋಗವನ್ನು ಕಾಂಗ್ರೆಸ್ ವಿರೋಧಿ ಹುರಿಯಾಳುಗಳು ಎಷ್ಟೇ ಮಾಡಿಕೊಳ್ಳಬೇಕೆಂದು ಹೆಣಗಿದರೂ, ಕೊನೆಗೂ ಕಾಂಗ್ರೆಸ್ ನಿಷ್ಠವಾದ ಕರ್ನಾಟಕದ ಜನತೆ ಅವರನ್ನು ನಿರಾಶೆಗೊಳಿಸಿತು. ಬಳ್ಳಾರಿಯ ಸ್ತ್ರೀಸ್ಥಳವೊಂದನ್ನು ಬಿಟ್ಟರೆ ಮದ್ರಾಸ್ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಹುರಿಯಾಳುಗಳೆ ಎಲ್ಲ ಸ್ಥಳಗಳಲ್ಲಿ ಅವಿರೋಧವಾಗಿ ಬಂದುಬಿಟ್ಟಿದ್ದಾರೆ. ಕರ್ನಾಟಕ ಪಾರ್ಲಮೆಂಟರಿ ಬೋರ್ಡಿನ ಸೂಚನೆಯನ್ನು ಕೇಳದೆ, ಬಳ್ಳಾರಿಯ ಸ್ತ್ರೀಸ್ಥಳಕ್ಕೆಂದು ಮಧ್ಯವರ್ತಿ ಪಾರ್ಲಮೆಂಟರಿ ಬೋರ್ಡಿನವರು ಆಯ್ದ ಶ್ರೀಮತಿ ಜಯಲಕ್ಷ್ಮಿಯವರು ಚುನಾವಣೆಯಲ್ಲಿ ಸೋತರಾದರೂ, ಆ ಸ್ಥಳಕ್ಕೆ ಸ್ವತಂತ್ರರೀತಿಯಿಂದ ಆಯ್ದು ಬಂದ ಶ್ರೀಮತಿ ಸುಮಂಗಲಮ್ಮನವರೂ ರಾಷ್ಟ್ರೀಯ ಮನೋವೃತ್ತಿಯವರಿದ್ದುದು ಸಂತೋಷದ ಸಂಗತಿ. ಕರ್ನಾಟಕ ಪಾ. ಬೋರ್ಡಿನವರ ಆಯ್ಕೆಯೆ ಕೊನೆಯ ಮಾತಾಗಿದ್ದರೆ, ಈ ಸ್ಥಳವೂ ಅಧಿಕೃತವಾಗಿ ಕಾಂಗ್ರೆಸಿನದಾಗಿಯೆ ಬರಬಹುದಾಗಿತ್ತು. ಏಕೆಂದರೆ ಮಿಕ್ಕ ಅಸೆಂಬ್ಲಿ ಸದಸ್ಯರನ್ನೆಲ್ಲ ಕಾಂಗ್ರೆಸಿನವರನ್ನೆ ಆಯ್ದು ಕೊಟ್ಟ ಬಳ್ಳಾರಿಯ ಜನರು, ಕಾಂಗ್ರೆಸ್ ನಿಷ್ಠರಿರುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ತಮ್ಮ ಮಾತನ್ನು ಮೀರಿದ—ಮೇಲಿನ ಅಧಿಕಾರಿಗಳಿಗೆ ಬುದ್ಧಿಗಲಿಸಲೆಂದೇ ಅವರು ಸ್ತ್ರೀಸದಸ್ಯತ್ವದ ಆಯ್ಕೆಯಲ್ಲಿ ತಮ್ಮ ವಿರೋಧವನ್ನು ತೋರಿಸಿರಬಹುದು; ಆದರೆ ಕಾಂಗ್ರೆಸ್ ದ್ರೋಹಿಗೆ ಮತವನ್ನು ಕೊಡುವ ಪಾತಕ ಮಾಡಿಲ್ಲವೆಂಬುದು ಶ್ರೀಮತಿ ಸುಮಂಗಲಮ್ಮನವರ ಮುಂದಿನ ನಡೆವಳಿಕೆಯಿಂದ ಗೊತ್ತಾಗಬಹುದಾಗಿದೆ.

ಮುಂಬಯಿ ಕರ್ನಾಟಕದ ೨೨ ಸ್ಥಳಗಳೂ ಕಾಂಗ್ರೆಸಿಗೆ ದೊರೆತುದು ಆಶ್ಚರ್ಯದ ಸಂಗತಿಯಲ್ಲದಿದ್ದರೂ ಅಭಿನಂದನಾರ್ಹ ಸಂಗತಿ. ಒಂದು ಕಾಲದಲ್ಲಿ ಮುಂಬೈ ಮಂತ್ರಿಗಳಾಗಿ ಮೆರೆದ—ಒಂದು ಬಹುಸಂಖ್ಯಾಕ ಜಾತಿಯ ಮುಂದಾಳಾಗಿದ್ದ—ಆಲ್ಲಾ ಆ ಜಾತಿಯ ಕಲ್ಯಾಣಕ್ಕಾಗಿಯೆ ತಾವು ಅಸೆಂಬ್ಲಿ ಸೇರಬೇಕಾಗಿದೆ

ಯೆಂದು ಸಾಕಷ್ಟು ಪ್ರಚಾರ ಮಾಡಿದ— ದಿ. ಬ. ಕಂಬಳಿಯವರಂತಹರೂ ಪ್ರಚಂಡರೀತಿಯಲ್ಲಿ ಪರಾಭವ ಹೊಂದಿದುದು ಯಾವುದರ ನಿದರ್ಶನ? ಕನ್ನಡ ಜನಸಾಮಾನ್ಯರ ಕಾಂಗ್ರೆಸ್ ನಿಷ್ಠೆಯದೇ ಅಲ್ಲವೆ? ವಿಜಾಪುರ ಜಿಲ್ಲೆಯ ಸುಳ್ಳದ ದೇಸಾಯರಂಥ ಸರ್ವಂತರೂ ಪ್ರತಿಷ್ಠೆಯುಳ್ಳವರೂ ಆದ ವ್ಯಕ್ತಿಯ ಸೋಲು ಏನನ್ನು ಸೂಚಿಸುತ್ತಿದೆ? ಜನರಲ್ಲಿ ಜಾತಿಗಿಂತ ಕಾಂಗ್ರೆಸ್‌ನಿಷ್ಠೆ ಹೆಚ್ಚಾಗಿದೆ ಎಂಬುದನ್ನಲ್ಲವೆ? ರಾಣಿಬೆನ್ನೂರಂತಹ ವೀರಶೈವ ಸಂಖ್ಯಾಬಾಹುಳ್ಯವಿದ್ದ ಪ್ರದೇಶದಲ್ಲಿ, ಸುವಿದ್ಯಳಾದ ಸರಿವಂತಳಾದ ವೀರಶೈವ ಮಹಿಳೆ ಸೋತು, ಸಾಮಾನ್ಯ ಹರಿಜನ ಮಹಿಳೆಯೊಬ್ಬಳು ಆಯ್ಕೆಹೊಂದಿ ಬಂದುದು ಕನ್ನಡಿಗರ ಕಾಂಗ್ರೆಸ್ ನಿಷ್ಠೆಯ ಪ್ರತ್ಯಕ್ಷ ಉದಾಹರಣೆಯಲ್ಲವೆ? ನಡೆದ ಚುನಾವಣೆ, ಕನ್ನಡಿಗರಲ್ಲಿ ಜಾತೀಯ ಭಾವನೆ ಸಂಪೂರ್ಣವಾಗಿ ಅಳಿಸಿದೆಯೆಂಬುದನ್ನು ತೋರಿಸದಿದ್ದರೂ ಕಾಂಗ್ರೆಸ್ ನಿಷ್ಠೆಯನ್ನು ಹೆಚ್ಚಿಸಿದೆಯೆಂಬುದನ್ನು ಮಾತ್ರ ಸಿದ್ಧಪಡಿಸಿಬಿಟ್ಟಿದೆ.

## ಶಿಕ್ಷಕರ ಸಂಪು, ಜನತೆಯ ಜಂಪು!

ಕಳೆದ ತಿಂಗಳಿಂದ ಪ್ರಾಥಮಿಕ ಶಿಕ್ಷಕರು ಸಂಪು ಹೂಡಿದ್ದು, ಮುಂಬಯಿ ಪ್ರಾಂತ್ಯದಲ್ಲೆಲ್ಲ ಅದು ಪಸರಿಸಿಕೊಂಡಿದೆ. ಮಕ್ಕಳ ಶಿಕ್ಷಣದ ಬಗೆಗೆ ಕಳವಳವಿರುವ ಜನಸಾಮಾನ್ಯರಿಗೆ ಈ ಶಿಕ್ಷಕರ ಸಂಪೊಂದು ಬಿಡಿಸಲಾರದ ತೊಡಕಾಗಿ ಕುಳಿತಿದೆ. ಜನತೆಯ ಸರಕಾರ ನಮ್ಮಲ್ಲಿದ್ದರೆ ಸಂಪು ಹೂಡುವಂತಹ ಪರಿಸ್ಥಿತಿ ಇರುತ್ತಿರಲೆ ಇಲ್ಲ. ಒಂದು ವೇಳೆ ಹೂಡುವಂತಹ ಸಂದರ್ಭ ಬಂದರೂ ಬೇಗನೆ ಆದರ ವಿಚಾರಣೆಯಾಗಿ ಶಿಕ್ಷಕರ ಕೊರತೆಯ ನಿವಾರಣೆಯ ಕಾರ್ಯ ಸ್ವಲ್ಪವಾದರೂ ನಡೆಯಬಹುದಾಗಿತ್ತು. ಶಿಕ್ಷಣ ಖಾತೆಯು ಕೇವಲ ಜನತೆಗೆ ಬೇಕಾದ ಖಾತೆಯಲ್ಲದೆ ಸರಕಾರಕ್ಕೆ ಅನಿವಾರ್ಯವಾದುದೇನೂ ಅಲ್ಲ. ಆದುದರಿಂದ ಶಿಕ್ಷಕರ ಸಂಪಿನ ಕಡೆಗೆ ಅದು ಲಕ್ಷ್ಯವನ್ನೇ ಕೊಡಲಾರದು. ಪೋಸ್ಟಮನ್ನರು ಸಂಪು ಹೂಡುವೆವೆಂದರು. ಮಧ್ಯವರ್ತಿ ಸರಕಾರಕ್ಕೆ ಇದರಿಂದ ಗಂಟೆಗೊಂದು ಕೋಟಿರೂಪಾಯಿಗಳಷ್ಟು ಪಾನಿಯಾಗಬಹುದಾಗಿತ್ತು. ಸಂಪೆಂದು ಶಬ್ದ ಹೊರಡುವುದೇ ತಡ; ಪೋಸ್ಟ್‌ಮನ್ನರ ಬೇಡಿಕೆ ಪೂರ್ಣವಾಯಿತು. ಪೋಲೀಸರು ಸಂಪು ಹೂಡುವೆವೆಂದರು. ಅವರ ನೆರವಿನಿಂದಲೇ ಭಾರತದ ಜನತೆಗೆ ಬೀಡಾದ ಆಡಳಿತವನ್ನು ಅಧಿಕಾರಿಗಳು ನಡಿಸಿರುವರು. ಅವರು ಸಂಪು ಹೂಡಿದರೆ ಒಂದು ನಿಮಿಷವಾದರೂ ನಿಂತೀತೇ ಬ್ರಿಟಿಷ್ ಆಳರಸರ ರಾಜ್ಯ? ಎಂತಲೆ ಸಂಪಿನ ಸುದ್ದಿ ಹೊರಡುವುದಕ್ಕೆ ಮೊದಲೇ ಪೋಲೀಸರ ಬಯಕೆ ಸಲ್ಲಿಸಿ ಆಯಿತು. ಮೊನ್ನೆ ಮೊನ್ನೆ ಹುಬ್ಬಳ್ಳಿಯಲ್ಲಿ ರೈಲು ಕೆಲಸಗಾರರು ಒಂದೇ ದಿನದ ಸಂಪಿನಿಂದ ದೇಶದ ವೇಳಾಪತ್ರಿಕೆಯನ್ನೆ ಬದಲಿಸಿದರು; ಎಂತಲೆ ಕೂಡಲೇ ಅವರ ಬಯಕೆ ಪೂರ್ತಿಯಾಯಿತು. ಆದರೆ ಸಂಪು ಹೂಡಿ ತಿಂಗಳಾಗುಸ್ತು ಬಂದರೂ ಶಿಕ್ಷಕರನ್ನು ಕೇಳುವವರೇ ಇಲ್ಲ. ಶಿಕ್ಷಕರಿಂದ ಕೆಲಸ ಅಪೇಕ್ಷಿಸುವವರು ಅವರು ಬದುಕುವಂತೆ ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ ಒದಗಿಸಿಕೊಡಬೇಕಲ್ಲವೆ? ಕೇವಲ ಜನರಿಗೆ ಬೇಕಿರುವ ಶಿಕ್ಷಕರನ್ನು ಸರಕಾರ ಲಕ್ಷಿಸದಿರುವಾಗ, ಜನತೆ ತಮ್ಮ ಹಾನಿಯನ್ನರಿತು ಸರಕಾರಕ್ಕೆ ಈ ಮಾತನ್ನು ಒತ್ತಿಹೇಳಿ, ಅದರ ಕಷ್ಟದಿಂದ ಶಿಕ್ಷಕರ ಗೋಳನ್ನು ಕಡಿಮೆಮಾಡಿಸುವ ಕೃತಿಯನ್ನು ಒತ್ತಾಯದಿಂದ ಮಾಡಿಸಬೇಕಲ್ಲವೆ? ಶಿಕ್ಷಕರು ಸಂಪು ಹೂಡಿ, ತಮ್ಮ ಮಕ್ಕಳು ಮರಿಗಳೊಂದಿಗೆ ಅತ್ತ ಉಪವಾಸ ವನವಾಸ ಅನುಭವಿಸತೊಡಗಿದರು; ಇತ್ತ ಜನತೆಯ ಎಳಮಕ್ಕಳು ಶಿಕ್ಷಣವಿಲ್ಲದೆ ಅಲೆಯತೊಡಗಿದರು. ಆದರೂ ಜನತೆಯಲ್ಲಿ ಏನೂ ಚಲನವಲನವಿಲ್ಲ. ಇದು ಜನತೆಯ ಜೀವಂತತನದ ಲಕ್ಷಣವೆ?

## ಶಿಕ್ಷಕರ ಸಂಪು ಅಕಾಲಿಕನೆ?

ಮುಂದಾಳುಗಳೆನಿಸುವ ಕೆಲವರಿಗೆ ಲೋಕಾನುಭವ ಸಾಲದೊ, ತಿಳಿವಳಿಕೆ ಸಾಲದೊ, ಒಮ್ಮೊಮ್ಮೆ— ಕಾರ್ಯ ಮಾಡಿ ಮಾಡಿ ದಣಿದುದರಿಂದ— ಬೇರೆ ವಿಚಾರ ತಿಳಿದುಕೊಳ್ಳಲು ಮನಸ್ಸಿರದೊ— ಪಕ್ಷಾಭಿನಿವೇಶದ ಭೂತಭಾಧೆಯೊ— ಎಂದು ಅವರ ವಿಚಿತ್ರ ಮಾತುಗಳನ್ನು ಕೇಳಿದವರಿಗೆ ಎನಿಸದಿರದು. ಪ್ರಾಥಮಿಕ ಶಿಕ್ಷಕರ ವಿಷಯದಲ್ಲಿ ಶ್ರೀ. ಮುರಾರಜಿ ದೇಸಾಯಿಯವರು ಆಡಿದ ಮಾತುಗಳಲ್ಲಿ ಒಬ್ಬ ಅಧಿಕಾರಮದಾಂಧನ ದರ್ಪಯುಕ್ತ ಉಪದೇಶವನ್ನು ಕಾಣಬಹುದಲ್ಲದೆ, ಜನತೆಯ ಒಬ್ಬ ಮುಂದಾಳಿನ ಔದಾರ್ಯಯುಕ್ತ ಹಿತವಚನವನ್ನಲ್ಲ. ಶ್ರೀ. ಮುರಾರಜಿ ದೇಸಾಯಿಯವರು ಮುಂಬಯಿ ಪ್ರಾಂತದವರಿಗೆ ಜೊಸಬರೇನೂ ಅಲ್ಲ. ಹಿಂದಿನ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಒಬ್ಬ ಮಾನ್ಯ ಮಂತ್ರಿಗಳಾಗಿದ್ದರು. ರೈತರ ಕಲ್ಯಾಣ ಮಾಡಬೇಕೆಂಬ ಸದುದ್ದೇಶವಿಟ್ಟುಕೊಂಡು (?) ಟೆನೆನ್ಸಿ ಕಾಯಿದೆಯನ್ನು ರಚಿಸಿ ಪ್ರಚಾರದಲ್ಲಿ ತಂದರು. ಇವರಿಗೆ ಪ್ರಾಥಮಿಕ ಶಿಕ್ಷಕರ ಪಸಿವೆಯ ಗೋಳು ಗೊತ್ತಿಲ್ಲವೊ, ಅಥವಾ ಬಹಳ ಜನರಂತೆ ಪ್ರಾಥಮಿಕ ಶಿಕ್ಷಕರು ಮಾನವರೆಂಬುದನ್ನು ಇವರೂ ಮರೆತಿದ್ದಾರೊ? ಸದ್ಯ ಮಾಸ್ತರ್ ಜನರು ಹೂಡಿದ ಸಂಪು ಅಕಾಲಿಕವಂತೆ— ಅವಿವೇಕದಂತೆ. ಪಸಿವೆ ಸಮಯ-ಸಂದರ್ಭ ನೋಡುವುದೆ? ವಿವೇಕ-ಅವಿವೇಕ ವಿಚಾರವನ್ನು ಉಳಿಸುವುದೆ? ತನಗೇ ಬದುಕಲು ನೆಲೆಯಿಲ್ಲದಿರುವಾಗ ಮನುಷ್ಯ ಕರ್ತವ್ಯಾಕರ್ತವ್ಯಗಳ ವಿಚಾರ ಮಾಡುತ್ತ ಕೂಡುವುಲ್ಲನೆ? ಹೊಟ್ಟೆ ತುಂಬಿದ ದೇಸಾಯಿಯವರು ಪಸಿದು ಕಂಗೆಟ್ಟ ಪ್ರಾಥಮಿಕ ಶಿಕ್ಷಕರ ಬಗೆಗೆ ಸಹಾನುಭೂತಿಯ ಲವಲೇಶವನ್ನೂ ತೋರಿಸಿವೆ, ಅವರಿಗೆ ನಿಷ್ಠುರವಾದ ಮಾತಿನಿಂದಲಿಯೂ ಹೇಳಬಹುದಾಗಿದೆ. ಈ ಕರ್ತವ್ಯದ ಉಪದೇಶ. ಅಕಾಲಿಕವೆಂದೂ ಅವಿವೇಕವೆಂದೂ ಯಾವ ಮನುಷ್ಯಹೃದಕರ್ತವ್ಯದ ಉಪದೇಶ ಮಾಡಲು ಬಂದುದು ಮಾತ್ರ ಖಂಡಿತವಾಗಿಯೂ ಮತ್ತೆ ಮಾತಿಗೆ ಎಷ್ಟೋ ಬೆಲೆ ಬರುತ್ತಿತ್ತು. ಸಂಬಳವನ್ನು ಕೂಡಲೆ ದೊಂದಿಗೆ ಭವಿಷ್ಯದ ಇಳಿಯನ್ನಾದರೂ ಸೂಚಿಸಿದ್ದರೆ, ಮುರಾರಜಿ-ಹೆಚ್ಚಿಸಲಿಕ್ಕೆ ಸಾಧ್ಯವಿಲ್ಲವೆಂದು ಅವರು ಸದ್ಯದ ಸರಕಾರದ ಪರವಾಗಿ ವಕಾಲತ್ತು ವಹಿಸಿ ವಾದಿಸುತ್ತಿರುವರಲ್ಲವೆ "ಬರಲಿರುವ ಕಾಂಗ್ರೆಸ್




### ಸಿನಾವಣೆಯ ಫಲಶ್ರುತಿ

ಕನ್ನಡ ರಾಜಕಾರ್ಯಕ್ಕೆ ಸಂಬಂಧಿಸಿದ ಮುಂಬಯಿ ಪ್ರಾಂತದ ಸಾಮಾನ್ಯ ಮತದಾರಸಂಘದ ಮಹತ್ತ್ವದ ಆಯ್ಕೆಯೂ ಮುಗಿದಂತಾಯಿತು. ೧೧೪ ಸ್ಥಳಗಳಲ್ಲಿ ೧೧೩ ಕಾಂಗ್ರೆಸಿಗೆ ದೊರೆತಿರುವುದಲ್ಲದೆ, ಇದುವರೆಗಿನ ಕಾಂಗ್ರೆಸ್ ಪಕ್ಷದ ಸಂಖ್ಯೆಯು ೧೩೪ ರಷ್ಟಿದೆ. ಕೆಲವು ಮುಸ್ಲಿಂ ಸ್ಥಳಗಳೂ ವಿಶ್ವವಿದ್ಯಾಲಯ ಮೊದಲಾದ ಬೇರೆ ಸ್ಥಳಗಳೂ ಇನ್ನೂ ಈ ಸಂಖ್ಯೆಯನ್ನು ೧೪೦–೪೫ ಕ್ಕೆ ಮುಟ್ಟಿಸಬಹುದು. ಕಾಂಗ್ರೆಸಿನವರು ಮಂತ್ರಿಮಂಡಲ ಸ್ವೀಕರಿಸಿದರೆ ಮುಂಬಯಿ ಪ್ರಾಂತದಲ್ಲಿ ಅಪ್ರತಿಹತ ಬಹುಮತ ಪಕ್ಷದ ಮಂತ್ರಿಮಂಡಲವಾಗುವುದರಲ್ಲಿ ಸಂದೇಹವಿಲ್ಲ. ಕಾಂಗ್ರೆಸನ್ನು ಬಿಟ್ಟರೆ ಇನ್ನೊಂದು ಯಾವುದಾದರೂ ಪಕ್ಷದ ಸದಸ್ಯರು ಹೆಚ್ಚು ಸಂಖ್ಯೆಯಲ್ಲಿ ಇರಬಹುದಾದರೆ, ಅವರು ಜಾತೀಯ ಭಾವನೆಯ ಆನ್ಸೆಸರ್ಗಿಕ ಪ್ರೇರಣೆಯಿಂದ ಪ್ರಚೋದಿತರಾದ ಮುಸ್ಲಿಂ ಲೀಗಿನವರು. ಮುಂಬಯಿ-ಅಸೆಂಬ್ಲಿಯಲ್ಲಿ ಮುಸ್ಲಿಂ ಪ್ರತಿನಿಧಿಗಳ ಸಂಖ್ಯೆಯೆ ೫೦ನ್ನು ಮಿಕ್ಕಿಲ್ಲ. ಅವರಲ್ಲಿ ಕೆಲವರಾದರೂ ರಾಷ್ಟ್ರೀಯ ಪಕ್ಷದ— ಸ್ವತಂತ್ರ ಪಕ್ಷದ ಸದಸ್ಯರು ಬರಬಹುದಾಗಿದೆ. ಮಿಕ್ಕ ರಾಜಕೀಯ ಪಕ್ಷಗಳಲ್ಲಿ ಹಿಂದು ಮಹಾಸಭೆಯವರು ಒಬ್ಬರು, ರ್ಯಾಡಿಕಲ್ ಪಾರ್ಟಿಯಿಂದ ಒಬ್ಬರು (ಇನ್ನೂ ಬರಲಾರದೆ ಬಂದಿದ್ದಾರೆ), ಕಮುನಿಸ್ಟ್ ಪಾರ್ಟಿಯಿಂದ ಇಬ್ಬರು ಹೀಗೆ ಇದುವರೆಗೆ ಆಯ್ಕೆಕೊಂದಿ ಬಂದಿದ್ದಾರೆ. ಕಾಂಗ್ರೆಸನ್ನುಳಿದ ಮಿಕ್ಕ ಎಲ್ಲ ಪಕ್ಷದವರೂ ಒಬ್ಬರುಳಿಯದಂತೆ ಒಂದುಗೂಡಿದರೂ, ಕಾಂಗ್ರೆಸಿನವರ ಅರ್ಧವನ್ನೂ ಮಿಕ್ಕಲಾರರು. ಆದುದರಿಂದ ಮುಂಬಯಿಯಲ್ಲಿ ಕಾಂಗ್ರೆಸ್ಸು ಭದ್ರವಾದ ತಳಹದಿಯ ಸರಕಾರವನ್ನು ಕಟ್ಟುವುದು ಸಹಜವಾಗಿದೆ. ಕನ್ನಡ ನಾಡಿಗೆ ಸಂಬಂಧಿಸಿದ ಇನ್ನೊಂದು ಪ್ರಾಂತವಾದ ಮದರಾಸ್ ಪ್ರಾಂತದಲ್ಲಿಯೂ ಇದುವರೆಗೆ (೩೦-೩-೪೬) ಕಾಂಗ್ರೆಸ್ ಪಕ್ಷದ ಸದಸ್ಯರ ಸಂಖ್ಯೆ ೧೪೦ ಕ್ಕೆ ಮುಟ್ಟಿದೆ. ಮುಂಬಯಿಯಂತೆ ಮದ್ರಾಸಿನಲ್ಲೂ ಕಾಂಗ್ರೆಸ್ಸು ತನ್ನ ಭದ್ರವಾದ ಗದ್ದುಗೆಯನ್ನು ಸ್ಥಾಪಿಸುವುದರಲ್ಲಿ ಸಂದೇಹವಿಲ್ಲ.

### ಕನ್ನಡಿಗರ ಕಾಂಗ್ರೆಸ್ ನಿಷ್ಠೆ

ಕರ್ನಾಟಕದ ಪಾರ್ಲಿಮೆಂಟರಿ ಬೋರ್ಡಿನ ವಿಷಯದಲ್ಲಿ ಎದ್ದ ವಿರೋಧದ ಬಿರುಗಾಳಿಯ ಉಪಯೋಗವನ್ನು ಕಾಂಗ್ರೆಸ್ ವಿರೋಧಿ ಹುರಿಯಾಳುಗಳು ಎಷ್ಟೇ ಮಾಡಿಕೊಳ್ಳಬೇಕೆಂದು ಹೆಣಗಿದರೂ, ಕೊನೆಗೂ ಕಾಂಗ್ರೆಸ್ ನಿಷ್ಠವಾದ ಕರ್ನಾಟಕದ ಜನತೆ ಅವರನ್ನು ನಿರಾಶೆಗೊಳಿಸಿತು. ಬಳ್ಳಾರಿಯ ಸ್ತ್ರೀಸ್ಥಳವೊಂದನ್ನು ಬಿಟ್ಟರೆ ಮದ್ರಾಸ್ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಹುರಿಯಾಳುಗಳೆ ಎಲ್ಲ ಸ್ಥಳಗಳಲ್ಲಿ ಅವಿರೋಧವಾಗಿ ಬಂದುಬಿಟ್ಟಿದ್ದಾರೆ. ಕರ್ನಾಟಕ ಪಾರ್ಲಮೆಂಟರಿ ಬೋರ್ಡಿನ ಸೂಚನೆಯನ್ನು ಕೇಳದೆ, ಬಳ್ಳಾರಿಯ ಸ್ತ್ರೀಸ್ಥಳಕ್ಕೆಂದು ಮಧ್ಯವರ್ತಿ ಪಾರ್ಲಮೆಂಟರಿ ಬೋರ್ಡಿನವರು ಆಯ್ದ ಶ್ರೀಮತಿ ಜಯಲಕ್ಷ್ಮಿಯವರು ಚುನಾವಣೆಯಲ್ಲಿ ಸೋತರಾದರೂ, ಆ ಸ್ಥಳಕ್ಕೆ ಸ್ವತಂತ್ರರೀತಿಯಿಂದ ಆಯ್ದು ಬಂದ ಶ್ರೀಮತಿ ಸುಮಂಗಲಮ್ಮನವರೂ ರಾಷ್ಟ್ರೀಯ ಮನೋವೃತ್ತಿಯವರಿದ್ದುದು ಸಂತೋಷದ ಸಂಗತಿ. ಕರ್ನಾಟಕ ಪಾ. ಬೋರ್ಡಿನವರ ಆಯ್ಕೆಯೆ ಕೊನೆಯ ಮಾತಾಗಿದ್ದರೆ, ಈ ಸ್ಥಳವೂ ಅಧಿಕೃತವಾಗಿ ಕಾಂಗ್ರೆಸಿನದಾಗಿಯೆ ಬರಬಹುದಾಗಿತ್ತು. ಏಕೆಂದರೆ ಮಿಕ್ಕ ಅಸೆಂಬ್ಲಿ ಸದಸ್ಯರನ್ನೆಲ್ಲ ಕಾಂಗ್ರೆಸಿನವರನ್ನೆ ಆಯ್ದು ಕೊಟ್ಟ ಬಳ್ಳಾರಿಯ ಜನರು, ಕಾಂಗ್ರೆಸ್ ನಿಷ್ಠರಿರುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ತಮ್ಮ ಮಾತನ್ನು ಮೀರಿದ—ಮೇಲಿನ ಅಧಿಕಾರಿಗಳಿಗೆ ಬುದ್ಧಿಗಲಿಸಲೆಂದೇ ಅವರು ಸ್ತ್ರೀಸದಸ್ಯತ್ವದ ಆಯ್ಕೆಯಲ್ಲಿ ತಮ್ಮ ವಿರೋಧವನ್ನು ತೋರಿಸಿರಬಹುದು; ಆದರೆ ಕಾಂಗ್ರೆಸ್ ಪ್ರೌಢಿಗೆ ಮತವನ್ನು ಕೊಡುವ ಪಾತಕ ಮಾಡಿಲ್ಲವೆಂಬುದು ಶ್ರೀಮತಿ ಸುಮಂಗಲಮ್ಮನವರ ಮುಂದಿನ ನಡೆವಳಿಕೆಯಿಂದ ಗೊತ್ತಾಗಬಹುದಾಗಿದೆ.

'ಮುಂಬಯಿ ಕರ್ನಾಟಕದ ೨೨ ಸ್ಥಳಗಳೂ ಕಾಂಗ್ರೆಸಿಗೆ ದೊರೆತುದು ಆಶ್ಚರ್ಯದ ಸಂಗತಿಯಲ್ಲದಿದ್ದರೂ ಅಭಿನಂದನಾಪ ಸಂಗತಿ. ಒಂದು ಕಾಲದಲ್ಲಿ ಮುಂಬೈ ಮಂತ್ರಿಗಳಾಗಿ ಮೆರೆದ-ಒಂದು ಬಹುಸಂಖ್ಯಾಕ ಜಾತಿಯ ಮುಂದಾಳಾಗಿದ್ದ—ಅಲ್ಲ ಆ ಜಾತಿಯ ಕಲ್ಯಾಣಕ್ಕಾಗಿಯೆ ತಾವು ಅಸೆಂಬ್ಲಿ ಸೇರಬೇಕಾಗಿ

ಯೆಂದು ಸಾಕಷ್ಟು ಪ್ರಚಾರ ಮಾಡಿದ— ದಿ. ಬ. ಕಂಬಳಿಯವರಂತಹರೂ ಪ್ರಚಂಡರೀತಿಯಲ್ಲಿ ಪರಾಭವ ಹೊಂದಿದುದು ಯಾವುದರ ನಿದರ್ಶನ? ಕನ್ನಡ ಜನಸಾಮಾನ್ಯರ ಕಾಂಗ್ರೆಸ್ ನಿಷ್ಠೆಯಲ್ಲವೇ? ವಿಜಾಪುರ ಜಿಲ್ಲೆಯ ಸುಳ್ಳದ ದೇಸಾಯರಂಥ ಸಿರಿವಂತರೂ ಪ್ರತಿಷ್ಠೆಯುಳ್ಳವರೂ ಆದ ವ್ಯಕ್ತಿಯ ಸೋಲು ಏನನ್ನು ಸೂಚಿಸುತ್ತಿದೆ? ಜನರಲ್ಲಿ ಜಾತಿಗಿಂತ ಕಾಂಗ್ರೆಸ್‌ನಿಷ್ಠೆ ಹೆಚ್ಚಾಗಿದೆ ಎಂಬುದನ್ನಲ್ಲವೆ? ರಾಣೆಬೆನ್ನೂರಂತಹ ವೀರಶೈವ ಸಂಖ್ಯಾಬಾಹುಳ್ಯವಿದ್ದ ಪ್ರದೇಶದಲ್ಲಿ, ಸುವಿದ್ಯಳಾದ ಸಿರಿವಂತಳಾದ ವೀರಶೈವ ಮಹಿಳೆ ಸೋತು, ಸಾಮಾನ್ಯ ಹರಿಜನ ಮಹಿಳೆಯೊಬ್ಬಳು ಆಯ್ಕೆಹೊಂದಿ ಬಂದುದು ಕನ್ನಡಿಗರ ಕಾಂಗ್ರೆಸ್ ನಿಷ್ಠೆಯ ಪ್ರತ್ಯಕ್ಷ ಉದಾಹರಣೆಯಲ್ಲವೆ? ನಡೆದ ಚುನಾವಣೆ, ಕನ್ನಡಿಗರಲ್ಲಿ ಜಾತೀಯ ಭಾವನೆ ಸಂಪೂರ್ಣವಾಗಿ ಅಳಿಸಿದೆಯೆಂಬುದನ್ನು ತೋರಿಸದಿದ್ದರೂ ಕಾಂಗ್ರೆಸ್ ನಿಷ್ಠೆಯನ್ನು ಹೆಚ್ಚಿಸಿದೆಯೆಂಬುದನ್ನು ಮಾತ್ರ ಸಿದ್ಧಪಡಿಸಿಬಿಟ್ಟಿದೆ.

## ಶಿಕ್ಷಕರ ಸಂಪು, ಜನತೆಯ ಜಂಪು!

ಕಳೆದ ತಿಂಗಳಿಂದ ಪ್ರಾಥಮಿಕ ಶಿಕ್ಷಕರು ಸಂಪು ಹೂಡಿದ್ದು, ಮುಂಬಯಿ ಪ್ರಾಂತ್ಯದಲ್ಲೆಲ್ಲ ಅದು ಪಸ್ಟಿಕೊಂಡಿದೆ. ಮಕ್ಕಳ ಶಿಕ್ಷಣದ ಬಗೆಗೆ ಕಳವಳವಿರುವ ಜನಸಾಮಾನ್ಯರಿಗೆ ಈ ಶಿಕ್ಷಕರ ಸಂಪೊಂದು ಬಿಡಿಸಲಾರದ ತೊಡಕಾಗಿ ಕುಳಿತಿದೆ. ಜನತೆಯ ಸರಕಾರ ನಮ್ಮಲ್ಲಿದ್ದರೆ ಸಂಪು ಹೂಡುವಂತಹ ಪರಿಸ್ಥಿತಿ ಇರುತ್ತಿರಲೆ ಇಲ್ಲ. ಒಂದು ವೇಳೆ ಹೂಡುವಂತಹ ಸಂದರ್ಭ ಬಂದರೂ ಬೇಗನೆ ಅದರ ವಿಚಾರಣೆಯಾಗಿ ಶಿಕ್ಷಕರ ಕೊರತೆಯ ನಿವಾರಣೆಯ ಕಾರ್ಯಸ್ವಲ್ಪವಾದರೂ ನಡೆಯಬಹುದಾಗಿತ್ತು. ಶಿಕ್ಷಣ ಖಾತೆಯು ಕೇವಲ ಜನತೆಗೆ ಬೇಕಾದ ಖಾತೆಯಲ್ಲದೆ ಸರಕಾರಕ್ಕೆ ಆವಶ್ಯಕವಾದುದೇನೂ ಅಲ್ಲ. ಅದುದರಿಂದ ಶಿಕ್ಷಕರ ಸಂಪಿನ ಕಡೆಗೆ ಆದು ಲಕ್ಷ್ಯವನ್ನೇ ಕೊಡಲಾರದು. ಪೋಸ್ಟ್‌ಮನ್ನರು ಸಂಪು ಹೂಡುವೆವೆಂದರು. ಮಧ್ಯವರ್ತಿ ಸರಕಾರಕ್ಕೆ ಇದರಿಂದ ಗಂಟೆಗೊಂದು ಕೋಟಿರೂಪಾಯಿಗಳಷ್ಟು ಹಾನಿಯಾಗಬಹುದಾಗಿತ್ತು. ಸಂಪೆಂದು ಶಬ್ದ ಹೊರಡುವುದೇ ತಡ; ಪೋಸ್ಟ್‌ಮನ್ನರ ಬೇಡಿಕೆ ಪೂರ್ಣವಾಯಿತು. ಪೋಲೀಸರು ಸಂಪು ಹೂಡುವೆವೆಂದರು. ಅವರ ನೆರವಿನಿಂದಲೇ ಭಾರತದ ಜನತೆಗೆ ಬೇಡವಾದ ಆಡಳಿತವನ್ನು ಆಧಿಕಾರಿಗಳು ನಡಿಸಿರುವರು. ಅವರು ಸಂಪು ಹೂಡಿದರೆ ಒಂದು ನಿಮಿಷವಾದರೂ ನಿಂತೀತೇ ಬ್ರಿಟಿಷ್ ಆಳರಸರ ರಾಜ್ಯ? ಎಂತಲೆ ಸಂಪಿನ ಸುದ್ದಿ ಹೊರಡುವುದಕ್ಕೆ ಮೊದಲೇ ಪೋಲೀಸರ ಬಯಕೆ ಸಲ್ಲಿಸಿ ಆಯಿತು. ಮೊನ್ನೆ ಮೊನ್ನೆ ಹುಬ್ಬಳ್ಳಿಯಲ್ಲಿ ರೈಲು ಕೆಲಸಗಾರರು ಒಂದೇ ದಿನದ ಸಂಪಿನಿಂದ ದೇಶದ ವೇಳಾಪತ್ರಿಕೆಯನ್ನೆ ಬದಲಿಸಿದರು; ಎಂತಲೆ ಕೂಡಲೇ ಅವರ ಬಯಕೆ ಪೂರ್ತಿಯಾಯಿತು. ಆದರೆ ಸಂಪು ಸೂಡಿ ತಿಂಗಳಾಗುತ್ತ ಬಂದರೂ ಶಿಕ್ಷಕರನ್ನು ಕೇಳುವವರೇ ಇಲ್ಲ. ಶಿಕ್ಷಕರಿಂದ ಕೆಲಸ ಆಪೇಕ್ಷಿಸುವವರು ಅವರು ಬದುಕುವಂತೆ ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ ಒದಗಿಸಿಕೊಡಬೇಕಲ್ಲವೆ? ಕೇವಲ ಜನರಿಗೆ ಬೇಕಿರುವ ಶಿಕ್ಷಕರನ್ನು ಸರಕಾರ ಲಕ್ಷಿಸದಿರುವಾಗ, ಜನತೆ ತಮ್ಮ ಹಾನಿಯನ್ನರಿತು ಸರಕಾರಕ್ಕೆ ಈ ಮಾತನ್ನು ಒತ್ತಿಹೇಳಿ, ಆದರ ಕಚೇರಿಯಿಂದ ಶಿಕ್ಷಕರ ಗೋಳನ್ನು ಕಡಿಮೆಮಾಡಿಸುವ ಕೃತಿಯನ್ನು ಒತ್ತಾಯದಿಂದ ಮಾಡಿಸಬೇಕಲ್ಲವೆ? ಶಿಕ್ಷಕರು ಸಂಪು ಹೂಡಿ, ತಮ್ಮ ಮಕ್ಕಳು ಮರಿಗಳೊಂದಿಗೆ ಅತ್ತ ಉಪವಾಸ ವನವಾಸ ಅನುಭವಿಸತೊಡಗಿದರು; ಇತ್ತ ಜನತೆಯ ಎಳಮಕ್ಕಳು ಶಿಕ್ಷಣವಿಲ್ಲದೆ ಅಲೆಯತೊಡಗಿದರು. ಆದರೂ ಜನತೆಯಲ್ಲಿ ಏನೂ ಜಲನಸಲನವಿಲ್ಲ. ಇದು ಜನತೆಯ ಜೀವಂತತನದ ಲಕ್ಷಣವೆ?

## ಶಿಕ್ಷಕರ ಸಂಪು ಅಕಾಲಿಕವೆ?

ಮುಂದಾಳುಗಳೆನಿಸುವ ಕೆಲವರಿಗೆ ಲೋಕಾನುಭವ ಸಾಲದೊ, ತಿಳಿವಳಿಕೆ ಸಾಲದೊ, ಒಮ್ಮೊಮ್ಮೆ— ಕಾರ್ಯ ಮಾಡಿ ಮಾಡಿ ದಣಿದುದರಿಂದ—ಜೇರೆ ವಿಚಾರ ತಿಳಿದುಕೊಳ್ಳಲು ಮನಸ್ಸಿಲ್ಲದೊ— ಪಕ್ಷಾಧಿನಿನೇಶದ ಭೂತಭಾಧೆಯೊ— ಎಂದು ಅವರ ವಿಚಿತ್ರ ಮಾತುಗಳನ್ನು ಕೇಳಿದವರಿಗೆ ಎನಿಸದಿರದು. ಪ್ರಾಥಮಿಕ ಶಿಕ್ಷಕರ ವಿಷಯದಲ್ಲಿ ಶ್ರೀ. ಮುರಾರಜಿ ದೇಸಾಯಿಯವರು ಆಡಿದ ಮಾತುಗಳಲ್ಲಿ ಒಬ್ಬ ಅಧಿಕಾರಮದಾಂಧನ ದರ್ಪಯುಕ್ತ ಉಪದೇಶವನ್ನು ಕಾಣಬಹುದಲ್ಲದೆ, ಜನತೆಯ ಒಬ್ಬ ಮುಂದಾಳಿನ ಔದಾರ್ಯಯುಕ್ತ ಹಿತವಚನವನ್ನಲ್ಲ. ಶ್ರೀ. ಮುರಾರಜಿ ದೇಸಾಯಿಯವರು ಮುಂಬಯಿ ಪ್ರಾಂತದವರಿಗೆ ಹೊಸಬರೇನೂ ಅಲ್ಲ. ಹಿಂದಿನ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಒಬ್ಬ ಮಾನ್ಯ ಮಂತ್ರಿಗರಾಗಿದ್ದರು. ರೈತರ ಕಲ್ಯಾಣ ಮಾಡಬೇಕೆಂಬ ಸದುದ್ದೇಶವಿಟ್ಟುಕೊಂಡು (?) ಟೆನೆನ್ಸಿ ಕಾಯಿದೆಯನ್ನು ರಚಿಸಿ ಪ್ರಚಾರದಲ್ಲಿ ತಂದರು. ಇವರಿಗೆ ಪ್ರಾಥಮಿಕ ಶಿಕ್ಷಕರ ಹಸಿವೆಯು ಗೊತ್ತು ಗೊತ್ತಿಲ್ಲವೊ, ಅಥವಾ ಬಹುಪಾಲು ಜನರಂತೆ ಪ್ರಾಥಮಿಕ ಶಿಕ್ಷಕರು ಮಾನವರೆಂಬುದನ್ನು ಇವರೂ ಮರೆತಿದ್ದಾರೊ? ಸದ್ಯ ಮಾಸ್ತರ್ ಜನರು ಹೂಡಿದ ಸಂಪು ಅಕಾಲಿಕವಂತೆ—ಅವಿವೇಕದ್ದಂತೆ. ಹಸಿವೆ ಸಮಯ-ಸಂದರ್ಭ ನೋಡುವುದೆ? ವಿವೇಕ-ಅವಿವೇಕ ವಿಚಾರವನ್ನು ಊಟಿಸುವುದೆ? ತನಗೇ ಬದುಕಲು ನೆಲೆಯಿಲ್ಲದಿರುವಾಗ ಮನುಷ್ಯ ಕರ್ತವ್ಯಾಕರ್ತವ್ಯಗಳ ವಿಚಾರ ಮಾಡುತ್ತ ಕೂಡಬಲ್ಲನೆ? ಹೊಟ್ಟೆ ತುಂಬಿದ ದೇಸಾಯಿಯವರು ಹಸಿದು ಕಂಗೆಟ್ಟ ಪ್ರಾಥಮಿಕ ಶಿಕ್ಷಕರ ಬಗೆಗೆ ಸಹಾನುಭೂತಿಯ ಲವಲೇಶವನ್ನೂ ತೋರಿಸದೆ, ಅವರಿಗೆ ನಿಷ್ಠುರವಾದ ಮಾತಿನಿಂದ ಬಯ್ಯೂ ಹೇಳಬಹುದಾಗಿದೆ. ಈ ಕರ್ತವ್ಯದ ಉಪದೇಶ-ಅಕಾಲಿಕವೆಂದೂ ಅವಿವೇಕವೆಂದೂ ಯಾವ ಮನುಷ್ಯಹೃದಯವೂ ಹೇಳಬಹುದಾಗಿದೆ. ಈ ಕರ್ತವ್ಯದ ಉಪದೇಶ ಮಾಡಲು ಬಂದುದು ಮಾತ್ರ ಖಂಡಿತವಾಗಿಯವರ ಮಾತಿಗೆ ಎಷ್ಟೋ ಪೆಟ್ಟು ಬಿದ್ದಿರುತ್ತಿತ್ತು. ಸಂಬಳವನ್ನುಕೂಡಲೆ ಒಂದಿಗೆ ಭವಿಷ್ಯದ ಆಶೆಯನ್ನಾದರೂ ಸೂಚಿಸಿದ್ದರೆ, ಮುರಾರಜಿ ಪೆಚ್ಚಿಸಲಿಕ್ಕೆ ಸಾಧ್ಯವಿಲ್ಲವೆಂದು ಅವರು ಸದ್ಯದ ಸರಕಾರದ ಸಕೇಲಿನಲಿ ನಮಿನಮಾತನಾಡಿರುವರಲ್ಲವೆ "ಬರಲಿರುವ ಕಾಂಗ್ರೆಸ್

ಸರಕಾರವು ಕೂಡ—ಅನೇಕ ಮಹತ್ತ್ವದ ಪ್ರಶ್ನೆಗಳು ಮುಂದೆ ಇರುವಾಗ—ಶಿಕ್ಷಕರ ಸಂಬಳದಂಥ 'ಸಣ್ಣ ಸಮಸ್ಯೆ'ಗಳನ್ನು ಕೂಡಲೆ ವಿಚಾರಮಾಡುವ ಆಶ್ವಾಸನೆ ಕೊಡುವಂತಿಲ್ಲ" ಎಂದು ಮುಂಬರುವ ಸರಕಾರದ ವಕೀಲಿಯನ್ನೂ ಮಾಡಿರುವರು. ಸಂಬಳ ಜೀವನಕ್ಕೆ ಸಾಲದೆ ಶಿಕ್ಷಕರಿಗೆ ಒದಗಿರುವ 'ಬದುಕೋ ಸಾವ್ಸೋ?' ಎಂಬ ಸಮಸ್ಯೆ ಸಣ್ಣ ಸಮಸ್ಯೆಯೆ? ಹಾಗಾದರೆ ದೊಡ್ಡ ಸಮಸ್ಯೆ ಯಾವುದು? ಅನ್ಯ ಪಕ್ಷಗಳೊಂದಿಗೆ ಜೊಡೆದಾಡಿ ಗೆದ್ದು ತನ್ನ ಪಕ್ಷದ ಗದ್ದುಗೆ ಭದ್ರಪಡಿಸಿಕೊಳ್ಳುವುದೋ? ಮುರಾರಜಿಯವರು ವೈಯಕ್ತಿಕವಾಗಿ ಈ ಮಾತನಾಡಿರಬಹುದಾದರೂ, ಅವರೊಬ್ಬ ಗಣ್ಯಮುಂದಾಳುಗಳಾದುದುದರಿಂದ, ಕಾಂಗ್ರೆಸ್ಸಿನಂತಹ ಉಚ್ಚ ಆದರ್ಶದ ಸಂಸ್ಥೆಗೊಂದು ಕೆಟ್ಟ ಕೊಳೆಯನ್ನು ಪಜ್ಜುವಂತಪ-ದಾಗಿದೆ. ಸರದಾರ್ ವಲ್ಲಭಭಾಯಿಯವರು ಒಂದು ಪತ್ರದಲ್ಲಿ ಬರೆದ ಮಾತೂ ಮುರಾರಜಿಯವರ ಅಭಿಪ್ರಾಯವನ್ನೇ ಎತ್ತಿ ಹಿಡಿಯುವಂತಹದಿದೆ. ನಿಜವಾದ ಮನುಷ್ಯತ್ವದ ಪಕ್ಕಿಗಾಗಿ ಕಾದಾಡುತ್ತಿರುವ ಇವರು ಈ ಬಗೆಯ ಮಾತಾಡುತ್ತಿರುವುದನ್ನು ನೋಡಿದರೆ, ಇದರಲ್ಲಿನೋ ಮುಂದಾಳುಗಳ ಪಕ್ಷಪಕ್ಷಗಳ ಗೊಂದಲವಿದ್ದಂತೆ ಭಾಸನೆ ಬರುತ್ತಲಿದೆ. ಆದರೆ ಪ್ರಾಥಮಿಕ ಶಿಕ್ಷಕರ ಈ ಸಂಘ ಕೇವಲ ಕ್ಷುಧೆಯ ನಿವಾರಣೆಗಾಗಿ ಇದೆಯ-ಲ್ಲದೆ ಯಾವುದೂ ಪಕ್ಷದ ಬಲವನ್ನು ಬೆಳಸತಿಕ್ಕೆ ಹೊರಟುದಲ್ಲ-ವೆಂಬುದನ್ನು ನಮ್ಮ ಎಲ್ಲ ಪಕ್ಷಗಳ ಮುಂದಾಳುಗಳೂ ಚೆನ್ನಾಗಿ ತಿಳಿದುಕೊಳ್ಳಬೇಕು, ಪಸಿದವ ಬಲ್ಲನು ಹಸಿವೆಯ ಶೂಲ! ಅಮೃತದ ತೇಗಿನ ಮದವೆಂತಹದು?

## ಬ್ರಿಟಿಷ್ ಮಂತ್ರಿಗಳ ಭಾರತಾಗಮನ

ತಾ. ೨೩-೨-೪೬ನೆಯ ದಿನ ಭಾರತಕ್ಕೆ ಕಾಲಿಕ್ಕಿದ ಬ್ರಿಟಿಷ್ ಮಂತ್ರಿತ್ರಯರು ಈಗ ದಿಲ್ಲಿಗೆ ಬಂದು ತಳ ಊರಿರುವರು. ಪದ್ಧತಿಯಂತೆ ಸವಿಸವಿ ಮಾತನಾಡುತ್ತಲೆ ಭಾರತದಲ್ಲಿ ಪರು ಆಡಿಯಿರಿ-ಸಿದ್ದಾರೆ. ಇವರ ಸುಖಪ್ರಯಾಣಕ್ಕೂ ಭಾರತದ ಜನರಿಂದ ಸುಸ್ವಾಗತ ಸಿಕ್ಕುವುದಕ್ಕೂ ಅನುಕೂಲವಾಗುವಂತೆ ಮುಖ್ಯ-ಮಂತ್ರಿ ಆಟ್ಲಿಯವರು ಪಾರ್ಲಮೆಂಟಿನಲ್ಲಿ ಭಾಷಣಮಾಡಿ, ಭಾರತೀಯರ ಹೃದಯದಲ್ಲಿ ಆಶೆಯ ಬಿರುಗಾಳಿಯನ್ನೆ ಎಬ್ಬಿ-ಸಿದ್ದಾರೆ. ಪಾಕಿಸ್ತಾನದ ಜಿನ್ನಾ ಸಾಹೇಬರೊಬ್ಬರನ್ನು ಬಿಟ್ಟರೆ, ಆಟ್ಲಿಯವರ ಭಾಷಣದಿಂದ ಸಂತೃಪ್ತರಾದ ರಾಜಕಾರ್ಯಧುರೀಣರೆ ನಮ್ಮಲ್ಲಿ ಹೆಚ್ಚು. ಮಹಾತ್ಮಾಗಾಂಧಿಯವರು ಕೂಡ ಸಂಪೂರ್ಣ ಸಮಾಧಾನದ ಉದ್ಗಾರ ತೆಗೆದುದುಂಟು. ಇದಕ್ಕನುಸಾರವಾಗಿ ಪತ್ರಿಕಾಪರಿಷತ್ತಿನಲ್ಲಿ ಮಾತನಾಡುವಾಗ ಭಾರತಮಂತ್ರಿ ಪೆಥಿಕ್ ಲಾರೆನ್ಸರು

"..ಭಾರತೀಯರಿಗೆ ತಮ್ಮ ಸ್ವಾತಂತ್ರ್ಯವನ್ನು ಪಡೆಯಲು ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿಗಳೆಂದು ಸಂಪೂರ್ಣ ಸಹಾಯ-ಮಾಡುವ ಒಂದೇ ಒಂದು ಉದ್ದೇಶದಿಂದ ನಾವಿಲ್ಲಿ ಬಂದಿದ್ದೇವೆ. ನಾವೀಗ ಬಿಚ್ಚು ಬಗೆಯಿಂದ ಇಲ್ಲಿಗೆ ಬಂದಿರುವೆವು. ಎನ್ನೊಂದೂ ನಿರ್ಧಾರವಿಲ್ಲದೆ ನಾವು ಬಂದಿರುವೆವೆಂದು ಯಾರೂ ಭಾವಿಸ-ಲಾಗದು. ಜಗತ್ತಿನ ಪ್ರಮುಖರಾಷ್ಟ್ರಗಳ ಜೊತೆಗೆ ಭಾರತವೂ ಸರಿಸಮಾನವಾಗಿ ನಡೆದುಕೊಳ್ಳುವಂತೆ ಸಹಕಾರಕೊಡುವ ಗುರಿ-ಯಿಂದ ನಾವಿಲ್ಲಿ ಬಂದಿದ್ದೇವೆ. ಸೌಹಾರ್ದದಿಂದ ಚರ್ಚೆ ನಡೆ-ಯಿಸಿ ನಿಶ್ಚಿತವಾದ ಒಂದು ಮಾರ್ಗವನ್ನು ಕಂಡುಕೊಳ್ಳಲು ಬಂದಿದ್ದೇವೆ...."

ಎಂದು ಮೊದಲಾಗಿ ನುಡಿದಿದ್ದಾರೆ. ಭಾರತೀಯ ಜನಜಂಗುಳಿ ಭಾವಾವೇಶದಿಂದ 'ಕ್ವಿಟ್ ಇಂಡಿಯಾ' ಎಂದು ಕೂಗುವರೆಂದು ತಿಳಿದ--ಬುದ್ಧಿವಾದಿಗಳ ಉತ್ತರದ ಮಾತಿದು. ಒಬ್ಬಬ್ಬರು ಚಳವಳಿ ನಡೆಯಿಸಿ 'ವಂದೇಮಾತರಂ' ಎಂದು ಕೂಗಿದರೂ ಹಿಡಿದು ಸೆರೆಮನೆ ಸೇರಿಸಿದವರು— ಲೋಕಮಾನ್ಯರ ಸ್ವರಾಜ್ಯ ಚಳವಳಿಯನ್ನೂ ಮಹಾತ್ಮರ ಬೇರೆ ಬೇರೆ ಕಾಲದ ಅಸಹಕಾರ ಚಳವಳಿಯನ್ನೂ ದಬ್ಬಾಳಿಕೆಯಿಂದ ದೂಡಿಬಿಟ್ಟವರು— ರ್ಗಳಿನೆಯ ಇಸವಿಯ ಕ್ರಾಂತಿಯ ಚಳವಳಿಯನ್ನೂ ನಿರ್ದಯ ಅಮಾನುಷ ಹಿಂಸಾಚಾರ-ದಿಂದ ಮೆಟ್ಟಿಹಾಕಿದವರು—ಇಂದು ವಿಜಯೋನ್ಮಾದದ ಕಾಲ-ದಲ್ಲಿಯೂ ಇಷ್ಟೊಂದು ಮೆಲುಮಾತುಗಳನ್ನೂ ಸವಿಮಾತುಗ-ಳನ್ನೂ ಆಡುತ್ತಿರುವುದನ್ನು ಕಂಡರೆ, ಬುದ್ಧಿವಾದಿ ಆಶ್ಚರ್ಯ ಪಡ-ಬಹುದಲ್ಲದೆ ಭಾವಜೀವ ಬ್ರಿಟಿಷರ ಧೀರೋದಾತ್ತಗುಣಗಳಿಗಾಗಿ ಹಿಗ್ಗಿ ಕೊನೆದು ಕೊಂಡಾಡಬಹುದು. ಇದನ್ನೆಲ್ಲ ಸಂದಿಗ್ಧಭಾವ-ದಿಂದ ನೋಡುವವರಿಗೆ 'ಈಗ ಉದಾತ್ತಧ್ಯೇಯದ ಕೂಲಿಕಾರ ಪಕ್ಷದವರಕಡೆಗೆ ಕಾರಭಾರ ಬಂದಿದೆ; ಭಾರತದ ಕಲ್ಯಾಣ ಅವರ ಗುರಿಯೆ ಆಗಿದೆ!' ಎಂದು ಸಮಾಧಾನಮಾಡಲೂ ಬರಬಹುದು. ಆದರೆ ಹಿಂದುಸ್ತಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೊದೊರೆವುದು ಇಷ್ಟೊಂದು ಸರಳವಾದ ಸುಲಭವಾದ ಸಂಗತಿಯಲ್ಲವೆಂಬುದನ್ನು ನಮಗಿಂತ ಚೆನ್ನಾಗಿ ಬ್ರಿಟಿಷ ರಾಜಕಾರಣಿಗಳು ಬಲ್ಲರು. ಕೂಲಿಕಾರ ಪಕ್ಷದವರ ಧ್ಯೇಯ ಇಗ್ಲಂಡಿನ ಮಟ್ಟಿಗೆ ಉದಾತ್ತವಾಗಿರಬಹುದು; ಇಂಗ್ಲಂಡಿನ ಜನರನ್ನು ಸುಖ-ಶಾಂತಿಗಳಿಂದಿರಿಸ ಬೇಕಾದರೆ ಹಿಂದು ಸ್ಥಾನದ ಸಂಬಂಧ ತಮಗೆ ಬೇಕೆಬೇಕೆಂಬುದನ್ನು ಕಾಂಝುಬೇರ್ಟಿವರಂತೆ ಕೂಲಿಕಾರ ಪಕ್ಷದವರೂ ಮನವರಿಕೆ ಮಾಡಿಕೊಂಡಿರುವರು. ರಾಜಕಾರ್ಯಸೂತ್ರ ಕೈಯಲ್ಲಿದ್ದವರು ಎಂತಹ ಧ್ಯೇಯವಾದಿಗಳಿದ್ದರೂ ಸಾಮ, ದಾನ, ಭೇದ, ದಂಡ ಈ ಚತುರೋಪಾಯಗಳನ್ನು ಅವಲಂಬಿಸಲೇ ಬೇಕಾಗುವುದು. ಈ ಉಪಾಯಗಳ ಚತುರಂಗದಾಟದಲ್ಲಿ ಭಾವನಾಜೀವಿಗಳಾದ ಭಾರ-ತೀಯರನ್ನು ಸಹಜವಾಗಿ ಸೋಲಿಸುವೆನೆಂಬ ಒಳನಂಬುಗೆಯಿಂದಲೆ ಇವರು ಬಂದಿದ್ದಾರೆಂಬುದನ್ನು ನಮ್ಮ ರಾಜಕೀಯ ಧುರೀಣರು ಲಕ್ಷ್ಯದಲ್ಲಿರಿಸಿಕೊಂಡು ನಡೆಯುವುದು ತುಂಬ ಅವಶ್ಯಕ. ಈಗ ಬಂದ ಕ್ರಿಪ್ಸರೇ ಒಮ್ಮೆಲ್ಲಿ ಬಂದಿದ್ದರು; ಭಾರತೀಯರನ್ನು ಲಾಗ ಹಾಕಿಸಲು ಪ್ರಯತ್ನಿಸಿದರು. ಹೇಳಿದಂತೆ ಲಾಗಹಾಕದಾಗಲು ಭಾರತೀಯರನ್ನು ಜಾಯಿಗೆ ಬಂದಂತೆ ಆಡಿಕೊಂಡರು. ಈಗ ಬಂದಿರುವ ರಾಷ್ಟ್ರಮಂಡಲಿಗೆ ಕ್ರಿಪ್ಸರೇ ನಾಯಕರಂತಿದ್ದಾರೆಂಬ ಮಾತೂ ಸರ್ವಶ್ರುತವಾಗಿದೆ.

# ಸಾದರ ಸ್ವೀಕಾರ

೧೦೫ ಹುಬಳಿ ಗಜೆಟ್— (ವಾರಪತ್ರಿಕೆಯ ಕಾಂಗ್ರೆಸ್ ವಿಶೇಷಾಂಕ) ಸಂಚಾಲಕರು ಡಾ. ನಾ ಸು. ಹರಡಿಕರರು; ಕಂವಾದಕರು ಶ್ರೀ. ರಾ. ವೆ. ಕರಗುದರಿಯವರು. ಪ್ರಕಾಶಕರು ಶ್ರೀ. ಎಸ್. ಬಿ. ಮನಗೋಳಿಯವರು, ಮನೆನಂಬರು ೧೦೫೭೭, ದಾಜೀಬಾನ ಪೇಟೆ; ಹುಬ್ಬಳ್ಳಿ. ಡೆಮಿಯ ೧೭ ಪುಟಗಳು. ಬೆಲೆ ೦-೮-೦.

ಸ್ವಾತಂತ್ರ್ಯ ದಿನ ಎಂದರೆ ತಾ. ೬೬-೧೮ನೆಯ ದಿನ ಈ ವಿಶೇಷಸಂಚಿಕೆ ಪ್ರಕಟವಾಗಿದೆ. ಹುಬಳಿ ಗಜೆಟಿನ ವಿಶೇಷ ಸಂಚಿಕೆ ಯೆಂದರೆ ಯಾವಾಗಲೂ ಸ್ವೀಕೃತ ವಿಷಯದ ವಿಶೇಷ ಸಂಚಿಕೆಯೆ ಆಗಿರುವುದು. ಹೆಚ್ಚಾಗಿ ಸಂಪಾದಕ ಮಂಡಲಿಯವರೇ ಬರೆದ ಲೇಖನಗಳಿರುವುವು. ಕನ್ನಡ ಕ್ರಾಂತಿಕಾರರಲ್ಲಿ ಒಬ್ಬರಾದ ಶ್ರೀ. ಬೇಂದ್ರೂರ ಭೀಮರಾಯರ ಚಿತ್ರಕಥೆಯು ಉದ್ಬೋಧಕವಾಗಿದೆಯಲ್ಲದೆ, ಕನ್ನಡ ತರುಣರ ಕಾರ್ಯಶಕ್ತಿನಿದರ್ಶಕವಾಗಿದೆ. ಮೊದಲಿನಿಂದ ಇದುವರೆಗಿನ ಎಲ್ಲ ಕಾಂಗ್ರೆಸ್ ಅಧಿವೇಶನಗಳ ಅಧ್ಯಕ್ಷರ ಚಿತ್ರಪಟಗಳೂ ಇವೆ. ಭಾರತೀಯ ಕಾಂಗ್ರೆಸ್ ಮಹಾಸಭೆಯ ವಿವಿಧಾಂಗದ ಪರಿಚಯ ಮಾಡಿಕೊಳಬೇಕೆನ್ನುವವರು ಅವಶ್ಯವಾಗಿ ಬೇಕಾದ ಸಂಚಿಕೆ. ಗಾತ್ರದ ರೀತಿಯಿಂದ ನೋಡಿದರೆ ಎಂಟಾಣೆಯ ಬೆಲೆ ತೀರ ಸುಲಭ ಬೆಲೆಯೆಂದು ಹೇಳಬಹುದು.

೧೦೬ ಕಾಣಿಕೆ— (ಶ್ರೀ. ಬಿ. ಎಂ. ಶ್ರೀಯವರ ನೆನಹಿಗಾಗಿ) ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯವರು ಪ್ರಕಟಿಸಿದ್ದಾರೆ. ಕ್ರಾ. ಆ. ೪೮ ಪುಟಗಳು; ಬೆಲೆ ೦-೪-೦.

ಇದರಲ್ಲಿ ದಿವಂಗತ ಬಿ. ಎಂ. ಶ್ರೀಯವರ ಪ್ರತಿಭೆಯನ್ನು ಪರಿಚಯ ಮಾಡಿಕೊಡುವ ಸ್ವಲ್ಪ 'ಎ. ವಿ. ಶ್ರೀ.', 'ವಿ. ಸಿ', ಡಿ. ಸಿ. ಗುಂಡಪ್ಪ ಅವರ ಚಿಕ್ಕ ಲೇಖನಗಳಿರುವುವಲ್ಲದೆ, ದಿವಂಗತರ ಗದ್ಯ-ಪದ್ಯ ಲೇಖನದ ಕೆಲವು ಅವತರಣಗಳೂ ಸಂಗ್ರಹಗೊಂಡಿವೆ. ಒಳ್ಳೆಯ ಕಾಣಿಕೆ.

೧೦೭ The Vijnana Ephemeris For 1946— (ವಿಜ್ಞಾನ ನಿತ್ಯಸ್ಫುಟ ಪಂಚಾಂಗ) ಶ್ರೀಮಾನ್ ಎಂ. ಆರ್. ಭೀಮಾಚಾರ್ಯರಿಂದ ರಚಿತವಾದುದು. ಪ್ರಕಾಶಕರು ಅಸ್ಟ್ರಾಲಾಜಿಕಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಬಾಂಬೆ ೭೩. ಕ್ರಾ. ಆ. ೨೪ ಪುಟಗಳು. ಬೆಲೆ ೦-೮-೦.

ಸಾಯನಪದ್ಧತಿಯ ನಿತ್ಯಸ್ಫುಟ ಪಂಚಾಂಗಗಳು ಪಾಶ್ಚಾತ್ಯ ಪದ್ಧತಿಯ ಜ್ಯೋತಿರ್ವಿದರಿಂದ ವರ್ಷವರ್ಷವೂ ಪ್ರಸಿದ್ಧವಾಗುತ್ತಿದ್ದುವು. ನಿರಯನ ಪದ್ಧತಿಯ ಇಂತಹ ನಿತ್ಯಸ್ಫುಟ ಪಂಚಾಂಗಗಳೂ ಪ್ರಕಟವಾಗತೊಡಗಿದುದು ನಿರಯನ ವಾದದ ಅಭಿಮಾನಿಗಳಿಗೆ ಅನುಕೂಲವಾಯಿತು. ಜಾತಕಾದಿ ಫಲಜ್ಯೋತಿಷಕ್ಕಾಗಿ ನಿತ್ಯದ ಗ್ರಹಗತಿಗಳನ್ನು ನೋಡುವುದಕ್ಕೆ ಇಂತಹ ಸಾಧನಗಳಿದ್ದರೆ ಬೇರೆ ಲೆಕ್ಕ ಮಾಡುತ್ತ ಕುಳಿತುಕೊಳ್ಳಬೇಕಾಗಿಲ್ಲ. ಕನ್ನಡಿಗರೊಬ್ಬರು ಮುಂಬಯಿಯಲ್ಲಿದ್ದುಕೊಂಡು ಜ್ಯೋತಿಷ ಸಂಸ್ಥೆಯೊಂದನ್ನು ಸ್ಥಾಪಿಸಿ, ವಿಧಾಯಕವಾಗಿ ಕಾರ್ಯ ನಡೆಯಿಸಿರುವುದು ಸಂತೋಷದ ಸಂಗತಿ. ನಿರಯನವಾದಿ ಜ್ಯೋತಿಷ್ಕರು ಈ ಪಂಚಾಂಗದ ಪ್ರಯೋಜನ ಪಡೆದುಕೊಳಬೇಕು.

೧೦೮ ಚಂದ್ರಗುಪ್ತ ವಿಜಯ— (ಐತಿಹಾಸಿಕ ಕಥೆ). ಬರೆದವರು ಶ್ರೀಮಾನ್ ಎಚ್. ಎಂ. ಶಂಕರನಾರಾಯಣರಾವ್ ಎಂ. ಎ. ಕನ್ನಡ ಅಸಿಸ್ಟೆಂಟ್ ಡಿ. ಬನುಮಯ್ಯನಪರ ಹೈಸ್ಕೂಲು, ಮೈಸೂರು. ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ. ೧೪೦೫, ಕೃಷ್ಣಮೂರ್ತಿಪುರಂ, ಮೈಸೂರು ಅವರು ಪ್ರಕಾಶಕರು. ಮೊದಲನೆಯ ಗ್ರಂಥ. ಕ್ರಾ. ಆ. ೧೪೦ ಪುಟಗಳು. ಬೆಲೆ ೧-೪-೦.

೧೦೯ ರಾಷ್ಟ್ರಪತಿಗಳು— (ಭಾರತ ರಾಷ್ಟ್ರೀಯ ಮಹಾ ಸಭೆಯ ಇದುವರೆಗಿನ ಅಧಿವೇಶನಗಳ ಅಧ್ಯಕ್ಷರ ಸಚಿತ್ರ ಜೀವನ ಪರಿಚಯಗಳ ಸಂಕಲನ) ಬರೆದವರು "ಸ್ವಾತಂತ್ರ್ಯ ಪ್ರಿಯ. ಸಂಪಾದಕರು ಶ್ರೀ. ಬುಲ್ಲಿ ಬಿಂದುಮಾಧವರು. ಧಾರವಾಡದ ಮಿಂಚಿನ ಬಳ್ಳಿಯ ಆನೆಯ ವರ್ಷದ ೮-೩ನೆಯ ಕುಡಿ. ಕ್ರಾ. ಆ. ೮+೩೭೨ ಪುಟಗಳು. ಬೆಲೆ ೪-೦-೦.

೧೧೦ ಸಿದ್ಧಾಂತವಾದಿ ವಿದಂಬನಂ ಆರ್ಧಾತ್ ದೃಕ್‌ಪಂಚಾಂಗ ಖಂಡನಸ್ಯ ಮೂಲೋಚ್ಚಾಟನಂ (ಜ್ಯೋತಿರ್ಗಣಿತ ವಿಷಯಕ ವಾದಾತ್ಮಕ ಪುಸ್ತಕ). ಸಂಪಾದಕರು ಮತ್ತು ಪ್ರಕಾಶಕರು ಸುಬ್ರಹ್ಮಣ್ಯಶರ್ಮಾ ಭಾರ್ಗವ, ಶ್ರೀಕ್ಷೇತ್ರ ಗೋಕರ್ಣ. ಪುಸ್ತಕಗಳು ಸಂಪಾದಕರಲ್ಲಿಯೆ ಸಿಕ್ಕುವುವು.

ಇದು ಸೂರ್ಯಸಿದ್ಧಾಂತವನ್ನೆತ್ತಿ ಹಿಡಿದು ಬರೆದ ಕನ್ನಡ ಗ್ರಂಥಗಳಿಂದಲ ಖಂಡನಾತ್ಮಕ ಪ್ರಬಂಧ. ದೃಕ್ ಸಿದ್ಧಾಂತವಾದಿಗಳ ಪಕ್ಷದ ಮಂಡನವೂ ಇದೆ. ದಿನದಿನಕ್ಕೆ ಜ್ಯೋತಿಷಶಾಸ್ತ್ರದ ಸಂಶೋಧನೆ ಹೆಚ್ಚುತ್ತಿದ್ದು, ದೃಕ್ ಸಿದ್ಧಾಂತಕ್ಕೆ ಪ್ರತ್ಯಕ್ಷ ಪ್ರಮಾಣದ ಬಲವಾದ ಆಧಾರ ದೊರೆತು, ಅದರ ಸತ್ಯತೆಯನ್ನು ಒಪ್ಪುವ ಕಾಲ ಬಂದಿರುವಾಗ, ಅಜ್ಞಾನದಿದ ಮಾತೆಂದು ಅದನ್ನು ಅಭಿಮಾನದಿಂದ ಸತ್ಯವನ್ನಾಗಿ ಭಾವಿಸುವುದರಲ್ಲಿ ಹುರುಳಿಲ್ಲ. ಸೂರ್ಯಸಿದ್ಧಾಂತವಾದಿಗಳು ಪರಂಪರೆಯ ಬರಿಹಕ್ಕಿಂತ ಪ್ರತ್ಯಕ್ಷಕ್ಕೆ ಮಹತ್ವ ಕೊಡಬೇಕಾದುದು ಆವಶ್ಯಕ. ಸೂರ್ಯನೆ ಭೂಮಿಯ ಸುತ್ತು ತಿರುಗುವನೆಂಬ ಪೌರಾಣಿಕರ ಕಲ್ಪನೆಯನ್ನು ಭಾರತೀಯ ಜ್ಯೋತಿಷ ಸಂಶೋಧಕರು ಹಿಂಪಡೆಯಲ್ಲಗಳೆದಿಲ್ಲವೆ? ವಿಜ್ಞಾನ ಸಮ್ಮತ ಮಾರ್ಗದಿಂದ ನಡೆವುದು ಸತ್ಯವಕ್ಷ್ಯವಾತಿಗಳ ಕರ್ತವ್ಯವಾಗಿದೆ.

೧೧೧. ಶ್ರೀಶಾರದಾದೇವಿ (ಸದ್ಗುರು ರಾಮಕೃಷ್ಣ ಪರಮ ಹಂಸರ ಸಹಧರ್ಮಿಣಿಯ ಜೀವನ ಪರಿಚಯ). ಬರೆದವರು ಶ್ರೀಮಾನ್. ರಾ. ನರಸಿಂಹಮೂರ್ತಿ, ಪ್ರಕಾಶಕರು ಶ್ರೀಮಾನ್ ಬಿ. ಶ್ರೀನಿವಾಸ ಅಯ್ಯಂಗಾರ್, ಆರಳೀಪೇಟೆ, ಬೆಂಗಳೂರು ನಗರ. ಕ್ರಾ. ಆ. ೧೧೪ ಪುಟಗಳು. ೧-೪-೦.

# ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ ( Valuation ) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಪುರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ ( Claim ) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ತುಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಮ್. ಗೋವರ್ಧನರಾವ.

ಶ್ವಾಸಕ್ಕೆ ಸಂಬಂಧಪಟ್ಟ ಅಂಗಗಳ ಆಂತರ್ಯದಲ್ಲಿನ ಕಶ್ಮಲದಿಂದ ಉಂಟಾಗುವ ಕೆಮ್ಮನ್ನು ಗುಣಪಡಿಸಲು ಅದರ ಮೂಲ ಕಾರಣವನ್ನು ತೆಗೆದುಬಿಡಬೇಕು. ಈ ಕೆಲಸವನ್ನು "ಕಾಸ್ಫೊ" ವು ಮಾಡಿ, ಕೆಮ್ಮನ್ನು ಎಂದೆಂದಿಗೂ ಗುಣಮಾಡಿ, ಆದರಲ್ಲಿ ಉಂಟಾಗಬಹುದಾದ ರೋಗಗಳ ಭಯದಿಂದ ನಿಮ್ಮನ್ನು ಪಾರು ಮಾಡುವುದು.

"ಕಾಸ್ಫೊ" ಹಲವು ತರದ ಅತ್ಯುತ್ಕೃಷ್ಟ ಔಷಧಗಳಿಂದ ಕೂಡಿದ್ದು, ವಾಸಕದಂತಿರುವ ಈ ಮದ್ದು ಕೆಮ್ಮಿನ ಮೂಲವನ್ನು ಕಿತ್ತೊಗೆದು, ಕಫವನ್ನು ಕಡಿಮೆ ಮಾಡಿ, ಶೀತರೋಗಕ್ಕೆ ಸಂಬಂಧಿಸಿ ಎಲ್ಲಾ ಕಶ್ಮಲವನ್ನು ತೆಗೆದು, ಮುಂದಕ್ಕೆ ಅಂತಹ ರೋಗಗಳು ಬಾರದಂತೆ ಹೃದಯ ಮತ್ತು ಶ್ವಾಸಕೋಶಗಳನ್ನು ಕ್ರಮವಾಗಿ ಇಡುವುದು. ಅದು ಅತಿ ಶಕ್ತಿಯುಳ್ಳದ್ದಾಗಿ, ಬಿಲ್ಲೆಯ ರೂಪದಲ್ಲಿ ರುಚಿಕರವಾಗಿ ನೊರೆಯುತ್ತದೆ. ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ.

ಗುಣವಾಗುವತನಕ ಒಂದೆರಡು ಗಂಟೆಗಳ ಅಂತರದಲ್ಲಿ ಒಂದೊಂದು ಬಿಲ್ಲೆಯನ್ನು ಸೇವಿಸಬೇಕು.

ಎಲ್ಲಾ ಔಷಧಾಲಯಗಳಲ್ಲಿ ದೊರಕುವುದು.

Kaspho

ಆಶ್ಚರ್ಯಕರವಾದ ಕೆಮ್ಮು-ನಾಶಕರ ಬಿಲ್ಲೆಗಳು

ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಹಮ್ಮದ್‌ನಗರ.

ಆರು ಆಣೆ

| ಸಂಪುಟ ೬ | ಮೇ ೧೯೪೭ | ಸಂಚಿಕೆ ೧೨ |
|---|---|---|

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮ

## ಮುಖ್ಯ ವಿಷಯಗಳು

ಕರುಣೆಗೆ ಕಾರಣವಾದ ರಾಷ್ಟ್ರ ( ಅನುವಾದಿತ ಕೃತಿಭಾಗ )
ದಿ. 'ಖಲೀಲ್‌ಜಿಬ್ರಾನ್' ( ಸಿರಿಯಾದೇಶದ ಕವಿ ) ೪೭೧
ಸಂಪಾದಕೀಯ ( ಹೊಸೆಯ ವರ್ಷದ ಕೊಸೆ )
ಸಂಪಾದಕರು ೪೭೨
ಮಂಗನ ಮಲ್ಲಿನಾಥತನ
'ಮಲ್ಲಿನಾಥ' ೪೭೩
ಕಡಲಿನ ಒಡತಿಯರು ( ಕವನ )
ಶ್ರೀ. ಎಂ. ಎನ್. ಕಾಂಚನ್, ಮುಂಬಯಿ ೪೭೪
ರಾಣಿ ಕಲಿಸಿದ ನೀತಿ ( ಸಣ್ಣ ಕತೆ )
ಶ್ರೀ. ಬೇಂಪೈ ಲಕ್ಷ್ಮಣರಾಯರು, ಧಾರವಾಡ ೪೭೫
ಕೃತ್ರಿಮ ಹಾಲು ( ವಿಜ್ಞಾನ ವಿಚಾರ )
ಶ್ರೀ. ವೀ. ಚ. ಹಿತ್ತಲಮನೆ, ಪುಣೆ ೪೭೯
ಜನಪದ ಸಾಹಿತ್ಯದಲ್ಲಿಯ ಸೌಂದರ್ಯ ( ಪತ್ರವ್ಯವಹಾರ )
ಶ್ರೀ. ಶಿವೇಶ್ವರ ಬೊಡ್ಡಮನಿ, ನವಿಲೂರು. ೪೮೩
ಮಹಾತ್ಮಾ ಗಾಂಧಿ ( ಕವನ )
ಶ್ರೀ. 'ಅಶ್ವತ್ಥ' ಹಿಂದೂ ವಿ. ವಿ. ನಿಲಯ, ಬನಾರಸ ೪೮೪
ನನ್ನ ಮದುವೆಯ ಮಾತು ನಡೆದಾಗ ( ಲಲಿತ ಪ್ರಬಂಧ )
ಕು. ದನುಯಂತಿ ಪರ್ವತಿ, ಬಾಗಿಲುಕೋಟಿ. ೪೮೫
ಹೊಟ್ಟೇ ಮಾಡ್ಯಾನ ಶಿವಾ ! ( ವಿಚಾರ ತರಂಗ )
ಶ್ರೀ. ಬಿದರಕುಂದಿ ವೆಂಕಟರಾಯರು, ಅಧಣಿ ೪೮೭
ಸಂಸ್ಕೃತಿ ಮತ್ತು ನಾಗರಿಕತೆ ( ವಿ ಪ್ರ. ಪ್ರಬಂಧ )
ಶ್ರೀ. ಶಂ. ಬಾ. ಜೋಶಿ, ಧಾರವಾಡ ೪೮೯
ಆಶೀರ್ವಾದ ( ಕನಸಿನ ಕತೆ )
ಶ್ರೀ. 'ಮೂರಾನ ವಾಸಿಷ್ಠ' ಮೆಡಿಕೇರಿ ೪೯೪
ಪುಸ್ತಕ ವಿಮರ್ಶೆ
ಬೇರೆ ಬೇರೆ ವಿಮರ್ಶಕರು ೪೯೫
ಸಾದರ ಸ್ವೀಕಾರ ೫೦೦
ನಾಲ್ಕೂ ನಿಟ್ಟಿನ ನೋಟ
ನಿರೀಕ್ಷಕರು' ೫೦೧

### ಚಂದಾದಾರರಿಗೆ ಸೂಚನೆ

ಜೂನ್ ತಿಂಗಳಿಂದ ಜಯಂತಿಗೆ ೯ನೆಯ ವರ್ಷ ಪ್ರಾರಂಭವಾಗುವುದು. ಹೊಸವರ್ಷದ ಚಂದಾಧನವನ್ನು ಎಲ್ಲ ಚಂದಾದಾರರೂ ವಿ. ಪಿ. ಯ ದಾರಿಯನ್ನು ಕಾಯದೆ, ಮನಿಯಾರ್ಡರ್ ಮೂಲಕ ಕಳುಹಬೇಕು. ಬೇಡವಾದವರು ಪಯೆಯಿಟ್ಟು ಬರೆದು ತಿಳಿಸಬೇಕು.

DYESTUFFS
INTERMEDIATES
AND
CHEMICALS

SIZING AND FINISHING PRODUCTS
MACHINERIES FOR ALL INDUSTRIES
FOR

COTTON, SILK, ART SILK,
WOOL, JUTE, PAPER.
LEATHER, SOAP, WAX,
COIR, VARNISHES, OILS.

Chemicals
Accelerators and
Anti-Oxidants
for
Rubber Industry

S. K. KABBUR LIMITED

3, BASTION ROAD
FORT, BOMBAY

Telegrams: "DIAZO" Bombay. Telephone: 21627

CORRESPONDENTS IN ENGLAND
KABBUR & Co., LIMITED

RADHA HOUSE
Higher Ardwick, MANCHESTER, 12.

Telegrams: "Radha," Manchester.

# ಪ್ರಬುದ್ಧ ಕರ್ನಾಟಕ

ಪ್ರತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೪—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೪ | ಏಪ್ರಿಲ್ ಮೇ ೧೯೪೬ | ಸಂಚಿಕೆ ೧೨


## ಕಳವಳಕ್ಕೆ ಕಾರಣವಾದ ರಾಷ್ಟ್ರ

(ಏಶಿಯಾ ದೇಶದ ಸುಪ್ರಸಿದ್ಧ ಕವಿ ಖಲೀಲ್ ಜಿಬ್ರಾನ್ ಅವರ ಕೃತಿಭಾಗದ ಅನುವಾದವಿದು.)

ಬಳಿಕ ಹಾಫೀಜ್ ಎಂಬ ಹೆಸರಿನ ಶಿಷ್ಯನೊಬ್ಬ ಆತನಿಗೆ ಹೇಳಿದ:

"ಗುರುದೇವಾ, ಅರ್‌ಫಾಲೀಝ್ ನಗರಿಯ ಬಗೆಗೂ, ತಾವು ಹನ್ನೆರಡು ವರ್ಷ ಬಾಳನ್ನು ಕಳೆದ ಈ ಪ್ರದೇಶದ ಬಗೆಗೂ ಹೇಳಬೇಕಾದುದನ್ನು ಹೇಳಬೇಕು."

ಕೇಳಿ ಅಲ್ ಮುಸ್ತಫಾ ಮೌನ ತಳೆದು ನಿಂತ; ಬದಿಯ ಬೆಟ್ಟದ ಕಡೆಗೂ ಅನಂತವಾದ ಆಗಸದ ಕಡೆಗೂ ನೋಡಿದ. ಆಗಿನ ಅವನ ಮೌನದಲ್ಲಿ ಹೋರಾಟವೊಂದು ನಡೆದಿದ್ದಿತು. ಬಳಿಕ ಅವನು ಹೇಳಲು ತೊಡಗಿದ:

"ಗೆಳೆಯರೆ, ಜೊತೆಗಾರರೆ, ಶ್ರದ್ಧೆಯಿಂದ ಪರಿಪೂರ್ಣವಾದ— ಧರ್ಮಕ್ಕೆ ನಸುವೂ ನಿಲುಗಡೆಯಿಲ್ಲದ— ರಾಷ್ಟ್ರವು ಕಳವಳಕ್ಕೆ ಕಾರಣವಾಗಿರುವುದು.

"ಯಾವ ರಾಷ್ಟ್ರ ತಾನೆ ನೆಯ್ದ ಬಟ್ಟೆಯನ್ನು ಬಳಸದೊ, ತಾನೆ ಬೆಳೆದ ಕಾಳಿಂದ ರೊಟ್ಟಿ ಬೇಯಿಸಿ ತಿನ್ನದೊ, ತನ್ನ ಗಾಣದಲ್ಲಿಯೆ ಹಿಂಡಿದ ಮಧುವನ್ನು ಸೇವಿಸದೊ— ಆ ರಾಷ್ಟ್ರ ಕಳವಳಕ್ಕೆ ಕಾರಣವಾಗಿರುವುದು.

"ಅಂಜುಗುಳಿಯೂ ದಬ್ಬಾಳಿಕೆಯವನೂ ಆದವನನ್ನು ವೀರವಿಭೂತಿಯೆಂದು ಹೊಗಳಿ ಹಾಡುವ ರಾಷ್ಟ್ರವೂ, ಜಂಭಗಾರನಾದ ಜೇತೃವನ್ನು ಧೀರ-ಉದಾರನೆಂದು ಮನ್ನಿಸುವ ರಾಷ್ಟ್ರವೂ ಕಳವಳಕ್ಕೆ ಕಾರಣವಾಗಿರುವುದು.

"ಯಾವ ರಾಷ್ಟ್ರ ವಿಕಾರಗಳನ್ನು ಕನಸಿನಲ್ಲಿ ತಿರಸ್ಕರಿಸಿ, ಎಚ್ಚತ್ತಿರುವಾಗ ಅವುಗಳ ಬಾಯಿಗೆ ಬಲಿಯಾಗುವುದೊ, ಅದು ಕಳವಳಕ್ಕೆ ಕಾರಣವಾಗಿರುವುದು.

"ಯಾವ ರಾಷ್ಟ್ರ ಸ್ನಾನಯಾತ್ರೆಯ ಸಂದರ್ಭದಲ್ಲಿಯೆ ತನ್ನ ಸೊಲ್ಲನ್ನು ಮೇಲೆ ಎತ್ತುವುದೊ, ಯಾವುದು ಸ್ವಂತದ ವಿನಾಶದ ವೇಳೆಯಲ್ಲಿ ಬರಿ ದೊಡ್ಡಿತೆಯ ಹರಟೆ ಕೊಚ್ಚುವುದೊ, ಸ್ವಂತದ ಕೊರಳು ಕತ್ತಿಯ ಏಟನ ಕೆಳಗೆ ಸಿಕ್ಕಾಗಲೆ ಯಾವುದು ಬಂಡಾಯವೆಬ್ಬಿಸುವುದೊ, ಅಂತಹ ಆ ರಾಷ್ಟ್ರ ಕಳವಳಕ್ಕೆ ಕಾರಣವಾಗಿರುವುದು.

"ಎಲ್ಲಿ ಗುಳ್ಳಿನರಿ ಮುಂದಾಳಾಗಿ ಮೆರೆವುದೊ, ಮಾಟಗಾರನೆಲ್ಲಿ ತತ್ತ್ವವಿದನಾಗಿರುವನೊ, ತೇಪೆ ಹಚ್ಚುವ ಮಶ್ಕತ್ತಿಕೀಳು ಅನುಕರಣವ ಕೌಶಲವೆ ಎಲ್ಲಿ ಕಲೆಯೆನಿಸಿಕೊಳ್ಳುವುದೊ, ಅಂತಹ ಆ ರಾಷ್ಟ್ರ ಕಳವಳಕ್ಕೆ ಕಾರಣವಾಗಿರುವುದು

"ಹೊಸ ಆಡಳಿತಗಾರನನ್ನು ಯಾವುದು ಕೊಂಬು-ಕಹಳೆಗಳಿಂದ ಬರಮಾಡಿಕೊಳ್ಳುವುದೊ, ಮತ್ತೆ ಅವೇ ಕೊಂಬು-ಕಹಳೆಗಳಿಂದ ಯಾವುದು ಬೇರೊಬ್ಬನನ್ನು ಸ್ವಾಗತಿಸುವುದಕ್ಕಾಗಿ ಮೊದಲಿನವನನ್ನು ನಿಷೇಧಿಸುವ ಗುಲ್ಲುಗರ್ಜನೆಯನ್ನು ಹೂಡುವುದೊ— ಆ ರಾಷ್ಟ್ರ ಕಳವಳಕ್ಕೆ ಕಾರಣವಾಗಿರುವುದು.

"ಯಾವ ರಾಷ್ಟ್ರದ ಋಷಿಗಳ ವಾಣಿ ಮುಪ್ಪಿನ ಮೂಲಕ ನಿಂತು ಹೋಗಿದೆಯೊ, ಯಾವ ರಾಷ್ಟ್ರದ ವೀರವಿಭೂತಿ ಇನ್ನೂ ಕೊಟ್ಟಲಲ್ಲಿ ಪಟ್ಟಿರುವುದೊ, ಅಂತಹ ಆ ರಾಷ್ಟ್ರ ಕಳವಳಕ್ಕೆ ಕಾರಣವಾಗಿರುವುದು.

"ಯಾವ ರಾಷ್ಟ್ರವು ತುಂಡುತುಂಡಾಗಿರುವುದೊ— ಆ ಪ್ರತಿಯೊಂದು ತುಂಡು ತಾನೆ ಒಂದು ರಾಷ್ಟ್ರವೆಂದು ಎಲ್ಲಿ ತಿಳಿದುಕೊಂಡು ನಡೆಯುತ್ತಿರುವುದೊ— ಅಂತಹ ಆ ರಾಷ್ಟ್ರ ಕಳವಳಕ್ಕೆ ಕಾರಣವಾಗಿರುವುದು.

## ಒನೆಯ ವರ್ಷದ ಕೊನೆ

ಈ ಸಂಚಿಕೆಯೊಂದಿಗೆ ಜಯಂತಿಯು ಒನೆಯ ವರ್ಷ ಕೊನೆಗೊಳ್ಳುವುದು. ಹುಟ್ಟಿದಂದಿನಿಂದಲೂ ತಲೆಯೆತ್ತಿ ನಿಂತ ವಿರೋಧ ಪರಿಸ್ಥಿತಿಯೊಂದಿಗೆ ಹೋರಾಡುತ್ತಲೆ ಜಯಂತಿ ಮುಂದೆ ಹೆಜ್ಜೆಯಿಡಬೇಕಾಗಿದೆ. ಅದುದರಿಂದ ಅದರ ಪರಿಪುಷ್ಟವಾದ ಬೆಳವಣಿಗೆಗೆ ಅವಕಾಶವೆ ಇಲ್ಲದಂತಾಗಿರುವುದು. ಮೊದಲನೆಯ ವಯಾತು ಎಂದರೆ ತಿಂಗಳಿಂಗಳೂ, ಬೇಡಿಕೆಯಿದ್ದಷ್ಟೂ ಪ್ರತಿಗಳನ್ನು ಪೂರಯಿಸಲು ನಮಗೆ ಕಾಗದದ ಅನುಕೂಲತೆಯಿಲ್ಲ. ಹೆಚ್ಚು ಪುಟಗಳನ್ನು ಕೊಡಲಿಕ್ಕಂತೂ ಸಾಧ್ಯವೇ ಇಲ್ಲ. ಅದುದರಿಂದಲೆ ಮೊದಲಿನಂತೆ ಮೈ-ಕೈ ತುಂಬಿದ ಸಂಚಿಕೆಗಳನ್ನು ನಿರೀಕ್ಷಿಸುವವರು, ಇಂದಿನ ಬಡಕಲು ಮೈಯ ಸಂಚಿಕೆಗಳನ್ನು ಕಂಡು ಅತೃಪ್ತರಾಗುತ್ತಿರಬಹುದು. ಅನುಕೂಲ ಪರಿಸ್ಥಿತಿ ಬರುವ ವರೆಗೆ ಕಾಯಬೇಕೆಂಬ ಬಿನ್ನಹ ಮಾಡಿಕೊಳ್ಳುವುದಲ್ಲದೆ ನಾವು ಇನ್ನೇನನ್ನೂ ಮಾಡುವಂತಿಲ್ಲ. ಸದ್ಯದ ಕಾಗದದ ಸಂಗ್ರಹದ ಕೊರತೆಯ ಮೂಲಕ, ಹಿಂದುಸ್ತಾನ್ ಸರಕಾರವು ಈಗ ನಮಗೆ ದೊರೆಯುತ್ತಿದ್ದ ಕಾಗದದಲ್ಲಿಯೂ ೧೦೦ಕ್ಕೆ ೨೫ ರಂತೆ ಕಡಿತವಾಡಿದೆ. ಕಡಿತ ಮಾಡಿದ ಕಾಗದದ ಬದಲು ಬೇರೆ ಕಾಗದ ಬಳಸಿಕೊಳ್ಳಲು ನಮಗೆ ಒಪ್ಪಿಗೆ ದೊರೆತಿದೆಯಾದರೂ, ಈ ಒಪ್ಪಿಗೆಗೂ ಯಾವಾಗ ತಡೆಬಂದೀತೆಂಬುದರ ನಿಯಮವಿಲ್ಲ. ಸಿದ್ಧ ವಸ್ತುಗಳ ಬಗೆಗೆ ಪರೀಕ್ಷಾರ್ಥ ಮುಂಬಯಿ ಕಡೆಗೆ ನೋಡುವ ಪ್ರಸಂಗವಿದ್ದ ಪರಿಸ್ಥಿತಿಯ ರಾಷ್ಟ್ರಗಳ ಹಣೆಬರೆಹವೇ ಹೀಗೆ.

*

'ಕಾಗದವು ಈಗ ನಿಮಗೆ ಗೊತ್ತುಮಾಡಿದ ಬೆಲೆಗೆ ದೊರೆಯುತ್ತಿದ್ದರೂ ಜಯಂತಿಯ ಬೆಲೆಯನ್ನೇಕೆ ಕಡಿಮೆ ಮಾಡಿಲ್ಲ?' ಎಂದು ಕೆಲವು ಜನ ವ್ಯವಹಾರಿ ವಾಚಕರು ಕೇಳುತ್ತಿರುವುದುಂಟು. ಅವರಿಗೆ ಪರಿಸ್ಥಿತಿಯ ಕಲ್ಪನೆ ಮಾಡಿಕೊಟ್ಟರೆ ಹೀಗೆ ಕೇಳಲಾರರೆಂದು ನಮ್ಮ ಎಣಿಕೆ. ಗೊತ್ತುಮಾಡಿದ ಬೆಲೆಗೆ ನಮಗೆ ಕಾಗದ ದೊರೆತರೂ, ಈ ಗೊತ್ತುಮಾಡಿದ ಬೆಲೆಯು ಮೊದಲು ನಮಗೆ ಸಿಕ್ಕುತ್ತಿದ್ದ ಕಾಗದದ ಬೆಲೆಯ ಮುಮ್ಮಡಿಯಷ್ಟಿರುವುದು. ಸಂಸಾರೋಪಯುಕ್ತ ಪದಾರ್ಥಗಳ ಬೆಲೆ ಹೆಚ್ಚಾದುದರಿಂದ ಕೆಲಸಗಾರರ ಸಂಬಳ ಹೆಚ್ಚಿಸಬೇಕಾಗಿ ಬಂದು, ಮುದ್ರಣಾಲಯದವರು ತಮ್ಮ ದರವನ್ನು ಇಮ್ಮಡಿಗಿಂತ ಹೆಚ್ಚಾಗಿ ಬೆಳೆಸಿದ್ದಾರೆ. ಪಡಿಯಚ್ಚುಗಳ ದರ ಮೊದಲಿನ ದರಕ್ಕೆ ೪ ಪಾಲು ಬೆಳೆದಿದೆ. ಅಲ್ಲದೆ ಒಳ್ಳೆಯ ಲೇಖನಗಳನ್ನು ವಾಚಕರಿಗೆ ಒದಗಿಸಿ ಕೊಡಬೇಕಾದರೆ, ಲೇಖಕರಿಗೆ ಪ್ರತಿಫಲಧನ ಕೊಡುವುದೂ ಇಂದು ಅಗತ್ಯದ ಸಂಗತಿಯಾಗಿದೆ. ಇವೆಲ್ಲದರ ಮೇಲೆ ಕಾರ್ಯಾಲಯದ ವೆಚ್ಚ ನಡೆಯಬೇಕು. ಕಾಗದ ಹೆಚ್ಚು ದೊರೆತು, ಸಂಚಿಕೆಗಳನ್ನು ಹೆಚ್ಚು ಪ್ರಮಾಣದಲ್ಲಿ ಹೊರಡಿಸಲಿಕ್ಕಾದರೆ ಬೆಲೆಯನ್ನು ತಗ್ಗಿಸಲಿಕ್ಕಾದೀತು. ಹಾಗಾಗುವ ವರೆಗೆ ಇಷ್ಟು ಬೆಲೆಯಿರಿಸಿದರೂ, ವ್ಯವಹಾರದಲ್ಲಿ ಸ್ವಲ್ಪ ಹಾನಿಯನ್ನೇ ಸಹಿಸಬೇಕಾಗುವುದೆಂಬುದನ್ನು, ನಮ್ಮ ಲೆಕ್ಕ-ಪತ್ರಗಳಿಂದ ಯಾರೂ ಅರಿತುಕೊಳ್ಳಬಹುದಾಗಿದೆ. ಗೊತ್ತುಮಾಡಿದ ಬೆಲೆಗೆ ಕಾಗದ ದೊರೆಯುದರಿಂದ ಹಾನಿಯ ಪ್ರಮಾಣ ಕಡಿಮೆಯಾಗಿದೆ ಇಷ್ಟೇ.

*

ಉತ್ತರಕರ್ನಾಟಕದಲ್ಲಿ ಪರಿಸ್ಥಿತಿ ಹೀಗಿದ್ದರೂ, ಮೈಸೂರು ಕರ್ನಾಟಕದಲ್ಲಿ ಕಾಗದದ ಅನುಕೂಲತೆ ಚೆನ್ನಾಗಿರುವುದರಿಂದ, ಅಲ್ಲಿ ಹಲವು ಮಾಸಪತ್ರಿಕೆಗಳು ಮೊದಲಿನಂತೆಯೆ ಮೈ-ಕೈ ತುಂಬಿದುವಾಗಿ, ಬಿಡಗಿನ ವೈವಿಧ್ಯದಿಂದ ಹೊರಡುತ್ತಲಿವೆ. ಬೆಲೆಯೂ ತಕ್ಕ ಮಟ್ಟಿಗೆ ಸಾಮಾನ್ಯವಾಗಿರುವುದು. ಆಗಾಗ ದೊಡ್ಡ ದೊಡ್ಡ ವಿಶೇಷ ಸಂಚಿಕೆಗಳನ್ನು ಪ್ರಕಟಿಸಲಿಕ್ಕೂ ಅಲ್ಲಿ ಅವಕಾಶವಿರುವುದು. ಸದ್ಯದ ಪರಿಸ್ಥಿತಿಯಲ್ಲಿ ಜಯಂತಿಗೆ ಇಂತಹ ಪತ್ರಿಕೆಗಳೊಂದಿಗೆ ಪೈಪೋಟಿ ನಡೆಯಿಸಲಿಕ್ಕೆ ಸಾಧ್ಯವೆ ಇಲ್ಲ. ಇದ್ದಷ್ಟನ್ನೆ ರಸಭರಿತವನ್ನಾಗಿ ಮಾಡಿಕೊಡುವ ಹೊಣೆ ನಮ್ಮದು. ಕಡಿಮೆ ಬೆಲೆಯ ದೊಡ್ಡ ಗಾತ್ರದ ಪತ್ರಿಕೆಗಳನ್ನೇ ಅಪೇಕ್ಷಿಸುವ ವ್ಯವಹಾರಿ ವಾಚಕವರ್ಗ ಜಯಂತಿಯನ್ನು ನಿರಾಕರಿಸಿದರೆ, ನಷ್ಟವನ್ನು ಇನ್ನಷ್ಟು ಸಹಿಸಿ, ಒಳ್ಳೆಯ ಕಾಲಕ್ಕಾಗಿ ಕಾಯುವುದಲ್ಲದೆ ಬೇರೆ ಏನನ್ನೂ ನಾವು ಮಾಡುವಂತಿಲ್ಲ.

*

ಸ್ಥಳಸಂಕೋಚದ ಮೂಲಕ, ನಮ್ಮ ಹಲವು ಜನ ಲೇಖಕರನ್ನು ಆಗಾಗ ಬೇಸರುಗೊಳಿಸುವ—ನಿರಾಶೆಗೊಳಿಸುವ—ಸಂದರ್ಭಗಳು ಹೆಚ್ಚಾಗಿ ಬರುತ್ತಲಿವೆ. ತರುಣ ಲೇಖಕರಂತೂ ಜಯಂತಿ ತಮ್ಮನ್ನು ಪ್ರೋತ್ಸಾಹಿಸುವುದಿಲ್ಲವೆಂದು ರೇಗಿಕೊಳ್ಳುತ್ತಾರೆ. ಜಯಂತಿ ಜನ್ಮ ತಳೆದ ಮೇಲೆ, ಅದು ಕನ್ನಡಕ್ಕೆ ಹೊಸ ಲೇಖಕರನ್ನೆಷ್ಟು ಜನರನ್ನು ಒದವಿಸಿಕೊಟ್ಟಿದೆಯೆಂಬುದರ ಕಲ್ಪನೆಯಿರುವವರು ಹೀಗೆ ರೇಗಿಕೊಳ್ಳಲಾರರೆಂದು ನಮ್ಮ ನಂಬುಗೆ. ಅನೇಕ ಹಿರಿಯ ಲೇಖಕರೂ, ತಮ್ಮ ಲೇಖನಕ್ಕೆ ಜಯಂತಿಯಲ್ಲಿ ಬೇಗನೆ ಅವಕಾಶ ದೊರೆಯದುದಕ್ಕೆ ಇರುವ ನಿಜವಾದ ಕಾರಣವನ್ನು ಮನವರಿಕೆ ಮಾಡಿಕೊಂಡು, ನಮ್ಮನ್ನು ಕ್ಷಮಿಸಬೇಕೆಂದು ಬಿನ್ನಹ.

*

ಜಯಂತಿಗೆ ಪ್ರತಿಯೊಂದು ದೊಡ್ಡ ದೊಡ್ಡ ಊರುಗಳಲ್ಲಿಯೂ ಏಜನ್ಸಿಗಳಿಲ್ಲ; ಮಾಡಬೇಕೆಂದರೂ ಸದ್ಯ ಸಾಧ್ಯವಿಲ್ಲ. ಈಗ ಇಪ್ಪ ಕೆಲವು ಪುರ-ಪಟ್ಟಣಗಳಲ್ಲಿರುವ ನಮ್ಮ ಏಜಂಟರು ತುಂಬ ವಿಶ್ವಾಸದಿಂದ ವ್ಯವಹಾರ ನಡೆಯಿಸಿ ಜಯಂತಿಗೆ ಪರ್ಯಾಯದಿಂದ ನೆರವನ್ನು ನೀಡಿದ್ದಾರೆ; ಅವರಿಗೆಲ್ಲ ನಮ್ಮ ವಿಶ್ವಾಸದ ವಂದನೆಗಳು. ಹೆಚ್ಚಿನದೆಂದರೆ ಚಿಕ್ಕ ಊರಾದರೂ ಗುಳೇದ ಗುಡ್ಡದಲ್ಲಿ ನಮ್ಮ ಏಜಂಟರಾಗಿರುವ ಶ್ರೀ. ಆರ್. ಎಸ್. ಪರ್ವತೀಕರರು ಎಲ್ಲರಿಗಿಂತ ಹೆಚ್ಚಾಗಿ ಪ್ರತಿಗಳನ್ನು ತರಿಸಿಕೊಂಡು, ಅಚ್ಚುಕಟ್ಟಾಗಿ ವ್ಯವಹಾರ ನಡೆಯಿಸಿದುದು. ಒಂದು ತಿಂಗಳಲ್ಲಿಯೂ ಇವರ ಹಣ ಸಮಯಕ್ಕೆ ಸರಿಯಾಗಿ ಬಾರದೆ ನಿಂತಿಲ್ಲ; ಹಣಕ್ಕಾಗಿ ಒಂದು ಸಲವೂ ಪತ್ರ ಬರೆಯುವ ಸಂದರ್ಭ ನಮಗೆ ಬಂದಿಲ್ಲ. ನಮ್ಮ ಏಜಂಟರೆಲ್ಲರೂ ಈ ಬಗೆಯ ಅಚ್ಚುಕಟ್ಟಿನಿಂದ ನಡೆದರೆ ನಮ್ಮ ಅಂಚೆಯ ವೆಚ್ಚವೂ,

(೪೬ನೆಯ ಪುಟ ನೋಡಿರಿ)

# ಮಂಗನ ಮರ್ಮವಾದ್ಧತನ

## ಮಂತ್ರಿಗಳ ವಿಮಾನದ ಬೇಟೆ

ಸರ್. ಸ್ಟಾ. ಕ್ರಿಪ್ಸರು ಕಾಶ್ಮೀರಕ್ಕೇ ಹೋದ ಮೇಲೆ ವಿಮಾನ ಹಿಡಿಯಲಿಕ್ಕೆ ಹೋಗಿದ್ದರೆಂಬ ಸುದ್ದಿಯನ್ನು ಕೇಳಿ, ನಮ್ಮ ವಾಚಕರಲ್ಲಿ ಹಲವರು ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಮುಂಗರಾಯನಿಗೆ ಇದರಿಂದ ಆಶ್ಚರ್ಯವೇನೂ ಆಗಿಲ್ಲ. ಬ್ರಿಟಿಷ್ ಮಂತ್ರಿತ್ರಯರು ಭಾರತಕ್ಕೆ ಬಂದುದೇ ವಿಮಾನ ಹಿಡಿಯಲಿಕ್ಕೆಂದು. ದೊಡ್ಡ ದೊಡ್ಡ ವಿಮಾನಗಳನ್ನು ಹಿಡಿದು ಬುಟ್ಟಿಗೆ ಹಾಕಬೇಕಾಗಿರುವುದರಿಂದ, ಈ ಸಲ ಅವರು ತಂದ ಬಲೆಗಳೂ ಗಾಳಗಳೂ ಬಲವುಳ್ಳವುಗಳಾಗಿವೆ. ಅಮಿಷವೂ ವಿಮಾನಗಳ ಘ್ರಾಣೇಂದ್ರಿಯವನ್ನು ಸೆಳೆಯುವ ಕಂಪಿನಿಂದ ಕೂಡಿದೆ. ದಿಲ್ಲಿಯಲ್ಲಿ ಕುಳಿತು ಬಲೆಯನ್ನು ಬೀಸಿದರು, ಗಾಳಗಳನ್ನು ಎಗೆದರು, ಅಮಿಷಗಳನ್ನು ಚಾಚಿದರು. ಆದರೆ ಇದುವರೆಗಿನ ಬೇಟೆಗಾರನ ನೆಲೆಯನ್ನರಿತ ಭಾರತೀಯ ವಿಮಾನಗಳು, ಅವರ ಬಲೆ-ಗಾಳಗಳ ಸಮೀಪಕ್ಕೆ ಬಂದರೂ ಅಮಿಷವನ್ನು ಕಚ್ಚಲೊಲ್ಲವಾಗಿವೆ. ಆದುದರಿಂದಲೆ ಬೇಸತ್ತು ಈಸ್ಟರ್ ಹಬ್ಬದ ನೆಪದಿಂದ ಈ ಬಲೆಗಾರರು ಕಾಶ್ಮೀರಕ್ಕೆ ಹೋಗಿರುವರು. ಯುದ್ಧವಾಡಿ ಅಡಿ ಬೇಸತ್ತ ಸೇನಾಪತಿ, ಯುದ್ಧದ ಆಟವಾದ ಚದುರಂಗವನ್ನಾಡಿ, ಬೇಸರು ಕಳೆದುಕೊಳ್ಳತ್ತಲೆ ಯುದ್ಧಬುದ್ಧಿಯನ್ನು ಬೆಳೆಯಿಸಿಕೊಳ್ಳುವನಂತೆ; ಹಾಗೆಯೆ ಮಂತ್ರಿತ್ರಯರಲ್ಲಿ ಮುಂದಾಳಾಗಿರುವ ಕ್ರಿಪ್ಸರು ವಿಮಾನ ಹಿಡಿಯುವ ಆಟವಾಡುತ್ತ, ಭಾರತೀಯ ಮುರೀಣವಿಮಾನಗಳನ್ನು ಹಿಡಿದು ಬುಟ್ಟಿಗೆ ಹಾಕುವ ಬುದ್ಧಿಕೌಶಲವನ್ನು ಬಲಿಸುತ್ತಿರಬಹುದು. ಕಾಶ್ಮೀರದ ಈ ವಿಮಾನವ ಬೇಟೆಯ ಅನುಭವದಿಂದ ಹೊಸ ಕೌಶಲ ಪಡೆದು ಬರುತ್ತಿರುವ ಕ್ರಿಪ್ಸರ ಬಲೆ-ಗಾಳಗಳಿಗೆ, ನಮ್ಮ ಯಾವ ಯಾವ ಹಿರಿಯ ವಿಮಾನಗಳು ಸಿಗುವವೊ ಎಂದು ಮುಂಗರಾಯ ಎಗೆಕೆ ಹಾಕುತ್ತಲಿದ್ದಾನೆ.

* * *

## ಕೃತ್ರಿಮ ಅಶ್ವತ್ಥಾಮರ ಹಾವಳಿ

ಹಾಲು ಬೇಡಿ ಅತ್ತ ಎಳೆಯ ಅಶ್ವತ್ಥಾಮನಿಗೆ ತಂದೆ ದ್ರೋಣಾಚಾರ್ಯರು ಜೋಳದ ಹಿಟ್ಟಿನ್ನು ನೀರಿನಲ್ಲಿ ಕದಡಿ, ಬೆಳ್ಳಗೆ ಮಾಡಿ, ಹಾಲೆಂದು ಕೊಟ್ಟರಂತೆ; ಆ ಕಲಗಚ್ಚನ್ನೆ ಕುಡಿದು ಅಶ್ವತ್ಥಾಮ ಹಾಲುಕುಡಿದೆನೆಂದು ಹಿಗ್ಗಿನಿಂದ ಕುಣಿದಾಡಿದನಂತೆ. ಮಹಾಭಾರತದಲ್ಲಿ ಬರುವ ಈ ಸುಪ್ರಸಿದ್ಧ ಕತೆಯನ್ನು ಅನೇಕರು ಕೇಳಿರಬಹುದು. ಅಂತಹ ಕೃತ್ರಿಮ ಹಾಲನ್ನು ಕುಡಿದೂ ಅಶ್ವತ್ಥಾಮರುಪ್ರಾಂಶ ಸಂಭೂತನಾದ; ವೀರವರನೆನಿಸಿದ; ಚಿರಂಜೀವಿಯಾಗಿ ಮೆರೆದ. ಇನ್ನು ಮೇಲೆ ನನ್ನ ನಾಡಿನಲ್ಲಿ ಅಶ್ವತ್ಥಾಮನಂತಹ ವೀರವರರೂ ಚಿರಂಜೀವಿಗಳೂ ಹೆಚ್ಚುವರೆಂದು ಮುಂಗರಾಯನಿಗೆ ತುಂಬ ವಿಶ್ವಾಸ ಹುಟ್ಟಿದೆ. ಏಕೆಂದರೆ ನಮ್ಮಲ್ಲಿಯ ಹಲವು ಪುರ-ಪಟ್ಟಣಗಳಲ್ಲಿಯ ಬಾಲಕರಿಗೆ ತಲೆಗೆ ಕಾಲುಸೇರಿನಂತೆ ಕೃತ್ರಿಮಗಾಲು ದಿನದಿನವೂ ಸಿಕ್ಕುತ್ತಲಿದೆ. ಬರೀ ಜೋಳದ ಕದಡನ್ನೆ ಹಾಲೆಂದು ಕುಡಿದ ಅಶ್ವತ್ಥಾಮ ಚಿರಂಜೀವಿಯಾದಮೇಲೆ, ವಿಜ್ಞಾನ ಸಿದ್ಧರಿಂದ ನಿರ್ಮಿತನಾದ ಇಂದಿನ ಈ ಕೃತ್ರಿಮ ಹಾಲನ್ನು ಕುಡಿಯುವ ಮಕ್ಕಳು, ಅವನನ್ನು ಎಷ್ಟು ಮಂದಿಯಿಂದ ಮಿಗಿಸಬಲ್ಲರೆಂಬುದನ್ನು ವೈಜ್ಞಾನಿಕ ರೀತಿಯಿಂದ ಲೆಕ್ಕಹಾಕಿಯೆ ನೋಡಬೇಕು. ಆದರೆ ೧೦೦ಕ್ಕೆ ೪೯ರಂತೆ ಹುಟ್ಟುವ ಮಕ್ಕಳು ಸಾಯುತ್ತಿದ್ದರೂ ಭಾರತದ ಜನಸಂಖ್ಯೆ ೪೦ ಕೋಟಿಯನ್ನು ಸಮೀಪಿಸಿದೆಯೆಂದ ಮೇಲೆ, ಈ ಕೃತ್ರಿಮ ಅಶ್ವತ್ಥಾಮರೆಲ್ಲ ಚಿರಂಜೀವಿಗಳಾಗಲು ಇಲ್ಲಿಯ ಜನಸಂಖ್ಯೆ ಎಷ್ಟು ಕೋಟಿಗೆ ಏರೀತೆಂಬುದನ್ನು ಹೇಳುವವರಾರು? ಭಾರತದಲ್ಲಿ ಈ ಬೆಳೆದ ಜನಸಂಖ್ಯೆಗೆ ಇಂಬಿಲಿಕ್ಕೆ ಎಡೆಯೆಲ್ಲಿ, ತಿನ್ನಲಿಕ್ಕೆ ಆಹಾರವೆಲ್ಲಿ? ಈ ಕೃತ್ರಿಮ ಅಶ್ವತ್ಥಾಮರುಗಳೆಲ್ಲ ಅನ್ನವನ್ನಪೇಕ್ಷಿಸದೆ ಚಿರಂಜೀವಿಗಳಾಗದೆ ನಮ್ಮದೇನೂ ಅಡ್ಡಿಯಿಲ್ಲ. ಇಲ್ಲವಾದರೆ ಇವರ ಹಾವಳಿ ತೊಂದರೆಗೆ ಕಾರಣ.

## ಪಾಕಿಸ್ತಾನಕ್ಕೆ ಬ್ಯಾಗಡ

'ತಾವು ಭಾರತೀಯರಲ್ಲ' ಎಂದು ಮಹಮ್ಮದ್-ಅಲ್ಲಿ ಜಿನ್ನಾ ಅವರು ಕಬೂಲಿ ಜವಾಬು ಕೊಟ್ಟಿದ್ದನ್ನು ಕೇಳಿ ಮುಂಗರಾಯನಂತೆ ಆತನ ಸಮಸ್ಥಭಾವದವರೆಲ್ಲ ಆನಂದವಾಗಿರಬಹುದು. ಇದುವರೆಗೆ ಈ ಗುಟ್ಟಿನ ಮಾತನ್ನು ಹೇಳದೆ ಅವರು ಎಷ್ಟು ಜನರನ್ನು ಮಾಯೆಗೆ ಹಾಕಿದರು? ಒಬ್ಬರ ಹಿಂದೊಬ್ಬರು ಭಾರತೀಯ ರಾಷ್ಟ್ರಸಭೆಯ ಅಧ್ಯಕ್ಷರು ಅವರ ಮನೆಗೆ ಹಿಂದೀಯರೆಂಬ ಭಾವನೆಯಿಂದ ಹೋಗಿಬಂದರು. ಮಹಾತ್ಮಾ ಗಾಂಧಿಯವರೂ ಜಿನ್ನಾ ಅವರನ್ನು ಭಾರತೀಯ ಬಂಧುವೆಂಬ ಅಭಿಮಾನದಿಂದಲೆ, ಮಾನಾಪಮಾನಗಳನ್ನು ಲೆಕ್ಕಿಸದೆ, ಅವರ ಮನೆಗೆ ಓಡಾಡಿದರು. ರಾಜಗೋಪಾಲಾಚಾರ್ಯರಂಥ ಪರೇಂಗಿತಜ್ಞ ಪ್ರವೀಣರೂ ಜಿನ್ನಾ ಅವರನ್ನು ಭಾರತೀಯರೆಂಬ ಭಾವನೆಯಿಂದ ಬೆನ್ನು ಕಟ್ಟಿ, ಬಾಯಿ ಬಾಯಿ ಬಿಡುವಂತಾದರು. ಬ್ರಿಟಿಷ್ ಅಳರಸರೂ ಅವರನ್ನು ಭಾರತೀಯರೆಂದು ತಿಳಿದೇ ತಮ್ಮ ರಾಜಕೀಯ ಚದುರಂಗದಾಟದಲ್ಲಿ ಆಗಾಗ ಮುಂದೆ ಸರಿಸಿ, ಭಾರತೀಯರ ಆಟವನ್ನು ತಡೆಗಟ್ಟುತ್ತಿದ್ದರು. ಈಗ ಜಿನ್ನಾ ಅವರು 'ತಾನು ಭಾರತೀಯನಲ್ಲ' ಎಂದು ಹೇಳಿ, ಎಲ್ಲರನ್ನೂ ಮಾಯೆಯಿಂದ ಕಡೆಗೆ ಮಾಡಿದರು. 'ಸರಿ, ಮುಂಬಯಿಯಲ್ಲಿ ಹುಟ್ಟಿ ಬೆಳೆದು ಬಾಳಿದ ಜಿನ್ನಾ ಅವರು ಭಾರತೀಯರಲ್ಲದೆ ಇನ್ನಾವ ದೇಶದವರು?' ಎಂದು ಹಲವರು ಮುಂಗಾಣದವರಾಗಿ ಆತುರದಿಂದ ಕೇಳಬಹುದು. ಮುಂಗರಾಯನಿಗೆ ಎನಿಸುತ್ತದೆ: ಜಿನ್ನಾರವರಿಗೆ ತಮ್ಮವೆಂದು ಹೇಳುವಂತಹ ಭೂಮಿ ಈ ಲೋಕದಲ್ಲಿ ಇಲ್ಲವೆಂಬ ಜ್ಞಾನೋದಯವಾಗಿದೆ— ಎಂದು, 'ಪಾಕಿಸ್ತಾನ' ತಮ್ಮ ದೇಶವೆಂದು ಹೇಳಬಹುದಂದೂ ಕೆಲವು ಅಲ್ಪ ವಿಚಾರಿಗಳು ಹೇಳಬಹುದು. ಆದರೆ ಹಿಂದುಸ್ತಾನದಲ್ಲಿ ಪಾಕಿಸ್ತಾನವೆಂಬುದು ಕನಸಿನ ರಾಜ್ಯವೆಂಬುದನ್ನು ಜಿನ್ನಾ ಅವರು ಎಂದೋ ಕಂಡುಕೊಂಡಿದ್ದಾರೆ. ಕರ್ತುಮಕರ್ತುಂ ಅನ್ಯಥಾ ಕರ್ತುಂ ಶಕ್ತಿಸಂಪನ್ನರಾದ ಜಿನ್ನಾ ಅವರು, ವಿಶ್ವಾಮಿತ್ರನ ತ್ರಿಶಂಕುಲೋಕದಂತೆ ಭೂಮಿಬಿಟ್ಟು ಮೇಲೆ ಪಾಕಿಸ್ತಾನ ನಿರ್ಮಿಸುವ ಶಕ್ತಿಯನ್ನೂ ಪಡೆದಿದ್ದಾರೆಂತು. ಹಿಂದುಸ್ತಾನದಲ್ಲಿ ಪಾಕಿಸ್ತಾನ ಸಾಧ್ಯವಾಗದಿದ್ದರೂ ತಮ್ಮ ಅನುಯಾಯಿಗಳಿಗೆ ಬೇರೆ ಪಾಕಿಸ್ತಾನ ನಿರ್ಮಿಸಿಕೊಡುವ ಭರವಸೆ ಇದ್ದುದರಿಂದಲೆ, ಅವರು 'ತಾನು ಭಾರತೀಯನಲ್ಲ' ಎಂದು ಉದ್ಘರಿಸಿಯ ಮೇಲೆ ನಿಂತುಕೊಂಡು ಹೇಳಿದ್ದಾರೆ ಅವರ ಈ ಹೊಸ ಪಾಕಿಸ್ತಾನವನ್ನು ಮುಂಗರಾಯನು ಸಂತೋಷದಿಂದ ಸ್ವಾಗತಿಸುತ್ತಾನೆ.

# ಕಡಲಿನ ಒಡತಿಯರ ಹಾಡು

ಶ್ರೀ. ಎಂ. ಎನ್., ಕಾಂಚನ್, ಮುಂಬಯಿ

★

ನಮ್ಮಯ ವೃತ್ತಿಯೆ ಸ್ವಾತಂತ್ರ್ಯವೊ....
ಎಂದೆಂದೂ ಇರದೆನುಗೆ ಪರತಂತ್ರವೊ..
ಲೇಲಾಲಿ ಲೇಸೋ—ಲೇಲಾಲಿ ಲೋ !

೧

ಬಾರಕ್ಕುಕ ಹೋಗುವ ಕಡಲಿನ ತೀರಕ್ಕೊ....
ನೀರಿನ ಕಡೆಯದು ಬಾಳಿಗೆ ಉಕ್ಕೊ....
ಕರೆಯೇನು ತೆರೆಯೇನು ಅರ್ಭಟವೊ—
ಗಡಿಯೇನು ನಡೆಯೇನು ಹೊಯ್ದಾಟವೊ !

೨

ಸುಳಿಯೇನು ಸುಯಿಲೇನು ಸೆಳೆದಾಟವೊ....
ಕಲೆಯೇನು ನೊರೆಯೇನು ಮೊರೆದಾಟವೊ....
ವಿಾನ್‌ಗಳ ಜೀಟೆಯು ನಮ್ಮಯ ಸೊತ್ತೊ—
ಆದಿಯೊಳೇ ಭೂದೇವಿ ನಮಗಿತ್ತ ಗೊತ್ತೊ !

೩

ನಮ್ಮಯ ಗಂಡರು ಶೂರರು-ಧೀರರೊ...
ನಮಗಿಲ್ಲ ದಾಸ್ಯದ ಕೊರಳಿನ ಉರುಳೊ....
ವರುಣನಲಿ ಹೊಯ್ದಾಡಿ ದಿನನಿತ್ಯ ತರುವರೊ —
ಧೀರತೆಯ ಕಿಡಿಗರೆದು ಕಳಿಗಣ್ಣ ವಿಾನೋ !

೪

ಬಂಗುಡೆ* ಭೂತಾಯಿ ತಳನೀರ ವಿಾನೋ....
ನಂಗು, ಕುಡುಚಿ* ಎಲ್ಲಾ ಕಲ್ನೀರ ವಿಾನೋ....
ಉಪ್ಪಿನ ಸಪ್ಪೆಯ ಹಸಿಹಸಿ ವಿಾನೋ—
ಮುಗಿಲಿನ ನೀಲದ ಬಣ್ಣದ ವಿಾನೋ !

೫

ವಿಾನಿನ ಉರುವಲ ಬುಟ್ಟಿಯ ಹೊತ್ತೊ..
ದಾರಿಯ ನಡೆವೆವು ಜೀವನದ ಬಗೆಗೊ....
ಮುಳ್ಳೇನು ಕಲ್ಲೇನು ಕಂದರವೋ—
ಕಾವೇನು ಬಿಸಿಲೇನು ಬಾಸುಂಡೆಯೋ !

೬

ಯೋಜನದುದ್ದಕೆ ಸಾಗುವೆವೋ....
ಬತ್ತಕೆ ಧಾನ್ಯಕೆ ವಾರುವೆವೋ....
ಬಡತನವಿದ್ದರು ಸಂತೃಪ್ತಿಯೊ—
ಕಡಲಿನ ಬೇಟೆಯ ಒಡೆತನವೊ !

ವಿಾನಗಳ ಬೇರೆ ಬೇರೆ ಜಾತಿಗಳ ಹೆಸರು.

(೭೬ನೆಯ ಪುಟದಿಂದ ಮುಂದೆಸಾಗಿದ್ದು)

ಅಶುರ-ಕಾತರರಗಳೂ ಎಷ್ಟೋ ಕಡಿಮೆಯಾದಾವು. ಹೊರನಾಡಿ
ನಗರಗಳಲ್ಲಿ ನಮ್ಮ ಸಹಕಾರಿಗಳಾಗಿರುವವರೆಂದರೆ ಮುಂಬಯಿಯ
ಶ್ರೀ. ಹೊ. ಸೋಮನಾಥರು; ಪುಣೆಯಲ್ಲಿ ಶ್ರೀ. ಎಸ್. ಎನ್
ರೊಟ್ಟಿಯವರು. ಇವರು ಜಯಂತಿಯ ಕೆಲಸ ಮಾಡುತ್ತಿರುವುದ
ವ್ಯವಹಾರಕ್ಕಾಗಿ ಅಲ್ಲ; ಕನ್ನಡದ ಅಭಿಮಾನಕ್ಕಾಗಿ. ಇವರಂತೆಯೇ—
ಗಡಿನಾಡಿನ ಪಟ್ಟಣವಾದ ಸೊಲ್ಲಾಪುರದಲ್ಲಿ ಶ್ರೀ. ಎಸ್. ಎನ್
ದೇಶಪಾಂಡೆಯವರು ಏಜನ್ಸಿ ನಡೆಯಿಸಿರುವರು. ಇವರೆಲ್ಲರಿಗ
ಮತ್ತೊಮ್ಮೆ ಅಭಿನಂದನೆಗಳನ್ನು ಅರ್ಪಿಸುವೆವು.

* * *

ನಮ್ಮ ಚಂದಾದಾರರಾಗಿ ಇರುವವರೆಂದರೆ ಜಯಂತಿಯ ನಿಜವಾ
ಅಭಿಮಾನಿಗಳೇ ಇರುವರು. ಅವರೆಲ್ಲ ಜಯಂತಿಯ ತುಭಭವಿಷ್ಯ
ಚಿಂತಕರೆ ಹೊರತು ಹೆಚ್ಚು ಪುಟ-ಕಡಿಮೆ ಬೆಲೆ ಬಯಸುವ ಲೆಕ್ಕಾ
ಚಾರದವರಲ್ಲ. ಇಂತಹ ವಿಪರೀತ ಪರಿಸ್ಥಿತಿಯಲ್ಲಿಯೂ ಜಯಂ
ಕಾಲೂರಿ ನಿಂತುದು ಇವರ ಪ್ರೀತಿಯ ಸಹಕಾರದಿಂದ. ಅದರಂತೆ
ತಜ್ಞರಾದ ಲೇಖಕವರ್ಗ ಜಯಂತಿಯ ಪುಟಗಳ ಬೆಲೆಯನ್ನ
ಹೆಚ್ಚಿಸಲು ತನ್ನ ಅಭ್ಯಾಸ, ಅನುಭವ, ಪ್ರತಿಭೆಗಳ ಸಹಕಾ
ನಿತ್ಯದೂ ಜಯಂತಿಯ ಜೀವನಕ್ಕೆ ಕಾರಣವಾಗಿದೆ. ಆದುದರಿಂ
ಚಂದಾದಾರರ— ಲೇಖಕರ— ಉಪಕಾರ ಸ್ಮರಿಸುವುದು ನಮ
ಕರ್ತವ್ಯವಾಗಿದೆ. —ಸಂಪಾದಕ

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

# ರಾಣಿ ಕಲಿಸಿದ ನೀತಿ!

( ಒಂದು ಸಣ್ಣಕತೆ )

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

★

**ಸೂರ್ಯ-ಚಂದ್ರವಂಶದ ಕ್ಷತ್ರಿಯ ರಾಜರು, ಅವರ ಆದರ್ಶಜೀವನ, ಸ್ತ್ರೀಯರ ಪಾತಿವ್ರತ್ಯ, ಅದಕ್ಕಾಗಿ ಸಾವನ್ನು ಕೂಡ ಆನಂದದಿಂದ ಸ್ವಾಗತಿಸುವುದು, ಇವೆಲ್ಲ ಕಲ್ಪನಾಲೋಕದಲ್ಲಿದ್ದ ರಾಯರಿಗೆ ರಾಣಿಯೆ ನಡೆವಳಿ ಎಂತಹ ಆಘಾತವನ್ನುಂಟು ಮಾಡಿದ್ದೀತು?**

★

ಒಂದು ದಿನ, ಡಾ. ರಾಮರಾಯರು ನಮ್ಮ ಕ್ಲಬ್ಬಿಗೆ ತಮ್ಮೊಬ್ಬ ಸ್ನೇಹಿತರನ್ನು ಕರೆದುತಂದರು. ಯುಷ್ಟಪರಿಣಾಮವಾಗಿ ಟೆನಿಸ್ ಜೆಂಡುಗಳು ಸಿಗದ್ದಕ್ಕೆ ನಾವು ಬರಿ ಇಸ್ಪೇಟ್ ಆಟವನ್ನೇ ದಿನವಹಿ ನಡೆಸಿದ್ದೆವು. ಒಂದೊಂದು ದಿನ ಅದು ಕೂಡ ತೀರ ಬೇಸರುಬರುವದು. ಆಗ ಡಾ ರಾಮರಾಯರನ್ನು ಎಳೆತಂದು ಹರಟೆಗೆ ಹಚ್ಚುತ್ತಿದ್ದೆವು. ಅವರು ಒಳ್ಳೆ ರಸಿಕ ಹರಟೆಗಾರರು. ಆದರೆ ವೇಳೆಯ ಅಭಾವದ ಮೂಲಕ ಅವರು ಕ್ಲಬ್ಬಿಗೆ ಬರುವದೇ ಅಪರೂಪವಾಗಿತ್ತು. ಅವರು ಬಂದಾಗ ಮಾತ್ರ ನಾವು ಎಂದೂ ಇಸ್ಪೇಟ್ ಆಟವನ್ನು ಆಡುತ್ತಿರಲಿಲ್ಲ; ಅವರಿಗೂ ಅದು ಸೇರುತ್ತಿರಲಿಲ್ಲ. ಅವರ ಹರಟೆಗೆ ಜಗತ್ತೇ ಕಿವಿಯಾದು. ಅದರಲ್ಲಿ ಪರಿಚಿತ ಸಮೂಹವಿದ್ದರಂತೂ ಅವರ ಹರಟೆಯ ಹುಚ್ಚು ಹೊಳೆಗೆ ಮಹಾಪೂರವೇ ಬರುತ್ತಿತ್ತು. ಒಮ್ಮೊಮ್ಮೆ ಆ ಮಹಾಪ್ರವಾಹದಲ್ಲಿ ಅವರು ಶ್ಲೀಲತೆಯ ಕಟ್ಟು-ನಿಟ್ಟಿಲ್ಲದೆಯೂ ದುಡುಕಿಬಿಡುವರು ಮಡಿವಂತರೆನಿಸಿಕೊಳ್ಳುವ ಕೆಲವು ಶಿಷ್ಟರಿಗೆ ಅದು ಬರಷಣವೆನಿಸುತ್ತಿತ್ತು; ಆದರೆ ನಮ್ಮಂಥ ತರುಣರಿಗೆ ಅವರು ಹರಟಿದ್ದೆಲ್ಲ ಸವಿಯೂಟ!

ಅಂದು ಡಾಕ್ಟರರೊಂದಿಗೆ ಬಂದ ಆ ಗೃಹಸ್ಥರು ನಮಗೆ ಅಪರಿಚಿತರಾಗಿದ್ದ ಮೂಲಕ, ಡಾಕ್ಟರರು ನಮಗೆಲ್ಲ ಅವರ ಪರಿಚಯಮಾಡಿಕೊಟ್ಟರು: "ಇವರು ನನ್ನ ಬಾಲ್ಯಸ್ನೇಹಿತರು; ಇಂದು ಚಿಕ್ಕ ಸಂಸ್ಥಾನದಲ್ಲಿ ಅಧಿಕಾರಿಗಳಾಗಿದ್ದಾರೆ. ಇಸ್ಪೇಟಿ-ನೊಳಗಿನ ನಿರ್ಜೀವ ರಾಜ-ರಾಣಿಯರೊಡನೆ ನೀವು ಆಟವಾಡುವಿರಿ; ಸಜೀವ ರಾಜ-ರಾಣಿಯರೊಡನೆ ಇವರು ಆಟವಾಡುವರು. ಸಂಸ್ಥಾನದ ರಾಜ-ರಾಣಿಯರ ಕತೆಗಳನ್ನು ನೀವು ಕೇಳಿಲ್ಲ. ಇವರು ಕೆಲವು ಸ್ವಂತ ಅನುಭವಗಳನ್ನು ಹೇಳುತ್ತಾರೆ. ಅದರ ಸ್ವಾರಸ್ಯ ಇವರ ಬಾಯಿಯಿಂದಲೆ ಕೇಳಬೇಕು."

ನಮಗೂ ಇಂಥದೇ ಬೇಕಿತ್ತು. ಕೈಯಲ್ಲಿಯ ಇಸ್ಪೇಟಿನ ಎಲೆಗಳನ್ನು ಅಲ್ಲಿಂದಲ್ಲೇ ಒಗೆದು, ಅವರಿಬ್ಬರನ್ನೂ ನಡುವೆ ಕುಳ್ಳಿರಿಸಿ, ನಾವು ಸುತ್ತಲೂ ಕುಳಿತೆವು. ನಾನೆಂದೆ:—

"ರಾಯರೆ, ನೀವು ನಮ್ಮ ಡಾಕ್ಟರರ ಸ್ನೇಹಿತರೆಂದ ಮೇಲೆ ನಮಗೂ ಸ್ನೇಹಿತರೇ ಸರಿ! ನಿಮ್ಮ ಪರಿಚಯವಾದದ್ದು ನಮಗೆಲ್ಲ ಸಂತೋಷ. ನೀವು ಸಂಸ್ಥಾನದಲ್ಲಿ ಬಹುಕಾಲ ಕೆಲಸಮಾಡಿದವರು; ಅದರಲ್ಲಿಯೂ ಅಧಿಕಾರಸ್ಥಾನದಲ್ಲಿ ಇದ್ದವರು. ಎಂದಮೇಲೆ ಅನೇಕ ಸಂಗತಿಗಳು ನಿಮಗೆ ಪ್ರತ್ಯಕ್ಷ ಗೊತ್ತಿರಲು ಸಾಕು. ಬಾಲಸಾದಲ್ಲಿರುವ ನಾವು ಸಂಸ್ಥಾನಗಳ ಬಗ್ಗೆ ಪುಸ್ತಕಗಳಲ್ಲಿ ಇಲ್ಲವೆ ಪತ್ರಿಕೆಗಳಲ್ಲಷ್ಟೇ ಓದುತ್ತೇವೆ. ಅಲ್ಲಿಯ ರಹಸ್ಯಗಳನ್ನ, ಕಾರಸ್ಥಾನಗಳನ್ನ, ಹುಟ್ಟಾಟಗಳನ್ನ ಕೇಳಿದರೆ 'ಈ ಕಾಲದಲ್ಲಿಯೂ ಇಂಥವು ನಡೆಯುವವೇ?' ಎನಿಸುವದು. ಆದರೆ ಜೀವಕಿಗೆ ಬರುವ ಸಂಗತಿಗಳಿಗಿಂತ ಎಷ್ಟೋ ಪಾಲು ಹೆಚ್ಚು ಅಲ್ಲಿ ಪ್ರತ್ಯಕ್ಷ ನಡೆಯುತ್ತಿರಬೇಕು. ನೀವು ಇರುವ ಸಂಸ್ಥಾನದಲ್ಲಿಯೂ, ನೀವೇ ಕಂಡ ಅಥವಾ ಸ್ವತಃ ಅನುಭವಿಸಿದ ಪ್ರಸಂಗಗಳು ಹಲವಾರು ಇರಬಹುದು. ಕೆಲವನ್ನಾದರೂ ನಿಮ್ಮ ಮುಖದಿಂದ ಕೇಳಬೇಕೆಂದು ನಮಗೆ ಆಸೆ. ಹೇಳಬೇಕು ದಯವಿಟ್ಟು!"

ನಮ್ಮೆಲ್ಲರ ಉತ್ಸುಕತೆಯನ್ನು ನೋಡಿ ಡಾಕ್ಟರರ ಸ್ನೇಹಿತರಿಗೂ ಹೇಳುವ ಉತ್ಸಾಹ ಬಂದಿತೇನೋ:

"ಆಗಲಿ. ನಿಮಗೆ ಕೇಳಬೇಕೆಂದು ಪ್ರೀತಿಯಿದ್ದರೆ ಹೇಳುತ್ತೇನೆ; ಆದರೆ ರಾಮರಾಯರ ಹಾಗೆ ಸ್ವಾರಸ್ಯವಾಗಿ ಹೇಳಲಿಕ್ಕೆ ನನಗೆ ಬರುವದಿಲ್ಲೆನ್ನಿಪಾ. ಆದರೆ ಸಂಸ್ಥಾನದಲ್ಲಿ ನಡೆಯುವ ಸಂಗತಿಗಳೇ ಆದ್ಭುತರಮ್ಯವಾಗಿರುವದರಿಂದ, ಅವನ್ನು ನಾನು ಹ್ಯಾಗೆ ಹೇಳಿದರೂ ನಿಮಗೆ ಸ್ವಾರಸ್ಯವೆನಿಸಬಹುದು. ನಿಮ್ಮ ಕೇಳುವ ಕುತೂಹಲ ನೋಡಿದರೆ ನಾನು ಹೇಳುವದು ದೊಡ್ಡ-ಮಾತಲ್ಲ. ಒಂದು ಸ್ವಂತ ಅನುಭವದ ಪ್ರಸಂಗವನ್ನೇ ಇಂದು ನಿಮಗೆ ಹೇಳುತ್ತೇನೆ....

"ನಾನಿರುವ ಸಂಸ್ಥಾನ ಚಿಕ್ಕದು. ಸಂಸ್ಥಾನವೆಂದಮೇಲೆ ಸವಣೂರಂಥ ಸಣ್ಣದೇ ಇರಲಿ, ಹೈದರಾಬಾದಿನಂಥ ಹಿರಿಯದೇ ಇರಲಿ, ಆಡಳಿತದ ಸೂತ್ರವೆಲ್ಲ ಅರಸನ ಕೈಯಲ್ಲಿ ಎಂಬುದನ್ನು ಹೇಳುವ ಕಾರಣವಿಲ್ಲ. ಅರಸನ ಚಾರಿತ್ರ್ಯದ ಮೇಲೆಯೇ ಪ್ರಜರ ಒಳಿತು-ಕೆಡುಕು ಅವಲಂಬಿಸಿರುವದರಿಂದ, ಸಂಸ್ಥಾನಕ್ಕೆ ಅರಸನೆಂಥವನೋ ಆಡಳಿತವು ಅಂಥದೇ ಎಂಬ ಮಾತು ಈಗಲೂ ಇದೆ. ಅರಸನ ಅನ್ಯಾಯಕ್ಕೆ ತಮ್ಮ ದುರದೃಷ್ಟ ಎನ್ನುವ ಅಜ್ಞಾನ ಈಗ ಪ್ರಜರಲ್ಲಿ ಉಳಿದಿಲ್ಲವಾದರೂ 'ಅರಸನ ವಿರುದ್ಧ ಏಳೇಲೇ ಇಲ್ಲ!' ಎಂಬುದು ಇಂದಿಗೂ ಸತ್ಯ. ಅದರಲ್ಲಿ ಸಿಷ್ಟ್ರಾಯನಾದ ಅರಸು, ಅವಿವೇಕಿಯಾದ ಅರಸು ಇವರ ಜೊತೆ ಕೂಡಿದರಂತೂ ಅಲ್ಲಿಯ ಪ್ರಜರ ಗೋಳು ಯಾವುದಕ್ಕೂ ಜೋಡ. ದುರದೃಷ್ಟಕ್ಕೆ ನಾನಿರುವ ಸಂಸ್ಥಾನದಲ್ಲಿ, ಕೆಲಸಕ್ಕೆ ನಾನು ಸೇರಿದಾಗ ಈ ಪರಿಸ್ಥಿತಿ ಇತ್ತು .....

"ಅಂದರೆ ಆದೀಗ ಹದಿನೈದು ವರ್ಷದ ಹಿಂದಿನ ಮಾತು. ನಾನು ಕಾಲೇಜನ್ನು ಮುಗಿಸಿದ ಮೇಲೆ, ಕೆಲಸಗೇಡಿಯಾಗಿ ಕೂಡಲಾರದೆ, ರಾಷ್ಟ್ರೀಯ ಶಾಲೆಯಲ್ಲಿ ಕೆಲವು ದಿನ ವಿನಾವೇತನ ಪಾಠಹೇಳುತ್ತಿದ್ದೆ; ಆಗ ಪವಿತ್ರ ಜೀವನದ ಅರಿಕೆಯಾಗಿ, ಆದರ್ಶ-ಪೆನಿಸುವ ಕೆಲವು ಸಂಸ್ಕಾರಗಳು ನನ್ನ ಮನಸ್ಸಿನಲ್ಲಿ ಮನೆ-ಮಾಡಿಕೊಂಡುವು. ಆ ಉನ್ನತ ಮನಃಸ್ಥಿತಿಯಲ್ಲಿರುವಾಗಲೆ ನಾನು ಆ ಸಂಸ್ಥಾನದಲ್ಲಿ ಕೆಲಸ ಹಿಡಿದೆ. ಪ್ರಾರಂಭಕ್ಕೆ ಅಲ್ಲಿ ನನಗೆ ದೊರೆತದ್ದು ಶಿಕ್ಷಕನ ಕೆಲಸ. ಆದರೆ ಆ ಕೆಲಸದ ಮೇಲೆ ನಾನು ಎರಡು ತಿಂಗಳು ಕೂಡ ಇರಲಿಲ್ಲ. ಶಾಲೆಯ ಸಮಾರಂಭದ ಒಂದು ಪ್ರಸಂಗದಲ್ಲಿ, ನಾನು ಇಂಗ್ಲೀಷ್ ಜೆನ್ಟಾಗಿ ನಾತನಾಡಿದೆ ಎಂಬ ಕಾರಣದಿಂದ, ಅರಸನಿಗೆ 'ಅರಮನೆಯಲ್ಲಿರಬೇಕಾದ ಮನುಷ್ಯನೀತ' ಎನಿಸಿತು. ಕೂಡಲೆ ನನ್ನನ್ನು ಅರಮನೆಯ ಗುಮಾಸ್ತನೆಂದು ಆ ವಾಳೆಯದಲ್ಲಿ ಸೇರಿಸಲಾಯಿತು. ಅರಸನ ಅರಾಸವೆಂದರೆ ಬೇರೊಂದು ಪ್ರಪಂಚವೇ ಅದು! ಜಲಜರ ಮೊದಲ್ಗೊಂಡು ಖೇಚರದವರೆಗೂ, ಖೂನಿ ಮೊದಲ್ಗೊಂಡು ಮುನಿಯವರೆಗೂ ಎಲ್ಲ ಪ್ರಾಣಿಮಾತ್ರರಿಗೆ ಅಲ್ಲಿ ಆಶ್ರಯವಿತ್ತು; ಆದರೂ ಮನುಷ್ಯ ಪ್ರಾಣಿಗಿಂತ ಇತರ ಪ್ರಾಣಿಗಳೇ ಅರಸ-ಅರಸಿಯರ ಪ್ರೀತಿಗೆ ಹೆಚ್ಚು ಪಾತ್ರವಾಗಿದ್ದುವ! ಅಲ್ಲಿ ನಡೆಯುವದೆಲ್ಲ ಹೊಸತೇ ನನಗೆ. ಅರಮನೆಯಲ್ಲಿ ಜರುಗುವ ಪ್ರತಿಯೊಂದನ್ನೂ ಆಸೆಬುರುಕತನದಿಂದ ನೋಡುತ್ತಿದ್ದೆ."

"ರಾಜ ಬಲು ಸಾದಾ ಮನುಷ್ಯ. ಆಡಳಿತದ ಹೊಣೆಯನ್ನೆಲ್ಲ ದಿವಾಣನಿಗೊಪ್ಪಿಸಿ, ತಾನು ಯಾವಾಗಲೂ ಶಿಕಾರಿ ಇಲ್ಲವೆ ಕುದುರೆಯ ಜೂಜಾಟ ಇವುಗಳಲ್ಲಿ ಕಾಲಕಳೆಯುವ; ಈ ಎರಡು ಹುಚ್ಚು ಹವ್ಯಾಸದ ಮುಂದೆ ಅವನಿಗೆ ಬೇರೆ ಯಾವುದೂ ಬೇಕಾಗಿರಲಿಲ್ಲ. ಒಬ್ಬನೆ ಇದ್ದಾಗ ಎಲ್ಲರಜೊತೆಗೂ ಸಾಮಾನ್ಯನಂತೆ ಇರುವ, ಉಣ್ಣುವ, ತಿನ್ನುವ, ಔದಾರ್ಯವನ್ನು ತೋರುವ, ಮುಗುತೆಯನ್ನು ಹರಿಸುವ. ಆದರೆ ಜೊತೆಗೆ ರಾಣಿ ಇದ್ದಳೊ, ಅವನ ವ್ಯಕ್ತಿತ್ವವೇ ಮಾಯವಾಗುತ್ತಿತ್ತು! ಅವಳೊ ಮಹಾಮಾಯೆ; ಸರ್ವತಂತ್ರ ಸ್ವತಂತ್ರಳು! ಅವಳ ಅಟ್ಟಹಾಸಕ್ಕೆ ಸಂಸ್ಥಾನವೇ ಸಾಲದು. ರಾಜನಿಗೆ ಇಬ್ಬರೇ ಸೇವಕರು; ಅವಳಿಗೆ ಷೋಡಶ ದಾಸಿಯರು! ಇವನ ಬಟ್ಟೆಬರೆಗೆ ಎರಡೇ ಕಪಾಟು; ಅವಳ ವಸ್ತ್ರಪ್ರಾವರಣಗಳಿಗೆ ಇಪ್ಪತ್ತೂ ಸಾಲದಾಗಿದ್ದುವ. ಸೇವಕ ವರ್ಗವೆಲ್ಲ ಅವಳ ಅಂಕಿತದಲ್ಲಿ. ಅವಳ ದೃಷ್ಟಿಸಂಕೇತದಂತೆಯೇ ಅಲ್ಲಿಯ ಕೆಲಸಗಳೆಲ್ಲ ಜರುಗುತ್ತಿದ್ದುವು. ಅರಮನೆಯಲ್ಲಿ "ಅರಸನ ಆಜ್ಞೆ ಆಜ್ಞೆಯೇ ಅಲ್ಲ" ಎಂಬುದು ಎಲ್ಲರಿಗೂ ಗೊತ್ತಾಗಿತ್ತು. ಅರಸ ಒಬ್ಬ ಸನ್ಮಾನ್ಯ ಅತಿಥಿಯಂತೆ ಇದ್ದು ಬಿಟ್ಟಿದ್ದ. ಒಮ್ಮೊಮ್ಮೆ ಮಾತ್ರ ಅವನ ತಾಳ್ಮೆಯ ಕಟ್ಟೊಡೆದು, ಪತ್ತಿತ್ಯ ಕ್ರೋಧವು ಜ್ವಾಲಾಮುಖಿಯಂತೆ ಸಹಸ್ರಮುಖವಾಗಿ ಸಿಡಿದೇಳುವದು. ಆಗ ಮಾತ್ರ ಅವನೆದುರು ನಿಲ್ಲುವದಕ್ಕೆ ಯಾರಿಗೂ ಧೈರ್ಯವಾಗುತ್ತಿರಲಿಲ್ಲ. ಗುಂಡಿನಿಂದ ರಾಣಿಯನ್ನು ಕೊಲ್ಲಲು ಹೋದದ್ದೂ, ಎರಡು ದಿನ ಕೋಣೆಯಲ್ಲಿ ಅವಳನ್ನು ಉಪವಾಸ ಕೆಡಹಿದ್ದೂ ಉಂಟು. ಆದರೆ ಈ ತರದ ಆತನ ಸಿಟ್ಟು ತೀರ ಅಲ್ಪಾವಧಿಯದು, ಬಹಳ ಕ್ಷಣಿಕವಾದುದು.

ರಾಜನಿಗೆ ಇಬ್ಬರು ಮಕ್ಕಳಿದ್ದರು. ಒಂದು ಗಂಡು, ಒಂದು ಹೆಣ್ಣು. ಕುಮಾರರ ಕಾಲೇಜಿನಲ್ಲಿ ಹುಡುಗ ಕಲಿಯುತ್ತಿದ್ದ. ಮಗಳೊಬ್ಬಳೇ ಇವರ ಹತ್ತಿರ ಇರುತ್ತಿದ್ದಳು. ಆಗ ಹುಡುಗಿಗೆ ವಯಸ್ಸು ಏಳೆಂಟು ವರ್ಷದ್ದಿರಬೇಕು.

ಮೂವರ ವಾಸಕ್ಕೆ ಅರಮನೆಯಲ್ಲಿ ಪ್ರತ್ಯೇಕ ಭಾಗಗಳಿದ್ದುವ. ಮಗಳ ಭಾಗದಲ್ಲಿ ಅವಳು ಮತ್ತು ಅವಳ ಆಂಗ್ಲಶಿಕ್ಷಕಿ ಇರುತ್ತಿದ್ದರು. ಆಕ್ಸಫರ್ಡ್ ಪದವೀಧರಳಾದ ಈ ಶಿಕ್ಷಕಿ, ಅದೇ ಹೊಸತಾಗಿ ಹಿಂದುಸ್ಥಾನಕ್ಕೆ ಬಂದು, ಇಲ್ಲಿ ಕೆಲಸದಲ್ಲಿ ಸೇರಿದ್ದಳು. ಆಸೆಗೆ ಕಬ್ಬಿನ ತೋಟ ಹೇಗೊ ಬ್ರಿಟಿಶರಿಗೆ ಸಂಸ್ಥಾನ ಹಾಗೆ. ಈ ಆಂಗ್ಲ ಶಿಕ್ಷಕಿ ಪ್ರತಿರಾಣಿಯೇ ಆಗಿದ್ದಳು. ರಾಜಕುಮಾರಿಗಿಂತ ಇವಳ ಆಡಂಬರ ಹೆಚ್ಚು! ಇವಳು ರಾಜಕುಮಾರಿಗೆ ಕಲಿಸುವದು ಇಂಗ್ಲೀಷ್ ಭಾಷೆ, ಇಂಗ್ಲಿಷ್ ರೀತಿನೀತಿಗಳು. ನಾನು ಅಲ್ಲಿ ಗುಮಾಸ್ತನಾದ ಮೇಲೆ, ಕುಮಾರಿಗೆ ದೇಶಭಾಷೆಯನ್ನು ಕಲಿಸುವದು ನನ್ನ ವಾಲಿಗೆ ಬಂತು. ದಿನಾಲು ನಾನು ಗೊತ್ತುಪಡಿಸಿದ ವೇಳೆಗೆ ರಾಜಕುಮಾರಿಗೆ ಪಾಠ ಹೇಳಿ ಬರುತ್ತಿದ್ದೆ. ಉಳಿದ ವೇಳೆಯಲ್ಲಿ ಅರಮನೆಯ ಕೆಲಸವನ್ನು ನೋಡುತ್ತಿದ್ದೆ.

"ಈ ಪಾಠಕ್ರಮ ಒಂದುವಾರ ಸುಸೂತ್ರ ನಡೆಯಿತು. ಮುಂದೆ ಆ ಆಂಗ್ಲ ಶಿಕ್ಷಕಿ, ನಮ್ಮ ಪಾಠ ನಡೆದಾಗಲೆಲ್ಲ ತಾನೂ ಬಂದು ಕೂಡತೊಡಗಿದಳು. ಅವಳಿಗೂ ನಮ್ಮ ಭಾಷೆ ಕಲಿಯಬೇಕೆಂಬ ಆಶೆ. ಹೀಗೆ ಇಬ್ಬರ ಪಾಠಗಳೂ ಜೊತೆಯಲ್ಲಿಯೆ ಸಾಗಿದುವು. ಮಿಸ್ ಗಿಲ್ಬಿ—ಎಂದು ಅವಳಿಗೆ ಹೆಸರು.

ಮಿಸ್ ಗಿಲ್ಬಿ ಬಲು ತುಂಟ ಹೆಣ್ಣು. ಅವಳಲ್ಲಿ ಗಾಂಭೀರ್ಯ ಎನ್ನುವುದೇ ಇರಲಿಲ್ಲ. ಇದಿ ದಿನವೆಲ್ಲ ಹಾಡುವದು ಇಲ್ಲವೆ ಕುಣಿಯುವದು, ಯಾರನ್ನಾದರೂ ಕುಚೇಷ್ಟೆಗೀಡುಮಾಡುವದು ಇಲ್ಲವೆ ರೇಗಿಗೆಬ್ಬಿಸುವದು—ಯಾವುದೂ ಇರದಿದ್ದರೆ ಹುಚ್ಚು ಹರಟೆಯಲ್ಲಿ ಹೊತ್ತು ಕಳೆಯುವುದು! ರಾಜಕುಮಾರಿ ಅದೇನು ಶಿಕ್ಷಣಕೊಡುತ್ತಿದ್ದಳೊ, ಭಗವಂತನೇ ಬಲ್ಲ! ಆದರೆ ರಾಣಿ ಇದನ್ನೆಂದೂ ವಿಚಾರಿಸಲಿಲ್ಲ. ಅವಳಿಗೆ ಗಿಲ್ಬಿ ಮಾಡುವದೆಲ್ಲ ಪ್ರಿಯವಾಗಿತ್ತು. ಒಂದೊಂದು ದಿನ ಗಿಲ್ಬಿ ಹಿಂದುಗಳಂತೆ ಸೀರೆಯುಟ್ಟು ಪಾಠಕ್ಕೆ ಬರುವಳು! ಆಗಂತೂ ತೀರ ನನ್ನನ್ನು ಅಂಟಿಕೊಂಡು ಕೂಡುವಳು; ಇಲ್ಲವೆ ತನ್ನ ಗಂಡನೆಂದು ನನ್ನನ್ನು ಜೇಷ್ಟೆಮಾಡುವಳು. ನನ್ನ ಜೊತೆಗೆ ಅವಳ ಇತ್ತೀಚೆಗೆ ತುಂಬ ಸಲುಗೆ ಬೆಳೆಸಿದ್ದಳು.

'ಆಗ ನಿಮ್ಮ ಮದುವೆ ಆಗಿತ್ತೇನ್ರೀ ರಾಯರ?' ಒಬ್ಬರೆ ನಡುವೆ ಕೇಳಿದರು.

"ಇಲ್ಲ, ಆಗ ನಾನು ಬ್ರಹ್ಮಚಾರಿಯೇ ಇದ್ದೆ. ಅಂತೆಯೆ

ಅವಳ ಮಿತಿಮೀರಿದ ಸಲುಗೆ ನನ್ನ ಮತಿಯನ್ನು ತುಸು ಅಸ್ಥಿರಗೊಳಿಸಿತು. ಅವಳ ಸ್ವೇಚ್ಛಾವರ್ತನೆ ಅವರ ಜನಕ್ಕೆ ಒಗ್ಗಬಹುದು; ಆದಕ್ಕೆ ನಮ್ಮೊಡನೆ ಅವರು ಆದೇ ಬಗೆಯಾಗಿ ನಡೆದರೆ ನಮ್ಮ ಮನಸ್ಸಿನ ಮೇಲಾಗುವ ಪರಿಣಾಮ ಅನಿಷ್ಟವಾಗದೆ ಇರಲಾರದು. ಅವಳ ಸಲುಗೆ ನನಗೆ ಮೊದಮೊದಲು ಬಲು ತೊಂದರೆ ಕೊಟ್ಟಿತು. ಮೊದಲೇ ಸಂಸ್ಥಾನ, ಅದರಲ್ಲಿ ಅರಮನೆಯಲ್ಲಿ ಕೆಲಸ, ನಾನೊ ಹೊರನಾಡಿನಿಂದ ಬಂದ ಹೊಸಬ; ಇವೆಲ್ಲವೂ ನನ್ನನ್ನು ಸಾಕಷ್ಟು ಆಂಜಿಸಿದುವು. ಆದರೆ ನನ್ನಲ್ಲಿ ಪಾವಿತ್ರ್ಯದ ಭಾವನೆಯೊಂದಿರದಿದ್ದರೆ, ಇವು ಯಾವನ್ನೂ ಲೆಕ್ಕಿಸದೆ, ನಾನು ಅವಳ ಜೇಷ್ಟೆಗಳಿಗೆ ಮನಸೋತು, ತಪ್ಪುದಾರಿ ಹಿಡಿಯಬಹುದಾಗಿತ್ತು. ದೇವರೇ ನನ್ನನ್ನು ಉಳಿಸಿದ-ಎನ್ನಬೇಕು.

ಹೀಗೆ ಎರಡು ತಿಂಗಳು ಕಳೆದುವು. ಒಂದು ದಿನ ಅರಮನೆಯ ನನ್ನ ಆಫೀಸಿನ ಕೋಣೆಯಲ್ಲಿ ಒಬ್ಬನೇ ಕಾಗದಪತ್ರಗಳನ್ನು ನೋಡುತ್ತ ಕುಳಿತಿದ್ದೆ—ನನ್ನ ಮೇಲಿನ ಅಧಿಕಾರಿಯೂ ರಾಜನ ಜೊತೆಗೆ ದೂರದ ಕಾಡಿಗೆ ಶಿಕಾರಿಗೆ ಹೋಗಿದ್ದ. ಆಯಾಸು ನನ್ನದೇ ಆಗಿತ್ತು. ಕೆಲಸ ಮಾಡಿದರೂ ಬಂತು, ಬಿಟ್ಟರೂ ಬಂತು--ಎಂಬ ಮನಃಸ್ಥಿತಿಯಲ್ಲಿದ್ದೆ. ಆಗ ಮಿಸ್ ಗಿಲ್ಬಿಯ ಒಬ್ಬ ತೊತ್ತು, ಮುದ್ರೆಯೊತ್ತಿದ ಒಂದು ಲಕ್ಕೋಟೆಯನ್ನು ನನ್ನ ಮುಂದಿಟ್ಟಳು. ಆಶ್ಚರ್ಯ-ಕುತೂಹಲ ಎರಡೂ ಎನಿಸಿತು ನನಗೆ. ಉತ್ತರಕ್ಕೆ ಕಾದು ನಿಲ್ಲದೆ ಆ ತೊತ್ತು ಕೂಡಲೆ ಹೊರಟುಹೋದಳು. ಒಳ್ಳೆ ಎಚ್ಚರದಿಂದ ನಾನು ಆ ಲಕ್ಕೋಟೆಯನ್ನೊಡೆದು ಪತ್ರವನ್ನೋದಿದೆ. ಅದರಲ್ಲಿ ಈ ಅರ್ಥದ ಕೆಲವು ಮಾತುಗಳಿದ್ದುವು: 'ಪ್ರೇಮವು ಎಂಥಪರನ್ನೂ ಒಂದುಗೂಡಿಸುತ್ತದೆ; ಹಾಗೆಯೇ ಕಾಮವೂ ಅಲ್ಲವೆ? ನನ್ನ ಆಶೆಯನ್ನು ನೀವು ಗುರುತಿಸಿರಬಹುದು! ಆದು ನಿಮ್ಮಿಂದ ಪೂರ್ಣವಾದರೆ ಎಷ್ಟೊಂದು ಚೆನ್ನು!' ಪತ್ರದ ಕೊನೆಗೆ ಯಾವನೋ ಒಬ್ಬ ಕವಿಯ ಎರಡು ಸಾಲುಗಳನ್ನೂ ಬರೆದಿದ್ದಳು. ಈಗ ಅವು ನನ್ನ ನೆನಪಿನಲ್ಲಿಲ್ಲ. ನಾಲ್ಕಾರು ಸಲ ತಿರುತಿರುಗಿ ಆ ಪತ್ರವನ್ನೋದಿದೆ. ಭ್ರಮೆಗೊಂಡಂತಾಯಿತು ಮನ. ಆಗ ಅನೇಕ ವಿಚಾರಗಳು ಬಂದುವು. ಇದೇನು ನಿಜವಾದ ಪ್ರೇಮವೊ, ಕಾಮದ ಬೇಟೆಯಾಡುವದಕ್ಕಾಗಿ ಒಡ್ಡಿದ ಬಲೆಯೊ ಅಥವಾ ನನ್ನ ನುರುಳುತನವನ್ನು ಪರೀಕ್ಷಿಸುವ ಆಟವೊ—ನನಗೆ ಯಾವುದೂ ತಿಳಿಯದಂತಾಯಿತು. ಹೇಳಿ ಕೇಳಿ ಸಂಸ್ಥಾನ. ಅದರಲ್ಲಿ ಅರಮನೆಯೆಂದರೆ ರಹಸ್ಯದ ತವರ್ಮನೆ. ಅಲ್ಲಿ ವ್ಯವಹರಿಸುವ ಪ್ರತಿವ್ಯಕ್ತಿ ಮೂರ್ತಿದ ಮೂರ್ತಿ! ಹೆಚ್ಚೆಚ್ಚು ವಿಚಾರಮಾಡಿದ ಹಾಗೆಲ್ಲ 'ಅಬ್ಬೊ' ಎನಿಸುವಂತಾಗಿ ಮನ ನಡುಗಿತು. ಆದರೆ ಆ ಪತ್ರಕ್ಕೆ ಉತ್ತರವನ್ನಂತೂ ಕೊಡಲೇಬೇಕಾಗಿತ್ತು. ಆಗ ಹೀಗೊಂದು ವಿಚಾರ ಬಂತು: ತನ್ನ ಉದ್ದೇಶವನ್ನು ಇನ್ನಷ್ಟು ಸ್ಪಷ್ಟ ಪಡಿಸಲು ಅವಳಿಗೆ ಪುನಃ ಬರೆದು ಕೇಳಬೇಕು—ಎಂದು. ಕೂಡಲೆ ಹಾಗೊಂದು ಪತ್ರಬರೆದು, ನಾನೇ ಒಯಿದು ಅವಳ ಮೇಜಿನಮೇಲಿಟ್ಟು, ಅವಳಿಗೆ ತಿಳಿಸದೆ ಹೊರಟುಬಂದೆ. ಮರುದಿನ ಆದಕ್ಕೆ ಇನ್ನೊಂದು ಪತ್ರ ಬಂತು. ತೆರೆದು ಓದಿದೆ; ಪೂರ 'ಬಿಚ್ಚುಮಗ್ಗಿ'ಯಲ್ಲಿಯೆ ವಿಷಯವನ್ನು ತಿಳುಹಿಸಿದ್ದಳು. ಅದನ್ನು ಇಲ್ಲಿ ಹೇಳುವದು ಬೇಡ."

"ಛೆ, ಛೆ, ಒಳ್ಳೆ ಸ್ವಾರಸ್ಯವಾದ ಭಾಗವನ್ನೇ ಮುಚ್ಚಿಡುತ್ತಿದ್ದೀರಲ್ಲ?' ಕುಳಿತವರಲ್ಲಿ ಒಬ್ಬರು ನುಡಿದರು.

"ಅದನ್ನೆಲ್ಲ ಏನು ಹೇಳುವದು ಅಸಹ್ಯ? ಆದರಲ್ಲಿ ಮುಖ್ಯ ಮಾತು— ಇಷ್ಟೇ ಇತ್ತು: 'ನನಗೆ ಸುಖ ಬೇಕಾಗಿದೆ. ರಾತ್ರಿ ಹನ್ನೊಂದು ಗಂಟೆಗೆ ನನ್ನ ಕೋಣೆಯಲ್ಲಿ ನಿಮಗಾಗಿ ಕಾದಿರ್ತೇನೆ. ಧಡುವಿಟ್ಟು ಬರಬೇಕು. ಹಿಂದಿನ ಬಾಗಿಲು ತೆರೆದಿದ್ದೇ ಇರುವುದು'....

"ವಿಚಾರ ಮಾಡಿದಹಾಗೆಲ್ಲ ನನಗೆ ಅವಳ ಬಗ್ಗೆ ಅತೀವ ಸಂತಾಪ, ತಿರಸ್ಕಾರ ಉಂಟಾಯಿತು. 'ಇವಳು ರಾಜಕುಮಾರಿಗೆ ರೀತಿ ಕಲಿಸುವದಕ್ಕಾಗಿ ಇಂಗ್ಲಂಡಿನಿಂದ ಬಂದವಳು; ನಾಲ್ಕು ನೂರು ರೂಪಾಯಿ ಸಂಬಳವಲ್ಲದೆ ಎಲ್ಲ ಸುಖ-ಸೌಕರ್ಯಗಳು ಪುಕ್ಕಟೆ. ಇವಳು ಮಾಡುತ್ತಿರುವದೊ ಇಂಥ ಹೇಸಿ ಉದ್ಯೋಗ! ಇಂಥವಳಿಂದ ರಾಜಕುಮಾರಿಗೆ ಆದೆಂಥ ನೀತಿಪಾಠ ದೊರೆಯಬಹುದು? ಮುಂದೆ ಇನ್ನೊಂದು ರಾಜ್ಯಕ್ಕೆ ಅವಳೂ ರಾಣಿಯಾಗುವಾಕೆ. ಈ ಶಿಕ್ಷಕಿಯ ಮಾದರಿಯನ್ನೇ ಎತ್ತಿದರೆ ಗತಿಯೇನು? ಇಂಥವಳಿಂದ ಶಿಕ್ಷಣಹೊಂದಿದವಳು ಒಳ್ಳೆಯ ರಾಣಿಯೆಂದು ಜೇಗೆ ಹೆಸರು ಪಡೆದಾಳು? ಇವಳು ಮಾಡುವ ಹೇಸಿತನವು ಆ ಎಳೆಯ ಪ್ರಾಯದ ಹುಡುಗಿಯ ಮೇಲೆ ಎಂಥ ಅನಿಷ್ಟ ಪರಿಣಾಮವನ್ನು ಮಾಡಬಹುದು?' ಈ ಬಗೆಯ ಹಲವಾರು ವಿಚಾರಗಳು ಬಂದು, ನನ್ನ ತಲೆ ಕಾಯ್ದುಹೋಯಿತು. 'ಇವಳ ಈ ವ್ಯಭಿಚಾರಿವೃತ್ತಿಯನ್ನು ಬಯಲಿಗೆಳೆದು ಇವಳನ್ನು ಕೆಲಸದಿಂದ ತಳ್ಳಿಸಲೇಬೇಕು' ಎಂದು ನಿಶ್ಚಯಿಸಿದೆ. ಆ ದಿನದ ರಾಜಕುಮಾರಿಯ ಸಾರಕ್ಕೆ ರಜೆ ಬರೆದು, ನನ್ನ ಈ ಆಲೋಚನೆಯನ್ನು ಕಾರ್ಯರೂಪದಲ್ಲಿ ತರುವ ಯೋಜನೆಯಲ್ಲಿ ತೊಡಗಿದೆ. ಅರಸನಂತೂ ಊರಲ್ಲಿರಲಿಲ್ಲ. ಹೇಳಿದರೆ ರಾಣಿಗೇ ಈ ಮಾತನ್ನು ಹೇಳಬೇಕು. ಅವಳಿಗೆ ಬೇಡವಾಯಿತೆಂದರೆ ದಿವಾಣನಂಧವನು ಕೂಡ ದಿಕ್ಕಾಪಾಲಾಗಿ ಓಡುತ್ತಿದ್ದ; ಎಂದ ಮೇಲೆ ಇಂಥವಳ ಪಾಡೇನು? ರಾಣಿಯ ಮನಸ್ಸನ್ನು ತಿರುಗಿಸಿದರೆ ಕ್ಷಣದಲ್ಲಿ ಇವಳು ಓಡುತ್ತಾಳೆ ಎಂದುಕೊಂಡು, 'ಇನ್ನು ರಾಣಿಯ ಮುಂದೆ ಈ ವಿಷಯವನ್ನು ಇಡುವದೆಂತು' ಎಂಬುದರ ಆಲೋಚನೆಯಲ್ಲಿ ತೊಡಗಿದೆ. ಧೂಂಸಿಯ ರಾಣಿ ಲಕ್ಷ್ಮೀಬಾಯಿ, ಇಂದೂರಿನ ರಾಣಿ ಅಹಲ್ಯಾಬಾಯಿ, ಕಿತ್ತೂರಿನ ರಾಣಿ ಚೆನ್ನಮ್ಮ ಇವರ ಆದರ್ಶಜೀವನವನ್ನು ಹೇಳಿ, ರಾಣಿಯಾಗುವವಳಿಗೆ ಎಂಥ ಉಚ್ಚತರಗತಿಯ ಸಂಸ್ಕಾರ, ದಯಾದಾಕ್ಷಿಣ್ಯ, ಧರ್ಮಭಾವನೆ, ದಾನಬುದ್ಧಿ ಮೊದಲಾದ ಗುಣಗಳಿರುವದು ಅವಶ್ಯ ಎಂಬುದನ್ನು ತೋರಿಸಿಕೊಡಬೇಕು; ಇಂಥ ಶಿಕ್ಷಣವನ್ನು ಕೊಡುವ ಗುರುಗಳು ಅಷ್ಟೇ ನೀತಿವಂತರೂ ಸಂಸ್ಕಾರವಂತರೂ

ಆಗಿರದೆ ಹೋದರೆ, ಅದರಿಂದ ಶಿಷ್ಯರಮೇಲೆ ಆಗುವ ದುಷ್ಪರಿಣಾಮಗಳೇನೆಂದು ವಿವರಿಸಿ, ಮಿಸ್ ಗಿಲ್ಬಿಯ ಅನೀತಿಯ ನಡೆವಳಿಕೆಯನ್ನು ಕಿವಿಯ ಮೇಲೆ ಹಾಕಬೇಕು'– ಇಷ್ಟೊಂದು ಸಂಕಲ್ಪ ಮಾಡಿಕೊಂಡು ರಾಣೀವಾಸಕ್ಕೆ ಹೊರಟೆ. ನಾನಾಗಿಯೇ ರಾಣಿಯನ್ನು ಕಾಣಲು ಹೋದದ್ದು ಅದೇ ಮೊದಲ ಸಲ. ಅವಳು ನನ್ನೊಡನೆ ಎಷ್ಟೋ ಸಲುಗೆಯಿಂದ ಮಾತನಾಡುತ್ತಿದ್ದಳಾದರೂ, ಅವಳೊಬ್ಬಳನ್ನೇ ಕಾಣಲು ಅಂಜಿಕೆಯೆನಿಸಿತು!

"ನಾನು ತೊತ್ತಿನ ಜೊತೆಗೆ ಹೇಳಿಕಳುಹಿಸಿ, ಅರ್ಧಗಂಟೆ ಕಾದಮೇಲೆ, ಒಮ್ಮೆ ಒಳಗಿನಿಂದ ಕರೆಬಂತು. ಕೈಯಲ್ಲಿ ಜೀವ ಹಿಡಿದುಕೊಂಡೇ ಹೋದೆ. ಕುತ್ತನಿಯ ತೂಗುಮಂಚದಲ್ಲಿ ರಾಣಿ ಪವಡಿಸಿದ್ದಳು. ಹಿಂದೆ ಇಬ್ಬರು ತೊತ್ತುಗಳು ಬಂಗಾರದ ಹಿಡಿಕೆಯ ಬಾಜಣಿಕೆಯಿಂದ ಅವಳ ಕೂದಲನ್ನು ಬಾಜುತ್ತಿದ್ದರು. ಒಬ್ಬಳು ಬೆಳ್ಳಿಯ ಚಾಮರವನ್ನು ಹಿಡಿದು ಗಾಳಿಬೀಸುತ್ತಿದ್ದಳು. ಕನ್ನಡಿಯನ್ನು ಕೈಯಲ್ಲಿ ಹಿಡಿದು ಇನ್ನೊಬ್ಬಳು ನಿಂತಿದ್ದಳು. ಇಬ್ಬರು ಪ್ರಸಾಧನದ ಸಲಕರಣೆಗಳನ್ನೊದಗಿಸುವುದರಲ್ಲಿ ತೊಡಗಿದ್ದರು. ಒಬ್ಬ ಹರೆಯದ ಗಂಡಾಳು ಮಾತ್ರ ರಾಣಿಯ ಪಾದಪದ್ಮಗಳನ್ನು ಮೃದುಮೃದುವಾಗಿ ನೇವರಿಸುತ್ತಿದ್ದ!

ಸುಮಾರು ಇಪ್ಪತ್ತು ಅಡಿ ಅಂತರದ ಮೇಲೆ ನನ್ನನ್ನು ನಿಲ್ಲಿಸಲಾಯಿತು. ನೊಣಲು ನೆಲಮುಟ್ಟಿ 'ಮುಜುರೆ' ಮಾಡಿದೆ. ಮಾತು ಹೇಗೆ ಪ್ರಾರಂಭಿಸಬೇಕೊ ತಿಳಿಯದೆ, ಸುಮ್ಮನೆ ನಿಂತುಕೊಂಡೆ. ಕತ್ತನ್ನು ಮೇಲಕ್ಕೆತ್ತದೆ ರಾಣಿಯೇ ಕೇಳಿದಳು:

'ಏನು ಕೆಲಸ, ಗುಮಾಸ್ತರೆ?'

'ಒಂದು ವಿಷಯ ತಿಳಿಸಬೇಕೆಂದು ಬಂದಿದ್ದೆ, ಮಹಾರಾಜ' ಎಂದೆ.

'ರಾಣಿಗೆ ಸಹಿತ 'ಮಹಾರಾಜ' ಎಂದು ಸಂಬೋಧಿಸಬಹುದೊ?' ಒಬ್ಬರು ನಡುವೇ ಪ್ರಶ್ನಿಸಿದರು.

ಆಹುದು, ಅಲ್ಲಿಯ ಪದ್ಧತಿ ಅದು. ಅದು ಆಯಿತಲ್ಲ ಆಗ ರಾಣಿ ಎಂದಳು—'ಏನೆಂಬದನ್ನು ಹೇಳಿಬಿಡ್ರಿ. ಹೊತ್ತು ಕಳೆಯುವದು ಬೇಡ.'

"ನಾನು ಹೇಳಬೇಕೆಂದ ಮಾತುಗಳೆಲ್ಲ ಎಲ್ಲಿಯೋ ಉಳಿದು ಬಾಯಿಯಿಂದ ಇಷ್ಟೇ ಹೊರಬಂತು:— 'ಮಿಸ್ ಗಿಲ್ಬಿ ಬಹಳ ದುರ್ನಡತೆಯವಳೆಂದು ನನಗೆ ಕಂಡುಬಂದಿದೆ. ಅವಳು ರಾಜಕನ್ಯೆಗೆ ಶಿಕ್ಷಕಿಯಾಗಿರಲು ಸರ್ವಥಾ ಯೋಗ್ಯಳಾಗಿಲ್ಲ. ತಾವು ಇದನ್ನು ಆಲೋಚಿಸಬೇಕು!'

'ಆಂಥದೇನು ಅವಳು ಮಾಡಿದ್ದು? ನನಗಂತೂ ಅವಳ ನಡತೆ ತುಂಬ ತೃಪ್ತಿಕರವೆನಿಸಿದೆ. ಅವಳಲ್ಲಿ ನೀವು ಕಂಡ ದುರ್ಗುಣವಾವುದು?'

ನಡೆದದ್ದನ್ನು ಹೇಳಲೇಬೇಕಾಯಿತು. ಆಗ ಹೇಳಿದೆ:— 'ಅವಳು ನನ್ನ ಮೇಲೆ ಮನಸ್ಸು ಮಾಡಿ, ನನಗೆ ಎರೆದು ಹೇಸಿ ಪತ್ರಗಳನ್ನು ಬರೆದಿದ್ದಾಳೆ.'

'ಆ ಪತ್ರ ಕೊಡಿ ಇಲ್ಲಿ, ನೋಡೋಣ!' ಕೇಳಿದಳು ರಾಣಿ.

ನನಗೆ ಆ ಪತ್ರಗಳನ್ನು ತೋರಿಸುವ ಇಚ್ಛೆ ಇರಲಿಲ್ಲ. ಆದರೆ ರಾಣಿ ಕೇಳಿದ ಮೇಲೆ ಕೊಡಲೇ ಬೇಕಾಯಿತು. ಕೈಗೆ ತೆಗೆದುಕೊಂಡು ಓದತೊಡಗಿದಳು. ಅವಳ ಮುಖದ ಮೇಲೆ ಯಾವುವಾದರೂ ವಿಕಾರಗಳು ಮೂಡುವವೊ ಎಂದು ನಾನು ನಿರುಕಿಸಿದೆ. ಸಂತಾಪ, ತಿರಸ್ಕಾರ, ಕ್ರೋಧ ಇವುಗಳಾವವೂ ತೋರದೆ ಸ್ಮಿತವೊಂದು ಲಾಸ್ಯವಾಡತೊಡಗಿತು. ಪತ್ರ ಓದಿ ಮುಗಿದ ಮೇಲಂತೂ ಹಣೆಯವರೆಗೆ ಕೈ ಒಯ್ದು, 'ಹಣೆಬರಹ ಸಾವು.. ನಿಮ್ಮಂಥ ಜನ ಇದ್ದರೆ! ಅಲ್ರೀ ಗುಮಾಸ್ತರೆ, 'ಆಪ್ ಸಾತಿ'ನಲ್ಲಿ ರಾಜಿಯಾಗುವದನ್ನು ಅಸ್ಥಾನಕ್ಕೆ ತಕರಾರು ತಂದರೆ ಗತಿಯೇನು? ಇದು ತಕರಾರು ಮಾಡುವ ವಿಷಯವಾದರೂ ಆಹುದೆ? 'ಗುಪ್ ಚುಪ್' ಮುಗಿದು ಹೋಗಬೇಕು. ಪಾಪ! ಅನುಭವ ಕಡಿಮೆ! ಹೋಗಿ, ಹೋಗಿ!" ಎಂದು ಗಹಗಹಿಸಿ ನಗತೊಡಗಿದಳು. ನನ್ನ ಮುಖ ಪೆಚ್ಚುಹಿಡಿದು, ಮೈಯು ಉಷ್ಣತಾನಾನಾ ಮುಂಜಿನ ಪ್ರಮಾಣಕ್ಕೆ ಇಳಿಯಿತು....

"ನಾನು ಅಲ್ಲಿ ನಿಲ್ಲಲೇ ಇಲ್ಲ. ಮುಖ ಇಳಿಸಿಕೊಂಡು ಮನೆಗೆ ಬಂದೆ. ಹೊಟ್ಟೆಯಲ್ಲೆಲ್ಲ ಕಲಮಲ. 'ನಾನು ಹೀಗೆ ನಡೆದುಕೊಂಡುದೂ ತಪ್ಪೆ? ಅಥವಾ ನನ್ನ ವಿಚಾರ ಹಾಸ್ಯಾಸ್ಪದವಾಗಿದ್ದುವೆ? ಅದರಲ್ಲಿ ರಾಣಿಯು ನಕ್ಕು ಗೇಲಿಮಾಡುವಂತಹದೇನಿತ್ತು? ಈ ಮಾತನ್ನು ಹೊಟ್ಟೆಯಲ್ಲಿಟ್ಟುಕೊಳ್ಳುವುದು ನನ್ನಿಂದಾಗಲಿಲ್ಲ. ನಮ್ಮ ನೆರೆಯಲ್ಲಿ ಒಬ್ಬ ಪುರಾಣಿಕರಿದ್ದರು. ಅವರಿಗೆ ಈ ಎಲ್ಲ ವೃತ್ತಾಂತವನ್ನು ಹೇಳಿದೆ. ರಾಣಿಯ ಮಾತಿಗೆ ಅವರೆಂದರು— 'ಸ್ವಾಮಿ, ದ್ವಾಪರಯುಗದಲ್ಲಿ ಕೃಷ್ಣ ಮಾಡಿದ್ದನ್ನೇ ತಿರುವುಮುರುವಾಗಿ ಈಗ ಈಕೆ ಮಾಡುತ್ತಿದ್ದಾಳೆ: ಅವಳು ಯಾಕೆ ಹೀಗೆ ಆಡಿದಳೆಂಬುದಕ್ಕೆ ಈಗಲಾದರೂ ಅರ್ಥವಾಯಿತೊ?' ಎಂದರು. 'ಆಯಿತು, ಮಹಾಸ್ವಾಮಿ, ಈಗ ಆಸಾತು ಸಂಪೂರ್ಣ ಅರ್ಥವಾಯಿತು! 'ಎಂದು ನಾನು ಸಮಾಧಾನ ತಾಳಿದೆ.' ಆಗ ಝಾಂಸಿ ಲಕ್ಷ್ಮೀಬಾಯಿ, ಅಹಲ್ಯಾಬಾಯಿ, ಚೆನ್ನಮ್ಮ ಇವರೆಲ್ಲ ನನ್ನ ಮನದಿಂದ ಓಡಿಹೋಗಿ, ಈ ರಾಣಿಯವರ ವಿಚಾರವೊಂದೇ ಸ್ಥಿಂತುಬಿಟ್ಟಿತು.

"ಸಂಸ್ಥಾನದೊಳಗಿನ ನಮ್ಮ ಮೊದಲ ಅನುಭವ ಅಂದರ ಇದೇ ಏನ್ರೆವಾ" ಎಂದು ಆ ಗೃಹಸ್ಥರು ಕತೆ ಮುಗಿಸಿದರು.

'ಏನು ಸಂಸ್ಥಾನ, ಏನು ರಾಜರು, ಹಿಂದುಸ್ಥಾನದ ದುರ್ದೈವ!' ಎಂಬ ಮಾತುಗಳು ಕೂಡಿದವರ ಮುಖದಿಂದ ಹೊರಬಿದ್ದುವು. ನಾವೆಲ್ಲರೂ ಡಾಕ್ಟರರ ಸ್ನೇಹಿತರಿಗೆ, ಬಂದಾಗಲೆಲ್ಲ ಒಂದೊಂದು ಅನುಭವವನ್ನು ಹೇಳಲು ಕೇಳಿಕೊಂಡು, ಚದುರುದಿದು, ಅಲ್ಲಿಂದ ತೆರಳಿದೆವು.

# ಕೃತ್ರಿಮ ಹಾಲು..

ಶ್ರೀ. ವೀ. ಚ. ಒತ್ತಲಮನೆ,
ಒಕ್ಕಲುತನದ ಕಾಲೇಜು, ಪುಣೆ.

★

**ಕೃತ್ರಿಮ ಹಾಲಿನ ಸಂಶೋಧನೆಯಾಗದಿದ್ದರೆ ಈಗಿನ ದಿನಗಳಲ್ಲಿ ನಿಜವಾದ ಹಾಲಿನ ಬೆಲೆ ಒಂದು ಪೌಂಡಿಗೆ ಹತ್ತು ರೂ. ಗಳಾಗಬಹುದಾಗಿತ್ತು. ಮನೆಯಲ್ಲಿಯೂ ಕೃತ್ರಿಮ ಹಾಲನ್ನು ಸಿದ್ಧಗೊಳಿಸಬಹುದು!**

★

ಇಂದಿನ ಯುಗವನ್ನು ಮಿಂಚಿನ ಇಲ್ಲವೆ ವಿದ್ಯುತ್ತಿನ ಯುಗವೆಂದು ಕೆಲವರೆಂದರೆ 'ಆಟಂ ಬಾಂಬ'ಸ ಯುಗವೆಂದು ಮತ್ತೆ ಕೆಲವರು ಸಾಧಿಸುತ್ತಲಿದ್ದಾರೆ. ನಾನು ಮಾತ್ರ ಎರಡೂ ಅಲ್ಲವೆಂದೆನ್ನುತ್ತೇನೆ. ಇಂದಿನದು ಕೊರತೆಯ ಯುಗವು. ಬಾಳಿಗೆ ಅತ್ಯಗತ್ಯಗಳಾದ ಅನ್ನ-ಬಟ್ಟೆಗಳಿಗೂ ಕೊರತೆ. ಇಂತಹದೊಂದು ಸಾಕಷ್ಟಕ್ಕಿಂತ ಹೆಚ್ಚಿದೆಯೆಂದು ಹೇಳಲು ಬರುವುದಿಲ್ಲ. ಒಬ್ಬರಿಗದು ಸಿಕ್ಕರೆ, ಇನ್ನೊಬ್ಬರಿಗೆ ಸಿಕ್ಕುವುದಿಲ್ಲ..... ಇದೇ ಇಂದಿನ ಜೀವನ ಸತ್ಯ.

ಕೊರತೆಯೆನಿಸಿದ ಪದಾರ್ಥದ ಆವಶ್ಯಕತೆ ಅತಿಯಾಗಿ ಎನಿಸಿದಂತೆ, ಅದನ್ನು ತುಂಬಿಕೊಳ್ಳುವ ಸಾಧನೆಗಳನ್ನು ಅರಸುವುದಕ್ಕೆ ಮೊದಲಾಗುವುದು. ಮಾನವ ಚರಿತ್ರೆಯ ಕಡೆಗೆ ನಾವು ಹೊರಳಿದರೆ, ಮಾನವನು ಎಷ್ಟೋ ಸಾಸಿರ ವರುಷಗಳಿಂದ ಹಾಲನ್ನು ತನ್ನ ದೇಹದ ಪೋಷಣೆಗೆ ಉಪಯೋಗಿಸಿಕೊಳ್ಳುತ್ತಾ ಬಂದಿದ್ದಾನೆ; ಈಗಲೂ ಉಪಯೋಗಿಸಿಕೊಳ್ಳುತ್ತಿದ್ದಾನೆ. ಇಂದಂತೂ ಹಾಲಿನ ಅಗತ್ಯ ಅಷ್ಟಿಷ್ಟಲ್ಲ. ನಿತ್ಯ ಬೆಳಗಿನಲ್ಲಿ ದೇವರ ದರ್ಶನಕ್ಕಾಗಿ ಮಾರ್ಗ ನಿರೀಕ್ಷಿಸುತ್ತ ಕುಳಿತಂತೆ, ಹಾಲು ಮಾರುವವರ ಮಾರ್ಗ ಕಾಯುತ್ತ ಕೂಡಬೇಕು; ಇಲ್ಲವಾದರೆ ಅಟದು ಚಹದೇವಿಯ ದರ್ಶನಕ್ಕೆ ಸಂಚಕಾರ! ನಗರನಾಗರಿಕತೆಯು ಹೆಚ್ಚಿದಂತೆ ಹೊಸ ಹೊಸ ರೂಢಿಗಳು ತಲೆದೋರಿದುವು; ಅವುಗಳಲ್ಲಿ ಕೆಲವಂತೂ ಅತ್ಯುಚ್ಚ ನಾಗರಿಕತೆಯ ಜಿನ್ದಗಳಾಗಿವೆ. ಅವುಗಳಲ್ಲಿ ಚಹವನ್ನು ನಿತ್ಯ ತಾವು ಸೇವಿಸುವುದೂ, ಮನೆಗೆ ಬಂದವರಿಗೆ ಸತ್ಕಾರ ಮಾಡುವುದಕ್ಕೆಂದು ಕೊಡುವುದೂ ರೂಢಿಯಾಗಿದೆ. ಭೂಮಿಯ ಮೇಲೆ ಬದುಕಿದ ಪ್ರತಿಯೊಬ್ಬನಿಗೂ ಈಗ ಒಂದಿಲ್ಲ ಒಂದು ರೀತಿಯಿಂದ ಹಾಲು ಬೇಕೇಬೇಕು. ಹಾಲಿಗೆ ಬೇಡಿಕೆ ಹೆಚ್ಚಾಯಿತು, ಆದರೆ ಉತ್ಪಾದನೆಯಲ್ಲಿ ಬಿತ್ತರವಾಗಲಿಲ್ಲ; ಇನ್ನೂ ಎಷ್ಟೋ ಕಡಿಮೆಯಾಯಿತು. ಅತಿಪೂರ್ವದಿಂದಲೂ ನಮ್ಮಲ್ಲಿ ಹಾಲುಕೊಡುವ ಪ್ರಾಣಿಗಳೆಂದರೆ ಎಮ್ಮೆ, ಆಕಳು, ಕುರಿ, ಆಡು, ಒಂಟೆ ಇತ್ಯಾದಿ. ಕತ್ತೆ ಮೊದಲಾದ ಇನ್ನಿತರ ಪ್ರಾಣಿಗಳು ಹಾಲುಕೊಟ್ಟರೂ ಆ ಹಾಲನ್ನು ಮಾನವನು ಉಪಯೋಗಿಸುವುದಿಲ್ಲ. ಮೊದಲು ಮಾನವನು ದನಗಳನ್ನು ಬೇಟೆಯಾಡಿ ಅವುಗಳ ಮಾಂಸ ತಿನ್ನುತ್ತಿದ್ದನು. ಆತನು ಕ್ರಮೇಣ ನಾಗರಿಕತೆಯ ಹೊಟ್ಟಿಲುಗಳಲ್ಲಿ ನಲಿದು ಮುನ್ನಡೆದಾಗ, ಹಾಲನ್ನು ಉಪಯೋಗಿಸತೊಡಗಿದನು. ಆಗ ಭೂಮಿಯು ಮೇಲೆ ಎಲ್ಲೆಡೆಯಲ್ಲಿಯೂ ಹುಲ್ಲುಗಾವಲು. ಗಳಿಗೆ ಕೊರತೆಯಿರಲಿಲ್ಲ; ಆಗ ದನಕರುಗಳೇ ಮಾನವನ ಆಸ್ತಿಗಳಾಗಿದ್ದುವು. ಆದರೆ ಇಂದಿನ ಮಾತೇ ಬೇರೆ! ಹುಲ್ಲುಗಾವಲುಗಳು ಕ್ರಮೇಣ ಸಾಗು ಮಾಡಲ್ಪಟ್ಟುವು; ಒಕ್ಕಲಿಗರು ಅದರಲ್ಲಿಯೆ ಉತ್ತಿ ಬಿತ್ತಿ ಬೆಳೆದುಕೊಳ್ಳಲನುವಾದರು. ಈಗಂತೂ ನೆಲಗಡಲೆ, ಹತ್ತಿ ಮೊದಲಾದ ರೊಕ್ಕದ ಪಯಿರುಗಳನ್ನು ಬೆಳೆಯುತ್ತಿದ್ದರಿಂದಂತೂ, ಮೇವಿನ ಪ್ರಮಾಣ ತೀರ ಕಡಿಮೆಯಾಯಿತು; ದನಗಳೂ ಕಡಿಮೆಯಾದುವು. ದನಗಳ ಆರಯಿಕೆಯನ್ನೂ—ಜನರು ನಾಗರಿಕರಾದಂತೆ—ಕಡೆಗಣಿಸಿದರು. ಇಂದು ಲೋಕದಲ್ಲಿ ಆಕಳನ್ನೂ ನೋಡದಿದ್ದಂತಹ ಮತ್ತು ಅದರ ಹೆಸರನ್ನು ಕೇಳದಿದ್ದಂತಹ ಹಲವು ಜನರಿದ್ದಾರೆಂದು ನಾನು ಹೇಳಿದರೆ ನೀವು ನಂಬಲಿಕ್ಕಿಲ್ಲ. ಒಟ್ಟಾರೆ ಹಾಲಿನ ಕೊರತೆಯಾಯಿತು; ಎಷ್ಟೋ ಎಳೆಯ ಮಕ್ಕಳು— ಅವರ ಬಿಳಿಗೆಗೆ ಹಾಲು ಅತ್ಯವಶ್ಯ— ಹಾಲಿಲ್ಲದೆ ಗೋಳಿಡಬೇಕಾಯಿತು. ಇದನ್ನು ತಪ್ಪಿಸಲು ಆಳರಸರೂ ಪ್ರಯತ್ನಿಸಿದರು. ಹಾಲಿನ ದರವೇರಿತು; ಎಲ್ಲರೂ ಕೊಳ್ಳುವುದು 'ದುಸ್ತರ'ವಾಯಿತು. ಒಂದು ಸಮಯ, ಹಾಲಿನ ಆವಶ್ಯಕತೆಯನ್ನು ತುಂಬಿಕೊಡಲು ಇಷ್ಟುದಿವಸಗಳವರೆಗೆ ಪ್ರಯತ್ನಗಳು ನಡೆಯದೆ ಇದ್ದಲ್ಲಿ, ಇಂದು ಒಂದು ಪೌಂಡು ಹಾಲಿನ ದರವು ಹತ್ತುರೂಪಾಯಿಗಳಾಗುತ್ತಿತ್ತು. ಈ ಮಾತಿನಲ್ಲಿ ನಿಮಗೆ ನಂಬುಗೆ ಉಂಟಾಗಲಿಕ್ಕಿಲ್ಲ; ಆದರೆ ಇದು ಸಂಪೂರ್ಣ ಸತ್ಯ!

ಆಕಳು-ಎಮ್ಮೆಗಳ ಹಾಲನ್ನು ಪ್ರಯೋಗಶಾಲೆಗಳಲ್ಲಿ ವಿಭಜಿಸಿದರು. ಅದೇ ಪ್ರಮಾಣದಲ್ಲಿ ಪದಾರ್ಥಗಳನ್ನು ಸೇರಿಸಿದ್ದಾದರೆ ಕೃತ್ರಿಮ ಹಾಲು ಸಿದ್ಧವಾಗುವುದೋ ಹೇಗೆ ಎಂಬುದನ್ನು ತಿಳಿಯಲು ಹೆಣಗಿದರು. ಕೊನೆಯಲ್ಲಿ ಯಶಸ್ಸು ದೊರೆಯಿತು; 'ಹಾಲಿನ ಪುಡಿ' ಎಂದು ಇಂದು ಪೇಟೆಯಲ್ಲಿ ಸಿಕ್ಕುವುದೇ ಅದು. ಅದು ನಿಜವಾದ ನೈಸರ್ಗಿಕ ಹಾಲನ್ನು ಕೆಲವು ಗುಣಗಳಲ್ಲಿ ಸರಿಗಟ್ಟಲಿಕ್ಕಿಲ್ಲ. ಮಕ್ಕಳು ಅಂತಹ ಹಾಲನ್ನು ಮೆಚ್ಚಲಿಕ್ಕಿಲ್ಲ. ಆದರೆ ಅದು ಬರ್ಫದ ಕೆನೆ (Ice cream) ಮಾಡಲಿಕ್ಕೂ, ಚಹಾ-ಕಾಫಿಗಳನ್ನು ತಯಾರಿಸಲಿಕ್ಕೂ ತುಂಬ ಅನುಕೂಲವಾಗಿ, ಅದೆಷ್ಟೋ ಹಾಲಿನ ಕೊರತೆ-

ಯನ್ನು ತುಂಬಿಕೊಟ್ಟಿದೆ. ಆದರೂ ಕೊರತೆಯ ತೀಕ್ಷ್ಣತೆ ಕಡಿಮೆಯಾಗಲಿಲ್ಲ. ಮತ್ತೆ ಅನೇಕ ಪ್ರಯತ್ನಗಳು ನಡೆದುವು. ಪೊನ್ನೆ ಪೊನ್ನೆ ಬೆಂಗಳೂರಿನ 'ಭಾರತೀಯ ವಿಜ್ಞಾನ ಸಂಸ್ಥೆ' ಯವರು ಶ್ರಮಪಟ್ಟು ಮತ್ತೊಂದು ರೀತಿಯಾಗಿ ಹಾಲಿನ ನಿರ್ಮಿತಿಯನ್ನು ಕಂಡುಹಿಡಿದಿದ್ದಾರೆ.

'ನಮ್ಮ ದೇಶದಲ್ಲಿ ನಾವು ಇಷ್ಟುದಿವಸ ಸೋಯಾಬೀನನ್ನು— ಒಂದು ತರದ ಅವರೆಯಜಾತಿಯ ದ್ವಿದಲಧಾನ್ಯ(Soyabean)– ಅನೇಕ ಕೈಗಾರಿಕೆಗಳಿಗೆ ಕಚ್ಚಾಮಾಲೆಂದು ಉಪಯೋಗಿಸುತ್ತಿದ್ದೆವು. ಅದರಲ್ಲಿಯೂ ಅದು ಎಣ್ಣೆಯ ಕಾಳೆಂದೇ ಪ್ರಸಿದ್ಧಿಯನ್ನು ಪಡೆದಿತ್ತು. ಸೋಯಾಬೀನ್ ಅತ್ಯುತ್ತಮ ಆಹಾರಪದಾರ್ಥವೂ ಆಹುದು. ಅದರಲ್ಲಿ ನಾಯಟ್ರೋಜನ್‌ಯುಕ್ತ ಪದಾರ್ಥಗಳು (Proteins) ಅದೆಷ್ಟೋ ಇವೆ. ಪಿಷ್ಟಮಯ ಪದಾರ್ಥಗಳಿಗೂ (Carbohydrates) ಕೊರತೆಯಿಲ್ಲ. ಅದೆಷ್ಟೋ ಲವಣಗಳೂ (Salts) ಕೂಡಿವೆ. ಅ. ಬ. ಡ. ಜೀವಸತ್ತ್ವಗಳೂ (A, B, D, Vitamins) ಸೋಯಾಬೀನಿನಲ್ಲಿ ಅಡಕವಾಗಿವೆ. ಒಣಗಿದ ಹಿಟ್ಟಿನಲ್ಲಿ ನೂರಕ್ಕೆ ೪೦ರಂತೆ ನಾಯಟ್ರೋಜನ್ ಪದಾರ್ಥಗಳೂ, ೨೦ರಂತೆ ನೆಣವೂ (Fats) ೩೦ ರಂತೆ ಅಂಗಾರ (Carbon) ಇತ್ಯಾದಿಗಳನ್ನು ಕಾಣುತ್ತೇವೆ. ಹಾಲಿನಲ್ಲಿರತಕ್ಕಂತಹ ಸುಣ್ಣ (Calcium) ದ ಪ್ರಮಾಣದ ಒಂದುನಾಲ್ಕನೆಯ ಪಾಲು ರಂಜಕವೂ (Phosporous) ಒಂದು ಎಂಟನೆಯ ಪಾಲು ಲೋಹವೂ (Iron) ಸೋಯಾಬೀನಿನ ಹಿಟ್ಟಿನಲ್ಲಿರುತ್ತವೆ. ಸೋಯಾಬೀನಿನ ಹಿಟ್ಟನ್ನು ಕೆನೆಯುಳ್ಳ ಹಾಲಿನಲ್ಲಿ ಸೇರಿಸಿ, ಸಮಪ್ರಮಾಣದಲ್ಲಿ ನೀರು ಬೆರಸಿ ನಿತ್ಯ ಸೇವಿಸಿದರೆ, ಎಲುವು ಮತ್ತು ಹೆಪೋಗ್ಲೋಬಿನ್‌ಗಳ ಬೆಳೆಗೆಯು ಆಗುವುದಲ್ಲದೆ, ದೇಹದ ತೂಕವೂ ಹೆಚ್ಚುವುದು. ಇದು ಪೇಟೆಯಲ್ಲಿಯ ಹಾಲನ್ನು ದರದಲ್ಲಿ ಸ್ಪರ್ಧಿಸುವುದು.

**ತಯಾರಿಸುವ ವಿಧಾನ:**— ಒಂದು ಇರುಳು ಸೋಯಾಬೀನಿನ ಬೀಜಗಳನ್ನು ನೀರಿನಲ್ಲಿ ನೆನೆಹಾಕಬೇಕು. ಅನಂತರ ಅವುಗಳನ್ನು ಒಂದೆರಡು ದಿನಗಳತನಕ ಹೊರಗೆ ಹಾಕಿ, ಮೊಳಕೆಯೊಡಿಸುವ ವ್ಯವಸ್ಥೆ ಮಾಡಬೇಕು. ಮೊಳಕೆಯೊಡೆಯುವ ಸ್ಥಿತಿಗೆ ಬಂದಾಗ, ಅವುಗಳಲ್ಲಿಯ ಆಹಾರಪದಾರ್ಥಗಳ ಪ್ರಮಾಣ ಹೆಚ್ಚುವುದು. ಆ ಮೇಲೆ ಉರುಟುಬಟ್ಟಿ ಇಲ್ಲವೆ ಗೋಣಿಚೀಲಗಳಿಗೆ ತಿಕ್ಕಿ ಸಿಪ್ಪೆಸುಲಿಯುವಂತೆ ಮಾಡಬೇಕು. ಮೇಲಿನ ಕೆಂದುಬಣ್ಣದ ಸಿಪ್ಪೆ ಕಳೆದುಹೋಗಿ, ಒಳಗಿನ ಮೃದುವಾದ ಬಿಳಿಯ ಭಾಗವಷ್ಟೇ ಉಳಿದ ಮೇಲೆ, ಅದಕ್ಕೆ ತಿನ್ನುವ ಸೋಡಾ ಇಲ್ಲವೆ ಗ್ಲಿಸರಿನ್ ಸೇರಿಸಿ ಕಾಯಿಸಬೇಕು. ಇದರಿಂದ ಅದರಲ್ಲಿ ಉಳಿದ ಬಣ್ಣವು ಇಲ್ಲದಂತಾಗುವುದಲ್ಲದೆ, ಕಹಿಯೂ ಕಳೆದುಹೋಗುವುದು. ಆಮೇಲೆ ಬೀಜಗಳನ್ನು ತೊಳೆದು, ರುಬ್ಬಿಮಾಡಿ, ಮುದ್ದೆಮಾಡಿ, ನೀರನ್ನು ಬೆರಸಿ, ರಾಡಿಯಂತೆ ಮಾಡಬೇಕು. ಈ ಮಿಶ್ರಣವನ್ನು ಮೂವತ್ತು ನಿಮಿಷಗಳವರೆಗೆ ಕುದಿಸ ಬೇಕು. ಅನಂತರ ಆರಲಿಕ್ಕೆ ಇಟ್ಟರೆ, ಹಾಲು ಮೇಲ್ಭಾಗದಲ್ಲಿ ನಿಲ್ಲುತ್ತದೆ. ಅದನ್ನು ಬಸಿದು ತೆಗೆದು, ಅರಿವೆಯಲ್ಲಿ ಹಾಕಿ ಸೋಸಬೇಕು. ಆಗ ಅದಕ್ಕೆ ಒಂದು ತೆರನಾದ ಮನಸೆಳೆಯುವ ಬಣ್ಣ ಮತ್ತು ವಾಸನೆಗಳೆರಡೂ ಬರುತ್ತವೆ. ಅದಕ್ಕೆ ಸ್ವಲ್ಪ ಆಳಹಾಲು, ಒಂದು ಚಹದ ಚಮಚೆ ಹಾಲಿನ ಪುಡಿ ಇಲ್ಲವೆ ಕೆಲವು ಹನಿ ಹಾಲು ತಯಾರಿಸುವ ರಸ ಸೇರಿಸಿ, ಬಾಲ್ಡ್—ಜವೆಗೋದಿ—ಯೊಂದಿಗೆ ಕೂಡಿಸಿ ಕಾಯ್ಸಿದರೆ, ಕೃತ್ರಿಮಹಾಲು ಸಿದ್ಧವಾಗುವುದು; ಇಂತಹ ಹಾಲು ಕೆಡಲಾರದೆ ಇಪ್ಪತ್ತುನಾಲ್ಕು ಘಂಟೆಗಳ ತನಕ ತಡೆದಿರಬಲ್ಲದು.

ದನಗಳ ಹಾಲಿನಲ್ಲಿಯ ಆಹಾರಪದಾರ್ಥಗಳ ನೂರರಲ್ಲಿ ಎಂಭತ್ತು ಪಾಲು ಈ ಕೃತ್ರಿಮಹಾಲಿನಲ್ಲಿ ಕಂಡುಬರುವುದು. ಆದರೆ ಜೀವಶಾಸ್ತ್ರದ ಮೇರೆಗೆ ಬೆಲೆ ಹೇಳುವುದಾದರೆ, ಈ ಹಾಲಿನಲ್ಲಿಯ ನಾಯಟ್ರೋಜನ್‌ಯುಕ್ತ ಪದಾರ್ಥಗಳು ಸ್ವಲ್ಪ ಹೆಚ್ಚು ಕಡಿಮೆ ಆಕಳಹಾಲಿನಲ್ಲಿದ್ದಷ್ಟೇ ಇರುವುವು. ಸೋಯಾಬೀನಿನಿಂದ ಹಾಲನ್ನು ತಯಾರಿಸುವುದು ಅತಿ ಹಗುರು ಕೆಲಸ.


ಅಲ್ ಇಂಡಿಯಾ ಆಯುರ್ವೇದಿಕ ಕಾನ್‌ಫರನ್ಸ್ ೧೯೪೫ ರಲ್ಲಿ ಬಂಗಾರದ ಮೆಡಲು ಪಡೆದಿರುವ—ಮಲೇರಿಯಾ ರೋಗದ ಮೇಲೆ ಅಟಂ ಬಾಂಬಿನಂತಿರುವ

ಶೇಲಧಾ

ಎಂಟೇಮುಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಇವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ. ಕ್ವಿನಾಯಿನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ ಕ್ಕೆ ೧-೧೫-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಧಾ ಕೆಮಿಕಲ್ ಕಂಪನಿ, ಸಿರಸಿ, ಉ ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪೈರಾವ) ಧಾರವಾಡ.

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ಹಂಚುವವರು:

ಪ್ರೇಂಡ್ಸ್ ಸ್ಟೋರ್, ಧಾರವಾಡ.

ವಾಗಿದೆ. ಸಣ್ಣ ಪ್ರಮಾಣದಿಂದ ಮನೆಯಲ್ಲಿಯೂ ಸಿದ್ಧಪಡಿಸಬಹುದು; ದೊಡ್ಡ ಪ್ರಮಾಣದಿಂದ ಕಾರಖಾನೆಗಳಲ್ಲಿ ತಯಾರಿಸಿ, ಆದನ್ನು ಒಂದು ವ್ಯವಸಾಯವೆಂದೂ ಕೈಕೊಳ್ಳಬಹುದು. ಈ ಹಾಲನ್ನು ನಾವು ನಿತ್ಯ ಉಪಯೋಗಿಸುತ್ತ ನಡೆದರೆ, ಕೆಲವು ದಿನಗಳಲ್ಲಿ ರೂಢಿಯಾಗಿ, ಆಕಳು-ಎಮ್ಮೆಗಳ ಹಾಲನ್ನೇ ಉಪಯೋಗಿಸುತ್ತಿದ್ದಂತೆ ಎನಿಸುವುದು. ಹಾಲಿನ ಪುಡಿಯನ್ನು ನೇರಿಸಿದರೆ ಚಹವು ನೀರಾಗುವಂತೆ ಇದರಿಂದ ಆಗುವುದಿಲ್ಲ. ಮಕ್ಕಳೂ ಅತಿ ಆಸಕ್ತಿಯಿಂದ ಕುಡಿಯುವರು. ಕೆಲವು ಸಲ ಇದರಿಂದ ಸ್ವಲ್ಪ ಹುಳಿಯಾದ ಮೊಸರನ್ನು ಸಹ ತಯಾರಿಸಬಹುದು; ಇದಕ್ಕೆ ರುಚಿ ಅಧಿಕ.

ನಮ್ಮ ನಾಡಿನಲ್ಲಿ ಸೋಯಾಬೀನ್ ಬೆಳೆಯುವುದು ಕಡಿಮೆ; ಅದು ನಮ್ಮಲ್ಲಿಯ ಬೆಳೆಯಲ್ಲ. ಅದಕ್ಕೆಂತಲೇ ಅದಕ್ಕೆ ನಮ್ಮಲ್ಲಿ ಒಂದು ಹೆಸರಿಲ್ಲ. ಅದು ಪರದೇಶದಿಂದ ನಮ್ಮ ದೇಶಕ್ಕೆ ಬಂದಿತು. ಸೊಕ್ಕಿನಿಂದ ಬೆಳೆದ ಗಿಡಗಳು ನಾಲ್ಕರಿಂದ ಆರು ಫೂಟು ಎತ್ತರವಾಗುತ್ತವೆ; ಉಳಿದ ಅವರೆಯ ಜಾತಿಯಂತೆ ಇದು ಬಳ್ಳಿಯಲ್ಲ. ಟೊಂಗೆಗಳೂ ಒಡೆಯುತ್ತವೆ. ಎಲೆಗಳು ಕೂಡ ಅವರೆಯಂತೆಯೇ ಇರುತ್ತವೆ. ಆದರೆ ಆಕಾರದಲ್ಲಿ ಸ್ವಲ್ಪ ಸಣ್ಣವೂ, ಬಣ್ಣದಲ್ಲಿ ಅತಿ ಹಸಿರೂ ಆಗಿರುತ್ತವೆ. ಕಾಯಿಗಳು ಒಂದರಿಂದ ಎರಡು ಇಂಚು ಉದ್ದ ಏದ್ದು, ಅರ್ಧ ಇಂಚು ದಪ್ಪವಿರುತ್ತವೆ; ತುದಿಯಲ್ಲಿ ಮುಳ್ಳಿನಾಕಾರದ ಮುಖವಿದ್ದುದು ತೋರಿಬರುವುದು. ಒಳಗೆ ನಾಲ್ಕಾರು ಅಲಸಂದಿ ಆಕಾರದ ಹಳದಿವರ್ಣದ ಕಾಳುಗಳಿರುತ್ತವೆ. ಕಾಯಿ ಹಸಿಯದಿರುವಾಗ ಪೇಲ್ಚಾಗದಲ್ಲೆಲ್ಲ ಕೂದಲುಗಳಿರುತ್ತವೆ. ಕಾಯಿ ಒಣಗಿತೆಂದರೆ ಎರಡೂ ಬದಿಯಿಂದ ಸೀಳುವುದು. ಬೀಜಗಳು ಉದುರಿ ನೆಲದಮೇಲೆ ಬೀಳುವುವು; ಕೆಲವು ಮಾತ್ರ ಇನ್ನೂ ತೊಗಟೆಗಳಿಗೆ ಅಂಟಿಕೊಂಡಿರುತ್ತವೆ. ಆದುದರಿಂದ ಅವುಗಳನ್ನು ಇನ್ನೂ ಬಾಯ್ಬಿಟ್ಟು ಸೀಳುವ ಮೊದಲೇ ಹರಿದು ಕಲೆಹಾಕಬೇಕು. ಈ ಬೆಳೆಗೆ ಅತಿಫಲವತ್ತಾದ ನೆಲವು ಬೇಕಿಲ್ಲ; ಸರ್ವಸಾಧಾರಣ ಮಡಿಕಟ್ಟು ನೆಲವು ನಡೆಯುತ್ತದೆ; ನೀರು ಕೊಡುವ ಏರ್ಪಾಡು ಇದ್ದರೆ ಇದು ಚಳಿಗಾಲದಲ್ಲಿಯೂ ಬೆಳೆಯುವುದು. ಮುನ್ಸೂನ್ ಕಾಲದಲ್ಲಿ ಹೆಚ್ಚಾಗಿ ಬೆಳೆಯನ್ನು ಕೊಡುತ್ತದೆ. ಮೂರರಿಂದ ನಾಲ್ಕು ತಿಂಗಳುಗಳಲ್ಲಿ ಬೆಳೆಯು ಮುಗಿದುಬಿಡುವುದು. ಒಂದು ಎಕರೆ ನೆಲದಲ್ಲಿ ಅತಿಕಡಿಮೆಯೆಂದರೆ ಸಾವಿರ ಪೌಂಡು ಬೆಳೆಯೂ ಬರುವುದು; ಸೆಜ್ಜೆಯೊಂದಿಗೆ ಇದನ್ನು ಬೆಳಸಿದರೆ ಹೆಚ್ಚಿಗೇನಾದರೂ ಉತ್ಪನ್ನ ದೊರೆಯುವುದೋ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ, ಪುಣೆಯ ಒಕ್ಕಲುತನದ ಕಾಲೇಜಿನಲ್ಲಿ ಈ ವರುಷ ಪ್ರಯೋಗ ನಡೆದಿದೆ. ನಮ್ಮ ನಾಡಿನಲ್ಲಿ ಇದರ ಬೆಳೆ ಎಲ್ಲೆಡೆಯಲ್ಲಿಯೂ ಬರುವುದು. ಆದುದರಿಂದ ಈ ಬೆಳೆಯನ್ನು ಬೆಳೆಯಿಸಿ, ಹಾಲಿನ ಪುಟಾಗ್ರತೆಯ ಕಾಲದಲ್ಲಿ, ಕೃತ್ರಿಮಹಾಲನ್ನು ತಯಾರಿಸಿಕೊಂಡು, ಕೊರತೆಯನ್ನು ತುಂಬಿಕೊಂಡು, 'ಹಾಹಾಕಾರ'ವನ್ನು ಕಡಿಮೆಮಾಡುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.


ನವದತ್ತಿಯಲ್ಲಿ ನಮ್ಮ ಏಜಂಟರು:
ಶ್ರೀ. ಜಿ. ಎಲ್. ಜೊಡ್ಡಮನಿ, ನ್ಯೂಜ್ ಏಜಂಟ್

ಮುಹಾಲಿಂಗಪುರದಲ್ಲಿ ನಮ್ಮ ಏಜಂಟರು:
ಶ್ರೀ. ಶೇಖರಪ್ಪ ಎಂ. ಮುಗಳಖೋಡ
ಮುರ್ಚಂಟ್ ಅಂಡ್ ಕಮಿಶನ್ ಏಜಂಟ್

ದಿ ವಸಂತ ಇನ್ಶುರನ್ಸ್ ಕಂಪನಿ, ಲಿಮಿಟೆಡ್
ದಿವಾನ್ ಬಹಾದ್ದೂರ್ ಹೀರಾಲಾಲ ಕಾಜಿ: ಅಗ್ರಸ್ಥರು
ಸಹಕಾರಿ ಸಂಘದ ಸಭಾಸದರಿಗೆ ತಪ್ಪತಿಯಲ್ಲಿ ೧॥ ಮತ್ತು ೩॥ ಟಕ್ಕೆ ಸೂಟಿ ಕೊಡಲಾಗುವುದು.
ಗ್ರಳಜರಲ್ಲಿ ಪೂರ್ಣ ಮಾಡಲಾದ ವಿಮೆ .... ೪೫,೫೦,೦೦೦
ಈ ವರೆಗಿನ ವಿಮೆ .... ೧,೦೦,೦೦,೦೦೦
} ಕ್ಕೆ ಮಿಕ್ಕಿದೆ.
ನಾವೀನ್ಯ ಪೂರ್ಣ ಮತ್ತು ಲೋಕಪ್ರಿಯ ವಿಮಾ ಯೋಜನೆಗಳು.
ಪ್ರಭು ಎಂಡ್ ಸನ್ಸ್
ಚೀಫ್ ಏಜಂಟ್
೩೬ — ಆಸರ್ ಫಿರೋಜಶಹಾ ಮೇಥಾ ರೋಡ್, ಕೋಟೆ, ಮುಂಬಯಿ ೧
ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ ಧಾರಾಳ ವೇತನದ ಮೇಲೂ, ಯೋಗ್ಯ ಕಮಿಶನ್ನಿನ ಮೇಲೂ, ಆರ್ಗನಾಯಜರರೂ ಏಜಂಟರೂ ಬೇಕಾಗಿದ್ದಾರೆ. ಸುಶಿಕ್ಷಿತ-ಅನುಭವಿಕ ಸದ್ಗೃಹಸ್ಥರು ಮೇಲಿನ ವಿಳಾಸಕ್ಕೆ ಬರೆದುಕೊಳ್ಳುವುದು.

ಜೀವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—
ಗಣೇಶ ರಾಮಚಂದ್ರ ಕರ್ಕ
ಮತ್ತು ಕಂಪನಿ
ಗಿರಗಾಂವ, ಮುಂಬಯಿ.

# ಜನಪದ ಸಾಹಿತ್ಯದಲ್ಲಿಯ ಸೌಂದರ್ಯ

( ಒಂದು ಪತ್ರವ್ಯವಹಾರ )

ಪತ್ರಬರೆದವರು: ಶ್ರೀ. ಶಿವೇಶ್ವರ ದೊಡ್ಡಮನಿ, ಹುಬ್ಬಳ್ಳಿ

★

( ಶ್ರೀ. ಶಿವೇಶ್ವರ ದೊಡ್ಡಮನಿಯವರ ಸಾಹಿತ್ಯಸಂಗ್ರಾಹಕ ಬುದ್ಧಿ ನಮ್ಮ ಹಳ್ಳಿಗಳ ಸುಶಿಕ್ಷಿತ ತರುಣರಲ್ಲಿ ಹಬ್ಬಲಿ ಎಂದು ಹಾರೈಸುವೆವು. ಹಳ್ಳಿಗಳಲ್ಲಿ ಹುದುಗಿಕೊಂಡಿದ್ದ ಎಷ್ಟೋ ಕೃತಿರತ್ನಗಳು ಬೆಳಕಿಗೆ ಬರಬಹುದು. ಸಂ. ಜ. )

★

ಲ್ಯಂಗ್ಲೊ–ಉರ್ದು ಹಾಯ್‌ಸ್ಕೂಲು, ಹುಬ್ಬಳ್ಳಿ,
೧೯–೧೧–೪೫

ಸಂಪಾದಕರು, ' ಜಯಂತ ' ಅವರಿಗೆ ವಂದನೆಗಳು.

ಹಿರಿಯರೇ,

೪೩ನೆಯ ಜುಲಾಯ್ ತಿಂಗಳಿನ ಒಂದು ದಿನ. ಅಂದು ೬ನೆಯ ತಾರೀಖು. ನವಿಲೂರಿನಿಂದ ಹುಬ್ಬಳ್ಳಿಗೆ ಮೋಟಾರಿನಿಂದ ಹೋಗಲು ಪಾಸೊಂದನ್ನು ಕೊಡಿರೆಂದು ಧಾರವಾಡ ಯೂನಿಯನ್ ಯಜಮಾನರನ್ನು ಹಲವಾರು ಸಲ ಕೇಳಿಕೊಂಡಿದ್ದರೂ, ಅವರು ನನಗಿನ್ನೂ ಕೊಟ್ಟಿರಲಿಲ್ಲ. ಕಾರಣ ನಾನು ಎರಡನೆಯ ತಾರೀಖಿನಿಂದ ಸಾಯ್‌ಕಲ್ ಮೇಲಿಂದಲೇ ಹುಬ್ಬಳ್ಳಿಗೆ ಹೋಗಿ ಬರುತ್ತಿದ್ದೆ. ಆ ದಿನವೂ ದಿನದಂತೆ ಸಂಜೆಯ ಹೊತ್ತಿಗೆ ಹುಬ್ಬಳ್ಳಿಯಿಂದ ತಿರುಗಿ ಊರಿಗೆ ಬರುತ್ತಲಿದ್ದೆ. ಅಮರಗೊಳ್ಳವನ್ನು ದಾಟಿ ನಾನು ಬಂದಿರಬಹುದು; ಮುಂದೆ ಚಕ್ಕಡಿಯೊಂದು ಹೋಗುತ್ತಿತ್ತು. ಚಕ್ಕಡಿ ಹೊಡೆಯುವವನು ಏನನ್ನೋ ಹಾಡುತ್ತಲಿದ್ದುದು ಮಾತ್ರ ನನಗೆ ದೂರದಿಂದ ಕೇಳುತ್ತಿತ್ತು. ನಾನು ಆ ಚಕ್ಕಡಿಯ ಪತ್ತಿರಕ್ಕೆ ಹೋದಂತೆಲ್ಲ ಅವನು ಕೆಲವು ಹಾಡುಗಳ ಚುಟಿಕೆಗಳನ್ನು ನೆನಸಿಕೊಂಡು, ಬಂದಷ್ಟನ್ನೇ ಹಾಡಿ, ನೆನಪಾಗದಿರಲು ಮತ್ತೊಂದನ್ನು ನೆನೆದು ಹಾಡುವಂತೆ ಭಾಸವಾಗುತ್ತಿತ್ತು. ದಾರಿಯು ಏರಾಗಿದ್ದುದರಿಂದ, ನಾನೂ ಅವನ ಚಕ್ಕಡಿಗಿಂತ ಮುಂದೆ ಹೋಗಲು ಯತ್ನಿಸಲಿಲ್ಲ. ಅವನ ಹಾಡಿನ ಬಗೆಗ್ಗೆ ನನ್ನ ಕಿವಿಗಳೂ ಕೇಳಲು ಉತ್ಸುಕತೆಪಟ್ಟು ನಿಮಿರಿ ನಿಂತ ಮೂಲಕ, ಹಿಂದುಳಿದು ಸಾಗುವ ಆತೆಯಾಯಿತು. ಕೆಲಹೊತ್ತು ಮೌನ ತಾಳಿದ ಅವನು ಒಂದು ಧಾಟಿಯನ್ನೆಳೆದ. ನಾನು ಹಾಗೆಯೇ ಇಳಿದು ಹೇಗೋ ಬ್ರಹ್ಮಲಿಪಿಯಲ್ಲಿ ಬರೆದುಕೊಂಡೆ. ಹಾಡಿನ ಗುಂಗು, ಸನ್ನಿವೇಶದ ಮಹಿಮೆ ಇವುಗಳಿಗೆ ಸೋತು ಹೋದ ನನಗೆ ಅದನ್ನು ತಿರುಗಿ ಜೆನ್ನಾಗಿ ಬರೆದಿಟ್ಟುಕೊಳ್ಳಲು ಅನುವಾಯಿತು. ನಾನು ಕೇಳಿದ ಒಂದು ಸಾಲು ಕೆಳಗಿನಂತಿದೆ:-

' ಪೈಮುಟ್ಟದಿದ್ದರಽಽ ಮಾತೆಂತಽಽ,
ಕೈಕೊಟ್ಟು ಬಾ ಇಲ್ಲೆ ನಕ್ಕೊಂತ.....'

ಮುಂದೆ ' ನನನನನಾಽಽ ' ಎಂದು ದನಿಯೆಳೆದು ಮತ್ತೆ ಕೆಲಹೊತ್ತು ಸುಮ್ಮನಿದ್ದು, ಮತ್ತೆ ಪ್ರಾರಂಭಿಸಿದ. ಹಾಡಿಗೆ ಒಪ್ಪಿ ಅವನ ದನಿಯ ಮೋಹಕತೆ ಹೆಚ್ಚಿತ್ತು—

(ಹಾಡಿನ ಮಟ್ಟವನ್ನು ಊಹಿಸಲಸಾಧ್ಯ. ನಾನು ಬರೆದುಕೊಂಡುದು ಹೀಗೆ)

' ತುಪ್ಪದ ಮನಿ ಹುಡಿಗಿ-
ಚಪ್ಪರದ ನೆಳ್ಳಾಗ
ತೂರ್ಯಾಳೋ-ಅಳ್ಳ ತೂರ್ಯಾಳೋ.
ತೂರ್ಯಾಳೋ-ಅಳ್ಳ ತೂರ್ಯಾಳೋ—
ನೆಳ್ಳ ತೋರ್ಯಾಳೋ!

ಮುಪ್ಪು ಬರುವೂತನಕಾ
ಅಪ್ಪೀಕೊಂಡಿರುವೀನ್ಯೋ
ಒಪ್ಪೀಗಿ ರಾಯ ಎನುವಾಳೋ—
ಒಪ್ಪೀಗಿರಾಯ ಎನುವಾಳೋ!

ತುಪ್ಪದ ಮನಿ ಹುಡುಗಿ
ಚಪ್ಪರದ ನೆಳ್ಳಾಗ.....'

ಅವನ ನಲ್ಲೆ ತೋರಿದ ' ನೆಳ್ಳಿನ ' ಮಹಿಮೆಯು ಹಾಡು ಇಷ್ಟಕ್ಕೆ ಮುಗಿದಿರಲಿಕ್ಕಿಲ್ಲವೆಂದು ಭಾವಿಸುವಂತಿದೆ. ಇಷ್ಟರಲ್ಲಿ ಅವನದೊಂದು ಎತ್ತು ಕಾಡಿಸಿ ರೇಗಿಸಿದುದರಿಂದ, ಅವನು ಕೆಳಗಿಳಿಯಬೇಕಾದುದರಿಂದ ಮೇಲಿನ ಹಾಡಿಗೆ ತಡೆಯಾಯಿತೇನೋ ತಿಳಿಯದು. ಇಳಿದು ಹತ್ತಿ ಲೇಜಮ್ ಧಾಟಿಯ ಸಾಲುಗಳೆರಡನ್ನು ಹಾಡಿದನೆನ್ನುವುದಕ್ಕಿಂತ–ಒದರಿದನೆನ್ನುವುದು ಒಪ್ಪುವದು:—

" ಓಣ್ಯೋಣಿ ತಿರುಗೂ ಕಡಿಬಿಡಿಕಿ
ಗೆಣಿಯಾನ್ನ ಕೊಂದಾಳೂ ಗಿಡಹಾಕಿ "

[ ಸಾಧಾರಣವಾಗಿ ಊರಿನ ಕುಣಿತದ ಗುಂಪಿನವರು ಊರಿನ ತಪ್ಪುಗಳನ್ನೇ ಎತ್ತಿಹಿಡಿದು ವ್ಯಂಗ್ಯವಾಗಿ ಹಾಡುವ್ರುದುಂಟು. ಇದೇ ಬಗೆಯಾಗಿ ಇದೂ ಒಂದು ಚಕ್ಕಡಿಯವನೂರಿನ ನಡೆದು ಹೋದ ಸಂಗತಿಯಿರಲು ಸಾಕು. ]

ಮೇಲಿನದನ್ನು ಕೇಳಿ ನನಗೂ ಸ್ವಲ್ಪ ನಗೆಬಂದು 'ಮುಗಿದಿರಬಹುದು ಇವನ ಹಾಡಿನ ಭಂಡವಾಳ' ಎಂದು ತಿಳಿದು ಸಾಯ್‌ಕಲ್ ಹತ್ತುವುದರಲ್ಲಿದ್ದೆ ; ಪ್ರಾರಂಭವಾಯಿತು ಅವನ ಮತ್ತೊಂದು 'ಪ್ರಣಯದ ಹಾಡು. ಮತ್ತೆ ಮನಸಲ್ಲಿ ಮೂಡಿತು ಈದಿನ ಸುದಿನವೆಂದು. ಯುವಕ ಹಾಡು ಸಾಗಿಸಿದ—ನಾನು ಬರೆದುಕೊಳ್ಳುತ್ತ ಸಾಗಿದೆ:—

" ಕಂಡ್ಯೇನ್ಯೋ ಗೆಣೆಯ ಕಂಡ್ಯೇನ್ಯೋ-
ಅವಳ ನಗಿಗಣ್ಣ ಬಗಿನಿಂದ—"
ಕಂಡ್ಯೇನ್ಯೊ.....

ಈ ಹಾಡು ಮಾತ್ರ ಜೊತೆಗಿಟ್ಟ ಕಾಗದದಲ್ಲಿರುವಷ್ಟರವರೆಗೂ ಮುಂದುವರಿಯಿತು. ಅಂದಿನವರೆಗೆ ಹೆಣ್ಣುಮಕ್ಕಳ ಹಾಡುಗಳನ್ನೇ ಕೇಳಿದ-ಸಂಗ್ರಹಿಸಿದ-ನನ್ನ ವಿಚಿತ್ರ ಜೀವನದಲ್ಲಿ, ಒಂದು ತೆರನಾದ ಹೊಸ ಕಳೆ ಮೂಡಿತು. ಆ ದಿನದ ಇಷ್ಟೆಲ್ಲ ಕತೆ ನಡೆದು ಹೋದದ್ದು ಅರೆತಾಸಿನಲ್ಲಿ ಮಾತ್ರ. ಈ ಹಾಡಿಗೂ ಮುಗಿತಾಯವಾಗಿದೆಯೊ ಇಲ್ಲವೊ ಅರಿಯೆ. ಅಷನ ಮುಂದೆ ಬಂದ ಸಂಗಡಿಗರ ಚಕ್ಕಡಿಗಳು ರಾಯಾಪುರದ ಕೆರೆಯ ಮಗ್ಗಿಲಿಗೆ ಇರುವ ಜಹದ ಅಂಗಡಿಯ ಬಳಿ ನಿಂತಿದ್ದುದೆಂದು ತೋರುತ್ತದೆ. ಹಾಡುತ್ತಲೇ ಅವನೂ ಚಕ್ಕಡಿಯನ್ನು ತರುಬಿ, ಜಹದ ಅಂಗಡಿಯ ಒಳಹೊಕ್ಕ. ನನ್ನೆದೆ ತಣ್ಣಗಾಯಿತು. ಹಾಳು ಅಂಗಡಿಯನ್ನು ನೂರಾರು ಸಲ ಶಪಿಸುತ್ತ-ಸಿಕ್ಕಪ್ಪನ್ನೇ ಸವಿನೋಡಿ-ಊರಿನ ದಾರಿಗೆ ಸುಂಕವಿಲ್ಲವೆಂದು ಒಂದೆ.

ಇಷ್ಟು ದಿನ ಕಳೆದರೂ ಅದರ ವ್ಯವಸ್ಥೆ ಮಾಡುವುದಾಗಿರಲಿಲ್ಲ. ನನ್ನ ಕೆಲವು ಕಾಗದಗಳೊಂದಿಗೆ ಅಂದಿನ ಆ ಸಂಗ್ರಹವನ್ನು ಇಂದು ನೋಡಿ ಬೇಸರುಪಟ್ಟಾಗ, ನಿಮ್ಮ ಕಣ್ಣೆದುರಿಗೆ ಇಡಬೇಕೆಂದು ಬಗೆದು, ಬೇಸರು ಹುಟ್ಟಿಸುವಂತಹ ಈ ಮುನ್ನುಡಿಯ ಕಾಗದವನ್ನು ಬರೆಯಬೇಕಾಯಿತು

ಈ ಕೆಲವು ಚುಟಿಕೆಗಳೂ ಇದೊಂದು ನಲ್ವಾಡೂ ದಾರಿಯು ನನಗೆ ನೀಡಿದ ದಾನ. ನಿಮ್ಮ ಪತ್ರಿಕೆಗಾಗಿ ಕಳುಹಿಸಿದ್ದೇನೆ. ನೀವೇ ಇದಕ್ಕೊಪ್ಪುವಂತೆ 'ತಲೆಬರೆಹ'ವನ್ನು ಕೊಟ್ಟು, ಇದರ ಉನ್ನತಿಯನ್ನೊ—ಅವನತಿಯನ್ನೊ ಮಾಡಬಹುದು ಈ ಹಾಡಿನ ಬಗ್ಗೆ ನಿಮ್ಮ ನಾಲ್ಕು ಮಾತುಗಳನ್ನೂ, ಸ್ವೀಕರಿಸಿದ ಇಲ್ಲವೆ ನಿರಾಕರಿಸಿದ ಬಗ್ಗೆ ಒಂದೆರಡು ಸಾಲುಗಳನ್ನೂ ಆದಷ್ಟು ಬೇಗನೆ ಬರೆಯಿರಿ. ನಿಮಗೆ ತೊಂದರೆ ಕೊಟ್ಟುದಕ್ಕಾಗಿ ಕ್ಷಮಿಸುವಿರೆಂದು ಬೇಡುವ,

ಶಿವೇಶ್ವರ ದೊಡ್ಡಮನಿ

## ಕಂಡ್ಯೇನ್ಯೋ ಗೆಣೆಯಾ ಕಂಡ್ಯೇನ್ಯೋ!

★

( ಚಕ್ಕಡಿಯಾತ ಹಾಡಿದ ಹಾಡಿನ ಪ್ರತಿ )

ಕಂಡ್ಯೇನ್ಯೋ ಗೆಣೆಯ ಕಂಡ್ಯೇನ್ಯೋ! ‖ ಪಲ್ಲ ‖
ಕಂಡ್ಯೇನ್ಯೋ ಗೆಣೆಯ ಕಂಡ್ಯೇನ್ಯೋ—

ಅವಳ ನಗಿಗಣ್ಣ ಬಗಿನಿಂದ ಕಂಡ್ಯೇನ್ಯೋ
ಅವಳ ಬಿಗಿಬಂದಿಲ್ಲದ ಮನಸಾ ಕಂಡ್ಯೇನ್ಯೋ

ಕೂದಲ ಕುಬ್ಬಸಾ ನಸುಗೆಂಪೋ-ಅವಳ
ತುಟಿತುಂಬಿ ನಿಂತಾವೊ ನಗಿಗುಂಪೋ| ಕಂಡ್ಯೇನ್ಯೋ

ಸಿಂಗಾರ ಅವಳೀಗೆ ಒಪ್ಪಿಲ್ಲೋ-ಅವಳ
ಮುಂಗೈ ಮುಟ್ಟದ ನನಗ ಮುಪ್ಪಿಲ್ಲೋ| ಕಂಡ್ಯೇನ್ಯೋ

ಬಾಗಿ ಕುಂತಿದ್ದ ಕೊ ಬಾಗಲಕ-ಮತ್ತ
ನೀಗಿ ಕುಂತಿದ್ದಳೊ ಎದಿಮಲಕ| ಕಂಡ್ಯೇನ್ಯೋ....

ತುಂಬೀದ ತೋಳೀನ ತರಿವ್ಯಾಟೊ-ನನಗ
ನಂಬೇನಿ ನಿನ್ನಂತ ಕರ್ಯುವಾಟೊ | ಕಂಡ್ಯೇನ್ಯೋ....

ಕುಣದಾಪ್ಪೋ ಕೂದಲಾ ನನಮುಂದ-ಅವಳ
ಮಣದಾಟ ಎಷ್ಟಂದಿ ನನಗಿಂದ| ಕಂಡ್ಯೇನ್ಯೋ....

ಕೂದ್ಯಾಡು ಜೆಲ್ಲಾಟ ತುಂಬಿತ್ತೋ— ಅವಳು
ಆ ಮನಿಗೆ ಎರವನ್ನು ಮುಂಬಿತ್ತೋ | ಕಂಡ್ಯೇನ್ಯೋ

ನೀರಡಿಕಿ ಆದಾಗೊ ಎಲೆಗೆಣೆಯ-ಕೇಳೋ
ನೀರಿಲ್ಲ ತಂಬಿಗ್ಗಿ ಬೆಲಿನಿಲ್ಲೊ | ಕಂಡ್ಯೇನ್ಯೋ....

ಕೈ ಹಿಡಿಯ್ಯ ಹೆಣ್ಣೊಂದು ಕಂಡಾಗೋ-ಗೆಣೆಯಾ
ಸುಮ್ಮನಿದ್ದರ ಜನಮ ಬೆಲಿನಿಲ್ಲೋ| ಕಂಡ್ಯೇನ್ಯೋ....

ಹೆಣ್ಣಾಸಿಟ ಕಂಡಾಗ ಎಲೆ ಗೆಣೆಯ – ಕೇಳೋ
ಹುಣ್ಣಿವಿಗಿ ಚಂದಪ್ಪ ಕಂಡಂಗೊ| ಕಂಡ್ಯೇನ್ಯೋ....

* * *

ಕಂಡ್ಯೇನ್ಯೊ ಗೆಣೆಯ ಕಂಡ್ಯೇನ್ಯೋ— ಅವಳ
ನಗಿಮಾರಿ ಬಗಿನಿಂದ ಕಂಡ್ಯೇನ್ಯೋ—
ಅವಳ ಬಿಗಿಬಂದಿಲ್ಲದ ಮನಸಾ ಕಂಡ್ಯೇನ್ಯೋ....

# ಮಹಾತ್ಮಾ ಗಾಂಧಿ

"ಅಶ್ವತ್ಥ" ಹಿಂ. ವಿ. ವಿ. ನಿಲಯ ಬನಾರಸ

ಯುಗಪುರುಷ! ಭಾರತದ ರವಿ ಹೇ, ಮಹಾತ್ಮ!
ನಮ್ಮ ಮಧ್ಯದಿ ನೀನು ಬಾಳು ಬಹುಕಾಲ.
ತಪದ ತಾಪದಿ ಸಿದ್ಧಿ ಪಡೆದ ಪುಣ್ಯಾತ್ಮ,
ನಿನ್ನ ಪ್ರಭೆ ಬೆಳಗುತಿರಲೆಲ್ಲು ಚಿರಕಾಲ!

ಗೀತೆಯೊರೆದವನ ನಿಷ್ಕಾಮ ಬೀರದಲಿ,
ಬುದ್ಧದೇವನ ಮನದ ತ್ಯಾಗ ಯೋಗದಲಿ,
ಏಸುಕ್ರಿಸ್ತನ ಪ್ರೇಮ-ನಮ್ರತನಗಳಲಿ,
ನೀ ನ ಪಾಪಂತಾನ – ಜಗಸೇವಕರಲಿ.

[illegible] ಪುಚ್ಚರಕ್ಕಸನ ರೀತಿ,
[illegible] ಲೆ ಲಯವಲಿಯವಂದು—
ಸತ್ಯದೊಳಹಿಂಸೆಯೊಳು ಘೋಷಿಸುತ ನೀತಿ,
ಪಾಕವವ ಸಾತ್ತ್ವಿಕದಿ ಇದಿರಿಸಿದೆಯಿಂದು.

ಆಡ್ಡಿಯಾತಂಕ-ದುಃಖಗಳು ನಿನಗಿಲ್ಲ,
ಸೋಲಿನಾ ಭಂಗವನು ನೀ ತಿಳಿದುದಿಲ್ಲ;
ಗೆಲುವಿನಾ ಮದವೆಂದು ನಿನ್ನ ಮುಟ್ಟಿಲ್ಲ;
ಧರ್ಮಸಾಧನೆ ಬಲ್ಲೆ, ಬೇರೆಯರಿವಿಲ್ಲ.

ಹೊಗಳು-ತೆಗಳಿಗೆ ಹೊರಗು ಅರಮನೆಗೆ ಸರೆಗೆ;
ಸ್ನೇಹ-ಹಗೆ ಹೊಗದಿಹವು ಸುತ್ತು ಬಳಿಯೊಳಗೆ,
ಪಟ್ಟ, ಮಾಲೆಯ ಲಂಚ ನಿನ್ನ ವಂಚಿಸವು.
ನಿರ್ಬಂಧ. ದಂಡನೆಗಳಾವು ಬೆದರಿಸವು.

ದಂಡನಾಯಕ ನೀನು ಧರ್ಮಯುದ್ಧದಲಿ;
ಕ್ರೌರ್ಯದನ್ಯಾಯಗಳ ತೊಡೆಯುವನುವಿನಲಿ.
ಸತ್ಯರಥ ಪ್ರೇಮಾಯುಧದ ಯೋಧ ನಿನಗೆ
ಜಯವಿರಲಿ! ಜಯವಿರಲಿ! ಸುಖವಿರಲಿ ಧರೆಗೆ!

ಗೊಂದಲದ ಜೀವನಕೆ ಸರಳತೆಯ ತೋರಿ,
ದುಡಿಮೆಯಾ ನೆಲೆ ನೂತು ಜನಕೆಲ್ಲ ಸಾರಿ,
ಹಿಂದುಳಿದ ಬಂಧುಗಳ ಮುಂದಕ್ಕೆ ತಂದು,
ಮುದ್ಯಮತ್ತಿನ ಜನವನೆತ್ತಿದವ—ಬಂಧು.

ಪರರಾಳ್ಕೆ ಕವಿದ ಭಾರತಕೆ ಮಿಂಜೊಗೆದು,
ತಮ್ಮ ಹಿರಿಮೆಯ ತೋರಿ ಕಿಚ್ಚನೆದೆಗುಣಿಸಿ
ಬಿಡುಗಡೆಯ ಪಡೆಗಾದೆ ಮುಂದಾಳು ನಿಂದು
ಅನವರತ ಸ್ವಾತಂತ್ರ್ಯಮಂತ್ರವನು ಜಪಿಸಿ.

ಈ ಪುಣ್ಯಭೂಮಿಯೊಳು ನೀನು ಅವತರಿಸಿ,
ಪಶುಶಕ್ತಿಗಿದಿರು ಸತ್ಯಾಗ್ರಹವ ರಚಿಸಿ,
ತವಸಿಯೋಧನ ಹೊಸತು ಸಂದೇಶದಿಂದೆ,
ಜಗಕೆ ಸಿರಿಭಾರತದ ಮೇಲ್ಮೆಯನು ತೋರ್ದೆ.

ನಿನ್ನಶ್ರಮವಲೆ ಮೋಕ್ಷ ಭಾರತಕೆ ಸಿಗಲಿ,
ನಿನ್ನ ಶಾಂತಿಯ ಕೂಗು ಧರೆಗೆ ಕೇಳಿಸಲಿ,
ನಿನ್ನ ಶಕ್ತಿಯು ಹೊಸತು ಜಗವ ನಿರ್ಮಿಸಲಿ,
ನಿನ್ನಾತ್ಮವಾ ಜಗದ ಎದೆಯಾಳುತಿರಲಿ.

ಯುಗಪುರುಷ! ಭಾರತದ ರವಿ, ಹೇ ಮಹಾತ್ಮ!
ನಮ್ಮ ಮಧ್ಯದಿ ನೀನು ಬಾಳು ಬಹುಕಾಲ.

# ನನ್ನ ಮದುವೆಯ ಮಾತು ನಡೆದಾಗ

( ಲಲಿತಪ್ರಬಂಧ )

ಕುವರಿ ಪದ್ಮಯಂತಿ ಪರ್ವತಿ. ಬಾಗಿಲುಕೊಟಿ.

★

**ನಮ್ಮ ಜನದಲ್ಲಿ ಹೆಣ್ಣಿನ ಕೊಗೆ ಮಾಂಗಲ್ಯ ಕಟ್ಟುವುದೆಂದರೆ ಒಂದು ಮಹಾಯಜ್ಞ ಮಾಡಿದಂತಾಗುವುದು. ಮದುವೆಯ ಮಹಾಯಜ್ಞದಲ್ಲಿ ನಿಜವಾದ ಯಾಗಪಶು-ವೆಂದರೆ ಹೆಣ್ಣು. ಆಗ ಹೆಣ ತನ್ನ ಮನುಷ್ಯಧರ್ಮ ಮರೆತೇ ಇರಬೇಕಾಗುವುದು.**

★

ಮದುವೆಯೆಂದರೆ ಸಾಧಾರಣವಾಗಿ ಎಲ್ಲರೂ ಉಬ್ಬು; ಉತ್ಸಾಹ. ಬೇರೆ ಕೆಲವು ಜನವುಂಟು; ಅಗೆ ಮದುವೆ-ಯೆಂದರೆ ಆಸಡ್ಡೆ. ಆದರೆ ನಾನು, ನನಗೆ ಹೇಗೆ ಹೇಳಲಾರೆ. ಆದರೂ ಇಷ್ಟನ್ನು ಮಾತ್ರ ಹೇಳಬಲ್ಲೆ, ಆದೆಂದರೆ: ನನಗೆ ಶಾಲೆಯಲ್ಲಿಯು ಅಭ್ಯಾಸದ ಮಾತನ್ನು ನಿಶ್ಚಯಿಸಿಕೊಂಡಾಗ 'ಮದುವೆಯೇ ಒಳ್ಳೆದು!' ಎನಿಸುತ್ತದೆ; ಸ್ವತ ಮದುವೆ ಮಾಡಿಕೊಂಡು ಎಷ್ಟೋ ಜನ ಪಡುವ ಕಷ್ಟವನ್ನು ಜ್ಞಾಪಕಕ್ಕೆ ತಂದಾಗ 'ಶಾಲೆಯೇ ಒಳ್ಳೆದು' ಎನಿಸುತ್ತದೆ. ಬಟ್ಟಾರೆ ನನಗೆ ಎರಡೂ ಬೇಡ; ಆದರೆ, ಎರಡೂ ಇಲ್ಲದೆ ಇವ ಹಾಗಿಲ್ಲ. ಶಾಲೆ ತಪ್ಪಿದರೆ ಮದುವೆ; ಮದುವೆ ತಪ್ಪಿದರೆ ಶಾಲೆ.

ನಮ್ಮ ಮನೆಯಲ್ಲಿ ನನ್ನ ಮದುವೆಯ ಸಲುವಾಗಿ ಪ್ರಯತ್ನಿ-ಸುವವರು ಆರು ಜನ. ಅವರಾರೆಂದರೆ ಇಬ್ಬರು ತಂದೆ, ಮೂವರು ಕಕ್ಕಂದಿರು, ಅಜ್ಜಿ, ನಮ್ಮ ಸುನೆಯಮ್ಮತೋಪಿತರು. ಸಾಲದುದಕ್ಕೆ ನಮ್ಮ ಮನೆಯಲ್ಲಿ ಎಲ್ಲರೂ ಬಂದ ಜನರ ಮುಂದೆಲ್ಲಾ "ಏನ್ರೀ? ನಮ್ಮ ಹುಡುಗಿ ಬೆಳೆದ ನಿಂತಿದ್ದಾಳೆ, ನಿಮ್ಮ ಗೊತ್ತಿನಲ್ಲಿ ಎಲ್ಲಿಯಾದರೂ ಒಳ್ಳೆಯ ಪಡ್ದರೆ, ನಮಗೆ ಹೇಳ್ರಿ!' ಎಂದು ಕೇಳುವ ಪರಿಪಾಠ.

* * *

ರಾತ್ರಿಯ ಒಂಬತ್ತೂವರೆ ಗಂಟೆಯ ರೈಲಿಗೆ ಇಬ್ಬರು ದಪ್ಪನ್ನ ದೇಹದವರು ನಮ್ಮಲ್ಲಿಗೆ ಬಂದಿಳಿದರು. ಅವರನ್ನು ನನ-ಗೇನೂ ಹೊಸತಲ್ಲ. ಅವರ ಪರಿಚಯ ಪೆಹಲಿನಿಂದಲೂ ನನಗಿತ್ತು. ಪ್ರತಿಸಲದಂತೆ ಅವರು ತಮ್ಮ ಕೆಲಸಕ್ಕಾಗಿ ಬಂದಿರ ಬಹುದೆಂದು ಊಹಿಸಿದೆ; ಆದರೆ ನನ್ನ ಊಹೆ ತಕ್ಕಮಟ್ಟಿಗೆ ಸರಿಯಾಗಿರಲಿಲ್ಲ. ಈ ಸಲ ಅವರು ತಮ್ಮ ಕೆಲಸಕ್ಕಿಂತ ಹೆಚ್ಚಾಗಿ ನಮ್ಮ ಕೆಲಸಕ್ಕೆ ಬಂದಿದ್ದರು.

ಅವರು ಬಂದಿಳಿದೊಡನೆ "ನಿನ್ನ ಹುಡುಗಿಗಿಂತ ನೋಡಿ-ಕೊಂಡು ಬಂದಿದ್ದೇನ್ರಿ" ಎಂದರು. ಆಗ ನಮ್ಮನೆಯಲ್ಲಿ ಎಲ್ಲರಿಗೂ—ಚಾತಕಪಕ್ಷಿ ಮಳೆನೀರಿಗಾಗಿ ದಾಹಾಯುತ್ತ ಕುಳಿತೂ ಕುಳಿತೂ, ಕೊನೆಗೊಮ್ಮೆ ಆದ ಮೇಘರಾಜನ ಸದ್ದನ್ನು ಕೇಳಿ, ಪ್ರತಿಧ್ವನಿಯನ್ನು ಮಾಡುವಂತಾಯಿತು. ಅವರ ಬಾಯಿಂದ 'ಸರ' ಎಂಬ ಶಬ್ದ ಹೊರಡುವ್ಯದೊಂದೇ ತಡ, ಎಲ್ಲರೂ ಒಂದೇ ಧ್ವನಿಯಿಂದ 'ಯಾರ್ರೀ? ಯಾರ ಪೈಕೀ?' ಎಂದು ಮುಕ್ತಕಂಠದಿಂದ ಕೇಳಿದರು. ಆದಕ್ಕೆ ಅವರು ಒರ್ವ ಪ್ರಸಿದ್ಧ ಸಾಹಿತಿಯ ಹೆಸರನ್ನು ತೆಗೆದುಕೊಂಡು 'ಅವರಿಗೆ ತೀರ ಹತ್ತಿರದ ಬಳಗ' ಎಂದು ಹೇಳಿದರು. ಆ ಸಾಹಿತಿಯ ಹೆಸರನ್ನು ನಾನು ಈಗ ನಿಮ್ಮ ಮುಂದೆ ಹೇಳುವುದಿಲ್ಲ; ಹೇಳಿದರೆ, ಗುಟ್ಟೆಲ್ಲಾ ರಟ್ಟಾದೀತು!

ಎಲ್ಲರೂ ಕೈಕಾಲು ತೊಳೆದುಕೊಂಡು ಊಟಕ್ಕಾಗಿ ಮಣೆಯ ಮೇಲೆ ಬಂದು ಕುಳಿತರು. ಆದಿನ ತುಪ್ಪ ಬಡಿಸುವುದು ನನ್ನ ಪಾಲಿಗೆ ಬಂದ ಕೆಲಸವಾಗಿತ್ತು. ಅನ್ನ ಹಾಕಿದ ಮೇಲೆ ತುಪ್ಪ ಬಡಿಸಲು ನಾನು ಪ್ರಾರಂಭಿಸಿದೆ. ಎಲ್ಲರೊಂದಿಗೆ ಅಂದು ಬಂದ ಅವರಿಗೂ ಬಡಿಸಿದೆ. ಅಷ್ಟರಲ್ಲಿ ನಮ್ಮ ಕಕ್ಕ ಯಾವ ಕಣ್ಣಿನಿಂದ ನೋಡುತ್ತಿದ್ದರೋ— "ನೋಡ್ರಿ, ಇವಳು ಮದುವೆಯ ಸುದ್ದಿ ತಂದವರಿಗೆ ಆಂತ ಚಾಸ್ತಿ ತುಪ್ಪ ಹಾಕ್ತಾಳೆ; ನ್ಯಾಯವಾಗಿ ನೋಡಿದರೆ ನಾವು ಮದುವೆ ಮಾಡುವವರು, ನಮಗೆ ನಾಲ್ಕೈದು ಜನುಜ ಬಡಿಸಬೇಕು!" ಎಂದು ಜೇಷ್ಟೆಗೆ ಮೊದಲು ಮಾಡಿ ಬಿಟ್ಟರು. ನಿಜವಾಗಿಯೂ ನಾನು ಅವರಿಗೆ ಹೆಚ್ಚು ಬಡಿಸಿ-ದ್ದೆನೋ ಏನೋ!

ಮತ್ತೆ ತಾನಾಗಿಯೆ ಮದುವೆಯ ಮಾತಿಗೆ ಪ್ರಾರಂಭ-ವಾಯಿತು.

"ಹುಡುಗ ಯಾವ ಪರೀಕ್ಷೆ ಪಾಸಾಗಿದ್ದಾನೆ?"

"ಫಸ್ಟ್‌ಕ್ಲಾಸ್ ಬಿ. ಎ."

"ವಯಸ್ಸೆಷ್ಟು?"

"ಬಹಳ ಚಿಕ್ಕದ್ರೀ; ಇದಲ್ಲದೆ ಹುಡುಗ ನೋಡಲು ಬಹಳ ಲಕ್ಷಣವಾಗಿದ್ದಾನೆ."

"ಉತ್ಪನ್ನ?"

"ಇಬ್ಬರೇ ಮಕ್ಕಳು. ಎರಡು ಸಾವಿರ ಉತ್ಪನ್ನ. ನಿಮ್ಮ ಮಗಳು ಅತ್ತೆ-ಮಾವಂದಿರ ಕೈಕೆಳಗೇನೂ ಇರಬೇಕಾಗಿಲ್ಲ. ಹುಡುಗನಿಗೆ ಸೊಲ್ಲಾಪುರದಲ್ಲಿ ಕೆಲಪ ನೂಲ್ಯೆವಕ್ಕು ರೂಪಾಯಿ ಸಂಬಳ; ಆದರೆ ಸ್ವಲ್ಪ ಮರಾಠೀ....."

'ಮರಾಠೀ' ಎಂದೊಡನೆ ನನ್ನ ಉತ್ಸಾಹ ಸ್ವಲ್ಪ ಕುಗ್ಗಿದಂತಾಯಿತು. 'ಕನ್ನಡ ನಾಡಿನಲ್ಲಿ ಹುಟ್ಟಿ, ಕನ್ನಡ ನಾಡಿನಲ್ಲಿ ಬೆಳೆದು, ಕನ್ನಡ ಭಾಷೆ ಕಲಿತು, ಒಮ್ಮೆಲೇ ಯಾವುದೋ ಪರಭಾಷೆಗೆ ಮಾರುಹೋಗಬೇಕಾಯಿತಲ್ಲ....' ಎಂದು ನನ್ನ ಮನ, ಪ್ರತಿಯೊಬ್ಬ ಕನ್ನಡಿಗನ ಹೃದಯ ಮಿಡಿಯುವಂತೆ ಕ್ಷಣಕಾಲ ಮರುಗಿತು. ನಾನು "ಹುಡುಗ, ಕನ್ನಡ ಲೇಖಕರಿಗೆ ಸಂಬಂಧದವ" ಎಂದಾಗ ಕಲ್ಪಿಸಿದ ಚಿತ್ರ, ಈಗ ನಾನು ಊಹಿಸಿದ ಒಂದು ಚಿತ್ರ, ಎರಡೂ ವಿರೋಧಾಭಾಸವನ್ನು ತೋರುವಂತಿದ್ದುವು. "ಸಾಹಿತಿಗೆ ಬಳಗ ಎಂದ ಮೇಲೆ ನಾನು ಬೇಕಾದಷ್ಟು ಸಣ್ಣಕತೆ—ಕಾದಂಬರಿಗಳನ್ನು ಓದಬಹುದು; ಸಾಕಷ್ಟು ಸಾಹಿತಿಗಳ ಪರಿಚಯವನ್ನು ಮಾಡಿಕೊಳ್ಳಬಹುದು!" ಎಂಬ ನನ್ನ ಹಿರಿಯಾಸೆ ಬಯಲಾಯಿತು.

ಆದರೂ ನನಗೂ ಒಂದು ಸಮಾಧಾನ: "ನಾನು ಮಹಾರಾಷ್ಟ್ರಕ್ಕೆ ಹೋದರೇನಾಯಿತು? ನಾನು ಅವರ ಭಾಷೆಯನ್ನು ಕಲಿಯದೆ, ಅವರಿಗೇ ನನ್ನ ಭಾಷೆ ಕಲಿಸಿಕೊಟ್ಟರಾಯಿತು!" ಎಂದುಕೊಂಡೆ.

ಮರುದಿನವೆ ಹನ್ನೊಂದೂವರೆಯ ರೈಲಿಗೆ ನಾನು, ನಮ್ಮ ತಂದೆ, ಊರಿಂದ ಬಂದ ಆ ಮನುಷ್ಯರು—ಇಷ್ಟು ಜನ ಪ್ರಯಾಣ ಬೆಳಸಿದ್ದಾಯಿತು ರೈಲಿನಲ್ಲಿ ಕುಳಿತಾಗಿನ ನನ್ನ ವಿಚಾರಗಳು ವಿಲಕ್ಷಣವಾಗಿದ್ದುವು: 'ನಮ್ಮವರು ಹೆಣ್ಣಿಗೆ ಯಾವ ಬೆಲೆಯನ್ನು ಕಟ್ಟಿದ್ದಾರಲ್ಲಾ!' ಎಂದು ನನ್ನ ಸ್ವಾತಂತ್ರ್ಯಪ್ರಿಯ ಬುದ್ಧಿ ಮರುಗಿತು. ಸಂತೆಯಲ್ಲಿ ವಿಕ್ರಯಕ್ಕೆ ಕೊಡಲಿರುವ ಆಕಳನ್ನೋ ಎಮ್ಮೆಯನ್ನೋ ಕೊಳ್ಳಲಿಚ್ಛಿಸುವವನು, ಆದರ ಕಿವಿ-ಮೂಗುಗಳನ್ನೂ ಸದಿಗೆಯನ್ನೂ ವಿಚಾರಿಸಿ ನೋಡುವಂತೆ, ನಮ್ಮ ಜನ ಜಾಯಿಯಿದ್ದ ಮೆದುಳಿದ್ದ ಹೆಣ್ಣನ್ನು, ಆದಕ್ಕೂ ಹೆಚ್ಚಾಗಿ ಮನುಷ್ಯ ಜಾತಿಗೇ ಸೇರಿದ್ದ ಒಬ್ಬ ಹೃದಯವುಳ್ಳ ಮಾನಿನಿಯೆನ್ನು ಈ ರೀತಿ ಪರೀಕ್ಷಿಸುತ್ತಾರಲ್ಲಾ!— ಎಂದು, 'ಹಾ' ಎನ್ನುವಹಾಗಾಯಿತು. "ಮೂಕ ಪ್ರಾಣಿಗಳಿಗಿಂತಲೂ ಕೇಡೇ ನಮ್ಮ ಪಾಡು?" ಎಂದು ಇಡೀ ಸಮಾಜಕ್ಕೇ ಪ್ರಶ್ನೆ ಕೇಳುವಹಾಗಿನ್ನಿಸಿತು. ಇಂತಹ ದಾರುಣ ವಿಚಾರಗಳ ಮಧ್ಯೆಯೂ ಒಂದು ಅವ್ಯಕ್ತಸುಖದ ತೆರೆಯು ಮನದ ಮೈಗೆ ಸೋಂಕಿ, ಎಲ್ಲ ವಿಚಾರಗಳನ್ನೂ ಸೆಳೆದೊಯ್ದು ಬಿಟ್ಟಿತು.

ಆ ಊರನ್ನು ತಲ್ಪಿದುದೂ ಆಯಿತು. ಪರೀಕ್ಷೆಯ ಕೆಲಸವೂ ಕೊನೆಗಂಡಿತು. ಆ ದಿನ, ನಾನು ಮತ್ತೆ ಮತ್ತೆ "ನನಗೂ ಒಪ್ಪಿಗೆಯಾಯ್ತು, ಅವರಿಗೂ—ಅಲ್ಲ-ಅವನಿಗೂ ಒಪ್ಪಿಗೆಯಾಯ್ತು" ಎಂಬ ಮಾತನ್ನು ನೆನಸಿಕೊಂಡು ಆನಂದಿಸುತ್ತಿದ್ದೆ.

ಆದರೆ, ನಮ್ಮವರು, ಹುಡುಗಿಗೂ ಹುಡುಗನಿಗೂ ಒಪ್ಪಿಗೆಯಾದಾಗ ತಕ್ಷಣ ಒಪ್ಪಿಗೆ ಕೊಡುವುದಿಲ್ಲವೆಂದು ತೋರುತ್ತದೆ. ಆಚಾರ್ಯರು 'ಲಗ್ನ ಸಂಪ್ರದಾಯಕ್ಕೆ ಸಮ್ಮತವಿಲ್ಲ' ಎಂದು ಹೇಳಿಬಿಟ್ಟರು. ಹೀಗಾಗಿ ನನ್ನ ಮದುವೆ ಆಗಿನ ಮಟ್ಟಿಗೆ ನಿಂತು ಹೋಯಿತು.

ಮತ್ತೊಂದು ನನಗೆ ಒಬ್ಬ ಮ್ಯಾಟ್ರಿಕ್ ನಾಪಾಸಾದ ವರನನ್ನು ತಂದಿತು. ನಾನು ಧೈರ್ಯವಾಗಿ 'ಒಲ್ಲೆ' ಎಂದು ಹೇಳಿದೆ. ನನಗೆ ಕಡಿಮೆ ಕಲಿತವನನ್ನು ಮದುವೆಯಾಗಿ ನಮ್ಮ ಸಮಾಜ ಕೊಡುವ ಪೀಡೆಯನ್ನೂ ಅಪಹಾಸ್ಯವನ್ನೂ ಸಹಿಸುವದಕ್ಕಿಂತ ನಮ್ಮ ಮನೆಯಲ್ಲಿಯ ಜನದ ಕೋಪವನ್ನು ಸಹಿಸುವುದು ಲೇಸೆಂದು ನನಗೆ ತೋರಿತು. ನಮ್ಮ ಸಮಾಜ ಇನ್ನೂ ಅಷ್ಟು ಉಚ್ಚ ಸ್ಥಿತಿಯನ್ನು ಮುಟ್ಟಿಲ್ಲ. ನಮ್ಮಲ್ಲಿಯ ಸ್ತ್ರೀಯರೇ ತಾವು ಪುರುಷರಿಗೆ ಕೀಳೆಂದು ಸಾರಿಹೇಳುತ್ತಿರುವಾಗ, ನಾನೊಬ್ಬಳು ಈ ಮಾತನ್ನು ಒಪ್ಪದಿದ್ದರೆ, ನನ್ನ ಹೆಂಗಸಿಗೆ ಸಮಾನ ಹಕ್ಕುಗಳು ಸಿಗುವವೆ? ಅಂತೂ ಎರಡನೆಯ ಸಲವೂ ನನ್ನ ಮುಪ್ಪೆಯ ಮಾತು ನಿಂತು ಹೋಯಿತು.

ಹೀಗೆ ನಮ್ಮಜನದಲ್ಲಿ ಹೆಣ್ಣಿನ ಕೊರಳಿಗೆ ಮಾಂಗಲ್ಯ ಕಟ್ಟುವುದೆಂದರೆ, ಒಂದು ಮಹಾಯಜ್ಞ ಮಾಡಿದಂತಾಗುವುದು. ಹುಟ್ಟಿ ಹುಟ್ಟಿದಾಗಿನಿಂದಲೇ ನಮ್ಮವರು ಅವಳಿಗಾಗಿ ವರನೋಡತ್ತುವರು. ಅವರು ಅವಳಿಗೆ ಶಿಕ್ಷಣಕೊಡುವುದು ಅವಳ ಜ್ಞಾನಾಭಿವೃದ್ಧಿಗಲ್ಲ. 'ನಿಮ್ಮ ಮಗಳಿಗೆ ಮ್ಯಾಟ್ರಿಕ್ ವರೆ ಕಲಿಸುವುದರಲ್ಲಿ ನಿಮ್ಮ ಉದ್ದೇಶವೇನು? ಅವಳು ಯಾವುದಾದರೊಂದು ಜಾತಿಯಲ್ಲಿ ನೌಕರಿ ಮಾಡಬೇಕೆಂದೊ?' ಎಂದು ಯಾರಾದರೂ ಪ್ರಶ್ನಿಸಿದರೆ, ಅದಕ್ಕೆ ಆ ತಂದೆಯ ಉತ್ತರ: "ಛೆ, ಹೆಣ್ಣುಮಕ್ಕಳನ್ನೆಲ್ಲ ನೌಕರಿಗೆ ಹಚ್ಚುವುದೇ? ಈಗಿನ ಜನ ಹುಡುಗಿಯನ್ನು ನೋಡಲು ಬಂದಾಗ, ಪಾಕವ ಮೊದಲನೆಯ ಪ್ರಶ್ನೆ ಅವಳ ಶಿಕ್ಷಣದ ಬಗ್ಗೆ. ಆದ್ದರಿಂದ ಅವಗೆ ಶಿಕ್ಷಣ ಅವಶ್ಯವಾಗಿದೆ. ಒಂದೊಂದು ಸಲ ಹುಡುಗಿ ಕುತವಳಿದ್ದರೆ, ಸ್ವಲ್ಪೇ ವರದಕ್ಷಿಣೆಯಲ್ಲಿ ಚಲೋ ಮನೆತನವ ದೊರಕುವ ಸಂಭವವಿರುತ್ತದೆ" ಎಂದು. ಗಂಡು ಮಕ್ಕಳಿಗೆ ಕೇವಹಿಡಿಯುವ ಕಾಲಕ್ಕೆ "ಕ್ವಾಲಿಫಿಕೇಶನ್" ಕೇಳುವಂತೆ, ಹೆಣ್ಣುಮಕ್ಕಳಿಗೆ ಶಿಕ್ಷಣ ಒಂದು ಲಗ್ನದ 'ಕ್ವಾಲಿಫಿಕೇಶನ್' ಎಂದು ಅವಳಿಗೆ ಶಿಕ್ಷಣ ಕೊಡುತ್ತಾರೆ.

ಮೊನಲಿನ ಕಾಲದಲ್ಲಿ ನಮ್ಮ ಸ್ತ್ರೀಯರಿಗೆ— ಇನ್ನೂ ತಿಳಿವಳಿಕೆ ಬಾರದಾಗಲೇ ಮದುವೆಯಾಗುತ್ತಿತ್ತು. ಆದುದರಿಂದ ಅವರ ಸಮ್ಮತಿಯ ಅವಶ್ಯಕತೆಯಿರಲಿಲ್ಲ. ಆದರೆ ಈಗಿನ ಪರಿಸ್ಥಿತಿಯಲ್ಲಿ ಮದುವೆಯ ಕಾಲಕ್ಕೆ ಆ ಬಾಲಿಕೆಗೆ ಸಂಪೂರ್ಣ ತಿಳಿವು ಉಂಟಾಗಿರುವುದರಿಂದ, ಅವಳ ಒಪ್ಪಿಗೆ ಅತ್ಯವಶ್ಯ. ಇದನ್ನು ತಿಳಿಯದೆಯೆ ಮೂಢರಾದ ನಮ್ಮವರು ಅವಳೊಬ್ಬಳ

( ೪೮೮ ನೆಯ ಪುಟ ನೋಡಿರಿ )

# ಹೊಟ್ಟೇ ಮಾಡ್ಯನ ಶಿವಾ!--

( ಒಂದು ವಾಸ್ತವ ಸಂಗತಿ ವಿಚಾರತರಂಗ )

★

ಶ್ರೀ. ಬಿದರಕುಂದಿ ವೆಂಕಾಯರು, ಆಥಣಿ

**ಜೀವಶಕ್ತಿ ಮೂಡಿದಂದಿನಿಂದಲೂ ಅದಕ್ಕೆ ಆಹಾರದ ಆವಶ್ಯಕತೆ ಮುಂದೆ ನಿಂತಿರುವುದು. ನಿಸರ್ಗ ಈ ಆವಶ್ಯಕತೆಯನ್ನು ಪೂರಯಿಸುವುದಕ್ಕೆ ಸಿದ್ಧವಿದ್ದರೂ, ಸ್ವಾರ್ಥ ದಾಶೆಯ ಮಾನವರು ಇದಕ್ಕೆ ಅಡ್ಡಿಯನ್ನೊಡ್ಡುವರು. ಆಗಲಹೀನ ಜೀವಿ ಮಾಡುವುದೇನು? ಬಿಸಿಯುಸಿರಿಕ್ಕುವುದೊಂದೇ!**

★

ಮಾಗಿಯ ಹೊತ್ತು; ಪಡುವಲಿಯನ್ನು ಸೇರುತ್ತಿರುವ ಪ್ರಶಾಂತವಾದ ಸಮಯವದು. ತಾನೇ ಓದುಮನೆಯಿಂದ ಗಾಳಿಗಾಗಿ ಹೊರಬಿದ್ದೆ. ನಿಯಮಿತಕಳಲ್ಲಿ ಪ್ರಕಟವಾದ "ಅನ್ನಧಾನ್ಯಗಳ ಕೊರತೆ, ಪರದೇಶದಿಂದ ಅನ್ನಧಾನ್ಯಗಳನ್ನು 'ಜೋಗವ್ವಾ' ಎಂದು ಕೇಳಲು ರಟ್ಟ ಶಿಷ್ಟನುಂಡಳದವರ ವಿಚಾರ, ಲೋಭಿಯಂತೆ ಅನ್ನಧ್ಯಗಳನ್ನು ಜಿಪುಣತನದಿಂದ ಉಪಯೋಗಿಸಿರೆಂಬ ಮುಹಾತ್ಮನಂದೇಶ,—ಅಲ್ಲದೆ ನಾವು ಹೊಟ್ಟಷ್ಟೇ ಉಣ್ಣಿರೆಂಬ ಮಾತಿರಕಾರ" ಇವೆಲ್ಲ ಸಂಗತಿಗಳು ತಲೆಯ ಕಣಜದಲ್ಲಿ ಹಿಡಿಹೊರಚಿಮ್ಮುತ್ತಿದ್ದುವು; ಮುಂದೆ ಬರುವ ವಿಕಾದಶಿಗಳ ಚಿತ್ರ ಕಣ್ಣಿಗೆ ಪರದೆ ಹಾಕಿತ್ತು. ಹಣೆಯಿಕ್ಕಿ ನೋಡುವ ಜೀವರುಗಳನ್ನೊರಸುತ್ತ ಗಾಳಿಯೆದುರಿಗೆ ಹೊರಟಿದ್ದೆ. ಹಾದಿ ಓಣಿಂದನ್ನು ಪಾಟು ತ್ತಿರುವಾಗ—" ಹೊಟ್ಟೇ ಮಾಡ್ಯಾನ ಶಿವಾ ಹೊಟ್ಟೇಮ್ಯಾಲ ಕಲ್ಲ ಹಾಕಲೆವ್ವಾ !! ರೊಟ್ಟೀ ಜೀಡತಾದ ನಾ !!! " ಎಂದು ಹಾಡುವ ಮುದ್ದು ಬಾಲಕರ ಧ್ವನಿಯು ಕೇಳಿತು. ಆ ಎಳೆಯ ಸ್ವರವು ಕಿವಿಗೆ ಇಂಪಾಗಿ ಕೇಳಬಂದರೂ, ಹುಕ್ಕೆ ಮುಳ್ಳಿಗಿಂತಲೂ ಸೂಕ್ಷ್ಮವಾದ ಮೊನೆಯಿಂದ ಎದೆ-ಕರುಳನ್ನು ಕೆಣಕಿತು. ಹೀಗಾದುದು ಜನಪದಸಾಹಿತ್ಯ ಸಂಗ್ರಹಿಸಬೇಕೆಂಬ ವಿಚಾರದಿಂದೇನೂ ಅಲ್ಲ. 'ಹಸಿದಾಟ್ಟಿಯ ತೂಲಿಯಿಂದ ಹೊರಬಿದ್ದ ದೀನಸ್ವರವಿದು' ಎಂದೋಚನೆ ತಲೆ ಮೋರಿ, ತಲೆತುರಿಸಿ 'ಈ ವಾಣಿ ವೇದ-ಪುರಾಣಾಕ್ಯಗಳಲ್ಲಿಯ ತತ್ತ್ವದ ಸಾರವಿರಬಹುದೋ? ಹೊತ್ತಿನನ್ನು ಬಿಚ್ಚಿ ನೋಡೋಣ' ಎಂದುಕೊಂಡೆ. ಹಿಂದೆ ಯಾವಾಗ—ಎಂದೂ—ಈ ಹಾಡನ್ನು ಯಾರೋ ಹಾಡಿರಬಹುದು; ಆ ಕ್ರೋಧ, ಕಾಲ ನಿರ್ಣಯಗಳನ್ನು ಬಿಟ್ಟುಬಿಟ್ಟರೂ ಸಾಮಾನ್ಯನರಿಗೂ ಈ ಹಾಡನ್ನು ಹಾಡುವ ಪ್ರಸಂಗ ಬಂದಿದೆಯಲ್ಲವೇಗ? " ಬಡವರ ಬಗ್ಗರ ತುತ್ತಿನ ಚೀಲದ ಒಳಗಿನ ಬಿನೆ ಒಳದನಿಯೊಂದು " ಎಂದು ಕೂಗಿಕೊಂಡಿರುವ ಪ್ರತಿ ಕೂಗೂ ಇಂತಹ ಮಾತಿಗಾಗಿಯೆ ಇರುವುದು ಇದು ಏಯ-ಅನುಭವದ ಪಾಡಾಗಿದ್ದರೆ, ಅದು ಹಸಿದ ಉಸುರಿನಿಂದ ಹೊರಬಿದ್ದ ಸತ್ಯಸಿದ್ಧಾಂತವು. ಅಜ್ಞಾನಿಗಳಾದ ಬಾಲಕರು ಸಾತವಾಗಿದ್ದರೂ, ಜನಜೀವನದಲ್ಲಿ ಬೆರತುಕೊಂಡ ಸಾದಾ ಜೀವಿಗಳು ದಿನಾಲು ಉಚ್ಚರಿಸುವ ಅಮರವಾಕ್ಯವಿದು. ಬಂಗಾಲದಲ್ಲಿ ೫೦ ಲಕ್ಷ ಜನರು ಇದೇ ಹಾಡುಹಾಡಿ ಪ್ರಾಣಬಿಟ್ಟರು ವಿಜಾಪೂರ—ಸುತ್ತಲಿನ ಪ್ರದೇಶಗಳಿಗೆ ಪದೇ-ಪದೇ ನೆರವಾಗುತ್ತಿರುವ ಹಾಡು ಇದೇ. ನಿಶ್ಚಯವಾಗಿ ಈ ಪದವನ್ನು ರಚಿಸಿದ ಕವಿಯು ವಿಜಾಪೂರ ಜಿಲ್ಲೆಯವನೆಂದೇ ಹೆಮ್ಮೆಯಿಂದ ಹೇಳುವೆ. ಈ ಕವಿಯ ಹಾಡು ಕರ್ನಾಟಕದಲ್ಲಿಯೆ ಎಳೆ, ಇಡಿ ಭರತಖಂಡದಲ್ಲಿಯೆ ಕೇಳಬರುವುದು ಈಗ.

ಒಮ್ಮೆ ನಾನು ರೈಲಿನಲ್ಲಿ ಪ್ರವಾಸಮಾಡುತ್ತಿರುವಾಗ ನಾಗಪುರದ ಗೃಹಸ್ಥರೊಬ್ಬರು ಅದೇ ಪಟ್ಟಿಯಲ್ಲಿದ್ದುದರಿಂದ, ಒಬ್ಬರೊಬ್ಬರ ಊರುಗಳ ಬಗ್ಗೆ ಮಾತು ನಡೆದಾಗ, ನನ್ನ ಊರು ವಿಜಾಪುರವೆಂದು ಹೇಳಿದೆ. ಆಗ ಅವರು " ಒಹೋ, ಫ್ಯಾಮಿನ್ ಡಿಸ್ಟ್ರಿಕ್ಟ್ ! ನಿಮ್ಮ ಜಿಲ್ಲೆಯು ಎಲ್ಲರ ಜಾಯಲ್ಲಿಯೂ ಇದೆ," ಎಂದು ಹೇಳಿದರು. " ಹೌದು ನೀವೆನ್ನುವುದು ನಿಜ, ಆದರೂ ಅಲ್ಲಿ ಜೋಲಗುಮುಟವಿದೆ" ಎಂದು ತಿಳಿಸಿದೆ. " ಎಸ್, ನಾನು ವಿಜಾಪುರವನ್ನು ನೋಡಿರುವೆ. ಆ ಜೋಲ ಗುಮುಟವು ಯಾವಾಗಲೂ ತನ್ನ ಹೊಟ್ಟೆಯನ್ನು ಬರಿದಾಗಿಟ್ಟಿರುವಂತೆ, ನಿಮ್ಮ ಜಿಲ್ಲೆಯವರ ಹೊಟ್ಟೆಯೂ ಬರಿದಾಗಿಯೆ ಇರುವುದು" ಎಂದರು. ಜೊಳ್ಳೆಂದು ನಕ್ಕೆವು. ಅವರು ಬಹು ವಿನೋದಿಗಳು.

'ಬಂದುದನ್ನು ಅನುಭವಿಸಬೇಕು, ಪರಿಸ್ಥಿತಿಗೆ ಎದೆಗೊಡಬೇಕು!' ಇವು ಧೈರ್ಯಕೊಡುವ ಮಾತು. ಯಾವುದೊಂದು ಕಾರ್ಯಕ್ಕೆ ಒಳ್ಳೆಯದು. ಆದರೆ ಜೀಕಾದಷ್ಟು ಪ್ರಯತ್ನಿಸಿದರೂ ಆಹಾರ ಸಿಕ್ಕದಿರುವಾಗ ಅದೆಂತಹ ಧೈರ್ಯದ ಮಾತು? 'ಪರದೇಶಗಳಿಂದ ಧಾನ್ಯಗಳು ಬರುತ್ತಲಿವೆ' ಎಂದು ಜಾಹೀರಾತು ಬೀರುವಷ್ಟರಲ್ಲಿ ಎರಡೂ ಕಿವಿಗಳ ಮೇಲೆ ಕೈಯಿಟ್ಟುಕೊಳ್ಳುವ ಸರಕಾರವಿರುವಾಗ "ಪ್ರಾಣದೇವನು ನಿತ್ರಾಣನಾಗುತ ಅಂದ ಅನ್ನದೇವರು ಮಾತ್ರ ಇನ್ನೂ ಬರಲಿಲ್ಲ" ಎಂದು ಮುಗಿಲ ಕಡೆಗೆ ಮೋರೆ ಮಾಡುವ ಪ್ರಸಂಗ ಒಂದಿದೆ (ಬರುವುದು). ಅದಕ್ಕಾಗಿಯೆ " ಹೊಟ್ಟೇ ಮ್ಯಾಲ ಕಲ್ಲ ಹಾಕಲೆವ್ವಾ " ಎನ್ನುವ ಪ್ರಸಂಗ ಬಂದಿದೆ. 'ಜೀವಸಾಕಾತು, 'ಲಗೂ ಕಣ್ಮುಚ್ಚಲೆವ್ವಾ' ಎನ್ನುವ ಕಷ್ಟಜೀವಿಗಳ ಶಬ್ದವೂ

ಮೇಲಿನ ಹಾಡಿನಂತೆಯೆ ಇರುವುವು.

ತನ್ನ ಎಲ್ಲ ಜೀವಿತವನ್ನೇ ಏಟ್ಟಲಾರ್ಪಣೆಯನ್ನಾಗಿ ಮಾಡಿದ ಮಹಾಯೋಗಿ ಪುರಂದರ ದಾಸರ ಹೃದಯದಿಂದಲೂ "ಎಲ್ಲಾರು ನೂಡುದು ಹೊಟ್ಟಿಗಾಗಿ," ಎಂಬ ಸ್ವರವು ಚಿಮ್ಮಿದೆ. ಇದು ದಾಸರ ಆಧ್ಯಾತ್ಮ ಸಾಗರ ಮಂಥನದಿಂದ ಹೊರಟಿದ್ದರೆ 'ಹೊಟ್ಟೇ ಮಾಡ್ಯಾನ ಶಿವಾ' ಇದು ನಿತ್ಯವೂ ಅಲೆದಾಡುವ ಬಾಳಿನ ಮಡಲಿನಲ್ಲಿ ಪುಟಿದು ಬಂದ ದೀನಸ್ವರವು. ಇವೆರಡೂ ಒಂದೇ ಸಾಧನಕ್ಕಾಗಿ. ದಾಸರು ಸಾಮಾನ್ಯ ಜನಜೀವನದ ಪುಟ್ಟವನ್ನು ಕಂಡು ಹಾಡಿದ್ದರೆ, ಇದು ದಿನವೂ ಬಳಲುವ ದೀನರಿಂದ ಹಾಡಿದ್ದಿರುವುದು. 'ಎಲ್ಲಾರು ನೂಡುದು ಹೊಟ್ಟಿಗಾಗಿ' ಇದು ಕರ್ತವ್ಯ ಜಾಗರೂಕತೆಯನ್ನು ಹೇಳುತ್ತಿದ್ದರೆ 'ಹೊಟ್ಟೇ-ಮಾಡ್ಯಾನ ಶಿವಾ' ಇದು ದುಡಿದರೂ ಅನ್ನ ಸಿಕ್ಕಲಾರದ ನಿಸ್ಸಹಾಯಕರ ಉಚ್ಛ್ವಾಸವನ್ನು ಸೂಚಿಸುತ್ತದೆ. ಇಂತಹ ನಿಟ್ಟುಸುರಿನಿಂದ ನಮ್ಮ ಕಳ್ಳಪೇಟೆಯ ಹವೆಯನ್ನು ಕೆಡಿಸ-ಬಾರದೆಂದೇ ಮಹಾತ್ಮರು ಉದ್ಯಮದಾರರಿಗೆ 'ಈಗಲಾದರೂ ಲಾಭಬಡಕತನವನ್ನು ಬಿಡಿರಿ' ಎಂದು ಸಂದೇಶವನ್ನಿತ್ತಿರುವರು. 'ದಯೆಯೇ ಧರ್ಮದ ಮೂಲ' ಇದು ಬಸವಣ್ಣನವರ ಅಮೃತ-ವಾಣಿ. ನಮ್ಮಿಂದಲೇ ಧನಿಕರಾಗಿರುವ ಶೆಟ್ಟರು— ಸಾಹು-ಕಾರರು, ಈಗ ಜೀವ ಹೋಗುವ ಸಮಯದಲ್ಲಿಯಾದರೂ ಉಸುರುಗರೆಯುವ ಜನರಿಗೆ ದಯ ತೋರಿಸಿರಿ (ಕಳ್ಳ ಪೇಟೆ-ಮುಚ್ಚಿರಿ) ಎಂದೂ, ಅಧಿಕಾರಿ-ನೋಕರರಿಗೆ ಲಂಚಗುಳಿತನವನ್ನು ಬಿಟ್ಟುಬಿಡಿರೆಂದೂ ಮಹಾತ್ಮರು ಉಪದೇಶಿಸಿರುವರು. ಇದರ-ಲ್ಲಿಯೂ ಈ ಉಸಿರುಗರೆತಕ್ಕೆ ತಡೆಹಾಕುವ ಸಾಮರ್ಥ್ಯವಿರು-ವುದು.

ಮುಳ್ಳುದಾರಿಯನ್ನು ತುಳಿಯುವಾಗ ಮೈತುಂಬ ಕಣ್ಣಿಟ್ಟು ನಿದಾನವಾಗಿ ಸಾಗುವುದಕ್ಕೆ 'ಅನ್ನಧಾನ್ಯಗಳ ವಿಷಯಕ್ಕೆ ಜಿಪುಣರಾಗಿರಿ' ಎಂಬ ಉಪದೇಶವೂ ಅತಿ ಮಹತ್ವವಿದ್ದಿರುವುದು. ಇದರಲ್ಲಿ (೧) ಪರದೇಶಗಳಿಂದ ಧಾನ್ಯ ಬರುವುದೆಂಬುದರ ಮೇಲೆ ಅವಲಂಬಿಸಬೇಡಿರಿ (೨) ನಿತ್ಯವೂ ಉಪವಾಸವಿರಬೇ-ಕಾದ ಪ್ರಸಂಗ ಬರಗೊಡದೆ ಒಪ್ಪತ್ತು ಅಥವಾ ಕಡಿಮೆ ಅನ್ನ-ವನ್ನು ಸೇವಿಸುವುದರಿಂದ ಮನುಷ್ಯನು ಬೇಕಾದಷ್ಟು ವರುಷ ಬದುಕುವನು.

(೩) ಧಾನ್ಯಗಳನ್ನು ಜಿಪುಣತನದಿಂದ ಉಪಯೋಗಿಸುವುದ-ರಿಂದ ಮಿತವ್ಯಯದ ಮಹತ್ವ— ಅದರಿಂದ ಬಾಳಿನಲ್ಲಿ ಅಚ್ಚು-ಕಟ್ಟುತನ ಮೈಯುಂಟಂತಾಗಿ ಸದಾಸುಖಿಯಾಗುವಿರಿ!

ಈಗ ದೇಶದಿಂಗಿನಿಂದ ಕೊಡುತ್ತಿರುವ ಧಾನ್ಯಗಳು ಸಾಲು-ವಂತಿಲ್ಲ. ಸಾಧಾರಣವಾಗಿ ಪ್ರತಿಯೊಬ್ಬರಿಗೆ ೩೫೦ ಕ್ಯಾಲರಿ ಉಷ್ಣತೆಯ ಅನ್ನದ ಆವಶ್ಯಕತೆ ಇದೆ. ಅದಕ್ಕಾಗಿ ಈ ಧಾನ್ಯ ಗಳಿಂದ ಕಡಿಮೆ ಬಿದ್ದಷ್ಟು ಕ್ಯಾಲರಿ, ವಿಟ್ಯಾಮಿನ್ಸ್ ಇತ್ಯಾದಿ ಶರೀರ ಪೋಷಣೆ-ಸಂವರ್ಧನೆಯ ವಸ್ತುಗಳನ್ನು ದೊರಕಿಸುವ ಸಾಧನವೆಂದರೆ ಹಣ್ಣು-ಪಂಪಲ, ಹೈನು-ಹಾಲು, ಕಾಯಿಪಲ್ಲೆ-(ಇವುಗಳ ವಿಷಯವಾಗಿ ಜಯಂತಿಯಲ್ಲಿ 'ನಮ್ಮ ಊಟ' ಎಂಬ ವಿಭಾಗದ ಕೆಳಗೆ ಹಲವಾರು ಬರೆಹಗಳನ್ನು ಬರೆದಿರುವೆ; ಅವನ್ನು ಇನ್ನೊಮ್ಮೆ ನೋಡಲೆಂದೇ ಆಹಾರದ ಗುಣಧರ್ಮ ಇವುಗಳ ವಿಚಾರಮಾಡಿಲ್ಲ). ಸಾಮಾನ್ಯರಿಗೆ ಯಾವಾಗಲೂ ಸಿಕ್ಕುವ ಆಹಾರದ ಮುಖ್ಯಭಾಗವೆಂದರೆ ತೊಪ್ಪಲು ಪಲ್ಲೆ-ಅದಕ್ಕಾಗಿಯೆ ಮಹಾತ್ಮರು, ಸ್ವಲ್ಪೇ ಸ್ಥಳವಿರಲಿ ಅಲ್ಲಿ ತೊಪ್ಪಲ ಪಲ್ಲೆಯನ್ನು ಬೆಳಸಿರೆಂದೂ ಅದು ಹಿತಕರವೆಂದೂ ಹೇಳಿರುವರು. ಇಲ್ಲದಿದ್ದರೆ 'ಹೊಟ್ಟೇ ಮಾಡ್ಯಾನ ಶಿವಾ! ಹೊಟ್ಟೇಮ್ಯಾಲ ಕಲ್ಲ ಹಾಕಲೆವ್ವಾ ರೊಟ್ಟೀ ಜೇಡತಾದ ಜೀವಾ!' ಇದು ತಪ್ಪಿ-ದ್ದಲ್ಲ.

---

(೪೬ನೆಯ ಪುಟದಿಂದ ಮುಂದುವರಿದುದು)

ಒಪ್ಪಿಗೆಯನ್ನಷ್ಟು ಬಿಟ್ಟು ಉಳಿದೆಲ್ಲವ ಒಪ್ಪಿಗೆಯನ್ನು ಪಡೆಯು-ತ್ತಾರೆ. ಇದರಿಂದ ಎಷ್ಟೋ ಅನಾಹುತಗಳಾಗುತ್ತವೆ.

ನನಗೆ ಯಾವಾಗಲೂ ಮನೆಯಲ್ಲಿ ಹಾಡುತ್ತ ಓಡಾಡುವ ಚಟ. ಹೀಗೇ ಒಂದು ಸಲ ಹಾಡುತ್ತಿದ್ದಾಗ, ನಮ್ಮ ಕಕ್ಕಿ ನನಗೆ ಹೇಳಿದರು:

"ಈಗ ನೀನು ಇಷ್ಟು ಹಾಡುತ್ತಿದ್ದಿಯಾ, ನಾಳೆ ನಿನ್ನ ಗಂಡ. ನಿಗೆ 'ಹಾಡು ಎಂದರೆ ತಲೆಕೂಲೆ' ಎನ್ನುವಂತಿದ್ದರೆ ನೀನೇನು ಮಾಡುವಾಕೆ?" ಅದಕ್ಕೆ ನಾನು ಘಟಕ್ಕನೆ, "ನಾನು ಹಾಡು-ವಾರದ ಗಂಡನನ್ನು ಮದುವೇನೇ ಆಗೋದಿಲ್ಲ" ಎಂದು ಉತ್ತರ ಕೊಟ್ಟೆ. ಆ ವೇಳೆಯಲ್ಲಿ ನಾನು ಹಾಗೆ ಉತ್ತರಕೊಟ್ಟೆನೇನೋ ನಿಜ; ಆದರೆ ಮತ್ತೊಂದುವೇಳೆ ನನ್ನ ಮನಸ್ಸು ಸ್ತಿಮಿತ ದಲ್ಲಿದ್ದಾಗ ನನ್ನ ಮಾತನ್ನು ನಾನೇ ವಿಮರ್ಶಿಸಿ ನೋಡಿದೆ. ನಾನು ನಿಜವಾಗಿಯೂ ಹಾಗೆನ್ನಬಹುದೇ? ಇಲ್ಲ, ಎಂದಿಗೂ ಇಲ್ಲ. ನಮ್ಮ ಸ್ತ್ರೀಗೆ ಹಾಗೆ ತನ್ನ ಮನವನ್ನು ಬಿಚ್ಚಿಹೇಳುವ ಧೈರ್ಯವಿರಬೇಕಾದರೆ ಇನ್ನೂ ಎಷ್ಟುಕಾಲಬೇಕೋ? ಒಂದು ಬಗೆಯಿಂದ ಬಾಲವಿವಾಹವು ಒಳ್ಳೆಯದೇ ಸರಿ. ಆ ಪ್ರಕಾರ ವಿವಾಹದ ಸಮಯಕ್ಕೆ 'ಅಷ್ಟವರ್ಷೇ ಭವೇತ್ ಕನ್ಯಾ' ಎಂದಿತ್ತು. ಆದರೆ ಈಗ 'ಇಷ್ಟವರ್ಷೇ ಭವೇತ್ ಕನ್ಯಾ' ಎಂಬುದು ಒಳಕೆಯಲ್ಲಿ ಬಂದಿದೆ. ಕಾಲಾನುಸಾರವಾಗಿ ನನಗೆ ಎರಡು ಅಷ್ಟವರ್ಷಗಳಾದರೂ ಇನ್ನೂ ಮದುವೆಯಿಲ್ಲದಿರುವುದು ಆಶ್ಚರ್ಯಕರ ಮಾತೇನೂ ಅಲ್ಲ.

# ಸಂಸ್ಕೃತಿ ಮತ್ತು ನಾಗರಿಕತೆ

ಶ್ರೀ. ಶಂ. ಬಾ. ಜೋಶಿ, ಧಾರವಾಡ

★

**ಆಂತರಿಕ ಒತ್ತಾಯದಲ್ಲಿ ಸಂಸ್ಕೃತಿಯ ಉಗಮವಿದ್ದರೆ, ಸಾಮೂಹಿಕ ಸಾಮಾಜಿಕ ವ್ಯವಹಾರದಲ್ಲಿ ನಾಗರಿಕತೆಯು ತಲೆದೋರಿದೆ. ಸಂಸ್ಕೃತಿಗೆ ಅಂತಃಶಾಂತಿಯು ಗುರಿ; ನಾಗರಿಕತೆಗೆ ಸಾಮಾಜಿಕ ಉಪಯುಕ್ತತೆಯು ಸಾಧ್ಯ!**

★

**ಮುಖ್ಯವಾಗಿ, ಸಂಸ್ಕೃತಿ ವೈಯಕ್ತಿಕ ನಾಗರಿಕತೆ ಸಾಮಾಜಿಕ.**

ಸಂಸ್ಕೃತಿಯ ಉಗಮ ಒಕ್ಕಲಲ್ಲಿ ಆಯಿತು. ನಾಗರಿಕತೆಯು ವ್ಯಾಪಾರದಲ್ಲಿ ತಲೆಯೆತ್ತಿ ಸಸ್ಯಾದಿಗಳಿಂದ ಆಹಾರ ಪದಾರ್ಥಗಳನ್ನು ಪಡೆದುಕೊಂಡನ್ನು ಅರಿತಂತೆ, ಮಾನವನು ಹೊಟ್ಟೆಗಾಗಿ ಬೇಟೆಯನ್ನು ಬಿಟ್ಟು ಉಳೆಯುವುದನ್ನು ನಿಲ್ಲಿಸಿದನು. ಒಂದೆಡೆಗೆ ಊರಿಡು ನಿಲ್ಲಲು ಕಲಿತನು. ಬೀಡು ಬಿಟ್ಟು ಬಾಳಲಾರಂಭಿಸಿದ. ಆಗ ಊರು, ಬಾಡು, ಬಾಳು, ಬೀಡು, ಪಟ್ಟಿ, ಪಟ್ಟಿಗಳು ಹುಟ್ಟಿಕೊಂಡುವು. ಇವುಗಳೊಡನೆ ಸಂಸ್ಕೃತಿಯೂ ವಿಕಾಸಗೊಂಡು.

ಗಂಡು ಜೀವಿ. ಹೋರೆ, ಹೋರಟಿಗಳಿತನಿಗೆ ಒಲವು' ಹೆಣ್ಣಿಗೆ ಉಳೆಯುವುದಕ್ಕಿಂತ ನೆಲಸುವುದರಲ್ಲಿ ಪ್ರೀತಿ ಹೆಚ್ಚು. ಮಕ್ಕಳು ಮರಿಗಳ ಹೊಣೆ ಹೊರುವುದನ್ನು ಹೆರುವುದನೂ ಸೃಷ್ಟಿಯು ಹೆಣ್ಣಿನ ಪಾಲಿಗೆ ಹಾಕಿರುವುದೂ ಕ್ಕೆ ಕಾರಣವಾಗಿರಬೇಕು. ಆದೇನೆ ಇರಲಿ; 'ಗೃಹಿಣಿಯಿದ್ದು ಗೃಹವೇ ಅಲ್ಲ,' ಎಂಬ ಲೋಕೋಕ್ತಿಯು 'ಮನೆ ಎಂದರೆ ಹೆಣ್ಣು; ಹೆಣ್ಣು ಎಂದರೆ ಮನೆ,' ಎಂಬ ಮಾತನ್ನೇ ದೃಢಪಡಿಸುತ್ತದೆ. 'ನೀವು ಏನೂ ಮನೆ ಮಾಡಿಲ್ಲವೇನ್ರೀ?' ಎಂದೊಡನೆಯಲ್ಲ; ಇನ್ನೂ ಮನೆಯವರನ್ನು ಕರೆತಂದಿಲ್ಲ' ಅಥವಾ 'ಅವನುದುವೆ ಆದ ಮೇಲೆ ಮನೆ ಮಾಡುವವರಿದ್ದಾರೆ'ಎಂಬೀ ಒಗೆಯುತ್ತರವನ್ನು ಕೇಳುವುದು ವಾಡಿಕೆಯಾಗಿದೆ.

ಕೃಷಿಯನ್ನು ಮೊದಲು ಕಂಡುಹಿಡಿದ ಶ್ರೇಯ ಹೆಣ್ಣಿಗಂತೆ! ಗಂಡು ಉಳೆದಾಡಿ, ಹೋರಾಡಿ ಬೇಟೆಯಿಂದಾಹಾರವನ್ನು ಪಡೆದುಕೊಂಡು ಬಂದರೆ, ಹೆಣ್ಣು ತಾನು ಇದ್ದಲ್ಲಿಯೆ ಸುತ್ತು-ಮುತ್ತಲಿನ ಗಡ್ಡೆ-ಗೆಣಸುಗಳಿಂದ, ಹೂ-ಬಿಗುರುಗಳಿಂದ, ಹಣ್ಣು-ಹಂಪಲಗಳಿಂದ ಆಹಾರ ಸಂಪಾದಿಸುವುದನ್ನು ಅರಿತು, ಆ ಗಿಡ-ಬಳ್ಳಿಗಳನ್ನೆ ತನ್ನ ಹಿತ್ತಿಲಲ್ಲಿ ನೆಟ್ಟು ಬೆಳಸುವುದಕ್ಕೆ ಕಲಿತಳು. ಇದುವೆ ಮುಂದಿನ ಎಲ್ಲ 'ಆರಂಭ'ದ ಆರಂಭವಾಯಿತು: ತೋಟ-ಪಟ್ಟಿ, ಗದ್ದೆ-ಹೊಲಗಳ ಸಾಗುವಳಿಯನ್ನು ಮುಂದೆ ಗಂಡುಸು ಕೈಕೊಂಡನು.

ಈ ಹೊರಗಣ ಕೃಷಿಯಂತೆ, ಗಂದಿನ ಹೃದಯದ ಕೃಷಿಗೂ ಹೆಣ್ಣೆ ಮೂಲ ಕಾರಣ; ಮೊದಲ ಕಾರಣ. ತೋಟ-ಪಟ್ಟಿ, ಗದ್ದೆ-ಹೊಲಗಳನ್ನು ಸಾಗುಮಾಡುವ 'ಆರಂಭ'ವನ್ನು ಮಾಡಿ ಹೆಣ್ಣು, ಗಂಡನ್ನು ಜೀವಿಯ ಕ್ರೂರ ಕರ್ಮದಿಂದ ಒಕ್ಕಲತನದ ಸುಸಂಸ್ಕೃತ ಜೀವನಕ್ಕೆ ಮಾರ್ಪಡಿಸಿಕೊಂಡಳು. ಕಾಡಾಡಿಯನ್ನು ನಾಡಿಗನನ್ನಾಗಿ ಮಾಡಿ ಆತನಿಗೆ ನವಜೀವನವನ್ನಿತ್ತಳು.

ತಾನೇ ತನ್ನ ಎಲ್ಲ ಲೋಕದ ಕೇಂದ್ರವೆಂಬಂತೆ, ತನ್ನ ಗುಂಗಿನಲ್ಲಿಯೆ ಸುತ್ತುತ್ತಿದ್ದ ಗಂಡಿಗೆ 'ಪರ'ಲೋಕವೂ ಒಂದುಂಟೆಂಬ ಅರಿವು ಉಂಟಾಗುವುದು ಹೆಣ್ಣಿನಿಂದಲೇ ಮೊದಲು; ಇಲ್ಲಿಂದಲೆ ಆತನ ಹೃದಯದ ಕೃಷಿಗೆ ನಿಜವಾದ ಆರಂಭ. ಸ್ವ-ಅರ್ಥವನ್ನು, ತನ್ನ ಹೆಂಡತಿ-ಮಕ್ಕಳು-ಬಳಗ ಎಂದು ಮುಂತಾಗಿ ಪರ-ಅರ್ಥದಲ್ಲಿ ಮಾರ್ಪಡಿಸಿಕೊಳ್ಳಲು ಕಲಿಯಲಾರಂಭಿಸುವನು. ಇದರಲ್ಲಿ ಆತನು ಮುಂದು-ಮುಂದಿನ ಅಡಿಯಿಟ್ಟಂತೆ ಆತನ ಸ್ವಾರ್ಥವೆಲ್ಲವೂ ಪರಮಾರ್ಥದ ಪರಮೋಚ್ಚ ಬಿಂದುವನ್ನು ಮುಟ್ಟುತ್ತದೆ. ಆ ವ್ಯಕ್ತಿಯ ಸಂಸ್ಕೃತಿಯು ವಿಕಾಸವಾಗುತ್ತ ಹೋಗುವುದು ಈ ಕ್ರಮದಲ್ಲಿಂದೆ.

ಉಳೆಯುವುದನ್ನು ಬಿಟ್ಟು ಮಾನವನು ಒಕ್ಕಲನಾಗಿ, ಕುಟುಂಬಿಯಾಗಿ ನೆಲಸಿದ ಒಳಿಕ, ಆತನ ನಿಜವಾದ ಸಂಸ್ಕೃತಿಗೆ ಆರಂಭವಾಯಿತು. ಈವರೆಗೆ ಮಾನವನು ಪ್ರಕೃತಿಯ ಕೈಗೊಂಬೆಯಾಗಿದ್ದನು; ಇನ್ನು ಮುಂದೆ ಪ್ರಕೃತಿಯನ್ನು ತನ್ನ ಕೈಗೊಂಬೆಯನ್ನಾಗಿಸಿ ಕುಣಿಸುವ ಹಂಬಲವು ಆತನಲ್ಲಿ ಒಡಮೂಡಿತು. ಸಂಸ್ಕೃತಿಯಲ್ಲಿ ಇದು ಹಿತ-ಮಿತವಾಗಿದ್ದರೆ ನಾಗರಿಕತೆಯಲ್ಲಿ ಮಿತಿಯನ್ನು ವಿಚಾರುವ ಪದರಿಕೆಯುಂಟಾಗಿದೆ.

ಒಕ್ಕಲನಿಗೆ— ಕುಟುಂಬಿಗೆ ಪ್ರಕೃತಿಮಾತೆಯ ಮಡಿಲಲ್ಲಿಯೆ ಬೆಳೆಯಬೇಕಾದುದರಿಂದ, ಆತನ ಜೀವನದಲ್ಲಿ ಸಹಜತೆ, ಸ್ವಾಭಾವಿಕತೆಯು ನಾಗರಿಕನಿಗಿಂತ ಹೆಚ್ಚಾಗಿರುತ್ತದೆ. ತೋರುವುದಕ್ಕಿಂತ ಇರುವುದರಲ್ಲಿಯೆ ಇವನಿಗೆ ಆಸಕ್ತಿ ಹೆಚ್ಚು. ಇದುವೆ ತನ್ನ ಸ್ವ-ಧರ್ಮವೆಂದು ಈತನು ನೆರೆನಂಬಿರುತ್ತಾನೆ. ಪ್ರದರ್ಶನಕ್ಕಾಗಿ ಮಾಡುವುದು ಮಾಟಗಾರಿಕೆಯೆಂದು ಈತನ ಭಾವನೆ. ಈತನಿಗೆ 'ಮಾಳ್ಕೆ' ಸಮ್ಮತ; 'ಮಾಟ' ಅಸಮ್ಮತ. ಕೃತಿ ಸರಿ; ಕೃತ್ರಿಮತೆ ಸಲ್ಲ.

ಒಕ್ಕಲನು ಸಾಮಾನ್ಯವಾಗಿ ಆತ್ಮಸಂತುಷ್ಟನು, ಆದುದರಿಂದ

ಇಂತಹ ಹಲಕೆಲವು ಕುಟುಂಬಿಗಳು ಒಕ್ಕಲಾದ ಹಳ್ಳಿಗಳೂ ಆತ್ಮಸಂತುಷ್ಟ. ಆದರಿಂದ ಅವು ಸ್ವಯಂಪರಿಪೂರ್ಣ ಗ್ರಾಮಗಳೆಂಬಂತೆ ಬಾಳಿ ಬದುಕುತಿದ್ದರೆ ಸೋಜಿಗವೇನು?

ಹಳ್ಳಿಗಳು ಸಣ್ಣವು; ಪಟ್ಟಣಗಳಂತೆ ಕಂಡ ಬಟ್ಟೆಯಲ್ಲಿ ಬೆಳೆದುವುಗಳಲ್ಲ. ಅಲ್ಲಿ ಒಕ್ಕಲಾದವರಲ್ಲಿ ಎಲ್ಲರೂ ಒಬ್ಬರೊಬ್ಬರಿಗೆ ಚಿರಪರಿಚಿತರು. ಹಳ್ಳಿಯ ಬಾಳಿನಲ್ಲಿ ಒಳಗೊಂದು ಹೊರಗೊಂದು ಇರುವುದಕ್ಕೆ ಎಡೆಯೆ ಇಲ್ಲ. ಆದುದರಿಂದ ಅಲ್ಲಿ ಮುಚ್ಚು-ಮರೆಗೆ ಇಂಬಿಲ್ಲ. ಹಲವು ಕಾಲದಿಂದ ಒಬ್ಬರೊಬ್ಬರು ನೆರೆಯಲ್ಲಿಯೆ ನೆಲಸಿ ಬೆಳೆದ ಕುಟುಂಬಿಗಳ ನೆಲೆ ಒಬ್ಬರೊಬ್ಬರಿಗೆ ಜೆನ್ನಾಗಿ ಗೊತ್ತು. ಈ ಕಾರಣದಿಂದಲೆ ಹಳ್ಳಿಯಲ್ಲಿ ತೋರಿಕೆಗೆ ಉತ್ತೇಜನವಿಲ್ಲ; ಇರುವಿಕೆಗೆ— ಬಾಳಿಗೇ ಹೆಚ್ಚಿನ ಬೆಲೆ. ಅವರ ದೃಷ್ಟಿಯಲ್ಲಿ 'ಆಡಪೆ ಮಾಡುವನು ರೂಢಿಯೊಳಗೆ ಉತ್ತಮನು.'

ಒಕ್ಕಲನು ಪರ್ತಕನಲ್ಲ. ಆತನು ಉತ್ತಿ ಬಿತ್ತಿ ಬೆಳೆಯುವುದು ಮೊದಲು ಮುಖ್ಯವಾಗಿ ತನಗಾಗಿ; ತನ್ನ ಮನೆಗಾಗಿ. ಇಂತಹ ಮನೋಭೂಮಿಕೆಯಲ್ಲಿ ಮೊಳೆತು ಬೆಳೆದ ಸಂಸ್ಕೃತಿಯೂ ಇದಕ್ಕಿಂತ ಬೇರೆಬಗೆಯದಾಗಿರುವುದು ಸಾಧ್ಯವಿಲ್ಲ. ಹೃದಯದ ಕೃಷಿಯ ಫಲವೆ ಸಂಸ್ಕೃತಿ. ಹೃದಯದ ಕರ್ಷಣ— ಆಕರ್ಷಣ-ವಿಕರ್ಷಣ, ವಿಚಾರ-ವಿಮರ್ಶೆಗಳ ಫಲವಾಗಿ. ಮಾನವನು ತನ್ನ ಮನೋಭೂಮಿಯೊಳಗಣ ಕಸವನ್ನು ಕಿತ್ತಿ ಸದ್ವಿಚಾರ, ಸದ್ಭಾವನೆಗಳ ಒಳ್ಳೆಯ ಬೀಜಗಳನ್ನು ಬಿತ್ತಿ ಮಲುಸಾದ ಬೆಳೆಯನ್ನು ತಕ್ಕೊಳ್ಳುತ್ತಾನೆ. ಆದುದರಿಂದ ಸಂಸ್ಕೃತಿಯು ಮೂಲದಲ್ಲಿ ವ್ಯಕ್ತಿನಿಷ್ಠ; ವೈಯಕ್ತಿಕ. ಅದರ ಗತಿ ಹೊರಗಲ್ಲ; ತನ್ನೊಳಗೇ. ಸಂಸ್ಕೃತಿಯ ಫಲವು ಪರರನ್ನು ಅವಲಂಬಿಸಿಲ್ಲ. ಆದಕಾರಣ ಅದು ಸಾಪೇಕ್ಷವಲ್ಲ; ನಿರಪೇಕ್ಷ. ಆದುದರಿಂದ ಸ್ವಯಂ-ಪೂರ್ಣ.

ಸುಸಂಸ್ಕೃತನಲ್ಲಿ ಒರಟುತನವು ಅಳಿದು ಮೆಲುನುಡಿ ನೆಲೆಗೊಂದಿರುತ್ತದೆ. ಆದರೆ ಅದು ಯಾವ ಪೆರವರನ್ನೂ ಸಮಾಧಾನ—ಸಂತಸಗೊಳಿಸಲು ಆಡುವ ತೋರಿಕೆಯ ಮಾತಲ್ಲ: ನಿಜವಾಗಿ ಎದೆಯಿಂದ ಬಂದ ಒಳ್ನುಡಿ ಅದು. ಅವನು ಆಡುವುದು ಮುಖ್ಯವಾಗಿ ಪೆರನರ ಸಮಾಧಾನಕ್ಕಾಗಿ ಅಲ್ಲ; ಆತ್ಮತೃಪ್ತಿಗಾಗಿ. ಕಿಡುನುಡಿಗಳನ್ನಾಗಲಿ, ತೋರಿಕೆಯ ಮಾತುಗಳನ್ನಾಗಲಿ ಆಡಲು ಆತನ ಅಂತರಂಗವೇ ಒಪ್ಪದು. ಅಪ್ಪಿತಪ್ಪಿ ನುಸುಳಿಕೊಂಡ ಅಲ್ಲದ ಮಾತಿಗಾಗಿ ಆತನ ಎದೆ ಒಳಗೊಳಗೇ ಬೆದೆಬೆದೆ ಬೆಂದು ಬೇಗುದಿಗೊಳ್ಳುವುದು. ಈ ಬಗೆಯ ಬಳಲಿಕೆಗೆ ಗುರಿಯಾಗುವುದಕ್ಕಿಂತ ಹಲವು ಬಾರಿ ಯಾವ ಮಾತನ್ನೂ ಆಡದೆ ಮೊದ್ದನೆನಿಸಿಕೊಂಡರೂ ಮೂಕನಾಗಿರುವುದು ಆತನಿಗೆ ಸೇರುವುದು. 'ಮಾತು ಬಂದಾಗ ಸೋತುಹೋಗುವುದೇ ಮಿಗಿಲು' ಎಂದು ಈತನ ಭಾವನೆ.

ಸುಗ್ಗಿಯ ಹಾಡು ಕುಣಿತಗಳು---ಹಾಡಿಗಾಗಿ ಹಾಡು; ಕುಣಿತಕ್ಕಾಗಿ ಕುಣಿತ. ಇಂತು ಸಂಸ್ಕೃತಿಯು ಯಾವ ಅಂಗವನ್ನೂ ನೋಡಬಹುದು; ಅದೆಲ್ಲವೂ ಅಂತರಾತ್ಮನ ಇಲ್ಲವೆ ದೇವದೇವನ ಸಂತೃಪ್ತಿಗಾಗಿಯಲ್ಲದೆ ಬೇರೆ ವ್ಯಾಪಾರಕ್ಕಾಗಿ ಅಲ್ಲ. ಆದುದರಿಂದ ಗುಡಿಗಳೆಂದರೆ ಅವು ನಮ್ಮ ಎಲ್ಲ ಸಂಸ್ಕೃತಿಯ ಕೇಂದ್ರ. ವರ್ಷದ ಎಲ್ಲ ಋತುಗಳಲ್ಲಿಯೂ ಅಲ್ಲಿ ಸವಿಾಜೀನವಾಗಿ ಸಂಸ್ಕೃತಿಯ ಸಮ್ಯಕ್ ಆರಾಧನೆ—ಸಮಾರಾಧನೆ ನಡೆದುದನ್ನು ಕಾಣಬಹುದು. ವೇದ, ಶಾಸ್ತ್ರ, ಆಗಮ, ಪುರಾಣ, ತಂತ್ರ-ಮಂತ್ರ, ನೃತ್ಯ, ಸಂಗೀತ, ಚಿತ್ರಕಲೆ, ಆಟ, ಕುಸ್ತಿ ಮೊದಲಾದುವೆಲ್ಲವೂ ಊರ ದೇವರ ಆರಾಧನೆಯ ನಿಮಿತ್ತದಿಂದಲೆ ವಿಶಿಷ್ಟರೀತಿಯಲ್ಲಿ ಬೆಳೆದುಕೊಂಡುಬಂದುದನ್ನು ಕಂಡುಕೊಳ್ಳಬಹುದಾಗಿದೆ.

ಆದರೆ ನಾಗರಿಕತೆಯು ಏಕಾಸಗೊಂಡ ರೀತಿಯು ಬೇರೆಯಾಗಿದೆ ನಗರದಿಂದ ಒಂದುದು ನಾಗರಿಕತೆ. ಹಳ್ಳಿಗಳಿಗಿಂತ ನಗರಗಳ ಜೀವನದ ರೀತಿಯೆ ಬೇರೆ. ನಗರದ ವಿಸ್ತಾರವು ದೊಡ್ಡದು; ಜನಸಂಖ್ಯೆಯೂ ಹೆಚ್ಚು. ಅಲ್ಲಿ ನಾನಾದೇಶದ ಜನರ ಬರು-ಹೋಗು, ದಿನಾಲು ಎಡೆಬಿಡದೆ ನಡೆದಿರುವುದು. ಒಂದೇ ಓಣಿಯಲ್ಲಿ—ಅದೇಕೆ, ಒಂದೇ ಮನೆಯಲ್ಲಿಯೆ—ಕೆಲ ಬಲದಲ್ಲಿ ಹಲವು ವರುಷಗಳಿಂದ ಬಿಡಾರಮಾಡಿಕೊಂಡಿದ್ದರೂ ಒಬ್ಬರೊಬ್ಬರ ಮಾಪಕತೆ ಸೋಗಲಿ, ಒಬ್ಬರೊಬ್ಬರನ್ನು ಕಣ್ಣೆತ್ತಿ ನಹ ನೋಡದೆ ಇರುವ ಕುಟುಂಬಗಳು ಎಷ್ಟೋ ಇರುತ್ತವೆ.

ಅಲ್ಲದೆ ಪಟ್ಟಣದಲ್ಲಿ ಜೀವನವ್ಯಾಪಾರ, ವ್ಯವಹಾರದ ಒತ್ತಡವೂ ವಿಪರೀತ. ಅದರ ನೆಳವಿನಲ್ಲಿ ಸಿಕ್ಕ ನಾಗರಿಕನಿಗೆ ಸ್ವಲ್ಪ ಅತ್ತಿತ್ತ ನೋಡಲಿಕ್ಕೂ ಪುಡುವಿರುವುದಿಲ್ಲ. ಆತನ ಗತಿ ನಡಿಗೆಯಲ್ಲ, ಓಟ—ವಿದ್ಯುದ್ವೇಗ. ಆದರಿಂದ ತನ್ನ ಎಡಬಲದಲ್ಲಿಯೆ ಏನು ನಡೆದಿದೆ ಎಂಬುದರಲ್ಲಿ ಮನಸ್ಸು ಹಾಕಲು ಸಹ ಆತನಿಗೆ ಅವಕಾಶವೆ ಸಿಕ್ಕದು.

ಆದರಿಂದ ಯಾರು ಏನು ಇದ್ದಾರೆ—ಎಂಬುದು ನಿಜವಾಗಿಯೂ ತಿಳಿಯಲು ಅಲ್ಲಿ ಅನುಕೂಲತೆಗಳಿಲ್ಲ. ಏನು ತೋರಿಸಿಕೊಳ್ಳುತ್ತಾರೊ ಅದನ್ನೆ ನಿಜವೆಂದು ಗ್ರಹಿಸಿ ಮುಂದೆ ಸಾಗಬೇಕಾಗುತ್ತದೆ. ಆದುದರಿಂದ ನಗರಗಳು ಹಿರಿದಾಗಿರುವಷ್ಟು ಅಲ್ಲಿ ಇರುವಿಗಿಂತಲೂ ತೋರಿಕೆಗೇ ಮಹತ್ತ್ವವು ಬರುವುದು ಅನಿವಾರ್ಯವಾಗಿದೆ. ಬಹಳ ದೊಡ್ಡ ಪಟ್ಟಣಗಳು ಅಲ್ಲದಲ್ಲಿ ಅಲ್ಲಿಯವರ ಬೆಲೆ ಒಬ್ಬರೊಬ್ಬರಿಗೆ ಜೆನ್ನಾಗಿಯೆ ತಿಳಿದಿರುವುದರಿಂದ, ಅವರು ಪರಸ್ಪರರನ್ನು ಯಾವುದೊಂದು ಕೆಲಸದ ನಿಮಿತ್ತದಿಂದ ಕಾಣುವಾಗ, ತಮ್ಮ ಯೋಗ್ಯತೆಯನ್ನು ತೋರಿಸಿಕೊಳ್ಳುವದಕ್ಕಾಗಿ ಯಾವ ಹೆಚ್ಚಿನ ಉಡುಪು-ತೊಡಪುಗಳನ್ನೂ ಹಾಕಿಕೊಳ್ಳುವ ಅವಶ್ಯಕತೆಯು ಇರುವುದಿಲ್ಲ. ಆದರೆ ದೊಡ್ಡ ನಗರಗಳಲ್ಲಿ ಎಲ್ಲರೂ ಒಬ್ಬರೊಬ್ಬರಿಗೆ ಸಾಮಾನ್ಯವಾಗಿ ಹೊಸ. ಒಂದೇ ಉದ್ಯೋಗದಲ್ಲಿ ಜನರ ಅಂತರಂಗದ ಯೋಗ್ಯತೆ ಫಕ್ಕನೆ ಮತ್ತೊಬ್ಬರಿಗೆ ಗೊತ್ತಾಗಲು ಹೊರಗಿನ ವೇಷ-ಭೂಷಣಗಳು,

ಪದವಿ-ಪ್ರಶಸ್ತಿಗಳು ಇವುಗಳ ಹೊರತು ಬೇರೊಂದು ಗತಿಯೆ ಇಲ್ಲ. ಹೀಗಾಗಿ ನಾಗರಿಕತೆಯಲ್ಲಿ ತಮ್ಮನ್ನು ತೋರಿಸಿಕೊಳ್ಳುವ ಕೌಶಲ್ಯಕ್ಕೆ ಒಂದು ವಿಶೇಷ ಮಹತ್ವವು ಪ್ರಾಪ್ತವಾದುದು ಅನಿವಾರ್ಯ.

ವ್ಯಕ್ತಿಯ ಆಂತರಿಕ ಬದುಕಿನಲ್ಲಿ ಸಂಸ್ಕೃತಿಯ ಉಗಮವಾದರೆ, ಸಾಮೂಹಿಕ-ಸಾಮಾಜಿಕ ವ್ಯವಹಾರದಲ್ಲಿ ನಾಗರಿಕತೆಯು ತಲೆದೋರಿದೆ. ಸಂಸ್ಕೃತಿಯಲ್ಲಿ ಅಂತಃಶಾಂತಿಯು ಗುರಿ, ನಾಗರಿಕತೆಯಲ್ಲಿ ಸಾಮಾಜಿಕ ಉಪಯುಕ್ತತೆಯು ಸಾಧ್ಯ. ಸಂಸ್ಕೃತಿ ಸ್ವಂತಕ್ಕಾಗಿ; ನಾಗರಿಕತೆ ಪರರಿಗಾಗಿ. ಸಂಸ್ಕೃತಿಯು ಹುಡುಕಾಟ ಇರುವಿನಲ್ಲಿ, ನಾಗರಿಕತೆಯೆ ಹೆಮ್ಮೆ ತೋರಿಕೆಯಲ್ಲಿ. ಸಂಸ್ಕೃತಿಯು ಜೀವನದ ಒಳಮೆಯ್; ನಾಗರಿಕತೆಯು ಹೊರಮೆಯ್.

ಸಂಸ್ಕೃತಿಯೊಳಗಿಂದಲೆ ನಾಗರಿಕತೆಯ ಮೆಯ್ಗೊಂಡಿರುವುದು ನಿಜ; ಆದರೂ ನಾಗರಿಕತೆಗೂ ಸಂಸ್ಕೃತಿಗೂ ವ್ಯತ್ಯಾಸವಿರುವುದು ಸುಳ್ಳಲ್ಲ. ಮುಂಜಾವು-ಮಧ್ಯಾಹ್ನಗಳಲ್ಲಿ ಒಂದು ಇನ್ನೊಂದಕ್ಕೆ ಕಾರಣವಾಗಿದ್ದರೂ, ಅವೆರಡಕ್ಕೂ ಬೇರೆಯೆಂಬುದೂ ಅಷ್ಟೇ ನಿಜ. ಮುಂಜಾವು-ಮಧ್ಯಾಹ್ನಗಳು ಭಿನ್ನವಾಗಿದ್ದರೂ 'ಅವು ಇಂತಹ ಬಿಂದುವಿನಲ್ಲಿಯೇ ಬೇರೆಯಾದುವು' ಎಂದು ಗೆರೆಹಾಕಿ ಹೇಳುವುದು ಅಸಾಧ್ಯ. ಹೀಗೆ ಸಂಸ್ಕೃತಿ ಮತ್ತು ನಾಗರಿಕತೆಗಳ ನಡುವಿನ ಸಂಬಂಧವೂ ಇದ್ದು ನಿಕಟವಾದರೂ ಭಿನ್ನ— ಮತ್ತು ಭಿನ್ನವಾದರೂ ನಿಕಟವಾದುದಾಗಿದೆ.

ನಾಗರಿಕತೆಯು ಸಾಮೂಹಿಕ— ಸಾಮಾಜಿಕ ವ್ಯವಹಾರದಲ್ಲಿ ತಲೆದೋರುವುದರಿಂದ, ಅದು ವ್ಯಕ್ತಿಯ ಆಂತರಂಗದ ಜೀವನದಿಂದ ಕೆಲವೊಂದು ಬೇರೆಯಾಗಿದ್ದರೂ ಇರಬಹುದಾಗಿದೆ; ಇದರಿಂದ ಹಲವರ ಗೃಹಜೀವನಕ್ಕೂ ಸಾಮಾಜಿಕ ಜೀವನಕ್ಕೂ ತುಂಬ ವ್ಯತ್ಯಾಸವಿದ್ದುದು ಕಂಡುಬರಬಹುದು. ಹೊರಗೆ ಬಂದಾಗ ಎಂದರೆ ಸಾಮಾಜಿಕ-ಸಾಮೂಹಿಕ ವ್ಯವಹಾರದಲ್ಲಿ ಒಂದು ವ್ಯಕ್ತಿಯು ತನ್ನ ನಯದ ವಿನಯದ ಚಿನ್ನಣದ ಕುಸುರಿಯ ರಸವಾತುಗಳಿಂದ ಕೇಳುವವರನ್ನು ಮೆಯ್ಮರೆವಂತೆ ಮಾಡುವುದು. ಆ ಮಾತುಗಳನ್ನು ಕೇಳಿ ಆ ವ್ಯಕ್ತಿಯ ಇರವೂ ಅಷ್ಟೇ ರಸಮಯವಾಗಿದೆಯೇನೊ ಎಂಬ ಹಂಬಲದಿಂದ ಹತ್ತಿರಹೋದಲ್ಲಿ ನಿರಾಶೆಯಿಂದ 'ಅಯ್ಯೋ!' ಎಂದೆ ಹಿಂದಿರುಗುವ ಹೊತ್ತೂ ಬರಬಹುದು.

ಈ ಕಾರಣದಿಂದಲೆ, ಇಂದಿನ ನಾಗರಿಕತೆಯಲ್ಲಿ ವ್ಯಕ್ತಿ ಮತ್ತು ಅವನ (ಳ) ಸಾರ್ವಜನಿಕ ಜೀವನ ಇವುಗಳಲ್ಲಿ ಯಾವುದಕ್ಕೆ ಎಷ್ಟು ಬೆಲೆ?— ಎಂಬ ಪ್ರಶ್ನೆಯು ತಲೆದೋರಿತ್ತು, ಅದನ್ನು ಕುರಿತ ಚರ್ಚೆ-ವಿವಾದಗಳು ಆಗಾಗ ನಡೆಯುವುವು.

'ಒಂದೇ ಗುಟುಕು' ಎಂಬ ನಾಟಕವನ್ನು ಬರೆದು ಕುಡುಕತನದ ಭೀಕರ ಚಿತ್ರವನ್ನು ಜನರ ಕಣ್ಣೆದುರು ನಿಲ್ಲಿಸಿ ಮದ್ಯಪಾನನಿರೋಧದ ಸತ್ಕಾರ್ಯವನ್ನು ಮಾಡುವ ಸಾಹಿತಿಯು ತಾನೇ ಕುಡುಕನಾಗಿದ್ದರೆ! 'ನಾನೃತಿಕಃ ಕುರುತೇ ಕಾವ್ಯಮ್' ಎಂಬಂತೆ ಓದುಗರಲ್ಲಿ ಗುರುತ್ವಭಾವವು ಉಂಟಾಗುವ ಹಾಗೆ ತನ್ನ ಕಾವ್ಯ-ಗೀತಿಕೆಗಳಿಂದ ಜನರನ್ನು ಮುಗ್ಧರನ್ನಾಗಿ ಮಾಡಿದ ಕವಿಯ ಹೊರಗಣ 'ಕೃತಿ'ಗೂ ಮನೆಯೊಳಗಣ ಕೃತಿಗೂ ತಾಳಮೇಳವೇ ಇಲ್ಲದಿದ್ದರೆ! ದೇಶಭಕ್ತನೆನಿಸಿ, ಅಧ್ಯಾಪಕ-ಪ್ರಾಧ್ಯಾಪಕನಾಗಿ ಆತನು ವ್ಯಾಸಸೀರೆಯಿಂದ ಆಡುವ ಮಾತಿಗೂ ವ್ಯವಹಾರದಲ್ಲಿ ನಡೆವ ರೀತಿಗೂ ಹೊಂದಿಕೆಯೆ ಆಗದಿದ್ದರೆ!.....

ಇಂತಹ ಉದಾಹರಣಗಳನ್ನು ಇನ್ನೂ ಬೇಕಾದಷ್ಟು ಹೇಳಬಹುದಾಗಿದೆ. ಇವು ಕಾಲ್ಪನಿಕ ದೃಷ್ಟಾಂತಗಳಾಗಿರದೆ ದಿನಾಲು ಕಣ್ಣಿಗೆ ಕಾಣುವ ಜೀವಂತ ವ್ಯಕ್ತಿಗಳೇ ಹಲವಿರಬಹುದು. ಆದರೆ ಇಂತಹರೆಲ್ಲರೂ, ಯಾತಕ್ಕೂ ಬಾರದ ತ್ಯಾಜ್ಯರೆಂದು ಹೇಳಲಿಕ್ಕಾದೀತೇ? ನಮ್ಮ ನಾಡಿನ ಸಾಂಸ್ಕೃತಿಕ ಜೀವನದಲ್ಲಿ ಅಂತಹ ಕಾಲವು ಒಂದಾಗಿಹೋದುದು ನಿಜ. 'ಆಚಾರ ಹೇಳಿ ಬದನೇ ಕಾಯಿ ತಿಂಬವರು' ಎಂದು ಈ ವರ್ಗದವರನ್ನು ಹೀಯಾಳಿಸಿದ್ದಾಗಿದೆ. ಸಾಮಾಜಿಕ ಬಹಿಷ್ಕಾರಾದಿಗಳನ್ನು ಪ್ರಯೋಗಿಸಿ ಸಮಾಜವು ಇಂತಹರನ್ನು ತನ್ನ ಯಥಾಶಕ್ತಿಯಾಗಿ ಶಿಕ್ಷಿಸಿದೆ; ಇಂತಹರ ಮೇಲಣ ತನ್ನ ರೋಷವನ್ನು ವ್ಯಕ್ತಪಡಿಸಿದೆ.

ಈ ಪರಿಸ್ಥಿತಿಯು ಇಂದಿಗೂ ಸಂಪೂರ್ಣ ಬದಲಿಸಿಲ್ಲ. ಆದರೂ ಇದರೊಳಗಣ ಮೊದಲಿನ ತೀಕ್ಷ್ಣತೆಯು ಈಗ ಉಳಿದಿಲ್ಲ. ಮೊದಲಿನ ಸಾಂಸ್ಕೃತಿಕ ದೃಷ್ಟಿಯೊಳಗಣ ನೈತಿಕವಿಚಾರದ ತೀವ್ರತೆಯು, ಉಗ್ರತೆಯು, ಆಧುನಿಕ ನಾಗರಿಕತೆಯೊಳಗಿನ ಸಾಮಾಜಿಕ ಉಪಯುಕ್ತತಾವಾದದ ಮೂಲಕ ಎಷ್ಟೊ ಕಡಿಮೆಯಾಗಿದೆ. ಆ ಹಿಂದಿನ ಏಕಾಂತಿಕ ಕೇವಲವಾದವು ಈಗಲೂ ಇದ್ದಿದ್ದರೆ, ಭಟ್ಟರೂ ಆಚಾರ್ಯರೂ ತಮ್ಮ ಮಕ್ಕಳಿಗೆ ರೂಪೋಪಜೀವಿಯಾದ 'ವೆಂಕಾಸಾನಿಯ' ವಿದ್ಯಾರ್ಥಿವೇತನವನ್ನು ಸ್ವೀಕರಿಸಲು ಸಿದ್ಧರಾಗುವುದು ಎಂದೂ ಸಾಧ್ಯವಿದ್ದಿಲ್ಲ.

ನಾಗರಿಕತೆಯಲ್ಲಿ ಉಪಯುಕ್ತತೆಯ ದೃಷ್ಟಿಯು ಹೆಚ್ಚು. ಆದುದರಿಂದ ಅದು ಯಾವುದೊಂದು ವ್ಯಕ್ತಿಯೊಳಗಿನ ನಡೆ-ನುಡಿಗಳೊಳಗಣ ಕೆಲವೊಂದು ಕುಂದು-ಕೊರತೆಗಳನ್ನು ಕಡೆಗಣಿಸಲು ಸಿದ್ಧವಿರುತ್ತದೆ. ಅಂಕಿ-ಸಂಖ್ಯೆಗಳ ಆಳವಾದ ಅಭ್ಯಾಸಮಾಡಿ, ತಮ್ಮಪಕ್ಷವನ್ನು ಪರಿಣಾಮಕಾರಿಯಾಗಿ ಮಂಡಿಸಲು ಸಮರ್ಥನಾದ ಉಮೇದುವಾರನು, ಕೇವಲ ತನ್ನ ಮನೆಯವನ ಮೇಲೆಯೇ ನಜ್ಜಿ ಕೊಂಡಿರುವನೊ, ಅಥವಾ ಹೊರಗೂ ನಲಿದಾಡುವಲ್ಲಿ ಆತನಿಗೆ ಇಷ್ಟವೊ ಎಂಬುದನ್ನು ಕೌನ್ಸಿಲ್ ಮತದಾರರು ಎಷ್ಟೂ ಜಾರಿ ದುರ್ಲಕ್ಷ್ಯಿಸಬೇಕಾಗುವುದು. ಏಕೆಂದರೆ ಬಾಯಿಲ್ಲದ ಬರಿ ಮಡಿವಂತರು ಅಲ್ಲಿ ಹೋಗಿ ತಮ್ಮ ಕೆಲಸವಾಗದೆಂದು ಜೆನ್ನಾಗಿ ಮನಗಂಡಿರುತ್ತಾರೆ.

ನಾಗರಿಕತೆಯಲ್ಲಿ ಈ ಬಗೆಯಾಗಿ ಉಪಯುಕ್ತತೆಗೇ ಹೆಚ್ಚು ಮಹತ್ವವು ಬಂದಿರುವುದರಿಂದ, ಸಾಂಸ್ಕೃತಿಕ ದೃಷ್ಟಿಯೇ ಪ್ರಧಾನವಾಗಿರುವಾಗಿನ ಬೆಲೆಗಳೆಲ್ಲ ಇಂದು ಬದಲಾಗುತ್ತಿವೆ. ಸುಸಂಸ್ಕಾರವಂತರಾಗಿ ಶಾಂತಿಯಿಂದ ಏಕಾಂತದಲ್ಲಿ ಬಾಳುವುದಕ್ಕಿಂತಲೂ, ತಮ್ಮ ಸಾಮಾಜಿಕ ಉಪಯುಕ್ತತೆ.

ಯನ್ನು ಹೆಚ್ಚಿಸಿಕೊಂಡು, ಮಿಗಿಲಾದ ನಾಗರಿಕರೆನಿಸಿ, ಹೆಸರಾದವರಾಗಿ ಮೆರೆಯಬೇಕೆಂಬ ಹಂಬಲವು ಜನಗಳಲ್ಲಿ ಹೆಚ್ಚಾಗುತ್ತಿದೆ. ಯಾವ ಏರಾಟ, ಹೋರಾಟಗಳ ಗೋಜಿಗೂ ಹೋಗದೆ, ಒಬ್ಬರೊಬ್ಬರಿಗೆ ಹಿತದವರಾಗಿ, ಶಾಂತಿಯಿಂದ ಒಂದಿಕೊಂಡು ಹೊಂದಿಕೊಂಡು ಬಾಳಬೇಕೆಂಬುವಾಗ, ಈರ್ಷೆ-ಸ್ಪರ್ಧೆಗಳಿಲ್ಲದ ಮೂಲಕ, ಮಾನವನೊಳಗಿನ ಅನೇಕ ಒಳ್ಳೆಯ ಸುಪ್ತಶಕ್ತಿಗಳು ಜಾಗೃತವಾಗಿ ಕೆಲಸಕ್ಕೆ ತೊಡಗುವ ಆವಶ್ಯಕತೆಯೆ ಇರುವುದಿಲ್ಲ. ಅದರಿಂದ ಸಂಭಾವಿತ-ಸಜ್ಜನರೆಂಬುವರ ಸಭ್ಯತನದೊಂದಿಗೆ ಅವರಲ್ಲಿ ಒಂದು ಬಗೆಯ ಮೊದ್ದುತನವೂ ಬೆಳೆದುಬರುತ್ತದೆ. ನಾಗರಿಕತೆಯಲ್ಲಿ ಆಕರ್ಷಕವಾದ ಜುರುಕುತನ, ಚಾಪಲ್ಯ, ಮಾಯಾವಿಭ್ರಮಗಳ ವಿಕಾಸಕ್ಕೆ ವಿಶೇಷವಾದ ಅವಕಾಶವಿರುತ್ತದೆ.

ನಾಗರಿಕತೆಯ ಜೀವನದಲ್ಲಿ, ಅಲ್ಲಿಯ ಪರಿಸ್ಥಿತಿಯ ಒತ್ತಾಳುದಿಂದ ಅದರಲ್ಲಿ ವಿಶೇಷ ಮುನ್ನುಗ್ಗಬೇಕೆಂಬ ಹಂಬಲದ ಹಲವರಿಗೆ ಒಳಗೂ ಹೊರಗೂ ತಮ್ಮ ವ್ಯಕ್ತಿತ್ವವನ್ನು ಒಂದೇ ಬಗೆಯಾಗಿ ಇರಿಸಿಕೊಳ್ಳುವುದು ಅಸಾಧ್ಯವಾಗುತ್ತದೆ. ಒಬ್ಬ ಒಳ್ಳೆಯ ವಿದ್ಯಾವಂತನಿದ್ದು ಅತನು, ತನ್ನ ವಿದ್ಯೆಯ ಬೆಲೆಯನ್ನರಿತು ಯಾರು ತನ್ನ ಹತ್ತಿರ ಬರುವರೊ ಬರಲಿ; ಅವರಿಗೇ ತಾನು ತನಗೆ ತಿಳಿದುದನ್ನು ಹೇಳತಕ್ಕವನು—ಎಂದು ತನ್ನ ಮನೆಯಲ್ಲಿಯೆ ನಿಂತರೆ, ಅವನ ಯೋಗ್ಯತೆಯು ಹೊರಲೋಕಕ್ಕೆ ಗೊತ್ತಾಗಲು ಕೆಲವೊಂದು ಕಾಲಾವಧಿ ಬೇಕಾಗಬಹುದು. ಅಥವಾ ಅಜವಿಯ ಮಲ್ಲಿಗೆಯಂತೆ ಅತನು ಯಾರಿಗೂ ಗೊತ್ತಾಗದೆಯೂ ಹೋಗಬಹುದು. ಅದರೆ ನಗರದ ಜೀವನದಲ್ಲಿ ಇದು ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ ಅಸಾಧ್ಯವಾಗಿದೆ. ಏಕೆಂದರೆ, ಮೊದಲು ಇಂತಹ ವೃತ್ತಿಯವರ ಉಪಜೀವನವೇ ಕಷ್ಟತರವಾಗುವ ಸಂಭವವಿದೆ. ಕೈಗೆ ನಿಲುಕುವಂತಿರುವಾಗ, ಧನ-ಮಾನಗಳ ಆಕಾಂಕ್ಷೆಯು ಮಾನವನನ್ನು ಸುಮ್ಮನೆ ಬಿಡುಕೊಳ್ಳಗೊಡುವುದಿಲ್ಲ; ಇದು ಇನ್ನೂ ಒಂದು ಕಾರಣ. ಇಂತಹ ಹಲವು ಕಾರಣಗಳ ಮೂಲಕ ನಗರ ಜೀವನದಲ್ಲಿ ಮನುಷ್ಯನಿಗೆ, ಇರುವುದಕ್ಕಿಂತ ಇನ್ನೂ ಹೆಚ್ಚಾಗಿ ಅದು ತನ್ನಲ್ಲಿ ಉಂಟೆಂದು ತೋರಿಸಿಕೊಳ್ಳುವ ಚಪಲವು ತಲೆದೋರುವುದು ಸ್ವಾಭಾವಿಕ.

ಇದರಿಂದ, ನಾಗರಿಕತೆಯು ವಿಕಾಸದೊಡನೆ ಇಬ್ಬಗೆಯ ಸಡೆಪಳೆಯ ಒಂದು ಅನಿವಾರ್ಯವಾದ ಕುತ್ತವನ್ನು ಎದುರಿಸುವ ಹೊತ್ತು ಬಂದಿದೆ. ಒಬ್ಬ ಮಾತುಗಾರನಿಗೆ ತಾನು ಮಿಗಿಲಾದ ವಾಗ್ಮಿ ಅಥವಾ ವಾಗ್ಮಿಯಾಗಿರುವೆನೆಂಬ ಆತ್ಮವಿಶ್ವಾಸವು ಉಂಟಾಗುವ ಸಂದರ್ಭಗಳು ಒದಗುವವು. ತನ್ನ ಮಾತುಗಾರಿಕೆಗೆ ಮೆಚ್ಚಿ ತಲೆದೂಗಿ ಜನರು ಮೈಮರೆಯುವುದನ್ನು ಅತನು ನೋಡುವನು. ಮಾತನಾಡುವ ಕಲೆಯನ್ನೇ ಇನ್ನೂ ಅಭ್ಯಾಸದಿಂದ ಸಾಧಿಸಿ, ಅದರಲ್ಲಿ ನೈಪುಣ್ಯವನ್ನು ಪಡೆಯುವನು. ಈ ತೆರನಾದ ಅತನ ಸಾಧನಾಯೋಗದ ಫಲವಾಗಿ ಅತನು ಆಡುವ ಸಿದ್ಧಿಯನ್ನು ಪಡೆಯುವುದರಲ್ಲಿ, ಮಾಡುವ—ಹಾಗೆ ನಡೆನ—ಶಕ್ತಿಗೆ ಎಂ ಎತ್ತಾನೆ.

ಮಾನವನು ತ ಎಂತಃಶಕ್ತಿಯನ್ನು ಯಾವುದೊಂದು ನಿಟ್ಟಿನಲ್ಲಿ ವಿಶೇಷವಾಗಿ ಬಳಸಿ, ಅದರಲ್ಲಿ ಪ್ರಾವೀಣ್ಯವನ್ನು ಪಡೆಯುವ ಹೊತ್ತಿಗೆತೆನು ಇನ್ನುಳಿದ ಕೆಲವೊಂದು ಭಾಗದ ತನ್ನ ವಿಕಾಸಕ್ಕೆ ಮಾಗ್ಗಬೇಕಾಗುತ್ತದೆ. ಅದರೆ ಈ ಅರಿವು ಯಾವಾಗಲೂ ಜಾಗೃತವಾಗಿದ್ದ ಜನಗಳು ವಿರಳ. ತಾವು ಯಾವುದಾದರೊಂದು ಅಂಗಸಾಮರ್ಥ್ಯ ಅಥವಾ ಬುದ್ಧಿಭಾವಗಳ ಸಿದ್ಧಿಯು ಪಡೆದೊಡನೆ, ತಮ್ಮಲ್ಲಿ ಯಾವ ಕೊರತೆಯೂ ಇಲ್ಲ—ತ್ಯಕ್ತಪೂರ್ಣರೆಂಬಂತೆ ನಟಿಸಿ, ಜನರನ್ನೂ ಆ ಬಗೆಯ ಭ್ರಮೆಯಲ್ಲಿರಿಸಲು ಹವಣಿಸುತ್ತಾರೆ. ಆ ಬಗೆಯ ಸಿದ್ಧಿಯನ್ನು ಪಡೆದವನಿಗೆ ಮಾರುಹೋಗಿ, ತಮ್ಮ ವಿವೇಕಾದಿಗಳನ್ನು ಕಳೆದುಕೊಂಡ ಅನುಯಾಯಿಗಳೂ, ಇನ್ನಷ್ಟು ಧ್ವನಿಯನ್ನು ಎತ್ತರಿಸಿ ಅರಚಿದವರಲ್ಲಿಯೂ ಆ ಭ್ರಾಂತಿಯನ್ನು ಹೆಚ್ಚಿಸುವ ಹಾಡನ್ನು ಹೇಳುವ ಹೊಗಳುಭಟ್ಟರೂ (ಸೂತ-ಶುನಕರು) ಆಗುವರು!

ಸಂಸ್ಕೃತಿ ಒಕ್ಕತನದ ಪಿನ್ನೆಲೆಯಲ್ಲಿ ಬೆಳೆದಿದೆ; ನಾಗರಿಕತೆ ವ್ಯಾಪಾರೀ ಮನೋಭೂಮಿಕೆಯಲ್ಲಿ ವಿಕಾಸಗೊಂಡಿದೆ. ಒಕ್ಕಲನು ತನಗಾಗಿ ಬೆಳೆದನು, ವರ್ತಕನು ಅಂಗಡಿ ಹಚ್ಚಿದನು. ನಾಗರಿಕತೆಯಲ್ಲಿ ಎಲ್ಲ ವ್ಯವಹಾರಗಳೂ ಒಂದು ವ್ಯಾಪಾರವೆಂದರೆ ಬ್ಯಾಗಲಿಕ್ಕಿಲ್ಲ. ಆದುದರಿಂದ ಅಲ್ಲಿ ತಮ್ಮ ಸರಕಿಗೆ (ಗುಣಕ್ಕೆ) ಬೆಲೆ ಬರಲು ಜನರನ್ನು ನೆಳವ ಚಾಪೀಲಾತು, ಹೊಗಳಿಕೆ ಪ್ರಕಟನೆಗಳ ಸುರಿಮಳೆಯಾಗುವುದು ಕ್ರಮಪ್ರಾಪ್ತವಾಗಿದೆ.

ಆದರೆ, ಅನಿವಾರ್ಯವಾದ ಪ್ರಕಟನೆ ಬೇರೆ. ಅತಿರಂಜಿತ ಪ್ರಕಟನೆಯಿಂದ, ಹೊಗಳುಭಟ್ಟರ ಹೊಗಳಿಕೆಯಿಂದ ಜನಗಳು ಮೋಸಹೋಗುತ್ತಿದ್ದುದನ್ನು ಕಂಡಮೇಲೂ, ಆ ಬಗೆಯ ಬಾಯ್ಬಳಕ, ಭಜಕತನವನ್ನು ಹಾಗೆಯೆ ಸಾಗಗೊಡುವುದು ಮಾತ್ರ ನಿಂದ್ಯವಾಗಿದೆ. 'ಹೊಗಳಿ ಹೊಗಳಿ ಎನ್ನವರು ಎನ್ನ ಹೊನ್ನ ಕೂಲಕ್ಕೆ ದಿಸಿದರು' ಎಂದು ಹೊಗಳಿಕೆಯ ಮಾಯಾಜಾಲವನ್ನು ಬಡಿದು ಸರಿಸುವಂತಹ ಶ್ರೀಬಸವಣ್ಣನಂತಹ ಸಜ್ಜನಿಕೆಯು ಸ್ವಲ್ಪ ಜನರಲ್ಲಿ ಮಾತ್ರ ಇರಬಲ್ಲದು. ತಮಗೆ ಮಹಾತ್ಮನೆಂದರೆ ಹೊಗಳಿ ಜನಗಳ ಗುಡಿಕಟ್ಟಿ ಪೂಜಿಸುವುದನ್ನು ನಿಷ್ಠುರವಾಗಿ ಅಲ್ಲಗಳೆದು, ಲೆಕ್ಕಕ್ಕೆ ಬಚ್ಚರಿಕೆಯ ಮಾತುಗಳನ್ನು ಹೇಳುವ ಶ್ರೀಗಾಂಧೀಜಿಯಂತಹ ಸನ್ನಿರ್ಗ್ರಹವು ಎಲ್ಲರಿಗೂ ಎಲ್ಲಿಂದ ಬರಬೇಕು?

ಮಹಾಕವಿಯೆಂದು, ಪಿಂಡಿತ ಸಾಹಿತಿಯೆಂದು, ಮಿಗಿಲಾದ ವೇದಾಂತಿಯೆಂದು, ಶ್ರೇಷ್ಠ ಸಂಶೋಧಕನೆಂದು, ನಿಃಸ್ವಾರ್ಥ ದೇಶಭಕ್ತನೆಂದು, ಅದರ್ಶ ಕರ್ಮವೀರನೆಂದು, ಅತುಲ ಧರ್ಮವೀರನೆಂದು ಜನಗಳು ಭ್ರಮಿಸಿ, ಇದ್ದುದಕ್ಕಿಂತಲೂ ಹೆಚ್ಚಿನ ಬೆಲೆ

ಕೊಟ್ಟು ಹೊಗಳಿ ಪೂಜಿಕಟ್ಟುತ್ತಿದ್ದರೆ, ತಮ್ಮ ಅವಗುಣಗಳನ್ನು ಗುಣಗಳೆಂಬಂತೆ ಪವಾಡಗಳನ್ನು ರಚಿಸಿಸ್ತೋತ್ರಮಾಡುತ್ತಿದ್ದರೆ, ಅದರ ಲಾಭವನ್ನೆವ ಮೋಹವನ್ನು 'ಡೆದು ಹಿಡಿಯುವುದು ಶ್ರೀಜನಪ, ಪ್ರೇಮೋಹನದಾಸರಂತಹವರಿಗೆ ಮಾತ್ರ ಸಾಧ್ಯ. ಹಾಗಿಲ್ಲದಿದ್ದರೆ ಇಪ್ಪೊಂದು ಬಳ್ಳಿಗಳುದ್ದ ಭಕ್ತರ ಗುಂಪು, ಪಕ್ಷ, ಪಂಗಡ್ಡ ಮತ, ಪಂಥಗಳು ಹುಟ್ಟಿ ಬಾರಿಯಲ್ಲಿ ನಡೆದು, ನಮ್ಮ ನಾಡು ಈ ಬಗೆಯಾದ ಕೇಡಿಗೆ ಎಂದೂ ಗುರಿಯಾಗುತ್ತಿದ್ದಿಲ್ಲ.

ಸಂಸ್ಕೃತಿಯಲ್ಲಿ ಸ್ವಯಂಪೂರ್ಣತೆಯ ಲಭಾಸವಿರುವುದರಿಂದ, ವ್ಯಕ್ತಿಯು ತನ್ನಷ್ಟಕ್ಕೆ ತಾನಿರುವುದರಲ್ಲಿ, ತನ್ನೊಳಗೆ ತಾನೇ ಅನಕ್ತನಾಗುವಲ್ಲಿ ಸಮಾಜದಿಂದ ದೂರ ದೂರ ಹೋಗುವ ಪೆದರಿಕೆಯಿಪೆ. ಆದರೂ ಇದರಲ್ಲಿ ತೋರಿಕೆಯ ವ್ಯಾಪಾರಕ್ಕೆ ಇಂಬು ಇಲ್ಲದುದರಿಂದ ಹಳ್ಳಿಗಳೇ ಜೀವಾಳವಾಗಿರುವ ಭಾರತವು ಸುಖ-ಶಾಂತಿಗಳ ತವರೂರಾಗಲು, ಇಂದೊಮ್ಮೆ ಸಂಸ್ಕೃತಿಯೆ ಮುಖ್ಯವಾ ಕಾರಣವಾಗಿದ್ದಿತು.

ವೆಂಗಾಸ್ಥೆನೀಸ್, ಹುಯೆನ್‌ತ್ಸಾಂಗ್ ಮೊದಲಾದ ಪರಕೀಯರಿಗೆ ಸೋಜಿಗವಾಗುವಷ್ಟು ಇಲ್ಲಿಯ ಜನಗಳು ಸಜ್ಜನರೂ ಸುಖಿಗಳೂ ಆಗಿದ್ದರು. ಆಗ ಸಾಮಾನ್ಯವಾಗಿ ಮನೆಗಳಿಗೆ ಕೀಲಿಗಳ ಆವಶ್ಯಕತೆಯಿದ್ದಿಲ್ಲ; ಸುಳ್ಳಾವ್ದದೆ ಗೊತ್ತಿದ್ದಿಲ್ಲ. ನಾಲಗೆಯಿಂದ ಬಂದ ಮಾತನ್ನು ನಡಸುವುದು ಅವರ ಶೀಲ. ಕಾಗದ ಬರೆದುಕೊಟ್ಟು ಅದನ್ನೂ ಮತ್ತೆ ಸುಳ್ಳು ಮಾಡುವ ವಿದ್ಯೆ ಅಂದು ಅರಿದು. ಅಂದಿನ ಈ ಬಗೆಯ ಜೀವನವು, ಇಂದಿನ ನಾಗರಿಕತೆಯ ದೃಷ್ಟಿಯಿಂದ ನೋಡಿದರೆ ಅಸಂಭಾವ್ಯವೆನಿಸುವಂತಿದೆ.

ಸಂಸ್ಕೃತಿಯುಳ್ಳವನು ಸ್ವಯಂಶಾಸಿತನು. ಅತನ ನಡೆನುಡಿಗಳೆಲ್ಲವೂ ಅಂತರಂಗದ ಪ್ರೇರಣೆಯಿಂದ ನಡೆಯತಕ್ಕುವು. ಅದರಿಂದ ಅವರು ನಯ-ನೀತಿಯಿಂದ ಇರಲು, ಕಾಯಿದೆಕಾನೂನುಗಳನ್ನು ಅನುಸರಿಸಿಕೊಂಡು ಹೋಗಲು ಇಂತಹ ಪೋಲೀಸರ ಪಡೆ ಊರೂರಿಗೆ, ಓಣಿಓಣಿಗೆ ಮನೆಮನೆಗೆ ಆಗತ್ಯವಿದ್ದಿಲ್ಲ. ಅಂತರಂಗದ ಆಜ್ಞೆಯೆ ಅತನಿಗೆ ಧರ್ಮ. ಸಂಸ್ಕೃತಿಯ ದೃಷ್ಟಿಯಲ್ಲಿ ಮಾನವನ ಎಲ್ಲ ವ್ಯವಹಾರಗಳೂ ಧರ್ಮವೆ. ರಾಜಧರ್ಮ; ಪ್ರಜಾಧರ್ಮ; ಪಿತೃಧರ್ಮ; ಪುತ್ರಧರ್ಮ; ಜಾತಿಧರ್ಮ; ಕುಲಧರ್ಮ.. ಇಂತಿವೆಲ್ಲವೂ ಅತನಿಗೆ ಧರ್ಮಗಳು. ಧರ್ಮವನ್ನು ಮೀರಿ ನಡೆಯುವುದು ನರಕಕ್ಕೆ ಕಾರಣವಾಗುವುದೆಂಬ ಭೀತಿಯು ಅಂದಿನ ಲೋಕವನ್ನು ಅನಾಚಾರದಿಂದ ಉಳಿಸಿತು.

ಒಕ್ಕಲತನದ ಯುಗದಲ್ಲಿ ತಲೆದೋರಿದ ವ್ಯಕ್ತಿನಿಷ್ಠವಾದ ಸಂಸ್ಕೃತಿಯೂ ಧರ್ಮವೂ ವ್ಯಾಪಾರಯುಗದ ನಾಗರಿಕತೆಯ ಆಘಾತಕ್ಕೆ ನೆಲಸಿಡಿಯಿತು. ಸಂಸ್ಕೃತಿಯು 'ಏಕ'ನಿಷ್ಠ. ನಾಗರಿಕತೆಯು ಸಾಮೂಹಿಕ-ಸಾಮಾಜಿಕ. ಗುಂಪು, ಪಂಗಡ, ಸಮಾಜ, ಸಂಘ, ಸಂಸ್ಥೆಗಳ ಸಂಘಟನೆಯು ಒಲದಿಂದ ಸತ್ಯವನ್ನು ನೆಲಕ್ಕೆ ಸೆಟ್ಟುವ ಅದ್ಭುತ ಶಕ್ತಿಯು ಇದರಲ್ಲಿ ಅಂಟಾಗಿದೆ. ಜಾಗತಿಕ 'ರಾಷ್ಟ್ರ-ಸಂಘ' 'ಸಂಯುಕ್ತ-ರಾಷ್ಟ್ರ-ಸಂಘ' ಇದರಲ್ಲಿ ನಡೆದ—ನಡೆಯುತ್ತಿರುವ ಘಟನೆಗಳೇ ಮೇಲಣ ಮಾತಿಗೆ ಉತ್ತಮ ಉದಾಹರಣೆಗಳಾಗಿವೆ. ಹಿರಿಯಕ್ಕನವರಾಳಿ ಉಳಿದವರೆಲ್ಲ: ಆ 'ರಾಷ್ಟ್ರ-ಸಂಘ'ವು ದೊಡ್ಡ ಪ್ರಮಾಣದಲ್ಲಿ ನಡಸುವ ವ್ಯಾಪಾರವನ್ನೇ ಉಳಿದ ಸಂಸ್ಥೆಗಳು, ಮತಗಳು ಸಣ್ಣ-ಪುಟ್ಟ ಪ್ರಮಾಣದಲ್ಲಿ ತಮ್ಮ ಯಥಾಶಕ್ತಿಯಾಗಿ ನಡಸಿವೆ. ಇದು ಇಂದಿನ ನಾಗರಿಕತೆ.

ಸಂಸ್ಕೃತಿಯು 'ಅತ್ಮರತ'; ತನ್ನಿಂದ ಹೊರಗೆ ನೋಡುವ ಗೋಜಿಗೆ ಅದು ಹೋಗಲಿಲ್ಲ. 'ಪ್ರತಿಯೊಬ್ಬರೂ ತಮ್ಮಷ್ಟಕ್ಕೆ ತಾವು ಸುಸಂಸ್ಕೃತರಾಗಿ ಸುಖಿಯಾಗಿ ಬಾಳಿದರೆ ಆಯಿತಲ್ಲ; ಎಲ್ಲವೂ ತಾನೇ ಸುಸೂತ್ರವಾಗಿ ಸಾಗುವುದು' ಎಂಬುದು ಸಂಸ್ಕೃತಿಯ ವಿಚಾರದ ರೀತಿ. ಈ ದೃಷ್ಟಿಯಿಂದಲೆ ಭರತಖಂಡವು ಅಂದು ಹೊರಗೆ ಕಣ್ಣೆತ್ತಿ ಸಹ ನೋಡಲಿಲ್ಲ. ತನ್ನಂತೆ ಪರರ ಜಗೆಯಿತು. ಆದರೆ ಅದೆಲ್ಲವೂ ಒಂದು ಕನಸಾದಂತಾಯಿತು.

'ಹೊರಗೆ ಹೋಗದೆ, ತನ್ನಷ್ಟಕ್ಕೆ ತಾನು ಸುಖಿಯಾಗಿ ಇದ್ದರಾಯಿತು' ಎಂಬುದೂ ಒಂದು ತಪ್ಪೆಂದು ಇಂದು ಅನುಭವಕ್ಕೆ ಬಂದ ಮಾತಾಗಿದೆ. ಮಾನವನು ಸಾಮಾಜಿಕ ಪ್ರಾಣಿ. ಏಕಾಕಿಯಾಗಿ ಇರುವುದು ಅಸಿಷ್ಟ. ನಾಗರಿಕತೆಯು ಈ ತತ್ತ್ವದ ಆಧಾರದಿಂದಲೆ ಮುಂದೆಬಂದಿದೆ. ತನ್ನ ಈ ಉಪಯುಕ್ತತೆಯನ್ನು ಲೋಕಕ್ಕೆ ಮನಗಾಣಿಸಿಕೊಟ್ಟುದರಿಂದಲೆ ಅದು ಬೆಳೆದುನಿಂತಿದೆ.

ನಾಗರಿಕತೆಯು ಸಂಸ್ಕೃತಿಯಿಂದ ದೂರಹೊರಟು ಹಾನಿಗೀಡಾಗಿದೆ. 'ಜಾಣನು ದಿನಾಲು ಸೀರೆ ನೇಯುವನಾದರೂ ಅತನ ಹೆಂಡತಿ ಬತ್ತಲೆ' ಎಂದು ಒಂದು ಗಾದೆಯಿದೆ. ಏಕೆಂದರೆ ಅತನದು ಎಲ್ಲವೂ ವ್ಯಾಪಾರಕ್ಕೇ. ಸ್ವಂತದ ಮನೆಗಾಗಿ ಅಲ್ಲ. ನಾಗರಿಕತೆಯು ಪಾಡೂ ಇದೇ ಬಗೆಯಾಗಿದೆ. ತನಗಾಗಿ ವಿತ್ತಿ ಹುಲುಸಾಗಿ ಬೆಳೆದು ಮನೆತುಂಬಿಕೊಂಡು, ತನ್ನಷ್ಟಕ್ಕೆ ತಾನು ಸುಖಿಯಾಗಿರುವೆನೆಂಬುದೂ ಭ್ರಾಂತಿ. ಏಕೆಂದರೆ ನೆರೆಹೊರೆಯ ಆರೆಕೊಟ್ಟಿಯನರು ಬಂದು ಈತನನ್ನು ದೋಚಿಕೊಳ್ಳದೆ ಬಿಡರು. ಈ ಕಾರಣದಿಂದಲೆ ಬಂಗಾರದ ಹೊಗೆ ಹೊರಡುತ್ತಿದ್ದ ಈ ಭರತಖಂಡದಲ್ಲಿ ಇಂದು ಕಟ್ಟಿಗೆಯ ಹೊಗೆಯು ಕಾಣುವುದೂ ಕಷ್ಟವಾಗಿದೆ. ಆದಕಾರಣ ಸಂಸ್ಕೃತಿಯು ತನ್ನಲ್ಲಿ ತಾನೇ ಪೆಯ್ಮೆರೆಯದೆ, ತನ್ನ ತೂಕ ತಪ್ಪಗೊಡದಂತೆ ನಾಗರಿಕತೆಯೊಡನೆ ಜೆರೆತುಕೊಳ್ಳಲು ಹಾರಯಿಸಬೇಕು; ನಾಗರಿಕತೆಯೂ ತನ್ನ ಓಟದಲ್ಲಿ ಸಂಸ್ಕೃತಿಯನ್ನು ಹಿಂದೆಬಿಡದೆ, ಅದರಿಂದ ದೂರಹೋಗುವಲ್ಲಿ ಹಾನಿಯಿದೆಯೆಂಬುದನ್ನು ನೆನಪಿಟ್ಟು ಕೂಡಿ ನಡೆಯಲು ಕಲಿಯಬೇಕು.

# ಆಶೀರ್ವಾದ

( ಕನಸಿನಲ್ಲಿ ಕಂಡ ಕತೆ )

★

'ಮೂರಾನ ವಾಸಿಷ್ಠ' ಮಡಿಕೇರಿ

★

**ಭಿಕ್ಷುಕಿಯೊಬ್ಬಳೆಂದು ತಿರಸ್ಕಾರದಿಂದ ಕಂಡ ಮುದುಕಿ, ಕುರುಡ ನರಸಿಂಹನಿಗೆ ಕಂಗಳನ್ನು ಕೊಟ್ಟಳು; ಕುರಿಯೆಂದು ತಿಳಿದುಕೊಂಡ ತನ್ನನ್ನು ಹರಿಯಿದ್ದೇನೆಂದು ತಿಳಿವ ಹೊಸ ದೃಷ್ಟಿಯನ್ನು ನೀಡಿದಳು.**

★

ಭಿಕ್ಷುಕಿಯೊಬ್ಬಳು ಎದುರು ನಿಂತಿದ್ದಾಳೆ. ತಲೆಯ ಕೂದಲುಗಳು ಹರಡಿದ್ದುವು. ಸುಂದರಾಕಾರವಾದ ಮುಖವಿದ್ದರೆ ತಾನೆ ಏನಾಯಿತು; ಅವಳ ದುರದೃಷ್ಟನಿಮಿತ್ತವೊ ಅಥವಾ ಅವಳನ್ನು ಪೀಡಿಸುತ್ತಲಿರುವ ದಾರಿದ್ರ್ಯದೇವಿಯ ಮಾಟದ ಕಾಟವೊ—ನಾನರಿಯೆ; ಅಂತೂ ಆಕೆಯ ಮುದ್ದು ಮುಖಕಮಲವು ಜಠರಾಗ್ನಿಯ ಉಜ್ವಲ ಕಿರಣಗಳ ಉಷ್ಣದಿಂದಲೇನೋ—ಬಾಡಿದ್ದಿತು. ಅದನ್ನು ಕಾಣಗೊಡದಿರಬೇಕೆಂದೋ ಏನೋ, ತಲೆಯ ಕೂದಲುಗಳು ಮುಖದ ತುಂಬಾ ಹರಡಿದ್ದುವು. ಆಕೆಯ ತಲೆಯ ಕೂದಲುಗಳನ್ನು ಕಂಡಂತೆಯೆ ನನಗೆನಿಸಿತು:—'ಏನು? ಇವಳು ತಲೆಗೆ ಎಣ್ಣೆಯನ್ನು ಸವರಿಕೊಳ್ಳದೆ ಎಷ್ಟು ಸಮಯವಾಗಿರಬಹುದು? ಹುಟ್ಟಿದಂದಿನಿಂದಲೆ? ಛೆ! ಹಾಗಿರಲಾರದು. ಈಕೆಗೆ ಜನ್ಮವಿತ್ತ ಮಾತೆಯ ಪ್ರೇಮಿಾ ಹೃದಯವು ಎಲ್ಲಿಂದಲಾದರೂ—ಕಾಡಿಯೊ, ಬೇಡಿಯೊ, ಕಡೆಗೆ ಕದ್ದೊ—ಒಮ್ಮೆಯಾದರೂ ಇವಳ ಕೂದಲುಗಳಿಗೆ ಎಣ್ಣೆಯ ದರ್ಶನವನ್ನು ಮಾಡಿಸಿರಬಹುದು; ಬಿಸಿನೀರಿನಿಂದ ಸ್ನಾನವನ್ನೂ ಮಾಡಿಸಿರಬಹುದು' ಎಂದು ಮುಂತಾಗಿ ಯೋಚಿಸಿದೆ. ಇನ್ನೂ ಏನೇನನೋ ಯೋಚಿಸಿದೆ. ಒಂದೂ ಬಗೆಹರಿಯಲಿಲ್ಲ. ಇನ್ನು ನನಗುಳಿದ ಉಪಾಯವೆಂದರೆ ಕೇಳುವುದೊಂದೆ. ಕೇಳಲಿಕ್ಕೆ ಏನಾದರೂ ಹೆದರಿದೆನೆ? ಏಕೆ ಹೆದರಬೇಕು? ಆಕೆ ಏನಾದರೂ ನನ್ನು ನಾಡನ್ನಾಳುವ ಜೀವ್ ಕವಿಾಷನರೆ? ಅಲ್ಲ, ಒಬ್ಬ ದೊಡ್ಡ ಜಿಲ್ಲಾಕಲೆಕ್ಟರ್ ಸಾಹೇಬರೆ? ಯಾವುದೂ ಅಲ್ಲ ತಾನೆ? ಅವಳು ಬರಿ ಸಾಮಾನ್ಯೆ, ಅನಾಥೆ, ಭಿಕ್ಷುಕಿ! ಇನ್ನೇಕೆ ಹೆದರಿಕೆ? ಕೇಳಿದೆ—"ತಲೆಗೆ ಎಣ್ಣೆಯನ್ನು ಹಾಕಿಕೊಳ್ಳದೆ ಎಷ್ಟು ಸಮಯವಾಯಿತು?" ಉತ್ತರ ಬಂದಿತು: "ಆಂಗ್ಲೇಯರ ರಾಜ್ಯಭಾರದಿಂದ ಇತ್ತಲಾಗಿ." ಆಗ ನನಗೆನಿಸಿತು—'ಈಕೆಯ ಪ್ರಾಯವೆಷ್ಟಿರಬಹುದು.. ಇದ್ದರೆ? ಆಂಗ್ಲೇಯರು ನಮ್ಮನ್ನು ಗುಲಾಮರನ್ನಾಗಿ ಮಾಡಿಕೊಂಡು ಎಷ್ಟು ವರ್ಷವಾಯಿತು, ಏನು ಕಥೆ...ಇದು ಹುಚ್ಚಿಯ ಮಾತು!'.... ಎಂದು. ಮತ್ತೆ ಯೋಚಿಸಿದೆ.

ಅವಳು ತೊಟ್ಟುಕೊಂಡ ಬಟ್ಟೆಯೊ? ಹಾಳು, ಅದನ್ನು ಏನೆಂದು ಬರೆಯಲಿ? ಅದಕ್ಕೆ ನೂರಾಎಂಟು ಹೊಲಿಗೆಗಳು; ನೂರಾಎಂಟು ಬಣ್ಣಗಳ ತರತರದ ಪಟ್ಟಿಗಳು; ಜತೆಗೆ ಅಲ್ಲಲ್ಲಿ ಅನೇಕ ತೇಪೆಗಳು. ಅಲ್ಲಿ ನನ್ನ ಮನಸ್ಸು ನಾಟುತ್ತಲೆ ಮನವು ಕೇಳಿತು: 'ಪಾಪ, ಈ ಬಡಪಾಯಿ ಎಂದಾದರೂ ನನ್ನಷ್ಟು ಉತ್ಕೃಷ್ಟ ಬಟ್ಟೆಗಳನ್ನು ತೊಟ್ಟಿದ್ದೀತೆ? ಇನ್ನು ತೊಟ್ಟೀತೆ?' ಎಂದು ಆಷ್ಟರಲ್ಲೆ ನನ್ನ ಬುದ್ಧಿಗೆ ಏನು ಹೊಳೆಯಿತೊ, ಹಾಸ್ಯ ಮಾಡಬೇಕೆಂದೆನಿಸಿತು:— "ಏ ಭಿಕ್ಷುಕಿ! ನನ್ನನ್ನು ನೋಡು, ನಾನು ಎಷ್ಟು ಒಳ್ಳೆಯ ಜರಿಯ ಪಂಚೆಯನ್ನುಟ್ಟಿದ್ದೇನೆ ತಲೆಗೆ ನೋಡು, ಜರಿಯ ರುಮಾಲನ್ನು ಸುತ್ತಿಕೊಂಡಿದ್ದೇನೆ. ಸೊಗಸಾದ, ಮೆತ್ತನೆಯ, ಲಕ್ಷಣವನ್ನು ಬೀರುವ ನನ್ನ ಕೋಟು-ಶರ್ಟುಗಳನ್ನು ನೋಡು. ನೀನು ಎಂದಾದರೂ ಇಂಥ ಸಿರಿತನದ ಬಟ್ಟೆಗಳನ್ನು ತೊಟ್ಟುಕೊಂಡಿದ್ದೀಯಾ?" ಅವಳೆಂದಳು:—

"ತೊಟ್ಟುಕೊಂಡಿದ್ದೇನೆ."

"ಯಾವಾಗ?" ನಾನು ಕೇಳಿದೆ.

"ಆಂಗ್ಲೇಯರ ರಾಜ್ಯಭಾರಕ್ಕೆ ಮುಂಚೆ."

ಎಂತಹ ಉತ್ತರ. 'ಕೇವಲ ಹುಚ್ಚಿಯ ಬಾಯಿಂದ ಬರಬಹುದಾದ ಉತ್ತರ!' ಎಂದು ಯೋಚಿಸುತ್ತಿರುವಷ್ಟರಲ್ಲಿಯೆ 'ಈಕೆ ಹುಚ್ಚಿಯಲ್ಲ.'—ಎಂದು ಹೊಳೆಯಿತು. ಏಕೆಂದು ಕೇಳುತ್ತೀರೊ? ಅವಳು—'ನಾನು ಎಣ್ಣೆಯನ್ನು ತಲೆಗೆ ಆಂಗ್ಲರ ರಾಜ್ಯಭಾರದಿಂದ ಇತ್ತ ಹಾಕಿಕೊಳ್ಳಲಿಲ್ಲ' ಮತ್ತೆ ಅತ್ತ, 'ಆಂಗ್ಲರ ರಾಜ್ಯ[illegible]ರಕ್ಕೆ ಮುಂಚೆ ಸಿರಿತನದ ಉಡಿಗೆ-ತೊಡಿಗೆಗಳಿಂದ ಮೆರೆದಿದ್ದೆ' ಎಂದು ನುಡಿದಳಲ್ಲಾ....ಇದರಲ್ಲೇನೋ ಒಗಟವಿರಬೇಕೆಂದೆನಿಸಿತು. ಒಗಟವನ್ನು ಬಿಚ್ಚಬೇಕಲ್ಲ. ಆದು ಸಾಕ[illegible]ತ್ ಬ್ರಹ್ಮಗಂಟೇ. ಅಂತೂ ಯೋಚಿಸಿದೆ, ಯೋಚಿಸಿದೆ ಬಗೆಹರಿಯಲಿಲ್ಲ. ಅಷ್ಟರಲ್ಲಿಯೆ ಆ ಭಿಕ್ಷುಕಿ:—

"ಒಂದೆರಡು ಪ್ರಶ್ನೆಗಳನ್ನು ಕೇಳಲೆ?" ಎಂದಳು.

ಅಗತ್ಯವಾಗಿ!" ನಾನು ಹೇಳಿದೆ.

"ನೀವು ಗಾಂಧೀಜಿಯವರನ್ನು ನೋಡಿದ್ದೀರಾ?"

"ಇಲ್ಲ."

"ಏಕೆ, ನೋಡಲೀ[illegible]?"

"ಅವರಿರುವುದು ವಿದೇಶದಲ್ಲಿ; ನಾನಿರುವುದು ಈ ಕೊಡಗಿನ

ಹೊಸ ಪುಸ್ತಕ. ಪ್ರಕಟವಾಗಿದೆ.

**ತುಂಬಿದ ಕೊಡ**

ಮತ್ತು ಇತರ ಕಿರಿಗಳು.

ಡಾ. ದೊಡ್ಡೇರಿ ವೆಂಕಟಗಿರಿರಾಯರ

ಹದಿನಾಲ್ಕು ಸಣ್ಣ ಕಥೆಗಳ ಸಂಗ್ರಹ; ಬೆಲೆ ರೂ. ೧-೦-೦. ಅಂಚೆವೆಚ್ಚ ಬೇರೆ. ಪುಸ್ತಕ ವ್ಯಾಪಾರಿಗಳಿಗೆ ರಿಯಾಯಿತಿ ಇದೆ.

**ಸಾಧನ ಪ್ರಕಟನಾಲಯ, ಇಡ್ಡ ಬಳ್ಳಾಪುರ,**
( ಬೆಂಗಳೂರು )

ಮೂಲೆಯಲ್ಲಿ. ಅಲ್ಲಿಗೂ ಇಲ್ಲಿಗೂ ನನಗು ಸಂಬಂಧ? ಅದು ಉತ್ತರ ಧ್ರುವ ಇದು ದಕ್ಷಿಣ ಧ್ರುವ!"

"ಹೋಗಲಿ, ಆವರ ಚಿತ್ರವನ್ನಾದರೂ ನೋಡಿದ್ದೀರಾ?"

"ನೀನು ಬಹುಶಃ ನೋಡಿರಲಾರ ನಾನು ನೋಡಿದ್ದೇನೆ. ನನ್ನ ಮನೆಯಲ್ಲಿ ಮೂರು ಅವರ ಪಟಗಳಿವೆ ಬೇಕಾದರೆ ನಿನಗೊಂದನ್ನು ಕೊಟ್ಟೇನು. ಬೇಕೆ?"

"ನೀವು ಕೊಡುವುದಿರಲಿ; ಅವರಲ್ಲಿ ನಿಮಗೆ ಭಕ್ತಿಯಿದೆಯೆ?"

"ಇದೆ"

"ಅವರ ಉಡಿಗೆ-ತೊಡಿಗೆಗಳನ್ನು ಧರಿಸಿದ್ದೀರಾ?"

"ಏತಕ್ಕಾಗಿ ಈ ಪ್ರಶ್ನೆ?"

"ನನಗೆ ತಿಳಿದುಕೊಳ್ಳಬೇಕಾಗಿದೆ.

"ಹಾಗಾದರೆ ಕೇಳು. ಅವರು ಬಾಲ್ಯಕಾಲ ತನಕ ಒಂದು ಚಿಕ್ಕ ಅರಿವೆಯನ್ನು ಸುತ್ತಿಕೊಳ್ಳುತ್ತಿದ್ದರು; ಮತ್ತೆ ಅವರ ಉಡಿಗೆ-ತೊಡಿಗೆಯಲ್ಲಿ ಯಾವ ಬದಲಾವಣೆಯನ್ನೂ ನಾನು ಕಾಣಲಿಲ್ಲ."

"ಹಾಗಾದರೆ ಅವರು ಯಾವ ದೇಶದವರು?"

"ನಿನಗದು ಗೊತ್ತಿಲ್ಲವೆ?"

"ಛೆ! ಹೇಗೆ ಗೊತ್ತಿರಬೇಕು? ನಾ ಪುಟ್ಟ, ಮೇಲಾಗಿ ಭಿಕ್ಷುಕಿ!"

"ಹೌದು.. ಅವರು ಭಾರತದ ಪುತ್ರರು. ಪೂಜ್ಯ ಭಾರತೀಯರು."

"ನೀವು?"

"ನಾನೇ? ನಾನೂ ಭಾರತದೇಶದವ ಭಾರತೀಯ!"

"ಏನು, ಏನೆಂದೆ? ಅವರು ಭಾರತೀಯರು; ನೀನೂ ಭಾರತೀಯ. ಅವರು ಸೊಂಟದಿಂದ ಬಾಲ್ಯಕಾಲತನಕ ಬಟ್ಟೆ ತೊಟ್ಟುಕೊಂಡು, ಭಾರತದ ದಾರಿದ್ರ್ಯವನ್ನು ಪ್ರಪಂಚಕ್ಕೆ ಸಾರುತ್ತಲಿರುವ ಭಾರತೀಯರಾದರೆ, ನೀನು ಸರ್ವಾಂಗ ಪೂರ್ಣವಾಗಿ, ಅದೂ ಇಜ್ಜೋಡಿಯಲ್ಲೇ ಬಟ್ಟೆತೊಟ್ಟುಕೊಂಡು, ನಿನ್ನ ಸಿರಿತನವನ್ನು ನನ್ನಂತಹ ಕ್ಷುಲ್ಲಕ ಭಿಕ್ಷುಕಳ ಮುಂದೆ ತೋರ್ಪಡಿಸಿಕೊಂಡು, ಮೆರೆಯುತ್ತಲಿರುವ ಭಾರತೀಯ; ಅಲ್ಲವೆ? ಅವರು ದೇಶಕ್ಕಾಗಿ ತನು-ಮನ-ಧನಗಳನ್ನು ಅರ್ಪಿಸಿದ ಧೀರ ಭಾರತೀಯರಾದರೆ, ನೀನು ಇತರರ ತನು-ಮನ-ಧನಗಳನ್ನು ಅಪಹರಿಸುತ್ತಲಿರುವ ಚೋರ ಭಾರತೀಯನಲ್ಲವೆ? ಅವರು ದೇಶದ ಅಸ್ಪೃಶ್ಯರ ಹಿತಕ್ಕಾಗಿ ತಮ್ಮ ಪವಿತ್ರ ರಕ್ತವನ್ನು ಧಾರೆಯೆರೆಯುತ್ತಲಿರುವ ಪೂಜ್ಯ ಭಾರತೀಯರಾದರೆ, ನೀನು ಆ ಅಸ್ಪೃಶ್ಯರ ರಕ್ತವನ್ನೇ ದೋಚಿಕೊಂಡು, ನಿನ್ನ ಪಯಿರು-ಪಚ್ಚೆಗಳಿಗೆ ಆ ರಕ್ತವನ್ನೇ ನೀರನ್ನಾಗಿ ಎರೆದು, ನಿನ್ನ ಸಿರಿತನವನ್ನು ನೂರ್ಮಡಿಸಿಕೊಳ್ಳುತ್ತಲಿರುವ ಅಧಮ ಭಾರತೀಯನಲ್ಲವೆ? ಛೆ! ತಿಳಿಗೇಡಿ ನರಸಿಂಹನೆ, ಧಿಕ್ಕಾರವಿರಲಿ ನಿನ್ನ ಜೀವನಕ್ಕೆ! ಧಿಕ್ಕಾರವಿರಲಿ!"

ನನಗೆ ಏನೂ ತೋರಲಿಲ್ಲ. ಯೋಚಿಸಿದೆ; ಏನನ್ನು ಎಂಬುದು ಮಾತ್ರ ತಿಳಿಯಲಿಲ್ಲ. ಆದರೂ ಯೋಚಿಸಿದೆ, ಯೋಚಿಸಿದೆ. ಬಗೆ ಹರಿಯಲಿಲ್ಲ. ಆಗಲೇ ಭಿಕ್ಷುಕಿ ಕೇಳಿದಳು:

"ಏನು? ನೀನು ಬಹಳ ಯೋಚಿಸುತ್ತಲಿರುವೆ?"

ನಾನು ಮೌನಿಯಾಗಿಯೆ ನಿಂತಿದ್ದೆ. ಅವಳು ಕೇಳಿದಳು:—

"ಏನು? ನೀನೂ ಹಾಗೆಯೆ ಆಗಬಲ್ಲೆಯಾ?"

"ಯೋಚಿಸಿ ನೋಡುತ್ತೇನೆ!"

"ಹೂಂ! ಇನ್ನೂ ಯೋಚನೆಯೆ? ಯೋಚಿಸು, ಬಹುವಾಗಿ ಯೋಚಿಸು!"

"ಬಹುವಾಗಿ ಯೋಚಿಸುತ್ತೇನೆ. ಇನ್ನೇನಾದರೂ ಕೇಳುವುದಿದೆಯೆ?"

"ಇದೆ."

"ಏನು?"

"ನೀನು ಮಹೇಂದ್ರ ಚೌಧುರಿಯ ಹೆಸರನ್ನು ಕೇಳಿದ್ದೀಯಾ?"

"ಕೇಳಿದ್ದೇನೆ; ಆ ಪಾಪಿಯನ್ನು ಗಲ್ಲಿಗೇರಿಸಿದ್ದಾರೆ!"

ನಾಲ್ವತ್ತು ವರ್ಷಗಳ ಅನುಭವದಿಂದ ಶ್ರೀಷ್ಮವನಿಸಿದ

**ಆಯುರ್ವೇದೀಯ ಔಷಧಗಳು.**

ವೈದ್ಯ ಲೋಂಢೆ ಇವರ ಚಳಿಜ್ವರದ ಗುಳಿಗೆ.
ಸರ್ವಪ್ರಕಾರದ ಜ್ವರಗಳಿಗೆ ಉಪಯುಕ್ತ.
ಅಮಾಂಶಗುಳಿಗೆ—ಸರ್ವಪ್ರಕಾರದ ಅಮಾಂಶದ ಮೇಲೆ ಗುಣಕಾರಿ.
ಏಜಂಟರನ್ನು ನೇಮಿಸುವುದು ಇದೆ.
ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್— ವೈದ್ಯ ಪಿ ಕೆ. ಲೋಂಢೇ ಫಾರ್ಮಸಿ,
ಪನವೇಲ-ಕುಲಾಬಾ.

"ಎಂತಹ ಕೂಪಮಂಡೂಕನೋ ನೀನು, ನರಸಿಂಹ? ಆತ ಸಾಪಿಯಲ್ಲ; ಪುಣ್ಯಜೀವಿ. ದೇಶಕ್ಕಾಗಿ, ದೇಶದ ಬಡತನಕ್ಕಾಗಿ, ದೇಶದ ಅಸ್ಪೃಶ್ಯರ ಉದ್ಧಾರಕ್ಕಾಗಿ, ನಿನ್ನ ನನ್ನ ಹಿತಕ್ಕಾಗಿ, ಭಾರತದ ಪೂರ್ಣ ಸ್ವಾತಂತ್ರ್ಯಕ್ಕಾಗಿ, ಆ ಧೀರ ಎಷ್ಟು ಹೋರಾಡಿದ; ಅದೆಷ್ಟು ಹೆಣಗಿದ. ಆದರೂ ಪಾಪಿಗಳಿರಾ! ನೀವಿನ್ನೂ ಕಣ್ಣು ತೆರೆಯಲಿಲ್ಲ. ಕಡೆಗೆ ಆ ಧೀರ, ವೀರ, ತನ್ನ ಜೀವವನ್ನೇ ಆಂಗ್ಲರ ಗಾಣದ ತುದಿಗ ಮಾಸಲಾಗಿತ್ತ; ಪ್ರಾಣ-ಬಲಿಯನ್ನು— ನಿಮಗಾಗಿ, ನಿಮ್ಮ ಏಳಿಗೆಗಾಗಿ-ಇತ್ತ. ಆದರೂ ನಿನ್ನಂತಹ ನರಾಧಮ ಭಾರತೀಯರು ಕಣ್ಣು ತೆರೆಯಲಿಲ್ಲ. ಪಾಪಿಗಳಿರಾ! ಕಣ್ಣು ತೆರೆಯಿರಿ; ಪುಣ್ಯಜೀವಿಗಳಾಗಿರಿ; ಸ್ವಾತಂತ್ರ್ಯರಣಾಂಗಣಕ್ಕೆ ಧುಮುಕಿರಿ; ಪಂಡಿತ ಜವಾಹರ-ಲಾಲರ ಗುಡುಗುಗಳಿಗೆ ನೀವು ಮಿಂಜುಗಳಾಗಿ ಮೆರೆಯಿರಿ; ಮಿಂಚಿನ ಪ್ರಭೆಯನ್ನೊಮ್ಮೆ ಬೀರಿರಿ. ಧೂಳಿಯಪಾಲಾದ ಭಾರತದ ಬಾವುಟವನ್ನೊಮ್ಮೆ ನಾಡಿನಲ್ಲೆಲ್ಲ ಸದಾಕಾಲವೂ ಹಾರಿಸಿರಿ, ಹಾರಿಸಿರಿ; ಮೆರೆಯಿರಿ! ಭಾರತೀಯರೆ! ಅಮೃತ ಪುತ್ರರೆ! ಮೆರೆಯಿರಿ; ಮೆರೆಯಿರಿ!" ಭಿಕ್ಷುಕಿಯ ನೇತ್ರಗಳಲ್ಲಿ ಭಾವಾವೇಶದ—ಭವಿಷ್ಯತ್ ಭಾರತದ ಹಂಬಲದ-ಕಣ್ಣ ಹನಿಗಳು ಹೊರಸೂಸಿ ಮೆರೆದುವು. ನನಗೊ, ಇವಳು ಯಾರಿರಬಹುದೆಂಬ ಯೋಚನೆ. ಯೋಚಿಸಿದೆ, ಯೋಚಿಸಿದೆ. ಬಗೆಹರಿಯಲಿಲ್ಲ. ಅಷ್ಟರಲ್ಲೆ ಪ್ರಶ್ನೆಯು ಕಿವಿಗೆ ಕೇಳಿಸಿತು:

"ನೀನು ಕ್ಯಾಪ್ಟನ್ ಲಕ್ಷ್ಮೀಸ್ವಾಮಿನಾಥನ್ ಎಂಬ ಹೆಸರನ್ನು ಕೇಳಿದ್ದೀಯಾ?"

"ಇಲ್ಲ."

"ಹೋಗಲಿ. ಸುಭಾಸ್‌ಚಂದ್ರ ಬೋಸರ ಹೆಸರನ್ನಾದರೂ ಕೇಳಿರಬಹುದಲ್ಲ!"

"ಹಿ, ಆ ಬಂಗಾಳದ ಕಣ್ಮಣಿ; ಹಿಂದೂ ದೇಶದ ಜಾಜ್ವಲ್ಯ-ಮಾನ ಪ್ರಕಾಶ! ಆತನ ಹೆಸರನ್ನು ಕೇಳದ ಭಾರತೀಯನುಂಟೆ?"

"ಆ ಧೀರನು ಜಪಾನದಲ್ಲಿ ಮಾಡಿದ ಪರಾಕ್ರಮಗಳನ್ನು ಅರಿತಿರುವೆಯಾ?"

"ಪೇಪರುಗಳಲ್ಲಿ ಏನೇನೊ ಅವನ ವಿಷಯ ಬರುತ್ತಿದ್ದರೂ ನಾನು ಅವೆಲ್ಲಾ ವಿಷಯಗಳನ್ನು ತಿಳಕೊಳ್ಳಲಿಲ್ಲ."

"ಬಂಗಾಳದ ಕಣ್ಮಣಿಯಂತೆ, ಹಿಂದೂದೇಶದ ಜಾಜ್ವಲ್ಯ ಮಾನ ಪ್ರಕಾಶವಂತೆ, ಪೇಪರಲ್ಲಿ ಆತನ ಬಗೆಗೆ ತುಂಬಾ ವಿಷಯ ಬರುತ್ತಿದ್ದುವಂತೆ, ತಿಳಕೊಳ್ಳಲಿಲ್ಲವಂತೆ! ನರಸಿಂಹಾ! ನೀನು ಎಂತಹ ಮೂಢನೋ? ನೀನು ಎಂತಹ ಭಾರತೀಯನೊ? ಇದೋ, ನಾಮಧಾರಿ ಭಾರತೀಯ ತರುಣನೆ, ನಾನು ನಾಲ್ಕು ಮಾತುಗಳನ್ನಾಡುತ್ತೇನೆ, ಕೇಳಿಕೊ. ಬೋಸನು ಜಪಾನಿಗೆ ಹೋದ. ಅಲ್ಲಿಇಲ್ಲಿ ಸುತ್ತಾಡಿದ. ಕಡೆಗೆ ೧೯೪೫ ನೆಯ ಇಸ್ವಿಯಿಂದ ಇತ್ತ ಆ ಧೀರೋತ್ತಮ, ಸ್ವತಂತ್ರಭಾರತದ ಉಜ್ವಲ ಕಿರಣ, ಭಾರತದ ಪೂರ್ಣ ಸ್ವಾತಂತ್ರ್ಯಕ್ಕಾಗಿ ಕಾದಾಡಲೋಸುಗ, 'ಆಜಾದ್ ಹಿಂದ್ ಫೌಜ್' ಎಂಬ ತನ್ನದೇ ಆದ ಒಂದು ಸೈನ್ಯಪಡೆಯನ್ನು ತಯಾರಿಸಿದ. ಆದರೂ ಆತ ಜಪಾನದ ಕೈ-ಗೊಂಬೆಯಾಗಿ ಕೆಣಿಗೊಳಲಿಲ್ಲ: ಬಿಡಲು ಕ್ಷಾತ್ರತೇಜದ ಹಿಂದೂ ಕೇಸರಿಯಾಗಿ ಮೆರೆದ. ಯಾಕೆಂದು ಕೇಳುತ್ತೀಯೊ? ಒಮ್ಮೆ ಬೋಸರಿಗೂ ಜಪಾನಿಗೂ 'ಆಜಾದ್ ಹಿಂದ್ ಫೌಜ್' ಸ್ಥಾಪಿ-ಸಿದನಂತರ, ಆ ವಿಷಯಗಳಲ್ಲಿಯೆ ಕೆಲವು ಮಾತು-ಕಥೆಗಳಾ-ದುವು. ಕಡೆಗೆ ಜಪಾನು ಒಬ್ಬ ರಾಯಭಾರಿಯನ್ನು ಬೋಸರತ್ತ ಕಳಿಸಿತು. ರಾಯಭಾರಿ ಬಂದಂತೆಯೆ "ನಾನು ರಾಯಭಾರಿ ಬಂದಿದ್ದೇನೆ, ಕರೆಯಿಸಿಕೊಳ್ಳಿ" ಎಂದನಂತೆ. ಆಗ ಬೋಸರು, ಆ ನನ್ನ ಕಣ್ಮಣಿ, - "ಅಧಿಕಾರಪತ್ರಗಳೆಲ್ಲಿ?" ಎಂದು ಅಧಿ-ಕಾರ ವಾಣಿಯಲ್ಲೆ ಕೇಳಿದ. ಆತನಿಂದ ಉತ್ತರ ಬಂದಿತು:- "ಮರೆತು ಬಂದಿದ್ದೇನೆ" ಎಂದು. "ಹಾಗಾದರೆ ಹೋಗಿ ಅವನ್ನು ತೆಗೆದುಕೊಂಡೇ ಬನ್ನಿ" ಎಂದೆನ್ನುತ್ತಲೆ ಆತನನ್ನು ಹಿಂದೋಡಿಸಿದ ಆವೀರ. ಅಷ್ಟೆ ಅಲ್ಲ, ಯಾವ ಜಪಾನದ ಹಿರಿಯ ಅಧಿಕಾರಿಯಾದರೂ ಇವನ ಕೋಣೆಯೊಳಕ್ಕೆ ಪ್ರವೇಶಿಸ-ಬೇಕಿದ್ದರೆ, ಈತನ ಅಧಿಕಾರವಾಣಿಯ ಸಂದೇಶವು ಅವರಿಗೆ-ಸಿಕ್ಕಬೇಕಾಗಿತ್ತು. ನೋಡು, ಆ ಕೆಚ್ಚೆದೆಯ ಆ ಬಂಗಾಳಿ ದೇಶಪ್ರೇಮಿಯ ಕ್ಷಾತ್ರ ತೇಜವನ್ನು! ಇಷ್ಟರಲ್ಲೇ ಮುಗಿಯ-ಲಿಲ್ಲ; ತನ್ನ ಆಜಾದ್ ಹಿಂದ್ ಫೌಜಿನ ಧ್ವಜವನ್ನಾಗಿ ಆತ, ಆ ನನ್ನ ನಿಸ್ಸೀಮ ಪ್ರೇಮಮಾತ್ರ, ಅಹಿಂಸಾ ಕ್ರಾಂತಿಕಾರಿ, ಗಾಂಧೀಜಿಯು ಆ ತ್ರಿವರ್ಣ ಧ್ವಜವನ್ನೇ ಅರಿಸಿಕೊಂಡಿದ್ದನಂತೆ. ನೋಡಿದೆಯಾ, ಆತನ ನಿಷ್ಕಳಂಕಿತ ಆ ದೇಶಪ್ರೇಮವನ್ನು! ಮೂಢಾ! ನೀನು ಸಹ ಹಿರಿಯ ಭಾರತೀಯನೇ ಅಲ್ಲವೆ? ಇನ್ನೂ ಕೇಳಿಕೊ! ಆಜಾದ್ ಹಿಂದ್ ಫೌಜಿನ ಒಂದು ಶಾಖೆಗೆ


| | | |
|---|---|---|
| ಮುಸಲ್ಮಾನರ ಏಳಿಗೆ | (ಪಳಪೇಟಿ) | ೦- ೮-೦ |
| ಹತ್ತಿ ಅರಳಿ ಜಂತ್ರಿ | | ೨- ೮-೦ |
| ಚಾಲುಕ್ಯರ ಪುಲಕೇಶಿ | | ೧- ೦-೦ |
| ಸಂತಾನ ಶಾಸ್ತ್ರ | | ೧- ೪-೦ |
| ಬ್ರಹ್ಮಚರ್ಯ ಬಲಿಸೃಷ್ಟಿ | | ೦-೧೦-೦ |
| ಕೆರಾತಾರ್ಜುನೀಯ ಸಾರ | | ೧- ೦-೦ |
| ಮಹಾತ್ಮಾ ಗಾಂಧಿ ಸಂ. ಚರಿತ್ರ | | ೧- ೬-೦ |
| ತರುಣ ಸಿತ್ಥಿ | | ೦- ೮-೦ |
| ಕಲಿತರೆ ಹೀಗೆ ಕಲಿಯಬೇಕು. | | ೦- ೫-೦ |
| ಎಲ್. ಎಲ್. ಬಿ. | | ೦-೧೦-೦ |

ಇವು ಅಲ್ಲದೆ ಶಾಲೆಗೆ ಬೇಕಾಗುವ ಪ್ರತಿಯೊಂದು ಪುಸ್ತಕ ನಮ್ಮಲ್ಲಿ ಸಿಗುವವು. ಬೇಕಾದರೆ ಬರೆದುರಿ.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ.

# ಬಡತನದ ಬಾಳು

ಇ

'ಆನಂದಕಂದ'ದ ಕಥಾಸಂಗ್ರಹ.

ಕನ್ನಡ ಜನತೆಯ ಜೀವದ ನಿಜವಾದ ಚಿತ್ರ
ಇದರಲ್ಲಿ ಕಾಣಿದೆ.
ಬೇಕಾದರೆ
'ಜಯಂತಿ' ಕಾರ್ಯಾಲಯಕ್ಕೆ
ಬರೆಯಿರಿ.


ಹೆಸರಿತ್ತುದು. 'ಧಾಂಸೀ ರೆಬೆಲ್' ಎಂದು ಅದನ್ನೇ ನಡೆಯಿಸುತ್ತಿದ್ದವಳು ಲಕ್ಷ್ಮೀ ಪ್ರಿಯಾಧನ' ಎಂಬ ವೀರ ವನಿತೆ. ಅವಳನ್ನು—ನನ್ನ ಪ್ರೀತಿಯ ಸುಕುಮಾರಿಯನ್ನು—ನನ್ನ ರಕ್ತವನ್ನೇ ಹೀರಿಕೊಂಡು, ನನ್ನು ಈ ಸ್ಥಿತಿಗೆ ತಂದಿಟ್ಟ, ಆ ದುಷ್ಟ ಆಂಗ್ಲೇಯರ ನರಕವ ಸೆರೆಮನೆಯಲ್ಲಿಟ್ಟಿತ್ತು. ಅವಳನ್ನು ಸೆರೆಹಿಡಿದಾಗ ಆಕೆಯ ಸಹಚರರು "ನಮ್ಮ ನಿಮ್ಮ ಪುನರ್ಮಿಲನ ಎಲ್ಲಿ, ಯಾವಾಗ?" ಎಂದು ಕೇಳಿದರಂತೆ. ಆಗ ಆ ವೀರವನಿತೆ ಗುಡುಗಿದಳು:—'ಸ್ವತಂತ್ರ ಭಾರತದಲ್ಲಿ!' ನೋಡಿದೆಯೊ, ಆಕೆಯು ದೇಶಪ್ರೇಮವನ್ನು? ನೀನು ಸಹ ವೀರ ಭಾರತೀಯನೆ ಅಲ್ಲವೆ? ಅದನ್ನುಳ ಒಂದು ವಿಷಯವನ್ನು ಯೋಚಿಸಿಕೊಂಡರೆ ಮೈ 'ಜುಂ'ಎನ್ನುತ್ತದೆ; ರೋಮಾಂಚನವಾಗುತ್ತದೆ: ಒಬ್ಬ ಬ್ರಿಟೀಷ ಸೇನಾಧಿಕಾರಿಯಂತೆ, ಆಕೆಯನ್ನು ಕೇಳಿದ:—

"ನೀನು ಯುದ್ಧಕ್ಷೇತ್ರಕ್ಕೆ ಹೊರಟ್ಟಿದ್ದಯಾ?"

"ಹೋಗಿದ್ದೆ."

"ಬ್ರಿಟಿಷರೊಡನೆ ಯುದ್ಧ ಮಾಡಿದೆಯಾ?"

"ಬ್ರಿಟೀಷರೊಡನೆ ಯುದ್ಧ ಮಾ ನೂಡಿದ್ದಲ್ಲ, ಅನೇಕ ಬ್ರಿಟಿಷರನ್ನು ತಿವಿದು ಕೊಂದು ಹಾ !"

"ಯುದ್ಧಕ್ಷೇತ್ರದಲ್ಲಿ ನನ್ನನ್ನು ಬಿಡ್ಡರೆ...."

ಮುಗಿಸುವ ಮೊದಲೆ ಆ ವೀರ ಸಿ "ನಿನಗೆ ಮೊದಲು ಗುಂಡಿಕ್ಕಿ ಕೊಲ್ಲುತ್ತಿದ್ದೆ," ಎಂಬ ಉತ್ತರವಾಣಿಯನ್ನೇ ಹೊರ ಹಾಕಿದಳು. ಎಂತಹ ದೇಶಪ್ರೇಮ! ಎಂತಹ ಕ್ಷಾತ್ರತೇಜ! ಅವಳನ್ನು ನೋಡು, ನಿನ್ನನ್ನು ನೀನು ನೋಡಿಕೊ, ಮೂಢ! ನೀನು ಸಹ ಕೆಚ್ಚೆದೆಯ ವೀರ ಭಾರತೀಯನಲ್ಲವೆ? ನೋಡು, ಆಕೆ ಸ್ತ್ರೀಯಾಗಿ, ನೀನೆನ್ನುವಂತೆ ಅಬಲೆಯಾಗಿ, ಭರತಖಂಡದ ಮಾನವನ್ನೂ ಕೀರ್ತಿಧ್ವಜವನ್ನೂ ನೂರ್ಮಡಿಸಿದಳು. ನೀನು ಗಂಡುಸಾಗಿ, ಅವಳೆನ್ನುವಂತೆ ಎಮ್ಮೆ ಹೊತ್ತ ಗಂಡುಸಾಗಿ ಏನು ಮಾಡಿದ್ದೀಯೆ?"

"ಏನು ಮಾಡಬೇಕು?" ನಾನು ಸಿಡಿನುಡಿಯಲ್ಲಿ ಕೇಳಿದೆ.

"ಮಾಡಬಲ್ಲೆಯಾ?"

"ಖಂಡಿತವಾಗಿ!"

"ಹೇಳಲೇ?"

"ಹೇಳು. ಇನ್ನೂ ಸಂಶಯವೇ?"

"ಹಾಗಾದರೆ ನಿನ್ನ ಈ ಧಳಕು ಮಿಳುಕಿನ ಉಡಿಗೆ-ತೊಡಿಗೆಗಳನ್ನು ಕಳಚಿ ಬಿಸಾಕತ್ತ ಬೆಂಕಿಗೆ. ದೇಶಭಕ್ತನಾಗು; ದೇಶದ ಹಿತಚಿಂತಕನೆನಿಸು; ಗಾಢ ನಿದ್ರಾಸಕ್ತರಾದ ಆ ಭಾರತೀಯರನ್ನು ಎಚ್ಚರಿಸು; ವೀರರನ್ನಾಗಿಸು; ಸ್ವಾತಂತ್ರ್ಯಪಥದತ್ತ ಅವರನ್ನು ದೂಡು! ಬ್ರಿಟಿಷರ ಅಪವಿತ್ರ ಪಾದಗಳ ತುಳಿತಗಳಿಂದ ಜೂರುಜೂರಾಗಿ ಹೊರಟ ಆ ನನ್ನ ಪವಿತ್ರ ಜಾವುಟವನ್ನು, ಆ ತ್ರಿವರ್ಣಧ್ವಜವನ್ನು ರಕ್ಷಿಸಿರಿ! ಕಾಪಾಡಿರಿ! ಚಿರಕಾಲವೂ ಸ್ವತಂತ್ರ ಭಾರತದ ದಿಗಂತದಲ್ಲಿ ನಿರ್ಭಯವಾಗಿ ಹಾರಾಡುವಂತೆ ಮಾಡಿರಿ! ಪೆರೆಯಿರಿ! ಹಿರಿಯ ಕ್ಷಾತ್ರತೇಜವನೆನಿಸಿರಿ; ಹಿರಿದು ಭಾವನೆಯನೆನಿಸಿರಿ; ಹಿರಿಯರ ಜಾಕಗಳನ್ನೊಪ್ಪುವ ಇಂದಿನ ಜನರಂಗಕ್ಕೆ ತೋರಿರಿ; ಜಾಳಿರಿ!"

"ತಮ್ಮ ಜೀವಾಧಾರ ತಾಯೆ! ಆದರೆ.....

"ಏನು? ಪ್ರಾಣಾಹುತಿಯಿಂದವ ಸಮಯ ಒಂದರೆ ಹೇಡಿಯಾಗುವಯಾ?"

"ಛೆ! ಹಾಗೆನ್ನದಿರಿ. ಪ್ರಾಣವನ್ನು ಈಗಲೇ ಕೊಡಬೇಕಾದ ಪ್ರಸಂಗ ಒಂದರೂ ಹಿಂದೆ ಮುಂದೆ ನೋಡದೆ ತಲೆಯೊಡ್ಡುವೆ...."

"ಮತ್ತೆ ಆದರೆ-ಇದರೆಗಳ ಕಂತೆಗಳ ಹೊರೆಯೇಕೆ?"

"ಆದರೆ....ನೀನು ಯಾರು ತಾಯೆ?"

ನನ್ನ ತಲೆ ಸವರುತ್ತಾ—"ಮಗು, ನಾನು ವಸುಂಧರೆಯ ಮಗಳು!" ಅವಳ ಮುದ್ದು ಕಣ್ಣುಗಳಲ್ಲಿ ಇನ್ನೊಮ್ಮೆ ಕಣ್ಣಹನಿಗಳು ಹೊಳೆತುವು. ನಾನು ನನ್ನ ಪಂಚೆಯ ತುದಿಯಿಂದ ಅವಳ ಕಣ್ಣ ಹನಿಗಳನ್ನು ಒರಸುತ್ತಾ ಕೇಳಿದೆ:—

"ತಾಯೇ, ನಿಮ್ಮ ಹೆಸರು?"

ಅವಳು ನನ್ನನ್ನು ತಬ್ಬಿಕೊಳ್ಳುತ್ತಾ ಉತ್ತರವಿತ್ತಳು—

"ನಿರ್ಭಾಗ್ಯೆ—ಭಾರತಿ!"

ತನುವು ನಡುಗಿತು; ಮನವು ಮರುಗಿತು; ನನ್ನ ಕಣ್ಣುಗಳು ತೆರೆದುವು. ಹೊರಗೆ ಕಂಡೆ: ದಿನಕರನೆನಿಸಿದ್ದ ಹೊಂಬಣ್ಣದ ಬೆಳಕನ್ನು.




## ೫೪. ನಲ-ದಮಯಂತಿ

( ಏದಂಕಿನ ಪೌರಾಣಿಕ ಸಂಗೀತಪ್ರಧಾನ ನಾಟಕ )

ಬರೆದವರು : ವೈ. ವಾ. ಕೆರೂರ ವಾಸುದೇವಾಚಾರ್ಯರು.
ಪ್ರಕಾಶಕರು: ಸ್ವಾಮಿ. ರಾ. ಕೆರೂರ ಬಾಗಿಲುಕೋಟೆ ಬೆಳ೧೯೩೦.

ವೈ. ವಾ. ಕೆರೂರ ವಾಸುದೇವಾಚಾರ್ಯರು ಬರೆದ ಅನೇಕ ಪುಸ್ತಕಗಳು ಗ್ರಂಥರೂಪದಲ್ಲಿ ಇನ್ನೂ ಪ್ರಕಟವಾಗಿಲ್ಲ. ಅವರ ಕೃತಿಗಳನ್ನೆಲ್ಲ ವ್ಯವಸ್ಥಿತ ರೀತಿಯಿಂದ ಪ್ರಕಟಿಸುವ ಕಾರ್ಯವನ್ನು ಶ್ರೀ. ಸ್ವಾಮಿ. ರಾ. ಕೆರೂರವರು ಹೊತ್ತು **ವಾಸುದೇವ ಸಾಹಿತ್ಯರತ್ನ ಮಾಲೆಯ** ಮೊದಲನೆಯ ರತ್ನವೆಂದು, ಈ ನಲ-ದಮಯಂತಿಯನ್ನು ಪ್ರಕಟಿಸಿದ್ದಾರೆ. ಈ ಸ್ತುತ್ಯಕಾರ್ಯವನ್ನು ಕೈಕೊಂಡು ಶ್ರೀ. ಸ್ವಾಮಿ ರಾ. ಕೆರೂರ ಅವರು ಕನ್ನಡ ಸಾಹಿತ್ಯಕ್ಕೆ ಉಪಯುಕ್ತ ಸೇವೆ ಸಲ್ಲಿಸಿದ್ದಾರೆಂದು ಹೇಳಬಹುದು.

ಕೆರೂರ ವಾಸುದೇವಾಚಾರ್ಯರನ್ನು ಅರಿಯದ ಕನ್ನಡಿಗರಿಲ್ಲ. ಇವರು ಕನ್ನಡ ಸಾಹಿತ್ಯದ ಸಂಕ್ರಾಂತಿಯ ಕಾಲದಲ್ಲಿ ಉದಯ ಹೊಂದಿ, ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟು ಮಾಡಿದರೆಂದು ಹೇಳಬಹುದು. ಸಾಹಿತ್ಯವೈಕ್ಷದ ಕಾವ್ಯ, ನಾಟಕ, ಕಥೆ, ಕಾದಂಬರಿಗಳ ಕಾಮೋಪಶಾಖೆಗಳನ್ನು ತಮ್ಮ, ಅಮೃತ ಹಸ್ತದಿಂದ ತಟ್ಟಿ, ಕನ್ನಡ ಸಾಹಿತ್ಯಕ್ಕೆ ವಸಂತೋದಯವನ್ನುಂಟು ಮಾಡಿದ ಶ್ರೇಯಸ್ಸು ಶ್ರೀ. ವಾಸುದೇವಾಚಾರ್ಯರಿಗಿದೆ.

'ನಲ-ದಮಯಂತಿ'ಯು ಅವರ ಮೊಟ್ಟಮೊದಲಿನ ಕೃತಿಯಾಗಿರಬಹುದಾಗಿದೆ. ಆದಕ್ಕೆಂದೇ ಆಚಾರ್ಯರ ಇನ್ನುಳಿದ ಕೃತಿಯೊಳಗಿರುವ ಬಿಡಗು ಇದರಲ್ಲಿ ಅಲ್ಪಪ್ರಮಾಣದಲ್ಲಿದೆ. ಹಳೆಯ ಸಾಂಪ್ರದಾಯಿಕ ನಾಟಕಗಳ ನೆರಳು ಇದರ ಮೇಲೆ ಬಿದ್ದಿದೆ. ಆದರೂ ಹೊಸತನವು ಅಲ್ಲಲ್ಲಿ ಹೊರಹೊಮ್ಮುದೆ ಇಲ್ಲ. ೩ನೆಯ ಅಂಕಿನ ೩ನೆಯ ಪ್ರವೇಶದಲ್ಲಿ ( ಪು. ೪೩ ) ನಲನು ಸುಮತಿಯ ಕೂಡ ಮಾತಾಡುತ್ತಿದ್ದಾಗ ತನ್ನಷ್ಟಕ್ಕೆ ತಾನೇ ಮಾತಾಡಬೇಕಾಗುತ್ತದೆ. ಆಗ 'ಸ್ವಗತ' ಎಂದು ಒಂದು ಪದವನ್ನೇ ಹಾಡುತ್ತಾನೆ. ಇದು ಸ್ವಲ್ಪ ಅಸಂಬದ್ಧವಾಗಿ ತೋರುತ್ತದೆ. ದಮಯಂತಿಯ ಸ್ವಯಂವರದಲ್ಲಿಯೆ ಕಥೆಯ ಸ್ವಾರಸ್ಯವು ಹುದುಗಿದೆ. ಆದರೆ ಈ ರಸಮಯವಾದ ಪ್ರಸಂಗವು ರಂಗಭೂಮಿಯ ಮೇಲೆ ನಡೆಯದೆ, ನೇಪಥ್ಯದಲ್ಲಿ ನಡೆದು ಹೋಗುತ್ತದೆ. ಈ ನಾಟಕದೊಳಗಿನ ಪದ್ಯಗಳಲ್ಲಿ ಆಚಾರ್ಯರ ಕಾವ್ಯಪ್ರತಿಭೆಯು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದುದು ಕಂಡು ಬರುತ್ತದೆ.

ಕನ್ನಡ ಸಾಹಿತ್ಯಕ್ಕೆ ನವಚೇತನವನ್ನಿತ್ತ ಆಚಾರ್ಯರ ಬರೆವಣಿಗೆಯು ಎಲ್ಲಿದ್ದರೂ ಯಾವ ಸ್ವರೂಪದಲ್ಲಿದ್ದರೂ ಸಂಗ್ರಹಯೋಗ್ಯವಾದದ್ದು. ಈ ದೃಷ್ಟಿಯಿಂದ ಈ ನಾಟಕವೂ ಪ್ರತಿಯೊಬ್ಬ ಕನ್ನಡಿಗನಿಗೂ ಸಂಗ್ರಹಯೋಗ್ಯವಾಗಿದೆಯೆಂದು ಹೇಳದಿರಲಾರೆವು.

ಪ್ರಕಾಶಕರು ಆಚಾರ್ಯರನ್ನರಿತವರಿಂದ ಅವರ ಗೆಳೆಯರಿಂದ ಸವಿಸ್ತಾರದಿಂದ ಮುನ್ನುಡಿಯನ್ನು ಬರೆಯಿಸಬೇಕಾಗಿತ್ತು. ಮುಂದಿನ ಪ್ರಕಟನೆಗಳಲ್ಲಿ ಇದನ್ನು ಗಮನಿಸಬೇಕಾಗಿ ವಿನ್ನಪ.

—ಪುಟಿಳಿ.

## ೫೫ ಜರತಾರಿ ಕುಪ್ಪಸ

ಸಣ್ಣ ಕತೆಗಳ ಸಂಗ್ರಹ – ಶ್ರೀ. ಎಚ್. ಅನಂತಭಟ್ಟರು ಲೇಖಕರು. ಪ್ರಕಾಶಕರು ಶ್ರೀ. ಎಸ್. ಎನ್. ಎಸ್. ಅಯ್ಯರ್, ಜನತಾಶಿಕ್ಷಣ ಸಮಿತಿ, ಸಂಸ್ಕೃತಿಪುರಂ, ಮೈಸೂರು.

ಈ ಸಂಗ್ರಹದಲ್ಲಿ ಒಟ್ಟು ಹನ್ನೊಂದು ಕತೆಗಳಿವೆ. ಇದರಲ್ಲಿ ೧೫. ಪುಟದ 'ಜರತಾರಿ ಕುಪ್ಪಸ'ವೇ ಎಲ್ಲಕ್ಕೂ ದೊಡ್ಡ ಕತೆ. 'ಅದೃಶ್ಯ ಸ್ಮಾರಕ' ಒಂದನ್ನು ಬಿಟ್ಟರೆ, ಉಳಿದುವುಗಳ ವಸ್ತು ಮಧ್ಯಮತರದ ಸಾಮಾನ್ಯಜೀವನಕ್ಕೆ ಸಂಬಂಧಿಸಿದುದು. ಸನ್ನಿವೇಶದ ನಾವೀನ್ಯವಾಗಲಿ, ವ್ಯಕ್ತಿಸ್ವಭಾವದ ಅಸಾಮಾನ್ಯತೆಯಾಗಲಿ, ಈ ಕತೆಗಳಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಮಟ್ಟು ಕಲಾವಂತನಾದವನು ಎಂಥ ಕಲ್ಲಿನಿಂದಲೂ ಅದಕ್ಕೆ ತಕ್ಕ ಶಿಲ್ಪವನ್ನು ರಚಿಸುವಂತೆ, ಈ ಕತೆಗಳ ಲೇಖಕರು ಕೂಡ ತಮ್ಮ ಕಲಾಪಂತಿಕೆಯಿಂದ ಸಾಮಾನ್ಯ ಸಂಗತಿಗಳಲ್ಲಿಯೂ ಜೀವಕಳೆಯನ್ನು ತುಂಬಿ, ಮನಸೆಳೆಯುವಂತೆ ಅವುಗಳನ್ನು ನಮ್ಮೆದುರಿನಲ್ಲಿ ನಿಲ್ಲಿಸಿದ್ದಾರೆ; ಆದರೆ ಹೊಸಬನಾದವನು ಆತ್ಮವಿಶ್ವಾಸದ ಕೊರತೆಯ ಮೂಲಕ ಮೇಲ್ಬಣ್ಣಕ್ಕೇ ಮಹತ್ತ್ವ ಕೊಡುವಂತೆ, ಇಲ್ಲಿಯ ಕೆಲವು ಕತೆಗಳ ಕೊನೆಯನ್ನು ಒಪ್ಪದ ಬಣ್ಣದಿಂದ ಚಿತ್ರಿಸಿದಂತಿದೆ. ತಂಗಿಗೆ 'ಜರತಾರಿ ಕುಪ್ಪಸ' ಕೊಡಿಯಿಸಿದ ನಾಗೇಶನನ್ನೂ, 'ಸೇವಾಧುರೀಣ'ನಾದ ಸೋಮಸನನ್ನೂ, 'ಕಾಣದ ಕೈ'ಯ ಗೋಪಾಲರಾಯನನ್ನೂ ಸಾಮಿಸಿದ್ದು ಸಿನೆಮಾ ಚಿತ್ರಗಳ ರೀತಿಗೆ ಇಳಿದಿದೆ. 'ಒಂದು ಭಾನುವಾರ'ದ ಗಂಡ ಎರಡು ರೂಪಾಯಿಯಲ್ಲಿ ಹೆಂಡತಿಗೆ ಜೀನ್ನಾಪ ವಸ್ತುವನ್ನು ಕೊಡಿಯಿಸಿ, ಆ ಬೆಲೆಗೆ ಯಾವುದೂ ಸಿಗದಿದ್ದುದಕ್ಕೆ ಆತ್ಮಹತ್ಯೆಯ ವಿಚಾರಮಾಡುವುದು ಅಸ್ವಾಭಾವಿಕವೆನಿಸುವುದು 'ಯೌವನದ ಮದ'ದಲ್ಲಿಯ ಕಥಾವಸ್ತುವಂತೂ ಒಂದು ಕಾದಂಬರಿಗೇ ತಕ್ಕುದಾಗಿದ್ದು, ಆದರಲ್ಲಿಯೂ ಒಂದು ಬಗೆಯ 'ಸ್ಪಂಟು' ತಲೆದೋರಿದೆ! 'ಮುಂಗಾರು ಮೋಡ'ದ ರಚನೆ ಸಾಕಷ್ಟು ಕೌಶಲ್ಯಪೂರ್ಣವಾಗಿಲ್ಲ. 'ಅದೃಶ್ಯ ಸ್ಮಾರಕ'ದ ರೂಪಕವೂ ತಕ್ಕಮಟ್ಟಿಗೇ ಇದೆ. 'ವಾದವೈಖರಿ,'

ಕಳವಾದ ಡಾಬ್ಬು' ಇವುಗಳಲ್ಲಿ ಕಳುವಂತಹದೇನೂ ಇಲ್ಲ. ಇನ್ನುಳಿದುವು ಎರಡೇ ಕತೆಗಳು : 'ಮೂರು ಹುಣ್ಣಿಮೆಗಳು,' ಅತ್ತಿದ್ದು ನಾಲ್ಕು ಬಾರಿ,' ಇವು ಎರಡೂ ಸುಂದರವಾದ ಕಲಾಕೃತಿಗಳು.

ಈ ಸಂಗ್ರಹದಲ್ಲಿ ಮೇಲ್ನೋಟಕ್ಕೆ ಕೆಲವು ಅಪೂರ್ಣತೆಗಳು ಕಂಡರೂ, ಗುಣದ ಭಾಗ ತುಂಬಿಹ್ಹಾಗಿದೆ ಎಂಬುದನ್ನು ಓದುಗರು ಮನಗಾಣಬಹುದು. ವಿಷಯವಾಗಿ ನಿರ್ದುಷ್ಟವಾದ ಸುಂದರವಾದ ಶೈಲಿ, ಮನೋಜ್ಞವಾದ ಸಂಭಾಷಣದ ರೀತಿ, ಕವಿತ್ವಪೂರ್ಣವಾದ ವರ್ಣನಾಚಾತುರ್ಯ, ಔಚಿತ್ಯವನ್ನು ಎಲ್ಲಿಯೂ ಮೀರದಿರುವ ಸಂಯಮ ಇವು ಈ ಲೇಖಕರ ವೈಶಿಷ್ಟ್ಯ ಎನ್ನಬಹುದು. ಇವರಲ್ಲಿ ಬಳಕೆಗಾರಿಕೆಗೆ ಬೇಕಾಗುವ ಗುಣ, ಬೆಳೆದು ಪೂರ್ಣಗೊಳ್ಳುವ ಹಾಯಿಲ್ಲದೆ ಎಂಬುದನ್ನು ನೆವು ಈ ಸಂಗ್ರಹದಿಂದ ಕಾಣಬಹುದು. ಇತ್ತೀಚೆಗೆ ಪ್ರಕಟವಾದ ಕಥಾಸಂಗ್ರಹಗಳಲ್ಲಿ ಇದಕ್ಕೆ ಸರಿಯದ ಸ್ಥಾನ ದೊರೆಯಬಹುದೆಂದು ನಮ್ಮ ಅಭಿಪ್ರಾಯ. ಇವರಿಂದ ಇನ್ನುಳಿದ ಕಥಾಸಂಗ್ರಹಗಳೂ ಬೇಗ ಬೆಳಕಿಗೆ ಬರಲಿ ಎಂದು ನಾವು ಆಶಿಸುತ್ತೇವೆ.

—ಎಲ್. ಜಿ. ಬೇ.

## ಚೀನ ಜಾಗ್ರತ ಚೀನ

(ಪರಿಚಯಾತ್ಮಕ ಗ್ರಂಥ)

ಬರೆದವರು ಶ್ರೀ ಎ. ಎಸ್. ಕುಲಕರ್ಣಿ, ಬಿ. ಎ. ವಕೀಲರು, ಅಥಣಿ. ಧಾರವಾಡದ ಮಿಂಚಿನಬಳ್ಳಿಯ ೭೫ ಪರ್ಷದ ಸಿರಿಯ ಕುಡಿ.

ಭಾರತದಂತೆಯೆ ಚೀನವೂ ಇದುರಿಗೆ ಬಿದ್ದುಕೊಂಡಿದ್ದು ಈಗ ಎದ್ದೇಳಲು ಪವಣಿಸುತ್ತಿರುವ ಮಹಾರಾಷ್ಟ್ರ. ಎರಡಕ್ಕೂ ಉಜ್ವಲವಾದ ಪುರಾತನ ಚರಿತ್ರೆಯಿಂದ ಜಗತ್ತನ್ನು ಆಶ್ಚರ್ಯಗೊಳಿಸುವಂತಹ ಸಂಸ್ಕೃತಿಭಾಂಡಾರವಿದೆ. ಸಂಸ್ಕೃತಿಯ ಅತಿಶಯ ಅವಲಂಬನೆಯು ಲೌಕಿಕ ಸುಖ-ಶಾಂತಿಗೆ ಕಾರಣವಾಗುವಂತೆ, ಪರಾಕ್ರಮಣವನ್ನು ತಿಮಿರುವ ಶಕ್ತಿಯನ್ನು ಕಡಿಮೆಮಾಡುವುದೆಂಬ ಅನುಭವವು ಎರಡು ರಾಷ್ಟ್ರಗಳಿಗೂ ಸೆನ್ನಾಗಿ ಬಂದಿದೆ. ಜನಸಂಖ್ಯಾಬಾಹುಲ್ಯ, ದೇಶವೈಶಾಲ್ಯ, ಸುಭಿಕ್ಷಕ್ಷೇತ್ರ, ನದ-ನದಿಗಳ ವೈಪುಲ್ಯ ಮೊದಲಾದುವುಗಳ ಮೂಲಕ ಚೀನ-ಭಾರತಗಳು, ಜಗತ್ತಿನ ರಾಷ್ಟ್ರಗಳಲ್ಲಿ ಹಿರಿಯದೆನಿಕೆಯಲ್ಲಿರುವುವು; ಆದರಂತೆ ಕಾಲಕ್ಕೆ ತಕ್ಕಂತೆ ಬಣ್ಣಬದಲಿಸುವ ಪ್ರವೃತ್ತಿಯಿರದುದರಿಂದ ಎರಡು ರಾಷ್ಟ್ರಗಳ ನರೂ ಒಂದೊಂದು ಬಗೆಯಿಂದ ಬಹು ರಾಜಕೀಯ ರಾಧೀನತೆಯಲ್ಲಿ ನರಳುತ್ತಿರುವರು. ಕುಂಬಪ್ರಧಾನವಾದ ಸಾಮಾಜ್ಯವ್ಯವಸ್ಥೆಯ ಮೂಲಕ, ಸ್ವದೇಶದ ಬಂಧುಪ್ರಜೆಯ ದೃಷ್ಟಿಯನ್ನು ಕಳೆದುಕೊಂಡು, ಅದರ ಮೂಲ ವಿಕಸನಾತ್ಮಕ ಭಾವನೆಯನ್ನು ಮರೆತು, ಜೀವನವನ್ನು ಬಂಡು ತೊಂದರೆಗೆ ಗುರಿಮಾಡಿಕೊಂಡಿವೆ ಎರಡೂ ರಾಷ್ಟ್ರಗಳು. ಆದುದರಿಂದ ಈಗ ಭಾರತೀಯರು ಚೀನೀಯರ ಚರಿತ್ರೆ ಧ್ಯಾಸಿಸಬೇಕಾಗಿದೆ; ಚೀನೀಯರು ಭಾರತೀಯರ ಚರಿತ್ರೆಯನ್ನು ಅಧ್ಯಯನ ಮಾಡಬೇಕಾಗಿದೆ.

ಇಷ್ಟುದಿನಗಳಂತೆ ಭಾರತಕ್ಕೆ ಚೀನಾ ಇನ್ನು ದೂರದುದಾಗಿ ಉಳಿವಂತಿಲ್ಲ. ಇದು ಪೌರ್ವಾತ್ಯ ರಾಷ್ಟ್ರಗಳನ್ನು ಸಂಘಟಿಸಬೇಕಾದ ಕಾಲ. ಭಾರತ-ಚೀನಾಗಳಂತಹ ಸುಸಂಸ್ಕೃತ ವಿಶಾಲ ರಾಷ್ಟ್ರಗಳು ಸಂಘಟಿತವಾಗಿ ಸ್ವತಂತ್ರವಾಗಿ ಕೆಲಸಮಾಡಲು ತೊಡಗಿದರೆ, ಜಗತ್ತಿನ ಸುಖ-ಶಾಂತಿಯನ್ನು ಇವು ಸಂರಕ್ಷಿಸಬಲ್ಲವು. ಎರಡು ರಾಷ್ಟ್ರಗಳ ಮುಂದಾಳುಗಳೂ ಸಂಘಟನೆಗಾಗಿ ಸ್ನೇಹಹಸ್ತ ಚಾಚಿದ್ದಾರೆ. ಇಂತಹ ಸಂದರ್ಭದಲ್ಲಿ ಪರಸ್ಪರರು ಪರಸ್ಪರರ ಭೂತ-ವರ್ತಮಾನಜೀವನವನ್ನು ಪರಿಚಯಮಾಡಿಕೊಳ್ಳಬೇಕಾದುದು ತೀರ ಅಗತ್ಯ. ಶ್ರೀಮಾನ್ ಎ. ಎಸ್. ಕುಲಕರ್ಣಿಯವರು ಇಂಗ್ಲಿಷ್ ಭಾಷೆಯಲ್ಲಿರುವ ಅನೇಕ ಪುಸ್ತಕಗಳನ್ನು ಓದಿ, ಅವುಗಳ ಅಧ್ಯಯನದ ಫಲವಾಗಿ ಕನ್ನಡಿಗರಿಗಾಗಿ ಈ ಪುಸ್ತಕವನ್ನು ಬರೆದು ಒದವಿಸಿದುದು ಅಭಿನಂದನಾರ್ಹ ಸಂಗತಿ.

ಇದರಲ್ಲಿ ಹನ್ನೆರಡು ವಿಭಾಗಗಳಿದ್ದು ೧ ಚೀನದ ಪೂರ್ವ ಇತಿಹಾಸ, ೨ ಅರ್ವಾಚೀನ ರಾಷ್ಟ್ರ, ೩ ಹೋರಾಟದ ಹೆಜ್ಜೆಗಳು, ೪ ಸ್ವಾತಂತ್ರ್ಯದ ಹೋರಾಟ, ೫ ಒಕ್ಕಟ್ಟಾದ ಚೀನ, ೬ ಪ್ರಜಾಧಿಪತ್ಯಕ್ಕೆ ವಿರೋಧ, ೭ ಚೀನೀಬಲ, ೮ ಆರ್ಥಿಕಬಲ, ೯ ಜವಾನು ಸೋಲಲೇಬೇಕು, ೧೦ ಸ್ವತಂತ್ರ ಚೀನ ಎನು ಮಾಡುವುದು? ೧೧ ಚಿಯಾಂಗ್ ಕೈಶೇಕ್ (ಚೀನೀಯರ ಜೀವನ, ಜೀವನಕಲೆ, ಧರ್ಮ), ೧೨ ಚೀನದ ಭಾಷೆ ಎಂಬ ವಿಷಯಗಳು, ೮ ವಿಭಾಗಗಳಲ್ಲಿ ಕ್ರಮವಾಗಿ ಚರ್ಚಿಸಲ್ಪಟ್ಟಿರುವುವು.

ಅವಸರದ ಮೂಲಕವೊ ಹೊಸಕೈಯೆಂದೊ ಬರೆದ ಭಾಷೆಯ ರೀತಿ ಅಲ್ಲಲ್ಲಿ ಸಂದಿಗ್ಧವೆನಿಸುತ್ತದೆ. ವಿಷಯವಿವೇಚನೆ ತೀರ ಸಂಕ್ಷಿಪ್ತವೆನಿಸುತ್ತದೆ. ಇಂಗ್ಲಿಷ್ ಭಾಷೆಯ ಗ್ರಂಥಗಳನ್ನೇ ಅವಲಂಬಿಸಿ ಬರೆದುದರಿಂದ, ಅನೇಕ ಚೀನಾ ನಾಮಪದಗಳು ಸರಿಯಾದ ಉಚ್ಚಾರದಿಂದ ಕೂಡಿದುವಾಗಿಲ್ಲ. ಚರಿತ್ರಲೇಖನಕ್ಕೆ ಬೇಕಾಗುವಂತಹ ಭಾಷಾಸೌಷ್ಠವವಿಲ್ಲ; ತಂತ್ರಜನುಷ್ಕೃತಿ ಇಲ್ಲ. ಇವೆಲ್ಲ ಕೊರತೆಗಳಿದ್ದರೂ ಕನ್ನಡದಲ್ಲಿರುವ ಚೀನಾ-ಚರಿತ್ರ ವಿಷಯಕ ಗ್ರಂಥಗಳ ಕೊರತೆಯನ್ನು ಕಳೆಯಲು ಇದು ಮುಂದೆ ಬಂದುದರಿಂದ, ಕನ್ನಡ ವಾಚಕವರ್ಗ ಇದನು ಸ್ವಾಗತಿಸಲೆ ಬೇಕಾಗಿದೆ. ಚೀನದ ಬಗೆಗೆ ಗ್ರಂಥಗಳನ್ನು ಬರೆಯಬೇಕೆಂದು ಬಯಸುವ ನಮ್ಮ ಲೇಖಕರು, ರಾಹುಲಸಾಂಕೃತ್ಯಾಯನ ಮೊದಲಾದವರಂತೆ ಚೀನಕ್ಕೆ ಹೋಗಿ, ಅಲ್ಲಿಯ ಜನರನು ಪ್ರತ್ಯಕ್ಷವಾಗಿ ಕಂಡು, ಅವರ ಬಾಯಿಂದಲೆ ಅವರ ಚರಿತ್ರೆಯನ್ನು ಕೇಳಿ ಬರೆಯುವ ಕಾಲ ಬೇಗನೆ ಬರಲೆಂದು ನಮ್ಮ ಹಾರೈಕೆ.

—ಪಟಗೇರಿ ಕೃಷ್ಣಶರ್ಮ

# ಸಾದರ ಸ್ವೀಕಾರ

★

೧೧೨. **ಸ್ವತಂತ್ರ್ಯದ ಅಂತಿಮ ಹೋರಾಟ**—(ಕಮ್ಯೂನಿಸ್ಟ್ ಪಾರ್ಟಿಯ ಚುನಾವಣೆಯ ಘೋಷಣೆ.) ಪ್ರಕಾಶಕರು ಶ್ರೀ. ಎನ್. ಎಲ್. ಉಪಾಧ್ಯಾಯ, ಜನತಾ ಸಾಹಿತ್ಯ, ಮುರಾಠಾಗಲ್ಲಿ ಹುಬ್ಬಳ್ಳಿ. ಕ್ರೌ. ಆ. ೫೪ ಪುಟಗಳು ಬೆಲೆ ೦—೩—೦.

ಪ್ರಾಂತೀಯ ಶಾಸನಸಭೆ—ಕೇಂದ್ರ ಶಾಸನಸಭೆಗಳ ಚುನಾವಣೆಗಳಲ್ಲಿ ಹೋರಾಡಲು ನಿರ್ಣಯಿಸಿದ ಭಾರತೀಯ ಕಮ್ಯೂನಿಸ್ಟ್ ಪಕ್ಷ ಹೊರಡಿಸಿದ ತನ್ನ ರಾಜಕೀಯ ವಿಚಾರದ ಘೋಷಣೆ ಯಿದು. ಕನ್ನಡಿಗರಿಗಾಗಿ ಕನ್ನಡ ಭಾಷೆಯಲ್ಲಿ ಪ್ರಕಟವಾಗಿದೆ. ಭಾರತದಲ್ಲಿಯ ರಾಜಕೀಯ ಪಕ್ಷಗಳಲ್ಲಿ ಕಮ್ಯೂನಿಸ್ಟರದೊಂದು ಕುತೂಹಲಕಾರಕ ವೈಶಿಷ್ಟ್ಯವೇ ಇರುವುದು. ಎಲ್ಲರೂ ಕೂಡಿಕೊಳ್ಳಬೇಕೆಂಬ ಉದ್ದೇಶವಿರಿಸಿಕೊಂಡಿದ್ದರೂ, ಎಲ್ಲರ ವಿರೋಧವನ್ನೂ ಎದುರಿಸಬೇಕಾಗಿರುವ ರಾಜಕೀಯ ತತ್ತ್ವ ಇವರದು. ಪರಿಚಯಮಾಡಿಕೊಳ್ಳಬೇಕೆನ್ನುವವರು ಈ ಘೋಷಣೆಯನ್ನು ಅವಶ್ಯವಾಗಿ ಓದಬೇಕು.

೧೧೩. **ನಬೀಸಾಹೇಬ ಬಾಲ್ಸಿಂಗ ಮಾಸ್ತರು**—(ವ್ಯಕ್ತಿ-ಪರಿಚಯ.) ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಪ್ರಕಟನೆ. ಪ್ರಕಾಶಕರು ಜನತಾ ಸಾಹಿತ್ಯ, ಮುರಾತಾಗಲ್ಲಿ, ಹುಬ್ಬಳ್ಳಿ. ಕ್ರೌ. ಆ. ೧೮ ಪುಟಗಳು, ಬೆಲೆ ೦—೧—೦.

ವಿಜಾಪುರ ಜಿಲ್ಲೆಯ ರಾಜಕೀಯ ಕಾರ್ಯಕರ್ತರಾದ ಬಂಧು ಬಾಲ್ಸಿಂಗ ಮಾಸ್ತರರ ಪರಿಚಯವಿದು. ಮೊದಲಿನಿಂದಲೂ ಕಾಂಗ್ರೆಸ್ ನಿಷ್ಠರಾದ ಇವರು ಇತ್ತೀಚೆಗೆ ಕಮ್ಯೂನಿಸ್ಟ್ ತತ್ತ್ವದ ಪುರಸ್ಕರ್ತರಾಗಿದ್ದಾರೆ. ತ್ಯಾಗಿಗಳಾದ ಶ್ರದ್ಧಾವಂತ ಕೆಲಸಗಾರರು. ಜನರ ವಿಶ್ವಾಸವನ್ನು ಗಳಿಸಿಕೊಂಡವರು. ಈ ಸಲ ವಿಜಾಪುರ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಪರವಾಗಿ ಶಾಸನ ಸಭೆಗೆ ಹುರಿಯಾಳಾಗಿ ನಿಂತಿದ್ದರು. ಆರಿಸಿ ಬಂದಿದ್ದರೆ, ಇವರು ಮಾಡಿದ ಜನಸೇವೆಗೆ ತಕ್ಕ ಮನ್ನಣೆ ಸಿಕ್ಕಂತೆ ಆಗುತ್ತಿತ್ತು.

೧೧೪. **ಬೇಂದ್ರೆ ನಾಙ್ಮಯದರ್ಶನ**—(ಕವಿ-ಕಾವ್ಯ ಪರಿಚಯ.) ಸಂಪಾದಕರು ಶ್ರೀಮಾನ್ ಎಚ್. ಜಿ. ಜೋಶಿ ಬಿ. ಎ. (ಆನರ್ಸ್). ಪ್ರಕಾಶಕರು ಶ್ರೀ. ರಾಮಾಚಾರ್ಯ ಕಾಖಂಡಿಕಿ, ಸಂಪಾದಕರು 'ನಿರ್ಭಯ' ಜಮಖಂಡಿ ಕ್ರೌ ಆ. ೧೬+೯೩ ಪುಟಗಳು. ಬೆಲೆ ೧—೪—೦.

೧೧೫. **ಶಿಕ್ಷಕ ಜೀವನ**—(ಪದ್ಯಸಂಗ್ರಹ). ಲೇಖಕರು ಶ್ರೇಯುತರುಗಳಾದ ಬಬಲೇಶ್ವರ ಸಿ. ಸಿದ್ಧವೀರರು, ಅಂಬಿಗೇರ ಪಣಸುಂತರಾಯರು, ಶ್ರೀ. ಮೂರ್ತಿ ಚಿಂತಾಮಣಿಯವರು. ಪ್ರಕಾಶಕರು ಶ್ರೀ. ಬಿ. ಎಂ. ಪಟ್ಟಣಶೆಟ್ಟಿ, ಪ್ರೊಪ್ರೈಟರ್ 'ಶಾಂತಿಸದನ' ವಿಜಾಪುರ. ಫ್ರೂ. ಕ್ರಾ. ಆ. ೩೨ ಪುಟಗಳು. ಬೆಲೆ ೦—೨—೦.

ಪ್ರಾಥಮಿಕ ಶಿಕ್ಷಕರ ಕಾರ್ಯದ ಮೇಲ್ಮೆಯನ್ನೂ ಸದ್ಯದ ಅವರ ಆರ್ಥಿಕ ದುರವಸ್ಥೆಯನ್ನೂ ಕುರಿತು ಬರೆದ ಹಾಡು-ಕವಿತೆಗಳು ಇದರಲ್ಲಿವೆ.

೧೧೬. **ಸಭಾಶಾಸ್ತ್ರ**—(ಸಭೆಗಳ ಕಾಯಿದೆ ಮತ್ತು ಕಾರ್ಯಪದ್ಧತಿ). ಲೇಖಕರು ಶ್ರೀ ಶಂಕರರಾವ ಜೋಶಿ ಬಿ ಎ, ಎಲ್ಎಲ್. ಬಿ. ವಕೀಲರು ಬೆಳಗಾಂವಿ ಬೆಳಗಾಂವಿಯ 'ನ್ಯಾಯಬೋಧ' ಪ್ರಕಾಶನದ ಗ್ರಂಥಪ್ರಕಟನೆಯಿದು. ಡೆ ಆ. ೧೬೦ ಪುಟಗಳು. ಬೆಲೆ ೨—೮—೦.

೧೧೭. **ವಿಜಾಪುರದ ಸೂಚನ ಆಯುರ್ವೇದ ಕಾರ್ಯಾಲಯದ ಔಷಧಿಗಳ ಸೂಚಿಪತ್ರ**—(೨ನೆಯ ಆವೃತ್ತಿ) ಕ್ರೌ ಆ ೭೨ ಪುಟಗಳು. ಬೆಲೆ ೦—೪—೦.

ಕರ್ನಾಟಕದ ಕಟ್ಟಭಿಮಾನಿಗಳಾದ ಅಜ್ಜ ಕನ್ನಡಿಗ ವೈದ್ಯರಿಂದಲೂ ಕನ್ನಡಿಗರ ಬಂಧುವಾಳದಿಂದಲೂ ಹೊರಟ ಈ ಔಷಧಿ ಕಂಪನಿಯು ತನ್ನ ಔಷಧಿಗಳ ಗುಣದಿಂದ ಕನ್ನಡ ನಾಡಿನಲ್ಲೆಲ್ಲ ಖ್ಯಾತಿಯನ್ನು ಪಡೆಯಬೇಕಲ್ಲದೆ, ಪರಪ್ರಾಂತದ ಪೇಟೆಗಳಲ್ಲಿಯೂ ಪ್ರಸಿದ್ಧಿ ಪಡೆಯುವಂತೆ ಹಾರೈಸುವೆವು. ಕರ್ನಾಟಕದ ವೈದ್ಯರು ಈ ಕಂಪನಿಯ ಔಷಧಿಗಳನ್ನು ಬಳಸಿ ನೆರವು ನೀಡಬೇಕು.

೧೧೮. **ಒಂದೇದಾರಿ**—(ಕಥಾಸಂಕಲನ) ಬರೆದವರು ಶ್ರೀಮಾನ್ ಏ. ಕೇಶವ್ ಪ್ರಕಾಶಕರು ಜಾಜಾದ್ ಪಬ್ಲಿಕೇಶನ್ಸ್, ಬಸವನಗುಡಿ, ಬೆಂಗಳೂರು. ಕ್ರೌ. ಆ. ೪೪ ಪುಟಗಳು. ಬೆಲೆ ೦—೧೨—೦.

೧೧೯. **ಜನತಾ**—(ಹೊಸ ಮಾಸಪತ್ರಿಕೆಯ ಘೋಷಣೆಯ ಮುನ್ನುಡಿ ಸಂಚಿಕೆ). ಸಂಪಾದಕರು ಶ್ರೀಮಾನ್ ಏ. ಕೇಶವ್ ಆವರು; ಪ್ರಕಾಶಕರು ಜಾಜಾದ್ ಪಬ್ಲಿಕೇಶನ್, ಬಸವನಗುಡಿ, ಬೆಂಗಳೂರು. ಕ್ರೌ. ೧೮+೩೬ ಪುಟಗಳು. ಪಾ. ಚಂ. ೩-೦-೦; ಮುನ್ನುಡಿ ಸಂಚಿಕೆಗೆ ೦—೪—೦.

೧೨೦. **ವಿದ್ಯಾರ್ಥಿ ಕಾರ್ಯಕ್ರಮ**—(ಪರಿಚಯಾತ್ಮಕ ಕಿರುಹೊತ್ತಗೆ). ಬರೆದವರು ಶ್ರೀಮಾನ್ ನಾರಾಯಣ ಆಗರವಾಲಾ ಎಂ. ಎ., ಎಂ ಕಾಂ. ಮುಖ್ಯೋಪಾಧ್ಯಾಯ, ಸೆಕ್ಸೇರಿಯಾ ವಾಣಿಜ್ಯ ಕಲಾಭವನ, ವರ್ಧಾ. ಕನ್ನಡಿಸಿ ಪ್ರಕಟಿಸಿದವರು ಶ್ರೀ. ವಿ. ಎಸ್ ನಾರಾಯಣರಾವ್, ಮ್ಯಾನೇಜಿಂಗ್ ಡೈರೆಕ್ಟರ್, ವಿಜಾರ ಸಾಹಿತ್ಯ ಲಿಮಿಟೆಡ್, ಬಳೇಪೇಟೆ, ಬೆಂಗಳೂರು ಸಿಟಿ. ಕ್ರಾ. ೬೨+೬ ಪುಟಗಳು, ಬೆಲೆ ೦-೧೦-೦.

# ನಲ್ಲೂ ನಿಟ್ಟಿನ ನೋಟ

## ಪ್ರಾಥಮಿಕ ಶಿಕ್ಷಕರ ಸಂಪಿಗೆ ಫಲ

ಕೊನೆಗೊಮ್ಮೆ ಮುಂಬಯಿ ಶಾಖೆಯ ಪ್ರಾಥಮಿಕ ಶಿಕ್ಷಕರ ಸಂಘ ಕೊನೆಗಂಡಂತಾಯ್ತು. ಶ್ರೀ. ಮುಂಶಾರಜಿ ದೇಸಾಯಿ, ಶ್ರೀ. ವಲ್ಲಭಭಾಯಿ ಪಟೇಲರ ಅಭಿಪ್ರಾಯವನ್ನೆ ಮುಂಬಯಿ ಪ್ರಾಂತದ ಕಾಂಗ್ರೆಸ್‌ಮಂತ್ರಿಮಂಡಲ ಎತ್ತಿ-ಹಿಡಿಯಬಹುದೇನೊ—ಎಂದು ಬಹಳ ಜನರು ಭಾವಿಸುತ್ತಿದ್ದರು. ಹೀಗೆ ಭಾವಿಸತೊಡಗಿದುದು ಅಸಹಜವೂ ಆಲ್ಲ. ಪತ್ರಿಕೆ-ಪತ್ರಿಕೆಗಳಲ್ಲಿಯ ಸುನಸ್ತಾಪ-ಮೇಟಗಳು ಮುಂಶಾರಜಿ-ವಲ್ಲಭಭಾಯಿಗಳವರ ಆ ಅಭಿಪ್ರಾಯಗಳಿಗೆ ಕಾರಣವಾದರೂ, ಪ್ರಾಥಮಿಕ ಶಿಕ್ಷಕರ ಸಂಘಿಗೆ ಕಾರಣವಾಗಿದ್ದ ನ್ಯಾಯಬದ್ಧವಾದ ಅವರ ಬೇಡಿಕೆಗಳು, ಮುಷ್ಕಾಳುಗಳ ವಿರೋಧಕ ಅಭಿಪ್ರಾಯವನ್ನು ಮುಂದುವರಿಸದಂತಾಡಿದುವು. ಅಧಿಕಾರಕ್ಕೆ ಬಂದ ಶಿಕ್ಷಣಮಂತ್ರಿಗಳು ಮಂಜನಬುದ್ಧಿಯನ್ನು ತೋರಿಸಿ, ಪ್ರಾಥಮಿಕ ಶಿಕ್ಷಕರ ಮುಂಬುಗಳನ್ನು ಸಂಧಿಗಾಗಿ ಕರೆದರು; ಅವರ ಬೇಡಿಕೆಗಳ ನ್ಯಾಯವನ್ನು ಒಪ್ಪಿದರು; ಸಾಧ್ಯವಿದ್ದ ಅನುಕೂಲತೆಗಳನ್ನೆಲ್ಲ ಒದಗಿಸಿಕೊಡುವುದಾಗಿ ಭರವಸೆಯಿತ್ತರು. ಶಿಕ್ಷಕಧುರೀಣರು ಸಮಯ-ಸಂದರ್ಭಗಳನ್ನು ಅರಿತುಕೊಂಡು, ಕಾಂಗ್ರೆಸ್ ಮಂತ್ರಿಮಂಡಲದ ಬಗೆಗೆ ಸಂಪೂರ್ಣ ವಿಶ್ವಾಸವನ್ನು ತೋರಿಸಿ, ಸಂಧಿಯನ್ನು ಉಪಸಂಹರಿಸಲಿಕ್ಕೆ ಸಿದ್ಧರಾದುದು ಸಂತೋಷದ ಸಂಗತಿ. ಇಲ್ಲದ ಪಟ್ಟಕ್ಕೆ ಬಿದ್ದು ಕೆಲಸವನ್ನು ಕೆಡಿಸಿಕೊಳ್ಳದಿರುವ ಅವರ ಬುದ್ಧಿವಂತಿಕೆಗೆ ಸಾಕ್ಷ್ಯವಾಗಿದೆ. ಇಷ್ಟರಲ್ಲಿಯೆ ಪ್ರಾಥಮಿಕ ಶಿಕ್ಷಕರ ತಪಸ್ಸಿಗೆ ಪ್ರತಿಫಲದ ಸೂಚನೆಯೆನ್ನುವಂತೆ, ಮುಂಬಯಿ ಸರಕಾರ ಒಂದು ಪ್ರಕಟನೆ ಹೊರಡಿಸಿ, ಶಿಕ್ಷಕರ ಸಂಘಿನ ದಿನಗಳನ್ನು ಬೇಸಗೆಯ ಬಿಡುವಿನ ದಿನವೆಂದು ಪರಿಗಣಿಸುವುದಾಗಿಯೂ, ೧೯೪೪ನೆಯ ಜುಲೈ ೧ರಿಂದ ಸರಕಾರಿ ನೌಕರರಿಗೆ ಸಿಕ್ಕುವ ರೀತಿಯಲ್ಲಿ ತುಟ್ಟಿ ಭತ್ಯವನ್ನು ಕೊಡಿಸುವ ಏರ್ಪಾಡುಮಾಡುವುದಾಗಿಯೂ ತಿಳಿಸಿದೆ. ಇದಕ್ಕಾಗಿ ತಗಲುವ ಹಣದ ಹೊಣೆಯನ್ನು ಮುಂಬಯಿ ಸರಕಾರ ತಾನೆ ಹೊರುವುದಾಗಿಯೂ ಸಾರಿದೆ. ಬೇಗನೆ ಶಿಕ್ಷಕರು ಮುಖ್ಯ ಬೇಡಿಕೆಯಾದ ಸಂಬಳದ ಏರಿಕೆಯ ವ್ಯವಸ್ಥೆಯೂ ಆಗಬಹುದು.

## ಸಂಬಳದಂತೆ ಸಂಸ್ಕೃತಿಯು ಅಗತ್ಯವಷ್ಟೆ

ಪ್ರಾಥಮಿಕ ಶಿಕ್ಷಕರು ಸಂಪಿನಿಂದ ಜಯ ಪಡೆದೆವೆಂಬ ಹಿಗ್ಗಿನಲ್ಲಿ ತಪ್ಪುದಾರಿ ತುಳಿಯಲಾಗದು; ಸ್ಥೈರ್ಯದಿಂದ ನಡೆಯಲಾಗದು; ಕರ್ತವ್ಯದಿಂದ ಚ್ಯುತಿಯನ್ನು ಹೊಂದಲಾಗದು. ಹೀಜುಗಳಿಗೆ ಹಣ್ಣಾಗಿ ಬಲ್ಲ ಶಕ್ತಿ-ಸತ್ವಗಳನ್ನು ತುಂಬುವವರು ತಾವೆಂಬುದನ್ನು ಎಂದೂ ಮರೆಯಬಾರದು. ಪ್ರಾಥಮಿಕ ಶಿಕ್ಷಕರ ಇಂದಿನ ಪರಿಸ್ಥಿತಿಯನ್ನು ಪರೀಕ್ಷಿಸಿದರೆ, ನಮ್ಮ ದೇಶದಲ್ಲಿ ಅವರು ಧನದಿಂದ ದರಿದ್ರರಾಗಿರುವಂತೆ ಸಂಸ್ಕೃತಿಯಿಂದಲೂ ದರಿದ್ರರಾಗಿರುವರು ಟ್ರೈನಿಂಗ್ ಕಾಲೇಜುಗಳೆಂದಿರುವ ಶಿಕ್ಷಣ ಸಂಸ್ಥೆಯ ಇಂದಿನ ಅಭ್ಯಾಸಕ್ರಮ 'ಶಿಕ್ಷಕ'ರೆಂಬ ಪದವಿಗೆ ತಕ್ಕವರನ್ನಾಗಿ ಮಾಡುವ ಸಾಮರ್ಥ್ಯದಿಂದ ಕೂಡಿಲ್ಲ. ೧೫-೧೬ನೆಯ ವಯಸ್ಸಿನಲ್ಲಿ ತೇರ್ಗಡೆಹೊಂದಬಹುದಾದ ಪ್ರಾಥಮಿಕ ಶಾಲಾ ಸರ್ಟಿಫಿಕೇಟ್ ಪರೀಕ್ಷೆಯಂತೂ ಶಿಕ್ಷಕವೃತ್ತಿಗೆ ಬೇಕಾಗುವ ಸಂಸ್ಕೃತಿಗೆ ಏನೂ ಸಾಲದು. ಹೆಚ್ಚಿನ ಸಂಬಳ ಅಪೇಕ್ಷಿಸುವಂತೆ ನಮ್ಮ ಶಿಕ್ಷಕರು ಹೆಚ್ಚಿನ ಸಂಸ್ಕೃತಿ-ಅನುಭವ-ಅಭ್ಯಾಸಗಳನ್ನೂ ಅಪೇಕ್ಷಿಸಬೇಕಾದುದು ಅಗತ್ಯವಾಗಿದೆ. ಪರದೇಶಗಳಲ್ಲಿಯ ಪ್ರಾಥಮಿಕ ಶಿಕ್ಷಕರ ಅಭ್ಯಾಸ-ಅನುಭವಗಳೊಂದಿಗೆ ನಮ್ಮ ಶಿಕ್ಷಕರ ಅಭ್ಯಾಸ-ಅನುಭವಗಳನ್ನು ಹೋಲಿಸಿ ನೋಡಬೇಕೆಂದರೆ, ಆನೆ-ಆಡುಗಳ ಆಳತೆ ಕಣ್ಣಿದುರು ನಿಲ್ಲುವುದು. ಜನಾಂಗದ ಬೇರಿಗೇ ಸಂಸ್ಕೃತಿಯು ನೀರನ್ನು ಎರೆಯಬೇಕಾಗಿದ್ದ ಪ್ರಾಥಮಿಕ ಶಿಕ್ಷಕರನ್ನು ಇನ್ನುಮೇಲೆಯೂ ಹೀಗೆಯೆ ಇರಿಸುವುದೆಂದರೆ ನಮ್ಮ ಜನಾಂಗದ ಅತ್ಮಘಾತವೇ ಸರಿ. ಸಂಬಳ ಹೆಚ್ಚಿಸುವ ವಿಚಾರ ಮಾಡಲಿರುವ ಸರಕಾರ, ಶಿಕ್ಷಕರ ಸಂಸ್ಕೃತಿ ಹೆಚ್ಚಿಸುವ ವಿಚಾರವನ್ನೂ ಅವಶ್ಯವಾಗಿ ಮಾಡಬೇಕು. ಆದಕ್ಕಾಗಿ ಶಿಕ್ಷಕರೂ ಒಟ್ಟುಗೂಡಿ ಚರ್ಚೆಮಾಡಿ, ಸರಕಾರಕ್ಕೆ ನೆರವಾಗಬೇಕು. ಪ್ರಾ. ಶಿಕ್ಷಕರು ಚಿಕ್ಕಮಕ್ಕಳಲ್ಲಿ ಸಂಸ್ಕೃತಿ ತುಂಬುವುದೊಂದಲ್ಲದೆ, ದೇಶದ ರಾಜಕಾರಣದ ಪಕ್ಷ-ಪಕ್ಷಗಳ ಗೊಂದಲದಲ್ಲಿ ಬೀಳುವುದು ಪಾಪವೆಂದೂ, ಕರ್ತವ್ಯಹೀನತೆಯೆಂದೂ ತಿಳಿದು ಕೊಂಡು ನಡೆಯಬೇಕು.

## ಪ್ರಜಾಪ್ರಭುತ್ವವಲ್ಲ, ಪುಂಡಪ್ರಭುತ್ವ

ಭಾರತದಲ್ಲಿಯ ಎಲ್ಲ ಪ್ರಾಂತಗಳ ಶಾಸನ ಸಭೆಯ ಚುನಾವಣೆಗಳು ಮುಗಿದಂತಾದುವು. ಸಿಂಧ, ಬಂಗಾಲಗಳೆರಡನ್ನು ಬಿಟ್ಟರೆ, ಎಲ್ಲ ಪ್ರಾಂತಗಳಲ್ಲಿಯೂ ಕಾಂಗ್ರೆಸ್ಸಿ ಗೆಲುವನ್ನು ಪಡೆದಿದೆಯೆಂದು ಹೇಳಬಹುದು. ಗವರ್ನರರ ಬೆಂಬಲವೊಂದು ಇಲ್ಲದೆ ಹೋದರೆ, ಇಂದಿನ ಸಿಂಧ ಮಂತ್ರಿಮಂಡಲಕ್ಕೆ ಅಸ್ತಿತ್ವವೆ ಇಲ್ಲ. ಸತ್ಯ-ನ್ಯಾಯಗಳ ಕೊಲೆ ಸಿಂಧದಲ್ಲಿ ನಿತ್ಯವೂ ನಡೆದಿದೆ. ವಿರೋಧಿ ಪಕ್ಷದ ಮುಂದಾಳುಗಳಾದ ಸಯ್ಯದರು ಆಗಾಗ ಹೊರಡಿಸಿದ ಪ್ರಕಟನೆಗಳನ್ನೂ ವಿರೋಧಿಪಕ್ಷದವರಿಗೆ ಸರಕಾರವಕ್ಷದ ಜನರಿಂದ ಒದಗುವ ಕಷ್ಟ-ನಷ್ಟಗಳ ಸುದ್ದಿಗಳನ್ನೂ ನೋಡಿದರೆ, ಸಿಂಧದಲ್ಲಿ ಇಂದು ಪ್ರಜಾಪ್ರಭುತ್ವವಿರದೆ ಪುಂಡಪ್ರಭುತ್ವವಿದೆಯೆಂದು ಯಾರೂ ಒಪ್ಪಿಕೊಳ್ಳುವಂತಿದೆ. ತಮ್ಮ ಪ್ರಸ್ಥ ಬೆಳೆಯಿಸಿಕೊಳ್ಳಬೇಕಾಗಿರುವ ಬ್ರಿಟಿಷ್ ಅಧಿಕಾರ-

ಗಳಿಗೆ ಇಂತಹ ಪುಂಡರೆ ಬೇಕಾಗಿರುವರೆಂಬುದನ್ನು ಯುದ್ಧ ಕಾಲದ ಲಾಭಬಡಕತನ-ಲಂಚಗುಳಿತನಗಳು ನಮಗೆ ಪ್ರತ್ಯಕ್ಷ ನಾತವನ್ನೇ ಕೊಟ್ಟಿವೆ. ಆದರೂ ಧನದಿಂದಲೂ ಜ್ಞಾನ ದಿಂದಲೂ ಬಡವರಾಗಿರುವ ನಮ್ಮ ಜನಸಾಮಾನ್ಯರು ಭೀತಿ, ಸ್ವಾರ್ಥ, ಹುಚ್ಚು ಅಭಿಮಾನಗಳಿಗೆ ಒಳಗಾಗಿ, ಸತ್ಯ-ನ್ಯಾಯ-ಗಳನ್ನು ಮಣ್ಣುಗೂಡಿಸಲು ಹೊರಟಿರುವ ಪುಂಡರ ಜೆನ್ನನ್ನೇ ಹಿಡಿಯುವುದು ಕರುಣಾಜನಕ ಸಂಗತಿಯಾಗಿದೆ.

## ಸಿಂಧದ ಸೋದರರಮಾವ ಬಂಗಾಲದಲ್ಲಿ

ಸಿಂಧದಲ್ಲಿ ಹೀಗಾದರೆ ಬಂಗಾಲದಲ್ಲಿ ಇನ್ನೊಂದು ಬಗೆ. ಅಲ್ಲಿಯ ಪುಂಡರು ನ್ಯಾಯವಾಗಿ ಚುನಾವಣೆಗಳೆ ನಡೆಯದಂತೆ ಗೊಂದಲಹಾಕಿದರು. ಆಂದು ಅಧಿಕಾರದಲ್ಲಿದ್ದ ಸರಕಾರವು ಈ ಪುಂಡರ ದೊಂಬಿ-ದಂಗೆಗಳಿಗೆ ಸಂಪೂರ್ಣ ಸಹಕಾರವನ್ನು ನೀಡಿತು. ರಾಷ್ಟ್ರಪತಿ ಮೌಲಾನಾ ಆಜಾದ್ ಅವರ ವ್ಯಕಟನೆ-ಯನ್ನು ನೋಡಿದರೆ, ನ್ಯಾಯಪಕ್ಷಪಾತಿಗಳಾದ ಯಾರೂ ಬಂಗಾಲ ಚುನಾವಣೆಯನ್ನು ಶಾಸನಸಮ್ಮತವೆಂದು ಒಪ್ಪ-ಲಾರರು. ಇಂತಹ ಬೇಕಾಯಿದೇತೀರ್ ರೀತಿಯಿಂದ ಅಯ್ಕೆ ಹೊಂದಿ ಬಂದ ಬೇಜವಾಬ್ದಾರ್ ಬಹುಸಂಖ್ಯಾಕರಿಂದ ಬಂಗಾಲ ಮಂತ್ರಿಮಂಡಳವಿಂದು ತಲೆಯೆತ್ತಿ ನಿಂತಿದೆ. ಬಲು-ಮೆಯ ಅಡಳಿತ, ಬರಗಾಲಗಳಿಂದ ತ್ರಸ್ತವಾಗಿರುವ ಬಂಗಾಲ, ಈ ಮಂತ್ರಿಮಂಡಲದಿಂದ ಎಂತಹ ಸುಖ ಸುರಿದುಣ್ಣಲಿದೆಯೊ ನೋಡಬೇಕಾಗಿದೆ. ರಾಜಕಾರಣವನ್ನು ಜಾತೀಯ ದೃಷ್ಟಿ-ಯಿಂದ ನೋಡಲಾಗದೆಂಬ ಅಭಿಪ್ರಾಯ ನಮ್ಮದಿದೆಯಾದರೂ, ಸಮಂಜಸ ಬುದ್ಧಿಯಿರದ ಯಾವ ಜಾತಿಯವರ ಅನ್ಯಾಯದ ಆಳಿಕೆಯನ್ನೂ ನಾವು ಸಮ್ಮತಿಸಲಾರೆವು. ಹಿಂದು ಜನರೆಂದರೆ ನಖ-ಶಿಖಾಂತವಾಗಿ ದ್ವೇಷಿಸುತ್ತಿರುವ— ಮುಸ್ಲಿಮರೆಂದರೆ ಮುಸ್ಲಿಂಲೀಗಿನ ಮಂತ್ರಿಮಂಡಲದ ಆಡಳಿತದಲ್ಲಿ, ನೂರಕ್ಕೆ ಐಂಕ್ಕಿಂತ ಹೆಚ್ಚಿಗೆ ಇರುವ ಸುಸಂಸ್ಕೃತ ಹಿಂದುಗಳು ಅಲ್ಲಿ ಸುಖ-ಶಾಂತಿಗಳಿಂದ ಬದುಕಿಕೊಂಡಿರಬಹುದೆ? ಅವರು ಸುಖ-ಶಾಂತಿ ಇಲ್ಲದವರಾದರೆ ಭಾರತದ ಮಿಕ್ಕ ಪ್ರಾಂತಗಳಲ್ಲಿ ಸುಖ-ಶಾಂತಿ ನೆಲಸೀತೆ? ಈ ಮಾತನ್ನು ಬ್ರಿಟಿಷ್ ರಾಜಕಾರಣಿಗಳೂ ಭಾರ-ತದ ಎಲ್ಲ ಪಕ್ಷದ ರಾಜಕಾರಣಿಗಳೂ ವಿಚಾರಮಾಡಿ ನೋಡಲ್ಲಿ, ಭಾರತೀಯರು ಗಂಡಾಂತರದ ಪರಿಸ್ಥಿತಿಯನ್ನು ಎದುರಿಸಬೇಕಾದುದು ಕಟ್ಟಿಟ್ಟ ಮಾತು.

## ಮದರಾಸಿನಲ್ಲಿ ನಡೆದ ಮುಸೆದಾಟ

ಮದರಾಸಿನ ಪರಿಸ್ಥಿತಿಯೊಂದು ತೀರ ವಿಚಿತ್ರವಾಗಿದೆ. ಯಾವ ಪ್ರಾಂತದಲ್ಲಿಯೂ ಇರದಷ್ಟು ಅಲ್ಲಿಯ ಶಾಸನಸಭೆಗೆ ಕಾಂಗ್ರೆಸಿಗರು ಆರಿಸಿ ಬಂದಿದ್ದಾರೆ. ನಿರಾತಂಕವಾಗಿ ಅಲ್ಲಿ ಕಾಂಗ್ರೆಸ್ ಸರಕಾರ ಸ್ಥಾಪಿತವಾಗಬಹುದಾಗಿದೆ. ಆದರೆ ಅಧಿಕಾರದ ಆಶೆ ಅಲ್ಲಿಯ ಮುಂದಾಳುಗಳನ್ನು ಅಂಧರನ್ನಾಗಿ ಮಾಡಿದೆ. ಮದರಾಸ್ ಪಟ್ಟಿಯಲ್ಲಿ ಅಲ್ಪ ಸಂಖ್ಯಾಕರಾಗಿರುವ ಮಲಯಾಳ-ಕರ್ನಾಟಕ ಸದಸ್ಯರ ಯಾವ ಮಾತೂ ನಡೆಯದಾದರೂ, ಸಮಸ್ಖ್ಯಾಕರೂ ಸಮಬಲರೂ ಆದ ತೆಲುಗು-ತಮಿಳರಲ್ಲಿ ಯಾವಾಗಲೂ ಕಲಹವಿದ್ದೇ ಇರುವುದು; ಪ್ರತಿಯೊಂದು ಮಾತೂ ಮೇಜಗಳ ಹೆಚ್ಚಿಸುತ್ತಿರುವುದು. ಇನ್ನೊಂದು ಮಾತೆಂದರೆ ಇಲ್ಲಿಯ ಕಾಂಗ್ರೆಸಿನ ಹೊರಗಿದ್ದ ಜಸ್ಟೀಸ್ ಪಾರ್ಟಿಯವರು ಕಾಂಗ್ರೆಸಿನೊಳಗೆ ಸೇರಿರುವುದ-ರಿಂದ, ಬ್ರಾಹ್ಮಣ-ಬ್ರಾಹ್ಮಣೇತರ ಭಿನ್ನಭಾವವೂ ಅಲ್ಲಿ ತನ್ನ ಆಟ ನಡೆಯಿಸಿರುವುದು ಈ ಮೂರು ಜಾತಿಗಳ ಜಗಳದ ಮೂಲಕ ಅಲ್ಲಿ ಇಬ್ಬಣಗಳಾಗಿ, ಇಬ್ಬಗೆಯೂ ಅಧಿಕಾರದ ಆಶೆಯಿಂದ ಹೋರಾಡುತ್ತಿವೆ. ಶ್ರೀ ಸಿ. ರಾಜಗೋಪಾಲಾಚಾರ್ಯರ ಧುರೀಣತ್ವವನ್ನು ಒಪ್ಪಿಕೊಳ್ಳಿರಿ ಎಂದು ಸೂಚನೆ ಕೊಟ್ಟ ಕಾಂಗ್ರೆ-ಸಿನ ಮೇಲಧಿಕಾರಿಗಳನ್ನು ಮೂಲೆಯಲ್ಲಿ ಕೂರಿಸಿ, ಬಹು-ಸಂಖ್ಯಾಕರ ಪಕ್ಷ ಇಂದು ಪ್ರಕಾಶಂ ಅವರ ಧುರೀಣತ್ವ-ವನ್ನು ಒಪ್ಪಿಕೊಂಡಿದೆ. ಕಾಂಗ್ರೆಸಿನ ವರಿಷ್ಠರು ತಮ್ಮ ಮಾತು ನಡೆಯಲಿಲ್ಲವೆಂದು ಈ ಬಹುಸಂಖ್ಯಾಕರ ಪಕ್ಷವನ್ನು ಕೇಳ್ಗಣ್ಣಿ-ನಿಂದಲೊ, ಔದಾಸೀನ್ಯದಿಂದಲೋ ನೋಡುವುದು ಸಹಜ. ಅಂತೂ ಈ ತಿಕ್ಕಾಟ ಎಲ್ಲಿಗೆ ತಲ್ಪುವುದೋ ನೋಡಬೇಕು. ಮಹಾತ್ಮಾ ಗಾಂಧಿಯವರು ಆಗಾಗ ಕೂಗಿ ಹೇಳುತ್ತಿರುವ ತ್ಯಾಗ-ಸೇವೆ-ಸತ್ಯಗಳ ನಾಮ, ಅಧಿಕಾರದಾಶೆಯ ಕಾಂಗ್ರೆಸಿ-ಗರ ಕಿವಿಯಲ್ಲಿ ಸೇರಲೆಷ್ಟು ನೇನೊ!

## ಸ್ವಾತಂತ್ರ್ಯವೊ, ಅಧಿಕಾರವೊ?

ಕರ್ನಾಟಕದಲ್ಲಿ ನವ ಪ್ರಾಂತಿಕ್ ಕಾಂಗ್ರೆಸ್ ಸಮಿತಿಯ ಚುನಾವಣೆಯೂ ಇಲ್ಲಿಯ ಕಾಂಗ್ರೆಸಿಗರ ಅಧಿಕಾರ ಲಾಲಸೆ-ಯನ್ನೇ ಹೊರಕ್ಕೆ ಹಕಿತು. ಜೀವ-ಸಾವುಗಳನ್ನು ಲೆಕ್ಕಿಸದೆ ಸ್ವಾತಂತ್ರ್ಯಕ್ಕಾಗಿ ಸಡೆದ ಕುಂಡದಲ್ಲಿ ಧುಮುಕಿದ ಗಳಿ-ನೆಯ ಇಸ್ವಿಯ ಕನ್ನಡ ದೇಶಭಕ್ತಿವೀರರೂ, ಈಗ ತಮ್ಮ ಸ್ವಾರ್ಥದ ಸಣ್ಣತನವನ್ನು ತೋರಿಸಿಕೊಡಗಿದ್ದಾರೆ. ಅಂದಿನ ಆ ಮಹಾ-ತ್ಯಾಗಕ್ಕಾಗಿ ಅವರು ಬಯಸುವ ಪ್ರತಿಫಲ ಇಷ್ಟೇ ಏನು? ಒಂದು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸದಸ್ಯತ್ವಕ್ಕಾಗಿ ತಮ್ಮ ತಮ್ಮ ಜನರಲ್ಲಿ ಇಷ್ಟೊಂದು ಹೊಲಸು ರೀತಿಯ ಹೋರಾಟವೆ? ದೇಶಕ್ಕಾಗಿ — ಜನರ ಸೇವೆಗಾಗಿ— ಕರ್ಮ-ಯೋಗವನ್ನು ಪ್ರಾರಂಭಿಸಿದ ವೀರರು, ಒಂದು ಸಾಮಾನ್ಯ ಅಧಿ-ಕಾರಕ್ಕೆ ಮನಸೋತು ಹಿಂ-ಮುಂ-ಧನಗಳನ್ನೂ ಬಲಿಯಿಟ್ಟು ಕೆಳೆಯನ್ನೂ ವ್ಯರ್ಥ ವ್ಯಯಿಸುವುದೆ? ಅಧಿಕಾರ ಬೇಕೆನ್ನುವ ಅಲ್ಪಸಂತೋಷಿಗೆ ಅಗ್ಗವನ್ನು ಬಿಟ್ಟುಕೊಟ್ಟು, ಹೊರಗಿದ್ದು ತಮ್ಮ ಸೇವಾಕಾರ್ಯವನ್ನು ಸಾಗಿಸಲಿಕ್ಕಾಗದೆ? ಇದನ್ನೆಲ್ಲ ನೋಡಿದರೆ ನಮ್ಮಲ್ಲಿಂದ ಬೆಳಕ ಜನರು ಆಪೇಕ್ಷಿಸುವುದು ದೇಶಕ್ಕೆ ಸ್ವಾತಂತ್ರ್ಯ-ಶಾಂತಿಗಳನ್ನಲ್ಲ, ವೈಯಕ್ತಿಕ ಅಧಿಕಾರಗಳನ್ನು ಎಂಬ ಮಾತು ಸಿದ್ಧವಾದಂತಾಯಿತು. ದೇಶದ ದುರ್ದೈವ.

# ಜಯಂತಿಗೆ ವಿನಿಮಯಕ್ಕೆಂದು ಬರುವ ಪತ್ರಿಕೆಗಳು

### ವಾರಪತ್ರಿಕೆಗಳು

೧ ನಿರ್ಭಯ (ಜಮಖಂಡಿ). ೨. ಸಂದೇಶ. ೩. ಕರ್ನಾಟಕ. ೪. ತರುಣಭಾರತ-ಮರಾಠಿ (ಬೆಳಗಾಂವಿ) ೫ ಬೆಳಕು (ಧಾರವಾಡ). ೬. ಕರ್ಮವೀರ. ೭. ಹುಬ್ಬಳ್ಳಿ ಗಜೆಟ್ (ಹುಬ್ಬಳ್ಳಿ). ೮. ಶರಣಸಂದೇಶ (ಆಲಮಟ್ಟಿ). ೯. ಕರ್ನಾಟಕ ವೈಭವ (ವಿಜಾಪುರ). ೧೦ ನವಸಂದೇಶ (ಬಳ್ಳಾರಿ). ೧೧. ಅಂತರಂಗ. ೧೨. ನವಯುಗ (ಉಡುಪಿ). ೧೩. ಕರ್ನಾಟಕ ಪ್ರಭ. ೧೪. ಸ್ವದೇಶಾಭಿಮಾನಿ. ೧೫. ರಾಷ್ಟ್ರಬಂಧು. ೧೬. ಬಡವರ ಬಂಧು. ೧೭ ನವಭಾರತ (ಮಂಗಳೂರು). ೧೮. ಕನ್ನಡ ನುಡಿ. ೧೯. ವಿಶ್ವಕರ್ನಾಟಕ. ೨೦. ತಾಯಿನಾಡು. ೨೧. ವಾಹಿನಿ. ೨೨. ಸಮನ್ವಯ ಮೈಸೂರು (ಬೆಂಗಳೂರು). ೨೩. ತಪಾಪ್ (ಮೈಸೂರು). ೨೪. ಸೊಷಿಯಲ್ ವೆಲ್ಫೇರ್. ಇಂಗ್ಲಿಷ್ (ಮುಂಬಯಿ).

### ಪಕ್ಷಪತ್ರಿಕೆಗಳು

೧. ತರಂಗರಂಗ (ಆಕಾಶವಾಣಿ, ಮೈಸೂರು). ೨. ಇಂಡಿಯನ್ ಇನ್‌ಫರ್ಮೇಶನ್— ಇಂಗ್ಲಿಷ್ (ಲಾಹೋರ).

### ಮಾಸಪತ್ರಿಕೆಗಳು

೧. ಇಂಡಿಯನ್ ಇ ಎನ್.—ಇಂಗ್ಲಿಷ್ (ಮುಂಬಯಿ). ೨. ಕಲ್ಯಾಣ—ಹಿಂದಿ (ಗೋರಖಪುರ) ೩. ಕಿಲೋಸ್ಕರ—ಮರಾಠಿ (ಕಿರ್ಲೋಸ್ಕರವಾಡಿ). ೪. ಸಹ್ಯಾದ್ರಿ ಮರಾಠಿ (ಪುಣೆ). ೫. ಮಹಾರಾಷ್ಟ್ರ—ಮರಾಠಿ (ಕೊಲ್ಹಾಪುರ). ಪ್ರಗತಿ (ಕವಿಕವಿ). ೭. ವಾಗ್ಭೂಷಣ. ೮, ಜಯಕರ್ನಾಟಕ. ೯. ಕಲಿಯುಗ (ಧಾರವಾಡ). ೧೦. ಶಿವಾನಂದ ಕವಿ (ವಿಜಾಪುರ). ೧೧. ಜೀವನ. ೧೨. ಉಷಾ. ೧೩. ವಾಣಿ. ೧೪. ಕಲೆಗಾರ. ೧೫. ಕೊರವಂಜಿ. ೧೬. ಸುಬೋಧ. ೧೭. ನಗುವನಂದ. ೧೮ ವಾಕ್ಶಿಕ್ಷ. ೧೯. ವಿವಾವಾಣಿಜ್ಯ. ೨೦. ಮೈಸೂರು ಇನ್‌ಫರ್‌ಮೇಶನ್ ಬುಲೆಟಿನ್ (ಬೆಂಗಳೂರು). ೨೧. ಧುರೀಣ (ಉಡುಪಿ). ೨೨. ಹೈದರಾಬಾದ್ ಸಮಾಚಾರ (ಹೈದರಾಬಾದ್).

### ತ್ರೈಮಾಸಿಕಗಳು

೧. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ (ಬೆಂಗಳೂರು). ೨. ಪ್ರಬುದ್ಧ ಕರ್ನಾಟಕ (ಮೈಸೂರು). ೩. ವೀರಶೈವ ಸಾಹಿತ್ಯಪತ್ರಿಕೆ (ಧಾರವಾಡ).

### ಗ್ರಂಥಮಾಲೆಗಳು

೧. ಮಂಚಿನಬಳ್ಳಿ. ಲಲಿತ ಸಾಹಿತ್ಯಮಾಲೆ. ೨. ಪ್ರತಿಭಾ ಗ್ರಂಥಮಾಲೆ (ಧಾರವಾಡ). ೩. ಪ್ರಚಾರ ಕಾವ್ಯಮಾಲೆ. ೪. ಕನ್ನಡ ಪುಸ್ತಕಮಾಲೆ (ಮೈಸೂರು).

---

## ಜಯಂತಿಯಲ್ಲಿ ಪುಸ್ತಕವಿಮರ್ಶೆ

ಹೊಸವರ್ಷದ ಮೊದ
ಕಾದಿರಿಸಲಾಗುವುದು. ವಿಮ
ಹೆಚ್ಚಿಗೆ ವಿಲಂಬವಾಗದು. ವಿ
ಮಹತ್ತ್ವದ ಪುಸ್ತಕಗಳನ್ನು ಹೆ
ವಿದ್ದಷ್ಟು ಪ್ರತಿಫಲ ಸಲ್ಲಿಸಬೇಕೆ
ಜಯಂತಿಯ ಮುಖಾಂತರ ಕನ್ನ
ಪ್ರಕಾಶಕರೂ ತಂತಮ್ಮ ಗ್ರಂಥ
ವಿಮರ್ಶಕರ ಕಡೆಗೆ ಕಳುಹಲು ಉ
ಹೆಚ್ಚು ಅನುಕೂಲವಾಗುವುದು.

ಏನೇನೋ ಅನನುಕೂ
ಯಾಗದೆ ಉಳಿದಿವೆ ಅನಿವಾಯ
ದರ್ಷದಲ್ಲಿ ಹಿಂದೆ ಬಂದ ಕೆಲವು

ಯಿಂದ ಪ್ರತಿ ಸಂಚಿಕೆಯಲ್ಲೂ ಪುಸ್ತಕ ವಿಮರ್ಶೆಗೆಂದು ಪುಟಗಳನ್ನು
ಗೆಂದು ಒಂದ ಯಾವ ಮಹತ್ತ್ವದ ಪುಸ್ತಕದ ವಿಮರ್ಶೆಯೂ ೨ ತಿಂಗಳಿಗಿಂತ
ರ್ಶೆಗೆಂದು ಜಯಂತಿ 'ವಿಮರ್ಶಕ ಸಮಿತಿ' ಯೊಂದನ್ನು ನಿರ್ಮಿಸಿಕೊಂಡಿದೆ.
ಪರಿಶ್ರಮಪಟ್ಟು ವಿಮರ್ಶೆ ಮಾಡಬೇಕಾಗುವುದರಿಂದ, ವಿಮರ್ಶಕರಿಗೆ ಸಾಧ್ಯ-
ನೂ ಸಂಕಲ್ಪಿಸಿಕೊಂಡಿದ್ದೇವೆ. ಕನ್ನಡದಲ್ಲಿ ಪ್ರಕಟವಾದ ಪ್ರತಿಯೊಂದು ಪುಸ್ತಕವೂ
ಗಮನಕ್ಕೆ ಪರಿಚಿತವಾಗಬೇಕೆಂದು ನಮ್ಮ ಬಯಕೆ ಇದುದರಿಂದ ಎಲ್ಲ ಗ್ರಂಥಕಾರರೂ
ತಮ್ಮ ಪುಸ್ತಕಗಳನ್ನು ಕಳುಹಿ, ಜಯಂತಿಯ ಈ ಸಾಹಿತ್ಯ ಪರಿಚಯ ಕಾರ್ಯದಲ್ಲಿ ಸಹಕರಿಸಬೇಕು
ಎಂದು, ಕಾರ್ಯಾಲಯದ ಭಾಂಡಾರಕ್ಕೊಂದು ಹೀಗೆ ಎರಡು ಪ್ರತಿಗಳನ್ನು ಕಳುಹಿಸಿದರೆ

ಗಳಿಂದ, ಕಾರ್ಯಾಲಯಕ್ಕೆ ಬಂದ ಹಲವು ಗ್ರಂಥಗಳು ಇದುವರೆಗೂ ವಿಮರ್ಶೆ
ವಿಲಂಬಕ್ಕಾಗಿ ಅವುಗಳನ್ನು ಕಳುಹಿದ ಮಹನೀಯರು ಕ್ಷಮಿಸಬೇಕು. ಹೊಸ
ಗ್ರಂಥಗಳ ವಿಮರ್ಶೆಗಳೂ ಬರುವವು.

— ಸಂಪಾದಕ 'ಜಯಂತಿ' ಧಾರವಾಡ.

# ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ ( Valuation ) ಲಾಭವನ್ನು ಹಂಚುವುದಷ್ಟೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಸ್ವೀತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ ( Claim ) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ತಮ್ಮದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಮ್. ಗೋವರ್ಧನರಾವ್





ತಲೆಗೂದಲು ಚೆನ್ನಾಗಿದ್ದರೆ ಮೈಲುವಿಗೊಂದು ಬೆಲೆ!
ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು!

ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ!

ತರುಣ-ತರುಣಿಯರು ಬರಿಯೆ ಕಣ್ಣು-ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟೆ ಚೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು.
ಅದಕ್ಕಾಗಿಯೆ



ಆಯುರ್ವೇದ ತಜ್ಞರಿಂದ ಶುದ್ಧ
"ಮುಕುಲ" ಎಂಬ ಕೇಶವರ್ಧಕ ತೈ
ನಿಮ್ಮ ಚೆಲುವಿಕೆ ಪೂರ್ಣತೆ ಪ
ಆಯುರ್ವೇದಾಶ್ರಮ ಫಾ
ಹುಬ್ಬಳ್ಳಿ ಶಾಖೆ: ಕೊಬ್ಬರಿಎಣ್ಣೆಯಲ್ಲಿ ತಯಾರಿಸಲಾದ
ನ್ನು ಯಾವಾಗಲೂ ಬಳಸುತ್ತಿದ್ದರೆ,
ವವೆಂಬುದನ್ನು ಮರೆಯಬೇಡಿರಿ
ಸಿ ಲಿ., ಅಹಮ್ಮದನಗರ
ರೋಡು, ಹುಬ್ಬಳ್ಳಿ.


Printed by Mr. V. Y. Jathar at the Karnatak Printing Works, Dharwa
Jayanti Publications by M V Melligatti at the Jayan
d Published for the Proprietors
ffice, Dharwar.







START

START

START

START

START

MICRO FILMED
BY

KARNATAKA STATE
ARCHIVES

1991

MICRO FILMED
BY

KARNATAKA STATE
ARCHIVES

1991




ವಾರ್ಷಿಕ ಚಂದಾ
೪—೪—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೯ | ೧ನೆಯ ಜೂನ್ ೧೯೪೬ | ಸಂಚಿಕೆ ೧

# ಕನ್ನಡವು ಕವಿಗೆ ಸಲ್ಲಿಸಿದ ಮನ್ನಣೆ

ಸಂಪಾದಕರು

ನಮ್ಮ ನಾಡಿನ ಇತಿಹಾಸವನ್ನು ನೋಡಿದರೆ, ಕವಿಗಳಿಗೆ ಇಲ್ಲಿ ದೊರೆತಷ್ಟು ಮಾನ-ಸನ್ಮಾನಗಳು ಇನ್ನಾವ ದೇಶದಲ್ಲಾದರೂ ದೊರೆತಿವೆಯೆ?—ಎನಿಸುವಂತಿದೆ. 'ಕಾವ್ಯಪ್ರಯೋಗ ಪರಿಣತಮತಿ'ಗಳೂ 'ವಿವೇಕಮಂ ಮಾತ್ಸರ್ಯಗಳಂ ಅರಿಲ್ ನೆರೆವವ'ರೂ ಆದ ಕನ್ನಡ ಜನತೆ, ಜನಪದ ಇಬ್ಬರಿಂದಲೂ ಮನ್ನಣೆ ಪಡೆದ ಕವಿಗಳ ಸಂಖ್ಯೆ, ಕನ್ನಡ ಸಾಹಿತ್ಯಚರಿತ್ರೆಯಲ್ಲಿ ತುಂಬಿದೆ. ೯ನೆಯ ಶತಮಾನದಿಂದ ೧೩ನೆಯ ಶತಮಾನದ ವರೆಗಿನ ಪ್ರತಿಯೊಬ್ಬ ಪ್ರಮುಖ ಕನ್ನಡ ಕವಿಯೂ ನಮ್ಮಲ್ಲಿ ರಾಜಮನ್ನಣೆ ಪಡೆದಿದ್ದಾನೆ. ಅಂದಿನ ಕಾಲದ ರೀತಿಯಂತೆ ರಾಜಮನ್ನಣೆ ಪಡೆವುದು ಪ್ರಜಾಮನ್ನಣೆ ಪಡೆವುದು ದೊಡ್ಡ ಮಾತಾಗಿರಲಿಲ್ಲ. ೧೪ನೆಯ ಶತಮಾನದ–ಪ್ರಾರಂಭದಿಂದ ಮುಂದಿನ ಕವಿಗಳು ಹೆಚ್ಚಾಗಿ ಭಕ್ತರೂ ಮತಪ್ರಚಾರಕರೂ ಆಗಿ ಹೊರಟುದರಿಂದ, ರಾಜಮನ್ನಣೆಯ ಕಡೆಗೆ ಅವರು ಲಕ್ಷ್ಯವನ್ನೇ ಕೊಡಲಿಲ್ಲ. ಎಷ್ಟೋಪಲ, ಬೇರೆ ಭಿನ್ನವನ್ನವಲಂಬಿಸಿದ ರಾಜರ ಕಾಲದಲ್ಲಿ ಅವರ ಮತಕ್ಕೆ ವಿರೋಧವಾದ್ದ ಮತಪ್ರಚಾರ ಮಾಡಬೇಕಾಗಿ ಬಂದು, ಕೆಲವು ಕವಿಗಳಿಗೆ ರಾಜಮನ್ನಣೆ ಸಿಕ್ಕಲಿಲ್ಲವಿಷ್ಟೇ ಅಲ್ಲ; ಬಸವೇಶ್ವರ, ಚೆನ್ನಬಸವೇಶ್ವರರಂತೆ ರಾಜರ ವಿರೋಧವನ್ನೂ ಸಹಿಸಬೇಕಾಗುತ್ತಿದ್ದಿತು. ಇಂತಹ ಕಾಲದಲ್ಲಿ ವಿವೇಕವನ್ನರಿತ ಕನ್ನಡ ಜನತೆ ಅಂತಹ ಕವಿಗಳಿಗೆ ಮನ್ನಣೆ ಸಲ್ಲಿಸುತ್ತ ಬಂದಿದೆ.

ತುಂಗಭದ್ರೆಯಿಂದಾಚೆಯ ಕನ್ನಡ ಪ್ರದೇಶ ಕನ್ನಡ ದೊರೆಗಳಾದ ಪಶ್ಚಿಮ ಚಾಳುಕ್ಯರ ಆಧೀನದಲ್ಲಿರುವುದರಿಂದ, ಅಲ್ಲಿ ರಾಜಮನ್ನಣೆ ಪಡೆಯುತ್ತಿರುವ ಕವಿಗಳ ಪರಂಪರೆ ಅಧುನಿಕ ಕಾಲದ ವರೆಗೂ ಕಂಜುಬರುವುದು. ದಿವಂಗತರಾದ ಪಂ. ಸೋಸಲೆ ಅಯ್ಯಾಶಾಸ್ತ್ರಿಗಳು, ಪಂ. ಬಸವಪ್ಪಶಾಸ್ತ್ರಿಗಳು, ಲಿಂಗರಾಜ ಅರಸರು, ಅಂತಹವರಲ್ಲಿ ಪ್ರಮುಖರಾಗಿರುವರು. ಅಸ್ಥಾನ ಕವಿಯ ಮನ್ನಣೆ ಪಡೆದವರು ಈಗಲೂ ಅಲ್ಲಿ ಕಾಣಸಿಕ್ಕಬಹುದು. ಆದರೆ ಬ್ರಿಟಿಷ್ ಕರ್ನಾಟಕದ ಪ್ರದೇಶದಲ್ಲಿ, ಕಳೆದ ೨–೩ ಶತಮಾನಗಳಲ್ಲಿ ಜನರ ಮತ್ತು ಜನಪದೆಯ ಮನ್ನಣೆ ಪಡೆದ ಕವಿಗಳು ಇಲ್ಲವೇ ಇಲ್ಲ. ಇಂದು ಕನ್ನಡ ರಸಿಕರು ಹೆಸರೆತ್ತಿ ಪೂಜೆ ಸಲ್ಲಿಸುತ್ತಿದ್ದರೂ, ಕವಿ ಮುದ್ದಣನು ಜೀವಿಸಿದ್ದಾಗ ಅವನನ್ನು ಕೇಳಿದವರೇ ಇಲ್ಲ.. ಕೊನೆಯ ವರೆಗೂ ಕಸ್ತೂರಿ ಬಾಳನ್ನು ಬಾಳಿ ಸತ್ತುಹೋದ ಆ ಕಟ್ಟಿನರ ಬಲ್ಲಹ. ಉತ್ತರ ಕರ್ನಾಟಕದಲ್ಲಿ ಶಾಂತಕವಿಗಳು ಕವಿಗಳಾಗಿ, ಹರಿದಾಸರಾಗಿ, ದೇಶಸೇವಕರಾಗಿ ಕೆಲಸ ಮಾಡಿದರು. ಬೀಸಿನುವಾಗ ಅವರ ಕಾರ್ಯದ ಬೆಲೆಯನ್ನು ಕಾಣುವವರೇ ಇರಲಿಲ್ಲ. ಅಂದು ಕನ್ನಡಿಗರು ತಾವಾರೆಂಬ ಅರಿವನ್ನೆ ಮರೆತಿದ್ದರು. ಅವರ 'ಕಾವ್ಯಪ್ರಯೋಗ ಪರಿಣತಮತಿ' ಪರಾಧೀನತೆಯ ತೆರೆಯಲ್ಲಿ ಮರೆಯಾಗಿ ಹೋಗಿದ್ದಿತು. ಅವರ 'ಪದನರಿದು ನುಡಿವ—ನುಡಿದುದನು ಅರಿದು ಆರಯ್ವ' ಶಕ್ತಿ ಕಳೆಗುಂದಿದ್ದಿತು. ಇಂದು

ಅನೇಕ ವೈತಾಳಿಕರು ಸೇರಿ ಕನ್ನಡಕುಲವನ್ನು ನಿದ್ದೆಯಿಂದ ಎಬ್ಬಿಸಿದ್ದಾರೆ. ಅವರಲ್ಲಿ ಸ್ವಸ್ವರೂಪದ ಎಚ್ಚರಿಕೆಯನ್ನು ಹುಟ್ಟಿಸಿದ್ದಾರೆ. ಶುಭಭವಿಷ್ಯದ ಆಶೆಯ ಧ್ರುವತಾರೆಯನ್ನು ತೋರಿಸಿದ್ದಾರೆ. ಅದ್ದರಿಂದಲೆ ಕನ್ನಡಿಗರು ತಾವೀಗ ಏನೇನು ಮಾಡಬೇಕೆಂಬುದನ್ನು ತಿಳಿದು ಕಾರ್ಯಸನ್ನದ್ಧರಾಗಿದ್ದಾರೆ.

ಸುಸಂಸ್ಕೃತ ಮಾನವ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಹಲವು ಶಕ್ತಿಗಳಿಂದ ಉಪಕೃತನಾಗಿರುವನು. ಇದರ-ಅರಿವನ್ನಿಸಿಕೊಂಡು ಆ ಆ ಉಪಕಾರಕ ಶಕ್ತಿಗಳಿಗೆ ಕೃತಜ್ಞತೆ ಸಲ್ಲಿಸಬೇಕಾದುದು ಅಂತಹ ಮಾನವನ ಕರ್ತವ್ಯ. ಈ ಕರ್ತವ್ಯವನ್ನು ಮರೆತ ಜನರಿರುವ ರಾಷ್ಟ್ರವಾಗಲಿ, ದೇಶವಾಗಲಿ ಅಭ್ಯುದಯವನ್ನು ಸಡೆಯದು. ಅನೇಕ ಶಕ್ತಿಗಳಂತೆ ಕವಿತಕ್ತಿ ವ್ಯಕ್ತಿಯ ವಿಕಾಸಕ್ಕೂ ಸಮಾಜದ ಸುಖಶಾಂತಿಗೂ ಮುಖ್ಯವಾದ ಕಾರಣವಾಗಿರುವುದು. ಆದುದರಿಂದಲೆ ಎಲ್ಲ ಸುಸಂಸ್ಕೃತ ರಾಷ್ಟ್ರಗಳಲ್ಲಿಯೂ ಕವಿಗಳ ಪೂಜೆ ನಡೆಯುವುದು. ಕವಿ ಜೀವಿಸಿರುವಾಗ ಅತನಿಗೆ ಪ್ರತ್ಯಕ್ಷ ಪೂಜೆ ನಡೆವುದು; ದಿವಂಗತನಾದಾಗ ಅತನಿಗಾಗಿ ಮಾಡುವ ಯಜ್ಞ-ತ್ಯಾಗಗಳ ಮುಖಾಂತರ ಅಪ್ರತ್ಯಕ್ಷ ಪೂಜೆ ನಡೆವುದು. ಕವಿಗಳ ಪೂಜೆ ನಡೆಯುತ್ತಿರುವವರೆಗೆ ಕನ್ನಡ ನಾಡು ಜಾಗೃತವಾಗಿತ್ತು. ಇಹ-ಪರಗಳ ಯೋಗ-ಕ್ಷೇಮ, ಸುಖ ಶಾಂತಿಗಳ ವಿಚಾರ ಮಾಡುತ್ತಿತ್ತು. ನಡಿನ ಜೀವಾಳದಲ್ಲಿ ಮನುಷ್ಯತ್ವದ ಹಿರಿಮೆ ಮಿಡಿಯುತ್ತಿತ್ತು. ಇಂತಹ ಕವಿಪುಂಗವರ ಪೂಜೆಯ ಕೊನೆಯೊಂದಿಗೆ ಕನ್ನಡನಾಡಿಗೆ ನಿದ್ದೆ ಕವಿಯಿತು. ತ್ರಿಕಾಲಗಳ ಪರಿಜ್ಞಾನವಿಲ್ಲದೆ ಹೋಯಿತು. ಹುಚ್ಚಲ್ಲ; ಚೇತನಾರಹಿತ ಶವತ್ವವು ನಾಡಿನಲ್ಲಿ ಕಾಣತೊಡಗಿತು. ಈಗ ಮತ್ತೆ ನಾಡಿನಲ್ಲಿ ಚೈತನ್ಯ ಮೂಡಿದುದರ ಮುಂಗುರುತು ಕಾಣತೊಡಗಿವೆ. ಸತ್ತು ಹೋದ ಮುದ್ದಣ, ಶಾಂತಕವಿಗಳು ಕನ್ನಡಿಗರಿಗೆ ಚಿರಜೀವಿಗಳಾಗಿ ಕಾಣಲು ತೊಡಗಿದ್ದಾರೆ; ತಮಗೆ ಮಾಡಿದ ಉಪಕಾರಕ್ಕಾಗಿ ಕನ್ನಡಿಗರು ಅವರಿಗೆ ಪ್ರೇಮದ ಪೂಜೆ ಕಟ್ಟತೊಡಗಿದ್ದಾರೆ.

ಇಂದು ಕವಿ ಬೇಂದ್ರೆಯವರಿಗೆ ತಮ್ಮ ಕೃತಜ್ಞತೆಯ — ಪ್ರೀತಿಯ ಕಾಣಿಕೆ ಸಲ್ಲಿಸಲು ಕನ್ನಡಿಗರು ಸಿದ್ಧರಾದುದು ಕನ್ನಡಿಗರ ಸ್ವಸ್ವರೂಪ ಜಾಗೃತಿಯ ಹೆಚ್ಚಿನ ಗುರುತು. ಜೀವಿಸಿರುವ ಮನುಷ್ಯನೊಬ್ಬನಾವುದೆ ಬಗೆಯ ಅಧಿಕಾರ-ಬಲಗಳು ಕಾರಣವಾಗಿರದೆ, ಸಮಕಾಲೀನ ಜನರಿಂದ ಮನ್ನಣೆ ಪಡೆವ ಕಾಲವೂ ದೇಶವೂ ಒಂದು ಉನ್ನತಜೀವನದ ಲಕ್ಷಣದಿಂದ ಕೂಡಿದುವಾಗಿರುವುವೆಂದು ಹೇಳಬಹುದು. ಸ್ವಂದ್ಯ ಮಯವಾದ ಜಗತ್ತಿನಲ್ಲಿ ಎಲ್ಲರಿಗೂ ಬೇಕಾದುದನ್ನು ಮಾಡುವುದೂ ಹೇಳುವುದೂ ವ್ಯಕ್ತಿಗೆ ಅಸಾಧ್ಯವಾದಕೆಲಸ. ಅದುದರಿಂದ ಕವಿಯೊಬ್ಬನ ಎಲ್ಲವಿಚಾರಗಳೂ ಕೃತಿಗಳೂ ಸಾರ್ವತ್ರಿಕಮನ್ನಣೆಗೆ ಎಸ್ಪೊಂದುವಾತ್ರ ಸಾಧ್ಯವೆಂಬುದನ್ನು ನಾವು ಸಂದಿಗ್ಧತೆಯಿಂದಲೆ ನೋಡಬೇಕಾಗುವುದು. ಅದರೂ ಇಂತಹ ಸಂದರ್ಭಗಳಿಂದ ಒಂದು ಲೆಕ್ಕಾಚಾರ ಹೊರಡುವುದು; ಒಳ್ಳೆಯ ಕೃತಿಯನ್ನು ಒಳ್ಳೆಯ ಕೃತಿಯೆಂದು ಒಪ್ಪಿ ಬಹಳ ಜನರು ಸಹಾನುಭೂತಿಯ ಕಾಣಿಕೆ ಸಲ್ಲಿಸಲು ಸಿದ್ಧವಾದ ದೇಶ-ಕಾಲಗಳಲ್ಲಿ, ದೈವೀಶಕ್ತಿಯ ಪ್ರಭಾವ ಹೆಚ್ಚಿರುವುದು; ಹಾಗೆ ಕಾಣಿಕೆ ಸಲ್ಲಿಸಲು ಸಿದ್ಧರಾಗದ ಬಹುಜನರಿರುವ ದೇಶಗಳಲ್ಲಿ ಆಸುರೀ ಶಕ್ತಿ ಆಟವಾಡುತ್ತಿರುವುದು. ದೈವೀಶಕ್ತಿಯ ಪ್ರಭಾವ ದೇಶದ ಜನತೆಯ ಅಭ್ಯುದಯಕ್ಕೆ ಕಾರಣವಾಗಿರುವುದು. ಆಸುರೀ ಶಕ್ತಿಯ ಆಟ ದೇಶದ ಅವನತಿಗೆ ಕಾರಣವಾಗಿರುವುದು ಇದರಂತೆಯೆ ಒಳ್ಳೆಯ ಸಲ್ಲದ ವಿಚಾರ-ಕೃತಿಗಳನ್ನು ಒಳ್ಳೆಯದೆಂದು ಎತ್ತಿ ಹಿಡಿಯುವ ಜನರು ಬಹುವಾಗಿರುವ ದೇಶವೂ ಅಧೋಗತಿಗೆ ಕಾರಣವಾಗಿರುವುದು. ಎಚ್ಚತ್ತ ಕನ್ನಡಜನತೆ ಇಂದು ಒಳ್ಳೆಯದನ್ನಾವುದು, ಜೊಳ್ಳಾವುದು ಎಂಬುದನ್ನು ತಿಳುಕೊಳ್ಳಲು ಸಮರ್ಥವಾಗಿದೆ ಆ ಸಾಮರ್ಥ್ಯದ ಬಲದಿಂದಲೆ ಈಗ ಹಲವು ಕಾರ್ಯಗಳನ್ನು ಒಟ್ಟುಗೂಡಿ ಮಾಡಲು ಸೊಂಟ ಕಟ್ಟಿದೆ. ಇಂತಹ ಕಾರ್ಯಗಳಲ್ಲಿ ಒಂದು ಇಂದಿನ ಈ ಕವಿಶಕ್ತಿಯ ಪೂಜೆ.

!

ಶ್ರೀಮಾನ್ ದತ್ತಾತ್ರೇಯ ಬೆಂದ್ರ ಅಥವಾ 'ಅಂಬಿಕಾತನಯದತ್ತ' ಅವರು ನಮ್ಮ ನಾಡಿನ ಹಿರಿಯ ಕವಿಗಳಲ್ಲಿ ಮುಖ್ಯರೆನಿಸಿದವರೊಬ್ಬರು. ಲೋಕದ ದೃಷ್ಟಿಯಿಂದ ಅವರ ಮಾತೃಭಾಷೆ ಮರಾಟಿ. ಕರ್ನಾಟಕದಲ್ಲಿರುವ ಮಿಕ್ಕಬಹುಜನ ಮರಾಟಿಗರಂತೆ ಇವರೂ ತತ್ತ್ವತಃ ಬಾಹಿರರಾಗಿ ಬಾಳಿದ್ದರೆ, ಕನ್ನಡಿಗರಿಗೆ 'ಅಂಬಿಕಾತನಯದತ್ತ' ಕವಿ ತಮ್ಮವನಾಗುತ್ತಿರಲಿಲ್ಲ. ತತ್ತ್ವತಃ ಜೀವಿಗಳಾದ ಬೇಂದ್ರೆಯವರು, ತಂತಮ್ಮ ಜನರ ವಿಶೇಷವನ್ನೂ ಉಳಿಸಿ, ತಾವು ಕನ್ನಡಿಗರೆಂದು ಮುಂದುವರಿದರು. ಕನ್ನಡಕಕ್ಕಾಗಿ ಜನನವನ್ನೆತ್ತಿ ಪಡೆದರು. ತಮ್ಮ ಕಾರ್ಯಗಳಿಂದ ಕನ್ನಡಿಗರೆನ್ನಿಸಿಕೊಳ್ಳುವವರನ್ನು ಕರ್ತವ್ಯಜಾಗೃತರನ್ನಾಗಿ ಮಾಡಿದರು. ಕನ್ನಡ ಕುಲವನ್ನು ಎಚ್ಚರಿಸಲು ಈ ಕವಿ ಹಾಡಿದ ಹಾಡುಗಳೆಷ್ಟು? 'ಕನ್ನಡಿಗನ ಉದಯರಾಗ' 'ಕನ್ನಡ ತಾಯಿ ಜೋಗುಳ' 'ಹಾಳು ತಂಪೆ' 'ಭುವನೇಶ್ವರಿ' 'ಪಂಪನನ್ನ ನೆನೆದು' 'ಮುದ್ದು ಮುದ್ದಣ' 'ರತ್ನಾಕರ' 'ಓ ಹಾಡಿ' 'ಕನಸಿನೊಳಗೊಂದು ಕಣಸು' ಮೊದಲಾದ ಕವನಗಳು ಕನ್ನಡಿಗರ ನಾಡಿನಾಡಿಯನ್ನೂ ಮಿಡಿದು, ಚಿರಂತನವಾದ ಕೆಚ್ಚನ್ನು ಹೆಚ್ಚಿಸುವಂತಿವೆ. ಗತಸ್ಮೃತಿಭವಕ್ಕಾಗಿ ಕಣ್ಣೀರಿಸುವಂತಿವೆ. ಸುಪ್ತಸಾಮರ್ಥ್ಯವನ್ನು ತೋರಿಸಿ ಆಶಾವಾದಿಗಳನ್ನಾಗಿಸುತ್ತವೆ.

ಭಾರತದ ಪರಾಧೀನ ಜೀವನಕ್ಕಾಗಿ ಕರುಳು ಕುದಿದು ಹಾಡಿದ ಇವರ ಹಲವು ಕವಿತೆಗಳೂ ಚೈತನ್ಯದಾಯಕವಾಗಿವೆ. 'ಮೂವತ್ತು ಮೂರು ಕೋಟಿ' 'ಅಹಹ ಸಹಿಸಂತ್ಯ ದೇವಿ!' 'ಸೀವೋಲ್ಲಂ ಫೆನ' 'ನರಬಲಿ' ಮೊದಲಾದುವುಗಳಂತಹ ಪೀಡಿಯನ್ನೂ ಹೊಡೆದೆಬ್ಬಿಸುವಂತಿವೆ. ಸಮಾಜದಲ್ಲಿ ಕಂಡುಬರುವ ಕೆಲವು ಸಮಸ್ಯೆಗಳಾಗಿ ನಿಂತಿರುವ ಹೊನ್ನು, ಅನ್ನ, ಅಧಿಕಾರಗಳ ಮೂಲಕ ಉಂಟಾದ ವೈಷಮ್ಯವನ್ನು ಕುರಿತು ಹಲವಾರು ಕವನಗಳನ್ನಿವರು ರಚಿಸಿದ್ದಾರೆ. ಬೇಂದ್ರೆಯವರ ಪ್ರೀತಿಗೀತಗಳು ನಾಡಿನಲ್ಲಿ ಜನಪ್ರಿಯವಾಗಿವೆ. ಚಿಲುಮೆಯ ಹಾಡುಗಳು ಬೇಟೋಪಾಖ್ಯಾನವಾಗಿವೆ. 'ತತ್ತ್ವಜ್ಞಾನದ ಅನುಭವದ ಹಾಡುಗಳು, ಹೃದಯ-ಬುದ್ಧಿಗಳಿಗೆ ಇವ-ವಿಚಾರಗಳ ಆಹಾರವಾಗಿರ

( ೧ನೆಯ ಪುಟ ನೋಡಿರಿ )

## ಮಂಗರಾಯನ ಹಿಮಾಲಯ ಯಾತ್ರೆ

ಮಂಗರಾಯನಿಗೆ ವಯಸ್ಸಿನ ಪ್ರಶ್ನೆ ನಿತ್ರಾಣನಾದುದರಿಂದಲೂ, ಈ ಅಶಕ್ತತೆಯ ಮೂಲಕ ಅತನ ಮೆದುಳಿನ ಮೇಲೂ ವಿಶೇಷ ಪರಿಣಾಮವಾ. ದುದರಿಂದಲೂ, ಹವೆ ಬದಲಾಯಿಸಲು ಗೌರೀ-ಶಂಕರಕ್ಕೆ ಕೆರಳಲಿವ್ವಾನೆ. ಅದಕ್ಕಾಗಿ ಜಯಂತಿಯ ವಾಚಕರಿಂದ ಅತ ದೀರ್ಘಾವಧಿಯ ರಜೆ ಕೇಳಿದುದರಿಂದ, ಅನಿವಾರ್ಯವಾಗಿ ಅತನಿಗೆ ರಜೆಯನ್ನು ಕೊಡಲಾಗಿದೆ. ಹಿಮಾಲಯದ ಹವೆಯಿಂದ ಅವನ ಪ್ರಕೃತಿ ಸಮವಾದರೆ, ಅಲ್ಲಿಯ ಮುರಗಳ ಮಾಹಾತ್ಮ್ಯವನ್ನರಿತು ಅತ ಅಲ್ಲಿಯೇ ಚಿರಕಾಲ ವಾಸಿಸುವ ಮನಸ್ಸು ಮಾಡಿದರೂ ಮಾಡಿಬಹುದು. ಹೇಳಿಕೇಳಿ ಮಂಗರಾಯ. ಹಾರಾಡಲು ಮುರಗಳು ಸಿಕ್ಕಿದರೆ ಜಯಂತಿಯ ವಾಚಕರ ನೆನಪು ಅವನಿಗೆ ಉಳಿಯುವ ಸಂಭವ ಕಡಿಮೆ. ಇನ್ನು ಪ್ರಕೃತಿ ಸಮನಾಗದಿದ್ದರಂತೂ ಅತನ ಸಹವಾಸ ನಮಗೆ ಸಿಕ್ಕುವುದು ಸಾಧ್ಯವೆ ಇಲ್ಲ. ಆದುದರಿಂದ ನಿನು ಮಾಡಬೇಕೆಂಬ ಯೋಚನೆಯಲ್ಲಿ ಸಂಪಾದಕರು ಕಾಡುಕಾಡು ತಿರುಗುತ್ತಿರುವಾಗ, ಬೀರಣ್ಣ ನೋಡಲು ಸಿಕ್ಕಿದ. ಸಂಪಾದಕರ ಚಿಂತೆಯ ಕಾರಣ ಕೇಳಿದ. ಕೇಳಿ ನಕ್ಕು ಹೇಳಿದ: "ಹೋದರೆ ಮಂಗ ಹೋಯಿತೇಕ್ರಿ, ನೀವ್ಯಾಕೆ ಚಿಂತಿ ಮಾಡ್ತೀರಿ! ನಾನು ಮಾಡಿಕೊಡ್ತೀನಿ ನಿಮ್ಮ ಕೆಲಸಾ! ನಿಮಗೇನಾದರೂ ಪ್ರಸಂಗ ಬಂದರೆ ನನ್ನ ಕರೀರಿ! ನಮಗೇನಂತೀರಿ? ಬರೀಲಿಕ್ಕೆ ಬರೂದಿಲ್ಲ, ಕೆರೀಲಿಕ್ಕೆ ಬರೂದಿಲ್ಲ. ಬರೀ ಬಾಯಿಮಾತಿನವನು ನಾವು. ನಮ್ಮ ವಿಚಾರ ಬರಕೊಳ್ಳಲಾಕಂತ ಒಬ್ಬ ಹುಡುಗನ್ನ ಸಾಕೀದೀನೇನ್ರಿ! 'ಗುಡದಪ್ಪ' ಅಂತ ಅವನ ಹೆಸರು. ನಿಮಗೇನು ಬೇಕಾದದ್ದನ್ನೆಲ್ಲಾ ಅವನ ಕಡಿಂದ ನಾ ಬರಿಸಿ ಕಳಿಸ್ತೀನಿ. ನೀವ್ಹೊಂದೂ ಕವಡೀನೂ ನನಗ ಕೊಡಬೇಕಾಗಿಲ್ಲ. ನನಗ ಬೇಕಾದದ್ದನ್ನ ಕೊಡೂ 'ಕುರೀತಾಯಿ' ನನಗ ಇದ್ದಾಳ ಇದ್ದಾಳ. ನನಗs ಬೇಕಾದರ ಹೇಳ್ರಿ; ಈಗಿನ ದಿನದಾಗ ನಿಮ್ಮ ಚಾಕ್ಕ ಹಾಲು ಪಾಲು ಸಿಗೂದಿಲ್ಲ; ಒಂದರಡು ಮುಗಿ ಬೇಕಾದರ ಒಯ್ಯತಿರ್ರಿ ದಿನಾಗಲೂ" ಎಂದು ಹೇಳಿದ. ಬೀರಯ್ಯನ ಮಾತನ್ನು ಸಂಪಾದಕರು ಕೇಳಿ, 'ಇವನಿಗೊಂದು ಚಾನ್ಸ್ ಕೊಟ್ಟು ನೋಡೋಣ' ಎಂದು ವಿಚಾರ ಮಾಡಿ, 'ಆಗಲಿ ಬೀರಣ್ಣಾ, ಸದ್ಯ ನನ್ಮ ಕೆಲಸ ಮಾಡಿಕೊಡು. ಸ್ವಷ್ಟ ಮಾತಾಡುವ ಕೆಲಸ ಸಂಪಾದಕರಿಂದ ಎಷ್ಟೋ ಸಲ ಆಗತಿರೂದಿಲ್ಲ. ಅಂಥಾ ಪ್ರಸಂಗ ಬಂದಾಗ ನಿನ್ನನ್ನು ಕರೆದು ಮಾತನಾಡುತ್ತೇನೆ; ನಿನ್ನ ಅಭಿಪ್ರಾಯ ಪ್ರಕಟಿಸುತ್ತೇನೆ' ಎಂದು ಹೇಳಿದರು. ಕಾರ್ಯಾಲಯಕ್ಕೆ ಮರಳಿದರು.

* * *

## ಬೀರಣ್ಣ ನೆಂದರೆ ಯಾರು?

ಜಯಂತಿಯ ವಾಚಕರಿಗೆ ಬೀರಣ್ಣನ ಪರಿಚಯ ಮಾಡಿಕೊಡುವುದು ಅವಶ್ಯಕ. ಹುಟ್ಟಿನಡೆ ಕಲಿತ ದಿನದಿಂದ ಈತ ಕುರಿಕಾಯುವ ಕೆಲಸಕ್ಕೆ ಮೊದಲು ಮಾಡಿದ್ದಾನೆ. ಅವನಿಗೆ ನಯ-ಸ್ಸೆಷ್ಟು ಎಂಬುದು ಅವನಿಗೇ ಗೊತ್ತಿಲ್ಲ. ಕುರಿಗಳೊಳಗಿನ ಎಲ್ಲ ಜಾತಿಗಳನ್ನೂ ಸ್ವಭಾವಗಳನ್ನೂ ಸರಿಯಾಗಿ ಗೊತ್ತು ಹಿಡಿಯಬಲ್ಲ. ಕುರಿಗಳ ರೋಗಗಳಿಗೆ ಚೆನ್ನಾಗಿ ಚಿಕಿತ್ಸೆ ಮಾಡಬಲ್ಲ. ತುಂಟ ಕುರಿಗಳನ್ನು ಕೊಳಲೂದಿ, ದಾರಿಗೆ ತರಬಲ್ಲ; ಕುಂಟ ಕುರಿಗಳನ್ನು ಕಾಲು ಕಿಕ್ಕಿ ನಡೆದಾಡ ತೊಡಗಿಸಬಲ್ಲ. ಹುಚ್ಚುಕುರಿಗಳಿಗೆ ಬುದ್ಧಿ ಕಲಿಸಬಲ್ಲ, ಪೆಚ್ಚು ಕುರಿಗಳಿಗೆ ಧೈರ್ಯ ತುಂಬಬಲ್ಲ. ನಾಯಿ ಸಾಕಿರುವನಾದರೂ ಕಾಯುವ ನಾಯನ್ನಲ್ಲದೆ ಕಚ್ಚುವ ನಾಯನ್ನಲ್ಲ. ಕುರಿಗಳನ್ನು ಒಲವಿನಿಂದ ಸಾಕುವನು. ಅವು ಕೊಟ್ಟ ಹಾಲುಹಿಟ್ಟಿನಿಂದ ಹೊಟ್ಟೆ ತುಂಬಿಕೊಳ್ಳುವನು. ಬೀರಣ್ಣನ ಬಡಿಗೆಯ ನುಡಿಗಳನ್ನು ಎಂದರೆ 'ಬಡಿನುಡಿ'ಗಳನ್ನು ಕುರಿಗಳೆಲ್ಲ ಕೇಳುವುವು; ಅದರಂತೆ ನಡೆದು ಹೊಟ್ಟೆ ತುಂಬ ಮೇದು, ಕಣ್ಣು ತುಂಬ ನಿದ್ದೆ ಮಾಡುವುವು. ಕುರಿಗಳು ಹೊಟ್ಟೆತುಂಬ ಮೇದು ಸುಖದಿಂದ ಬದುಕಬೇಕೆಂಬುದೇ ಬೀರಣ್ಣನ ಉತ್ಕಟವಾದ ಆಶೆ. ಅದಕ್ಕಾಗಿ ತಾನು ಬದುಕಬೇಕಾಗಿರುವುದರಿಂದ, ಬದುಕಲು ಬೇಕಾದಷ್ಟು ಹಾಲನ್ನು ಒಳಿದುಕೊಂಡು ಕುಡಿಯುವನು. ಚಳಿ ಮತ್ತು ಮಳೆಗಳಿಗಾಗಿ ಒಂದು ಕಂಬಳಿ ಸಾಕು. ಬೀರಣ್ಣನಿಗೆ ಕಳ್ಳಾಕರ ಭಯವಿಲ್ಲ; ಹುಲಿ-ಸಿಂಹಗಳ ಹೆದರಿಕೆಯಿಲ್ಲ. ನರಿ-ತೋಳಗಳಿಂದ ತನ್ನ ಕುರಿಯ ಮಂದೆಗೆ ತೊಂದರೆಯಾಗಬಾರದೆಂದು ಒಂದೆರಡು ಜಾತಿನಾಯಿಗಳನ್ನು ಸಾಕಿದ್ದಾನೆ. ಬೀರಣ್ಣನ ಒಲವು, ನಾಯಿಗಳ ಕಾವಲು ಇವುಗಳಲ್ಲಿ ಕುರಿಗಳು ನಿರಾತಂಕವಾಗಿ ಕ್ರೀಡಿಸುತ್ತಿರುವುವು. ತುಷ್ಟಿ-ಪುಷ್ಟಿಗಳಿಂದ ಬದುಕುತ್ತಿರುವುವು.

ಪ್ರಕೃತಿಯ ಪುತ್ರ ಬೀರಣ್ಣ. ವಿಕೃತಿಗಳನ್ನು ಕೂಡಲೆ ಕಂಡು ಹಿಡಿಯಬಲ್ಲ. ಸಂಸ್ಕೃತಿಯ ಹೆಸರಿನಿಂದಲೊ, ನಾಗರಿಕತೆಯ ಹೆಸರಿನಿಂದಲೊ ವಿಕಾರಗಳು ತಲೆಯೆತ್ತಿ ಮೆರೆಯತೊಡಗಿದರೆ ಬೀರಣ್ಣನಿಗೆ ತಡೆಯಲಾಗುವುದಿಲ್ಲ. ಬಡಿಗೆಯನ್ನು ಮೇಲೆತ್ತಿ, ಬಡಿನುಡಿಗಳನ್ನು ಪ್ರಾರಂಭಿಸುವನು. ಸತ್ಯದ ಹೆಸರಿನಿಂದ ಮುಂದೆ ಬಂದ ಸುಳ್ಳು ತಟವಟಗಳೂ, ಧರ್ಮದ ಹೆಸರಿನಿಂದ ಮುಂದೆ ಬಂದ ಅಧರ್ಮ-ಅನಾಚಾರಗಳೂ ಬೀರಣ್ಣನ ಬಡಿನುಡಿಯ ಬೆಳಕಿನಿಂದ ಸ್ವಸ್ವರೂಪ ಪ್ರಕಟಿಸಿ, ಓಡಿ ಹೋಗುವುವು. ಬೀರಣ್ಣನ ಬಡಿಗೆಯೆಂದರೆ ಅದೊಂದು ಯಷ್ಟಿಣೆಯ ಕೋಲಿನಂತಿದೆ. ಅದನ್ನು ಮೇಲಕ್ಕೆತ್ತಿ ನಿಂತು ಮಾತನಾಡತೊಡಗಿದನೆಂದರೆ, ರಾಜಕಾರಣಿ ತನ್ನ ಮೋಸಗಾರಿಕೆ ಹೊರಬಿದ್ದೀತೆಂದು ನಾಚಿ ನಿಲ್ಲಬೇಕು. ಡಂಭಾಚಾರಿ ತನ್ನ ವಂಚಕತನ ಪ್ರಕಟವಾದೀತೆಂದು ತಲೆ ಕೆಳಗೆ ಮಾಡಬೇಕು. ತೋಳ-ನರಿಗಳ ಸ್ವಭಾವವನ್ನು ಬಲ್ಲ ಬೀರಣ್ಣ, ಮಾನವ. ನಲ್ಲಿಯ ನರಿತನ ಜೋಳತನಗಳನ್ನೂ ಚೆನ್ನಾಗಿ ಅರಿತಿರುವ. ಮೇಲೆ ಮೇಲೆ ನೋಡಿದರೆ ಮುಂಗು ಬೀರಣ್ಣ; ಹತ್ತಿರವಿದ್ದು ನೋಡಿದರೆ ಲೋಕವ ತೋರಣ್ಣ. ಇಂತಹ ಬೀರಣ್ಣ ಜಯಂತಿಯ ವಾಚಕರಿಗೆ ದೊರೆತುದು ಒಳ್ಳೆಯ ಕಾಲದ ಲಕ್ಷಣವಾಗಿದೆ. ಮುಂದಿನ ತಿಂಗಳಿಂದ ಅವನ 'ಬಡಿನುಡಿ'ಗಳ ಸಿಹಿ-ಕಹಿಗಳ ಪರಿಚಯ ಮಾಡಿಸಿಕೊಡುವೆನು. ನಾನಾರೆಂಬುದು ನಿಮಗೆ ಗೊತ್ತಿಲ್ಲ. ನಾನು ಗುಡದಪ್ಪ; ಬೀರಣ್ಣನ ಸಾಕುಮಗ. ತನ್ನ ಮಾತು ಜನಕ್ಕೆ ಗೊತ್ತಾಗಲೆಂಬ ಉದ್ದೇಶದಿಂದಲೆ ಬೀರಣ್ಣ ಚಿಕ್ಕಂದಿನಿಂದ ಹಾಲು ಕುಡಿಸಿ ದೊಡ್ಡವನನ್ನಾಗಿ ಮಾಡಿದ. ಹಳ್ಳಿಯ ಸಾಲೆಗೆ ಹೋಗಹೇಳಿ ಓದು-ಬರಹ ಬರುವಂತೆ ಮಾಡಿದ. ನಾನು ಅವನ ವಿಚಾರಲೇಖಕ ಮಾತ್ರ.

( ೨ನೆಯ ಪುಟದಿಂದ ಮುಂದೆಸಾಗಿದ್ದು )

ವುವು. ಇವರ ನಕ್ಕು ನಗಿಸುವ ನಗೆ, ಹಲವರ ಮನಸಿನ ಅಶಕ್ತತೆಗಳನ್ನು ಕೆಣಕದೆ ಕೆರಳಿಸದೆ ತಿದ್ದುವಂತಹದಾಗಿದೆ.

ಸಾಹಿತ್ಯನಿರ್ಮಿತಿಯಲ್ಲಿ ತೋರಿಸಿದ ಸತ್ವ-ಸಾಮರ್ಥ್ಯಗಳನ್ನೇ ಶ್ರೀ. ಬೇಂದ್ರೆಯವರು ಸಾಹಿತ್ಯವಿಮರ್ಶೆಯಲ್ಲಿ ತೋರಿಸಿದ್ದಾರೆ. ಪೌರ್ವಾತ್ಯ ಪಾಶ್ಚಾತ್ಯ ವಿಮರ್ಶಾವಾಸ್ತ್ರಗಳೆರಡನ್ನೂ ಅಭ್ಯಾಸಮಾಡಿ ಅರಗಿಸಿಕೊಂಡವರು ನಮ್ಮಲ್ಲಿ ತೀರ ಕಡಿಮೆ ಜನರು. ಪಾಶ್ಚಾತ್ಯ ವಿಮರ್ಶಾತತ್ತ್ವದ ವಿವರಗಳನ್ನು ಪೌರ್ವಾತ್ಯ ಪರಿಭಾಷೆಯಲ್ಲಿ ಹೊಂದಿಸಿ ಹೇಳಬಲ್ಲ ಶ್ರೀ. ಬೇಂದ್ರೆಯವರ ವಿಮರ್ಶಾರೀತಿ, ಪರ್ವ-ಗ್ರಾಹ್ಯವೆನಿಸುವಂತಿರುವುದು.

ಕನ್ನಡದ ಕೆಲವೆ ಜನ ಮಾತರಿವರಲ್ಲಿ ಶ್ರೀ. ಬೇಂದ್ರೆಯವರು ಮೊದಲನೆಯ ಸಾಲಿನಲ್ಲಿ ನಿಲ್ಲುವ ತಕ್ಕವರು ಪಡೆದವರಿದ್ದಾರೆ. ಆಕರ್ಷಕವಾದ ಮಾತುಗಾರಿಕೆ; ಜಾಣ್ಮೆಯಿಂದ ಕೂಡಿದ — ಜಾಣರಂ ತಲೆದೂಗಿಸಬಲ್ಲ—ನಿರೂಪಣಾ ಪದ್ಧತಿ. ತರ್ಕರುದ್ಧವಾದ ವಿಚಾರ ಸರಣಿ. ಅಭ್ಯಾಸ, ಅನುಭವಗಳ ಪ್ರಮಾಣದಿಂದ ಸಹಜವೆನಿಸುವಂತಹ ವಿಷಯ ವಿವೇಚನಾಪದ್ಧತಿ.

ಇವೆಲ್ಲ 'ತಮ್ಮ ಒಳ್ಳೆಯ ಗುಣಗಳಿಂದ ಶ್ರೀ. ಬೇಂದ್ರೆಯವರೆ ಕನ್ನಡಕುಲದ ಮನವನ್ನಿಂದು ಮೆಚ್ಚಿಸಿದ್ದಾರೆ. ಅವರ ಅದರ ವಿಶ್ವಾಸಗಳಿಗೆ ಪಾತ್ರರಾಗಿದ್ದಾರೆ; ವ್ಯಕ್ತಿಯ ಒಳ್ಳೆಯ ಗುಣಗಳ ಕಡೆಗೆ ದೃಷ್ಟಿಯಿರಿಸಿ, ಅವುಗಳ ನಿಜವಾದ ಬೆಲೆಯನ್ನು ಕಂಡುಕೊಂಡು; ಆ ಗುಣಗಳ ಪೂಜೆ ಮಾಡಬೇಕೆಂಬ ಬುದ್ಧಿ ಕನ್ನಡಿಗರಲ್ಲಿ ಉದಿಸಿದುದು ಸಂತೋಷದ ವಿಷಯ. ಕಳೆದ ತಿಂಗಳ ೨೬ನೆಯ ತಾರೀಖಿನ ದಿನ ಧಾರವಾಡದಲ್ಲಿ ಕನ್ನಡಿಗರೆಲ್ಲ ಸೇರಿ, ಸತ್ಕಾರ ಸಮಾರಂಭ ಸಭೆಯನ್ನು ನೆರವೇರಿಸಿ, ಶ್ರೀ. ಬೇಂದ್ರೆಯವರಿಗೆ ತಮ್ಮ ಮನ್ನಣೆಯನ್ನೂ ನಂಬುಗೆಯ ನಿಧಿಯನ್ನೂ ಸಮರ್ಪಿಸಿ, ತಮ್ಮ ಕರ್ತವ್ಯ ಬುದ್ಧಿಯನ್ನು ತೋರಿಸಿದರು. ಇದೀಗ ಅಭಿನಂದನೀಯ ಸಂಗತಿ. ನಿಜವಾದ ಗುಣವನ್ನು ಅರಿಯುವ ಬುದ್ಧಿ ಯಾವಾಗಲೂ ನಮ್ಮಲ್ಲಿ ಎಚ್ಚೆತ್ತಿರಲಿಂದೂ, ಮನ್ನಣೆ ಪಡೆದ ಕವಿ ಬೇಂದ್ರೆಯವರು ಯಶಸ್ವಿಗಳಾಗಿ ಬಹುಕಾಲ ಬಾಳಲೆಂದೂ ಭಾಗ್ಯವಿಧಾತನಲ್ಲಿ ನಾವೆಲ್ಲ ಪ್ರಾರ್ಥಿಸುತ್ತಿರೋಣ.

## ಜಯ, ಕನ್ನಡ ರಸದೇವಿ!

---

**ತಿದ್ದುಪಡಿ**

ಈ ಸಂಚಿಕೆಯ ೫೫ರಿಂದ ೨೦ರ ವರೆಗಿನ ಪುಟ ಸಂಖ್ಯೆಗಳು ಕಣ್ಣು ತಪ್ಪಿನಿಂದ ೫೦೭ರಿಂದ ೫೨೨ ಎಂಬುದಾಗಿ ಆಗಿವೆ. ಅವುಗಳನ್ನು ದಯೆಯಿಟ್ಟು ಸರಿಪಡಿಸಿಕೊಳ್ಳಬೇಕಾಗಿ ವಿನ್ನಪ.

# ಪಾಪದ ಫಲ

**ಶ್ರೀ ಕೆ. ವೀರಯ್ಯ ಸಿಗ್ಗಾಂವಿ**

★

೧

ಕತ್ತಲೆಯು ಕವಿದಿತ್ತು, ನೀಶಬ್ದವಾಗಿತ್ತು,
ಗೂಬೆ 'ಗೂಗೂ' ಎಂದು ಒದರುತ್ತಿತ್ತು;
ಅಂಜುತಲಿ ಅಳುಕುತಲಿ ಮನವು ತಾ ನಡೆದಿತ್ತು,
ನಿರ್ಭಯದಿ ಕಾಲುಗಳು ಸಾಗುತಿಹವು.

೨

ಹೊನ್ನಿನಾ ಹಿರಿಯಾಸೆ ಹೆಣ್ಣಿನಾ ಅಳಿಯಾಸೆ
ಮತ್ತೆ ನೂಕುತಲಿಹವು ಮನವ ಮುಂದೆ;
ಬಾಗಿಲನು ದಾಟಿದನು, ಕೋಣೆಯನು ಸೇರಿದನು;
ಕೈಯ ಜಾಚಿದನೊರೆಯೊಳಿಹ ಚೂರಿಗೆ.

೩

ಚೂರಿ ಧರಿಸಿದ ಕೈಯ ಮೇಲಕೆತ್ತಿದನಾಗ
ಮತ್ತೊಮ್ಮೆ ಹೇಳಿತಾ ಮನವು ಒದ್ದಿಯನು;
ಎಲೆ ನರನೆ, ನಚ್ಚದಿರು ಬಾಲೆಯನು, ಬಯಸದಿರು
ಸಿರಿಯನ್ನು; ಗೆಳೆಯನನು ಕೊಂದು ಕೆಡಬೇಡ!'

೪

ಹೃದಯ ಮಿಡಿದಾ ನುಡಿಯ ಕವಡಿಯೆಂದೆನ್ನುತ್ತ
ಹೃದಯವನು ಭೇದಿಸಿದ — ದಯೆಯನೆಣಿಸದಲೆ;
ಹೃದಯದಾ ಬಾಧೆಯನು ತಡೆಯಲಾರದೆ 'ಅವನು'
ಕೊನೆಗೊಮ್ಮೆ ಕೂಗಿದನು, ಜನ ನೆರೆದರು.

೫

ಕೊಲೆಗೈದ ರಕ್ಕಸನು ಇಲ್ಲಿಯೇ ಇಹನೆಂದು
ಹಿಡಿದೆಳೆದು ಕಟ್ಟಿದರು ಅಲ್ಲಿಯೇ ಮರಕೆ;
ಕೊಲೆಯಾದ ಮಾನವನ ಕುಟಿಲ ಪತ್ನಿಯು ಹಾಡಿ-
ಬೋರಾಡಿ ಅಳುತಿಹಳು ಮೂಢತನಕಾಗಿ.

೬

ಅವಳ ನೆಚ್ಚಿದ ಮನುಜ ಗೆಳೆಯನನು ಲೆಕ್ಕಿಸದೆ
ಕೊಲೆಗೈದು ಹೊಂದಿದನು ಪಾತಕದ ಫಲವ;
ಹೆಣ್ಣಿನಾ ನೆಲೆಯರಿತ ಅಣ್ಣಗಳು ಯಾರಿಹರು?
ಮೈಮೇಲೆ ಬರಲವಳೆ ಸರಿದಳ್ಳೆ ದೂರ!

---

# ಮುಂಬಯಿಯ ಕ್ಯೂ ಪುರಾಣ

(ಹರಟೆ)

ಶೀ. 'ಎಸ್ಕೆ' ಮುಂಬಯಿ

★

ಮುಂಬಯಿಯಲ್ಲಿ ಮನುಷ್ಯ ಮತ್ತು ಯಂತ್ರ ಇವೆರಡರ ನಡುವೆ ಅಂತರ ಬಹಳ ಕಡಿಮೆ. ಮನುಷ್ಯಯಂತ್ರ ಮುಂಜಾನೆ ಕ್ಲೀನಿಂಗ್ ಮುಗಿಸಿಕೊಂಡು, ಪೆಟ್ರೋಲ್ ಹಾಕಿಕೊಂಡು, ಸೆಕಂದಿಗೆ ಸರಿಯಾಗಿ ಗಾಡಿ ಏರುವುದು. ಅದೇ ಗಾಡಿ, ಅದೇ ವೇಳೆ, ಅದೇ ಡಬ್ಬಿ, ಅದೇ ಸ್ಥಳ, ಅವೇ ಹೆಣ್ಣು, ಅವೇ ಗಂಡು! ಎರಡೂ ಯಂತ್ರಗಳು ದುಡಿಯುವುದಕ್ಕೆ ಹೋಗುತ್ತವೆ. ಮುಚ್ಚಂಜೆಯಾಗುತ್ತಲೆ ಗಂಡು-ಹೆಣ್ಣು ಹಿಂಡು-ಹಿಂಡಾಗಿ ಯಂತ್ರವೇರಿ ಮನೆಗೆ ಮರಳುತ್ತವೆ. ಸಂಜೆಯ ಮುಂದೆ ಓಣಿ-ಓಣಿಗೆ ಪೇಟೆ-ಪೇಟೆಗೆ ಹೆಣ್ಣು ಯಂತ್ರಗಳ ಬಣ್ಣಗಳ ಸಂತೆ ವಿವಿಧ ವೇಷ, ವಿವಿಧ ರೂಪ, ವಿವಿಧ ಆಲಂಕಾರ, ವಿವಿಧ ವರ್ಣ—ಅವೆಲ್ಲವೂ ವಿವಿಧ ಯಂತ್ರಗಳು. ನಾವು ನೋಡುವುದು ಯಂತ್ರಗಳ ಸಿಂಗಾರ.

ಸಂಜೆಯ ಏದೂವರೆ ಆದಮೇಲೆ ಮುಂಬಯಿ 'ಫೋರ್ಟ್' ನ ಕೂಟಕೂಟಗಳನ್ನು ನೋಡಬೇಕು. 'ಫ್ಲೋರಾ ಫೌಂಟನ್' ಟ್ರಾಮ್ ಕೂಟ, 'ಬೋರೀಬಂದರ' ಬಸ್‌ಕೂಟ, 'ಚರ್ಚ್-ಗೇಟ್-ರೈಲು ನಿಲ್ದಾಣ— ಎಲ್ಲಾ ಕಡೆಗೂ ಮೈಲುಮೈಲುದ್ದ ಸಾಲಾಗಿ ಗಂಡು-ಹೆಣ್ಣುಗಳೆಂಬ ದೇಹಗಳು ವಾಹನಕ್ಕಾಗಿ ದಾರಿಕಾಯುತ್ತ ನಿಂತಿರುತ್ತವೆ. ಇದುವೆ ಮುಂಬಯಿ 'ಕ್ಯೂ' ಪುರಾಣ. 'Learn to labour and to wait'— ಎಂಬ ಇಂಗ್ಲಿಷ್ ಕವಿಯ ಉಕ್ತಿಗೆ ಇನ್ನೆರಡು ಶಬ್ದಗಳನ್ನು ಜೋಡಿಸಿದರೆ ಪ್ರತಿನಿತ್ಯ ಇಲ್ಲಿಯ ಜನರು ಆಚರಿಸುತ್ತಿರುವ 'ಕ್ಯೂ'ದ ಸರಿಯಾದ ಅರ್ಥವಾಗುತ್ತದೆ. ಎಂದರೆ 'Learn to labour in a line and to wait for their turn'. ದಿನದ ಗಾಣವನ್ನು ತಿರುಗಿ, ಗಂಡುಹಕ್ಕಿ ಬೇಗನೆ ಗೂಡುಸೇರಿ ಕಿಂಕಿಣಿನಾದದ ಕೈಯಿಂದ ಬರುವ ಅಮೃತದ ಬಟ್ಟಲನ್ನು ಸೇವಿಸುವುದಕ್ಕಾಗಿ ಧಾವಿಸುತ್ತಿರುತ್ತದೆ. ತೊಳ-ತೊಳಗುವ ರಂಭೋರುಗಳ ಮೇಲೆ ಏರಿರುವ ಚಾರ್ಜಿಟ್ ಫ್ಯಾಕು, ತುಟಿಗೆ ಬಳೆದಿರುವ ಕೆಂಪು ಬಣ್ಣ—, ಫಳ್ಳಿಸುತ್ತಿರುವ ತುಂಬಿದ ಎದೆಯಿಂದ ಕಂಡವರನ್ನು ದಿಗ್ಗನೆ ಹಾಯುತ್ತ 'ಟಿಕೆಟ್'ಗಾಗಿ ಹಂಬಲಿಸುವ ಪ್ರಿಚ್ಚನ್ ಕಕ್ಕಸಜವ್ವನೆ, ಮಲಬಾರ ಬೆಟ್ಟವನ್ನೇರಿ ತನ್ನ ಬೇಟೆಗಾರನನ್ನು ಸೇರಲು ಬಸ್ಸಿಗಾಗಿ ದಾರಿ ಕಾಯುತ್ತಿರುತ್ತಾಳೆ.

**ಮಹಾಯುದ್ಧದ ಸಮುದ್ರಮಥನದಿಂದ ಹೊರಟ ಶಬ್ದ ಚಿಂತಾಮಣಿಯೊಗಿದೆ, ಈ 'ಕ್ಯೂ' ಎಂಬುದು. ಹಿಂದಿನ ಚಿಂತಾಮಣಿ ಚಿಂತೆಯನ್ನು ಕಳೆಯಲಿಕ್ಕೆ ಇದ್ದಿತಂತೆ; ಈ 'ಕ್ಯೂ' ಚಿಂತಾಮಣಿ ಚಿಂತೆಯನ್ನು ಎಳೆದು ತರಲಿಕ್ಕೆಂದು ಇದೆ.**

★

ಎಷ್ಟೋ ಹಿಂದೂ ಹೆಣ್ಣುಗೊಂಬೆಗಳು ಸಿನಿಮಾ ನಕ್ಷತ್ರಗಳ ಉಡಿಗೆ, ಒಯ್ಯಾರಗಳನ್ನು ಅನುಕರಿಸಿ, ರಸವಿಲ್ಲದ ಶೃಂಗಾರ ಮಾಡಿಕೊಂಡು, 'ಅನ್ನದ ಪಾತೆ'ಯಲ್ಲಿ ದುಡಿದು ಪಸಿದು ಕಂಗೆಟ್ಟು ಹೊರಬರುತ್ತವೆ. ತೆರವಾದ ಹೊಟ್ಟೆ, ಬರಿದಾದ ಹೃದಯ! ಕೂಳಿನ ಮನೆಗೆ ಧಾವಿಸಲು ಈ ಹೆಣ್ಣು ಕೂಲಿಗಳು ಹಾತೊರೆದು ನಿಂತಿರುತ್ತವೆ. ಕವಿಗಳು ವರ್ಣಿಸುವ ದೇಹಲೋಕದ ಭಾವರಾಣಿಯರೆಲ್ಲಿ! ಗೃಹಿಣಿಯ ಸೌಭಾಗ್ಯವನ್ನು ತೊರೆದು ಕೂಲಿಗಳಾಗಿ ದುಡಿಯುವ ಈ ಹಾವುರಾಣಿಯರೆಲ್ಲಿ! ದೇಹವೊಂದು ಯಂತ್ರ, ಜೀವನವೊಂದು ಸಂತೆ, ಪಾಣಿಗ್ರಹಣವೊಂದು ವೇಟಿಯ ಸರಕು— ಇಂತಿದೆ ಇಲ್ಲಿಯ ಜೀವನ; ಇಲ್ಲಿಯ ಕಾವ್ಯ, ಇಲ್ಲಿಯ ಸೌಂದರ್ಯ. ಕಾವ್ಯ ಸೌಂದರ್ಯವನ್ನು ಹುಳಿದು ವಿಜ್ಞಾನದ ಸತ್ಯ ತಾಂಡವವಾಡಿತೆಂದರೆ ಬಳುಕುವ ಹೆಣ್ಣು ಬದುಕಿನ ಯಂತ್ರವಾಗುತ್ತದೆ.

ಹಾದಿ ಕಾದು ಕಾದು ತಲೆ ಸಿಡಿದು ಬೀಳುವಂತಾದಾಗ ಒಂದು ಬಸ್ಸು ಭುಸ್ಸೆಂದು ಬರುತ್ತದೆ. ಹೆಣ್ಣು ಗಂಡು ಅಡಕಲೇರಿ— ಜೇನಿಗೆ ನೊಣಗಳಂತೆ— ಮುತ್ತುತ್ತವೆ. ಹತ್ತುಹತ್ತುವಾಗಲೆ ಬಸ್ಸು ಜಾರಿಹೋಗುತ್ತದೆ. ನಿಂತು ನಿಂತು ಸೋತ ದೇಹಗಳು ನಿರಾಶೆಯಿಂದ ಕೈ ಜೆಲ್ಲಿ ಮತ್ತೆ ವೃತ್ತಪತ್ರ ಜಿಜ್ಞಾಸಿಸುತ್ತವೆ.

ನನಗಂತೂ ಈ 'ಕ್ಯೂ' ಹಚ್ಚುವ ಶಿಕ್ಷೆಯೆಂದರೆ ದೇಹಾಂತ ಶಿಕ್ಷೆಗಿಂತಲೂ ತೀಕ್ಷ್ಣವೆನಿಸುತ್ತದೆ. ದೇಹಾಂತ ಶಿಕ್ಷೆಯೊ, ಒಂದು ಹೂಡೆತ ಎರಡು ತುಂಡು. ಇಲ್ಲಿಯೊ ಮನಸ್ಸು ತಾಳ್ಮೆಗೆಟ್ಟು ಛಿದ್ರಛಿದ್ರವಾಗಿ ಹೋಗುತ್ತದೆ. ತಲೆ ಕಾದು, ಸೆರಗೆ ಕಟ್ಟೊಡೆದು, ರೋಷ ಆವಿರ್ಭವಿಸಿ ಗಾಳಿಯನ್ನೆ ಗುದ್ದುವಂತಾಗುತ್ತದೆ. ನಿರ್ವಾಹವಿಲ್ಲದೆ ಮತ್ತೆ ಸಹಿಸಿಕೊಳ್ಳಬೇಕು.

ನನ್ನ ಕೋಣೆಯಿಂದ ನನ್ನ ಮಿತ್ರನ ಮನೆ ಹತ್ತು ನಿಮಿಷದ ಹಾದಿ. ಗಾಳಿಸೇವನೆಯಾಯಿತೆಂದು ಸಹಜವಾಗಿ ನಡೆದು ಹೋಗಬಹುದು. ಆದರೆ ಯಂತ್ರಗಳ ಸೌಕರ್ಯ ಬಂದು ಮನುಷ್ಯನಿಗೆ ಮುಗ್ಗಲುತನ ಕಲಿಸಿದೆಯೆಂಬುದು ಸುಳ್ಳಲ್ಲ. ನಡೆಯುತ್ತ ಹೋಗಲು ಬೇಸರನಿಸಿ ಬಸ್ಸಿಗೆ ದಾರಿಕಾಯುತ್ತೇನೆ. ಅರ್ಧತಾಸಿನ ಮೇಲೆ ಒಂದು ಬಸ್ಸು ಬರುತ್ತದೆ. ಮುಗಿಲೆತ್ತರದಲ್ಲಿ ಮನುಷ್ಯಸರಕುಗಳು ತುಂಬಿರುವುದರಿಂದ ಜಿಗ್ಗನೆ ಹೋಗಿ.

ಬಿಡುತ್ತದೆ. ಮತ್ತೊಂದು ಬಂದು ನಿಲ್ಲುತ್ತದೆ. ನೂರು ಜನ ನಳಿಗೆ ನೀತುಬಿದ್ದು ಸಾಗಿರುವಾಗ ನನಗೆಲ್ಲಿಯ ಸ್ಥಾನ? 'ಇನ್ನು ನಡೆಯುವುದೇ ಮೇಲು' ಎಂದು ಮುಗ್ಗುತ್ತ ಅರ್ಧ ಹಾದಿ ಸಾಗಿರುತ್ತೇನೆ, ತೆರವು ಬಿದ್ದ ಬಸ್ಸು ಮುಂದೆ ಸಾಗುತ್ತದೆ. ನಿಲ್ಲಿಸಬೇಕೆಂದರೆ ಸಮೀಪದಲ್ಲಿ ನಿಲ್ದಾಣವಿರುವುದಿಲ್ಲ. ಕೆಲವೆಡೆಗಳಲ್ಲಿ ನೀರಿನ ನಳಗಳ ಹಣೆಬರೆಹವೂ ಇಷ್ಟೆ. ನಾಲ್ಕನೆಯ ಐದನೆಯ ಮಾಳಿಗೆಯ ಮೇಲಿರುವವರು ಯಾವಾಗಲೂ ನೀರಿಗೆ ಸಹ 'ಕ್ಯೂ'ಹಚ್ಚಬೇಕಾಗುತ್ತದೆ. ಜಳಕಕ್ಕೆ ಕ್ಯೂ ಹಚ್ಚಿ, ಅಂತೂ ಒಮ್ಮೆ ನಮ್ಮ ಪಾಳಿ ಬಂತೆಂದು ಹಿಗ್ಗುತ್ತೇನೆ. ಮೈಗೆ ಸಾಬಾಣ ಬಳಿದುಕೊಂಡು ನೊರೆಯಲ್ಲಿ ಮಿಂದು ಬಿಳಿಯ ಮುಂಗರಾಯನಂತೆ ನಿಂತುನಿಂತಿರುವಾಗಲೆ ನಳ ಸೇದಿಹೋಗಿ ನೀರು ಬಂದಾಗುತ್ತವೆ. ಸಾಬಾಣದ ನೊರೆಯಲ್ಲಿ ಕುಣ್ಣುರಿಯಲಿ, ಪೆಚ್ಚು ಮುಖ ಜನರ ಕಣ್ಣಿಗೆ ಬೀಳಲಿಲ್ಲವೆಂಬುದಿಷ್ಟೆ ಸಮಾಧಾನ.

ಬುಕಿಂಗ್ ಆಫೀಸಿನ 'ಕ್ಯೂ'ದ ಪ್ರದರ್ಶನ ನೋಡುವಂತಿರುತ್ತದೆ. ನಸುಕಿನಲ್ಲಿ ಬುಕಿಂಗ್ ಕಛೇರಿ ತೆರೆಯುತ್ತದೆ. ರಾತ್ರಿಯೆ 'ಕ್ಯೂ'ದ ಮಲ್ಲರು ಕಂಬಿ ಊರಿ ಹಾಸಿಗೆ ಹಾಕಿಬಿಡುತ್ತಾರೆ. ಕಿಟಿಕಿ ತೆರೆಯಲು ಇನ್ನೂ ಮೂರು ತಾಸು ಇರುತ್ತದೆ. ಮೂರು ಮೈಲು 'ಕ್ಯೂ' ಹತ್ತಿರುತ್ತದೆ. ಒಂದೂರಿನ ಟಿಕೀಟು ಸಿಗುವ ತನಕ ಅದೊಂದು ಮಹಾಯುದ್ಧವೇ ಆಗಿ ಹೋಗುತ್ತದೆ. ಮೈ ನುಗ್ಗುನುಗ್ಗಾಗುತ್ತದೆ. ಒಬ್ಬರನು ಹಿಂದೆ ಹಾಕಲೇನಾದರೂ ಯತ್ನಿಸಿದರೊ ಹಲ್ಲು ಮುರಿಯುತ್ತವೆ ದವಡೆ ಬಾಯುತ್ತದೆ. ಎಷ್ಟೋ ಜನ ತಾವು ಸ್ವಂತ ಕ್ಯೂ ಹಚ್ಚುವುದಕ್ಕಿಂತ ತಮ್ಮ ಹೆಂಡಿರನ್ನು ನಿಲ್ಲಿಸುವುದೇ ಮಿಗಿಲೆಂದುಕೊಳ್ಳುತ್ತಾರೆ. ಹೆಂಗಳೆಯರ ಸ್ಥಳಕ್ಕೆ ಕ್ಯೂ ಸಣ್ಣದಿರುತ್ತದೆಂಬುದೆ ಸಮಾಧಾನ. ಆದರೆ ಹೆಂಡಿರಿಲ್ಲದವರ ಗತಿ ದೇವರೆ ಬಲ್ಲ. ಎಷ್ಟೊ ಸಲ ಆಚೆಯಿಂದ ಹೆಣ್ಣು ಈಚೆಯಿಂದ ಗಂಡು ಬಂದು ಕಿಟಿಕಿಯೆದುರು ನಿಲ್ಲುತ್ತವೆ. ಟಿಕೀಟಿಗಾಗಿ ಇಬ್ಬರೂ ಕೈ ಹಾಕುತ್ತಾರೆ. ಮಾಸ್ತರರು ಟಿಕೀಟು ಹುಡುಕಿ, ಚಿಲ್ಲರೆ ಎಣಿಸಿಕೊಡುವ ಹೊತ್ತಿಗೆ ಇವರಿಬ್ಬರ ಪಾಣಿಗ್ರಹಣವಾಗಿ ಹೋಗಿರುತ್ತದೆ. ಇಬ್ಬರೂ ಟಿಕೀಟು ಹೊರಳಿ ಕೊಟ್ಟು 'ಜುಹು'ದ ಕಡೆಗೆ ಹೋದರೂ ಹೋದರೆ! ಸಮುದ್ರದಲ್ಲಿ ಏನು ಮಾಡಿದರೂ ಮುಚ್ಚಿ ಹೋಗುತ್ತದಲ್ಲವೆ? ಮುಂಬಯಿ ಇಂತಹ ಒಂದು ಮಹಾಸಮುದ್ರ. ಆ ಸಮುದ್ರದ ಮೇಲೆ ತೆರೆಗಳು, ಅದರ ತೀರದಲ್ಲಿರುವ ಮಹಾಜನಸಮುದ್ರದಲ್ಲಿ ಶೃಂಗಾರ ಲಹರಿಗಳು!

ಒಮ್ಮೆ ಒಂದು ಮುದುಕಿ ದಾದರ ಸ್ಟೇಶನ್ ಮೇಲೆಯೆ ನುನೆ ಮಾಡಿಕೊಂಡಿತ್ತು. ಪುಣೆಯಲ್ಲಿ ಅನಳಿಗೆ ಮೊಮ್ಮಗ ಹುಟ್ಟಿದ್ದನಂತೆ. ಮೊಮ್ಮಗನನ್ನೂ ಕಾಣಬೇಕೆಂದು ಪುಣೆಯ ಟಿಕೀಟಿಗಾಗಿ ಕ್ಯೂ ಹಚ್ಚುತ್ತಂತೆ. ನಿತ್ಯ ಈ ಮುದುಕಿಯ ಪಾಳಿ ಬರುವ ಹೊತ್ತಿಗೇ ಟಿಕೀಟು ತೀರಿಹೋಗಿಬಿಡುತ್ತಿದ್ದುವು. ಅಂತೂ ತನ್ನ ಮುಕ್ತಿಯ ಕಾಲ ಎಂದೋ ಎಂದು ದೇವರನ್ನು ಧ್ಯಾನಿಸುತ್ತಿತ್ತು. ಮೊನ್ನೆ ಮೊನ್ನೆ ಆ ಮುದುಕಿ ಅಲ್ಲಿ ಕಾಣದಂತಾಗಿದೆ ಅವಳಿಗೆ 'ಕ್ಯೂ' ಹತ್ತಿತೆನ್ನುವುದಕ್ಕಿಂತ ಪುಣೆಯ ಅವಳ ಮೊಮ್ಮಗನೇ ಈಚೆಗೆ ಬಂದಿರಬೇಕೆನಿಸುತ್ತದೆ.... ಬೆಳೆದು ದೊಡ್ಡವನಾಗಿ.

ಈ ಕ್ಯೂದ ಅವತಾರ ಯುದ್ಧ ಕಾಲದಲ್ಲಿಯೆ ಆಯಿತೆಂದು ಹೇಳಬೇಕು. ನಾನೇನೊ 'ಕ್ಯೂ ಫಾರ್‌ಕ್ವಿಟ್' ಎಂದು ಕೇಳಿದ್ದೆ. ನಮ್ಮೂರಿನಲ್ಲಿದ್ದಾಗ ಈ ಕ್ಯೂದ ಅಭ್ಯಾಸ ನನಗೆ ವಿಶೇಷವಾಗಿದ್ದಿಲ್ಲ. ಮುಂಬಯಿಗೆ ಬಂದ ಮೇಲೆ ಮುಂಜಾವಿನಿಂದ ಸಂಜೆಯ ವರೆಗೆ ನಡೆಯುವ ಎಲ್ಲ ಮಾನವ ಚಟುವಟಿಕೆಗಳಿಗೂ ಕ್ಯೂ ಹಚ್ಚಬೇಕೆಂದು ತಿಳಿದು ಬಂದಾಗ, ಹೀಗೆ ಕ್ಯೂ ಹಚ್ಚಿ ನಿಲ್ಲುವುದಕ್ಕಿಂತ 'ಕ್ಯೂ' ಎಂದು ಗರ್ಜಿಸಿದ ಕಾಂಗ್ರೆಸ್ ಮಂತ್ರವನ್ನು ನೆನೆದು, ಆಸ್ಥಳ ಕ್ವಿಟ್ ಮಾಡುವುದೇ ಯೋಗ್ಯವೆನಿಸಿತು.

**ಈ ಕ್ಯೂದ ಸ್ವರೂಪ ಹೇಗೊ, ಇದರ ವ್ಯುತ್ಪತ್ತಿ ಏನೊ ನನಗೆ ಸರಿಯಾಗಿ ತಿಳಿಯದು.** ಸರಕಾರದ ನೀದಾ ಅಂಗಡಿಗಳಲ್ಲಿ ಮೊದಲು ಕ್ಯೂದ ಪದ್ಧತಿ ಉದಯವಾಯಿತೆಂದು ತೋರುತ್ತದೆ. * **ಕ್ಯೂವ ಆಕಾರವಾಗಿ ಒಂದು ಸಾಲಿಗೆ ನಿಂತು ಪಾಳಿ ಹಚ್ಚುವದು. ಇನ್ನೊಂದು ಸಾಲಿಗೆ ಬರುವನಕ ಕ್ಯೂದ ಆಕಾರವಾಗುತ್ತಿರಬೇಕು.** ಇದೇನೆ ಇರಲಿ, ಈ ಕ್ಯೂ ರಾಕ್ಷಸಬಂದು ಮನುಷ್ಯನ ತಾಳ್ಮೆಯನ್ನು ಹದಗೆಡಿಸಿ, ಮನುಷ್ಯನನ್ನೂ ಯಂತ್ರಕ್ಕಿಂತ ಯಂತ್ರವಾಗಿ ಮಾಡುತ್ತಿರುವುದು ಶೋಚನೀಯ ಸಂಗತಿಯಾಗಿದೆ.

ಯುದ್ಧಕಾಲ; ವೀರರು ಸಾಯುತ್ತಿದ್ದರೂ ಜನಸಂಖ್ಯೆ ಹೇಗೆ ಹೆಚ್ಚುತ್ತಿದೆಯೊ ಬ್ರಹ್ಮನಿಗೇ ಗೊತ್ತು. ಸಮುದ್ರ ಹುಗಿದು ನೆಲಮಾಡಿ ಅದರ ಮೇಲೆ ಜಾನ ಮಟ್ಟದವರೆಗೆ ಕರುಮಾಡಿಗಳೇರಿದರೂ, ಜನಕ್ಕೆ ನಿಲ್ಲಲು ಮೂರು ಪಾದಗಳಷ್ಟು ಸ್ಥಳವಿಲ್ಲ. ಮಾನವನ ವಾಮನಾವತಾರವೇ ಬಂದಿದೆಯೇನೊ; ಅಂತೆಯೆ ಮುಂಬಯಿಯಂತಹ ಮಹಾನಗರಗಳಲ್ಲಿ ಜನಕ್ಕೆ ಇರಲು ಬೀಡಿಲ್ಲ, ಚಕ್ರವಾಕಗಳಿಗೆ ಗೂಡಿಲ್ಲ. ಕಾಲುಹಾದಿಯ ಮೇಲೆ ಜನ ವಿಶ್ವಕುಟುಂಬಿಗಳಾಗಿ ಮಲಗಿರುತ್ತಾರೆ— ಆಕಾಶವನ್ನು ಹೊದ್ದುಕೊಂಡು. ಒಂದು ಮನೆಯಿದ್ದರೆ ಹತ್ತು ದಂಪತಿಗಳು; ಒಂದೇ ಅಂತಃಪುರ. ಅಲ್ಲಿಯೂ ಕ್ಯೂ ಹಚ್ಚಿ ನಿಲ್ಲಬೇಕೆ? ಈ ಯಂತ್ರದಂಪತಿಗಳನ್ನು ದೇವರೇ ಕಾಪಾಡಬೇಕು. ಕ್ಯೂ ಹಚ್ಚಿದರೂ ಅಂತಃಪುರ ಅಸಾಧ್ಯವಾದವರು ರೈಲಿನಲ್ಲಿ, ಪ್ಲಾಟ್‌ಫಾರ್ಮುಗಳ ಮೇಲೆ, ಸಮುದ್ರ ದಂಡೆಯ ಮೇಲೆ ತಮ್ಮ ಶೃಂಗಾರದ ಕಾರ್ಯಕ್ರಮವನ್ನು ಮುಗಿಸುತ್ತಾರೆ.

ಕಾಲಿನ ಅಂಗಡಿಗಳಲ್ಲಿ ಕ್ಯೂದ ಕಾಳಿಗ ನಡೆಯುವುದು ಅಷ್ಟೇನು ಸೋಜಿಗವಲ್ಲ. ಮುಂಬಯಿಯಲ್ಲಿ ಕೂಲಿನ ಅಂಗಡಿಗಳಲ್ಲಿ ನಡೆಯುವ ಅಹಿಂಸಾ ಕಾಳಿಗ ಹೃದಯದ್ರಾವಕವಾಗಿ-

* ಕ್ಯೂ (Queue= ತಮ್ಮ ಸರತಿಯನ್ನು ಕಾಯುತ್ತ ನಿಂತ ಜನರ ಸಾಲು) ಈ ಪ್ರಕಾರ ಆ ಶಬ್ದದ ಕನ್ನಡ ಅರ್ಥ.

ರುತ್ತದೆ. ನೂರಾರು ಟೇಬಲ್ಲುಗಳಲ್ಲಿ ಹಸಿದ ದೇಹಗಳು ತುತ್ತಿನ ಚೀಲವನ್ನು ತುಂಬುತ್ತಿರುತ್ತವೆ. ಕೂಳಿನ ಅಂಗಡಿಗಳಲ್ಲಿ ರಸನೆಗೆ ಅವಕಾಶವಿಲ್ಲ. ಸೊಗಸುಗಾರಿಕೆ ಇಲ್ಲ. ತಾಟಿನಲ್ಲಿ ಬಡಿಸಿಕೊಟ್ಟಷ್ಟು ಕೂಳು; ಪೆಚ್ಚಿಗೆ ಕೇಳಿದರೆ 'ಇಲ್ಲ'ವೆಂದು ಅನ್ನದ ವ್ಯಾಪಾರಿ ತಲೆ ಅಲ್ಲಾಡಿಸುತ್ತಾನೆ. ಒಂದೊಂದು ಟೇಬಲ್ಲಿಗೆ ಇರಿವೆಯ ಸಾಲಿನಂತೆ ಕ್ಯೂದ ಸೈನಿಕರು ತುತ್ತಿನ ಕಾಳಿಗಕ್ಕೆ ಪಾಳಿ ಹಚ್ಚಿ ನಿಂತಿರುತ್ತಾರೆ. ಒಂದು ವ್ಯಕ್ತಿ ಮೊಸರು-ಅನ್ನ ಕಲಿಸುತ್ತಿರುವಾಗಲೆ ಕಂಗೆಟ್ಟ ನೋಟದಿಂದ ಅವನ ಕೊನೆಯ ತುತ್ತನ್ನೆ ಕೆಕ್ಕರಿಸಿ ನೋಡುತ್ತ ಸಮೀಪದ ಆಸನದ ಹುಳು ಪಾದಿ ಕಾಯುತ್ತಿರುತ್ತದೆ. ಆತ ಏಳುವುದೊಂದೆ ತಡ, ಮಿಂಚಿನಂತೆ ಟೇಬಲ್ಲಿಗೆ ಕೂತು ಗೆಲುವಿನ ನಿಟ್ಟುಸಿರು ಬಿಟ್ಟು ಬೆಮರು ಒರಸಿಕೊಳ್ಳುತ್ತಾನೆ. ರಾತ್ರಿ ೯ಕ್ಕೆ ನಿಮಿಷ ತಡವಾದರೆ ಕೂಳು ಬಂದು. ಕಂಗೆಟ್ಟು ಹಸಿದು ಒಂದು ಪ್ರಾಣ ದಿಕ್ಕೆಟ್ಟು ಬರುತ್ತದೆ. ಒಂಬತ್ತು ಬಡಿದು ಹೋಗಿರುತ್ತದೆ. ದೈನ್ಯದಿಂದ ಅನ್ನದ ವ್ಯಾಪಾರಿಯ ಮುಖ ನೋಡುತ್ತಾನೆ. ಆತ ತನ್ನ ಬೊಜ್ಜಿನ ಮೇಲೆ ಕೈಯಾಡಿಸುತ್ತ 'ಬಂದ್' ಎಂದು ಹೇಳುತ್ತಾನೆ. ಆ ಹಸಿದ ಹೊಟ್ಟೆಗೆ ಗುಂಡು ಬಡಿದಂತಾಗುತ್ತದೆ. 'ಛೀಳ್' ಆದರೂ ಸಿಕ್ಕರೆ ಸಾಕೆಂದು ಆ ಯಂತ್ರ ಮತ್ತೆ ತೊಗಲಿನ ಚೀಲ ತುಂಬುವುದಕ್ಕಾಗಿ ಓಡಾಡುತ್ತದೆ.

ಸಿನಿಮಾ ಗೃಹಗಳಲ್ಲಿ, ರೇಲ್ವೆ ನಿಲ್ದಾಣಗಳಲ್ಲಿ ಇರುವ ಕಾಲ್ಕಡಿಯ ಬಚ್ಚಲುಗಳಲ್ಲಿ ನೋಡಬೇಕು; ಮನುಷ್ಯ ಯಂತ್ರಗಳಲ್ಲ, ಮನುಷ್ಯ ಪಶುಗಳು ಅಸಹ್ಯ, ಬೀಭತ್ಸಗಳ ಎಗ್ಗಿಲ್ಲದೆ ಒಬ್ಬರ ಮುಂದೊಬ್ಬರು ಕ್ಯೂ ಹಚ್ಚಿಕೊಂಡು ನಿಂತಿರುತ್ತಾರೆ. ನಿಸರ್ಗ ನಿಯಮಕ್ಕೂ ಮಹಾ ಪಟ್ಟಣಗಳಲ್ಲಿ ಕ್ಯೂದ ಕಷ್ಟ! ನನ್ನ ಮಿತ್ರರೊಬ್ಬರು ಮೊನ್ನೆ ಚೇಷ್ಟೆ ಮಾಡಿದರು: ಮುಂಬೈಯ ವೇಶ್ಯಾವಾಟಿಕೆಯಲ್ಲಿ ಘನವಾದ ಕ್ಯೂ ಇರುತ್ತದೆ ಎಂದು. 'ಇರಲಿ ಅಂತಃಪುರದ ಹೊರಗೆ ತಾನೆ?' ಎಂದು ಇನ್ನೊಬ್ಬ ಮಿತ್ರರು ಕೇಳಿ ಸಮಾಧಾನ ಪಟ್ಟರು.

ಈ ಜೀವನಸಮುದ್ರದಲ್ಲಿ ಮುಳುಗಿ ಕುತ್ತುಸುರು ಬಿಡುತ್ತಿರುವಾಗ, ಏನೋ ಕ್ಷಣಕಾಲ ರಸನಿಮಿಷದ ವಿಹಾರವೆಂದು ಸಿನೆಮಾ ಮಂದಿರಕ್ಕೆ ಹೋಗಬೇಕೆಂದರೆ ಅಲ್ಲಿಯೂ ಕ್ಯೂದ ಪಿಡುಗು! ಮನರಂಜನೆಗೆಂದು ಹೋದರೆ ಅದೂ ಒಂದು ಮಹಾಪೀಡೆಯೆ ಆದರೆ, ಮನುಷ್ಯನಿಗೆ ಈ ಪಿಡುಗುಸರಂಪರೆಯಿಂದ ನಾರಾಗಲು ಹಾದಿ ಯಾವುದು? ಊಟವೊಂದು ಕಾಟ, ಬೇಟವೊಂದು ಮೂಲ, ಆಟವೊಂದು ಸಂಕಟ ಹೀಗಿದ್ದಾಗ ಮನುಷ್ಯ ಪ್ರಾಣಿ ಬದುಕುವ ಹವ್ಯಾಸವನ್ನೆ ತೊರೆಯದ ಹೊರತು ಶಾಂತಿಗೆ ಉಳಿದ ಸಾಧನವೆಲ್ಲಿ? ಕ್ಯೂ ಹಚ್ಚಿ ಹಾದಿ ಕಾಯುವುದಕ್ಕಿಂತ ಊಟ ಬಿಟ್ಟು ಉಪವಾಸವಿರಬೇಕು, ಪ್ರವಾಸ ಬಿಟ್ಟು ಮನೆಯಲ್ಲೇ ವಾಸವಾಗಿರಬೇಕು. ಮನರಂಜನೆಯು ತಿಕ್ಷೆಯನ್ನು ತಪ್ಪಿಸಿಕೊಂಡು ಎಲ್ಲಿಯೊ ಸಮುದ್ರದ ದಂಡೆಯ ಮೇಲೆ ತಂಗಾಳಿಗೆ ಮೈಯೊಡ್ಡಿಕೊಂಡು ಕೂತು ಹೃದಯದ ತಾಪವನ್ನು ಆರಿಸಿಕೊಳ್ಳಬೇಕು ಎನಿಸುತ್ತದೆ.

ಕೆಲಸ ಎಷ್ಟಿದ್ದರೂ ಮಾಡಬಹುದು, ಕಾಯಲಾಸಲ್ಲ. ತನ್ನ ಸರತಿ ಬರುವವರೆಗೂ ಮನುಷ್ಯ ತಾಳ್ಮೆಯಿಂದ ದಾರಿ ಕಾಯಬೇಕೆಂದು ತತ್ತ್ವ ಸಾರಿ ಹೇಳುತ್ತದೆ. ಒಂದು ದೃಷ್ಟಿಯಿಂದ ಇಲ್ಲಿಯ ಕ್ಯೂ ಪುರಾಣವು ಮಾನವನಿಗೊಂದು ಮಹಾ ಪಾಠಶಾಲೆ ಯಾಗಿದೆಯೆಂದು ಹೇಳಬೇಕು. ಜೀವನದಲ್ಲಿ ಎಷ್ಟೊ ನಿರಾಶೆಯ ಮೋಡಗಳು ಸುಳಿದು ಹೋಗುತ್ತವೆ. ಗುರಿಯಿಟ್ಟ ಕಾರ್ಯ ಸಫಲವಾಗುವುದಿಲ್ಲ. ನಮ್ಮ ಪ್ರತಿಸ್ಪರ್ಧಿಗಳು ಯಶಸ್ವಿಯಾಗುತ್ತಾರೆ. 'ನಿನ್ನ ಸರತಿ ಬರುವ ವರೆಗೂ ಕಾಯುತ್ತಿರು' ಎಂದು ವೇದಾಂತ ನಮಗೆ ತಿಳಿ ಹೇಳುತ್ತದೆ. ತಾಳ್ಮೆಯಿಂದ ಕಾಯಬೇಕಾದರೆ ಮನುಷ್ಯ ಇಲ್ಲಿಯ 'ಕ್ಯೂ' ಯಂತ್ರದಿಂದ ಪಾರಾಗಿ ಹೋಗಬೇಕು; ಆಗಲೆ ಅವನು ಸಿದ್ಧ ಪುರುಷನಾಗಿ ಹೊರಬೀಳುತ್ತಾನೆ.

ಆದರೆ ಇನ್ನೂ ಒಂದು ಭಯ: ತಾಳ್ಮೆಗೆಟ್ಟು ತಲೆ ಕೆಟ್ಟು ಕ್ಯೂ ಹಚ್ಚುವುದರಿಂದ ಮನುಷ್ಯ ಶಾಂತಿಯನ್ನು ಸಾಧಿಸಬಹುದೆ? ಪಾರಕಲಿತು ಸಿದ್ಧ ಪುರುಷನಾಗಬಹುದೆ? ಕ್ಯೂ ತಪಸ್ಸಿನ ಸಿದ್ಧಿಯಿಂದ ಮನುಷ್ಯ ಪಡೆಯುವುದು ಸಿದ್ಧಾರ್ಥನ ಶಾಂತಿಯನ್ನಲ್ಲ, ಹಣದ ಶಾಂತಿಯನ್ನು. ಕ್ಯೂ ಕ್ಕೆ ತಲೆಕೊಟ್ಟ ಮನುಷ್ಯ ಸತ್ತ್ವಹೀನನಾಗುತ್ತಾನೆ; ಗಾಣದೊಳಗೆ ಹಿಂಡಿ ಹಿಕಿದು ಹೋದ ಕಬ್ಬಿನ ಸೊಪ್ಪೆಯಂತಾಗುತ್ತಾನೆ.

ಕಾಲಚಕ್ರ ಇಂದಿನ ಯುಗದಲ್ಲಿ ಗಿರಣಿಯ ಗಾಲಿಯಾಗಿದೆ. ಮನುಷ್ಯ ಅದರ ಕಡ್ಡಿಯಾಗಿದ್ದಾನೆ. ಹೀಗೂ ಹೇಳಬಹುದು: ಹೆಣ್ಣು-ಗಂಡು ಎರಡು ಗಾಲಿಗಳು. ಜೀವನವೊಂದು ರಥವಲ್ಲ, ಯಂತ್ರ. ಯಂತ್ರದ ಗಾಲಿಗಳು ತಿರುಗುತ್ತವೆ, ಸರಕನ್ನು ಹೊರಡಿಸುತ್ತವೆ. ಗಂಡು-ಹೆಣ್ಣು ಎಂಬ ಎರಡು ಗಾಲಿಗಳು ಗರಗರ ತಿರುಗುತ್ತ, ಸಂತತಿಯೆಂಬ ಸರಕುಗಳನ್ನು ವ್ಯಾಪಾರದ ಜಗತ್ತಿಗೆ ಒಡ್ಡುತ್ತಿವೆ. ಇದುವೆ ಇಂದಿನ ಯಂತ್ರಯುಗ.


ನಾಲ್ವತ್ತು ವರ್ಷಗಳ ಅನುಭವದಿಂದ ಶ್ರೇಷ್ಠವೆನಿಸಿದ

**ಆಯುರ್ವೇದೀಯ ಔಷಧಗಳು.**

ವೈದ್ಯ ಲೋಂಢೆ ಇವರ ಚಳಿಜ್ವರದ ಗುಳಿಗೆ.

ಸರ್ವಪ್ರಕಾರದ ಜ್ವರಗಳಿಗೆ ಉಪಯುಕ್ತ.

ಅಮಾಂಶಗುಳಿಗೆ–ಸರ್ವಪ್ರಕಾರದ ಅಮಾಂಶದ ಮೇಲೆ ಗುಣಕಾರಿ.

ಏಜಂಟರನ್ನು ನೇಮಿಸುವುದು ಇದೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್— ವೈದ್ಯ ಪಿ. ಕೆ. ಲೋಂಢೇ ಫಾರ್ಮಸಿ,
ಪನವೇಲ–ಕುಲಾಬಾ.

ಬಿಡುತ್ತದೆ. ಮತ್ತೊಂದು ಬಂದು ನಿಲ್ಲುತ್ತದೆ. ನೂರು ಜನ ನಳಿಗೆ ನೀತುಬಿದ್ದು ಸಾಗಿರುವಾಗ ನನಗೆಲ್ಲಿಯ ಸ್ಥಾನ? 'ಇನ್ನು ನಡೆಯುವುದೇ ಮೇಲು' ಎಂದು ಮುಗ್ಗುತ್ತ ಅರ್ಧ ಹಾದಿ ಸಾಗಿರುತ್ತೇನೆ, ತೆರವು ಬಿದ್ದ ಬಸ್ಸು ಮುಂದೆ ಸಾಗುತ್ತದೆ. ನಿಲ್ಲಿಸಬೇಕೆಂದರೆ ಸಮೀಪದಲ್ಲಿ ನಿಲ್ದಾಣವಿರುವುದಿಲ್ಲ. ಕೆಲವೆಡೆಗಳಲ್ಲಿ ನೀರಿನ ನಳಗಳ ಹಣೆಬರೆಹವೂ ಇಷ್ಟೆ. ನಾಲ್ಕನೆಯ ಐದನೆಯ ಮಾಳಿಗೆಯ ಮೇಲಿರುವವರು ಯಾವಾಗಲೂ ನೀರಿಗೆ ಸಹ 'ಕ್ಯೂ'ಹಚ್ಚಿ ಬೀಕಾಗುತ್ತದೆ. ಜಳಕಕ್ಕೆ ಕ್ಯೂ ಹಚ್ಚಿ, ಅಂತೂ ಒಮ್ಮೆ ನಮ್ಮ ಪಾಳಿ ಬಂತೆಂದು ಹಿಗ್ಗುತ್ತೇನೆ. ಮೈಗೆ ಸಾಬಾಣ ಬಳಿದುಕೊಂಡು ನೊರೆಯಲ್ಲಿ ಮಿಂದು ಬಿಳಿಯ ಪುಂಗರಾಯನಂತೆ ನಿಂತುನಿಂತಿರುವಾಗಲೆ ನಳ ಸೇದಿಹೋಗಿ ನೀರು ಬಂದಾಗುತ್ತವೆ. ಸಾಬಾಣದ ನೊರೆಯಲ್ಲಿ ಕುಣ್ಣರಿಯಲಿ, ಪೆಚ್ಚು ಮುಖ ಜನರ ಕಣ್ಣಿಗೆ ಬೀಳಲಿಲ್ಲವೆಂಬುದಿಷ್ಟೆ ಸಮಾಧಾನ.

ಬುಕಿಂಗ್ ಆಫೀಸಿನ 'ಕ್ಯೂ'ದ ಪ್ರದರ್ಶನ ನೋಡುವಂತಿರುತ್ತದೆ. ನಸುಕಿನಲ್ಲಿ ಬುಕಿಂಗ್ ಕಛೇರಿ ತೆರೆಯುತ್ತದೆ. ರಾತ್ರಿಯೆ 'ಕ್ಯೂ'ದ ಮಲ್ಲರು ಕಂಬಿ ಊರಿ ಹಾಸಿಗೆ ಹಾಕಿಬಿಡುತ್ತಾರೆ. ಕಿಟಿಕಿ ತೆರೆಯಲು ಇನ್ನೂ ಮೂರು ತಾಸು ಇರುತ್ತದೆ. ಮೂರು ಮೈಲು 'ಕ್ಯೂ' ಹತ್ತಿರುತ್ತದೆ. ಒಂದೂರಿನ ಟಿಕೀಟು ಸಿಗುವ ತನಕ ಅದೊಂದು ಮಹಾಯುದ್ಧವೇ ಆಗಿ ಹೋಗುತ್ತದೆ. ಮೈ ನುಗ್ಗುನುಗ್ಗಾಗುತ್ತದೆ. ಒಬ್ಬರನು ಹಿಂದೆ ಹಾಕಲೇನಾದರೂ ಯತ್ನಿಸಿದಿರೊ ಹಲ್ಲು ಮುರಿಯುತ್ತವೆ ದವಡೆ ಬಾಯುತ್ತದೆ. ಎಷ್ಟೋ ಜನ ತಾವು ಸ್ವಂತ ಕ್ಯೂ ಹಚ್ಚುವುದಕ್ಕಿಂತ ತಮ್ಮ ಹೆಂಡಿರನ್ನು ನಿಲ್ಲಿಸುವುದೇ ಮಿಗಿಲೆಂದುಕೊಳ್ಳುತ್ತಾರೆ. ಹೆಂಗಳೆಯರ ಸ್ಥಳಕ್ಕೆ ಕ್ಯೂ ಸಣ್ಣದಿರುತ್ತದೆಂಬುದೆ ಸಮಾಧಾನ. ಆದರೆ ಹೆಂಡಿರಿಲ್ಲದವರ ಗತಿ ದೇವರೆ ಬಲ್ಲ. ಎಷ್ಟೊ ಸಲ ಆಚೆಯಿಂದ ಹಣ್ಣು ಈಚೆಯಿಂದ ಗಂಡು ಬಂದು ಕಿಟಿಕಿಯೆದುರು ನಿಲ್ಲುತ್ತವೆ. ಟಿಕೀಟಿಗಾಗಿ ಇಬ್ಬರೂ ಕೈ ಪಾಕುತ್ತಾರೆ. ಮಾಸ್ತರರು ಟಿಕೀಟು ಹುಡುಕಿ, ಚಿಲ್ಲರೆ ಎಣಿಸಿಕೊಡುವ ಹೊತ್ತಿಗೆ ಇವರಿಬ್ಬರ ಪಾಣಿಗ್ರಹಣವಾಗಿ ಹೋಗಿರುತ್ತದೆ. ಇಬ್ಬರೂ ಟಿಕೀಟು ಹೊರಳಿ ಕೊಟ್ಟು 'ಜುಹು'ದ ಕಡೆಗೆ ಹೋದರೂ ಹೋದರೆ! ಸಮುದ್ರದಲ್ಲಿ ಏನು ಮಾಡಿದರೂ ಮುಚ್ಚಿ ಹೋಗುತ್ತದಲ್ಲವೆ? ಮುಂಬಯಿ ಇಂತಹ ಒಂದು ಮಹಾಸಮುದ್ರ. ಆ ಸಮುದ್ರದ ಮೇಲೆ ತೆರೆಗಳು, ಅದರ ತೀರದಲ್ಲಿರುವ ಮಹಾಜನಸಮುದ್ರದಲ್ಲಿ ಶೃಂಗಾರ ಲಹರಿಗಳು!

ಒಮ್ಮೆ ಒಂದು ಮುದುಕಿ ದಾದರ ಸ್ಟೇಶನ್ ಮೇಲೆಯೆ ಮನೆ ಮಾಡಿಕೊಂಡಿತ್ತು. ಪುಣೆಯಲ್ಲಿ ಅವಳಿಗೆ ಮೊಮ್ಮಗ ಹುಟ್ಟಿದ್ದನಂತೆ. ಮೊಮ್ಮಗನನ್ನೂ ಕಾಣಬೇಕೆಂದು ಪುಣೆಯ ಟಿಕೀಟಿಗಾಗಿ ಕ್ಯೂ ಹಚ್ಚಿತ್ತಂತೆ. ನಿತ್ಯ ಈ ಮುದುಕಿಯ ಪಾಳಿ ಬರುವ ಹೊತ್ತಿಗೇ ಟಿಕೀಟು ತೀರಿಹೋಗಿಬಿಡುತ್ತಿದ್ದುವು. ಅಂತೂ ತನ್ನ ಮುಕ್ತಿಯ ಕಾಲ ಎಂದೋ ಎಂದು ದೇವರನ್ನು ಧ್ಯಾನಿಸುತ್ತಿತ್ತು. ಮೊನ್ನೆ ಮೊನ್ನೆ ಆ ಮುದುಕಿ ಎಲ್ಲಿ ಕಾಣದಂತಾಗಿದೆ. ಅವಳಿಗೆ 'ಕ್ಯೂ' ಹತ್ತಿತೆನ್ನುವುದಕ್ಕಿಂತ ಪುಣೆಯ ಅವಳ ಮೊಮ್ಮಗನೇ ಈಚೆಗೆ ಬಂದಿರಬೇಕೆನಿಸುತ್ತದೆ.... ಬೆಳೆದು ದೊಡ್ಡವನಾಗಿ.

ಈ ಕ್ಯೂದ ಅವತಾರ ಯುದ್ಧ ಕಾಲದಲ್ಲಿಯೆ ಆಯಿತೆಂದು ಹೇಳಬೇಕು. ನಾನೇನೊ 'ಕ್ಯೂ ಫಾರ್ ಕ್ವಿಟ್' ಎಂದು ಕೇಳಿದ್ದೆ. ನಮ್ಮೂರಿನಲ್ಲಿದ್ದಾಗ ಈ ಕ್ಯೂದ ಅಭ್ಯಾಸ ನನಗೆ ವಿಶೇಷವಾಗಿದ್ದಿಲ್ಲ. ಮುಂಬಯಿಗೆ ಬಂದ ಮೇಲೆ ಮುಂಜಾವಿನಿಂದ ಸಂಜೆಯ ವರೆಗೆ ನಡೆಯುವ ಎಲ್ಲ ಮಾನವ ಚಟುವಟಿಕೆಗಳಿಗೂ ಕ್ಯೂ ಹಚ್ಚಲೇಬೇಕೆಂದು ತಿಳಿದು ಬಂದಾಗ, ಹೀಗೆ ಕ್ಯೂ ಹಚ್ಚಿ ನಿಲ್ಲುವುದಕ್ಕಿಂತ 'ಕ್ಯೂ' ಎಂದು ಗಳಿತರ ಕಾಂಗ್ರೆಸ್ ಮಂತ್ರವನ್ನು ನೆನೆದು, ಆಸ್ಥಳ ಕ್ವಿಟ್ ಮಾಡುವುದೇ ಯೋಗ್ಯವೆನಿಸಿತು.

**ಈ ಕ್ಯೂದ ಸ್ವರೂಪ ಹೇಗೊ, ಇದರ ವ್ಯುತ್ಪತ್ತಿ ಏನೊ ನನಗೆ ಸರಿಯಾಗಿ ತಿಳಿಯದು.** ಸರಕಾರದ ನೀದಾ ಅಂಗಡಿಗಳಲ್ಲಿ ಮೊದಲು ಕ್ಯೂದ ಪದ್ಧತಿ ಉದಯವಾಯಿತೆಂದು ತೋರುತ್ತದೆ. * **ಕ್ಯೂದ ಆಕಾರವಾಗಿ ಒಂದು ಸಾಲಿಗೆ ನಿಂತು ಪಾಳಿ ಹಚ್ಚುವದು. ಇನ್ನೊಂದು ಸಾಲಿಗೆ ಬರುವನಕ ಕ್ಯೂದ ಆಕಾರವಾಗುತ್ತಿರಬೇಕು.** ಇದೇನೆ ಇರಲಿ, ಈ ಕ್ಯೂ ರಾಕ್ಷಸಬಂದು ಮನುಷ್ಯನ ತಾಳ್ಮೆಯನ್ನು ಹದಗೆಡಿಸಿ, ಮನುಷ್ಯನನ್ನೂ ಯಂತ್ರಕ್ಕಿಂತ ಯಂತ್ರವಾಗಿ ಮಾಡುತ್ತಿರುವುದು ಶೋಚನೀಯ ಸಂಗತಿಯಾಗಿದೆ.

ಯುದ್ಧಕಾಲ; ವೀರರು ಸಾಯುತ್ತಿದ್ದರೂ ಜನಸಂಖ್ಯೆ ಹೇಗೆ ಹೆಚ್ಚುತ್ತಿದೆಯೊ ಬ್ರಹ್ಮನಿಗೇ ಗೊತ್ತು. ಸಮುದ್ರ ಪುಗಿದು ನೆಲಮಾಡಿ ಅದರ ಮೇಲೆ ಜಾನ ಮಟ್ಟದವರೆಗೆ ಕರುಮಾಡಗಳೇರಿದರೂ, ಜನಕ್ಕೆ ನಿಲ್ಲಲು ಮೂರು ಪಾದಗಳಷ್ಟು ಸ್ಥಳವಿಲ್ಲ. ಮಾನವನ ವಾಮನಾವತಾರವೇ ಬಂದಿದೆಯೇನೊ; ಅಂತೆಯೆ ಮುಂಬಯಿಯಂತಹ ಮಹಾನಗರಗಳಲ್ಲಿ ಜನಕ್ಕೆ ಇರಲು ಬೀಡಿಲ್ಲ, ಜಕ್ರವಾಕಗಳಿಗೆ ಗೂಡಿಲ್ಲ. ಕಾಲುಪಾದಿಯ ಮೇಲೆ ಜನ ವಿಶ್ವಕುಟುಂಬಿಗಳಾಗಿ ಮಲಗುರುತ್ತಾರೆ— ಆಕಾಶವನ್ನು ಹೊದ್ದುಕೊಂಡು. ಒಂದು ಮನೆಯಿದ್ದರೆ ಹತ್ತು ದಂಪತಿಗಳು; ಒಂದೇ ಅಂತಃಪುರ. ಅಲ್ಲಿಯೂ ಕ್ಯೂ ಹಚ್ಚಿ ನಿಲ್ಲಬೇಕೆ?' ಈ ಯಂತ್ರದಂಪತಿಗಳನ್ನು ದೇವರೇ ಕಾಪಾಡಬೇಕು. ಕ್ಯೂ ಹಚ್ಚಿದರೂ ಅಂತಃಪುರ ಅಸಾಧ್ಯವಾದವರು ಲೈಲಿನಲ್ಲಿ, ಫ್ಲಾಟ್ ಫಾರ್ಮುಗಳ ಮೇಲೆ, ಸಮುದ್ರ ದಂಡೆಯ ಮೇಲೆ ತಮ್ಮ ಶೃಂಗಾರದ ಕಾರ್ಯಕ್ರಮವನ್ನು ಮುಗಿಸುತ್ತಾರೆ.

ಕಾಳಿನ ಅಂಗಡಿಗಳಲ್ಲಿ ಕ್ಯೂದ ಕಾಳಿಗ ನಡೆಯುವುದು ಅಷ್ಟೇನು ಸೋಜಿಗವಲ್ಲ. ಮುಂಬಯಿಯಲ್ಲಿ ಕೂಳಿನ ಅಂಗಡಿಗಳಲ್ಲಿ ನಡೆಯುವ ಅಹಿಂಸಾ ಕಾಳಿಗ ಹೃದಯದ್ರಾವಕವಾಗಿ.

* ಕ್ಯೂ (Queue= ತಮ್ಮ ಸರತಿಯನ್ನು ಕಾಯುತ್ತ ನಿಂತ ಜನರ ಸಾಲು) ಈ ಪ್ರಕಾರ ಆ ಶಬ್ದದ ಕನ್ನಡ ಅರ್ಥ.

ರುತ್ತದೆ. ನೂರಾರು ಟೇಬಲ್ಲುಗಳಲ್ಲಿ ಹಸಿದ ದೇಹಗಳು ತುತ್ತಿನ ಚೀಲವನ್ನು ತುಂಬುತ್ತಿರುತ್ತವೆ. ಕೂಳಿನ ಅಂಗಡಿಗಳಲ್ಲಿ ರಸನೆಗೆ ಅವಕಾಶವಿಲ್ಲ. ಸೊಗಸುಗಾರಿಕೆ ಇಲ್ಲ. ತಾಟಿನಲ್ಲಿ ಬಡಿಸಿಕೊಟ್ಟಷ್ಟು ಕೂಳು; ಹೆಚ್ಚಿಗೆ ಕೇಳಿದರೆ 'ಇಲ್ಲ' ಎಂದು ಅನ್ನದ ವ್ಯಾಪಾರಿ ತಲೆ ಅಲ್ಲಾಡಿಸುತ್ತಾನೆ. ಒಂದೊಂದು ಟೇಬಲ್ಲಿಗೆ ಇರಿಪೆಯ ಸಾಲಿನಂತೆ ಕ್ಯೂದ ಸೈನಿಕರು ತುತ್ತಿನ ಕಾಳಿಗಕ್ಕೆ ಪಾಳಿ ಹಚ್ಚಿ ನಿಂತಿರುತ್ತಾರೆ. ಒಂದು ವ್ಯಕ್ತಿ ಪೊಸರು-ಅನ್ನ ಕಲಿಸುತ್ತಿರುವಾಗಲೆ ಕಂಗೆಟ್ಟ ನೋಟದಿಂದ ಅವನ ಕೊನೆಯ ತುತ್ತನ್ನೆ ಕೆಕ್ಕರಿಸಿ ನೋಡುತ್ತ ಸಮೀಪದ ಅಶನದ ಹುಳು ಪಾದಿ ಕಾಯುತ್ತಿರುತ್ತದೆ. ಆತ ಏಳುವುದೊಂದೆ ತಡ, ಮಿಂಚಿನಂತೆ ಟೇಬಲ್ಲಿಗೆ ಕೂತು ಗೆಲುವಿನ ನಿಟ್ಟುಸಿರು ಬಿಟ್ಟು ಬೆಮರು ಒರಸಿಕೊಳ್ಳುತ್ತಾನೆ. ರಾತ್ರಿ ೯ಕ್ಕೆ ನಿಮಿಷ ತಡವಾದರೆ ಕೂಳು ಬಂದು, ಕಂಗೆಟ್ಟು ಹಸಿದು ಒಂದು ಪ್ರಾಣ ದಿಕ್ಕೆಟ್ಟು ಬರುತ್ತದೆ. ಒಂಬತ್ತು ಬಡಿದು ಹೋಗಿರುತ್ತದೆ. ದೈನ್ಯದಿಂದ ಅನ್ನದ ವ್ಯಾಪಾರಿಯ ಮುಖ ನೋಡುತ್ತಾನೆ. ಆತ ತನ್ನ ಬೊಜ್ಜಿನ ಪೀಲೆ ಕೈಯಾಡಿಸುತ್ತ 'ಬಂದ್' ಎಂದು ಹೇಳುತ್ತಾನೆ. ಆ ಹಸಿದ ಹೊಟ್ಟೆಗೆ ಗುಂಡು ಬಡಿದಂತಾಗುತ್ತದೆ. 'ಛೇಳ್' ಆದರೂ ಸಿಕ್ಕರೆ ಸಾಕೆಂದು ಆ ಯಂತ್ರ ಮತ್ತೆ ಹೊಗಲಿನ ಚೀಲ ತುಂಬುವುದಕ್ಕಾಗಿ ಓಡಾಡುತ್ತದೆ.

ಸಿನಿಮಾ ಗೃಹಗಳಲ್ಲಿ, ರೇಲ್ವೆ ನಿಲ್ದಾಣಗಳಲ್ಲಿ ಇರುವ ಕಾಲ್ಮಣಿಯ ಬಚ್ಚಲುಗಳಲ್ಲಿ ನೋಡಬೇಕು; ಮನುಷ್ಯ ಯಂತ್ರಗಳಲ್ಲ, ಮನುಷ್ಯ ಪಶುಗಳು ಅಸಹ್ಯ, ಬೀಭತ್ಸಗಳ ಎಗ್ಗಿಲ್ಲದೆ ಒಬ್ಬರ ಮುಂದೊಬ್ಬರು ಕ್ಯೂ ಹಚ್ಚಿಕೊಂಡು ನಿಂತಿರುತ್ತಾರೆ. ನಿಸರ್ಗ ನಿಯಮಕ್ಕೂ ಮಹಾ ಪಟ್ಟಣಗಳಲ್ಲಿ ಕ್ಯೂದ ಕಷ್ಟ! ನನ್ನ ಮಿತ್ರ ಒಬ್ಬರು ಮೊನ್ನೆ ಜೇಷ್ಟೆ ಮಾಡಿದರು: ಮುಂಬೈಯ ವೇಶ್ಯಾ ಕಾಟಕೆಯಲ್ಲಿ ಘನವಾದ ಕ್ಯೂ ಇರುತ್ತದೆ ಎಂದು. 'ಇರಲಿ ಎಂತಹುದರದ ಹೊರಗೆ ತಾನೆ?' ಎಂದು ಇನ್ನೊಬ್ಬ ಮಿತ್ರರು ಕೀಳಿ ಸಮಾಧಾನ ಪಟ್ಟರು.

ಈ ಜೀವನಸಮುದ್ರದಲ್ಲಿ ಮುಳುಗಿ ಕುತ್ತುಸುರು ಬಿಡುತ್ತಿರುವಾಗ, ಏನೋ ಕ್ಷಣಕಾಲ ರಸನಿಮಿಷದ ವಿಹಾರವೆಂದು ಸಿನೆಮಾ ಮಂದಿರಕ್ಕೆ ಹೋಗಬೇಕೆಂದರೆ ಅಲ್ಲಿಯೂ ಕ್ಯೂದ ಪಿಡುಗು! ಮನರಂಜನೆಗೆಂದು ಹೋದರೆ ಅದೂ ಒಂದು ಮಹಾಪೀಡೆಯೆ ಆದರೆ, ಮನುಷ್ಯನಿಗೆ ಈ ಪಿಡುಗುಪರಂಪರೆಯಿಂದ ವಾರಾಗಲು ಹಾದಿ ಯಾವುದು? ಊಟವೊಂದು ಪಾಟು, ಚೀಟವೊಂದು ಮೂಲ, ಆಟವೊಂದು ಸಂಕಟ ಹೀಗಿದ್ದಾಗ ಮನುಷ್ಯ ಪ್ರಾಣಿ ಬದುಕುವ ಹವ್ಯಾಸವನ್ನೆ ತೊರೆಯದ ಹೊರತು ಶಾಂತಿಗೆ ಉಳಿದ ಸಾಧನವೆಲ್ಲಿ? ಕ್ಯೂ ಹಚ್ಚಿ ಹಾದಿ ಕಾಯುವುದಕ್ಕಿಂತ ಊಟ ಬಿಟ್ಟು ಉಪವಾಸವಿರಬೇಕು, ಪ್ರವಾಸ ಬಿಟ್ಟು ಮನೆಯಲ್ಲೇ ವಾಸವಾಗಿರಬೇಕು. ಮನರಂಜನೆಯ ಶಿಕ್ಷೆಯನ್ನು ತಪ್ಪಿಸಿಕೊಂಡು ಎಲ್ಲಿಯೊ ಸಮುದ್ರದ ದಂಡೆಯ ಮೇಲೆ ತಂಗಾಳಿಗೆ ಮೈಯೊಡ್ಡಿಕೊಂಡು ಕೂತು ಹೃದಯದ ತಾಪವನ್ನು ಆರಿಸಿಕೊಳ್ಳಬೇಕು ಎನಿಸುತ್ತದೆ.

ಕೆಲಸ ಎಷ್ಟಿದ್ದರೂ ಮಾಡಬಹುದು, ಕಾಯಬಹುದಲ್ಲ. ಕನ್ನ ಸರತಿ ಬರುವವರೆಗೂ ಮನುಷ್ಯ ತಾಳ್ಮೆಯಿಂದ ದಾರಿ ಕಾಯಬೇಕೆಂದು ತತ್ತ್ವ ಸಾರಿ ಹೇಳುತ್ತದೆ. ಒಂದು ದೃಷ್ಟಿಯಿಂದ ಇಲ್ಲಿಯ ಕ್ಯೂ ಪುರಾಣವು ಮಾನವನಿಗೊಂದು ಮಹಾ ಪಾಠಶಾಲೆ ಯಾಗಿದೆಯೆಂದು ಹೇಳಬೇಕು. ಜೀವನದಲ್ಲಿ ಎಷ್ಟೊ ನಿರಾಶೆಯ ಮೋಡಗಳು ಸುಳಿದು ಹೋಗುತ್ತವೆ. ಗುರಿಯಿಟ್ಟ ಕಾರ್ಯ ಸಫಲವಾಗುವುದಿಲ್ಲ. ನಮ್ಮ ಪ್ರತಿಸ್ಪರ್ಧಿಗಳು ಯಶಸ್ವಿಯಾಗುತ್ತಾರೆ. 'ನಿನ್ನ ಸರತಿ ಬರುವ ವರೆಗೂ ಕಾಯುತ್ತಿರು' ಎಂದು ವೇದಾಂತ ನಮಗೆ ತಿಳಿ ಹೇಳುತ್ತದೆ. ತಾಳ್ಮೆಯಿಂದ ಕಾಯಬೇಕಾದರೆ ಮನುಷ್ಯ ಇಲ್ಲಿಯ 'ಕ್ಯೂ' ಯಂತ್ರದಿಂದ ಪಾರಾಗಿ ಹೋಗಬೇಕು; ಆಗಲೆ ಅವನು ಸಿದ್ಧ ಪುರುಷನಾಗಿ ಹೊರಬೀಳುತ್ತಾನೆ.

ಆದರೆ ಇನ್ನೂ ಒಂದು ಭಯ: ತಾಳ್ಮೆಗೆಟ್ಟು ತಲೆ ಕೆಟ್ಟು ಕ್ಯೂ ಹಚ್ಚುವುದರಿಂದ ಮನುಷ್ಯ ಶಾಂತಿಯನ್ನು ಸಾಧಿಸಬಹುದೆ? ಸಾಧ ಕಲಿತು ಸಿದ್ಧ ಪುರುಷನಾಗಬಹುದೆ? ಕ್ಯೂ ತಪಸ್ಸಿನ ಸಿದ್ಧಿಯಿಂದ ಮನುಷ್ಯ ಪಡೆಯುವುದು ಸಿದ್ಧಾರ್ಥನ ಶಾಂತಿಯನ್ನಲ್ಲ, ಹಣದ ಶಾಂತಿಯನ್ನು. ಕ್ಯೂ ಕ್ಕೆ ತಲೆಕೊಟ್ಟ ಮನುಷ್ಯ ಸತ್ತ್ವಹೀನನಾಗುತ್ತಾನೆ; ಗಾಣದೊಳಗೆ ಹಿಂಡಿ ಹಿಳಿದು ಹೋದ ಕಬ್ಬಿನ ಸೊಪ್ಪೆಯಂತಾಗುತ್ತಾನೆ.

ಕಾಲಚಕ್ರ ಇಂದಿನ ಯುಗದಲ್ಲಿ ಗಿರಣಿಯ ಗಾಲಿಯಾಗಿದೆ. ಮನುಷ್ಯ ಅದರ ಕಡ್ಡಿಯಾಗಿದ್ದಾನೆ. ಹೀಗೂ ಹೇಳಬಹುದು: ಹೆಣ್ಣು-ಗಂಡು ಎರಡು ಗಾಲಿಗಳು. ಜೀವನವೊಂದು ರಥವಲ್ಲ, ಯಂತ್ರ. ಯಂತ್ರದ ಗಾಲಿಗಳು ತಿರುಗುತ್ತವೆ, ಸರಕನ್ನು ಹೊರಡಿಸುತ್ತವೆ. ಗಂಡು-ಹೆಣ್ಣು ಎಂಬ ಎರಡು ಗಾಲಿಗಳು ಗರಗರ ತಿರುಗುತ್ತ, ಸಂತತಿಯೆಂಬ ಸರಕುಗಳನ್ನು ವ್ಯಾಪಾರದ ಜಗತ್ತಿಗೆ ಒಡ್ಡುತ್ತಿವೆ. ಇದುವೆ ಇಂದಿನ ಯಂತ್ರಯುಗ.


ನಾಲ್ಕತ್ತು ವರ್ಷಗಳ ಅನುಭವದಿಂದ ಶ್ರೇಷ್ಠವೆನಿಸಿದ

**ಆಯುರ್ವೇದೀಯ ಔಷಧಗಳು.**

ವೈದ್ಯ ಲೋಂಢೆ ಇವರ ಚಳಿಜ್ವರದ ಗುಳಿಗೆ.

ಸರ್ವಪ್ರಕಾರದ ಜ್ವರಗಳಿಗೆ ಉಪಯುಕ್ತ.

ಅಮೃತಾಂಶಗುಳಿಗೆ—ಸರ್ವಪ್ರಕಾರದ ಅಮೃತಾಂಶದ ಮೇಲೆ ಗುಣಕಾರಿ.

ವಿಜಂಟರನ್ನು ನೇಮಿಸುವುದು ಇದೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್— ವೈದ್ಯ ಪಿ. ಕೆ. ಲೋಂಢೇ ಫಾರ್ಮಸಿ,
ಪನವೇಲ—ಕುಲಾಬಾ.

# ಪ್ರಗತಿ

( ಮನೋವಿಶ್ಲೇಷಣಾತ್ಮಕ ಪ್ರಬಂಧ )

ಪೂರ್ವಾರ್ಧ

ಶ್ರೀ. ಮಾಡಿಗೇರ ಅಪ್ಪಣ್ಣರಾಯರು, ಬಿ.ಎ,ಬಿ.ಟಿ. ಪುಣೆ.

★

**ಪ್ರಗತಿಯೆಂಬುದು ಪರಂಪರೆಯ ಅಂಧಾನುಕರಣದಲ್ಲಿ ಇಲ್ಲ; ಅದರಂತೆಯೆ 'ಹೊಸದೆಲ್ಲ ಪಸನಾದುದು' ಎಂಬ ಹುಚ್ಚುಭಾವನೆಯಲ್ಲಿಯೂ ಇಲ್ಲ. ಸ್ವತಂತ್ರ ವಿಚಾರದಿಂದ ನಡೆಯಿಸುವ ಪ್ರಯೋಗ-ಸಂಶೋಧನಗಳಿಂದ ಪ್ರಗತಿಯು ನೆಲೆ ಗೊತ್ತಾಗುವುದು!**

★

ಪೊದಲಿದ್ದ ಸ್ಥಿತಿಯಲ್ಲಿ ಬದಲಾಗುವುದು ಒಂದು ತರದ ಗತಿಯೇ ಸರಿ! ಈ ಜಗತ್ತಿನಲ್ಲಿ ಯಾವ ವಸ್ತುವೂ ಸ್ಥಿರವಾಗಿಲ್ಲವೆಂದೇ ಹೇಳಬೇಕು. ಎಲ್ಲೆಡೆಯಲ್ಲಿಯೂ ರೂಪಾಂತರವಾಗುತ್ತಿರುವುದನ್ನು ನಾವು ನಿತ್ಯ ನೋಡುತ್ತೇವೆ. ಯುಗ-ಯುಗಗಳಲ್ಲಿ, ಶತಮಾನ-ಶತಮಾನಗಳಲ್ಲಿ, ವರುಷ-ವರುಷಗಳಲ್ಲಿ, ದಿನ-ದಿನಗಳಲ್ಲಿ, ಕ್ಷಣ-ಕ್ಷಣದಲ್ಲಿ ಆಗುವ ಹೆಚ್ಚು-ಕಡಿಮೆಯನ್ನು ನಾವು ಕಾಣುತ್ತೇವೆ. ಆಡವಿಯು ಮರುಭೂಮಿಯಾಗುವುದು; ಮರುಭೂಮಿ ಅನುಪಮೇಯವೂ ಅಸಾಧಾರಣವೂ ಆದ ಪುಷ್ಪೋದ್ಯಾನವಾಗಬಹುದು. ಈ ಲೇಖನವನ್ನು ಓದುವ ನೀವು ಒಂದು ಬದಲಾವಣೆಯ ಕ್ರಮದಲ್ಲಿಯೆ ಇರುವಿರಿ. ಓದುವ ಮುನ್ನ, ಓದಿದ ಅನುತರ ನಿಮ್ಮಲ್ಲಾಗುವ ಬದಲಾವಣೆಯನ್ನು ಸೂಕ್ಷ್ಮವಾಗಿ ಗ್ರಹಿಸಿರಿ; ಏನಾದರೂ ವ್ಯತ್ಯಾಸ ಕಂಡುಬಂದುದಾದರೆ, ಅದೂ ಒಂದು ತರದ ಗತಿಯೆ ಸರಿ! ಈ ಗತಿಯು ಜಲನವಲನವು ನಮಗೆ— ನಮ್ಮ ನಮಾಜಕ್ಕೆ— ಒಂದು ನವಸ್ವರೂಪ, ನವಾಕಾರ ನವಪಕಟ್ಟಡ, ನವಜೀವನ, ನವತೇಜಸ್ಸು, ನವಚೈತನ್ಯ, ನವಭಾವನೆ, ನವವಿಚಾರ, ನವಜಲನವಲನ ಮತ್ತು ಕೊನೆಯದಾಗಿ ನವನವಾರ್ಗಗಳನ್ನು ತೋರಿ, ಒಂದು ಉದಾತ್ತಧ್ಯೇಯದ ಕಡೆಗೆ ಎಳೆದೊಯ್ದು, ರಾಜಮಾರ್ಗದಲ್ಲಿ ಮುನ್ನಡೆಯಲು ಅನುವು ಮಾಡಿಕೊಡುವುದಾಗಬೇಕು.

ಒಂದು ವ್ಯಕ್ತಿಯನ್ನು ನೋಡಿದಾಕ್ಷಣವೇ ನಮಗೆ ಅನೇಕ ತರದ ಅನುಭವಗಳಾಗುವುದುಂಟು; ಪೂರ್ವಸಂಸ್ಕೃತಿ, ಪೂರ್ವಸಂಸ್ಕಾರ, ಪೂರ್ವಾಚಾರ, ಪೂರ್ವಜರ ಕೃತಿ, ಪೂರ್ವಜರ ಧರ್ಮ, ಪೂರ್ವಜರ ಸಾಹಿತ್ಯ, ಪೂರ್ವಜರ ಕಲೆ, ಪೂರ್ವಜರ ಅನುಭವ ಮತ್ತು ಅವುಗಳ ಪರಿಣಾಮಗಳಿಂದಾಗಿ ಬೊಕೆತ ಫಲಗಳನ್ನೆಲ್ಲ— ಎಷ್ಟೇ ಒಳಿತಾಗಿದ್ದರೂ— ತೆಗಳಿ, ತಿರಸ್ಕರಿಸುವುದು ಈಗಿನವರಲ್ಲಿ ಒಂದು ಪರಿವಾಠವೆ? ಆಗಿಬಿಟ್ಟಿದೆ; ಆದರೆ ನಾನಿಲ್ಲಿ ಅಂತಹುದಾವುದಕ್ಕೂ ಕೈಹಾಕದೆ, ನಿತ್ಯದ ಬಾಳಿನಲ್ಲಿ ಅಡಿಗಡಿಗೆ ತೋರಿಬರುವ ಎರಡು ಪಂಥಗಳನ್ನು ನಿಮ್ಮ ಮುಂದಿಡುವೆ. ಒಂದನೆಯದಾಗಿ: 'ಭೂತಕಾಲದ್ದೆಲ್ಲವೂ ಭಂಗಾರ; ವರ್ತಮಾನಕಾಲದ ಬೆಲೆ ಓದಿಬಿಟ್ಟ ವರ್ತಮಾನ-ಪತ್ರದಷ್ಟು!' 'ಹಳೆಯದೆಲ್ಲ ರಸ; ಹೊಸದೆಲ್ಲ ಕಸ!' 'ನಮ್ಮ ಹಳೆಯ ವೀರರಂತಹ ವೀರರಿಲ್ಲ; ಕವಿಗಳಂತಹ ಕವಿಗಳಿಲ್ಲ; ಸೂತುಗಾರರಂತಹ ಮಾತುಗಾರರಿಲ್ಲ; ರಸಿಕರಂತಹ ರಸಿಕರಿಲ್ಲ; ನಟರಂತಹ ನಟರಿಲ್ಲ; ಶಿಲ್ಪಿಗಳಂತಹ ಶಿಲ್ಪಿಗಳಿಲ್ಲ' ಎಂದು ಅಭಿಪ್ರಾಯಪಡುವವರ ಪಂಥ. ಎರಡನೆಯದಾಗಿ 'ಹಳೆಯದೆಲ್ಲ ಕೊಳಚೆ; ಎಳೆಯದೆಲ್ಲ ಬಿಳಿಸಿ' ಎಂದೆನ್ನುವವರ ಪಂಥ. ಹಳೆಯದರಲ್ಲಿ ಬರಿಯೆ ಹಳತನವನ್ನೇ ನೋಡಿ ಹಿಗ್ಗುವುದು ಅಪರಾಧವೆನಿಸಿದರೆ, ಹೊಸದರಲ್ಲಿಯು ಬರಿಯ ಹೊಸ ಹೊಳಪನ್ನು ಕಂಡು ಹೆಮ್ಮೆಪಡುವುದೂ ಅಪರಾಧವೆನಿಸದೆ ಇರಲಾರದು; ಹಿಗ್ಗು-ಕುಗ್ಗುಗಳು ಬರಿಯ ಹಳೆ ಹೊಸತುಗಳಲ್ಲಿ ಹುದುಗಿಲ್ಲ. ನಾನಾದರೊ ಇವೆರಡು ಪಂಗಡಗಳಲ್ಲಿ ಯಾವ ಪಂಥಕ್ಕೂ ತಲೆವಾಗದೆ ವಿಷಯವನ್ನು ಚರ್ಚಿಸುವೆ. ನಾನು ಹೇಳುವುದಾದರೆ, ಅಂಧವಾದ ಅನುಸರಣೆ ಆತ್ಮಹತ್ಯೆ! ವಿಚಾರವೇ ವೀರ!! ನಮ್ಮ ಪೂರ್ವಜರ ನೀತಿ-ನಂಬಿಕೆಗಳಲ್ಲಿ— ಧರ್ಮ, ಧೋರಣೆ, ಆಚಾರ-ವಿಚಾರಗಳಲ್ಲಿ ಒಳನುಗ್ಗಿ ಅವುಗಳ ಯಥಾರ್ಥಜ್ಞಾನ ಪಡೆಯುವ ಅಧಿಕಾರ ನಮಗಿದೆ; ಸದ್ಯಕ್ಕೆ ನಮ್ಮನ್ನು ಅಡ್ಡದಾರಿಗೆ ಒಯ್ದು ಹಚ್ಚಬಹುದಾದ ಕೋಣ-ಎತ್ತುಗಳ ಮೂಗುದಾರಗಳಿಗೆ ಹಚ್ಚಿದ 'ಹೂಡು-ಹಗ್ಗ'ಗಳು ನಮ್ಮ ಕೈಯಲ್ಲಿವೆ. ನಮಗೆ ಸರಿಕಂಡಂತೆ ಜಗ್ಗಿ ದಾರಿಗೆತರುವ ಅಧಿಕಾರ ನಮ್ಮದು! ನಮ್ಮ ಜೀವನರಥಕ್ಕೆ ಸರಿಯಾಗಿ ಶಿಕ್ಷಣದೊರೆತ— ನಮ್ಮ ಅಂಕೆಯಲ್ಲಿ ಕೊನೆತನಕ ಉಳಿಯಬಹುದಾದ— ಒಂದು ಮನೋಭಾವನೆಯ ಅಶ್ವವನ್ನು ಹೂಡಿ, ನಾವು ಸಾರಾಸಾರ ವಿಚಾರಮಾಡುವ ಸಾರಥಿಯಾಗಿ, ಕೈಯಲ್ಲಿ ಕಡಿವಾಣ ಹಿಡಿಯೋಣ! ವಿಚಾರಸಾರಥಿಯೆಂದಮಾತ್ರಕ್ಕೆ ನಮ್ಮ ಮೂರ್ಖವು ಹಳೆಯದೆಲ್ಲವನ್ನೂ ತಿರಸ್ಕರಿಸಿ ಹೊಸದನ್ನು ಪುರಸ್ಕರಿಸುವುದಾಗಲಿ ನಿರ್ಮಿಸುವದಾಗಲಿ ಆಗಬಾರದು. ಎಲ್ಲವನ್ನೂ ನಾನೇ ಅನುಭವಿಸಿ ನೋಡುತ್ತೇನೆಂದರೆ ಶಕ್ಯವಿಲ್ಲ! ಪರಾನುಭವದಿಂದ ಹಲವು ಸಲ ನಮ್ಮ ಅನುಭವವನ್ನು ಹೆಚ್ಚಿಸಿಕೊಳ್ಳಬೇಕಾಗುವುದು. ಇದಕ್ಕೆ ಉದಾಹರಣೆಯೆಂದರೆ, ಚಾರ್ಲಿನ್ನನ ವಿಕಾಸವಾದವೆಂಬುದು ಎಲ್ಲರಿಗೂ ತಿಳಿದ ಸಂಗತಿ

ಮೊದಲು ಮಾನವನ ಮುಖವು ಏಾನದಂತಿತ್ತು; ಈಗ ಅದರಲ್ಲಿ ವ್ಯತ್ಯಾಸಹೊಂದಿ ಸುರೂಪ-ಸೌಂದರ್ಯದ ಪಥದಲ್ಲಿದೆ. ನಮ್ಮೆಲ್ಲರ ಮುಖಗಳು ಮತ್ತೆ ಮೊದಲಿನಂತೆ ಆಗಬೇಕೆಂದು ಬಯಸುವುದು ಮೂರ್ಖತನವಲ್ಲದೆ ಅಸಾಧ್ಯವೂ ಸರಿ. ಇನ್ನೊಂದು ಸಂಗತಿಯನ್ನು ಉದಾಹರಿಸುವುದಾದರೆ, ಅದುವೇ ನಮ್ಮ ಸಂಸ್ಕೃತಿ; ನಮ್ಮ ವರ್ಣಾಶ್ರಮಗಳಲ್ಲಿ ಸಮಾಜಶಾಸ್ತ್ರದ ಪ್ರಕಾರ ಅತಿಮಹತ್ವವಿದ್ದೆಂದರೆ ಗೃಹಸ್ಥಾಶ್ರಮ. ಏಕೆಂದರೆ, ಪ್ರತಿಯೊಂದು ಜೀವನವೂ ತನ್ನ ಸಂತತಿಯ ಫಲದಿಂದ ಮಾನವ-ಜೀವನದ ಝರಿಯನ್ನು ಝಲ್ಲನೆ ನೆಗೆಯಿಸುವಂತಿರಬೇಕಲ್ಲದೆ, ತಾನು ಪಡೆದ ಸಂಸ್ಕೃತಿಯನ್ನು ತನ್ನ ಮಕ್ಕಳ ಮುಖಾಂತರವಾಗಿ, ಉಳಿಸಿ ಬೆಳೆಯಿಸುವಂತಿರಬೇಕು; ಎಂದಮೇಲೆ ಹಳೆಯದನ್ನು ಹಳೆಯದೆಂದೇ ಪೀಯಾಳಿಸುವುದು ಶುದ್ಧ ಮೂರ್ಖತನವಲ್ಲದೆ ಮತ್ತೇನು? ಹಳೆಯ ರೇಶ್ಮೆಯ ಅಂಗಿ ಹೊಲಸಾಗಿದೆಯೆಂದು ಇಟ್ಟುಕೊಳ್ಳಿ: ಅದನ್ನು ಗಂಜಿಗೆ ಕೊಟ್ಟು ಸ್ವಚ್ಛವಾಡಿಸುವುದನ್ನು ಮರೆತು, ಮತ್ತೊಂದನ್ನು ಹೊಲಿಸಿಕೊಳ್ಳುತ್ತೇನೆನ್ನುವದು ಎಂಥ ಮಾತು? ಅದು 'ಜೀರ್ಣವಾಗಿದ್ದರೆ, ಹರಿದು ನಿರುಪಯೋಗಿಯಾಗಿದ್ದರೆ ಆ ಮಾತು ಬೇರೆಯೆ! ಹೊಸ ಅಂಗಿಯನ್ನು ಹೊಲಿಸುವಾಗಲಾದರೂ, ಅದು ಹಳೆಯದರಂತಿರಬೇಕೆಂದು ಹಟತೊಟ್ಟರೆ ಹೇಗೆ? ಹೊಸ ಅಂಗಿ, ಹೊಸ ಕಾಲಕ್ಕೆ ಸರಿಯಾಗಿ, ಹೊಸ ಸ್ಥಳಕ್ಕೆ ತಕ್ಕಂತೆ, ಹೊಸ ಕಾಲದ ಸ್ಥಿತಿಗತಿಗನುಗುಣವಾಗಿ ಇರಲೆಬೇಕಾಗುವದು: ಹಾಗೆಯೆ ನಮ್ಮ ಜೀವನವನ್ನು ದಿನಗಳು ಉರುಳಿದಂತೆ ಹೆಚ್ಚೆಚ್ಚು ಸುಖಕರವಾಗಿ ಮಾರ್ಪಡಿಸಿಕೊಂಬುದೆ ಪ್ರಗತಿ!!

ಈ ತರದ ಪ್ರಗತಿಯ ಪಂಥದಲ್ಲಿಯ ಪಯಣಿಗರಾಗಬೇಕಾದರೆ, ಈಗಿನ ಸಂಸ್ಕೃತಿಯಲ್ಲಿ ಅನೇಕ ತರದ ಶಕ್ತಿ-ಜ್ಞಾನಗಳ ನೆರವು ಅವಶ್ಯ. ಚರಿತ್ರೆ, ಭೂವಿವರಣೆ, ಜೀವವಿಜ್ಞಾನ, ಅರ್ಥಶಾಸ್ತ್ರ, ಮಾನಸಶಾಸ್ತ್ರ, ಸಮಾಜಶಾಸ್ತ್ರಗಳೇ ಮೊದಲಾದ ನೂರೆಂಟು ಶಾಸ್ತ್ರಗಳು ನಮಗೆ ಬೆಂಬಲವಾಗಿ, ದಿಗ್ದರ್ಶಕಗಳಾಗಿ ನಿಲ್ಲಬೇಕಾಗುವುದು. ನಮ್ಮ ಸಮಾಜದ ಮಂದಿರವು ಸಾಧ್ಯವಿರುವಷ್ಟು ಶ್ರೇಷ್ಠಶ್ರೇಣಿಯ ಪಟ್ಟಕ್ಕೇರಬೇಕಾದರೆ, ಕೆಲವು ಸಂಗತಿಗಳ ಕಡೆಗೆ ಗಮನವೀಯುವುದು ಅತ್ಯವಶ್ಯ ಅವು ಯಾವುವೆಂದರೆ:

೧. ನಮ್ಮ ಸಂಕುಚಿತ ಸಮಾಜವು ವಿಸ್ತೃತವಾಗಬೇಕು; ಜೀವನದೃಷ್ಟಿಯನ್ನು ಮರೆತು ಉದಾರಿಯಾಗಬೇಕು; ವಿವಿಧ ವಿಚಾರಗಳು, ಭಿನ್ನ ಭಿನ್ನ ಅಭಿಪ್ರಾಯಗಳು, ಆಚಾರ-ವಿಚಾರಗಳು ನಿರ್ಭಯದಿಂದ ಮುಂದೆ ಬರಲು ಅವಕಾಶ ಕಲ್ಪಿಸಿಕೊಡಬೇಕು. ಅನುಕೂಲತೆಮಾಡಿಕೊಡುವುದು ಅಗತ್ಯ. ವಿಮರ್ಶೆಯೆ ಪ್ರಗತಿಯ ಮುನ್ನುಡಿ! ಟೀಕೆಯೇ ಬೆಳಗಿನ ಜಿಕ್ಕೆ!! ಈ ಬೆಳ್ಳಿಯು ಬೆಳಕನ್ನು ಹಗಲಿನಂತೆ ಕೊಡಲು ಅಸಮರ್ಥವಾಗಿದ್ದರೂ ಕತ್ತಲೆಯನ್ನು ಸ್ವಲ್ಪಮಟ್ಟಿಗಾದರೂ ಹಿಮ್ಮೆಟ್ಟಿಸಲು ಸಮರ್ಥವಾಗುವುದು; ಅದು ಮುಂಬರುವ ಜಾಲರವಿಯ ಸಂಕೇತವಾಗಿ ಪರಿಣಮಿಸುವುದು. ಕತ್ತಲೆಯ ಕೊಳ್ಳದಿಂದ ಬೆಳಕಿನ ಬಯಲಿಗೆ ಕೊಂಡೊಯ್ಯುವ ಪ್ರಗತಿಯೇ ಸ್ಥಿತ್ಯಂತರದಲ್ಲಿಯ ಸೋಪಾನವಾಗ್ಗ! ಹುಳುಕನ್ನು ಹೊರಗೆಡಸುವುದು ಹೊಸದನ್ನು ಹುಟ್ಟಿಸುವುದೆಂದಲ್ಲ. ವಿಮರ್ಶೆಯೊಂದು ದುರ್ಬೀನು; ಅದು ಸಮಾಜಕ್ಕೆ ಹತ್ತಿದ ಹೊಲಸು ಹುಳುಗಳನ್ನು ದೊಡ್ಡವುಗಳನ್ನಾಗಿ ಮಾಡಿ ತೋರಿಸುವುದು; ಅನಂತರ ಆ ಹುಳುಗಳನ್ನು ಕೊಂದು, ಸಮಾಜದ ಜೀವನವನ್ನು ರೋಗದಿಂದ ಮುಕ್ತಮಾಡಿ, ಪೌಷ್ಟಿಕ ಆಹಾರವನ್ನು ಉಣಬಡಿಸಿ ಪುಷ್ಟಿಗೊಳಿಸುವುದು ಪ್ರತಿಯೊಬ್ಬನ ಕರ್ತವ್ಯ.

೨. ಸಮಾಜದಲ್ಲಿ ಪ್ರತಿಯೊಬ್ಬನಿಗೂ ಸಮಾನ ಅನುಕೂಲತೆಗಳಿರಬೇಕು; ಉದರ ಮುಖ್ಯಬೀಜವೆಂದರೆ ಹಣದ ಸಮತೆ.

೩. ವಿಜ್ಞಾನಿಗಳ ಶೋಧಗಳು ಮಾನವಸುಖಗಳಿಗಾಗಿಯೆ ಹುಟ್ಟಿದುವುಗಳಾದರೂ, ಅವುಗಳಿಂದಾಗುವ ಅನಾಹುತಗಳನ್ನು ನಿವಾರಿಸಬೇಕು

ನಮ್ಮ ಸಮಾಜದ ಪುನರ್ರಚನೆಗಾಗಿ ಪ್ರಯತ್ನಿಸುವುದಾದರೆ, ಈ ಸಮಾಜ-ಸಂಸ್ಕೃತಿಯ ಸಮುದ್ರಕ್ಕೆ ಕೂಡುವ ಕೆಳಗಿನ ನದಿಗಳ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು:

(ಅ) ಗೃಹ, ಮನೆತನ ಇಲ್ಲವೆ ಕುಟುಂಬ—ಲೈಂಗಿಕ ಮತ್ತು ಕೌಟುಂಬಿಕ ಜೀವನ; ಪ್ರೇಮ ಪೋಷಣೆ ಮತ್ತು ಹಸಿವು
(ಬ) ಆಟ ಇಲ್ಲವೆ ಕ್ರೀಡೆ—ಆರೋಗ್ಯ, ಸೌಂದರ್ಯ ಮತ್ತು ಸರಸ.
(ಕ) ಶಿಕ್ಷಣ— ಜ್ಞಾನಸಂವಾದನೆ.
(ಡ) ಆರ್ಥಿಕ ಜೀವನ— ಸಂಪತ್ತು.
(ಇ) ಶಾಸನ ಪದ್ಧತಿ— ನ್ಯಾಯ.
(ಫ) ಧಾರ್ಮಿಕ ಜೀವನ— ಪರಸ್ಪರ ಹಿತ.

ವ್ಯಕ್ತಿಯ ಜೀವನ ಜ್ಯೋತಿಯು ಭಿನ್ನ ಭಿನ್ನ ರುಚಿಗಳೇ ಸಮಾಜದ ಘಟಸ್ತಂಭಗಳು! ಇವೇ ಮಾನವ ಮೂರುತಿಯ ಮನಸ್ಸಿನಲ್ಲಿಯ ಮೇಲ್ತರಂಗಗಳಲ್ಲಿ ಉಜುವ ಇಚ್ಛೆಗಳು!!

### ಗೃಹ, ಮನೆತನ ಇಲ್ಲವೆ ಕುಟುಂಬ

ನಮ್ಮ ಜೀವನರಂಗದಲ್ಲಿ ಇದೊಂದು ಮುಖ್ಯ ಸಂಸ್ಥೆ. 'ಮರದ ಲಕ್ಷಣ ಮೊಳಕೆಯಲ್ಲಿಯೆ!' 'ಮೂರು ವರುಷದ ಬುದ್ಧಿ ನೂರು ವರುಷಗಳ ತನಕ' ಎಂಬ ಜಾಣ್ನುಡಿಗಳು ಎಲ್ಲರಿಗೂ ತಿಳಿದಿರಲಿಕ್ಕೆ ಸಾಕು. ಮೊದಲಿನ ಮೂರು ವರುಷಗಳಲ್ಲಿಯೆ ಕೂಸು ಕತ್ತೆಯಾಗುತ್ತದೆಯೋ ಕುದುರೆಯಾಗುತ್ತದೆಯೋ ಎಂಬುದನ್ನು ಕಂಡುಹಿಡಿಯಬಹುದು. "The child is father of the Man" ಎಂದು Wordsworth ನೂ 'Give me the first seven years of the child, you may have him the rest of his life" ಎಂದು

Smiles ನೂ ಸುಮ್ಮನೇ ಸಾರಿಲ್ಲ. ಶ್ರೀಮತಿ ಹೇನ್ರಿವುಡ್ಡಳ ಸುಪ್ರಸಿದ್ಧ ಕಾದಂಬರಿಯಾದ "ಡೇನ್ಸಬರಿ ಹೌಸ್" ಅನ್ನು ಓದಿದ ಮೇಲೆ "Be it ever so humble, there is no place like home" ಎಂಬ ಮಾತು ಓದುಗರಿಗೆ ಮನಪರಿಕೆಯಾಗದೆ ಹೋಗದು. ಈ ಸಂಸ್ಥೆಯು ಸದ್ಗುಣವೆ ಸರೋವರದ ಸೆಲೆ! ಪ್ರೇಮ, ಸ್ವಾತಂತ್ರ್ಯ, ಸಿಸ್ತು ಮೊದಲಾದ ಪ್ರತಿಯೊಂದೂ ಮನೆತನದ ತಳಹದಿಗಳಾಗಿರಬೇಕು. ಮಗು ದೊಡ್ಡದಾದಂತೆ, ಕರ್ತವ್ಯ'ದ (ಸ್ವ ಮತ್ತು ಪರ) ಕಲ್ಪನೆಯನ್ನು ಅದಕ್ಕೆ ಅರಿಕೆ ಮಾಡಿಕೊಡಬೇಕಾದುದು ಮಗುವಿನ ಏಳ್ಗೆಯನ್ನು ಇಚ್ಛಿಸುವ ತಾಯಿ-ತಂದೆಗಳ ಮೊದಲ ಕೆಲಸವು. ಇಲ್ಲಿ ಮನೆತನದ ಸುಹತಿಯನ್ನು ಸ್ವಲ್ಪದರಲ್ಲಿಯೆ ಹೇಳುವೆ:

೧. ಮಾನವಜೀವನವು ನಿರಂತರವಾಗಿ ನಡೆಯಬೇಕು. ಮಕ್ಕಳಿಲ್ಲದ ಮನೆ ದೇವರಿಲ್ಲದ ಗುಡಿಯಂತೆ; ನಕ್ಷತ್ರವಿಲ್ಲದ ನಭದಂತೆ; ನೀರಿಲ್ಲದ ನದಿಯಂತೆ ಗೃಹಸ್ಥಾಶ್ರಮವನ್ನು ಪೂರ್ತಿಯಾಗಿ ತೊಡೆದು ಹಾಕಿ ಎಲ್ಲರೂ ಬ್ರಹ್ಮಚಾರಿಗಳಾದರೆ ಮಾನವಜನಾಂಗವು ಕೆಲವರುಷಗಳಲ್ಲಿ ನಶಿಸಿ ಹೋಗುವುದು ನಿಃಸಂಶಯವು!

೨. ಕುಟುಂಬವು ಸಾಮಾಜಿಕ ವಂಶಪರಂಪರೆಯ ವಾಪನವು; ಎಷ್ಟೋ ತಲೆಗಳಿಂದ ನಡೆದು ಬೆಳೆದು ಬಂದ ಸಂಸ್ಕೃತಿಯ ಸಂಗ್ರಾಹಕವು, ಸಂವರ್ಧಕವು! ಗೃಹಸ್ಥಾಶ್ರಮದ ಮಹತಿಯು ಮನವರಿಕೆಯಾಗಬೇಕಾದರೆ, ನೀವು ಸ್ವತಃ ಸಂಸ್ಕೃತಿಯ ಸ್ವಪರೀಕ್ಷೆ ಮಾಡಿ ನೋಡಿರಿ. ಓದುಬರಿಹ ಬಾರದ ಒಕ್ಕಲು ತನದ ವ್ಯವಸಾಯಿಗಳ ಮಕ್ಕಳನೇಕರು ಇಂದು ಕಾಲೇಜುಗಳಲ್ಲಿ ಅಭ್ಯಾಸಮಾಡುತ್ತಿರುವರು. ಅವರ ಮಕ್ಕಳು ಅವರಿಗಿಂತ ಹೆಚ್ಚು ಸಂಸ್ಕೃತರಾಗುವರು ಇದರಲ್ಲಿ ಸಂದೇಹವೇ ಇಲ್ಲ. ಈಗ "ಅಷ್ಟಪುತ್ರ ಸೌಭಾಗ್ಯವತೀ ಭವ" ಎಂಬ ಆಶೀರ್ವಚನ ಹಲವು ಸುಸಂಸ್ಕೃತ ಮಹಿಳೆಯರಿಗೆ ಒಪ್ಪಿಗೆಯಿಲ್ಲ; ತಮ್ಮ ಮಕ್ಕಳಿಗೆ ಯೋಗ್ಯ ಶಿಕ್ಷಣ, ಹಿತಕರವಾದ ಆಹಾರ, ಒಪ್ಪುವ ಉಡಿಗೆ-ತೊಡಿಗೆ ಮೊದಲಾದ ಇನ್ನಿತರ ಜೀವನಸೌಕರ್ಯಗಳು ದೊರೆತು, ಅವರ ಜೀವನದ ಮಟ್ಟವು ಮೇಲ್ತರಗತಿಯದಾಗಬೇಕೆಂದು, ಸಮಾಜದ ಮೇಲ್ತರಗತಿಯಲ್ಲಿರುವವರೆಲ್ಲರೂ ತಿಳಿದಿರಬೇಕಾದ ಮಾತಾಗಿದೆ. ಮಕ್ಕಳ ಸಂಖ್ಯೆ ಹೆಚ್ಚಿದ್ದಷ್ಟು ಅವರ ಜೀವನ ತರಗತಿಯ ಮಟ್ಟ ಹೆಚ್ಚಾಗುವುದೆಂದು ಅಭಿಪ್ರಾಯಪಡುವವರು ಹಲವರಿದ್ದಾರೆ. ಅವರ ವೈಯಕ್ತಿಕ ದೃಷ್ಟಿಯಿಂದ ಇದೆನೋ ನಿಜ! ಆದರೆ ಸುಸಂಸ್ಕೃತರ ಶಿಶುಸಂಖ್ಯೆ ಕಡಿಮೆಯಾಗಿ, ಅಸಂಸ್ಕೃತ ಮನೆತನಗಳಲ್ಲಿ ಎತ್ತುಗಳ ಸಂಸ್ಖ್ಯೆ ಹೆಚ್ಚಾದಲ್ಲಿ ಎರಡನೆಯದೆ ಹೆಚ್ಚಾಗುವ ಸಂಭವವಿದೆ.

೩. ಮನೆತನವು ಸಂಘಟನೆ ಮತ್ತು ಸಹಕಾರಿ ಜೀವನ ಪದ್ಧತಿಯಲ್ಲಿ ಶಿಕ್ಷಣವನ್ನು ಕೊಡುವ ಸಂಸ್ಥೆ.

ವ್ಯಕ್ತಿ ಮತ್ತು ಸಮಾಜದ ಪ್ರಗತಿಯಾಗಬೇಕಾದರೆ, ಇಂತಹ ಆದಿಮೂಲವಾದ ಸಂಸ್ಥೆಯನ್ನು ನಾವು ಸುಧಾರಿಸಲೆ ಬೇಕು ಮನೆತನವನ್ನು ಸಾಗಿಸುವದೊಂದು ಕಲೆ ಮತ್ತು ಶಾಸ್ತ್ರ. ಮನೆಯ ಅಧಿದೇವತೆಯಾದ 'ಸ್ತ್ರೀ'ಗೆ ಈ ವಿಷಯದಲ್ಲಿ ತಕ್ಕ ಶಿಕ್ಷಣ, ಸ್ಥಾನ-ಮಾನಗಳು ದೊರೆಯುದಿದ್ದರೆ, ಉಳಿದ ಸಂಸ್ಥೆಗಳನ್ನು ಸುಧಾರಿಸುವ ಪ್ರಯತ್ನಗಳು ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದಂತಾಗುವುವು.

**ಆಟ**

ಆರೋಗ್ಯಮಂದಿರವೇ ಆರಮನೆ! ಆಟವೇ ಆನಂದ!! ಕ್ರೀಡೆಯೇ ಕ್ರಿಯೆ!! ವಿಲಾಸವೇ ವಿಹಾರ! ಪಂದ್ಯಾಟವೇ ಪ್ರಪಂಚದ ಪರಿಮಳ! ಮನೋರಂಜನೆಯೇ ಮನೋರಜನೆಯ ಮಾರ್ಗ!! ಈ ಆಟಗಳೇ ಸಂಘಟನಾಶಕ್ತಿ ಮತ್ತು ಸಹಕಾರದ ಜೀವನವನ್ನು ಸಂವರ್ಧಿಸುವುವು.

**ಶಿಕ್ಷಣ**

ನಮ್ಮ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಎಷ್ಟೆಷ್ಟೋ ಮೂಲ ದೋಷಗಳುಂಟು; ಇಲ್ಲಿ ಆ ಎಲ್ಲ ದೋಷಗಳನ್ನು ಬಣ್ಣಿಸುವುದು ಅಸದಳ. ರಶಿಯದ ರಾಜ್ಯಕ್ರಾಂತಿಯಲ್ಲಿ ಪ್ರಮುಖ ಅಂಗವನ್ನು ವಹಿಸಿದ ಶಿಕ್ಷಣಕ್ರಾಂತಿಯನ್ನು ಇಲ್ಲಿ ಉದಾಹರಿಸುವೆ. ಮಾನವಮೋಕ್ಷದ ಮೂಲ ಗುರಿಯನ್ನು ಮುಂದಿರಿಸಿಕೊಂಡು ಹೆಣಗಾಡುತ್ತಿರುವ ರಶಿಯವು, ಕಳೆದ ಇಪ್ಪತ್ತೇಳು ವರುಷಗಳಲ್ಲಿ ಒಂದು ಹೊಸ ಸಂಸ್ಕೃತಿಯನ್ನೇ ನಿರ್ಮಿಸಿದೆ. ಈ ನವ ಸಂಸ್ಕೃತಿಯ ಉದಯವೇ ನಾಜಿಗಳ ನಾಶಕ್ಕೆ ನಡುಕಟ್ಟಿ ಹಿಟ್ಲರನನ್ನು ಹಿಮ್ಮೆಟ್ಟಿಸಿತು. 'ಶಿಕ್ಷಣವೇ ಸಂಸ್ಕೃತಿಯ ಅಡಿಗಲ್ಲು' ಎಂಬ ತತ್ತ್ವವನ್ನನುಸರಿಸಿ, ೧೯೧೮ ರಲ್ಲಿ ರಶಿಯದ ಸರಕಾರವು ಒತ್ತಾಯದ ಶಿಕ್ಷಣವನ್ನು ಮೊದಲುಮಾಡಿತು. ಆದರೆ ಆರ್ಥಿಕ ಆಡಚಣೆಗಳ ಮೂಲಕ ೧೯೩೦ನೆಯ ಇಸ್ವಿಯ ವರೆಗೂ ಈ ಶಿಕ್ಷಣದ ಪ್ರಚಾರದ ಬಯಕೆಗಳನ್ನು ಒಳಗೇ ಬಿಗಿಹಿಡಿಯಬೇಕಾಯಿತು. ೧೯೩೦ ರಲ್ಲಿ ಸ್ಟಾಲಿನ್ನನು 'ಪ್ರಾಥಮಿಕ ಶಿಕ್ಷಣವು ಸುಸಂಸ್ಕೃತ ಕ್ರಾಂತಿಯ ಮೊದಲು ಮೆಟ್ಟು' ಎಂದು ಪುಕ್ಕಟೆ ಮತ್ತು ಒತ್ತಾಯವಾಗಿ ಶಿಕ್ಷಣ ಮೊದಲುಮಾಡಿದನು. ಈ ಮಹನೀಯನು ಬರಿಯ ಓದು-ಬರೆಹಗಳ ಕಡೆಗಷ್ಟೇ ಲಕ್ಷ್ಯ ಕೊಡಲಿಲ್ಲ! ಸೋವ್ಹಿಯೆಟ್ ಶಿಕ್ಷಣ ಪದ್ಧತಿಯು ಪರರಾಷ್ಟ್ರ ಪ್ರಭುತ್ವದ ವಿಚಾರಗಳನ್ನೂ ಪ್ರತಿಭಟಿಸುತ್ತದೆ. ಸ್ವದೇಶಾಭಿಮಾನವನ್ನು ಅಂಕುರಿಸುವುದು ಎಷ್ಟು ಮಹತ್ವದ್ದೋ, ಅಷ್ಟೇ. ಮತ್ತು ಅದಕ್ಕಿಂತಲೂ ಹೆಚ್ಚು ಮಹತ್ವವಾದುದು ಪರರಾಷ್ಟ್ರೀಯ ಪ್ರೇಮ, ಪರಕೀಯ ಮಾನವನ ಮರ್ಯಾದೆ—ಎಂಬುದನ್ನು ತನ್ನ ಗೌರವದ ಗುರಿಯನ್ನಾಗಿ ಇಟ್ಟುಕೊಂಡಿದೆ. ಝಾರನ ಕಾಲದಲ್ಲಿ ರಶಿಯವು ಸಂಕುಚಿತ ಸ್ವದೇಶಾಭಿಮಾನದ ಸೆರೆಮನೆ ಮಾತ್ರವಾಗಿತ್ತು. ನಾಲ್ವತ್ತುಲಕ್ಷ ಚಾರಸ ಮೈಲು ನೆಲದಲ್ಲಿ ನಾಲ್ವತ್ತು ಕೋಟಿ ಜನತೆ ನೆಲಸಿರುವ ನಮ್ಮೀ-ಭಾರತದಲ್ಲಿ, ಬರಿಯ ಹತ್ತೊಂಬತ್ತೇ ವಿಶ್ವವಿದ್ಯಾನಿಲಯಗಳವೆ.

ಮಹಾರಾಷ್ಟ್ರೀಯರಿಗೆ ದೊರೆತು ಮುಂಬರುವುದನ್ನು ಸೇರಿಸಿದರೂ ಬರಿ ಇಪ್ಪತ್ತೇ ಆಗುವುವು. ಓದುಬರೆಹ ಬಲ್ಲವರು ನೂರಕ್ಕೆ ಒಂಬತ್ತೊ ಹತ್ತೊ ಜನರು! ಆಂಗ್ಲೇಯರು ನಮ್ಮನ್ನು ಆಳತೊಡಗಿ ಎರಡುನೂರು ವರುಷ ಸಂದಿವೆ. ಎರಡು ವರುಷಕ್ಕೆ ನೂರರಲ್ಲಿ ಒಬ್ಬನಂತೆ ಓದುಬರೆಹ ಬಲ್ಲವನನ್ನಾಗಿ ಮಾಡಿದ್ದರೂ ಈಗ ಅಕ್ಷರ ಶತ್ರುಗಳು ಯಾರೂ ಉಳಿಯುತ್ತಿರಲಿಲ್ಲ.

ಶಿಕ್ಷಣಸಮಸ್ಯೆಯಲ್ಲಿ ಅಧಿಕಾರದ ಅಂಧಕಾರಕ್ಕೆ ಸ್ವಾತಂತ್ರ್ಯದ ಸಿಡಿಲು ಬಡಿಯಬೇಕು. ಸ್ವತಂತ್ರವಿಚಾರ, ಸ್ವಾವಲಂಬನ ಕೃತಿ-ರಚನೆಗಳಿಗೆ ಸಾಕಷ್ಟು ಸವಲತ್ತುಗಳು ದೊರೆಯಬೇಕು. ಹಿಂದಿನವರು ಹೀಗೆಂದಿದ್ದಾರೆ, ಆದುದರಿಂದ ಅದು ನಿಜವೇ ಇರಬೇಕೆಂದು ನಂಬದೆ, ಅದರ ಸತ್ಯಾಸತ್ಯತೆಯನ್ನು ನಿಮ್ಮ ಬುದ್ಧಿಯ ಒರೆಗಲ್ಲಿಗೆ ಉಜ್ಜಿ ಪರೀಕ್ಷಿಸಬೇಕು. ಮಹನೀಯರು ಮೂರ್ಖರಲ್ಲದಿದ್ದರೂ ಅವರ ಹೇಳಿಕೆಗಳನ್ನು ನಮಗೆ ಸರಿಯೆನಿಸಿದ ಹೊರತು ಗೃಹಿಸಬಾರದು. ಲಾರ್ಡ್ ಬೇಕನ್‌ನು ಕೋಪರ್ನಿಕಸ್‌ನ ತತ್ತ್ವವು ಸಟೆಯೆಂದು ಸಾರಿದನು. ಈ ಮಹನೀಯನು ಪೃಥ್ವಿಯ ಸುತ್ತಲೂ ಸೂರ್ಯನು ಸುತ್ತುತ್ತಾನೆಂದು ಸಾಧಿಸಿದನು. ಮಾರ್ಟಿನ್ ಲೂಥರನು, ಗ್ಯಾಲಿಲಿಯೋನು ಮೂರ್ಖನೆಂದು ಮಂಡಿಸಿದನು. ಜಾನ್-ವೆಸ್ಲೆಯು ಭೂಕಂಪಗಳು ಪೂರ್ವಜರ ಪಾಪದ ಪರಿಣಾಮಗಳೆಂದು ಪ್ರತಿಭಟಿಸಿದ್ದಾನೆ. ವಿಶೇಷಸಂಗತಿಯೆಂದರೆ, ಮಹಾಜ್ಞಾನಿ – ತತ್ತ್ವಜ್ಞಾನಿ – ಅರಿಸ್ಟಾಟಲನು ಗಂಡಸರಿಗಿಂತ ಹೆಂಗುಸರಿಗೆ ಹಲ್ಲು ಹೆಚ್ಚೆಂದು ಹೇಳಿದನು; ಇದನ್ನೇ ಸತ್ಯವೆಂದು ಎಲ್ಲರೂ ನಂಬಿ ನಡೆದರು. ಸತ್ಯಶೋಧಾಭಿಲಾಷಿಯಾದ ವೋಲ್ಟೆರನು ಅನೇಕ ಲಲನೆಯರ ಬಾಯಿದೆರೆಸಿ ದಂತಗಳನ್ನು ಎಣಿಸಿ ಒಂದು ನಿರ್ಣಯದಲ್ಲಿ ನಿಂತು, ಅದು ಅಸತ್ಯವೆಂದು ಘಂಟಾಘೋಷವಾಗಿ ಸಾರಿದನು. ಇದೇ ರೀತಿ, 'ಶಹಾಮೃಗ ತತ್ತ್ವಜ್ಞಾನ' ಎಂಬ ಒಂದು ನುಡಿಯಿದೆ: ಗಂಡಾಂತರ ಒದಗಿದಾಗ ತನ್ನ ತಲೆಯನ್ನು ಶಹಾಮೃಗವು ಉಸುಕಿನಲ್ಲಿ ಸಿಕ್ಕಿಸಿ ಹುಗಿದು ಕೊಂಬುವುದೆಂದು. ಆದರೆ ಈ ನುಡಿಯು ಎಷ್ಟರ ಮಟ್ಟಿಗೆ ದಿಟವೆಂಬುದರ ಕಲ್ಪನೆ ಬಂದುದಾದರೆ ತಥ್ಯಾಂಶ ತಾನೇ ತಿಳಿದೀತು; ಹ್ಯಾವ್‌ಲಾಕ್ ಎಲಿಸ್‌ನು ಪಕ್ಷಿತಜ್ಞರನ್ನು ವಿಚಾರಿಸಿ, ಅನೇಕ ಶಹಾಮೃಗಗಳ ನಡತೆಯನ್ನು ನಿರೀಕ್ಷಿಸಿ, ಈ ನಂಬಿಗೆಯು ಸುಳ್ಳೆಂದು ಮನಗಂಡನು. ಈ ರೀತಿ ಸಂಶಯ ಪಟ್ಟು, ನಿರೀಕ್ಷಿಸಿ, ಸಾರಾಸಾರ ವಿಚಾರ ಮಾಡಿ, ಪ್ರಯೋಗ ಮಾಡಿ ಸತ್ಯವನ್ನು ಶೋಧಿಸಬೇಕು.

ಶಿಕ್ಷಣದ ಗುರಿಯು ಪಣ್ಮುಖಿಯಾಗಿರುವುದು: ಉಪಜೀವನ, ಜ್ಞಾನ, ಸಂಸ್ಕೃತಿ, ನೀತಿ, ವ್ಯಕ್ತಿಪೂರ್ಣತೆ, ಸಮಾಜಸೇವೆಗಳೇ ಈ ಮೊಗಗಳು. ನಮ್ಮ ಶಿಕ್ಷಣಪದ್ಧತಿ ಪ್ರಗತಿಯು ಮೂರ್ಧದಲ್ಲಿ ಮುನ್ನಡೆಯ ಬೇಕಾದರೆ, ಈ ಎಲ್ಲ ಮುಖಗಳ ದೃಷ್ಟಿ ಕೇಂದ್ರೀಕೃತವಾಗಬೇಕು. ಶಿಕ್ಷಣದಿಂದ ಮನಸ್ಸು ಹೊಳಕೆಗೊಳ್ಳಲುಬೇಕು; ಚಿಕಿತ್ಸೆ ಬಗುರಬೇಕು; ತೃಪ್ತಿ ನಿಲುಕಬೇಕು; ಅಂತಃಕರಣ ಅರಳಬೇಕು.


ದಿ ವಸಂತ ಇನ್ಶುರನ್ಸ್ ಕಂಪನಿ, ಲಿಮಿಟೆಡ್

ದಿವಾನ್ ಬಹಾದ್ದೂರ್ ಹೀರಾಲಾಲ ಕಾಜಿ: ಅಗ್ರಸ್ಥರು

ಸಹಕಾರಿ ಸಂಘದ ಸಭಾಸದರಿಗೆ ಪಸ್ತ್ರೆಯಲ್ಲಿ ೭॥ ಮತ್ತು ೬॥ ಟಕ್ಕೆ ಸೂಟ ಕೊಡಲಾಗುವುದು.

೧೯೪೦ರಲ್ಲಿ ಪೂರ್ಣ ಮಾಡಲಾದ ವಿಮೆ .... ೪೫,೫೦,೦೦೦
ಈ ವರೆಗಿನ ವಿಮೆ .... .... ೧,೦೦,೦೦,೦೦೦
} ಕ್ಕೆ ಮಿಕ್ಕಿದೆ.

ನಾವೀನ್ಯ ಪೂರ್ಣ ಮತ್ತು ಲೋಕಪ್ರಿಯ ವಿಮಾ ಯೋಜನೆಗಳು.

ಪ್ರಭು ಎಂಡ್ ಸನ್ಸ್
ಚೀಫ್ ಏಜಂಟ್
೭೬ — ಅ ಸರ್ ಫಿರೋಜಶಹಾ ಮೇಥಾ ರೋಡ್,
ಕೋಟೆ, ಮುಂಬಯಿ ೧

ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ ಧಾರಾಳ ವೇತನದ ಮೇಲೂ, ಕಮಿಶನ್ನಿನ ಮೇಲೂ, ಆರ್ಗನಾಯಜರರೂ ಏಜಂಟರೂ ಬೇಕಾಗಿದ್ದಾರೆ. ಸುಶಿಕ್ಷಿತ-ಅನುಭವಿಕ ಸದ್ಗೃಹಸ್ಥರು ಮೇಲಿನ ವಿಳಾಸಕ್ಕೆ ಬರೆದುಕೊಳ್ಳುವುದು.

ಬಹುಪರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರದ ಗುಳಿಗೆಗಳು
ಬಾಟ್ಲಿಗೆ ೧–೮–೦
ಎಲ್ಲ ಜ್ವರಗಳ ಮೇಲೂ
ಮಹೌಷಧ
ವಿಳಾಸ:—
ಗಣೇಶ ರಾಮಚಂದ್ರ ಕರ್ಕ
ಮತ್ತು ಕಂಪನಿ
ಗಿರಗಾಂವ, ಮುಂಬಯಿ.

# —: ಶಿವನೇ ಗತಿ :—

( ಸಣ್ಣ ಕತೆ )

ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ ಎ.,ಬಿ ಟಿ. ಗೋಕಾಕ

★

**ಅನ್ನವೊಂದು ಇದ್ದರೆ ತನ್ನವರು ತನ್ನವರಾಗುವರು. ಬದುಕು ಸುಖ-ಸಂಕಥಾ-ವಿನೋದದಿಂದ ಸಾಗುವುದು. ಅನ್ನದ ಅಭಾವವಿರುವಾಗ ಯಾರಿಗೆ ಯಾರೋ ಪುರಂದರ ವಿಠಲಾ!**

★

ರಾಜೋಟಿಯ ಸಂಸಾರ ಅಷ್ಟು ದೊಡ್ಡದಲ್ಲದಿದ್ದರೂ ತೀರ ಚಿಕ್ಕದೇನೂ ಅಲ್ಲ. ಅದರಲ್ಲಿಯೂ ಮಲ್ಲವ್ವನಂತಹ ಚತುರೆ ಸತಿಯಾಗಿ ಬಾಳುವೆ ಸಾಗಿಸುತ್ತಿರುವಾಗ, ಅವನಿಗೆ ಸಂಸಾರದ ಭಾರವೇ ಕಂಡುಬರುತ್ತಿರಲಿಲ್ಲ ಹಿರಿಯಮಗ ಹನ್ನೊಂದು ವರುಷದವ. ನಡುವಿನ ಮಗಳು ನಡೆದಾಡುವ ಹೊತ್ತಿಗೆ ಕಿರಿಯ ಕೂಸು ಒಂಬತ್ತು ತಿಂಗಳದ್ದಾಗಿದೆ. ತನ್ನ ಸ್ವಂತ ಜಮೀನು ಸಾಗುಮಾಡಿದರೆ ಅವನಿಗೆ ಒದುವ ಧಾನ್ಯ ಆ ವರುಷಕ್ಕೇನೂ ಕಡಿಮೆಯಾಗಲಾರದು. ಮೇಲಿನ ವೆಚ್ಚಕ್ಕೆ ಮಲ್ಲವ್ವ ಎಮ್ಮೆ ಸಾಕಿ ಹಾಲಿನಿಂದ ಹಣ ಗಳಿಸುತ್ತಿದ್ದುದರಿಂದ ಸಂಸಾರ ಹಾಯಾಗಿ ಸಾಗಿದ್ದಿತು. ತನ್ನವೇ ಆದ ಎರಡು ಎತ್ತುಗಳು, ಒಂದು ಹಿಂಡುವ ಆಕಳು, ಕರು—ಇವಿಷ್ಟು ಈ ಸಂಸಾರದ ಒಡನಾಡಿಗಳು. ಈ ಸಂಭ್ರಮದ ಸಂಸಾರವನ್ನು ಸಾಗಿಸುವಾಗ, ರಾಜೋಟಿ ಯಾರ ಪರಿವೆಯನ್ನೂ ಇಡದೆ ತಾನಾಯಿತು, ತನ್ನ ಸಂಸಾರವಾಯಿತು; ಮಕ್ಕಳ ಪೋಷಣೆಯಾಯಿತು, ದನ ಕರುಗಳ ರಕ್ಷಣೆಯಾಯಿತು;—ಎನ್ನುವಂತೆ ಬಾಳು ಸಾಗಿಸುತ್ತಿದ್ದ. ಆಗಾಗ ಬಿಡುವಿನ ವೇಳೆಯಲ್ಲಿ ಹೆಂಡತಿಗೆ ಮನೆಗೆಲಸಗಳಲ್ಲಿ ನೆರವಾಗುತ್ತಲಿದ್ದ. ಇಂತಹ ಜೊಕ್ಕಟವಾದ ಸಂಸಾರವು ಒಳ್ಳೇ ಭರದಿಂದ ಸಾಗುವಾಗ ಅವರಿಗೆ ಇನ್ನೊಬ್ಬರ ಅಳುಕಾದರೂ ಎಲ್ಲಿ?

ದನದ ಕೊಟ್ಟಿಗೆಯಲ್ಲಿ ಎತ್ತುಗಳಿಗೆ ಹೊಟ್ಟನ್ನಿಡುವಾಗ, ಗೋದಲೆ(ಪಟ್ಟಿ)ಯಲ್ಲಿ ಎಮ್ಮೆಯು ಮೈ ತೊಳೆಯುವಾಗ, ಆಕಳಕರುವಿನೊಡನೆ ಚಿನ್ನಾಟವಾಡುವ ಮಕ್ಕಳೊಡನೆ ತಾನೂ ಆಟವಾಡುವಾಗ, ರಾಜೋಟಿಗೆ ಆಗುತ್ತಿರುವ ಆನಂದವೇ ಆನಂದ. ದನಗಳೆಂದರೇ ಅವನಿಗೆ ಪಂಚಪ್ರಾಣ. ಎಷ್ಟುಹೊತ್ತು ಗೋದಲೆಯಲ್ಲಿ ಕಳೆದರೂ ಅವನಿಗೆ ಸಾಕೆನಿಸದು. ತನ್ನ ಹೊಟ್ಟೆಯ ಮಕ್ಕಳಿಗಿಂತಲೂ ಅವುಗಳ ಮೇಲೆ ಅವನದು ಹೆಚ್ಚಿನ ಪ್ರೇಮ. ಅವುಗಳ ಮೂಕ ಮಾತುಗಳು ಅವನಿಗೆ ತಿಳಿಯುತ್ತಿದ್ದುವೇನೋ? ಅವುಗಳೊಡನೆ ಏನೇನೋ ಮಾತಾಡುವನು. ಒಮ್ಮೊಮ್ಮೆ ಇವನ ಮಾತುಗಳನ್ನು ಮರೆಯಲ್ಲಿ ನಿಂತು ಕೇಳಿ ಮಲ್ಲವ್ವ ನಕ್ಕು ಹೋದದ್ದೂ ಉಂಟು.

ರಾಜೋಟಿ ಒಬ್ಬನೇ ಎಂದೂ ಊಟ ಮಾಡಲಾರ. ಮಕ್ಕಳೆಲ್ಲ ಮುಂದೆ ಬೇಕು. ಮಲ್ಲವ್ವ ಎಡೆಮಾಡಿಕೊಂಡು ತಾನೂ ಜೊತೆಯಲ್ಲಿ ಕುಳಿತುಕೊಳ್ಳಬೇಕು. ಹೀಗಾದಾಗಲೆ ಅವನ ಹೊಟ್ಟೆ ತುಂಬುತಿತ್ತು. ಅವನ ಊಟ ಒಂದು ತಾಸಿನ ವರೆಗೆ ಸಾಗುತ್ತಲಿತ್ತು. ಆ ಸಮಯದಲ್ಲಿಯೆ ಅವನು ತನ್ನ ಸಂಸಾರದ ಆಗುಹೋಗುಗಳನ್ನು ಹೆಂಡತಿಯೊಡನೆ ಚರ್ಚಿಸುತ್ತಿದ್ದನು. ಆ ಚರ್ಚೆಯಲ್ಲಿ ಎಂದೂ ವಿರಸದ ಗೆರೆಮಾಡುತ್ತಿರಲಿಲ್ಲ. ಸರಸದ ಸವಿಯಾಟವೇ ಅದರ ಗುರಿಯಾಗಿರುತ್ತಿತ್ತು.

ಈ ಹೊತ್ತು ಊಟಕ್ಕೆ ಕುಳಿತಾಗ ರಾಜೋಟಿ ಮಾತಿಗಾರಂಭಿಸಿದ:

"ಬರಾ ಬರೂ ಲಕ್ಷಣ ಕಾಣತೈತಂಬೂ ಅರಿವು ಆಗೇತಿಲ್ಲೊ ನಿನಗ? ಮೂರು ನೊಡ್ಡ ಮಳೀನು ದೂರ ಹೋದವ್ಯಾಗ, ಮುಂದಿನ ಮಳೀ ಭರೋಸನೇ ಏನೂ ಅಂತೀನಿ? ಬತ್ತಿಗೀನು ಆಗದಿದ್ದರ ಸಸಿನುರ ಹ್ಯಾಂಗ ನಾಟ್ಯಾವು ಹೇಳಬಾರ್ದ?"

"ನಂಗೂ ಆದೇ ಜಂತಿ ಹತ್ತೈತಿ; ಮನಸ್ಯಾರು ಹ್ಯಾಂಗಾರೂ ಬದಕ್ಯಾರು; ದನಕರಗೋಳ ಗತಿ ಮಾತ್ರ ಪಾಡ ಆಗಾಣಿಲ್ಲ!"

"ಹೋದ ವರಸದ ಹೊಟ್ಟು ನಿನ್ನಿಗೇ ತೀರಿಹೋತು. ಇನ್ನ ಹದಿನೈದು ದಿನದಾಗ ಕಣಿಕೇನೂ ತೀರತೈತಿ. ಮುಂದಿನ ವರಸಂಗಕ್ಕ ಏನು ಮಾಡೂದು?"

"ಜ್ವಾಳಕೇ ಎಲ್ಲಿ ಅದಾವು? ಇನ್ನೊಂದು ವಾರದಾಗ ತಳಾ ಜಾಡಿಸಿ ಹೋಗತೈತಿ. ಮುಂದ ಮುಂಟಿಪ್ಪ ಮಾವನ ಕಡಿಂದ ಕಡಾ ತಂದರನು ನಡಿಯೂದು!"

"ಮುಂಟಿಪ್ಪ ಮಾವನ ಸುದ್ದೀ ಕೇಳಿದಾಂಗ ಕಾಣೂದಿಲ್ಲನೀ! ಇದ್ದ ಜ್ವಾಳಾ ಎಲ್ಲಾ ಮಾರಿ ಮೂರು ತಿಂಗಳಾತು. ಅದರ ಹಣೇಬಾರಾನೂ ಈಗ ಸುಣ್ಣಾತಿಂದ ಮುಂಗ್ಯಾನಂಗ ಆಗೇತಿ."

ಮಲ್ಲವ್ವ ದೀರ್ಘವಾದ ನಿಟ್ಟುಸಿರನ್ನೆಳೆದಳು. ರಾಜೋಟಿಯ ಮನಸ್ಸು ಯಾವ ಚಿಂತೆಯಲ್ಲಿಯೊ ಮುಳುಗಿತು. ಸರಸದ ಸಂಸಾರದಲ್ಲಿ ವಿರಸದ ಛಾಯೆ ಮೂಡಿದುದು ಇದೇ ಮೊದಲು.

"ಶಿವಾ ಇಟ್ಟಂಗ ಇರೂದು; ನನ್ಮ ಕಾಳಜಿ ಎಲ್ಲಿ ಮುಟ್ಟತೈತಿ?" ಎಂದ...ರಾಜೋಟಿ ದನಿಯನ್ನೆಳೆಯುತ್ತ.

"ಆಷ್ಟೇ ಸರ!" ನುಡಿದಳು ಮಲ್ಲವ್ವ, ನುಡಿಯಲಾರದ ದನಿಯಲ್ಲಿ. ಇಷ್ಟು ಸಂಕ್ಷೇಪವಾದ ಉತ್ತರವನ್ನು ಅವಳು ಎಂದೂ ಕೊಟ್ಟಿರಲಿಲ್ಲ.

ಆ ಪರುಷ ಮಳೆಯಾಶೆ ತಪ್ಪಿತು. ಹೊಲಗಳು ಬಿತ್ತಿಗೆಯನ್ನೇ ಕಾಣಲಿಲ್ಲ. ಎಲ್ಲೆಲ್ಲಿಯೂ ಹಾಹಾಕಾರಕ್ಕೆ ಸ್ವಾರಂಭವಾಯಿತು. ರೈತರ ಬಾಳುವೆ ಯಾತಕ್ಕೂ ಬೇಡವಾಯಿತು. ತಿನ್ನಲು ಕೂಳಿಲ್ಲ-

ದಾಯಿತು. ಕೂಲಿ-ಕುಂಬಳಕಾಯಿ ಅವರ ಜೀವನಾಧಾರವಾಯಿತು. ದನ-ಕರುಗಳಿಗೆ ಮೇವಿಲ್ಲದಾಯಿತು. ಒಂದೇ ಊರಲ್ಲಿ ಕೂಲಿ ಸಿಗುವುದಾದರೂ ಹೇಗೆ? ರೈತರು ಗುಳೇಕಟ್ಟಲಿಕ್ಕೆ ಪ್ರಾರಂಭಿಸಿದರು ಆ ಊರಲ್ಲಿದ್ದ ರೈತರಲ್ಲಿ ಅನೇಕ ಜನರು ಆಗಲೇ "ಮೊಗಲಾಯಿ" ಪ್ರಾಂತಕ್ಕೆ ಜೀವನ ಸಾಗಿಸಲು ಸಾಗಿಬಿಟ್ಟರು. ಉಳಿದವರೂ ಬಹಳ ದಿನ ಆ ಊರಲ್ಲಿ ಇರುವ ಲಕ್ಷಣ ಇರಲಿಲ್ಲ.

೨

ರಾಜೋಟಿಯ ಸಂಸಾರ, ಈ ಭೀಕರವಾದ ಬರಗಾಲದ ಶುತ್ತಿಗೆ ಈಡಾಗದಿರಲಿಲ್ಲ. ಬಂಗಾರದಂತಹ ಎರಡೂ ಎತ್ತುಗಳನ್ನು ಕೇವಲ ರೂಪಾಯಿಗೆ ನಾಲ್ಕಾಣೆಯ ಬೆಲೆಗೆ ಮಾರಿ ಕೆಲವು ದಿನ ಉಪಜೀವನ ಸಾಗಿಸಿದ. ಕೂಳು ಸಿಗದ್ದರಿಂದ ಎಮ್ಮೆಯು ಹಸಿಯಾರಿ ಹಾಲು ಹನಿಯುವುದು ಕಟ್ಟಾದ್ದರಿಂದ, ಅದನ್ನೂ ಮಾರಿ ಮತ್ತೆ ಒಂದೆರಡು ವಾರ ಜೀವನವನ್ನು ಸಾಗಿಸಿದನು. ರಾಜೋಟಿ ದುಡಿಯಬೇಕೆಂದರೆ ದುಡಿಸಿಕೊಳ್ಳುವವರು ಸಿಕ್ಕದಾದರು. ಇದ್ದ ಒಂದೆರಡು ಮುಕ್ಕುಗಳಲ್ಲಿ ಮಕ್ಕಳಿಗೆ ಅಂಬಲಿ ಕಾಯಿಸಿಕೊಟ್ಟಾಗ, ಇಬ್ಬರೂ ಅರೆಹೊಟ್ಟೆಯಲ್ಲಿರುವ ಸಂದರ್ಭಗಳು ಆಗಾಗ ಬರತೊಡಗಿದುವು. ಮಲ್ಲವ್ವ ದಿಕ್ಕೆಟ್ಟಳು. ರಾಜೋಟಿ ಮುಂದುಗಾಣದಾದ. ಮಧ್ಯಾಹ್ನದಲ್ಲಿ ಎಬ್ಬರೊಬ್ಬರು ಸಂಧಿಸಿದಾಗ ಇಬ್ಬರ ಕಣ್ಣುಗಳೂ ಹನಿಯುತ್ತಿದ್ದುವು. ಮಕ್ಕಳ ಹೊಟ್ಟೆಯ ಹಾಡು ಧುತ್ತೆಂದು ಮುಂದೆ ನಂತಾಗ, ಅವರ ಕರುಳುಗಳು ಮುರಿಗೆಯಾಗುತ್ತಿದ್ದುವು.

"ಗೋಪಿನ್ನ ಸಾಗಿಸದರ ಮತ್ತೊಂದು ವಾರ ಸಾಗಾ. ಶೆಲ್ಲ" ಮಲ್ಲವ್ವ ಕೇಳಿದಳು.

"ಯಾರಿಗೆ ಸಾಗಿಸೂದು, ಮೋದೀನಸಾಬ ಮೊನ್ನೆ ಮೂರು ರೂಪಾಯಿಗೆ ಕೇಳಿಹೋದ."

"ಕೊಟ್ಟುಬಿಟ್ಟರೆ ಮಕ್ಕಳು ಮತ್ತೆ ನಾಕದಿನ....."

"ಕಟಕರಿಗೆ ಗೋಪಿನ್ನ ಕೊಟ್ಟರ....."

ಮಲ್ಲವ್ವನ ಕಣ್ಣುಗಳಿಂದ ನೀರು ಚಿಲ್ಲನೆ ಚಿಮ್ಮಿತು. ಆ ಹೊತ್ತಿಗೆ ನಡುವಿನ ಮಗಳು "ಯವ್ವಾ ಹಸವಿ" ಎಂದು ಕೂಗಿದಳು. ಕಿರಿಯ ಕೂಸು ಹಸಿದು "ಕಿರಿಕಿರಿ" ಮಾಡತೊಡಗಿತು. ಹಿರಿಯಮಗ ಮನೆಯಲ್ಲಿ ಏನೂ ಇಲ್ಲವೆಂಬ ಸುಖವಾಡಿಕೊಂಡು, ಹೊರಗಿನ ಕಟ್ಟೆಯ ಮೇಲೆ ಕುಳಿತು ಸುತ್ತಿರುವ ದೀನವಾಣಿಯು ದಂಪತಿಗಳಿಬ್ಬರಿಗೂ ಕೇಳಿಸಿತು. ಎಬ್ಬರ ಮುಖವನ್ನೊಬ್ಬರು ನೋಡಿದರು. ಇಬ್ಬರ ಮುಖದಲ್ಲಿ ಯಾವ ಭಾವವನ್ನೂ ಮೂಡಲಿಲ್ಲ.

ರಾಜೋಟಿ ಸೋತಹೆಜ್ಜೆಯಲ್ಲಿ ಕೊಟ್ಟಿಗೆಯ ಕಡೆಗೆ ನಡೆದ. ಬರಿಯುದಾದ ಗೋದಲೆಯಲ್ಲಿ ಕಸವನ್ನು ಮೂಸುತ್ತ ನಿಂತ ಗೋಪಿಯ ಮೇಲೆ ಕೈಯಾಡಿಸಿದ. ಮುಖವನ್ನೆತ್ತಿ ತಬ್ಬಿಕೊಂಡ. "ನಮ್ಮಗತಿ ನಮಗಿರಲಿ, ನಿನ್ನಗತಿ ನೋಡಿಕೊ!" ಎಂದು ಹೇಳುವಂತೆ ಗೋಪಮ್ಮ ತಲೆ ಅಲ್ಲಾಡಿಸಿದಳು. ಕರು ಮೂಲೆಯಲ್ಲಿ, ಹೊಟ್ಟೆಯಲ್ಲಿ ಕಾಲುಮಡಚಿಕೊಂಡು ಕಣ್ಣಲ್ಲಿ ಜೀವ ಹಿಡಿದು ಮುದುಡಿಯಾಗಿ ಬಿದ್ದುಕೊಂಡಿತ್ತು. ರಾಜೋಟಿ ಓಡುತ್ತಹೋಗಿ ಅದನ್ನು ಸಂತಯಿಸಿದ. ಆ ಪ್ರಾಣಿ ಯಾವ ಭಾವವನ್ನೂ ಬೀರಲಿಲ್ಲ. ಪ್ರತಿದಿನವೂ ಹೀಗೆ ತುಸು ತುಸು ಸಾಯುತ್ತಿರುವ ಈ ತಾಯಿ-ಮಕ್ಕಳನ್ನು ನೋಡಿ ರಾಜೋಟಿ ತಡೆಯುದಾದ. ಮೋದೀನಸಾಬನೇ ದೇವರೆಂದು ನಿರ್ಧರಿಸಿದ.

"ಅಂಬಾ.....ಅಂಬಾ....." ಕರು ಕಿರುಚಿತು. ಕರುವಿನ ಮಾತಿನ ಅರ್ಥ ತಾಯಿಗೂ ತಿಳಿದಿರಬೇಕು. ಅಂತೆಯೆ ರಾಜೋಟಿ ಕಣ್ಣು ಬಿಚ್ಚುವಾಗ ಗೋಪಿ ಬಹಳ ಜಡವಾಗಿತ್ತು. ಹುಟ್ಟಿ ಬೆಳೆದ ಮನೆಯಲ್ಲಿಯೇ ಪ್ರಾಣಬಿಡಬೇಕೆಂದು ಅದರ ಆಶೆಯೇನೊ? ಮೂರು ರೂಪಾಯಿಗಳನ್ನು ಕೈಗಿಟ್ಟು ಮೋದಿನ ಸಾಬನು ತಾಯಿ-ಮಕ್ಕಳನ್ನು ಸಾಗಿಸಿಕೊಂಡು ಹೋಗುವ ದೃಶ್ಯವನ್ನು ರಾಜೋಟಿ ಸಹಿಸದಾದ. ಮಕ್ಕಳು ಅವುಗಳನ್ನು ಅಗಲಲಾರದೆ ಅಳತೊಡಗಿದುವು. ತಾಯಿ-ಮಕ್ಕಳು ತಿರುತಿರುಗಿ ಮನೆಯ ಕಡೆಗೆ ಮುಖಮಾಡಿ 'ಅಂಬಾ....ಅಂಬಾ....' ಎಂದು ಕಿರುಚುವುದನ್ನು ನೋಡಿ ಮಲ್ಲವ್ವ ಅಪ್ರತಿಭಳಾದಳು. ಹಿರಿಯ ಮಗ ಓಡಿಹೋಗಿ ಕರುವನ್ನು ಹಿಡಿಯಬೇಕೆಂದು ಓಡುತ್ತಿರುವಾಗಲೇ 'ಗೋಪಿ' ಬಹುದೂರ ಸಾಗಿದ್ದಳು.

ರಾಜೋಟಿಗೆ ತನ್ನ ಒಂದೊಂದೇ ಕರುಳು ದಿನಾಲು ಕಳಚಿ ಬೀಳುವಂತೆ ಭಾಸವಾಗತೊಡಗಿತು. ಇಂದು ಅವನ ಮನೆಯಲ್ಲಿ ಉಳಿದವರು ಕೇವಲ ಅವನ ಸಂಸಾರದ ಮಾನವಪ್ರಾಣಿಗಳು. ಅರ್ಧ ಸಂಸಾರ ಕಡಲಲ್ಲಿ ಮುಳುಗಿದ ಭಾಸವಾಯಿತವನಿಗೆ. ಕೊಟ್ಟಿಗೆಗೆ ಹೋಗುವುದು, ಶೂನ್ಯದೃಷ್ಟಿಯಲ್ಲಿ ನೋಡುವುದು. "ಗೋಪೀ" ಎಂದು ಕೂಗುವುದು. ಅವನ ದಿನದ ಮಾತಾದುವು. ಒಂದು ದಿವಸವಂತೂ ಅವನು ತನ್ನ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ಗಳಗಳನೆ ಅತ್ತುಬಿಟ್ಟ. ಮಲ್ಲವ್ವ ಹೌಹಾರಿ ಓಡಿಬಂದಳು. ಮಕ್ಕಳೆಲ್ಲ ಗಾಬರಿಯಾಗಿ ತಾವೂ ಅಳತೊಡಗಿದುವು. ಮಲ್ಲವ್ವ ರಾಜೋಟಿಯ ಮುಖವನ್ನು ತನ್ನತ್ತ ತಿರುಗಿಸಿಕೊಂಡು ಕಣ್ಣೀರು ತುಂಬಿ ಗದ್ಗದಕಂಠದಿಂದ ಹೇಳಿದಳು.

"ಮಕ್ಕಳೆಲ್ಲಾ ನಡಗತಾ ನಿಂತಾವ. ನಾವೇ ಹೀಂಗ ಎದೀ ಒಡಕೊಂಡರ ಅವುಗಳ ಗತಿ?" ಇಷ್ಟು ನುಡಿಯಬೇಕಾದರೆ ಅವಳಿಗೆ ಸಾಕುಬೇಕಾಯಿತು.

"ನಮ್ಮ ಜಾಳು ಹೀಂಗಾಗಬೇಕಕ. ನಸ್ನ ಗೋಪಿನ್ನ ಕಟಕರಿಗೆ ಕೊಟ್ಟು...."

"ವ್ಯಾಕ್ಯಾ ಒಂದಾಂಗೆ ಆಗೂದಕ ಅಲ್ಲಕ? ಸುಮ್ಮಾಕ ಇಲ್ಲದ್ದನ್ನ ಇಚ್ಚಿಕೊಂಡರ ಯಾರ ಜೀವಕ್ಕ ಸುಕ?"

"ನಮ್ಮ ಸುಕ ಸುಟ್ಟುಕರಕ ಆದ ಮ್ಯಾಲ ಮುತ್ತಿಲ್ಲಿ ಸುಖ? ಇನ್ನು ಸಾಯೂದಕ ಸುಕ."

"ಮಕ್ಕಳು?"

ರಾಜೋಟಿಗೆ ಈ ಪ್ರಶ್ನೆಯಿಂದ ವಿಲಕ್ಷಣ ಸಂಕಟವಾಯಿತು. ಈ ಪ್ರಶ್ನೆಯನ್ನು ಬಿಡಿಸಲು ಅವನಿಗೆ ಸಾಧ್ಯವಿಲ್ಲವೆಂಬುದು ಗೊತ್ತಿತ್ತು. ಗೊಗ್ಗರದನಿಯಲ್ಲಿ ಹೇಳಿದ.

"ನಮ್ಮ ಮುಂದ ಹಸದು ಹಸದು ಮಕ್ಕಳು ಸಾಯೂದನ್ನ ನೋಡಿ, ಅವರನ್ನ ಗೋರಿ ಏರಿಸಿ, ಅಮ್ಯಾಲ ನಾವು ಗೋರಿ ಕಟ್ಟಿಕೊಳ್ಳಬೇಕಲ್ಲಽ!"

ಮಲ್ಲವ್ವ ನಡುಗಿದಳು. ನಡುಕತುಂಬಿದ ಸ್ವರದಲ್ಲಿ ಮಾತು ಮುಂದುವರಿಸಿದಳು. "ಬೆಳದ ನಾಡಿಗೆ ಹೋಗಿ ಬದುಕೂದು ಬ್ಯಾಡ?"

"ಈ ಮನಿಗೆ ಬೆಂಕೀ ಇಟ್ಟು ನಡೀ ಅಂತಿಯಾ?"

ಮಲ್ಲವ್ವ ಮತ್ತೆ ನಡುಗಿದಳು, ಮತ್ತೆ ತುಂಬಿದ ಹೃದಯದಿಂದ ಕೇಳಿದಳು:

"ಹಾಂಗಾರ ಏನ ಮಾಡಂತೀ ಬದಕಲಾಕ?"

ರಾಜೋಟಿಗೆ ಈ ಮಾತಿಗೆ ಉತ್ತರಕೊಡಲು ಸಾಧ್ಯವಾಗಲಿಲ್ಲ. ಇವನ ಹದಗೆಟ್ಟ ಪರಿಸ್ಥಿತಿಯನ್ನು ಇನ್ನೂ ಜಗ್ಗಿದರೆ ಪ್ರಸಂಗ ವಿಕೋಪಕ್ಕೆ ಹೋಗಬಹುದೆಂದು ಮಲ್ಲವ್ವ ಮಕ್ಕಳನ್ನು ತಬ್ಬಿಕೊಂಡು ನಡೆದುಬಿಟ್ಟಳು. ಆ ಹೊತ್ತು ರಾತ್ರಿ ಬಹಳ ಹೊತ್ತಿನ ವರೆಗೆ ರಾಜೋಟಿ ತನ್ನೆರಡೂ ಮುಖಗಳ ಮಧ್ಯದಲ್ಲಿ ತಲೆ ಇಟ್ಟುಕೊಂಡು ಕುಳಿತವನು ಕದಲಲಿಲ್ಲ. ಬೆಳಗಿನ ಕೋಳಿ ಕೂಗಿದಾಗ ಇವನು ಮಲಗುವ ಸಾಹಸಮಾಡಿದ.

೩

ಹೊಸನಾತವೆಂದು ನೆಲದ ಅಂಜನ್ನೇ ಮೂಸಹೊರಟ ಹಸಿದ ಜುಲಿಮುರಿಗಳಂತೆ, ರಾಜೋಟಿಯ ಮಕ್ಕಳು ಓಣಿಗುಂಟ ತಿರುಗತೊಡಗಿದುವು. ಸಂಜೆಯೆಲ್ಲ ತಿರುಗಿ ಕಂಗಾಲಾಗಿ ಮನೆಗೆ ಬಂದರೆ ಅಲ್ಲೇನಿದೆ? ಹಸದು ಹಸವನ್ನೇ ತಿಂದ ಮೈಯ ಸುಖದ ರಾಜೋಟಿ, ನಿರಾಶಾಭಾವದಿಂದ ಹೊರಗಿನ ಕಟ್ಟೆಯ ಮೇಲೆ ಬಿದ್ದಿರುವನು. ಒಳಗೆ ಮಲ್ಲವ್ವ ಹುಳುತಿಂದ ಹುಣಸೆಯ ಪಕ್ಕಗಳ ಹಿಟ್ಟು ಮಾಡಿ, ಒಣಗಿದ ಕರುಳನ್ನು ಹಸಿಮಾಡುವ ಸಾಹಸದಲ್ಲಿರುವಳು. ದಣಿದ ಮಕ್ಕಳು ಆ ಅಮೃತದ ಪಾನದ ನಂಜೇರಿ ನಿತ್ರಾಣವಾಗಿ ಬಿದ್ದಾಗ, ಅವು ಮಲಗಿದುವೆಂದು ಮಲ್ಲವ್ವನಿಗೆ ಸಮಾಧಾನ.

ಡಂಗುರದ ದನಿಕೇಳಿ ಮಲ್ಲವ್ವ ಓಡಿಬಂದಳು. ಆ ಊರಿಗೆ ಹದಿನೆಂಟು ಮೈಲಿನ ಮೇಲಿರುವ— ಕೃಷ್ಣಾತಟಾಕದಲ್ಲಿರುವ ಗ್ರಾಮವೊಂದರಲ್ಲಿ, ಗುಜರಾತದ ಸತ್ಯವತೀದೇವಿಯವರು ಮಕ್ಕಳ ಪೋಷಣೆಗಾಗಿ ಅನ್ನಛತ್ರ ತೆರೆದಿರುವರೆಂದೂ ಬೇಕಾದಷ್ಟು ಮಕ್ಕಳನ್ನು ಕಳುಹಿಸಿಹುದೆಂದೂ ಡಂಗುರದ ಸಾರಾಂಶವಾಗಿತ್ತು. ಕೇವಲ ಮಕ್ಕಳನ್ನು ಮಾತ್ರ ಪೋಷಿಸುವ ಛತ್ರವು ವಿಚಿತ್ರವಾದುದೆಂದು ಮಲ್ಲವ್ವನ ತಾಯಿಗರುಳಿಗೆ ಎನ್ನಿಸಿದರೂ, ಅದೊಂದು ದೈವಾಯತ್ತವಾಗಿ ಬಂದ ಕರುಣೆಯ ಕೈ ಎಂದು ಭಾವಿಸಿದಳು. ಮರುಕ್ಷಣದಲ್ಲಿ, ತನ್ನ ತಾಯ್ತನದ ರಕ್ಷಣೆಯನ್ನೂ ಕಳೆದುಕೊಂಡು ತನ್ನ ಮಕ್ಕಳು ಬಾಳಬಹುದೇ?— ಎಂದು ವಿಚಾರಿಸಿದಳು. ಈ ವಿಚಾರ ಸುಳಿದಾಗ ಅವಳಿಗೆ ಹುಚ್ಚು ನಗೆ ಬಂದಿತು. ಅವಳ ರಕ್ಷಣೆಯ ಕತೆ ಅವಳಿಗೇ ಗೊತ್ತು; ಹಾಗಾದರೆ ಮಕ್ಕಳನ್ನು ಛತ್ರದಲ್ಲಿ ಬಿಡಬಹುದೇ? ಅವು ಅನಾಥ ಮಕ್ಕಳಂತೆ ಛತ್ರದಲ್ಲಿ ಬಾಳಬೇಕೇ? ಅವು ಮಲಗುವುದೆಲ್ಲಿ? ಅವುಗಳ ಶುಶ್ರೂಷಣೆ ನಡೆಯಬಹುದೇ? ಅವಳಿಗೆ ವಿಚಾರ ಬಗೆಹರಿಯದಾಯಿತು. ಕೊನೆಗೆ ರಾಜೋಟಿಯನ್ನು ಕೇಳಿಯಾದರೂ ನೋಡಬೇಕೆಂದು ಅವನ ಹತ್ತಿರ ಹೋಗಿ, "ಡಂಗುರಸಾಂದ್ದು ಕೇಳಿ ನಿನ್ನ ಹತ್ಯಾಕ ಓಡಿ ಬಂದ್ನಿ. ಏನ ಇಚಾರಾ ಮಾಡೂದು?"

ಮುಖ ಮೇಲೆತ್ತದೆ ರಾಜೋಟಿ ನುಡಿದ:

"ನಾಳೆ ಮಾರುಹೊತ್ತು ಏರೂದರಾಗ ನಾವು ಮೂರು ಹರದಾರಿ ಸಾಗಿ ಹೋಗಿರಬೇಕು" ರಾಜೋಟಿಯ ನಿರ್ಧಾರದ ಮಾತುಗಳನ್ನು ಕೇಳಿ ಮಲ್ಲವ್ವನಿಗೆ ವಿಲಕ್ಷಣ ಸಂಕಟವಾಯಿತು. ಈ ನಿರ್ಧಾರದ ಅಂತರಂಗದಲ್ಲಿ ನುಡುತ್ತಿರುವ ನುಡುಬಿಗ್ಗಿದು ಝಳವು ಅವಳಿಗೆ ತಾಗದಿರಲಿಲ್ಲ. ಅವಳ ಕಣ್ಣು ಕಣಿಕೆಯಿಂದ ನೀರಿನ ಸೆಲೆ ಉಕ್ಕುತ್ತಿರುವಾಗ ಮತ್ತೆ ಕೇಳಿದಳು: "ನಾವು ಮತ್ತ ಮನಿಗಿ ಬರೂದ್ಯಾವಾಗ?"

"ಯಾವ ಮನೀಗೆ?"

ಮಲ್ಲವ್ವ ರಾಜೋಟಿಯ ದನಿಗೆ ಬೆದರಿದಳು: "ಹೀಗೆಲ್ಲಾ ಮಾತಾಡಿ ಯಾಕ ನನ್ನ ಗಾಬರಿ ಮಾಡತ? ಈ ಮನಿ ಬಿಟ್ಟರ ನಮಗ ನೆಳ್ಳ ಕೊಡೂ ಮನಿ ಇನ್ಯಾವುದೈತಿ?"

ರಾಜೋಟಿ ಸಮಾಧಾನದಿಂದ ಹೇಳಿದ:

"ಮೊದಲಂತೂ ಮಕ್ಕಳ ಹಂಪು ಹರಕೊಂಡು ಬರೂನು; ಆ ಮ್ಯಾಲ ಶಿವಾ ಬುದ್ಧೀ ಕೊಟ್ಟಾಂಗ ಮಾಡೂಣು" ಇಷ್ಟು ಮಾತನಾಡಿ ರಾಜೋಟಿ ಗೋಣು ಜೆಲ್ಲಿದ. ಇದ್ದ ಬಿದ್ದ ಸಾಮಾನುಗಳನ್ನು ಸಾವರಿಸಿ ಒತ್ತಟ್ಟಿಗಿಟ್ಟು, ಮಲ್ಲವ್ವ ಕೂರಡುವ ಸಿದ್ಧತೆ ಮಾಡತೊಡಗಿದಳು. ರಾಜೋಟಿ ಒಮ್ಮೆ ಮನೆಯೆಲ್ಲವನ್ನೂ ಶೂನ್ಯದೃಷ್ಟಿಯಲ್ಲಿ ನೋಡಿ ಒಂದ ಪ್ರತಿಕೋಣೆಯನ್ನೂ ಹೊಕ್ಕು ಬಂದ. ಗೋದಲಿ-ಕೂಟ್ಟಿಗೆಗಳನ್ನೂ ಮುಟ್ಟಿ ಬಂದ. ಅವನಿಗೆ ತಾನು ಎಲ್ಲಿಗೋ ತಿರುಗಿ ಬಾರದ ಸ್ಥಳಕ್ಕೆ ಹೊರಟಿರುವೆನೆಂದು ಭಾಸವಾಯಿತು. ತನ್ನ ತಂದೆಯು ಮನೆಯನ್ನು ಬಿಟ್ಟು ಅನಾಥನಾಗಿ ದಾರಿಗುಂಟ ಸಾಗುವ ದರಿದ್ರನಂತೆ ತನ್ನ ಸ್ಥಿತಿಯಾಗಿದ್ದುದಕ್ಕಾಗಿ ಅವನ ಬುದ್ಧಿ ಮಂಕಾಯಿತು. ನಿಂತಲ್ಲಿಂದಲೆ ತಲೆಜಾಗಿಲಿಗೆ ಕೈಮುಗಿದ.

ಮಲ್ಲವ್ವ ಮಕ್ಕಳನ್ನೆಬ್ಬಿಸಿ ಹೊರಿಸಿದ್ದಳು. ಕೂಸು ಮಲ್ಲವ್ವನ ಬಗಲಲ್ಲಿ, ನಡುವಿನ ಮಗಳು ರಾಜೋಟಿಯ ಹೆಗಲ ಮೇಲೆ. ಹಿರಿಯ ಮಗನ ಕೈಯಲ್ಲೊಂದು ಚಿಂದಿಗಳ ಗಂಟು. ಮಲ್ಲವ್ವ ಬಾಗಿಲುಹಾಕಿ ಅದಕ್ಕೊಂದು ಕೀಲಿ ಹಾಕಲು ಪ್ರಯತ್ನಿಸಿದಳು. ರಾಜೋಟಿ ನಗುತ್ತ ಹೇಳಿದ:

"ನನ್ನ ಮನೀ ಒಳಗ ಯಾರು ಹೊಕ್ಕು ಏನು ಭಾಗ್ಯಾ-ಕಾಣೋದ್ಲೆತಿ? ಹುಚ್ಚಿ ಹಂಗ ಕೀಲಿ ಏನ ಹಾಕತಿ? ಕಳಚ ನಟೀಬಾರದ ಸರಕ್ಕನ!" ಎನ್ನುತ್ತ ರಾಜೋಟಿ ಮನೆಯ ಕಡೆಗೆ ತಿರುಗಿ ನೋಡದೆ ಹೊರಟು ಬಿಟ್ಟ.

"ಈ ಮನೀಗಿ ಯಾರುಗತಿ, ಹಾಂಗs ಬಿಟ್ಟುಹೋದರ!" ಮಲ್ಲವ್ವ ಕಿರಿಚಿದಳು. "ಶಿವನs ಗತಿ.....ಶಿವನs"..... ರಾಜೋಟಿ ಜೋರಿನಿಂದ ಹಜ್ಜೆ ಹಾಕಹತ್ತಿದ. ಮಲ್ಲವ್ವ ಬೇಗ ಹಾಕದಿದ್ದರೂ ಚಿಲಕದ ನಸುಬೆ ಎರಡು ಗಂಟುಗಳನ್ನು ಸಿಕ್ಕಿಸಿ, ಒಮ್ಮೆ ತಲೆಬಾಗಿಲನ್ನು ಶೂನ್ಯದೃಷ್ಟಿಯಿಂದ ನೋಡಿ, ಕಣ್ಣಲ್ಲಿ ನೀರು ಚಿಮ್ಮುತ್ತಿರುವಾಗ, ನೋತ ಹಜ್ಜೆಯಲ್ಲಿ ಮುಂದೆ ಸಾಗಿ ನೋಡುವಷ್ಟರಲ್ಲಿ, ರಾಜೋಟಿ ಬಹಳ ದೂರ ಹೋಗಿದ್ದ.

೪

ಆ ಛತ್ರದ ಭವ್ಯವಾದ ಆವಾರದಲ್ಲಿ ನೂರಾರು ಕೂಸುಗಳು, ದರಿದ್ರ ಭಾರತದ ಪ್ರತೀಕಗಳಂಬಂತೆ ಕಾಣುತ್ತವೆ. ಅರೆ-ಹೊಟ್ಟೆಯ ದುಳಕ್ಕೆ ಸುಟ್ಟ ಎಲಬುಗಳನ್ನು ಎಣಿಸಲು ಪ್ರದರ್ಶನಕ್ಕಿಟ್ಟಂತೆ ಕಾಣುವ ದೇಹದ ಅಸ್ಥಿಪಂಜರ. ಮನೆಯಲ್ಲಿಯ ಹುಣಸೇ ಬೀಜದ ರಾಡಿಯನ್ನೋ, ಗಿಡದ ತೊಗಟೆಯ ರಸವನ್ನೋ ಕುಡಿದ ಮೈಗಳ ಮೈಕಟ್ಟು ಮತ್ತೆಂತಿರಬೇಕು? ಸರಿಯಾದ ಬಟ್ಟೆಗಳಿಲ್ಲದೆ ಅರೆತೆರೆದ ಮೈಯ ಭಾರತದ ಬಡಕೂಸು. ಗಳವು ಎತ್ತು ತಾಯಂದಿರ ಕರುಳುಗಳಿಗೆ ಬರೆಕೊಟ್ಟು ಎಂದುವೋ? ಛತ್ರದಲ್ಲಿ ಅವುಗಳಿಗೆ ಆಹಾರ ಸಿಗುತ್ತಿದ್ದರೂ ಯಾವ ಕೂಸೂ ಸಂತೋಷದಿಂದಿದ್ದಂತೆ ಕಾಣಲಿಲ್ಲ. ಎಲ್ಲ ಕೂಸುಗಳ ದೃಷ್ಟಿಯೂ ಹೊರಗೆ 'ತಾಯಿ ಬರಬಹುದು, ಕರೆದುಕೊಂಡು ಮನೆಗೆ ಹೋಗಬಹುದು!' ಎಂಬ ಚಿಂತೆಯೇ ತುಂದಮ್ಮಗಳಿಗೆ. ತಾಯಿ ಬಡವಳಿದ್ದರೇನು? ಕೂಸುಗಳಿಗೆ ಅವಳು ಭಾಗ್ಯಲಕ್ಷ್ಮಿಯೇ.

ಇವೆಲ್ಲ ಕೂಸುಗಳ ಮೇಲ್ವಿಚಾರಣೆಗೆ ಅನೇಕ ಜನ ಹೆಣ್ಣಾಳುಗಳಿದ್ದರೂ ಅವರಲ್ಲಿ ದಯೆಯು ಲವಲೇಶವಿದ್ದಂತೆ ತೋರಲಿಲ್ಲ. ಎಲ್ಲ ಕೂಸುಗಳು ಹೊಲಸಿನಿಂದ ನಾರುತ್ತಿದ್ದುದೆಂಬಂತೆ ಒಬ್ಬರೊಬ್ಬರ ಮೈಮುಟ್ಟುವಂತಿರಲಿಲ್ಲ. ಅವಕ್ಕೆ ಜಳಕಮಾಡಿಸಲು ಯೋಗ್ಯವ್ಯವಸ್ಥೆ ಇದ್ದರೂ ಅವಕ್ಕೆ ಜಳಕ ಮಾಡಿಸುವವರಾರು? ಅವಕ್ಕೆ ಹಾಲಿನ ಪೂರಯಿಕೆಯಿದ್ದರೂ ಅವುಗಳಿಗೆ ಹಾಲುಕೊಡುವ ಕರುಣಾಳುಗಳೆಲ್ಲಿ?

ರಾಜೋಟಿ ಛತ್ರದ ಬಾಗಿಲಿಗೆ ಬಂದಾಗ, ಮಧ್ಯಾಹ್ನದ ಬಿರುಬಿಸಿಲು ಕಾಯುತ್ತಿತ್ತು. ಹೊಟ್ಟೆಯ ಕಿಚ್ಚೆಲ್ಲ ಹೊರಬಿದ್ದು ಹೋಗುವಂತೆ ಜೀವರನ ಹೊನಲು ಹಳ್ಳವಾಗಿ ಹರಿಯತೊಡಗಿತು. ಈ ಎರಡು ದಿನಗಳಿಂದ ಕೂಳು ಇಲ್ಲದ್ದರಿಂದಲೂ, ಬಹಳ ದಾರಿ ನಡೆದು ಬಂದದ್ದರಿಂದಲೂ ಅವನು ಕಂಗಾಲಾಗಿದ್ದ. ಮಲ್ಲವ್ವ ನಿಂತೂ ಬೆಂದ ಬದನೆಯಕಾಯಿಯಾಗಿದ್ದಳು. ಕೂಸುಗಳೆಲ್ಲ ಕಂಡದ ಕುಣಿಯಿಂದ ಬಂದ ಕಬ್ಬಿಣದಂತಾಗಿ ಹುರುಪಳಿಸಹತ್ತಿದುವು ಛತ್ರದಲ್ಲಿ ಆಗಲೇ ಮಕ್ಕಳ ಊಟದ ಶಾಸ್ತ್ರ ಮುಗಿದಂತೆ ಕಾಣುತ್ತದೆ. ಊಟ ಮಾಡಿದ ಮಕ್ಕಳು ಆ ದುಳಕ್ಕೆ ತಳಮಳಿಸುತ್ತ ಬಿದ್ದಲ್ಲಿಯೆ ತೇಲಂಗಣ್ಣು ಹಾಕಹತ್ತಿವೆ. ಈ ಕೂಸುಗಳನ್ನೆಲ್ಲ ನೋಡಿ ರಾಜೋಟಿಗೆ ಅದೆಷ್ಟೋ ಹಗುರೆನಿಸಿದರೂ ಅದಾವುದೋ ಸಂಕಟದ ಅನುಭವವು ಅವನಿಗಾಗ ತೊಡಗಿತು ಹುಸು ಹೊತ್ತಿನಲ್ಲಿ ರಾಜೋಟಿ ಛತ್ರದ ಅಧಿಕಾರಿಯ ಕೋಣೆಯ ಬಾಗಿಲ ಬಳಿ ನಿಂತ.

"ನಿನ್ನ ಮಕ್ಕಳೆಲ್ಲ ಮೂರು ವರುಷ ಮಿಕ್ಕಿ ಐದು ವರ್ಷದ ಒಳಗಿನವರೇ?" ದರ್ಪದ ನುಡಿ ಕೇಳಿತು.

"ಹಿರಿಯವನಿಗೆ ಹನ್ನೊಂದು ವರಸ. ನಡುವಿನ ಮಗಳು ಮೂರು ವರಸ ಮಿಕ್ಕಿದವಳು. ಕಡೆಯ ಕೂಸು....."

"ಕೇಳಿದಷ್ಟು ಹೇಳೋ ಹಳ್ಳಿಯ ಮುಕ್ಕಾ! ನಿನ್ನ ಸಂಸಾರದ ದರಿದ್ರ ಮಕ್ಕಳ ಅಭದ್ರ ಸಂಖ್ಯೆಯನ್ನು ಕೇಳಲು ನನ್ನನ್ನು ನಿಯಮಿಸಿಲ್ಲ ಇಲ್ಲಿ....."

ರಾಜೋಟಿ ಗಾಬರಿಯಾಗಿ ನಿಂತ. ಕೊನೆಗೆ ಬಂತು ಒಳಗಿನ ದಿವ್ಯ ದನಿ:

"ನಿನ್ನ ಮೂರು ವರ್ಷ ಮಿಕ್ಕಿದ ಹುಡುಗಿಗೆ ಮಾತ್ರ ಇಲ್ಲಿ ಪ್ರವೇಶ ಸಿಕ್ಕುವುದು. ಹುಡುಗನನೂ ನೀವೂ ಕೂಡಿ ಬೇಕಾದಲ್ಲಿ ಹೋಗಬಹುದು!"

"ದಣಿಯರೆ! ಹುಡುಗನನ್ನು ಕಳಿಸುವುದಾದರೂ ಎಲ್ಲಿ?"

"ಹಾಳುಜಾವಿಗೆ ಕಳಿಸು ಬೇಕಾದರೆ ..... ಈ ಕ್ಷಣಸ್ತ ಸಂಜೆಗೆಮಾತ್ರ ನಿನ್ನೆಲ್ಲರಿಗೂ ಇಲ್ಲಿ ಊಟ ಸಿಕ್ಕುತ್ತದೆ. ನಾಳೆ ಮುಂಜಾನೆ ಆ ಹುಡುಗಿಯೊಬ್ಬಳನ್ನು ಬಿಟ್ಟು ನೀವು ಹೋಗಬಹುದು." .....

"ದಣಿಯರೆ ..... ದಣಿಯರೆ ....." ರಾಜೋಟಿ ಏನೋ ಹೇಳಬೇಕೆನ್ನುವಾಗಲೆ ಕೋಣೆಯ ಬಾಗಿಲು ಇಕ್ಕಿತು. ಮಲ್ಲವ್ವ ಕುಳಿತ ಗಿಡದ ಒಡಕ್ಕೆ ನೋತ ಹಜ್ಜೆಯಲ್ಲಿ ಬಂದ ರಾಜೋಟಿ.

ಛತ್ರದ ಅಧಿಕಾರಿಯ ಆಜ್ಞಾಸಂದೇಶವನ್ನು ಕೇಳಿ ಮಲ್ಲವ್ವ ಹೌಹಾರಿದಳು. ರಾಜೋಟಿ ಮರಕನಂತಾಗಿದ್ದ. ಆ ಸಣ್ಣ ಕೂಸೊಂದನ್ನೇ ಬಿಟ್ಟುಹೋಗಲು ಅವರಿಬ್ಬರಿಗೂ ಮನಸ್ಸಾಗಲೊಲ್ಲದು. ಕರೆದುಕೊಂಡು ಹೋಗುವುದಾದರೂ ಎಲ್ಲಿ? ಮನೆಯಲ್ಲಿ ಮರಣಹೊಂದುವುದಕ್ಕಿಂತ ಅವಳೊಬ್ಬಳಾದರೂ ಬದುಕಲೆಂದು ಅವರು ನಿರ್ಧರಿಸಿದರು. ಈ ನಿರ್ಣಯಕ್ಕೆ ಬರುವಾಗ, ಅವರಿಬ್ಬರೂ ಮತ್ತಾವುದೋ ನಿರ್ಧಾರಕ್ಕೆ ಬಂದ ಹಾಗೆ ಅವರ ಮುಖಭಾವ ತೋರಿಸಹತ್ತಿತು.

"ಇವನ ಹೊಟ್ಟೆಯ ಗತಿ!" ಮಲ್ಲಮ್ಮ ಅಲ್ಲಿಯೆ ಮಲಗಿದ ಹಿರಿಯಮಗನನ್ನು ಸೂಚಿಸಿ ಕೇಳಿದಳು ರಾಜೋಟಿಯನ್ನು.

"ಶಿವನೇ ಗತಿ...." ರಾಜೋಟಿಯ ಉತ್ತರ.

(ಸಂಚಿಕೆಯ ಪುಟಕ್ಕೆ ಮುಂದೆ ಸಾಗಿದೆ)

# ಭಾಷಾವಿಜ್ಞಾನಃ

ಲೇಖಾಂಕ ೨

## ಸಂಸ್ಕೃತ ಭಾಷೆಯ ಅಭ್ಯಾಸ

ಶ್ರೀ. ಕೆ. ಟಿ ಪಾಂಡುರಂಗಿ ಬಿ. ಓ. ಎಲ್. ಧಾರವಾಡ

★

### ಸಂಸ್ಕೃತವು ಬರಿ ಗ್ರಂಥಸ್ಥಭಾಷೆಯೆ, ಜನಬಳಕೆಯು ಮಾತಾಗಿತ್ತೆ?
### ಸಂಸ್ಕೃತದಲ್ಲಿ ಭಾಷೆಯ ಅಭ್ಯಾಸ ಪ್ರಾರಂಭವಾದುದೆಂದು?
### ಭಾಷಾಲೋಕದಲ್ಲಿಯು ಮುನಿತ್ರಯರು ಯಾರು?

★

೧. ಭಾರತೀಯರ ಎಲ್ಲ ಚಟುವಟಿಕೆಗಳ ಆರಂಭವನ್ನೂ ವೇದಗಳಲ್ಲಿಯೇ ಕಾಣುವಂತೆ, ಅವರ ಭಾಷೆಯ ಅಭ್ಯಾಸದ ಯಾಸ್ಕನ ವರೆಗಿನ ವೇದಕಾಲದಲ್ಲಿಯ ಆರಂಭದ ರೂಪವನ್ನೂ ಕಂಡೆವು. ಇನ್ನು ಅಭ್ಯಾಸದ ಅನುಕೂಲತೆಗಾಗಿ ಸಂಸ್ಕೃತ ಭಾಷೆ, ವ್ಯಾಕೃತಭಾಷೆಗಳು, ದ್ಯಾನಿಡಭಾಷೆಗಳು, ಹೀಗೆ ವಿಶಿಷ್ಟ ಸ್ವಭಾವ, ಸ್ವರೂಪ, ರಚನೆಗಳಿರುವ ಭಾಷೆಗಳ ಮೂರು ಗುಂಪುಗಳನ್ನು ಮಾಡಿಕೊಂಡು, ಭಾರತೀಯರು ಮುಂದುವರಿಸಿದ ಅಭ್ಯಾಸದ ರೀತಿಯನ್ನೂ ಕಾಲಕ್ರಮವನ್ನೂ ಅಭ್ಯಾಸದಲ್ಲಿಯ ಎತ್ತಿ ತೋರಿಸಬಹುದಾದ ವಿಶಿಷ್ಟ ಬೆಳವಣಿಗೆಯ ಕ್ರಮವನ್ನೂ ವಿವರಿಸಲು ಪ್ರಯತ್ನಿಸುವೆನು.

"ಆದೌ ವೇದಮಯೀ ದಿವ್ಯಾ" ಎಂದು ಆರಂಭವಾದ ವೈದಿಕ ಭಾಷೆಯ ಅಭ್ಯಾಸವು, ಕೇವಲ ವೈದಿಕವಾಙ್ಮಯದ ರಕ್ಷಣೆಯ ಮೇರೆಯನ್ನು ಮೀರಿ ಪ್ರತ್ಯೇಕವಾದ ಶಾಸ್ತ್ರವಾಯಿತು. ಈ ದಿಶೆಯಲ್ಲಿ ನಡೆದ ಎಲ್ಲ ಪ್ರಯತ್ನಗಳನ್ನು ಒಟ್ಟುಗೂಡಿಸಿ ಪಾಣಿನಿಯು ಲೌಕಿಕ ಸಂಸ್ಕೃತ ಭಾಷೆಗೆ ವ್ಯವಸ್ಥಿತವಾದ ಮತ್ತು ವಿಸ್ತಾರವಾದ ವ್ಯಾಕರಣವನ್ನು ಬರೆದನು.

೨. **ಪಾಣಿನಿಗೆ ಮೊದಲು:—** ಪಾಣಿನಿಯ ಅಷ್ಟಾಧ್ಯಾಯಿಯಂತಹ ವ್ಯವಸ್ಥಿತವಾದ ಮತ್ತು ಪರಿಪೂರ್ಣವಾದ ಗ್ರಂಥವು ಒಮ್ಮೆಲೆ ಬರೆಯಲ್ಪಟ್ಟಿತೆಂದು ಹೇಳುವುದು ಸಮರ್ಪಕವೆನಿಸುವುದಿಲ್ಲ. ಆದುದರಿಂದ ಯಾಸ್ಕನಿಗೂ ಪಾಣಿನಿಗೂ ನಡುವೆ ಕೆಲವು ಗ್ರಂಥಗಳು ಬರೆಯಲ್ಪಟ್ಟಿರಬಹುದೆಂದು ಊಹಿಸಬಹುದಾಗಿದೆ. ಪಾಣಿನಿಯು ಅನೇಕ ಪಾರಿಭಾಷಿಕ ಶಬ್ದಗಳ ಪರಿಜಯವನ್ನು ಮಾಡಿಕೊಡದೆ, ಅವು ಬಳಕೆಯಲ್ಲಿದ್ದುವ್ಯಗಳಂತೆಯೆ ಭಾವಿಸಿ ಉಪಯೋಗಿಸಿದುದೂ ಈ ಮಾತನ್ನು ಸಮರ್ಥಿಸುತ್ತದೆ. ಇಂತಹ ಗ್ರಂಥಕಾರರಲ್ಲಿ ಆಪಿಶಾಲಿ ಮತ್ತು ಕಾಶಕೃತ್ಸ್ನರ ಹೆಸರುಗಳು ಎರಡು ಬೇರೆ ಬೇರೆ ವ್ಯಾಕರಣಪದ್ಧತಿಗಳ ಪ್ರವರ್ತಕರವೆಂದು ಪ್ರಸಿದ್ಧವಾಗಿವೆ. ಆದರೆ ವಾಮನ-ಜೈಯಟರು, ಆಲ್ಲಲ್ಲಿ ಉಲ್ಲೇಖಿಸುವುದರ ಹೊರತಾಗಿ ಅವರ ಬಗ್ಗೆ ಹೆಚ್ಚಿನ ದೇನೂ ತಿಳಿದುಬರುವುದಿಲ್ಲ. ಅವರ ಗ್ರಂಥಗಳೂ ದೊರೆತಿಲ್ಲ.

೩. **ಐಂದ್ರ ವ್ಯಾಕರಣ:—** ಪಾಣಿನಿಗೆ ಮೊದಲು ಐಂದ್ರ ವ್ಯಾಕರಣವೆಂಬ ಇನ್ನೊಂದು ವ್ಯಾಕರಣ ಪದ್ಧತಿಯಿತ್ತೆಂದು ಊಹಿಸಲಾಗಿದೆ. ಪಾಣಿನಿಯು 'ಪ್ರಾಚ್ಯರು' ಎಂದು ಹೇಳುವುದರ ಹೊರತಾಗಿ ಈ ಬಗ್ಗೆ ಸ್ಪಷ್ಟವಾಗಿ ಎಲ್ಲಿಯೂ ಉಲ್ಲೇಖಿಸಿರುವುದಿಲ್ಲ. ಆದರೆ ಕಥಾಸರಿತ್ಸಾಗರದಿಂದಲೂ ಹುಯೆನ್-ತ್ಸಾಂಗ್ ಮತ್ತು ತಿಬೇಟದ ಚರಿತ್ರಕಾರನಾದ ತಾರಾನಾಥನಿಂದಲೂ ಐಂದ್ರವೆಂಬ ವ್ಯಾಕರಣಪದ್ಧತಿಯೊಂದಿತ್ತೆಂದು ತಿಳಿದುಬರುತ್ತದೆ.

ತಮಿಳು ವ್ಯಾಕರಣದ ಮೊದಲನೆಯ ಗ್ರಂಥವಾದ ತೊಲ್ಕಾಪಿಯಮ್‌ನ ಮೇಲೆ ಈ ಐಂದ್ರಪದ್ಧತಿಯ ಪ್ರಭಾವವು ಬಹಳವಾಗಿದೆ. ತೊಲ್ಕಾಪಿಯಂ ಗ್ರಂಥಕ್ಕೂ ಕಾತಂತ್ರ ವ್ಯಾಕರಣಕ್ಕೂ ನಿಕಟ ಸಂಬಂಧವಿರುವುದು ಕಂಡುಬರುತ್ತದೆ. ಇವುಗಳಿಗೂ ಕಾಚ್ಚಾಯನನ ಪಾಲಿ ವ್ಯಾಕರಣಕ್ಕೂ ಪ್ರಾತಿಶಾಖ್ಯಗಳಿಗೂ ಸಂಬಂಧವಿರುವಂತಿದೆ. ಹೀಗೆ ಇವೆಲ್ಲ ಐಂದ್ರ ವ್ಯಾಕರಣದ ಒಂದು ಜೋಡಣೆಯನ್ನು ತೋರಿಸುತ್ತವೆ ಈ ಐಂದ್ರ ವ್ಯಾಕರಣದಲ್ಲಿಯ ಪಾರಿಭಾಷಿಕ ಪದಗಳು ಸರಳವಾಗಿದ್ದು, ಪ್ರಾಚೀನತೆಯನ್ನು ತೋರಿಸುತ್ತವೆ; ಆದರೂ ಈ ಪದ್ಧತಿಯ ಗ್ರಂಥಗಳೆಲ್ಲ ಪಾಣಿನಿಗಿಂತ ಪ್ರಾಚೀನವೆಂದು ಹೇಳಲು ಸಾಕಷ್ಟು ಆಧಾರಗಳು ದೊರೆತಿಲ್ಲ. ಆದುದರಿಂದ ಇಲ್ಲಿ ಪ್ರತಿವಾದಿಸಿರುವ ಅನೇಕ ವಿಷಯಗಳು ಪ್ರಾಚೀನವಿದ್ದರೂ ಈ ಗ್ರಂಥಗಳು ಪಾಣಿನಿಯಿಂದೀಚೆಗೆ ಪೂರ್ಣರೂಪವನ್ನು ತಾಳಿದುವೆಂದು ಊಹಿಸುವುದು ಹೆಚ್ಚು ಸಮರ್ಪಕವೆನಿಸುವುದು.

೪. **ಸಂಸ್ಕೃತ ಭಾಷೆ:**—ಪಾಣಿನಿಯ ಸೂತ್ರಗಳಿಗನುಸರಿಸಿದ, ಪಾಣಿನಿಯಿಂದೀಚೆಗೆ ದರ್ಶನ, ಸಾಹಿತ್ಯ, ತರ್ಕ, ಆಯುರ್ವೇದ, ಜ್ಯೋತಿಷ್ಯ, ಪುರಾಣ, ಧರ್ಮಶಾಸ್ತ್ರ, ರಾಜನೀತಿ— ಹೀಗೆ ಬಹುಶಃ ವಾಙ್ಮಯದ ಎಲ್ಲ ಅಂಗಗಳನ್ನೂ ಒಳಗೊಂಡ ಭಾಷೆಯು ಸಂಸ್ಕೃತ ಭಾಷೆಯೆಂದು ಪ್ರಸಿದ್ಧವಾಗಿದೆ. "ಸಂಸ್ಕೃತಂ ನಾಮ ದೈವೀ ವಾಕ್" ಸಂಸ್ಕೃತವು ದೇವಭಾಷೆ "ಅನಾದಿ-ನಿಧನಾ ನಿತ್ಯಾ" ಅದು ಅನಾದಿಯೂ ಮತ್ತು ಅನಂತವಾದ ಭಾಷೆ.... ಎಂದು ಗೌರವವನ್ನು ಪಡೆದಿದೆ. ಇಂದು ಭಾರತದಲ್ಲಿ ಪ್ರಚಾರದಲ್ಲಿರುವ ಅನೇಕ ಭಾಷೆಗಳ ಜನನಿಯಾಗಿದೆ. ಇನ್ನು-ಳಿದ ಭಾಷೆಗಳಿಗೆ ಪೋಷಕವಾಗಿದೆ. ಆದರೆ ಈ ಸಂಸ್ಕೃತ ಭಾಷೆಯು ಬಳಕೆಯ ಭಾಷೆಯಾಗಿತ್ತೇ ಅಥವಾ ಮೊದಲಿ-ನಿಂದಲೂ ಕೇವಲ ವಾಙ್ಮಯದ ಭಾಷೆಯೇ?— ಎಂಬ ಬಗ್ಗೆ ಭಾಷಾವಿಜ್ಞಾನಿಗಳಲ್ಲಿ ಶಾಸ್ತ್ರೀಯವಾಗಿ ಭಿನ್ನಾಭಿಪ್ರಾಯವಿಲ್ಲ-ದಿದ್ದರೂ, ಆಗಾಗ ಚರ್ಚೆಯು ಮಾತ್ರ ಕಂಡುಬರುತ್ತದೆ.

ಚಾರಿತ್ರಿಕ ದೃಷ್ಟಿಯಿಂದ ಆರ್ಯಭಾಷೆಗಳ ಪ್ರಾಚೀನ ರೂಪ, ಮಧ್ಯಕಾಲದ ರೂಪ, ಅರ್ವಾಚೀನ ರೂಪ ಎಂದು ವಿಂಗಡಿಸುವುದು ರೂಢಿಯಲ್ಲಿದೆ. ಆರ್ಯಭಾಷೆಯು ಅತಿ-ಪ್ರಾಚೀನ ರೂಪವೂ ಪ್ರಾದೇಶಿಕ ರೂಪಭೇದಗಳನ್ನು ಪಡೆದಿ-ತ್ತೆಂದು ಊಹಿಸಲಾಗಿದೆ. ಅಂತಹ ಪ್ರಾದೇಶಿಕ ರೂಪಗಳಲ್ಲಿಯ ಒಂದು ರೂಪವು ವಾಙ್ಮಯದ ಭಾಷೆಯಾಯಿತು. ಅದು ವೇದ-ಕಾಲದ ಗ್ರಾಂಥಿಕ ಭಾಷೆ ಅಥವಾ ವೈದಿಕ ಭಾಷೆ. ಆದರೊಡನೆ ಉಳಿದ ಪ್ರಾದೇಶಿಕ ಭಾಷೆಗಳೂ ವ್ಯವಹಾರದ ಭಾಷೆಗಳಾಗಿ ನಡೆದುಕೊಂಡು ಬರುತ್ತಿದ್ದುವು. ವ್ಯವಹಾರದ ಭಾಷೆಗೂ ಗ್ರಾಂಥಿಕ ಭಾಷೆಗೂ ಬಹಳೇ ಅಂತರವಾದಾಗ, ಮೊದಲಿನ ಗ್ರಾಂಥಿಕ ಭಾಷೆಯು ಹಿಂದುಳಿದು. ವ್ಯಾವಹಾರಿಕ ಭಾಷೆಗಳ ಒಂದು ಮಧ್ಯಮರೂಪವು ಮತ್ತೊಮ್ಮೆ ಗ್ರಾಂಥಿಕ ಭಾಷೆ-ಯಾಗುವುದು ಅಸಂಭವದ ಮಾತು. ಆದರೆ ಆದರ ಮೇಲೆ ಹೊಸದಿನ ಗ್ರಾಂಥಿಕ ಭಾಷೆಯು ಪರಿಣಾಮವೂ ಕಡಿಮೆ-ಯಾಗಿರುವುದಿಲ್ಲ. ಹೀಗೆ ವೈದಿಕ ಭಾಷೆ ಮತ್ತು ಮುಂದು-ವರಿದ ಪ್ರಾದೇಶಿಕ ಭಾಷೆಗಳಲ್ಲಿ ಒಂದರ ಪರಿಷ್ಕೃತ ರೂಪ ಇವು ಸಂಸ್ಕೃತಭಾಷೆಯಾದುವೆನ್ನುವದು ಸ್ವಾಭಾವಿಕವಾದ ವಿವರಣೆ-ಯೆನಿಸುವುದು.

೫ **ಸಂಸ್ಕೃತವು ಶಿಷ್ಟರ ಬಳಕೆಯ ಭಾಷೆ**— ಮೇಲೆ ನಿವರಿಸಿದಂತೆ ಸಂಸ್ಕಾರ ಹೊಂದಿದ ಭಾಷೆ ಸಂಸ್ಕೃತ ಭಾಷೆ-ಯಾದರೂ, ಅದು ಶಿಷ್ಟರ ಬಳಕೆಯ ಭಾಷೆಯಾಗಿತ್ತು. ಕಾತ್ಯಾ-ಯನ, ಪತಂಜಲಿಯರು ಪಾಣಿನಿಯ ನಿಯಮಗಳಿಗೆ ತಿದ್ದು-ಪಡಿಯನ್ನು ಸೂಚಿಸುವುದು ಈ ವಾದಕ್ಕೆ ಸಾಕ್ಷಿಯಾಗಿದೆ. ಭಾಷೆಯು ಬದಲಿಸಿದಂತೆ ನಿಯಮಗಳ ತಿದ್ದುಪಡಿ ಅವಶ್ಯಕ-ವೆನಿಸುತ್ತದೆ. ಬಳಕೆಯಲ್ಲಿದ್ದ ಭಾಷೆಯು ಮಾತ್ರ ಬದಲಿಸು-ವುದು ಶಕ್ಯವಿದೆ. ಯಾಸ್ಕನು 'ಪ್ರಾಚ್ಯರು ಮಾತನಾಡುವ ರೀತಿ' 'ಉದೀಚ್ಯರು ಮಾತನಾಡುವ ರೀತಿ' ಎಂದು ಉಲ್ಲೇ-ಖಿಸುತ್ತಾನೆ. ಸಂಸ್ಕೃತವನ್ನು 'ಭಾಷಾ' ಎಂದು ಕರೆಯು-ತ್ತಿದ್ದರು. 'ಭಾಷಾ' ಎಂಬ ಹೆಸರು ಅರ್ಥಪೂರ್ಣವಾಗಿದೆ. 'ಭಷ್=ಮಾತನಾಡು' ಧಾತುವಿನಿಂದ ಸಿದ್ಧವಾದ ಈ ಪದವು, ಮಾತನಾಡಲ್ಪಡ್ಡ ಭಾಷೆಗೆ ಮಾತ್ರ ಒಪ್ಪುತ್ತದೆ. ಸಂಸ್ಕೃತ ಗ್ರಂಥ-ಕಾರರು ಅರ್ಥವನ್ನು ಅಲಕ್ಷಿಸಿ ಯಾವ ಪದವನ್ನೂ ಉಪಯೋ-ಗಿಸುವುದಿಲ್ಲ. ಸಂಸ್ಕೃತವೆಂಬ ಹೆಸರು 'ವ್ಯಾಕರಣದಿಂದ ವ್ಯವಸ್ಥಿತ ರೂಪ ಕೊಟ್ಟ' ಎಂದಿಷ್ಟು ಅರ್ಥ ಕೊಡಬಲ್ಲದೇ ಹೊರತು 'ಎಂದೂ ಬಳಕೆಗೆ ಬಾರದ ವ್ಯಾಕರಣದಿಂದ ಕಟ್ಟಿಟ್ಟ ಗ್ರಂಥಸ್ಥ ಭಾಷೆ' ಎಂದು ಸೂಚಿಸುವುದಿಲ್ಲ. ವ್ಯಾಕರಣವು

---

(ಕಾಗದ ಸಿಯು ಪುಟದಿಂದ ಮುಂದೆ ಸಾಗಿದ್ದು)

ಛತ್ರದಲ್ಲಿ ಆದಿನ ಪೊಟ್ಟೆತುಂಬಾ ಉಂಡ ಮಕ್ಕಳು ಆವಾರ-ದಲ್ಲಿ ಗಾಢನಿದ್ರೆಯಲ್ಲಿ ಮುಳುಗಿದುವು. ಅನೇಕ ದಿನಗಳಿಂದ ಪೊಟ್ಟೆಯ ತುಣುಕು ಕಾಣದ ದಂಪತಿಗಳಿಬ್ಬರೂ ಆ ದಿನ ಉಂಡ ಕಾರಣದಿಂದ ಅವರಿಗೂ ನಿದ್ರೆ. ಅದೇತಕ್ಕೋ ರಾಜೋಟಿ ಮಾತ್ರ ನಡು-ನಡುವೆ ಎದ್ದುನಿಲ್ಲುವನು. ಮಕ್ಕಳಿಗೆ ನಮಿಸು-ವನು. ಪೆಂಡತಿಯ ಕಡೆಗೆ ನೋಡುವನು. ಮತ್ತೆ ಮಲಗುವನು. ಇವನು ಮಲಗಿದನೆಂದು ಕಂಡಾಗ ಮಲ್ಲವ್ವ ಎದ್ದಳು. ಶೂನ್ಯ-ದೃಷ್ಟಿಯಿಂದ ಸುತ್ತಲೂ ನೋಡಿದಳು. ಛತ್ರದಲ್ಲಿ ಯಾರೂ ಎಚ್ಚೆತ್ತವರಿಲ್ಲ. ಮಕ್ಕಳು ಅಲ್ಲಿಯೆ ಮಲಗಿವೆ. ರಾಜೋಟಿಯು ಮಲಗಿರುವನೆಂದು ಅವಳ ತಿಳಿವಳಿಕೆ. ಧಿಗ್ಗನೇ ಎದ್ದವಳೇ ಕಿವಿಯ ಕೂಸಿಗೊಂದು ಮುದ್ದು ಕೊಟ್ಟು, ಛತ್ರದ ಅಧಿಕಾರಿಯ ಕೋಣೆಯ ಜಾಗಿಲ ಬಳಿ ಮಲಗಿಸಿಬಂದಳು. ರಾಜೋಟಿ ನೋಡಿದ, ನೋಡದವನಂತೆ ಸುಮ್ಮನಿದ್ದ. ಅಲ್ಲಿ ಬಂದವಳೇ ರಾಜೋಟಿಯ ಪಾದವನ್ನು ಮುಟ್ಟಿ ನಮಿಸಿ, ಮಲಗಿದ ಉಳಿದ ಮಕ್ಕಳನ್ನು ಮುದ್ದಿಸಿ, ಅದೆಲ್ಲಿಗೊ ನಡೆದುಬಿಟ್ಟಳು. ಕಾಳರಾ-ತ್ರಿಯು ಮುಗ್ಧರಾತ್ರಿಯಲ್ಲಿ ಅವಳು ಹೋಗುವವಳಾದರೂ ಎಲ್ಲಿ?

ಮತ್ತೆ ಬರಬಹುದೆಂದು ರಾಜೋಟಿ ತಿಳಿದು ಸುಮ್ಮನೆ ಮಲಗಿದ್ದನೋ, ಇಲ್ಲವೆ ಅವಳು ಹೋಗುವುದು ಅವನಿಗೂ ಇಷ್ಟವಿತ್ತೋ— ಬಲ್ಲವರಾರು?

ಆದಿನ ಮುಂಜಾನೆ ಛತ್ರದ ಹೊರಮುಗ್ಗಲಲ್ಲಿದ್ದ ಆ ಹೆಮ್ಮಾರದ ಕೆಳಗೆ, ರಾಜೋಟಿಯ ಹನ್ನೊಂದು ವರ್ಷದ ಹಿರಿಯಮಗನು ಕಿವುಗೂಸನ್ನು ಹಗಲುಮೇಲೆ ಪಾಕಿಕೊಂಡು ಬಿಕ್ಕುತ್ತಲಿದ್ದಾನೆ. ಛತ್ರದ ಒಳಗಿನ ಅವಾರದಲ್ಲಿ ಮೂರುವರ್ಷದ ನಡುವಿನ ಕೂಸು ಒಂದೆನವನೇ ಕಿರಿಚಹತ್ತಿದೆ.

ಕಿರಿಚುವ ಕೂಸು ಹೊರಗೆ ಬರುವಂತಿಲ್ಲ, ಹೊರಗಿನ ಮಕ್ಕಳು ಒಳಗೆ ಹೋಗುವಂತಿಲ್ಲ. ಆ ಅನ್ನಛತ್ರವಿರಿಸಿದವರು ಪಾಕಿಕೊಂಡ ನಿರ್ಬಂಧ ಮುರಿಯಲಾಗದಂತಹದಲ್ಲವೆ?

ಶಿವನೇ ಗತಿ!

ವಿವರವಾಗಿಯೂ ಜಟಿಲವಾಗಿಯೂ ಇರುವುದು, ಆ ಭಾಷೆಯ ಸ್ವರೂಪ-ಸ್ವಭಾವಗಳನ್ನು ಹಚ್ಚಾಗಿ ಅಭ್ಯಾಸ ಮಾಡಿರುವುದನ್ನು ಮಾತ್ರ ತೋರಿಸುತ್ತದೆ. 'ವ್ಯಾಕರಣಕಾರರು ಭಾಷೆಯ ಮೇಲೆ ನಿಯಮಗಳನ್ನು ಹೇರುವರು,' ಎಂಬ ಕಲ್ಪನೆಯೇ ತಪ್ಪಾಗಿದೆ. ಭಾಷೆಯಲ್ಲಿರುವ ನಿಯಮಗಳನ್ನು ಅವರು ಬಿಡಿಸಿ ಹೇಳುವರು. ಒಂದು ಭಾಷೆಯನ್ನು ಚೆಳವಾಗಿ ಅಭ್ಯಾಸ ಮಾಡಿ ಅದರ ಪ್ರತಿಯೊಂದು ವಿವರವನ್ನೂ ಹೇಳಿದರೆ, ಆ ಭಾಷೆಯು ಬಳಕೆಯ ಭಾಷೆಯೇ ಅಲ್ಲವೆನ್ನುವುದು ಶಾಸ್ತ್ರೀಯವೆನಿಸುವುದಿಲ್ಲ. ವಾಙ್ಮಯವು ಜಗತ್ತಿನ ಎಲ್ಲ ಭಾಷೆಗಳೂ ಹೀಗಿರುವುದರಿಂದ, ಅವೆಲ್ಲವೂ ಬಳಕೆಯಲ್ಲಿರಲಿಲ್ಲವೆನ್ನಬೇಕಾಗುವುದು. ಅಲ್ಲದೆ ವರ್ಣತ್ಯಾಗ, ವರ್ಣಲೋಪ, ವರ್ಣವೃದ್ಧಿಯಂತಹ ಜೀವಂತ ಭಾಷೆಯ ಲಕ್ಷಣಗಳು ಸಂಸ್ಕೃತದಲ್ಲಿ ಹೇರಳವಾಗಿ ದೊರೆಯುತ್ತವೆ. ಆದುದರಿಂದ ಸಂಸ್ಕೃತವು ಆರ್ಯಾವರ್ತದಲ್ಲಿಯ ಶಿಷ್ಟರ ಬಳಕೆಯ ಭಾಷೆಯಾಗಿತ್ತೆನ್ನುವುದು ಸಯುಕ್ತಿಕವೆನಿಸುವುದು. "ಖಾದ ಖಾದೇತಿ ಖಾದತಿ" "ಖಾದತ ಮೋದತಾವತ್ರತೇ" "ಏಹಿಸ್ವಾಗತಾವತ್ರತೇ" ಈ ತರದ ಪ್ರಯೋಗಗಳೂ ಈ ಮಾತನ್ನು ಬಲಪಡಿಸುತ್ತವೆ.

೬. ಮುನಿತ್ರಯರು:— "ಮುನಿತ್ರಯಂ ನಮಸ್ಕೃತ್ಯ" ಎನ್ನದೆ ಭಾರತೀಯರು ಭಾಷೆಯ ಅಭ್ಯಾಸವನ್ನು ಆರಂಭಿಸುವುದಿಲ್ಲ. ಸಂಸ್ಕೃತ ವ್ಯಾಕರಣದ ಎಲ್ಲ ಗ್ರಂಥಕಾರರೂ ಟೀಕಾಕಾರರೂ ಈ ಮುನಿತ್ರಯರ ಅಭಿಪ್ರಾಯವನ್ನು ವಿವರಿಸುವುದೂ ಸಮರ್ಥಿಸುವುದೂ ತಮ್ಮ ಉದ್ದೇಶವೆಂದು ಸಾರಿದ್ದಾರೆ. ಮುನಿತ್ರಯರು ಭಾಷೆಯ ಎಲ್ಲ ಸಮಸ್ಯೆಗಳನ್ನೂ ಚರ್ಚಿಸಿ ಸಿದ್ಧಾಂತಗಳನ್ನು ಬರೆದಿಟ್ಟಿರುವುದರಿಂದ, ಮುಂದಿನವರಿಗೆ ಚರ್ಚಿಸಬೇಕಾದ ಸಮಸ್ಯೆಗಳೇ ಉಳಿದಿರಲಿಲ್ಲ. ಜಗತ್ತಿನ ವ್ಯಾಕರಣ ಕರ್ತೃಗಳಲ್ಲಿಯೆ ಶ್ರೇಷ್ಠನೆನಿಸಿಕೊಂಡ ಪಾಣಿನಿಯು ಇವರಲ್ಲಿ ಮೊದಲಿನವನು.

**ಪಾಣಿನಿ, ಚಂದ್ರ, ಜೈನೇಂದ್ರ, ಶಾಕಟಾಯನ, ಹೇಮಚಂದ್ರ, ಕಾತಂತ್ರ, ಸಾರಸ್ವತ, ಬೋಪದೇವ, ಜೋಮರ್ಸ, ಸೌಪದ್ಮ,** ಈ ಮೊದಲೇ ಹೇಳಿದ **ಆಪಿಶಾಲಿ ಮಸ್ತು ಕಾಶಕೃತ್ಸ್ನ**ರನ್ನು ಕೂಡಿಸಿದರೆ ಒಟ್ಟು ಹನ್ನೆರಡು ವ್ಯಾಕರಣ ಪದ್ಧತಿಗಳು ಭಾರತದಲ್ಲಿ ಪ್ರಚಾರದಲ್ಲಿ ಬಂದಿವೆ.

ಇಂದ್ರಶ್ಚಂದ್ರಃ ಕಾಶಕೃತ್ಸ್ನಾಪಿಶಾಲೀ ಶಾಕಟಾಯನಃ।
ಪಾಣಿನ್ಯಮರ ಜೈನೇಂದ್ರಾ ಜಯಂತ್ಯಷ್ಟಾದಿ ಶಾಬ್ದಿಕಾಃ ॥

ಎಂಬ 'ಕವಿಕಲ್ಪದ್ರುಮ'ದಲ್ಲಿಯ ಹೇಳಿಕೆಯಂತೆ "ಅಮರ" ಎಂಬ ಇನ್ನೊಂದು ಪದ್ಧತಿಯು ಇರುವುದು ಕಂಡುಬರುತ್ತದೆ. ಇವುಗಳಲ್ಲಿ ಹೇಮಚಂದ್ರನನ್ನು ಬಿಟ್ಟರೆ ಉಳಿದ ಎಲ್ಲ ವ್ಯಾಕರಣಕಾರರ ಮೇಲೆಯೂ ಪಾಣಿನಿಯ ಪ್ರಭಾವವಾಗಿದೆ. ಪಾಣಿನಿಯ ಇಡಿ ಪದ್ಧತಿಯು, ಶಿವನು ತಾಂಡವವಾಡುವಾಗ ಡಮರುವಿನಿಂದ ಹೊಂಟ ಹದಿನಾಲ್ಕು ಸೂತ್ರಗಳನ್ನು ಅವಲಂಬಿಸಿದೆ. ಅವನು ಇವುಗಳ ಮೇಲೆ ಆಶ್ಚರ್ಯಕರವಾದ ರೀತಿಯಲ್ಲಿ ತನ್ನ ವ್ಯಾಕರಣವನ್ನು ಕಟ್ಟಿರುವನು. ಅನೇಕ ಹೊಸ ಪಾರಿಭಾಷಿಕ ಪದಗಳನ್ನೂ ಹೊಸ ರೀತಿಯನ್ನೂ ಅನುಸರಿಸಿದ್ದರೂ, ಹಿಂದಿನವರ ಮುಖ್ಯಾಂಶಗಳನ್ನೆ ಅರಗಿಸಿಕೊಂಡಿರುವನು. ಇವನ ಅಷ್ಟಾಧ್ಯಾಯಿಯು ಎಲ್ಲ ದೃಷ್ಟಿಯಿಂದಲೂ ಪರಿಪೂರ್ಣವಾದ ಗ್ರಂಥವಾಗಿದೆ. ಸುಮಾರು ಕ್ರಿಸ್ತ ಪೂರ್ವ ೬೦೦ರಲ್ಲಿ ಇದನ್ನು ಬರೆದನು. ಇವನು ತನ್ನ ಪಾಂಡಿತ್ಯದ ಸಾಮರ್ಥ್ಯದಿಂದ ಪ್ರತಿಯೊಂದು ಪದಕ್ಕೂ ಮೂಲಧಾತುವನ್ನು ಹುಡುಕಿ ತೆಗೆದಿದ್ದಾನೆ. ಪ್ರತಿಯೊಂದು ಧಾತುವೂ ಒಂದು ಕ್ರಿಯೆಯನ್ನು ಹೇಳುವುದು, ವ್ಯಾಕ್ಯವೇ ಭಾಷೆಯ ಮೂಲವೆಂದು ಇವನು ಪ್ರತಿಪಾದಿಸುತ್ತಾನೆ. ಅಷ್ಟಾಧ್ಯಾಯಿಯಲ್ಲದೆ ಧಾತುಪಾಠ, ಉಣಾದಿ ಸೂತ್ರಗಳೂ ಪಾಣಿನಿಯ ಕೃತಿಗಳು.

ಪಾಣಿನಿಯು ಕಾಲಕ್ಕೆ ಸಂಸ್ಕೃತವಿನ್ನೂ ಒಳಕೆಯಲ್ಲಿದ್ದಿತು. ಆದುದರಿಂದ ಅದರಲ್ಲಾದ ಬದಲಾವಣೆಗಳಿಗನುಸರಿಸಿ ನಿಯಮಗಳನ್ನು ತಿದ್ದಿ, ಕಾತ್ಯಾಯನನು ವಾರ್ತಿಕ ಬರೆದು, ಅವುಗಳನ್ನು ವ್ಯಾಕರಣಕ್ಕೆ ಅಂಕಿತ ಪಡಿಸಲು ಪ್ರಯತ್ನಿಸಿದನು. ಅವನ ಉದ್ದೇಶವು ಹೀಗೆ ನಿಯಮಿತವಿದ್ದುದರಿಂದ, ಅವಶ್ಯಕವೆನಿಸಿದ ೧೫೦೦ ಸೂತ್ರಗಳಿಗಷ್ಟೇ ವಾರ್ತಿಕ ಬರೆದಿದ್ದಾನೆ. ಅವನ ಕೆಲವು ವಾರ್ತಿಕಗಳು ಪದ್ಯರೂಪದಲ್ಲಿವೆ. ಕಾತ್ಯಾಯನನಂತೆ ಇನ್ನು ಕೆಲವರು ವಾರ್ತಿಕಕಾರರಿರಬಹುದೆಂದು ಊಹಿಸಲು ಅವಕಾಶವಿದೆ 'ಏಕೇ' 'ಕೇಚಿತ್' ಇವು ಅಂಧವರನ್ನು ಉಲ್ಲೇಖಿಸುತ್ತವೆನ್ನಬಹುದು.

ಪಾಣಿನಿಯನಂತರ ಪತಂಜಲಿಯು ಹೆಸರು ಸಂಸ್ಕೃತ ವ್ಯಾಕರಣಕಾರರಲ್ಲಿಯೆ ದೊಡ್ಡದು. ಅವನ ಮಹಾಭಾಷ್ಯವು ವ್ಯಾಕರಣದ ಎಲ್ಲ ಅಂಗಗಳನ್ನೂ ವಿವರವಾಗಿಯೂ ಶಾಸ್ತ್ರೀಯವಾಗಿಯೂ ಚರ್ಚಿಸುವ ಅದ್ಭುತ ಗ್ರಂಥವಾಗಿದೆ. "ಮಹಾಭಾಷ್ಯಂ ವಾ ಪಾತನೀಯಂ, ಮಹಾರಾಜ್ಯಂ ವಾ ಪಾಲನೀಯಮ್" ಎಂಬ ಗಾದೆಯು ಈ ಗ್ರಂಥದ ಮಹತ್ತ್ವವನ್ನು ನಿದರ್ಶನಕ್ಕೆ ತಂದುಕೊಡುತ್ತದೆ. ಸುಮಾರು ಕ್ರಿಸ್ತ ಪೂರ್ವ ೧೫೦ರಲ್ಲಿ ಪತಂಜಲಿಯು ಈ ಗ್ರಂಥವನ್ನು ಬರೆದನು. ಕಾತ್ಯಾಯನನನ್ನೆ ಖಂಡಿಸಿ ಪಾಣಿನಿಯನ್ನು ಅನೇಕ ಕಡೆಗೆ ಸಮರ್ಥಿಸುವದರಲ್ಲಿ ಭಾಷ್ಯಕಾರನು ಯಶಸ್ವಿಯಾಗಿದ್ದಾನೆ. ಈ ಗ್ರಂಥದ ಶೈಲಿಯು ಬಹಳ ಸುಂದರವಾಗಿದೆ. ಶಂಕರಾಚಾರ್ಯರ ಶಾರೀರಭಾಷ್ಯವನ್ನು ಬಿಟ್ಟರೆ, ಬೇರೆ ಯಾವ ಗ್ರಂಥವೂ ಶೈಲಿಯಲ್ಲಿ ಇದನ್ನು ಹೋಲುವುದಿಲ್ಲ. ಪತಂಜಲಿಯೂ ಪಾಣಿನಿಯ ಎಲ್ಲ ಸೂತ್ರಗಳಿಗೆ ಭಾಷ್ಯವನ್ನು ಬರೆದಿಲ್ಲ. ಕಾತ್ಯಾಯನನು ಖಂಡಿಸಿದಲ್ಲಿ, ವಿವರವು ಅವಶ್ಯಕವೆನಿಸಿದಲ್ಲಿ ಬರೆದಿದ್ದಾನೆ.

ಹೀಗೆ ಈ ಮುನಿತ್ರಯರು ಸಂಸ್ಕೃತಭಾಷೆಯ ವ್ಯಾಕರಣಕ್ಕೆ ಭಾಷೆಯ ಅಭ್ಯಾಸಕ್ಕೆ ಸ್ವತಂತ್ರರೂಪವನ್ನು ಕೊಟ್ಟರು. ಆಗ ಆ ಭಾಷೆಯಲ್ಲಿ ಉಪಲಬ್ಧವಿರುವ ಎಲ್ಲ ವಾಙ್ಮಯವನ್ನೂ ಆಳವಾಗಿ ಅಭ್ಯಾಸಮಾಡಿ, ತಮ್ಮ ಪ್ರತಿಭೆಯ ಬಲದಿಂದ ಭಾಷೆಯ ಅಭ್ಯಾಸಕ್ಕೆ ನಿಶ್ಚಿತರೂಪವನ್ನು ಕೊಟ್ಟರು. ಭಾಷಾವಿಜ್ಞಾನದ ಮೂಲಭೂತ ಸಮಸ್ಯೆಗಳನ್ನು ಬಹುಮಟ್ಟಿಗೆ ಚರ್ಚಿಸಿದರು.

---

# ದೇವಿಯವರು

( ಕಣ್ಣ ಕತೆ )

ಶ್ರೀ. ಕೆ. ಅಶ್ವತ್ಥನಾರಾಯಣರಾವ್, ಬನಾರಸ

★

ಸಂಪ್ರದಾಯಪ್ರಿಯ ಸಮಾಜದಲ್ಲಿ ದೇವಿಯವರಂತಹ ದೇವಿಯರು ಎಲ್ಲೆಲ್ಲಿಯೂ ನೋಡಲು ಸಿಕ್ಕುತ್ತಾರೆ. ಉಣ್ಣುವ ಜನ-ಜಂಗುಳಿಯನ್ನು ಹೊಡೆದುಹಾಕಿ, ಉಣ್ಣದ ದೇವರ ಗೊಂಬೆಗೆ ಕೂಳಕೋಟೆ ಕಟ್ಟುವುದೇ ಇವರಿಗೆ ಇಹ-ಪರಗಳ ಧರ್ಮ.

★

ಸುಮಾರು ಒಂಬೈನೂರ ನಲವತ್ತು ನಾಲ್ಕರಲ್ಲಿ ಮಹಾರಾಜ ರಾಜೇಶ್ರೀ ಸಿರಿಯೂರು ನಾರಾಯಣರಾಯರು, ತಮ್ಮ ಧರ್ಮಪತ್ನಿ ಹರಿದ್ರಾ-ಕುಂಕುಮ ಶೋಭಿತರಾದ ಮಾತೃಶ್ರೀ ಅನಸೂಯಾ ದೇವಿಯವರನ್ನೂ ತಮ್ಮಿಬ್ಬರ ಏಕಮಾತ್ರ ಪುತ್ರ ಚಿರಂಜೀವಿ ರಾಜರಾಜೇಶ್ರೀ ವೆಂಕಟೇಶನನ್ನೂ ಹಿಂದಿಬಿಟ್ಟು ಅಕಸ್ಮಾತ್ತಾಗಿ ಪರಂಧಾಮವನ್ನೇರಿದರು. ಆಗ ದೇವಿಯವರಿಗೆ ನಲವತ್ತು ವರ್ಷ ವಯಸ್ಸು; ವೆಂಕಟೇಶನಿಗೆ ಮೂರು. ಈ ದಂಪತಿಗಳು ಬಹಳ ಕಾಲ ಮಕ್ಕಳಿಲ್ಲದೆ ಹರಕೆ ಕಟ್ಟಿ, ಪುಣ್ಯತೀರ್ಥಗಳಿಗೆ ಯಾತ್ರೆ ಮಾಡಿ, ದಕ್ಷಿಣದಲ್ಲಿ ರಾಮೇಶ್ವರದಿಂದ ಉತ್ತರದಲ್ಲಿ ಬದರೀನಾಥದವರೆಗಿನ ಪ್ರಸಿದ್ಧ ದೇವಾಲಯಗಳಲ್ಲೆಲ್ಲ ನಂದಾದೀಪಕ್ಕೆ ಏರ್ಪಾಡುಗಳನ್ನು ಮಾಡಿ, ಅನೇಕ ಸಿದ್ಧರ ಶುಶ್ರೂಷೆ ಮಾಡಿ, ಈ ಪುತ್ರರತ್ನವನ್ನು ವರಪ್ರಸಾದವನ್ನಾಗಿ ಪಡೆದಿದ್ದರು.

ಸ್ವರ್ಗವಾಸಿ ಸಿರಿಯೂರರು ಜೀವನದಲ್ಲಿ ಎಂಜನಿಯರ್ ಮತ್ತು ಕಂಟ್ರಾಕ್ಟರ್. ಇಪ್ಪತ್ತು ವರ್ಷಗಳ ಕೆಳಗೇ ಬೊಂಬಾಯಿಗೆ ಬಂದಿದ್ದು, ತಮ್ಮ ಉದ್ಯೋಗವನ್ನು ಮೊದಲು ಮಾಡಿದ್ದುದರಿಂದ, ಸಾಯುವ ವೇಳೆಗೆ ಇಂಪೀರಿಯಲ್ ಬ್ಯಾಂಕಿನಲ್ಲಿ ಹಿಂದು ಲಕ್ಷ ರೂಪಾಯಿ ಕೂಡಿಸಿಟ್ಟುದಲ್ಲದೆ, ದಾದರಿನಲ್ಲಿ ಮೂರು ಅಂತಸ್ತಿನ ಮನೆಯೊಂದನ್ನೂ ಕಟ್ಟಿದ್ದರು. ಈ ಮನೆಯ ಕೆಳೆಯ ಅಂತಸ್ತಿನಲ್ಲಿ ಅವರು ವಾಸವಾಗಿದ್ದು, ಬಾಕಿಯದನ್ನು ಬಾಡಿಗೆಗೆ ಕೊಟ್ಟಿದ್ದುದರಿಂದ, ಬಾಡಿಗೆಯ ರೂಪದಲ್ಲಿ ತಿಂಗಳಿಗೆ ಇನ್ನೂರು ಐವತ್ತು ರೂಪಾಯಿ ವರಮಾನವೂ ಇತ್ತು. ಇದರ ಜತೆಗೆ ರಾಯರು ಕೊಂಡಿದ್ದ ಷೇರುಗಳಿಂದ ಸರಾಸರಿ ತಿಂಗಳಿಗೆ ಇನ್ನೂರು ರೂಪಾಯಿಗಳು ಸಂದಾಯವಾಗುತ್ತಿದ್ದುವು.

ಹೀಗೆಂದ ಮೇಲೆ, ರಾಯರು ಇಲ್ಲವಾದರೂ ಅವರ ಸಂಸಾರಕ್ಕೇನು ಕಷ್ಟದಶೆ ಬರಲಿಲ್ಲ. ಸಂಸಾರದ ಜವಾಬ್ದಾರಿಯನ್ನು ಕಡಿಮೆ ಮಾಡುವ ಅಗತ್ಯವೂ ಒದಗಲಿಲ್ಲ. ಆಳುಗಳು, ಅಡಿಗೆಯವರು, ಸೋಟಾರುಕಾರು ಎಲ್ಲಾ ಎಂದಿನಂತೆಯೆ ಇದ್ದುವು. ರಾಯರ ತರುವಾಯ ಈ ಮನೆ, ಹಣಗಳ ಮೇಲ್ವಿಚಾರಣೆ ದೇವಿಯವರ ಮೇಲೆ ಬಿದ್ದಿತು. ಅವರು ಅದನ್ನು ದಕ್ಷತೆಯಿಂದ ನಡೆಯಿಸಿಕೊಂಡು ಹೋಗುತ್ತಿದ್ದರು. ರಾಯರು ಇಲ್ಲವಾಗಲು, ಮನೆಯನ್ನು ಮಾರಿಕೊಂಡು, ಅವರ ಊರು ಮೈಸೂರಿಗೆ ಹೋಗುವ ಯೋಚನೆಯನ್ನು ಮಾಡದಿರಲಿಲ್ಲವಾಗಿತ್ತು. ಆದರೆ ಇಷ್ಟು ವರ್ಷ ಬೊಂಬಾಯಿಯಲ್ಲೇ ಇದ್ದು ಕೇವಲ ಸ್ಥಳಿಕರಂತೆಯೆ ಆಗಿಬಿಟ್ಟಿದ್ದುದರಿಂದ, ಇಲ್ಲಿಯೆ ನೆಲಸಲು ಅವರು ಮನಸ್ಸು ಮಾಡಿದರು.

ದೇವಿಯವರು ಇಷ್ಟು ವರ್ಷಗಳನ್ನು ಬೊಂಬಾಯಿಯಂತಹ ವಿಶ್ರಪಟ್ಟಣದಲ್ಲಿ ಕಳೆದಿದ್ದರೂ ಅಲ್ಲಿಯ ನವೀನತೆಗೆ ಮನ ಸೋತಿರಲಿಲ್ಲ. ಅಲ್ಲಿಯ ಜೀವನಸಮುದ್ರದಲ್ಲಿ ಅವರ ಸಂಸಾರವು ಒಂದು ದೀಪದಂತೆ. ಅವರು ತಮ್ಮ ಹಳೆಯ ಸಂಪ್ರದಾಯಗಳನ್ನು ಅಚ್ಚಳಿಯದೆ ನಡೆಯಿಸಿಕೊಂಡು ಬಂದಿದ್ದರು; ಆಲ್ಲದೆ ವರ್ಷ ವರ್ಷ ಕಳೆದಂತೆಲ್ಲ ಅವರ ಆಚಾರ ನಿಯಮಗಳು ಹೆಚ್ಚು ಹೆಚ್ಚು ಬಿಗಿಯಾಗತೊಡಗಿದುವು. ಅವರ ಕೃಶವಾದ ಶರೀರ, ನರಳುತ್ತಿದ್ದ ಕೂದಲು, ಕಷ್ಟವಾದ ಮತ್ತು ಪದೇಪದೇ ಬರುವ ಪ್ರತಿಗಳು ದೇಹದ ಮೇಲೆ ಯಾವ ಪರಿಣಾಮವನ್ನು ಉಂಟುಮಾಡಬಹುದೆಂದು ಸೂಚಿಸುವಂತಿದ್ದುವು. ಅವರ ಅಳವಾದ ಕಣ್ಣುಗಳು, ನಿದ್ದೆ ನುಂಗುವ ಜಾಗರಣೆ-ಧನುರ್ಮಾಸಾದಿಗಳ ಬವಣೆಯನ್ನು ತೋರಿಸುತ್ತಿದ್ದುವು. ಅವರ ಚಿನ್ನದಂಚಿನ ಕನ್ನಡಕವನ್ನು ನೋಡಿದಾಗ, ನಿತ್ಯ ಸಹಸ್ರನಾಮ, ಪುರಾಣ-ಪಾರಾಯಣಾದಿಗಳ ನೆನಪು ಬಾರದಿರುತ್ತಿರಲಿಲ್ಲ. ಅವರು ಉಡುತ್ತಿದ್ದ ಕೆಲವು ಅಂಚಿನ ಮಾಸಲು ಬಣ್ಣದ ರೇಶ್ಮೆ ಸೀರೆಯು, ಅವರ 'ಮಡಿ'ಗೆ ಕುರುಹಾಗಿದ್ದಿತು.

ದೇವಿಯವರ ಮನೆಯಲ್ಲಿ ಬೆಳಗ್ಗೆ ಸಂಜೆ ತಪ್ಪದೆ ದೇವರಪೂಜೆ ಮಂಗಳಾರತಿಗಳು ನಡೆಯುತ್ತ ಹಲವು ಹತ್ತು ವರ್ಷಗಳಾಗಿದ್ದುವು. ಸಂಸಾರದ ಮೊದಲಿನಲ್ಲಿ ಹಚ್ಚಿದ ತುಪ್ಪದ ದೀಪವು ಇಂದಿ ಇಲ್ಲಿಯವರೆಗೂ ಉರಿಯುತ್ತಿದ್ದಿತು. ಮೈಸೂರಿನ ಪಂಚಾಂಗದಲ್ಲಿಯ ಪ್ರಥಮ ಮತ್ತು ಸಾಮಾನ್ಯ ಏಕಾದಶಿಗಳು—ಕೆಲವು ಸಮಯದಲ್ಲಿ ಜಂಟಿ ಏಕಾದಶಿಗಳು—, ನೃಸಿಂಹ ಜಯಂತಿ, ಶಂಕರ ಜಯಂತಿ ಮೊದಲಾದ ಜಯಂತಿಗಳು, ವರಸಿದ್ಧಿವಿನಾಯಕ ವ್ರತ, ವರಮಹಾಲಕ್ಷ್ಮೀ ವ್ರತ ಮೊದಲಾದ ವ್ರತಗಳು, ನಂಜನಗೂಡು, ಮೇಲುಕೋಟೆ ಮೊದಲಾದ ರಥಜಾತ್ರೆಗಳು, ಮಂತ್ರಾಚಾರ್ಯರ ಜನ್ಮ-ಪುಣ್ಯ ದಿನಗಳು, ನಾಗ ಪಂಚಮಿ, ಸಿರಿಯಾಳ ಷಷ್ಠಿ, ರಥಸಪ್ತಮಿ, ಜನ್ಮಾಷ್ಟಮಿ, ನವಮಿ, ವಿಜಯದಶಮಿ ಮೊದಲಾದ ಅನೇಕಾನೇಕ

ವಿಸ್ತರವಾಗಿಯೂ ಜಟಿಲವಾಗಿಯೂ ಇರುವುದು, ಆ ಭಾಷೆಯ ಸ್ವರೂಪ-ಸ್ವಭಾವಗಳನ್ನು ಪರ್ಯಾಲೋಚಿಸಿ ಅಭ್ಯಾಸ ಮಾಡಿರುವುದನ್ನು ಮಾತ್ರ ತೋರಿಸುತ್ತದೆ. 'ವ್ಯಾಕರಣಕಾರರು ಭಾಷೆಯ ಮೇಲೆ ನಿಯಮಗಳನ್ನು ಹೇರುವರು,' ಎಂಬ ಕಲ್ಪನೆಯೇ ತಪ್ಪಾಗಿದೆ. ಭಾಷೆಯಲ್ಲಿರುವ ನಿಯಮಗಳನ್ನು ಅವರು ಬಿಡಿಸಿ ಹೇಳುವರು. ಒಂದು ಭಾಷೆಯನ್ನು ಚೆಳವಾಗಿ ಅಭ್ಯಾಸ ಮಾಡಿ ಅದರ ಪ್ರತಿಯೊಂದು ವಿವರವನ್ನೂ ಹೇಳಿದರೆ, ಆ ಭಾಷೆಯು ಬಳಕೆಯ ಭಾಷೆಯೇ ಅಲ್ಲವೆನ್ನುವುದು ಶಾಸ್ತ್ರೀಯವೆನಿಸುವುದಿಲ್ಲ. ವಾಙ್ಮಯವು ಜಗತ್ತಿನ ಎಲ್ಲ ಭಾಷೆಗಳೂ ಹೀಗಿರುವುದರಿಂದ, ಅವೆಲ್ಲವೂ ಬಳಕೆಯಲ್ಲಿರಲಿಲ್ಲವೆನ್ನಬೇಕಾಗುವುದು. ಅಲ್ಲದೆ ವರ್ಣತ್ಯಾಗ, ವರ್ಣಲೋಪ, ವರ್ಣವೃದ್ಧಿಯಂತಹ ಜೀವಂತ ಭಾಷೆಯ ಲಕ್ಷಣಗಳು ಸಂಸ್ಕೃತದಲ್ಲಿ ಹೇರಳವಾಗಿ ದೊರೆಯುತ್ತವೆ. ಆದುದರಿಂದ ಸಂಸ್ಕೃತವು ಆರ್ಯಾವರ್ತದಲ್ಲಿಯ ಶಿಷ್ಟರ ಬಳಕೆಯ ಭಾಷೆಯಾಗಿತ್ತೆನ್ನುವುದು ಸಯುಕ್ತಿಕವೆನಿಸುವುದು. "ಖಾದ ಖಾದೇತಿ ಖಾದತಿ" "ಖಾದತ ಮೋದತಾನರ್ತತೇ" "ಏಹಿಸ್ವಾಗತಾವರ್ತತೇ" ಈ ತರದ ಪ್ರಯೋಗಗಳೂ ಈ ಮಾತನ್ನು ಬಲಪಡಿಸುತ್ತವೆ.

೬. ಮುನಿತ್ರಯರೆಂದರು:— "ಮುನಿತ್ರಯಂ ನಮಸ್ಕೃತ್ಯ" ಎನ್ನದೆ ಭಾರತೀಯರು ಭಾಷೆಯ ಅಭ್ಯಾಸವನ್ನು ಪ್ರಾರಂಭಿಸುವುದಿಲ್ಲ. ಸಂಸ್ಕೃತ ವ್ಯಾಕರಣದ ಎಲ್ಲ ಗ್ರಂಥಕಾರರೂ ಟೀಕಾಕಾರರೂ ಈ ಮುನಿತ್ರಯರ ಅಧಿಪ್ರಾಯವನ್ನು ವಿವರಿಸುವುದೂ ಸಮರ್ಥಿಸುವುದೂ ತಮ್ಮ ಉದ್ದೇಶವೆಂದು ಸಾರಿದ್ದಾರೆ. ಮುನಿತ್ರಯರು ಭಾಷೆಯ ಎಲ್ಲ ಸಮಸ್ಯೆಗಳನ್ನೂ ಚರ್ಚಿಸಿ ಸಿದ್ಧಾಂತಗಳನ್ನು ಬರೆದಿಟ್ಟಿರುವುದರಿಂದ, ಮುಂದಿನವರಿಗೆ ಚರ್ಚಿಸಬೇಕಾದ ಸಮಸ್ಯೆಗಳೆ ಉಳಿದಿರಲಿಲ್ಲ. ಜಗತ್ತಿನ ವ್ಯಾಕರಣ ಕರ್ತೃಗಳಲ್ಲಿಯೆ ಶ್ರೇಷ್ಠನೆನಿಸಿಕೊಂಡ ಪಾಣಿನಿಯು ಇವರಲ್ಲಿ ಮೊದಲಿನವನು.

ಪಾಣಿನಿ, ಚಂದ್ರ, ಜೈನೇಂದ್ರ, ಶಾಕಟಾಯನ, ಹೇಮಚಂದ್ರ, ಕಾತಂತ್ರ, ಸಾರಸ್ವತ, ಬೋಪದೇವ, ಜೋಮರ, ಸೌಪದ್ಮ, ಈ ಮೊದಲೇ ಹೇಳಿದ ಆಪಿಶಾಲಿ ಮುಸ್ತು ಕಾಶಕೃತ್ಸ್ನರನ್ನು ಕೂಡಿಸಿದರೆ ಒಟ್ಟು ಹನ್ನೆರಡು ವ್ಯಾಕರಣ ಪದ್ಧತಿಗಳು ಭಾರತದಲ್ಲಿ ಪ್ರಚಾರದಲ್ಲಿ ಬಂದಿವೆ.

ಇಂದ್ರಶ್ಚಂದ್ರೋ ಕಾಶಕೃತ್ಸ್ನಾಪಿಶಾಲೀ ಶಾಕಟಾಯನಃ।
ಪಾಣಿನ್ಯಮರ ಜೈನೇಂದ್ರಾ ಜಯತ್ಯಷ್ಟಾದಿ ಶಾಬ್ದಿಕಾಃ ॥

ಎಂಬ 'ಕವಿಕಲ್ಪದ್ರುಮ'ದಲ್ಲಿಯ ಹೇಳಿಕೆಯಂತೆ "ಅಮರ" ಎಂಬ ಇನ್ನೊಂದು ಪದ್ಧತಿಯು ಇರುವುದು ಕಂಡುಬರುತ್ತದೆ. ಇವುಗಳಲ್ಲಿ ಹೇಮಚಂದ್ರನನ್ನು ಬಿಟ್ಟರೆ ಉಳಿದ ಎಲ್ಲ ವ್ಯಾಕರಣಕಾರರ ಮೇಲೆಯೂ ಪಾಣಿನಿಯ ಪ್ರಭಾವವಾಗಿದೆ. ಪಾಣಿನಿಯ ಇಡಿ ಪದ್ಧತಿಯು, ಶಿವನು ತಾಂಡವವಾಡುವಾಗ ಡಮರುವಿನಿಂದ ಹೊರಟ ಹದಿನಾಲ್ಕು ಸೂತ್ರಗಳನ್ನು ಅವಲಂಬಿಸಿದೆ. ಅವನು ಇವುಗಳ ಮೇಲೆ ಆಶ್ಚರ್ಯಕರವಾದ ರೀತಿಯಲ್ಲಿ ತನ್ನ ವ್ಯಾಕರಣವನ್ನು ಕಟ್ಟಿರುವನು. ಅನೇಕ ಹೊಸ ಪಾರಿಭಾಷಿಕ ಪದಗಳನ್ನೂ ಹೊಸ ರೀತಿಯನ್ನೂ ಅನುಸರಿಸಿದ್ದರೂ, ಹಿಂದಿನವರ ಮುಖ್ಯಾಂಶಗಳನ್ನೆ ಆರಿಸಿಕೊಂಡಿರುವನು. ಇವನ ಅಷ್ಟಾಧ್ಯಾಯಿಯು ಎಲ್ಲ ದೃಷ್ಟಿಯಿಂದಲೂ ಪರಿಪೂರ್ಣವಾದ ಗ್ರಂಥವಾಗಿದೆ. ಸುಮಾರು ಕ್ರಿಸ್ತ ಪೂರ್ವ ೬೦೦ರಲ್ಲಿ ಇದನ್ನು ಬರೆದನು. ಇವನು ತನ್ನ ಪಾಂಡಿತ್ಯದ ಸಾಮರ್ಥ್ಯದಿಂದ ಪ್ರತಿಯೊಂದು ಪದಕ್ಕೂ ಮೂಲಧಾತುವನ್ನು ಹುಡುಕಿ ತೆಗೆದಿದ್ದಾನೆ. ಪ್ರತಿಯೊಂದು ಧಾತುವೂ ಒಂದು ಕ್ರಿಯೆಯನ್ನು ಹೇಳುವುದು. ವ್ಯಾಕ್ಯವೇ ಭಾಷೆಯ ಮೂಲವೆಂದು ಇವನು ಪ್ರತಿಪಾದಿಸುತ್ತಾನೆ. ಅಷ್ಟಾಧ್ಯಾಯಿಯಲ್ಲದೆ ಧಾತುಪಾಠ, ಉಣಾದಿ ಸೂತ್ರಗಳೂ ಪಾಣಿನಿಯ ಕೃತಿಗಳು.

ಪಾಣಿನಿಯು ಕಾಲಕ್ಕೆ ಸಂಸ್ಕೃತವನ್ನೂ ಒಳಕೆಯಲ್ಲಿದ್ದಿತು. ಆದುದರಿಂದ ಆದರಲ್ಲಾದ ಬದಲಾವಣೆಗಳಿಗನುಸರಿಸಿ ನಿಯಮಗಳನ್ನು ತಿದ್ದಿ, ಕಾತ್ಯಾಯನನು ವಾರ್ತಿಕ ಬರೆದು, ಅವುಗಳನ್ನು ವ್ಯಾಕರಣಕ್ಕೆ ಅಂಕಿತ ಪಡಿಸಲು ಪ್ರಯತ್ನಿಸಿದನು. ಅವನ ಉದ್ದೇಶವು ಹೀಗೆ ನಿಯಮಿತವಿದ್ದುದರಿಂದ, ಅವಶ್ಯಕವೆನಿಸಿದ ೧೫೦೦ ಸೂತ್ರಗಳಿಗಷ್ಟೇ ವಾರ್ತಿಕ ಬರೆದಿದ್ದಾನೆ. ಅವನ ಕೆಲವು ವಾರ್ತಿಕಗಳು ಪದ್ಯರೂಪದಲ್ಲಿವೆ. ಕಾತ್ಯಾಯನನಂತೆ ಇನ್ನು ಕೆಲವರು ವಾರ್ತಿಕಕಾರರಿರಬಹುದೆಂದು ಊಹಿಸಲು ಅವಕಾಶವಿದೆ. 'ಏಕೇ' 'ಕೇಚಿತ್.' ಇವು ಅಂಥವರನ್ನು ಉಲ್ಲೇಖಿಸುತ್ತವೆನ್ನಬಹುದು.

ಪಾಣಿನಿಯನಂತರ ಪತಂಜಲಿಯು ಹೆಸರು ಸಂಸ್ಕೃತ ವ್ಯಾಕರಣಕಾರರಲ್ಲಿಯೆ ದೊಡ್ಡದು. ಅವನ ಮಹಾಭಾಷ್ಯವು ವ್ಯಾಕರಣದ ಎಲ್ಲ ಅಂಗಗಳನ್ನೂ ವಿವರವಾಗಿಯೂ ಶಾಸ್ತ್ರೀಯವಾಗಿಯೂ ಚರ್ಚಿಸುವ ಅದ್ಭುತ ಗ್ರಂಥವಾಗಿದೆ. "ಮಹಾಭಾಷ್ಯಂ ಪಾಪಾತನೀಯಂ, ಮಹಾರಾಜ್ಯಂ ವಾ ಪಾಲನೀಯಂ" ಎಂಬ ಗಾದೆಯು ಈ ಗ್ರಂಥದ ಮಹತ್ವವನ್ನು ನಿದರ್ಶನಕ್ಕೆ ತಂದುಕೊಡುತ್ತದೆ. ಸುಮಾರು ಕ್ರಿಸ್ತ ಪೂರ್ವ ೧೫೦ರಲ್ಲಿ ಪತಂಜಲಿಯು ಈ ಗ್ರಂಥವನ್ನು ಬರೆದನು. ಕಾತ್ಯಾಯನನನ್ನು ಖಂಡಿಸಿ ಪಾಣಿನಿಯನ್ನು ಅನೇಕ ಕಡೆಗೆ ಸಮರ್ಥಿಸುವದರಲ್ಲಿ ಭಾಷ್ಯಕಾರನು ಯಶಸ್ವಿಯಾಗಿದ್ದಾನೆ. ಈ ಗ್ರಂಥದ ಶೈಲಿಯು ಬಹಳ ಸುಂದರವಾಗಿದೆ. ಶಂಕರಾಚಾರ್ಯರ ಶಾರೀರಭಾಷ್ಯವನ್ನು ಬಿಟ್ಟರೆ, ಬೇರೆ ಯಾವ ಗ್ರಂಥವೂ ಶೈಲಿಯಲ್ಲಿ ಇದನ್ನು ಹೋಲುವುದಿಲ್ಲ. ಪತಂಜಲಿಯೂ ಪಾಣಿನಿಯ ಎಲ್ಲ ಸೂತ್ರಗಳಿಗೆ ಭಾಷ್ಯವನ್ನು ಬರೆದಿಲ್ಲ. ಕಾತ್ಯಾಯನನು ಖಂಡಿಸಿದಲ್ಲಿ, ವಿವರವು ಅವಶ್ಯಕವೆನಿಸಿದಲ್ಲಿ ಬರೆದಿದ್ದಾನೆ.

ಹೀಗೆ ಈ ಮುನಿತ್ರಯರು ಸಂಸ್ಕೃತಭಾಷೆಯ ವ್ಯಾಕರಣಕ್ಕೆ ಭಾಷೆಯ ಅಭ್ಯಾಸಕ್ಕೆ ಸ್ವತಂತ್ರರೂಪವನ್ನು ಕೊಟ್ಟರು. ಆಗ ಆ ಭಾಷೆಯಲ್ಲಿ ಉಪಲಬ್ಧವಿರುವ ಎಲ್ಲ ವಾಙ್ಮಯವನ್ನೂ ಆಳವಾಗಿ ಅಭ್ಯಾಸಮಾಡಿ, ತಮ್ಮ ಪ್ರತಿಭೆಯ ಬಲದಿಂದ ಭಾಷೆಯ ಅಭ್ಯಾಸಕ್ಕೆ ನಿಶ್ಚಿತರೂಪವನ್ನು ಕೊಟ್ಟರು. ಭಾಷಾವಿಜ್ಞಾನದ ಮೂಲಭೂತ ಸಮಸ್ಯೆಗಳನ್ನು ಬಹುಮಟ್ಟಿಗೆ ಚರ್ಚಿಸಿದರು.

# ದೇವಿಯವರು

( ಸಣ್ಣ ಕತೆ )

ಶ್ರೀ. ಕೆ. ಆಶ್ವತ್ಥನಾರಾಯಣರಾವ್, ಬನಾರಸ

★

ಸಂಪ್ರದಾಯಪ್ರಿಯ ಸಮಾಜದಲ್ಲಿ ದೇವಿಯವರಂತಹ ದೇವಿಯರು ಎಲ್ಲೆಲ್ಲಿಯೂ ನೋಡಲು ಸಿಕ್ಕುತ್ತಾರೆ. ಉಣ್ಣುವ ಜನ-ಜಂಗುಳಿಯನ್ನು ಹೊಡೆದುಹಾಕಿ, ಉಣ್ಣದ ದೇವರ ಗೊಂಬೆಗೆ ಕೂಳಕೋಟೆ ಕಟ್ಟುವುದೇ ಇವರಿಗೆ ಇಹ-ಪರಗಳ ಧರ್ಮ.

★

ಸುಮಾರಿನ ಒಂಭೈನೂರ ನಲವತ್ತು ನಾಲ್ಕರಲ್ಲಿ ಮಹಾರಾಜ ರಾಜೇಶ್ರೀ ಸಿರಿಮೂರು ನಾರಾಯಣರಾಯರು, ತಮ್ಮ ಧರ್ಮಪತ್ನಿ ಹರಿದ್ರಾ-ಕುಂಕುಮ ಶೋಭಿತರಾದ ಮಾತೃಶ್ರೀ ಅನಸೂಯಾ ದೇವಿಯವರನ್ನೂ ತಮ್ಮಿಬ್ಬರ ಏಕಮಾತ್ರ ಪುತ್ರ ಚಿರಂಜೀವಿ ರಾಜರಾಜೇಶ್ರೀ ವೆಂಕಟೇಶನನ್ನೂ ಹಿಂದಬಿಟ್ಟು ಆಕಸ್ಮಾತ್ತಾಗಿ ಪರಂಧಾಮವನ್ನೇರಿದರು. ಆಗ ದೇವಿಯವರಿಗೆ ನಲವತ್ತು ವರ್ಷ ವಯಸ್ಸು; ವೆಂಕಟೇಶನಿಗೆ ಮೂರು. ಈ ದಂಪತಿಗಳು ಬಹಳ ಕಾಲ ಮಕ್ಕಳಿಲ್ಲದೆ ಹರಕೆ ಕಟ್ಟಿ, ಪುಣ್ಯತೀರ್ಥಗಳಿಗೆ ಯಾತ್ರೆ ಮಾಡಿ, ದಕ್ಷಿಣದಲ್ಲಿ ರಾಮೇಶ್ವರದಿಂದ ಉತ್ತರದಲ್ಲಿ ಬದರೀನಾಥದ ಪರಿಸರದ ಪ್ರಸಿದ್ಧ ದೇವಾಲಯಗಳೆಲ್ಲೆಲ್ಲ ನಂದಾದೀಪಕ್ಕೆ ಏರ್ಪಾಡುಗಳನ್ನು ಮಾಡಿ, ಅನೇಕ ಸಿದ್ಧರ ಶುಶ್ರೂಷೆ ಮಾಡಿ, ಈ ಪುತ್ರರತ್ನವನ್ನು ವರಪ್ರಸಾದವನ್ನಾಗಿ ಪಡೆದಿದ್ದರು.

ಸ್ವರ್ಗವಾಸಿ ಸಿರಿಮೂರರು ಜೀವನದಲ್ಲಿ ಎಂಜನಿಯರ್ ಮತ್ತು ಕಂಟ್ರಾಕ್ಟರ್. ಇಪ್ಪತ್ತು ವರ್ಷಗಳ ಕೆಳಗೇ ಬೊಂಬಾಯಿಗೆ ಬಂದಿದ್ದು, ತಮ್ಮ ಉದ್ಯೋಗವನ್ನು ಮೊದಲು ಮಾಡಿದ್ದುದರಿಂದ, ಸಾಯುವ ವೇಳೆಗೆ ಇಂಪೀರಿಯಲ್ ಬ್ಯಾಂಕಿನಲ್ಲಿ ಒಂದು ಲಕ್ಷ ರೂಪಾಯಿ ಕೂಡಿಸಿಟ್ಟುದಲ್ಲದೆ, ದಾದರಿನಲ್ಲಿ ಮೂರು ಅಂತಸ್ತಿನ ಮನೆಯೊಂದನ್ನೂ ಕಟ್ಟಿದ್ದರು. ಈ ಮನೆಯು ಕಡೆಯ ಅಂತಸ್ತಿನಲ್ಲಿ ಅವರು ವಾಸವಾಗಿದ್ದು, ಬಾಕಿಯದನ್ನು ಬಾಡಿಗೆಗೆ ಕೊಟ್ಟಿದ್ದುದರಿಂದ, ಬಾಡಿಗೆಯ ರೂಪದಲ್ಲಿ ತಿಂಗಳಿಗೆ ಇನ್ನೂರು ಐವತ್ತು ರೂಪಾಯಿ ವರಮಾನವೂ ಇತ್ತು. ಇದರ ಜತೆಗೆ ರಾಯರು ಕೊಂಡಿದ್ದ ಷೇರುಗಳಿಂದ ಸರಾಸರಿ ತಿಂಗಳಿಗೆ ಇನ್ನೂರು ರೂಪಾಯಿಗಳು ಸಂದಾಯವಾಗುತ್ತಿದ್ದುವು.

ಹೀಗೆಂದ ಮೇಲೆ, ರಾಯರು ಇಲ್ಲವಾದರೂ ಅವರ ಸಂಸಾರಕ್ಕೇನು ಕಷ್ಟದಶೆ ಬರಲಿಲ್ಲ. ಸಂಸಾರದ ಪೆಜ್ಜವನ್ನು ಕಡಿಮೆ ಮಾಡುವ ಅಗತ್ಯವೂ ಒದಗಲಿಲ್ಲ. ಆಳುಗಳು, ಅಡಿಗೆಯವರು, ಪೋಟಾದುಕಾರು ಎಲ್ಲಾ ಎಂದಿನಂತೆಯೆ ಇದ್ದುವು. ರಾಯರ ತರುವಾಯ ಈ ಮನೆ, ಹಣಗಳ ಮೇಲ್ವಿಚಾರಣೆ ದೇವಿಯವರ ಮೇಲೆ ಬಿದ್ದಿತು. ಅವರು ಅದನ್ನು ದಕ್ಷತೆಯಿಂದ ನಡೆಯಿಸಿಕೊಂಡು ಹೋಗುತ್ತಿದ್ದರು. ರಾಯರು ಇಲ್ಲವಾಗಲು, ಮನೆಯನ್ನು ಮಾರಿಕೊಂಡು, ಅವರ ಊರು ಮೈಸೂರಿಗೆ ಹೋಗುವ ಯೋಚನೆಯನ್ನು ಮಾಡಿದಹುದಾಗಿತ್ತು. ಆದರೆ ಇಷ್ಟು ವರ್ಷ ಬೊಂಬಾಯಿಯಲ್ಲೇ ಇದ್ದು ಕೇವಲ ಸ್ಥಳೀಕರಂತೆಯೆ ಆಗಿಬಿಟ್ಟಿದ್ದುದರಿಂದ, ಇಲ್ಲಿಯೆ ನೆಲಸಲು ಅವರು ಮನಸ್ಸು ಮಾಡಿದರು.

ದೇವಿಯವರು ಇಷ್ಟು ವರ್ಷಗಳನ್ನು ಬೊಂಬಾಯಿಯಂತಹ ಮಿಶ್ರಪಟ್ಟಣದಲ್ಲಿ ಕಳೆದಿದ್ದರೂ ಅಲ್ಲಿಯ ನವೀನತೆಗೆ ಮನಸೋತಿರಲಿಲ್ಲ. ಅಲ್ಲಿಯ ಜೀವನಸಮುದ್ರದಲ್ಲಿ ಅವರ ಸಂಸಾರವು ಒಂದು ದೀಪದಂತೆ. ಅವರು ತಮ್ಮ ಹಳೆಯ ಸಂಪ್ರದಾಯಗಳನ್ನು ಅಚ್ಚಳಿಯದೆ ನಡೆಯಿಸಿಕೊಂಡು ಬಂದಿದ್ದರು; ಅಲ್ಲದ ವರ್ಷ ವರ್ಷ ಕಳೆದಂತೆಲ್ಲ ಅವರ ಆಚಾರ ನಿಯಮಗಳು ಹೆಚ್ಚು ಹೆಚ್ಚು ಬಿಗಿಯಾಗತೊಡಗಿದುವು. ಅವರ ಕೃಶವಾದ ಶರೀರ, ಸರಯುತ್ತಿದ್ದ ಕೂದಲು, ಕಷ್ಟವಾದ ಮತ್ತು ಪದೇಪದೇ ಬರುವ ವ್ರತಗಳು ದೇಹದ ಮೇಲೆ ಯಾವ ಪರಿಣಾಮವನ್ನು ಉಂಟುಮಾಡಬಹುದೆಂದು ಸೂಚಿಸುವಂತಿದ್ದುವು. ಅವರ ಆಳವಾದ ಕಣ್ಣುಗಳು, ನಿದ್ದೆ ನುಂಗುವ ಜಾಗರಣೆ-ಧನುರ್ಮಾಸಾದಿಗಳ ಬವಣೆಯನ್ನು ತೋರಿಸುತ್ತಿದ್ದುವು. ಅವರ ಚಿನ್ನದಂಚಿನ ಕನ್ನಡಕವನ್ನು ನೋಡಿದಾಗ, ನಿತ್ಯ ಸಹಸ್ರನಾಮ, ಪುರಾಣ-ನಾರಾಯಣಾದಿಗಳ ನೆನೆವು ಬಾರದಿರುತ್ತಿರಲಿಲ್ಲ. ಅವರು ಉಡುತ್ತಿದ್ದ ಕೆಂಪು ಅಂಚಿನ ಮಾಸಲು ಬಣ್ಣದ ರೇಶ್ಮೆ ಸೀರೆಯು, ಅವರ 'ಮಡಿ'ಗೆ ಕುರುಹಾಗಿದ್ದಿತು.

ದೇವಿಯವರ ಮನೆಯಲ್ಲಿ ಬೆಳಗ್ಗೆ ಸಂಜೆ ತಪ್ಪದೆ ದೇವರಪೂಜೆ ಮಂಗಳಾರತಿಗಳು ನಡೆಯುತ್ತ ಹಲವು ಹತ್ತು ವರ್ಷಗಳಾಗಿದ್ದುವು. ಸಂಸಾರದ ಮೊದಲಿನಲ್ಲಿ ಹಚ್ಚಿದ ತುಪ್ಪದ ದೀಪವು ಅಂದೆ ಇಲ್ಲಿಯವರೆಗೂ ಉರಿಯುತ್ತಿದ್ದಿತು. ಮೈಸೂರಿನ ಸಂಚಾರಾಂಗದಲ್ಲಿಯ ಪುಳಿಯೊ ಮತ್ತು ಸಾಮಾನ್ಯ ಏಕಾದಶಿಗಳು—ಕೆಲವು ಸಮಯದಲ್ಲಿ ಜಂಟಿ ಏಕಾದಶಿಗಳು—, ನೃಸಿಂಹ ಜಯಂತಿ, ಶಂಕರ ಜಯಂತಿ ಮೊದಲಾದ ಜಯಂತಿಗಳು, ವರ ಸಿದ್ಧಿವಿನಾಯಕ ವ್ರತ, ವರಮಹಾಲಕ್ಷ್ಮೀ ವ್ರತ ಮೊದಲಾದ ವ್ರತಗಳು, ನಂಜನಗೂಡು, ಮೇಲುಕೋಟೆ ಮೊದಲಾದ ರಥ-ಜಾತ್ರೆಗಳು, ಮಹಾಚಾರ್ಯರ ಜನ್ಮ-ಪುಣ್ಯ ದಿನಗಳು, ನಾಗ ಪಂಚಮಿ, ಸರಯಾಳ ಷಷ್ಠಿ, ರಥಸಪ್ತಮಿ, ಜನ್ಮಾಷ್ಟಮಿ, ಮಹಾನವಮಿ, ವಿಜಯದಶಮಿ ಮೊದಲಾದ ಅನೇಕಾನೇಕ

ವರ್ಷಾವಧಿ ಹಬ್ಬಗಳು, ಮಧ್ಯೆ ಮಧ್ಯೆ ಸತ್ಯನಾರಾಯಣನ ಪೂಜೆಗಳು ಇವೆಲ್ಲವೂ ಅತಿ ವಿಜೃಂಭಣೆಯಿಂದ ಜರುಗುತ್ತಿದ್ದುವು. ನವರಾತ್ರಿಯ ಹತ್ತು-ದಿನಗಳು ವಿಶೇಷ ಪೂಜೆ, ಸೂರ್ಯ ನಮಸ್ಕಾರ, ರಾಮನವಮಿ ಒಂಬತ್ತು ದಿನ ಭಜನೆ ಮತ್ತು ಕಡೆಯಲ್ಲಿ ಪಟ್ಟಾಭಿಷೇಕ ಮಹೋತ್ಸವ, ಎಂಟು ದಿನ ವಿನಾಯಕನ ಮಂಗಳಾರತಿ, ಮಹಾಶಿವರಾತ್ರಿ ಜಾಗರಣೆ, ಯಾಮಪೂಜೆಗಳು ಇತ್ಯಾದಿ ಸಂದರ್ಭಗಳು ಮಹಾ ವೈಭವದಿಂದ ನಡೆಯಿಸಲ್ಪಡುತ್ತಿದ್ದುವು.

ಅವರು ನಾಸಿಕಕ್ಕೆ ಹೋಗಿ ಗೋದಾವರಿ ಸ್ನಾನ ಮಾಡದ ಗ್ರಹಣ-ಸಂಕ್ರಮಣವಿಲ್ಲ. ಇದು ತಪ್ಪಿದ ಒಂದೆರಡು ಸಲ ತ್ರಿವೇಣೀ ಸಂಗಮಕ್ಕೇ ಹೋಗಿ ಬಂದ ಪುಣ್ಯವಂತೆ ಆಕೆ. ಇಂತಹ ಮಹಾದೇವಿಯ ಮತ, ಆಚಾರ-ಶ್ರದ್ಧೆಗಳನ್ನು ಕಂಡು ನೆರೆಹೊರೆಯವರು, ನಂಟರಿಷ್ಟರು, ಹೇಳಿಕೇಳಿದವರು ಮೆಚ್ಚಿ ಆಶ್ಚರ್ಯಪಡುತ್ತಿದ್ದುದೇನು ಹೆಚ್ಚಲ್ಲ. ದೇವರು ಯಥೇಷ್ಟವಾದ ಅನುಕೂಲಗಳನ್ನು ಕೊಟ್ಟಿರುವ; ಅವುಗಳನ್ನು ಹೀಗೆ ಸದ್ವಿನಿಯೋಗಿಸುತ್ತಿದ್ದ ದೇವಿಯವರನ್ನು ಬಹಳ ಜನ ಧನ್ಯೆಯೆಂದು ಸ್ತುತಿಸುತ್ತಿದ್ದರು.

ಇಂತಹ ಕಾಲಗಳಲ್ಲಿ ಅವರು ಮೆಚ್ಚಿಕ್ಕೆ ಹಿಂದು ಮುಂದು ನೋಡುತ್ತಿರಲಿಲ್ಲ. ಅವರ ಪತಿಯ ಪೈದಿಕವು ಇಂದಿಗೂ ನಾಳೆಗೂ ಎಲ್ಲರಿಗೂ ಮಾದರಿಯಾಗಿದೆ. ಆಗ ಪೈನೂರಿನ ಅರಮನೆಯ ಪುರೋಹಿತಗೋಷ್ಠಿಯಿಂದಲೇ ಇಬ್ಬರು ವೇದ ಮೂರ್ತಿಗಳು ವಸಿಷ್ಠ-ವಾಮದೇವರಂತೆ ದಯೆಮಾಡಿಸಿದ್ದರು. ಅವರಿಗೆ ಧೇನುಗಳ ದಾನವೇನು, ಸುವರ್ಣದಾನವೇನು, ಹಣ ತೀರದು. ಇದರ ಜತೆಗೆ ಗೋದಾನ ಬೇರೆ. ಈ ದಾನವನ್ನು ಸಾಗಿಸಲಾರದೆ ಪುರೋಹಿತರು ವಿಕ್ರಯಿಸಲಾಗಿ,ನಾವೇ ನಾನೂರು ರೂಪಾಯಿಗೆ ಕೊಂಡುಕೊಂಡೆವು ಭೂದಾನವೂ ಆಯಿತು. ಕಾವೇರಿಯ ನಾಲೆಯು ಕಳಗೆ, ಎರಡೆರಡು ಎಕರೆ ಜಮೀನನ್ನು ಕೊಂಡು ಈ ಅರಮನೆಯ ವಿದ್ವಾಂಸರಿಗೆ ಒದಗಿಸಿಕೊಟ್ಟರು. ಪೈಕುಂಠ-ಸಮಾರಾಧನೆಯ ದಿನದ ವೈಭವವಂತೂ ಮಿತಿಗಾಣದು. ರಾಯರ ಮತ್ತು ದೇವಿಯವರ ಮಿತ್ರಮಂಡಲಿಯ ದೊಡ್ಡ ದೊಡ್ಡ ಮನುಷ್ಯರೆಲ್ಲರೂ– ಒಬ್ಬರನ್ನೂ ಬಿಡದಂತೆ– ಆಮಂತ್ರಿಸಲ್ಪಟ್ಟಿದ್ದರು. ಬೆಂಗಳೂರಿನಿಂದ ಉಡುಪಿ ಅಡಿಗೆಯವರೇ ಬಂದು ನಾನಾ ಭಕ್ಷ್ಯ-ಭೋಜ್ಯಗಳನ್ನು ಏರ್ಪಾಡಿ, ಈ ಮಹಾಜನರನ್ನೆಲ್ಲ ತಣಿಸಿದರು. ಊಟದ ಕೊನೆಗೆ ಬ್ರಾಹ್ಮಣ ಮುತ್ತೈದೆಯರೆಲ್ಲರಿಗೂ ನಾಲ್ಕಾಣೆ ದಕ್ಷಿಣೆ ಬೇರೆ. ಆಗ "ರಾಯರು ದುಡ್ಡು ಕೂಡಿಹಾಕಿದುದಕ್ಕೂ ಸಾರ್ಥಕವಾಯಿತು, ಸದ್ಗತಿಯಲ್ಲೂ ಅತ್ಯುತ್ತಮವಾದುದನ್ನೇ ಈ ಮೂಲಕ ರಾಯರು ಗಳಿಸಿರುವುದರಲ್ಲಿ ಸಂದೇಹವಿಲ್ಲ" ಎಂದು ಜನರು ಹೇಳಿಕೊಂಡರು

ದೇವಿಯವರ ಮನೆಯ ಸತ್ಯನಾರಾಯಣನ ಪೂಜೆಯೆಂದರೆ ಅದೊಂದು ಮಹಾಸಮಾರಂಭ. ಇದು ಜಗಾಗ ಆಗುತ್ತಿರಲೇಬೇಕು. ಇವರ ಸಂಸಾರದಲ್ಲಿ ಯಾವುದೊಂದು ಸಣ್ಣ ದುಃಖದಿಂದ ಪಾರಾದರೂ, ಆಗಬೇಕಾದರೂ, ಯಾವುದೊಂದು ಒಳ್ಳೆಯದು ನಡೆದರೂ, ಪರಮಾತ್ಮನಿಗೆ ಈ ಮೂಲಕವಾಗಿಯೇ ಧನ್ಯವಾದಗಳನ್ನರ್ಪಿಸುವ ಪದ್ಧತಿ. ಜೋಯಿಸವರ್ಗಕ್ಕೇ ಮುಖಂಡರಾದ ರಾಮಾಜೋಯಿಸರೇ ದಯಮಾಡಿಸಿ, ಪೂಜೆ-ಕಥೆಗಳನ್ನು ಪೂರ್ತಿಮಾಡಿ, ದೇವಿಯವರ ದಾನ ಉಪಚಾರಗಳನ್ನು ಕೈಕೊಳ್ಳುತ್ತಿದ್ದರು. ಆ ಸಂದರ್ಭಗಳ ಸಂಬಂಧವಾಗಿ ಆದ ಸಾರಾನೆಯ ದಿನದ ಸಂತರ್ಪಣೆಯು ನೆರೆಯಲ್ಲಿದ್ದ ನಮಗೆ ಅಮಾವಾಸ್ಯೆ-ಹುಣ್ಣಿಮೆಗಳಂತಾಗಿದ್ದುವು.

ಇಷ್ಟೇ ಅಲ್ಲದೆ, ದೇವಿಯವರು ಪೈನೂರಿಗೆ ಆಗಾಗ ಹೋಗಿ ಧರ್ಮಕಾರ್ಯಗಳನ್ನು ಮಾಡುತ್ತಿದ್ದರು. ರಾಯರು ಸಶ್ರದ್ಧವರಾಷವೆ ಒಟ್ಟಿಗೆ ಆರು ಉಪನಯನ, ಮೂರು ಮದುವೆಗಳನ್ನು ಮಾಡಿಸಿದರು. ಇನ್ನೆರಡು ವರ್ಷ ಕಳೆದು ಮತ್ತೆ ಆರು ಉಪನಯನ, ಮೂರು ಮದುವೆ. ಇವರ ಧರ್ಮಪ್ರವರ್ತನೆಯನ್ನು ನೋಡಿ ಜನರು ಬೆರಗಾಗಿ ಸ್ತೋತ್ರಮಾಡುತ್ತಿದ್ದರು. ಹೀಗೆ ಮೂರು ಬಾರಿಯಾದಮೇಲೆ, ಜನರು ಇವರಿಗೆ 'ಧರ್ಮಪರಾಯಣೆ' ಎಂಬ ಬಿರುದು ದರ್ಬಾರಿನಿಂದ ಒರುವುದು ಕೇವಲ ದಿನಗಳ ವಿಷಯವೆಂದುಕೊಳ್ಳುತ್ತಿದ್ದರು. 'ಈಗಾಗಲೇ ಬಂದಿಲ್ಲವಲ್ಲ' ಎಂದು ಅನೇಕರಿಗೆ ದರ್ಬಾರಿನಮೇಲೆ ಅಸಹನೆ. ಅನೇಕವೇಳೆ ಒಹಿರಂಗವಾಗಿಯೆ ಆಕ್ಷೇಪಿಸುತ್ತಿದ್ದರು ಆದರೆ ದೇವಿಯವರು ಮಾತ್ರ ಇದಕ್ಕೆ ಆತಿಸುತ್ತಿರಲೂ ಇಲ್ಲ, ಅದಕ್ಕೆ ಗಮನಕೊಡುತ್ತಲೂ ಇರಲಿಲ್ಲ. ಅವರ ಧರ್ಮಪ್ರೇರಣೆಯೆಲ್ಲ ಪರದಲ್ಲಿ ಸದ್ಗತಿಯ ಸಾಧನೆಗಾಗಿ ಮಾತ್ರ. ಇಹದಲ್ಲಿ ಅವರಿಗೆ ಇಚ್ಛೆಯಾಗಲಿ ನಂಬಿಕೆಯಾಗಲಿ ಇರಲಿಲ್ಲ.

ಇದನ್ನೆಲ್ಲ ಹೇಳಿದರೆ ದೇವಿಯವರು ಹೇಗೆಂದರೆ ಹಾಗೆ ದುಡ್ಡನ್ನು ಜೆಲ್ಲುತ್ತಿದ್ದರೆಂದು ಯಾರೂ ಭಾವಿಸಿಕೊಳ್ಳಬಾರದು. ಈಗಾಗಲೆ ಕಂಡಂತೆ ಅವರ ದಾನವು ಪಾತ್ರಪರಿತು, ವಿಧಿವತ್ತಾಗಿಯೆ ಸದ್ಗತಿಗೆ ಮೆಟ್ಟಿಲಾಗಿ ಮಾತ್ರ ನಡೆಯುತ್ತಿತ್ತು. ಅವರು ಮಾರ್ಕೆಟ್ಟಿಗೆ ಹೋದರೆ– ಅವರೇ ಹೋಗುತ್ತಿದ್ದರು— ಕೇಳಿದ್ದನ್ನು ಕೊಟ್ಟು ತರುವ ಮೂಢರಲ್ಲ. ಅವರ ಚೌಕಾಸಿಯಲ್ಲಿ ಅತ್ಯುತ್ಕೃಷ್ಟವಾದುದು ಅತಿ ಅಗ್ಗವಾಗಿಯೆ ದೊರಕಬೇಕು. ಹೀಗೆ ತರಕಾರಿ, ಹೂ, ಹಣ್ಣಿನವರ ಮೇಲೆ ಒಂದು ಚಿಕ್ಕ ಕಾಸನ್ನೂ ಎಸೆಯುತ್ತಿರಲಿಲ್ಲ. ಚಾಪೆ ಡಗ್ಗ ಮಾರುವವರಿಗಂತೂ ಇವರನ್ನು ಕಂಡರೆ ಹೆದರಿಕೆಯೆ. ಸಾಮಾನನ್ನು ಹೊರುವ ಕೂಲಿಗಳಿಗಂತೂ, ಯಾರಿಂದಲಾದರೂ ಒಂದು ಕಾಸನ್ನು ಹೆಚ್ಚಾಗಿ ತೆಗೆಯಬಹುದು; ಆದರೆ ಇವರಿಂದ ತೆಗೆಯುವುದರಲ್ಲಿ ಅವರ ಯುಕ್ತಿಯೆಲ್ಲವೂ ವೃಥಾ ವೆಚ್ಚವಾಗಿ ಹೋಗುತ್ತಿತ್ತು. ಈ ಕೂಲಿಗಳು ದರೋಡೆಗಾರರೆಂದೂ ಅವರನ್ನು ಕಾನೂನಾ.

ಗೊಳಪಡಿಸಬೇಕೆಂದೂ ಹಲವು ಬಾರಿ ಇವರು ಕಂಡವರಿಗೆಲ್ಲ ಹೇಳಿದುದು ಜ್ಞಾಪಕವಿದೆ. ಹಾಗೆಯೆ ತಿರುಕರ ವಿಷಯ. ವಾಗಿಯೂ ಇವರು ಮುಂದುವರಿದ ಅಭಿಪ್ರಾಯದವರಾಗಿದ್ದರು. ಆದರೆ ಪುಣ್ಯಕ್ಷೇತ್ರಗಳಲ್ಲಿರುವವರನ್ನು ಮಾತ್ರ ಈ ನಿಷೇಧಕ್ಕೆ ಒಳಪಡಿಸುತ್ತಿರಲಿಲ್ಲ. ಇವರು ಒಂದೊಂದು ಪೇಳೆ ಲೋಕಲು ರೈಲಿನಲ್ಲಿ ಪ್ರಯಾಣ ಮಾಡಬೇಕಾಗಿ ಬಂದಾಗ, ಸೆಕೆಂಡುಕ್ಲಾಸಿನ ಮೇಲೆ ದುಡ್ಡನ್ನೆಸೆಯುವವರಲ್ಲ. ಅವರ ಸರಳತೆಗೆ ಇದು ಸರಿಹೋಗುತ್ತಿರಲಿಲ್ಲ. ಮೂರಾಣೆಯನ್ನು ಕೊಡುವ ಕಡೆ ಒಂಬತ್ತಾಣೆ ಕೊಡುವುದು ಅವಿವೇಕವೆಂದು ಅನೇಕವೇಳೆ ಅಭಿಪ್ರಾಯಪಟ್ಟಿದ್ದರು. ಅಲ್ಲದೆ ಇನ್ನೂ ಮುಂದೆ ಹೋಗಿ, ಅವರ ಮಗನಿಗೆ ನಾಲ್ಕು ವರ್ಷವಾದ ಮೇಲೂ ಅವನ ಬೆಳೆವಣಿಗೆ ಸಾಕಾದಷ್ಟಿಲ್ಲವೆಂದು ಮನಗಂಡು, ಅವನಿಗೆ ಟಿಕೆಟ್ಟನ್ನು ತೆಗೆದುಕೊಳ್ಳದೆ ಉಳಿತಾಯ ಮಾಡುತ್ತಿದ್ದರು. ಹಾಗೆಯೆ ಪತ್ರಿಕೆಗಳಿಗಾಗಿ ಒಂದು ಬಿಲ್ಲೆಯನ್ನೂ ಅವರು ಕೊಟ್ಟವರಲ್ಲ. ಅಲ್ಲಿಯ ಸುಳ್ಳು-ಸಟೆಗಳನ್ನೇಕೆ ಕೊಳ್ಳಬೇಕೆಂದು ಅವರ ವಾದ. ಆದುದರಿಂದ ನಮ್ಮ ಮನೆಗೆ ತರಿಸುವ 'ತಾಯಿನಾಡನ್ನೇ' ಮಾರನೆಯ ದಿನ ತರಿಸಿಕೊಂಡು ನೋಡಿ ವಾಪಸು ಕಳುಹಿಸಿಬಿಡುತ್ತಿದ್ದರು. ಹೀಗೆ ಅವರು ಪೋಲುವೆಚ್ಚ ವೇನನ್ನೂ ಮಾಡುವವರಲ್ಲ. ದೇವರ ಸೇವೆಯೆಂದರೆ– ಪೂಜೆ ಪುರಸ್ಕಾರಗಳಲ್ಲಿ– ಮಾತ್ರ ಅವರ ಧಾರಾಳಕ್ಕೆ ಮಿತಿಯಿರಲಿಲ್ಲ.

ದೇವರಲ್ಲಿ ಇಷ್ಟು ಶ್ರದ್ಧಾಭಕ್ತಿ ತೋರಿಸುತ್ತ, ಪುತಾಚಾರಗಳನ್ನು ಚಾಚೂ ತಪ್ಪದೆ ನಡೆಯಿಸಿಕೊಂಡು ಬರುತ್ತಿದ್ದ ಇಂತಹ ಸಾತ್ತ್ವಿಕ ಸಂಸಾರಕ್ಕೂ ವಿಧಿಯು ಆಗಾಗ ತೊಂದರೆ ಕೊಡದೆ ಇರುತ್ತಿರಲಿಲ್ಲ. ಮನೆಯಲ್ಲಿ ಎರಡು ಮೂರು ಬಾರಿ ಕಳ್ಳತನವಾಗಿ, ಬಹಳ ಬೆಲೆಯ ಜಿನ್ನದ ವಿಗ್ರಹಗಳು, ಬೆಳ್ಳಿಯ ಪೂಜಾ ಸಲಕರಣೆಗಳು, ಊಟದ ತಟ್ಟೆ-ಒಟ್ಟಿಗಳು, ಜರತಾರಿಯ ಸೀರೆ ಅಲ್ಪ ಸ್ವಲ್ಪ ನಗದು ಇವೆಲ್ಲವೂ ಕಳೆದು ಹೋಗಿದ್ದುವು. ಇದರ ಪರಿಣಾಮವಾಗಿ ಪೂಜೆಯ ಆಚಾರ್ಯರಿಂದ ಅಡಿಗೆಯವರೆಗೆ ಎಲ್ಲ ಬದಲಾಯಿಸಲ್ಪಟ್ಟಿದ್ದರು. ಆದರೂ ಈ ಕಳ್ಳತನದ ಸಂದರ್ಭವೇನೂ ಮುಂದೆ ಇರುವುದಿಲ್ಲವೆಂದು ಹೇಳಲಾಗದಂತಿತ್ತು. ಒಂದುಬಾರಿ ದೇವಿಯವರು ತಮ್ಮ ಹಣದ ಜೀವನವನ್ನು ಕೆಳಗಿಟ್ಟು ಬದನೆಯಕಾಯಿಯನ್ನು ಅರಿಸುತ್ತ, ಚೌಕಸಿಯೊಳಗೆ ಮನಸ್ಸನ್ನು ತೊಡಗಿಸಿದ್ದಾಗ, ದುರಾತ್ಮರು ಯಾರೋ ಆ ಜೀವನವನ್ನು ಅಪಹರಿಸಿದ್ದರು. ಇದರಿಂದ ಇನ್ನೂರು ರೂಪಾಯಿಗಳ ಮೇಲೆ ನಷ್ಟವಾಗಿತ್ತು. ಇದಲ್ಲದೆ ಒಂದೆರಡು ಕಂಪನಿಯ ಷೇರುಗಳು ಬಹಳ ಮಟ್ಟಿಗೆ ಕೆಳಗಿಳಿದು, ಅದರಿಂದ ಬೇರೆ ನಷ್ಟವನ್ನುಂಟುಮಾಡಿದ್ದುವು. 'ಹೀಗೆ ಮುಂದೆಯೂ ಆಗಬಹುದೋ!' ಎಂಬ ಭಯವು ಬೇರೆ. ಆಳು, ಅಡಿಗೆಯವರು, ಆಗಾಗ ತಮ್ಮ ಸಂಬಳ ಸರಿಯಾಗಿ ಸಂದಾಯವಾಗಿಲ್ಲವೆಂದು ಜಗಳವಾಡಿ, ಕೆಲಸಬಿಟ್ಟು ಇವರನ್ನು ಕೋಟಲೆಗೆ ಗುರಿಮಾಡುತ್ತಿದ್ದರು. ಇದ್ದ ಮೋಟಾರು ಕಾರಂತೂ ಮೂರುಹೊತ್ತೂ ಮುರಿದುಬಿದ್ದು ಮನೆಯಲ್ಲೇ ಇರುತ್ತಿತ್ತು. ಇದರ ಉಪಯೋಗವಿಲ್ಲದಿದ್ದರೂ ಡ್ರೈವರನು ಮಾತ್ರ ಗಡಿಬಿಡಿಮಾಡಿ ಸಂಬಳವನ್ನು ದೊರೆಕಿಸಿಕೊಳ್ಳುತ್ತಿದ್ದುದಲ್ಲದೆ, ಆಗಾಗ ದೇವಿಯವರಿಗೆ ಆಶೆತೋರಿಸಿ, ಮೋಸಮಾಡಿ, ಬಾಯಿಬಡಿದು ರಿಪೇರಿಗಾಗಿ ಹತ್ತಾರು ರೂಪಾಯಿಗಳನ್ನು ವ್ಯರ್ಥವಾಗಿ ಖರ್ಚುಮಾಡಿ, ಇಲ್ಲಿಯವರೆಗೆ ಎಷ್ಟೋ ಹಣವನ್ನು ನೀರಿಗೆಸೆಯುವಂತೆ ಮಾಡಿದ್ದನು. ತೋಟಗಾರನು ಹಣ್ಣು-ಹೂಗಳನ್ನು ಕದ್ದು ಸಾಗಿಸಿ ಮಾರಿಕೊಳ್ಳುತ್ತಿದ್ದನು. ಬಾಡಿಗೆಯವರು ಕೆಲವರು ಅನೇಕ ತಿಂಗಳುಗಳಿದ್ದು ಬಾಡಿಗೆ ಕೊಡದೆ ಜಗಳವಾಡಿ ಬಿಟ್ಟು ನಷ್ಟಮಾಡಿದ್ದರು. ಇದರ ಜತೆಗೆ ಲಾಯರು, ಅವರ ಮೇಲೆ ಕೇಸುಮಾಡಿಸಿ ಅದಕ್ಕೆ ಬೇರೆ ತಮಗೆ ಬೇರೆ ಹಣವನ್ನು ಸೆಳೆಯುತ್ತಿದ್ದರಾದರೂ, ಯಾವುದೂ ಇಲ್ಲಿಯವರೆಗೆ ಇವರ ಕಡೆಗೆ ಇತ್ಯರ್ಥವಾಗಿರಲಿಲ್ಲ. ಇವೂ ಇನ್ನೂ ಹಾಗೆಯೇ ಹಲವು ಸಂಗತಿ-ಸನ್ನಿವೇಶಗಳೂ ನಷ್ಟವನ್ನುಂಟುಮಾಡುತ್ತಿದ್ದುವಲ್ಲದೆ, ದೇವಿಯವರ ಮನಸ್ಸಿಗೆ ಸದಾ ಕಿರಿಕಿರಿಯನ್ನುಂಟುಮಾಡುತ್ತಿದ್ದುವು. ಇದೂ ಅಲ್ಲದೆ, ದೇವಿಯವರ ಶರೀರವೂ ಅವರನ್ನು ಬಾಧಿಸುತ್ತಿತ್ತು. ಬೆಳಗ್ಗೆದ್ದರೆ ಪಿತ್ತಸಂಕಟ, ನಿತ್ರಾಣ; ಆಗಾಗ ವಾಯುನೋವು; ಕತ್ತಿಸಲ್ಲಿಯೊ, ಮುಂಡೆಯಲ್ಲಿಯೊ 'ರೂಮಾಟಿಕ್' ಹಿಂಸೆ. ರಾತ್ರಿ ನಿದ್ದೆ ಬಾರದು. ವಂಶಗತವಾಗಿ

ಬಂದ ಹಲ್ಲುನೋವು. ಈಗಾಗಲೆ ಎಂಟು-ಹತ್ತು ಹುಳುಕು ಹಲ್ಲನ್ನು ಕೀಳಿಸಿಕೊಂಡಿದ್ದರು. ಇನ್ನೂ ಕೀಳಬೇಕಾದುವು ಅನೇಕವಿದ್ದುವು. ಇವುಗಳು ಸಾಲದೋ ಎನ್ನುವಂತೆ ಒಬ್ಬೊಟ್ಟಿಗೆ ಮೂರು ದಿನ ತಲೆಯ ಶೂಲಿ ಬೇರೆ. ಈ ಸಂಕಟಗಳ ಜತೆಗೆ ವೈದ್ಯರದು. ಅವರ ಒಂದು ರೋಗವನ್ನು ಹೋಗಲಾಡಿಸುವ ಔಷಧಿ ಮತ್ತೊಂದು ರೋಗವನ್ನು ಬದಲಾಗಿ ತರುತ್ತಿತ್ತು. ಒಬ್ಬರನ್ನು ಬಿಟ್ಟು ಒಬ್ಬರಂತೆ ಹಲವು ವೈದ್ಯರಿಗೆ ಅವಕಾಶಕೊಟ್ಟಾಯಿತು; ಫಲವಿಲ್ಲ. ಆದಷ್ಟು ಮಟ್ಟಿಗೆ ದೇವಿಯವರೇ ವೈದ್ಯರಲ್ಲಿಗೆ ಹೋಗಿಬರುತ್ತಿದ್ದರೂ, ವೈದ್ಯರ ಬಿಲ್ಲುಗಳು ಮಾತ್ರ ನೋಡಿದ ಕಣ್ಣಿಗೆ ನೋವನ್ನು ತರುವುವಾಗಿದ್ದುವು.

ಇಷ್ಟು ಕಷ್ಟ-ನಷ್ಟ-ನೋವುಗಳನ್ನೂ ಶಪಿಸಿಕೊಂಡಾದರೂ ಸೈರಿಸುವ ಪ್ರಾಣ— ದೇವಿಯವರು. ಆದರೆ ಇವೆಲ್ಲಕ್ಕೂ ಮೀರಿದ ಒಂದು ಗಂಡಾಂತರವು ಅವರ ಜೀವನವನ್ನು ಕಿತ್ತು ತಿನ್ನುತ್ತಿದ್ದಿತು. ಇದು ಚಿರಂಜೀವಿ ರಾಜರಾಜೇಶ್ರೀ ವೆಂಕಟೇಶನ ಕಾಹಿಲೆ. ವೈದ್ಯರು ಇದನ್ನು 'infantile paralysis' ಎಂದು, ಪರೀಕ್ಷಿಸಿ ತೀರ್ಮಾನವನ್ನು ಕೊಟ್ಟುಬಿಟ್ಟಿದ್ದರು. ಇದರಿಂದ ವೆಂಕಟೇಶನಿಗೆ ಆಗುತ್ತಿದ್ದ ಹಿಂಸೆ ಹೇಳತೀರದು. ಅವನ ತಾಯಿಗೆ ಇದು ನೋಡಲಾರದ ನೋಟ. ಬಹಳ ಹಣವನ್ನು ಖರ್ಚು ಮಾಡಿ ಬೊಂಬಾಯಿನ ಪ್ರಸಿದ್ಧ ವೈದ್ಯರಿಗೆ ಮಾತ್ರವಲ್ಲದೆ, ಕಲ್ಕತ್ತೆಯಲ್ಲಿಯೂ ಸಹ ಕೆಲವರಿಗೆ ತೋರಿಸಿದ್ದರು. ವರ್ಷಗಟ್ಟಲೆ ಔಷಧಿಯಾಯಿತು; ಹಣವು ಹುಣಸೆಯ ಬಿತ್ತದಂತೆ ಖರ್ಚಾಯಿತು. ಆದರೆ ಮಗುವಿಗೆ ಮಾತ್ರ ಗುಣವಾಗಲಿಲ್ಲ. ದೇವಿಯವರಿಗೆ ದಿಕ್ಕು ತೋಚದಾಯಿತು. ಹಲವು ದೇವರಿಗೆ ಹರಕೆ ಹೊತ್ತುಕೊಂಡರು. ತಿರುಪತಿಯ ವೆಂಕಟೇಶನಿಗೆ ಮುಡುಪನ್ನು ತೆಗೆದಿಟ್ಟಾಯಿತು. ಕಾಹಿಲೆ ವಾಸಿಯಾದೊಡನೆ ಯಾತ್ರೆ ನಡೆಯಿಸುವುದಾಗಿ ಹರಕೆ ಹೊತ್ತಾಯಿತು. ಹಲವು ಪೂಜೆ, ಪುರಸ್ಕಾರ, ಮಂತ್ರ-ಯಂತ್ರಗಳನ್ನೆಲ್ಲ ಈ ರೋಗ ನಿವಾರಣೆಗಾಗಿ ಉಪಯೋಗಿಸಿಕೊಂಡಾಯಿತು. ಪ್ರಸಿದ್ಧ ಕ್ಷೇತ್ರಗಳಿಂದ ಗಂಧ, ಕುಂಕುಮ, ವಿಭೂತಿಗಳನ್ನೂ ತರಿಸಿ ಬಳಿದು ನೋಡಾಯಿತು. ಇಷ್ಟಾಗಿ ದೈವ-ಮಾನವ ಶಕ್ತಿಯೆಲ್ಲ ಕೂಡಿದರೂ, ಮಗುವಿನ ಯಾತನೆಯೊಂದನ್ನು ನೀಗಲು ಸಮರ್ಥವಾಗಿರದಂತೆ ತೋರಿತು. ದೇವಿಯವರು ಚಿಂತೆಯಲ್ಲಿ ಮುಳುಗಿ ಹೋದರು. ದಿನದಿನಕ್ಕೆ ಹೆಚ್ಚು ಪ್ರಾರ್ಥನೆ ನಡೆಯಿಸುತ್ತ, ಮೇಲೆ ಮೇಲೆ ಮುಡುಪು ಕಟ್ಟುತ್ತ, ವ್ರತಗಳನ್ನು ನಡೆಯಿಸುತ್ತ ಸಾಗಿದರು—ನಿವಾರಣೆಯ ಭಾರವನ್ನು ಎತ್ತುವುದಕ್ಕೆ. ಆದರೆ ಇನ್ನೂ ತಕ್ಕಡಿಯು ಎದ್ದಿರಲಿಲ್ಲ. ಪರಮಾತ್ಮನ ಲೀಲೆ, ನ್ಯಾಯಗಳು ಯಾರಿಗೆ ನಿಲುಕಬೇಕು?

ಹೀಗಿರುವಲ್ಲಿ, ಒಂದು ದಿನ ದೇವಿಯವರ ಹೊಸ ಸ್ನೇಹಿತ ರೊಬ್ಬರು ಇದನ್ನೆಲ್ಲವನ್ನೂ ಕೇಳಿ "ಇಷ್ಟೆಲ್ಲ ನೋಡಿಸಿದ್ದೀರಿ. ಇನ್ನೂ ಒಂದು ಕಡೆ ನೋಡಿಸಿ ಬಿಡಿ; 'ಖಾರ್'[೧]ನ ರಾಮಕೃಷ್ಣಾಶ್ರಮದ ಧರ್ಮದ ಆಸ್ಪತ್ರೆಯಲ್ಲಿ ಡಾ. ಗುಪ್ತರಿದ್ದಾರಲ್ಲಾ, ಅವರು ಬಹಳ ಬುದ್ಧಿವಂತರೆಂದು ಪ್ರಸಿದ್ಧಿ ಪಡೆಯುತ್ತಿದ್ದಾರೆ. ಸುತ್ತುಮುತ್ತಿನ ಜನವಂತೂ ದಿನೇ ದಿನೇ ಹೆಚ್ಚುತ್ತ ಅಲ್ಲಿಗೇ ಹೋಗುತ್ತಿದ್ದಾರೆ. ಅದೂ ಒಂದು ಪರೀಕ್ಷೆಯಾಗಿ ಬಿಡಲಿ" ಎಂದು ಹೇಳಿದರು. ಆದರೆ ದೇವಿಯವರಿಗೆ ನಂಬಿಕೆಯುಂಟಾಗಲಿಲ್ಲ. 'ಎಲ್ಲಾ ದೇಶದ ಉದ್ದ ಅಗಲದ ಸುಪ್ರಸಿದ್ಧ ವೈದ್ಯರೆಲ್ಲ ಮಾಡದಿದ್ದುದನ್ನು ಗುಪ್ತರು ಮಾಡಿಯಾರೆ? ಇವರ ಹೆಸರನ್ನೇ ಇಲ್ಲಿಯ ವರೆಗೆ ಕೇಳಿರಲಿಲ್ಲ. ಇವರೆಷ್ಟು ಬುದ್ಧಿವಂತರಿರಬಹುದು? ಈ ಯತ್ನವೂ ದಂಡವಾಗುವುದರಲ್ಲಿ ಸಂದೇಹವಿಲ್ಲ!' ಎಂಬ ತಮ್ಮ ಯೋಚನೆಯನ್ನು ಸ್ನೇಹಿತರಿಗೆ ಸೂಚಿಸಿದರು. ಆದರೆ ಅವರು "ಹಾಗೆ ಹೇಳಬೇಡಿ, ವೈದ್ಯರಲ್ಲ ಔಷಧಿಯೊಂದೇ ಸಾಲದು; ಹಸ್ತಗುಣವೂ ಇರಬೇಕು. ಅಲ್ಲದ ಯಾವ ಆಳದಲ್ಲಿ ಯಾವ ರತ್ನವೋ ಯಾರಿಗೆ ಗೊತ್ತು? ಅಂತು ತೋರಿಸುವುದರಲ್ಲಿ ಅಡ್ಡಿಯೇನು? ಒಳ್ಳೆಯದಾದರಂತೂ ಸರಿ; ಇಲ್ಲದಿದ್ದರೆ ಸಾವಿರ ಪ್ರಯತ್ನದ ಜತೆಗೆ ಇದೊಂದು, ಅಷ್ಟೆ" ಎಂದರು. ಇದು ದೇವಿಯವರಿಗೆ ಕೊಂಚ ಉತ್ಸಾಹ ಕೊಟ್ಟಿತು. ಹುಂ, ಹಸ್ತಗುಣ ಬೇಡವೆ, ರೋಗವನ್ನು ವಾಸಿ ಮಾಡುವುದಕ್ಕೆ? ನಿಜ.

*

ಮಾರನೆಯ ದಿನವೇ ದೇವಿಯವರ ಕಾರು ಬಂದು ಖಾರಿನ ಆಶ್ರಮದ ಆಸ್ಪತ್ರೆಯ ಮುಂದೆ ನಿಂತಿತು. ಆಶ್ರಮದ ಆಸ್ಪತ್ರೆ ಕೇವಲ ಸಣ್ಣದು. ಎರಡೇ ಕೋಣೆ, ಮಧ್ಯೆ ದಾರಿ; ಸುತ್ತು ವರಾಂಡ. ಮೇಲೆ ಮಹಡಿಯೇನೋ ಇತ್ತು; ಆದರೆ ಅದರಲ್ಲಿ ಸ್ವಾಮಿಜಿಯವರು ವಾಸವಾಗಿದ್ದರು. ಕಟ್ಟಡವು ಸಣ್ಣದಿದ್ದರೂ ಅದು ಇದ್ದ ತೋಟವು ಸುಂದರವಾಗಿದ್ದಿತು. ಕಾರ್ಪಣ್ಯದ ಭಾವವೇನೂ ಅಲ್ಲಿ ಕಂಡುಬರುತ್ತಿರಲಿಲ್ಲ. ಎರಡು ಕೋಣೆಗಳಲ್ಲೊಂದರಲ್ಲಿ ವೈದ್ಯರು, ಇನ್ನೊಂದರಲ್ಲಿ 'ಕಾಂಪೌಂಡಿಂಗು.' ಅತ್ತ ಕಡೆಯ ವರಾಂಡದಲ್ಲಿ ಒಂದು ತೆರೆಯನ್ನಿಟ್ಟುಕೊಂಡು ಗಾಯಚಿಕಿತ್ಸೆಗೆ ಸ್ಥಳಮಾಡಿಕೊಂಡಿದ್ದರು.

ಡಾ. ಗುಪ್ತರ ಕೋಣೆಯೂ ಸಣ್ಣದೆ. ಅದರ ಒಂದು ಕಡೆ ಬಾಗಿಲಿಗಿದಿರಾಗಿ ಒಂದು ಮೇಜು, ಎರಡು ಕುರ್ಚಿಗಳು. ಮೇಜಿನ ಮೇಲೆ ಬರೆವಣಿಗೆಯ ಸಲಕರಣೆ. ದಾನಕ್ಕಾಗಿ, ಮೇಲು-ಮುಚ್ಚಳದಲ್ಲಿ ಸಂದು ಇದ್ದ ಒಂದು ಸಣ್ಣ ಕೈಪೆಟ್ಟಿಗೆ. ಗುಪ್ತರ ಕುರ್ಚಿಯ ಹಿಂದುಗಡೆ—ಒಂದು ಗಾಜಿನ ಬೀರು; ಅದರಲ್ಲಿ ಕೆಲವು ವೈದ್ಯಕ ಪುಸ್ತಕಗಳು. ಇವರ ಮೇಜಿಗೆ ಇದಿರಾಗಿ ದೂರದ ಗೋಡೆಯಂಚಿನಲ್ಲಿ, ಕಾಯುವವರಿಗಾಗಿ ನಾಲ್ಕಾರು ಕುರ್ಚಿಗಳು. ಇನ್ನು ಇತರ ವಸ್ತುಗಳೆಂದರೆ ರೋಗಿಗಳೆ. ಕೆಲವರು ಒಳಗೂ ಕೆಲವರು ವರಾಂಡದಲ್ಲೂ ಕಾಯುತ್ತಿದ್ದರು. ಇವರ

೧ ಖಾರ್, ಮುಂಬಯಿಯ ಒಂದು ಸಬರ್ಬ್.

ಪೈಕಿ ಬಡಬಗ್ಗರೇ ಹೆಚ್ಚು. ಡಾ. ಗುಪ್ತರು ಕಪ್ಪಾದ ದಪ್ಪವಾದ ಆಳು. ಬಿಳಿಯ ಧೋತ್ರ, ಒಂದು ತೆಳುವಂಗಿ ಇಷ್ಟೇ ಅವರ ಉಡುಪು. ಅವರ ಮುಖದಲ್ಲಿ ಶಾಂತಿ—ಗಾಂಭೀರ್ಯಗಳು ಕೂಡಿದ ಮುದ್ರೆ. ಈ ಭಾವವನ್ನು ಬದಲಾಯಿಸುವುದೆಂದರೆ, ಆಗಾಗ ರೋಗಿಗಳನ್ನು ಸಂತೋಷಪಡಿಸಲು ಯತ್ನಿಸುವ ಮಾತುಗಳಿಂದುಂಟಾದ ಮೆಲುನಗೆ. ಅವರ ಮಾತೂ ಮೆತ್ತಗೆ. ಇದರಿಂದಲೇ ಅಲ್ಲಿಯ ಆವರಣದಲ್ಲೆಲ್ಲ ನಿಶ್ಯಬ್ದ.... ಕೆಮ್ಮುವುದು ನರಳುವುದನ್ನು ಬಿಟ್ಟು. ಜನರೆಲ್ಲ ತಾವೇ ಒಂದು ಶಿಸ್ತಿನಿಂದ ಅವರಲ್ಲಿಗೆ ಹೋಗಿ, ತಮ್ಮ ಪರೀಕ್ಷೆಯು ಮುಗಿದ ಮೇಲೆ ಚೀಟಿ ತೆಗೆದುಕೊಂಡು ಹೊರಕ್ಕೆ ಸಾಗುತ್ತಿದ್ದರು.

ದೇವಿಯವರು ಕಾರನ್ನಿಳಿದು, ಮಗುವನ್ನೆತ್ತಿಸಿಕೊಂಡು, ಆಸ್ಪತ್ರೆಯ ತೋಟವನ್ನು ಹಾಯ್ದು, ವರಾಂಡವನ್ನು ಮುಟ್ಟಿ, ಅಲ್ಲಿಯ ಬಡಜನರಲ್ಲಿ ದಾರಿಬಿಡಿಸಿಕೊಂಡು ನೇರವಾಗಿ ಡಾ. ಗುಪ್ತರಲ್ಲಿಗೆ ಬಂದು "ಡಾಕ್ಟರೆ, ಈ ಮಗುವಿಗೆ...." ಎಂದು ಮೊದಲು ಮಾಡಿದರು. ಗುಪ್ತರು ಬರೆಯುತ್ತಿದ್ದವರು ತಲೆಯೆತ್ತದೆ ಕಣ್ಣೆತ್ತಿ ನೋಡಿ, ಗಂಭೀರವಾಗಿ, ವಿನಯದಿಂದ "ಕ್ಷಮಿಸಿ, ದಯೆಯಿಟ್ಟು ತಮ್ಮ ಸರತಿ ಬಂದಾಗ ಹೇಳಬೇಕಾದುದನ್ನು ಹೇಳಿರಿ. ಪುನಸ್ಸಿಗೇನೂ ನೊಂದುಕೊಳ್ಳದಿರಿ. ಇಲ್ಲದಿದ್ದರೆ ಇಲ್ಲಿಯ ಕೆಲಸವು ನಮಗೆ ಕಷ್ಟವಾಗುತ್ತದೆ." ಎಂದು ತಮ್ಮ ಬರೆವಣಿಗೆಯನ್ನು ಮುಂದುವರಿಸಿದರು. ದೇವಿಯವರ ಮುಖ ಕೆಂಪಾಯಿತು. ಹಿಂದಕ್ಕೇನೋ ಸರಿದರು; ಆದರೆ ಅಲ್ಲಿ ಇನ್ನು ಇರಬೇಕೆ, ಹೊರಟು ಹೋಗಬೇಕೆ ಎಂಬುದು ಅವರನ್ನು ತಳಮಳಗೊಳಿಸುತ್ತಿತ್ತು. ಇಂತಹ ಸಣ್ಣ ಆಸ್ಪತ್ರೆ, ಈ ಬಡಜನ, ಈ ಸುಲಭವೈದ್ಯ ಇವರೆಲ್ಲಿ, ದೊಡ್ಡ ದೊಡ್ಡ ಆಸ್ಪತ್ರೆಗಳನ್ನೆಲ್ಲ ಹೊಕ್ಕು ಮಹಾ ಮಹಾ ವೈದ್ಯರೊಡನೆಲ್ಲ ಮಾತನಾಡಿದ್ದ ಶ್ರೀಮಂತ ಸತಿ ತಾವೆಲ್ಲಿ? ಹೀಗಿದ್ದರೂ ತಾವು ಈ ಭಿಕ್ಷುಕರೊಂದಿಗೆ ಸರದಿಗಾಗಿ ಕಾಯಬೇಕೆ? ಹೋಗಿಬಿಡುವುದು.... ಆದರೆ ವೆಂಕಟೇಶುವಿನ ಕಾಹಿಲೆ? ಹುಂ. ಏನಾದರೂ ಆಗಲಿ; ಈ ಅಪಮಾನವನ್ನು ಸಹಿಸಿಯೆ ನೋಡಿಬಿಡುವುದು.... ಬಹು ಹೊತ್ತು ಚರ್ಚಿಸಿ ಹೀಗೆ ನಿರ್ಧರಿಸಿಕೊಂಡು ತಮ್ಮ ಸರದಿಯನ್ನು ಕಾಯ್ದರು.

ಡಾ. ಗುಪ್ತರು ವೆಂಕಟೇಶನನ್ನು ಬಹು ಹೊತ್ತು, ಬಹಳ ಸೂಕ್ಷ್ಮರೀತಿಯಲ್ಲಿ ಪರೀಕ್ಷಿಸಿದರು. ಅಷ್ಟು ಹೊತ್ತೂ ದೇವಿಯವರು ಆ ಕಾಹಿಲೆಯ ರೀತಿ, ಅದನ್ನು ತೋರಿಸಿದ್ದ ವೈದ್ಯರುಗಳು, ತಿರುಗಿದ ಊರುಗಳು ಇತ್ಯಾದಿ ಇತ್ಯಾದಿ ನಿಲ್ಲಿಸದೆ ಹೇಳುತ್ತಿದ್ದರು. ಡಾಕ್ಟರು ಇದನ್ನೆಲ್ಲ ಕೇಳುತ್ತಿದ್ದಂತೆ ತಲೆಯಾಡಿಸುತ್ತಿದ್ದರೂ ತಮ್ಮ ಪರೀಕ್ಷೆಯಲ್ಲೇ ಮಗ್ನರಾಗಿದ್ದರೆಂಬುದು ಸ್ಪಷ್ಟವಾಗಿತ್ತು. ಪರೀಕ್ಷೆಯು ಮುಗಿದೊಡನೆ, ಡಾಕ್ಟರು ತಮ್ಮ ಪುಸ್ತಕಗಳಲ್ಲೊಂದನ್ನು ತೆಗೆದು ಹಾಳೆ ತಿರುವಿ ಹಾಕಿ, ಅನಂತರ ಚೀಟಿಯೊಂದನ್ನು ಬರೆದು ದೇವಿಯವರಿಗೆ ಕೊಟ್ಟು "ಈ ಎರಡು ತೊಟ್ಟು ಔಷಧವನ್ನು ನೀರಿನಲ್ಲಿ ಕೊಡುತ್ತಾರೆ; ಇಲ್ಲಿಯೆ ಕುಡಿಸಿ ಮತ್ತೊಂದು ವಾರ ಬಿಟ್ಟುಕೊಂಡು ಬನ್ನಿ. ಮತ್ತೆ ನೋಡುತ್ತೇನೆ. ಭಯಪಡಬೇಡಿ, ವಾಸಿಯಾಗುತ್ತದೆ!" ಎಂದು ಬೇರೆಯವರಿಗೆ ಸನ್ನೆಮಾಡಿದರು. ದೇವಿಯವರಿಗೆ ಹೆಚ್ಚಿಗೆ ಮಾತನಾಡಲು ಅವಕಾಶವು ಸಿಕ್ಕಲಿಲ್ಲ. ಹೊರಗೆ ಬಂದು ಔಷಧವನ್ನೇನೋ ತರಿಸಿ ಕುಡಿಸಿದರು. ಆದರೆ ಇದರಲ್ಲಿ ನಂಬುಗೆ ಹೇಗೆ? ಇಂಜಕ್ಷನ್ ಇಲ್ಲ; ಕಡೆಗೆ ದಿನಕ್ಕೆ ನಾಲ್ಕು ಹೊತ್ತಿನಂತೆ ಒಂದು ವಾರದ ಔಷಧಿಯು ಕೂಡ ಇಲ್ಲ. ಇದರ ಮೇಲೆ ಇನ್ನು ಒಂದು ವಾರ ಬಿಟ್ಟುಕೊಂಡು ಬರಬೇಕು. ಈ ರೀತಿಯಲ್ಲಿ ಈ ಕಾಹಿಲೆಯೇನಾದರೂ ವಾಸಿಯಾದೀತೆ? ಇದೆಲ್ಲ ಒರಿಯ ಭ್ರಮೆ. ಡಾಕ್ಟರೋ ಪುಸ್ತಕವನ್ನು ನೋಡುತ್ತಾರೆ; ಅಷ್ಟು ಹೊಸಬ- ಅಷ್ಟು ಕಮ್ಮಿ ಪರಿಶ್ರಮ. ಈ ಶ್ರಮವೆಲ್ಲ ವ್ಯರ್ಥವಾದಂತೆಯೆ ಸರಿ. ಆದರೂ 'ವಾಸಿಯಾಗುತ್ತದೆ' ಎಂದು ಎಷ್ಟು ಭರವಸೆಯಿಂದ ಹೇಳಿದರು! ಇದರ ಗುಟ್ಟೇನು? ಇನ್ನೂ ಹೋಗಿ ನೋಡುವುದೇ ಸರಿ!

ವಾರ ಕಳೆಯಿತು. ಇನ್ನೊಂದು ವಾರವೂ ಅದೇ ಔಷಧ. ಮತ್ತೆ ಒಂದು ವಾರ ಗಡುವು. ಎರಡು ವಾರ, ಮೂರು, ನಾಲ್ಕು. ಪ್ರಯೋಜನವಿಲ್ಲ. ಗುಣದ ಸೂಚನೆಯೇ ಇಲ್ಲ. ಔಷಧವನ್ನು ಬಿಟ್ಟುಬಿಡುವುದೇ ಸರಿಯೆಂದು ದೇವಿಯವರಿಗೆ ತೋರಲು ಮೊದಲಾಯಿತು. ಆದರೆ ಡಾಕ್ಟರು ಮಾತ್ರ 'ಮಗುವು ವಾಸಿಯಾಗುತ್ತಿದ್ದಾನೆ' ಎನ್ನುತ್ತಿದ್ದರು. ಅವರಿಗೆ ಏನು ಕಾಣಿಸುತ್ತಿತ್ತೋ ಏನೋ! ದೇವಿಯವರು ಐದನೆಯ ವಾರದಲ್ಲಿ ಹೋಗಬಾರದೆಂದು ನಿಶ್ಚಯಿಸಲು ಮನಸ್ಸು ಮಾಡುವಲ್ಲಿ, ಅವರಿಗೆ ಮಗುವಿನಲ್ಲಿ ಕೊಂಚ ಸೂಪ್ಪಾಡು ಕಂಡಿತು. ಅವರಿಗೆ ಆಶ್ಚರ್ಯವಾಯಿತು. ತಮ್ಮ ಕಣ್ಣನ್ನೇ ತಾವು ನಂಬದಾದರು. ಗುಣವೇನೋ ಬಹು ಕೊಂಚವೆ, ಆದರೆ ಗುಣದ ಸೂಚನೆಯು ನಿಶ್ಚಯ. ದೇವಿಯವರಿಗೆ ಧೈರ್ಯ ಬಂದಿತು. ಉತ್ಸಾಹ ಹುಟ್ಟಿತು. ಅವರು ಬಿಡದೆ ವಾರವಾರವೂ ಆಶ್ರಮದ ಆಸ್ಪತ್ರೆಗೆ ಹೋಗುತ್ತಿದ್ದರು.

ಹೀಗೆ ಎಂಟು ತಿಂಗಳು ಕಳೆಯುವ ಹೊತ್ತಿಗೆ ವೆಂಕಟೇಶನಿಗೆ ಬಹಳ ಮಟ್ಟಿಗೆ ಗುಣವಾಗಿತ್ತು. ಅವನ ತಾಯಿಯು ಸಂತೋಷವು ಉಕ್ಕಿ ಸುರಿದರೂ ಇನ್ನೂ ಅಲ್ಪ ಸ್ವಲ್ಪ ಕಾಹಿಲೆಯಿದ್ದುದರಿಂದ, ಆದರ ಆತಂಕವು ಸಂತೋಷವನ್ನು ಮುಚ್ಚಿತ್ತು. ಈ ಮಧ್ಯೆ ಡಾ. ಗುಪ್ತರಿಂದ ತಾವೂ ತಮ್ಮ ರೋಗಗಳಿಗೆ ಔಷಧ ಪಡೆದು ಗುಣಹೊಂದುತ್ತಿದ್ದರು ದೇವಿಯವರು.

ಎಂದಿನಂತೆ ಒಂದು ದಿನ ಪರೀಕ್ಷೆಯಾಯಿತು. ಡಾಕ್ಟರು ಔಷಧಿಯನ್ನು ಬರೆದುಕೊಟ್ಟರು. ಆಗ ದೇವಿಯವರು ಕೇಳಿದರು:

"ಡಾಕ್ಟರೆ, ಕಾಹಿಲೆಯೇನೋ ಗುಣವಾಗುತ್ತಿದೆ. ಆದರೆ ಬಹಳ ನಿದಾನ. ಸಂಪೂರ್ಣವಾಗಿ ವಾಸಿಯಾಗುವುದು ಎಂದು?"

ಡಾ. ಗುಪ್ತರು ನಸುನಕ್ಕರು: "ದೀರ್ಘವಾದ ಕಾಯಿಲೆ. ಬೇಗ ವಾಸಿಯಾದೀತೆ? ಅದಕ್ಕೆಷ್ಟೂ ಕಾಲಬೇಕು." ದೇವಿಯವರು "ಅಂದರೆ?" ಎಂದರು,

ಗುಪ್ತರು ಉತ್ತರ ಕೊಡಲಾಗದವರು ತಮಾಷೆಯಾಗಿ, ದಾನದ ಪೆಟ್ಟಿಗೆಯ ಕಡೆಗೆ ಬೆರಳನ್ನು ತೋರಿಸಿ "ತಾವು ಅದನ್ನು ಭರ್ತಿ ಮಾಡಿದಂದು; ಎಂಟು ತಿಂಗಳಿಂದ ತಾವು ಔಷಧಿಯನ್ನು ತೆಗೆದುಕೊಳ್ಳುತ್ತಿದ್ದರೂ ಈ ಪೆಟ್ಟಿಗೆಯು ತಮ್ಮ ಗಮನಕ್ಕೆ ಬಿದ್ದಂತೆಯೇ ಇಲ್ಲ!" ಎಂದರು.

ದೇವಿಯವರು ಚಕಿಮಿಕಿಯಾದರು. ಅವರು ಆ ಪೆಟ್ಟಿಗೆಯನ್ನು ಪ್ರತಿಯೊಂದು ಸಲವೂ ನೋಡಿದ್ದರು. ಇತರರು ಅದರೊಳಕ್ಕೆ ನಾಲ್ಕಾಣೆ-ಎಂಟಾಣೆ, ರೂಪಾಯಿಗಳನ್ನು ಹಾಕುವುದನ್ನೂ ಕಂಡಿದ್ದರು. ಅನೇಕರು ಪಾಕದಿದ್ದುದನ್ನೂ ನೋಡಿದ್ದರು. ಗುಪ್ತರು ಇದನ್ನು ಗಮನಕ್ಕೆ ತಂದುಕೊಳ್ಳದಂತೆಯೆ ಇರುತ್ತಿದ್ದರು. ಅವರು ಯಾರನ್ನೂ ಉದ್ದೇಶಿಸಿ ಹೀಗೆ ಹೇಳಿದುದನ್ನು ದೇವಿಯವರು ಕಾಣರು. ಹೀಗಿರುವಲ್ಲಿ ತಮಗೆ ಈ ಮಾತನ್ನು ಏಕೆ ಹೇಳಿದರು? ಇರಲಿ, ಇದರೊಳಕ್ಕೆ ಹಾಕುವುದು ಬಿಡುವುದು ತಮಗೆ ಸೇರಿದುದು. ಇವರದೇನು ಅಧಿಕಾರ? ಇದು ಧರ್ಮದಾಸ್ಪತ್ರೆಯಾಗಿರುವಲ್ಲಿ ಹೀಗೆ ಹೇಳುವುದಕ್ಕೆ ಇವರಿಗೇನು ಅಧಿಕಾರ? ನಾವು ಎತಕ್ಕೆ ಕೊಡಬೇಕು? ಹಣ ಉಳಿಸುವಲ್ಲಿ ಕಳೆಯುವುದೇತಕ್ಕೆ?.....

ಈ ಯೋಚನೆಗಳು ಅವರ ಮನಸ್ಸಿನಲ್ಲಿ ಬಂದು ನೆಕಂಡಿನಲ್ಲಿ ಹಾಯ್ದುಹೋದುವು. 'ಏನು ಡಾಕ್ಟರನ್ನು ಆಕ್ಷೇಪಿಸುವುದೇ? ಇಲ್ಲ. ಅದು ಸರಿಯಲ್ಲ. ತಮಾಷೆಯಾಗಿಯೇ ಕಾರ್ಯ ಸಾಧಿಸಿದರಾಯಿತು' ಎಂದು ನಿರ್ಧರಿಸಿಕೊಂಡು:

"ಡಾಕ್ಟರೆ, ಈಗ ಯುದ್ಧದ ಕಾಲ. ಎಲ್ಲರಿಗೂ ಹಣ-ಕಾಸಿನ ಮುಗ್ಗಟ್ಟು ಅಲ್ಲವೆ?" ಎಂದು ನಕ್ಕು ತಮ್ಮ ಹಣದ ಚೀಲದ ಬಾಯಿಯನ್ನು ತೆರೆದು ಹಾಗೆಯೆ ಮೆಲ್ಲಗೆ ಮುಚ್ಚಿ, ಡಾಕ್ಟರ ಗಮನವನ್ನು ತಮ್ಮ ಕುತ್ತಿಗೆಯ ನೋವಿನ ಕಡೆಗೆ ಸೆಳೆದರು. ಗುಪ್ತರು ಮತ್ತೆ ನಸುನಕ್ಕರು. ಅವರಿಗೆ ಮತ್ತೇನನ್ನೋ "ಪ್ರಾಯಶಃ ಈ ಮುಗ್ಗಟ್ಟು ಈ ಆಸ್ಪತ್ರೆಗಿಲ್ಲವೆ?" ಎಂದೋ ಏನೋ ಹೇಳಬೇಕೆಂದು ತೋರಿ ತುಟಿಯನ್ನು ಬೇರ್ಪಡಿಸಿದವರು, ವಾದವು ತಮಗೆ ತಕ್ಕದ್ದಲ್ಲವೆಂದು ನಿಶ್ಚಯಿಸಿ ಸುಮ್ಮನಾಗಿ, ದೇವಿಯವರ ಕುತ್ತಿಗೆಯನ್ನು ಪರೀಕ್ಷಿಸಲು ಮೊದಲು ಮಾಡಿ, ಎಂದಿನಂತೆ ನಯವಿನಯಗಳಿಂದ ವಿಚಾರಿಸಿ, ಔಷಧಿಯನ್ನು ಬರೆದುಕೊಟ್ಟು ದೇವಿಯವರನ್ನು ಕಳುಹಿದರು. ದೇವಿಯವರು ಅನಂತರ ಪೋಟಾರುಕಾರಿನಲ್ಲಿ ತಮ್ಮೊಳಗೇ ಹೇಳಿಕೊಂಡರು: "ಹೆಸರಿಗೆ ಧರ್ಮದ ಆಸ್ಪತ್ರೆ. ಹೋದರೆ ಹಣ ಕೇಳುವುದು. ಇದೇ ಇವರ ನೀತಿ!"

ಹತ್ತು ತಿಂಗಳ ತರುವಾಯ ವೆಂಕಟೇಶನಿಗೆ ಸಂಪೂರ್ಣವಾಗಿ ಗುಣವಾಗಿತ್ತು. ದೇವಿಯವರೂ ತಕ್ಕಮಟ್ಟಿಗೆ ಆರೋಗ್ಯ ಹೊಂದಿದರು. ಅವರ ಸಂತೋಷಕ್ಕೆ ಎಲ್ಲೆ ಇಲ್ಲದಾಯಿತು. ಈ ಸಂತೋಷಕ್ಕೆ ಕಾರಣನಾದ ಭಗವಂತನಿಗೆ ಧನ್ಯವಾದ ಒಪ್ಪಿಸಲು ದೊಡ್ಡ ಸಂಭ್ರಮದಿಂದ ಬಹಳ ವಿಜೃಂಭಣೆಯಿಂದ ಶ್ರೀ ಸತ್ಯನಾರಾಯಣನ ಪೂಜೆಯನ್ನು ನಡೆಯಿಸಿ, ತಮ್ಮ ಬಂಧು-ಮಿತ್ರರ ಪೈಕಿ ಬ್ರಾಹ್ಮಣ-ಮುತ್ತೈದೆಯರನ್ನೆಲ್ಲರನ್ನೂ ಕರೆದು, ವಿಧ ವಿಧ ಭಕ್ಷ್ಯ-ಭೋಜ್ಯಗಳಿಂದ ತಣಿಸಿ, ದಕ್ಷಿಣೆ ತಾಂಬೂಲಗಳನ್ನು ಕೊಟ್ಟು, ದೇವರನ್ನು ಮೆಚ್ಚಿಸಿ ಕೃತಕೃತ್ಯರಾದರು. ಹಿಂದೆ ಡಾ. ಗುಪ್ತರ ವಿಷಯವಾಗಿ ಹೇಳಿದ್ದ ಸ್ನೇಹಿತರೂ ಈ ಸಮಾರಂಭಕ್ಕೆ ಬಂದಿದ್ದರು. ಅವರು ದೇವಿಯವರನ್ನು ಕುರಿತು "ಡಾ. ಗುಪ್ತರು ಬಂದಿದ್ದರೆ?" ಎಂದು ಕೇಳಿದರು. ಅದಕ್ಕೆ ಉತ್ತರವಾಗಿ ದೇವಿಯವರು "ಏನೆಂದಿರಿ? ಡಾ॥ ಗುಪ್ತರೆ? ನಿಮಗೆ ತಿಳಿಯದೆ—ಅವರು ಬಂಗಾಳಿ ಬ್ರಾಹ್ಮಣರೇನೋ ನಿಜ; ಆದರೆ ಅವರು ಮೀನನ್ನು ತಿನ್ನುತ್ತಾರೆ—ಗೊತ್ತೆ? ನಾನು ವಿಚಾರಿಸಿದ್ದೇನೆ. ಇಂತಹವರನ್ನು ಕರೆದು ಬಿಟ್ಟರೆ, ಈ ಪವಿತ್ರ ಪೂಜೆಯೆಲ್ಲ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ" ಎಂದರು. ಸ್ನೇಹಿತರು ಬಾಯಿ ಮುಚ್ಚಿಕೊಂಡರು. ಪೂಜೆಗೆ ಬಂದಿದ್ದವರೆಲ್ಲ ಅವರ ಪೂಜೆಯ ರೀತಿಯನ್ನು ಮೆಚ್ಚಿ ಸ್ತುತಿಸಿ,


ಅಲ್ ಇಂಡಿಯಾ ಆಯುರ್ವೇದಿಕ ಕಾನ್‌ಫರನ್ಸ್ ೧೯೪೫ ರಲ್ಲಿ
ಬಂಗಾರದ ಮೆಡಲು ಪಡೆದಿರುವ—ಮಲೇರಿಯಾ
ರೋಗದ ಮೇಲೆ ಅಟಂ ಬಾಂಬಿನಂತಿರುವ

ಶೇಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ. ಕ್ವಿನಾಯಿನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ಪಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ ಕ್ಕೆ ೧-೧೫-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಧಾ ಕೆಮಿಕಲ್ ಕಂಪನಿ, ಸಿರಸಿ, ಉ ಕ.
ಸೋಲ್ ಏಜೆಂಟರು.—

ಎಸ್. ಎಲ್ (ಅಪ್ಪುರಾವ) ಧಾಕಪ್ಪಾ.
ಬಡವರ ಔಷಧಿ ಡಿಪೋ, ಸಿರಸಿ, ಉ. ಕಾನಡಾ
ಹಂಚುವವರು:
ಫ್ರೆಂಡ್ಸ್ ಸ್ಟೋರ್, ಧಾರವಾಡ.

ಮಗುವಿನ ಆರೋಗ್ಯಕ್ಕಾಗಿ ದೇವಿಯವರನ್ನು ಅಭಿನಂದಿಸಿ ಬೀಳ್ಕೊಂಡರು.

ಈ ಅವಸರದ ದೇವಸೇವೆಯು ಮುಗಿದ ಮೇಲೆ, ಹರಕೆಗಳನ್ನು ಸಲ್ಲಿಸುವ ಕಾಲವು ಬಂದಿತು. ಇನ್ನು ತಡಮಾಡಿದರೆ ದೇವರಿಗೆ ಸಿಟ್ಟುಬಂದು ಅನನುಕೂಲ ತೊಂದರೆಗಳಾಗಬಹುದೆಂಬ ಭಯವಿದ್ದುದರಿಂದ, ಅವರು ಯಾತ್ರೆಯನ್ನು ತಕ್ಷಣವೇ ಮೊದಲು ಮಾಡಿದರು. ಮೊದಲು ಬೃಂದಾವನ, ಆಮೇಲೆ ನಂಜನಗೂಡು, ಅನಂತರ ಮೇಲುಕೋಟೆ, ಕಡೆಯಲ್ಲಿ ತಿರುಪತಿ. ಈ ಯಾತ್ರೆಗಳು ಸಾಂಗವಾಗಿ ನೆರವೇರಿದುವು. ಎಲ್ಲೆಲ್ಲೂ ದೇವಿಯವರ ಸೇವಾವಿಧಿಯನ್ನು, ಆಗಮಿಕರಾದಿಯಾಗಿ ಸರ್ವರೂ ಕೊಂಡಾಡಿದರು. ಪೆಜ್ಜಿನವಸ್ತ್ರಾರ, ಉರುಳುಸೇವೆಗಳಾದ ಮೇಲೆ, ತುಲಾಭಾರ, ಅಭಿಷೇಕ, ಸಹಸ್ರನಾಮ, ಕುಂಕುಮಾರ್ಚನೆ, ಬ್ರಾಹ್ಮಣ ಸಂತರ್ಪಣೆಗಳು ಎಲ್ಲ ಕಡೆಗಳಲ್ಲೂ ಬಹು ವೈಭವದಿಂದ ನಡೆದುವು. ತಿರುಪತಿಯಲ್ಲಿಯೂ ಎಲ್ಲರೂ ಇವರ ಧಾರ್ಮಿಕ ನಿಷ್ಠೆಯನ್ನು ಕಂಡು ಬೆರಗಾದರು. ಅಲ್ಲಿಯ ಮುಖ್ಯ ಆಗಮಿಕರು "ಇಂತಹ ಉದಾರ ಮನಸ್ಸಿನ, ನಿಶ್ಚಲ ದೈವ ಪ್ರೇಮದ, ಕರ್ತವ್ಯಶ್ರದ್ಧೆಯ ಭಕ್ತರು ಕೇವಲ ಅಪೂರ್ವ" ಎಂದು ಹೇಳಿದರು. ದೇವಿಯವರ ಮುಖವು ಅರಳಿ ಹಿಗ್ಗಿತು. "ತಮ್ಮ ಮೂಲಕ ದೇವರೇ ನುಡಿದಿದ್ದಾನೆ; ನಾನೇ ಧನ್ಯೆ!" ಎಂದು ಉತ್ತರವಿತ್ತರು. ಮುಡಿಪಾಗಿ ಇಟ್ಟಿದ್ದ ಐದು ಸಾವಿರ ರೂಪಾಯಿಗಳನ್ನು, ಆಗಲೇ ತುಂಬಿ ತುಳುಕುತ್ತಿದ್ದ ತಿರುಪತೀಪತಿಯ ಖಜಾನೆಗೆ ಸುರಿದು, ಸೇವೆಯನ್ನು ಸಲ್ಲಿಸಿದ್ದಾಯಿತು.

ಇನ್ನು ವಾಪಸು ಹೋಗುವುದೊಂದೇ ಬಾಕಿ. ಅನಂತರ ಎಲ್ಲವೂ ಸುಖಕರ. ಸದಾ ಸಂತೋಷ. ಬಹುಕಾಲದ ಆನಂದ ಜೀವನ. ತಿರುಪತಿಯನ್ನು ಬಿಟ್ಟು ರೈಲಿನಲ್ಲಿ ಕುಳಿತದ್ದಾಯಿತು. ಇನ್ನೆರಡು ದಿನ ಕಳೆದರೆ ಬೊಂಬಾಯಿ. ಅಲ್ಲಿನ್ನು ಯಾತ್ರೆ ಕಳೆದ ಸಂತರ್ಪಣೆಯ ಯೋಜನೆಯು ದೇವಿಯವರನ್ನು ಅವಲಂಬಿಸಿ ರಾತ್ರಿಯಲ್ಲಿ ನಿದ್ದೆ ಕೊಡಲಿಲ್ಲ. ದೇವಿಯವರ ಬಳಿ ವೆಂಕಟೇಶನು ನಿದ್ರಿಸುತ್ತಿದ್ದನು. ಅವರು ಅವನನ್ನು ಕಂಡು ಆನಂದಪಟ್ಟು, ಕೆಳಗೆ ಜಾರಿದ ಹೊದ್ದಿಕೆಯನ್ನು ಅವನಿಗೆ ಹೊದ್ದಿಸಿ, ಪ್ರೇಮದಿಂದ ಹಣೆ ಸವರಿದರು. ಇದೇನು? ಮಗುವಿನ ಮೈ ಇಷ್ಟು ಸುಡುತ್ತಿದೆ? ಜ್ವರವೆ? ಹಾ! ನಿಜ, ಜ್ವರವೆ–ದೇವರೆ!

ಹೌದು. ವೆಂಕಟೇಶನಿಗೆ ನಿಜವಾಗಿ ಜ್ವರವೆ. ಇಷ್ಟೊಂದು ಪ್ರಯಾಣ, ನದಿ-ಕೊಳಗಳ ಸ್ನಾನ, ಹೊತ್ತುಗೊತ್ತಿಲ್ಲದ ಆಹಾರ, ಇವುಗಳೆಲ್ಲವೂ ಅವನ ಚಿಕ್ಕ ಶರೀರದ ಶಕ್ತಿಗೆ ಮೀರಿ ಜ್ವರಕ್ಕೆ ಗುರಿಮಾಡಿದ್ದುವು. ಇದೇ ಗಾಡಿಯಲ್ಲಿದ್ದು ಇವರ ಕತೆ ಕೇಳಿದ್ದ ವೈದ್ಯರು ಹೀಗೆ ಅಭಿಪ್ರಾಯಪಟ್ಟರು. ದೇವಿಯವರಿಗೆ ದಿಕ್ಕೇ ತೋಚದಂತಾಯಿತು. ನಿಟ್ಟುಸಿರು ಬಿಟ್ಟರು, ಕಣ್ಣೀರನ್ನು ಸುರಿಸಿದರು, ದೇವರಿಗೆ ಅನನ್ಯ ಪ್ರಾರ್ಥನೆಗಳನ್ನು ಸಲ್ಲಿಸಿದರು. ಬೆಳಗು ಕಳೆಯುವ ಹೊತ್ತಿಗೆ ವೆಂಕಟೇಶನಿಗಾಗಲೆ ಜ್ವರವು ಹೆಚ್ಚಾಗಿ ತುಂಬಿಯೂ ಆಯಿತು. ಅದೇ ವೈದ್ಯರ ಸಲಹೆಯಂತೆ ಮಾರನೆಯ ದಿನ ಗುಂತುಕಲ್ಲಿನಲ್ಲಿಳಿದು, ಅಲ್ಲಿಯ ಆಸ್ಪತ್ರೆಗೆ ಮಗುವನ್ನು ಸಾಗಿಸಿದರು ಅಲ್ಲಿ ಪರೀಕ್ಷಿಸಿದ್ದರಲ್ಲಿ ಮಗುವಿಗೆ 'ನ್ಯೂಮೋನಿಯಾ' ಕಾಣಿಸಿಕೊಂಡಿರುವುದೆಂದು ತಿಳಿದು ಬಂದಿತು. ದೇವಿಯವರ ಕೈಕಾಲು ಕೆಟ್ಟಿತು. ಒಂದು, ಎರಡು ದಿನ ಅಲ್ಲಿಯೇ ಕಳೆದರು. ದಿನ ರಾತ್ರಿ ನಿದ್ದೆಯಿಲ್ಲದೆ, ಆಹಾರ ತೆಗೆದುಕೊಳ್ಳದೆ, ಮಗುವಿನ ಒಳಿಕಾದರು. ಮೂರನೆಯ ದಿನ ವೆಂಕಟೇಶನಿಗೆ ಪ್ರಜ್ಞೆಯೂ ತಪ್ಪಿಹೋಯಿತು. ವೈದ್ಯರು ತಮಗೆ ಸಾಧ್ಯವಾದುದನ್ನೆಲ್ಲ ಮಾಡುವುದಾಗಿಯೂ ಆದರೆ ಗುಣವಾಗುವುದು ಖಂಡಿತವಿಲ್ಲವೆಂದೂ ತಿಳಿಸಿಬಿಟ್ಟರು. ದೇವಿಯವರಿಗೆ ಸಿಡಿಲು ಬಡಿದಂತಾಯಿತು ಏನನ್ನು ಮಾಡಲೂ ತೋಚದು. "ಬೊಂಬಾಯಿಂದನ್ನು ತಲುಪಿದರೆ ಸಾಕು; ಡಾ ಗುಪ್ತರನ್ನು ಕರೆಯಿಸಿ ತೋರಿಸುತ್ತೇನೆ. ಅವರಾದರೆ ಖಂಡಿತ ವಾಸಿಮಾಡುತ್ತಾರೆ!" ಎಂದುಕೊಂಡು ವೈದ್ಯರನ್ನು ಕುರಿತು ಕೇಳಿದರು:

"ಡಾಕ್ಟರೆ, ಹೇಗೊ ಬೊಂಬಾಯಿಯನ್ನು ತಲುಪುವುದ ಕ್ಯಾಗುವುದಿಲ್ಲವೆ?"

ವೈದ್ಯರು ತಲೆಯಾಡಿಸಿ "ಏನು ಹುಚ್ಚು! ಮಗುವು ಉಳಿಯುವ ಅಲ್ಪ ಸ್ವಲ್ಪ ಸಂಭವವೂ ಕರಗಿಹೋಗುತ್ತದೆ!"

ದೇವಿಯವರು ಸುಮ್ಮಗಾದರು. ಇನ್ನು ಮಾತನ್ನೂ ಸಹ ಆಡದಾದರು. ಇನ್ನು ಆಗುವುದನ್ನು ನಿರೀಕ್ಷಿಸುತ್ತಿದ್ದರು. ಮಾಡಿದುದೆಂದರೆ ದೇವರಿಗೆ ಬಗೆಬಗೆಯ ಪ್ರಾರ್ಥನೆಗಳನ್ನು ಸಲ್ಲಿಸಿದುದು ಮಾತ್ರ.

ಹೀಗೆಯೇ ಪ್ರಜ್ಞೆ ಇಲ್ಲದೆ ಇನ್ನೆರಡು ದಿನ ಕಳೆದು, ವೆಂಕಟೇಶನು ದೇಹತ್ಯಾಗ ಮಾಡಿದನು.

* * *

ಬೊಂಬಾಯಿಯನ್ನು ಮುಟ್ಟಿದಾಗ ದೇವಿಯವರು 'ಜೀವತ್ಯವ'ದಂತಾಗಿದ್ದರು. ಅವರಿಗೆ ಇಲ್ಲಿರಲು ಮನಸ್ಸಿಲ್ಲದೆ ಹೋಯಿತು. ಹದಿನೈದು ದಿನದಲ್ಲಿ ಮನೆಯನ್ನೂ, ಜೇರುಗಳನ್ನೂ ಸಿಕ್ಕಷ್ಟಕ್ಕೆ ವಿಕ್ರಯಿಸಿ, ಹಣವನ್ನು ಬ್ಯಾಂಕಿಗೆ ಹಾಕಿ, ಮುಂದೆ ತಮಗುಳಿದ ದಿನಗಳನ್ನು ಕಾಶಿಯ ಪವಿತ್ರ ಕ್ಷೇತ್ರದಲ್ಲಿ ಶ್ರೀವಿಶ್ವೇಶ್ವರನ ಪಾದಸೇವೆಯಲ್ಲಿ ಕಳೆದು ಮುಕ್ತಿಗೆ ಮಾರ್ಗವನ್ನು ಕಲ್ಪಿಸಿಕೊಳ್ಳಬೇಕೆಂದು ನಿಶ್ಚಯಿಸಿ, ಅಲ್ಲಿಗೆ ಪ್ರಯಾಣ ಮಾಡಿದರು.

# ಧೂಳಿಕಣ

( Dust Particles )

( ವಿಜ್ಞಾನವಿಚಾರ )

ಶ್ರೀ. ನಿ. ಚ. ಹಿಪ್ಪರಗಿಮಠ, ಒಕ್ಕಲುತನದ ಕಾಲೇಜು ಪುಣೆ.

★

ನಮಗೆ ಬೇಡವೆಂದು ಎನಿಸುವ ಅನೇಕ ಬೇಸರದ ವಸ್ತುಗಳು, ನಮ್ಮ ಬದುಕಿಗೆ ತೀರ ಬೇಕಾದುವುಗಳಾಗಿ ಇರುವುವೆಂದು ಇಂದಿನ ವಿಜ್ಞಾನಸಂಶೋಧನೆ ಹೇಳುತ್ತಿದೆ. ಧೂಳಿಯ ನಿವಾರಣೆಗಾಗಿ ನಾವು ಎಷ್ಟೊಂದು ಹೆಣಗುತ್ತೇವೆ; ಆದರೆ ಅದು ಸಂಪೂರ್ಣ ನಷ್ಟವಾದರೆ ಲೋಕಕ್ಕೆ ಎಷ್ಟೊಂದು ಅಪಾಯ?

★

" ಅರಿಬಲವುಂ ಧೂಳಿಪಟಮಾಡಿ ಹಾರಿಸಿಬಿಡುವೆಂ "
" ಪಾದಧೂಳಿಯಿಂದ ಪಾವನತೆಯನ್ನು ಪಡೆವೆ "

ಇವೇ ಮೊದಲಾದ ಪ್ರಯೋಗಗಳು ಬಳಕೆಯಲ್ಲಿದ್ದುದನ್ನು ಕಾಣಬಹುದು. 'ಅರಿಬಲವುಂ ಧೂಳಿಪಟಮಾಡಿ ಹಾರಿಸಿಬಿಡುವೆಂ' ಎಂದು ಹೆಮ್ಮೆಯಿಂದ ಹೇಳಿದಾಗ, ಒಬ್ಬನ ಶೂರವೀರತನಗಳು ತೋರಿಬರುವುವಲ್ಲದೆ, ಅರಿಬಲದ ಪರಿಣಾಮವೆದ್ದು ನಿಲ್ಲುವುದು. ಇಲ್ಲಿ ಧೂಳಿಕಣವು ಒಂದು ಅಲ್ಪ, ಕೀಳುವಸ್ತುವಾಗಿ ನಿಲ್ಲುವುದು. 'ಪಾದಧೂಳಿಯಿಂದ ಪಾವನತೆಯ ಪಡೆವಲ್ಲಿ' ಧೂಳಿಕಣವು ಪಾದಗಳೊಂದಿಗೆ ಪಾವನತೆಯ ಶ್ರೇಷ್ಠ-ಸಿಂಹಾಸನದಲ್ಲಿ ಆರೂಢವಾಗುವುದು. ಇಂತಹ ಇನ್ನೂ ಎಷ್ಟೋ ಪ್ರಯೋಗಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ, ಧೂಳಿಕಣದ ಯಥಾರ್ಥಜ್ಞಾನವಾಗುವುದು ಖಂಡಿತ. ಮೇಲಿನ ಪಡೆನುಡಿಗಳೆರಡಕ್ಕೆ ಬರಿಯ ಸಾಹಿತ್ಯದೃಷ್ಟಿಯಿಂದಷ್ಟೆ ಮಹತ್ತ್ವವಿಲ್ಲ; ಶಾಸ್ತ್ರೀಯ ದೃಷ್ಟಿಯಿಂದಲೂ ಅವು ಸತ್ಯವಾಗಿವೆ. ಹಾರಿಬಿಡಬೇಕಾದರೆ ಧೂಳಿಕಣಗಳು ಹಗುರಾಗಿ, ಅತಿಕಡಿಮೆ ಸಾಂದ್ರತೆಗಳುಳ್ಳವುಗಳಾಗಿರುವುವೆಂಬುದರ ಕಲ್ಪನೆಯು ಬರುವುದು; ಪಾವನಗೈಯುವ ಶಕ್ತಿ ಧೂಳಿಕಣದಲ್ಲಿ ನೆಲಸಿರಬೇಕಾದರೆ, ಧೂಳಿಕಣವೆಂತಹ ಯೋಗ್ಯತಾಶೀಲವಾಗಿರಬೇಕು? ಒಂದು ಸಣ್ಣ ಸೂಕ್ಷ್ಮವಾದ ಕಣದಿಂದ ಇದು ಸಾಧ್ಯವೆ! ಸಂದೇಹವೇ ಇಲ್ಲ; 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು!' ಧೂಳಿಕಣಗಳು. ಭೂಮಿಯ 'ಬೀಜಾಣುಗಳು' (Nucleus) ಎಂದರೂ ತಪ್ಪಿಲ್ಲ.

ಬೀದಿಯಲ್ಲಿ ನಾವು ನಡೆಯುವಾಗ, ಒಂದು ಮೋಟಾರು ಭರದಿಂದ ಸಾಗಿಹೋದರೆ, ಮಾರ್ಗವೆಲ್ಲ ಧೂಳಿಯಿಂದ ಮುತ್ತಿಹೋಗುವುದು. ನಮ್ಮ ಉಸಿರಾಟಕ್ಕೆ ತೊಂದರೆ ತಟ್ಟುವುದು. ಆಗ ನಾವು ಗ್ರಾಮಪಂಚಾಯತಿಯನ್ನೊ, ನಗರಸಭೆಯನ್ನೊ ಹಿಂದುಮುಂದು ನೋಡದೆ ಶಪಿಸುವೆವು (ಮಾರ್ಗಗಳಿಗೆ ಕಲ್ಲೆಣ್ಣೆ ಬಳಿಯದೆ ಇದ್ದುದಕ್ಕೋ ಇಲ್ಲವೇ ನಿತ್ಯ ನೀರೆರೆಯದೆ ಇದ್ದುದಕ್ಕೋ). ಅನಂತರ ಮೋಟಾರು ನಡೆಯಿಸುವವನೂ, ಅದರಲ್ಲಿ ಕುಳಿತವರೂ ನಮ್ಮ ಬೈಗುಳವಮಾಲಿಕೆಯಲ್ಲಿ ಬಂದುಹೋಗುವರು. ಹಲವು ಸಲ ಮೃದುವಾಗಿ ಬೀಸಿ, ಮೊಗ್ಗುಗಳನ್ನು ಅರಳಿಸಿ, ಮುಗುದೆಯರ ಮುಂಗುರುಳನ್ನು ತೇಲಿಸುವ ಸುಳಿಗಾಳಿಗೆ ಒಂದಿನಿತು ಬಲವು ಬಂದುಬಿಟ್ಟುದಾದರೆ, ಅದೂ ಕಿಡಿಗೇಡಿತನವಮಾಡಿ ಮಾರ್ಗದ ಧೂಳಿಯನ್ನು ಎಬ್ಬಿಸುವುದು. ಆಗ ನಾವು ಕಣ್ಣುಮುಚ್ಚುತ್ತೇವೆ. ಮೊದಲಿಗೇನೇ ಕಣಗಳು ಕಣ್ಣಲ್ಲಿ ಸೇರಿದರೆ, ಎಷ್ಟೋ ಸಮಯ ಗೋಳಿಡುತ್ತೇವೆ. ಗಂಧಧ ಸಾಬೂನು ಹಚ್ಚಿ ಸ್ವಚ್ಛವಾಗಿ ತೊಳೆದುಕೊಂಡು ಒಂದ ದೇಹ ಹೊಲಸಾಗುತ್ತದೆ. 'ಪ್ಯಾರಿಸಿನಲ್ಲಿ ಬೈಗು' ಸೆಂಟು ಹಚ್ಚಿ ಹಿಕ್ಕಿಕೊಂಡು ಬಂದ ತಲೆಗೂದಲುಗಳಲ್ಲಿ ಧೂಳಿಸೇರುತ್ತದೆ. ಮಡಿಮಾಡಿಕೊಂಡೊ, ಮಾಡಿಸಿಕೊಂಡೊ ಧರಿಸಿದ್ದ ಒಟ್ಟೆಗಳೆಲ್ಲವೂ ಕೊಳೆಯಾಗುತ್ತವೆ; ಎಲ್ಲಕ್ಕೂ ಹಿರಿದಾಗಿ ಅಸಂಖ್ಯಾತ ರೋಗಜಂತುಗಳ ಹಬ್ಬುವಿಕೆಯು ಧೂಳಿಯಿಂದಲೇ ನಡೆಯುವುದು. ಅದರಲ್ಲಿಯೂ ಕ್ಷಯ (T. B.) ರೋಗದಂತಹ ಭಯಾನಕ ರೋಗಜಂತುಗಳ ಪ್ರಸರಣವು ಅತಿ ಅವಸರದಿಂದ ನಡೆಯುತ್ತದೆ. ಇವೆಲ್ಲವೂ ದಿಟ! ಯಾರೂ ಅಲ್ಲಗಳೆಯಲು ಬಾರದಂತಹ ಹದಿನಾರಾಣೆ ಸತ್ಯಸಂಗತಿಗಳು!! ಈ ಕ್ಷುದ್ರಕಣಗಳಿಂದ ನನುಗೇಕೆ ತೊಂದರೆ ತಟ್ಟಬೇಕು? ಧೂಳಿಕಣಗಳೆಲ್ಲವೂ ಬಟ್ಟಾಗಿ, ಲೋಕದಿಂದ ನಿವೃತ್ತವಾಗಬಾರದೇಕೆ? ಲೋಕಕ್ಕೆ ಒದಗಬಹುದಾದ ತೊಂದರೆಯಲ್ಲಿ— ಬಹಳವಿಲ್ಲದಿದ್ದರೂ— ಒಂದಿನಿತಾದರೂ ಸಂಕಟ ಕಡಿಮೆಯಾದೀತಲ್ಲವೆ?... ಹೀಗೆಲ್ಲ ಬಯಸುವುದೂ ಒಳಿತೆ! ಆದರೆ ಇದು 'ಸವತಿ ರಂಡೆಯಾಗಲಿ!' ಎಂದು ಹರಕೆಹೊತ್ತಂತಾಗುವುದು ಎಂದು ಹೇಳಿದರೆ, ಹಲವರಿಗೆ ಅಚ್ಚರಿಯೆನಿಸೀತು.

ವಾತಾವರಣವು, ನಾಯ್‌ಟ್ರೋಜನ್, ಪ್ರಾಣವಾಯು (Oxygen) ಆರ್ಗೋನ್, ಅಂಗಾರಾಮ್ಲವಾಯು (Carbon di-oxide gas) ನೀರಿನ ಉಗಿ (Water vapour) ಜಲಜನಕವಾಯು (Hydrogen) ನಿಯೋನ, ಹೇಲಿಯಮ್, ಕ್ರಿಪ್ಟೋನ್, ಝೆನೋನ್, ಓಝೋನ್ ಮತ್ತು ಇನ್ನಿತರ ಸೂಕ್ಷ್ಮಕಣಗಳಿಂದ ಸೇರಿಸಿದ್ದವಾಗಿದೆಯೆಂದು ಶಾಸ್ತ್ರಜ್ಞರು ಅಭಿಪ್ರಾಯಪಡುವರು. ಇವುಗಳಲ್ಲಿ ಮೊದಲಿನವೆರಡೂ ಹೆಚ್ಚಿನ

ಪ್ರಮಾಣದಲ್ಲಿಯೂ, ಉಳಿದುವುಗಳು ತೀರ ಕಡಿಮೆಪ್ರಮಾಣದಲ್ಲಿಯೂ ಇರುತ್ತವೆ. ಸೂಕ್ಷ್ಮವಾದ ಕೊನೆಯ ಕಣಗಳನ್ನುಳಿದರೆ ಉಳಿದುವೆಲ್ಲವುಗಳು ವಾಯುಗಳು. ಅಂಗಾರಾಮ್ಲವಾಯು, ನೀರಿನ ಉಗಿ, ಸೂಕ್ಷ್ಮಕಣ ಈ ಮೂರನ್ನುಳಿದರೆ ಎಕ್ಕುವು ನಿಯಮಿತಪ್ರಮಾಣದಲ್ಲಿರುತ್ತವೆ. ಈ ಮೂರು ಮಾತ್ರ ವಾತಾವರಣದಿಂದ ವಾತಾವರಣಕ್ಕೆ ಬದಲಾಗುತ್ತವೆ.

ವಾತಾವರಣದಲ್ಲಿ ತೋರಿಬರುವ ಸೂಕ್ಷ್ಮಕಣಗಳು ಎರಡು ತೆರನಾಗಿರುತ್ತವೆ. ಸೇಂದ್ರೀಯ ಮತ್ತು ನಿರಿಂದ್ರೀಯ. ಸೇಂದ್ರೀಯ ಕಣಗಳು ಅತಿಸೂಕ್ಷ್ಮವಾದುವುಗಳಾಗಿರುತ್ತವೆ; ನಿರಿಂದ್ರೀಯ ಕಣಗಳು ಅವುಗಳಿಗಿಂತ ಸ್ವಲ್ಪ ದೊಡ್ಡವುಗಳಾಗಿ, ಹೆಚ್ಚಿನ ಪ್ರಮಾಣದಲ್ಲಿರುತ್ತವೆ. ಇವೇ ಧೂಳಿಕಣಗಳು! ಧೂಳಿಯ ಕಣಗಳು ಭೂಮಿಯ ಮೇಲೆ ಹೇಗೆ ಬಗುತ್ತವೆ? ಅವುಗಳ ಹುಟ್ಟು ಎಲ್ಲಿ?

ಇಂದು ಜಗತ್ತಿನಲ್ಲಿ ನಾವೆಲ್ಲರೂ ನೋಡುವ ಮಣ್ಣು, ಅನೇಕ ಪುಡಿಮಾಡುವ ವಿಧಾತರ ನೆರವಿನಿಂದ— ಕಲ್ಲು ಮತ್ತು ಖನಿಜಗಳಿಂದ—ಸಿದ್ಧವಾಗಿದೆ. ನೆಲದ ಮೇಲೆ ಬೀಸುವ ಗಾಳಿಯು ಅತಿ ಜಿನುಗಾದ ಮಣ್ಣನ್ನು ಮೇಲಕ್ಕೆ ಹಾರಿಸಿ, ಹವೆಯಲ್ಲಿ ಧೂಳಿಕಣಗಳನ್ನು ಈಜಿಸುವ ಏರ್ಪಾಡು ಮಾಡುತ್ತದೆ. ಜ್ವಾಲಾಮುಖಿಯ ಸ್ಫೋಟದಿಂದಲೂ ಧೂಳಿಕಣಗಳು ವಾತಾವರಣದಲ್ಲಿ ಅಧಿಕವಾಗುತ್ತವೆ. ೧೮೮೩ರಲ್ಲಿ ಸುಮಾತ್ರಾ, ಜಾವಾಗಳ ಮಧ್ಯದಲ್ಲಿರುವ ಕ್ರಾಕಟೋವಾದ್ವೀಪದಲ್ಲಿ ನಡೆದ ಜ್ವಾಲಾಮುಖಿಯು, ಆಗಸದಲ್ಲಿ ಸುಮಾರು ಇಪ್ಪತ್ತು ಮೈಲುಗಳ ವರೆಗೆ ಧೂಳಿ ಮತ್ತು ಉಗಿಯನ್ನು ಚಿಮ್ಮಿತು. ಈ ಧೂಳಿಕಣಗಳು ಸತತ ಮೂರು ವರುಷಗಳವರೆಗೆ ಸೂರ್ಯನನ್ನು ಮುಳುಗುವಾಗ, ಜಗತ್ತಿನ ಎಲ್ಲೆಡೆಯಲ್ಲಿಯೂ ಕಂಡುಬರುತ್ತಿದ್ದುವು. ಧೂಮಕೇತುವು ವಾತಾವರಣದಲ್ಲಿ ಹಾಯ್ದುಹೋಗುವಾಗ, ನಿಗಿನಿಗಿಯಾಗಿ ಕಾಯ್ದು ಅನಂತರ ಪುಡಿಪುಡಿಯಾಗಿ, ಹವೆಯಲ್ಲಿಯ ಧೂಳಿಯಕಣಗಳನ್ನು ಹೆಚ್ಚಿಸುತ್ತದೆ. ಕಡಲತುಂತುರು ಹನಿಗಳು ಉಗಿಯಾಗಿ ಹೋಗಿ, ಅನೇಕ ಲವಣಗಳ ಕಣಗಳು ಹಾಗೆಯೆ ಉಳಿಯಲ್ಪಟ್ಟು, ಧೂಳಿಕಣಗಳ ಸಂಖ್ಯೆ ಹೆಚ್ಚುವುದು.

ಧೂಳಿಯ ಕಣಗಳು ಅತಿ ಸೂಕ್ಷ್ಮವಾಗಿವೆ; ಸಮುದ್ರ ಸಪಾಟಿಯಿಂದ ಎತ್ತರ ನಡೆದಂತೆ, ಕಣಗಳ ಸಂಖ್ಯೆ ಇನ್ನೂ ಕಡಿಮೆಯಾಗುವುದು. ಧೂಳಿಯಿಂದ ತುಂಬಿದ ನಗರದ ವಾತಾವರಣದಲ್ಲಿ, ಪ್ರತಿ ಘನ ಸೆಂಟೀಮಾಟರ್ ಸ್ಥಳದಲ್ಲಿ ಒಂದು ಲಕ್ಷ ಧೂಳಿಯ ಕಣಗಳಿರುತ್ತವೆ. ಸಿಗಾರೇಟನ್ನು ಸೇದಿಬಿಟ್ಟ ಒಂದು ಘನ ಸೆಂಟೀಮಾಟರ್ ಸ್ಥಳದಲ್ಲಿ, ನಾಲ್ಕು ಅಬ್ಜ ಕಣಗಳನ್ನು ಕಾಣಬಹುದು. ಸಾಧಾ ಹವೆಯಲ್ಲಿ ಒಂದು ಘನ ಇಂಚು ಸ್ಥಳದಲ್ಲಿ ಎರಡುವರೆಯಿಂದ ಐದು ಲಕ್ಷಗಳ ವರೆಗೆ ಇರುವುವು; ಬನ್‌ಶನ್ ದೀಪದ ಮೇಲಿನ ಹವೆಯಲ್ಲಿ ನಾಲ್ವತ್ತೆಂಟು ಕೋಟಿ ಹೊಂಭತ್ತು ಲಕ್ಷ ಕಣಗಳಿರುವುದು ಕಂಡು ಬರುತ್ತದೆ. ಉಷ್ಣತೆ ಹೆಚ್ಚಿದಂತೆ, ಧೂಳಿಯ ಕಣಗಳ ಸಂಖ್ಯೆಯೂ ಹೆಚ್ಚುವುದು; ಎಂದ ಮೇಲೆ ಇಷ್ಟು ಸೂಕ್ಷ್ಮವಾದ ಕಣಗಳನ್ನು ಎಂತು ಎಣಿಸಿದರು?

ಧೂಳಿಮಾಪನ (Dust Counter) ಎಂಬ ಒಂದು ಯಂತ್ರವಿರುವುದು. ಅದರ ನೆರವಿನಿಂದ ಧೂಳಿಯ ಕಣಗಳನ್ನು ಎಣಿಸಲು ಸಾಧ್ಯವಾಯಿತು. ನಿರ್ದಿಷ್ಟ ಹವೆಯನ್ನು ಮೊದಲು ಈ ಯಂತ್ರದಲ್ಲಿ ಸಂಗ್ರಹಿಸಿ, ಅನಂತರ ಅದರ ಉಷ್ಣತಾಮಾನವನ್ನು ಕಡಿಮೆ ಮಾಡುತ್ತಾರೆ. ಆಗ ಹವೆಯಲ್ಲಿಯ ತಂಪಿನ ಕೆಲವೊಂದು ಭಾಗವು ಕಣಗಳ ಮೇಲೆ ಕೂಡುತ್ತದೆ; ಕಣಗಳು ಭಾರವಾಗುತ್ತವೆ. ಭಾರವಾದ ಕಣಗಳು ಒಂದು ತಗಡಿನ ತುಂಡಿನ ಮೇಲೆ ಕೂಡುತ್ತವೆ ಕೊನೆಯಲ್ಲಿ ಆ ಕಣಗಳನ್ನು ಸೂಕ್ಷ್ಮದರ್ಶಕ ಯಂತ್ರದ ನೆರವಿನಿಂದ ಎಣಿಸಬಹುದು.

ಕೋಟ್ಯನುಕೋಟಿ ಧೂಳಿಯ ಕಣಗಳು ಹವೆಯಲ್ಲಿ ಇದ್ದರೂ, ಎಲ್ಲವೂ ನಮ್ಮ ಬರಿಗಣ್ಣಿಗೆ ಕಾಣುವುದಿಲ್ಲ. ಅವು ಗಾಳಿ ಬಿಟ್ಟಾಗ ಮಾತ್ರ ತೋರುವುವು ಮತ್ತೆ ಕೆಲವು ಸೂರ್ಯನ ಕಿರಣಗಳ ಸೆಳಕುಗಳಲ್ಲಿ ಮಾತ್ರ ನೋಡುವುದಕ್ಕೆ ಸಿಕ್ಕುವುವು. ಕತ್ತಲು ತುಂಬಿದ ಕೋಣೆಯಲ್ಲಿ ಒಂದು ಚಿಕ್ಕ ಕಿಂಡಿಯಿಂದ ನೇಸರಿನ ಕೋಲುಬೆಳಕು ಒಳಸೇರಿದ್ದರೆ, ನಾವು ಆ ಮಾರ್ಗದಲ್ಲಿ ಧೂಳಿಯ ಕಣಗಳನ್ನು ಕಾಣುತ್ತೇವೆ.

ಅನೇಕ ವಿಷಯುಗಳಲ್ಲಿ ಮಾನವರು ಮತ್ತು ಪಶುಪಕ್ಷಿಗಳು ಧೂಳಿಯ ಕಣಗಳಿಗೆ ಕೃತಜ್ಞತೆಯಿಂದ ತಲೆವಾಗಬೇಕಾಗುತ್ತದೆ. ಹಕ್ಕಿಯೊಂದು ರೆಕ್ಕೆ ಬಿಚ್ಚಿ ಗಗನದಲ್ಲಿ ನೆಗೆಯುತ್ತದೆ. ಅದನ್ನು ಕಂಡ ಕವಿಯೊಬ್ಬನು ಹೃದಯ ಹಿಗ್ಗಿಸಿ, ಜಾಯ್ದೆರೆದು ಬಣ್ಣಿಸುತ್ತಾನೆ; ಅದನ್ನು ಆಲಿಸಿದವರು ಆನಂದಿಸುತ್ತಾರೆ. ಹವೆಯಲ್ಲಿ ಧೂಳಿಯ ಕಣಗಳಿಲ್ಲದಿದ್ದರೆ ಘರ್ಷಣೆಯು (Friction) ಸಾಧ್ಯವಿರಲಿಲ್ಲ. ಹಕ್ಕಿ ಹಕ್ಕಿಗಳು ರೆಕ್ಕೆ ಬಿಚ್ಚಿ ಜಿಂಗನೆ ಬಿಗಿದು ಹಾರಾಡುವುದೂ ಸಾಧ್ಯವಿರಲಿಲ್ಲ. ವಿಮಾನಗಳು ಇಂದು ಆಗಸಮಾರ್ಗದಲ್ಲಿ ನಡೆದಾಡುವುದು, ಹವೆಯಲ್ಲಿ ಧೂಳಿಯಕಣಗಳು ಇಲ್ಲದಿದ್ದರೆ ಸಾಧಿಸುತ್ತಲೆ ಇರಲಿಲ್ಲ. ಅಂದು ದೇವರುಗಳು ದೇವಲೋಕದಿಂದ ಮೃತ್ಯುಲೋಕಕ್ಕೆ, ಮೃತ್ಯುಲೋಕದಿಂದ ದೇವಲೋಕಕ್ಕೆ ಪಯಣ ಮಾಡುತ್ತಿದ್ದರಂತೆ; ಅವರ, ಪಯಣ ಸುಸೂತ್ರವಾಗಿ ಸಾಗಿದುದು ಧೂಳಿಯ ಕಣಗಳ ಕೃಪೆಯಿಂದಲೆ. ಬಹಳವೇಕೆ, ನಾವು ಮಡಿದನಂತರ ನಮ್ಮ ಜೀವವು ಹಾರಿಹೋಗುವುದಕ್ಕೆ ಹವೆಯಲ್ಲಿಯ ಧೂಳಿಕಣಗಳನ್ನುಳಿದರೆ ಬೇರೆ ಗತಿಯಿಲ್ಲ. ಅಂದು ಕಾಳಿದಾಸ 'ಮೇಘದೂತ'ವನ್ನು ಬರೆದನು; ಲೋಕಕ್ಕೇ ಪ್ರಸಿದ್ಧನಾದನು. ಇಂದು ಅನೇಕ ಕವಿಗಳು ಕಪ್ಪು ಮುಗಿಲುಗಳನ್ನು (Cloud) ಲಲನೆಯರ ಮುಂದಲೆಗೂ ಮುಂಗುರುಳಿಗೂ ಹೋಲಿಸುತ್ತಾರೆ. ಭಕ್ತರೆಲ್ಲರೂ ವಿಷ್ಣುವನ್ನು "ಮೇಘಶ್ಯಾಮ" ನೆಂದು ಕರೆದರು. ನೀರು ಉಗಿಯಾಗುತ್ತದೆ. ಉಗಿ ಆಕಾಶಕ್ಕೆ ಏರುತ್ತದೆ. ಹೀಗಾಗಿ,

ಹವೆಯು ನೀರಿನ ಉಗಿಯಿಂದ ಸಂತೃಪ್ತವಾಗುತ್ತದೆ. ಆಗ ಏನಾದರೂ ಕಾರಣಗಳಿಂದ ಹವೆಯಲ್ಲಿಯ ಉಷ್ಣತೆಯು ಕಡಿಮೆಯಾದರೆ, ಆ ಉಗಿಯಲ್ಲಿಯ ಕೆಲಭಾಗವು ತಂಪಾಗಿ, ಧೂಳಿಕಣದ ಸುತ್ತಲೂ ಕೂಡುತ್ತದೆ. ಅಂತಹ ಧೂಳಿಯ ಕಣಗಳ ಸಮುದಾಯವೇ ಮುಗಿಲುಗಳು. ಮುಗಿಲುಗಳಿಂದ ಮಳೆ-ಬರುತ್ತದೆ. ಮಳೆಯಿಂದ ಬೆಳೆ ಬರುತ್ತದೆ; ಬೆಳೆಯಿಂದ ಅನ್ನ ಸಿಕ್ಕುತ್ತದೆ. ಇದೆಲ್ಲವೂ ಧೂಳಿಯ ಕಣದ ಕೃಪೆಯಿಂದ.

ಇಂದಿನದನ್ನು ವಿದ್ಯುತ್ತಿನ ಯುಗವೆಂದು ಕರೆಯುವುದಾದರೆ, ಈ ಖ್ಯಾತಿ ಯಾರಿಗೆ? ವಿದ್ಯುತ್ತಿನ ಕಲ್ಪನೆಯು ಮೊದಲು ಮಾನವರಿಗೆ ತೋರಿಬಂದುದು ಮೋಡಗಳಿಂದುಂಟಾದ ಮಿಂಚುಗಳಿಂದಲ್ಲವೆ? ಬೆಳಗಿನಲ್ಲಿ ನೇಸರು ಉದಯಿಸುತ್ತಾನೆ. ಮೂಡಲ ಬಾನೆಲ್ಲವೂ ಬಣ್ಣ ಬಣ್ಣಗಳಿಂದ ಸಿಂಗರಗೊಳ್ಳುತ್ತದೆ. ಬೈಗಿನಲ್ಲಿ ನೆಸರು ಪಡುವಣ ಬಾನಿನಲ್ಲಿ ಅಡಗುವನು; ಮತ್ತೆ ಬಾನು ವಿಚಿತ್ರಾಂಬರವನ್ನುಟ್ಟಂತಾಗುವುದು. ನೇಸರು ಅಸ್ತಂಗತನಾದರೂ ನಸುಗೆಂಪು ಬಣ್ಣದ ಸಂಧ್ಯಾಪ್ರಕಾಶ ಲೋಕವನ್ನೆಲ್ಲ ಆವರಿಸುವುದು. ಮಳೆಗಾಲದ ಕೆಲವು ದಿವಸಗಳಲ್ಲಿ ತಿಂಗಳು ಕಣ್ಣು ಕಟ್ಟುತ್ತಾನೆ; ಮುಗಿಲುಗಳು ತುಂಡುತುಂಡುಗಳಾಗಿ ಒಡೆದು ತಿಂಗಳಿನ ಮೈಗಾವಲಿಗೆ ನಿಂತಿರುವುವೋ ಎಂಬಂತೆ ತೋರುತ್ತದೆ. ಮುಂಜಾವದಲ್ಲಿ, ಸಂಜೆಯಲ್ಲಿ, ಏಸಿಲು ಬಿದ್ದಿರುವಾಗ ಮಳೆಸುರಿಯಲು ಕಾಮನ ಬಿಲ್ಲು ಮೂಡಿ ಎದ್ದು ನಿಲ್ಲುವುದು. ಆಗ ನಾವೆಲ್ಲ ಬಾಯ್ದೆರೆದು ನಿಂತು ನೋಡುತ್ತೇವೆ; ಇವೆಲ್ಲವೂ ಧೂಳಿರಾಯನ ಮಹಾತ್ಮ್ಯ!

ಇಂದು ಲೋಕದ ಜನರು ಬಾನು ಉಲಿಯತ್ತಿದೆಯೆಂದೆನ್ನುವರು. ಒಬ್ಬರು ಮಾತಾಡಿದುದನ್ನು ಇನ್ನೊಬ್ಬರು ಆಲಿಸುತ್ತಾರೆ; ವಿಜ್ಞಾನಿಗಳು ಬಾನುಲಿಯನ್ನು (Radio) ತಂತಿಯಂತ್ರ (Telegraph)—ತಂತಿರಹಿತಯಂತ್ರ (Wireless) ಇತ್ಯಾದಿಗಳನ್ನು ಹುಡುಕಿ ತೆಗೆದಿದ್ದಾರೆ; ಹಿರಿದಾದ ಜಗತ್ತನ್ನು ಕಿರಿಯದನ್ನಾಗಿ ಮಾಡಿದ್ದಾರೆ. ಮನೋರಂಜನೆಗಾಗಿ ಗ್ರಾಮೋಫೋನ್ ಇತ್ಯಾದಿ ಸಿದ್ಧವಾಗಿವೆ. ಹವೆಯಲ್ಲಿ ಧೂಳಿಯ ಕಣಗಳು ಇರುವುದರಿಂದಲೇ ಇವೆಲ್ಲ ಸಾಧಿಸಿವೆ.

ಜಗತ್ತಿನಲ್ಲಿ ಆಗಾಗ ಬರಬೀಳುತ್ತವೆಂಬುದನ್ನು ಕೇಳುತ್ತೇವೆ; ಸುದ್ದಿಯ ಪತ್ರಗಳಲ್ಲಿ ಓದುತ್ತೇವೆ. ಬರಬೀಳಲಿಕ್ಕೆ ಕಾರಣಗಳಾವುವು? ವಿಜಾಪುರದಲ್ಲಿ ಪ್ರತಿವರುಷ ಬರಬೀಳುತ್ತದೆ. ಮಳೆಯಾಗದ್ದರಿಂದ ಬೆಳೆಬರುವುದಿಲ್ಲ.. ಮಳೆಯೇಕೆ ಬೀಳುವುದಿಲ್ಲ? ವಿಜಾಪುರವು 'ನಿರ್ಜನ್ಯಛಾಯಾ' ಪ್ರದೇಶದಲ್ಲಿದ್ದುದೂ ಒಂದು ಕಾರಣವು. ಮುಗಿಗಾಳಿಗಳನ್ನು ತಡೆಯಲು ಅನುಕೂಲತೆಗಳು ಇಲ್ಲದಿದ್ದುದೂ ಒಂದು ಕಾರಣವಾಗಿರಬೇಕು. ಧೂಳಿಕಣದ ಪ್ರಮಾಣವು ಹವೆಯಲ್ಲಿ ಕಡಿಮೆಯಾದರೆ, ಮೋಡಗಳ ನಿರ್ಮಾಣವೂ ಕಡಿಮೆಯಾಗುವುದು. ಬಂಗಾಲದಲ್ಲಿಯೂ ಬರಬಿತ್ತು. 'ಹವೆಯಲ್ಲಿ ಧೂಳಿಕಣದ ಪ್ರಮಾಣ ಕಡಿಮೆಯಿತ್ತು; ಮೋಡಗಳಾಗಲಿಲ್ಲ; ಮಳೆ ಬೀಳಲಿಲ್ಲ' ಎಂದಲ್ಲ; ಅದಕ್ಕೆ ಮತ್ತೆ ಬೇರೆ ಕಾರಣಗಳುಂಟು. ಹಿಂದೊಮ್ಮೆ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಉಗ್ರವೂ, ಭಯಂಕರವೂ ಆದ ಬರಗಾಲಬಿತ್ತು. ಇದಕ್ಕೆ ಸೋಜಿಗದುವೂ ಸ್ಪಷ್ಟವೂ ಆದ ಕಾರಣಗಳುಂಟು. ಹವೆಯಲ್ಲಿ ಧೂಳಿಕಣಗಳ ಪ್ರಮಾಣವು ಕಡಿಮೆಯಾದುದರಿಂದ, ಸೂರ್ಯನ ಕಿರಣಗಳು ಭೂಮಿಗೆ ಬರಬೇಕಾದಷ್ಟು ಬಂದು ಮುಟ್ಟಲಿಲ್ಲ; ಉಷ್ಣತಾಮಾನ ಕಡಿಮೆಯಾಯಿತು. ಮಾನವ ಜೀವನಕ್ಕೂ, ವನಸ್ಪತಿ ಮತ್ತು ಪಶುಪಕ್ಷಿಗಳ ಜೀವನಕ್ಕೂ ಅವಶ್ಯವಾದ ಉಷ್ಣತೆ ಸಿಕ್ಕದೆ, ಜೀವಿಗಳೆಲ್ಲವೂ ಪಟಪಟನೆ ಬಿದ್ದು ಸತ್ತವು. ಧೂಳಿಯ ಕಣಗಳು ಕಡಿಮೆಯಾಗುವುದರಿಂದ ಭೂಮಿಯ ಉಷ್ಣತೆಯೂ ಕಡಿಮೆಯಾಗುವುದು; ಧೂಳಿಯ ಕಣಗಳು ತಂಪನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಒಯ್ಯುತ್ತವೆ. ಧೂಳಿಯ ಕಣಗಳು ಹವಾಮಾನವನ್ನು ಸಮನಾಗಿ ಇಡಲು ಒಳ್ಳೇ ಉಪಯುಕ್ತವಾಗಿರುವುವು.

ಧೂಳಿಯ ಕಣಗಳು ವರ್ಣರಹಿತಗಳಾಗಿವೆ; ವಾಸನೆಯಿಲ್ಲ; ರುಚಿಯೂ ಇಲ್ಲ. ಇವು ಉಷ್ಣತಾ ಮತ್ತು ಪ್ರಕಾಶವಾಹಕಗಳಾಗಿವೆ; ಭೂಮಿಯು ತಿರುಗುತ್ತಿರುವಂತೆ, ಧೂಳಿಯ ಕಣಗಳೂ ಭೂಮಿಯ ಸುತ್ತಲೂ ತಿರುಗುತ್ತಿರುವುವು.


# ಪ್ರಸವ ವಿಜ್ಞಾನ

ಗರ್ಭಧಾರಣೆ, ಗರ್ಭಲಕ್ಷಣ, ಗರ್ಭಿಣಿಯ ದಿನಚರಿ, ಗರ್ಭಿಣೀ ರೋಗಗಳೂ ಅವುಗಳ ಚಿಕಿತ್ಸೆಗಳೂ, ಸಹಜ ಪ್ರಸವನಿರ್ವಹಣರೀತಿ, ಆಕ್ರಮ ಮತ್ತು ಸಂಕೀರ್ಣ ಪ್ರಸವ ರೀತಿಗಳು, ಬಾಣಂತೀ ರೋಗಗಳು ಅವುಗಳ ಚಿಕಿತ್ಸೆಗಳು, ಶಿಶು-ಬಾಣಂತಿಯರ ರಕ್ಷಣಾ ಮೊದಲಾದುವನ್ನು ಸರಳವಾಗಿಯೂ ಸಚಿತ್ರವಾಗಿಯೂ ವಿವರಿಸುವ ಪುಸ್ತಕ. ಸುಮಾರು ೩೦ ಚಿತ್ರಗಳಿವೆ ಪ್ಲಿ. ಪಿ. ಕಳಿಸುವದಿಲ್ಲ.

ರೂ. ೨—೪—೦ ಯನ್ನು ಮನಿಯಾರ್ಡರು ಮಾಡಿರಿ.

ಮಾನೇಜರ

**ಮಾಡರ್ನ್ ಔಷಧಾಲಯ**, ದೊಡ್ಡಬಳ್ಳಾಪುರ, (ಬೆಂಗಳೂರು.)

ಕಟುವಾಗಿದ್ದೀತು, ಆದರೆ ಕುಟಿಲವಾಗಿಲ್ಲ. ಮುಕ್ತಪ್ರಾಮಾಣಿಕತೆಗೆ ಮನ್ನಣೆ ಇದ್ದೇ ತೀರಬೇಕು. ಶ್ರೀ. ಬಸವರಾಜರು ತಮ್ಮ ಮೊದಲ ಮಾತಿನಲ್ಲಿ ಕೆಲವು ಅಭಿಪ್ರಾಯಗಳನ್ನು ಒತ್ತಿಹೇಳಿದ್ದುದರಿಂದ, ನಾವು ಅವನ್ನಿಲ್ಲಿ ಎತ್ತಿ ಉತ್ತರ ಕೊಡಬೇಕಾಯಿತು. ಇಲ್ಲವಾದರೆ ಈ ಗೋಜಿಗೆ ಹೋಗಬೇಕಾದುದಿರಲಿಲ್ಲ. ಅವರ ಮೊದಲ ಮಾತಿಗೆ ಈ ಒದಲು ಮಾತು ಸಾಕು. ಇನ್ನು ಕತೆಗಳ ವಿಚಾರ:—

೧. **ಕಾರವಾನ್**— ಹೆಂಗುಸು ಹಸಿವೆಯನ್ನು ನೀಗುವುದಕ್ಕಾಗಿ ಗಂಡನನ್ನು ಗಾಡಿಯ ಕೆಳಗೆ ಬಿದ್ದು ಸಾಯಲು ಕಳಿಸುವುದು, ಮಗುವನ್ನು ಬಂಡೆಗೆ ಅಪ್ಪಳಿಸಿ ಕೊಂದುಬಿಡುವುದು, ದಿನಕ್ಕೆ ಒಂದರಂತೆ ಉಳಿದ ನಾಲ್ಕು ಮಕ್ಕಳನ್ನೂ ಕೊಲ್ಲುತ್ತೇನೆ ಎಂದು ವಿಕಟವಾಗಿ ಕಿರಿಚುವುದು— ನಿಜವಾದ ತಾಯಿ ಕರುಳಿದ್ದ ಹೆಣ್ಣು ಈ ಮಾತನ್ನು ಎಂದೂ ಒಪ್ಪದು, ಮಾಡದು. ಇಂಥ ವಿಕೃತ ಮನಸ್ಸಿನ ಹೆಂಗುಸಿನ ಬಗ್ಗೆ ಮರುಕ ಉಂಟಾಗುವುದರ ಬದಲು ಜುಗುಪ್ಸೆ ಉಂಟಾಗುವುದು. ಇಲ್ಲಿ ಕಥನಕಲೆ ಅತಿರಂಜನೆಯ ದೋಷಕ್ಕೊಳಗಾಗಿ, ಯುಕ್ತವಾದ ಅನಂದ-ಸಹಾನುಭೂತಿಗಳನ್ನುಂಟುಮಾಡಲು ಅಸಮರ್ಥವಾಗಿರುವುದು.

೨. **ಪರಾಜಿತೆ**— ಹೆಂಡತಿಯ ಕಟುಮಾತಿಗೆ ಸಿಟ್ಟಾಗಿ ಹಳ್ಳಿಗೆ ಹೋದ ತಾಯಿಯು ವಿಷಯದಲ್ಲಿ ಮೂರು ತಿಂಗಳವರೆಗೆ ಏನನ್ನೂ ವಿಚಾರಿಸದೆ, ಅಥವಾ ಹೆಂಡತಿಯೊಡನೆ ಒಮ್ಮೆ ಸಹ ಆ ಬಗ್ಗೆ ಮಾತನಾಡದೆ, ಮಗನಾದ ಸದಾಶಿವ, ಒಂದು ಅಮಾವಾಸ್ಯೆಯ ದಿನ ಹೋಳಿಗೆ ತಿನ್ನುವಾಗ, ಒಮ್ಮೆಲೆ ತಾಯಿಯ ನೆನಪಾಗಿ ದುಃಖಿಸುವುದೂ, ಆ ಮೇಲೆ ಅವನ ಹೆಂಡತಿ ರತ್ನಾ, ಒಂದು ದಿನ, ಅತ್ತೆಯು ಕಾಯಿಲೆಯಿಂದ ಹಾಸಿಗೆ ಹಿಡಿದ ಸುದ್ದಿಯನ್ನು ಕೇಳಿ, ಗಂಡನಿಗೆ ತಿಳಿಸದೆ ಹಳ್ಳಿಗೆ ಹೋಗಿ, ಅತ್ತೆಯ ಪಾದಕ್ಕೆರಗಿ ಕ್ಷಮೆ ಬೇಡುವುದೂ, ಆಗ ಜ್ವರದಿಂದ ಹಾಸಿಗೆ ಹಿಡಿದ ಅತ್ತೆಗೆ ತಕ್ಷಣ ಜ್ವರ ನಿಂತು, ಆಕೆ ಮಗನ ಮನೆಗೆ ಅಂದೇ ಸಾಯಂಕಾಲದೊಳಗಾಗಿ ಹೊರಟು ಬಂದು ಒಡಾಡಿ ದೀಪ ಅಂಟಿಸುವಷ್ಟು ಗಟ್ಟಿಮುಟ್ಟಾಗುವುದೂ ಈ ಕತೆಯ ತಿರುಳು; ಮೂವರಲ್ಲಾದ ಈ ಮತಪರಿವರ್ತನೆಗೆ ಸರಿಯಾದ ಬೆಳವಣಿಗೆ ಇಲ್ಲ ಎನಿಸುವುದು ೩. **ಮೀನಲೋಚನೆ**— ರಾಜಶೇಖರನೆಂಬೊಬ್ಬ ಕಾಲೇಜ ತರುಣ ಲಲಿತಾ ಎಂಬೊಬ್ಬ ತರುಣಿಯನ್ನು ಪ್ರೀತಿಸುವನು. ಅವಳು ಇವನಿಗೆ ದೊರಕದೆ ಟೈಫಾಯಿಡ್ ಆಗಿ ಸಾಯುವಳು. ಆಕೆಯ ವಿಯೋಗವನ್ನು ಸಹಿಸಲಾರದೆ ಈ ತರುಣ ಕಾಲೇಜಿಗೆ ಶರಣು ಹೊಡೆದು, ಗಾಂಧಿ ಚಳವಳಿಯಲ್ಲಿ ಸೇರಿ ಜೇಲಿಗೆ ಹೋಗುವನು. ಪುನರ್ಜನ್ಮ ದೊರೆತರೆ ತಾರೆ (ಆಕಾಶದಲ್ಲಿಯ ತಾರೆ, ಸಿನೆಮಾ ತಾರೆಯಲ್ಲ!) ಆಗುವೆನೆಂದು ಹೇಳಿದ ಆಕೆಯ ಮಾತನ್ನು ಇವನು ನಂಬಿ (?) ದಿನಾಲು ಮುಗಿಲನ್ನೇ ನೋಡುವನು. ತಾನೂ ಚಂದ್ರನಾಗಿ ಅವಳ ಹತ್ತಿರ ಇರಬೇಕೆಂದು ಬಯಸುವನು. ಅಲ್ಲಿ ಇವನಿಗೆ

ಕಥೆ ಕಾರವಾನ್

(ಸಣ್ಣ ಕತೆಗಳ ಸಂಕಲನ)

ಶ್ರೀ. ಬಸವರಾಜ ಕಟ್ಟೀಮನಿಯವರು ಬರೆದು ಶಾರದಾ ಸಾಹಿತ್ಯ-ಮಾಲೆಯು ಏನೆಯ ಕಿರಣವೆಂದು ಪ್ರಕಟವಾದುದು.

ಶ್ರೀ. ಬಸವರಾಜರು 'ಇದು ನಮ್ಮ ಕಾರವಾನ್' ಎಂಬ ತಮ್ಮ ಪ್ರಾಸ್ತಾವಿಕ ಮಾತಿನಲ್ಲಿ ತಾವು ಕತೆಗಾರರಾದ ಇತಿಹಾಸವನ್ನು ಕೊಟ್ಟು, ತಮ್ಮ ಆಸೆ, ಹಂಬಲು, ಧ್ಯೇಯ ದರ್ಶನಗಳನ್ನು ತಿಳಿಸಿ, ತಾವು 'ಬರೆದುದೆಲ್ಲ ಹೃದಯದಿಂದ ನೇರವಾಗಿ ಚಿಮ್ಮಿಬಂದದ್ದು, ಬರೆದುದು ಲೇಖನಿಯಲ್ಲಿನ ಮಸಿಯಿಂದಲ್ಲ, ಎದೆಯಲ್ಲಿನ ರಕ್ತದಿಂದ' ಎಂದು ಹೇಳಿದ್ದಾರೆ. ಇಷ್ಟೇ ಅಲ್ಲ, ವಿಮರ್ಶೆಗೆ ತಾವು ಸೊಪ್ಪುಹಾಕುವವರಲ್ಲ, ಸ್ತುತಿ ತಮಗೆ ಬೇಕಾಗಿಲ್ಲ, ತಮ್ಮ ಕತೆಗಳು ಅಮರವಾಗಬೇಕಾಗಿಲ್ಲ, ತಾವು ಬರೆಯುವುದು ಕೇವಲ ಬಡಬಾಂಧವರ ಪ್ರಚೋದನೆಗಾಗಿ, ಆರ್ಥಿಕವಿಷಮತೆಯಲ್ಲಿ ಸಿಲುಕಿ ನರಳುತ್ತಿರುವ ದಲಿತವರ್ಗದ ಏಳ್ಗೆಗಾಗಿ, ಹಾಗು ಸಮಾಜದಲ್ಲಿ ಸಮತೆ, ಸೋದರಭಾವ, ಮನುಷ್ಯತ್ವ ಇವುಗಳ ಪ್ರಸ್ಥಾಪನೆಗಾಗಿ— ಎಂದು ಮುಂತಾಗಿ ಸಾರಿದ್ದಾರೆ. ಅವರ ಈ ಮಾತಿನಲ್ಲಿ ಸಂಪೂರ್ಣವಾಗಿ ಪ್ರಾಮಾಣಿಕತೆ ಇದೆಯೆಂದು ನಾವು ನಂಬುತ್ತೇವೆ; ಆದರೆ ಕೆಲವರನ್ನುದ್ದೇಶಿಸಿ ಎಸೆದ ವಾಗ್‌ಬಾಣಗಳು, ಔಚಿತ್ಯವನ್ನೂ ಸಂಯಮವನ್ನೂ ಮೀರಿವೆ ಎನಿಸುವುದು. ಅಪಾಥ್ಯಭೂತಿತನ ಯಾರಿಗೂ ಸಲ್ಲದು. ಅದನ್ನು ಕೈಮಾದಿ ತೋರಿಸುವುದು ಅತಿಥಾಪ್ಯರ್ವಾವಾದೀತು. ಪಾಕ್ಷಿಣ್ಯದ ಅಥವಾ ದ್ವೇಷದ ವಿಮರ್ಶೆ. ಅವರಿಗೆ ಬೇಡವಾಗಿದ್ದರೂ ಪ್ರಾಮಾಣಿಕ ವಿಮರ್ಶೆಯನ್ನು ಅನಂದ ಮನಃಪೂರ್ವಕವಾಗಿ ಸ್ವಾಗತಿಸುವರೆಂದೇ ನಾವು ಭಾವಿಸುತ್ತೇವೆ. ಸಾಹಿತ್ಯವೆಂಬುದೆಲ್ಲ ಜನರ ಸೊತ್ತು. ಎಲ್ಲರಂತೆ ಇದ್ದಂತೆ ಬೆಲೆ ಬಂದೀತು. ವಿಮರ್ಶೆಗೂ ಇದೇ ಮಾತು ಅನ್ವಯಿಸುವುದು.

ಇಂದು ಕಾರವಾನಿನ ವಿಮರ್ಶೆಗೆ ಕೈಯಿಕ್ಕಿದುದು ಪ್ರಾಮಾಣಿಕತೆಯ ಆ ಧೈರ್ಯದಿಂದಲೆ. ಈ ವಿಮರ್ಶೆಯಲ್ಲಿ ಸೆರಗುಹೊದ್ದ ಸೋಗಲಾಡಿತನವೂ ಇಲ್ಲ; ಕೈಗೊಂಬೆಯ ಪರಾವಲಂಬಿತ್ವವೂ ಇಲ್ಲ. ಕತೆಗಳಲ್ಲಿ ಕಂಡದ್ದನ್ನು ಸ್ವಚ್ಛಮನಸ್ಸಿನಿಂದ ಬಿಚ್ಚುಮಾತಿನಲ್ಲಿ ಹೇಳಿದೆ. ಅಭಿಪ್ರಾಯ

ಒಬ್ಬನು ಗೆಳೆಯನಾಗುವನು. ಅವನ ದೇಶಭಕ್ತಿಯ ಒಂದು ಚಿಕ್ಕ ಉಪನ್ಯಾಸಕ್ಕೆ ಈ ತರುಣ ತನ್ನ ದುಃಖವನ್ನೆಲ್ಲ ಕೂಡಲೆ ಮರೆತು ಉತ್ಸಾಹಿಯಾಗುವನು. ಮುಂದೆ ಜೀವನದಿಂದ ಹೊರಬಿದ್ದು ಕ್ರಾಂತಿಕಾರಕ ಗುಂಪಿನಲ್ಲಿ ಸೇರುವನು. ಒಂದು ತಿಂಗಳಲ್ಲಿಯೆ ಅವನ ಕೋಣೆಯಲ್ಲಿ ಬಾಂಬು ಸ್ಫೋಟವಾಗಿ ಅವನು ಸತ್ತುಹೋದ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾಗುವುದು. 'ಪುನರ್ಜನ್ಮ' ಎಂದರೆ ಇದ್ದ ಜನ್ಮದಂತೆ ಇನ್ನೊಂದು ಸಲ ಜನ್ಮ. ಮನುಷ್ಯ ಜನ್ಮ ಹೋಗಿ ತಾರೆಯಾದರೆ ಪುನರ್ಜನ್ಮ ಹೇಗಾಯಿತು? ಲಲಿತೆ ಸತ್ತು ತಾರೆಯಾಗಿರುವಳೆಂದೂ ತಾನೂ ಸತ್ತರೆ ಚಂದ್ರನಾಗುವನೆಂದೂ ನಂಬುವ ತರುಣ ಈ ಕಾಲದಲ್ಲಿ ಇರಬಹುದೆ?— ಎನಿಸುವುದು. ಬಾಂಬು ತಾನಾಗಿಯೆ ಸ್ಫೋಟವಾಯಿತೊ ಅಥವಾ ಆ ತರುಣನೇ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಸ್ಫೋಟ ಮಾಡಿದನೊ ಗೊತ್ತಾಗುವುದಿಲ್ಲ. 'ಆಕ್ಸಿಡೆಂಟ್' ಆಗಿ ಸತ್ತರೆ ಅದರಲ್ಲಿ ವಿಶೇಷವೇನು? ಲಲಿತೆ ಟೈಫಾಯಿಡ್ ಆಗಿ ಸತ್ತಳು. ರಾಜಶೇಖರ ಬಾಂಬಿನಿಂದ ಸತ್ತ! ಇನ್ನು ರಾಜಶೇಖರ ಆತ್ಮಹತ್ಯೆಯನ್ನೇ ಮಾಡಿಕೊಂಡಿದ್ದರೆ ಅದು ಭಾವನಾವಶನಾಗಿ ಮಾಡಿದ ವಿವೇಕ—ಎನಿಸುವುದು. ೪. ದೀಪಾವಳಿಯ ಕತ್ತಲೆ—ಇದ್ದುದರಲ್ಲಿ ಸಮಂಜಸವಾದ ಕತೆ. ೫. ಹೊಸ ವರ್ಷದ ಹಳೆಯ ರಾತ್ರಿ— ಸಿರಿವಂತರ ಸುಖಜೀವನವನ್ನು ನೋಡಿ ನಂಜಿ-ಕರಿಯರ ಅಂತರಾಳದಲ್ಲಿ ಉಂಟಾದ ಕಲಮಲದ ಚಿತ್ರ. ಇದು ಕೂಡ ಚೆನ್ನಾಗಿದೆ. ೬. ಗೆಳೆಯರು— ವಿಜಾಪುರ ಜಿಲ್ಲೆಯ—ಒಬ್ಬ ಹಿಂದು, ಒಬ್ಬ ಮುಸಲ್ಮಾನ್— ಜಟ್ಟಿಗಳಾದ ಈ ಗಟ್ಟಿಗರು, ಭರಗಾಲದಲ್ಲಿ ಅನ್ನಕ್ಕಾಗಿ ವಿಜಾಪುರದಿಂದ ಬೆಂಗಳೂರ ವರೆಗೆ ಬರುವುದೂ, ಅಲ್ಲಿ ಲಾಲಬಾಗಿನ ಒಂದು ಗಿಡದ ಕೆಳಗೆ ಅಲಿಯು ಬೇನೆಗೆ ಎರವಾಗಿ ಕುತ್ತಿಗೆ ತುತ್ತಾಗಿ ಪ್ರಾಣಬಿಡುವುದೂ ಈ ಕಥೆಯ ವಸ್ತು. ಇಂಥವರನ್ನೂ ಅನ್ನಾನ್ನಗತಿಕರನ್ನಾಗಿಮಾಡಿ ಪ್ರಾಣಕ್ಕೆ ಎರವಾಗಲು ಹಚ್ಚಿದ್ದು ಬರಗಾಲವೇ ಎನ್ನುವುದಕ್ಕೆ ಮನಸ್ಸು ಒಪ್ಪುವುದಿಲ್ಲ. ಕಥೆ ಹಿಂದು-ಮುಸಲ್ಮಾನರ ಐಕ್ಯದ ಪ್ರಚಾರಕ್ಕಾಗಿ ಬರೆದುದು ಎನಿಸುವುದು. ೭. ವಿಕಸ್ವಾಹ— ಈ ಕತೆಯಲ್ಲಿ ಚಿತ್ರಿಸಿದಂತಹ ಯಾವನೊ ಒಬ್ಬ ಘಟಿಂಗ ಸಂಪಾದಕನೂ ಇರಬಹುದು, ಹೇಡಿ ಮುಂಕಣ್ಣಸಂಘ ತಲೆಹಿಡುಕ ಉಪಸಂಪಾದಕನೂ ಇರಬಹುದು. ಘಟಿಂಗತನವೇನು ಸಂಪಾದಕರ ಸರ್ವಸಾಮಾನ್ಯ ಗುಣವಲ್ಲ, ಮತ್ತು ಹೇಡಿತನವು ಉಪಸಂಪಾದಕರ ಗುಣವೂ ಅಲ್ಲ. ಒಬ್ಬರಿಗೇ ಅನ್ವಯಿಸಬಹುದಾದ ಮಾತನ್ನು ಸಾರ್ವತ್ರಿಕವಾಗಿರುವಂತೆ ತೆಗಳುವುದು ಸರಿಯಾಗಲಾರದು. ಕತೆಯ ವಸ್ತು, ಚಿತ್ರಿಸಿದ ರೀತಿ ಸಮರ್ಪಕವಾಗಿಲ್ಲ, ಅಂತೇ ಮನಸ್ಸಿಗೆ ಹಿಡಿಯುವುದಿಲ್ಲ.

ಆದರೂ ಶ್ರೀ. ಬಸವರಾಜರದು ಸಾಮರ್ಥ್ಯವುಳ್ಳ ಶೈಲಿ. ಯಾವುದನ್ನು ಹೇಳಿದರೂ ನೇರವಾಗಿ ಜಾಜಾಳವಿಲ್ಲದ ಹೇಳು. ತ್ತಾರೆ. ಸ್ವಭಾವಚಿತ್ರಣದಲ್ಲಿ ವಿಸಂಗತತೆ ಕಡಿಮೆ. ಕತೆಗಳು ಪರಿಣಾಮಕಾರಿಯಾಗಿರದಿದ್ದರೂ ಪ್ರಜ್ಞೋದನಕಾರಿಯಾಗಿವೆ ಎಂದು ಹೇಳಬಹುದು. ಈ ಕಥಾಸಂಗ್ರಹದ ಪ್ರಕಟನೆಯಿಂದ ಶ್ರೀ. ಕಟ್ಟೀಮನಿಯವರು ಒಂದು ಕಟ್ಟೀಮನಿಯನ್ನಂತೂ ಹಿಡಿದಿದ್ದಾರೆ. ಇವರ ಕಾಯಿ ಹಣ್ಣಾಗಲೀಕಾದರೆ, ಇನ್ನೂ ಕೆಲವು ಮನೆಗಳನ್ನು ಆದು ದಾಟಬೇಕು. ಅದು ಬೇಗನೆ ಕೈಗೂಡಲಿ ಎಂದು ನಾವು ಬಯಸುತ್ತೇವೆ.

—ಎಲ್. ಜೆ.

## ೯. ಗಳಗನಾಥ

(ಜೀವನ ವಾಙ್ಮಯ ವಿಮರ್ಶೆ)

ಪ್ರಕಾಶಕರು: ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ.

ಗಳಗ (ಲೆಕ್ಕಣಿಕೆ) ನಾಥರ ಸಮರ್ಥ ಲೆಕ್ಕಣಿಕೆಯು ಕನ್ನಡ ಸಾಹಿತ್ಯದ ಗದ್ಯದ ಇತಿಹಾಸದಲ್ಲಿ ಒಂದು ಹೊಸ ಹಾದಿಯನ್ನು ಹಾಕಿತು. ಕೇವಲ ಒಂದು ಮನೋರಂಜಕ ಸಾಹಿತ್ಯವನ್ನು ಗಳಗನಾಥರು ಕನ್ನಡಿಗರಿಗೆ ಕೊಟ್ಟರೆಂದು ಅವರ ಹಿರಿಮೆ ಹೆಚ್ಚಲಿಲ್ಲ. ಕರ್ನಾಟಕದಲ್ಲಿ ಮರಾಠಿಯ ಮೋಹವು ಕವಿದು ಕನ್ನಡತ್ವಕ್ಕೆ ಗ್ರಹಣ ಹಿಡಿದಾಗ ಗಳಗನಾಥರು 'ಆದೇ ಮರಾಠಿಯ ಮೋಹಕ ಕಾದಂಬರಿಗಳನ್ನು ಕನ್ನಡ ಮಾಧ್ಯಮದಿಂದಲಾದರೂ ಓದಹಚ್ಚಿದರೆ, ಕನ್ನಡಿಗರು ಕನ್ನಡವನ್ನು ಗೌರವಿಸುವರೇನೊ' ಎಂದು, ಕೈ. ವಾ. ಹರಿನಾರಾಯಣ ಆಪಟೆ ಅವರ ಕಾದಂಬರಿಗಳ ಅನುವಾದಕ್ಕೆ ತೊಡಗಿದರು. ಅಂದಿನ ಗಳಗನಾಥರ ಕಾದಂಬರಿಯ ರುಚಿಯು ಶಾಲೆಯ ವಿದ್ಯಾರ್ಥಿಗಳಿಂದ ಮೊದಲುಗೊಂಡು ನರೆಹಾಯ್ದ ನಿವೃತ್ತ ಜನರ ವರೆಗಿನ ಎಲ್ಲರನ್ನೂ ಮುಗ್ಧರನ್ನಾಗಿಸಿತು. ಗಳಗನಾಥರು ಕಾದಂಬರಿಗಳ ಬಲೆಹಾಕಿ ಕನ್ನಡಿಗರ ಕನ್ನಡ ಅಭಿಮಾನವನ್ನು ಜಾಗೃತಗೊಳಿಸಿದರು. 'ಕನ್ನಡಿಗರ ಕರ್ಮಕಥೆ' ಹೇಳಿ ಕನ್ನಡಿಗರನ್ನು ಎಚ್ಚರಿಸಿದರು; ಸಾಂಸ್ಕೃತಿಕ ಪುಸ್ತಾರವನ್ನೂ ಹಿಗ್ಗಿಸಿದರು. ೩-೪ ಸ್ವತಂತ್ರ ಕಾದಂಬರಿಗಳನ್ನು ಬರೆದು ತಮ್ಮ ಪ್ರತಿಭೆಯನ್ನು ಮೆರೆದರು. ಕನ್ನಡವು ಮರೆತು ಹೋದ ಕಾಲದಲ್ಲಿ—ಅನ್ಯ ಪ್ರಾಂತೀಯ ಸಾಹಿತ್ಯ ಕರ್ನಾಟಕವನ್ನು ಸೂರೆಗೊಂಡ ಕಾಲದಲ್ಲಿ—ಗಳಗನಾಥರು ಕನ್ನಡದ ಪಾವಿತ್ರ್ಯವನ್ನು ಕಾಯ್ದು ಉಳಿಸಿ ಬೆಳೆಯಿಸಿದರು. ಎಂತಲೇ ಅವರ ಸೇವೆ ಹಿರಿದು. ಇಂದು ಅವರಿಗಿಂತ ಮಿಗಿಲಾದ ಉಚ್ಚ ಸಾಹಿತಿಗಳು ಉದಿಸಿರಬಹುದು. ಆದರೆ ಇಂತಹ ಉಚ್ಚ ಸಾಹಿತಿಗಳು ಹುಟ್ಟಲಿಕ್ಕೆ ನೆಲವನ್ನು ನಿರ್ಮಿಸಿಕೊಟ್ಟವರು ಗಳಗನಾಥರು.

ಗಳಗನಾಥರ ಸಾಹಿತ್ಯನಿರ್ಮಿತಿಯ ಕಾಲ ಸ್ಥೂಲವಾಗಿ ೧೯೦೦ರಿಂದ ೧೯೩೦ರವರೆಗೆ ಎಂದಿಟ್ಟುಕೊಳ್ಳಬಹುದು. ಮುದ್ದಣ, ಪಂಜೆ ಮಂಗೇಶರಾಯ, ಬಿ. ವೆಂಕಟಾಚಾರ್ಯ, ಮುಳಬಾಗಲು, ವೆಂಕಟ ರಂಗೋ ಕಟ್ಟಿ ಇವರೇ ಮೊದಲಾದ ಮಹ.

(ಕವ್ವರಿನ ಮೂರನೆಯ ಪುಟ ನೋಡಿರಿ)

# ನಾಲ್ಕೂ ನಿಟ್ಟಿನ ನೋಟ

## ಮುಂಬಯಿ-ಮದ್ರಾಸುಗಳಲ್ಲಿ ಕನ್ನಡ ಮಂತ್ರಿಗಳು

ಮುಂಬಯಿ-ಮದ್ರಾಸು ಪ್ರಾಂತಗಳಲ್ಲಿ ಕಾಂಗ್ರೆಸಿನ ಮಂತ್ರಿಮಂಡಲಗಳು ಸ್ಥಾಪನೆಗೊಂಡು ಕಾರ್ಯಭಾರ ನಡೆಸಿವೆ. ಕರ್ನಾಟಕಕ್ಕೆ ಮುಂಬಯಿ ಮಂತ್ರಿಮಂಡಲಿಯಲ್ಲಿ ಒಂದು ಸ್ಥಾನ, ಮದ್ರಾಸ ಮಂಡಲಿಯಲ್ಲಿ ಒಂದು ಸ್ಥಾನ ದೊರೆತಿವೆ. ಹಿಂದಿನ ಸಲದ ಕಾಂಗ್ರೆಸ್ ಮಂಡಲಿಗಳ ಕಾಲದಲ್ಲಿ, ಮದರಾಸಿನಲ್ಲಿ ಕನ್ನಡಿಗರಿಗೆ ಸ್ಥಾನ ದೊರೆತಿರಲೆ ಇಲ್ಲ; ಮುಂಬಯಿಯಲ್ಲಿ ಹೆಸರಿಗೆ ಮಾತ್ರ ದೊರೆತಂತಾಗಿತ್ತು. ಈ ಸಲದ ಆಯ್ಕೆ ಕನ್ನಡಿಗರಿಗೆ ತೃಪ್ತಿಕರವಾಗಿದೆಯೆಂದು ಹೇಳಬಹುದು. ಮುಂಬಯಿ ಮಂತ್ರಿಮಂಡಲಿಯಲ್ಲಿರುವ ಶ್ರೀಮಾನ್ ಎಂ.ಪಿ. ಪಾಟೀಲರೂ ಮದ್ರಾಸ ಮಂತ್ರಿ ಮಂಡಲಿಯಲ್ಲಿರುವ ಶ್ರೀಮಾನ್ ಕೆ. ಆರ್. ಕಾರಂತರೂ ಅಜ್ಜ ಕೆಚ್ಚಿನ ಕನ್ನಡಿಗರು. ಕನ್ನಡ ನಾಡು-ನುಡಿಗಳ ಸದ್ಯದ ಹೀನದಶೆಗಾಗಿ ಕಳವಳಿಸುವವರು. ಕರ್ನಾಟಕದ ಏಕೀಕರಣದ ಆವಶ್ಯಕತೆಯನ್ನು ಚೆನ್ನಾಗಿ ಮನಪರಿಕೆ ಮಾಡಿಕೊಂಡವರು. ಎರಡೂ ಪ್ರಾಂತಗಳಲ್ಲಿಯೂ ಅಲ್ಪ ಸಂಖ್ಯಾಕರಾಗಿರುವ ಕನ್ನಡಿಗರ ಬಗೆಗೆ ಅಲ್ಲಿಯ ಸರಕಾರಗಳು ಎಂತಹ ದುರ್ಲಕ್ಷ್ಯ-ಔದಾಸೀನ್ಯಗಳನ್ನು ತಳೆದಿರುವುದೆಂಬುದರ ಕಲ್ಪನೆಯುಳ್ಳವರು ಇಷ್ಟೆ ಅಲ್ಲದೆ, ಕೇವಲ ಅಧಿಕಾರದ ಆಶೆಯಿಂದ ಹೊತ್ತುಬಂದಂತೆ ಕೊಡೆ ತಿರುಗಿಸುವ ಸ್ವಾರ್ಥಸಾಧಕ—ಸಮಯಸಾಧಕ—ರಾಜಕಾರಣಿಗಳು ಇವರಲ್ಲ. ಇಬ್ಬರೂ ನಾಡಿನ ಜನತೆಗೆ ತ್ಯಾಗಪೂರ್ವಕವಾದ ಸೇವೆಯನ್ನು ಸಲ್ಲಿಸಿದವರು. ವಿರೋಧಕ ಶಕ್ತಿಯನ್ನು ಎದುರಿಸುವ ಪೋರಾಟದಲ್ಲಿ ಸಾಣೆಯನ್ನು ಪಣವಾಗಿರಿಸಿದವರು. ಇಂತಹ ಸತ್ಪ್ರಭಾಳಗಳು ಮಂತ್ರಿಗಳಾಗಿ ಕಾರ್ಯಮಾಡತೊಡಗಿಸುವುದಕ್ಕಾಗಿ, ಕನ್ನಡ ಜನತೆ ತನ್ನ ಕಲ್ಯಾಣದ ಭರವಸೆಯಿಂದ ಅವರ ಆಡಳಿತದ ಕಡೆಗೆ ನೋಡುತ್ತಲಿದೆ ಅಧಿಕಾರ ಭಾರದಲ್ಲಿವರು ಕನ್ನಡವನ್ನು ಕಡೆಗಣಿಸಬಾರದೆಂದು ಆಗಾಗ ಎಚ್ಚರಿಕೆ ಕೊಡಲು ಬಯಸುತ್ತಿದೆ.

## ಕನ್ನಡಿಗರು ಅನುಭವಿಸುತ್ತಿರುವ ಅನ್ಯಾಯಗಳು

ಕನ್ನಡಿಗರ ಜನಸಂಖ್ಯೆ, ಸಲ್ಲಿಸುತ್ತಿರುವ ಕರ, ಪ್ರದೇಶ ವ್ಯಾಪ್ತಿ ಇವುಗಳ ದೃಷ್ಟಿಯಿಂದ ಮದರಾಸ್ ಮಂತ್ರಿ ಮಂಡಲಿಯಲ್ಲಿ ಒಂದೇ ಸ್ಥಳ ಕನ್ನಡಿಗರಿಗೆ ದೊರೆತುದನ್ನು ಒಪ್ಪಿಕೊಳ್ಳಬಹುದಾದರೂ, ಮುಂಬಯಿಯಲ್ಲಿ ಒಂದೇ ಸ್ಥಳ ದೊರೆತುದು ಅನ್ಯಾಯವೆಂದು ಯಾರೂ ಹೇಳಬಹುದಾಗಿದೆ. ಮುಂಬಯಿ ಇಲಾಖೆಯಲ್ಲಿ ಮಹಾರಾಷ್ಟ್ರದ ಪ್ರದೇಶ ೧೦ ಜಿಲ್ಲೆಗಳನ್ನೊಳಗೊಂಡಿವೆ. ಕರ್ನಾಟಕ, ಗುಜರಾತ್ ಪ್ರದೇಶಗಳು ನಾಲ್ಕು ನಾಲ್ಕು ಜಿಲ್ಲೆಗಳಲ್ಲಿ ಒಳಗೊಂಡಿವೆ. ಜನಸಂಖ್ಯೆ, ಕ್ಷೇತ್ರಫಾನ, ಉತ್ಪನ್ನಗಳ ದೃಷ್ಟಿಯಿಂದ ಕರ್ನಾಟಕದ ಜಿಲ್ಲೆಗಳು ಎಲ್ಲರನ್ನೂ ಬಿಡಿಸಿಮಂತಿವೆ. ಆದರೆ ರಾಜಧಾನಿಯಿಂದ ದೂರವಿರುವ ಈ ಜಿಲ್ಲೆಗಳು ಮುಂಬಯಿ ಸರಕಾರದಿಂದ ಎಲ್ಲ ಪಾತುಗಳಲ್ಲಿಯೂ ಅಲಕ್ಷ್ಯಕ್ಕೊಳಗಾಗಿವೆ. ಫಲವತ್ತಾದ ಕನ್ನಡ ಜಿಲ್ಲೆಗಳ ವರ್ಷವರ್ಷದ ಉಳಿತಾಯ ಎಲ್ಲಿಯೋ ಯಾರಿಗೋ ವೆಚ್ಚವಾಗುತ್ತಿರುವುದು. ಕನ್ನಡನಾಡಿನ ಅಧಿಕಾರಸ್ಥಾನಗಳು ಕನ್ನಡಿಗರಿಗೆ ಸಿಕ್ಕದೆ ಇನ್ನಾರಿಗೋ ದೊರೆತು, ಭಾಷೆ-ಸಂಸ್ಕೃತಿಗಳ ದೃಷ್ಟಿಯಿಂದ ಅನ್ಯಾಯವಾಗುತ್ತಿರುವುದು. ಈಗ ಮುಂಬಯಿಯವರಿಗೆ ಜನರ (ಮುಸ್ಲಿಂ ಸೇರಿದರೆ) ಮಂತ್ರಿಮಂಡಲಿಯಲ್ಲಿ, ಕನ್ನಡಿಗರಿಗಾಗಿ ಒಂದೆ ಒಂದು ಸ್ಥಳ. ಪ್ರಜಾಧಿಕಾರದ—ಡೆಮೊಕ್ರೆಸಿಯ— ತತ್ತ್ವದ ಅನುಷ್ಠಾನವನ್ನು ಬೋಧಿಸುತ್ತಿರುವ ಕಾಂಗ್ರೆಸಿನ ಆಡಳಿತದಲ್ಲಿಯೂ ಕನ್ನಡಿಗರು ಇಂತಹ ಅನ್ಯಾಯಗಳನ್ನು ಸಹಿಸಬೇಕೆ?

ಕನ್ನಡಿಗರಿಗೆ ಒಕ್ಕಲುತನ, ಕೈಗಾರಿಕೆ, ವೈದ್ಯಕಗಳ ಉಜ್ಜ್ವಲ ಲಕ್ಷಣದ ಅನುಕೂಲತೆಯಿಲ್ಲ. ಬೆಳೆಯುವ ಭೂಮಿಯಲ್ಲಿ ಹರಿಯುವ ಹೊಳೆಗಳು ಹಲವಾರು ಇದ್ದರೂ ಬರಗಾಲ ತಪ್ಪುವಂತಿಲ್ಲ. ಕಸವನ್ನೆಲ್ಲ ರಸವನ್ನಾಗಿಸಲು ಅನುಕೂಲವಿರುವ ಅರಣ್ಯ-ಸಮುದ್ರ ತೀರಗಳು ಬೇಕಾದಷ್ಟು ಇದ್ದರೂ ಅವುಗಳ ಉಪಯೋಗವೇನೂ ಆಗುವಂತಿಲ್ಲ. ಮುಂಬಯಿಯಲ್ಲಿರುವ ಜನತೆಯುವಿಸಿಕೊಳ್ಳುವ ಈಗಿನ ಮಂತ್ರಿಮಂಡಲಿ, ಈ ಅನ್ಯಾಯಗಳ ಕಡೆಗೆ ಕಣ್ಣು ಬಿಡುವುದೋ? ಮಂತ್ರಿಮಂಡಲಿಯಲ್ಲಿ ಸ್ಥಾನಪಡೆದಿರುವ ನಮ್ಮ ಪ್ರತಿನಿಧಿಗಳು ನಮ್ಮ ಕೊರತೆಯ ವರದಿಯನ್ನು ಸರಕಾರಕ್ಕೆ ಸರಿಯಾಗಿ ಮಾಡಿಕೊಡುವರೊ?



ಮುಂಬಯಿಯ ಮೂಸ್ಯ ಮಂತ್ರಿ ಎಂ. ಪಿ. ಪಾಟೀಲರು.

## ಮನೆಮುರುಕ ಮರಾಟಿಗರ ಮೋಸಗಾರಿಕೆ

ಬೆಳಗಾಂವಿಯಲ್ಲಿ ಕಳೆದ ತಿಂಗಳಲ್ಲಿ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನ ಜರುಗಿತು. ಬೆಳಗಾಂವಿಯಲ್ಲಿರುವ ಮರಾಟಿ ಪ್ರೇಮಿಗಳು ಸಾಹಿತ್ಯ ಸಮ್ಮೇಳನಕ್ಕೆ ಔತಣ ಕೊಟ್ಟಿದ್ದರು, ವಿಜೃಂಭಣೆಯಿಂದ ಜರುಗಿಸಿದರು, ಇದೆಲ್ಲ ಸಂಯೆ ಹೊರನಾಡಿನ ಕನ್ನಡಿಗರ ಔತಣದಂತೆ ಕನ್ನಡ ಸಾಹಿತ್ಯ ಸಮ್ಮೇಳನಗಳೂ ಮುಂಬಯಿ, ಹೈದರಾಬಾದ್, ಮದರಾಸ, ಮೊದಲಾದ ಹೊರನಾಡಿನ ನಗರಗಳಲ್ಲಿ ಜರುಗಿವೆ; ಮುಂದೆ ಕೂಡ ಜರುಗಬಹುದು. ಕಾರಣಾಂತರದಿಂದ ಬಂದು ನಿಂತವರ ಮಾತೃಭಾಷೆಯ ಬಗೆಗಿರುವ ಹಕ್ಕಿನ ಕಲ್ಪನೆಯುದ್ದ ಕನ್ನಡಿಗರು. ಬೆಳಗಾಂವಿಯಲ್ಲಿ ನೆರೆಯಲಿದ್ದ ಮ. ಸಾ. ಸಮ್ಮೇಳನಕ್ಕೆ ಯಾವ ಬಗೆಯ ಅಡೆತಡೆಗಳನ್ನೂ ಒದವಿಸಲಿಲ್ಲ, ಇಷ್ಟೆ ಅಲ್ಲ, ಬೆಳಗಾಂವಿಯ ಕೆಲವು ಅತ್ಯುದಾರ (?) ಕನ್ನಡಿಗರು ಎಲ್ಲ ವಿಧದಿಂದ ಅವರಿಗೆ ಸಹಾಯವನ್ನೇ ನೀಡಿರಬಹುದಾಗಿದೆ. ಆದರೆ ಹೊರಗಿನಿಂದ ಬಂದ ಹದಿನಾರಾಣೆ ಮರಾಟಿಗರೆಲ್ಲ ಬೆಳಗಾಂವಿ ಕನ್ನಡನಾಡೆಂದು ಒಪ್ಪಿಕೊಂಡು ನಡೆದಿದ್ದರೂ, ಬೆಳಗಾಂವಿಯ ಕೆಲವು ಅರ್ಧನಾರಿನಟೇಶ್ವರ ಮರಾಟಿಗರು, ಬೆಳಗಾಂವಿ ಮಹಾರಾಷ್ಟ್ರವೆಂದು ಸಾಧಿಸಿದುದೂ ಹಾಗೆಂದು ಗೊತ್ತುವಳಿಯಾಗುವಂತೆ ಜಳವಳಿ ಮಾಡಿದುದೂ ಮನೆಮುರುಕತನದ ಲಕ್ಷಣವಾಗಿದೆ. ಕನ್ನಡಿಗರು ಹೊರನಾಡುಗಳಲ್ಲಿ ಸಮ್ಮೇಳನ ಜರುಗಿಸಿದರೂ, ಆ ಆ ಪ್ರಾಂತೀಯ ಜನರೊಂದಿಗೆ ಸಹಕಾರವನ್ನು ತೋರಿಸಿ, ತಮ್ಮ ಅನಾಕ್ರಮಣ ಬುದ್ಧಿಯನ್ನು ಅಲ್ಲಿಯವರ ನಿದರ್ಶನಕ್ಕೆ ತಂದುಕೊಟ್ಟರು. ಆದರೆ ಆಕ್ರಮಣವೇ ತೀಲವಾಗಿರುವ ಮರಾಟಿಗರು, ವಿಕೇಂದ್ರೀಕೃತ ಮಹಾರಾಷ್ಟ್ರದಲ್ಲಿ ಉತ್ತರಕರ್ನಾಟಕದ ಒಂದು ಭಾಗವನ್ನು ಕೂಡಿಸಿಕೊಳ್ಳಬೇಕೆಂಬ ಹಗಲುಗನಸನ್ನು ಪ್ರಕಟಿಸುವಂತಹ ಗೊತ್ತುವಳಿ ಮಾಡಿಕೊಂಡರು. ಇದೆಲ್ಲಕ್ಕೆ ಹೊರಗಿನ ಮರಾಟಿಗರು ಕಾರಣರಾಗಿರದೆ, ಕರ್ನಾಟಕ ನಾಡಿನಲ್ಲಿಯೆ ಇದ್ದು, ಕನ್ನಡಿಗರ ನೂರಕ್ಕೆ ನೂರು ನೆರವಿನಿಂದಲೆ ಬದುಕಿ-ಬಾಳುತ್ತಿರುವ ಒಳನಾಡಿನ ಮರಾಟಿಗರು ಕಾರಣರೆಂಬುದನ್ನು ಲಕ್ಷದಲ್ಲಿರಿಸಬೇಕು. ಉಂಡಮನೆಯ ಗಳ ಎಣಿಸುವ ಅವರ ಕೃತಘ್ನವೃತ್ತಿಗೆ ಕನ್ನಡಿಗರು ಸರಿಯಾದ ಉತ್ತರಕೊಡಬೇಕಾಗಿದೆ.

ಮುದ್ರಾಸಿನ ಮಾನ್ಯಮಂತ್ರಿ ಕೆ. ಆರ್. ಕಾರಂತರು.

## ಗುದ್ದಿಸಿಕೊಂಡು ಬುದ್ಧಿ ಕಲಿಯಬೇಕೇ?

ಕನ್ನಡಿಗರಲ್ಲಿಂದು ಸ್ವಸ್ವರೂಪ ಜಾಗೃತಿ ಸಂಪೂರ್ಣವಾಗಿ ಉಂಟಾಗಿದೆ. ಅವರ ಸ್ವಹೀನತಾ ಭಾವನೆ ಅಳಿದು ಹೋಗಿ ತಾವು ಕನ್ನಡಿಗರೆಂದು ಹೇಳಲು ಅವರು ಹೆಮ್ಮೆ ಪಡುತ್ತಿದ್ದಾರೆ. ಇನ್ನೊಬ್ಬರ ಒಂದು ಅಂಗುಲ ಭೂಮಿಯನ್ನು ಆಕ್ರಮಿಸುವ ದುರಾಶೆ ಅವರಿಗಿಲ್ಲವಾದರೂ, ತಮ್ಮದಾದ ಭೂಮಿಯ ಒಂದು ಸೂಜಿ-ಮೊನೆಯಷ್ಟನ್ನೂ ಕಳೆದುಕೊಳ್ಳಬಾರದೆಂಬ ಎಚ್ಚರಿಕೆ ಅವರಲ್ಲಿ ಮೂಡಿದೆ. ಮುಂಬರುವ ಭಾರತದಲ್ಲಿ ಭಾವಾನುಗುಣ ಪ್ರಾಂತವಿಭಾಗ ಅನಿವಾರ್ಯವಾಗಿದೆ. ಕರ್ನಾಟಕ, ಮಹಾರಾಷ್ಟ್ರ ಪ್ರಾಂತಗಳು ಪ್ರತ್ಯೇಕ ಪ್ರಾಂತವಾಗಲೇಬೇಕು. ಆಗ ಸೀಮಾನಿರ್ಣಯ ಸಮಿತಿಗಳನ್ನು ನಿಯಮಿಸಲಾಗುವುದು. ನ್ಯಾಯವಾಗಿ ಕನ್ನಡಿಗರಿಗೆ ಸಲ್ಲಬಹುದಾದ ಭಾಗ ಕನ್ನಡಿಗರಿಗೆ ಸಲ್ಲಲಿ, ಮರಾಟಿಗರಿಗೆ ಸಲ್ಲಬಹುದಾದ ಭಾಗ ಮರಾಟಿಗರಿಗೆ ಹೋಗಲಿ; ಯಾರೂ ಬೇಡವೆನ್ನುವುದಿಲ್ಲ. ಯಾರನ್ನೂ ಒತ್ತಾಯದಿಂದ ಈ ಸಂಘಟನೆಯಲ್ಲಿ ಸೇರಿಸಿಕೊಳ್ಳುವ ಮನಸ್ಸು ಕನ್ನಡಿಗರಿಗಿಲ್ಲ. ನೌಕರಿಗಾಗಿಯೊ, ವ್ಯಾಪಾರಕ್ಕಾಗಿಯೊ, ಕೂಲಿನಾಲಿಗೆಂದೋ ಬಂದು ನಿಂತು, ನಿಂತ ನೆಲವೆಲ್ಲ ತಮ್ಮದೆಂದು ಹೇಳುವುದು ನಾಗರಿಕತೆ ಒಪ್ಪುವ ಮಾತೇನು? ಪಾಕಿಸ್ತಾನವನ್ನು ಯಾವ ಮಾತಿಗಾಗಿ ಮಹಾರಾಷ್ಟ್ರೀಯರು ಏಕಕಂಠದಿಂದ ತಿರಸ್ಕರಿಸುತ್ತಿರುವರೋ ಅದೇ ಮಾತನ್ನು ತಮ್ಮ ಪ್ರಾಂತರಚನೆಯ ಸಂದರ್ಭದಲ್ಲಿ ಎತ್ತಿ ಹಿಡಿಯುತ್ತಿರುವುದು ಎಂತಹ ತತ್ತ್ವನಿಷ್ಠೆ? ಈಗ ಬೇರೆ ಬೇರೆ ಕಾರಣಗಳಿಂದ ತಂಡತಂಡವಾಗಿ ಹೋಗಿ ಮಹಾರಾಷ್ಟ್ರದಲ್ಲಿ ನೆಲಸಿರುವ ಕನ್ನಡಿಗರು, ಮನೆಮುರುಕತನದ ಜಳವಳಿ ನಡೆಯಿಸಿದರೆ, ಮಹಾರಾಷ್ಟ್ರೀಯರು ಸುಮ್ಮನೆ ಸಹಿಸಬಲ್ಲರೆ? ಈಗ ಒಂದು ವಿಷಯ: ನಿಜವಾದ ಮರಾಟಿಗರು ಕರ್ನಾಟಕದಲ್ಲಿರುವ ಈ ಮನೆಮುರುಕ ಮರಾಟಿಗರಿಗೆ ಸರಿಯಾಗಿ ಕಿವಿ ಹಿಂಡಿ ಬುದ್ಧಿ ಕಲಿಸಬೇಕು; ಇಲ್ಲವಾದರೆ ತರುಣ ಕನ್ನಡಿಗರ ಅಭಿಮಾನ-ಉತ್ಸಾಹಗಳಿಂದ ಅವರು ಗುದ್ದಿಸಿಕೊಂಡು ಬುದ್ಧಿ ಕಲಿಯಬೇಕಾಗುವುದು.

( ೩೦ನೆಯ ಪುಟದಿಂದ ಮುಂದೆಸಾಗಿದ್ದು )

ನೀಯರು ಸಾಹಿತ್ಯ ಕ್ಷೇತ್ರದಲ್ಲಿ ಗಳಗನಾಥರಿಗೆ ತುಸು ಹಿಂದು-ಮುಂದಾಗಿ ಗಣನೀಯವಾದ ಕಾರ್ಯ ಮಾಡಿದರು. ಹಾಗೆಯೆ ಕರ್ನಾಟಕ ಇತಿಹಾಸ, ಕರ್ನಾಟಕ ರಂಗಭೂಮಿ, ಕರ್ನಾಟಕತ್ವದ ಚಟುವಟಿಕೆಗಳಲ್ಲಿ ಆಲೂರ ವೆಂಕಟರಾವ್, ಕಡಪಾ ರಾಘವೇಂದ್ರರಾವ್, ಮುದವೀಡು ಕೃಷ್ಣರಾಯರು ಕನ್ನಡಿಗರನ್ನು ಎಚ್ಚರಿಸಿದರು. ಈ ಕಾಲಕ್ಕೆ ಗಳಗನಾಥರು ಬಂದು ತಮ್ಮ ಅಮೋಘವಾದ ಸಾಹಿತ್ಯಸೃಷ್ಟಿಯಿಂದ ಕನ್ನಡಿಗರನ್ನು ಎಚ್ಚರಿಸಿದರು. ಕನ್ನಡ ನಾಡಿನಲ್ಲಿ ಗಳಗನಾಥರದೊಂದು ದೊಡ್ಡ ತಪಶ್ಚರ್ಯೆ. ಶಿಕ್ಷಣ, ಸಾಹಿತ್ಯ ಕ್ಷೇತ್ರದಲ್ಲಿ ಪಾವಿತ್ರ್ಯ ತಂದರು. ಏಳು ಸಾವಿರಕ್ಕೆ ಮಿಗಿಲಾಗಿ ಕನ್ನಡಿಗರಿಗೆ ಪ್ರತಿತಿಂಗಳೂ ತಮ್ಮ 'ಸದ್ಬೋಧ ಚಂದ್ರಿಕೆ'ಯಿಂದ ಸರಸ ಆಹಾರವನ್ನು ಒದಗಿಸಿದರು. ಕೊನೆಗೆ ಮೊಟ್ಟೆಮೊಟ್ಟೆಯಾಗಿ ಪುಸ್ತಕಗಳನ್ನು ಬಿಸ್ನಮೇಲೆ ಹೇರಿಕೊಂಡು ಮನೆಮನೆಗೆ ಅಂಡಲೆದರು. ಆದರೂ ಅವರ ಸಾಲ ತಿರುಪತಿ ತಿಮ್ಮಪ್ಪನ ಸಾಲದಂತೆ ಅಚಲವಾಗಿಯೆ ಉಳಿಯಿತು. ಇಂತಹ ವಿಷಮ ಪರಿಸ್ಥಿತಿಯಲ್ಲೂ ಕನ್ನಡಕ್ಕೆ ಸೇವೆ ಸಲ್ಲಿಸಿದ ಗಳಗನಾಥರು ತಪಸ್ವಿಗಳೆ ಅಲ್ಲವೆ?

ಪ್ರಕೃತ ಗ್ರಂಥವು ಗಳಗನಾಥರ ಕಾಲ, ಜೀವನ, ಕೃತಿಗಳು, ಕಾಣಿಕೆ ಇವುಗಳನ್ನು ಕುರಿತಿದೆ. ಇನಾಂದಾರರು ಕಾಲವನ್ನೂ ನೆಗಳೂರರು ಜೀವನವನ್ನೂ, ಪಾಟೀಲರು ಕೃತಿಗಳನ್ನೂ, ಕೃಷ್ಣಕುಮಾರರು ಕಾಣಿಕೆಯನ್ನೂ ವಿವೇಚಿಸಿದ್ದಾರೆ. ಒಂದೆರಡು ಲೇಖನಗಳಲ್ಲಿ ಕೆಲವು ಸಂಗತಿಗಳ ಪುನರುಚ್ಚಾರವಾಗಿದೆ. ಕೃಷ್ಣಕುಮಾರರ ಲೇಖನವು ಮೊದಲಿನ ಮೂರು ಲೇಖನಗಳನ್ನು ಬಿಟ್ಟು ಹೆಚ್ಚಿನದೇನನ್ನೂ ಹೇಳಿದಂತಿಲ್ಲ. ಗಳಗನಾಥರ ಕೃತಿಗಳ ವಿಚಾರ ಇನ್ನಷ್ಟು ವಿಸ್ತಾರವಾಗಿ, ವಿವೇಚನಾತ್ಮಕವಾಗಿ ಬರಬೇಕಾಗಿತ್ತು. ನೆಗಳೂರರು ಬರೆದ ಗಳಗನಾಥರ ಜೀವನ ವೃತ್ತಾಂತವು ಹೃದ್ಯವಾಗಿದೆ. ಇನಾಂದಾರರ ಲೇಖನವು ಐತಿಹಾಸಿಕ ವಿವೇಚನೆಯನ್ನು ಒಳಗೊಂಡಿದೆ. ಶ್ರೀರಂಗರ ಮುನ್ನುಡಿಯು ವಿದ್ಯಾವರ್ಧಕ ಸಂಘದ ಮತ್ತು ಗಳಗನಾಥರ ಕಾರ್ಯರಂಗಗಳ ಸಂಬಂಧವನ್ನು ತೋರಿಸುತ್ತದೆ.

ಇಡಿಯ ಗ್ರಂಥದಲ್ಲಿ ಗಳಗನಾಥರ ಬಗ್ಗೆ ಕಳಕಳಿ ಸಹಾನುಭೂತಿ ಗೌರವಗಳೆ ವ್ಯಕ್ತವಾಗಿವೆ. ಅವರ ಕಷ್ಟಜೀವನವನ್ನು ಕುರಿತು ಜನರಲ್ಲಿ ಸಹಾನುಭೂತಿಯನ್ನು ಹುಟ್ಟಿಸುವಂತೆ, ಅವರ ಕೃತಿಗಳ ನಿಜವಾದ ಯೋಗ್ಯತೆಯನ್ನು ಕುರಿತು ಓದುಗರಲ್ಲಿ ಸರಿಯಾದ ತಿಳಿವಳಿಕೆಯನ್ನು ಮಾಡಿಕೊಡುವಂತೆ ಯತ್ನ ಎಲ್ಲಿಯೂ ಕಂಡುಬಂದಿಲ್ಲ. ಕಾರಣ ಇದನ್ನು 'ಗಳಗನಾಥರ ಜೀವನ ವಾಙ್ಮಯ ನಿಮರ್ಶೆ'ಯೆನ್ನುವುದಕ್ಕಿಂತ ಗಳಗನಾಥರ ಪ್ರಶಸ್ತಿ-ಎನ್ನುವುದು ಒಳಿತು. ಈ ಚಿಕ್ಕ ಪುಸ್ತಕವು ಗಳಗನಾಥರ ಸಮಗ್ರ ಪರಿಚಯದ ಮಹಾಗ್ರಂಥಕ್ಕೆ ಪ್ರಚೋದಕವಾಗಲಿ. —ಎಸ

---


DYESTUFFS
INTERMEDIATES
AND
CHEMICALS

SIZING AND FINISHING PRODUCTS
MACHINERIES FOR ALL INDUSTRIES
FOR

**COTTON, SILK, ART SILK,
WOOL, JUTE, PAPER.
LEATHER, SOAP, WAX,
COIR, VARNISHES, OILS.**

**Chemicals
Accelerators and
Anti-Oxidants
for
Rubber Industry**

S. K. KABBUR LIMITED

3, BASTION ROAD
FORT, BOMBAY

Telegrams: "DIAZO" Bombay. Telephone: 21627

CORRESPONDENTS IN ENGLAND
KABBUR & Co., LIMITED

RADHA HOUSE
Higher Ardwick, MANCHESTER, 12.

Telegrams: "Radha," Manchester.

# ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮ್ಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ ( Valuation ) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸವಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ ( Claim ) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಮ್. ಗೋವರ್ಧನರಾವ್

ಶ್ವಾಸಕ್ಕೆ ಸಂಬಂಧಪಟ್ಟ ಅಂಗಗಳ ಅಂತರ್ಯ
ದಲ್ಲಿನ ಕಫ್ಲದಿಂದ ಉಂಟಾಗುವ ಕೆಮ್ಮನ್ನು ಗುಣಪಡಿ
ಸಲು ಅದರ ಮೂಲ ಕಾರಣವನ್ನು ತೆಗೆದುಬಿಡಬೇಕು.
ಈ ಕೆಲಸವನ್ನು "ಕಾಸ್ಫೊ" ವು ಮಾಡಿ, ಕೆಮ್ಮನ್ನು
ಎಂದೆಂದಿಗೂ ಗುಣಮಾಡಿ, ಅದರಲ್ಲಿ ಉಂಟಾಗಬಹು
ದಾದ ರೋಗಗಳ ಭಯದಿಂದ ನಿಮ್ಮನ್ನು ಪಾರು
ಮಾಡುವುದು.

"ಕಾಸ್ಫೊ" ಹಲವು ತರದ ಲಕ್ಶ್ಮಿತ್ತುಮ ಔಷಧಗಳಿಂದ ಕೂಡಿದ್ದು, ವಾಸಕದಂತಿರುವ ಈ ಮದ್ದು ಕೆಮ್ಮಿನ ಮೂಲವನ್ನು ಕಿತ್ತೊಗೆದು, ಕಫವನ್ನು ಕಡಿಮೆ ಮಾಡಿ, ಶೀತರೋಗಕ್ಕೆ ಸಂಬಂಧಿಸಿ ಎಲ್ಲಾ ಕಶ್ಮಲವನ್ನು ತೆಗೆದು, ಮುಂದಕ್ಕೆ ಅಂತಹ ರೋಗಗಳು ಬಾರದಂತೆ ಹೃದಯ ಮತ್ತು ಶ್ವಾಸಕೋಶಗಳನ್ನು ಕ್ರಮವಾಗಿ ಇಡುವುದು. ಅದು ಅತಿ ಶಕ್ತಿಯುಳ್ಳದ್ದಾಗಿ, ಬಿಲ್ಲೆಯ ರೂಪದಲ್ಲಿ ರುಚಿಕರವಾಗಿ ದೊರಕುತ್ತದೆ. ಇಂದೇ ಒಂದು ಬಾಟ್ಲಯನ್ನು ಕೊಂಡುಕೊಳ್ಳಿರಿ

ಗುಣವಾಗುವತನಕ ಒಂದೆರಡು ಗಂಟೆಗಳ ಅಂತರದಲ್ಲಿ ಒಂದೊಂದು ಬಿಲ್ಲೆಯನ್ನು ಸೇವಿಸಬೇಕು.

ಎಲ್ಲಾ ಔಷಧಾಲಯಗಳಲ್ಲಿ ದೊರಕುವುದು.

Kaspho

ಆಕರ್ಷಕರವಾದ ಕೆಮ್ಮು-ನಾಶಕರ ಬಿಲ್ಲೆಗಳು

ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಹಮ್ಮದ್‌ನಗರ.


ಹುಬ್ಬಳ್ಳಿ ಶಾಖೆ:—ಸ್ಟೇಶನ್‌ರೋಡ, ಹುಬ್ಬಳ್ಳಿ

Pirnted by Mr. V. Y. Jathar at the Karnatak Printing Works, Dharwar, and Publishe for the Proprietor Jayanti Publications, by M. V. Melligatti at the Jayanti Office, Dharwar.

## ಮುಖ್ಯ ವಿಷಯಗಳು


ಮುಂಬೆಳಗು ( ಕವನ )
ಶ್ರೀ. ಸಿ. ಕೆ. ದೀಕ್ಷಿತ ' ಪಸಿವಿನ ಗುಡಿ ' ಧಾರವಾಡ ೩೩

ಕಳವಲ್ಲಪ ಕಳವು ( ಸಂಪಾದಕೀಯ )
ಸಂಪಾದಕರು ೩೪

ಉರವಕೊಂಡವ ಶ್ರೀಕರಿಬಸವ ರಾಜೇಂದ್ರರು (ಪರಿಚಯ)
ಶ್ರೀಮತಿ ತೊಗರೆ ಸರ್ವಮಂಗಳಾಂಬಾ, ಬಳ್ಳಾರಿ ೩೬

ಬಾಳ್ನೋಟಗಳು (ಜೀವನ ಚಿತ್ರ)
ಶ್ರೀ. ರಾ. ಶ್ರೀ. ಕಸ್ತೂರಿ, ಕೋಟ, ಮುಂಬಯಿ ೩೭

ಸಾಹಿತ್ಯಿಕ ಮುಕ್ತ ಶೀಲ ( ಚರ್ಚಾತ್ಮಕ ಪ್ರಬಂಧ )
ಪ್ರೊ. ವಿ. ಎಂ. ಇನಾಮದಾರ ಎಂ. ಎ. ಮುಂಬಯಿ ೪೩

ವಿಚಿತ್ರ ಹೃತೀಕಾರ ( ಕಥನಕವನ )
ವಿದ್ವಾನ್ ಎಂ. ಆನಂದರಾವ್ ಬಿ. ಎ. ಹರಪನಹಳ್ಳಿ ೪೬

ಚುಟುಕಗಳು ( ಸ್ಫುಟಕವಿತೆಗಳು)
ಶ್ರೀ. ವಿ. ಜಿ. ಭಟ್ಟ ಬಿ. ಎ ಹೊನ್ನಾವರ ೪೭

ಬೀರಪ್ಪನ ದುರ್ದಶೆ ( ಸಣ್ಣಕತೆ )
ಶ್ರೀ. ವಿ ಜಿ. ಶಾನಭಾಗ, ಕುಮಟಾ ೪೮

ಸಂಜನಿತಗಳು ( ವಿಜ್ಞಾನ ಪರಿಚಯ )
ಶ್ರೀ ವೆಂಕಟಾಚಾರ್ಯ ಉಪಾಧ್ಯಾಯ ಎಂ. ಎಸ್‌ಸಿ. ೫೨

ಸಂಗೀತ ಸಾಧಕ ದೇಶಪಾಂಡೆ ಗುರುರಾಯರು ( ವ್ಯಕ್ತಿಚಿತ್ರ )
ಶ್ರೀ. ಎನ್. ಕೆ. ಕುಲಕರ್ಣಿ ಎಂ. ಎ., ಬಿ. ಟಿ. ೫೫

ಅಲ್ಲಪ್ಪ ಬೀರಣ್ಣನ ಬಡಿನುಡಿ ( ಪು. ೩೫ ) ಪುಸ್ತಕವಿಮರ್ಶೆ ( ಪು. ೬೦ ), ನಾಲ್ಕೂನಿಟ್ಟಿನ ನೋಟ ( ಪು. ೬೩ ), ಸಾದರಸ್ವೀಕಾರ ( ಕವರಿನ ೨-೩ ಪುಟಗಳಲ್ಲಿ ).

# ಸಾದರ ಸ್ವೀಕಾರ

೧೮. ಶ್ರೀ ಭುವನೇಶ್ವರೀ ಪಂಚಾಂಗಸಹಿತ ವರ್ಷ ಭವಿಷ್ಯ. ಶಕೆ ೧೮೬೮, ವ್ಯಯನಾಮ ಸಂವತ್ಸರ. ಜ್ಯೋತಿಷಿಗಳು ಜ್ಯೋತಿರ್ವಿದ್ ಬ್ರಹ್ಮಶ್ರೀ ಶೇಷಶಾಸ್ತ್ರಿ ಹೆಬ್ಬಾಳ, ಸುರಪುರ (ಸೈರುಫಾವ್ ಸ್ಟೇಟ್). ಪ್ರಕಾಶಕರು ಶ್ರೀ. ಬಿ. ಜಿ. ಸಂಕೇಶ್ವರ, ಸರಸ್ವತೀ ಪುಸ್ತಕ ಭಾಂಡಾರ ಗದಗ ಮತ್ತು ಬಸವೇಶ್ವರ ಪುಸ್ತಕ ಭಾಂಡಾರ ಹುಬ್ಬಳ್ಳಿ. ಬೆಲೆ ೮–೧೫–೦.

ಸುರಪುರ ಪಂಚಾಂಗ ಕನ್ನಡ ನಾಡಿನಲ್ಲಿ ಬಹುಜನರಿಗೆ ಪರಿಚಿತವಾಗಿದೆಯಿಷ್ಟೇ ಅಲ್ಲ; ವಿಶ್ವಾಸಕ್ಕೆ ಪಾತ್ರವಾಗಿದೆ. ಜ್ಯೋತಿಷ್ಯಕ್ಕೆ ಸಂಬಂಧಿಸಿದ ಅನೇಕ ಪರಿಚಯಾತ್ಮಕ ಸಂಗತಿಗಳಿಂದ ಕೂಡಿದ ಈ ಪಂಚಾಂಗ, ಪ್ರತಿಯೊಂದು ಸಾಂಪ್ರದಾಯಿಕ ಕುಟುಂಬದಲ್ಲಿ ಇರತಕ್ಕಂತಹದಾಗಿದೆ. ಹಿಂದುಗಳಲ್ಲಿಯ ಎಲ್ಲ ಮತ-ಪಂಥದವರಿಗೂ ಉಪಯುಕ್ತವೆನಿಸುವಂತೆ ಪಂಚಾಂಗಕಾರರು ಜಾಗೃತಿ ತೆಗೆದುಕೊಂಡಿದ್ದಾರೆ. ಎಲ್ಲರಿಗೂ ತಿಳಿಯುವಂತಹ ಸುಲಭ ಕನ್ನಡದಲ್ಲಿ ನಿತ್ಯೋಪಯುಕ್ತ ಜ್ಯೋತಿಷ್ಯ ವಿಷಯಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ.

೧೯. **ರೇಡಿಯೊ ನಾಟಕಗಳು** (ಚಿಕ್ಕ ನಾಟಕಗಳ ಸಂಕಲನ). ಲೇಖಕರು ಶ್ರೀಮಾನ್ 'ಬೀಚಿ' ಬಳ್ಳಾರಿ. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೩೫ನೆಯ ವರ್ಷದ ೧೫ನೆಯ ಕಿರಣ. ಕ್ರೌ. ಆ. ೧೧೬ ಪುಟಗಳು; ಬೆಲೆ ೧-೮-೦.

೨೦. **ದಕ್ಷಿಣ ಭಾರತದ ಖನಿಜ ಸಂಪತ್ತು ಮತ್ತು ಕೈಗಾರಿಕೆಗಳು** (ಪರಿಚಯಾತ್ಮಕ ಗ್ರಂಥ). ಬರೆದವರು ಶ್ರೀ. ಎಂ. ವಾಸುದೇವರಾವ್ ಎಂ ಎ, ಎಲ್. ಟಿ. ಹೆಡ್‌ಮಾಸ್ಟರ್ 'ವಿದ್ಯಾದಾಯಿನಿ' ಹೈಸ್ಕೂಲ್, ಸುರತ್ಕಲ್ಲು. ಪ್ರಕಾಶಕರು ದಿ ಮಂಗಳೂರು ಟ್ರೇಡಿಂಗ್ ಅಸೋಸಿಯೇಶನ್ ಲಿಮಿಟೆಡ್, ಮಂಗಳೂರು. ಕ್ರೌ. ಆ. ೧೦೦ ಪುಟಗಳು. ಬೆಲೆ ೨-೮-೦.

೨೧. **ಬಿಟ್ಟುವ ಹೊಳೆ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಲೇಖಕರು ಶ್ರೀ. ಸಿಂಪಿ ಲಿಂಗಣ್ಣ ಅವರು. ಧಾರವಾಡದ ಸಾಧನ ಮುದ್ರಣಾಲಯದ ಪ್ರಕಾಶನ. ಕ್ರೌ. ಆ. ೧೧೬ ಪುಟಗಳು. ಬೆಲೆ ೧-೮-೦.

೨೨. **ಕಾಂಗ್ರೆಸ್ಸಿನ ಇತಿಹಾಸ** (ಪರಿಚಯಾತ್ಮಕ ಕಿರುಹೊತ್ತಗೆ). ಬರೆದವರು ಶ್ರೀ. ಗುರುನಾಥ ಜೋಶಿ ಅವರು. ಇದೂ ಮೇಲಿನ ಸಾಧನ ಮುದ್ರಣಾಲಯದ ಪ್ರಕಟನೆ. ಕ್ರೌ. ಆ ೬೦ ಪುಟಗಳು. ಬೆಲೆ ೦–೧೫–೦.

ಟ್ರೇನಿಂಗ್ ಸಂಸ್ಥೆಗಳ ಅಭ್ಯಾಸ ಪತ್ರಿಕೆಯ ಮೇರೆಗೆ ಕಾಂಗ್ರೆಸಿನ ಇತಿಹಾಸವನ್ನು ಬರೆದು, ಕಾಂಗ್ರೆಸ್ಸಿನ ವಿಕಾಸಕ್ಕೆ ಕಾರಣರಾದ ಮುಂದಾಳುಗಳ ಸಂಕ್ಷಿಪ್ತ ಚರಿತ್ರೆಗಳನ್ನೂ ಅದಕ್ಕೆ ಜೋಡಿಸುವ ಕೆಲಸವನ್ನು ಈ ಚಿಕ್ಕ ಪುಸ್ತಕದಲ್ಲಿ ಲೇಖಕರು ಮಾಡಿದ್ದಾರೆ. ಕಾಂಗ್ರೆಸ್ಸಿನ ಒಗೆಗೆ ಸ್ವಲ್ಪವಾದರೂ ಪರಿಚಯ ಎಲ್ಲರಿಗೂ ಇರಬೇಕಾದ ಆವಶ್ಯಕತೆ ಇದೆ ಇಂದು: ಈ ಪುಸ್ತಕ ಅಂತಹ ಆವಶ್ಯಕತೆಯನ್ನು ಸ್ವಲ್ಪಮಟ್ಟಿಗೆ ಕಡಿಮೆಮಾಡ ಬಹುದು.

೨೩. **ತ್ರಿವಿಕ್ರಮನ ಆಕಾಶಗಂಗೆ** (ಆಧುನಿಕ ಚಂಪೂ ಕಾವ್ಯ). ಶ್ರೀ. ವಿನಾಯಕ ಅವರಿಂದ ರಚಿತವಾದುದನ್ನು ಸಾಧನ ಮುದ್ರಣಾಲಯದ ಶ್ರೀ. ಶೇ. ಗೋ. ಕುಲಕರ್ಣಿಯವರು ಪ್ರಕಟಿಸಿದ್ದಾರೆ. ಕ್ರೌ. ಆ. ೧೧೮ ಪುಟಗಳು. ಬೆಲೆ ೧–೮–೦.

೨೪. **ವಾಕ್ಚಿತ್ರ** (ಮಾಸಪತ್ರಿಕೆಯ ವಾರ್ಷಿಕ ಸಂಚಿಕೆ). ಸಂಪಾದಕರು ಶ್ರೀ. ಎಂ. ಎನ್. ಚೌಡಪ್ಪ, ವಾಕ್ಚಿತ್ರ ಕಾರ್ಯಾಲಯ, ೧೨೧ ಸುಲ್ತಾನ್ ಪೇಟ, ಬೆಂಗಳೂರು ನಗರ. ಕ್ರೌನ್ ೧೧ ಡ ೧೦೦ ಪುಟಗಳು. ಬೆಲೆ ೦–೮–೦.

ಚಲಚ್ಚಿತ್ರಕ್ಕೆ ಸಂಬಂಧಿಸಿದ ಒಳ್ಳೆಯ ಕನ್ನಡ ಮಾಸಪತ್ರಿಕೆಯಿದು. ವಿಷಯಕ್ಕೆ ಸಂಬಂಧಿಸಿದ ಹಲವು ಉಪಯುಕ್ತ ಲೇಖನಗಳೂ, ಸಂಪಾದಕೀಯ ಟಿಪ್ಪಣಿಗಳೂ, ಚಲಚ್ಚಿತ್ರ ವಾರ್ತೆಗಳೂ ಸಚಿತ್ರವಾಗಿ ಪ್ರಕಟವಾಗಿರುವವು.

೨೫. **ವಿಜಯಾ** (ಅನುವಾದಿತ ಕಾದಂಬರಿ). ಮೂಲ ಲೇಖಕರು ಬಂಗಾಲದ ದಿವಂಗತ ಶ್ರೀ ಶರಚ್ಚಂದ್ರ ಚಟ್ಟೋಪಾಧ್ಯಾಯರು. ಅನುವಾದಕರು ಶ್ರೀ. ಮು ಗ. ಸಟ್ಟಿಯವರು. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೩೩ನೆಯ ವರ್ಷದ ೨೩ನೆಯ ಕಿರಣ. ಕ್ರೌ. ಆ. ೧೫೨ ಪುಟಗಳು. ಬೆಲೆ ೧–೦–೦.

೨೬. **ಸಂಗೀತಾಚಾರ್ಯ– ಪ್ರಥಮಭಾಗ** (ಹಾರ್ಮೋನಿಯಂ ತಿಕ್ಷಕ) ಬರೆದವರು ಶ್ರೀಮಾನ್ ಎನ್. ಎನ್. ರಾವ್ ಹರಿದಾಸ, ಮೂರಾಟದ ಪೂರ್ಣಾಧಿಕಾರಿಗಳು ರಾಮಾಶ್ರಯ ಒಕ್ಕಡಿಪ್ಪೊ, ಧಾರವಾಡ. ಕ್ರೌ. ಆ ೧೩೦ ಪುಟಗಳು; ಬೆಲೆ ೧–೪–೦.

೨೭. **ರೋಹಿಣಿ** (ಕಥಾಸಂಗ್ರಹ). ಬರೆದವರು 'ಜಾಲಶಶಿ' ಅವರು. ಪ್ರಕಾಶಕರು ಮೆ. ಆರ್. ಎನ್. ನ್ಯೂಜ್ ಏಜನ್ಸಿ, ೬೬೫ ಚಿಕ್ಕಪೇಟೆ; ಬೆಂಗಳೂರು ಸಿಟಿ. ಕ್ರೌ. ಆ. ೯೭ ಪುಟಗಳು. ಬೆಲೆ ೦–೧೨–೦.

೨೮. **ಕೈ. ಮಂಜಲಿ, ಕೈ. ಗೋವಿಂದರಾವ ಯಾಳಗಿ ಮತ್ತು ವೈ. ನಾರಾಯಣರಾವ ಜೋಶಿ ಸ್ಮಾರಕ ಮಂಡಲದ** ಇದುವರೆಗಿನ ಕಾರ್ಯದ ವಿವರ. ಕ್ರೌ. ಆ. ೩೦ ಪುಟಗಳು.

ಶ್ರೀ. ಗೋಖಲೆ ಕೇಶವರಾಯರು ಸ್ವಯಂ ಪ್ರೇರಣೆಯಿಂದ ಕೇವಲ ವೈಯಕ್ತಿಕವಾಗಿ ಕಾರ್ಯವನ್ನಾರಂಭಿಸಿ, ಈ ಸಂಸ್ಥೆಯನ್ನು ಕಟ್ಟಲು ಹಣ ಕೂಡಿಸಿದ್ದಾರೆ. ಈಗಾಗಲೆ ಸುಮಾರು ೪೫೦೦ ರುಪಾಯಿ ಕೂಡಿವೆ. ಸಾರ್ವಜನಿಕ ಸಲಹಗಾರ ಮಂಡಲಯೊಂದನ್ನು ನಿರ್ಮಿಸಿ, ಅದರ ಸಲಹೆಯಂತೆ ಈ ಸಂಸ್ಥೆಯನ್ನು ನಡೆಯಿಸಬೇಕೆಂದು ಶ್ರೀ. ಗೋಖಲೆಯವರು ಇಚ್ಛಿಸುತ್ತಾರೆ. 'ಮಜಲೀ ಗ್ರಂಥಾಲಯ' 'ಯಾಳಗಿ ವಾಚನಾಲಯ' 'ಜೋಶಿ ಅಭ್ಯಾಸ ಮಂಡಲ' ಇವುಗಳನ್ನು ನಡೆಯಿಸುವ ಮುಖ್ಯ

(ಮೊದಿಕೆಯ ಮೂರನೆಯ ಪುಟ ನೋಡಿರಿ.)

ವಾರ್ಷಿಕ ಚಂದಾ
೪—೪—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವದು

ಸಂಪುಟ ೯ | ೧ನೆಯ ಜೂಲೈ ೧೯೩೬

# ಮುಂಬೆಳಗು!

ಶ್ರೀ. ಸಿ. ಕೆ. ದಿಕ್ಷಿತ, ಧಾರವಾಡ

ತಾಯಿ ಹೇಳಿದಳು: "ಬೆಳಕದೊ ಬಂದಿದೆ;
ನೋಡದೊ ನೋಡಲ್ಲಿ!"
ನಾನೋ.. ಹಾಸುಗೆಯೊಳಗೇ ಹೊರಳುತೆ
ಕೇಳಿದೆ: "ಆದು ಎಲ್ಲಿ?" ೧

ಅವಳ ಬಿತ್ತರದ ಬೆಳಕಿನ ದಿಬ್ಬಣ,
ಹೊರಟಿದೆ ಬಾನೊಳಗೆ;
ಬಿಸಿಲೋ ಬೇಗುದಿ! ಚೇತನೆ ಇಂಗಿದೆ!
ಉರಿಯೋ ತಿರೆಯೊಳಗೆ. ೨

ನೆತ್ತರಿನೋಕುಳಿ; ಗೋಳಿನ ವೊಬ್ಬಳಿ;
ಒಡಲಿಗೆ ಸೆಣದೂಟ;
ಬೀದಿಯ ಬಯಲಿಗು ಪ್ರಣಯದ ಹಾವಳಿ;
ಬತ್ತಲು ಕುಣಿದಾಟ! ೩

ಕೊಬ್ಬಿದೆ ಬಿಜುಗಡೆ, ಇಲ್ಲವೊ ನಿಲುಗಡೆ,
ಹಗೆ-ಹೊಗೆ ತೂಳುತಿದೆ.
ವಿಗ್ರಹ ತಳೆದರು ಮನುವಿನ ಮಕ್ಕಳು;
ಪಶು-ಬಗೆ ಮೀರುತಿದೆ. ೪

ಗಂಡು ಹೆಣ್ಣುಗಳೊ; ಜಾತಿ ಜಂಗುಳಿಯೊ;
ಮನುಷ್ಯರೆ ಅಚಾರ.
ಹೊತ್ತಗೆಯೂದುತೆ ತುಟುಕಿದೆ ವಿಂಗಣ;
ಪಳಸಿದೆ ಅವಿಚಾರ! ೫

ನೇಸರು-ಚಂದ್ರರು ತೊಣೆಯಲು ಬಹುದೋ?
ಕತ್ತಲು ಎದೆಯೊಳಗು!
ಕೊಳೆಯಲಿ ಹುದುಗಿದ ಮೆದುಳಿನ ಸೂಡಿಗೆ,
ಮಸೆ, ಮಸೆ; ಹೊಸ ಅಲಗು! ೬

ಬರಲಾ ಕ್ರಾಂತಿಯು ಬದುಕಿನ ಹಂತಕೆ
ಹೊಸರವಿ ಉದಿಸುವನು;
ಮುನ್ನವೆ ಬೆಳಕದು ಅರಿವೆಚ್ಚವಿಸಲು
ಬಾಳನು ನಡೆಸುವನು. ೭

ತಾಯಿಯು ನುಡಿದಳು: 'ಬೆಳಕು ಮೂಡಿದೆಯೊ,
ನೋಡದೊ, ನೋಡಲ್ಲ!
ನಾನು ಹಾಸುಗೆಯ ಬಿಟ್ಟೆದ್ದೊಡನೆಯೆ,
ಕಂಡೆ ಬೆಳಕನಲ್ಲ! ೮

ಕಳವಲ್ಲದ ಕಳವು ಅಥವಾ ಕತ್ತಲೆನ್ಯಾಪಾರ

ಯುದ್ಧಕಾಲದಲ್ಲಿ ಭಾರತದಲ್ಲಿ ಪ್ರಾರಂಭವಾದ ಹೊಸತರದ ಹಣಗಳಿಕೆಯ ಪ್ರಯೋಗವಿದೊಂದು. ಸಂರಕ್ಷಣ ಕಾಯದೆಯೆ ಈ ಪ್ರಯೋಗಸಿದ್ಧಿಯನ್ನು ಒದಗಿಸಿಕೊಟ್ಟಿತು. ಜೀವನೋಪಯುಕ್ತ ಸಾಧನಗಳನ್ನೆಲ್ಲ ಈ ಸಂರಕ್ಷಣ ಕಾಯಿದೆಯು ನಿಯಂತ್ರಿಸತೊಡಗಿದಾಗ, ಪೂರಯಿಕೆ ಶಾಖೆಯವರಿಗೂ ಸಣ್ಣ ದೊಡ್ಡ ವರ್ತಕರಿಗೂ ಈ ಕಳವಲ್ಲದ ಕಳವಿನ ಕಾಮಧೇನು ಗೋಚರವಾಯಿತು.

ಭಾರತದಲ್ಲಿ ನಿಯಂತ್ರಣ ಕಾಯಿದೆಯು ಬಂದುದು ಭಾರತೀಯ ಜನಸಾಮಾನ್ಯರ ಸುಖಕ್ಕಾಗಿ ಅಲ್ಲ; ಇಲ್ಲಿ ದೊರೆವ ಅವಶ್ಯಕ ಪದಾರ್ಥಗಳನ್ನು ಯುಧ್ಯಮಾನ ಮಿತ್ರರಾಷ್ಟ್ರಗಳಿಗೆ ಒದಗಿಸಲಿಕ್ಕೆ. ಪದಾರ್ಥವೆಲ್ಲ ಪರದೇಶಗಳಿಗೆ ಹೋಯಿತಾದರೂ, ಈ ಹೋಗುವಿಕೆ ನಮ್ಮ ಜನರಲ್ಲಿ ಎರಡು ಸ್ಪಷ್ಟವಾದ ವರ್ಗಗಳನ್ನು ನಿರ್ಮಿಸಿ ಬಿಟ್ಟಿತು. ಮಧ್ಯಾಹ್ನಕ್ಕೇನು ಮಾಡಬೇಕೆಂಬ ಕಳವಳದಿಂದ ಇನ್ನೊಬ್ಬರ ಕೈಯ ಕಡೆಗೇ ನೋಡುವ ಬಹುಸಂಖ್ಯಕರ ವರ್ಗ ಮೊದಲನೆಯದು. ಒಂದು ರೂಪಾಯಿಗೆ ಒಂದು ಕಾಳಿನಂತೆ ಕೊಂಡು ತಿಂದರೂ ಅಡ್ಡಿಯಿಲ್ಲ; ಈ ಕಾಯಿದೆ ಯಾವಾಗಲೂ ಇರಲೆಂಬ ಲಂಚಗುಳಿ ಅಧಿಕಾರಿಗಳ—ಲಾಭಬಡಕ ವ್ಯಾಪಾರಿಗಳ— ವರ್ಗ ಎರಡನೆಯದು. ಈ ಲಂಚಗುಳಿತನ, ಲಾಭಬಡಕತನಗಳಿಂದಿರೆ ಇನ್ನೇನೂ ಅಲ್ಲ, ಕಳವಲ್ಲದ ಕಳವು; ಸುಲಿಗೆಯೆಂಬಿದರ ಸುಲಿಗೆ.

ತನಗೆ ಪದಾರ್ಥಗಳು ಬೇಕಾದವರ ಕಡೆಗೇ ಗುರಿಯನ್ನಿರಿಸಿದ್ದ ಯುದ್ಧಕಾಲದ ಸರಕಾರ, ಈ ಲಂಚಗುಳಿತನ-ಲಾಭಬಡಕತನಗಳನ್ನು ಅನ್ಯಾಯವೆಂದು ಗಣಿಸಲೆ ಇಲ್ಲ. ಈ ಅಪರಾಧಗಳು ಬಹಿರಂಗವಾಗಿಯೆ ನಡೆದಿರುವುದೆಂಬುದು ಗೊತ್ತಾದರೂ, ಮೌನದ ಕಡೆಗಣ್ಣಿನ ಒಪ್ಪಿಗೆ ಕೊಟ್ಟುಬಿಟ್ಟಿತು. ಇದು ಅನ್ಯಾಯವೆಂದು ನಿರ್ಭೀತಿಯಿಂದ ಕೂಗಿ ಹೇಳುವವರನ್ನೆಲ್ಲ ಅಂದಿನ ಸರಕಾರ ಸೆರೆಮನೆಗೆ ಕಳುಹಿತ್ತು. ಉಳಿದ ಕೆಲವು ಜನ ಮೃದುವೃತ್ತಿಯವರು ಬಾಯಿ ಬಿಡದಂತೆ ಕಾಯಿದೆಯು ಕಡಿವಾಣ ಹಾಕಿತ್ತು. ಅದುದರಿಂದ ಹಳ್ಳಿಯೂರ ಓತೆಕಾರನಿಂದ ಹೊದಲು ಮಾಡಿಕೊಂಡು ಜಿಲ್ಲೆಯ ಮುಖ್ಯಾಧಿಕಾರಿಯ ವರೆಗೆ ಎಲ್ಲರೂ ಸೇರಿ, ಜನಸಾಮಾನ್ಯರನ್ನು ಸುಲಿದರು. ದೇಶದ ಸಂರಕ್ಷಕರೆಂದು ಪೊರೆಯುತ್ತಿದ್ದ ಪೋಲೀಸಖಾತೆಯ ಅಧಿಕಾರಿಗಳಂತೂ ಜನತೆಯನ್ನು ಕಂಗೆಡಿಸಿಬಿಟ್ಟರು. ಲಾಭದಾಶೆಯ ವರ್ತಕರು ಜನರ ಹಸಿವೆಯ ಹಂಗಾಮನ್ನು ಉಪಯೋಗ ಮಾಡಿಕೊಂಡು, ಒಂದಕ್ಕೆ ಹತ್ತರಂತೆ ಮಾರಿ, ಜನತೆಯನ್ನು ಲೂಟಿಮಾಡಿದರು.

ಈ ಲಂಚಗುಳಿ-ಲಾಭಬಡಕರಲ್ಲಿ ನಮ್ಮ ದೇಶ ಬಾಂಧವರೇ ಹೆಚ್ಚು ಸಂಖ್ಯೆಯಲ್ಲಿರುವರು. ಕಾಲಬಲ, ಸ್ಥಾನಬಲಗಳ ಅವಕಾಶ ಸ್ವಲ್ಪ ದೊರೆತರಾಯಿತು; ತಮ್ಮ ಅಣ್ಣ-ತಮ್ಮಂದಿರ ನೆತ್ತರನ್ನೂ ಇವರು ಹಂಡಿಕೊಳ್ಳತೊಡಗಿದರು. ಈ ಕೆಲಸ ಮಾಡಿದವರು ಅಜ್ಞಾನಿ ಅಶಿಕ್ಷಿತರಲ್ಲ. ೧೫೦ ವರ್ಷಗಳಿಂದ ದೇಶಕ್ಕೆ ಕೊಡುತ್ತಿರುವ ಬ್ರಿಟಿಷರ ಸುಶಿಕ್ಷಣದಿಂದ ಸುಸಂಸ್ಕೃತರೆನಿಸಿಕೊಂಡವರು. ಬ್ರಿಟಿಷರ ದೇಶಪ್ರೀತಿ, ಸಮಾಜನೀತಿಗಳ ಪಾಠಗಳನ್ನು ಅರೆದರೆದು ಕುಡಿದವರು. ಹಳ್ಳಿಯೂರ ಗೌಡ-ಶಾನಭೋಗರು ಸಹಸ್ರಾಧೀಶರಾದರು; ತಾಲೂಕಿನ ಅಧಿಕಾರಿಗಳು ಲಕ್ಷಾಧೀಶರಾದರು; ಜಿಲ್ಲೆಯ ಅಧಿಕಾರಿಗಳು ಕೋಟ್ಯಧೀಶರಾದರು. ವರ್ತಕರ ಪೆಟ್ಟಿಗೆಗಳನ್ನು ಬಡವರ ನೆತ್ತರ ಫಲಗಳಾದ ನೋಟುಗಳು ತುಂಬಿದುವು. ಭಾರತದ ಜೀವಾಳವಾದ ರೈತ-ಕೂಲಿಕಾರರ ಹೊಟ್ಟೆ-ಮನೆಗಳು ಬರಿಯವಾದುವು. ಮಧ್ಯಮ ವರ್ಗತತಿಯ 'ಸುಖವಸ್ತುಗಳಾಗಿದ್ದವರು ಬರಿಗೈಯ ಬಳಲಿಕೆಯಿಂದ ಕುತ್ತು ಸುರು ಬಿಡತೊಡಗಿದರು.

ಇಷ್ಟಾದರೂ ನಿಯಂತ್ರಣ ಕಾಯಿದೆ ತನ್ನ ಆಡಳಿತವನ್ನು ಇಂದಿನವರೆಗೂ ಅಖಂಡವಾಗಿ ನಡೆಯಿಸಿ ಇದೆ. ಸರಕಾರ ದಯೆದೋಚಿ ಕೊಟ್ಟ ಕಸಗೂಳಿನ ಪದಾರ್ಥಗಳನ್ನೂ ನಮ್ಮ ಪೂರಯಿಕೆಯ ವ್ಯಾಪಾರಗಾರರು ಬಡವರಿಗೆ ಸರಿಯಾಗಿ ಹಂಚಿಕೊಡಲೊಲ್ಲರಾಗಿದ್ದಾರೆ. ಕೊಟ್ಟೆವೆಂದು ಲೆಕ್ಕಕ್ಕೆ ತೋರಿಸಿ ಕೊಡದೆ ಉಳಿಸಿಕೊಂಡು ಕಳ್ಳತನ ಪೇಟೆಯಲ್ಲಿ ಮಾರಾಟ ಮಾಡಿ ಹಣಹಿರಿಯುವ ಪೂರಯಿಕೆಗಾರರೇ ೧೦೦ ಕ್ಕೆ ೧೦೦ ಜನ. ದೇಶದಲ್ಲಿ ಸಾಕಷ್ಟು ಪದಾರ್ಥಗಳಿಲ್ಲವೆಂಬ ನೆಪದಿಂದ ಸರಕಾರ ಕೊಡುವ ಹಸುಗೆ ಮೊದಲೇ ಅರೆಹೊಟ್ಟೆಗೂ ಸಾಲುತಿರುವುದಿಲ್ಲ. ಅದರಲ್ಲಿ ಈ ಪೂರಯಿಕೆಗಾರರ ಲಾಭದಾಸೆ ಜನರ ಅರೆಗಂಜಿಗೂ ತತ್ವಾರ ತರುತ್ತಲಿದೆ. ಸರಕಾರ, ಸಮಾಜದ ಮುಂದಾಳುಗಳಾದ ಹಣಗಾರರು—ಇಬ್ಬರೂ ಹೀಗೆ ದೇಶದ ಜನ ಜೀವನವನ್ನು ತುಳಿಯತೊಡಗಿದರೆ, ಸುಖ-ದುಃಖದ ಅರಿವಿದ್ದ ಜನ ಅದೆಷ್ಟು ದಿನ ತಡೆದುಕೊಂಡೀತು? ಸರಕಾರ—ಸಿರಿವಂತಿಕೆಗಳ ಎದುರು ನಿಂತು ಅವುಗಳ ನಾಶಕ್ಕಾಗಿ ಕ್ರಾಂತಿಯನ್ನೆಬ್ಬಿಸದೆ ಬಿಟ್ಟೀತೆ ಇಂತಹ ಕ್ರಾಂತಿಯಿಂದ ಭಾರತೀಯ ಜನಸಾಮಾನ್ಯರನ್ನು ಇಡುವರೆಗೆ ಕಡೆದು ನಿಲ್ಲಿಸಿದುದೆಂದರೆ, ಅವರ ಮೈಯುಂಡು ಹೋಗಿದ್ದ ಪರಂಪರಾಗತ ಭಾರತೀಯ ಸಂಸ್ಕೃತಿ ವಿಶೇಷ; ನಂಬಿ ನಡೆದಿದ್ದ ದೈವವಾದ ಆದರೆ ಹಸಿವು-ಹಾರಯಿಕೆಗಳು ಈ ಸಂಸ್ಕೃತಿ ವಿಶೇಷ-ದೈವವಾಗಳನ್ನೂ ಮೀರಿ ನಡೆವ ಕಾಲವನ್ನು ತರದಿರಲಾರವು. ಆ ಅಕಾಲ ಕಾಲ ಬಾರದಂತೆ ಸರಕಾರವೂ ಸಿರಿವಂತರೂ ಬುದ್ಧಿ ಕಲಿಯಬೇಕಾದುದು ಅತ್ಯಂತ ಅವಶ್ಯವಾಗಿದೆ.

ಈಗ ಪ್ರಾಂತಗಳಲ್ಲಿ—ಕಾಂಗ್ರೆಸಿನದೇ ಇರಲಿ, ಲೀಗಿನದೆ ಇರಲಿ—ಜನತೆಯ ಸರಕಾರಗಳು ಪ್ರಾರಂಭವಾಗಿವೆ. ಜನತೆಯ ಹಿತವಾಡುವುದೆಂಬ ಜನರ ವಿಶ್ವಾಸವೇ ಅವರನ್ನು ಈ ಅಧಿಕಾರಕ್ಕೆ ತಂದಿವೆ.

( ೬೨ ನೆಯ ಪುಟ ನೋಡಿರಿ )




## ಖೇರರಿಗೆ ಬೀರಣ್ಣನ ಸವಾಲು

ಮುಂಬಯಿಯ ಮುಖ್ಯಮಂತ್ರಿ ಖೇರ ಸಾಹೇಬರು ಬಾಗಿಲುಕೋಟೆಗೆ ಬಂದಾಗ, ಅಲ್ಲಿಯ ಜನತೆಯ ಪ್ರತಿನಿಧಿಗಳು ಜಿಲ್ಲೆಗೆ ಹೊರೆಯಾಗಿದ್ದ ಕಲೆಕ್ಟರರನ್ನು ಅಲ್ಲಿಂದ ಎತ್ತಬೇಕೆಂದು ಕೇಳಿಕೊಂಡರು. ಆಗ ಖೇರರು ಉಪಮೆ ಸಹಿತವಾಗಿ ಹೇಳಿದ ಮಾತುಗಳನ್ನು ಕೇಳಿ ಬೀರಣ್ಣ ಆಶ್ಚರ್ಯಪಟ್ಟ. ಪರಿಸ್ಥಿತಿಯನ್ನು ಮರೆತು ಆಡಿದ ಹಿರಿಯ ತತ್ತ್ವದ ಮಾತುಗಳಿಗಾಗಿ ಬೆರಗಾಗಿ ನಿಂತ:

"ಕಲೆಕ್ಟರರನ್ನು ವರ್ಗ ಮಾಡಿರಿ ಎಂದು ಕೇಳಿದ ಕ್ಷಣಕ್ಕೆ ನಾವು ಕರ್ತವ್ಯವಾಯಿತೆಂತಲ್ಲ. ನಿಮ್ಮ ಮನೆಯಲ್ಲಿಯ ಹೊಲಸನ್ನು ಮತ್ತೊಬ್ಬರ ಹದ್ದಿಬುಲ್ಲಿ ಬಿಸುಟಿದರೆ ನಿಮ್ಮ ಜೊಡೆನಾರಿಕೆ ಮುಗಿಯಿತೆಂದಲ್ಲ...."

ಎಂದು ಮೊದಲಾಗಿ ಖೇರ ಸಾಹೇಬರಾಡಿದ ನುಡಿಗಳನ್ನು ಕೇಳಿ ಮಂಕಾಜನ ಜಬ್ಬಾಳಿ ಬಾರಿಸಿದ್ದೇ ಬಾರಿಸಿದ್ದು, ಇದನ್ನು ಕೇಳಿದ ಬೀರಣ್ಣ ಖೇರ ಸಾಹೇಬರಿಗೆ ಮರಳಿ ಸವಾಲು ಹಾಕುತ್ತಾನೆ:

"ಏನ್ ಮಂತ್ರಿಶ್ಯನೋರೆ, ಕಸುಪ ಹೊಲಕಿ ಕಲೆಕ್ಟರರಿಗೆ ಕೊಟ್ಟರ ಹ್ಯಾಂಗ ಸರಿ ಕಂಡೀತು? ಗಾಳಿಂದ್ಲ ತಾನಾಗೇ ಬಂದು ಬಿದ್ದಿದ್ದ ಹೊಲಸು-ಕಸಾ ಇದ್ದರ, ಮುಂದೀ ಹದ್ದಿನ್ಯಾಗ ಚೆಲ್ಲೂದು ಅನ್ಯಾಯಾ ಅಂತ, ಗುಡಿಸಿ ಹೊಳ್ಯಾಗೋ ಸಮುದರಬಾಗೋ ಚೆಲ್ಲಿ ಬಡಲಿಕ್ಕಾದೀತು. ಆದರ ಮ್ಯಾಲಿನವರು ಕನಕಾ ಅಂತ ಕಸಾ ತಂದು ಮುನ್ಯಾಗ ಹಾಕಿದರ ಏನ ಮಾಡಬೇಕು? ತಂದು ಹಾಕಿದನರಿಗೇ 'ನಿಮ್ಮ 'ಕನಕಾ' ನೀವು ತೊಗೊಂಡು ಹೋಗಿ, ಇದರ ಬೆಲೀ ಆಗುನಲ್ಲ ಮಾರಾಟಕ್ಕ ಹಚ್ಚರೆಪ್ಪಾ....' ಅಂತ ಹೇಳಬೇಕಾಗತ್ತದ. ನಮಗೇನೂ ಅದನ್ನ ಮುಂದೀ-ಹದ್ದಿನ್ಯಾಗ ಒಯ್ದು ಚೆಲ್ಲಬೇಕೂ ಅಂತ ಮನಸಿಲ್ಲಾ. ಆದರ ಅದು ಕಸಾ ಅಂತ ಹೇಳೂದು ಮಾತ್ರ ನಮ್ಮ ಕೆಲಸ. ನಮಗೂ ಕಸಾ ಅಂತ ಖಾತ್ರೀ ಆದರ, ಗುಡಿಸಿ ಮುಂಬಯಿ ಸಮುದರ-ಪಾಗ ಚೆಲ್ಲಿ ಬಿಡಿರಿ, ಯಾರ ಬ್ಯಾಡ ಅಂತಾರ? ಕಲೆಕ್ಟರ್ ಅಂದರ ಬರೀ ಕೊಳೀ-ಕಸಾ ಅಲ್ಲ. ಕಾಯಿದೇದ ಮುಳ್ಳಿನ ಕೊಂಪಿ. ಜನಾ ಹಿಡದರ ಕೈಯೆಲ್ಲಾ ಮುಳ್ಳು ಮುರೀತಾವ. ಅದನ್ನ ತಗದು ಒಗೀಲಾಕ ತಂದಚ್ಚಿದ್ದಿ ವಜ್ರಗೈಯವರ್ನ ಬೇಕಾಗತಾದ!"

ಬೀರಣ್ಣನ ಸವಾಲು ಖೇರ ಮಂತ್ರಿಗಳ ಕಿವಿಗೆ ಬಿದ್ದಿದ್ದರೆ, ತಮ್ಮ ಸ್ವಭಾವದಂತೆ ದಾಕ್ಷಿಣ್ಯದ ನಗೆ ನಕ್ಕು ಉಗುಳು ನುಂಗುತ್ತಿದ್ದರು.

* * * *

## ಮುಂದಾಳುಗಳ ಮುರಿಯು ಮಾತುಗಳು.

ನಡುಗಾಲ ಸರಕಾರದ ಗೊಂದಲದ ಕಾಲದಲ್ಲಿ ಬೀರಣ್ಣನ ಹೃದಯದ ಕಿವಿಗೆ ಬೇರೆ ಬೇರೆ ಮುಂದಾಳುಗಳ ಆತ್ಮದ ಮಾತುಗಳು ಹೀಗೆ ಹೀಗೆ ಕೇಳಿಸಿದುವು:

**ಪೆಥಿಕ್ ಲಾರೆನ್ಸ್:**—ನ ನೇಕೆ ಹೆಚ್ಚು ಯೋಜನೆ ಮಾಡಲಿ? ವಯಸ್ಸಾಗಿದೆ ನನಗ. ಬುದ್ಧಿಯೂ ಚೆನ್ನಾಗಿ ಹರಿಯುವುದಿಲ್ಲ. ಕ್ರಿಪ್ಸ್, ವೇವೆಲ್ಲರಿದ್ದಾರೆ. ಎಲ್ಲ ಹೊಣೆ ಅವರಿಗೊಪ್ಪಿಸಿ ಸ್ವಸ್ಥ ಮಲಗಿಕೊಂಡರಾಯಿತು.

**ಸ್ಟ್ಯಾಫೋರ್ಡ್ ಕ್ರಿಪ್ಸ್:**—ನನ್ನ ಧೂರ್ತತನದಿಂದ ರಸಿಯನಂಥ ರಸಿಯವನ್ನೇ ಸಂಗ್ರಾಮಕ್ಕೆಳೆದು ಬ್ರಿಟಿಷ್ ಸಾಮ್ರಾಜ್ಯ ಬದುಕಿಸಿದ್ದೇನೆ. ಪಾಪ, ಬಡಭಾರತೀಯರನ್ನು ಮಂಕುಗೊಳಿಸುವುದೊಂದು ದೊಡ್ಡ ಮಾತೆ? ಹಿಂದು-ಸ್ಥಾನದಂಥ ಚಿಂತಾಮಣಿಯನ್ನು ಕಳೆದುಕೊಂಡ ಕೆಟ್ಟ ಹೆಸರನ್ನು ಬ್ರಿಟಿಷ್ ಇತಿಹಾಸದಲ್ಲಿ ನಾನು ಬರೆಯಿಸುವೆನೇ—ಎಂದಾದರೂ?

**ಲಾರ್ಡ್ ವೇವೆಲ್:**—ಸದ್ಯ ಭಾರತದಲ್ಲಿ ಶಾಂತಿ-ಸುವ್ಯವಸ್ಥೆಗಳನ್ನು ಕಾಯುವ ಹೊಣೆ ನನ್ನ ಮೇಲಿದೆ. ಬರಿ ಮಾತಿನ ಮಾಲೆಗಳನ್ನು ಕಟ್ಟಿ, ಈ ಅಧಿಕಾರದುರಾತೆಯ ಚೆಳವಳಿಯೋರರ ಮೂಗಿಗೆ ತುಪ್ಪ ಹಚ್ಚಿ ಕಾಲ್ಕೆರಿಸಬೇಕಾದುದೇ ನನ್ನ ಕೆಲಸ.

**ಬ್ಯಾರಿಸ್ಟರ್ ಜಿನ್ನಾ:**—ಬ್ರಿಟಿಷರನ್ನು ಭಾರತದಲ್ಲಿ ಎಂತೆಂತಹ ಗಂಡಾಂತರಗಳಿಂದ ಪಾರುಮಾಡಿದ್ದೇನೆ. ಈ ಗಂಡಾಂತರದಿಂದಲೂ ಪಾರುಮಾಡಬೇಕಾದುದು ನನ್ನ ಕೆಲಸ. ಪಾಕಿಸ್ತಾನ ಮುಗಿಲುಮುಟ್ಟಿಗೆಯೆಂಬ ಮಾತು ನನಗೆ ಗೊತ್ತಿಲ್ಲವೆ? ಹ. ಹ. ಹ!

**ಅಬುಲ್ ಕಲಮ್ ಆಝಾದ್:**—ಕಾಂಗ್ರೆಸಿನವರು ಈ ಯೋಜನೆಗೆ ಒಪ್ಪಿ ಅಧಿಕಾರ ಸ್ವೀಕರಿಸಿದರೆ ನಮಗೇನು ಗತಿ? ಅಡಿನ ಕೊರಳ ಮೊಲೆಗಳಾಗುವೆವಲ್ಲ ನಾವು!

**ರಾಜಗೋಪಾಲಾಚಾರ್:**—ಒಳ್ಳೆಯ ಸಮಯ ಬಂದಿದೆ. ಬ್ರಿಟಿಷರ ಯಾವ ಯೋಜನೆಯನ್ನೂ ಒಪ್ಪಿ ಅಧಿಕಾರವನ್ನು ಸ್ವೀಕರಿಸಬೇಕು. ಮಧ್ಯಂತರ ಸರಕಾರದ ಮಂತ್ರಿಯೂ ಒಮ್ಮೆ ಆಗಬೇಕು ನಾನು.

**ಜವಾಹರಲಾಲ್:**—ನನಗೆ ಸ್ವಾತಂತ್ರ್ಯ ಕೊಡುವವರು ಯಾರು? ಪಡೆದು ಕೊಡುವ ಸ್ವಾತಂತ್ರ್ಯ ನಮಗೆ ಬೇಕಿಲ್ಲ. ನಮ್ಮ ಬಲದಲ್ಲಿಯೇ ನಮ್ಮ ಸ್ವಾತಂತ್ರ್ಯವಿದೆ ಚಾಣಕ್ಯತನದ ಮಾತು-ಕತೆಗಳಲ್ಲಿ ನನಗೆ ವಿಶ್ವಾಸವೇ ಇಲ್ಲ. ನಾನು ಕಾಶ್ಮೀರಕ್ಕೆ ಹೋಗಬೇಕು.

**ಮಹಾತ್ಮಾ ಗಾಂಧಿ:**—ಯಾವುದಕ್ಕೂ ದುಡುಕುವುದು ಬೇಡ. ನಡೆದಿರುವುದು ನಾಟಕ ಎಂಬ ಅರಿವು ನನಗೆ ಪೂರ್ಣವಾಗಿ ಇದೆ. ಆದರೂ ನಾನು ಈ ನಾಟಕದಲ್ಲಿ ಪೂರ್ಣವಾಗಿ ಪಾತ್ರವಹಿಸಿ, ಭಾರತೀಯರ ದೃಷ್ಟಿಯಿಂದ ಯಶಸ್ವಿಯಾಗಿ ಈ ನಾಟಕ ಕೊನೆಗೊಳಿಸಬೇಕಾಗಿದೆ.

* * *

## ಬಡವರಿಗೆ ಬೀರಣ್ಣನ ಎಚ್ಚರ

ಬೀರಣ್ಣನಿಗೆ ಜಿನ್ನ ತಂತಿಯ ಸುದ್ದಿಯೊಂದು ಬಂದಿದೆ: 'ಮಂತ್ರಿಗಳು ಬಾಗಿಲುಕೋಟೆ-ವಿಜಾಪುರಗಳಿಗೆ ಬಂದಾಗ, ಬಡವರ ನಿಜವಾದ ಪ್ರತಿನಿಧಿಗಳಿಗೆ ಮಂತ್ರಿಗಳನ್ನು ಕಾಣಲಿಕ್ಕೆ ಅವಕಾಶವನ್ನೇ ಕಲ್ಪಿಸಿಕೊಡಲಿಲ್ಲವಂತೆ. ಅಲ್ಲಿಯ ಪುರಾಣ ಪುರುಷ-ಪುರೋಹಿತರ ವರ್ಗ. ಮಂತ್ರಿಗಳು ಕಾಲೇಜಿನೆಂತಲೇ ಬಂದಿದ್ದರು; ಹೈಸ್ಕೂಲಿನ ಕಟ್ಟಡದ ಆವಾವರಣ ಸಮಾರಂಭ ನಡಿಸಿದರು; ನಗರ ಸಭೆಯ ಮಾನಪತ್ರ ಪಡೆದರು; ಹಲವರೊಂದಿಗೆ ಮಾತನಾಡಿದರು; ನಾಟಕ ನೋಡಿದರು; ಊಟ-ಉಪಹಾರ ಮಾಡಿದರು. ಆದರೆ ವಿಜಾಪುರ ಜಿಲ್ಲೆಯ ಮುಖ್ಯ ದುಃಖಿಗಳಾದ ಬರಗಾಲದ ಬಡವರ ಮೊರೆಯ ಮಂತ್ರಿ

(೬೨ ನೆಯ ಪುಟ ನೋಡಿರಿ)

# ಉರವಕೊಂಡದ ಶ್ರೀಕರಿಬಸವರಾಜೇಂದ್ರರು

( ೧೯೨ ಪುಟದಿಂದ )

★ ಶ್ರೀಮತಿ ತೊಗರೆ ಸರ್ವಮಂಗಳಾಂಬಾ, ಬಳ್ಳಾರಿ

ಆದರು ನಾಯಕ್ಕರು ಎರಡನೆಯಲ್ಲೊಂದು ದಿನ. ದಿನದ ಎಂದು ಸಮಯ ನಿಯಮಿಸಿಕೊಂಡು ಬಂದಿದ್ದರಿಂದ ಅಂದು ಸಮಯಕ್ಕೆ ಸರಿಯಾಗಿ ಸಭೆಯು ಸೇರಿತು. ಆ ಕಾಲದಲ್ಲಿ ಮೂಡಲಗಿರಿ ಶ್ರೀರಾಜೇಂದ್ರ ಸ್ವಾಮಿಗಳು ಎಷ್ಟೊಳ್ಳಾನ ನೆಲೆಯಿತ್ತು. ಅವರ ಭಾಷಣವ ವೇಷ ಸಾಮಿಸಿದ ಬೆಳಗಾವ್ಯನ್ನು ಕುರಿತು ಎನ್ನುವೆದು ಪರಿಣಮವಾಯಿಲು



ಒಂದಾದ ನಿಲಯ. ಆ ನಿಲಯದೋ ವಜನಶಾಸ್ತ್ರದ ಸಾರವನ್ನೆಲ್ಲ ಒಂದು ಒಡೆದು ಮೂಡಿದ ಆದರ್ಶನೇ ಆಗಿದೆ. ಆ ನಿಲಯದ ನೆಲಗಟ್ಟು "ದಯವೇ ಧರ್ಮದ ಮೂಲ"....ಇವೆಂದಿರ ಕುಲವೇನೋ? ಸಕಲ ಜೀವಾತ್ಮರಿಂಗೆ ಲೇಸನೇ ಬಯಸುವ...." ಎಂದ ಉನ್ನತ ಅಮೃತವಾಣಿಯು ಅನುಕರಣದೋ ಆಗಿದೆ. ಅಲ್ಲಿ ಜಾತಿಸೀಮೆಯ ಭೂತವಿಲ್ಲ. ಭೂತದಯೆಯ ಮುಖ್ಯ ಸಾಮ್ರಾಜ್ಯವೆ ಅದು. ಸಂಕುಚಿತ ದೃಷ್ಟಿಯಂತೂ ಅಲ್ಲಿ ಕುಮಾರ. ವಿಶಾಲತೆಯ ಸನಾತನದ ಚಿದಂಬರವೆ ಅದು. ಇಂತಹ ಅಮೂಲ್ಯವಾದ ಪುಸಾದ ನಿಲಯಕ್ಕೆ ನಾಂದಿಯಾತರು ಶ್ರೀಕರಿರಾಜೇಂದ್ರ ಸ್ವಾಮಿಗಳು. ಇಂತಹ ಮೂರ್ತಿ ಕನ್ನಡಿಗರಿಗೆ ಕುಲದೈವವಲ್ಲದೆ? ಇಂತಹ "ಕನ್ನಡ ಕುಲಗುರು" ಎಂದು ಕರೆಯುವ ಭಾಗ್ಯವನ್ನು ಪಡೆದವರು ಧನ್ಯರು.

ಈ ಕೆಚ್ಚೆದೆಯ ಕನ್ನಡದ ಮೂರ್ತಿಯ ಬಂಡಿಕೊಂಡಿರುವ ಮಹಾನುಭಾವನ ಬಗ್ಗೆ ಕೆಲವು ವಿಷಯಗಳನ್ನು ಬರೆಯಲು ಪ್ರಯತ್ನಿಸಿದ್ದೇನೆ. ಅವುಗಳಲ್ಲಿ ಅವರು ಅನುಸರಿಸಿದ ಸರಳ ಜೀವನ, ಅವರಲ್ಲಿದ್ದ ಸಾಹಿತ್ಯಾಭಿಮಾನ, ಅವರ ಸಾಹಿತ್ಯ ಸೇವೆ, ಅವರ ಕನ್ನಡ ಪ್ರೇಮ, ಅವರ ಸಂಸ್ಕೃತಿ ಪ್ರೇಮ, ಅವರ ಸಮಾಜ ಸೇವೆ, ಅವರ ಸಮಾಜ ಸುಧಾರಣೆ, ಅವರ ಸಮಾಜ ಸಂಘಟನೆ, ಅವರ ಸಮಾಜ ಸಂಸ್ಕಾರ, ಅವರ ಸಮಾಜ ಸಂಸ್ಕೃತಿ, ಅವರ ಸಮಾಜ ಸಂಸ್ಕೃತಿ ಪ್ರೇಮ, ಅವರ ಸಮಾಜ ಸಂಸ್ಕೃತಿ ಸೇವೆ, ಅವರ ಸಮಾಜ ಸಂಸ್ಕೃತಿ ಸಂಘಟನೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಪ್ರೇಮ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸೇವೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಘಟನೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಪ್ರೇಮ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸೇವೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಘಟನೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಪ್ರೇಮ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸೇವೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಘಟನೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಪ್ರೇಮ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸೇವೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಘಟನೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಪ್ರೇಮ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸೇವೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಘಟನೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಪ್ರೇಮ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸೇವೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಸ್ಕಾರ ಸಂಘಟನೆ, ಅವರ ಸಮಾಜ ಸಂಸ್ಕೃತಿ ಸಂಸ್ಕಾರ

# ಬಾಳ್ನೋಟಗಳು

( ಜೀವನ ಚಿತ್ರ )

ರಾ. ಶ್ರೀ. ಕಸ್ತೂರಿ, ಕೋಟೆ, ಮುಂಬಯಿ

★

**ಬಿಸಿಲು ಚಳಿ ಮಳೆಗಳ ಹೊಡೆತವನ್ನು ತಡೆದು ಕೊಂಡು ನಿಂತಾಗಲೆ ಗಿಡ-ಬಳ್ಳಿಗಳು ಮುದುರಿ ಫಲಗಳನ್ನೂ ಸುಂದರ ಸುಮಗಳನ್ನೂ ಪಡೆದು ಸುಖಿಸುವುವು. ಈ ಪ್ರಾಕೃತಿಕ ನಿತ್ಯ ಮಾನಸಿಕ ಜೀವನಕ್ಕೂ ಅನ್ವಯಿಸುವುದು.**

★

ಹೋಟೆಲಿನ ಕೂಳು ತಿಂದು ಬೇಸರು ಬಂದಿತ್ತು. ಹಸುಗೆಯು( ರೇಷನ್ ) ಬ ದಾಳು ಅಕ್ಕಿ. ಒಬ್ಬೆಂದರೂ ಊಟ್ಟೋಣ ಎಂಬ ಯೋಜನೆಯೇ ಬರುತ್ತಿದ್ದಿಲ್ಲ. ಒಲೆಯ ಅಕ್ಕಿ ಕಳ್ಳಸಂತೆಯಲ್ಲಿ ಧಾರಾಳವಾಗಿ ಸಿಗುತ್ತಿದ್ದರೂ, ಇಂದಕ್ಕೆ ನಾಲ್ಕಾಗಿ ಕೊಟ್ಟು ಕೊಳ್ಳುವ ಸೌಲಭ್ಯವೂ ಇರಲಿಲ್ಲ. ಮೇಲಾಗಿ 'ಕಳ್ಳಸಂತೆಯಲ್ಲಿಯ ನಾನಾನು ಸರಂಜಾಮುಗಳನ್ನು ಕೊಳ್ಳುವದು ಕಳ್ಳಸಂತೆಗಳಿಗೆ ಉತ್ತೇಜನವನ್ನಿತ್ತಂತಾಗುವುದಲ್ಲಾ' ಎಂದು ಮನಸ್ಸು ಹಿಂಜರಿಯುತ್ತಿತ್ತು. ಯಾವುದಾದರೂ ರೀತಿಯಿಂದ ಕೊಂಡರೂ, ಬೇಯಿಸಿ ತಿನ್ನುವ ಸೌಲಭ್ಯವೂ ಇಲ್ಲ. ಕಾರಣ ಇರಲಿಕ್ಕು ಸ್ಥಳ ಸಿಗುವುದೆಂದರೆ ಮುಂಬಯಿಯಲ್ಲಿ ಕಷ್ಟಸಾಧ್ಯವೇ ಸರಿ! 'ಇಲ್ಲ!' ಎಂದೆನ್ನುವ ಎದೆಗಾರಿಕೆ ನನಗಿಲ್ಲ. ಆದರೆ ಇರಬಹುದಾದ ಕೋಣೆ, ಮನೆಗಳಿಗೆ ನೂರಾರು ರೂಪಾಯಿ 'ಪಾಕಟು' ಕೊಡುವ ಯೋಗ್ಯತೆ ನನ್ನಂತಹ ಸಾಮಾನ್ಯ ವ್ಯಕ್ತಿಗಳಿಲ್ಲಿ? ಕೆಲವೊಂದು ದಿನ ಗೆಳೆಯರ ಮನೆಯ ಪೊಗಸಾಲೆ (ವರಾಂಡಾ)ಯಲ್ಲಿ, ಕೆಲವೊಂದು ದಿನ ಕೆಲವು ಗೆಳೆಯರ ಆಶ್ರಯದಲ್ಲಿ....ಹೀಗೇ ಸುಮಾರು ಎರಡು ವರ್ಷಗಳನ್ನು ಕಾಲ ಮುಂಬಯಿಯಲ್ಲಿ ಕಳೆದೆ. ಆಮೇಲೆ ಮತ್ತೊಬ್ಬ ಗೆಳೆಯನ ಆದರಭಾವ ಅಲ್ಲಿ ಆಶ್ರಯವಿತ್ತಿತು. ಆದರದು ಒಹುಕಾಲ ಸಾಗಲಿಲ್ಲ. ಆವನಿಗೆ ಮದುವೆಯ ಸೂಚನೆ ಬಂದಿತು. ಮದುವೆಯೂ ಆಯಿತೆನ್ನಿ. ಸರಿ, ಇನ್ನು ಅಲ್ಲಿ ಇರಲು ಕಾರ್ಯವೆಂದು ಅಲ್ಲಿಂದ 'ಸೊಲಗ ಹೋಗಿ' ಎಂಬ ಜಜ್ಜೆ ಪಡೆದೆ. ಮುಂದಿನ ಗತಿ 'ಅನ್ನ'! ಅಫೀಸಿನಲ್ಲಿ ಊಟಕೊಳ್ಳುವ ಸೌಕರ್ಯ ಸಾಮಾನ್ಯವಾಗಿ ಕಾರಕೂನರಿಗೆ, ಬೇರೆಯವರಿಗೆ ಮಾತ್ರ. ಕಾರಕೂನ ಮುಂತಾದವಂಗೆ ಅಲ್ಲೇ ಊಟಕೊಳ್ಳಗೊಡರು ಮಾತ್ರ. ವಲ್ಲ, ಕಾರಕೂನನಾದವನಿಗೆ ಆಫೀಸಿನಲ್ಲೇ ಊಟಕೊಳ್ಳುವುದೆಂದರೆ ತುಸು ಅಂಧಶ್ರದ್ಧೆ. ಆದರೆ ಉಪಾಯವಿಲ್ಲಾ. ಬಳಕು. ಕೆಡಕುಗಳ ಗೊಡವೆ ವ್ಯಕ್ತಿಯಾದವನಿಗೆ ಅವಶ್ಯವೇಕೆ?— ಎಂದು ಆಫೀಸಿನಲ್ಲೇ ಬೀಡಾರವಾಯಿತು. ತಪ್ಪು ತಿಳಿಯಬೇಡಿ. 'ಬೀಡಾರ' ಎಂದರೆ ನಾನೊಬ್ಬ ಮಾತ್ರ. ಮತ್ತೆ ಒಬ್ಬಬ್ಬರು ನೌಕರರು; ಕಾವಲುಗಾರರು....ಹೂಂ! ಅನಂತರಂಗಕ್ಕೆ ಸೇರಿದವರು ಆದೊಂದು ತರದ ಸಂತೋಷವನ್ನಿತ್ತಿದ್ದರೂ, ಅವರು ಒಬ್ಬೆಂದರೂ 'ಫ್ಯೂನ್ಸ್', ಮತ್ತೆ ನಾವು 'ಬೇಲಿಸಾಹೇಬರು' (ಸುಪೀರಿಯರ್ಸ್) ಎಂಬ ಭಾವನೆ ಸುಲಭವಾಗಿ ಹೋಗುವುದಿಲ್ಲ. ಆದರೆ ನನ್ನ ಸ್ಥಿತಿ ತಾಗಿರಲಿಲ್ಲ. ಸೇದಿಯಿರಲಿ, ಆಫೀಸರಿರಲಿ; ಯಾರಾದರೂ ಎಲ್ಲರಂತೆ ಮಾನವ ಜೀವಿಗಳಲ್ಲೆ! ಮೂರನೆಯ ಒಬ್ಬ ವ್ಯಕ್ತಿಗೆ ಈ ಆಫೀಸರ್ ಅಲ್ಲವೆ ಬೇರೆ ಎಂಬಿಬ್ಬರೂ ಸಮಾನರಲ್ಲೆ!— ಎಂಬ ಧೈರ್ಯದಿಂದ ಅವರೊಂದಿಗೆ ಸೇರಿ, ಆಫೀಸಿನಲ್ಲೇ ವಸತಿ ಮಾಡಿದೆ. ಪ್ರಸಂಗವನ್ನೆರಿತಿದ್ದ ಮೇಲಧಿಕಾರಿಗಳಿಂದ ಪರವಾನಿಗೆ ಪಡೆಯುವುದೊಂದು ಸಮಸ್ಯೆಯಾಗಲಿಲ್ಲ. ಕಾರಣ ಅವರಿಗೂ ಕೆಲವೊಂದು ಈ ಸಮಸ್ಯೆ ಬಾಧಿಸಿರಲಿಲ್ಲ. ಮತ್ತೊಂದು ಮಾತೆಂದರೆ ದೈನಿಕ ಕೆಲಸವು ಪೂರ್ಣಯಾಗದೆ ಬಾಕಿಯಾಗುವ್ದ ನೋಗುತ್ತಪ್ಪುದರಿಂದ, ಅದಿಷ್ಟವಾದ ಗಳಿಗೆಯಲ್ಲಿ ಇಷ್ಟವೆ ರಜಾವಿನಗಳನ್ನು ಆಫೀಸಿಗೆ ಒದಗಿಸಿಕೊಡುವ ಪ್ರಸಂಗಗಳು ಒದಗುತಿದ್ದುವು. ಇಂಥ ಸಮಸ್ಯೆ ಹೊಳೆಯಿಸುವವನೊಬ್ಬನಿರುವಾಗ ಆಯಿತು, ಬಾಕಿಯಾಗುತ್ತ ಹೋಗುವ ಕೆಲಸವೆ— ಮತ್ತದನ್ನು ಪೂರ್ತಿಮಾಡಲು ರಜಾದಿನಗಳಲ್ಲಿ ಒದಗಿಸಿಕೊಡುವ ಪ್ರಸಂಗ

# ಉರವಕೊಂಡದ ಶ್ರೀಕರಿಬಸವರಾಜೇಂದ್ರರು

( ಅಲ್ಪ ಪರಿಚಯ ) ★ ಶ್ರೀಮತಿ ತೊಗರೆ ಸರ್ವಮಂಗಳಾಂಬಾ, ಬಳ್ಳಾರಿ

ಅಂದು ನಾಡಹಬ್ಬದ ಸುದಿನಗಳಲ್ಲೊಂದು ದಿನ. ದಿನದ ಕಾರ್ಯಕ್ರಮದ ಸಮಯದಲ್ಲಿ ಕಾವಿಯ ಬಣ್ಣದಲ್ಲದ್ದಿ ತೆಗೆದಂತಹ ಮೂರ್ತಿ ಒಂದು ಕಂಗೊಳಿಸಿತು ವೇದಿಕೆಯ ಮೇಲೆ. ಆ ಕಾವಿಯ ಮೂರ್ತಿಗಳು ಕೊಡಗಿನ ವೀರರಾಜೇಂದ್ರ ಸ್ವಾಮಿಗಳು ಎನ್ನುವುದು ತಿಳಿಯಿತು. ಅವರ ಭಾಷಣವು ವಚನ ಸಾಹಿತ್ಯದ ಸೊಗಸನ್ನು ಕುರಿತು ಎನ್ನುವುದು ಪರಿಚಯವಾಯಿತು. ಸ್ವಾಮಿಗಳು ತಮ್ಮ ಅಮೋಘವಾಣಿಯಿಂದ ವಚನಸಾಹಿತ್ಯದ ಸ್ವಾರಸ್ಯವನ್ನು ಅಮೃತದ ಅಬ್ಬಿಯಂತೆ ಹರಿಸಿಬಿಟ್ಟರು. ಶ್ರೋತೃವೃಂದವು "ಅಬ್ಬಾ! ವಚನಸಾಹಿತ್ಯವೆಷ್ಟು ಇವರ ಜಿಹ್ವೆಗೆ ಜಿಗಳೆಯಂತಾಗಿದೆಯಲ್ಲಾ!" ಎಂಬ ಆಶ್ಚರ್ಯವನ್ನೆ ಪಸರಿಸಿತು. ಶ್ರೀಮಾನ್ ಅ. ನ. ಕೃಷ್ಣರಾಯರು ತುಂಬುಕಂಠದಿಂದ "ತಂನೆಯ ಶತಮಾನಕ್ಕೆ ಸಲ್ಲುವ ಸವಿಮೂರ್ತಿ" ಎಂದರು. ಅಂದಿನ ರಸನಿಮಿಷದ ದರುಶನವು ಬಳ್ಳಾರಿಯ ಭಕ್ತರಿಗೆ ಅವರಿಂದಗಲದ ಆಪೇರ್ವಾದವನ್ನೇ ಸ್ಥಿರಪಡಿಸಿತು.

ಶ್ರೀವೀರರಾಜೇಂದ್ರ ಸ್ವಾಮಿಗಳು ಸಮಾಜದ ಸಿಸ್ತು, ಸಂಘಟನೆಗಳಿಗಾಗಿ ಪಡುವ ಶ್ರಮವೊ ಹೇಳತೀರದು. ಸಮಾಜದಲ್ಲಿ ಪಂಗಡಗಳೆಂಬ ಸಂಕುಚಿತತನವಿರಕೂಡದು. ವೀರಶೈವರೆಂಬ ವಿಶಾಲತೆಯೊಂದೇ ನಿಲ್ಲಬೇಕೆಂಬ ನಿರ್ಧಾರದಿಂದ ಹೆಣಗುತ್ತಾ, ಆ ವಿಶಾಲತೆಗೆ ಕುರುಹಾಗಿ ಒಳಪಂಗಡಗಳ ವಿವಾಹಗಳನ್ನು ನೆರವೇರಿಸುತ್ತಿರುವುದರಲ್ಲಿ ಶ್ರೀಗಳವರ ಪಟ್ಟು ಉಡುವಿನದಾಗಿದೆ.

ಈ ಸ್ವಾಮಿಗಳ ಜೋಳಿಗೆ ಭಾರವಾದುದಲ್ಲದಿದ್ದರೂ ಬರಿದಲ್ಲ. ಆ ಜೋಳಿಗೆ ಅಗಮ್ಯವಾದ ಅಕ್ಷಯಪಾತ್ರೆ. ಆ ಅಕ್ಷಯ ಪಾತ್ರೆಯ ಪ್ರತ್ಯಕ್ಷ ಪ್ರತಿಬಿಂಬವೆ ನರಗುಂದದಲ್ಲಿರುವ ವಿದ್ಯಾರ್ಥಿಗಳ ಪ್ರಸಾದ ನಿಲಯ. ಆ ನಿಲಯವೋ ವಚನಶಾಸ್ತ್ರದ ಸಾರವನ್ನೆಲ್ಲ ಬೀರಿ ಒಡೆದು ಮೂಡಿದ ಆದರ್ಶವೇ ಆಗಿದೆ. ಆ ನಿಲಯದ ನೆಲಗಟ್ಟೊ "ದಯವೇ ಧರ್ಮದ ಮೂಲವ್ಕ"....ಆವಂದಿರ ಕುಲವೇನೋ? ಸಕಲ ಜೀವಾತ್ಮರಿಂಗೆ ಲೇಸನೇ ಬಯಸುವ...." ಎಂದ ಅಣ್ಣನ ಅಮೃತವಾಣಿಯ ಅನುಕರಣವೇ ಆಗಿದೆ. ಅಲ್ಲಿ ಜಾತಿಭೇದದ ಭೂತವಿಲ್ಲ; ಭೂತದಯೆಯ ಮುಖ್ಯ ಸಾಮ್ರಾಜ್ಯವೇ ಅದು. ಸಂಕುಚಿತ ದೃಷ್ಟಿಯಂತೂ ಅಲ್ಲಿ ಕುರುಡು. ವಿಶಾಲತೆಯ ಘನತಾಂಡವದ ಚಿದಂಬರವೆ ಅದು. ಇಂತಹ ಅಮೂಲ್ಯವಾದ ಪ್ರಸಾದ ನಿಲಯಕ್ಕೆ ಪ್ರಾಣದಾತರು ಶ್ರೀವೀರರಾಜೇಂದ್ರ ಸ್ವಾಮಿಗಳು. ಇಂತಹ ಮೂರ್ತಿ ಕನ್ನಡಿಗರಿಗೆ ಕಲಶವಲ್ಲವೇ? ಎಂತೆ "ಕನ್ನಡ ಕುಲಗುರು" ಎಂಬ ಕವೆಯು ಶ್ರೀಗಳವರಿಗೆ ಎಸೆಯಲು.

ಈ ಕೆಚ್ಚೆದೆಯ ಕನ್ನಡದ ಮೂರ್ತಿ ಉರವಕೊಂಡೆಯ ಮಹಾಸಂಸ್ಥಾನದ ಪೀಠಕ್ಕೆ "ಶ್ರೀ ಕರಿಬಸವರಾಜೇಂದ್ರ ಮಹಾಸ್ವಾಮಿ"ಗಳಾಗಿ ಶೋಭಿಸಿದರು. ಆ ಶುಭಮುಹೂರ್ತದಲ್ಲಿ ಅವರು ಅಪ್ಪಣೆಕೊಡಿಸಿದ ಸಂದೇಶದಲ್ಲಿ "ಭರತಖಂಡದ ಸ್ವಾತಂತ್ರ್ಯ ಒಡಮೂಡುವ ಈ ಸಂಧಿಕಾಲದಲ್ಲಿ ನಾಡು — ನುಡಿ ಸಂಸ್ಕೃತಿಗಳ ಏಳಿಗೆಗಾಗಿ ನಮ್ಮ ಸೇವೆಯನ್ನು ಸಲ್ಲಿಸಲು ಸದಾ ಸಿದ್ಧರಿದ್ದೇವೆ". ಎಂಬ ಮನದ ಹಂಬಲವನ್ನೆ ತೂರಿದ್ದಾರೆ. ಇನ್ನೇನು, ಆ ಭಾಗದ ಕಳೆಗುಂದಿದ ಕನ್ನಡಕ್ಕೆ 'ಫೋಕಸ್' ಅಂತೂ ಒದಗಿತು. ಅಂಧ್ರರ ಆರ್ಭಟದ ಮೇಘದಲ್ಲಿ ಅಡಗಿಹೋದ ಕನ್ನಡಕ್ಕೆ ಬೆಳ್ಳಿಜುಳ್ಕೆ ಮೂಡಿತು. ಶ್ರೀಗಳ ಗಣೇಶಾಯನಮಃ ಕನ್ನಡದ ಏಳ್ಗೆಗಾಗಿ ಎನ್ನುವುದು ಬೇರೆ ಹೇಳುವುದೆ ಬೇಡ. ನಾಡು, ನುಡಿ, ಸಮಾಜ-ಸಂಸ್ಕೃತಿಗಳ ಏಳಿಗೆಯ ಹಂಬಲವುಳ್ಳ ಸ್ಫೂರ್ತಿಯ ಶ್ರೀಗಳು ನಮಗೆ ಒದಗಿದುದು ನಮ್ಮ ಸುದೈವವೆ ಸರಿ!

# ಬಾಳ್ನೋಟಗಳು

( ಜೀವನ ಚಿತ್ರ )

ರಾ. ಶ್ರೀ. ಕಸ್ತೂರಿ, ಕೋಟೆ, ಮುಂಬಯಿ

★

**ಬಿಸಿಲು ಚಳಿ ಮಳೆಗಳ ಹೊಡೆತವನ್ನು ತಡೆದು ಕೊಂಡು ನಿಂತಾಗಲೆ ಗಿಡ-ಬಳ್ಳಿಗಳು ಮಧುರ ಫಲಗಳನ್ನೂ ಸುಂದರ ಸುಮುಗಳನ್ನೂ ಪಡೆದು ಸುಖಿಸುವುವು. ಈ ಪ್ರಾಕೃತಿಕ ಸತ್ಯ ಮಾನವ ಜೀವನಕ್ಕೂ ಅನ್ವಯಿಸುವುದು.**

★

ಹೋಟೆಲಿನ ಕೂಳು ತಿಂದು ಬೇಸರು ಬಂದಿತ್ತು. ಹಸುಗೆಯ( ರೇಶನ್ ) ಆ ಹಾಳು ಅಕ್ಕಿ. ಎಷ್ಟೆಂದರೂ ಉಣ್ಣೋಣ ಎಂಬ ಯೋಜನೆಯೇ ಬರುತ್ತಿದ್ದಿಲ್ಲ. ಒಳ್ಳೆಯ ಅಕ್ಕಿ ಕಳ್ಳಸಂತೆಯಲ್ಲಿ ಧಾರಾಳವಾಗಿ ಸಿಗುತ್ತಿದ್ದರೂ, ಒಂದಕ್ಕೆ ನಾಲ್ಕಾಗಿ ಕೊಟ್ಟು ಕೊಳ್ಳುವ ಸೌಲಭ್ಯವೂ ಇರಲಿಲ್ಲ. ಮೇಲಾಗಿ ಕಳ್ಳಸಂತೆಯಲ್ಲಿಯ ಸಾಮಾನು ಸರಂಜಾಮುಗಳನ್ನು ಕೊಳ್ಳುವುದು ಕಳ್ಳಸಂತೆಗಳಿಗೆ ಉತ್ತೇಜನವನ್ನಿತ್ತಂತಾಗುವುದಲ್ಲಾ' ಎಂದು ಮನಸ್ಸು ಹಿಂಜರಿಯುತ್ತಿತ್ತು. ಯಾವುದಾದರೂ ರೀತಿಯಿಂದ ಕೊಂಡರೂ, ಬೇಯಿಸಿ ತಿನ್ನುವ ಸೌಲಭ್ಯವೂ ಇಲ್ಲ. ಕಾರಣ ಇರಲಿಷ್ಟು ಸ್ಥಳ ಸಿಗುವುದೆಂದರೆ ಮುಂಬಯಿಯಲ್ಲಿ ಕಷ್ಟಸಾಧ್ಯವೇ ಸರಿ! 'ಇಲ್ಲ!'ಎಂದೆನ್ನುವ ಎದೆಗಾರಿಕೆ ನನಗಿಲ್ಲ. ಇದರೆ ಇರಬಹುದಾದ ಕೋಣೆ, ಮನೆಗಳಿಗೆ ನೂರಾರು ರೂಪಾಯಿ ಪಾಕಡಿ' ಕೊಡುವ್ಯೋಗ್ಯತೆ ನನ್ನಂತಹ ಸಾಮಾನ್ಯ ವ್ಯಕ್ತಿಗಿಲ್ಲಿ ? ಕೆಲವೊಂದು ದಿನ ಗೆಳೆಯರ ಮನೆಯ ಮೊಗಸಾಲೆ (ವರಾಂಡಾ)ಯಲ್ಲಿ, ಕೆಲವೊಂದು ದಿನ ಕೆಲವು ಗೆಳೆಯರ ಶ್ರಯದಲ್ಲಿ....ಹೀಗೇ ಸುಮಾರು ಎರಡು ವರ್ಷಗಳಷ್ಟು ಕಾಲ ಮುಂಬಯಿಯಲ್ಲಿ ಕಳೆದೆ. ಆಮೇಲೆ ಮತ್ತೊಬ್ಬ ಗೆಳೆಯನ ದರಭಾವ ಅಲ್ಲಿ ಆಶ್ರಯವಿತ್ತಿತು. ಆದರದು ಬಹುಕಾಲ ಆಗಲಿಲ್ಲ. ಅವನಿಗೆ ಮದುವೆಯ ಸೂಚನೆ ಬಂದಿತು. ಮದುವೆಯೂ ಆಯಿತೆನ್ನಿ. ಸರಿ, ಇನ್ನು ಅಲ್ಲಿ ಇರಲಸಾಧ್ಯವೆಂದು ಅಲ್ಲಿಂದ 'ತೊಲಗಿ ಹೋಗಿ' ಎಂಬ ಆಜ್ಞೆ ಪಡೆದೆ. ಮುಂದಿನ ತಿ 'ಆಫೀಸು'! ಆಫೀಸಿನಲ್ಲಿ ಉಳಕೊಳ್ಳುವ ಸೌಕರ್ಯ ಸಾಮಾನ್ಯವಾಗಿ ಕಾವಲುಗಾರ, ಪೇದೆಗಳಿಗೆ ಮಾತ್ರ. ಕಾರಣ ಮುಂತಾದವರಿಗೆ ಅಲ್ಲೇ ಉಳಕೊಳ್ಳಗೊಡರು ಮಾತ್ರವಲ್ಲ, ಕಾರಕೂನನಾದವನಿಗೆ ಆಫೀಸಿನಲ್ಲೇ ಉಳಕೊಳ್ಳುವುದೆಂದರೆ ತುಸು ಲಾಂಛನಾಸ್ಪದ. ಆದರೆ ಉಪಾಯವಿಲ್ಲ. ಒಳಿತು-ಕೆಡಕುಗಳ ಗೊಡವೆ ವ್ಯಕ್ತಿಯಾದವನಿಗೆ ಅವಶ್ಯವೇಕೆ?— ಎಂದು ಆಫೀಸಿನಲ್ಲೇ ಬೀಡಾರಮಾಡಿದೆ. ತಪ್ಪು ತಿಳಿಯಬೇಡಿರಿ. 'ಬೀಡಾರ' ಎಂದರೆ ನಾನೊಬ್ಬ ಮಾತ್ರ. ಮತ್ತೆ ಒಬ್ಬಿಬ್ಬರು ನೌಕರರು; ಕಾವಲುಗಾರರು....ಹೂಂ! ಅವರೊಂದಿಗೆ ಸೇರಿರುವುದು ಆದೊಂದು ತರದ ಸಂತೋಷವನ್ನೀವುದಾದರೂ, ಅವರು ಎಷ್ಟೆಂದರೂ 'ಫ್ಯೂನ್ಸ್', ಮತ್ತೆ ನಾವು 'ಮೇಲಿನವರು' (ಸುಪೀರಿಯರ್ಸ್) ಎಂಬ ಭಾವನೆ ಸುಲಭವಾಗಿ ಹೋಗುವುದಿಲ್ಲ. ಆದರೆ ನನ್ನ ಸ್ಥಿತಿ ಹಾಗಿರಲಿಲ್ಲ. ಪೇದೆಯಿರಲಿ, ಆಫೀಸರನಿರಲಿ; ಯಾರಾದರೂ ಎಲ್ಲರಂತೆ ಮಾನವ ಜೀವಿಗಳಷ್ಟೆ! ಮೂರನೆಯ ಒಬ್ಬ ವ್ಯಕ್ತಿಗೆ ಈ ಆಫೀಸರ್ ಇಲ್ಲವೆ ಪೇದೆ ಎಂಬಿಬ್ಬರೂ ಸಮಾನರಷ್ಟೆ!— ಎಂಬ ಧ್ಯೇಯದಿಂದ ಅವರೊಂದಿಗೆ ಸೇರಿ, ಆಫೀಸಿನಲ್ಲೇ ವಸತಿ ಮಾಡಿದೆ. ಪ್ರಸಂಗವನ್ನರಿತಿದ್ದ ಮೇಲಧಿಕಾರಿಗಳಿಂದ ಪರವಾನಿಗೆ ಪಡೆಯುವುದೊಂದು ಸಮಸ್ಯೆಯಾಗಲಿಲ್ಲ. ಕಾರಣ ಅವರಿಗೂ ಕೆಲಕಾಲ ಈ ಸಮಸ್ಯೆ ಬಾಧಿಸದಿರಲಿಲ್ಲ. ಮತ್ತೊಂದು ಮಾತೆಂದರೆ ದೈನಿಕ ಕೆಲಸವು ಪೂರ್ತಿಯಾಗದೆ ಬಾಕಿಯಾಗುತ್ತ ಹೋಗುತ್ತಿದ್ದುದರಿಂದ, ಆದಿತ್ಯವಾರಗಳಲ್ಲಿ ಇಲ್ಲವೆ ರಜಾದಿನಗಳಲ್ಲಿ ಆಫೀಸಿಗೆ ಬರಬೇಕಾದ ಪ್ರಸಂಗಗಳು ಒದಗುತಿದ್ದುವು. ಹಾಗಿರಲು ವಸತಿ ಮಾಡಿಕೊಳ್ಳಲೆಳಸುವವನೊಬ್ಬನ ಆಶಯ, ಬಾಕಿಯಾಗುತ್ತ ಹೋಗುತ್ತಿರುವ ಕೆಲಸದ—ಮತ್ತದನ್ನು ಪೂರ್ತಿಮಾಡಲು ರಜಾದಿನಗಳಲ್ಲಿ ಬರಬೇಕಾಗುತ್ತದೆಂಬ ಸಂಗತಿಯ— ದೃಷ್ಟಿಯಿಂದ ತೀರ ಉತ್ತಮವೇ ಸರಿ. ಎಂದರೆ ರಜಾದಿನಗಳಲ್ಲಿ ಆಫೀಸಿಗೆ ಬರಬೇಕಾದ ಪ್ರಸಂಗಗಳು ಕಡಿಮೆಯಾಗಬಹುದಲ್ಲ— ಎಂದು. ಆದುದರಿಂದ 'ತನ್ನ ಮೇಲಧಿಕಾರಿಗಳಿಂದ ತಕರಾರು ಬಂದೀತು! ಆದರೂ ನೋಡುವ ಇರು!' ಎನ್ನಬೇಕಿದ್ದ ನನ್ನ ಮೇಲಧಿಕಾರಿಗಳು 'ಓಹೋ! ಚಿಂತಿಲ್ಲ ಧಾರಾಳವಾಗಿರು!! ಯಾಕಾಗಲೊಲ್ಲದು!!!' ಎಂದೆಲ್ಲ ಒಂದೇ ಉಸಿರಿನಲ್ಲಿ ಒಪ್ಪಿಗೆಯಿತ್ತರು. ಸಂಗತಿ ಎಂತಹದೇ ಇರಲಿ, ನನ್ನ ಪಾಲಿಗಂತೂ ಅದು ಮಹಾ ಪುಣ್ಯವಾಗಿ ಕಂಡಿತು. ಆದರೆ ಅವರು 'ಒಲ್ಲೆ' ಎನ್ನಲಾರರೆಂದೂ ನನಗೆ ತಿಳಿದಿತ್ತು, ಕಾರಣ ನನಗೆ ಬೇರೆ ಗತಿಯಿಲ್ಲ. ಏನೇ ಇರಲಿ, ಆಫೀಸಿನಲ್ಲೇ ಉಳಕೊಳ್ಳತೊಡಗಿದೆ ಎನ್ನಿ! ಮತ್ತೆ ಕೆಲದಿನಗಳ ಮೇಲೆ ನನ್ನ ಮೇಲಧಿಕಾರಿಗಳು ರಜೆಯಮೇಲೆ ಊರಿಗೆ ಹೋದರು. ಅದಾಗಲೇ ನಾನವರ ಮೆಚ್ಚಿನವನಾಗಿದ್ದುದರಿಂದ, ಅವರು ಬರುವಷ್ಟರ ವರೆಗೆ, ಅವರಿದ್ದ ಕೋಣೆಯಲ್ಲಿ ನಾನಿರಬಹುದಾಗಿ ಅವರು ಹೇಳಿದರು. ಈ ಮಧ್ಯೆ ಅವರು ವಿವಾಹವಾಗುವ ಯೋಜನೆಯಲ್ಲಿದ್ದರು. ಹಲವಾರು ಜಾತಕಗಳ ಮೇಳಾಮೇಳಿಯೂ ಆಗಿತ್ತು. ಆದರೆ ಯಾವುದೂ ನಿಷ್ಕರ್ಷೆಯಾಗಿರಲಿಲ್ಲ. ರಜೆಯಲ್ಲಿದ್ದಾಗಲೆ ವಿವಾಹವಾಗಲೂ ಬಹುದು

ಎಂಬ ಯೋಚನೆಯಿಂದಲೇ ಅವರು, ತನ್ನೊಬ್ಬ ಗೆಳೆಯನ ಮೂಲಕ ಎರಡು ಕೋಣೆಗಳ ಒಂದು ಬೀಡಾರವನ್ನು ಗೊತ್ತು ಹಚ್ಚಿಟ್ಟಿದ್ದರು. ಹಾಗಾಗಿ, ಅವರು ನಾನಿರಬಹುದೆಂದ ಅವರ ಆ ಒಂಟಿಕೋಣೆ (ಸಿಂಗಲ್‌ರೂಮ್), ನನಗೆ ಸಿಗಬಹುದೆಂಬ ಆಸೆಯೂ ಇತ್ತು. ಆ ಕೋಣೆ ಅಷ್ಟೊಂದು ಉತ್ತಮವಿಲ್ಲದಿದ್ದರೂ, ಸುಮಾರು ಐನೂರು, ಸಾವಿರ ರುಪಾಯಿ ತನಕ ಪಾಕದಿ ಕೊಟ್ಟು ಕೊಳ್ಳುವೆನೆಂಬುವ ಉಮೇದುವಾರರು ಆದೆಷ್ಟೋ ಇದ್ದರು. ಹಣ ಕಂಡರೆ ಹೆಣ ಬಾಯ್ಬಿಡುವುದೆಂಬಂತೆ ಏಷ್ಟೂ ಕಷ್ಟವಿಲ್ಲದೆ ಸಿಗುವ ಹಣವನ್ನು ಅವರು ಬಿಡಬೇಕಾದರೂ ಏಕೆ?—ಎಂಬ ಭಾವನೆಯೊಂದು ಮನಸ್ಸಿನಲ್ಲಿ ಮೂಡಿದ್ದರೂ, ಅವರನ್ನು ನಾನು ತುಸುಮಟ್ಟಿಗೆ ತಿಳಿದಿದ್ದುದರಿಂದ, ನನ್ನ ದುರವಸ್ಥೆಯನ್ನು ಕಂಡು ನನಗೆ ಕೊಟ್ಟಾರು ಎಂಬ ಹೆಬ್ಬಯಕೆಯಿಂದ ನಾನಲ್ಲಿ ತಳವೂರಿದೆ.

ಸರಿ. ಜತೆಗೆ ಒಬ್ಬಿಬ್ಬರು ಗೆಳೆಯರೂ ಸೇರಿಕೊಂಡರು. ಒಬ್ಬ ನನ್ನೂರವ; ಮತ್ತೊಬ್ಬ ನನ್ನ ಸಹಪಾಠಿ. ಆ ಸಹಪಾಠಿಯನ್ನು ನಾನು 'ನನ್ನ ಕಾರ್ಯದರ್ಶಿ' ಎಂದು ಕರೆಯುತ್ತಿದ್ದೆ. ತಮಾಷೆಗಾಗಿ ಎನ್ನಿ! ಆದರೂ, ನನ್ನ ಒಂದೆರಡು ಬರೆಹಗಳನ್ನು ಆತ ನಕಲು ತೆಗೆದುಕೊಟ್ಟಿದ್ದುದರಿಂದ ಆತ 'ನನ್ನ ಕಾರ್ಯದರ್ಶಿ' ಎಂಬುದರಲ್ಲಿ ತುಸು ಸಹಜಿಕತೆ ಕಾಣುತ್ತಿತ್ತು (!). ಮತ್ತೆ—ನಾನಾದರೂ ಸಾಮಾನ್ಯ ವ್ಯಕ್ತಿಯಲ್ಲ! 'ಒಳ್ಳೆಯ' ಲೇಖಕ, ಬರೆಹಗಾರ!! ಕತೆಗಾರ!!! ಕಾದಂಬರಿಕಾರನೂ ಹೌದು! ಆದರೆ ಅವು ಬೆಳಕಿಗೆ ಬರಲು ಇನ್ನೂ ಬಹುಕಾಲವಿದೆ. ಎಂದರೆ ಸಂಗತಿ ಹೀಗೆ: ಒಂದೆರಡು ಪರಿಚ್ಛೇದ ಬರೆದು ಮುಗಿಸಿದುವೂ, ಬರೆಯಲೆಳಸಿದುವೂ, ಬರೆಯಬೇಕೆಂದಾಶಿಸಿದುವೂ ಹಲವು. ಮತ್ತೊಂದು ವೈಶಿಷ್ಟ್ಯವೆಂದರೆ ನನ್ನ 'ನಿರೂಪಣಾ ಶೈಲಿಯಲ್ಲಿ ನೈಜತೆಯಿದೆ, ನೈಪುಣ್ಯವುಂಟು' ಎಂಬುದು ಜನಜನಿತ ವಿಚಾರ! ನಾನೊಬ್ಬ ಪ್ರಗತಿಶೀಲ ಸಾಹಿತಿ !!!—ಎಂದೇ ಎನ್ನಲೊಲ್ಲೆರೇಕೆ. ಹೀಗಿರುವಾಗ ನನಗೊಬ್ಬ 'ಸೆಕ್ರೆಟರಿ' ವಿಶೇಷಸಂಗತಿಯಲ್ಲ: ಬದಲು 'ಅನಿವಾರ್ಯ' (!) ಸರಿಯಷ್ಟೆ?

ಮತ್ತೆ ಆ ಮೇಲಧಿಕಾರಿಗಳ ವಿವಾಹವಾಯಿತು. ಅವರು ಮುಂಬಯಿಗೆ ಸಂಸಾರದೊಂದಿಗೆ ಒಂದವರು ನೇರವಾಗಿ ಸೂದಲು ನಿಶ್ಚಯಿಸಿದ ಆ ಬೀಡಾರದಲ್ಲೇ ಬೀಡುಬಿಟ್ಟರು. ಹಾಗಾಗಿ ಅವರ ಆ ಹಿಂದಿನ ಕೋಣೆ ನನ್ನ ಪಾಲಿಗೇ ಬಂದಿತು. ಮನಸಾರೆ ವಂದಿಸಿದೆನವರನ್ನು. ಕಾರಣ ನನಗೆ 'ಸಾಧ್ಯವಿಲ್ಲ' ಎಂದವರು ನಾಲ್ಕಾರು ನೂರು ರುಪಾಯಿಂಗಳಿಗೆ ಬಾಯ್ಬಿಡುತ್ತಿದ್ದಿದ್ದರೆ.... ಮುಂಬಯಿಯಲ್ಲಿಯ ಸಾವಿರಾರು ಜನರಂತೆ ನಾನಾದರೂ ಯಾರಾರ ಮನೆಯ ಮೊಗಸಾಲೆಯಲ್ಲಿ ಇಲ್ಲವೆ ಧಾರಾಳವಾಗಿ ಬೀದಿಯ ಪಕ್ಕದಲ್ಲಿ (ಫುಟ್‌ಪಾತ್) ಇರಬೇಕಾದ ಪ್ರಸಂಗ ಬರುತ್ತಿತ್ತು. ಅಂತೂ ಅವರ ಆ ಉದಾರ ಹೃದಯಕ್ಕೆ ನಾನು, ನನ್ನ ಊರ ಗೆಳೆಯ ಮತ್ತು ನನ್ನ 'ಕಾರ್ಯದರ್ಶಿ' ಮೂವರೂ ಅಭಿನಂದಿಸದಿರಲಿಲ್ಲ. ಮೊದಲೇ ಹೋಟೆಲು ಕೂಳಿನ ಮೇಲೆ ವೈರಾಗ್ಯ ಹುಟ್ಟಿತ್ತು ಎಂದೆನಲ್ಲ. ಸರಿ ಈಗ ಇರಲಷ್ಟು ಸ್ಥಳ ಸಿಕ್ಕಿದಾಗ ಅಟ್ಟುಣ್ಣಬಾರದೇಕೆ? ಒಂದೊಂದೇ ಸನ್ನಾಹ ಮಾಡತೊಡಗಿದೆವು. ಆದರೆ ನನ್ನ 'ಕಾರ್ಯದರ್ಶಿ'-ಯನ್ನುಳಿದು, ನಮ್ಮಿಬ್ಬರಿಗೆ ಅಡುಗೆಯ ಕಲ್ಪನೆಯಿರಲಿಲ್ಲ. ಜೀವನದಲ್ಲಿಯ ಸಾಮಾನ್ಯಸಂಗತಿಯಾಗಿದ್ದುದರಿಂದ 'ಇದೇನು ಮಹಾ' ಎಂದುಕೊಂಡಿದ್ದೆವು. ಕಾರ್ಯದರ್ಶಿಗೆ ತುಸು ಅನುಭವವಿತ್ತು. ತನ್ನಕ್ಕನ ಮನೆಯಲ್ಲಾತ ಉಳಕ್ಕೊಳ್ಳುತ್ತಿದ್ದುದರಿಂದ, ಆಗಾಗ ನೆರವಾಗಬೇಕಾದ ಪ್ರಸಂಗ ಬರುತ್ತಿತ್ತವನಿಗೆ. ಹಾಗೇ ತುಸು ಮಾಹಿತಿಯಾಯಿತು. ನಾನೇನೋ ಪ್ರೊ. ಸಿ. ಇ. ಎಂ. ಜೋಡರ 'ಸಮ್ ಥಿಂಗ್ ಔಫ್ ಎವ್ವೆರಿ ಥಿಂಗ್' ಆ ತರಪ ತಿಳಿವು ಜೀವಿಗೆ ಅವಶ್ಯ ಎಂಬ ಧೋರಣೆಯವನಾದರೂ, ಆ ಧೋರಣೆ ತಿಳಿವಳಿಕೆಯಲ್ಲಿ (ಥಿಯರೆಟಿಕಲ್) ಮಾತ್ರ. ವಾಗಿತ್ತು. ಮೇಲಾಗಿ ನನಗೆ ಆ ಸೌಲಭ್ಯವೂ ದೊರೆಕಿರಲಿಲ್ಲ. ಆದರೂ ನೋಡೋಣ ಎಂದು ಆಫೀಸಿನ ಪೇದೆಯನ್ನು ಕರೆದು. ಕೊಂಡು ಪೇಟೆಯಲ್ಲಿ ಸುತ್ತಾಡಿ ಕೆಲ ಪಾತ್ರೆಗಳು, ಒಲೆ (ಸೆಗಡಿ) ಇತ್ಯಾದಿಗಳನ್ನು ಕೊಂಡುಕೊಂಡೆ. ಆಫೀಸಿನಲ್ಲೇ ಉಳಕೊಳ್ಳುತ್ತಿದ್ದ ದಿನಗಳಾದುದರಿಂದ 'ಕಾರ್ಯದರ್ಶಿ' ಜೊತೆಗಿರಲಿಲ್ಲ. ಮರುದಿನ ಚಹಾ ಮಾಡಿದುದಾಯಿತು. ಒಲೆ ಹೊತ್ತಿಸಿ, ನೀರಿಟ್ಟು, ಸಕ್ಕರೆ ಹಾಕಿ, ಚಹಾಪುಡಿ ಸಾಕಷ್ಟು ಕುದಿಸಿ. ಗಾಳಿಸಿ, ಹಾಲು ಹಾಕಿದೆ. ಮತ್ತೆ 'ಚಹಾ' ಆಯಿತು. ಚಹಾದ ಬಣ್ಣವೇನೋ ಸರಿಯಾಗಿದ್ದರೂ, ಆ ಚಹಾ ನಮ್ಮೂರಲ್ಲಿ ದನ-ಕರುಗಳಿಗೆ ಮಾಡಿಹಾಕುವ ಅಕ್ಕಚ್ಚಿನ ನೀರಿನಂತಿತ್ತು. ಚಹಾ ಮಾಡದ ಕೃಪು ತಪ್ಪು ಎಂಬುದು ನಿಜವಾದರೂ "ನನಗದು ತಿಳಿಯದು" ಎನ್ನಲು ಬಯಸದ ನಾನೂ, 'ಬಹುಶಃ ಚಹಾ ಮಡಿ ಜನ್ನಾಗಿರಲಿಕ್ಕಿಲ್ಲ' ಎಂದೇ ಎಣಿಸಿಕೊಂಡೆ. ನನ್ನಾ ಊರ ಗೆಳೆಯ ಮತ್ತು ನಾನು ಇಬ್ಬರೇ ಇದ್ದುದರಿಂದ, 'ಹೇಗಾಗಿದೆ ಚಹಾ?' ಎಂದು ಕೇಳಿದೆ. ದಾಕ್ಷಿಣ್ಯಕ್ಕೊಳಗಾದ ಆ ಗೆಳೆಯ 'ಬಹಳ ಜನ್ನಾಗಿದೆ' ಎಂದ. ಮರುದಿನ ಆದಿತ್ಯವಾರ ಒಬ್ಬಿಬ್ಬರು ಹಿಂದಿನ ಗೆಳೆಯರನ್ನು ಆಹ್ವಾನಿಸಿ ಚಹಾ ಮಾಡಿಕೊಟ್ಟೆ. ಆದರೆ ಆ ಗೆಳೆಯರು ಮಾತ್ರ ಬಾಯಿಬಿಟ್ಟೇ ನುಡಿದರು: 'ಚಹಾ ಕುದಿಹಾಕಿ ಕುದಿಸಬಾರದು, ಬದಲು ಕುದಿಯುತ್ತಿರುವ ನೀರನ್ನು ಕೆಳಗಿಟ್ಟು ಆದರಲ್ಲಿ ಪುಡಿಹಾಕಿ ಮುಚ್ಚಿಡಬೇಕು. ಸುಮಾರು ಐದುನಿಮಿಷಗಳನಂತರ ಅದನ್ನು ಗಾಳಿಸಿ ಹಾಲು ಹಾಕಬೇಕು' ಎಂದು. ಆದರೂ ಅದರಿಂದ ಬಹಳ ಉಪಕಾರವೇ ಆಯಿತೆನ್ನಿ. ದಿನ ಹೋದಂತೆ ಅನುಭವ ಹೆಚ್ಚಿ, ಈಗ ನನ್ನ 'ಚಹಾ' ಎಂದರೆ ಮುಂಬಯಿಯಲ್ಲಿ ಮತ್ತೆಲ್ಲೂ ಸಿಗದಂತಹದು! ಏಕೆ? ಒಬ್ಬಿಬ್ಬರು ಗೆಳೆಯರು ಹಾಗೆನ್ನುವಾಗ ನಾನು ಉಬ್ಬುತ್ತಿದ್ದೆ; ಕಾರಣ 'ನಾಳೆ ಎಲ್ಲಾದರೂ ನೌಕರಿಗೆ ಧಕ್ಕೆ ಬಂದರೆ, ಎಲ್ಲಾದರೊಂದು ಹೋಟೆಲನ್ನು ಸೇರಿ

ಚಹಾ ಮಾಡಿಕೊಡುವ ಕೆಲಸಕ್ಕಾದರೂ ನಿಲ್ಲಬಹುದಲ್ಲ !!! ಕೆಲ ದಿನಗಳ ಬಳಿಕ ಆ ಕೋಣೆಯೂ ದೊರೆಯಿತು. ಕಾರ್ಯದರ್ಶಿಯೂ ಸೇರಿಕೊಂಡ. 'ಬರಿಯ ಚಹಾ ಮಾಡಿ ಫಲವೇನು ? ಜತೆಗೆ ತುಸು ಫಲಾರಕ್ಕೂ ಮಾಡಬೇಕು' ಎಂದೆಣಿಸಿ, ಸ್ವಲ್ಪ ಗೋದಿಯ ಹಿಟ್ಟನ್ನು ತಂದು ಚಪಾತಿ ಮಾಡಿದೆವು. ಮುಂದಾಳು ಕಾರ್ಯದರ್ಶಿಯೇ! ಎಂದರೆ ಮುತ್ತುಳಿದಿಬ್ಬರಿಗೆ ಚಪಾತಿಯ ಮುಂದಣ ಗತಿ (ಉಪಯೋಗ, ಗೊತ್ತೇ ವಿನಾ, ಹಿಂದಣಸ್ಥಿತಿ (ತಯಾರಿ) ಯು ಪರಿಚಯವಿಲ್ಲ. ಹಾಗೇ ಅದರ ಅನುಭವವೂ ಆಯಿತು. ಕೆಲವೊಮ್ಮೆ ಉಪ್ಪು ಹೆಚ್ಚಾಗಿ, ಕೆಲವೊಮ್ಮೆ ಹಾಕದೆ, ಕೆಲವೊಮ್ಮೆ ಮತ್ತೇನೋ ಹೊರತೆಯಾಗಿ ನಾಲ್ಕಾರು ಬಾರಿಯ ಪ್ರಯತ್ನ ವಿಫಲವಾದರೂ ಸಾಕಷ್ಟು ತಿಳಿವುಂಟಾಯಿತು ಸಹಜವಾಗಿ. ಎಂದರೆ ನಳನನ್ನು ಮಿಗಿಸಬಲ್ಲ 'ವಲಲಭಟ್ಟ'ನಾನೆನ್ನಿ! ಮೊದಲ ಕೆಲವು ದಿನ ಖರ್ಚು ಹೆಚ್ಚಾದರೂ, ಬರುಬರುತ್ತ ಖರ್ಚು ಸರಿಯಾಗಿ ಊಟವೂ ಉತ್ತಮವಾಗತೊಡಗಿತು.'ಸರಿ, ಅಡುಗೆಯ ತಿಳಿವಾಯಿತಲ್ಲ' ಎಂದು ಮನನಾರೆ ನಕ್ಕೆ! ಮಹತ್ವದ ವಿಷಯವೆಂದರೆ ಎಲ್ಲಾದರೂ ಆಗಾಗಲೇ ಜನಜನಿತವಾಗಿರುವ 'ರಿಟ್ರೆಂಚ್‌ಮೆಂಟಿನ' ಭೂತ ನನ್ನನ್ನಾವರಿಸಿದರೂ (ಆ ಭಯವಿಲ್ಲ) ಫಕ್ಕನೆ ದಿಗಿಲಾಗುವ ಅವಶ್ಯವಿರಲಿಲ್ಲ. ಕಾರಣ ಎಲ್ಲಾದರೂ ಹೋಟೆಲಿನಲ್ಲಿ 'ಅನುಭವ ಉಳ್ಳವ' ಎಂದರೆ ಸುಲಭವಾಗಿ ಕೆಲಸಕ್ಕೆ ಸೇರಿಸಿಕೊಳ್ಳುವರು! ಊಟ ತಿಂದು ಎಲ್ಲ ಹೋಗಿ ಮೂವತ್ತು,ಮೂವತ್ತೈದು ರೂಪಾಯಿಯಾದರೂ ಸಿಗಬಹುದು! ಈ ಕಾರಕೂನಗಿರಿಯಿಂದ ಸಿಗುವ ಎಪ್ಪತ್ತು, ಎಂಬತ್ತು ರೂಪಾಯಿ ವೇತನ ಖರ್ಚಿಗೇ ಸಾಲದೆ, ಕೂಡಿಡುವ ಪ್ರಶ್ನೆ ಬಲು ದೂರ ಸಾಗುತ್ತಿರುವಾಗ, ಏನೊಂದೂ ತೊಂದರೆಯಿಲ್ಲದೆ ಕೂಡಿಡಬಹುದಾದ ಮೂವತ್ತು (ಇಪ್ಪತ್ತೈದೇ ಆಗಲೊಲ್ಲದೇಕೆ?) ರೂಪಾಯಿಯ ವೇತನ ಜೆನ್ನಲ್ಲವೆ? ಬರಿದು ಕೂಲಿಯ, ಇಲ್ಲವೆ ಹೋಟೆಲ ತಿಂಡಿಕೊಡುವವನ ಕೆಲಸವಾದರೂ ಅದೆಷ್ಟು ಆದಾಯ? 'ಇಂಡಿಯಾ ಕಾಫೀ ಹೌಸ್' ಇಲ್ಲವೆ 'ತಾಜ್' ನಂತಹ ಹೋಟೆಲುಗಳಲ್ಲಿ 'ಬೇರರ್' ಇಲ್ಲವೆ 'ವೈಟರ್' ಆಗಿದ್ದರೂ, ಒಂದೊಂದು 'ಸಲಾಮಿಗೆ' ಎರಡಾಣೆ, ನಾಲ್ಕಾಣೆ ಸುಲಭವಾಗಿ ಸಿಗುತ್ತದಲ್ಲ! ಅವರ ಖರ್ಚೆಲ್ಲ ಹೋಗಿ ತಿಂಗಳಿಗೆ ಮುನ್ನೂರು, ನಾನ್ನೂರು ರುಪಾಯಿಯ ಉಳಿತಾಯದವರು ವಿಶೇಷವಲ್ಲ ಎಂದಾಗ, ನಮ್ಮಿ ಎಂ. ಎ., ಬಿ. ಎ., ಇಂಟರ್, ಮೆಟ್ರಿಕ್ ಆದವರ ಸರಾಸರಿ ವಾರ್ಷಿಕ ಉಳಿತಾಯವೂ ಅವ್ಯಾಗದು ಎಂಬುದು ವಿಶೇಷವಾಗಿ ಕಾಣದೆ ? ಆಯ್ಯೋ, ಕಾರಕೂನಿಕೆಯೇ! ದಿನವಿಡೀ ದುಡಿದು, ರಜಾದಿನಗಳಲ್ಲೂ ಬಿಡುವು ಸಿಗದೆ 'ತಮ್ಮ ತೀರ ನಮ್ರ ಪಾಗೂ ವಿಧೇಯ ಸೇವಕ' ಎಂದುಕೊಂಡರೂ, ಕೈತುಂಬ ಕಾಸುಸಿಗದ ಜೀವನ ನಶ್ವರವೆನಿಸದೆ? ಸಾಮಾನ್ಯ ಒಬ್ಬ ಕೂಲಿ ಒಂದು ಕೈಗಾವಿ ಹಿಡಿದು ನುತ್ತಿದರೆ ಒಂದಲ್ಲ ಒಂದು ನೆವದಿಂದ 'ಕಡಿಮೆಯೆಂದರೆ' ಏದು ರೂಪಾಯಿಯಾದರೂ ಸುಲಭವಾಗಿ ಸಿಗುತ್ತದೆ! ಮತ್ತೆ ದುಡಿವೆನೆಂಬ ಹುಮ್ಮಸ್ಸಿದ್ದರೆ ದುಡಿಯಬಹುದು; ಇಲ್ಲವೆ ಸುಖವಾಗಿ ಮನೆಸೇರಿ ನಿದ್ರಿಸಬಹುದು. ಸುಶಿಕ್ಷಿತರಾದ ನಮ್ಮಲ್ಲಿ ಹೆಚ್ಚು ಜನರಿಗೆ ಸ್ವಚ್ಛಂದವಾಗಿ ಇರುವ ಈ ಮಹಾಭಾಗ್ಯವಿದ? ಹೊಟ್ಟೆತುಂಬ ಊಟಸಿಕ್ಕದ ವೇತನದ ಅಧ್ಯಾಪಕರ ಮಾತಿರಲಿ, ಅದೆಷ್ಟು 'ಪ್ರೊಫೆಸರರು' 'ಲಾಯರರು' ತಂತಮ್ಮ ಸಂಸಾರಗಳನ್ನು ತಾವೇ ಸಾಗಿಸಿಕೊಂಡು ಹೋಗುತಿದ್ದೇವೆ— ಎಂಬ ಎದೆಗಾರಿಕೆಯುಳ್ಳವರಿದ್ದಾರೆ? ಹೂಂ, ಹೋಗಲಿ! ದಿನಗಳು ಹಾಗೇ ಸಾಗಿದುವು. ಆಟ್ಟು ಉಣ್ಣುವ ನಮ್ಮ ಜೀವನ ಸೊಗಸಾಗಿ ಸಾಗಿತ್ತು. ಈ ಮನ್ಯೆ ಕಾರ್ಯದರ್ಶಿ ಬೇರಾದ; ಮತ್ತೊಬ್ಬ ಗೆಳೆಯ ದೂರಾದ. ದಿನಗಳೂ ಸಾಕಷ್ಟು ಬದಲಿಸಿದುವೆನ್ನಿ! ಹಲವು ಸಂಸಾರಿಗರು ಇರಲು ಸ್ಥಳವಿಲ್ಲದೆ ತಮ್ಮ ಸಂಸಾರದಿಂದ ದೂರಾಗಿರಬೇಕಾದ ಪ್ರಸಂಗಹೋಯಿತು. ಸಾಕಷ್ಟು ಮನೆಗಳು ಬೀದಾರಗಳು ದೊರೆಯತೊಡಗಿದುವು. ಜೀವನಕ್ಕೆ ಬೇಕಾದ ಸಾಮಾನು-ಸರಂಜಾಮುಗಳೂ ಧಾರಾಳವಾಗಿ ದೊರೆಯತೊಡಗಿದುವು. ಯುದ್ಧದ ಕಾರ್ಮಿನಗಳು ಕಳೆದು ಶಾಂತತೆ ಎಲ್ಲೆಲ್ಲೂ ಪಸರಿಸತೊಡಗಿತು.

ಕಾಲ ಬದಲಾಯಿತು ಎಂದೆನಲ್ಲ ! ಕಾಲದೊಂದಿಗೆ ನಾನೊಬ್ಬ ಹೊರತಲ್ಲ ! ಸಂಬಳದಲ್ಲೂ ತುಸು ಬಡ್ತಿಯಾಯಿತು. ಅಷ್ಟರತನಕ ಒಂಟಿಯಾಗಿದ್ದ ನನಗೆ ನನ್ನ ಸುಖ-ದುಃಖಗಳಲ್ಲಿ ಸಹಭಾಗಿನಿಯಾಗಲು, ನನ್ನಂತೇ ವಿಚಾರಗಳುಳ್ಳ ಒಬ್ಬ ಇನಿಯಳ ಅವಶ್ಯಕತೆ ಕಂಡುಬರದಿರಲಿಲ್ಲ. ಮುಡಿಪು ನನ್ನನ್ನಲ್ಲದೆ ನನ್ನೊಬ್ಬ ಇನಿಯಳ ಜೀವನವನ್ನೂ, ಮಜಾ-ಮೋಜುಗಳನ್ನಲ್ಲಲ್ಲ-ವಾದರೂ, ಸಾಧಾರಣ ಸುಖವಾಗಿ ಸಾಗಿಸಿಕೊಂಡುಹೋಗಲೆಡೆಗೊಡುವಷ್ಟಿತ್ತು. ಹೆಮ್ಮಕ್ಕಳ ಸಂಖ್ಯೆ ಹೆಚ್ಚಿ ಗಂಡುಗಳ ಕೊರತೆ ಕಾಣುತ್ತಿರುವಾಗ, ಮದುವೆಯಾಗುವವನೊಬ್ಬನಿಗೆ ಹೆಣ್ಣು ಸಿಗುವುದು ಕಷ್ಟವಲ್ಲ. ಆದಾಗಲೇ ಹಲವಾರು ಜಾತಕಗಳೂ, ಫೋಟೋಗಳೂ ಬಂದಿದ್ದರೂ, ನಾನಾಗಿ ಒಲಿದು, ನನ್ನ ಜೀವನದಲ್ಲಿ ಬೆಳಕನ್ನು ನೀಡುವ ಪಾತ್ರತೆಯನ್ನಾರಲ್ಲೂ ಕಾಣಲಿಲ್ಲ. ಮುಂದೊಂದು ದಿನ ಮತ್ತೊಬ್ಬರು ಗಂಟುಬಿದ್ದರು. ಪರಿಚಯಸ್ಥರು. ಹೆಣ್ಣೂ ನನ್ನ ತಿಳಿವಿನವಳೆ. ಮೆಟ್ರಿಕ್‌ಕ್ಲಾಸಿನವರೆಗೆ ಓದಿದವಳು. ತೀರ ಜೆಲುವೆಯೆಲ್ಲವಾದರೂ ಸುಂದರಿ! ಮುಂಬಯಿಯಲ್ಲಿಯ ಹೊದಲ ಕೆಲದಿನಗಳಲ್ಲಿ ಆವರ ಮನೆಯ ಪಕ್ಕದಲ್ಲಿರುತ್ತಿದ್ದುದರಿಂದ ಪರಿಚಯವೇನೋ ಸಾಕಷ್ಟಿತ್ತು. ಆವಳೂ ನನ್ನನ್ನು ಬಲ್ಲವಳಾಗಿದ್ದಳು. ನಕ್ಕುನಗಿಸುವ ಕಣ್ಣುಮುಚ್ಚಾಲೆಗೆ ಕೆಲವೊಮ್ಮೆ ಸಂದರ್ಭ ಸಿಗುತ್ತಿದ್ದರೂ, ನಮ್ಮ ಪರಿಚಯ ಕಲ್ಪಿತ ಕತೆ-ಕಾದಂಬರಿಗಳ, ಇಲ್ಲವೆ ಸಿನಿಮಾ ನಾಟಕಗಳ ರೀತಿಯ 'ಪ್ರೇಮ'ದ ಸ್ಥಿತಿಗೆ ಬರಲಿಲ್ಲವೆನ್ನಿ! ಆದರೂ ಆದೊಂದು ತರದ ಆತ್ಮೀಯತೆ, ಒಲವು ಮೂಡಿತ್ತೆಂದರೆ ಸೋಜಿಗವಲ್ಲ. ಮನಸ್ಸು ಮೆಚ್ಚಿದಂತೆಲ್ಲ ಹೊಂಗನಸು ಕಂಡು




ಕನಲುವುದೇ ಹವ್ಯಾಸವಾಗಿದ್ದ ನನಗಾದರೂ ಈ ವಿಚಾರಕ್ಕೆ ಅಷ್ಟೊಂದು ಮಹತ್ವಕೊಡಲೆಡೆಯಿರಲಿಲ್ಲ. ಮೇಲಾಗಿ ಕನಸು ಕಂಡುದರಲ್ಲಿ ನೆನಸಾದುದಾದರೂ ಎಷ್ಟು? ನೆನಹಾದಾಗ ಒಮ್ಮೊಮ್ಮೆ ಅವಳಿಗೂ ಆ ಪಾತ್ರತೆಯನ್ನು ಮನಸ್ಸು ಕಲ್ಪಿಸಿ ಕೊಡುತ್ತಿತ್ತು. ಸರಿ. ಈಗಂತೂ ಆ ಹಕ್ಕಿ ಕೈಮೇಲೇ ಬಂದು ಕುಳಿತಿದೆ. ಒಲಿದು ಬಂದುದನ್ನು ತೊಲಗಿಹೋಗೆಂಬುದು 'ಮಹಾ ಪಾಪವಂತೆ!'. ನಾನಾದರೂ 'ಈ ಪಾಪಕ್ಕೆ ಹೊಣೆಗಾರ ನಾಗಲೇಕೆ? ಮಾತು ಬಲಿತು ಮದುವೆ ನಿಶ್ಚಯವಾಯಿತು. ಇನ್ನೂ ತಿಂಗಳೆರಡರಷ್ಟು ದೂರವಿದ್ದುದರಿಂದ, ಒಮ್ಮೊಮ್ಮೆ, ನಾಳೆ ನನ್ನೆದೆಯಲ್ಲಿ ಮೂಡಿ ಮೂರ್ತಿಮಂತವಾಗಿ ಮಂಡಿಸಲಿರುವ ಇನಿಮೊಳ ದರ್ಶನಮಾಡಿ ಬರುವುದೂ ವಾಡಿಕೆಯಾಯಿತು. ಬಂದೆರಡು ಬಾರಿ ಜತೆಯಾಗಿ ಸಿನೆಮಾಕ್ಕೋ, ಮತ್ತೆಲ್ಲೋ ಸುತ್ತಾಡಲೋ ಹೋಗಿದ್ದೆವು. ನಾಳಿನ ಸಂಸಾರದ ಹೊಣೆಗಾರಿಕೆಯ ಇಲ್ಲವೆ ಸೊಗಸಿನ ಸುಳಿವಿನ ಪರಿಚಯ ಇಂದೇ ತುಸುಮಟ್ಟಿಗೆ ತಿಳಿಯಬೇಕೆಂಬುದು ಸಹಜವಾದುದರಿಂದ, ನಮ್ಮ ಆ 'ರೀತಿ' ವಿಶೇಷವಾಗಿರಲಿಲ್ಲ. ಎಷ್ಟೆಂದರೂ ಮದುವೆ ನಿಶ್ಚಯವಾದುದೆ; ತೊಡಕಿನ ಸುಳಿವು ಕನಸಿಗೂ ಕಾಣದು! ಎಂದಾಗ ನಮ್ಮ "ಅಧಿಕಾರ" ನಾನಾದರೂ ಅಲ್ಲಗಳೆಯಲೇಕೆ? ತಪ್ಪೆಣಿಸದಿರಿ! ನಾವು ದುಡುಕಲಿಲ್ಲ! ದುಂಬಾಲಿಕ್ಕತೊಡಗಿದ್ದೆವು!! ಅಷ್ಟೆ!!! ಮತ್ತಾ ಮಹಾ ದಿನ ಬಂದಿತು. 'ನಿನ್ನ ಜೀವನದ ಹೊಣೆಗಾರಿಕೆ ನನಗೂ ಅಷ್ಟಿರಲಿ' ಎಂದು ಅವಳು ಸಹಧರ್ಮಿಣಿಯಾಗಿ ಸಂಸಾರದಲ್ಲಿ ಕಾಲಿಟ್ಟಳು. ಮದುವೆ ಜೀವನದಲ್ಲಿಯ ಮಹಾ ಪ್ರಸಂಗವೇನೋ ನಿಜ; ಆದರೆ ವಿಶೇಷ ಸಂಭ್ರಮಗಳಿಲ್ಲದೆ ತೀರ ಸಾಮಾನ್ಯರೀತಿಯಲ್ಲೇ ಸಾಗಿತು ಮದುವೆ. ಎಷ್ಟೆಂದರೂ ನಾನಾಗಲೀ ಅವಳವರಾಗಲೀ ಅದಾವ ಮಹಾವ್ಯಕ್ತಿಯ ಕುಟುಂಬಕ್ಕೂ ಸೇರಿದವರಲ್ಲ. ಮೇಲಾಗಿ ಯಾವುದಾದರೂ ಪತ್ರಿಕೆಗೆ ಸುದ್ದಿ ಕಳುಹಿಸಿ, ಭಾವಚಿತ್ರಗಳನ್ನು ಕೊಟ್ಟು 'ಮೆರೆಯುವ' ಅವಶ್ಯಕತೆಯೂ ನಮಗಿರಲಿಲ್ಲ. ವಾಡಿಕೆಯಂತೆ ಬಲ್ಲ ಕೆಲವರಿಗೆಲ್ಲ ಆಮಂತ್ರಣ ಕೊಟ್ಟಿದ್ದೆವು. ಅವರಲ್ಲಿ ಹಲವರು ಬಂದು ತಮ್ಮ ಹಾರ್ದಿಕ ಶುಭಾಶಯಗಳನ್ನೂ ಸಲ್ಲಿಸಿ ಹೋದರು. ಮುಂಚಿನ ಕಾಲದಂತೆ ಬಂದವರಿಗೆಲ್ಲ ಮೃಷ್ಟಾನ್ನ ಭೋಜನವನ್ನಿಕ್ಕಿ ಸತ್ಕರಿಸುವ ಪ್ರಸಂಗಕ್ಕೆಡೆಯಿರಲಿಲ್ಲ. ಕಾರಣ ಆಡಂಬರಕ್ಕಾಗಿ ಇಲ್ಲವೆ ಅನಾವಶ್ಯಕವಾಗಿ ಆಹಾರವಸ್ತುಗಳನ್ನು ದುರುಪಯೋಗ ಪಡಿಸುವುದು ತೀರ ತಪ್ಪಾಗುತ್ತದೆ. ಅಂತಹವು ಖಂಡಿಸಲ್ಪಟ್ಟಿದ್ದುವು. ಆಗಾಖಾನರ ರತ್ನಮಹೋತ್ಸವದ ವೇಳೆ ಎಷ್ಟೋ ಆಹಾರಸಾಮಗ್ರಿಗಳ ದುರುಪಯೋಗವಾಯಿತು. ನಿಜ, ಆದರೆ ಆಗಾಖಾನರಂತಹ ಮಹಾವ್ಯಕ್ತಿಗಳಿಗೂ ನನ್ನಂತಹ ಬಡ ಕಾರಕೂನನಿಗೂ ಹೋಲಿಕೆಯೆಲ್ಲಿ? ಆದರೂ ಬಂದವರಿಗೆಲ್ಲ ವಿಶೇಷವಾಗಿ ದೊರೆವ ಸೋಡಾ-ಲೆಮನುಗಳನ್ನು ಧಾರಾಳವಾಗಿ ಕುಡಿಸಿ ಸತ್ಕರಿಸಿದೆವು. ಅಂತೂ ಮದುವೆಯಾಯಿತು ಎನ್ನಿ. ನವದಂಪತಿಗಳು ನಾವು ಕೆಲವು ದಿನ ವಿಹರಿಸಿರೋಣ (ಏನೋ 'ಹನಿಮೂನ್' ಎನ್ನುವರಲ್ಲ!) ಎಂದು ಕಚೇರಿಗೆ ರಜೆ ಬರೆದುಹಾಕಿದರೆ, ರಜೆಯ ಅವಶ್ಯಕತೆಯ ಕಾರಣವನ್ನರಿತಿದ್ದರೂ, ತುಂಬಾ ಕೆಲಸವಿರುವ ದಿನಗಳಾದುದರಿಂದ, ಮೇಲಧಿಕಾರಿಗಳು ರಜೆಯನ್ನು ಮುಂದೂಡಿದರು. 'ದೇವರು ಕೊಟ್ಟರೂ ಪೂಜಾರಿ ಬಿಡ' ಎಂದಂತಾಯಿತು. ಇನ್ನು 'ಮನೆಗೆ' ಹೋಗೋಣ ಎಂದೆಣಿಸಿದಾಗ, ಕೆಲದಿನ ತನ್ಮಲ್ಲೇ ಇರಬೇಕೆಂದು ಮಾವನ ಮನೆಯವರ ಒಕ್ಕಾತ್ಸೆಯಾಯಿತು. ಒಲ್ಲೆ ಎನ್ನುವುದು ಅಸಂಬದ್ಧವಾದುದರಿಂದ ಅವಳನ್ನು ಕೇಳಿದೆ. ಎಷ್ಟೆಂದರೂ ಪ್ರಸಂಗದ ಸಮಪಾಲು, (!) ಅರ್ಧಾಂಗಿಯಾದ (!!) ಅವಳಿಗೂ ಅನ್ವಯಿಸುವುದಷ್ಟೇ? ಅವಳು ಆಗದೆನ್ನುವ ಗೋಜಿಗೇ ಹೋಗಲಿಲ್ಲ. ಗಂಡ ಎಂಬೊಂದು ಜೀವಿಯೊಂದಿಗೆ ಸೇರಿ, ಹೆಂಡತಿಯೆನಿಸಿ ಇರುವುದರ ಕಲ್ಪನೆ ಅದೇನೋ ಸುಖವಾಗಿ ಕಂಡರೂ, ತಾಯಮನೆಯಿಂದ ಆಗಲೇ ತೊಲಗಿ ಹೋಗುವುದಕ್ಕಿಂತ ಇನ್ನೂ ಕೆಲವು ದಿನವಿದ್ದು ಮತ್ತೆ ಹೋಗೋಣವೆಂದು ಅವಳೂ ಬಯಸಿದಳು. 'ಒಳಿತೇ ಆಯಿತು' ಎಂದೆ ನಾನು. ಕಾರಣ ಆ ಅಷ್ಟಿನಗಳ ಖರ್ಚಾದರೂ ಉಳಿಯಿತಲ್ಲ! ಮೇಲಾಗಿ ಅವಳಿಗೆ ಸಂಸಾರದ ಕಲ್ಪನೆ

ಹೊಣೆಗಾರಿಕೆ ಇತ್ಯಾದಿಗಳ ತಿಳಿವಾದರೂ ಮುಂದಟ್ಟಾಗಲೆಂದು ಬಯಸಿದೆ. ಸುಮಾರು ಹದಿನೈದು ದಿನಗಳ ಬಳಿಕ ಬೀಳ್ಕೊಂಡೆವು. ಮಾವನ ಮನೆಯಿಂದರೆ.... ಒಂದೆರಡು ದಿನ ಜೆನ್ನಾಗಿ ಕಂಡೀತು; ತಿಂಗಳ ದಿನಗಳೆಂದರೆ ಅಸಡ್ಡೆಯಾಗುವುದಲ್ಲವೆ? ಎಂದೇ ಅದಾಗಲೇ ಗೊತ್ತುಹಚ್ಚಿ ಸಾಮಾನು ಸರಂಜಾಮುಗಳೊಂದಿಗೆ ಸಿದ್ಧಪಡಿಸಿಟ್ಟಿದ್ದ ಮನೆಯಲ್ಲಿ ಸಂಸಾರಹೂಡಿದೆವು.

ಅವಳು ಮೆಟ್ರಿಕ್ ತನಕ ಓದಿದ್ದಳು, ಎಂದೇ ಕಲಿತ ಹೆಂಡತಿ. ಆದರೆ ವಿದ್ಯೆಯ ಸ್ಥಿತಿ ಜೀವನಕ್ಕೆ ಬೇಕಾದಂತೆ ಅನ್ವಯಿಸಿಕೊಂಡು ಹೋಗುವಂತಪದಿರಲಿಲ್ಲ. ಮೇಲಾಗಿ ನನ್ನ ಅತ್ತೆ (ಅವಳ ತಾಯಿ) ಮಗಳನ್ನು ಮೆಟ್ರಿಕ್ ತನಕ ಓದಿಸಲಾತಿಸಿದುದರ ಕಾರಣ ಮತ್ತೊಂದು: ಎಲ್ಲ ಮಕ್ಕಳ ತಾಯಂದಿರಿಗೂ ಸಹಜವಾದಂತೆ 'ತನ್ನ ಮಗಳಿಗೆ ಒಳ್ಳೆಯ ಗಂಡ ಸಿಗಬೇಕು, ಶ್ರೀಮಂತನಿರಬೇಕು, ಇಲ್ಲವೆ ಕೈತುಂಬ ಸಂಬಳ ಸಿಗುವಂತವನಿರಬೇಕು, ಕಡಿಮೆ ಎಂದರೆ ನಾಲ್ಕಾರುಜನ ಸೌಕರರನ್ನಾದರೂ ಇಟ್ಟು ತನ್ನ ಮಗಳು ಸುಖಿಯಾಗಿರುವಂತೆ ನೋಡುವವನಿರಬೇಕು' ಎಂಬಿಲ್ಲ ಆಸೆ ಇರುತ್ತದಷ್ಟೆ! ಅಂತೇ ಅವಳ ತಾಯಿಗಾದರೂ ತನ್ನ ಮಗಳಿಗೆ ಅದಾವುದಾದರೊಬ್ಬ ಮಹಾ 'ಕಲೆಕ್ಟರನೋ' 'ಜಡ್ಜನೋ' ಗಂಡನಾಗಬೇಕೆಂಬಾಶೆಯಿರುವುದು ವ್ಯತಿರಿಕ್ತವಲ್ಲ. ಎಲ್ಲರೂ ಆಶಿಸುವುದು ಅದನ್ನೇ ಆದರೆ, ಆದೆಷ್ಟು ಜನ ಜಡ್ಜರು ಕಲೆಕ್ಟರರಿರಬೇಡ! ಸ್ವಾಭಾವಿಕವಾಗಿ ಈಗಿನ ಕಾಲದ ಹೆಮ್ಮಕ್ಕಳಿಗೆ ಒಗ್ಗದ ವಿಷಯವಾದುದರಿಂದ, ನನ್ನತ್ತೆ ತನ್ನ ಮಗಳಿಗೆ ಸಾಂಸಾರಿಕ ಜೀವನದ (ಅಡುಗೆ ಇತ್ಯಾದಿ ಗೃಹಕೃತ್ಯದ್ದೇ ಎನ್ನಲೊಲ್ಲಿರೇಕೆ?) ಪರಿಚಯವಾಗಗೊಟ್ಟಿರಲಿಲ್ಲ. ಮೊದಲ ನಾಲ್ಕಾರು ದಿನ ಅಪರೇ ನಮ್ಮೊಂದಿಗೇ ಬಂದಿದ್ದು, ಮನೆಯ ಕಾರುಭಾರ ಅವರ ಕಡೆಗೇ ಜೋಗಿತ್ತು. ನನ್ನ ಸ್ಥಿತಿ ನಾಲ್ಕರ ಮಾತಿರಲಿ, ಒಬ್ಬನೇ ಒಬ್ಬ ನೌಕರನನ್ನೂ ಇಡುವಂತಪದಿಲ್ಲದುದರಿಂದ, ತಾಯಿ ಮಗಳಿಗೆ ಜೀವನದ ಪರಿಚಯ ಮಾಡಿಕೊಡುವುದು ಅವಶ್ಯವಾಯಿತು. ಆ ನಾಲ್ಕಾರುದಿನ ಸಾಕಷ್ಟು ತಿಳಿವನ್ನು ಅವಳ ತಲೆಯಲ್ಲಿ ತುರುಕಲೆಳಸಿದರೆನ್ನಿ. ಮರುದಿನ ಅತ್ತೆ ಹೊರಟುಹೋದರು. ಮತ್ತೆ ಮಹಾರಾಣಿಯವರ ಆಡಳಿತ ಪ್ರಾರಂಭವಾಯಿತು.

ಆದಿತ್ಯವಾರವಿದ್ದುದರಿಂದ ಕಚೇರಿಗೆ ಬಿಡುವಿತ್ತು. ಬೇರೇನೂ ಕೆಲಸವಿಲ್ಲದುದರಿಂದ ನಾನು ಮನೆಯಲ್ಲೇ ಇದ್ದೆ. ಅವಳು ಅಡುಗೆಯ ಸನ್ನಾಹದಲ್ಲಿದ್ದಳು. ನನಗೇನೂ ಕೆಲಸವಿಲ್ಲವೆಂದು ಅವಳೊಂದಿಗೆ ಜೆಕ್ಕಂದವಾಡುತ್ತ ಕುಳಿತಿದ್ದರೆ ಕೆಲಸವಾಗದೆಂದು, ನಾನು ಅದೇ ಆಗ ಬಂದಿದ್ದ 'ಭಾರತ ಜ್ಯೋತಿ,' 'ಫೋರವರ್'ಗಳನ್ನು ಮಗುಚಿಹಾಕುತ್ತ ಕುಳಿತಿದ್ದೆ. ಅವಳಾದರೂ ತನ್ನ ಮೊದಲ ಪ್ರಯತ್ನ—ಅಲ್ಲ, ಪ್ರಯೋಗದಲ್ಲೇ ತಲ್ಲೀನಳಾಗಿದ್ದುದರಿಂದ, ನನ್ನೆಡೆಗೆ ಬರಲಿಲ್ಲ. ಆದರೂ ಅವಳನ್ನು ಕೂಗಿ ಸಿಗರೇಟು ಬೆಂಕಿಪೆಟ್ಟಿಗೆಗಳನ್ನು ತರಿಸಿಕೊಂಡೆ. ಒಂದೆರಡು ನಗುಮಾತನಾಡೋಣ ಎಂದೆಳಸಿದರೆ....ಹೂಂ. ಅವಳೋ 'ನಿಮಗೇನು? ಇಡೀ ದಿವಸ ನಿಮ್ಮೊಂದಿಗೆ ಪಟ್ಟಾಂಗ ಹೊಡೆಯುತ್ತ ಕುಳ್ಳಿರು ಎನ್ನುತ್ತೀರಿ. ಮನೆ ಕೆಲಸ ಯಾರು ಮಾಡಬೇಕು?' ಎಂದುದ್ಗಾರ ತೆಗೆದು ಒಳಸರಿದಳು. ಇಂದೇನೋ ಸೋಜಿಗವಿದೆ ಎಂದುಕೊಂಡೆ ನಾನು. ಮತ್ತೆ ಗಮನ ಅಂದಿನ ಸುದ್ದಿಯ ಕಡೆ ಹರಿಯಿತು: 'ನೀವು ಒಂದಾಗಿರಿ; ಎಂದರೆ ನಿಮ್ಮೆಡೆಗೆ ರಾಜ್ಯಸೂತ್ರಗಳನ್ನು ಬಿಟ್ಟು ನಾವು ತೊಲಗಿ ಹೋಗುವೆವು. ನಿಮ್ಮಲ್ಲಿ ಒಕ್ಕಟ್ಟಿಲ್ಲದೆ ನಿಮ್ಮನಿಮ್ಮೊಳಗೇ ನೀವು ಕಚ್ಚಾಡಿಕೊಳ್ಳುತ್ತಿರುವಾಗ, ಆಧಿಕಾರವನ್ನು ಅದಾರೆಡೆಗೆ ನಾವು ಕೊಡಬೇಕು? ನೀವು ಒಂದಾಗಿರಿ, ಎಂದರೆ ಮರುಕ್ಷಣ ನೀವು ಹೇಳುವ ವಿಮಾನವನ್ನು ಹತ್ತಿ ನಾವು ತೊಲಗಿ ಹೋಗುವೆವು' ಎಂಬ ಸಾಮ್ರಾಜ್ಯಶಾಹಿಯ ಕಣ್ಮುಚ್ಚಾಲೆಯಾಟ ನಡೆದೇ ಇತ್ತು. ಪರಕೀಯರ ಸಂಚು ಇರುವನಕ ನಮಗೆ ನಮ್ಮರಿವಾಗುವುದಿಲ್ಲ. ಹಾಗಾಗಿ ನಾವು ಒಮ್ಮತ, ಒಕ್ಕಟ್ಟುಗಳ ಕಡೆಗೆ ಕಣ್ಣೆತ್ತಿ ಕಾಣುವುದಿಲ್ಲ. ನಾವು ಒಂದಾದನಕ ಸಾಮ್ರಾಜ್ಯಶಾಹಿ ತನ್ನ ಸಂಕಲೆಯನ್ನು ಸಡಿಲಿಸುವುದಿಲ್ಲ. ಅಂತೂ ಜನತೆಗೆ ಆತ್ಮಪರಿಜಯವಾಗಬೇಕು; ಎಂದರೇನೇ ಕ್ರಾಂತಿ ತೊಡಗೀತು ಮತ್ತು


ಆಲ್ ಇಂಡಿಯಾ ಆಯುರ್ವೇದಿಕ ಕಾನ್‌ಫರನ್ಸ್ ೧೯೪೯ ರಲ್ಲಿ
ಬಂಗಾರದ ಮೆಡಲು ಪಡೆದಿರುವ—ಮಲೇರಿಯಾ
ರೋಗದ ಮೇಲೆ ಅಟಂ ಬಾಂಬಿನಂತಿರುವ

ಶೇಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಆಶಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ. ಕ್ವಿನಾಯಿನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ಪಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ ಕ್ಕೆ ೧-೧೫-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್ (ಅಪ್ಪಾರಾವ) ಧಾಕಪ್ಪಾ.
ಬಡವರ ಔಷಧಿ ಸರ್ವಿಸ್, ಸಿರಸಿ, ಉ ಕಾನಡಾ
ಹಂಚುವವರು:
ಫ್ರೆಂಡ್ಸ್ ಸ್ಟೋರ್, ಧಾರವಾಡ.

ಅಂಗ್ಲರು ತೊಲಗಿ ಹೋದಾರು..... ಪತ್ರಿಕೆಯಲ್ಲೇ ತಲ್ಲೀನನಾದ ನನ್ನನ್ನು ಒಳಗಿಂದ "ಹಾಯ್, ಅಯ್ಯೋ" ಎಂಬೊಂದು ದನಿ ಎಚ್ಚರಿಸಿತು. 'ಏನಿದು ಗ್ರಹಚಾರ' ಎಂದು ಪತ್ರಿಕೆಗಳನ್ನಲ್ಲೇ ಎಸೆದು ಒಳಕ್ಕೆ ಧಾವಿಸಿದೆ ನಾನು. ಪಾಪ ಅವಳು ಮೂರ್ಛೆ ಹೋಗಿದ್ದಳು. ಅನ್ನದ ಪಾತ್ರೆ ಕೆಳಗೆ ಬಿದ್ದಿದ್ದು ಕೋಣೆತುಂಬ ಅನ್ನದ ನೀರು ಹರಡಿತ್ತು. ಬಹುಶಃ ಅನ್ನವನ್ನಿಳಿಸುವಾಗ ಕೈ ತಪ್ಪಿ, ಪಾತ್ರೆಯು ಜಾರಿ.ಕಾಲಮೇಲೆ ಬಿದ್ದಿರಬೇಕು ಅವಳ ಎರಡೂ ಕಾಲುಗಳ ಮೇಲೆ ಕುದಿವ ಅನ್ನದ ನೀರು ಬಿದ್ದಿದ್ದು ಗುಳ್ಳೆಗಳೇಳುವುದರಲ್ಲಿದ್ದುವು. 'ಅಯ್ಯೋ ಪಣೆಬರಹವೇ' ಎಂದು ಅವಳನ್ನಲ್ಲಿಂದೆತ್ತಿ ಬೇರೆಡೆ ಮಲಗಿಸಿ, ಡಾಕ್ಟರರ ಕಡೆಗೆ ಓಡಿದೆ. ಬರುತ್ತ ಅತ್ತೆಯನ್ನೂ ಕರೆದುತಂದೆ. ಸಂಗತಿಯನ್ನರಿತ ಅವರಿಗೆ ನಾಚುಗೆಯಿಂದ ಮೊಗ ಮೇಲೆತ್ತಲಾಗಲಿಲ್ಲ. ಬಿಡುವಿನಿಂದಲೇ ಇದ್ದ ಡಾಕ್ಟರರಿಗೆ ಇದೊಂದು ಸುಹಾಯೋಗವಾದುದರಿಂದ, ಉಪನ್ಯಾಸ ಕೊಡುವುದು ಅವಶ್ಯವಾಗಿ ಕಾಣಲಿಲ್ಲವೇನೋ! ಕೆಲ ನಿಮಿಷಗಳ ಬಳಿಕ ಔಷಧಿಯನ್ನು ಹಚ್ಚಿ ಅವರು ಹೊರಟು ಹೋದರು. ಮಾವನ ಮನೆಯಲ್ಲುಳಿದು ಗಳಿಸಿದ್ದ 'ಆ ಹದಿನೈದು ದಿನಗಳ ಬಿರ್ರು' ಡಾಕ್ಟರರ ಪಾಲಾಯಿತು. ಅವಳಾದರೂ ನನ್ನನ್ನು ಕಂಡಾಗಲೆಲ್ಲ ಮುಖವನ್ನಡ್ಡ ತಿರುಗಿಸುತ್ತಿದ್ದಳು. ಹೂಂ. ಮತ್ತೆ ಕೆಲದಿನಗಳ ಬಳಿಕ ಚೆನ್ನಾದಳವಳು; ಆದರೆ ಅತ್ತೆ ನನ್ನುನ್ನು ಜೀರೆಯಾಗಿರಗೊಡಲಿಲ್ಲ. ಸುಮಾರು ಎರಡು ತಿಂಗಳ ಕಾಲ ಊಟ-ಉಪಚಾರವೆಲ್ಲ ಮಾವನ ಮನೆಯಲ್ಲೇ ಸಾಗಿತು. ಇರಲು ಮಾತ್ರ ನಮ್ಮ ಮನೆಗೇ ಬರುತ್ತಿದ್ದೆವು. ಸರಿ. ಆ ಮೇಲೆ ಮನೆಯಲ್ಲೇ ಇರತೊಡಗಿದೆವು. ಈ ಎರಡು ತಿಂಗಳ ಕಾಲದಲ್ಲಿ ತಾಯಿ ಮಗಳನ್ನು ಸಾಕಷ್ಟು ತರಬೇತುಗೊಳಿಸಿದುದರಿಂದ, ಮತ್ತೊಮ್ಮೆ ಆ ಘಟನೆ ತಲೆದೋರದಾಯಿತು.

* * *

ಈಗವಳು ಸ್ವತಂತ್ರವಾಗಿ ಸಾಕಷ್ಟು ಚೆನ್ನಾಗಿ ಅಡುಗೆ ಮಾಡಬಲ್ಲಳು. ಜೀವನದ ಕಲ್ಪನೆಯಾದರೂ ಸಾಕಷ್ಟು ಆಗಿದೆ. ನಾನೂ ಆಗಾಗ ನೆರವಾಗುವೆನೆನ್ನಿ. ಇದೀಗ ನಮ್ಮ ಬಾಳಿನ ಬಯಕೆಯ ಫಲವಾಗಿ ಮೂರನೆಯ ಒಂದು ಜೀವಿ ನಮ್ಮ ಸಂಸಾರದಲ್ಲಿ ತಲೆಯೆತ್ತಿದೆ. ಒಮ್ಮೊಮ್ಮೆ ಅವಳ ಆ ಸುಂದರ ಮೊಗದ ಮೇಲೆ ಮುನಿಸಿನ ಛಾಯೆಯನ್ನು ಮೂಡಿಸಿ, ಆ ಚೆಲುವನ್ನು ನವಿಯಬೇಕೆಂದೆನಿಸಿದಾಗೆಲ್ಲ, ಆ ದಿನದ ನೆನಪಾಗುವುದಿದೆ. ನಾಚುಗೆ ಸಿಟ್ಟುಗಳಿಂದ ಅವಳ ಮೊಗ ಕೆಂಪಾದಾಗ.... ಪ್ರಸಂಗ ವಿಪರೀತಕ್ಕೆ ' ಹೋದರೆ, ಮತ್ತೆ ಕೂಳು ಸಿಕ್ಕದೆಂದು ಅಂಜಿ ಅವಳನ್ನು ಸಂತಯಿಸುವಾಗ, ನಮ್ಮ ಮುದ್ದು ಮಗು ತಾನೂ ಪಾಲುಗಾರ ಎಂದು ಮುಂದುವರಿಯುತ್ತದೆ. ಆಗ ಇಬ್ಬರ ಗಮನವೂ ಮಗುವಿನತ್ತ ಹರಿದು ಪ್ರಕೃತ ಪ್ರಸಂಗ ಮರೆತು ಹೋಗುತ್ತದೆ. ಹೂಂ! ಯಾರೋ ಅಂದಿದ್ದರು: "ಜೀವನ ಹೂವಿನ ಹಾಸಿಗೆಯಲ್ಲ, ಮುಳ್ಳಿನ ಮಂಚವೂ ಅಲ್ಲ. ಸುಖ-ದುಃಖ ಸಮ್ಮಿಶ್ರವಾಗಿರುವ ಸಂಗ್ರಾಮ!" ಸರಿಯಿರ. ಬಹುದು. ನನಗಂತೂ ಈಗ ಸಂಗ್ರಾಮದ ಕನಸು ಕೂಡ ಕಾಣದು. ಸಂಸಾರದಲ್ಲಿ ಸೊಗಸಿದ ನರ್ವಜ್ಞ ಎಂದಂತೆ.. "ಬೆಚ್ಚಗೆ ಮನೆಯಿರಲು (ಹೌದು, ಬಾಡಿಗೆ ಕೊಡುತ್ತಿದ್ದರೂ ಈ ಮನೆಯೊರಕೆಸಿಕೊಳ್ಳಲು ಸಾಕೇ ಸಾಕಾಯಿತು ನನಗೆ ಆಗ!) ಬೆಚ್ಚಕ್ಕೆ ಹಣವಿರಲು (ಧಾರಾಳವಾಗಿ ಅಲ್ಲವಾದರೂ ಸಾಕಷ್ಟಿದೆ ಎನ್ನಿ") ಚಿಕ್ಕ ಹೆಂಡತಿಯಿರಲು!!! ಸಗ್ಗಕ್ಕೆ.....! ಏಕೆ? ನಿಮಗೂ ಸಹ 'ಕೆಜ್ಜೆ ಹಾಕಯ್ಯ!' ಎನ್ನುವಿರಷ್ಟೆ ?


ದಿ ವಸಂತ ಇನ್ಶುರನ್ಸ್ ಕಂಪನಿ, ಲಿಮಿಟೆಡ್

ದಿವಾಸ್ ಬಹಾದ್ದೂರ್ ಹೀರಾಲಾಲ್ ಕಾಜಿ: ಆಗ್ರಸ್ಥರು

ಸಹಕಾರಿ ಸಂಸ್ಥೆಯ ಸಭಾಸದರಿಗೆ ಪಸ್ತಿಯಲ್ಲಿ ೭॥ ಮತ್ತು ೫॥ ಟಕ್ಕೆ ಸೂಟ್ ಕೊಡಲಾಗುವುದು.

೧೯೪೫ರಲ್ಲಿ ಪೂರ್ಣ ಮಾಡಲಾದ ವಿಮೆ .... ೪೫,೫೦,೦೦೦
ಈ ವರೆಗಿನ ವಿಮೆ .... .... ೧,೦೦,೦೦,೦೦೦
} ಕ್ಕೆ ಮಿಕ್ಕಿದೆ.

ನಾವೀನ್ಯ ಪೂರ್ಣ ಮತ್ತು ಲೋಕಪ್ರಿಯ ವಿಮಾ ಯೋಜನೆಗಳು.

ಪ್ರಭು ಎಂಡ್ ಸನ್ಸ್
ಚೀಫ್ ಏಜಂಟ್
೩೬ — ಆ ಸರ್ ಫಿರೋಜಶಹಾ ಮೇಧಾ ರೋಡ್,
ಕೋಟೆ, ಮುಂಬಯಿ ೧

ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ ದಾರಾಳ ವೇತನದ ಮೇಲೂ, ಯೋಗ್ಯ ಕಮಿಶನ್ನಿನ ಮೇಲೂ, ಆರ್ಗನಾಯಜರರೂ ಏಜಂಟರೂ ಬೇಕಾಗಿದ್ದಾರೆ. ಸುಶಿಕ್ಷಿತ-ಅನುಭವಿಕ ಸದ್ಗೃಹಸ್ಥರು ಮೇಲಿನ ವಿಳಾಸಕ್ಕೆ ಬರೆದುಕೊಳ್ಳುವುದು.

ಶತವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ
ಕಳೆಯುವುದು
ವಿಳಾಸ:—
ಗಣೇಶ ರಾಮಚಂದ್ರ ಕರ್ಕ
ಮತ್ತು ಕಂಪನಿ
ಗಿರಗಾಂವ, ಮುಂಬಯಿ.

# ಸಾಹಿತ್ಯಿಕ ಮತ್ತು ಶೀಲ

ಪ್ರೊ. ವಿ ಎಂ. ಇನಾಮದಾರ ಎಂ. ಎ., ಮುಂಬಯಿ.

★

**ನಾವು ಆಡುವ ಪ್ರತಿಯೊಂದು ಶಬ್ದದ ಹಿಂದೆ ನಾವು ಮಾಡುವ ಪ್ರತಿಯೊಂದು ಕೃತಿಯ ಹಿಂದೆ, ನಮಗೆ ಸಂಪೂರ್ಣವಾಗಿ ತಿಳಿಯಲಸಾಧ್ಯವಾದ ವಿಸ್ತೃತ ಮಾನಸಿಕ ಪರಂಪರೆಯೊಂದು ಇದ್ದೇ ಇರುವುದಲ್ಲವೆ ?**

★

ಏಪ್ರಿಲ್ ೯ನೆಯ ದಿನ ಧಾರವಾಡದ 'ಸಾಹಿತ್ಯ ಮುಂಟಪ'ದಲ್ಲಿ ಒಳ್ಳೆಯದಾದ ಚರ್ಚೆಯೊಂದು ನಡೆಯಿತು. 'ಸಾಹಿತ್ಯಿಕ ಮತ್ತು ಶೀಲ' ಎಂಬುದೇ ಚರ್ಚೆಗೆ ವಿಷಯ. ಪ್ರೊಫೆಸರು, ವಕೀಲರಾದ ಪ್ರೊ. ಜಿ. ಕುಲಕರ್ಣಿಯವರು, ಜಾಗೀರದಾರ, ಮಾಳಾದ ಪ್ರೊ. ಜಿ. ಕುಲಕರ್ಣಿಯವರು, ಜಾಗೀರದಾರ, ಮಾಳವಾಡ, ಧಾರವಾಡ, ಇನಾಮದಾರ ಅಲ್ಲದೆ ಶ್ರೀ. ನೆಗಳೂರ, ಶ್ರೀ. ಕೃಷ್ಣಶರ್ಮ ಬೆಟಗೇರಿಯವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಅಂದಿನ ಚರ್ಚೆ ಯಾವುದೇ ಒಂದು ಸಿದ್ಧಾಂತವನ್ನು ಹುಟ್ಟಿತೆಂದು ಹೇಳಲಾಗುವುದಿಲ್ಲ. ಇಲ್ಲಿ ನಾನು ಬರೆಯುತ್ತಿರುವುದು ಆ ಚರ್ಚೆಯ ವರದಿಯನ್ನಲ್ಲ. ಅದೇ ವಿಷಯಕ್ಕೆ ಸಂಬಂಧಿಸಿದ ಕೆಲವು ವಿಚಾರಗಳನ್ನು.

'ಒಬ್ಬ ಸಾಹಿತ್ಯಿಕನ ಶೀಲಕ್ಕೂ ಅವನ ಕೃತಿಗೂ ಸಂಬಂಧವಿರುತ್ತದೆಯೋ ?' ಎಂಬುದೇ ಈ ಚರ್ಚೆಗೆ ಜೀವಾಳದ ವಿಷಯ. 'ಇದೆ, ಇದ್ದೇ ತೀರಬೇಕು,' ಎಂದು ಕೆಲವರ ಅಭಿಪ್ರಾಯವಾದರೆ, 'ಇರುವುದಿಲ್ಲ, ಇರಬೇಕಾಗಿಲ್ಲ' ಎಂದು ಇನ್ನು ಕೆಲವರ ಅಭಿಮತ. - 'ಕೆಲವು ಸಾರೆ ಇರುವುದುಂಟು, ಇನ್ನು ಕೆಲವುಸಾರೆ ಇರುವುದಿಲ್ಲ' ಎಂದು ಹೇಳಿ ಮಧ್ಯಮಮಾರ್ಗವನ್ನು ಹಿಡಿದುಹೋದರೆ, ಮೂಲಪ್ರಶ್ನೆಗೆ ಉತ್ತರ ಹೇಳಿದಂತಾಗಲಿಲ್ಲ. ಅಲ್ಲದೆ ಈ ವಿಷಯದಲ್ಲಿ ಮಧ್ಯಮಮಾರ್ಗಕ್ಕೆ ಅಸ್ಪದವೇ ಇಲ್ಲ. ಸಾಹಿತ್ಯನಿರ್ಮಿತಿಯಾದರೂ ಮನುಷ್ಯನ ಇನ್ನಾವ ಕೃತಿಯಂತೆಯೆ ಅವನ ಶೀಲವನ್ನವಲಂಬಿಸಲೇ ಬೇಕು. ಎಷ್ಟರಮಟ್ಟಿಗೆ ಒಬ್ಬ ಮನುಷ್ಯನ ಮನಸ್ಸಿನ ಒಲವು, ಮಾತಿನ ಬಗೆ, ಕೃತಿಯ ರೀತಿ ಅವನ ಶೀಲವನ್ನು ಬಿಟ್ಟು ಬೀರೆಯಾಗಿರಲಾರವೊ, ಅಷ್ಟರಮಟ್ಟಿಗೆ ಅವನ ಸಾಹಿತ್ಯನಿರ್ಮಿತಿಯಾದರೂ ಅವನ ಶೀಲವಿಂದ ಮಾರ್ಪಾಡುಹೊಂದದೆ ಇರಲಾರದು. ಮನುಷ್ಯ ತನ್ನ ವ್ಯಕ್ತಿತ್ವವನ್ನು ತಪ್ಪಿಸಲಾರ. ಅವನಿಗೆ ತಿಳಿದರೂ ಸರಿ, ತಿಳಿಯದಿದ್ದರೂ ಸರಿ, ಅವನು ತನ್ನ ವ್ಯಕ್ತಿತ್ವದ ದಾಸಾನುದಾಸ. ಅದನ್ನು ಮೀರುವುದು ಮನುಷ್ಯಮಾತ್ರನಿಗೆ ಸಾಧ್ಯವೆಂದು ತೋರುವುದಿಲ್ಲ. ಈ ಮಾತು ನಿಜವಾದರೆ, ಮನುಷ್ಯ ತನ್ನ ಶೀಲವನ್ನು ಮೀರಿ, ಅದನ್ನು ಬದಿಗಿರಿಸಿ, ಬೇರೆಯಾದ ರೀತಿಯಲ್ಲಿಯೆ ತನ್ನ ಮನಸ್ಸನ್ನು ಹಿಡಿಸುತ್ತಾನೆ ಎನ್ನಬೇಕು. ಇದು ಸಾಧ್ಯವಿದ್ದರೆ ತನ್ನ ಶೀಲದಿಂದ ಮಾರ್ಪಾಡುಹೊಂದದ ಕೃತಿಯೊಂದನ್ನು ಸಾಹಿತಿ ನಿರ್ಮಿಸಬಹುದು. ಆದರೆ ಮನಃಶಾಸ್ತ್ರ ಇದು ಸಾಧ್ಯವೆಂದು ಹೇಳುವುದಿಲ್ಲ.

ಮನುಷ್ಯನ ಮನಸ್ಸಿನ ಘಟನೆ ಯಾವ ತರದ್ದು, ಅದು ಕೆಲಸಮಾಡುವ ರೀತಿಯಾವುದು ?— ಎಂಬಿಲ್ಲ ಶಾಸ್ತ್ರೀಯ ವಿಚಾರಗಳನ್ನು ನಾವು ಇಲ್ಲಿ ಎತ್ತುವುದು ಅವಶ್ಯವಿಲ್ಲ. ಆದರೂ ಆಧುನಿಕ ಮಾನಸಶಾಸ್ತ್ರ ಹೇಳುವ ಒಂದು ಮಾತನ್ನು ನಾವು ಗಮನಿಸಬೇಕು. ಪದರು-ಪದರಾಗಿದ್ದ ಮನಸ್ಸು ಮನುಷ್ಯನಿಗೆ ತಿಳಿಯದೆಯೆ ನಂತತವಾಗಿ ಸಂಸ್ಕಾರಗಳನ್ನು ಸಂಗ್ರಹಿಸುತ್ತಿರುತ್ತದೆ. ಮನುಷ್ಯನ ಒಳಮನಸ್ಸೆಂದರೆ ಒಂದು ದೊಡ್ಡದಾದ ಕೊಶಾಗಾರದಂತಿದೆ. ಯಾವ ಚಿಕ್ಕ ವುಟ್ಟ ವಿಷಯವೂ ಇಲ್ಲಿ ಆಸರೆಯನ್ನು ಪಡೆಯುವುದುಂಟು. ಪ್ರಸಂಗ ಬಂದಾಗ ಎಂದರೆ ಹೊರಗಿನಿಂದಾಗಲಿ ಒಳಗಿನಿಂದಾಗಲಿ. ಯಾವುದಾದರೊಂದು ಪ್ರೇರಣೆಯಾಗಲಿ ಚಾಲನೆಯಾಗಲಿ ಸಿಕ್ಕಾಗ, ವಿಷಯುಕ್ತಿ ತಕ್ಕಂತೆ ಈ ಒಳಮನಸ್ಸಿನಲ್ಲಿ ಹುದುಗಿಕೊಂಡಿದ್ದ ನೆನಪುಗಳು, ಸಂಸ್ಕಾರಗಳು ಮೇಲಕ್ಕೆ ಬಂದು, ಒಂದು ವಿಶಿಷ್ಟವಾದ ಸಂನಿವೇಶಕ್ಕೆ ಪೂರ್ವಾಪರವನ್ನು ಬದಗಿಸಿಕೊಡುತ್ತವೆ. ಈ ಮಾತನ್ನು ಹೇಳಿದ ಕೂಡಲೆ, ವಿಷಯ ಇಷ್ಟು ಸಹಜಗ್ರಾಹ್ಯವೆಂದು ಬಗೆಯಕೂಡದು. ಈ ಸಂಸ್ಕಾರಗಳ ರೀತಿಯಲ್ಲಿ ಪೂರ್ವದ ಸುಕೃತ-ದುಷ್ಕೃತಗಳ ಪರಿಣಾಮಗಳಿರಬಹುದು; ಸುತ್ತಲಿನ ಪರಿಸರದ ಪಡಿನೆಳಲುಗಳೂ ಇರಬಹುದು; ಒಂದು ವಿಕೃತಮನಸ್ಸಿನ ವಿಪರೀತಕ್ರಮವೂ ಇರಬಹುದು. ಏನಿದ್ದರೂ ಒಬ್ಬ ಮನುಷ್ಯ ಒಂದು ವಿಚಾರವನ್ನು ಶಬ್ದರೂಪದಲ್ಲಿ ಹೇಳಬಯಸುವಾಗ, ಅವನ ಮನಸ್ಸಿನ ಪರದೆಯ ಹಿಂದೆ ಹುದುಗಿಕೊಂಡ ಸಂಸ್ಕಾರವೈವಿಧ್ಯವೆಲ್ಲವೂ ಜಾಗೃತವಾಗಿ, ಹೇಳಲು ಯತ್ನಿಸುತ್ತಿದ್ದ ವಿಚಾರಕ್ಕೊಂದು ಬಗೆಯ ವಿಶಿಷ್ಟ ಸ್ವರೂಪವನ್ನು ಕೊಡುವುದಲ್ಲದೆ, ಆ ವಿಚಾರವು ತಾಳಲು ಯತ್ನಿಸಿದ ಶಬ್ದಸ್ವರೂಪವನ್ನು ಕೂಡ ಬದಲಾಯಿಸುವುದು ಸಾಧ್ಯ. ಸಾಮಾನ್ಯವಾದ ಉದಾಹರಣೆಗಳಿಂದ ಈ ವಿಷಯವನ್ನು ತಿಳಿಯಬಹುದು: ಯಾವ ದೀರ್ಘ ತಾತ್ವಿಕ ವಿಚಾರಗಳನ್ನು ನಾವು ಮಾಡದಿದ್ದರೂ, ಸುಖ-ದುಃಖಗಳ ಯೋಚನೆಯನ್ನು, ಕಲ್ಪನೆಯನ್ನು ಒಂದಿಲ್ಲೊಂದು ಬಗೆಯಲ್ಲಿ ಮಾಡಿಕೊಂಡಿರುತ್ತೇವೆ. ಒಂದರ್ಧ ಕನಸನ್ನೋ ಒಂದರ್ಧ ನನಸನ್ನೋ ಮನಸ್ಸಿನೆದುರಿಗೆ ಇಟ್ಟಿರುತ್ತೇವೆ. ಸುಖವೆಂದಾಗ ಒಂದು ತೆರದ

ಚಿತ್ರ, ದುಃಖವೆಂದಾಗ ಇನ್ನೊಂದು ತೆರದ ಚಿತ್ರ ನಮ್ಮ ಕಣ್ಣೆದುರು ಕುಣಿಯುತ್ತವೆ. ನಾವು ಅದೇ ವಿಷಯವಿವನ್ನು ಕುರಿತು ಮಾತನಾಡುವಾಗ, ನಾವು ಉಪಯೋಗಿಸಬಹುದಾದ ಭಾಷೆಯಾದರೂ ನಮ್ಮ ಮನಸ್ಸಿನೆದುರು ಕುಣಿಯುವ ಈ ಚಿತ್ರಗಳನ್ನು ಅವಲಂಬಿಸಿಯೆ ಮುಂದೆ ಸಾಗುತ್ತದೆ. ನಮ್ಮ ಉಪಮೆ-ಉತ್ಪ್ರೇಕ್ಷೆಗಳೆಲ್ಲವೂ ಈ ಕಲ್ಪನೆಯ ಚಿತ್ರಗಳಿಗೆ ಹೊಂದಿ ಕೊಂಡೇ ರೂಪುಗೊಳ್ಳುತ್ತವೆ. ಎಂದಮೇಲೆ ನಮ್ಮ ಪ್ರತಿಯೊಂದು ವಿಚಾರ, ಪ್ರತಿಯೊಂದು ಭಾವನೆಯ ತರಂಗ, ಪ್ರತಿಯೊಂದು ಕೃತಿ, ನಮ್ಮ ಒಳಮನಸ್ಸಿನ ಪರಿಪಾಕವನ್ನವಲಂಬಿಸಲೇ ಬೇಕಲ್ಲವೆ? ಅದನ್ನು ತಪ್ಪಿಸುವುದು ಹೇಗೆಸಾಧ್ಯ? ನಾವು ಆಡುವ ಪ್ರತಿಯೊಂದು ಶಬ್ದದ ಹಿಂದೆ, ನಾವು ಮಾಡುವ ಪ್ರತಿಯೊಂದು ಕೃತಿಯ ಹಿಂದೆ, ನಮಗೆ ಸಂಪೂರ್ಣವಾಗಿ ತಿಳಿಯಲಸಾಧ್ಯವಾದ ವಿಸ್ತೃತ ಮಾನಸಿಕ ಪರಂಪರೆಯೊಂದು ಇದ್ದೇ ತೀರಬೇಕೆಂದ ಮೇಲೆ, ನಮ್ಮ ಶೀಲಕ್ಕೂ ನಮ್ಮ ಕೃತಿಗೂ ಸಂಬಂಧವಿರುವುದಿಲ್ಲವೆಂದು ಹೇಗೆ ಹೇಳಲಾದೀತು?

ಇದಕ್ಕೆ ವಿರುದ್ಧವಾಗಿ ವಾದಹೂಡುವವರು— ಸಾಹಿತಿಯ ಶೀಲಕ್ಕೂ ಅವನ ಕೃತಿಗೂ ಸಂಬಂಧವಿಡುವುದಿಲ್ಲವೆಂದು ಸಾಧಿಸುವವರು— ಹೆಚ್ಚು ಕಡಿಮೆ "ನಾನೃಷಿಃ ಕುರುತೇ ಕಾವ್ಯಂ," ಋಷಿಯಾಗಿರದವ ಕಾವ್ಯನಿರ್ಮಿತಿಯನ್ನು ಮಾಡಲಾರ— ಎಂಬ ಮಾತಿಗೆ ಮೊರೆಯೊಗುವುದುಂಟು. 'ಸಾಹಿತಿ. ರಸಋಷಿ. ತನ್ನ ಕೃತಿ-ನಿರ್ಮಿತಿಯ ಕ್ಷಣದಲ್ಲಿ, ಸಮಯದಲ್ಲಿ, ಆತ ಋಷಿಗೆ ಸಮಾನ. ನಿರ್ಮಾಣದ ಒತ್ತಾಯಕ್ಕೆ ಒಳಪಟ್ಟಾಗ ಅವನು ತನ್ನ ವ್ಯಕ್ತಿವಿಶಿಷ್ಟವಾದ ವಿಕಾರ-ವಿಪರೀತಗಳನ್ನು ವಿಾರಿ ಮೆಟ್ಟಿನಿಲ್ಲುವಂತಾಗಿರುತ್ತಾನೆ. ತನ್ನ ವ್ಯಕ್ತಿತ್ವವನ್ನು ಎಲ್ಲಿಯೋ ದೂರದಲ್ಲಿ ಬಿಟ್ಟು, ಅಸಾಮಾನ್ಯವಾದ ಬೇರೆಯಾದ ಒಂದು ವ್ಯಕ್ತಿತ್ವದ ಶಕ್ತಿಯು ಅಂಕಿತಕ್ಕೆ ಒಳಗಾಗಿರುತ್ತಾನೆ. ಆದುದರಿಂದ ಸಾಮಾನ್ಯಜೀವನದಲ್ಲಿಯ ಅವನ ಶೀಲವು ನಿರ್ಮಿತಿಯ ಅಸಾಮಾನ್ಯಸಂದರ್ಭದಲ್ಲಿ ತನ್ನ ಪರಿಣಾಮವನ್ನು ಮಾಡುವುದು ಸಾಧ್ಯವಿಲ್ಲ'....ಇದು ಇವರ ವಾದ. ಇದಕ್ಕೆ ಸಮರ್ಥನೆಯೆಂದು ಇನ್ನು ಎರಡು ಮಾತುಗಳನ್ನು ಹೇಳುವುದುಂಟು: ಮೊದಲನೆಯದಾಗಿ ಸಾಧುಶೀಲರಲ್ಲದ ಎಷ್ಟೋ ಜನ ಸಾಹಿತಿಗಳು ಉತ್ತಮ ಕೃತಿಗಳನ್ನು ನಿರ್ಮಿಸಿದ ಉದಾಹರಣೆಗಳಿವೆ ಎಂಬುದು. ಎರಡನೆಯದಾಗಿ ಕೆಲವೊಂದು ಸಾಹಿತಿಗಳಲ್ಲಿ ಇಂದ್ರಿಯಾತೀತವಾದ ದೃಷ್ಟಿಯಿರುವುದು ಸಾಧ್ಯವಿದ್ದುದರಿಂದ, ಸಾಮಾನ್ಯವಾಗಿ ಮನಸ್ಸಿಗೆ ಅಂಟಿಕೊಂಡಿರಬಹುದಾದ ವಿಕಾರಗಳ ಸಂಕೋಲೆಗಳು ಅದನ್ನು ಬಂಧಿಸಲಾರವು ಎಂಬುದು. ಮೇಲೆ ಪ್ರತಿಪಾದಿಸಲಾಗಿದ್ದ ಸಿದ್ಧಾಂತವು ಸರಿಯಾಗಬೇಕಾದರೆ, ಈ ಮೂರೂ ಮಾತುಗಳಿಗೆ ಸಮಾಧಾನ ಹೇಳಬೇಕು. ಸಮಾಧಾನ ಹೇಳುವುದು ಸಾಧ್ಯವಿದೆ.

'ಕವಿ ರಸಋಷಿ' ಎಂಬ ಮಾತನ್ನು ಒಪ್ಪೋಣ. 'ನಾನೃಷಿಃ ಕುರುತೇ ಕಾವ್ಯಂ' ಎಂಬ ಮಾತನ್ನೂ ಒಪ್ಪೋಣ. ಆದರೆ ಈ ಋಷಿತ್ವ ಕವಿಗೆ ತ್ರಿಕಾಲದಲ್ಲಿಯೂ ಸಾಧ್ಯ ಎಂಬ ಮಾತನ್ನು ಮಾತ್ರ ಯಾರೂ ಒಪ್ಪಲಾರರು. ಕವಿಗೆ 'ಋಷಿ' ಪದವನ್ನು ಕೊಟ್ಟಾಗ, ಋಷಿಯಾಗಿರದವ ಕಾವ್ಯವನ್ನು ನಿರ್ಮಿಸಲಾರ ಎಂದು ಹೇಳಿದಾಗ, ಕವಿಗೆ ಅವನ ಸಾಮಾನ್ಯ ಬದುಕಿನಲ್ಲಿ ಯಾರೂ ಋಷಿಯ ಪಟ್ಟವನ್ನು ಕಟ್ಟಲಾರರು, ಕಟ್ಟಕೂಡದು. ಈ ಮಾತು ಕವಿಯು ಕಾರ್ಯಪ್ರವೃತ್ತನಾದಾಗಿನ, ನಿರ್ಮಿತಿಯ ಒತ್ತಾಯಕ್ಕೆ ಮಣಿದಾಗಿನ ಅವನ ಮನಃಸ್ಥಿತಿಯ ಒಂದು ಬಗೆಯ ವರ್ಣನೆ ಮಾತ್ರ ಎಂಬುದನ್ನು ಯಾರೂ ಮರೆಯಕೂಡದು. ಆ ಕ್ಷಣಕ್ಕೆ ಕವಿಯ ಜೀತನ ಬಾಹ್ಯಾತೀತವಾಗಿರುತ್ತದೆ ಎಂಬುದಕ್ಕೊಂದು ನಿದರ್ಶನ ಈ ಮಾತು. ಮೈಮರೆತು ಇನಿಯಳಿಗೊಂದು ದೀರ್ಘವಾದ ಪತ್ರವನ್ನು ಬರೆಯುತ್ತಿರುವಾಗಿನ ರಸಿಕನ ಮನಃಸ್ಥಿತಿಯಾದರೂ ಮೇಲೆ ಹೇಳಿದ ಋಷಿತ್ವಕ್ಕಿಂತ ಬೇರೆಯಾಗಿರುವುದಿಲ್ಲ. ಹೊರಜಗತ್ತನ್ನು ಮರೆತು ವಿಷಯದಲ್ಲಿ ತಾದಾತ್ಮ್ಯ ಹೊಂದಿದ ಮನಸ್ಸಿನ ಮಾತೇ ಮೇಲಿನ ವಾಕ್ಯದಲ್ಲಿ ನಿರೂಪಿತವಾಗಿದೆ. ಹೀಗೆಂದ ಮೇಲೆ ಮನಸ್ಸು ಹೊರಜಗತ್ತಿನಿಂದ ದೂರವಾಗಿದ್ದರೂ ತನ್ನಿಂದ ದೂರವಾಗಿರುವುದಿಲ್ಲ; ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡಿರುವುದಿಲ್ಲ; ತನ್ನ ಇತಿಮಿತಿಗಳಿಂದ ಪಾರಾಗಿರುವುದಿಲ್ಲ. ಉದ್ರೇಕದ ಮೂಲಕ ಜೀತನ ಹೆಚ್ಚು ಹರಿತಾಗಿದ್ದಿರಬಹುದು. ಹೆಚ್ಚಿನ ಶಕ್ತಿಯನ್ನು ಪಡೆದಿರಬಹುದು ಆ ಕ್ಷಣದಲ್ಲಿ. ಆದರೆ ಹತ್ತು ಸಾವಿರ ಸಂಸ್ಕಾರಗಳನ್ನು ಪಡೆದು ಬೆಳೆದು ನಿಂತ ಆ ಜೀತನ, ತನ್ನ ಹಿಂದಿನ ಅನುಭವದ ಇತಿಹಾಸವನ್ನು ಅಲ್ಲಗಳೆಯಲಾರದು. ತನ್ನ ಬದುಕಿನ ಲಕ್ಷಾನುಲಕ್ಷ ಕ್ಷಣಗಳ ಅನುಭವಗಳಲ್ಲಿ ಹರಿದು ಬಣ್ಣಗೊಂಡಿರುವ ಮನಸ್ಸು, ಆ ಕ್ಷಣಕ್ಕೆ ತನ್ನ ಯಾವತ್ತೂ ಶಕ್ತಿಗಳನ್ನು ಕೇಂದ್ರೀಕರಿಸಿ ಕಾರ್ಯಪ್ರವೃತ್ತವಾಗಿರಬಹುದು. ಆದರೆ ಅದು ತನ್ನಿಂದ ಬೇರೆಯಾಗುವುದಿಲ್ಲ. ಸಂಸ್ಕಾರಗಳ ಫಲವಾಗಿ ಗಳಿಸಿದ ತನ್ನ ಶಕ್ತಿಯ ಮಿತಿಯನ್ನು ಮೀರುವುದು ಸಾಧ್ಯವಿಲ್ಲ. ಎಂದಮೇಲೆ?

ಒಬ್ಬ ಕವಿಯ ಮನಸ್ಸಿನ ಶಕ್ತಿ, ಅದು ಪಡೆದ ಅನುಭವ ಹೊಂದಿದ ಸಂಸ್ಕಾರಗಳಿಗೆ ಸರಿಯಾಗಿ ಬೆಳೆದು ನಿಲ್ಲುವುದು. ಎಂದ ಮೇಲೆ, ಸಾಧುಶೀಲನಲ್ಲದ ಸಾಹಿತಿಯ ಜೀವನದಲ್ಲಿಯ ಶೀಲಬಾಹಿರ ಕೃತ್ಯಗಳು ಅವನ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡಲೇಬೇಕಾದುದರಿಂದ, ಆ ಮಟ್ಟಿಗೆ ಆಯಾ ಅನುಭವಗಳು ಆ ಮನಸ್ಸಿನ ಮುನ್ನೊಟವನ್ನೂ, ಸಾಮರ್ಥ್ಯವನ್ನೂ ಕುಗ್ಗಿಸಬೇಕು. ಇಂಥವನೂ ಮಹಾಕೃತಿಗಳನ್ನು ನಿರ್ಮಿಸಿದ ಉದಾಹರಣೆಗಳಿವೆ ಎಂದು ಹೇಳಿದಾಗ, ನಾವು ಒಂದೆರಡು ಮಾತುಗಳನ್ನು ಮರೆತುಬಿಡುತ್ತೇವೆ. ಸಾಹಿತ್ಯ ಕೃತಿಯೊಂದನ್ನು ಭಾವನೆಯು ಇಲ್ಲವೆ ಉದ್ದೇಶದ ಅಳತಿಗೋಲಿನಿಂದ ನಾವು ಅಳೆಯುತ್ತೇವೆ. ಆದರೆ ಅದೇ ಕೃತಿಯನ್ನು

ನಿರ್ಮಿಸಿದ ಸಾಹಿತಿಯ ಬದುಕಿನಲ್ಲಿಯ ಕೃತ್ಯವನ್ನು, ಸಾಮಾಜಿಕ ದೃಷ್ಟಿಯಿಂದ, ಸಾಮಾನ್ಯರಿಗೆ ಒಪ್ಪಿತವೆಂದಿಟ್ಟು-ಕೊಂಡ ಬುದ್ಧಿಯ ಒಂದು ಅಳತೆಯಿಂದ ಅಳೆದು ನೋಡುತ್ತೇವೆ. ಸೋದರಸ್ತ್ರೀ-ಗಮನದಂಥ ಅಸಹ್ಯವಾದ ಕೆಲಸವು ಕವಿಯೊಬ್ಬನಲ್ಲಿ ಅಸಾಮಾನ್ಯವಾದ ಕಾವ್ಯ ಸ್ಫೂರ್ತಿಗೆ ಕಾರಣವಾಯಿತು. ಆ ಸ್ತ್ರೀಯ ಬಗೆಯಲ್ಲಿ ಕವಿಯು ತನ್ನ ಭಾವನೆಯ ಪಾರವಶ್ಯದಲ್ಲಿ ಬರೆದ ಕವನಗಳು ಕಲ್ಪನೆಯ ವಿಲಾಸಕ್ಕಾಗಲಿ, ಭಾವಗಳ ಉನ್ಮಾದಕ್ಕಾಗಲಿ ಸಾಕ್ಷಿಯಾಗಬಹುದು. ಆದರೆ ಉದ್ದಿಷ್ಟದ ದೃಷ್ಟಿಯಿಂದ ನೋಡಿದಾಗ, ನಾಲ್ಕುಜನ ಓದುಗರ ಮನಸ್ಸಿನ ಮೇಲೆ ಆ ಕವನ ಯಾವ ರೀತಿಯ ಪರಿಣಾಮ ಮಾಡಬಹುದೆಂಬುದನ್ನು ನೆನೆದಾಗ, ಎಂದರೆ ಸಾಮಾಜಿಕ ದೃಷ್ಟಿಯಿಂದ ಆದನ್ನು ಪರೀಕ್ಷಿಸಿದಾಗ, ಆ ಕೃತಿಯು ಮಹಾಕೃತಿಯಾಗಿ ಉಳಿಯುವುದು ಕಷ್ಟವೆಂದು ತೋರುತ್ತದೆ. ಯಾವ ಕೃತಿಯೂ ಕಾವ್ಯನಿರ್ಮಿತಿಗೆ ಕಾರಣವಾಗಬಹುದು. ಸಾಹಿತ್ಯಕ್ಕೂ ಜೀವನಕ್ಕೂ ಕೇವಲ ಇಂತಹ ಸಂದರ್ಭದಲ್ಲಿ ಸ್ಫೂರ್ತಿಕೊಡುವ ಸಂಬಂಧ ಮಾತ್ರ ಇರುವುದಿಲ್ಲ. ಇದೇ ಪ್ರಶ್ನೆಯನ್ನು ಇನ್ನೊಂದು ದೃಷ್ಟಿಯಿಂದ ನೋಡುವುದು ಸಾಧ್ಯವಿದೆ: ಯಾವುದು ಸಾಮಾಜಿಕನ ದೃಷ್ಟಿಯಲ್ಲಿ ಅಶ್ಲೀಲವೆನಿಸಬಹುದೋ ಅದನ್ನೇ ಸಾಹಿತಿಯೊಬ್ಬನು ಬೇರೊಂದು ಉದಾತ್ತವಾದ ದೃಷ್ಟಿಯನ್ನಿಟ್ಟುಕೊಂಡು ನೋಡುತ್ತಿರಬಹುದು. ಆದರೆ ಇದು ಸಾಮಾನ್ಯವಾಗಿ ಅಸಾಧ್ಯ. ಹೆಚ್ಚು ಕಡಿಮೆ ಇದೊಂದು ನೆಪಮಾತ್ರ. ಇನ್ನೊಬ್ಬ ಕವಿಯು ಸ್ತ್ರೀಲೋಲುಪನಿದ್ದಾನೆಂದು ಬಗೆಯುವಾ. ಸಾಮಾಜಿಕ ದೃಷ್ಟಿಯಿಂದ ಅವನ ಶೀಲ ಸಾಧುವಲ್ಲದ್ದು. ಈ ಶೀಲ ಅವನ ಕೃತಿಗಳ ಮೇಲೆ ಯಾವ ತರದ ಪರಿಣಾಮವನ್ನುಂಟುಮಾಡಬಹುದು? ಮೊದಲನೆಯದಾಗಿ ಅವನು ಸ್ತ್ರೀಜಾತಿಯ ವಿಷಯದಲ್ಲಿ ಇಟ್ಟುಕೊಂಡ ಅಭಿಪ್ರಾಯ; ಎರಡನೆಯದಾಗಿ ತನ್ನ ಲೋಲುಪತೆಯಿಂದ ಅತ ಪಡೆದ ಅನುಭವ ಅತನ ಮನಸ್ಸನ್ನು ಯಾವ ರೀತಿ ಆಲುಗಾಡಿಸಿದೆ; ಮೂರನೆಯದಾಗಿ ಆ ಸ್ತ್ರೀಯರು ಈತನಿಗೆ ಮಣಿದು ಮನಸೋತಿರಬಹುದಾದ ರೀತಿ. ಹೀಗೆ ನೂರಾರು ಸಂದರ್ಭಗಳು ಸೇರಿ, ಕವಿಯ ಮನಸ್ಥಿತಿಯನ್ನು ಸಿದ್ಧವಾಗಿಸುವುದುಂಟು. ಅವನ ಮನಸ್ಸು ಇಂಥ ಅನುಭವವನ್ನು ಪಡೆಯುತ್ತಿದ್ದಾಗ, ಸಾಮಾನ್ಯ ಮನುಷ್ಯನ ಮನಸ್ಸಿಗಿಂತಲೂ ಬೇರೆಯಾದ ಒಂದು ರೀತಿಯಲ್ಲಿ ಆ ಪರಿಸ್ಥಿತಿಗೆ ದನಿಗೊಡುತ್ತಿದ್ದರೆ ಮಾತ್ರ ಉದ್ದಿಷ್ಟ-ಪೂರ್ಣವಾದ ಯಾವುದಾದರೊಂದು ಅನುಭವವು ಅವನಿಗೆ ಸಾಧ್ಯವಾದೀತು. ಆದರೆ ನೂರರಲ್ಲಿ ತೊಂಬತ್ತೊಂಬತ್ತು ಸಾಲು ಇದು ಅಸಾಧ್ಯ. ಇಂಥ ಪರಿಸ್ಥಿತಿಯಲ್ಲಿ ಕವಿಯ ಅಸಾಮಾನ್ಯ ಅನುಭವವು ಶೃಂಗಾರವನ್ನು ಮನಸೆಳೆಯುವ ರೀತಿಯಲ್ಲಿ ಹೇಳುವ ಸಾಮರ್ಥ್ಯವನ್ನು ಒಂದು ವೇಳೆ ಪಡೆದೀತು. ಆದರೆ ಯಾವ ದೊಡ್ಡದಾದ ಅರ್ಥವನ್ನೂ ಕಾಣಲಾರದು. ರತಿಯ ವಿಲಾಸವನ್ನು ಅದು ಕಾಣಬಹುದು; ಆದರೆ ಅದರ ಅರ್ಥವನ್ನು ಕಂಡೀತೆಂದು ಹೇಳಲಾಗುವುದಿಲ್ಲ. ಇಂಥ ಸಂದರ್ಭದಲ್ಲಿ ಕಾವ್ಯ ಕೆಲವು ಸಾರೆ ಉದ್ದಿಷ್ಟದ ಮೂಲಕ ಉದಾತ್ತವಾಗಬಹುದು; ಆದರೆ ಇದು ವಿರಳವೆಂದೇ ಹೇಳಬೇಕು. ಅದರಂತೆಯೆ ಇಂದ್ರಿಯಾತೀತ ದೃಷ್ಟಿಯು ಮಾತು. ಶೀಲಭ್ರಷ್ಟನಿಗೆ ಅದು ಸಾಧ್ಯವೇ ಇಲ್ಲವೆಂಬುದನ್ನು ಬೇರೆಯಾಗಿ ಹೇಳಬೇಕಿಲ್ಲ. ಅದು ಒಂದಿಲ್ಲೊಂದು ರೀತಿಯ ಸಾಧನ ಸಂಯಮಗಳ ಫಲ. ಸಾಮಾನ್ಯ ಸಾಮಾಜಿಕ ಜೀವನದಲ್ಲಿಯೂ ಸಂಯಮವನ್ನರಿಯದವನಿಗೆ ಯಾವ ದಿವ್ಯದೃಷ್ಟಿ ದೊರಕೀತು? ಪ್ರತ್ಯಕ್ಷ ಜ್ಞಾನವಾಗಲಿ, ಅನುಭಾವದ ಅರಿವಾಗಲಿ ಇದ್ದವ ಹೇಳಿಕೊಳ್ಳುವುದಿಲ್ಲ; ಅಲ್ಲದೆ ಸಾಮಾಜಿಕ ಜೀವನದಲ್ಲಿ ನೀತಿಬಾಹಿರ ವರ್ತನೆ ಅವನಿಗೆ ಎಂದಿಗೂ ಸಾಧ್ಯವಿರುವುದಿಲ್ಲ. ಇಂಥ ಸಾಹಿತಿಯ ವಿಷಯದಲ್ಲಿ ಶೀಲ ಮತ್ತು ಕೃತಿಯ ಪ್ರಶ್ನೆಯು ಏಳುವ ಕಾರಣವಿಲ್ಲ. ಏಕೆಂದರೆ ತನ್ನ ಸಂಯಮದ ಮೂಲಕವಾಗಿಯೆ ತನ್ನ ಅಸಾಮಾನ್ಯ ಸಾಮರ್ಥ್ಯವನ್ನು ಅತ ಪಡೆದಿರುತ್ತಾನೆ.

ಮುಖ್ಯವಾಗಿ ಇಂಥ ಚರ್ಚೆ ಸುಗಮವಾಗಬೇಕಾದರೆ, ಸಾಹಿತಿಯೂ ಸಾಮಾನ್ಯ ವ್ಯಕ್ತಿ, ಸಾಮಾನ್ಯ ವ್ಯಕ್ತಿಗೆ ವಿಶಿಷ್ಟವಾದ ಕುಂದು-ಕೊರತೆಗಳೆಲ್ಲವುಗಳೂ ಇರತಕ್ಕವುಗಳೇ, ಅವು ಇದ್ದಷ್ಟರ ಮಟ್ಟಿಗೆ ಅವನ ಕ್ರಿಯಾಶಕ್ತಿ, ಕಲ್ಪನಾಶಕ್ತಿಗಳಿಗೆ ಕಡೆಯುಂಟಾಗುವುದೂ ಖಂಡಿತ— ಎಂಬ ವಿಷಯಗಳನ್ನು ಒಪ್ಪಲೇಬೇಕು. ಸಾಹಿತ್ಯದ ಸೊಬಗನ್ನು ಸವಿಯಬಲ್ಲ ಪ್ರತಿಯೊಂದು ವ್ಯಕ್ತಿಯೂ ಒಂದರ್ಥದಿಂದ ಸಾಹಿತಿಯು; ಎಂದ ಮೇಲೆ ಕವಿಯಾಗಲಿ, ಸಾಹಿತಿಯಾಗಲಿ ಅದ್ವಿತೀಯ ಪುರುಷ, ದೇವಾಂಶ, ಒಂದು ಶಕ್ತಿಯ ಕೈಗೊಂಬೆ ಎಂದು ಮುಂತಾಗಿ ತಿಳಿಯುವುದು ಅಂಧಶ್ರದ್ಧೆಯಲ್ಲದೆ, ವಿಮರ್ಶಾಬುದ್ಧಿಯ ಲೋಪ. ಸಾಮಾನ್ಯ ವ್ಯಕ್ತಿಯಾಗಿದ್ದರೂ ಒಂದು ವಿಶೇಷವಾದ ಅನುಭವ ಸಾಮರ್ಥ್ಯವನ್ನೂ ಶಬ್ದ ಸಾಮರ್ಥ್ಯವನ್ನೂ ಪಡೆದವ. ಹೀಗೆಂದ ಮಾತ್ರಕ್ಕೆ ಅವನ ಶೀಲ ಅವನ ಕೃತಿಯ ಮೇಲೆ ಯಾವ ಪರಿಣಾಮವನ್ನೂ ಮಾಡಲಾರದೆಂದು ಹೇಗೆ ಹೇಳಲು ಸಾಧ್ಯ?


ಸವದತ್ತಿಯಲ್ಲಿ ನಮ್ಮ ಏಜಂಟರು:
ಶ್ರೀ. ಜಿ. ಎಲ್. ದೊಡ್ಡಮನಿ, ನ್ಯೂಜ್ ಏಜಂಟ್

ಗೋಕಾಕದಲ್ಲಿ ನಮ್ಮ ಏಜಂಟರು:
ಶ್ರೀ. ಪಿ. ಎಂ. ತೆರಗಾಂವಕರ್, ನ್ಯೂಜ್ ಏಜಂಟ್

# ವಿಚಿತ್ರ ಪ್ರತೀಕಾರ

[ ಎ. ಆರ್. ಲೊವೆಲ್ ಅವರ 'ಯೂಸಫ್' ಕವನದ ಭಾವಾನುವಾದ ]

ವಿದ್ವಾನ್ ಮುಕ್ತಿಗಿ ಆನಂದರಾವ್ ಬಿ. ಎ.
ಹರಪನಹಳ್ಳಿ

ದಿನವೆಲ್ಲ ಬೇಸರದ ಸಂಚರಿಸಿ ಗಗನದಲಿ,
ದಿನಮಣಿಯು ಮುಳುಗಿದನು ಪಡುವಣದ ಕಡಲಿನಲಿ.
ಕಾರಿರುಳು ಹಬ್ಬಿದುದು ಭೂವಲಯವೆಲ್ಲವನು,
ಕಾರ್ಮೋಡದಾವಳಿಯು ಮುಸುಕಿದುದು ಗಗನವನು.
ಬಿರುಗಾಳಿ ತೀಡಿದುದು, ಕೋಲ್ಮಿಂಚು ಪಳಚಿದುದು,
ಹೊರಹೊಮ್ಮಿ ಮೇಘದಿಂ ಗುಡುಗು ಗುಡುಗುಡಿಸಿದುದು.
ತಾರೆಗಳ ಹೊಳಪಿಲ್ಲ, ಚಂದಿರನ ಬೆಳಕಿಲ್ಲ,
ಊರು-ಕೇರಿಗಳಲ್ಲು ಮಾನವರ ಸುಳಿವಿಲ್ಲ

ಅರಬಿ ಮರುಭೂಮಿಯಲಿ ನಿರ್ಜನದ ತಾಣದಲಿ
ಹೊರಟಿರುವ ತಾನೊಬ್ಬನಿಂತಿರುವ ಸಮಯದಲಿ.
ಮುಳಿಗಾಳಿಗೊಡ್ಡಿಹನು ಕಂದಿರುವ ನಿಜತನುವ;
ಚಳಿಯಿಂದ ನಡುಗುತ್ತಲಿಕ್ಕುತಿಹ ನಿಜಪದವ.
ವ್ಯಸನನಿರ್ಭರನಾಗಿ ಕಳೆಗುಂದಿ ಬಹುಬಳಲಿ
ಬಸವಳಿದು ದೆಸೆಗೆಟ್ಟು ಸಾಗಿಹನು ತೊರಿತದಲಿ.
ಇನಿತವನು ಬವಣೆಯಿಂ ಪೋಗುತಿಹ ಸಮಯದಲಿ
ಮಿನುಗುತಿಹ ಬೆಳಕೊಂದ ಕಂಡನತಿ ದೂರದಲಿ.
ಕೊಂಡನತಿ ಹರುಷವನು ಜ್ಯೋತಿಯನು ಕಂಡೊಡನೆ;
'ಕಂಡೆನಾ ಯೂಸಫನ ನಿಲಯವನು!' ಎಂದೊಡನೆ—
ತಾಯಿಯನು ಕಂಡೊಡನೆ ಮಗು ತಬ್ಬುವಿಚ್ಛೆಯಲಿ
ತೋಯುಜದ ಮುಧೆಯನ್ನು ಅಳಿಯಾಂಟುವಿಚ್ಛೆಯಲಿ
ಹರುಷದಿಂ ತವಕದಿಂ ಪೋಗುವಾ ರೀತಿಯಲಿ—
ಕರುಣನನು ನೆನೆಯುತ್ತ ಸಾಗಿದನು ಬೇಗದಲಿ.

ನಿಲಯವನು ಸೇರುತಲೆ ಗೃಹಪತಿಯ ನೋದಿದನು,
ತಲೆವಾಗಿ ನಮಿಸಿ ತಾನಿನಿತೊರೆಯ ತೊಡಗಿದನು:
"ಕೇಳಯ್ಯ ಸಜ್ಜನನೆ, ಬರುತಿಹರು ಬೆಂಗೊಂಡು
ಅಶ್ವರಥನಾಳುಗಳು ನಿಜತನುವ ಮರುಗಿಗೊಂಡು;
ಕುಲಬಹಿಷ್ಕೃತನಾಗಿ ಅಲೆಯುತಿಹೆ ನಾನಿಂತು
ಮುಲಿತು ಕೈವಾಡುತಿಹ ಶತ್ರುಗಳ ಭಯವಾಂತು.
ತಲೆವಾರಿಸಿಕೊಂಡಿರಲು ತಾಣವಿಲ್ಲದಲಿಹೆನು.
ಪಲತೆರದಿ ನಾನಿಂದು ಬಾಧೆಯುನು ಹೊಂದಿಹೆನು.
ಬಸಿಲಿನಲಿ ಕರುತಿರುಗಿ ಬೆಂಡಿಹೆನು ಕುಂದಿಹೆನು
ಹಸಿವು-ತೃಷೆಗಳ ತಳೆದು ದೆಸೆಗೆಟ್ಟು ನಿಂದಿಹೆನು.
'ಅರಬರಲಿ ಗಣ್ಯನೀ ಯೂಸಫನು' ಎಂಬುದನು
ಅರಿತು ನಾನಾಶ್ರಯವ ಯಾಚಿಸಲು ಬಂದಿಹೆನು.
ರಕ್ಷಕನು ನೀನಲ್ಲದೀಗನ್ಯರೆನಗಿಲ್ಲ;
ರಕ್ಷಿಪುದು ದಯೆಗೈದು ಆಶ್ರಯವು ಬೇರಿಲ್ಲ!"

ಇನಿತೆಲ್ಲ ನುಡಿಗೇಳಿ ಘನವಂತ ಯೂಸಫನು
ಮನಕರಗಿ ಕನಿಕರದಿ ಕರೆದೊಯ್ದು ಅತಿಥಿಯನು
ಗೃಹದಂಶರಾಳದಲಿ ಅರರಿಯದಂದದಲಿ
ಬಹುತೆರದೊಳುಪಚರಿಸಿ ನುಡಿದನೀ ರೀತಿಯಲಿ:
"ಬಾರೆನ್ನ ಬಾಂಧವನೆ ವಿಶ್ರಾಂತಿಗೊಳ್ಳಿಲ್ಲಿ,
ಅರಿಂದ ಭೀತಿಯನು ಹಾರಯಿಸದಿರು ಇಲ್ಲಿ!
ದೇವ ನಿರ್ಮಿತವಾದ ಈ ಭವ್ಯ ಭುವಿಯಲ್ಲಿ
ನಾವೆಲ್ಲ ಭಾಗಿಗಳು ಸಕಲ ವಸ್ತುಗಳಲ್ಲಿ!
ಈ ನನ್ನ ಆಲಯದಿ ನನಗೆನಿತು ಹಕ್ಕುಂಟೊ
ಆ ನಮ್ಮ ದೇವನಿಗೆ ಜಗದೊಡೆಯಗನಿತುಂಟು!
ಪಡೆದಿಹೆವು ನಾವುಗಳು ಇನಿತೆಲ್ಲವವನಿಂದ,
ಶಡೆಯಿಲ್ಲ—ಬಯಸಿದುದ ಕೊಳ್ಳು ನೀನೆನ್ನಿಂದ.
ಇಂದುತನಕಾವನೂ ಅತನಾಲಯದಲ್ಲಿ
'ಮುಂದೆ ಹೋಗೆ'ನ್ನುವಾ ಶಬ್ದವನು ಕೇಳಿಲ್ಲ.
ಸಂಕೋಚಗೊಳ್ಳದಲೆ ಭಾಗಗೊಳು ನನ್ನಲ್ಲಿ
ಸಂಕಟವ ತೊರೆದಿನ್ನು ಶಾಂತಿಯನು ತಾಳಿಲ್ಲಿ!"
ಎಂದೆನುತ ಅತಿಥಿಯನು ವಿಮತಿಯಿಂ ಸಂತವಿಸಿ
ಅಂದದೂಟವನಿತ್ತು ಆದರಿಸಿ ಸತ್ಕರಿಸಿ,
"ಬೆಳ್ಳಿ ಮೂಡುವ ತನಕ ಸುಖನಿದ್ರೆಯನು ಮಾಡು,
ಒಳ್ಳೆ ಸಮಯವನರಿತು ಎಚ್ಚರಿಸೆ, ಮುಂದೋಡು!
ತೊಂದರೆಯು ಏನಿರದು" ಎಂದು ಧೈರ್ಯವನಿತ್ತು
ಅಂದವನ ರಕ್ಷಿಸಿದನಾಶ್ರಯವ ತಾನಿತ್ತು.

ಮುಂಗೋಳಿ ಕೂಗಿನಂ ಎಚ್ಚತ್ತು ಯೂಸಫನು
ಸಂಗಡದೊಳೆಚ್ಚರಿಸಿ ಮಲಗಿದ್ದ ಅತಿಥಿಯನು:
"ಕೇಳೆನ್ನ ಬಾಂಧವನೆ ಮುಂಗೋಳಿ ಕೂಗುತಿದೆ
ಏಳನ್ನು ಸಿದ್ಧಗೊಳು ಬೆಳ್ಳಿಯುಗೊ ಬೆಳಗುತಿದೆ!

ನಿನಗಾಗಿ ಇರಿಸಿಹೆನು ಇಂತಿಷ್ಟು ಚಿನ್ನವನು ;
ಅನುಪಮಿತ ತೇಜಿಯನು ತಡಿಹಾಕಿ ನಿಲಿಸಿಹೆನು ;
ಬೇಡು ನಿನ್ನಯ ಪಯಣ ಜನಸುಳಿಯದಾ ಮುನ್ನ.
ಒಳಿತ ನಾನಾಶಿಸುವೆ ಜೋಕೆಯಿಂ ಸಾಗಿನ್ನ !
ಮುಂದುವರಿ—ಅತ್ತಿತ್ತ ಬೀರುತ್ತ ನೋಟವನು''
ಎಂದವಗೆ ಸಲಹೆಯನು ಕೊಟ್ಟನಾ ಯೂಸಫನು.

ಸೊಡರು ಸೊಡರನು ಮುಡಿಸಿ ಕುಂದದುರಿವಂದದಲಿ
ಮುಡಿಸುವುದು ಘನತೆಕುಡಿ ಘನತೆಯನು ಅನ್ಯರಲಿ.
ವಿನಯ ವಚನವ ಕೇಳಿ ಮಾಥುವಾದುದು ಆಗ
ಮನಕೆ ಮುತ್ತಿದ ತಮವು ಅತಿಥಿಯಿಂ ತಾ ಬೇಗ.
ಆತ್ಮವಿಜಯದಿ ಹೊಳೆವ ಜ್ಞಾನಜ್ಯೋತಿಯ ಕುಡಿಯು
ಆತ್ಮಪ್ರಭೆಯಾಗವನ ಮುಖಕೆ ಕೊಟ್ಟತು ಕಳೆಯ.
ಶೋಕನಿರ್ಭರನಾಗಿ ಬಾಷ್ಪಗಳ ಸುರಿಸುತಲಿ
"ಲೋಕೇಶ ಕರುಣಿಸೀ ಸಜ್ಜನನ "ಎನ್ನುತಲಿ
ಶಿರಬಾಗಿ ನಮಿಸಿ ತಾ ಯೂಸಫನ ಕರವಿಡಿದು
"ತೊರೆವೆನಾನಿನ್ನಿನಿತು ಋಣವು ಹಿರಿದಾಗಿಹುದು !
ಋಣವ ತೀರಿಪುದೆನಿತೊ ದೇವನೊಬ್ಬನೆ ಬಲ್ಲ,
ಕ್ಷಣಕ್ಷಣಕೆ ಬಯಸುವೆನು ಸುಖ-ಶಾಂತಿಗಳನೆಲ್ಲ.
ಮರೆ-ಮೋಸಗಳು ಎಲ್ಲ ದೂರವಾದುವು ಇಂದು,
ಕರುಣಾಳುವೇ ಕೇಳು ಪ್ರಕಟಿಸುವೆ ನಾನಿಂದು.

ಉಪಕಾರದಿಂದೆನ್ನ ಪ್ರಾಣ ರಕ್ಷಿಸಿದವಗೆ
ಅಪಕಾರ ಮಾಡಿದುದನೊಪ್ಪಿಸುವೆ ನಾನವಗೆ
ಓ ಎನ್ನ ದಾತಾರ—ಎಡೆ ಬಿರಿವುದೈ ನನಗೆ !
ಬಾಯು ಬಿಟ್ಟೆನಿತೊರೆವೆ ಅನಿತೆಲ್ಲವನು ನಿನಗೆ ?
ಇನಿತೆಲ್ಲ ಗೈದಿರುವೆ ಆ ಇಬ್ರಹೀಮನಿಗೆ—
ಎನಿತೊರೆವೆ—ತವಸುತನ ಪ್ರಾಣವನೆ ಕೊಂಡವಗೆ !"—
ಅರೆಗಳಿಗೆ ಮೌನದಿಂ ನಿಂತಿದ್ದ ಯೂಸಫನು
ಮರುನುಡಿಯನೀತೆರದಿ ಶಾಂತಿಯಿಂದುಸುರಿದನು :
'' ಕೊಳ್ಳು ಮುಮ್ಮಡಿ ಚಿನ್ನ ತೆರುಗಿ ಕೊಡಬೇಡೆನಗೆ;
ಒಳ್ಳಿತಾಗಲಿ ಹೊರಡು ಕಾನನಾಂತರದೊಳಗೆ !
ಕೊಲೆಯಾದ ಮಗನಿನ್ನು ಮರಳನೆಂದರಿತರಿತು
'ಕೊಲೆಗಾರನಾ ಮೇಲೆ ಸೇಡುತೀರಿಪುದೆಂತು ?'
ಎಂದೆನುತ ಬಹುಕಾಲ ಕಳೆದೆ ನಾನನುಚಿತದಿ,
ಇಂದಿನಿಂ ಬಾರದಾ ನೀಚಭಾವನೆ ಮನದಿ.
ಅನುಸರಿಸಿ ಪೋಗಲದು ಈ ಹೊನ್ನ ಈ ಹಯವ !
ಕನಸಿನಲು ಬಾರದಾ ಸೇಡು ತೀರಿಪ ಭಾವ.
ದೇವ ನಿರ್ಣಯವೆಲ್ಲ ನಿರ್ದೋಷವಾಗಿಹುದು ;
ಕಾವ ಕೊಲ್ಲುವ ಭಾಧ ಆವನನೇ ಕೂಡಿಹುದು.
ಹಲಬನೆನು ನಿನಗಾಗಿ ಹಗಲಿರುಳು ಜೊಚ್ಚಲಿಗ,
ಮಲಗು ನೀಂ ಶಾಂತಿಯಿಂ; ಸೇಡು ತೀರಿದುದೀಗ !"

## ಚುಟುಕಗಳು

ಶ್ರೀ. ವಿ. ಜಿ. ಭಟ್ಟ ಬಿ ಎ. ಹೊನ್ನಾವರ

### ಹಸಿವು

'ಯಾಕೆ ನನಗೆ ಚಿನ್ನ ?
ಸಾಕು ತುತ್ತು ಅನ್ನ'
ಎಂದು ಒತ್ತಿ
ಕೂಗಿ, ಹತ್ತಿ-
ರುವುದು ಹೊಟ್ಟೆ ಬೆನ್ನ. ೧

### ಹಣ

ಬಡವರ ಹೆಣ
ಕೆಡವಲು ಪಣ
ತೊಡುತಿದೆ
ಝಣ ಝಣ-
ಗುಡುತಿಹ ಹಣ. ೨

### ದೊಡ್ಡ ಹೊಟ್ಟೆ

ದೊಡ್ಡ ಹೊಟ್ಟೆ-
ಭಟ್ಟ ತುಪ್ಪ
ಗಟಾ ಗಟಾ ಕುಡಿದನು ;
"ಅಯ್ಯೋ ಅಪ್ಪ
ಕೆಟ್ಟೆ ಕೆಟ್ಟೆ "
ಎಂದು ಚೀರಿ ಮಡಿದನು ! ೩

### ಲೇಡಿ

ಬೂಟು ಗೀಟು
ಹಾಕಿ ಫೇಟು
ಲೇಡಿಯಾದಳು ;
ಅವಳ ದೇಟು-
ಕಾಲ್ಗೆ ಬೂಟು
ಬೇಡಿಯಾದುವು. ೪

# ಬೀರಪ್ಪನ ದುರ್ದಶೆ

(ಒಂದು ಕಣ್ಣು ಕತೆ)

ಡಾ. ನಿ. ಜಿ. ಶಾನಭಾಗ, ಕುಮಟಾ

★

ರೈತ ಬೀರಪ್ಪ ಸುಬ್ಬೈಯಾಗಿದ್ದ. ಜಲುವೆಯಾದ ಹೆಂಡತಿಯಿದ್ದಾಳೆ. ಮೈಕಟ್ಟು, ರೂಪು, ಬಣ್ಣದಲ್ಲಿ ಲಕ್ಷ್ಮೀ ಮೇಲ್ಜಾತಿಯವರನ್ನೂ ಮೀರಿಸಬಹುದು. ಕಳಗಿನ ಕೇರಿಯಲ್ಲಿ—ನಮ್ಮೂರಿನಲ್ಲಿಯೇ—ರೈತಜಾತಿಯವರಲ್ಲಿ ಬಿಳಿಯವಸ್ತ್ರದ ರವಕೆ ತೊಟ್ಟವಳು ಅವಳೇ ಮೊದಲಿನವಳು. ಹೆಂಡತಿಯೆಂದರೆ ಬೀರಪ್ಪನಿಗೆ ಅಷ್ಟಿಷ್ಟಲ್ಲ; ಪ್ರಾಣ. "ಈ ನಶೀಬು ಸರ್ವೇಸಾಧ್ರಾಣಾ (ಸಾಧಾರಣ) ಯಾರಿಗಿದೆ?" ಆತನಿಗೆ ಯಾವಾಗಲೂ ಈ ವಿಚಾರ. ತಾನು ಅಸಾಧಾರಣನೇ ಎಂದು ಹೊಳೆದು, ಹೆಂಡತಿಯ ವಿಚಾರ ಬಂದಾಗೆಲ್ಲ ಕಿರುನಗು ಮುಂಗುರುವಿನಿಳಿಗಳಲ್ಲಿ ಯಾವಾಗಲೂ ಸಣ್ಣಾಗಿ ಮೂಡುತ್ತಿರುವುದು.

ಆತನಿಗೆ ಸಿಕ್ಕಿದ್ದ ಭೂಮಿಯೂ ಉತ್ತಮವಾಗಿತ್ತು. ವರ್ಷಕ್ಕೆ ಹತ್ತುಮಾನಗಿ ಗೇಣಿ ಶಾನಭಾಗರ ಮನೆಗೆ ಸಲ್ಲಿಸಿದರೆ, ಉಳಿದ ಆಕ್ಕಿ ಆತನಿಗೆ ಇನ್ನೊಂದು ಜೆಳೆಯಾಗುವವರೆಗೂ ಸಾಲುತ್ತದೆ. ಆತನ ಮನೆಯ ಕೆಳಗೇ ಉದ್ದವಾಗಿ ಬಿದ್ದ ಬಾಲ್ಯ. ನೆಗಸು (ಭರತಿ) ಬಂದು ಅಕ್ಕ-ಪಕ್ಕದ ಭೂಮಿ ಹಾಳಾಗುವಾಗಲೂ ಬೀರಪ್ಪನ ಭೂಮಿ ಅರ್ಧ ಜೆಳೆಯಾದರೂ ಕೊಡಬೇಕು. ಅಷ್ಟು ಉತ್ಕೃಷ್ಟ ಭೂಮಿ ಆದಕ್ಕೇ ದಂಡಿಮನೆಯ ಶೀವಪ್ಪ, ಆ ಭೂಮಿಯನ್ನು ಅನಸಂದ ತಪ್ಪಿಸಿ ತಾನು ಮಾಡಿಕೊಳ್ಳಬೇಕೆಂದು ಸಾವಿರ ಪ್ರಯತ್ನ ಮಾಡಿದ್ದು ಬೀರಪ್ಪ ಮರೆಯಲಿಲ್ಲ. ಈ ಭಯದಿಂದಲೇ ಬೀರಪ್ಪ ಒಂದು ಕಾಳು ಅಕ್ಕಿಗೇಣಿಯನ್ನೂ ಬಾಕಿ ಮಾಡಿಕೊಳ್ಳುವುದಿಲ್ಲ.

ಇನ್ನು ಬೀರಪ್ಪನ ಸಂಸಾರದ ಬಟ್ಟೆ-ಬರೆಗಳು, ಸಂಜಾರ-ಮೆಣಸಿನ ಖರ್ಚು, ಕಾಯಿಕೊಯ್ಲಿನ ಆಯದಿಂದ ನೀಗುತ್ತದೆ. ಊರ ಎಲ್ಲ ಒಡೆಯರಿಗೂ ಬೀರಪ್ಪನೇ ಕಾಯಿಕೊಯ್ಲಿನವ. ಇದಕ್ಕೆ ಕಾರಣ, ಬೀರಪ್ಪ ಮರ ನೋಡಿ, ಒಕ್ಕಲು ಪರಕೊಂಡು ತಿಂದ—ಉದುರಿದ—ಕಾಯಿಗಳ ಲೆಕ್ಕ ಹೇಳುತ್ತಾನಲ್ಲದೆ, ಒಕ್ಕಲ ಮೋರೆನೋಡಿಯಲ್ಲ. ಹತ್ತಾಲುಗಳ ಒಕ್ಕಲು ಊರಲ್ಲಿ ಜಾತಿಯವರೇ ಹೆಚ್ಚು. ಅವರ ಮೋರೆ ನೋಡಿದರೆ ಮುಲಾಜಿಗೆ ಬಿದ್ದು ಐದು ಕಾಯಿಗಳು ಉದುರಿದ್ದು ತೋರಿದರೂ ಎರಡು ಎಂದು ಒಡೆಯರಿಗೆ ಹೇಳಬೇಕಾಗುತ್ತದೆ. ಬೀರಪ್ಪನಲ್ಲಿ ಆ ಲಕ್ಷಣಗಿತನ ಇಲ್ಲ. ಅದಕ್ಕಾಗಿ ಬೀರಪ್ಪನ ಖಾಯಂ ಒಡೆಯರಿಗೆ ಹೆಚ್ಚು. ಹೀಗಾಗಿ ಭೂಮಿಯ ಆಯದಷ್ಟೆ ಕೊಯ್ಲಿನ ಆಯ ಆತನಿಗೆ.

**ಇದ್ದ ಹೆಂಡತಿ ಬಿಟ್ಟು ಕದ್ದು ಗರತಿಯ ಬಯಸಿ, ಮೊಣಕಾಲ ಮುರಿಸಿಕೊಂಡ ಬೀರಪ್ಪ. ಉತ್ತರ ಕನ್ನಡ ಜಿಲ್ಲೆಯ ಜನಜೀವನದಿಂದ ಎತ್ತಿಕೊಂಡ ಚಿತ್ರವೊಂದಿದು.**

★

ಮದುವೆಯಾದ ಒಂದೆರಡು ವರ್ಷ ಬೀರಪ್ಪನ ಸಂಸಾರ ಸುಖದಿಂದ ಸಾಗಿತು. ಗಂಡ-ಹೆಂಡಿರು ಸುಖವಾಗಿ ಕಾಲ ಕಳೆದರು. ಅತ್ತ ದಂಡಿ ಶೀವಪ್ಪನೂ, ಭೂಮಿಯನ್ನು ತಾನು ಪಡೆಯುವ ಆಶೆ ಒಳಗೊಳಗೆ ಸುಳಿದಾಡಿದರೂ ಅದನ್ನು ಹೊರಗೆಡುಹಲಿಲ್ಲ.

ಮಳೆಗಾಲ ಆರಂಭವಾಗಿ ನೆಟ್ಟಿ ಮುಗಿಯಿತು. ಒಂದು ದಿನ ಬೀರಪ್ಪ ಅಂಗಡಿಯಿಂದ ಎಲೆ ಅಡಿಕೆ, ಕಲ್ಲೆಣ್ಣೆ ತಕ್ಕೊಂಡು ಮನೆಗೆ ಬರುತ್ತಿದ್ದ. ಆಜೆಯ ಆಜೆಯ ಮನೆಯ ಗಾಮನಾಯ್ಕ ಜಾತಿಯ ಗಣಪುನ ಹೆಂಡತಿ, ಬಾವಿಯಿಂದ ನೀರು ಸೇದಿಕೊಂಡು ಮನೆಗೆ ನಡೆಯುತ್ತಿದ್ದಳು. ಮುಂಚಿನ ವರ್ಷವೆ ಮದುವೆಯಾಗಿತ್ತು. ಕಪ್ಪಾಗಿರುವ ಗಿಡ್ಡ ದೇಹದವಳು. ತುಟಿಗಳಿಗೂ ಕಪ್ಪು ಬಣ್ಣ ಬಿಟ್ಟಿರಲಿಲ್ಲ. ಗುಂಡಾದ ಚಿಕ್ಕ ಮೋರೆ. ಕಣ್ಣುಗಳಲ್ಲಿ ಒಂದು ತರದ ಬೆಳಗು. ತುಸು ಹೆಚ್ಚು ಮುಂದೆ ಒಂದ ಎದೆ. ದಾರಿಯಿಂದ ಸಾಗುತ್ತಿದ್ದ ಬೀರಪ್ಪನಿಗೆ ಆ ರೂಪು ಬಹು ವಿಲಕ್ಷಣವಾಗಿ ತೋರಿಬಿಟ್ಟಿತು. ಆ ಹೆಣ್ಣು ಬಹು ಜಲುವೆಯಾಗಿ ಎನಿಸಿಬಿಟ್ಟಿತು. ಬೀರಪ್ಪ ತನ್ನರಿವು ಮರೆತು, ಮೈಯೆಲ್ಲ ಕಣ್ಣು ಮಾಡಿಕೊಂಡು ಬಂದ. ದಾರಿಯಲ್ಲಿ ಯಾರೋ ಸಾಗುವ ದನಿ ಕೇಳಿ ಅವಳು ಒಮ್ಮೆ ಬೀರಪ್ಪನನ್ನು ನೋಡಿದಳು ಅರೆಕ್ಷಣ ಅದರ ದೃಷ್ಟಿ ಬಂಧಾಯಿತು. ತನ್ನ ದಾರಿ ತಾನು ನಡೆಯುತ್ತ ಅವಳು ನಡೆದಳು.

ಬೀರಪ್ಪ ನಿಲ್ಲಲಿಕ್ಕೂ ಆಗದೆ, ತೆರಳಲೂ ಆಗದೆ, ತೊಡಕಿನಲ್ಲಿ ಸಿಕ್ಕಿಬಿದ್ದಂತೆ ಹೇಗಾದರೂ ನಡೆದ. ಆಗಾಗ ಹಿಂದೆ ನೋಡುತ್ತ ನಡೆದಿದ್ದ. ಅವಳು ಕಾಣಿಸಲಿಲ್ಲವಾಗಿದ್ದರೂ ಹಿಂದೆ ನೋಡುತ್ತಲಿದ್ದ.

ಆ ದಿನದಿಂದ ಮುಂದೆ ಬೀರಪ್ಪ ಆ ದಾರಿಯಿಂದ ಬರುಹೋಗುವದು ಹೆಚ್ಚಾಯಿತು. ಏನೊಂದು ಕೆಲಸವಿಲ್ಲದಿದ್ದರೂ ಕೆಲಸ ಯೋಜಿಸಿಕೊಂಡು ಆ ದಾರಿಯಿಂದ ತಿರುಗಾಡಹತ್ತಿದ. ಬರುಹೋಗುವಾಗ, ಗಣಪುನ ಹೆಂಡತಿಯನ್ನು ನಾಚಿಕೆಬಿಟ್ಟು ನೋಡುತ್ತ ನಿಲ್ಲುವನು. ಒಮ್ಮೊಮ್ಮೆ ಅವಳು ಬಾವಿಯ ಮೇಲಿನ ಅಂಗಳದಲ್ಲಿ ಕಾಣದಿದ್ದರೆ, ಮನೆಯ ಒಳಗೂ ಅವಳನ್ನ ಕಣ್ಣಳಿಂದ ಹುಡಕುವುದಕ್ಕೂ ಆರಂಭವಾಯಿತು. ಎಲ್ಲಿಯದರೂ ಕಾಯಿಕೊಯ್ಲು ಮುಗಿಸಿ, ಮಜೂರಿಯ ದೊಡ್ಡ ದೊಹೇರಳ ಕಾಯಿಗಳನ್ನು, ಎಂದಿನಂತೆ ಆಗಿಂದಾಗ ಮಾರ

ಅವುಗಳನ್ನು ಹಾಗೆಯೆ ತಲೆಯ ಮೇಲೆ ಹೊತ್ತುಕೊಂಡು ಮನೆಗೆ ಬರತೊಡಗಿದ: ಗಣಪುನ ಹೆಂಡತಿ ಪುಟ್ಟಿ, ತನ್ನ ಆಯ ನೋಡಿ—ತಾನು ಸಾಮಾನ್ಯನಲ್ಲ; ತನಗೆ ಒಲಿದರೆ ಅವಳಿಗೇ ಲಾಭವಿದೆಯಲ್ಲದೆ ತನಗೇನೂ ಉಪಕಾರವಲ್ಲವೆಂದು ತಿಳಿ. ಕೊಂಡು ತನ್ನವಳಾಗುವಳೆಂದು.

"ಇದೇನು ಹೊಸತಾಗಿ ಹೀಗೆ? ಇವ್ರು ಎಂತಾಕೆ ಮನೆಗೆ ತಂದ್ರಿ? ಕೇರಿಮೇಲಿನವರು ಯಾರಾದರೂ 'ಒಂದು ಕಾಯಿ ಕೊಡಿ, ನಾಳೆಗೆ ಕೊಡ್ತೆ' ಅಂದ್ರೆ, ಇದ್ದು ಇಲ್ಲಾ ಹೇಳೂಕೂ ಆಗೂದಿಲ್ಲಾ. ಮಾರಿ ದುಡ್ಡು ತಂದ್ರೆ ಏನಾಗ್ತಿತ್ತು?" ಹೆಂಡತಿ ಕೇಳಿದರೆ, ಬೀರಪ್ಪನಿಗೆ ಏಕಾ ಏಕಿ ಸಿಟ್ಟು ತೋರಿಕೊಳ್ಳುತ್ತಿತ್ತು.

"ನೀ ಸುಮ್ಮನುಳಿಯೆ! ತೋಲುಬುದ್ವಂತಿ ಆಗಬೇಡಾ!" ಬೀರಪ್ಪನು ಕಡಾಕಿ ಉತ್ತರಕೊಡುತ್ತಿದ್ದ.

"ಅಬ್ಬಬ್ಬ! ಯಾವ ದೊಡ್ಡ ಮಾತು ಆಯ್ತು ಹೇಳಿ ನೀವ್ ಹೀಗೆ ಮೈಮೇಲೆ ಬರ್ತ್ರಿ? ಈಗೀಗ ನಿಮ್ಮ ಬಣ್ಣಾನೆ ಬೇರೆಯಾಗಾದೆ!" ಅಳುಮೋರೆಮಾಡಿಕೊಂಡು ಹೆಂಡತಿಯೆಂದರೆ, ಬೀರಪ್ಪ ಉರಿಉರಿಯಾಗಿಬಿಡುತ್ತಿದ್ದ.

ಇನ್ನು ಕೆಲವು ದಿನಗಳು ತಿರಳಿದುವು. ತನ್ನ ಗುದಿಸಿಲಿನ ಮುಂದೆ ಯಾವಾಗಲೊಮ್ಮೆ ಮಡ್ಲು ನೇಯುತ್ತಲೂ ಯಾವಾಗಲೊಮ್ಮೆ ಬೆಳಡು ಸರಿಮಾಡುತ್ತಲೂ ಕುಳಿತಿರುವ ಗಣಪುನ ಹೆಂಡತಿ ಪುಟ್ಟಿಯನ್ನು ಕಂಡು "ಏನೇ ಪುಟ್ಟಿ, ಗಂಡ—ಗಣಪು ಮನೆಯಲ್ಲಮ್ಮೆ?" ಎಂದು ಬೀರಪ್ಪ ಮಾತಾಡಲು ಪ್ರಾರಂಭಿಸಿದ. ದಿನಹೋಗುತ್ತ ಈ ಸಲುಗೆ ಎಲೆ-ಅಡಿಕೆ ಕೊಡುವ ವರೆಗೂ ಬಳೆಯಿತು. ಮತ್ತೆ ಕೆಲವು ದಿನಗಳ ಮೇಲೆ "ಪುಟ್ಟೀ, ಇಕೊಳ್ಳೆ ಈ ಕ್ಯಾಜೊಂಡು" ಎಂದು ಬೀರಪ್ಪ ಕೆಲವು ಸಲ ಕಾಯಿಗಳನ್ನೂ ಕೊಡಲನುವಾದ.

ಹೀಗೆ ಕೆಲವುಕಾಲ ಗತಿಸಿದ ಮೇಲೆ, ಒಂದುದಿನ ಬೀರಪ್ಪನು ಆ ದಾರಿಯಿಂದ ಬರುತ್ತಿರುವಾಗ, ಪುಟ್ಟಿಯನ್ನು ಅಂಗಳದಲ್ಲಿ ಅಕ್ಕಿ ಹೆಕ್ಕುತ್ತ ಕುಳಿತಿರುವುದನ್ನು ಕಂಡು, ಸ್ಥೈರ್ಯ ಸಡಿಲಾಗಿ, ಮನೆಯೊಳಗೆ ಗಣಪುನನ್ನು ಕಾಣದೆ, ಧೈರ್ಯಮಾಡಿ ಅಲ್ಲಿಯೇ ನಿಂತು ಮಾತಿಗೆ ಮೊದಲು ಮಾಡಿದ: "ಏನೇ ಪುಟ್ಟಿ, ಗನಾಕೆ ಇದ್ದೆಯಲ್ಲೆ? ಬ್ಹಾಳ ದಿನದಿಂದ ಮಾತಾಡ್‌ಬೇಕು ಎಂದಮ್ಮೆ. ಒಂದಿನ ಬಿಲ್ಲೆ?" ಬೀರಪ್ಪನಿಗೆ ಒಳಹೊರಗೆ ಅಧೈರ್ಯದ ನಡುಕ ಇದ್ದರೂ, ಮೋರೆಯ ಮೇಲೆ—ಮುಂಗುರುವಿನಾತೆಗಳಲ್ಲಿ ಕಿರುನಗು ಇಲ್ಲದಿರಲಿಲ್ಲ.

ಪುಟ್ಟಿಗೆ ಈ ನಾಚಿಕೆಗೇಡಿಯ ಮಾತುಗಳನ್ನು ಕೇಳಿ ಮೈಗೆ ಉರಿಹಚ್ಚಿದಂತಾಯಿತು. ಬಿರ್ರೆಂದು ಸಿಟ್ಟು ಬಂದಿತು. "ಇವ್ನ ಸೊಕ್ಕೆಷ್ಟು. ಇವ್ನ ಮೋರೆಗೆ ಬೆಂಕಿ ಬೀಳಲೋ!" ಆ ಮೋರೆಯ ಮೇಲೆ ಉಗುಳಿಬಿಡಬೇಕು ಎಂದೆನಿಸಿತು. "ತಾನು ಗರತಿ; ಈ ನೀಚ ಅಷ್ಟೂ ಇಚಾರ ಮಾಡೂದು ಬೇಡಾ?" ಎಂದು ತೋರಿ, ಅಸಹ್ಯ ಅಪಮಾನದ ಭಾವ ಅವಳ ಮನದಲ್ಲಿ ಬೇರೂರಿತು.

ಬೀರಪ್ಪ ಹಾಗೆಯೇ ನಡೆದ.

ರಾತ್ರಿ ಗಂಡ ಮನೆಗೆ ಬಂದಮೇಲೆ, ಪುಟ್ಟಿ ನಡೆದ ಮಾತನ್ನು ಮರೆನೂಡದೆ ಉಪ್ಪುಕಾರ ಹಚ್ಚಿದೆ, ಇದ್ದಕ್ಕಿದ್ದಂತೆ ಗಂಡನಿಗೆ ತಿಳಿಸಿದಳು. "ಅಬ್ಬ. ಹಂ ಹಂ!" ಎಂದು ಗಣ್ಪ ನಾಲ್ಕಾರು ಬಾರಿ ನುಡಿದನಲ್ಲದೆ ಏನೇನೂ ಹೇಳಲಿಲ್ಲ. ಆಮೇಲೆ ಬಹಳ ಹೊತ್ತು ಮಾತಾಡಲೇ ಇಲ್ಲ. ಬಹಳ ಹೊತ್ತಿನ ಮೇಲೆ "ಸಣ್ಣ ಎಲೆ ಜೂರು ತಾ, ನೀನು 'ಆಗೂದು' (ಆಗಲಿ) ಎಂದ್ಲೇಳು." ಎಂದ. ಪುಟ್ಟಿ ಮೊದಲಿನ ಮಾತಿನ ಅರ್ಥವಾಗಿ ಎಲೆಜೂರು ಕೊಟ್ಟಳು. ಆದರೆ "ಆಗೂದ"ರ ಮುಂದಿನದಾಗಲಿ ಹಿಂದಿನದಾಗಲಿ ಅರ್ಥ ಅವಳಿಗಾಗಲಿಲ್ಲ.

ಅತ್ತ ರಾತ್ರಿ ಬೀರಪ್ಪ, ಪುಟ್ಟಿ ಮರುಮಾತನಾಡದೆ—ಕೋಪಿಸಿಕೊಂಡು ಬೈಯದೆ ಸುಮ್ಮನುಳಿದದ್ದನ್ನು ಕಂಡು 'ಕಾರ್ಯ ಅರ್ಧ ಕೊನೆಗಂಡಿತು. ಇನ್ನರ್ಧ ಕೊನೆಗೊಳ್ಳುವುದು' ಎಂದು ಸಮಾಧಾನ ಪಡುತ್ತಲೂ 'ಬೇಗ ಆಗುವುದಿಲ್ಲ' ಎಂದು ಅಸಮಾಧಾನ ಪಡುತ್ತಲೂ ಬಿದ್ದುಕೊಂಡಿದ್ದ.

ಒಂದು ದಿನ ಹೊತ್ತು ಕಂತಲಿಕ್ಕೆ ಇನ್ನೂ ಎರಡು ತಾಸು ಇರಬೇಕಾದರೆ ಬೀರಪ್ಪ ಅಂಗಡಿಗೆ ಬರುತ್ತಿದ್ದ. ಪುಟ್ಟಿಯೂ ಅವಳ ಗಂಡನೂ ತಮ್ಮ ಮನೆಯ ಅಂಗಳದಲ್ಲಿ ನಿಂತಿದ್ದರು. ಗಣಪು ಅರ್ಧಕೈಯ ಕೋಟಿನ ಜೇಟಿನ ಅಂಗಿಯನ್ನು ಮೈಯಲ್ಲಿ ತೊಟ್ಟುಕೊಂಡು, ತಲೆಗೆ ಕರಿಯ ಎಲೆವಸ್ತ್ರ ಕಟ್ಟಿಕೊಂಡು ಮಾತಾಡುತ್ತ ನಿಂತಿದ್ದ. "ನಾಡ್ದಿಗೆ ತಿವಾಯ್ ನಂಗೆ ಬರ್ಲಿಕ್ಕೆ ಆಗೂಹಾಂಗಿಲ್ಲಾ." ದಾರಿ ಸಾಗಿದ ಬೀರಪ್ಪ ಕಿವಿ ನೆಟ್ಟಗೆ ಮಾಡಿಕೊಳ್ಳುತ್ತ "ಪಟಗಾರ್ರು ಎಟ್ಟು ದೂರ್ಪೊ?" ಎಂದು ತವಕದಿಂದ ಕೇಳಿದ. "ರಾಮೊಡಿರ ಬಿಟ್ಟರಾ, ನಾಯ್ಕರೆ! ಬೀಂವ್ದಲ್ಲಿ ಗನಾಕಿಲ್ಲಾ ಅಂದ್ರೂ ಕೇಳೂದಿಲ್ಲಾ! ಒಂದಾಕ್ಕನಾ ಅಂಕೋಲೆಗೆ ಮುಟ್ಸಬೇಕಂತೆ. ಹೊತ್ತಿದ್ದಾಗೆ ತಾರಿ ದಾಟ್ಸಿಕೊಂಡು ಬಿಡ್ತೆ. ಎರ್ಡತಾಸು ರಾತ್ರಿದ್ದಾಗೆ ಹೊಡ್ಕೊಂಡು ಹೋಗ್ತೆ!" ಗಣಪು ದೂರಿಕೊಂಡ.

ಬೀರಪ್ಪನಿಗೆ ಒಂದು ಆಶೆ ತಲೆದೋರಿಬಿಟ್ಟಿತು. ಸಹಾನುಭೂತಿಯಿಂದ ಸ್ವರ ಮಿದುಮಾಡುತ್ತ ಅಂದ: "ಆ ಒಡೆದಿರಿಗೆ ಬಿಟ್ಟೀ ಕೆಲ್ಸದಲ್ಲಿ ಒಕ್ಕಲ ಜೀವ ಹೋಯಿತೊ ಇಲ್ವೋ ಅಂಬೂದು ಇಲ್ಲಾ ನೋಡು! ಹಿಂದಿನ ಒಡೆದಿರ್ವಾಂಗೆ ಒಕ್ಲು ಉಪಾಸ ಬಿದ್ದಾಗೆ ನೋಡ್ದಿದ್ರೂ. ಬಿಟ್ಟೀ ಕೆಲ್ಸ ಮರಿಲಿಲ್ಲಾ. ರಾತ್ರೆ ಯಾರು ಮಿರ್ಜಾನಿನಲ್ಲಿ ಬಿದ್ದು ಕೊಳ್ತ್ರೊ! ಇಲ್ಲೇ ಉಳಿಯೊ; ಬೆಳ್ಗಾಸಾರೆ ನಡೆಲಕ್ಕು!" ಈಗಲೇ ತಾರಿ ದಾಟುವ ಆವಶ್ಯಕತೆ ಎಲ್ಲಿಯ ತನಕ ದೃಢವಾದದ್ದು ಎಂದು ತಿಳಿಯಲು ಕೊನೆಯ ಮಾತು ಬೀರಪ್ಪ ಕೇಳಿದ.

"ನೀವ್ ಗನಾ ಹೇಳ್ತ್ರಲ್ರಾ, ನಾಯ್ಕ್ರ! ನಂಗೇನು ಊರಲ್ಲಿ ಇರು ಆನೆ ಅದ್ಯೊ? 'ಅಕ್ಕಿಗೆ ಬಿಸಿಲಲ್ಲಿ ನಡಿಸಬೇಡಾ, ಈಗಲೇ ತಾರಿ ದಾಟು; ಮೂರು ತಾಸು ಹೊತ್ತು ಆದಲ್ಲಿ ಅಕ್ಕಿಗೆ

ಕಟ್ಟಿಕೊ; ಮತ್ತೆ ಒಂಬತ್ತು ತಾಸಿಗೆ ಹೊಡ್ಕೊಂಡು ರಾತ್ರಿ ಅಂಕೋಲೆ ಮುಟ್ಟು' ಅಂತ ಹೇಳ್ದರೆ!" ಗಣಪು ಕೊಂಯ್-ಗುಟ್ಟಿದ.

"ಅದೂ ಹೌದೋ. ರಾಮು ಶಾನಭಾಗ್ರು ಅನರು! ಏನ್ಮಾಡೂಕೊ ಹಿಂದಾದೌರಲ್ಲಾ!!" ಎಂದು ಬೀರಪ್ಪ ನುಡಿದು, 'ದೇವ್ರು ಮನ್ಸನಲ್ಲಿ ಆಗೂದಿದ್ರೆ ಎಲ್ಲಾ ಅನುಕೂಲಾಗ್ತಾದೆ ಅಂದ್ರೆ; ಇದ್ಕೇ ಹೇಳೂದು' ಎಂದು ಚಿಂತಿಸುತ್ತ ಗಣಪುನ ಸಂಗಡ ಲೈನ್‌ದಾರಿಗೆ ಬಂದ. ಗಣ್ಪು ತಾರಿಯ ಕಡೆಗೆ ತೆರಳಿದ. ಬೀರಪ್ಪ ಅಂಗಡಿಗೆ ಬಂದ.

ಪೇಟೆಗೆ ಬಂದಾಗ ಬಂದ ಕೆಲಸ ಬೀರಪ್ಪನಿಗೆ ಮರೆವಾಗಿತ್ತು. ಗಣಪು ತೆರವು ನೂಡಿದ ಬಾಗ ತಾನು ಹೇಗೆ ಅಕ್ರಮಿಸಬೇಕು?—ಎಂದು ಯೋಚನೆ ಒಂದು ಬದಿಗೆ ನಡೆಯುತ್ತಲೇ ಇದ್ದರೂ, ಇನ್ನೊಂದು ದಿಕ್ಕಿನಲ್ಲಿ ಆಕ್ರಮಿಸುವುದು ಹದಿನಾರಾಣೆ ಖಾತ್ರಿಯೆಂಬಂತೆ ನೆಮ್ಮದಿ. ಅದಕ್ಕೇ ತಾನು ಪೇಟೆಗೆ ಬಂದ ಕಾರಣ ವಿಚಾರಿಸುತ್ತ ಹುಡುಕಿಕೊಳ್ಳದೆ, ಬರೀ ಕವಳದ ಸಾಮಗ್ರಿ ಕೊಂಡುಕೊಂಡ. ಅದನ್ನು ಕೊಳ್ಳುವಾಗ ಪುಟ್ಟಿಯ ಯೋಚನೆಯಾಗಿ ಯಾಲಕ್ಕಿಯನ್ನೂ ತಕ್ಕೊಂಡ. 'ಈ ಯಾಲಕ್ಕಿ ಕಳ್ಳದ ರುಚಿ ತುಸು ಪುಟ್ಟಿ ನೋಡಲಿ' ಎಂದು ಅತನಿಗೆ ವಿಚಾರ ಬಾರದಿರಲಿಲ್ಲ.

ಹೊತ್ತು ಮುಳುಗುವಾಗ ಬೀರಪ್ಪ ಬೇಗಬೇಗನೆ ಬಂದ. ಇನ್ನು ಲೈನದಾರಿ ಕೇರಿ ಯೋಗುವಾಗ, ಒಂಬ್ಬತ್ತು ಮಾರು ದೂರ ಹೊಳೆ ಕಂಡು 'ಗಣಪು ಆಕಳು ಸಮೇತ ಹೊಳೆ ಪಾಟಿ-ಕೊಂಡನೋ ಹೇಗೆ ನೋಡುವ' ಎಂದು ಅತನಿಗೆ ತೋರಿತು. ಆದರೆ ದಂಡಿ ತೀವಪ್ಪನ ದೈವ ಬಲಿಷ್ಠವಾದದ್ದು. 'ಒಂದು ರಾಮು ಒಡೆದಿರು ಅವರು! ಎಲುಬು ಪುಡಿಪುಡಿ ಮಾದಿ ಬಿಡೂರು' ಎಂದು: 'ಎರಡು ಪುಟ್ಟಿ ಗುಡಿಸಿಲಿನಲ್ಲಿ ಏಕಾಕಿ ಇದ್ದಾಳೆ. ಸೂಜನೆ ಮಾಡಲು ಸುಸಮಯ' ಎಂದು. ಬೀರಪ್ಪ 'ಗಣಪು ಪಾಟಿರಜೀಕು' ಎಂದುಕೊಂಡು ನೇರವಾಗಿ ಬಂದುಬಿಟ್ಟ.

ಪುಟ್ಟಿ ಅಂಗಳದಲ್ಲಿ ಹಿಡಿಸುಡಲು ತೆಂಗಿನ ಕಟ್ಟಿಗಳನ್ನು ಕೆತ್ತುತ್ತ ಕುಳಿತಿದ್ದಳು ಮಸುಮಸುಕಾಗಿದ್ದು. "ಪುಟ್ಟಿ, ಈ ಹೊತ್ತು ಬೊತಾ ಆನ್ಶೂಲದೆ. ರಾತ್ರೆ ಬರಲೇನೆ? ನಿನ್ನ ನೋಡ್ದ-ಲಾಗಾಯ್ತು. ನಂಗೆ ಬೇಕಾನೇ ಸಮುಸಿಲ್ಲ! ಬರಲೇನೆ?" ನಡುಕುದನಿಯಲ್ಲಿ ಬೀರಪ್ಪನೆಂದ.

ಬೆಳಕಿದ್ದರೆ ಪುಟ್ಟಿಯ ಕಪ್ಪು ತುಟಿಗಳ ಮೇಲೆ ಹರಿದ ತೀರ ಕೆರುನಗು ಕಂಡು, ಕೆರುದನಿಯಲ್ಲಿ ಅವಳೆಂದ 'ಆಗೂದು' ಎಂಬ ಮಾತಿಗೆ ಬೀರಪ್ಪ ಬೇರೆ ಅರ್ಥ ಕಲ್ಪುತ್ತಿದ್ದನೋ ಏನೊ!

ಮನೆಗೆ ಬಂದವನೆ ತಲೆಯ ಪಂಜೆ ತೆಗೆದಿಡುವ ಮೊದಲು, "ಊಟಕ್ಕೆ ಆಗಿದೆಯೇನೆ?" ಎಂದು ಮೊದಲು ವಿಚಾರಿಸಿದ. "ಇನ್ನೂ ದೀಪ ಹಚ್ಚಲಿಲ್ಲಾ, ಊಟಕ್ಕೆಲ್ಲ? ಇಂದು ಈ ನಮೂನೆ ಹಸಿವೆಯಾವುದಪ್ಪಾ!" ಲಕ್ಷ್ಮಿಯೆಂದಳು. 'ಹಾನೆ! ನೀ ತೋಲ ಬುದ್ಸಂತಿ ಆಗಬೇಡಾ. ಹಂ! ಊಟಕ್ಕೆ ಬೆಗಾನ್ಲಿ!"

ಆ ಮೇಲೆ ಹಬ್ಬಕ್ಕೆ ಹೊಲಿಸಿದ ಅರ್ಧ ಕೈಯ—ಎದೆಯ ಮೇಲೆ ಈಜೆ ಅಜೆ ಎರಡು, ಒಳಮಗ್ಗಲಿಗೆ ದೊಡ್ಡ ದೊಂದು ಹೀಗೆ ಮೂರು ಕಿಸೆಗಳ—ಅಂಗಿಯನ್ನು ಹುಡುಕಹತ್ತಿದ ಗೋಡೆಗೆ ಜಡಿದ ಮೊಳೆಗೆ ತೂಗಿಸಿದ ನೆನಪು ಅತನಿಗೆ. ಆದರೆ ಎಲ್ಲಿಯೂ ಕಾಣದು. "ಆರೆ! ಅಂಗಿಯೆಲ್ಲಿ ಹೊಯ್ತಪ್ಪಾ! ಹೌದೇ, ಇಲ್ಲಿದ್ದ ಅಂಗಿ ನೋಡಿದ್ದೆ ನೀ?" ಹೆಂಡತಿಯನ್ನು ಕೇಳಿದ. ಯಾರಾದರೂ ಬಂದು ಪದು ಕ್ಯೆಜಾಚಿಕೊಂಡು ಹೋದರೆ ಎಂದು ತಾನದನ್ನು ಗಂಟಿನಲ್ಲಿ ಇಟ್ಟಿದ್ದೇನೆಂದು ಹೆಂಡತಿ ಉತ್ತರ ಕೊಟ್ಟಳೆ, ಬೀರಪ್ಪ ರೇಗಿ ನುಡಿದ: "ಇತ್ಲಾಗೆ ನಿನ್ನ ಭದ್ರತೆನೇ ಹಚ್ಚಾಗಿದೆ ನೋಡು. ನಂಗೂ ಒಂದು ಗಂಟ್ಟಲ್ಲಿ ಕಟ್ಟಿಡೂದು ಮಾತ್ರ ಬಾಕಿ ಆದೆ!"

ಗಡಿಬಿಡಿ ಮಾಡಿ ಅಡಿಗೆ ತಯಾರಿಸಿ, ಗಾಬರಿಯಿಂದ ಉಪ್ಪೋ ಸಪ್ಪೆಯೋ ಎಂದು ಕೂಡ ರುಚಿನೋಡದೆ, ಗಪಗಪನೆ ಅಷ್ಟು ತಿಂದು ಬೀರಪ್ಪ ಊಟ ಮುಗಿಸಿದ. ಆ ಮೇಲೆ ಯಾಲಕ್ಕಿಯ ಕವಳದಿಂದ ಬಾಯನ್ನು ಘಮಘಮಿಸಿಕೊಂಡು, ಮೂರು ಕಿಸೆಗಳ ನೀಲಿಯ ಅಂಗಿ ತೊಟ್ಟು, ತಲೆಗೆ ಕೆಂಪು ದೊಡ್ಡ ಗೆರೆಗಳ ಘೋಕರ ಸುತ್ತಿ "ಒಜೆವಿರ ಕೆಲ್ಸ ಅದೆ; ರಾತ್ರೆಯಾಗುವುದು ಕೆಲ್ಸ ತೀರಲಿಕ್ಕೆ. ಒಬ್ಬನೆ ಯಾರು ಮತ್ತೆ ನಡ್ಕೊಂಡು ಬರ್ತಾ? ಕಪ್ಪನಲ್ಲಿ ಬರ್ತೇನೆ; ನೀ ಬಾಗಿಲಹಾಕಿ ಮಲಗು!" ಎಂದು ಬೀರಪ್ಪ ಮನೆಯಿಂದ ಹೊರಬಿದ್ದ.

ಬೀರಪ್ಪ ಉತ್ಸಾಹದಿಂದ ನಾಗಿದ. ಆ ರಾತ್ರಿಯೆಲ್ಲ ಪುಟ್ಟಿ ಯೋಜನೆ ನಡೆಯಲಿರುವ ಸರಸ-ಸಲ್ಲಾಪಗಳು ಅತನಿಗೆ ತೋರಿ ಕೊಂಡುವು. ಇಷ್ಟೆಲ್ಲ ಆಗುವವರೆಗೆ ಕೋಳಿ ಕೂಗಿ ಬೆಳಗಾಗುವುದಲ್ಲ ಎಂದು ತೋರಿದ ಕೂಡಲೆ, ಬೀರಪ್ಪನ ಮನಸ್ಸು ಜಪ್ಪೆಯಾಗಿ ಬಿಟ್ಟಿತು. 'ನಾಳೆಯ ಬೆಳಗು ಆಗದೆ ರಾತ್ರಿಯೆ ಉಳಿದು ಬಿಟ್ಟರೆ ಎಷ್ಟು ಚೋಜಾಗುತ್ತಿತ್ತು?' ಎಂದು ದಾ ನಾಗಿದ ಬೀರಪ್ಪನಿಗೆ ತೋರುವಾಗ, ದಂಡಿ ತೀವಪ್ಪ 'ಬೀರಪ್ಪ, ಉತ್ಕೃಷ್ಟ ಬಾರ್ನು ತಾನು ಹೊಂದಲು ಇನ್ನೇನುಪಾಯ ನೂಡಬೇಕಾಯಿತು....?' ಎಂದು ಯೋಚಿಸುತ್ತ, ಬಾಯೊಳಗೆ ತೂರಿದ ಅಡಿಕೆಯ ಹೋಳನ್ನು ಆಗಯಲು ಮೇಲೆದ್ದ ದವಡೆಯನ್ನು ಕೆಳತರುವ ಗಮನವಿಲ್ಲದೆ, ದೀಪ ನೋಡುತ್ತ ಹಾಗೆಯೆ ಕುಳಿತಾಗ, ಆತನ ಬಲಗಣ್ಣು ನೂರು ಬಾರಿ ಹಾರುಕೊಂಡಿತು.

ಗಣಪುನ ಪತ್ತಲಿನಲ್ಲಿ ಕಾಲ್ಬಿದ್ದ ಕೂಡಲೆ ಬೀರಪ್ಪ ನಿಂತ. ಬಿಟ್ಟ. "ಈ ಭಳೀಲಿ ಯಾರು ಮುರಾಪುರಲ್ಲಿ ಬೀಳ್ತರೊ ಕವ್ಲೆ ಳುನೇಲೆ ಬಿದ್ದುಕೊಳ್ಳಾ, ನಸ್ಕಿನಲ್ಲಿ ನಡ್ದಾ" ಎಂದ. ತೋರಿ ಗಣಪು ಬಂದಿದ್ದರೆ—ಎಂಬ ವಿಚಾರ ಆತನಿಗೆ ಆಕಸ್ಮಾತ್ ಬಂದು ಬಿಟ್ಟಿತು. ಆದಕ್ಕೇ ಸದ್ದು ಆಲಿಸುತ್ತ ಸುಮ್ಮಗೆ ನಿಂತ. ಗುಡಿಸಿಲಿನ ಬಾಗಿಲು ಮುಚ್ಚಿತ್ತು, ತಟ್ಟಿಯ ಬಾಗಿಲುಬಿರುಕುಗಳಿಂದ ಬೆಳಕು ಕಾಣಿಸುತ್ತಿತ್ತು. ಬೀರಪ್ಪ ಕಿವಿಗಳನ್ನು ತೀಕ್ಷ್ಣ

ಮೊಡ ಆಲಿಸುತ್ತ ನಿಂತ. ಪುಟ್ಟಿಯ ಯೋಜನೆಯಾಯಿತು ಅವಳ ಬೆಳಗು ಕಣ್ಣು ಳು, ಅವಳ ಉಬ್ಬಿದೆದೆ ಕಣ್ಣಿಗೆ ಕಟ್ಟಿತು. ಈ ಪುಟ್ಟಿಯಾವಾಗಲೂ, ಸಂಗಡ ಆ ಉಬ್ಬಿದೆದೆ ತಂದಲ್ಲದೆ ಹಾಗೆಯೇ ಆತನ ಮನಸ್ಸಿನಲ್ಲಿ ಬರುತ್ತಿರಲಿಲ್ಲ. ಏನ್ಮಾಡಲಿಕ್ಕೂ ಹಿಂದಾಗದ ರಾಮುಒಡೆದಿರ ದರಾರಿ ಹಂಬಲಿಸಿಕೊಂಡ. ಛೇತಿ ದೂರವಾಗಿ ಧೈರ್ಯದಿಂದ ಮುಂದೆ ಸಾಗಿದ.

"ಓ ಪುಟ್ಟಿ!" ಜಾಗಿಲು ನೂಕುತ್ತ ವೀರಪ್ಪ ಕರೆದ

ಪುಟ್ಟಿಮಾತನಾಡಲಿಲ್ಲ. ಜಾಗಿಲು ಹರವಾಯಿತು. ಚಿಮಣಿಯ ಬೆಳಕಿನಲ್ಲಿ ಪುಟ್ಟಿ ತೆಂಗಿನ ಕಡ್ಡಿಗಳನ್ನು ಜೂರಿಯಿಂದ ಕೆತ್ತುತ್ತ ಕುಳಿತಿದ್ದಳು. ವೀರಪ್ಪ ಕೊಂಚ ನಗುತ್ತಲೂ ಹೆದ್ದು ನಡುಗುತ್ತಲೂ 'ಮಾತೂ ಆಡುದಿಲ್ಲಾ ಆಲ್ಸೆ? ಏಂಗೇನೆ?" ಎನ್ನುತ್ತ ಒಳಗೆ ಬಂದು, ತಟ್ಟಿ ಅಷ್ಟಮಾಡಿಕೊಂಡು, ಯಾರಾದರೂ ಹೊರಗಿನಿಂದ ದೂಡಿದರೆ ಮತ್ತೆ ಏಳ್ದ ಜೇಡ ಎಂದು ಅದರ ಬಳ್ಳಿಯನ್ನು ಭದ್ರವಾಗಿ ಕಟ್ಟಿಕೊಂಡ. ಪುಟ್ಟಿಯ ವೀರ ಬಳಿ ಕುಳಿತು, ಹಗ್ಗಮಾಡಿನ ಜಿ ಗುಡಿಸಿಲನ್ನು ನೋಡುತ್ತ "ಪುಟ್ಟಿ, ಈ ಗುಬ್ಬ ತೀರ ಸಣ್ಣಾಯಿತು; ನೋದ್ವಾ ದೇವ್ರ ಮನ್ಸ-ನಾಗಿದ್ದರೆ ಬದಗಡ್ಡೆ ಜಿಟ್ಟಿದಿಂದ ಜೆಲೋ ಎಳಿಗಳೆ ತಂದು ಹೊಸ್ತು ಕಟ್ಸಾ" ಎನ್ನುತ್ತ, ಎಲೆ ಅಡಿಕೆ ಮಾಲಕ್ಕಿ ಅವಳ ಮುಂದೆ ಇಡುತ್ತ "ಈ ಕವ್ಕನಾಡ್ರು ಮದ್ವು ನೋಡಿ: ನೋಡ ಅದ್ರಾ ಮಜೆ! ನೂರುವರ್ಷದ ಮೇಲೂ ಈ ಕಪ್ಪಡ ಮೆಸ್ರು-ಕೊಳ್ಳಚೇಕು. ತಕೊಳೆ!" ಎಂದ.

ಪುಟ್ಟಿ ಮೋರೆ ಮೇಲೆತ್ತಿ ವೀರಪ್ಪನ ಮೋರೆ ನೋಡಿ ತಿಕ್ಕನೆ ನಕ್ಕು ಬಿಟ್ಟು, ಅಲ್ಲಿಂದ ಎದ್ದು ಒಳಮನೆಯಲ್ಲಿ ನಡೆದಳು. ವೀರಪ್ಪನ ಮೈಯೆಲ್ಲ ಜುಂ ಎಂದಿತು. ಅತನು ಪಕ್ಕನೆ ದೀಪ ಆರಿಸಿ, ಹಸಿವ ಕೈಗಳನ್ನು ಮುಂದೆ ಚಾಚಿ 'ಇನ್ನು ಪುಟ್ಟಿ ಕೈಗೆ ಬಂದಳು' ಎಂದು ಹುರುಪಿನಿಂದ ಒಳಜಾಗಲು ಹಾಕಿದ್ದೇ ತಡ, ನೊಣಕಾಲಿನ ಮೇಲೆ ಮನೆಯ ಕೋಳು ಮುರಿಯುತೇ ಏನ್ನು ವಂತೆ, ಚಟ್ಟನೇ ಚೀರಿದ. ಅಮೇಲೆ ಆರ್ತನಾದವೂ ಎದ್ದಿತು. "ತಪ್ಪಾಯ್ತು! ದಮ್ಮಯ್ಯೊ! ಅದನ್ನು ತಿಂತ; ಇದ್ನ ಕುದಿತೆ!" ಎಂದು ಚೀರಿದ. ಅದರೇನು! ವೀರಪ್ಪನ ಮೊಣಕಾಲ ಗಂಟು ಹುಡಿಹುಡಿಯಾಗುವರೆಗೆ—ಕೈಯೊಳಗಿನ ಕರಿ ಕೋಮಾಡಿನ ಜೊಣ್ಣೆ ಹುಡಿಯಾಗುವವರೆಗೆ—ನಿರ್ವಾತವಿಲ್ಲ ಎಂಬಂತೆ ಗಣಪ್ಪ ತಿಳಿದಂತಿತ್ತು.

ಗಲಾಟೆ ಕೇಳಿ ಕೇರಿಯವರೆಲ್ಲರೂ ಕಲೆತರು. ಗಣಪ್ಪ ಮೈಮೇಲೆ ಬಂದವನಂತೆ ಈಗ ಬಯ್ಯುತ್ತಲೂ ಈಗ ಹೊಡೆಯ ಹೋಗುತ್ತಲೂ ಇದ್ದ. ಪುಟ್ಟಿ ಲಕ್ಷ್ಮೀಯನ್ನು ನೆನಸಿ "ಸೀನ ಬಿಡಿ" ಎನ್ನುತ್ತ ತಡೆಯುತ್ತಿದ್ದಳು. ವೀರಪ್ಪನ ಕೈ ಜೋಡಿ-ಸುವಿಕೆಗೆ ಲೆಕ್ಕ ವಿರಲಿಲ್ಲ. ದಮ್ಮಯ್ಯನೆನ್ನುವ ಒದಲು 'ದೇವರು' ಎನ್ನುತ್ತ ಅತನಿಗೆ ಕೈಜೋಡಿಸಿದ್ದರು. ಈ ಆಧಾ ತಾಸಿನಲ್ಲಿ ನದೇಹ ಸ್ವರ್ಗಕ್ಕೆ ಪುಟಿಯುತ್ತಿದ್ದ.

ಅಂತೂ ಆರಾತ್ರಿ ವೀರಪ್ಪ ನಡಕೊಂಡು ಮನೆಗೆ ಬರಲಿಲ್ಲ. ಕೇರಿಯವರು ಹೊತ್ತುಕೊಂಡು ತಂದರು. ವೀರಪ್ಪ ರಾತ್ರಿಯೆಲ್ಲ ಪಟ್ಟುಗಳ ಹೊರನೋವಿಗೂ ಹೆಂಡತಿಯ ನೋಟದ ಒಳ ನೋವಿಗೂ ಬಹಳ ನರಳಿದ.

* * *

ಒಂದು ವರ್ಷವಾದರೂ ನೋವು ಗುಣವಾದರೂ ವೀರಪ್ಪನಿಗೆ ಕಾಲು ಬರಲಿಲ್ಲ. ಭೂಮಿ ಅತನಿಗೆ ತಪ್ಪಿ ಶೀವಪ್ಪ ಪಡೆದ. ಜಗುಲಿಯಲ್ಲಿ ಕುಳಿತುಕೊಂಡೇ ಕಾಲಹರಣಮಾಡುತ್ತಾನೆ. ಗಣಪ್ಪ ತನಗೆ "ಯಿಸ್ವಾಸ್ ಘಾತ" ಮಾಡಿದನಲ್ಲ ಎಂಬ ನೂತೇ ಅತನಿಗೆ ಬಹಳ ಕಚೆಯುತ್ತನೆ.' 'ಅಲಿಕೋರೆಗೆ ಹೋಗು-ತ್ತೇನೆಂದು ಹೇಳಿ ಹೋಗದೆ ಮನೆಯಲ್ಲಿ ಆಡಗಿ ಕುಳಿತದ್ದು ವಿಶ್ವಾಸಘಾತವಲ್ಲದೆ ಮತ್ತೇನು?' ಎಂದು ಅತನ ತರ್ಕ. ಕುಳಿ ತಂತೆ "ಒಮ್ಮೆ ಕಾಲು ಗುಣವಾಗಿ ನುರಹತ್ತಲಿಕ್ಕಾಗಲಿ; ಒಂದು ಕಾಯಿಯ ಬದಲು ಹತ್ತು ತಟ್ಟು ಹೇಳಿ. ನೂರಾರು ಕಾಯಿ ಬಾಕಿ ಮಾಡಿಸಿ. ಗಣಪ್ಪಗೆ ಆ ಏಟ್ಲ ತಪ್ಪಿಸದಿದ್ದರೆ ತಾನು ಕೋವಿಯ ಮನೆಯಲ್ಲಿ ಹುಟ್ಟಿದ್ದು ಸುಳ್ಳು!" ಎಂದು ವೀರಪ್ಪ ಯೋಚಿಸುತ್ತಾನೆ. ಆದರೆ 'ಆ ಪಾಪ ಬೇರೆ ಜೇಡ' ಎಂಬ ಕಾಲ್ಗಳು ಯೋಚಿಸಿದೆಯೋ ಎಂಬಂತೆ ವೀರಪ್ಪನಿಗೆ ಕಾಲು ಬರಲಿಲ್ಲ.

ಈಗ ಅತನ ಸಂಸಾರ ಕಷ್ಟಕ್ಕೆ ಬಂದಿದ. ದಿನಾಲು ಹೆಂಡತಿ ಆದು ಪೈಬು ನಡೆದು ಕಾಡಿಗೆ ಹೋಗಿ, ಉರುವಲ ತಂದು ಮಾರಿ ಸಂಸಾರ ಸಾಗಿಸುತ್ತಾಳೆ. ಲಕ್ಷ್ಮಿ ದಿನದ ಈ ಕಷ್ಟದಿಂದ ಸೊರಗಿ ಕಟ್ಟಿಯಾ! ನ್ವಾ ಮೋರೆ ಕಂದಿದೆ. ಅದನ್ನು ನೋಡಿ ವೀರಪ್ಪ ತನ್ನ ದುರ್ದಾಶೆ ನೆನಸಿ, ತನಗೆ ದುರ್ಬುದ್ಧಿ ಏಕೆ ಬಂದಿತು?—ಎಂದು ಯೋಚಿಸುವುದೂ ಉಂಟು.

---


## ಪ್ರಸವ ವಿಜ್ಞಾನ

ಗರ್ಭಧಾರಣೆ, ಗರ್ಭಲಕ್ಷಣ, ಗರ್ಭಿಣಿಯ ದಿನಚರಿ, ಗರ್ಭಿಣೀ ರೋಗಗಳೂ ಅವುಗಳ ಚಿಕಿತ್ಸೆಗಳೂ, ಸಹಜ ಪ್ರಸವನಿರ್ಣಯರೀತಿ, ಅಸ್ವಾಭಾವಿಕ ಮತ್ತು ಸಂಕೀರ್ಣ ಪ್ರಸವ ರೀತಿಗಳು, ಬಾಣಂತೀ ರೋಗ-ಗಳು ಅವುಗಳ ಚಿಕಿತ್ಸೆಗಳು, ಶಿಶು-ಬಾಣಂತಿಯರ ರಕ್ಷಣಾ ಮೊದಲಾ. ದವನ್ನು ಸರಳವಾಗಿಯೂ ಸಚಿತ್ರವಾಗಿಯೂ ವಿವರಿಸುವ ಪುಸ್ತಕ. ಸಮಾನಾರ್ಥಕ ಚಿತ್ರಗಳನ್ನೆ. ವ್ಹಿ. ಪಿ. ಕಳಿಸುವುದಿಲ್ಲ.

ರೂ ೨—೪—೦ ಪುಸ್ತಕ ಪಾಸಿಯಾರ್ಡರು ಮಾಡಿರಿ.

ಮಾರಾಟದ ಹಕ್ಕುಗಳಿಗೆ.

ಮಾಡರ್ನ್ ಔಷಧಾಲಯ, ದೊಡ್ಡಬಳ್ಳಾಪುರ, (ಬೆಂಗಳೂರು.)

ಕಟ್ಟಿಕೊ; ಮತ್ತೆ ಒಂಬತ್ತು ತಾಸಿಗೆ ಹೊಡ್ಕೊಂಡು ರಾತ್ರೆ ಅಂಕೋಲೆ ಮುಟ್ಟು' ಅಂತ ಹೇಳ್ಸರೆ!" ಗಣಪು ಕೊಂಯ್-ಗುಟ್ಟಿದ.

"ಆದೂ ಹೌದೋ. ರಾಮು ಶಾನಭಾಗ್ರು ಆವರು! ಏನ್ಮಾಡೂಕೊ ಹಿಂದಾದೌರಲ್ಲಾ!!" ಎಂದು ಬೀರಪ್ಪ ನುಡಿದು, 'ದೇವ್ರು ಮನ್ಸನಲ್ಲಿ ಆಗೂದಿದ್ರೆ ಎಲ್ಲಾ ಅನುಕೂಲಾಗ್ತಾದೆ ಅಂದ್ರೆ; ಇದ್ಕೇ ಹೇಳೂದು' ಎಂದು ಚಿಂತಿಸುತ್ತ ಗಣಪುನ ಸಂಗಡ ಲೈನ್‌ದಾರಿಗೆ ಬಂದ. ಗಣ್ಪು ತಾರಿಯ ಕಡೆಗೆ ತೆರಳಿದ. ಬೀರಪ್ಪ ಅಂಗಡಿಗೆ ಬಂದ.

ಪೇಟೆಗೆ ಬಂದಾಗ ಬಂದ ಕೆಲಸ ಬೀರಪ್ಪನಿಗೆ ಮರೆವಾಗಿತ್ತು. ಗಣಪು ತೆರವು ಮಾಡಿದ ಜಾಗ ತಾನು ಹೇಗೆ ಆಕ್ರಮಿಸಬೇಕು?—ಎಂದು ಯೋಜನೆ ಒಂದು ಬದಿಗೆ ನಡೆಯುತ್ತಲೇ ಇದ್ದರೂ, ಇನ್ನೊಂದು ದಿಕ್ಕಿನಲ್ಲಿ ಆಕ್ರಮಿಸುವುದು ಹದಿನಾರಾಣೆ ಖಾತ್ರಿ ಯೆಂಬಂತೆ ನೆಮ್ಮದಿ. ಆದಕ್ಕೇ ತಾನು ಪೇಟೆಗೆ ಬಂದ ಕಾರಣ ವಿಚಾರಿಸುತ್ತ ಹುಡುಕಿಕೊಳ್ಳದೆ, ಬರೀ ಕವಳದ ಸಾಮಗ್ರಿ ಕೊಂಡುಕೊಂಡ. ಅದನ್ನು ಕೊಳ್ಳುವಾಗ ಪುಟ್ಟಿಯ ಯೋಚನೆಯಾಗಿ ಯಾಲಕ್ಕಿಯನ್ನೂ ತಕ್ಕೊಂಡ. 'ಈ ಯಾಲಕ್ಕಿ ಕನ್ಯದ ರುಚಿ ತುಸು ಪುಟ್ಟಿ ನೋಡಲಿ' ಎಂದು ಆತನಿಗೆ ವಿಚಾರ ಬಾರದಿರಲಿಲ್ಲ.

ಹೊತ್ತು ಮುಳುಗುವಾಗ ಬೀರಪ್ಪ ಬೇಗಬೇಗನೆ ಬಂದ. ಇನ್ನು ಲೈನದಾರಿ ಕೇರಿ ಹೋಗುವಾಗ, ಒಂದ್ಸೈವತ್ತು ಮಾರು ದೂರ ಹೊಳೆ ಕಂಡು 'ಗಣಪು ಅಕಳ ಸಮೇತ ಹೊಳೆ ದಾಟಿ-ಕೊಂಡನೋ ಹೇಗೆ ನೋಡುವ' ಎಂದು ಆತನಿಗೆ ತೋರಿತು. ಆದರೆ ದಂಡಿ ಶೀವಪ್ಪನ ದೈವ ಬಲಿಷ್ಠವಾದದ್ದು. 'ಬಂದು ರಾಮು ಒಡೆದಿರು ಆವರು! ಎಲುಬು ಪುಡಿಪುಡಿ ಮಾಡಿ ಬಿಡೂರು' ಎಂದು; 'ಎರಡು ಪುಟ್ಟಿ ಗುಡಿಸಿಲಿನಲ್ಲಿ ಏಕಾಕಿ ಇದ್ದಾಳೆ' ಸೂಚನೆ ಮಾಡಲು ಸುಸಮಯ' ಎಂದು. ಬೀರಪ್ಪ 'ಗಣಪು ದಾಟಿರಬೇಕು' ಎಂದುಕೊಂಡು ನೇರವಾಗಿ ಬಂದುಬಿಟ್ಟ.

ಪುಟ್ಟಿ ಅಂಗಳದಲ್ಲಿ ಹಿಡಿಮಾಡಲು ತೆಂಗಿನ ಕಡ್ಡಿಗಳನ್ನು ಕೆತ್ತುತ್ತ ಕುಳಿತಿದ್ದಳು ಮಸುಮಸುಕಾಗಿತ್ತು. "ಪುಟ್ಟಿ, ಈ ಹೊತ್ತು ಮೊತರ್ಗ ಅನ್ಕೊಲದೆ. ರಾತ್ರೆ ಬರಲೇನೆ? ನಿನ್ನ ನೋಡ್ದ-ಲಾಗಾಯ್ತು, ನಂಗೆ ಜೀಮಾನೇ ಸಮನಿಲ್ಲ! ಬರಲೇನೆ?" ನಡುಕುದನಿಯಲ್ಲಿ ಬೀರಪ್ಪನೆಂದ.

ಬೆಳಕಿದ್ದರೆ ಪುಟ್ಟಿಯ ಕಪ್ಪು ತುಟಿಗಳ ಮೇಲೆ ಹರಿದ ತೀರ ಕಿರುನಗು ಕಂಡು, ಕಿರುದನಿಯಲ್ಲಿ ಅವಳೆಂದ 'ಆಗೂದು' ಎಂಬ ಮಾತಿಗೆ ಬೀರಪ್ಪ ಬೇರೆ ಅರ್ಥ ಕಟ್ಟುತ್ತಿದ್ದನೋ ಏನೊ!

ಮನೆಗೆ ಬಂದವನೆ ತಲೆಯ ಪಂಜೆ ತೆಗೆದಿಡುವ ಮೊದಲು, "ಊಟಕ್ಕೆ ಆಗಿದೆಯೇನೆ?" ಎಂದು ಮೊದಲು ವಿಚಾರಿಸಿದ. "ಇನ್ನೂ ದೀಪ ಹಚ್ಚಲಿಲ್ಲಾ, ಊಟಕ್ಕೆಲ್ಲಿ? ಇಂದು ಈ ನಮೂನೆ ಹಸಿವೆಯಾವುದಪ್ಪಾ!" ಲಕ್ಷ್ಮಿಯೆಂದಳು. "ಹಾನೆ! ನೀ ತೋಲ ಬುದ್ಸಂತಿ ಆಗಬೇಡಾ. ಹಂ! ಊಟಕ್ಕೆ ಬೆಗಾಗ್ಲಿ!"

ಆ ಸೋಲೆ ಹಬ್ಬಕ್ಕೆ ಹೊಲಿಸಿದ ಅರ್ಧ ಕೈಯ—ಎದೆಯ ಮೇಲೆ ಈಜೆ ಈಜೆ ಎರಡು, ಒಳಮಗ್ಗಲಿಗೆ ದೊಡ್ಡದೊಂದು ಹೀಗೆ ಮೂರು ಕಿಸೆಗಳ—ಅಂಗಿಯನ್ನು ಹುಡುಕಹತ್ತಿದ ಗೋಣಿಗೆ ಜಡಿದ ಮೊಳೆಗೆ ತೂಗಿಸಿದ ನೆನಪು ಆತನಿಗೆ. ಆದರೆ ಎಲ್ಲಿಯೂ ಕಾಣದು. "ಅರೆ! ಅಂಗಿಯೆಲ್ಲಿ ಹೊಯ್ತಪ್ಪಾ! ಹೌದೇ, ಇಲ್ಲಿದ್ದ ಅಂಗಿ-ನೋಡಿದ್ದ್ಯೆ?" ಹೆಂಡತಿಯನ್ನು ಕೇಳಿದ. ಯಾರಾದರೂ ಬಂದವರು ಕೈಚಾಚಿಕೊಂಡು ಹೋದರೆ ಎಂದು ತಾನದನ್ನು ಗಂಟಿ-ನಲ್ಲಿ ಇಟ್ಟಿದ್ದೇನೆಂದು ಹೆಂಡತಿ ಉತ್ತರ ಕೊಟ್ಟರೆ, ಬೀರಪ್ಪ ರೇಗಿ ನುಡಿದ: "ಇತ್ಲಾಗೆ ನಿನ್ನ ಭದ್ರತೆನೇ ಹಚ್ಚಾಗಿದೆ ನೋಡು; ನಂಗೂ ಒಂದು ಗಂಟ್ಕಲ್ಲಿ ಕಟ್ಟಿಡೂದು ಮಾತ್ರ ಬಾಕಿ ಅದೆ!"

ಗಡಿಬಿಡಿ ಮಾಡಿ ಅಡಿಗೆ ತಯಾರಿಸಿ, ಗಾಬರಿಯಿಂದ ಉಪ್ಪೋ ಸಪ್ಪೆಯೋ ಎಂದು ಕೂಡ ರುಚಿನೋಡದೆ, ಗಪಗಪನೆ ಇಷ್ಟು ತಿಂದು ಬೀರಪ್ಪ ಊಟ ಮುಗಿಸಿದ. ಆ ಮೇಲೆ ಯಾಲಕ್ಕಿಯ ಕವಳದಿಂದ ಬಾಯನ್ನುಘಮಘಮಿಸಿಕೊಂಡು, ಮೂರು ಕಿಸೆಗಳ ನೀಲಿಯ ಅಂಗಿ ತೊಟ್ಟು, ತಲೆಗೆ ಕೆಂಪು ದೊಡ್ಡ ಗೆರೆಗಳ ಧೋತರ ಸುತ್ತಿ "ಒಡೆದಿರ ಕೆಲ್ಸ ಆದೆ; ರಾತ್ರೆಯಾಗುವುದು ಕೆಲ್ಸ ತೀರಲಿಕ್ಕೆ. ಒಬ್ಬನೆ ಯಾರು ಮತ್ತೆ ನಡ್ಕೊಂಡು ಬರ್ತಾ? ಕಪ್ಪನಲ್ಲಿ ಬರ್ತೇನೆ; ನೀ ಜಾಗಿಲಪಾಕಿ ಮಲಗು!" ಎಂದು ಬೀರಪ್ಪ ಮನೆಯಿಂದ ಹೊರಬಿದ್ದ.

ಬೀರಪ್ಪ ಉತ್ಸಾಹದಿಂದ ಸಾಗಿದ. ಆ ರಾತ್ರಿಯೆಲ್ಲ ಪುಟ್ಟಿಯೊಡನೆ ನಡೆಯಲಿರುವ ಸರಸ-ಸಲ್ಲಾಪಗಳು ಆತನಿಗೆ ತೋರಿಕೊಂಡುವು. ಇಷ್ಟೆಲ್ಲ ಆಗುವವರೆಗೆ ಕೋಳಿ ಕೂಗಿ ಬೆಳ್ಳಗೆ ಬೆಳಗಾಗುವುದಲ್ಲ ಎಂದು ತೋರಿದ ಕೂಡಲೆ, ಬೀರಪ್ಪನ ಮನಸ್ಸು ಜಿಪ್ಪೆಯಾಗಿ ಬಿಟ್ಟಿತು. 'ನಾಳೆಯು ಬೆಳಗು ಆಗದೆ ರಾತ್ರಿಯೇ ಉಳಿದು ಬಿಟ್ಟರೆ ಎಷ್ಟು ಮೋಜಾಗುತ್ತಿತ್ತು?' ಎಂದು ದಾರಿ ಸಾಗಿದ ಬೀರಪ್ಪನಿಗೆ ತೋರುವಾಗ, ದಂಡೀ ಶೀವಪ್ಪ 'ಬೀರಪ್ಪನ ಉತ್ಕೃಷ್ಟ ಬಾರ್ನು ತಾನು ಹೊಂದಲು ಇನ್ನೇನುಪಾಯ ಮಾಡಬೇಕಾಯಿತು....?' ಎಂದು ಯೋಚಿಸುತ್ತ, ಬಾಯೊಳಗೆ ತೂರಿದ ಅಡಿಕೆಯ ಹೋಳನ್ನು ಅಗಿಯಲು ಮೇಲೆದ್ದ ದವಡೆಯನ್ನು ಕೆಳತರುವ ಗಮನವಿಲ್ಲದೆ, ದೀಪ ನೋಡುತ್ತ ಹಾಗೆಯೇ ಕುಳಿತಾಗ, ಆತನ ಬಲಗಣ್ಣು ಮೂರು ಬಾರಿ ಹಾರಿಕೊಂಡಿತು

ಗಣಪುನ ಹಿತ್ತಲಿನಲ್ಲಿ ಕಾಲ್ಬಿದ್ದ ಕೂಡಲೆ ಬೀರಪ್ಪ ನಿಂತುಬಿಟ್ಟ. "ಈ ಛಳೀಲಿ ಯಾರು ಮುಶಾಪುರಿಲ್ಲಿ ಬೀಳ್ತರೆ? ಕಪ್ಸೆ ಫುನೇಲೆ ಬಿದ್ದುಕೊಳ್ಳಾ, ನಸ್ಕಿನಲ್ಲಿ ನಡ್ದಾ" ಎಂದು ತೋರಿ ಗಣಪು ಬಂದಿದ್ದರೆ—ಎಂಬ ವಿಚಾರ ಆತನಿಗೆ ಅಕಸ್ಮಾತ್ ಬಂದು ಬಿಟ್ಟಿತು. ಅದಕ್ಕೇ ಸದ್ದು ಆಲಿಸುತ್ತ ಸುಮ್ಮಗೆ ನಿಂತ ಗುಡಿಸಿಲಿನ ಬಾಗಿಲು ಮುಚ್ಚಿತ್ತು, ತಟ್ಟಿಯ ಬಾಗಿಲುಬಿರುಕುಗಳಿಂದ ಬೆಳಕು ಕಾಣಿಸುತ್ತಿತ್ತು. ಬೀರಪ್ಪ ಕಿವಿಗಳನ್ನು ತೀಕ್ಷ್ಣ-

ಮಾಡಿ ಅಲಸುತ್ತ ನಿಂತ. ಪುಟ್ಟಿಯ ಯೋಚನೆಯಾಯಿತು ಅವಳ ಬೆಳಗು ಕಣ್ಣುಳು, ಅವಳ ಉಬ್ಬೆದೆ ಕಣ್ಣಿಗೆ ಕಟ್ಟಿತು. ಈ ಪುಟ್ಟಿಯಾವಾಗಲೂ, ಸಂಗಡ ಆ ಉಬ್ಬೆದೆ ತಂದಲ್ಲದೆ ಹಾಗೆಯೇ ಆತನ ಮನಸ್ಸಿನಲ್ಲಿ ಬರುತ್ತಿರಲಿಲ್ಲ. ಏನ್ಮಾಡಲಿಕ್ಕೂ ಹಿಂದಾಗದ ರಾಮುಒಡೆದಿರ ದರಾರಿ ಹಂಬಲಿಸಿಕೊಂಡ. ಭೀತಿ ದೂರವಾಗಿ ಧೈರ್ಯದಿಂದ ಮುಂದೆ ಸಾಗಿದ.

"ಓ ಪುಟ್ಟಿ!" ಬಾಗಿಲು ನೂಕುತ್ತ ಬೀರಪ್ಪ ಕರೆದ.

ಪುಟ್ಟಿ ಮಾತನಾಡಲಿಲ್ಲ. ಬಾಗಿಲು ಹರವಾಯಿತು. ಜಿಮಣಿಯ ಬೆಳಕಿನಲ್ಲಿ ಪುಟ್ಟಿ ತೆಂಗಿನ ಕಡ್ಡಿಗಳನ್ನು ಜೂರಿಯಿಂದ ಕೆತ್ತುತ್ತ ಕುಳಿತಿದ್ದಳು. ಬೀರಪ್ಪ ಕೊಂಚ ನಗುತ್ತಲೂ ಹೆಜ್ಜು ನಡುಗುತ್ತಲೂ 'ಮಾತೂ ಆಡುದಿಲ್ಲಾ ಆಲ್ಕೆ? ಹಿಂಗೇನೆ?" ಎನ್ನುತ್ತ ಒಳಗೆ ಬಂದು, ತಟ್ಟಿ ಅಡ್ಡವಾಡಿಕೊಂಡು, ಯಾರಾದರೂ ಹೊರಗಿನಿಂದ ದೂಡಿದರೆ ಮತ್ತೆ ಏಳ್ನು ಬೀಡ ಎಂದು ಅದರ ಬಳ್ಳಿಯನ್ನು ಭದ್ರವಾಗಿ ಕಟ್ಟಿಕೊಂಡ. ಪುಟ್ಟಿಯ ತೀರ ಬಳಿ ಕುಳಿತು, ತಗ್ಗು ಮಾಡಿನ ಆ ಗುಡಿಸಿಲನ್ನು ನೋಡುತ್ತ "ಪುಟ್ಟಿ, ಈ ಗುಬ್ಬಿ ತೀರ ಸಣ್ಣಾಯಿತು; ನೋಡ್ವಾ ದೇವ್ರು ಮನ್ಸ-ನಾಗಿದ್ದರೆ ಬರಗದ್ದೆ ಬೆಟ್ಟದಿಂದ ಜೆಲೋ ಎಳಿಗಿಳೆ ತಂದು ಹೊಸ್ತು ಕಟ್ವಾ" ಎನ್ನುತ್ತ, ಎಲೆ ಅಡಿಕೆ ಯಾಲಕ್ಕಿ ಅವಳ ಮುಂದೆ ಇಡುತ್ತ "ಈ ಕವ್ಳಾನಾದ್ರು ಮದ್ದು ನೋಡೆ; ನೋಡ ಅದ್ರಾ ಮಜೆ! ನೂರುವರ್ಷದ ನೆಲೂ ಈ ಕವ್ಳದ ಜೆಸ್ರು-ಕೊಳ್ಳಬೇಕು. ತಕೊಳೆ!" ಎಂದ.

ಪುಟ್ಟಿ ಮೋರೆ ಮೇಲೆತ್ತಿ ಬೀರಪ್ಪನ ಮೋರೆ ನೋಡಿ ಕಿಕ್ಕನೆ ನಕ್ಕು ಬಿಟ್ಟು, ಅಲ್ಲಿಂದ ಎದ್ದು ಒಳಮನೆಯಲ್ಲಿ ನಡೆದಳು. ಬೀರಪ್ಪನ ಮೈಯೆಲ್ಲ ಜುಂ ಎಂದಿತು. ಆತನು ಪಕ್ಕನೆ ದೀಪ ಆರಿಸಿ, ಹಸಿದ ಕೈಗಳನ್ನು ಮುಂದೆ ಚಾಚಿ 'ಇನ್ನು ಪುಟ್ಟಿ ಕೈಗೆ ಬಂದಳು' ಎಂದು ಹುರುಪಿನಿಂದ ಒಳಬಾಗಿಲು ದಾಟಿದ್ದೇ ತಡ, ಮೊಣಕಾಲಿನ ಮೇಲೆ ಮನೆಯ ಕೋಳು ಮುರಿಯಿತೇ ಎನ್ನುವಂತೆ, ಚಿಟ್ಟನೇ ಚೀರಿದ. ಆಮೇಲೆ ಆರ್ತನಾದವೂ ಎದ್ದಿತು. "ತಪ್ಪಾಯ್ತು! ದಮ್ಮಯ್ಯೊ! ಅದನ್ನು ತಿಂತೆ; ಇದ್ನ ಕುದಿತೆ!" ಎಂದು ಚೀರಿದ. ಅದರೇನು! ಬೀರಪ್ಪನ ಮೊಣಕಾಲ ಗಂಟು ಹುಡಿಹುಡಿಯಾಗುವರೆಗೆ—ಕೈಯೊಳಗಿನ ಕರಿ ಕೋಮಾರಿನ ಹೊಣ್ಣೆ ಹುಡಿಯಾಗುವವರೆಗೆ—ನಿರ್ವಾಹವಿಲ್ಲ ಎಂಬಂತೆ ಗಣಪು ತಿಳಿದಂತಿತ್ತು.

ಗಲಾಟೆ ಕೇಳಿ ಕೇರಿಯವರೆಲ್ಲರೂ ಕಲೆತರು. ಗಣಪು ಮೈಮೇಲೆ ಬಂದವನಂತೆ ಈಗ ಬಯ್ಯುತ್ತಲೂ ಈಗ ಜೊಡೆಯು ಹೋಗುತ್ತಲೂ ಇದ್ದ. ಪುಟ್ಟಿ ಲಕ್ಷ್ಮಿಯನ್ನು ನೆನೆಸಿ "ಪಾಪ ಬಿಡಿ" ಎನ್ನುತ್ತ ತಡೆಯುತ್ತಿದ್ದಳು. ಬೀರಪ್ಪನ ಕೈ ಜೋಡಿ-ಸುವಿಕೆಗೆ ಲೆಕ್ಕ ಎರಲಿಲ್ಲ. ದಮ್ಮಯ್ಯನೆನ್ನುವ ಬದಲು 'ದೇವರು' ಎನ್ನುತ್ತ ಆತನಿಗೆ ಕೈಜೋಡಿಸಿದ್ದರೆ, ಈ ಆರ್ತ-ತಾಸಿನಲ್ಲಿ ಸದೇಹ ಸ್ವರ್ಗಕ್ಕೆ ಮುಟ್ಟುತ್ತಿದ್ದ.

ಅಂತೂ ಅರಾತ್ರಿ ಬೀರಪ್ಪ ನಡಕೊಂಡು ಮನೆಗೆ ಬರಲಿಲ್ಲ. ಕೇರಿಯವರು ಹೊತ್ತುಕೊಂಡು ತಂದರು. ಬೀರಪ್ಪ ರಾತ್ರಿಯೆಲ್ಲ ಪೆಟ್ಟುಗಳ ಹೊರನೋವಿಗೂ ಹೆಂಡತಿಯ ನೋಟದ ಒಳ ನೋವಿಗೂ ಬಹಳ ನರಳಿದ.

* * * *

ಒಂದು ವರ್ಷವಾದರೂ ನೋವು ಗುಣವಾದರೂ ಬೀರಪ್ಪನಿಗೆ ಕಾಲು ಬರಲಿಲ್ಲ. ಭೂಮಿ ಆತನಿಗೆ ತಪ್ಪಿ ಶೀವಪ್ಪ ಪಡೆದ. ಜಗುಲಿಯಲ್ಲಿ ಕುಳಿತುಕೊಂಡೇ ಕಾಲಹರಣಮಾಡುತ್ತಾನೆ. ಗಣಪು ತನಗೆ "ಯಿಸ್ವಾಸ್ ಘಾತ" ಮಾಡಿದನಲ್ಲ ಎಂಬ ಮಾತೇ ಆತನಿಗೆ ಬಹಳ ಕಟಿಯುತ್ತದೆ. 'ಅಂಕೋಲೆಗೆ ಹೋಗು-ತ್ತೇನೆಂದು ಹೇಳಿ ಹೋಗದೆ ಮನೆಯಲ್ಲಿ ಅಡಗಿ ಕುಳಿತದ್ದು ವಿಶ್ವಾಸಘಾತವಲ್ಲದೆ ಮತ್ತೇನು?' ಎಂದು ಆತನ ತರ್ಕ. ಕುಳಿತಂತೆ "ಒಮ್ಮೆ ಕಾಲು ಗುಣವಾಗಿ ಮರಹತ್ತಲಕ್ಕಾಗಲಿ; ಒಂದು ಕಾಯಿಯ ಬದಲು ಹತ್ತು ತಟ್ಟು ಹೇಳಿ, ನೂರಾರು ಕಾಯಿ ಬಾಕಿ ಮಾಡಿಸಿ, ಗಣಪುಗೆ ಆ ಹಿತ್ಲ ತಪ್ಪಿಸದಿದ್ದರೆ ತಾನು ಕೋವಿಯ ಮನೆಯಲ್ಲಿ ಹುಟ್ಟಿದ್ದು ಸುಳ್ಳು!" ಎಂದು ಬೀರಪ್ಪ ಯೋಚಿಸುತ್ತಾನೆ. ಆದರೆ 'ಆ ಪಾಪ ಬೇರೆ ಬೇಡ' ಎಂದು ಕಾಲ್ಗಳು ಯೋಚಿಸಿವೆಯೋ ಎಂಬಂತೆ ಬೀರಪ್ಪನಿಗೆ ಕಾಲು ಬರಲಿಲ್ಲ.

ಈಗ ಆತನ ಸಂಸಾರ ಕಷ್ಟಕ್ಕೆ ಬಂದಿದೆ. ದಿನಾಲು ಹೆಂಡತಿ ಆರು ಮೈಲು ನಡೆದು ಕಾಡಿಗೆ ಹೋಗಿ, ಉರುವಲ ತಂದು ಮಾರಿ ಸಂಸಾರ ಸಾಗಿಸುತ್ತಾಳೆ. ಲಕ್ಷ್ಮಿ ದಿನದ ಈ ಕಷ್ಟದಿಂದ ಸೊರಗಿ ಕಡ್ಡಿಯಾಗಿದ್ದಾಳೆ ಪೋರೆ ಕುಂದಿದೆ. ಅದನ್ನು ನೋಡಿ ಬೀರಪ್ಪ ತನ್ನ ದುರ್ದಶೆ ನೆನೆಸಿ, ತನಗೆ ದುರ್ಬುದ್ಧಿ ಏಕೆ ಬಂದಿತು?—ಎಂದು ಯೋಚಿಸುವುದೂ ಉಂಟು.

---


# ಪ್ರಸವ ವಿಜ್ಞಾನ

ಗರ್ಭಧಾರಣೆ, ಗರ್ಭಲಕ್ಷಣ, ಗರ್ಭಿಣಿಯ ದಿನಚರಿ, ಗರ್ಭಿಣೀ ರೋಗಗಳೂ ಅವುಗಳ ಚಿಕಿತ್ಸೆಗಳೂ, ಸಹಜ ಪ್ರಸವನಿರ್ವಹಣರೀತಿ, ಅಕ್ರಮ ಮತ್ತು ಸಂಕೀರ್ಣ ಪ್ರಸವ ರೀತಿಗಳು, ಬಾಣಂತೀ ರೋಗ-ಗಳು ಅವುಗಳ ಚಿಕಿತ್ಸೆಗಳು, ಶಿಶು-ಬಾಣಂತಿಯರ ರಕ್ಷಣಾ ಮೊದಲಾ-ದುವನ್ನು ಸರಳವಾಗಿಯೂ ಸಚಿತ್ರವಾಗಿಯೂ ವಿವರಿಸುವ ಪುಸ್ತಕ ಸುಮಾರು ೪೦ ಚಿತ್ರಗಳಿವೆ. ನ್ಲಿ. ಪಿ. ಕಳಿಸುವದಿಲ್ಲ.

ರೂ ೨—೪—೦ ಯನ್ನು ಮನಿಯಾರ್ಡರು ಮಾಡಿರಿ.

ಮೂರಾಟದ ಪೂರ್ಣಾಧಿಕಾರಿಗಳು.

**ಮಾಡರ್ನ್ ಔಷಧಾಲಯ, ದೊಡ್ಡಬಳ್ಳಾಪುರ, (ಬೆಂಗಳೂರು.)**

# ಸಂಜನಿತಗಳು

( By-products ) *

ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ
ಎಂ. ಎಸ್‌ಸಿ. ಹೈದರಾಬಾದ್.

★

**ನಾವು ಕಸವೆಂದು ತಿಳಿದು ಬಿಸಾಡಿಬಿಡುತ್ತಿರುವ 'ಬೆಲೆಬಾಳದ' ಪದಾರ್ಥಗಳಿಂದಲೂ ರಸವನ್ನು ಹೊರಡಿಸಿ, ಇಂದು ಅವಕ್ಕೆ ಬೆಲೆ ತಂದುಕೊಡುತ್ತಿದ್ದಾರೆ ವಿಜ್ಞಾನ ವಿಶಾರದರು.**

★

ನಾವು ಯಾವುದಾದರೊಂದು ವಸ್ತುವನ್ನು ಸಿದ್ಧಪಡಿಸುವಾಗ, ಅದೇ ಅವಧಿಯಲ್ಲಿ ನಮಗೆ ಬೇಕಾದ ಮುಖ್ಯವಸ್ತುವು ಸಿದ್ಧವಾಗುತ್ತಿರುವುದಲ್ಲದೆ, ಅದರ ಜೊತೆಗೆ ಇತರ ವಸ್ತುಗಳು ಕೂಡ ತಯಾರಾಗುತ್ತವೆ. ಮುಖ್ಯ ವಸ್ತುವನ್ನು ಬಿಟ್ಟು, ಅದರ ಜೊತೆಗೆ ತಯಾರಾಗುವ ಇತರ ವಸ್ತುಗಳಿಂದ ಮೊದಮೊದಲು ಏನೂ ಉಪಯೋಗ ತೆಗೆದುಕೊಳ್ಳದಿದ್ದರೂ, ಇತ್ತೀಚೆಗೆ ರಸಾಯನ ಶಾಸ್ತ್ರಜ್ಞರು ಬಹಳ ಬೆಲೆಬಾಳುವ ವಸ್ತುಗಳನ್ನು ಅವುಗಳಿಂದ ತಯಾರಿಸಿ, ಅವುಗಳ ಮಹತ್ವವನ್ನು ತೋರಿಸಿಕೊಟ್ಟಿದ್ದಾರೆ. ಮುಖ್ಯವಸ್ತು ತಯಾರಾಗುವಾಗ ಅದರ ಜೊತೆಗೆ ತಯಾರಾಗುವ ವಸ್ತುಗಳಿಗೆ 'ಸಂಜನಿತ ( By-products )' ಗಳೆಂದು ಹೆಸರು.

ದೊಡ್ಡ ದೊಡ್ಡ ಕಾರಖಾನೆಗಳಲ್ಲಿ ಮುಖ್ಯ ವಸ್ತುವಿಗಿಂತ ಸಂಜನಿತಗಳೇ ಹೆಚ್ಚಿನ ಪ್ರಮಾಣದಲ್ಲಿ ಲಭಿಸುತ್ತವೆ. ಕಾರಣ ಪ್ರತಿಯೊಂದು ಕಾರಖಾನೆಯವರು ಈ ಸಂಜನಿತಗಳಿಂದ ಯಾವ ಯಾವ ವಸ್ತುಗಳನ್ನು ತಯಾರಿಸಬಹುದು ಮತ್ತು ಇವುಗಳನ್ನು ಯಾವ ಯಾವ ಉದ್ಯಮಗಳಲ್ಲಿ ಉಪಯೋಗಿಸಬಹುದೆಂಬುದನ್ನು ರಸಾಯನಶಾಸ್ತ್ರಜ್ಞರಿಂದ ತಿಳಿದುಕೊಳ್ಳುವುದು ಅವಶ್ಯಕ.

---

* By-Products ಎಂಬುದನ್ನು ಲೇಖಕರು 'ಸಂಜನಿತ' ಎಂದು ಬರೆದಿದ್ದಾರೆ. ಶಬ್ದಶುದ್ಧಿಯ ರೀತಿಯಿಂದ ಈ ಪದವು ಅಷ್ಟೊಂದು ಸಾಧುವಾಗಿಲ್ಲವೆಂದು ಸಂಪಾದಕಮಂಡಲಿಯ ಮತವಾಗಿದೆ. ಆದರೂ ಲೇಖಕರು ಸಾಕಷ್ಟು ವಿಚಾರಮಾಡಿಯೆ ಈ ಪದವನ್ನಿರಿಸಿರುವರೆಂದು ತಿಳುಹಿಸುವುದರಿಂದ 'ಸಂಜನಿತಗಳು' ಎಂಬ ಮಾತನ್ನೇ ಇಲ್ಲಿ ಇರಿಸಲಾಗಿದೆ.

—ಸಂ. ಜ.

ಪ್ರಾರಂಭದಲ್ಲಿ ಬಹುತರ ಎಲ್ಲ ಕಾರಖಾನೆಗಳಲ್ಲಿ ಈ ಸಂಜನಿತಗಳಿಂದ ಯಾವ ಲಾಭವನ್ನೂ ತೆಗೆದುಕೊಳ್ಳದೆ, ಹಾಗೆಯೆ ಜೆಲ್ಲಿಬಿಡುತ್ತಿದ್ದರು. ಆದರೆ ಇಂದು ಪ್ರತಿಯೊಂದು ಕಾರಖಾನೆಯವರು ಇಂತಹ ಸಂಜನಿತಗಳನ್ನು ನಿರರ್ಥಕವಾಗಿ ಬಿಡದೆ, ಅವುಗಳಿಂದ ಅನೇಕ ಉದ್ಯಮಗಳಲ್ಲಿ ಬೇಕಾಗುವ ವಸ್ತುಗಳನ್ನು ತಯಾರಿಸಿ, ಅಧಿಕ ಲಾಭವನ್ನು ಪಡೆಯುತ್ತಿದ್ದಾರೆ. ಅಲ್ಲದೆ ಅನೇಕ ಕಾರಖಾನೆಗಳು ಸಂಜನಿತಗಳನ್ನು ತಯಾರಿಸುವುದರ ಸಲುವಾಗಿಯೆ ಸ್ಥಾಪಿತವಾಗಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಉದಾಹರಣೆಗಾಗಿ: **ಸೋಡಾ** ( Sodium Carbonate ) ತೆಗೆದುಕೊಳ್ಳೋಣ. ಇದನ್ನು ತಯಾರಿಸುವ ವಿಧಾನಗಳು ಎರಡು ಬಗೆಯವು. ೧. ಲಿಬ್ಲಾಂಕ್ ವಿಧಾನ ( Leblanc Process ) ೨ ಸಾಲ್ವೆ ವಿಧಾನ. ( Salvay's Process ). ಲಿಬ್ಲಾಂಕ್ ವಿಧಾನವು ಸಾಲ್ವೆ ವಿಧಾನಕ್ಕಿಂತ ಹೆಚ್ಚು ಸುಲಭವಾಗಿದ್ದರೂ, ಇದೇ ವಿಧಾನದಿಂದ ಅನೇಕ ಕಾರಖಾನೆಗಳಲ್ಲಿ ಸೋಡಾ ತಯಾರಿಸುತ್ತಾರೆ. ಇದಕ್ಕೆ ಕಾರಣ ಲಿಬ್ಲಾಂಕ್ ವಿಧಾನದಿಂದ ದೊರೆವ ಅಧಿಕ ಉಪಯೋಗದ ಸಂಜನಿತಗಳೆ.

ಸೋಡಾ ಬಹಳೇ ಉಪಯೋಗವುಳ್ಳ ವಸ್ತುವಾಗಿದೆ. ಒಂದು ಸಾರೆ ಫ್ರಾನ್ಸಿನ ವಿದ್ವತ್ಸಭೆಯವರು, ಉಪ್ಪಿನಿಂದ ಸೋಡಾ ತಯಾರಿಸುವ ವಿಶೇಷ ಫಲಕಾರಿ ವಿಧಾನದ ಸಂಶೋಧಕರಿಗೆ ೧೦೦ ಪೌಂಡುಗಳ ಬಹುಮಾನ ಕೊಡಲಾಗುವುದೆಂದು ಪ್ರಕಟನೆ ಹೊರಡಿಸಿದರು. **ಲಿಬ್ಲಾಂಕ್** ಎಂಬ ಪ್ರಸಿದ್ಧ ರಾಸಾಯನಿಕನು ಬಹಳ ಪರಿಶ್ರಮಪಟ್ಟು, ಸೋಡಾ ಸಿದ್ಧಿಸುವ ವಿಧಾನವನ್ನು ಕಂಡುಹಿಡಿದು, ಈ ಬಹುಮಾನದಿಂದ ಮರ್ಯಾದೆಯನ್ನು ಪಡೆದನು. ಈತನ ಸಂಶೋಧನ ವಿಧಾನದಲ್ಲಿ ಉಪ್ಪಿನ ಮೇಲೆ ಗಂಧಕಾಮ್ಲ ( Sulphuric Acid ) ದ ಕ್ರಿಯೆಯಿಂದ ಸೋಡಿಯಂ ಸಲ್ಫೇಟ್ ( Sodium Sulphate ) ಮತ್ತು 'ಹೈಡ್ರೋಕ್ಲೋರಿಕ್' ಆಮ್ಲದ ಆನಿಲವು ( Hydrochloric Acid gas ) ಹುಟ್ಟುತ್ತವೆ. ಈ ರೀತಿಯಾಗಿ ತಯಾರಾದ 'ಸೋಡಿಯಂ ಸಲ್ಫೇಟ್'ನಲ್ಲಿ ಕಟ್ಟಿಗೆಯ ಇದ್ದಲಿ ಹಾಗೂ ಸುಣ್ಣದ ಹರಳು ( Calcium Carbonate ) ಬೆರಸಿ ಬೆಚ್ಚಗೆ ಮಾಡುವುದರಿಂದ, ಸೋಡಿಯಂ ಕಾರ್ಬೊನೇಟ್ ತಯಾರಾಗಿ, ಒಂದು ಹೊಲಸು ಬಣ್ಣದ ಕೆಸರಿನಂಥ ವಸ್ತು ಹಾಗೆಯೆ ಉಳಿದುಬಿಡುತ್ತದೆ.

ಮೇಲೆ ತಿಳಿಸಿದ ವಿಧಾನದಲ್ಲಿ ಸೋಡಾದ ಸಂಗಡ ತಯಾರಾಗುವ ಎರಡು ಸಂಜನಿತಗಳು ( ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಕೆಸರಿನಂತಹ ವಸ್ತು ) ಮೊದಮೊದಲು ಎಂಗಡಿಸಲು ಅಸಾಧ್ಯವೂ ಮತ್ತು ವಾಸನೆಯಲ್ಲಿ ಕಟುವಾದುವೂ ಇದ್ದು ಬಹಳ ಕಷ್ಟಕರವಾಗಿದ್ದುವು. ಒಂದುವೇಳೆ ಸೋಡಾ ತಯಾರಿಸುವ ಸಾಲ್ವೆ ವಿಧಾನವು ಮೊದಲೇ ಗೊತ್ತಾಗಿದ್ದರೆ, ಲಿಬ್ಲಾಂಕ್

ವಿಧಾನಕ್ಕೆ ಇಷ್ಟೊಂದು ಮನ್ನಣೆ ದೊರಕುತ್ತಿರಲಿಲ್ಲ. ಆದರೂ ಕೂಡ ಲಿಬ್ಲಾಂಕ್ ವಿಧಾನದಲ್ಲಿ ತಯಾರಾಗುವ ಸಂಜನಿತಗಳಿಂದ ಉಪಯೋಗವುಳ್ಳ ವಸ್ತುಗಳನ್ನು ತಯಾರಿಸುವ ಎಷ್ಟೋ ಪ್ರಯತ್ನಗಳು ನಡೆದುವು. ಇದೇ ಮೇರೆಗೆ ಈ ಸಂಜನಿತಗಳಿಂದ ಸೋಡಾಕ್ಕಿಂತ ಹೆಚ್ಚು ಬೆಲೆಬಾಳುವ ವಸ್ತುಗಳಾದ ಬಟ್ಟೆ ಬೆಳ್ಳಗೆಮಾಡುವ ಪುಡಿ (Bleaching Powder) ಮತ್ತು ಗಂಧಕಗಳನ್ನು ತಯಾರಿಸಿದರು.

೧೮೨೨ರಲ್ಲಿ ಬೆಲ್ಜಿಯಮಿನ ಸುಪ್ರಸಿದ್ಧ ರಸಾಯನ ಶಾಸ್ತ್ರಜ್ಞರಾದ ಸಾಲ್ವೆ ಎಂಬವರು, ಸೋಡಾ ತಯಾರಿಸುವ ಇನ್ನೊಂದು ವಿಧಾನವನ್ನು ಕಂಡುಹಿಡಿಯುವ ವರೆಗೆ 'ಲಿಬ್ಲಾಂಕ್ ವಿಧಾನ'ವೇ ಎಲ್ಲ ಕಡೆಗೆ ಬಳಕೆಯಲ್ಲಿತ್ತು. ಸೋಡಾ ತಯಾರಿಸುವ ವಿಧಾನಗಳಲ್ಲಿ 'ಸಾಲ್ವೆ ವಿಧಾನ'ವೇ ಉತ್ತಮವಾದುದೆಂದು ಪ್ರಯೋಗಗಳಿಂದ ಪರಿಗಣಿತವಾಗಿದೆ. ಈ ವಿಧಾನದಲ್ಲಿ ಉರುವಲಿನ ವೆಚ್ಚ ಅತಿ ಕಡಿಮೆ ಬರುವುದಲ್ಲದೆ 'ಲಿಬ್ಲಾಂಕ್' ವಿಧಾನದಂತೆ ಯಾವ ಕೆಸರಿನಂತಹ ಪದಾರ್ಥವೂ ಉಳಿಯುವುದಿಲ್ಲ. ಈ ಹೊಸ ವಿಧಾನವನ್ನು ಗೊತ್ತಾದ ಮೇಲೆ 'ಲಿಬ್ಲಾಂಕ್' ವಿಧಾನದ ಮಹತ್ತ್ವ ಕಡಿಮೆಯಾಗಬೇಕಾಗಿತ್ತು. ಆದರೆ ಹಾಗಾಗದೆ ಇಂದಿನ ವರೆಗೂ ಅದಕ್ಕೆ ಮೊದಲಿನಷ್ಟೇ ಮಹತ್ತ್ವ ಕೊಡಬೇಕಾಗಿದೆ. ಇದಕ್ಕೆ ಮೂಲ ಕಾರಣ ಈ ವಿಧಾನದ ಸಂಜನಿತಗಳು.

ಇಲ್ಲಿಯ ವರೆಗೆ ಸೋಡಾದ ವಿಷಯ ತಿಳಿದುಕೊಂಡಾಯಿತು. ಇನ್ನು ಕಲ್ಲಿದ್ದಲಿಯನ್ನು ತೆಗೆದುಕೊಳ್ಳೋಣ. ಈ ಕಾಲದಲ್ಲಿ ಇದನ್ನು ಕಪ್ಪು ಬಂಗಾರವೆಂದು ಕರೆದಿದ್ದಾರೆ. ಮೊದಮೊದಲು ಕಾರಖಾನೆಗಳಲ್ಲಿ ಕಲ್ಲಿದ್ದಲಿಯನ್ನು ಪುಚ್ಚಿದ ಭಟ್ಟಿಗಳಲ್ಲಿ ಚೆನ್ನಾಗಿ ಕಾಯಿಸಿ, ಇದರಿಂದ ತಯಾರಾಗುವ ಅನಿಲವನ್ನು (Coal gas) ಉರಿಯುವುದಕ್ಕಾಗಿ ಉಪಯೋಗಿಸುತ್ತಿದ್ದರು. ಎಲ್ಲ ಅನಿಲವು ಜೊರಟುಹೋದ ಮೇಲೆ ಉಳಿಯುವ ಇದ್ದಲಿಯು ಬಹಳ ಪಗುರು ಆಗುತ್ತಿತ್ತು. ಇದನ್ನು ಉರಿಸುವುದರಿಂದ ಯಾವ ತರದ ಹೊಗೆಯೂ ಹೊರಡುತ್ತಿರಲಿಲ್ಲ. ಇದಕ್ಕೆ 'ಆರೆಗಾವಾದ ಕಲ್ಲಿದ್ದಲಿ' ಎಂದು ಹೆಸರು. ಹೀಗೆ ಕಾರಖಾನೆಗಳಲ್ಲಿ ಕಲ್ಲಿದ್ದಲಿಯಿಂದ ಕೋಲಗ್ಯಾಸ್ ತಯಾರಿಸುವಾಗ, ಇದರ ಜೊತೆಗೆ ಡಾಂಬರ್ ಎಂಬ ಕೆಟ್ಟ ವಾಸನೆಯುಳ್ಳ ಕರ್ರಗಿನ ನುಣುಪಾದ ವಸ್ತುವೂ (Coal tar) ಮತ್ತು ನೀರಿನಂತಿರುವ 'ಅಮೋನಿಯಾ ಮಿಶ್ರ ನೀರು' (Ammoniacal water) ಎಂಬ ವಸ್ತುವೂ ತಯಾರಾಗುತ್ತಿದ್ದುವು ಕಾರಖಾನೆಯವರು ಇವುಗಳ ದುಷ್ಟವಾಸನೆಯನ್ನು ಸಹಿಸದೆ, ಊರ ಹೊರಗೆ ದೂರ ಬೀಸಾಡುತ್ತಿದ್ದರು. ಅವರಿಗೆ ಈ ಸಂಜನಿತಗಳಿಂದ ಒಳ್ಳೇ ಬೆಲೆಬಾಳುವ ವಸ್ತುಗಳು ತಯಾರಾಗುತ್ತವೆಯೆಂಬ ಕಲ್ಪನೆಯು ಕನಸು-ಮನಸಿನಲ್ಲಿಯೂ ಇರಲಿಲ್ಲ. ಆದರೆ ರಸಾಯನ ಶಾಸ್ತ್ರಜ್ಞರು ಈ ಸಂಜನಿತಗಳ ಉಪಯೋಗವನ್ನೂ ಮಹತ್ತ್ವವನ್ನೂ ತೋರಿಸಿಕೊಟ್ಟು, ಕಾರಖಾನೆಗಳಲ್ಲಿಯ ಸಂಜನಿತಗಳ ಸ್ಥಾನವನ್ನು ಸ್ಥಿರೀಕರಿಸಿದರು. ಕಾರಖಾನೆಗಳ ಯಜಮಾನರಿಗೆ ರಸಾಯನ ಶಾಸ್ತ್ರಜ್ಞರು ನೀಡಿದ ಮಿಗಿಲಾದ ಕಾಣಿಕೆಯಿದು ಡಾಂಬರಿನಿಂದ ಇಲ್ಲಿಯ ವರೆಗೆ ಎರಡು ಸಾವಿರ ಬಣ್ಣಗಳನ್ನು ತಯಾರಿಸಲಾಗಿದೆ. ಇದಲ್ಲದೆ ಇದರ ಪುಡ್ಯಸಂಧಾನ (Distiuation) ದಿಂದ ಬೆಂಜೋಲ್ (Benzol), ರಾಳ (Pitch) ಮತ್ತು 'ಕ್ರಿಯೊಸೋಟ್' ಎಣ್ಣೆಯನ್ನು (Creosote oil) ತಯಾರಿಸಿ, ಇವುಗಳಲ್ಲಿ ಮೊದಲನೆಯದನ್ನು, ಪೆಟ್ರೋಲಿನ ಬದಲಿ (Substitute) ನಂತೆಯೂ ಎರಡನೇಯದನ್ನು ರಸ್ತೆಗಳ (Road) ತಯಾರಿಯಲ್ಲಿಯೂ ಮತ್ತು ಮೂರನೆಯದನ್ನು ಮರಮುಂಡಿಗೆಯ ರಕ್ಷಣೆಗಾಗಿಯೂ ಮತ್ತು 'ನೆಫ್ತಲೀನ್' ಹಾಗೂ ಕಾರ್ಬೋಲಿಕ್ ಆಮ್ಲದ (Naphthalene and Carbolic Acid) ತಯಾರಿಯಲ್ಲಿಯೂ ಉಪಯೋಗಿಸುತ್ತಾರೆ.

ಕಾರ್ಬೋಲಿಕ್ ಆಮ್ಲವು ಕ್ರಿಮಿನಾಶಕದಂತೆ ಉಗಯೋಗವಾಗುವುದಲ್ಲದೆ, ಸಿಡಿಮದ್ದುಗಳನ್ನು ತಯಾರಿಸಲಿಕ್ಕೆ ಬೇಕಾಗುವ ಪಿಕ್ರಿಕ್ ಆಮ್ಲದ (Picric Acid) ತಯಾರಿಯಲ್ಲಿಯೂ ಕೂಡ ಉಪಯೋಗಿಸಲ್ಪಡುತ್ತದೆ. ಅಮೋನಿಯಾ ಮಿಶ್ರ ನೀರಿನಿಂದ ಅಮೋನಿಯಾ (Ammonia) ಬೇರ್ಪಡಿಸಿ, ಅಮೋನಿಯಂ ಸಲ್ಫೇಟ್ (Ammonium Sulphate) ತಯಾರಿಸಿ, ಗೊಬ್ಬರದಂತೆ ಉಪಯೋಗಿಸುತ್ತಾರೆ.

ಇನ್ನು ಕಬ್ಬಿಣದ ಕಾರಖಾನೆಯಲ್ಲಿ ತಯಾರಾಗುವ ಸಂಜನಿತಗಳ ವಿಷಯ ವಿಚಾರ ಮಾಡೋಣ. ಕಬ್ಬಿಣದ ಅದಿರುಗಳಿಂದ (Ores) ಅಚ್ಚ ಕಬ್ಬಿಣವನ್ನು ತಯಾರಿಸುವ ವಿಧಾನದಲ್ಲಿ ಕಬ್ಬಿಣದ ಸಂಗಡ ಆರೆಗಾವಾದ ಕಲ್ಲಿದ್ದಲು (Coke) ಮತ್ತು ಸುಣ್ಣದ ಕಲ್ಲನ್ನು ಬೆರಸಿ, ಈ ರೀತಿಯಾಗಿ ತಯಾರಾದ ಮಿಶ್ರಣವನ್ನು, ಭಟ್ಟಿಗಳಲ್ಲಿ ಹಾಕಿ ಕಾಯಿಸುತ್ತಾರೆ. ಹೀಗೆ ಕಾಯಿಸುವುದರಿಂದ ಕಬ್ಬಿಣವು ಕರಗಿ, ಆದರಲ್ಲಿದ್ದ ಅಶುದ್ಧ ವಸ್ತುಗಳು ಸುಣ್ಣದ ಸಂಗಡ ಕಲೆತು, ಸ್ಲ್ಯಾಗ್ (Slag) ಅಥವಾ ಕ್ಯಾಲ್ಸಿಯಂ ಸಿಲಿಕೇಟ್


## ಬಡತನದ ಬಾಳು

★

'ಆನಂದಕಂದ'ರ ಕಥಾಸಂಗ್ರಹ.

ಕನ್ನಡ ಜನತೆಯ ಜೀವನದ ನಿಜವಾದ ಚಿತ್ರ
ಇದರಲ್ಲಿ ಮೂಡಿದೆ.
ಬೇಕಾದವರು
'ಜಯಂತಿ' ಕಾರ್ಯಾಲಯಕ್ಕೆ
ಬರೆಯಿರಿ.

( Calcium Silicate ) ಎಂಬ ಸಂಜನಿತವನ್ನು ತಯಾರಿಸುತ್ತವೆ. ಈ ಸಂಜನಿತವನ್ನು ನಿರರ್ಥಕಗೊಳಿಸದೆ, ಜರ್ಮನಿ ಮತ್ತು ಅನೇರಿಕೆಗಳಲ್ಲಿ ಉತ್ತಮ ತರದ ಸಿಮೆಂಟ ( Cement ) ನ್ನು ತಯಾರಿಸುತ್ತಾರೆ. ಇದೇ ರೀತಿಯಾಗಿ ಬೆಸಿಮರ್ ವಿಧಾನ ( Bessemer Process ) ದಿಂದ ಕಬ್ಬಿಣವನ್ನು ತಯಾರಿಸುವಾಗಲೂ 'ಸ್ಲ್ಯಾಗ್' ಸಂಜನಿತವು ದೊರೆಯುತ್ತದೆ. ಈ ವಿಧಾನದ ಸಂಜನಿತವಾದ 'ಸ್ಲ್ಯಾಗ್'ನಲ್ಲಿ ರಂಜಕ ಹೆಚ್ಚಿನ ಪ್ರಮಾಣದಲ್ಲಿದ್ದ ಮೂಲಕ, ಇದನ್ನು ಪುಡಿಮಾಡಿ ಗೊಬ್ಬರದಂತೆ ಉಪಯೋಗಿಸುತ್ತಾರೆ.

ಸಕ್ಕರೆಯ ಕಾರಖಾನೆಗಳ ಸಂಜನಿತಗಳೂ ಅಷ್ಟೇ ಮಹತ್ವವುದುವಾಗಿವೆ. ಈ ಕಾರಖಾನೆಗಳಲ್ಲಿ ಸಕ್ಕರೆಯನ್ನು ಸ್ವಚ್ಛಮಾಡುವಾಗ ಸಂಜನಿತವಾಗುವ ವಸ್ತುವು ಕಾಕಂಬಿ. ಮೊದಮೊದಲು ಕಾಕಂಬಿಯನ್ನು ಅಗ್ಗವಾದ ಬೆಲೆಯಲ್ಲಿ ಮಾರಿಬಿಡುತ್ತಿದ್ದರು. ಆದರೆ ಈಗೀಗ ಅದರಿಂದ ಮಾದಕದ್ರವ ( Alcohol ) ತಯಾರಿಸಿ, ಪೆಟ್ರೋಲಿನೊಡನೆ ಮಿಶ್ರಮಾಡಿ, ಮೋಟರುಕಾರ್ ಮುಂತಾದುವುಗಳಲ್ಲಿಯೂ ಮತ್ತೆ ಇನ್ನನೇಕ ಉದ್ಯಮಗಳಲ್ಲಿಯೂ ಉಪಯೋಗಿಸುತ್ತಾರೆ. ಹೈದರಾಬಾದಿನಲ್ಲಿ 'ಜೋಧನ್ ಸಕ್ಕರೆಯ ಕಾರಖಾನೆ'ಯ ಜೊತೆಗೆ 'ಸಬಲಮಾದಕ ( Power Alcohol )' ಕಾರಖಾನೆಯನ್ನು ಕೂಡ ಸ್ಥಾಪಿಸಿದ್ದಾರೆ. ಈ ಕಾರಖಾನೆಗಳಲ್ಲಿ ಕಾಕಂಬಿಯಿಂದ ಲಕ್ಷಾಂತರ ಗ್ಯಾಲನ್ ಸಬಲಮಾದಕ ತಯಾರಿಸಿ, ಪರದೇಶಗಳಿಗೂ ಕಳಿಸುತ್ತಾರೆ. ಕಬ್ಬಿನಿಂದ ರಸತೆಗೆದ ಮೇಲೆ ಉಳಿದ ಸಿಪ್ಪೆಯನ್ನು, ನಮ್ಮಲ್ಲಿ ಹಾಗೆಯೆ ಚೆಲ್ಲಿಬಿಡುತ್ತಾರೆ. ಪಾಶ್ಚಾತ್ಯರು ಈ ಸಿಪ್ಪೆಯಿಂದ ದಪ್ಪನ್ನ ಕಾಗದಗಳನ್ನು ತಯಾರಿಸುತ್ತಾರೆ. ಇದರ ಕಡೆಗೆ ನಮ್ಮ ಕಾರಖಾನೆದಾರರ ಗಮನ ಹರಿಯಬೇಕು.

ಇದರಂತೆ 'ಗ್ಲಿಸರೀನ್'ದ್ರವವು ಸಾಬೂನು ಸಿದ್ಧಿಸುವಾಗ ಸಂಜನಿತವಾಗುತ್ತದೆ. ಪ್ರಧಾನವಾಗಿ ಹುಟ್ಟುವ ಸಾಬೂನಿಗಿಂತ ಸಂಜನಿತ 'ಗ್ಲಿಸರೀನ್' ಹೆಚ್ಚಿಗೆ ಉಪಯೋಗಕರ. ಒಂದು ಕಡೆ, ಇದರಿಂದ 'ನೈಟ್ರೊಗ್ಲಿಸರೀನ್' ( Nitro-glycerine ) ತಯಾರುಮಾಡಿ, ಯುದ್ಧಕಾಲದಲ್ಲಿ ಸಿಡಿಮದ್ದಿನಂತೆ ಉಪಯೋಗಿಸಿದರೆ, ಇನ್ನೊಂದು ಕಡೆ ಶಾಂತಕಾಲದಲ್ಲಿ ಇದನ್ನು ಔಷಧಗಳಲ್ಲಿಯೂ ಮತ್ತು ಫಾರ್ಮಸಿಗಳಲ್ಲಿಯೂ ಉಪಯೋಗಿಸುತ್ತಾರೆ.

ಸಂಜನಿತಗಳ ಸರಿಯಾದ ಉಪಯೋಗವನ್ನು ಅರಿತವರೆಂದರೆ 'ಷಿಕಾಗೋ'ದ ಮಾಂಸವನ್ನು ಕಳಿಸಿಕೊಡುವ ಕಂಪನಿಯವರು. ಇವರು ಒಂದು ಪ್ರಾಣಿಯನ್ನು ಕೊಂದರೆ ಅದರ ಒಂದು ಕೂದಲೂ ನಿರರ್ಥಕವಾಗದಂತೆ ನೋಡಿಕೊಳ್ಳುತ್ತಾರೆ. ಮಾಂಸವನ್ನು ತೆಗೆದ ಮೇಲೆ ಉಳಿಯುವ ತೊಗಲು ಮತ್ತು ಎಲುವುಗಳಿಂದ ವಜ್ರಸರಿ ಮತ್ತು ಅಂಟಿನಂಥ ವಸ್ತುಗಳನ್ನು ( Glue and Gelatin ) ತಯಾರಿಸುತ್ತಾರೆ. ಇವುಗಳಲ್ಲಿ ಮೊದಲನೆಯದು ಅಶುದ್ಧವಾದ ಜಿಲೆಟ್‌ನು ಇದ್ದ ಮೂಲಕ ಕಟ್ಟಿಗೆ, ಕಾಗದ ಮತ್ತು ಜರ್ಮ ಮುಂತಾದುವುಗಳನ್ನು ಅಂಟಿಸುವಲ್ಲಿ ಉಪಯೋಗವಾಗುತ್ತದೆ. ಎರಡನೆಯದು ಒಂದು ತರದ ಸಸಾರಜನಕಾಂಶವಿದ್ದ ಮೂಲಕ, ಇದನ್ನು ಆಹಾರದ ಸಂಗಡ ಉಪಯೋಗಿಸುವುದಲ್ಲದೆ, ಮಂಜುಗೆನೆ ( Icecream ) ಯ ತಯಾರಿಯಲ್ಲಿಯೂ, ಬಿಂಬಗ್ರಾಹಕದ ಪ್ಲೇಟುಗಳ ತಯಾರಿಯಲ್ಲಿಯೂ ಮತ್ತು ಚಲಚ್ಚಿತ್ರದಲ್ಲಿ ಉಪಯೋಗಿಸುವ 'ಫಿಲ್ಮ್'ಗಳ ತಯಾರಿಯಲ್ಲಿಯೂ ಉಪಯೋಗಿಸಲಾಗುತ್ತದೆ. ಇನ್ನು ಉಳಿದ ಕೋಡು ಮತ್ತು ಹಲ್ಲುಗಳಿಂದ ತರತರದ ಗುಂಡಿಗಳನ್ನೂ ಹಾಗೂ ಜಡೆಪಿನ್ನುಗಳನ್ನೂ ತಯಾರಿಸುತ್ತಾರೆ. ಕೊನೆಯದಾಗಿ ಒಣಗಿದ ರಕ್ತ ಮತ್ತು ಎಲುವುಗಳಿಂದ ಸಾರಜನಕ ಯುಕ್ತ ಗೊಬ್ಬರಗಳನ್ನು ತಯಾರಿಸುತ್ತಾರೆ.

ಇದೆಲ್ಲ ಕಾರಖಾನೆಗಳ ವಿಷಯ. ನಾವು ನಮ್ಮ ನಿತ್ಯ ಜೀವನದಲ್ಲಿ ಧನವ್ಯಯ ಮಾಡಿ ವಸ್ತುಗಳನ್ನು ಸಂಪಾದಿಸಿಕೊಳ್ಳುತ್ತೇವೆ. ಹೀಗೆ ಸಂಪಾದಿಸಿದ ವಸ್ತುಗಳ ಮುಖ್ಯ ಉಪಯೋಗವನ್ನಷ್ಟೇ ನಾವು ತೆಗೆದುಕೊಂಡು, ಅದರ ಸಂಜನಿತಗಳನ್ನು ಚೆಲ್ಲಿಕೊಡುತ್ತೇವೆ. ಹೀಗೆ ಚೆಲ್ಲಿಕೊಟ್ಟ ಕಸಕಡ್ಡಿಗಳು ಸಂಗ್ರಹವಾದಲ್ಲಿ ದೊಡ್ಡದೊಡ್ಡ ಕಾರಖಾನೆಗಳಲ್ಲಿಯೂ ಉರುವಲಿನಂತೆ ಉಪಯೋಗವಾಗಬಹುದೆಂದ ಮೇಲೆ, ನಾವು ಆ ಸಂಜನಿತಗಳ ಉಪಯೋಗವನ್ನು ಅರಿತುಕೊಳ್ಳುವುದು ಆರ್ಥಿಕದೃಷ್ಟಿಯಿಂದ ಆವಶ್ಯಕವೆಂದು ಬೇರೆ ಹೇಳಬೇಕಾಗಿಲ್ಲ.


ನಾಲ್ವತ್ತು ವರ್ಷಗಳ ಅನುಭವದಿಂದ ಶ್ರೇಷ್ಠವೆನಿಸಿದ

**ಆಯುರ್ವೇದೀಯ ಔಷಧಗಳು.**

ವೈದ್ಯ ಲೋಂಢೆ ಇವರ ಜಳಜ್ವರದ ಗುಳಿಗೆ.
ಸರ್ವಪ್ರಕಾರದ ಜ್ವರಗಳಿಗೆ ಉಪಯುಕ್ತ.
ಅಮಾಂಶಗುಳಿಗೆ–ಸರ್ವಪ್ರಕಾರದ ಅಮಾಂಶದ ಮೇಲೆ ಗುಣಕಾರಿ.
ಏಜಂಟರನ್ನು ನೇಮಿಸುವುದು ಇದೆ.
ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್— ವೈದ್ಯ ಪಿ. ಕೆ. ಲೋಂಢೇ ಫಾರ್ಮಸಿ,
ಪನವೇಲ–ಕುಲಾಬಾ.

## ಸಂಗೀತ ಸಾಧಕ

# ದೇಶಪಾಂಡೆ ಗುರುರಾಯರು

ಶ್ರೀ. ಎನ್. ಕೆ. ಕುಲಕರ್ಣಿ ಎಂ. ಎ, ಬಿ ಟಿ ಮುಂಬಯಿ

★

**ರಾಷ್ಟ್ರದ ನಿರ್ಮಾಣಕ್ಕಾಗಲಿ, ಪುನರುಜ್ಜೀವನಕ್ಕಾಗಲಿ, ಎಲ್ಲ ವಿದ್ಯೆ-ಕಲೆಗಳ ಅಭಿವೃದ್ಧಿಯಂತೆ ಸಂಗೀತಕಲೆಯ ಅಭಿವೃದ್ಧಿಯೂ ಅವಶ್ಯ. ಇಂತಹ ಸಂಗೀತಕಲೆಯನ್ನು ತಿಳಿದು ಬೆಳೆಯಿಸುವ ಗುರುರಾಯರಂತಹ ಕನ್ನಡಿಗರು ನಮಗೆ ಹಲವರು ಬೇಕು.**

'ಸಂಗೀತವು ಮನುಷ್ಯನ ವಿಲಾಸಕ್ಕಾಗಿ ಇಲ್ಲ ಸ್ವಾಮಿ; ಜಗತ್ತಿಗೆ ದಿವ್ಯ ಸಂದೇಶ ಬೀರಲು ಅದೊಂದು ಸಾಧನ— It is the song of the soal (ಅದೊಂದು ಆತ್ಮಗೀತೆ), ಸಂಗೀತದ ಬಗ್ಗೆ ನಡೆದ ಮಾತುಮಾತಿನ ಓಘದಲ್ಲಿ ಕಲೋಪಾಸನೆಯಿಂದ ಪಾಡಾಗಿ ಹಣ್ಣಾದ ಹೃದಯದಿಂದ ಪಳಕ್ಕನೆ ಈ ಮಾತು ಬಿಚ್ಚಿ ಬಿದ್ದುವು.

'ಪಾಗಾದರೆ ಸಿನೆಮಾ ಸಂಗೀತ?'

'ಶ್ರೀಖಂಡ ಮಾಡಹೋಗಿ ಮೊಸರು ಕೆಟ್ಟರೆ, ಅದನ್ನು ಇನ್ನೊಂದು ಪಕ್ವಾನ್ನವೆಂದು ಕರೆದ ಹಾಗಿದೆ. ಯಾವ ಮಹಾರಾಯನೊ ಒಮ್ಮೆ ಹದಗೆಟ್ಟ ಪಕ್ವಾನ್ನಕ್ಕೆ ಹೊಸ ಹೆಸರು ಕೊಟ್ಟು ಬಡಿಸಿದ. ಲೋಕ ಅದನ್ನೇ ಮೆಚ್ಚಿ ಬಾಯಿ ಜಿಪ್ಪರಿಸಹತ್ತಿತು. ಒಂದು ಶುದ್ಧ ರಾಗವಿಲ್ಲ, ಶುದ್ಧವಾದ ಚೀಜು ಇಲ್ಲ, ತಾಳದ ಸುದ್ದಿ ಇಲ್ಲ. ತುಕಡಿ ತುಕಡಿ ಕೂಡಿಸಿ ಕೌದಿ ಹೊಲಿದ ಹಾಗೆ' ಎಂದು ಮೂಗು ಮುರಿದು ಮಾತನಾಡಿದರು ಗುರುರಾಯರು.



'ಮಹಾ ಮಹಾ ಕೋವಿದರೇ ಸಿನೆಮಾ ಸಂಗೀತದ ಡೈರೆಕ್ಟರರಾಗುವರಲ್ಲ?'

'ಬಿ.ಎ,ಎಂ.ಎ ಆದವರು ಕಾರಕೂನರಾದ ಹಾಗೆ. ಮಾಡುವುದೇನು?' ರಾಯರು ಶುದ್ಧ ವ್ಯವಹಾರದ ದೃಷ್ಟಿಯಿಂದ ಮಾತನಾಡಿದರು. ವ್ಯವಹಾರಕ್ಕಾಗಿ ತಮ್ಮ ಸಿದ್ಧಿಯನ್ನು ತೆತ್ತುವರೆಂದು ಇವರ ಮಾತಿನಲ್ಲಿ ಯಾವ ಸಿಡುಕೂ ಬರಲಿಲ್ಲ, ಕಟುಕೂ ಇರಲಿಲ್ಲ. 'ಇದೇನು ಮಹಾವಾಪ!' ಎಂಬ ಸಹಾನುಭೂತಿಪರದೃಷ್ಟಿ ಇವರದಿತ್ತು. 'ಹಣದ ಆಮಿಷಕ್ಕೆ ನಾನೇ ನನ್ನ ಕಲೆಯನ್ನು ಬದಿಗಿರಿಸಲು ಸಿದ್ಧನಾಗಬಹುದು,' ಎಂದು ಒಡನುಡಿದಾಗ, ಕಲೆಯ ಕಟ್ಟಳಿವಾನಿಗಳಾದ ಗುರುರಾಯರ ಸರಳತನಕ್ಕೆ ಮೆಚ್ಚಿದೆ.

ಶ್ರೀ. ದೇಶಪಾಂಡೆ ಗುರುರಾಯರ ಸಮೀಪದ ಪರಿಚಯ ನನಗಾದುದು ಈಗ ಎರಡು ವರುಷಗಳ ಕೆಳಗೆ. ನನ್ನ ಪಿ.ಎಚ್. ಡಿ. ಪ್ರಬಂಧಕ್ಕಾಗಿ ಕುಮಾರವ್ಯಾಸನ ಅಭ್ಯಾಸ ಆಗ ನಾನು ಸಾಗಿಸಿದ್ದೆ. (ಈಗೂ ಸಾಗಿಸಿದ್ದೇನೆ!) ಒಮ್ಮೆ ನನ್ನ ಗೆಳೆಯರು ಶ್ರೀ. ಹಲಸಗಿ ಕೃಷ್ಣರಾಯರು, 'ನಮ್ಮಲ್ಲಿ ವಾರಕ್ಕೆ ಮೂರು-ಸಲ ದೇಶಪಾಂಡೆ ಗುರುರಾಯರಿಂದ ಭಾರತ ವಾಚನ ನಡೆಯುತ್ತದೆ; ಹ-ಪ ತಾವೂ ಬರಬೇಕು' ಎಂದು ಕೈಜೋಡಿಸಿ ತಮ್ಮ ವಿನೋದಶೈಲಿಯಲ್ಲಿ ಆಮಂತ್ರಣ ಕೊಟ್ಟರು 'ಕಡು ಬಡವಂ ಕಡವರವನೆನೆವಿದಂತೆ' ಎಂದು ಲಕ್ಷ್ಮೀಶನು ಹೇಳುವನಲ್ಲ, ಹಾಗೆನಿಸಿತು ನನಗೆ. (ಇಂತಹ ಸಂಧಿಯನ್ನು ಕಲ್ಪಿಸಿ ಕೊಟ್ಟುದಕ್ಕೆ ಗುರುರಾಯರಿಗಿಂತ ಮೊದಲು ಹಲಸಗಿಯವರಿಗೆ ನನ್ನ ವಂದನೆಗಳು).

ಮಾಳಮಡ್ಡಿಯಿಂದ ಪುಣಿದಹನುಮಂತ ದೇವರ ಓಣಿ ಕನಿಷ್ಟ ಎರಡು ಮೈಲು ಭರತ ಮಳೆಗಾಲ. ಭಾರತ ವಾಚನ ರಾತ್ರಿ ಒಂಬತ್ತಕ್ಕೆ ಆರಂಭ. ಊಟ ಮುಗಿಸಿಕೊಂಡು ಬರುವುದಕ್ಕೆ ಲಗುಬಗೆ; ಮೋಗಿ ಊಟ ಮಾಡುವುದಕ್ಕೆ ಅಪರಾತ್ರಿ. ಇದೂ ಒಂದು ತಪಶ್ಚರ್ಯವೆಂದುಕೊಂಡೇ ಬಂದಾಗೊಮ್ಮೆ ಹಲಸಗಿಯವರ ಮನೆ ಬಾಲಿ! ಇದು ಅನೇಕ ಸಲದ ಅನುಭವ. ಮೇಲೆ ಜಿಟಿಜಿಟಿ ಮಳೆ. ಹಿಂದೆ ಕನ್ನಡ ನಾಟಕಕ್ಕೆಂದು ಹೋದಾಗ, ಮಳೆಯು ಮೂಲಕ ಅಂದು ನಾಟಕ ಬಂದಾಗಿ ಬ್ಯಾಂಡು, ಬೆಳಕು ಇಲ್ಲದೆ ಥಿಯೇಟರು ಹಾಳು ಸುರಿಯುತ್ತಿದ್ದುದರ ನೆನಪು ಬರುತ್ತಿತ್ತು ನನಗೆ. ಅಂತೂ ಒಂದು ಸಲ ಹಲಸಗಿಯವರ ಮನೆಯಲ್ಲಿ ಬೆಳಕು ಕಂಡಿತು. ಕತ್ತಲೆಯಲ್ಲಿ ಬೊಗಳುವ ನಾಯಿಯ ಕಣ್ಣು ತಪ್ಪಿಸಿ, ಪಾವಟಗೆ ಎಡವುತ್ತ ಒಳಗೆ ಅಡಿ

ಪ್ರಾಚ್ಯವಸ್ತು, ಶ್ರುತಿಲಯ ನಾಗರಿಕ ಬೆಲ್ಲವನ್ನೆ ತಿನಿಸಿರಿಗೆ ಬರಿದು 'ಅಂತೆ ಕುಲ್ಲ ಶ್ರುತಿಲಯ' ಆಗಿ ಪರಿಣಮಿಸಿತು. ಒಳಗೆ ಬಂದೆ. ಮಧ್ಯಪಟ್ಟ ಬೇಕಾದಾಗ ಗುಲುಬಾಯರು ಅವರ ಎಣಿಕೆಗೆ ವಿಮರ್ಶಕ 'ಬಾಳ್ಗಾಮಾಳಿಕ' ಆಧಾರವಾಗಿ ಬೆಳಗಿನ ಸೃಷ್ಟಿದರ್ಶನ— ಪುಟುಪಾಲಾಯ್ಕಾಗಿ ಬುಲ್ಲನಾಥರು. ಅವರ ಎಂಬ್ಲಿಗೆ ಚಿತ್ರಕೊಟ್ಟವರು ಡಿ. ಸಾ. ಕೊಲ್ಲಸೋದಿಯವರು. ಮುಖ್ಯವಲ್ಲಿ ಮಹಾಸ್ಪೃಷ್ಟಿ ಬಾಳ್ಕೆಗಳ್....ಅಲ್ಲಲ್ಲಿ ಎಂಬ್ಯಾಸ್ಥಾಗಿ ಕಂಡರೂ ಗೌರವ ಕಲಾಪರ್ವಾಗಿ, ಹೊಸ ತಾಗಿ ಸಮ ಸಾಮಾನ್ಯ ಕಲಾತೀರ್ಥ ಕಾಲಾಗಿಲ್ಲ. ಶ್ರೀಮಾಳಿಕ ಸಂಖ್ಯಾಯುಕ್ತವೂ ಮಾಡಿದ್ದ ಇದ್ದರು. (ಮಾಸಾಗಲೂ ; ತಿಂಗಳು ಮೇಲೆ ಇವುಗಳನ್ನೇ ಅಲ್ಲಾ ಸಭಿಸಾಕ್ಷ) ಉಪಲ್ಲಿಗೆ ಪಾಸ್ಯಾಸಾಗಿ ಬೇಕ್ಷ ಮುಂಗೋಡಾಗಿ ಬೆಳ್ಳಿಗೆ ಶ್ರೀಮಾಳಿಕ್ಕೆ ಕಲಿಸಿಯು ತಂದಿದ್ದಿನ್ನು. ಒಳಗೆ ಬಂಜಾಕ್ಕ ಬರಿಸಿತ್ತು. ಪೆಟಿಗೆಯಿಂದಾಗಿಯೂ ಅಭಿಶ್ರೀಕಾರಗಳಾಗಿ ಒಂದಿಷ್ಟೆ ಕಾಲಿಲಾಗಿಯೂ ಸಕಲಂಡಿಂದ ಸಾಮಾನ್ಯಾಗಿ ಸಂಪಿಯಿಸ್ಟ್ಯಿದ್ದನು. ಅಂತಹ ಅಭಿಜಾತಪಡಿಯಾಗಿ ಸ್ವಲ್ಪ ಹೊಟ್ಟೆಯಲ್ಲಿ ಹಾಗಮಾದಿಯನ್ನು ಬಂದು 'ಪುಟಸಿಸ್ಥಾಗಿ' ಎಂಬ್ಯಸಿದೆನ್ನಿ

'ಶ್ರೀಯಸ್ಥಿತಿಯಂತೆಲ್ಲ...' ಎಂದು ಬಳಸಾಡಿದೆಯಿಂದ ಕೆಲವು ಸಂಖ್ಯೆ ಪಡೆ ಎಲ್ಲರೂ ಗುಲುಬಾಯರೂ ಇಲ್ಲ 'ಅಲ್ಲಿಸ್ಸಿಗೆ ನಮಸ್ಕಾರ' ಪಡೆದಿತ್ತು. ಶ್ರೀಸ್ಥಿತ್ಯಸ್ಥಿತಿ ಸಂಗೀತಾಗಿ ಕ್ರಮಕಾಗುತ್ತಾನೆ. ಬ್ಯಾಂಗಿ ಸಂಖ್ಯೆಯಲ್ಲಿ ಸಂಖ್ಯೆಯಲ್ಲಿ ಸಂಖ್ಯೆಯಲ್ಲ

ಪ್ರಾರಂಭವಾಯಿತು. ಶ್ರೀ. ವಿಜಯಾಬಾಯಿಯವರು ಅಧ್ಯಕ್ಷರಾಗಿದ್ದರು. ಗುಜರಾತಿಯಲ್ಲಿ 'ಮಂಕಿಮಿಸ್ಟೇಕ್' ಕಿರುಹಡಿಗಳನ್ನು ಸಂಗ್ರಹಿಸಿ ಪ್ರಕಟಿಸಿರುವ ಶ್ರೀಮತಿ ಗುಣವಂತಿಬೆನ್ ಅವರು, ಗ್ರಾಹಕರು ಸರಿಯಾಗಿ ಪ್ರಾಮಾಣಿಕತೆಯಿಂದ ನಡೆದುಕೊಳ್ಳಬೇಕೆಂಬ ಸಲಹೆ ನೀಡಿದರು. 'ಗಂಡಿದೆಯೇ ಸೀರೆ' ಎಂದು ಕೇಳಿದ ಹೆಂಗಸಿಗೆ 'ಹೆಣ್ಣಿದೆ' ಎಂದು ಹೇಳಿದಂತೆ ಮಾಡಿದಲ್ಲಿ ಏನು ಪ್ರಯೋಜನ? ಗಿರಾಕಿಯು ಬಯಸಿದ ಬಣ್ಣದ ಸೀರೆಯನ್ನು ಕೊಡಲಾಗದಿದ್ದಲ್ಲಿ ಅಂಗಡಿಯವನು ಅದನ್ನು ಹೇಗೆ ಪಡೆಯಬಹುದೆಂಬ ಸಲಹೆಯನ್ನು ಕೊಡಬೇಕು. ಸಾಧ್ಯವಾದಷ್ಟು ಗಿರಾಕಿಗಳು ಮತ್ತೆ ಮತ್ತೆ ಬರುವಂತೆ ಮಾಡಬೇಕು. ಇಂಥ ಹಲವು ಸಲಹೆಗಳನ್ನು ಅವರು ನೀಡಿದರು.

ಸಭೆಯ ನಿರ್ಣಯಗಳಂತೆ ಕಚ್ಚೆಪಂಚೆಯನ್ನು ಸೋಲಾಪುರ ಹಾಗೂ ಧಾರವಾಡ (ಕಚ್ಚೆಪಂಚೆಯ ಬಗ್ಗೆಯೇ ಹೆಚ್ಚು ಪ್ರಸಿದ್ಧವಾಗಿರುವ ಸ್ಥಳಗಳು) ಇವೇ ಮೊದಲಾದ ಸ್ಥಳಗಳಲ್ಲಿ ಪ್ರಚಾರಮಾಡಲಾಗುವುದು. ಕೆಲವರಿಂದ ಕಚ್ಚೆಪಂಚೆಯ ಬಗ್ಗೆ ಇರುವ 'ಕೆಟ್ಟ ಅಭಿಪ್ರಾಯ'ವನ್ನು ಹೋಗಲಾಡಿಸಲು ಪ್ರಯತ್ನಿಸಲಾಗುವುದು. ಕಚ್ಚೆಪಂಚೆಯ ಸೌಂದರ್ಯ ಮತ್ತು ಅನುಕೂಲತೆಗಳ ಬಗ್ಗೆ ಜನರಿಗೆ ತಿಳಿಸಿಕೊಡಲಾಗುವುದು. ಕಚ್ಚೆಪಂಚೆಯ ಬಗ್ಗೆ ಇರುವ ಕೆಲವು ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಪ್ರಯತ್ನಿಸ

(ತೀರ ಮೊನ್ನೆ ತೀರಿದರು.) ಅವರ ಚಿರಂಜೀವ ಪೈ. ವಾ. ಮುಂಜೇಖಾನ್, ಸಂಗೀತ ಕ್ಷೇತ್ರದಲ್ಲಿ ಇಬ್ಬರೂ ಮಹಾ ಪ್ರತಿಭಾ ಶಾಲಿಗಳು; ಮಹಾ ತಪಸ್ವಿಗಳು. ಕೆಲವು ವರುಷಗಳ ಹಿಂದಿನ ಮಾತು. ಮುಂಬಯಿಯಲ್ಲಿ ಒಬ್ಬ ಸಂಗೀತಕಾರರಿಗೆ ಅಲ್ಲಾ. ದಿಯಾರಲ್ಲಿ ಔತಣವಿತ್ತು. ಬ್ಯಾ. ಜಯಕರ ಮೊದಲಾದ ಪ್ರಭೃತಿಗಳು ಸಭೆಯನ್ನಲಂಕರಿಸಿದ್ದರು. ಮುಂಜೀಖಾನರು ಗುರುರಾಯರನ್ನು ಮುಂದಿರದೊಳಗೆ ಕರೆದೊಯ್ಯಲು ಬಂದರು. ಸಭೆಯು ಮಧ್ಯೆ ಅಲಂಕೃತವಾದ ಪೀಠ. ಕಣ್ಣಿಗೆ ಕಪ್ಪು ಕನ್ನಡಕ. ನೀಳವಾದ ದೇಹಕ್ಕೆ ನೀಳವಾದ ಕಪ್ಪುಕೋಟು. ಕಾಸಿದ ತಾಮ್ರದಂತೆ ಮಿಂಚುವ ಮುಖ. ಅವರೇ ಅಲ್ಲಾದಿಯಾ. ಈ ತಪಸ್ಸಿಗೆ ಗುರುರಾಯರು ನಿಂತಲ್ಲಿಯೆ ಶರಣು ಬಂದರು. ಮುಖ್ಯ ಅತಿಥಿಗಳು ಇನ್ನೂ ಬಂದಿರಲಿಲ್ಲ. ಅಲ್ಲಾದಿಯಾ ಅವರು ಗುರುರಾಯರನ್ನು ಕಂಡು, ಸದ್ಯ ಅವರ ಸಂಗೀತವಾಗಬೇಕೆಂದು ಕೋರಿದರು. ವಿನಯದಿಂದಲೆ ಇವರು ತಲೆ ಅಲ್ಲಾಡಿಸಿದರು. ಅಲ್ಲಾದಿಯಾ ಅವರ ಮುಂದೆ ಅದು ಸಾಧ್ಯವಾಗಲಿಲ್ಲ. ಕೋಟಿನ ಬಿರಡಿ ಸಡಿಲಿಸಿ ರಾಯರು ಹಾಡಲು ಅಣಿಯಾದರು. ಅಲ್ಲಾದಿಯಾ ಅವರ ಶೈಲಿಯ ಮೇಲೆಯೆ ಸಾಧನ ಮಾಡಿದ 'ಬಿಹಾಗಡ'ವನ್ನು ಹೇಳಿದರು. ಸಭೆಯೆಲ್ಲಾ ಸಂತುಷ್ಟವಾಯಿತು. ಅಲ್ಲಾದಿಯಾ ಗುರುರಾಯರನ್ನು ಗಟ್ಟಿಯಾಗಿ ಕೈಕುಲುಕಿದರು: 'ನಿಮಗೆ ಸಂಗೀತದ ಕಣ್ಣು ಇದೆ; ನೀವು 'ರಿಯಾಜ' ಮಾಡಿರಿ' ಎಂದು ಸ್ಫೂರ್ತಿಯಿಂದ ಹೇಳಿದರು. ಸಂಗೀತದ ಕಣ್ಣು ಇದೆ-ಎಂಬ ಈ ಗುರುದೇವನ ವಿಮರ್ಶೆ ರಾಯರಿಗೆ ಸಂತೋಷ ಕೊಟ್ಟಿತು. ಪಟ್ಟ ಶ್ರಮ ಸಾರ್ಥಕವೆನಿಸಿತು.

ಸಂಗೀತ ಕಲೆಯಲ್ಲಿ ಗುರುರಾಯರು ಹುಟ್ಟು, ಋಷಿಗಳಾಗಿದ್ದಾರೆ. ಸಂಗೀತ ಕಲೆ ಇವರ ಮನೆತನದಲ್ಲಿ ತಲೆ-ತಲೆಯಿಂದ ಇಳಿದು ಬಂದಿದೆ. ಗುರುರಾಯರ ತಂದೆ ದಾಸರ ಹಾಡುಗಳನ್ನು ಹೇಳುವಲ್ಲಿ ನಿಷ್ಣಾತರು. ತೀರ ಚಿಕ್ಕವರಿರುವಾಗಲೆ ಗುರುರಾಯರಲ್ಲಿ ಗಾನದ ನಾದ ಮೊಳೆಯಿತು. ಪಾಡಿಗೆ ಶಬ್ದವಿಲ್ಲದಿದ್ದರೂ, ನಾದದಿಂದಲೆ ತನನನ ಮಾಡಿ ತಮ್ಮೊಳಗೇ ಅಸಂಧ್ಯ ಪಡುತ್ತಿದ್ದರು.

ಗುರುರಾಯರ ಹುಟ್ಟೂರು, ಧಾರವಾಡ ಬಳಿ ಇರುವ ನರೇಂದ್ರ. ಅಲ್ಲಿಯೆ ಅವರ ಮನೆ, ಅವರ ಆಸ್ತಿ. ಈ ಒಬ್ಬ ಮಗ ಎಲ್ಲಿ ಹೆಗಲಿಗೆ ತಂಬೂರಿ ಹಾಕಿ ಮನೆಮನೆ ಅಲೆಯುವ ಹೊತ್ತು ಬರುತ್ತದೋ ಎಂದು ಇವರ ತೀರ್ಥರೂಪರಿಗೆ ಯಾವಾಗಲೂ ವಿವಂಚನೆ. ರಾಯರು ಶಾಲೆಯ ಅಭ್ಯಾಸದಲ್ಲಿಯೂ ಜುರುಕು; ಗಾನದಲ್ಲಂತೂ ಸದಾಲೋಲರು. ಒಂಭತ್ತು ವರುಷದವರಿದ್ದಾಗಲೆ ಧಾರವಾಡದಲ್ಲಿ ದತ್ತೋಪಂತ ಜೋತಿಯವರಲ್ಲಿ ಇವರ ಸಂಗೀತಸಾಧನೆಯ ಶ್ರೀಕಾರವಾಯಿತು. ೧೯೧೫ ರಲ್ಲಿ ಮ್ಯಾಟ್ರಿಕ್ ಪಾಸಾದರು. ಇವರ ಅಭ್ಯಾಸದ ಕ್ರಮ ನೋಡಿದರೆ, ಹಿರಿಯರಿಗೆ ಮಗ ಪಾಸಾದಾನೆಂದು ಎನಿಸಿರಲಿಲ್ಲ. ಹೊರಗೆ ಹೋದವರು ಮನೆಗೆ ಬರುವುದೆ ಕಡಿಮೆ. ಎಲ್ಲಿ, ಯಾರೇ ಪೇಟೆ ಕೊಟ್ಟು ಕೂಡಿಸಿ ಬಿಟ್ಟರೆ, ಊಟದ ಎಚ್ಚರಿಲ್ಲದೆ ತನನನ ಸುರುವೇ. ನಿತ್ಯ ಮನೆಗೆ ಬರುವುದು ಸರಿರಾತ್ರಿಗೇ. ಆ ಮೇಲೆ ಅಭ್ಯಾಸವೇನಾಗಬೇಕು? ಇಷ್ಟರಲ್ಲೇ ತಾಯಿ ತೀರಿ ಹೋಗಿ ಮನೆಯಲ್ಲಿ ಒಲೆಯು ಮುಂದೆ ಕೂಡುವ ಪಾಳಿಯೂ ಬಂದಿತು. ಇಷ್ಟಾದ ಮೇಲೆಯೂ ಅಭ್ಯಾಸ ಎಂದದು? ಕಣ್ಣು ಮುಂದೆ ಭೂಮಿತಿ, ಕಂಠದೊಳಗೆ 'ಮಲ್ಹಾರ್'ರಾಗ, 'ಎಲಾ ಇವನ, ನಿಮ್ಮ ಭೂಮಿತಿಯೊಳಗ ಮಲ್ಹಾರರಾಗದ ಪ್ರಮೆಯನೂ ಇದೆಯೇನೊ?' ಎಂದು ಹಿರಿಯರು ಜೇಷ್ಟೆ ಮಾಡಬೇಕು. ಜೇಷ್ಟೆಯೊಳಗೇ ಒಂದು ವೈಧೆ: 'ಆ ಗಾನದ ಗುಂಗು ಬಿಟ್ಟು ಬಿಡು; ಚೆನ್ನಾಗಿ ಅಭ್ಯಾಸ ಮಾಡಿ ಬಿ.ಎ. ಆಗಿ—ಮನೆಗೆ ಮರ್ಯಾದೆ ತಾ!' ಇದು ಹಿರಿಯರ ನಿತ್ಯದ ಪಲ್ಲವಿ.

'ಧಾರವಾಡದಲ್ಲಿ ಬಿ.ಎ. ಆದ ಜನರು ನೂರಾರು; ಸಂಗೀತ ಹೇಳುವವರು ಎಷ್ಟಿದ್ದಾರೆ? ಕಾರಕೂನಿಕೆ ಮಾಡಿ ಹೊಟ್ಟೆ ತುಂಬಿಕೊಳ್ಳುವುದೇನು? ಸಂಗೀತ ಕಚೇರಿ ಮಾಡಿ ಹೊಟ್ಟೆ ತುಂಬಿಕೊಳ್ಳುವುದೇನು?' ಛಲವಾದಿ ಗುರುರಾಯರ ಅಪ್ರಿಯವಾದರೂ ಸತ್ಯವಾದ ಉತ್ತರ ಇದು

ಒಮ್ಮೆ ಮ್ಯಾಟ್ರಿಕ್ ಪಾಸಾಗಿ ಕಾಲೇಜಿನಲ್ಲಿ ಪ್ರವೇಶ ಮಾಡಿದರು ೧೯೧೯ ರ ಚಳವಳಿ. ಇದೇ ಸಮಯಕ್ಕೆ ಹಿರಿಯರು ಕಣ್ಮರೆಯಾದರು. ಗುರುರಾಯರು ತಮ್ಮ ಗುರಿಯು ಹಾದಿ ಸರಳವಾಯಿತೆಂದು ಹಿಗ್ಗಬೇಕೆ? ಮನೆಯ ಆಧಾರ ಕಳಚಿ ಶಿಕ್ಷಣ ಮೂಲೆಗುಂಪಾಯಿತೆಂದು ಕುಗ್ಗಬೇಕೆ? ನಿಷ್ಠುರವೆನಿಸಿದರೂ ನಿಷ್ಠೆಯಿಂದಿರುವವನಿಗೆ ಹತ್ತಾರು ಪಾದಿ ವ್ಹಿಕ್ಟೋರಿಯಾ ಹೈಸ್ಕೂಲಿನ ಹೆಡ್ ಮಾಸ್ತರ್ ಕುಲಕರ್ಣಿ ರಾಮರಾಯರು ಗುರುರಾಯರ ಸಂಗೀತಕ್ಕೆ ಮುಗ್ಧರಾಗಿ ಹೋಗಿದ್ದರು. ಒಂದು ಸಲ ಗುರುರಾಯರು ರಾಮರಾಯರ ಮನೆಗೆ ಹೋದರು. ಅಕಾಸ್ಮಾತ್ತಾಗಿ ಬಂದ ಕಲೋಪಾಸಕನನ್ನವರು ಒರಮಾಡಿದರು. 'ನಿಮ್ಮ ಶಾಲೆಯಲ್ಲಿ ನನಗೆ ಒಂದು ನೌಕರಿಬೇಕು. ೨೫ ರೂ. ಆದರೆ ಸಾಕು!' ಎಂದು ತಮ್ಮ ಪರಿಸ್ಥಿತಿಯನ್ನು ನಿವೇದಿಸಿದರಿವರು ಯಾರ ಸಲುವಾಗಿ ರಾಮರಾಯರುಮುಗ್ಧರಾಗಿ ಹೋಗಿದ್ದರೊ ಅವರೇ ಬಂದು ೨೫ ರೂ.ಗಳ ನೌಕರಿ ಕೇಳುವಾಗ ಹೇಗೆನಿಸಬೇಡ? 'ನೀವು ಕಲಿಸಿರಿ, ಬಿಡಿರಿ, ನಾಳೆ-ನಿಂದ ಶಾಲೆಗೆ ಬರ್ರಿ; ತಿಂಗಳಿಗೆ ೨೫ ರೂ. ಒಯ್ಯಿರಿ!' ಎಂದು ಹೇಳಿದರು. ಮೈಮೇಲೆ ಬಿದ್ದ ಮನೆತನದ ಹೊಣೆಗಾರಿಕೆಯನ್ನೆದುರಿಸಲು ಶಕ್ತಿ ಬಂತು. ಸಾಕೆಂದರು ಗುರುರಾಯರು. ಕೆಲದಿನಗಳ ಮೇಲೆ ಹೇಗೋ ಅನುಕೂಲ ಪರಿಸ್ಥಿತಿ ಬಂತು. ಸಂಗೀತ ಸಾಧನೆಗಾಗಿ ೧೯೨೩ ರಲ್ಲಿ ವರ್ಷೋ ಒವಾ ಅವರ ಶಿಷ್ಯತ್ವ ವಹಿಸಿದರು. ನಾಲ್ಕು ವರುಷ ಪಾಠ ಸಾಗಿತು. ಆ ಮೇಲೆ ಸಂಸಾರನೌಕೆ ಸಾಗಿಸುವುದಕ್ಕಾಗಿ— ಮಿತ್ರರ ಆಗ್ರಹ ಮೀರದುದಕ್ಕಾಗಿ— ನಾಟಕ ಕಂಪನಿ ಸೇರಬೇಕಾಯಿತು.

ಗುರುರಾಯರ ಸಂಗೀತಶೈಲಿ ಅವರದೇ. ವಶೀಕರಿಸುವಾ ಅವರಿಂದ ಬಂದ ಸ್ಫೂರ್ತಿ. ಅದಕ್ಕೆ ಪೋಷಕವಾಗಿ ಅಬ್ದುಲ್ ಕರೀಮರಿಂದ ಒಂದಿಷ್ಟು ಬೆಳಕು, ನವಾಯಿ ಗಂಧರ್ವರಿಂದ ಒಂದಿಷ್ಟು ಹುರುಪು, ಅಲ್ಲಾದಿಯಾ ಮಂಜೀಖಾನರಿಂದ ಒಂದಿಷ್ಟು ಪ್ರತಿಭೆ ಹೀಗೆಲ್ಲಾ ವಿವಿಧ ಮಾರ್ಗಗಳಿಂದ ಪಡೆದ ಪ್ರಸಾದವನ್ನೆಲ್ಲಾ ಅರಗಿಸಿಕೊಂಡು, ರಕ್ತಗತಮಾಡಿಕೊಂಡಿದ್ದಾರೆ. ಅದುದರಿಂದ ಗುರುರಾಯರು ಹಾಡಿದರೆ ಅದು ಅವರದೇ ಥಾಟು, ಅವರದೇ ಮೋಡಿ, ಅವರದೇ ಒಂದು ವಿಶಿಷ್ಟ ಸರಣಿಯಾಗುತ್ತದೆ. ಸಂಗೀತಕೋವಿದರಲ್ಲಿ ಸ್ವರದ ಕೆಲಸಕ್ಕಾಗಿ ಹೆಸರುವೆತ್ತವರಿರಬಹುದು. ಗಿರಡಿ-ತಾನಗಳಲ್ಲಿ ಗರುಡಿ ಮಾಡಿದವರಿರಬಹುದು. ರುಮುರಿಗಳ ಗಾರುಡಿಗರಿರಬಹುದು. ಲಯವೊಂದರಲ್ಲಿಯೇ ತಂತಿ ನಡೆದಂತೆ ಕೆಲಸ ಮಾಡಬಹುದು. ಗುರುರಾಯರಲ್ಲಿ ವಿವಿಧ ವೈಶಿಷ್ಟ್ಯಗಳ ಏಕಸಮಾರಾಧನೆಯನ್ನು ಕಾಣುತ್ತೇವೆ. ಗುರುರಾಯರ ಕಂಠವಂತೂ ಮೇಣದಂತೆ. ಎಳೆದ ಹಾಗೆ ದನಿ ಬರುತ್ತದೆ. ಸಾಕಷ್ಟು ಶಿಕ್ಷಣಪಡೆದು, ಸಾಹಿತ್ಯ ಓದಿ, ಪರಂಪರೆಯಿಂದ ಬಂದ ಸಂಸ್ಕೃತಿಯನ್ನು ಹೆಜ್ಜಿಸಿಕೊಂಡಿದ್ದಾರೆ. ಸಂಗೀತ ಕರ್ಮಠರಂತೆ ಸಾಹಿತ್ಯಕ್ಕೆ ಬಹಿಷ್ಕೃತರಲ್ಲ. ಸಾಹಿತ್ಯದ ರಸವನ್ನು ಹಿಳಿದುಕೊಂಡು, ಸಂಗೀತದ ರುಚಿ ಬೆರಸಿ, ರಸಿಕರನ್ನು ಮುಗ್ಧಗೊಳಿಸುವ ಮೋಹನ ಶಕ್ತಿ ಇವರಿಗಿದೆ.

ತುಂಬಿದ ದೇಹ; ಬರಿ ಅಂಗಿಯ ಮೇಲಿದ್ದರೂ ಮೈಗೆ ಒಪ್ಪುತ್ತದೆ. ಮಾತಿನಲ್ಲಿ ಸರಸ, ನಯ. ಏನಾದರೊಂದು ವಿಷಯವನ್ನು ನಿರೂಪಿಸುವಲ್ಲಿ ಸೊಗಸುಗಾರರು ಭಾವತುಂಬಿದ ಹೃದಯದಿಂದ ಹಾಡುವಾಗ, ಅವರ ಮುಖಲಕ್ಷಣ ರಸಋಷಿಯಂತೆ ಉಕ್ಕುತ್ತದೆ. ಬಾಯಿತೆರೆದು ನಕ್ಕಾಗ ಮಾತ್ರ ಆ ಸೌಂದರ್ಯ ಮಾಯವಾಗಿ ಹೋಗುತ್ತದೆ.

ಗುರುರಾಯರೀಗ ಮುಂಬಯಿಯಲ್ಲಿ ನೆಲಸಿದ್ದಾರೆ ಮಾತುಂಗದಲ್ಲಿ 'ಪವನವಿಹಾರ' ಎಂಬ ಹೆಸರಿನ ಮನೆ. ಬಂಗಿ ಗಾಳಿ ಇರದಿದ್ದರೂ ಗಾಳಿಯಲ್ಲಿ ಹಾಡುವ ಗಾಯನಾಚಾರ್ಯರಿರುವುದರಿಂದ 'ಪವನ ವಿಹಾರ' ಎಂಬ ಹೆಸರು ಸಾರ್ಥಕವಾದುದೆಂದೇ ಇಟ್ಟುಕೊಳ್ಳಬೇಕು. ನೆರಳಿನಿಂದ ತಂಪಾದ, ಎಡಬಲದ ಅಂದವಾದ ಉಪ್ಪರಿಗೆಗಳಿಂದೊಪ್ಪುವ ಸಾರಿಸಿದ ಹಾಗೆ ನಯವಾಗಿರುವ ಬೀದಿ 'ಹಿಂದೂ ಕಾಲನಿ'ಯಿಂದ ನಮ್ಮನ್ನು 'ಪವನ ವಿಹಾರ'ಕ್ಕೆ ಮುಟ್ಟಿಸುವಾಗ, ಆ ಹಾದಿಯಿಂದ ಸಾಗುವುದೆಂದರೆ ನಿಜವಾಗಿಯೂ ಒಂದು ಪವನವಿಹಾರ.

ಇನ್ನೂ ಧಾರವಾಡದಲ್ಲೇ ಉಳಿದರೆ ದಾಸಯ್ಯನಂತೆ ತಂತಿ ಹಿಡಿಯುವ ಹೊತ್ತೇ ಬಂದೀತೆಂದು ಗುರುರಾಯರು ಮುಂಬಯಿಗೆಂದು ಕಂಬಿಕಿತ್ತಿದರು. ಕೆಲದಿನಗಳಿಂದ ಪತ್ನಿವಿಯೋಗದಿಂದ ಬಳಲಿದ ದೇಹಕ್ಕೆ ಮುಂಬಯಿವಾಸದ ಹೊಸ ವಾತಾವರಣವು ತಂಪುಕೊಟ್ಟೀತೆಂಬ ಆಶೆಯೂ ಒಂದು.

'ಪವನವಿಹಾರ' ಅವರ ಆಶ್ರಮ. ಆಶ್ರಮದಲ್ಲಿ ವೇದಾಂತ ಪಾರಂಗತ ಪ್ರೋ. ರಾನಡೆ ಅವರದೊಂದು ಭಾವಚಿತ್ರದ ಹೊರತು ಇನ್ನೊಂದು ಅಲಂಕಾರವಿಲ್ಲ. ಹೋದಾಗೊಮ್ಮೆ ಒಬ್ಬರೇ ಚಂಚಿ ಬಿಚ್ಚಿಕೊಂಡು ಕುಳಿತಿರುತ್ತಾರೆ ಮಾತು ಮಾತಿಗೆ ವಿರಾಗಭಾವ ಮೂಡಿ ಬರುತ್ತದೆ.

ನಾನಿಲ್ಲಿ ಬಂದಾಗ ಗುರುರಾಯರನ್ನು ಕಾಣಲು ಅವರ ವಿಳಾಸ ಗೊತ್ತಿರಲಿಲ್ಲ. ಆ ದಿನ ಅವರ ಆಕಾಶವಾಣಿಯ ಕಾರ್ಯಕ್ರಮವಿತ್ತು. ಬೇಕಾದ ವ್ಯಕ್ತಿಗಳನ್ನು ಖಚಿತವಾಗಿ ಕಾಣಲು ಒಂದು ತಾವು ಮಾಡಿಕೊಟ್ಟ ಆಕಾಶವಾಣಿಯವರಿಗೆ ನನ್ನ ಕೃತಜ್ಞತೆ ಸಲ್ಲಿಸಿದೆ. 'ಪೋಗದಿರೆಲೊ ರಂಗಾ' ಹಾಡಿ ಗುರುರಾಯರು ಹೊರಗೆ ಬಂದರು 'ಗಾಳಿಯಲ್ಲಿ ಹಾಡಿ ನೀವು ರಂಗನನ್ನು ಹಿಡಿದಿರೊ ಇಲ್ಲವೊ, ಗಾಳಿಯಲ್ಲಿ ಹಾಡುವ ನಿಮ್ಮನ್ನು ಮಾತ್ರ ನಾನು ನಿಲ್ಲಿಸಿದೆ' ಎಂದೆ. ರಾಯರು ನಕ್ಕರು.

ಗುರುರಾಯರ ಭಾರತ ಕೇಳಿದೆ ನನಗೂ ಬರಗೆಟ್ಟ ಹಾಗಾಗಿತ್ತು. ನನ್ನ ದೂರಿನ ಮಿತ್ರರೊಬ್ಬರು ಬಂದಿದ್ದರು ಇಬ್ಬರೂ 'ಪವನವಿಹಾರ'ಕ್ಕೆ ಹೋದೆವು. 'ಕೀಜಕ ವಧೆ'ಯಾಯಿತು. ನನ್ನ ಮಿತ್ರರು 'ಕ್ಷಮಿಸಬೇಕು, ನಿಮಗೆ ತೊಂದರೆ ಕೊಟ್ಟೆವು' ಎಂದು ಯಾಚಿಸಿದರು ಗುರುರಾಯರು ರಸಿಕತೆಯಿಂದ ಉತ್ತರ ಕೊಟ್ಟರು: 'It is twice blest It blesseth him that gives and him that takes.' (ಇದರ ಹಿತ ಎರಡು ಪದ. ಕೊಟ್ಟವನಿಗೂ ಸುಖ ಕೊಂಡವನಿಗೂ ಸುಖ!) ಇದುವೆ ಗುರುರಾಯರ ಸಂಸ್ಕೃತಿ.


ಒಡೆದ ಕನ್ನಡಿ

(೨೧ ಹರಟೆಗಳ ಸಂಕಲನ)

ಇದೀಗ ಪ್ರಕಟವಾಗಿದೆ.

ಲೇಖಕರು : ಎನ್. ಎಸ್ ಗದಗಕರ ಬಿ.ಎ.

'ಶ್ರೀರಂಗ'ರು ಮುನ್ನುಡಿ ಬರೆದಿದ್ದಾರೆ.

ಮಾರಾಟಗಾರರು :

ಮನೋಹರ ಗ್ರಂಥಭಾಂಡಾರ, ಧಾರವಾಡ

೨೧ ಬೆಟ್ಟದ ಹೊಳೆ

ಶ್ರೀ. ಸಿಂಪಿ ಲಿಂಗಣ್ಣನವರು ಬರೆದ ಸ್ವತಂತ್ರ ಸಾಮಾಜಿಕ ಕಾದಂಬರಿ. ಸಾಧನ ಮುದ್ರಣಾಲಯದ ಪ್ರಕಟನೆಯಾಗಿ ಹೊರಕ್ಕೆ ಬಂದಿದೆ. ಕಿರೀಟಾಕಾರದ ಪುಟ ಸಂಖ್ಯೆ ೧೧೦ ಬೆಲೆ ೧-೪-೦.

ಈ ಒಂದೆರಡು ವರ್ಷಗಳಲ್ಲಿ ನಮ್ಮ ಕಾದಂಬರಿಪ್ರಪಂಚವನ್ನು ಬೆಳೆಯಿಸಲು ಅನೇಕ ಸಾಹಿತ್ಯಿಕರು ಮುಂದೆ ಬಂದಿದ್ದಾರೆ. ಅದಕ್ಕೆ ಕಾರಣ— ಈಗ ಕನ್ನಡ ಓದುಗರು ಕಾದಂಬರಿಯನ್ನು ಬೇಡುವಷ್ಟು ಉಳಿದ ಯಾವ ಸಾಹಿತ್ಯವನ್ನೂ ಬೇಡುತ್ತಿಲ್ಲ ಎಂಬುದಿರಬಹುದು. ಸಾಹಿತ್ಯವು ವ್ಯವಹಾರವಾದಾಗ 'ಬೇಡಿಕೆಯಂತೆ ಪೂರಯಿಕೆ' ಎಂಬ ಅರ್ಥಶಾಸ್ತ್ರದ ತತ್ತ್ವವು ಸಾಹಿತ್ಯಲೋಕಕ್ಕೂ ಅನ್ವಯಿಸುವುದು. ಶ್ರೀ. ಸಿಂಪಿ ಲಿಂಗಣ್ಣನವರ ಉದ್ದೇಶವೇನೇ ಇರಲಿ, ಅವರ ಸಾಹಿತ್ಯ ಕೃತಿಯಾದ 'ಬೆಟ್ಟದ ಹೊಳೆ'ಯನ್ನು ಒಂದು ಕಾದಂಬರಿ ಎಂದು ಓದತೊಡಗಿದರೆ, ಮುಗಿಯುವ ಹೊತ್ತಿಗೆ, ಇದು ಅವರ ಜೀವನಚರಿತ್ರೆ ಇರಬಹುದೆ?— ಎಂಬ ಶಂಕೆ ವಿಚಕ್ಷಣರಾದ ವಾಚಕರಲ್ಲಿ ತಲೆಯೆತ್ತಿ ನಿಲ್ಲದೆ ಇರದು. ಯಾವನೂ ತನ್ನ ಜೀವನವನ್ನು ಸುಂದರವಾಗಿ ರಸವತ್ತಾಗಿ ಚಿತ್ರಿಸಿದರೆ ಅದೊಂದು ಒಳ್ಳೆ ಕಾದಂಬರಿಯಾಗಬಹುದು ಹೀಗೆ ಚಿತ್ರಿಸಿದವರ ಕೃತಿಗಳು ಸಾರ್ವತ್ರಿಕ ಜಿಜ್ಞಾಸೆಯನ್ನು ಪಡೆದಿವೆ ಎಂಬುದನ್ನೂ ನಾವು ಕಾಣುತ್ತೇವೆ. 'ಬೆಟ್ಟದ ಹೊಳೆ' ಲಿಂಗಣ್ಣನವರ ಜೀವನ ಚರಿತ್ರೆಕ್ಕೆ ಸಂಬಂಧಿಸಿದ ಕತೆ ಇರಲಿ ಬಿಡಲಿ, ಅದೊಂದು ಸ್ವತಂತ್ರ ಕಾದಂಬರಿ ಎಂದೇ ಭಾವಿಸಿ ಅದನ್ನು ಇಲ್ಲಿ ವಿಮರ್ಶಿಸಲಾಗಿದೆ.

ಪ್ರಭು ಎಂಬೊಬ್ಬ ಹಳ್ಳಿಯ ಹುಡುಗನು ನಾಟಕ ಬಯಲಾಟಗಳಲ್ಲಿ ಆಸಕ್ತಿಯುಳ್ಳ ರಾಜಮಲ್ಲನೆಂಬವನ ಹೊಟ್ಟೆಯಲ್ಲಿ ಹುಟ್ಟಿ, ಚಿಕ್ಕಂದಿನಲ್ಲಿಯೆ ಪರದೇಶಿಯಾಗಿ, ಕಷ್ಟಗಳನ್ನು ಸಹಿಸುತ್ತ ಕಲಿತು, ಬೆಳೆದು, ತನ್ನ ಜೀವನವಿಕಾಸದೊಡನೆ ತನ್ನಿಂದ ಜ್ಞಾನದಾನದ ಕಾರ್ಯವೂ ಆಗಬೇಕೆಂಬ ಹಂಬಲವನ್ನಿಟ್ಟುಕೊಂಡು, ಕೊನೆಗೆ ಪ್ರಾಥಮಿಕ ಶಿಕ್ಷಕನಾಗಿ ಬಾಳನ್ನು ಸಾಗಿಸುವನು. ಇದು ಮುಖ್ಯವಾದ ಕಥಾವಸ್ತು. ಈ ಕತೆಯಲ್ಲಿ ಪ್ರಾರಂಭದಿಂದ ಕೊನೆಯವರೆಗೆ ಪ್ರಭುವೇ ಪ್ರಭುವಾಗಿ, ಏಕಪಾತ್ರವುಳ್ಳ ಏಕಾಂಕದಂತೆ ಇದು ಏಕಮಾತ್ರ ಕಾದಂಬರಿಯಾಗಿದೆ. ತಂದೆ ರಾಜಮಲ್ಲ, ಅಣ್ಣ ಸಿದ್ಧರಾಮ, ಹೆಂಡತಿ ಪಾರ್ವತಿ, ಆಶ್ರಯದಾತರಾದ ತಿರುಮಲರಾಯರು ನಾಮ ನಿರ್ದೇಶಮಾತ್ರ ಬಂದು ಮುಖ ತೋರಿಸಿ ಹೋಗುವರು. ಯಾವ ಪಾತ್ರಗಳೂ ಸ್ವತಂತ್ರವಾಗಿ ವ್ಯವಹರಿಸಿ, ತಮ್ಮ ವ್ಯಕ್ತಿತ್ವವನ್ನು ತೋರಿ ಕತೆಯನ್ನು ನಡೆಯಿಸುವುದಿಲ್ಲ. ಕಾದಂಬರಿಯುದ್ದಕ್ಕೂ ಎಲ್ಲ ಸಂಗತಿಗಳನ್ನೂ ಲಿಂಗಣ್ಣನವರೇ ಸ್ವತಃ ಹೇಳಿಬಿಡುವರು. ಇಡಿ ಕಾದಂಬರಿಯಲ್ಲಿ ಒಟ್ಟಾರೆ ಇರುವುವು ನಾಲ್ಕಾರು ಘಟನೆಗಳು ಮಾತ್ರ. ಅವು ಕೂಡ ಸ್ಥೂಲವಾಗಿ ಚಿತ್ರಿತವಾಗಿದ್ದು, ಆ ವುಗಳ ಯೋಜನೆಯಲ್ಲಿ ಕೌಶಲ್ಯವಾಗಲಿ, ಸ್ವಭಾವಗಳ ಸೂಕ್ಷ್ಮ ದರ್ಶನದಲ್ಲಿ ಪ್ರತಿಭೆಯಾಗಲಿ, ಸಂಭಾಷಣೆಯಲ್ಲಿ ಸಹಜತೆ-ಜತುರತೆಗಳಾಗಲಿ, ನಿರೂಪಣೆಯಲ್ಲಿ ಆಕರ್ಷಣೆಯಾಗಲಿ ಕಾಣಬರದ್ದರಿಂದ, ಯಾವ ಸನ್ನಿವೇಶವೂ ಅಂತಃಕರಣವನ್ನು ಮುಟ್ಟಿ, ಭಾವನೆಗಳನ್ನು ಕೆರಳಿಸುವುದಿಲ್ಲ. ೧೧೦ ಪುಟ ಉದ್ದವಾಗಿ ಹರಿದ ಈ 'ಬೆಟ್ಟದ ಹೊಳೆ' ಗುಪ್ತಗಂಗೆಯಂತೆ ರಸವನ್ನಡಗಿಸಿಕೊಂಡು ನೀರಸದ ಮಳಲಾಗಿ ಹರಿದಿದೆ ಎಂದು ಹೇಳಬೇಕಾಗಿದೆ. 'ನಿರುಪದ್ರವಿಯಾದ ಪ್ರಾಣಿ' ಎನ್ನುವಂತೆ ಇದು 'ನಿರುಪದ್ರವಿಯಾದ ಕಾದಂಬರಿ' ಎನ್ನಬಹುದು. ನಿರುಪದ್ರವಿಯಾಗಿರುವುದೂ ಒಂದು ಗುಣವೇ ಅಲ್ಲವೆ? ಹಾಗೆ ಇದರಲ್ಲಿಯೂ ಒಂದು ಗುಣವಿದೆ: ಎಂಥವರ ಕೈಯಲ್ಲಿಯೂ ಈ ಕಾದಂಬರಿಯನ್ನು ಓದಲು ಕೊಡಬಹುದು. ಆದರೆ ಇಷ್ಟವಾದ ಪರಿಣಾಮವೇ ಆಗಬಹುದಾಗಲಿ, ಅನಿಷ್ಟಪರಿಣಾಮದ ಭಯ ಎಳ್ಳಷ್ಟೂ ಇಲ್ಲ. ಇದರಲ್ಲಿಯು ನಾಯಕನಾದ ಪ್ರಭುವು ಮಾತ್ರ ಓದುಗರ ಸಹಾನುಭೂತಿಯನ್ನು ಅವರಿಗೆ ತಿಳಿಯದಲೆ ದೊರಕಿಸುವನು. ಈ ಕಾದಂಬರಿಯನ್ನು ಕನ್ನಡ ಶಾಲಾ ಶಿಕ್ಷಕರು ಅವಶ್ಯವಾಗಿ ಓದಬೇಕು ಎಂದು ಆಗ್ರಹದಿಂದ ಹೇಳುತ್ತೇವೆ. ಪ್ರಭುವಿನ ಆದರ್ಶವನ್ನವರು ಅನುಕರಿಸುವಂತಾದರೆ, ಈ ಕೃತಿ ನಿಜವಾಗಿ ಸಾರ್ಥಕತೆಹೊಂದಿ ಅದಕ್ಕೊಂದು ವಿಶಿಷ್ಟಸ್ಥಾನ ದೊರೆತಂತಾಗುವುದು. ಕಥೆ ಎಲ್ಲಿಯೂ ಬೇಸರನ್ನು ತರುವುದಿಲ್ಲ. ಶೈಲಿ ಸರಳವಾಗಿದೆ. ಹಳ್ಳಿಯ ಬಯಲಾಟ, ಕರಡಿಮಜಲುಗಳ ವರ್ಣನೆಗಳು ಕಣ್ಣಿಗೆ ಕಟ್ಟುವಂತಿವೆ. ಕನ್ನಡ ಶಾಲಾ ಶಿಕ್ಷಕನ ಜೀವನಚಿತ್ರ ಎಂದು ಬಮ್ಮೆ ಇದನ್ನು ಯಾರೂ ಓದಬಹುದು.

—ಎಲ್. ಜಿ.

೧೦ ಭಾವತರಂಗ

(ಕವನ ಸಂಕಲನ)

ಕವಿಗಳು ಶ್ರೀಮಾನ್ ಎಂ ಗೋಪಾಲಕೃಷ್ಣ ಅಡಿಗರು, ಪ್ರಕಾಶಕರು: ಪ್ರಭಾತ ಸಾಹಿತ್ಯ, ಮಲ್ಲೇಶ್ವರ—ಬೆಂಗಳೂರು.

೧೯೩೬ನೆಯ ಇಸ್ವಿಯಿಂದಲೂ ಶ್ರೀ. ಗೋಪಾಲಕೃಷ್ಣ ಅಡಿಗರ ಕವನಗಳು ಕನ್ನಡನಾಡಿನ ಬೇರೆ ಬೇರೆ ನಿಯತ ಕಾಲಿಕ

ಜಯ೦

ಗಳಲ್ಲಿ ಪ್ರಕಟವಾಗುತ್ತ ಬಂದುದರಿಂದ, ಇವರ ಹೆಸರನ್ನು ಕೇಳಿದ ಕನ್ನಡಿಗರು ಬಹುಜನರು ಇರಬಹುದು. ಈಗ ೧೨-೧೩ ವರ್ಷಗಳಲ್ಲಿ ತಾವು ರಚಿಸಿದ ಕವನಗಳಲ್ಲಿ ೭೯ ಕವನಗಳನ್ನು ಸಂಕಲಿಸಿ ಈ ಪುಸ್ತಕವನ್ನು ಕನ್ನಡ ರಸಿಕರೆದುರು ಇರಿಸಿದ್ದಾರೆ. ನಮ್ಮ ಹಿರಿಯ ಕವಿ ಬೇಂದ್ರೆಯವರು ಚಿಕ್ಕ ಮುನ್ನುಡಿ ಬರೆದು ಈ ತರುಣ ಕವಿಯನ್ನು ಪ್ರೋತ್ಸಾಹಿಸಿದ್ದಾರೆ.

ಸಂಗ್ರಹದಲ್ಲಿಯ 'ಒಳತೋಟಿ' ಎಂಬ ಕೊನೆಯ ನೀಳ್ಗತೆಯು ೧೯೪೧ ನೆಯ ಇಸ್ವಿಯಲ್ಲಿ, ಮೈಸೂರು ವಿ.ವಿ. ನಿಲಯದ ರಾಜಸೇವಾಸಕ್ತ ಶ್ರೀ. ಬಿ. ಎಂ. ಶ್ರೀ. ಯವರ ರಜತೋತ್ಸವ ಸುವರ್ಣ ಪದಕವನ್ನು ಪಡೆದುದು. ಬಳಸಿದ ವೃತ್ತ ಕುಸುಮ-ಚೌಪದಿ. ೫೮೮ ಚೌಪದಿಗಳಿಂದ ಕೂಡಿದೆ ಈ ಕವಿತೆ.

'ನಿಮಿಷ ನಿಮಿಷಕ್ಕೊಂದು ವ್ಯೂಹಾಂತರವ ತಂದು
ದಾಳಿಯಿಡುವ ಸಮ ವಿಷಮ ಭಾವಗಳಲಿ
ಹೋಳಾಗುತಿರೆ ಬಾಳು ಗೋಳಿಡುತಿರುವ ಮಧುರ-
ನೊಳತೋಟ ಹಾಡಾಗಿ ಹರಿವುದಿಲ್ಲಿ.'

ಪಶ್ಚಿಮ ಕನ್ನಡನಾಡಿನಲ್ಲಿ ಹುಟ್ಟಿದ ಮಧುರನೆಂಬ ಹುಡುಗ ಬೆಳೆದು ಬಾಳಿದ ಬಗೆಯೂ, ಬಲಿತು ಆಶೆ-ಆಕಾಂಕ್ಷೆಗಳ ಮೂಲಕ ಪಟ್ಟ ಪಾಡೂ ಇದರಲ್ಲಿ ರಸವತ್ತಾಗಿ ವರ್ಣಿತವಾಗಿವೆ. ವಿಶೇಷ ಘಟನೆಗಳಾವುವೂ ನಡೆದಿರದಿದ್ದರೂ, ಮಧುರನ ಜೀವನವನ್ನು ಚಿತ್ರಿಸಲು ಹೊರಟ ಈ ಕವನವನ್ನು ಒಂದು ಕಥನ ಕವನವೆಂದೇ ಹೇಳಬಹುದು. ವಾಸ್ತವವಾಗಿ ನಿರರ್ಗಲವಾಗಿ ಹೊರಟಿದೆ ಈ ಮಧುರನ ಬಾಳಹಾಡು. ಒಂದು ದಿನ 'ಲಕ್ಷೋಪಲಕ್ಷ ನಕ್ಷತ್ರ-ಗಳ ನಿರ್ನಿಮೇಷಾಕ್ಷಿಗಳಲಿ' ನೋಡಿದೊಡನೆ,

'ಹಲವು ಯುಗಯುಗದಿಂದ ಮನುಜರೆದೆಬನದಲ್ಲಿ
ಅರಳಿಬಾಡಿದೆ ಭಾವಕುಸುಮವೆನಿತೋ
ನೆಲದ ಹಗೆ ತಾಳಲಾರದೆ ಮುಗಿಲನೇರಿಹವು ;
ಅಲ್ಲಿ ತಾರೆಗಳಾಗಿ ಮಿನುಗುತಿಹುವು'

ಎಂಬ ಭಾವನೆ ಮೂಡುವುದು. ಈ ಭಾವನೆ ಹೀಗೆ ಒಂದು ಸಂದೇಶವನ್ನು ಸೂಚಿಸುವುದು :

'ತುಂಬು ತುಂಬದರಿಂದ ಬಾಳಿನಲಿ ನೊದಲಿಂದ
ಕೊನೆಯ ವರೆಗೂ ದಿವ್ಯ ಭಾವಗಳನು.
ಎಂದಾದರೊಂದು ದಿನ ನಿನ್ನವುಲ ಭಾವಗಳೆ
ಬಾಂದಳದ ಹೂವಾಗಿ ಮುಲರಲಿಹವು'

ಎಂಬ ಆಶಾವಾದಿತ್ವದ ಸಂದೇಶಸೂಚನೆಯೊಂದಿಗೆ ಕವಿತೆ ಕೊನೆಗೊಳ್ಳುವುದು. ಕೊನೆಯು ಕೊನೆಯಾಗದಂತೆ ಕಂಡರೂ ಮಧುರನ 'ಒಳತೋಟಿ'ಯ ಬಣ್ಣನೆ ಸಹಜ ಸೌಂದರ್ಯದಿಂದ ಕೂಡಿದೆ.

ಮಿಕ್ಕ ೭೮ ಕವನಗಳೆಲ್ಲ ಭಾವಕವಿತೆಗಳು. ಎಲ್ಲೆಲ್ಲಿಯೂ ಗಂಭೀರ ತತ್ತ್ವವನ್ನೆ ಕಾಣುವ ಸ್ವಭಾವ ಕವಿಯದು. ಮೊದಲಿನ ಐದಾರು ಕವಿತೆಗಳು, ಲೋಕದ ಅನುಭವ ಹೆಚ್ಚಾಗಿರದ ಪ್ರಾಥಮಿಕ ಅವಸ್ಥೆಯ ವಿಚಾರಗಳನ್ನು ಒಳಗೊಂಡುವು. ಮುಂದಿನ 'ಹೊಸಹಾದಿ' 'ಹೊಸಬಾಳು'ಗಳಲ್ಲಿ ಮೊದಲಿನ ಜೀವನ ನಿರಾಶೆಯೂ ದೈವವಾದದ ಅಗತಿಕತೆಯೂ, ಆಶಾವಾದ-ಪೌರುಷವಾದಗಳತ್ತ ತಿರುಗಿದೆ. ಗೆಳೆತನದ ಹಾಡುಗಳೂ ನಲ್ವಾಡುಗಳೂ ಕೆಲವು ಇವೆ. ಆತ್ಮಗೀತಗಳೂ ಕೆಲವು ಇವೆ. ಗೆಳೆಯನಲ್ಲಿಯರ ವಿಷಯ ಹೇಳುವಾಗಲೂ ಕವಿ ಗೆಳೆತನ, ಒಲವು, ನಗೆಯಾಟ, ಹುಡುಗಾಟಗಳಿಗಿಂತ ತತ್ತ್ವವಿಶ್ಲೇಷಣೆಯ ಗಾಂಭೀರ್ಯದಲ್ಲೆ ಇರುತ್ತಾನೆ. 'ಯುದ್ಧ ಮುಗಿಯಿತು' 'ನೆನೆನೆನೆ ಆ ದಿನವ (ಆಗಸ್ಟ್ ೧೫ ಬಂಬಪ್ತು)' ಎಂಬ ರಾಜಕೀಯ ಸಂದರ್ಭಸ್ಫೂರ್ತ ಕವನಗಳು ಜನರನ್ನು ಜಾಗೃತಗೊಳಿಸಬಲ್ಲುವು. 'ಬಿಡುಗಡೆಯ ಹಾಡು' ಉತ್ಸಾಹದಾಯಕವಾಗಿದೆಯಾದರೂ ವಿಷಯ ಹೊಸದೆನಿಸುವಂತಿಲ್ಲ. 'ಏನಿರಬಹುದು?' 'ನೀನೆ ನೀನೆ' ಈ ಕವಿತೆಗಳು ಅರ್ಥವತ್ತಾಗಿವೆ.

ಶ್ರೀ. ಅಡಿಗರ ಭಾಷೆ ಪರಿಶುದ್ಧವಾದುದು ಶೈಲಿ, ಶಯ್ಯೆ, ಪದಮೈತ್ರಿ ಜೆನ್ನಾಗಿವೆ. ಛಂದಸ್ಸಿನಲ್ಲಿ ಮಾತ್ರ ವೈವಿಧ್ಯ ಕಡಿಮೆ. ಮುನ್ನುಡಿಯಲ್ಲಿ ಶ್ರೀ. ಬೇಂದ್ರೆಯವರು ಹೇಳಿದ '.... ಇಂದಿನ ಕನ್ನಡ ನುಡಿಯು ಕಾಂತಿ, ಮಾಧುರ್ಯ, ಓಜಸ್ಸು-ಗಳನ್ನು ಬೆಳಸುವ ನವಕವಿಗಳಲ್ಲಿ ನಿಸ್ಸಂಶಯವಾಗಿ ಅಡಿಗರ-ಕೌಶಲದ ಉಡುಗೊರೆಯಿದೆ' ಎಂಬ ಮಾತನ್ನು ಯಾರೂ ಒಪ್ಪಬಹುದಾಗಿದೆ.

—ಬಿ. ಪಿ. ಎಸ್. ರಾವ್.

## ೭೭ ಶ್ರೀರಾಮಕೃಷ್ಣ ಲೀಲಾಪ್ರಸಂಗ

(ಗುರುಭಾವ—೧ನೆಯ ಭಾಗ)

ಶ್ರೀಸ್ವಾಮಿ ಸಾರದಾನಂದ ವಿರಚಿತ ಬಂಗಗ್ರಂಥದ ಅನುವಾದ. ಶ್ರೀ ಸ್ವಾಮಿ ಪ್ರಣವೇಶಾನಂದರು ಕನ್ನಡಕ್ಕೆ ಪರಿವರ್ತಿಸಿದ್ದಾರೆ. ಶ್ರೀರಾಮಕೃಷ್ಣಾಶ್ರಮ, ಬಸವನಗುಡಿ—ಬೆಂಗಳೂರು ಅವರ ಪ್ರಕಾಶನ.

ಭಾರತದ ಜಧುನಿಕ ಸಂತಕುಲದಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಸ್ಥಾನ ಅದೊಂದು ವೈಶಿಷ್ಟ್ಯದಿಂದ ಕೂಡಿದುದಾಗಿದೆ. ನಮ್ಮಲ್ಲಿಯ ಮತ-ಪಂಥಗಳ ಚರಿತ್ರೆಗಳನ್ನೂ ಅವುಗಳ ಅನುಯಾಯಿಗಳನ್ನೂ ವಿಮರ್ಶಾದೃಷ್ಟಿಯಿಂದ ನೋಡಿದರೆ, ತಮ್ಮ ದಲ್ಲದ ಮತ-ಪಂಥಗಳ ಬಗೆಗೆ ಅತೃಪ್ತಿ-ಅಸಹನೆಗಳು ಇರುವುದು ಸ್ಪಷ್ಟವಾಗಿ ಕಂಡುಬರುವುದು. ಭಾರತದಲ್ಲಿ ಹೊಸಯುಗವನ್ನು ನಿರ್ಮಿಸಲು ಅವತರಿಸಿದಂತಿರುವ ಶ್ರೀರಾಮಕೃಷ್ಣರು, ಎಲ್ಲ ಮತ-ಪಂಥಗಳನ್ನೂ ಸಮನ್ವಯ ಬುದ್ಧಿಯಿಂದ ಕಂಡು, ಅವುಗಳ ದಾರಿಯಲ್ಲಿ ನಡೆದು ದೊರೆತ ಫಲಗಳನ್ನು ಅನುಭವಿಸಿ, ಎಲ್ಲ ಮತ-ಪಂಥಗಳಲ್ಲಿರುವ ಸತ್ಯತೆಯನ್ನು ಲೋಕಕ್ಕೆ ಸಾರಿದವರು. ಎಂತಲೇ ಇವರ ಚರಿತ್ರೆ, ಮಾತು, ವಿಚಾರ ಎಲ್ಲವೂ, ಎಲ್ಲ ಸಂಪ್ರದಾಯವಾದಿಗಳಿಗೂ ಸುಧಾರಣಾವಾದಿಗಳಿಗೂ ಸಂಜೀವಕೆಯಾಗಿ ತೋರುತ್ತಿರುವುವು. ಆದುದರಿಂದಲೆ ಎರಡು

ಬಗೆಯ ಭಕ್ತರೂ ಒಂದು ಮನಸ್ಸಿನಿಂದ ಸೇರಿ, ಭಾರತದ ಜನಸೇವೆಯ ವ್ಯಾಸಪೀಠದ ಮೇಲೆ ನಿಂತು ಕಾರ್ಯಮಾಡುತ್ತಿರುವುದನ್ನು ಕಾಣುವೆವು.

ಶ್ರೀರಾಮಕೃಷ್ಣರ ವಿಚಾರ-ಚಾರಿತ್ರ್ಯಗಳು ಕೇವಲ ಜಡವಾದಿಗಳನ್ನು ದೈವವಾದದ ಕಡೆಗೂ ಕೇವಲ ದೈವವಾದಿಗಳನ್ನು ಜಡವಾದದ ಜ್ಞಾನದ ಆವಶ್ಯಕತೆಯ ಕಡೆಗೂ ತಿರುಗಿಸುವಂತಹ ಸಾಮರ್ಥ್ಯದಿಂದ ಕೂಡಿವೆ. ಆದುದರಿಂದಲೆ ಅವರ ಪ್ರಮುಖ ಶಿಷ್ಯರಾದ ಶ್ರೀವಿವೇಕಾನಂದರು ತಮ್ಮ ಗುರುವಿನ ಸಂದೇಶದಿಂದ ಪಶ್ಚಿಮದ ಜಡವಾದಿಗಳ ಮನಸ್ಸನ್ನು ದೈವಭಕ್ತಿಯತ್ತ ತಿರುಗಿಸಲು ಸಮರ್ಥರಾದರು. ಪೂರ್ವದ ವಾರತಂತ್ರ್ಯಬದ್ಧ ಜನತೆಯಲ್ಲಿ ಆತ್ಮತೇಜವನ್ನೂ ಲೌಕಿಕ ಕರ್ತವ್ಯಜ್ಞಾನವನ್ನೂ ಹರಡಲು ಶಕ್ತರಾದರು. ಇಂತಹ ಗುಣವೈಶಿಷ್ಟ್ಯದಿಂದ ಕೂಡಿದ ಶ್ರೀಪರಮಹಂಸರ ಸಾಹಿತ್ಯವೆಲ್ಲ ಕನ್ನಡಿಗರ ಕೈಗೆ ದೊರೆವುದು ಅತ್ಯಂತ ಆವಶ್ಯಕವಾಗಿದೆ. ಈ ಮೊದಲು ಅಲ್ಲಿ ಇಲ್ಲಿ ತುಣುಕು-ಮಿಣುಕಾಗಿ ಅದು ಕನ್ನಡಕ್ಕೆ ಬಂದಿದೆ ಹೊರತು, ಸಂಪುಟ ರೂಪದಲ್ಲಿ ಬಂದುದು ತೀರ ಕಡಿಮೆ. ಈಗ ಬೆಂಗಳೂರಿನ ರಾಮಕೃಷ್ಣಾಶ್ರಮದವರು ಕ್ರಮವಾಗಿ ಅದನ್ನೆಲ್ಲ ಸಂಪುಟರೂಪದಿಂದ ಕನ್ನಡಿಗರಿಗೆ ಒದಗಿಸಿಕೊಡಲು ಸಿದ್ಧರಾದುದು ತುಂಬ ಸಂತೋಷದ ಸಂಗತಿ.

ಪ್ರಸ್ತುತ ಪುಸ್ತಕವು ಎಂಟು ಅಧ್ಯಾಯಗಳಿಂದ ಕೂಡಿದ್ದು ಶ್ರೀಪರಮಹಂಸರ ಮಹತ್ತ್ವದ ಚರಿತ್ರ-ಉಪದೇಶ ವಿಷಯಗಳಿಂದ ತುಂಬಿದೆ. ಕಥೆ-ಕಾದಂಬರಿಗಳನ್ನು ಓದುವಷ್ಟು ಹಗುರುಮನದಿಂದ ಇದನ್ನು ಓದಿ ಮುಗಿಸಬಹುದು; ಆದರೆ ದೊಡ್ಡ ತತ್ತ್ವದ ತಿರುಳು ಒಳಗೊಳಗೆ ಹೃದಯ-ಮನಸ್ಸುಗಳನ್ನು ವಿಕಾಸಗೊಳಿಸಿದ ಅನುಭವ ಅಮೇಲೆ ವಾಚಕರಿಗೆ ಮನವರಿಕೆಯಾಗಬಹುದು. ಅಲ್ಲಲ್ಲಿ ಬರುವ ಪರಮಹಂಸ ಪ್ರಣೀತ ಕಿರುಗತೆಗಳು ಮನೋರೋಗ ನಿವಾರಣದ ಔಷಧಿಗಳಂತಿವೆ. ಕೊನೆಯಭಾಗದಲ್ಲಿ ಬರುವ ತೋತಾಪುರಿ ಸಂನ್ಯಾಸಿ, ಭೈರವಿ ಬ್ರಾಹ್ಮಣಿ, ಶ್ರೀರಾಮಕೃಷ್ಣ ಪರಮಹಂಸ ಇವರ ಸಂಯೋಗ ಸಂದರ್ಭವ ಕಥೆಯು, ಶ್ರೀ ಆಲ್ಲಮಪ್ರಭು, ಮಹಾದೇವಿಯಕ್ಕ, ಬಸವಣ್ಣನವರು ಇವರ ಕೂಟದ ಕತೆಯನ್ನು ನೆನಪಿಗೆ ತಂದು ಕೊಡುತ್ತದೆ. ಅನುವಾದದ ಭಾಷೆ ಸರಳವಾಗಿದೆ. ಕಾಗದ-ಅಚ್ಚುಗಳೂ ಪುಸ್ತಕದ ಮಹಾತ್ಮ್ಯಕ್ಕೆ ತಕ್ಕವುಗಳಾಗಿವೆ. ಶ್ರೀ ಪರಮಹಂಸರ ಚಿತ್ರವೊಂದನ್ನು ಇದಕ್ಕೆ ಸೇರಿಸಬೇಕಾಗಿದ್ದಿತು. ಅದೊಂದು ಕೊರತೆ. ಎಲ್ಲರೂ ಇದನ್ನೋದಿ, ಶ್ರೀರಾಮಕೃಷ್ಣರ ಎಲ್ಲ ವಿಚಾರಗಳನ್ನೂ ತಿಳಿದುಕೊಳ್ಳಬೇಕಾದುದರ ಆವಶ್ಯಕತೆಯನ್ನು ಮನಗಾಣಬೇಕೆಂದು ನಮ್ಮ ಹಾರೈಕೆ.

—ಬಿ. ಪಿ. ಎಸ್. ರಾವ್

---

( ೭೪ ನೆಯ ಪುಟದಿಂದ ಮುಂದೆ ಸಾಗಿದ್ದು )

ಮೇಲಿನ ಸರಕಾರಗಳು ಜನತೆಯ ಹಿತದ ಕಾಯಿದೆಗಳನ್ನು ಮಾಡಬಹುದು; ಆದರೆ ಆಪುಗಳನ್ನು ಆಮಲಿನಲ್ಲಿ ತರುವ ಅಧಿಕಾರಿವರ್ಗ, ಮೊದಲಿನಂತೇ ಆಗಿರುವುದರಿಂದ—ತಿಂದು ಸವಿಗಲಿತ ಅದು—ಜನತೆಯ ಹಿತಸಾಧನೆಗೆ ಎಷ್ಟೊಂದು ವಿರವಾದೀತೋ ಹೇಳಲಿಕ್ಕೆ ಬರುವಂತಿಲ್ಲ. ಅದರಂತೆಯೆ ಇದುವರೆಗೆ ಲಾಭ ತಿಂದು ಸವಿಗಂಡ ಸಿರಿವಂತ ವರ್ಗದಿಂದಲೂ ಈ ಸರಕಾರಕ್ಕೆ ನೀತಿಯ ಸಹಕಾರ ಸಿಕ್ಕುವುದು ಅಸಾಧ್ಯ. ನಮ್ಮ ನೀತಿಯ ಪತನವೆಂದರೆ ಮೇರೆ ವಿಸ್ತಾರಿದೆಯೆಂಬುದು, ಕಾಂಗ್ರೆಸ್ಸು ಲೀಗುಗಳಲ್ಲಿದ್ದು ಜನತೆಯ ಪ್ರತಿನಿಧಿಗಳೆಂದು ಹೆಸರು ಮೆರಸಿಕೊಂಡೂ ಈ ಕಳವಲ್ಲದ ಕಳವನ್ನು ಮಾಡುವ ಸಂಭಾವಿತ ಕಳ್ಳರೂ ಹಲವು ಜನರಿರುವುದರಿಂದ ಚೆನ್ನಾಗಿ ವ್ಯಕ್ತವಾಗುವುದು. ಇದು ಮನುಷ್ಯತ್ವದ ಲಕ್ಷಣವಲ್ಲ. ರಾಷ್ಟ್ರದ ಪ್ರಗತಿ-ಪ್ರತಿಷ್ಠೆಗಳಿಗೆ ದೊಡ್ಡ ದೊಂದು ಆತಂಕವಿದು.

ನಮ್ಮಲ್ಲಿಯ ಇಂದಿನ ಆಹಾರ—ವಸ್ತ್ರಗಳ ಪರಿಸ್ಥಿತಿಯನ್ನು ನೋಡಿದರೆ, ಈ ದುಃಸ್ಥಿತಿಯನ್ನು ದಾಟಲು ಇನ್ನೂ ನಾಲ್ಕಾರು ವರ್ಷ ಕಾಲ ಕಳೆಯಬೇಕಾಗಬಹುದು. ಆದರೂ ಈ ದುಃಸ್ಥಿತಿಯಲ್ಲೆಯೂ ಸುಸ್ಥಿತಿಯನ್ನು ನಾವು ಕಾಣಬಹುದು—ನಮ್ಮ ಅಧಿಕಾರಿ ವರ್ಗವೂ ಸಿರಿವಂತ ವರ್ತಕರೂ ಮನುಷ್ಯರಾಗಿ ರಾಷ್ಟ್ರಭಕ್ತರಾಗಿ ನಡೆದುಕೊಂಡರೆ; ತಮ್ಮ ಕಳವಲ್ಲದ ಕಳವಿನ ಕ್ರಮವನ್ನು ನಿಲ್ಲಿಬಿಸಿಟ್ಟರೆ! ನಿರ್ಭಾಗ್ಯ ಭಾರತಜನತೆಗೆ ಇದೂ 'ರೆ' ರಾಜ್ಯದ ಮಾತಾಗಿ ಪರಿಣಮಿಸಬೇಕೆ?

—ಸಂಪಾದಕರು

---

( ೭೫ ನೆಯ ಪುಟದಿಂದ ಮುಂದೆ ಸಾಗಿದ್ದು )

ಗಳ ಕಿವಿಗೆ ಬೀಳದೆ ಹೋಯಿತು. ಸರಕಾರ ಪ್ರಾರಂಭಿಸಿದ್ದ ಬರಗಾಲದ ಕೆಲಸವೆಲ್ಲ ತೀರಿ, ಈಗ ಬಡವರೆಲ್ಲ ಕೆಲಸವಿಲ್ಲದೆ ಕೂಳಿಲ್ಲದೆ ಕುಳಿತಿದ್ದರೂ, ಅವರಕೂಗು ಮಂತ್ರಿಗಳ ಕಿವಿಗೆ ಕೇಳಲಿಲ್ಲದಂತೆ, ಕಾರ್ಯಕ್ರಮದ ಅಧಿಕಾರದಲ್ಲಿದ್ದ ದಿಂಡೆಯರ ತಂಡ ಪ್ರಯತ್ನ ಪಟ್ಟಿತು. ಅದುದರಿಂದಲೆ ಜಿಲ್ಲೆಯ ರೈತರ ಕೂಲಿಕಾರರ ಬಾಳಿನ ಮುಖ್ಯ ಮಂತ್ರಿಗಳಿಗೆ ತಿಳಿಯದೆ ಹೋಯಿತು. ಬಡವರ ಮುಂದಾಳುಗಳೆಂದು ಹೇಳುತ್ತಿದ್ದ ಬಿಳಿಯ. ಟೊಪ್ಪಿಗೆಯವರೂ ಈಗ ಅಧಿಕಾರ ಬಂದೊಡನೆ, ಮೊದಲಿನ ರಾಘ್‌ಸಾಹೇಬ್-ರಾವ್ ಬಹಾದ್ದೂರರಂತೆ ಅಟ್ಟಿಕ್ಕೇರಿ ಕುಳಿತಿದ್ದಾರಲ್ಲ! ಈಗ ಬಡವರು ಏನು ಮಾಡಬೇಕು? ಯಾರನ್ನು ನಂಬಬೇಕು?' ಇತ್ಯಾದಿ ಆ ಸುದ್ದಿಯು ತಿರುಳು.

ಬೀರಣ್ಣನಿಗೆ ಮೊದಲಿನಿಂದಲೂ ಇದು ಗೊತ್ತಿದೆ. ನಮ್ಮಲ್ಲಿಯ ಬಹಳ ಜನ ಚಳವಳಿಗಾರರು ಬಡವರನ್ನು ಉಪಯೋಗಿಸಿಕೊಳ್ಳುವುದೆಂದರೆ, ಅವರ ತಲೆಯ ಮೇಲೇರಿ ನಿಂತು ತಾವು ಎತ್ತರವಾಗಿ ಕಾಣುವುದಕ್ಕೆ. ಎತ್ತರತನದ ಸರ್ಟಿಫಿಕೇಟ್ ಸಿಕ್ಕರಾಯಿತು; ತಾವು ನಿಂತುದೆಲ್ಲಿ ಎಂಬುದನ್ನೇ ಮರೆತುಬಿಡುತ್ತಾರೆ. ಉತ್ಸಾಹದಿಂದ ಕಾಣೆಯು ತೊಡಗಿ ಬಡವರ ಗೋಣನ್ನೇ ಮುರಿಯುತ್ತಾರೆ. ನಮ್ಮ ಜನಕ್ಕೆ ಅಧಿಕಾರದ ಆಶೆಯಿದೆಯಲ್ಲದೆ ಸಾಮಾಜಿಕ ಸುಖಶಾಂತಿಯ ಆಪೇಕ್ಷೆಯಿಲ್ಲ. ಅದುದರಿಂದಲೆ ಬೀರಣ್ಣ ಬಡವರ ಪ್ರತಿನಿಧಿಗಳಿಗೆ ತನ್ನ ಅನುಭವದ ಸಂದೇಶವನ್ನು ಹೀಗೆ ಕೊಡುತ್ತಾನೆ:

"ಆಳಬೇಕನ್ನೂ ಆಸೇ ಇಟ್ಕೊಂಡು ಬರುವವರು ಬ್ಯಾರೇ ದೇಶದವರೇನು, ನಮ್ಮ ದೇಶದವರೇನು? ಎಲ್ಲಾರೂ ಒಂದ್ಸ ಬಡವಗ. ಬಡವ ತನ್ನ ಬಲದ ವಿಶ್ವಾಸದ ಮ್ಯಾಲೇ ನಿಂತುಕೊಳ್ಳ ಬೇಕು. ಇನ್ನೊಬ್ಬರು ಈಗ ಹಿತದ ಮಾತು ಆಡಿದ್ದರೆ, ಅದು ನಮ್ಮ ಹಿತಕಾಗಿ ಅಲ್ಲ; ತಮ್ಮ ಸ್ವಂತದ ಹಿತ ಸಾಧಿಸಲಿಕ್ಕೆ. ಈ ಮಾತಿನ ಎಚ್ಚರ ಬಡವರಿಗೆಲ್ಲಾ ಇರಬೇಕ್ರಪ್ಪೊ!"

# ಈ ನಾಲ್ಕೂ ನಿಟ್ಟಿನ ನೋಟ

## ಭಾರತ ಧುರೀಣರ ರಾಜಕಾರ್ಯಕೌಶಲ

ಭಾರತ ರಾಷ್ಟ್ರೀಯ ಮಹಾಸಭೆ ಇಂದು ಬ್ರಿಟಿಷರನ್ನು ಕನಸಿನಲ್ಲಿ ಕೂಡ ಹೆದರಿಸುತ್ತಲಿದೆ. ಬ್ರಿಟನಿನ ಸುಖ-ಶಾಂತಿಗಳು ಭಾರತದ ಮೇಲೆ ಅವಲಂಬಿಸಿವೆಯೆಂಬುದು ಬ್ರಿಟಿಷ್ ಸಾಮ್ರಾಜ್ಯದ ಒಂದು ಕೂಸಿಗೂ ಗೊತ್ತಾಗಿಹೋಗಿದೆ. ಎಂತಹ ಉದಾರಿ ಬ್ರಿಟಿಷ್ ಗೃಹಸ್ಥನಿಗೂ ಹಿಂದುಸ್ತಾನವನ್ನು ಬಿಡುವುದೆಂದರೆ ಒಪ್ಪಿಗೆಯೆನಿಸದ ಮಾತು. ತಮ್ಮ ಜೀವನಮಂದಿರದ ಸೌಂದರ್ಯವನ್ನೇ ಬ್ರಿಟಿಷರು ಹಿಂದುಸ್ತಾನದ ಶಕ್ತಿ-ಸತ್ತ್ವ-ಸಂಪತ್ತಿಗಳಿಂದ ನಿರ್ಮಿಸಿಕೊಳ್ಳುತ್ತಲಿರುವುದರಿಂದ, ಹಿಂದುಸ್ತಾನ ಕಳೆದುಕೊಂಡರೆ ದಾರಿದ್ರ್ಯದ ಉರುಳು ಕೊರಳಿಗೆ ಬಿದ್ದಿತೇ ಎಂದು ಪ್ರತಿಯೊಬ್ಬ ಬ್ರಿಟಿಷನಿಗೆ ವಿಶ್ವಾಸ. 'ಇನ್ನು ಮೇಲೆ ಭಾರತವನ್ನು ಬ್ರಿಟಿಷರಿಗೆ ದಕ್ಕಗೊಡಕೂಡದು' ಎಂದು ರಾಷ್ಟ್ರೀಯ ಮಹಾಸಭೆ ಪ್ರತಿಜ್ಞಾಬದ್ಧವಾಗಿ ಹೊರಟಿದೆಯೆಂದ ಮೇಲೆ, ಯಾವ ಬ್ರಿಟನನು ಈ ಕ್ರಾಂತಿಕಾರಕ ಸಂಸ್ಥೆಯನ್ನು ಸ್ನೇಹಬುದ್ಧಿಯಿಂದ ಕಂಡಾನು? ಆಗಾಗ ಅಲ್ಲಲ್ಲಿ ಕೇಳುತ್ತಿರುವ ಸ್ನೇಹ-ಸಹಾನುಭೂತಿಗಳ ಉದಾರವಚನಗಳು ಕೇವಲ ಕರಟಕನೀತಿಯವೇ ಹೊರತು ಮಾನವನೀತಿಯವಲ್ಲ. ಹೇಗಾದರೂ ಮಾಡಿ ರಾಷ್ಟ್ರೀಯ ಮಹಾಸಭೆಯ ಸತ್ತ್ವ-ಸಾಮರ್ಥ್ಯಗಳನ್ನು ಕಡಿಮೆಮಾಡಿ, ಅದನ್ನು ಬಗ್ಗುಬಡಿಯಬೇಕೆಂದು ಬ್ರಿಟಿಷ್ ರಾಜತಂತ್ರಜ್ಞರ ಆಶೆ. ಆದರೆ ಮೈಚುಂಬ ಕಣ್ಣಿಟ್ಟುಕೊಂಡು ನೋಡುತ್ತಿರುವ ರಾ. ಮಹಾಸಭೆಯು, ಬ್ರಿಟಿಷರ ಯಾವ ಬಲೆಗೂ ಬೀಳದಂತಾಗಿದೆ. ತಮ್ಮ ನರಿಯ ರಾಜಕಾರಣದಿಂದ ಒಗತ್ತಿನ ರಾಜ್ಯವ್ಯವಸ್ಥೆಗಳಲ್ಲಿಯೆ ಅಲ್ಲೋಲಕಲ್ಲೋಲ ಮಾಡಬಲ್ಲೆವೆಂಬ ನಂಬುಗೆಯ ಮಹಾ ಮಹಾ ಮುತ್ಸದ್ದಿಗಳೂ, ರಾಷ್ಟ್ರೀಯ ಮಹಾಸಭೆಯ ಸರಳ-ಸತ್ಯ—ರಾಜಕಾರಣದೆದುರು ಮೂಗುತಿಕ್ಕಿ ಮುಂಗೈ ಕಚ್ಚಿಕೊಳ್ಳುತ್ತ ಮರಳುತ್ತಲಿದ್ದಾರೆ. ಇಂತಹದೊಂದು ಕಪಟಜಾಲವನ್ನೇ ರಚಿಸಿ ರಾ ಮಹಾಸಭೆಯನ್ನು ಮುಂಕುಗೊಳಿಸುವ ಆಂತರಿಕ ಉದ್ದೇಶದಿಂದ ಬಂದ ಬ್ರಿಟಿಷ್ ಮಂತ್ರಿಗಳ ಸಮಿತಿ, ಇಂದು ಭಗ್ನಮನೋರಥವಾಗಿ ಭಾರತದಿಂದ ಮರಳಿಹೋಗಲು ನಿಂತಿದೆ. ಇಂದು ಜಗತ್ತಿನ ರಾಜಕಾರಣಿಗಳ ಗುಂಪೇ ಭಾ. ರಾ. ಮಹಾಸಭೆಯ ರಾಜಕಾರ್ಯ ನೈಪುಣ್ಯವನ್ನು ಹೊಗಳಿ ಹಾಡುವಂತಾಗಿದೆ.

## ಬ್ರಿಟಿಷ್ ರಾಜಕಾರಣಿಗಳ ನಿಟ್ಟುಸಿರು

ಅಲ್ಪ ಸಂಖ್ಯಾಕರ ವಿಷಯಕವಾಗಿ ಭೂತದಯೆ ತೋರಿಸಿದಂತೆ ಮಾಡಿ, ಜನರನ್ನು ಮೋಸಗೊಳಿಸಿ, ನಿಜವಾಗಿಯೂ ಮುಸ್ಲಿಂಲೀಗಿನವರಲ್ಲಿ ಜಾತೀಯತೆಯ ತೀಕ್ಷ್ಣ ಭಾವನೆಯನ್ನು ಹೆಚ್ಚಿಸಲು ತಾವೇ ಕಾರಣರಾಗಿ, ಜನರ ನೆರವಿನಿಂದ ತಮ್ಮ ಬೇಳೆ ಬೇಯಿಸಿಕೊಳ್ಳಬೇಕೆಂದು ಸಾಕಷ್ಟು ಆಟಗಳನ್ನು ಹೂಡಿದರು—ಬ್ರಿಟಿಷ್ ಮಂತ್ರಿತ್ರಯರು, ವೈಸ್‌ರಾಯ್ ವೇವೆಲ್ ಸಾಹೇಬರು. ಜಾತೀಯ ಕಲಹವನ್ನೆಬ್ಬಿಸಿಯೂ, ಸಂರಕ್ಷಣ ಶಾಸನದ ಕ್ರೂರೋಪಾಯಗಳನ್ನು ನಡೆಯಿಸಿಯೂ ಯುದ್ಧದ ಸಂಕ್ರಾಂತಿಕಾಲದಲ್ಲಿ ಬ್ರಿಟಿಷರು ಭಾರತವನ್ನು ತಮ್ಮ ಕಡೆಗೆ ಉಳುಹಿಕೊಂಡರು. ಆದರೆ ಹೀಗೆ ಉಳುಹಿಕೊಳ್ಳಲಿಕ್ಕೆ ಅಂದು ಅವರು ಪ್ರಾಣಪಣದ ಪ್ರಯತ್ನಗಳನ್ನು ಮಾಡಬೇಕಾಯಿತು. ದೇಶದ ಆಂತರಿಕ ಆರ್ಥಿಕ ಪರಿಸ್ಥಿತಿಯು ಕೆಡುವಂತೆಮಾಡಿ, ಜನತೆಯೆಲ್ಲ ತಮ್ಮ ಮುಖದ ಕಡೆಗೆ ನೋಡುವಂತೆ ಹಂಚಿಕೆ ಹೂಡಬೇಕಾಯಿತು. ಆದರೆ ಎಷ್ಟು ದಿನ ಹೀಗೆ ಮಾಡಿ ಬಲುಮೆಯಿಂದ ಆಳಲಿಕ್ಕೆ ಸಾಧ್ಯವಿದೆ? ಆದುದರಿಂದಲೆ ಹೇಗಾದರೂ ಮಾಡಿ ಶಕ್ತುವಾದ ರಾ. ಮಹಾಸಭೆಯೊಂದಿಗೆ ಸ್ನೇಹ ಬಳಸಿ, ಅದರ ನೆರವಿನಿಂದಲೆ ತಮ್ಮ ಸ್ವಾರ್ಥಸಾಧಿಸಿಕೊಳ್ಳಬೇಕೆಂಬ ಸಂಚುಮಾಡಿ, ಬ್ರಿಟಿಷ್ ಪಾರ್ಲಿಮೆಂಟು ತನ್ನ ನಿಪುಣರಾದ ಪ್ರತಿನಿಧಿಗಳನ್ನು ಕಳುಹಿತು. ಸವಿಸವಿಯ ಮಾತುಗಳ ನಡುವೆ ಬಲೆಯ ಹಗ್ಗಗಳನ್ನು ಸೇರಿಸಿ, ಹೊಸ ಯೋಜನೆಗಳನ್ನು ಮುಂದಿಡಲು ಹವಣಿಸಿದರು ಆ ಪ್ರತಿನಿಧಿತ್ರಯರು. ಈಗ ರಾಷ್ಟ್ರೀಯ ಮಹಾಸಭೆಯು ಬಲೆಯನ್ನೆಲ್ಲ ಬಯಲುಮಾಡಿ ತೋರಿಸಲು, ನಿರಾಶೆಯಿಂದ ನಿಟ್ಟುಸಿರನ್ನು ಇಕ್ಕಿ ತೊಡಗಿದ್ದಾರವರು.

## ಮಹಾತ್ಮರ ಮಂತ್ರಿತ್ವ, ಧುರೀಣರ ವಿವೇಕವರ್ತನೆ

ಹೇಗಾದರೂ ಮಾಡಿ ಅಧಿಕಾರವನುಸಿ, ಜನತೆಯ ಸದ್ಯದ ಸಂಕಷ್ಟ ದೂರಮಾಡಬೇಕಾಗಿದೆಯೆಂಬುದನ್ನು ರಾ ಮ. ಸಭೆಯಲ್ಲಿಯ ಬಹುಜನರು ಆಡುತ್ತಿದ್ದುದೇನೋ ಸರಿ. ಇದರ ಉಪಯೋಗಮಾಡಿಕೊಂಡು, ಮಂತ್ರಿತ್ರಯರ ಸಹಕಾರ ಪಡೆದು ಲಾರ್ಡ್ ವೇವೆಲ್ಲರು ನಡುಗಾಲ ಸರಕಾರದ ಮಾಯಾನಾಟಕವನ್ನು ಹೂಡಿದರು. ಪಾಕಿಸ್ತಾನ ಇಲ್ಲವೆಂದು ಅಖಂಡ ಹಿಂದುಸ್ತಾನವಾದಿಗಳನ್ನು ಸಮಾಧಾನಗೊಳಿಸಲೆಳಿಸಿದರು. ಮುಸ್ಲಿಂ ಯುನಿಯನ್ನುಗಳನ್ನು ನಿರ್ಮಿಸಿ ಪಾಕಿಸ್ತಾನ್‌ವಾದಿಗಳನ್ನು ಸಮಾಧಾನಗೊಳಿಸಲು ಹವಣಿಸಿದರು. ಸಂಸ್ಥಾನಿಕರೂ ಕೇಂದ್ರ ಸರಕಾರದಲ್ಲಿ ಸಹಕರಿಸುವಂತೆ ಹೇಳಿ, ಬ್ರಿಟಿಷ್ ಭಾರತೀಯರನ್ನು ಶಾಂತಗೊಳಿಸಲು ಯತ್ನಿಸಿದರು. 'ಅನುಕೂಲವೆಂದರೆ ಅನುಕೂಲ, ಪ್ರತಿಕೂಲವೆಂದರೆ ಪ್ರತಿಕೂಲ' ಎಂಬಂತೆ ರಚಿತವಾಗಿರುವ ಈ ನಡುಗಾಲ ಸರಕಾರದ ಯೋಜನೆಯನ್ನು, ಎಲ್ಲರೂ ಆಲೆಯಿಂದ ನೋಡುವಂತಾಯಿತು. 'ಇನ್ನೇನು ತಮ್ಮ ಹಂಚಿಕೆ ಕೈಗೂಡಿತು' ಎಂದು ಬ್ರಿಟಿಷ್ ಪ್ರತಿನಿಧಿಗಳು ಹಿಗ್ಗುತ್ತಿದ್ದರು. ಆದರೆ ಆಗಲೆ

ಬಗೆಯ ಭಕ್ತರೂ ಒಂದು ಮನಸ್ಸಿನಿಂದ ಸೇರಿ, ಭಾರತದ ಜನಸೇವೆಯ ವ್ಯಾಸಪೀಠದ ಮೇಲೆ ನಿಂತು ಕಾರ್ಯಮಾಡುತ್ತಿರುವುದನ್ನು ಕಾಣುವೆವು.

ಶ್ರೀರಾಮಕೃಷ್ಣರ ವಿಚಾರ-ಚಾರಿತ್ರ್ಯಗಳು ಕೇವಲ ಜಡವಾದಿಗಳನ್ನು ದೈವವಾದದ ಕಡೆಗೂ ಕೇವಲ ದೈವವಾದಿಗಳನ್ನು ಜಡವಾದದ ಜ್ಞಾನದ ಅವಶ್ಯಕತೆಯ ಕಡೆಗೂ ತಿರುಗಿಸುವಂತಹ ಸಾಮರ್ಥ್ಯದಿಂದ ಕೂಡಿವೆ. ಆದುದರಿಂದಲೆ ಅವರ ಪ್ರಮುಖ ಶಿಷ್ಯರಾದ ಶ್ರೀವಿವೇಕಾನಂದರು ತಮ್ಮ ಗುರುವಿನ ಸಂದೇಶದಿಂದ ಪಶ್ಚಿಮದ ಜಡವಾದಿಗಳ ಮನಸ್ಸನ್ನು ದೈವಭಕ್ತಿಯತ್ತ ತಿರುಗಿಸಲು ಸಮರ್ಥರಾದರು. ಪೂರ್ವದ ಪಾರತಂತ್ರ್ಯಬದ್ಧ ಜನತೆಯಲ್ಲಿ ಆತ್ಮತೇಜವನ್ನೂ ಲೌಕಿಕ ಕರ್ತವ್ಯಜ್ಞಾನವನ್ನೂ ಹರಡಲು ಶಕ್ತರಾದರು. ಇಂತಹ ಗುಣವೈಶಿಷ್ಟ್ಯದಿಂದ ಕೂಡಿದ ಶ್ರೀಪರಮಹಂಸರ ಸಾಹಿತ್ಯವೆಲ್ಲ ಕನ್ನಡಿಗರ ಕೈಗೆ ದೊರೆವುದು ಅತ್ಯಂತ ಅವಶ್ಯವಾಗಿದೆ. ಈ ಮೊದಲು ಅಲ್ಲಿ ಇಲ್ಲಿ ತುಣುಕು-ಮಿಣುಕಾಗಿ ಅದು ಕನ್ನಡಕ್ಕೆ ಬಂದಿದೆ ಹೊರತು, ಸಂಪುಟ ರೂಪದಲ್ಲಿ ಬಂದುದು ತೀರ ಕಡಿಮೆ. ಈಗ ಬೆಂಗಳೂರಿನ ರಾಮಕೃಷ್ಣಾಶ್ರಮದವರು ಕ್ರಮವಾಗಿ ಅದನ್ನೆಲ್ಲ ಸಂಪುಟರೂಪದಿಂದ ಕನ್ನಡಿಗರಿಗೆ ಒದಗಿಸಿಕೊಡಲು ಸಿದ್ಧರಾದುದು ತುಂಬ ಸಂತೋಷದ ಸಂಗತಿ.

ಪ್ರಸ್ತುತ ಪುಸ್ತಕವು ಎಂಟು ಅಧ್ಯಾಯಗಳಿಂದ ಕೂಡಿದ್ದು ಶ್ರೀಪರಮಹಂಸರ ಮಹತ್ತ್ವದ ಚರಿತ್ರ-ಉಪದೇಶ ವಿಷಯಗಳಿಂದ ತುಂಬಿದೆ. ಕಥೆ-ಕಾದಂಬರಿಗಳನ್ನು ಓದುವಷ್ಟು ಹಗುರುಮನದಿಂದ ಇದನ್ನು ಓದಿ ಮುಗಿಸಬಹುದು; ಆದರೆ ದೊಡ್ಡ ತತ್ತ್ವದ ತಿರುಳು ಒಳಗೊಳಗೆ ಹೃದಯ-ಮನಸ್ಸುಗಳನ್ನು ವಿಕಾಸಗೊಳಿಸಿದ ಅನುಭವ ಆಮೇಲೆ ವಾಚಕರಿಗೆ ಮನವರಿಕೆಯಾಗಬಹುದು. ಅಲ್ಲಲ್ಲಿ ಬರುವ ಪರಮಹಂಸ ಪ್ರಣೀತ ಕಿರು-ಗತೆಗಳು ಮನೋರೋಗ ನಿವಾರಣದ ಔಷಧಿಗಳಂತಿವೆ. ಕೊನೆಯಭಾಗದಲ್ಲಿ ಬರುವ ತೋತಾಪುರಿ ಸಂನ್ಯಾಸಿ, ಭೈರವಿ ಬ್ರಾಹ್ಮಣಿ, ಶ್ರೀರಾಮಕೃಷ್ಣ ಪರಮಹಂಸ ಇವರ ಸಂಯೋಗ ಸಂದರ್ಭವ ಕಥೆಯು, ಶ್ರೀ ಅಲ್ಲಮಪ್ರಭು, ಮಹಾದೇವಿಯಕ್ಕ, ಬಸವಣ್ಣನವರು ಇವರ ಕೂಟದ ಕತೆಯನ್ನು ನೆನಪಿಗೆ ತಂದು ಕೊಡುತ್ತದೆ. ಅನುವಾದದ ಭಾಷೆ ಸರಳವಾಗಿದೆ. ಕಾಗದ-ಅಚ್ಚುಗಳೂ ಪುಸ್ತಕದ ಮಹಾತ್ಮ್ಯಕ್ಕೆ ತಕ್ಕವುಗಳಾಗಿವೆ. ಶ್ರೀ ಪರಮಹಂಸರ ಚಿತ್ರವೊಂದನ್ನು ಇದಕ್ಕೆ ಸೇರಿಸಬೇಕಾಗಿದ್ದಿತು. ಅದೊಂದು ಕೊರತೆ. ಎಲ್ಲರೂ ಇದನ್ನೋದಿ, ಶ್ರೀರಾಮಕೃಷ್ಣರ ಎಲ್ಲ ವಿಚಾರಗಳನ್ನೂ ತಿಳಿದುಕೊಳ್ಳಬೇಕಾದುದರ ಆವಶ್ಯಕತೆಯನ್ನು ಮನಗಾಣಬೇಕೆಂದು ನಮ್ಮ ಹಾರೈಕೆ.

—ಬಿ. ಪಿ. ಎಸ್. ರಾವ್

---

( ೭೪ ನೆಯ ಪುಟದಿಂದ ಮುಂದೆ ಸಾಗಿದ್ದು )

ಮೇಲಿನ ಸರಕಾರಗಳು ಜನತೆಯ ಹಿತದ ಕಾಯಿದೆಗಳನ್ನು ಮಾಡಬಹುದು; ಆದರೆ ಅವುಗಳನ್ನು ಅಮಲಿನಲ್ಲಿ ತರುವ ಅಧಿಕಾರಿವರ್ಗ, ಮೊದಲಿನಸೇ ಆಗಿರುವುದರಿಂದ—ತಿಂದು ಸವಿಗಲಿತ ಅದು—ಜನತೆಯ ಹಿತಸಾಧನೆಗೆ ಎಷ್ಟೊಂದು ನೆರವಾದೀತೋ ಹೇಳಲಿಕ್ಕೆ ಬರುವಂತಿಲ್ಲ. ಅದರಂತೆಯೆ ಇದುವರೆಗೆ ಲಾಭ ತಿಂದು ಸವಿಗಂಡ ಸಿರಿವಂತ ವರ್ಗದಿಂದಲೂ ಈ ಸರಕಾರಕ್ಕೆ ನೀತಿಯ ಸಹಕಾರ ಸಿಕ್ಕುವುದು ಅಸಾಧ್ಯ. ನಮ್ಮ ನೀತಿಯ ಪತನವೆಂದರೆ ಮೇರೆ ಮೀರಿದೆಯೆಂಬುದು, ಕಾಂಗ್ರೆಸ್ಸು ಲೀಗುಗಳಲ್ಲಿದ್ದು ಜನತೆಯ ಪ್ರತಿನಿಧಿಗಳೆಂದು ಹೆಸರು ಮೆರಸಿಕೊಂಡೂ ಈ ಕಳವಲ್ಲದ ಕಳವನ್ನು ಮಾಡುವ ಸಂಭಾವಿತ ಕಳ್ಳರೂ ಹಲವು ಜನರಿರುವುದರಿಂದ ಚೆನ್ನಾಗಿ ಸ್ಪಷ್ಟವಾಗುವುದು. ಇದು ಮನುಷ್ಯತ್ವದ ಲಕ್ಷಣವಲ್ಲ. ರಾಷ್ಟ್ರದ ಪ್ರಗತಿ-ಪ್ರತಿಷ್ಠೆಗಳಿಗೆ ದೊಡ್ಡ ದೊಂದು ಆತಂಕವಿದು.

ನಮ್ಮಲ್ಲಿಯ ಇಂದಿನ ಆಹಾರ—ವಸ್ತ್ರಗಳ ಪರಿಸ್ಥಿತಿಯನ್ನು ನೋಡಿದರೆ, ಈ ದುಃಸ್ಥಿತಿಯನ್ನು ದಾಟಲು ಇನ್ನೂ ನಾಲ್ಕಾರು ವರ್ಷ ಕಾಲ ಕಳೆಯಬೇಕಾಗಬಹುದು. ಆದರೂ ಈ ದುಃಸ್ಥಿತಿಯಲ್ಲಿಯೂ ಸುಸ್ಥಿತಿಯನ್ನು ನಾವು ಕಾಣಬಹುದು—ನಮ್ಮ ಅಧಿಕಾರಿ ವರ್ಗವೂ ಸಿರಿವಂತ ವರ್ತಕರೂ ಮನುಷ್ಯರಾಗಿ ರಾಷ್ಟ್ರಭಕ್ತರಾಗಿ ನಡೆದುಕೊಂಡರೆ; ತಮ್ಮ ಕಳವಲ್ಲದ ಕಳವಿನ ಕ್ರಮವನ್ನು ನಿಲ್ಲಿಬಿಟ್ಟರೆ! ನಿರ್ಭಾಗ್ಯ ಭಾರತಜನತೆಗೆ ಇದೂ 'ರೆ' ರಾಜ್ಯದ ಮಾತಾಗಿ ಪರಿಣಮಿಸಬೇಕೆ?

—ಸಂಪಾದಕರು

---

( ೭೫ ನೆಯ ಪುಟದಿಂದ ಮುಂದೆಸಾಗಿದ್ದು )

ಗಳ ಕಿವಿಗೆ ಬೀಳದೆ ಹೋಯಿತು. ಸರಕಾರ ಪ್ರಾರಂಭಿಸಿದ್ದ ಬರಗಾಲದ ಕೆಲಸವೆಲ್ಲ ತೀರಿ, ಈಗ ಬಡವರೆಲ್ಲ ಕೆಲಸವಿಲ್ಲದೆ ಕೂಳಿಲ್ಲದೆ ಕುಳಿತಿದ್ದರೂ, ಅವರಕೂಗು ಮಂತ್ರಿಗಳ ಕಿವಿಗೆ ಕೇಳುವಂತೆ, ಕಾರ್ಯಕ್ರಮದ ಅಧಿಕಾರದಲ್ಲಿದ್ದವರಿಂದೆಯರ ತಂಡ ಪ್ರಯತ್ನ ಪಟ್ಟಿತು. ಅದುದರಿಂದಲೆ ಜಿಲ್ಲೆಯ ರೈತರ ಕೂಲಿಕಾರರ ಬಾಳಿನ ದುಃಖ ಮಂತ್ರಿಗಳಿಗೆ ತಿಳಿಯದೆ ಹೋಯಿತು. ಬಡವರ ಮುಂದಾಳುಗಳೆಂದು ಹೇಳುತ್ತಿದ್ದ ಬೀಳಿಯ ಟೊಸ್ಸಿಗೆಯವರೂ ಈಗ ಅಧಿಕಾರ ಬಂದೊಡನೆ, ಮೊದಲಿನ ರಾವ್‌ಸಾಹೇಬ್-ರಾವ್ ಬಹಾದ್ದೂರರಂತೆ ಆಟ್ಟಕ್ಕೇರಿ ಕುಳಿತಿದ್ದಾರಲ್ಲ! ಈಗ ಬಡವರು ಏನು ಮಾಡಬೇಕು? ಯಾರನ್ನು ನಂಬಬೇಕು?' ಇತ್ಯಾದಿ ಆ ಸುದ್ದಿಯು ತಿರುಳು.

ಬೀರಣ್ಣನಿಗೆ ಮೊದಲಿನಿಂದಲೂ ಇದು ಗೊತ್ತಿದೆ. ನಮ್ಮಲ್ಲಿಯ ಬಹಳ ಜನ ಚಳವಳಿಗಾರರು ಬಡವರನ್ನು ಉಪಯೋಗಿಸಿಕೊಳ್ಳುವುದೆಂದರೆ, ಅವರ ತಲೆಯ ಮೇಲೇರಿ ನಿಂತು ತಾವು ಎತ್ತರವಾಗಿ ಕಾಣುವುದಕ್ಕೆ. ಎತ್ತರತನದ ಸರ್ಟಿಫಿಕೇಟ್ ಸಿಕ್ಕರಾಯಿತು; ತಾವು ನಿಂತುದೆಲ್ಲಿ ಎಂಬುದನ್ನೇ ಮರೆತುಬಿಡುತ್ತಾರೆ. ಉತ್ಸಾಹದಿಂದ ಕುಣಿಯುತೊಡಗಿ ಬಡವರೆ ಗೋಣನ್ನೇ ಮುರಿಯುತ್ತಾರೆ. ನಮ್ಮ ಜನಕ್ಕೆ ಅಧಿಕಾರದ ಆಶೆಯಿಟ್ಟೆಯಲ್ಲದೆ ಸಾಮಾಜಿಕ ಸುಖಶಾಂತಿಯ ಅಪೇಕ್ಷೆಯಿಲ್ಲ. ಆದುದರಿಂದಲೆ ಬೀರಣ್ಣ ಬಡವರ ಪ್ರತಿನಿಧಿಗಳಿಗೆ ತನ್ನ ಅನುಭವದ ಸಂದೇಶವನ್ನು ಹೀಗೆ ಕೊಡುತ್ತಾನೆ:

"ಆಳಬೇಕನ್ನೂ ಅಸೇ ಇಟಕೊಂಡು ಬರುವವರು ಬ್ಯಾರೇ ದೇಶದವರೇನು, ನಮ್ಮ ದೇಶದವರೇನು? ಎಲ್ಲಾರೂ ಒಂದ್ಸ ಬಡವಗ. ಬಡವ ತನ್ನ ಬಲದ ವಿಶ್ವಾಸದ ಮ್ಯಾಲೇ ನಿಂತುಕೊಳ್ಳಬೇಕು. ಇನ್ನೊಬ್ಬರು ಈಗ ಹಿತದ ಮಾತು ಆಡಿದ್ದರ, ಅದು ನಮ್ಮ ಹಿತಕಾಗಿ ಅಲ್ಲ; ತನ್ಮ ಸ್ವಂತದ ಹಿತ ಸಾಧಿಸಲಿಕ್ಕೆ. ಈ ಮಾತಿನ ಎಚ್ಚರ ಬಡವರಿಗೆಲ್ಲಾ ಇರಬೇಕ್ರಪ್ಪೊ!"

# ಅಂದಿನ ನಿಟ್ಟಿನ ನೋಟ

## ಭಾರತ ಧುರೀಣರ ರಾಜಕಾರ್ಯಕೌಶಲ

ಭಾರತ ರಾಷ್ಟ್ರೀಯ ಮಹಾಸಭೆ ಇಂದು ಬ್ರಿಟಿಷರನ್ನು ಕನಸಿನಲ್ಲಿ ಕೂಡ ಹೆದರಿಸುತ್ತಲಿದೆ. ಬ್ರಿಟನಿನ ಸುಖ-ಶಾಂತಿಗಳು ಭಾರತದ ಮೇಲೆಯೆ ಅವಲಂಬಿಸಿವೆಯೆಂಬುದು ಬ್ರಿಟಿಷ್ ಸಾಮ್ರಾಜ್ಯದ ಒಂದು ಕೂಸಿಗೂ ಗೊತ್ತಾಗಿಹೋಗಿದೆ. ಎಂತಹ ಉದಾರಿ ಬ್ರಿಟಿಷ್ ಗೃಹಸ್ಥನಿಗೂ ಹಿಂದುಸ್ತಾನವನ್ನು ಬಿಡುವುದೆಂದರೆ ಒಪ್ಪಿಗೆಯೆನಿಸದ ಮಾತು. ತಮ್ಮ ಜೀವನಮಂದಿರದ ಸೌಂದರ್ಯವನ್ನೇ ಬ್ರಿಟಿಷರು ಹಿಂದುಸ್ತಾನದ ಶಕ್ತಿ-ಸತ್ತ್ವ-ಸಂಪತ್ತಿಗಳಿಂದ ನಿರ್ಮಿಸಿಕೊಳ್ಳುತ್ತಲಿರುವುದರಿಂದ, ಹಿಂದುಸ್ತಾನ ಕಳೆದುಕೊಂಡರೆ ದಾರಿದ್ರ್ಯದ ಉರುಳು ಕೊರಳಿಗೆ ಬಿದ್ದಿತೇ ಎಂದು ಪ್ರತಿಯೊಬ್ಬ ಬ್ರಿಟಿಷನಿಗೆ ವಿಶ್ವಾಸ. 'ಇನ್ನು ಮೇಲೆ ಭಾರತವನ್ನು ಬ್ರಿಟಿಷರಿಗೆ ದಕ್ಕಗೊಡಕೂಡದು' ಎಂದು ರಾಷ್ಟ್ರೀಯ ಮಹಾಸಭೆ ಪ್ರತಿಜ್ಞಾಬದ್ಧವಾಗಿ ಹೊರಟಿದೆಯೆಂದ ಮೇಲೆ, ಯಾವ ಬ್ರಿಟನನು ಈ ಕ್ರಾಂತಿಕಾರಕ ಸಂಸ್ಥೆಯನ್ನು ಸ್ನೇಹಬುದ್ಧಿಯಿಂದ ಕಂಡಾನು? ಆಗಾಗ ಅಲ್ಲಲ್ಲಿ ಕೇಳುತ್ತಿರುವ ಸ್ನೇಹ-ಸಹಾನುಭೂತಿಗಳ ಉದಾರವಚನಗಳು ಕೇವಲ ಕರಟಕನೀತಿಯವೇ ಹೊರತು ಮಾನವನೀತಿಯವಲ್ಲ. ಹೇಗಾದರೂ ಮಾಡಿ ರಾಷ್ಟ್ರೀಯ ಮಹಾಸಭೆಯ ಸತ್ತ್ವ-ಸಾಮರ್ಥ್ಯಗಳನ್ನು ಕಡಿಮೆಮಾಡಿ, ಅದನ್ನು ಬಗ್ಗುಬಡಿಯಬೇಕೆಂದು ಬ್ರಿಟಿಷ್ ರಾಜತಂತ್ರಜ್ಞರ ಆಶೆ. ಆದರೆ ಮೈತುಂಬ ಕಣ್ಣಿಟ್ಟುಕೊಂಡು ನೋಡುತ್ತಿರುವ ರಾ. ಮಹಾಸಭೆಯು, ಬ್ರಿಟಿಷರ ಯಾವ ಬಲೆಗೂ ಬೀಳದಂತಾಗಿದೆ. ತಮ್ಮ ನರಿಯ ರಾಜಕಾರಣದಿಂದ ಜಗತ್ತಿನ ರಾಜ್ಯವ್ಯವಸ್ಥೆಗಳಲ್ಲಿಯೆ ಅಲ್ಲೋಲಕಲ್ಲೋಲ ಮಾಡಬಲ್ಲೆವೆಂಬ ನಂಬುಗೆಯ ಮಹಾ ಮಹಾ ಮುತ್ಸದ್ದಿಗಳೂ, ರಾಷ್ಟ್ರೀಯ ಮಹಾಸಭೆಯ ಸರಳ-ಸತ್ಯ—ರಾಜಕಾರಣದೆದುರು ಮೂಗುತಿಕ್ಕಿ ಮುಂಗೈ ಕಚ್ಚಿಕೊಳ್ಳುತ್ತ ಮರಳುತ್ತಲಿದ್ದಾರೆ. ಇಂತಹದೊಂದು ಕಪಟಜಾಲವನ್ನೇ ರಚಿಸಿ ರಾ. ಮಹಾಸಭೆಯನ್ನು ಮಂಕುಗೊಳಿಸುವ ಆಂತರಿಕ ಉದ್ದೇಶದಿಂದ ಬಂದ ಬ್ರಿಟಿಷ್ ಮಂತ್ರಿಗಳ ಸಮಿತಿ, ಇಂದು ಭಗ್ನ ಮನೋರಥವಾಗಿ ಭಾರತದಿಂದ ಮರಳಿಹೋಗಲು ನಿಂತಿದೆ. ಇಂದು ಜಗತ್ತಿನ ರಾಜಕಾರಣಿಗಳ ಗುಂಪೇ ಭಾ. ರಾ. ಮಹಾಸಭೆಯ ರಾಜಕಾರ್ಯ ನೈಪುಣ್ಯವನ್ನು ಹೊಗಳಿ ಹಾಡುವಂತಾಗಿದೆ.

## ಬ್ರಿಟಿಷ್ ರಾಜಕಾರಣಿಗಳ ನಿಟ್ಟುಸಿರು

ಅಲ್ಪ ಸಂಖ್ಯಾಕರ ವಿಷಯಕವಾಗಿ ಭೂತದಯೆ ತೋರಿಸಿದಂತೆ ಮಾಡಿ, ಜನರನ್ನು ಮೋಸಗೊಳಿಸಿ, ನಿಜವಾಗಿಯೂ ಮುಸ್ಲಿಂಲೀಗಿನವರಲ್ಲಿ ಜಾತೀಯತೆಯ ತೀಕ್ಷ್ಣ ಭಾವನೆಯನ್ನು ಪೆಚ್ಚಿಸಲು ತಾವೇ ಕಾರಣರಾಗಿ, ಅವರ ನೆರವಿನಿಂದ ತಮ್ಮ ಬೇಳೆ ಬೇಯಿಸಿಕೊಳ್ಳಬೇಕೆಂದು ಸಾಕಷ್ಟು ಆಟಗಳನ್ನು ಹೂಡಿದರು—ಬ್ರಿಟಿಷ್ ಮಂತ್ರಿತ್ರಯರು, ವೈಸ್‌ರಾಯ್ ವೇವೆಲ್ ಸಾಹೇಬರು. ಜಾತೀಯ ಕಲಹವನ್ನೆಬ್ಬಿಸಿಯೂ, ಸಂರಕ್ಷಣ ಶಾಸನದ ಕ್ರೂರೋಪಾಯಗಳನ್ನು ನಡೆಯಿಸಿಯೂ ಯುದ್ಧದ ಸಂಕ್ರಾಂತಿಕಾಲದಲ್ಲಿ ಬ್ರಿಟಿಷರು ಭಾರತವನ್ನು ತಮ್ಮ ಕಡೆಗೆ ಉಳುಹಿಕೊಂಡರು. ಆದರೆ ಹೀಗೆ ಉಳುಹಿಕೊಳ್ಳಲಿಕ್ಕೆ ಅಂದು ಅವರು ಪ್ರಾಣಪಣದ ಪ್ರಯತ್ನಗಳನ್ನು ಮಾಡಬೇಕಾಯಿತು. ದೇಶದ ಆಂತರಿಕ ಆರ್ಥಿಕ ಪರಿಸ್ಥಿತಿಯು ಕೆಡುವಂತೆಮಾಡಿ, ಜನತೆಯೆಲ್ಲ ತಮ್ಮ ಮುಖದ ಕಡೆಗೆ ನೋಡುವಂತೆ ಹಂಚಿಕೆ ಹೂಡಬೇಕಾಯಿತು. ಆದರೆ ಎಷ್ಟು ದಿನ ಹೀಗೆ ಮಾಡಿ ಬಲುಮೆಯಿಂದ ಆಳಲಿಕ್ಕೆ ಸಾಧ್ಯವಿದೆ? ಆದುದರಿಂದಲೆ ಹೇಗಾದರೂ ಮಾಡಿ ಶತ್ರುವಾದ ರಾ. ಮಹಾಸಭೆಯೊಂದಿಗೆ ಸ್ನೇಹ ಬಳಸಿ, ಅದರ ನೆರವಿನಿಂದಲೆ ತಮ್ಮ ಸ್ವಾರ್ಥಸಾಧಿಸಿಕೊಳ್ಳಬೇಕೆಂಬ ಸಂಚುಮಾಡಿ, ಬ್ರಿಟಿಷ್ ಪಾರ್ಲಿಮೆಂಟು ತನ್ನ ನಿಪುಣರಾದ ಪ್ರತಿನಿಧಿಗಳನ್ನು ಕಳುಹಿತು. ಸವಿಸವಿಯ ಮಾತುಗಳ ನಡುವೆ ಬಲೆಯ ಹಗ್ಗಗಳನ್ನು ಸೇರಿಸಿ, ಹೊಸ ಯೋಜನೆಗಳನ್ನು ಮುಂದಿಡಲು ಹವಣಿಸಿದರು ಆ ಪ್ರತಿನಿಧಿತ್ರಯರು. ಈಗ ರಾಷ್ಟ್ರೀಯ ಮಹಾಸಭೆಯು ಬಲೆಯನ್ನೆಲ್ಲ ಬಯಲುಮಾಡಿ ತೋರಿಸಲು, ನಿರಾಶೆಯಿಂದ ನಿಟ್ಟುಸಿರನ್ನು ಇಕ್ಕ ತೊಡಗಿದ್ದಾರವರು.

## ಮಹಾತ್ಮರ ಮಂತ್ರಿತ್ವ, ಧುರೀಣರ ವಿವೇಕವರ್ತನೆ

ಹೇಗಾದರೂ ಮಾಡಿ ಅಧಿಕಾರವಹಿಸಿ, ಜನತೆಯ ನಡ್ಯದ ಸಂಕಷ್ಟ ದೂರಮಾಡಬೇಕಾಗಿದೆಯೆಂಬುದನ್ನು ರಾ ಮ. ಸಭೆಯಲ್ಲಿಯ ಬಹುಜನರು ಅಡುತ್ತಿದ್ದುದೇನೋ ನಿಜ. ಇದರ ಉಪಯೋಗಮಾಡಿಕೊಂಡು, ಮಂತ್ರಿತ್ರಯರ ಸಹಕಾರ ಪಡೆದು ಲಾರ್ಡ್ ವೇವೆಲ್ಲರು ನಡುಗಾಲ ಸರಕಾರದ ಮಾಯಾನಾಟಕವನ್ನು ಹೂಡಿದರು. ಪಾಕಿಸ್ತಾನ ಇಲ್ಲವೆಂದು ಅಖಂಡ ಹಿಂದುಸ್ತಾನವಾದಿಗಳನ್ನು ಸಮಾಧಾನಗೊಳಿಸಲೆಳಿಸಿದರು. ಮುಸ್ಲಿಂ ಯುನಿಯನ್ನುಗಳನ್ನು ನಿರ್ಮಿಸಿ ಪಾಕಿಸ್ತಾನ್‌ವಾದಿಗಳನ್ನು ಸಮಾಧಾನಗೊಳಿಸಲು ಹವಣಿಸಿದರು. ಸಂಸ್ಥಾನಿಕರೂ ಕೇಂದ್ರ ಸರಕಾರದಲ್ಲಿ ಸಹಕರಿಸುವಂತೆ ಹೇಳಿ, ಬ್ರಿಟಿಷ್ ಭಾರತೀಯರನ್ನು ಶಾಂತಗೊಳಿಸಲು ಯತ್ನಿಸಿದರು. 'ಅನುಕೂಲವೆಂದರೆ ಅನುಕೂಲ, ಪ್ರತಿಕೂಲವೆಂದರೆ ಪ್ರತಿಕೂಲ' ಎಂಬಂತೆ ರಚಿತವಾಗಿರುವ ಈ ನಡುಗಾಲ ಸರಕಾರದ ಯೋಜನೆಯನ್ನು, ಎಲ್ಲರೂ ಆಶೆಯಿಂದ ನೋಡುವಂತಾಯಿತು. 'ಇನ್ನೇನು ತಮ್ಮ ಹಂಚಿಕೆ ಕೈಗೂಡಿತು' ಎಂದು ಬ್ರಿಟಿಷ್ ಪ್ರತಿನಿಧಿಗಳು ಹಿಗ್ಗುತ್ತಿದ್ದರು. ಆದರೆ ಆಗಲೆ

ದೂರದೃಷ್ಟಿಯ ಮಹಾತ್ಮಾಜಿಯವರು ತಮ್ಮ ಒಳಬೆಳಕಿನಲ್ಲಿ ಈ ಯೋಜನೆಯಲ್ಲಿರುವ ಗಂಡಾಂತರಗಳನ್ನು ಕಂಡುಹಿಡಿದರು. ಎಲ್ಲರಿಗೂ ವಿಶದಪಡಿಸಿದಾಗ, ಎಲ್ಲರೂ ಒಂದೆ ಅಭಿಪ್ರಾಯದಿಂದ ನಡುಗಾಲ ಸರಕಾರದ ಯೋಜನೆಯನ್ನು ನಿರಾಕರಿಸಿದರು. ಇದನ್ನು ರಾಷ್ಟ್ರೀಯ ಸಭೆಯವರು ಒಪ್ಪಿಕೊಂಡಿದ್ದರೆ, ತಮ್ಮ ಗೋರಿಯನ್ನು ತಾವೇ ಅಗಿದು ಇರಿಸಿಕೊಂಡಂತಾಗುತ್ತಿತ್ತು. ರಾಷ್ಟ್ರೀಯ ಮಹಾಸಭೆಯ ಜೀವಾಳದಂತಿದ್ದ ರಾಷ್ಟ್ರೀಯತ್ವ ನಷ್ಟವಾಗಿ, ಜಾತೀಯ ಪ್ರಾತಿನಿಧ್ಯವನ್ನು ಅನಿವಾರ್ಯವಾಗಿ ಒಪ್ಪಿಕೊಂಡಂತಾಗುತ್ತಿತ್ತು. ನಂಬಿಕೊಂಡು ಬಂದಿದ್ದ ರಾಷ್ಟ್ರೀಯ ಮುಸಲ್ಮಾನರನ್ನು ನಿರ್ಗತಿಕರನ್ನಾಗಿ ಮಾಡಿ ನಡುವೆ ಕೈಬಿಟ್ಟ ಅಪರಾಧ ತಲೆಯಮೇಲೆ ಬರುತ್ತಿತ್ತು. ಇಷ್ಟೆ ಅಲ್ಲದೆ ಕ್ಷಣಕ್ಷಣಕ್ಕೆ ಸಮಸ್ಯೆಗಳೆದ್ದು ಅದರ ನಿವಾರಣೆಗಾಗಿ ಬ್ರಿಟಿಷರ ಮುಖವನ್ನು ನೋಡುವ ಪ್ರಸಂಗ ಬರುತ್ತಿತ್ತು. ಅಲ್ಪಾನುಕೂಲತೆಗಾಗಿ ಈ ಮಹಾಸಂಕಟವನ್ನು ಹೊತ್ತಿದ್ದರೆ, ರಾಷ್ಟ್ರೀಯ ಮಹಾಸಭೆ ಜನತೆಯ ಘಾತಮಾಡಿದಂತಾಗುತ್ತಿತ್ತು.

## ಪಕ್ಷ-ಪಂಗಡಗಳಿಗೆ ದೊರೆತ ರಾಜಕಾರ್ಯದ ಪಾಠ

ಈ ಘಟನೆಯ ಮೂಲಕ ಬ್ರಿಟಿಷರನ್ನು ನಂಬಿದ ಅನೇಕ ಭಾರತೀಯ ಧುರೀಣಬ್ರುವರು, ನಿಜವಾಗಿಯೂ ಅನುಭವದ ಪಾಠ ಕಲಿಯುವಂತಾಯಿತು. ನಡುಗಾಲ ಸರಕಾರದ ಯೋಜನೆಯಲ್ಲಿ ತಮಗೆಂತಹ ಸ್ಥಾನ ದೊರೆತಿತ್ತೆಂಬುದನ್ನು ಡಾ. ಅಂಬೇಡಕರರು ಜೆನ್ನಾಗಿ ಕಂಡಿದ್ದಾರೆ; ಕ್ರೋಧದಿಂದ ಕುದಿದು ಏನೇನೊ ಬಡಬಡಿಸಿದ್ದಾರೆ. ತಮ್ಮ ಸಮಾಜದ ತಾರಕ-ಪುರುಷರು ದೇಶದಲ್ಲಿದ್ದು ಕೆಲಸ ಮಾಡುತ್ತಿದ್ದರೂ ಅವರ ಕಡೆಗೆ ಲಕ್ಷ್ಯ ಕೊಡದೆ, ಮುಂದಾಳುತನದ ಮೋಹದ ಈ ಬ್ಯಾರಿಸ್ಟರರು, ಬ್ರಿಟಿಷರ ಕೊರಳಿಗೆ ತಕ್ಕೆ ಬಿದ್ದರು; ಬ್ರಿಟಿಷರು ಕೊಸರಿಕೆಳಗೆ ಜಿಲ್ಲಿದಾಗ, ಕಂಗೆಟ್ಟವರಾಗಿ ರಸಿಯವನ್ನು ಮೊರೆಹೋಗುವುದಾಗಿ ಆಕ್ರೋಶ ಮಾಡಿದರು. ಈಗಲಾದರೂ ಕಂದೆರೆದು, ನಿಜವಾದ ಪರಿಸ್ಥಿತಿಯೇನಿದೆಯೆಂಬುದನ್ನು ಅವರು ನೋಡಿಕೊಳ್ಳಬೇಕು. ಶೇಖರು ಈ ಘಟನೆಯ ಮೂಲಕ ಸರಿಯಾಗಿ ಬುದ್ಧಿಕಲಿತಿರುವರಲ್ಲದೆ ಅವರು ಏಕಮುಖದಿಂದ ರಾಷ್ಟ್ರೀಯ ಮಹಾಸಭೆಯ ತತ್ತ್ವವನ್ನು ಒಪ್ಪಿಕೊಳ್ಳುವ ಪುಟ್ಟಕ್ಕೆ ಬಂದಿದ್ದಾರೆ. ಜಿನ್ನಾಸಾಹೇಬರಿಗೂ ಅವರ ಅನುಯಾಯಿವರ್ಗಕ್ಕೂ ಈ ಕ್ರಾಂತಿಕಾಲ ಸರಿಯಾದ ಪಾಠ ಕೊಟ್ಟಿರಲಿಕ್ಕೆ ಸಾಕು. ಕಾಂಗ್ರೆಸಿನವರು ನಡುಗಾಲ ಸರಕಾರವನ್ನು ನಿರಾಕರಿಸಲು, ದುರಾಶೆಯಿಂದ ಪ್ರೇರಿತರಾಗಿ ಲೀಗಿನ ಕಾರ್ಯಕಾರಿ ಸಮಿತಿಗೆ ಅದನ್ನು ಪುರಸ್ಕರಿಸಲು ಹಚ್ಚಿದರು, ಈ ಪ್ರಸಿದ್ಧ ಕಾರ್ಯದೇ ಅಜಮರು. ವೈಸರಾಯರು ಅದೇ ದಿನ ತಮ್ಮ ಆ ಯೋಜನೆಯನ್ನು ಹಿಂದೆಗೆದುಕೊಂಡು ಲೀಗ್ ಕಾರ್ಯಕರ್ತರ ಎದೆಗುಂದಿಗೇ ಸೆಟ್ಟುಕೊಟ್ಟರು. ಜಿನ್ನಾಸಾಹೇಬರು ಕಕ್ಕಿಮಿಕಿಗೊಂಡಿರಬಹುದು. 'ಇನ್ನೇನು, ನಡುಗಾಲ ಸರಕಾರದ ಸೂತ್ರ ತಮ್ಮ ಕೈಯಲ್ಲಿ ಬಂದೇಹೋಯಿತು' ಎಂಬ ಕನಸು ಕಾಣುತ್ತಿರು. ವಾಗಲೆ ಬ್ರಿಟಿಷರ ಏಟು ಅವರನ್ನು ಎಚ್ಚರಿಸಿತು. ಜಿನ್ನಾಸಾಹೇಬರು ಇನ್ನು ಮೇಲಾದರೂ, ಜನತೆಯ ಜೀವನಕ್ಕೂ ರಾಷ್ಟ್ರದ ಪ್ರಗತಿಗೂ ಸಂಕುಚಿತವಾದ ಜಾತಿ-ಮತ-ಪಂಥಗಳು ನೆರವಾಗಲಾರವೆಂಬುದನ್ನು ಅರಿತುಕೊಳ್ಳಬೇಕು. ಭಾರತ ಜನಾಂಗದ ಅಖಂಡತೆಯಲ್ಲಿಯೆ ನಿಜವಾಗಿ ವ್ಯಕ್ತಿಯ ಮತ್ತು ರಾಷ್ಟ್ರದ ಕಲ್ಯಾಣವಿದೆಯೆಂಬ ಪಾಠವನ್ನು ಕಲಿತುಕೊಳ್ಳಬೇಕು.

## ಈಗ ಮಾಡಬೇಕಾದುದೇನು?

'ಇನ್ನು ಮುಂದೆ ಏನು?' ಎಂಬ ಮಹಾ ಪ್ರಶ್ನೆಯೊಂದು ಇಂದು ಭಾರತದ ಜನತೆಯ ಎದುರು ನಿಂತಿದೆ. 'ಸದ್ಯದ ಸಂದಭ್ಗ ಕೈಮೀರಿ ಹೋಯಿತು; ಇನ್ನು ಮುಂದಿನ ಯೋಜನೆ ಏನಾಗುವುದೇನೋ' ಎಂದು ಹಲವು ಜನರು ನಿರಾಶೆಯಿಂದ ಮಿಡುಕುತ್ತಲೂ ಇರುವರು. ಆದರೆ ಸ್ವಸ್ವರೂಪದ ಅರಿವು ಸಂಪೂರ್ಣ ಜಾಗೃತವಾಗಿರುವ ಇಂದಿನ ಭಾರತದಲ್ಲಿ ನಿರಾಶೆಗೆ ಅವಕಾಶವಿಲ್ಲ. ಇದುವರೆಗೆ ಕಣ್ಣು ಮುಚ್ಚಿ ಆಳಿದಂತೆ ಬ್ರಿಟಿಷರು ಭಾರತವನ್ನಿನ್ನು ಆಳುವುದಕ್ಕೆ ಸಾಧ್ಯವೇ ಇಲ್ಲ. ಸ್ವಾತಂತ್ರ್ಯದ ಹಸಿವು ಜನತೆಯನ್ನು ಮುಂದೆ ನೂಕುತ್ತಲಿದೆ ಎಂತಹ ಅಗ್ನಿಕುಂಡದಲ್ಲಿಯೂ ಭಾರತೀಯರು ಹಾರಲಿಕ್ಕೆ ಇಂದು ಸಿದ್ಧರಾಗಿ ನಿಂತಿದ್ದಾರೆ. ಶ್ರೀಸುಭಾಸರ ದೇಶಪ್ರೇಮ, ಸ್ವಾತಂತ್ರ್ಯಪ್ರೀತಿ, ಅದಕ್ಕಾಗಿ ತೋರಿಸಿದ ತ್ಯಾಗದ ಪರಾಕಾಷ್ಠತೆ ಇವೆಂದು ನಮ್ಮ ಜನರ ನರನರಗಳನ್ನೂ ಕೆಣಕಿ ಕೆರಳಿಸುತ್ತಲಿವೆ. ಶಾಂತಿಪ್ರಿಯವಾದ ನಮ್ಮ ರಾಷ್ಟ್ರೀಯ ಮಹಾಸಭೆಯೇ ತನ್ನ ಸಾಮರ್ಥ್ಯದಿಂದ ಭಾರತದಲ್ಲಾಗಬಹುದಾಗಿದ್ದ ಮಹಾಕ್ರಾಂತಿಯನ್ನು ತಡೆದು ನಿಲ್ಲಿಸಿರುವುದು. "ಈ ಮಾತನ್ನು ಬ್ರಿಟಿಷ್ ರಾಜಕಾರಣಿಗಳು ಸಂಪೂರ್ಣ ಮನವರಿಕೆ ಮಾಡಿಕೊಂಡಿದ್ದಾರೆ. ರಾಷ್ಟ್ರೀಯ ಮಹಾಸಭೆಯ ಸಹಕಾರ-ಸಹಾನುಭೂತಿಗಳಿಲ್ಲದೆ ಭಾರತದಲ್ಲಿ ತಮಗೆ ಉಳಿಗಾಲವಿಲ್ಲೆಂಬ ಸತ್ಯ ಸಂಗತಿ ಮುಳ್ಳಾಗಿ ಅವರ ಕರುಳಲ್ಲಿ ನೆಟ್ಟು ನಿಂತಿದೆ. ಈಗ ಭಾರತವು ಬ್ರಿಟಿಷರಿಗೆ ಆಳುವುದಕ್ಕಲ್ಲವಾದರೂ ವ್ಯಾಪಾರಕ್ಕೆಂದು ಆಗತ್ಯವಿದೆ. ಪರದೇಶದೊಂದಿಗೆ ವ್ಯಾಪಾರ ಮಾಡಿ ತನಗೆ ಬೇಕಾದುದನ್ನು ಪಡೆದುಕೊಳ್ಳಲೇಬೇಕಾಗಿರುವ ಭಾರತವು ಯಾವ ಉದ್ಯಮಪ್ರಧಾನ ರಾಷ್ಟ್ರದೊಂದಿಗಾದರೂ ವ್ಯಾಪಾರ ಸಂಬಂಧವನ್ನು ಇರಿಸಿಕೊಳ್ಳಬೇಕಾಗುವುದು. ಬ್ರಿಟನ್ನು ಈ ಸಂಬಂಧವನ್ನೂ ಕಳೆದುಕೊಳ್ಳುವಷ್ಟು ಮೂರ್ಖತನ ತೋರಿಸಲಾರದು. ಆದಕ್ಕಾಗಿ ಅದು ಭಾರತೀಯರಿಗೆ—ಏನಾದರೂ ಮಾಡಿ ಆಡಳಿತವನ್ನು ಒಪ್ಪಿಸಿ ಅವರ ಸ್ನೇಹ ಸಂಪಾದಿಸುವ ಹಂಬಿಕೆ ಸಾಧಿಸುವುದು. ಅದುವರೆಗೆ ನಮ್ಮ ಜನರಲ್ಲಿ ತಾಳ್ಮೆ ಬೇಕು; ವಿಶ್ವಾಸಬೇಕು.

(ಹೊದಿಕೆಯ ಎರಡನೆಯ ಪುಟದಿಂದ ಮುಂದೆ ಸಾಗಿದ್ದು)

ಉದ್ದೇಶದೊಂದಿಗೆ ಜಿಳಗಾಂವಿಯಲ್ಲಿ ಜೇರೆ ಸಾಂಸ್ಕೃತಿಕ ಚಟು
ವಟಿಕೆಗಳನ್ನೂ ಸಾಗಿಸಬೇಕೆಂದು ಸಂಸ್ಥಾಸ್ಥಾಪಕರು ಉದ್ದೇಶ
ಪಿಸಿಕೊಂಡಿದ್ದಾರೆ. ಶ್ರೀ. ಗೋಖಲೆಯವರ ಈ ಪ್ರಶಂಸ
ನೀಯ ಕಾರ್ಯ ಪ್ರಾರಂಭವು ಪೂರ್ಣತೆ ಪಡೆದು, ಕನ್ನಡನಾಡಿನ
ಬಲವನ್ನು ಬೆಳಸಲಿ.

೬೯. ಅಖಿಲ ಕರ್ನಾಟಕ ಏಕೀಕರಣ ಸಂಘದ ವಾರ್ಷಿಕ
ವರದಿ ಮತ್ತು ಜಯಪ್ಪಯ್ಯನವರ ಪತ್ರಿಕೆ.

ಕನ್ನಡಿಗರಿಗೆ ತೀರ ಆವಶ್ಯಕ ಸಂಗತಿಯಾಗಿರುವ ನಾಡಿನ
ಏಕೀಕರಣದ ಕಾರ್ಯವನ್ನು ಕೈಕೊಂಡಿರುವ ಈ ಸಂಸ್ಥೆ,
ಇನ್ನೂ ಹೆಚ್ಚಿನ ಉತ್ಸಾಹ- ಸತ್ವಗಳಿಂದ ಕೂಡಿ ಕಾರ್ಯ-
ಮಾಡಬೇಕಾಗಿದೆ. ಅದಕ್ಕಾಗಿ ಕಾರ್ಯಕಾರಿ ಶಕ್ತಿ, ಹಣದ
ನೆರವು ಎರಡೂ ಅಖಂಡವಾಗಿ ಬೇಕಾಗಿವೆ. ಬಿಡುವು ದೊರೆತಾಗ
ಮಾತ್ರ ಕಾರ್ಯ ಮಾಡುವವರಿಂದ ಏಕೀಕರಣದ ಚಳವಳಿ
ಬಲಗೊಳ್ಳದು. ತಳ ತಾಸೂ ಇದಕ್ಕಾಗಿ ವಿಚಾರಪೂರ್ವಕ
ದುಡಿಯುವ ಸ್ವಯಂಸೇವಕರ ಅಗತ್ಯವಿದೆ. ಅಪರ ಪೊಟ್ಟೆ-
ನೆತ್ತಿಗಳನ್ನು ನೋಡುವ ಏರ್ಪಾಡನ್ನು ಜನತೆ ಮಾಡಿಕೊಡ-
ಬೇಕಾಗಿದೆ. ಸ್ವಾತಂತ್ರ್ಯದಷ್ಟೇ ನಮಗೆ ನಾಡಿನ ಏಕೀಕರಣದ
ಆವಶ್ಯಕತೆ ಇದ್ದರೂ, ಜನಸಾಮಾನ್ಯರಿಗೆ ಇದರ ಅರಿವಾಗುವಂತೆ
ಪ್ರಚಾರಕ ಚಳವಳಿ ಇನ್ನೂ ಆಗಿಯೆ ಇಲ್ಲವೆನ್ನುವಷ್ಟು ಕಡಿಮೆ-
ಯಾಗಿದೆ. ತಿಳಿದ ಜನರು ತಮ್ಮ ತನು-ಮನೋಧನದ
ಸಹಾಯದಿಂದ ಸಂಸ್ಥೆಯ ಬಲಹೆಚ್ಚಿಸಿ, ಅದರ ಕಾರ್ಯದಿಂದ
ನಾಡಿಗರ ಕೊರತೆಯನ್ನು ದೂರಮಾಡಲಿ.

೩೦. **ವಿಷನಿವಿಷಗಳು** (ಅನುಭವ ಚಿತ್ರಗಳ ಸಂಕಲನ)
ಬರೆದವರು: ಶ್ರೀ. ಹಿರೇಮಲ್ಲೂರ ಈಶ್ವರನ್ ಅವರು. ಪ್ರಕಾಶ-
ಕರು ಕೆಳೆಯರ ಕೂಟ ಬ್ಯಾಡಗಿ. ಕ್ರೌ ೪. ೧೪೨ ಪುಟಗಳು
ಬೆಲೆ ೧-೮-೦.

೩೧. **ಸ್ಪೈರಂಥ್ರಿ ಹಾಗು ಮಗನ ಗೆಲಪು** (ಸರಳ ರಗಳೆಯಲ್ಲಿ
ಒಡೆದ ಚಿಕ್ಕ ನಾಟಕಗಳೆರಡು). ಬರೆದವರು: ಶ್ರೀಮಾನ್
ಪುರಾಣಿಕ ಕೃಷ್ಣಮೂರ್ತಿ, ಗೋಕಾಕ ಅವರು ಪ್ರಕಾಶಕರು
ರಂಗ-ಮಂಗ ಪ್ರಕಾಶನ, ಧಾರವಾಡ. ಕ್ರೌ. ೪ ೮೦ ಪುಟ.
ಬೆಲೆ ೧-೮-೦.

೩೨. **ಕವಿ ಅಂಬಿಕಾತನಯದತ್ತ** (ಕವನಸಂಗ್ರಹ).
ಜೇರೆ ಜೇರೆ ಕವಿಗಳ ಕವಿತೆಗಳನ್ನು ಧಾರವಾಡ ಸಾಧನ
ಮುದ್ರಣಾಲಯದ ಶ್ರೀಮಾನ್ ಬೀ ಗೋ. ಕುಲಕರ್ಣಿಯವರು
ಸಂಕಲಿಸಿ ಪ್ರಕಟಿಸಿದ್ದಾರೆ. ಕ್ರೌ ೪. ೪೪ ಪುಟಗಳು. ಬೆಲೆ
೧-೦-೦.

೩೩. **ಅಡ್ಡಿಕೆಯ ಕಳವು** (ಕಥಾಸಂಕಲನ) ಶ್ರೀಮಾನ್
ತ. ಸು. ರಾಮಸ್ವಾಮಯ್ಯ, ಚಿತ್ರದುರ್ಗ. ಪ್ರಕಾಶಕರು
'ಸಾಹಿತ್ಯಾಲಯ' ಚಿತ್ರದುರ್ಗ. ಫೂ. ೮. ೬೦ ಪುಟಗಳು.
ಬೆಲೆ ೦-೬-೦.


DYESTUFFS
INTERMEDIATES
AND
CHEMICALS

SIZING AND FINISHING PRODUCTS
MACHINERIES FOR ALL INDUSTRIES
FOR

COTTON, SILK, ART SILK,
WOOL, JUTE, PAPER.
LEATHER, SOAP, WAX,
COIR, VARNISHES, OILS.

Chemicals
Accelerators and
Anti-Oxidants
for
Rubber Industry

S. K. KABBUR LIMITED

3, BASTION ROAD
FORT, BOMBAY

Telegrams: "DIAZO" Bombay. Telephone: 21627

CORRESPONDENTS IN ENGLAND
KABBUR & Co., LIMITED

RADHA HOUSE
Higher Ardwick, MANCHESTER, 12.

Telegrams: "Radha," Manchester.

# ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮ್ಮ ಮೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ ( Valuation ) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮುಂಗಡೊಂದಿಗೆ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ ( Claim ) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಶಾಖೆಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ ಎಸ್ ಕೆಣಿ

ಮ್ಯಾನೇಜರ್
ಎಮ್. ಗೋವರ್ಧನರಾವ.

# ಸಕ್ಸೆಸ್‌ಲರ್

## ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಹಮ್ಮದನಗರ

## ಇವರಿಂದ ಪ್ರಸಿದ್ಧವಾದುದು.

ತಾ. ೧೫-೭-೪೬ ರಿಂದ ಕೆಳಗೆ ಬರೆದ ಔಷಧಗಳು ಕಿರಕೋಳ ದರದಿಂದ ಎಲ್ಲಾ ಕಡೆಗೆ ಸಿಗುತ್ತವೆ.

(೧) ಕಾಸ್ಪೋ:- ೩೫ ಗುಳಿಗೆಗಳ ೧ ಬಾಟ್ಲಿ ೧-೦-೦
೬೫ ಗುಳಿಗೆಗಳ ೧ ಬಾಟ್ಲಿ ೧-೫-೦

(೨) ರಕ್ತದೋಷಾಂತಕ:- ಸಣ್ಣ ಬಾಟ್ಲಿಗೆ ೧-೦-೦
ದೊಡ್ಡ ಬಾಟ್ಲಿಗೆ ೩-೪-೦

(೩) ಮುಕುಲ:- ಸಣ್ಣ ಬಾಟ್ಲಿಗೆ ೧-೮-೦
ದೊಡ್ಡ ಬಾಟ್ಲಿಗೆ ೩-೪-೦

(೪) ದಂತಮಂಜನ:- ಸಣ್ಣ ಬಾಟ್ಲಿಗೆ ೦-೮-೦
ದೊಡ್ಡ ಬಾಟ್ಲಿಗೆ ೧-೪-೦

ಕಾಸ್ಪೋದ ಬೆಲೆ ಕಡಿಮೆ ಮಾಡಿದಂತೆ ಮುಕುಲ ಮೊದಲಾದವುಗಳ ದರವನ್ನು ಇದಕ್ಕಿಂತ ಕಡಿಮೆ ಮಾಡಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಮಗೆ ವಿಷಾದವೆನಿಸುತ್ತದೆ. ಸಾಧ್ಯವಾದ ಕೂಡಲೆ ಅವುಗಳ ಬೆಲೆಯನ್ನೂ ಕಡಿಮೆ ಮಾಡಲಾಗುವುದೆಂದು ನಮ್ಮ ಗ್ರಾಹಕರಿಗೆ ಆಶ್ವಾಸನ ಕೊಡುತ್ತೇವೆ.


Pirnted by Mr. V. Y. Jathar at the Karnatak Printing Works, Dharwar, and Published for the Proprietor Jayanti Publications, by M. V. Melligatti at the Jayanti Office, Dharwar.

# ಕರ್ಮವೀರ

## ಸಂಪಾದಕ:- ಬೆಟಗೇರಿ ಕೃಷ್ಣಶರ್ಮ

### ಮುಖ್ಯ ವಿಷಯಗಳು

ಓ ಹಕ್ಕಿ ! ( ಕವನ )
ಶ್ರೀ. ಕೆ. ಮಂಜುನಾಥ ' ಮಿತ್ರಮಂಡಲಿ ' ಕೋಟೇಶ್ವರ ೬೫
ನಮ್ಮ ಪರೀಕ್ಷೆಯ ಪ್ರಸಂಗ ( ಸಂಪಾದಕೀಯ )
ಸಂಪಾದಕರು ೬೬
ನಿನ್ನ ನೆನಹು ( ಕವನ )
ಶ್ರೀ. ಡಿ. ಎಸ್. ಕರ್ಕಿ ಎಂ. ಎ. ಬೆಳಗಾವಿ ೬೮
ನಿಂಬಿಯ ನಂಜು ( ಸಣ್ಣಕತೆ )
ಶ್ರೀ ಕೃಷ್ಣಮೂರ್ತಿ ಪುರಾಣಿಕ ಬಿ. ಎ., ಬಿ. ಟಿ. ಗೋಕಾಕ ೬೯
ಕನ್ನಡ, ಕಂನಾಡು ( ಶಬ್ದಶುದ್ಧಿ ವಿಚಾರ )
ಶ್ರೀ. ಶಂ. ಬಾ. ಜೋಶಿ, ಧಾರವಾಡ ೭೫
ಗೋಪಾಯಾತ್ರೆ ( ಪ್ರವಾಸ ಪ್ರಬಂಧ )
ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ ೮೭
ಕರ್ನಾಟಕದ ಚಳುವಳಿಯಲ್ಲಿ ಧಾರವಾಡದ ಭಾಗ (ಇತಿಹಾಸ)
ಶ್ರೀ. ಮುದುವೀಡು ಕೃಷ್ಣರಾಯರು, ಧಾರವಾಡ ೮೮
ಅದು ಬೇರೆ ( ವಾಸ್ತವ ಚಿತ್ರ )
ಶ್ರೀ. ಮ. ಶ್ರೀಧರ ಮೂರ್ತಿ, ಚಿತ್ರದುರ್ಗ ೮೬
ಅಹಿಂಸೆಯೇ ಧರ್ಮದ ಮೂಲಮಂತ್ರ ( ಒಂದು ವಿವೇಚನೆ )
ಶ್ರೀ. ಶೇಷಗಿರಿರಾವ ಕುಲಕರ್ಣಿ, ಧಾರವಾಡ ೮೯
ಪ್ರಗತಿ ( ಪ್ರಬಂಧ )
ಶ್ರೀ. ನಾಡಿಗೇರ ಲಕ್ಷ್ಮಣರಾಯರು ಬಿ. ಎ. ಬಿ. ಟಿ. ಪುಣೆ ೯೧
ಆಂಬೆಯ ಜನರ ಮುಷ್ಕರ ( ಪರಿಚಯ )
ಶ್ರೀ. ಕುಳುಕುಂದ ಶಿವರಾಯರು, ಹುಬ್ಬಳ್ಳಿ ೯೫
ಅಲ್ಲದೆ ಬೀರಣ್ಣನ ಬಡಿನುಡಿ (೬೭); ಪುಸ್ತಕವಿಮರ್ಶೆ (೬೧); ಸಾದರಸ್ವೀಕಾರ ( ಕವರಿನ ೨-೩ ನೆಯ ಪುಟಗಳಲ್ಲಿ ).

ಆರು ಆಣೆಗಳು

# ಸಾದರ ಸ್ವೀಕಾರ

★

೩೪. ಶ್ರೀಮಧ್ವಾಚಾರ್ಯರ ಮೂಲ ಸಿದ್ಧಾಂತ (ವೇದಾಂತ ವಿವೇಚನಾತ್ಮಕ ಪ್ರಬಂಧ). ಬರೆದವರು ಶ್ರೀಮಾನ್ ಆಲೂರ ವೆಂಕಟರಾಯರು, ಧಾರವಾಡ. ಕ್ರೌ. ಅ. ೩೦ ಪುಟಗಳು. ಬೆಲೆ ೦-೮-೦. ಧಾರವಾಡದ ಜಿಜ್ಞಾಸಾಮಂಡಲದ ಗ್ರಂಥಮಾಲೆಯ ೧೩ೆಯ ಗ್ರಂಥ.

೩೫. ಅಗ್ನಿಹಂಸ (ಕವನಸಂಗ್ರಹ). ಕವಿಗಳು 'ಕುವೆಂಪು' ಅವರು. ಮೈಸೂರಿನ ಕಾವ್ಯಾಲಯದ 'ಕನ್ನಡ ಕಾವ್ಯಮಾಲೆ'ಯ ೩೯ನೆಯ ಗ್ರಂಥ. ಕ್ರೌ. ಅ. ೧೨೦ ಪುಟಗಳು. ಬೆಲೆ ೧-೮ ೦.

೩೬. ನಸುಕು (ಗೀತಗಳು). ಶ್ರೀಮಾನ್ ನರೇಗಲ್ ಪ್ರಹ್ಲಾದರಾಯರು ಬರೆದ ಕವನಗಳ ಸಂಗ್ರಹವಿದು. ಹುಬ್ಬಳ್ಳಿಯಲ್ಲಿ ಶ್ರೀ. ಕಲಮದಾನಿ ಗುರುರಾಯರು ಹೊಸತಾಗಿಯೆ ಪ್ರಾರಂಭಿಸಿದ 'ಸಂಜೀವಿನಿ ಪ್ರಕಾಶನ'ದ ಮೊದಲನೆಯ ಗ್ರಂಥವು. ಕ್ರೌ. ಅ ೩೪ ಪುಟಗಳು. ಬೆಲೆ ೧-೦-೦.

ಶ್ರೀಮಾನ್ ಪ್ರಲ್ಹಾದರಾಯರು ತನ್ನ— ಚಿಕ್ಕಂದಿನಿಂದ ಇದುವರೆಗೆ ಬರೆದ— ಎಲ್ಲ ಕವನಗಳನ್ನೂ ಇದರಲ್ಲಿ ಸಂಗ್ರಹಿಸಿರುವರಲ್ಲದೆ, ದಿವಂಗತ ರವೀಂದ್ರ ಕವೀಂದ್ರರ ಮೂಲ ಗೀತಾಂಜಲಿಯಲ್ಲಿಯ ೯ ಗೀತಗಳ ಅನುವಾದಗಳನ್ನೂ ಇದರಲ್ಲಿ ಸೇರಿಸಿರುವರು. ಗೀತಾಂಜಲಿಯ ಅನುವಾದ ಪದ್ಯಗಳು ಚೆನ್ನಾಗಿದ್ದು, ಕವಿಯ ಗೀತಗಳಲ್ಲಿಯ ಭಾವವನ್ನು ನಿಚ್ಚಳವಾಗಿ ಹೊರಕ್ಕೆ ಹಾಕುವಂತಿವೆ. ಸಂಪೂರ್ಣ ಗೀತಾಂಜಲಿಯನ್ನು ಕನ್ನಡಿಸಿ ಪ್ರಕಟಿಸಬೇಕೆಂಬ ಇವರ ಬಯಕೆ ಬೇಗನೆ ಕೈಗೂಡಲಿ.

೩೭. ಎಚ್ಚತ್ತ ಭಾರತ ಎತ್ತ ಸಾಗಿದೆ? (ಸಚಿತ್ರ ರಾಜಕೀಯ ವಿಷಯ ಪ್ರತಿಪಾದಕ ಗ್ರಂಥ). ಲೇಖಕರು ಶ್ರೀಮಾನ್ ಗ. ಸ. ಹಾಲಪ್ಪ ಎಂ. ಎ. ಹರಿಹರ. ಪುಸ್ತಕ ದೊರೆವ ಸ್ಥಳ: ಶ್ರೀ. ಎಚ್. ಮಹದೇವಪ್ಪ ನ್ಯೂಸ್ ಏಜಂಟ್, ಹರಿಹರ (ಮೈಸೂರು). ಕ್ರೌ. ಅ. ೧೭೬ ಪುಟಗಳು. ಬೆಲೆ ೨-೮-೦.

೩೮. ಮುಂಬಯಿಯ ಗಾಣಿಗ ಯಾನೆ ಸಫಲಿಗ ಸಂಸ್ಥೆಯ ೫೦ನೆಯ ವರ್ಷದ ವರದಿ. ಡೆ. ಅ. ೧೬ ಪುಟಗಳು. ಸಂಪರ್ಕ ಇರುವ ಸ್ಥಳ: ಮುಂಬಯಿ ಕೋಟೆಯ ಮೆಜೋಜ್ ಸ್ಟ್ರೀಟಿನ ೧೯ನೆಯ ಮನೆಯ ಮೂರನೆಯ ಮಾಳಿಗೆಯ ಮೇಲೆ

ತಮ್ಮ ಗುಂಪಿನ ಸುಸಂಘಟನೆಯ ಬಗ್ಗೆ ಹೊರಟ ಈ ಸಂಸ್ಥೆಯು ಲಘ್ವಕ್ಷರದ್ದಿನೊಂದಿ, ಕರ್ನಾಟಕದ ಸುಸಂಘಟನೆಗೆ ಸಹಕಾರಿಯಾಗಲಿ.

೩೯. ಒಕ್ಕಲಿಗ (ಕೈಬರೆಹದ ಪತ್ರಿಕೆಯ ೧೯೪೫ನೆಯ ಅಕ್ಟೋಬರ್ ಸಂಚಿಕೆ); ಸಂಪಾದಕರು ಶ್ರೀಮಾನ್ ವಿ. ಸಿ. ಹಿತ್ತಲಮನಿ 'ಕನ್ನಡಜಾಣ'; ಸಹಸಂಪಾದಕರು ಶ್ರೀಮಾನ್ ಎನ್. ಎಲ್. ಹಳ್ಳಿಪ್ಪನವರ. ಜಯಂತಿಯ ಅಳತೆಯ ೧೧೩ ಪುಟಗಳು. ಪುಣೆಯ ಒಕ್ಕಲುತನದ ಕಾಲೇಜಿನ ಕರ್ನಾಟಕ ಸಂಘದ ಪತ್ರಿಕೆಯಿದು.

ನಮ್ಮ ಕಡೆಗೆ ಬಂದ ಸಂಚಿಕೆಯಲ್ಲಿ 'ವಿಜ್ಞಾನ ವಿಭಾಗ' 'ಸಾಹಿತ್ಯ ವಿಭಾಗ' ಎಂದು ಎರಡು ಭಾಗಗಳನ್ನು ಮಾಡಲಾಗಿದ್ದು, ಎರಡೂ ಭಾಗಗಳಲ್ಲಿ ಒಳ್ಳೊಳ್ಳೆಯ ಲೇಖನಗಳನ್ನು ಸಂಪಾದಿಸಿ ಕೊಡಲಾಗಿದೆ. 'ಮರಕೊಡಲ ಎಣ್ಣೆ' 'ಹತ್ತಿಕಾಳಿನ ಒಟ್ಟು' 'ಕುದುರೆ ಮೆಂತೆ' 'ಕೃತ್ರಿಮ ಹಾಲು' 'ಜೇನ್ನೊಣ' 'ಗೆದ್ದಲಿ' ಮೊದಲಾದ ವಿಜ್ಞಾನ ವಿಭಾಗದ ಲೇಖನಗಳು, ಆ ಆ ಲೇಖಕರ ವಿಷಯತಜ್ಞತೆಗೆ ಸಾಕ್ಷಿಗಳಾಗಿವೆ. ಸಾಹಿತ್ಯ ವಿಭಾಗದಲ್ಲಿಯ ಪ್ರವಾಸವೃತ್ತ, ಲಘುಪ್ರಬಂಧ, ಕತೆ, ಏಕಾಂಕ, ಕವಿತೆಗಳು ರಸವತ್ತಾಗಿವೆ. 'ಸಂಪಾದಕರ ಬತ್ತಳಿಕೆಯಿಂದ' ಎಂಬ ಟಿಪ್ಪಣಿಗಳೂ ಸಂಘದ ಸುದ್ದಿಗಳೂ ವಾಚನೀಯವಾಗಿವೆ. ಪತ್ರಿಕೆಯ ಬಹಿರಂಗ ಸೌಂದರ್ಯವು ಆಕರ್ಷಕವಾಗಿದ್ದು ಸಂದರ್ಭ ಚಿತ್ರಗಳು ವಿಷಯದ ಗೌರವವನ್ನು ಹೆಚ್ಚಿಸುವಂತಿವೆ. ಸಂಘದ ಸದಸ್ಯರ ಕನ್ನಡ ಪ್ರೀತಿ-ಅಭಿಮಾನಗಳೂ, ಅದಕ್ಕಾಗಿ ಪ್ರಾರಂಭಿಸಿದ ಈ ಪತ್ರಿಕಾ ಲೇಖನಕಾರ್ಯವೂ ಅಭಿನಂದನೀಯ.

೪೦. ಕಸ್ತೂರಿ (ಜಬ್ಬಲ್‌ಪುರದ ಕರ್ನಾಟಕ ಸಂಘದಿಂದ ಹೊರಡುವ ಕೈಬರೆಹದ ಪತ್ರಿಕೆ.) ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಬಿ. ಚಾ. ಶಾಮಮಯ್ಯ ಅವರು. ಡೆಮಿಯಾ ಅಳತೆಯ ೧೦೦ ಪುಟಗಳು.

ಹೊರನಾಡಿನಲ್ಲಿದ್ದು ಕನ್ನಡತನವನ್ನು ಕಾಯ್ದುಕೊಳ್ಳಬೇಕೆಂದು ಹವಣಿಸುತ್ತಿರುವ ಜಬ್ಬಲ್‌ಪುರದ ಕನ್ನಡಿಗರನ್ನು ಮನವಾರೆ ಅಭಿನಂದಿಸಬೇಕಾದುದು ಅತ್ಯಂತ ಅವಶ್ಯವಾಗಿದೆ. ಸಂಘವು ಕನ್ನಡ ವಾಚನಾಲಯ— ಪುಸ್ತಕಭಾಂಡಾರಗಳನ್ನು ನಡೆಯಿಸುತ್ತಿದೆಯಲ್ಲದೆ ನಾಡಹಬ್ಬ, ಜಯಂತಿ, ಪುಣ್ಯತಿಥಿ ಮೊದಲಾದ ಕರ್ನಾಟಕ ಸಾಂಸ್ಕೃತಿಕ ಉತ್ಸವಗಳನ್ನೂ ಜರುಗಿಸುತ್ತಿದೆ. ಒಳನಾಡಿನ ಕನ್ನಡಿಗರೊಂದಿಗೆ ಆತ್ಮೀಯ ಸಂಬಂಧ ಬೆಳೆಯಿಸುವುದೂ ಈ ಸಂಘದ ಸದಸ್ಯರ ಉದ್ದೇಶವಾಗಿದೆ. ಆದುದರಿಂದಲೆ ಈ ಸಂಚಿಕೆಯಲ್ಲಿ ಸಂಘದ ಸದಸ್ಯ ಸಾಹಿತ್ಯಕರಲ್ಲದೆ, ಪ್ರೊ. ವಿ. ಬಿ. ನಾಯಿಕ ಎಂ. ಎ, ಪ್ರೀಯುತ ಎಚ್. ಎಸ್. ಪಾಟೀಲ, ಶ್ರೀ. ಆಲೂರ ವೆಂಕಟರಾಯರು ಇವರ ಲೇಖನ-ಪತ್ರಗಳೂ ಸಂಗ್ರಹಗೊಂಡಿವೆ. ಲೇಖಕವರ್ಗದಲ್ಲಿ ಮಹಿಳೆಯರೂ ಇದ್ದುದು ಸಂತೋಷದ ಸಂಗತಿ. ಸಂಗ್ರಹಿತ ಲೇಖನಗಳಲ್ಲಿ ಕೆಲವು ಪ್ರಕಟನೆಗೆ ತಕ್ಕುವುಗಳೆನಿಸುವಷ್ಟು ಚೆನ್ನಾಗಿವೆ. ಜಬ್ಬಲ್‌ಪುರದ ಕರ್ನಾಟಕ ಸಂಘವೂ ಅಲ್ಲಿಯ

(ಹೊದಿಕೆಯ ಮೂರನೆಯ ಪುಟ ನೋಡಿರಿ)

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೪—೦ ಆರು ತಿಂಗಳಿಗೆ ೨—೮—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೯ | ೧ನೆಯ ಆಗಸ್ಟ್ ೧೯೪೬ | ಸಂಚಿಕೆ ೬

# ಓ ಹಕ್ಕಿ!

ಶ್ರೀ. ಕೆ. ಮಂಜುನಾಥ 'ನಿಃಶ್ರಮಂಡಲಿ' ಕೋಟೇಶ್ವರ

ಎಲ್ಲೆಯಿಲ್ಲದ ಬಲ್ಮೆಯಾವಾರವನು ತೂರಿ
ಹಾರು ಹಾರಿಲೆ ಹಕ್ಕಿ! ಮೇಲೆ ಹಾರು!
ಜೀವನಾಕಾಶದಲಿ ಭಾವಮೋಡಗಳೇರಿ
ತುತ್ತ ತುದಿಯನು ಸೇರ್ವ ಬಯಕೆ ತೋರು!

ಬಯಲ ಸಂವೃತವಾದ ಹಸಿರು, ಹೂ, ಮರಗಳಲಿ
ಚಿರವಾದ ಒಲುಮೆಯನು ಕಾಣಲೆಂದೆ!
ಮುನ್ನೀರ ತಳವನಳವಡಿಸಲಾಶಿಸಗೆ ಕಿರು-
ಕೊಳದಿ ತೃಪ್ತಿಯೆ? ಜುಸಿಯ ಕಂಡೆ ಮುಂದೆ-

ಮೇಲೆ ಬಲು ಮೇಲೆ ಹಾರಿದ ಮೇಲೆ ಇನ್ನಿನಿತು
ಹಾರಲೆಳಸುವೆಯೇಕೆ? ಓ ಹಕ್ಕಿ ಕುದಿವೆ?
ಅನಂತ ಲಹರಿಯಲಿ ಸೊಗದ ಸೇಚನವಾಯ್ತೆ?
ಬಯಲ ಭ್ರಾಂತಿಯ ಕಂಡು ನಗೆಯು ಬಹುದೆ?

ಕಿರಿದಾದ ಬಾಳು ಹಿರಿಹಿರಿದಾಗಿ ಹೋಗುತಿದೆ
ಮೇಲೆ ಹೋದಂತೆಲ್ಲ ಹಿಗ್ಗಿ ಹಿಗ್ಗಿ;
ಬುಗ್ಗೆಯೊಳಗಿನ ವಾರಿಯಂತೆ ಪುಷ್ಕಲವಾದ
ಸೌಹಾರ್ದ ಸಂಪದದ ಸುಗ್ಗಿ! ಸುಗ್ಗಿ!

ಜಟಿಲವಾಗಿಹ ಕುಟಿಲ ಗತಿಗಳಲಿ ಮತಿಗಳಲಿ
ಸೊರಗಿ ಸುಕ್ಕಾಗಿ ಕನವರಿಸಬೇಕೆಲ್ಲ;
ಎಲ್ಲ ಸುಂದರ ಮಧುರ ಸಾಮ್ರಾಜ್ಯದದ್ಭುತವು-
ಹಾರು ಮೇಲಕೆ ಹಾರು ಭಾವಹಕ್ಕಿ!

ಅತಿಗೆಲ್ಲೆಯೆ ಇಲ್ಲ ಕನಸಿನಾಗಸದಲ್ಲಿ
ಸಂತಸದ ಹನಿಗಳಲಿ ವಿಾಯಬಹುದು;
ಇದ್ದು ಬಾರದ ನಲ್ಮೆ ಹೂವಿನೆಸಳಿನ ಹಾಗೆ
ಆಕಾಶಚಕ್ರದಲಿ ಹೊಂದಬಹುದು.

ಮೈಲು ಮೈಲುಗಳಾಚೆ, ಹೇಳಕೇಳದೆ ಜರುಗಿ
ಸತತ ವಿಕಸಿಪ ಮಹಾವಿಶ್ವದೆದುರು
ಜಗವೊಂದು ಕಣವಾಗಿ, ಹಗಲಿರುಳು ಬಡವಾಗಿ
ಸಣ್ಣದಾಗುತ ತೇಲುತಿದೆ ಮುಮುರಿ ಮುಮುರಿ.

ದುಃಖವಿಗಳ ತೇವವಿಲ್ಲದಾ ಗಗನದಲಿ
ಸ್ವಚ್ಛಂದದಲಿ ಹಾರು! ಕೊನೆಯದೆಲ್ಲಿ?
ಹೀರು, ಬಾಳಿನ ಕೋಟಿ ಕೋಟಿಲೆಗಳಿರದ ಸುಖ-
ಸಂಪತ್ತು ಸ್ವಾತಂತ್ರ್ಯ ಜಾನಿನಲ್ಲಿ!

ಆನಂದಜೊಲುಮೆ, ನಲ್ಮೆಯ ಬಲುಮೆ ನೆಲಸಿಹುದು
ಜಗಕೆ ಕಾಣದ ಬೆಳಕು, ಕಾಂತಿ, ಶಾಂತಿ;
ಕೋಟಿ ಯೋಜನದಾಚೆ ಹಾರು ಹಾರಿಲೆ ಹಕ್ಕಿ
ಓ! ಎನ್ನ ಬಗೆಹಕ್ಕಿ! ಪಡೆಯೆ ಶಾಂತಿ!

ನಮ್ಮ ಪರೀಕ್ಷೆಯ ಪ್ರಸಂಗ

'ಭಾರತದ ಎಲ್ಲ ಸಂಕಟಗಳಿಗೂ ಕಾರಣವಾದ ನುಹಾಯುದ್ಧ ನಿಂತಿತು; ಇನ್ನೇನು, ಸುಖ-ಶಾಂತಿಗಳಿಂಪ್ಪ ಬದುಕಲು ಅನುಕೂಲವಾಗುವುದು!' ಎಂದು ಆಶೆಯಿಂದಿದ್ದ ಭಾರತೀಯರಿಗೆ, ಮೊದಲಿಗಿಂತ ಹೆಚ್ಚಿನ ಗಂಡಾಂತರದ ಪ್ರಸಂಗಗಳನ್ನೆ ಎದುರಿಸಬೇಕಾಗಿ ಬರುತ್ತಿದೆ. ಯುದ್ಧದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ—ಸಂಪೂರ್ಣ ಯುದ್ಧಕ್ಷೇತ್ರಗಳೇ ಆಗಿದ್ದ—ರಾಷ್ಟ್ರಗಳೂ, ಇಂದಿನ ಯುದ್ಧೋತ್ತರ ಕಾಲದಲ್ಲಿ, ದಿನದಿನಕ್ಕೆ ಶಾಂತಿ-ಸಮಾಧಾನಗಳನ್ನು ಸವಿಯಾಪಿಸುತ್ತಿವೆ; ಆದರೆ ಭಾರತದಲ್ಲಿ ಅಂತಹ ಶಾಂತಿ-ಸಮಾಧಾನದ ಭವಿಷ್ಯದ ಸುಳಿವು ಕೂಡ ಕಾಣದಾಗಿದೆ. ಮೊದಲನೆಯದಾಗಿ ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆ ಪೂರ್ಣವಾಗಿ ದೊರೆಯದಂತಹ ಪರಿಸ್ಥಿತಿ; ಎರಡನೆಯದಾಗಿ ನಾಡಿನಲ್ಲಿ ಶಾಂತಿ-ಸಮಾಧಾನಗಳು ಸಿಕ್ಕದಂತೆ ನಡೆದಿರುವ ಅಡಳಿತದ ಕ್ರಮ; ಮೂರನೆಯದು ಮುಂದಾಲುತನದ ಆಶೆಯ ಸ್ವಾರ್ಥಿ ವ್ಯಕ್ತಿಗಳು ಜನಸಾಮಾನ್ಯರಲ್ಲಿ ಹುಟ್ಟಿಸುತ್ತಿರುವ ಅನೈಕ್ಯ ಭಾವನೆ; ನಾಲ್ಕನೆಯದೆಂದರೆ ಅಧಿಕಾರಿಗಳ ಸಿರಿವಂತರ ಸ್ವಾರ್ಥಸಾಧಕ ಪ್ರವೃತ್ತಿ; ಐದನೆಯದಾಗಿ ಈ ಸ್ವಾರ್ಥಸಾಧಕ ಪ್ರವೃತ್ತಿಯ ವಿರೋಧಕ್ಕಾಗಿ ಆಗಾಗ ಅಲ್ಲಲ್ಲಿ ತಲೆಯೆತ್ತುವ ಸಂಪು-ಸತ್ಯಾಗ್ರಹಗಳು. ಇವಲ್ಲ ಸೇರಿ ನಾಡಿನ ಜನರೆದುರು ಕಗ್ಗತ್ತಲೆಯನ್ನೇ ಹರಡಿಬಿಟ್ಟಿವೆ. ಯಾವ ಆಶೆಯು ಬೆಳಕೂ ಈ ಕಗ್ಗತ್ತಲೆಯನ್ನು ಭೇದಿಸದಂತಿದೆ—ಇಂದಿನ ಪರಿಸ್ಥಿತಿ. ಇದೆಲ್ಲಕ್ಕೂ ಮೂಲ ನಮ್ಮ ನಾಡಿನ ಪರಾಧೀನಜೀವನವೇ ಎಂಬುದನ್ನು ಅರಿತು ನಡೆದ ಹೊರತು ನಮಗೆ ಬೆಳಕಿನ ಮುಖವೇ ಕಾಣುವಂತಿಲ್ಲ.

ಇಂದು ಒಂದರ ಹಿಂಬೊಂದು ಮುಷ್ಕರಗಳು ತಲೆದೋರಲು ತೊಡಗಿವೆ. ಪೈಮಾನಿಕರ—ನಾವಿಕರ—ಸಂಪುಗಳಂತಹ ಪ್ರತ್ಯಕ್ಷ ಸರಕಾರಕ್ಕೆ ಬಿಸಿ ತಗುಲಿಸುವ ಉಗ್ರ ಚಟುವಟಿಕೆಗಳು, ಕೇವಲ ವಿುಂಚಿನ ವೇಗದಲ್ಲಿ ಪುರೆಯಾಗಿ ಹೋದುವು. ಸಾಮ-ದಾನ-ಭೇದ-ದಂಡಗಳ ಚತುರೋಪಾಯಗಳಿಂದಲೂ ಆ ಸಂಪುಗಳನ್ನು ಅಡಗಿಸುವ ಹಂಚಿಕೆಗಳನ್ನು ಸರಕಾರ ಮಾಡಿದರು. ಅಂತಹರಿಗೆ ಜನತೆಯ ಸಹಾನುಭೂತಿ-ಸಹಕಾರಗಳು ಸಿಕ್ಕದಂತೆ, ಸಿಡಿಗುಂಡುಗಳಿಂದ ಜನರ ಬೇಟೆಯನ್ನಾಡಿ, ಜನರಲ್ಲಿ ತೀಕ್ಷ್ಣವಾದ ಭೀತಿಯನ್ನದು ಹುಟ್ಟಿಸಿತು. ಪೋಲೀಸರು ಸಂಪು ಹೂಡುವೆನೆಂದು ಧ್ವನಿಯೆತ್ತುವುದೇ ತಡ; ಅವರ ನೆರವಿನ ಮುಹತ್ತ್ವವನ್ನರಿತ ಸರಕಾರ, ಕೇಳಿದುದನ್ನೆಲ್ಲ ಕೊಟ್ಟು ಅವರನ್ನು ಸಮಾಧಾನಗೊಳಿಸಿತು. ಇಂದಿನ ಸರಕಾರ ನಿಂತುದೇ ಪೋಲೀಸರ ಬಲದಮೇಲೆ ಅಲ್ಲವೆ?

ತನ್ನ ದೈನಂದಿನ ಕಾರ್ಯಕ್ಕೆ ಅಡೆ-ತಡೆಯನ್ನೊದವಿಸುವ ಸಂಪು-ಸತ್ಯಾಗ್ರಹಗಳನ್ನು ಸರಕಾರ ತನ್ನ ಸಾಮರ್ಥ್ಯದಿಂದ ಕ್ಷಣಾರ್ಧದಲ್ಲಿ ಹೊಡೆದು ಹಾಕಬಹುದು; ಆದರೆ ಜನತೆಯ ಹಿತಸಂಬಂಧದ ವಿರೋಧವಾಗಿ ಎದ್ದ ಸಂಪು-ಸತ್ಯಾಗ್ರಹಗಳ ಕಡೆಗೆ ಅಲಕ್ಷ್ಯ-ಅಶ್ರದ್ಧೆ ತೋರಿಸಿ, ಮೊದಲೇ ತೊಂದರೆಯಲ್ಲಿದ್ದ ಜನಜೀವನವನ್ನು ಇನ್ನಿಷ್ಟು ತೊಂದರೆಯಲ್ಲಿ ನೂಕುವುದು ಆದರ ನೀತಿ. ಗಿರಣಿ-ಕಾರಖಾನೆಗಳ ಕೂಲಿಗಳು ಸಂಪು-ಸತ್ಯಾಗ್ರಹ ಹೂಡಿದರೆ, ಸರಕಾರ ಬಂಡವಾಳಗಾರರಾದ ಯಜಮಾನರನ್ನು ಎತ್ತಿಹಿಡಿದು, ಬಡವರಾದ ಕೂಲಿಗಳನ್ನು ಆರ್ಥಿಕ ಸಂಕಟದಲ್ಲಿ ತೊಡಕಿಸಿ, ಸುಸಂಘಟಿತವಾದ ಗುಂಪಿನಲ್ಲಿ ವೈಯಕ್ತಿಕ ಸ್ವಾರ್ಥದ ಬೀಜವನ್ನು ಬಿತ್ತಿ, ಸಂಪು-ಸತ್ಯಾಗ್ರಹಗಳ ಶಕ್ತಿ ಕಡಿಮೆಯಾಗುವಂತೆ ಮಾಡಿದ ಉದಾಹರಣೆಗಳು ಹಲವು. ಪ್ರಾಥಮಿಕ ಶಾಲೆಯ—ದೈನ್ಯದ ಮೂರ್ತಿಗಳಾದ—ಶಿಕ್ಷಕರು ಸಂಪು ಮಾಡಿದರೆ, ಅಡಳಿತಕ್ಕೇನೂ ಹಾನಿಯಿರದುದರಿಂದ, ಸರಕಾರ ಅದನ್ನು ಲೆಕ್ಕಿಸಲೇ ಇಲ್ಲ. ಪ್ರಾಂತದಲ್ಲಿ ಕಾಂಗ್ರೆಸ್ ಸರಕಾರ ಬಾರದೆ ಹೋಗಿದ್ದರೆ ಪ್ರಾ. ಶಿಕ್ಷಕರ ಸಂಪು ಇನ್ನೂ ಎಷ್ಟು ದೂರ ಜಗ್ಗುತ್ತಿತ್ತೊ ಏನೊ!

ಈಗ ಅಂಚೆಯಾಳುಗಳ ಸಂಪು ಪ್ರಾರಂಭವಾಗಿ ೧೫ ದಿನಗಳಾಗುತ್ತ ಬಂದಿತು. ಅಂಚೆಯ ಖಾತೆಯನ್ನವಲಂಬಿಸಿ ಜನತೆಯ ಹಿತಸಂಬಂಧಗಳೆಷ್ಟಿವೆಯೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಸರಕಾರ ತನಗೆ ಆವಶ್ಯಕವಾದ ಕಾರ್ಯಗಳೆಲ್ಲ ಸುಸೂತ್ರವಾಗಿ ನಡೆಯುವಂತೆ ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಂಡಿದೆ. ಅಂಚೆಯಾಳುಗಳು ಬೇಕಾದಷ್ಟು ದಿನ ಸಂಪು ಮಾಡಿದರೂ ಸರಕಾರಕ್ಕೆ—ಸ್ವಲ್ಪ ಆರ್ಥಿಕ ಹಾನಿಯಲ್ಲದೆ—ಇನ್ನಾವ ತೊಂದರೆಯೂ ಉಂಟಾಗುವಂತಿಲ್ಲ. ಜನತೆಗೆ ಮಾತ್ರ ಎಲ್ಲ ಬಗೆಯಿಂದಲೂ ಹಾನಿ, ತೊಂದರೆ. ತಾನು ಮಾಡಿಕೊಂಡಿರುವ ತಾತ್ಪೂರ್ತಿಕ ವ್ಯವಸ್ಥೆಯಂತೆ ಜನತೆಗಾಗಿ ಮಾಡಿಕೊಡಲಿಕ್ಕೆ ಸರಕಾರಕ್ಕೆ ಬರುವಂತೆ ಇದ್ದಿಲ್ಲವೆಂದಲ್ಲ; ಆದರೆ ಅಂಚೆಯಾಳುಗಳ ಸಂಪಿನ ಪರಿಣಾಮದಿಂದ ಪ್ರತ್ಯಕ್ಷವಾಗಿ ಹಾನಿ-ಕಷ್ಟಗಳಿಗೊಳಗಾದ ಜನತೆ, ಅವರ ಸಂಪನ್ನು ಅಸಹಾನುಭೂತಿ-ಅಸಹಕಾರಗಳ ದೃಷ್ಟಿಯಿಂದ ನೋಡಬೇಕೆಂಬ ಆಂತರಿಕ ಆಪೇಕ್ಷೆಯಿದೆ ಸರಕಾರಕ್ಕೆ. ಆದುದರಿಂದಲೇ ಅದು ತನ್ನ ಅಭಿಪ್ರಾಯವನ್ನು ಬಿಗಿಹಿಡಿದು, ಸಂಪಿನ ಮುಂದುವರೆತಕ್ಕೆ ಸಹಾಯ ಮಾಡುತ್ತಲಿದೆ. ದಂಡ, ಶಿಕ್ಷೆ ಮೊದಲಾದುವುಗಳ ಪೆದರಿಕೆ ಹಾಕಿ, ರೇಗಿದ ಅಂಚೆಯಾಳುಗಳ ಗುಂಪನ್ನು ಇನ್ನಿಷ್ಟು ರೇಗಿಸುತ್ತಿದೆ.

ಬರಿಹೊಟ್ಟೆಯಿಂದ ದುಡಿಸಿಕೊಳ್ಳುವುವೆಂದರೆ ಆಜ್ಞಾನಿಗಳಾದ ಎತ್ತು-ಕತ್ತೆಗಳಾದರೂ ದುಡಿಯಲು ಸಾಧ್ಯವಿದೆಯೆ? ಒಂದು ಹೊತ್ತಿನ ಉಪವಾಸದಿಂದಲೇ ಅವು ನೆಲಹಿಡಿದು ಧರಣೀ ಸತ್ಯಾಗ್ರಹವನ್ನು ಪ್ರಾರಂಭಿಸುವುವು. ಹೀಗಿರುವಾಗ ಸುಖ-ದುಃಖದ ತಿಳಿವಳಿಕೆಯುಳ್ಳ ಮಾನವವರ್ಗಕ್ಕೆ ಸೇರಿದ ಅಂಚೆಯಾಳು, ತಾನೊಬ್ಬನೆ

( ೬ನೆಯ ಪುಟಕ್ಕೆ ಮುಂದುವರಿದಿದೆ. )




## ಬೀರಣ್ಣನಿಗೆ ಬಂದ ಸುದ್ದಿಗಳು

೧

ಧಾರವಾಡದ ಅಂಚೆಯ ಮೇಲಧಿಕಾರಿಗಳಿಗೆ, ಸಂಪಿನ ಕಾಲದಲ್ಲಿ ತೋರಿಸಿದ ಅವರ ಕರ್ತವ್ಯನಿಷ್ಠೆಯ ಮೂಲಕ, ಸಂಪು ಮುಂಗಿದ ಮೇಲೆ ಅಂಚೆಯಾಳುಗಳೆಲ್ಲ ಸೇರಿ ಮುರ್ಯಾಪೆ ಸಲ್ಲಿಸುವರಿದ್ದಾರಂತೆ. ಅವರು ಸಸ್ಪೆಂಡ್ ಮಾಡಿದ ಅಂಚೆಯಾಳುಗಳೇ ಅವರ ಪೆರೆಪಣೆಯ ಹಲ್ಲಕ್ಕಿ ಹೊರುವವರಿದ್ದಾರಂತೆ.

೨

ಚರ್ಚಿಲ್-ಅಮೇರಿ-ಲಿನ್‌ಲಿತ್‌ಗೋ ಕಾಲದ ಸಿವಿಲ್‌ಸರ್ವಿಸ್ಸಿನ ಅಧಿಕಾರಿಗಳೇ ಪ್ರಾಂತಗಳಲ್ಲಿ ಜಿಲ್ಲಾ ಅಧಿಕಾರಿಗಳಾಗಿ ಇರುವುದರಿಂದ, ಹೊದಲಿನಂತೆಯೆ ಅವರು ಕಾಂಗ್ರೆಸ್ಸಿಗೆ ವಿರೋಧಿಗಳಾಗಿಯೇ ಇರಬೇಕೆಂದು ನಿರ್ಣಯಿಸಿರುವರಂತೆ. ಅದಕ್ಕಾಗಿ ಮಂತ್ರಿಮಂಡಲಿಯಲ್ಲಿ ಮುಖ್ಯಾಧಿಕಾರ ವಹಿಸಿದ ಕಾಂಗ್ರೆಸ್ ಧುರೀಣರು, ಏನು ಮಾಡಬೇಕೆಂಬುದು ತಿಳಿಯದೆ 'ಸಂಪೇನುಹಾಕಂ' ಎನ್ನುತ್ತಿದ್ದಾರಂತೆ.

೩

ಮದರಾಸಿನ ಆಂಧ್ರಜನ ಬಯಲುಸೀಮೆಯುಳ್ಳ ಕಾಂಗ್ರೆಸ್ ಮಂತ್ರಿಮಂಡಲಿ, ತನ್ನ ಪ್ರಾಂತದಿಂದ ಕನ್ನಡ ಭಾಷೆಯನ್ನು ಹೊಪೆದೋಡಿಸಬೇಕೆಂದು ನಿರ್ಣಯಿಸಿದೆಯಂತೆ. ಈ ಕಾರ್ಯಕ್ಕೆ ತಾವು ಸಂಪೂರ್ಣ ಸಹಕಾರ ಕೊಡುವುದಾಗಿ, ಅನ್ಯಾಂತದ ಕನ್ನಡ ಜಿಲ್ಲೆಗಳಿಂದ ಹೋದ ಆಸೆಂಬ್ಲಿ ಸದಸ್ಯರು ದಾಪನಕೊಟ್ಟುಬಿಟ್ಟಿದ್ದಾರಂತೆ.

೪

ಕನ್ನಡನಾಡಿನ ಬಯಲುಸೀಮೆಯ ಪ್ರದೇಶವನ್ನಿ ಇನ್ನು ಮಳೆಯಾಗುವ ಸಂಭವ ಕಡಿಮೆಯೆಂದೂ, ಅದಕ್ಕಾಗಿ ಅಲ್ಲಿಯ ಜನರಿಗೆ ಆಹಾರವನ್ನೊದಗಿಸುವುದು ಹೇಗೆಂದೂ ಸರಕಾರದವರಿಗೆ ತುಂಬ ಯೋಚನೆಯುಂಟಾಗಿದೆಯಂತೆ. ಆದಕ್ಕಾಗಿ ನಿಯಮಿಸಲಿರುವ ಸಂಶೋಧಕ ಸಮಿತಿಯವರು, ಬಯಲುಸೀಮೆಯ ಮಣ್ಣು-ಕಲ್ಲುಗಳನ್ನು ತರಿಸಿ ಸಂಶೋಧಿಸಲಿರುವರಂತೆ. ಕರಿನಾಡಿನ ಕರಿಯ ಮಣ್ಣಿನಲ್ಲಿ ಕಬ್ಬಿಣವಿರುವುದೆಂದೂ ಕಲ್ಲುಗಳಲ್ಲಿ ಗಂಧಕ-ರಂಜಕ (ಫಾಸ್ಫರ್)ಗಳಿರುವುದೆಂದೂ ಇವು ಇರುವ ಪದಾರ್ಥಗಳು ಆಹಾರಕ್ಕೆ ಒಳ್ಳೆಯವೆಂದೂ ತಜ್ಞರ ಮತವಿದೆಯಂತೆ.

೫

ಕಳೆದ ವರ್ಷ ಬೆಳಗಾಂವಿ ಜಿಲ್ಲೆಯವರು ಸರಕಾರಕ್ಕೆ ಕೇಳಿದಷ್ಟು ಕಾಳನ್ನು ಕೊಡಲಿಲ್ಲವಂತೆ. ಆದಕ್ಕಾಗಿ ತಾವು ಕೊಟ್ಟಷ್ಟು ಆಹಾರ ಪದಾರ್ಥಗಳನ್ನು ತಿಂದುಂಡೇ ಬದ ಕಿರಬೇಕೆಂದು ಸರಕಾರಿ ಅಧಿಕಾರಿಗಳು ಹೇಳುತ್ತಿರುವರಂತೆ. ಮುಂದಿನ ವರ್ಷಕ್ಕಾಗಿ ಬಿತ್ತಿ ಬೆಳೆದು ಕಾಳನ್ನು ತನುಗೆ ಒಪಗಿಸುವುದಕ್ಕಾಗಿ, ಜನರನ್ನು ಅರೆಹೊಟ್ಟೆಗೆ ಕೊಟ್ಟಾದರೂ ಬದುಕಿಸಬೇಕೆಂದು ಅಧಿಕಾರಿಗಳ ಪಟ್ಟವಂತೆ.

೬

ಕಾಂಗ್ರೆಸ್ ಸರಕಾರ ಅಮಲಿನಲ್ಲಿ ಬಂದಂದಿನಿಂದ ಹಳ್ಳಿಗಳೆಲ್ಲಯ ಖಾದೀಟೊಪ್ಪಿಗೆಯ ಜನರು ಅಮಲ್‌ದಾರರಾಗಿ ಪೆರೆಯುತ್ತಿದ್ದಾರಂತೆ. ಅವರು ಲಂಚಖೋರ ಅಧಿಕಾರಿಗಳಿಂದ ಲಂಚವನ್ನೂ ಲಾಭಬಡಕ ವ್ಯಾಪಾರಿಗಳಿಂದ ಸುಂಕವನ್ನೂ ಒತ್ತಾಯದಿಂದ ಕಿತ್ತುಕೊಳ್ಳಲು ತೊಡಗಿದ್ದಾರಂತೆ. ಜೈ ಹಿಂದ್!

ಸ್ಥಳ ಸಂಕೋಚದ ಕಲುವಾಗಿ ಹಲವು ಮುಖ್ಯವಾದ ಸುದ್ದಿಗಳನ್ನು ನುಂಡಿನ ಸಂಚಿಕೆಗಾಗಿ ಕಾಯಿಸಿ ಇರಿಸಲಾಗಿದೆ.

* * * *

## ಬೀರಣ್ಣನ ಮುಂದೆ ಇದ್ದ ಸಮಸ್ಯೆಗಳು

ಜರ್ಮನಿಯ ಹಿಟ್ಲರ್ ಪಕ್ಷದವರು ಯಹೂದಿಗಳನ್ನು ವೈಷಿಸುತ್ತಾರೆಂದೂ ಅವರಿಗೆ ಪಶುಂಸೆ ಕೊಡುತ್ತಾರೆಂದೂ ಬ್ರಿಟಿಷರು ಪ್ರಪಂಚದಲ್ಲೆಲ್ಲ ಅಂದು ಪ್ರಚಾರ ಮಾಡಿದರು. ಆ ಕಾಲದಲ್ಲಿ ರತ್ನಗಳಾದ ಜರ್ಮನರನ್ನೂ ಯಹೂದಿಗಳು ಅಷ್ಟೊಂದು ಪ್ರತಿಭಟಿಸಿದಂತೆ ಕಾಣಲಿಲ್ಲ. ಇಂದು ಅದೇ ಯಹೂದಿಗಳು ನಿಸ್ಕರಾದ ಬ್ರಿಟಿಷರನ್ನೇ ಬಾಂಬುಹಾಕಿ ಕೊಂದುಹಾಕಲು ಸಿದ್ಧರಾಗಿದ್ದಾರಲ್ಲಾ! ಆದೇಕೆ ಹೀಗೆ?

ಬ್ರಿಟಿಷ್ ಸೇನಾನಾಯಕ ಸೈನುಮರು ಭಾರತಕ್ಕೆ ಮನೆಯಲ್ಲಿಯೇ ಬಂದು, ಸೌನಿಗಳಾಗಿಯೆ ಇದ್ದು, ಮನೆಯಲ್ಲಿಯೆ ಮರಳಿ ಹೋದರಂತೆ. ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವುದಾಗಿ ಪ್ರಪಂಚಕ್ಕೆಲ್ಲ ಸಾರಿ ಹೇಳಿದ ಬ್ರಿಟಿಷ್ ಪಾರ್ಲಮೆಂಟೇ ಹೀಗೆ ಮನೆಯಾಗಿ ಸೇನಾಪತಿಯನ್ನು ಕಳುಹುತ್ತಿದೆಯಲ್ಲಾ! ಆದೇಕೆ ಹೀಗೆ?

*

ಜವಾಹರಲಾಲರು ಕಾಶ್ಮೀರಕ್ಕೆ ಹೋಗಿಯೇ ತೀರುವುದಾಗಿ ಹಟತೊಟ್ಟಿರುವರು. ಅಲ್ಲಿಯ ಮುಮ್ಮಮಂತ್ರಿಗಳಾದ ರಾಮಚಂದ್ರ 'ಕಾಕಾ' ಅವರು, ವಲ್ಲಭಭಾಯಿಯವರನ್ನು ಕಂಡಾಗ 'ಜವಾಹಿರಲಾಲರನ್ನು ಹಿಡಿಯುವ ಗಿಡಿಯುವ ಪುಟ್ಟಾಟ ಮಾಡಬೇಡಿರಿ' ಎಂದು ಸಲಹೆ ಕೊಟ್ಟಿದ್ದಾರಂತೆ. ಭಾರತದ ಬ್ರಿಟಿಷ್ ಸರ್ವಾಧಿಕಾರಿಯಿಂದ 'ಜವಹರರನ್ನು ಹಿಡಿದಿಟ್ಟೇ ತೀರಬೇಕು' ಎಂದು ಆಜ್ಞೆ ಬರಬಹುದಾಗಿದೆಯಂತೆ. ರಾಮಚಂದ್ರ ಕಾಕಾ ಅವರು ತಾವೇನು ಮಾಡಬೇಕೆಂದು ಬೀರಣ್ಣನನ್ನು ಕೇಳಿದರೆ ಅವನೇನು ಹೇಳಬೇಕು?

* * *

'ಗೋವೆಯ ಪ್ರದೇಶ ಹೊದಲಿನಿಂದಲೂ ಕನ್ನಡ ರಾಜರ ಆಡಳಿತಕ್ಕೆ ಸೇರಿದ್ದಾದುದರಿಂದ ಅಲ್ಲಿ ಚಳವಳಿ ನಡೆಯಿಸುವ ಹಕ್ಕು ತನುಗಿದೆ' ಯೆಂದು ಕನ್ನಡಿಗರು ಹೇಳುತ್ತಾರೆ. 'ಗೋವೆಯಲ್ಲಿ ಕನ್ನಡದ ಒಂದು ಶಬ್ದವೂ ಕಿವಿಗೆ ಬೀಳುವಂತಿಲ್ಲ; ಆದುದರಿಂದ ಆದು ಮಹಾರಾಷ್ಟ್ರಕ್ಕೆ ಸೇರಿದ್ದು, ಅಲ್ಲಿ ಚಳವಳಿ ನಡಿಸುವ ಅಧಿಕಾರ ನಮ್ಮದಕ್ಕಿಲ್ಲ' ಎಂದು ಮಹಾರಾಷ್ಟ್ರರು ಹೇಳುತ್ತಿದ್ದಾರೆ. 'ನಮಗೆ ಕನ್ನಡಿಗರೂ ಬೇಡ, ಮಹಾರಾಷ್ಟ್ರರೂ ಬೇಡ; ನಾವು ಕೊಂಕಣಿಗರು. ನಮ್ಮ ಚಳವಳಿಗೆ ನಾವೇ ಹೊಣೆಗಾರರು' ಎಂದು 'ಗೊಂಯ್ ಬಾಬು'ಗಳು ಗುಡುಗುತ್ತಿದ್ದಾರೆ. ಆದುದರಿಂದ ತಾವೀಗ ಯಾವುದನ್ನು ಪುರಸ್ಕರಿಸಬೇಕೆಂದು ಜಿನ್ನಾಸಾಹೇಬರು ಪೋರ್ತುಗೀಸ್ ಸರಕಾರಕ್ಕೆ ಬರೆದು ಕೇಳಿದ್ದಾರಂತೆ. ಬೀರಣ್ಣನ ಸಲಹೆ ಕೇಳಿದ್ದರೂ ಸ್ಪಷ್ಟವಾಗಿ ಅಭಿಪ್ರಾಯ

ಯಸಾಗಿಯೇ ಉಳಿಯಿತು. ಒಮ್ಮೆ ಈ ವಿಷಯವನ್ನು ಅವನೆದುರು ಪ್ರಸ್ತಾಪಿಸಿದಾಗ "ನೀ ಸುಮ್ಮನಿರು ಶಾಮಣ್ಣಾ, ನೀ ಮನಿಶ್ಯಾರ ಬಟ್ಟೀಕೂಡಬೇಕಂತ ಅಲ್ಲಾ ನನ್ನ ಪ್ರಯತ್ನ?" ಎಂಬ ಸಂದಿಗ್ಧ ಉತ್ತರವನ್ನು ಹೇಳಿ ಕಿಲಕಿಲನೆ ನಕ್ಕು ಪಾರಾಗಿದ್ದನು. ಆ ಮೊತ್ತ ಶಾಮೂನಿಗೆ ಆ ನಗೆಯ ಅರ್ಥವಾಗಲಿಲ್ಲ.

೨

ದುಡಿತದ ಭಾರದಿಂದ ದಣಿದ ಶಾಮೂ ಸಂಜೆಯ ರೊಟ್ಟಿಗಳನ್ನು ಮಂಚಿ ಭತ್ತದ ಕಟ್ಟೆಯಮೇಲೆ ಬಳಲಿ ಕುಳಿತಿರುವಾಗ, ಗೌಡಯ ಬಸಪ್ಪನಟ್ಟಿ ಬಂದನು. ಇತ್ತೀಚೆಗೆ ನೆಟ್ಟಿಯು ಬರವು ಲಕಸ್ಮಿಕವಾಗಿರಲಿಲ್ಲವಾದುದರಿಂದ, ಶಾಮೂ ಅವನಿಗೆ ಇಲ್ಲದ ಗೌರವವನ್ನು ತೋರಿಸುತ್ತಿರಲಿಲ್ಲ. ಅವರಿಬ್ಬರಲ್ಲಿ ಸ್ನೇಹವು ದಿನ ದಿನವೂ ಬೆಳೆಯುತ್ತಲಿದ್ದುದರಿಂದ, ನೆಟ್ಟಿ ದಿನದ ಬಹುಭಾಗವನ್ನು ಭತ್ತದಲ್ಲಿಯೇ ಕಳೆಯುತ್ತಲಿದ್ದ. ಆಗಾಗ ಧಾನ್ಯೋಚಾರವಾಗಿ ಸೂಚನೆಗಾಗಿ, ಮುಂದಿನ ಕಾರ್ಯದ ಹೊಳವು ಪಡೆಕೊಳ್ಳಲು ಶಾಮುನಿಗೆ ನೆರವಾಗುತ್ತಲಿದ್ದ. ಶಾಮೂನಿಗೆ ನೆಟ್ಟಿಯು ಸಮಾಯವು ಸುಹತ್ತ್ವದ ಮಾತಾಗಿದ್ದಿತು. ಈಚೆತ್ತ ನೆಟ್ಟಿ ಬಂದವನೇ, "ಏನ ಶಾಮಣ್ಣಾ, ನೀನು ಭಕ್ತದ ಧರ್ಮಾಧಿಕಾರಿಯೋ! ಲಾಳಗದ ತೊಪ್ಪೋ! ತಿಳಿಯದಾಗಿದೆ ಮುಂಚಾವಿನಿಂದ ಸಂಜೆಯವರೆಗೆ ಮಡಿಯುವ ನೀನು, ಈ ಬರಗಾಲ ಮುಗಿಯುವವೆರೆಗೆ "ಕ್ಷಯದ ಜಸ್ಟಿಕ್ಕೆ" ಕಾಣುವಂತೆ ಕಾಣುತ್ತೀಯ. ಕೆಲಸದ ಹುಂಡಕ್ಕಮುನ್ನು ಜಾಕ ಮಡಿದರೆ ನಿನ್ನ ಮೈಸಿರಿ ದಮಡಾಧಾನ್ಯ ದೈವಗೂ ಇಕ!"

"ಏನು ಮಾಡಾಕಪ್ಪಾ ನೆಟ್ಟಿ! ಈ ಹೊಟ್ಟೆ ಮುಮುದ ಜನರು ನಿನ್ನ ಮುನಸ್ಸಿಗೇ ದರಿದು ಇಷ್ಟಿಷ್ಟಕ್ಕಿದ್ದಾರು. ಅದರ ದೇಖಲ್ಲಿ-ಜಾಳಿಯುಳ್ಳಿ ನನ್ನ ಮುನಸ್ಸನ್ನೆ ಮಿದೆಮಿ ಹೋಗಿದೆ."

"ಅಯಿನೆಯು ನಿಜಾಯವಲ್ಲಿ ಗಂಡಸರ ಮೀಲ್ಯಜಾನಕೆಯು ಪರಿಪಾಮವು ಬಗ್ಗಾಗದ ಬಿಟ್ಟಿಕ್ಕಿ?"

"ಜಾಗಾದವ ಏನು ಮಾಡಾಯಿಕೊಮ್ಮತ್ತಿ?"

"ಈ ಕೆಲಸಕ್ಕೆ ಒಂದಿಷ್ಟು ಸುಖ ಮಣ್ಣಾಗಿ ಬೇಕು. ಧನಧಾನ್ಯ ಧರ್ಮಾಧಿಕಾರಿಯಲ್ಲಿ ಕುಲ ಮಾಡಾಯಿದ 'ವಿಷಮ್ಮು' ಎಲ್ಲಾ ಮನುಷ್ಯ ಬುದ್ಧಿಸಿಕೊಂಡಂತೆ ಹೊಗಾಯಿದ ಮಾತನ್ನು ಕೇಳಿಲ್ಲಿ ಮೇ?"

"ಬರ್ಲೇನೂ ಪರಿಮ್ಮು. ಅವನ ಸಮಸ್ಯೆಯಲ್ಲಿ ಅಂತಹ ಮುಖ ಕಾಣಿಸಿಗಾಂಡ ಸಿಟ್ಟಾಯಿದು ಅಯಿದಾದಮ್ಮಲ್ಲೇ?"

"ಪ್ರಯತ್ನ ಮಾಡಾಯಿಲೆ ಕಾರ್ಯಾ ಸಾಗಲಿಲ್ಲೇನು ಕಟ್ಟಿಮೆ? ನಿನ್ನ ಮುಖಸ್ಥಿದ್ದೆ ಕಾರ್ಯವು ಹೋಗಿರೆ ಸಿಂಬಯಸ್ಸೇ ಹರಿದು ಇಲ್ಲಿ ಸಿಂಬಯಿಯಂತಾಗಿದೆ!"

ಸಿಂಬಯಂಬ ಪದವನ್ನು ಕೇಳಿ ಶಾಮುನ ದೃಷ್ಟಿ ಮುಯ್ಯಾಯಿತು. ಆ ಪದವನ್ನು ಅವನೇ ಸೃಷ್ಟಿಸಿ ಬಳಸಿದ್ದು. ಅವನ ಮುಖ್ಯವಾಗಿದ್ದ ಕೆಲಸವು ಅವನಿಗೂ ಮುಖಾಮುಖಿಯಾಯ್ತು. ಅವನ ಮುಖ

ಸ್ನೇಯಾರಗಳು ಆ ಊರ ತರುಣರ ಪರಿಚಯಲ್ಲಿ ಬಾರದೆ ಇರುತ್ತಿರಲಿಲ್ಲ. 'ಇಂತಹ ಹೆಣ್ಣನ್ನು ಭಕ್ಷದಲ್ಲಿ ತಂದಿರಿಸುವುದು ಸರಿಯಾಗಬಹುದೇ?' ಎಂದು ತನ್ನ ಮನಸ್ಸನ್ನೇ ಕೇಳಿಕೊಂಡ. ಇವನ ಮನಸ್ಸಿನ ಸ್ಥಿತಿಯ ಅಳವನ್ನು ಅರಿತ ನೆಟ್ಟಿ,

"ಏನು ಶಾಮಣ್ಣಾ, ನಿಂಬೆಯ ಹೆಸರು ಕೇಳಿ ಬೆಚ್ಚಿದಿ ಬಿಟ್ಟಿ? ಅವಳು ಹೊಡಲಿನ ನಿಂಬೆಯಲ್ಲ. ಆಗದ ಬಸದು ಅಡಿಕೊಂಡ್ಯುವ ಮಾತನ್ನು ತಿಳಿದವರಾದ ನಾವ್ ನಂಬುಬೇಕೆ? ಮೋಲಾ, ಅವಳ್ಳಿ ಬರುವುದು ದುಡಿತದ ಲಾಗಾಗಿಯಲ್ಲವೆ?"

ಶಾಮೂ ವಿಹ್ವಲನಾದ. ಇಂತಹ ಹೆಣ್ಣಿನಿಂದ ದೂರವಿರುವುದೇ ಸರಿಯೆನಿಸಿರಬೇಕು ಅವನಿಗೆ. ಅದುದರಿಂದ ನೆಟ್ಟಿಗೆ ಆ ವಿಷಯದ ಬಗ್ಗೆ ಹೆಚ್ಚು ಮಾತನಾಡಗೊಡಲು ಅಸ್ಪದ ಕೊಡದೆ, "ನೋಡೋಣ ನೆಟ್ಟಿ, ವಿಚಾರ ಮಾಡುವಾ. ಸದ್ಯಕ್ಕೆ ನಾವು ಯಾವ ನಿರ್ಣಯವು ಮಾಡುವುದೂ ಬೇಡ. ನಾಧ್ಯಾಣದಲ್ಲಿ ಒನ್ನೊಂದು ಗಂಡಾಳನ್ನ ನೋಡು ಬೇಕಾದರೆ!" ಎಂದ.

"ಬುಚ್ಚಿಸಿದ್ದಿ ಶಾಮಜ್ಜಾ ನೀನು; ಈ ಕೆಲಸ ಗಂಡಸರಿಂದ ಬಗೆಹರಿಯುವುದಿಲ್ಲ. ನಿನಗೆ ಇಷ್ಟದ ಪಂತರು ಬರುತ್ತಿದ್ದರೆ ನಾನೇನೂ ಮಾತಾಡುವುದಿಲ್ಲ. ಹೆಣ್ಣಿಂದರೆ ನೀನು ಬೆದರುವುದುಂದು ನನಗೆನಿಸಲಿಲ್ಲ."

"ಹಾಗಲ್ಲ ನೆಟ್ಟಿ, ನಿಂಬೆಯನ್ನು ಬಿಟ್ಟು ಇಷ್ಟವಿರುವ ನಿಮ್ಮ ಆರಿರೆ?" ನೆಟ್ಟಿ ಕೆಲಕಾಲ ನಕ್ಕ. ಶಾಮೂ ತಾನೇಳಿದ ಮಗುನೆನೆಂದೂ ತಿಳಿಯದೆ, ಆವನ ಮಗೆಯಲ್ಲಿ ತನ್ನ ಮನಸ್ಸನ್ನು ಕಾಣಿಸಿದು ಛತ್ರದ ಮೇಲ್ಕೊಲೆಯು ಬರುತಿನಿಂದ ಜಲ್ಲಿಯೆಸಿದು ಹೊಟಿಗುಟ್ಟಿತು. ನೆಟ್ಟಿ ಮೇಲಕ್ಕೆದ್ದಾಗ ಹುಚ್ಚಿಹೊಳು ಚಂದ್ರ ಮೇಲೇರತೊಡಗಿದ್ದ.

ನೆಟ್ಟಿ ಹೋದರೂ ಅವನ ಮಗೆಯು ತಾಮೂಲದ ಪ್ರಭಾವದಿಂದ ಆಳಿ ಹೋಗಿರಲಿಲ್ಲ. ಅವನ ಮಾತುಗಳು ಮಂದಮಾಗಿತ್ತು. ತಾನು ಧರ್ಮಾಧಿಕಾರಿಯಾಗಿರುವಾಗ ಒಬ್ಬ ದುಡಿಯುವ ಅವನಿಗೆ ಹೇಯವಾಗಿ ಕಾಣತೊಡಗಿತು. 'ಅವಳ್ಳಿ ದುಬ್ಬರು ದುಡಿಯುಲಿಲ್ಲವ್ಲ, ದುಡಿಸಲಿಲ್ಲೆ. ನಾವು ಹೊಟ್ಟೆಗೆ ಕಿಬ್ಬೆದಂಬಿಯಾಲಿಸುವ ತಾನು ನಾವಾಗ್ಯವಲ್ಲ!' ಎಂದು ಛಲವನ್ನೆ ತೊಡುತ. ಕಾರಣ ಅವನ ಮುಖದೆದುರು ನಿಂತ ಕಾಣಿದಳು ಅಯಳನ್ನು ತರುವುದು ಅವನಿಗೆ ಇಷ್ಟವಾಗಿರಲ್ಲವಾದರೂ ಅದಕ್ಕಿಂದ ಹೆಚ್ಚಾಗ್ಯ ತೆಲುಗದಾಗುವಂತೆದ್ದರೆ ಅದಕ್ಕೆಳೆ ಬರುವಂತೆದೊಡ ಒಮ್ಮೆ ನಿಶ್ಚಯಿಸಿತು. 'ಅವಳ ಚಾರಿತ್ರ್ಯವನ್ನು ತೆರೆದುತೆಂದು ಮಾಡಿಸುವುದೇನು? ಮುಂಬ್ಯ ಛತ್ರದ ತೆಲಸ ಸಕಾಗದೆ ಕೀಳಿತು. ಬೇಕಾದರೆ ಅವಮಾತನ್ನು ಕುಬೇರಪ್ಪನವರಿಗೆ ತಿಳಿಸಿ ಅವರಿಂದಲೇ ಅವಳನ್ನು ಹಡೆದುಕೊಳ್ಳಬಹುದು... ಇಂತೆಯ ನಿರ್ಧಾರದಿಂದ ಅವನ ಮನಸ್ಸು ಲಘುವಾಯಿತು! ಅವರು ಎಲ್ಲವನ್ನೂ ತನಗೆ ಒಪ್ಪಿಸಿ ಬಿಟ್ಟುದರಿಂದ ತಿಂಗಳಿಂದ ತನ್ನ ಮಾತನ್ನು ಕೆಡುವಷ್ಟು ಧೈರ್ಯ ಮಾಡಲಾರಳೆಂದು ಹೇಳಿಯೇ?....ಅವಳು ಬಂದರೆ ಅನರ್ಥವಾಗುವುದೆಂದೇ ನಾನೇಳಿ ತಿಳಿಗುಳಿಸಿಕೊಳ್ಳಬೇಕು! ಸೀಲಾಗಿ ಅವಳು ಇಲ್ಲಿ ಕೆಲಸಕ್ಕೆಂದು ಬರುವುದಿಲ್ಲ. ನನಗೆ ಬೇಕಾದವರೆ ಅವಳನ್ನು ನಾಶಮಾಡಿ ಬಿಡುತ್ತಾರೆಂದು. ಅದರೆ ಅವಳು ಬರುವುದು ಕೀಳ್ತ...ಅವಳು ಭಕ್ಷದಲ್ಲಿ ನಂಬಿಕೆ ಪುರೋ ಸರಿಯಲ್ಲ. ಅವಳು ಗಂಡುಮಗಾತಿಕ್ಕೆ' ಸೀಗೆ ಮಾಂಸ ಮಾಡುವುದಕ್ಕೆ ಹೆಣಿಯಾಗುವಳೆ ನಾವುಗಳಿಗೆ ನಟ್ಟಿಯಾದರೂ ಹೋಗಿ ಬರಬೇಕು? ಹೆಣ್ಣೆ ಕಡುಪಾಪಿಯೆಂಬ ಪರಿಸ್ಥಿತಿಯನ್ನು ಸೃಷ್ಟಿಸಿದ ಜೀವಿಯಾಗಿದ್ದಲ್ಲಿ ನಿಸರ್ಗವ್ಯಾಪಾರವು ಅರುಂಧತೀ ನಕ್ಷತ್ರವನ್ನು ಕಾಣಲಾರದೆ ಶಪಿಸುವಂತಿರುವುದು. ಶಾಮೂ ತಲೆಯೆತ್ತಿ ಗಗನವನ್ನು ನೋಡಿದ. ಅಲ್ಲಿ ಅರುಂಧತೀ ನಕ್ಷತ್ರವು ಕಾಣಲಿಲ್ಲ. ಅದರ ಬದಲು ಅಲ್ಲಿ ಮೂಡಿದ್ದ ಚಂದ್ರನ ಬೆಳಕಿನಲ್ಲಿ ಅವನ ಮನಸ್ಸಿನ ಕಲ್ಪನೆಯಲ್ಲಿ ಮೂಡಿದ್ದ ಅಯಳ ಮುಖವು ಕಾಣಿಸಿತು. ಅವಳ ಮುಖದಲ್ಲಿ ಮಂದಹಾಸವು ಮಿನುಗುತ್ತಿತ್ತು. ಅವಳ ಕಣ್ಣುಗಳು ಅವನನ್ನೇ ನೋಡುತ್ತಿದ್ದವು. 'ನಾನು ದುಡುಕಿದೆ ಪದು ಇಬ್ಬರಿಗಾಗಿ. ಇವನಿಗೆ ತಿಳಿಯಾ ನಿಮ್ಮ ನಿನಗೆ!...' ಮುತ್ತಿ ಅವು ಕಣ್ಣಿಟ್ಟು ನಿಂತು ಮಾಯವಾಯಿತು. 'ಛೇ, ನಾನೇಕೆ ಇಷ್ಟು ಅಧೈರ್ಯವಾಗಿದ್ದೆ!' ಎನ್ನುತ್ತ ಮುತ್ತಿ ಕೊಣಕಿ ಬಿಸಿಳಿಸಿ ಕೆಲಸಕ್ಕೆ ಹಾಜರಿಯಾಗಿ ಮೇಲಾಗಿ ಮಲಗಿದನು. ಬಾಗಿಲಿನ

ಬೆಂಗಳೂರಿನ ಬಾಲಕಿಯರ ಮಾಧ್ಯಮಿಕ ಶಾಲೆಯ ಆರೋಗ್ಯವನ್ನು ಬಿಂಬಿಸುವ ಕೆಲಸವನ್ನು ಮಾಡುತ್ತಿದೆ.

ಗಳು ಕೋಣೆಯನ್ನೆಲ್ಲ ತಂಪುಮಾಡಿದ್ದರೂ ಇವನ ಮಟ್ಟಿಗೆ ಅದು 'ಕೋವೆ'ಯಾಗಿದ್ದಿತು. ದಣಿದ ಮನಸ್ಸು, ಕಣ್ಣುರೆಪ್ಪೆಗಳನ್ನು ಮುಚ್ಚಿತೋ, ಜಂದಿರನ ತಂಪು ಹಾಗೆ ಮಾಡಿತೋ ಸಾವರಿಯೆವು. ಶಾಮೂ ನಿದ್ರಾವಶನಾದ.

ಕೋಣೆಯ ಬಾಗಿಲು ಕಿರ್ರೆಂದಿತು. ಆ ಸಪ್ಪಳದಿಂದ ನಿದ್ರಾಭಂಗವಾಗಿ ಶಾಮೂ ಚಟಕ್ಕನೆ ಎದ್ದು ಕುಳಿತ. ಬಾಗಿಲು ಮತ್ತೆ ಕಿರ್ರೆಂದಿತು. ಅರೆತೆರೆದ ಬಾಗಿಲ ಹೊರಬದಿಯಲ್ಲಿ ಬೆಳುದಿಂಗಳ ಬೆಳಕು ಬಾಗಿಲಲ್ಲಿ ನಿಂತ ವ್ಯಕ್ತಿಯನ್ನು ಬೆಳಗಿತು.

"ರಾಮಣ್ಣೋರೆ!"

"ಯಾರು?"

"ನಾನು, ನನ್ನೊಡೆಯಾ ನಿಂಬಿ!"

"ಯಾರು?"

"ತೋಟದ ನಿಂಬಿ ರಾಮಣ್ಣೋರೆ!"

ನಿಂಬಿಯ ಹೆಸರನ್ನು ಕೇಳಿ ಶಾಮೂನ ಮೈ ಜುಮ್ಮೆಂದಿತು. ಆವನು ತನ್ನನ್ನೇ ಸಂಬದಾದ. ಅವನ ಮನಸ್ಸಿನ ಸ್ಥೈರ್ಯವು ಕಳಚಿತು. ಉಗುಳು ನುಂಗುತ್ತ ನುಡಿದ: "ಸರಿ ರಾತ್ರಿಯಲ್ಲಿ ನನ್ನಲ್ಲೇನು ಕೆಲಸ ನಿಂಬಿ? ಹೀಗೆಲ್ಲಾ ನೀನು ಬರಬಾರದು."

"ಹಸಿವೆ, ನನ್ನೊಡೆಯಾ?"

"ಹಾಗಾದರೆ?"

"ನೀನು ಮನಸ್ಸು ಮಾಡಿದರೆ ನನ್ನ ಹೊಟ್ಟೆ ತುಂಬೀತು!"

"ನಿನ್ನಂತಹ ಹೆಣ್ಣಿಗೆ ಅನ್ಯಾನ್ನ ಗತಿಯೇ?"

ನಿಂಬಿ ನಿಂತಲ್ಲಿಯೇ ಅಳತೊಡಗಿದಳು. ಅವಳ ಕಣ್ಣೀರು ಕೋಡಿಯಾಗಿ ಹರಿಯಿತು. ಬೆಳುದಿಂಗಳ ಬೆಳಕಿನಲ್ಲಿ ಆ ಹನಿಮುತ್ತುಗಳು ನಿಂಬಿಯ ಮುಖಕಮಲದ ಮೇಲೆ ಕುಳಿತ ಮಂಜಿನ ಹನಿಯಂತೆ ಶೋಭಿಸಿದುವು. ಶಾಮೂನ ಹೊಟ್ಟೆಯಲ್ಲಿ ಕಸಿವಿಸಿಯಾಯಿತು. ಅಲ್ಲಿ ನಿಂತ ನಿಂಬಿ ಅವನ ಪರಿಚಯದ ನಿಂಬಿಯಾಗಿರದೆ ಬರಗಾಲ ಭೀಕರತೆಗೆ ತುತ್ತಾದ ಸಂತ್ರಸ್ತ ಸಾಧು ನಿಂಬಿಯಾಗಿ ಹೊಳೆದಳು. ಆವನ ಮನಸ್ಸು ಅದಾವುದೋ ನಿರ್ಣಯ ಮಾಡಲು ಹೆಣಗುತ್ತಿರುವಂತೆ ತೋರಿತು. ಆವನು ಒಂದೇ ಸವನೆ ನಿಂಬಿಯ ಮುಖವನ್ನು ಕೆಕ್ಕರಿಸಿ ನೋಡ ತೊಡಗಿದ.

"ಮೂರು ದಿನಗಳಿಂದ ಅಗುಳಿನ ವಾಸನೆ ಕೂಡ ಇಲ್ಲ ನನ್ನೊಡೆಯಾ? ಹಸಿದು ಕಂಗಾಲಾಗಿದ್ದೇನೆ!"

"ನಿಮ್ಮವರೆಲ್ಲ....?"

"...ಕೈಬಿಟ್ಟು....."

"ಹೋದರಲ್ಲವೇ?"

ಶಾಮೂನ ಕರುಳು ಕಿವಿಚಿದಂತಾಯಿತು.

"ನಿಂಬೀ!"

"ಶಾಮಣ್ಣೋರೆ,"

"....."

ಕೋಣೆಯ ಬಾಗಿಲು ಧಡಾರೆಂಬ ಸಪ್ಪಳದೊಂದಿಗೆ ಮುಚ್ಚಿತು. ಒಳಚಿಲಕದ ಸಪ್ಪಳು ಬೆಳುದಿಂಗಳಿರುಳನ್ನೇ ಭೇದಿಸಿತು. ಹೊರಬಾಗಿಲಲ್ಲಿ ಛತ್ರದ ನಾಯಿ ಬೊಗಳಹತ್ತಿತು. ಅದಕ್ಕುತ್ತರವಾಗಿ ದೂರದ ಶ್ಮಾನವೊಂದು ಒಂದೆಸವನೆ ಬೊಗಳ ತೊಡಗಿತು.

೩

ತೋಟದ ನಿಂಬಿಯ ಅಧಿಕಾರದಲ್ಲಿ ಛತ್ರದ ಬಣ್ಣವೇ ಬದಲಾಯಿತು. ಕೂಲಿಯ ಆಳಾಗಿ ಬಂದ ನಿಂಬಿ ಧರ್ಮಛತ್ರದ ಸೂತ್ರಗಳನ್ನೆಲ್ಲ ಸೆಳೆದುಕೊಂಡಳು. ಶಾಮೂನ ವಿಶಾಲ ಹೃದಯವನ್ನು ಕೊಂಡಾಡುವುದೇ ಇವಳ ಪಲ್ಲವಿಯಾಯಿತು. ಈ ಪಲ್ಲವಿಗೆ ಶ್ರುತಿ ಕೂಡಿಸಲು ಬಸಪ್ಪಸೆಟ್ಟಿ ಛತ್ರದಲ್ಲಿ ನಿಂತುಬಿಟ್ಟ. ಶಾಮೂನಿಗೆ ತಕ್ಕ ಸಲಹೆಗಳನ್ನು ಕೊಡಲು ತಾನಲ್ಲಿರುವುದು ಅನಿವಾರ್ಯವೆಂದು ಹೇಳತೊಡಗಿದ. ಅರುಣೋದಯದ ಮುನ್ನ ಏಳುವ ಅಭ್ಯಾಸವಿಟ್ಟುಕೊಂಡ ಶಾಮೂ, ಈಗ ಹೊತ್ತೇರಿದರೂ ಕೂಡ ಏಳುವ ಸಾಹಸವನ್ನು ಮಾಡಲಾರನು. ಎಲ್ಲ ಕೆಲಸದ ಹೊರೆ ನಿಂಬಿಯ ಮೇಲೆ. ಅವಳು ಛತ್ರವನ್ನೆಲ್ಲ ವ್ಯಾಪಿಸಿ ತನ್ನ ಅಧಿಕಾರವನ್ನು ಪ್ರಸ್ಥಾಪಿಸಿಯೇ ಬಿಟ್ಟಳು. ಇತ್ತೀಚೆಗೆ ಛತ್ರದ ಕೋಣೆಯಲ್ಲಿ ಬೆಳ್ಳಂಬೆಳತನಕ ಇಸ್ಪೀಟಿನ ಆಟ ಸುರುವಾಗಿ ಬಿಟ್ಟಿತು. ಆ ಧರ್ಮಛತ್ರ ವಿಲಾಸಿಗಳ ಮಂದಿರವಾಯಿತು. ಅಲ್ಲಿ ನಿಂಬಿಯೇ ಆರಾಧ್ಯ ದೇವತೆಯೆಂದು ಮತ್ತೆ ಹೇಳಬೇಕೆ? ಮೊದಲಿನ ಕೂಲಿಯಾಳುಗಳು ಮಾಯವಾಗಿ ಛತ್ರದ ಕೆಲಸಕ್ಕೆ ನಿಂಬಿಯ 'ಬಳಗ'ವೇ ನಿಂತಿತು. ಅವರಲ್ಲಿ ಆವಳ ಜಾತಿಯ ಅನೇಕ ವೈಯಾರಿಗಳು ಹೆಚ್ಚಿನ ಅಧಿಕಾರ ಪಡೆದು ಕಾರ್ಯ ನಿರ್ವಹಣ ಮಾಡಹತ್ತಿದುದು ವಿಶೇಷ. ಇದೆಲ್ಲ ಮಾರ್ಪಾಡು ಶಾಮೂನ ಅನುಮತಿಯಿಂದಲೇ ಆಗಿದ್ದರೂ, ಅದರಲ್ಲಿ ನಿಂಬಿಯ ಕೈವಾಡವೇ ಬಹಳವಾಗಿದುತ್ತಿತ್ತು. ಆ ಹೊತ್ತು ಸಂಜೆ ನಿಂಬಿ ತಾಂಬೂಲರಂಜಿತ ಬಾಯಿಯನ್ನು ಇಷ್ಟಗಲ ಮಾಡಿ ಶಾಮೂನ ಕೋಣೆಯಲ್ಲಿ ವೈಯಾರದ ವೈಖರಿಯಲ್ಲಿ ಹೆಜ್ಜೆಗಳನ್ನಿಡುತ್ತ ಹೋಗಿ:

"ಅಲ್ಲ, ಶಾಮಣ್ಣೋರೆ. ಈ ದರಿದ್ರರನ್ನು ಬರಗಾಲದಲ್ಲಿ ಈ ರೀತಿ ತಿನ್ನಿಸಿ ಕುಸ್ತಿಯ ಕಣಕ್ಕೆ ಕಳಿಸಬೇಕಾಗಿದೆಯೆ? ತಿವಮ್ಮನ ಛತ್ರದಲ್ಲಿ ಎರಡೂ ಹೊತ್ತು ಅಂಬಲಿಕೊಡುತ್ತಿರುವಾಗ, ನಮ್ಮ ಛತ್ರದಲ್ಲಿ ರೊಟ್ಟಿ ಕೊಡುವದ್ಯಾಕೆ?" ಎಂದು ಕೇಳಿದಳು.

"ಇದನ್ನೇನು ಕೇಳುವೆ ನಿಂಬಿ? ಯಜಮಾನರು ಧಾನ್ಯ ಪೂರಯಿಸುವಾಗ ನಮ್ಮನ್ನೇನು ಹೋಗುವುದು? ಪಾಪ, ತಿನ್ನಲಿ ದರಿದ್ರರು!"

"ಬರುಬರುತ್ತ ಆವರು ನಮ್ಮ ಜೀವವನ್ನೇ ತಿಂದಾರು ನನ್ನೊಡೆಯಾ? ಒಪ್ಪತ್ತಾದರೂ ಅಂಬಲಿ ಕೊಟ್ಟರೆ...."

"ದಿನಾಲು ಒಂದು ಚೀಲ ಜೋಳ ಉಳಿಯುವುದು" ಸೆಟ್ಟಿ ೀಳಿದ.

ನಿಂಬಿ ಅಡಿಕೆ ಎಲೆ ಮಡಿಚಿ ಶಾಮೂನ ಬಾಯಿಗಿಡುತ್ತ,

"ಸೆಟ್ಟರ ಮಾತು ಕೇಳಿದಿರಾ ಶಾಮಣ್ಣೋರೆ?"

"ಯಾರ ಕಾಳು ಯಾರು ಉಳಿಸಿಕೊಳ್ಳಬೇಕು!....ಸೆಟ್ಟಿ?" ಾಮೂ ಕೆರಳಿದ.

"ಛತ್ರದ ಕಾಳು, ಶಾಮಣ್ಣೋರು....."

"ಛೆ! ಅದೆಂದಿಗೂ ಆಗದು.... ಕುಬೇರಪ್ಪನವರು ಇಷ್ಟು ವ್ಯಗವಾದಿವಾಗ ನಾನು ಅವರಿಗೆ ಕೊಟ್ಟ ವಚನವನ್ನು ಈ ೀತಿ ಉಪಯೋಗಿಸಿಕೊಳ್ಳುವುದೇ?"

"ಬೇಡ, ಶಾಮಣ್ಣೋರೆ, ಬೇಡ! ನಮ್ಮ ಹಿತದ ಮಾತು ಮಗೆ ಆಗದಿದ್ದರೆ ಬೇಡ..." ಎನ್ನುತ್ತ ನಿಂಬಿ ಶಾಪಣ್ಣನ ಂಬಿಗೆ ಒರಗಿ ಕುಳಿತಳು. ಛತ್ರದಲ್ಲಿ ಹೊಸದಾಗಿ ತಂದಿಟ್ಟ ಸ್ಟೋನೋಗ್ರಾಫ್' ಕಿರಿಚಹತ್ತಿತು. ನಿಂಬಿ ಆ ಪಾಡಿಗೆ ತಾಳ ಾಕಿ ತಾನೂ ಕೆಳದನಿಯಲ್ಲಿ ಹಾಡಹತ್ತಿದಳು. ಶಾಮೂ ೂಕನಾಗಿ ಕೇಳುತ್ತಿದ್ದ. ಅವನ ಹೃದಯದಲ್ಲಿ ಅದಾವ ಪ್ಲವ ನಡೆದಿದ್ದಿತೊ?

ಮೊದಮೊದಲು ಒಪ್ಪತ್ತು ಮಾಯವಾದ ರೊಟ್ಟಿಗಳು ಈಗ ರಡೂಹೊತ್ತು ಮಾಯವಾದುವು. ಜೋಳದ ಅಂಬಲಿಯಲ್ಲಿ ೀರು ಹೆಚ್ಚೋ ಹಿಟ್ಟು ಹೆಚ್ಚೋ ಎಂದು ಹೇಳುವುದು ಕೂಡ ಸ್ಟವಾಯಿತು. ಯಾಕೆಂದರೆ ಅದರಲ್ಲಿ ಹಿಟ್ಟಿನ ಭಾಗ ಬಹಳ ಾಸು. ನೀರಿಗೂ ತಿಳುವಾದ ಅಂಬಲಿ ಕುಡಿದು ದರಿದ್ರರೆಲ್ಲ ಂಗಾಲಾದರು. ಆದರೂ ಪ್ರಾರಬ್ಧಕರ್ಮವೆಂದ ಮೇಲೆ ೋಗಿಸಲೇ ಬೇಕೆಂದು ಪಾಪ! ಅವರು ತುಟಿ ಬಿಚ್ಚದಾದರು. ಾಮೂ ಇದನ್ನೆಲ್ಲ ನೋಡುತ್ತಿದ್ದ. ಅನಿಸಿಗೆಲ್ಲವೂ ತಿಳಿಯು. ತ್ತು; ಆದರೆ ಅದಾವುದೋ ಕಾರಣದಕ್ಕೆಯು ತನ್ನನ್ನು ಸಿಲ್ಲಿಗೋ ಜಗ್ಗುತ್ತಿರುವುದನ್ನು ಅವನು ಎದುರಿಸದಾದ. ಅವನ ದಯವು ಈ ಎಲ್ಲ ದೃಶ್ಯಗಳನ್ನು ಕಂಡು ಕರಗುತ್ತಿದ್ದರೂ ಕೆಂದೇ ಅದನ್ನು ಕಲ್ಲು ಮಾಡುವ ಸಂದರ್ಭಗಳು ಆಗಾಗ ತೊಡಗಿದುವು. ತನ್ನನ್ನು ಪೂಜ್ಯಭಾವದಿಂದ ಕಾಣುವ ತ್ರಸ್ತರು ಆದಾವುದೋ ಸಂಶಯದ ಬಿರುನೋಟದಿಂದ ೀಡುತ್ತಿರುವ ಅರಿವು ಅವನಿಗಾಗುತ್ತಿದ್ದರೂ, ಆ ನೋಟವನ್ನು ಪ್ರತಿಭಟಿಸಿ ತನ್ನ ಸಾಮರ್ಥ್ಯವನ್ನು ತೋರಿಸುವುದು ತನ್ನ ೈಯಿಂದ ಕಳಚಿ ಬಹುದೂರ ಸಿಡಿದುಹೋಗಿರುವುದೆಂಬುದನ್ನು ನವರಿಕೆಮಾಡಿಕೊಂಡು ಸುಮ್ಮನಾಗುತ್ತಿದ್ದ. ಮೊದಲು ಂತ್ರಸ್ತರ ಪಜ್ಞ್ಞೆಯಲ್ಲಿ ಆಡ್ಡಾಡಿ ಆನಂದಹೊಂದುತ್ತಿದ್ದ ಾಮೂ ಈಗ ಆ ರೀತಿ ಮಾಡುವ ಎದೆಗಾರಿಕೆಯನ್ನು ಕಳೆದು ೂಂಡ. ಧರ್ಮಛತ್ರದ ಧರ್ಮನಾಡಿ ಕಳಚಿಬಿದ್ದಿರುವುದನ್ನು ಾರ್ಣರೆ ಕಂಡರೂ, ಆ ಧರ್ಮನಾಡಿಯಲ್ಲಿ ಶುದ್ಧರಕ್ತ ಹರಿದಾ ವಂತೆ ಮಾಡುವುದು ತನ್ನಿಂದ ಸಾಧ್ಯವೆಂದು ಕಂಡಾಗ ಕರುಳುಕಿವಿಚಿಕೊಂಡು ಸುಮ್ಮನಿರುತ್ತಿದ್ದ. ಇಂದು ನಿಂಬಿ ಧರ್ಮಾಧಿಕಾರಿ. ಬಸಪ್ಪಸೆಟ್ಟಿ ಸೂತ್ರಚಾಲಕ. ತಾನು ಅವರಿಬ್ಬರ ೈಗೊಂಬೆ ಎಂಬುದನ್ನು ಸ್ಪಷ್ಟವಾಗಿ ಅರಿತ. ಛತ್ರದಲ್ಲಿ ಉಳಿತಾಯವಾಗುವ ಜೋಳದಲ್ಲಿ ತನ್ನ ಪಾಲಿಗೆ ಬರುವ ಪ್ರತಿ ಏನದ ಮೂವತ್ತು ರೂಪಾಯಿಗಳು ಅವನನ್ನು ಕೆಕ್ಕರಿಸಿ ನೋಡಿ ಕೇಕೆಹಾಕುವಂತೆ ಕಾಣಹೊಡಗಿದುವು. ತಾನಿದಾವುದೋ ಪಾಪ-ಮಾರ್ಗದಲ್ಲಿ ಕಾಲಿಟ್ಟು ಸಿಕ್ಕಿ ಬಿದ್ದಿರುವೆನೆಂದೂ, ಆ ಮಹಾ-ಪ್ರವಾಹದ ಹುಚ್ಚು ಹೊಳೆಯು ಪ್ರಚಂಡ ತೆರೆಗಳ ಹೊಡೆತದಿಂದ ಮರಳಿ ಬರುವುದು ದುಸ್ಸಾಧ್ಯವೆಂದೂ ತಿಳಿದುಕೊಂಡು, ತೆರೆಗಳು ಒಯ್ದುತ್ತ ದೇಹವನ್ನು ನೂಕುವುದೇ ತನ್ನ ಪಣೆಯಬರೆಹವೆಂದೂ ಭಾವಿಸಿದ. ಪಾಪದ ಕೆಸರಿನಲ್ಲಿ ಸಿಕ್ಕಿಬಿದ್ದು ಪುಣ್ಯದ ತಿಳಿನೀರಿಗೆ ಬಾಯೊಡ್ಡುವುದು ಮೃಗಜಲದ ಬೆನ್ನಟ್ಟಿದಂತೆ ಎಂದು ಕಲ್ಪಿಸಿದ. ಛತ್ರದಲ್ಲಿ ನಡೆಯುತ್ತಿರುವ ಸಂಗತಿಗಳೆಲ್ಲ ತನ್ನ ಮನಸ್ಸಿನ ವಿರುದ್ಧವಾಗಿಯೆ ಸಾಗುತ್ತಿರುವುದನ್ನು ಕಂಡು ಕಕ್ಕಾಬಿಕ್ಕಿ-ಯಾದ. ಶಾಮೂನ ತಲೆಯ ತೂಕವು ತಪ್ಪಹತ್ತಿತು. ಕಂಡವರ ಮೇಲೆ ಹರಿಹಾಯುವುದು ಅವನ ಸ್ವಭಾವವಾಗಿಬಿಟ್ಟಿತು. ಆದಾವುದೋ ನಿರ್ಧಾರಕ್ಕೆ ಬಂದು ಅದನ್ನು ನಿಂಬಿಯ ಎದುರು ಹೇಳಬೇಕೆಂದಾಗ, ಅವನ ಧೈರ್ಯವೇ ಕುಸಿಬೀಳುತ್ತಿತ್ತು. ಅಷ್ಟು ಆಳವಾಗಿ ಭೇದಿಸಿದ್ದಳು ನಿಂಬಿ. ನಿಂಬಿಯು ಸವಿಮಾತಿನ ಸುಳಿಯಲ್ಲಿ ಸಿಕ್ಕ ಶಾಮೂ ಇಂದು ಮೇಣದಗೊಂಬೆ. ಅವನ ಅಂತರಂಗದ ಆದರ್ಶದ ಪವಿತ್ರ ಗೋಡೆಯು ನಿಂಬಿಯ ಸಹವಾಸದಿಂದ ಕುಪ್ಪರಿಸಿಬಿಟ್ಟಿತು. ಅವನ ಹೃದಯದ ತಾಂಡವವು ಮೆಲ್ಲಮೆಲ್ಲನೆ ಸ್ತಿಮಿತಕ್ಕೆ ಬಂದು, ಮೊದಲಿನ ವಿಪ್ಲವವು ಕೂಡ ಮಾಯವಾಗಿ, ತಾನು ನಡೆದದ್ದೇ ದಾರಿ ಎನ್ನುವಮಟ್ಟಿಗೆ ಬಂತು. ಶಾಮೂ ತನ್ನ ಹಿಂದಿನ ಜೀವನವನ್ನು ೀಕೆಂದೇ ಮರೆಯತೊಡಗಿದ. ಹಿಂದಿನ ನೆನಹು ತನ್ನ ದೇಹ-ವನ್ನೇ ಸುಡುವುದೆಂದು ಅವನು ತಿಳಿದಿರಬೇಕು. ಆದುದರಿಂದ 'ಆ ಸುಖದ ಮನೆ'ಗೆ ಚೆನ್ನುಬಿದ್ದ.

೪

ದಾರಿದ್ರ್ಯದೇವತೆಯ ಅನೇಕ ರೂಪಗಳು ಮೈದಾಳಿನಿಂತಂತೆ ಸಾವಿರಾರು ಹಸಿದು ಕಂಗಾಲಾದ ಬಡದೇಹಗಳು ಕೈಯಲ್ಲಿ ತಾಬಂಡೆಯನ್ನು ಹಿಡಿದುಕೊಂಡು 'ಅಂಬಲಿ'ಗಾಗಿ ದಾರಿ-ಕಾಯುತ್ತ ಕುಳಿತಿವೆ. ಯಾವ ದೇವತೆಯ ಶಾಪವೋ ಈ ಜಿಲ್ಲೆಗೆ ಬರಗಾಲ ತಪ್ಪಿದ್ದಲ್ಲವೆಂದು ತೋರಿಸುವ ದಾರಿದ್ರ್ಯ-ಕೇತನಗಳಂತಿರುವ ಬರಿದಾದ ತಾಬಂಡೆಗಳು ಹಸಿದವರ ೈತಾಳದಂತೆ ದನಿಮಾಡುತ್ತವೆ. ಅಂಬಲಿಯ ಅಮೃತಪಾನ-ದಿಂದ ಜೀವಧಾರಣಮಾಡುವವರ ಸಂಖ್ಯೆಯು ದಿನದಿನವೂ ಮಾರತೊಡಗಿದೆ. ಈ ಧರ್ಮಛತ್ರವೂ ಅದಕ್ಕೆ ಅಪವಾದವಲ್ಲ. ಅಂಬಲಿಯ ಸೇವನವು ಅನಿವಾರ್ಯತೆಯ ಕಿಚ್ಚಿನಿಂದೆಂಬಂತೆ ಅವರ ಮುಖದಲ್ಲಿ ಉಗ್ರತೆಯು ಭಯಾನಕವಾಗಿದ್ದರೂ ಅದರಲ್ಲಿ

ಅಸಹಾಯಕತೆ ಸ್ಪಷ್ಟವಾಗಿ ಮೂಡಿದೆ. ನಿಂಬಿಯ ಅಧಿಕಾರದಲ್ಲಿ ಅವರಿಗೆ ರೊಟ್ಟಿತಪ್ಪಿದುದರ ರೊಚ್ಚು ಅನೇಕ ಕಂಗಾಲರಲ್ಲಿ ಕಿಡಿಎಬ್ಬಿಸಿದರೂ ಅವರ ದೂರನ್ನು ಯಾರು ಕೇಳಬೇಕು? ಶಾಮೂ—ಮೊದಲಿನ "ಭಾಳ ಧಪರ್ಸುದೋರು" ಆದ ಶಾಮೂ ಆಗಿರಲಿಲ್ಲ.

ಅಂಬಲಿಯ ಅಭಿಷೇಕಕ್ಕೆ ವ್ಯಾರಂಭವಾಯಿತು. ಆ ಹೊತ್ತು ಅದೇಕೋ ಶಾಮೂ ಪಜ್ಜಿಯ ಮೇಲ್ವಿಚಾರಣೆಮಾಡಲು ಸ್ವತಃ ನಿಂತಿದ್ದ. ಒಂದೊಂದೇ ಸಾಲನ್ನು ದಾಟುತ್ತ ಗಂಭೀರವಾಗಿ ಹೆಜ್ಜೆಹಾಕುತ್ತ, ಸಂಭ್ರಮದ ಸಮಾರಂಭ ಮಾಡಿಸಿದ ಮದುವೆಯ ಯಜಮಾನನಂತೆ ಸಾಗಿದ್ದ. ಆ ಸಾಲಿನ ತುದಿಯಲ್ಲಿ ದಾರಿದ್ರ್ಯ-ಹತ ಮುದುವನೊಬ್ಬನು ಕೂಗಿದ: "ಬುದ್ಧೀ!"

ಶಾಮೂ ಕಣ್ಣರಳಿಸಿ ಮದುಕನನ್ನು ಕೆಕ್ಕರಿಸಿ ನೋಡಿದ.

"ಅಲ್ಲಾ ಬುದ್ಧಿ! ವಾರಕ್ಕ ಒಂದಿಸಾ ಆದರೂ ರೊಟ್ಟೀ ತುಣುಕು ಕಾಣಸಾಕಿಲ್ವೇ? ಈ ಅಂಬಲೀ ನೀರು ಕುಡಿದು.."

"ಎಲೇ ಮುದುಕಾ, ಛತ್ರವೆಂದರೆ ಮದುವೆಯ ಮನೆ ಎಂದು ತಿಳಿದೀಯಾ! ಈ ಹೊತ್ತು ರೊಟ್ಟಿ ಬೇಕಾದ ಬಾಯಿಗೆ ನಾಳೆ ಹೋಳಿಗೆ ಬೇಡವಾದೀತೆ! ಬಿಟ್ಟಿ ಕೂಳು ತಿಂದ ನಾಲಿಗೆ ಬಹಳ ಚುರುಕು ಆದಂತೆ ಕಾಣುತ್ತದೆ? ಯಾರಪ್ಪನ ಮನೆಯಗಂಟು.."

ಬಸಪ್ಪ ರೇಗಿ ನುಡಿದು ಮಾತಿನ ಕೊನೆಯೊಡನೆ ಶಾಮೂನ ಹೆಗಲ ಮೇಲೆ ಕೈಹಾಕಿ ಕಿಲಕಿಲನೆ ನಕ್ಕ; ಶಾಮೂ ತತ್ತರಿಸಿದ.

"ನಮ್ಮಪ್ಪ ಕುಬೇರಪ್ಪನವರು.." ಮುದುಕ ಮುಂದುವರಿಸುವುದರಲ್ಲಿದ್ದ. ಆ ಹೊತ್ತಿಗೆ ಅವನ ತಟ್ಟೆಯಲ್ಲಿ ಅಂಬಲಿಯೂ ತುಂಬಿತು. ಬಸಪ್ಪ ಕಿಡಿಕಿಡಿಯಾದ "ಅಂಬಲಿ ಕುಡಿದ ಸೊಕ್ಕೆ?" ಎಂದು ಗದ್ದರಿಸಿದ. ಮುದುಕ ಸುಮ್ಮನಾಗಲಿಲ್ಲ.

"ಸೊಕ್ಕೆಲ್ಲಿಂದ ಬಂದೀತು ಸೆಟ್ಟರೆ! ನಿಂಬಿವ್ವನೋರ ನಂಜ ಕುಡಿದು ಛತ್ರೆಲ್ಲಾ...." "ಮುದುಕಾ!" ಸೆಟ್ಟಿ ಗದ್ದರಿಸಿದ.

ಶಾಮೂ ಯಾವ ವಿಚಾರದಲ್ಲಿದ್ದನೋ, ಅವನ ಹೃದಯಕ್ಕೆ ಯಾವ ಬರೆ ತಟ್ಟಿತೊ, ಒಮ್ಮೆಲೆ ಮುದುಕನ ಅಂಬಲಿ ತುಂಬಿದ ತಟ್ಟೆಯನ್ನು ಝಾಡಿಸಿ ಒದೆದ. "ಹಾ! ಹಾ! ಶಾಮಣ್ಣೋರೆ" ಎಂಬ ಧ್ವನಿ ಸಾವಿರ ಬಾಯಿಗಳಿಂದ ಬಂದಿತು. ತಟ್ಟೆ ಸಿಡಿದ ಮುದುಕನ ಮೊಮ್ಮಗನ ತಲೆಗೆ ಒಳಿತಾಗಿ ಗಾಯ ಮಾಡಿತು. ನೆಲದ ಮೇಲೆ ಸೋರಾಡಿದ ಅಂಬಲಿಯಲ್ಲಿ ಹುಡುಗನ ತಲೆಯ ರಕ್ತ ಕೂಡಿಕೊಂಡಿತು. ಹುಡುಗ ಕಿಟ್ಟನೆ ಕಿರಿಚಿ ಬಿದ್ದು ಬಿಟ್ಟ. ಮುದುಕ ಟಣ್ಣನೆ ಹಾರಿ ಮೊಮ್ಮಗನನ್ನು ತೊಡೆಯ ಮೇಲೆ ಹಾಕಿಕೊಂಡ.

ಶಾಮೂ ಇದೆಲ್ಲ ಅನರ್ಥವನ್ನೂ ನೋಡಿದ. ಅವನ ಮೈಯೆಲ್ಲ ಗದಗುಟ್ಟಿ ನಡುಗುತ್ತಿದ್ದಿತು. ಮುಖವು ಕೆಂಪಗಾಗಿ ಕಣ್ಣುಗಳು ರಕ್ತಮಯವಾಗಿದ್ದುವು. ಹಣೆಯ ಮೇಲೆ ಬೆವರು ಸುರಿಯಹತ್ತಿತು. ಅದನ್ನು ಒರಸಿಕೊಳ್ಳಲು ಕೈ ನೇವರಿಸಿದಾಗ ಹುಡುಗನ ಸಿಡಿದ ರಕ್ತ ಕೈತುಂಬ ಮೆತ್ತಿತು. ಶಾಮೂ ಧೃಡಿಷ್ಟನಾದಂತಾದ. ಅಲ್ಲಿ ನಿಂತರೆ ತಾನು ಬಿದ್ದು ಬಿಡುವನೆಂಬ ಸಂಶಯವಾಯಿತೇನೋ ಸರ್ರನೆ ನಡೆದುಬಿಟ್ಟ. ಅವನ ಬೆನ್ನ ಹಿಂದೆ "ಅಯ್ಯೋ! ಅಯ್ಯೋ!" ಎಂಬ ಧ್ವನಿ ಕೇಸರಿಟ್ಟಿತು.

ಅಂದು ಸಾವಿರ ದರಿದ್ರ ಕೈಗಳು ಆ ಹುಡುಗನಿಗೆ ಮಣ್ಣು ಕೊಟ್ಟುವು. ಸಾವಿರ ಹೊಟ್ಟೆಗಳು ಆಹೊತ್ತು ಉಪವಾಸ ಬಿದ್ದುವು. ಛತ್ರದ ಅಂಬಲಿಯು ಹರವಿಗಳ ತುಂಬಿದ ಬಾಯನ್ನು ತೆರೆಯುವ ಪ್ರಸಂಗ ಆ ಹೊತ್ತು ಬರಲೇ ಇಲ್ಲ.


ದಿ ವಸಂತ ಇನ್ಶುರನ್ಸ್ ಕಂಪನಿ, ಲಿಮಿಟೆಡ್

ದಿವಾನ್ ಬಹಾದ್ದೂರ್ ಹೀರಾಲಾಲ್ ಕಾಜಿ: ಅಗ್ರಸ್ಥರು

ಸಹಕಾರಿ ಸಂಘದ ಸಭಾಸದರಿಗೆ ಹಪ್ತೆಯಲ್ಲಿ ೭½ ಮತ್ತು ೨½ ಟಕ್ಕೆ ಸೂಟ ಕೊಡಲಾಗುವುದು.

೧೯೪೫ರಲ್ಲಿ ಪೂರ್ಣ ಮಾಡಲಾದ ವಿಮೆ .... ೪೫,೫೦,೦೦೦
ಈ ವರೆಗಿನ ವಿಮೆ .... .... ೧,೦೦,೦೦,೦೦೦
} ಕ್ಕೆ ಮಿಕ್ಕಿದೆ.

ನಾವೀನ್ಯ ಪೂರ್ಣ ಮತ್ತು ಲೋಕಪ್ರಿಯ ವಿಮಾ ಯೋಜನೆಗಳು.

ಪ್ರಭು ಎಂಡ್ ಸನ್ಸ್
ಚೀಫ್ ಏಜಂಟ್
೨೬ — ಎ ಸರ್ ಫಿರೋಜಶಹಾ ಮೇಥ್ತಾ ರೋಡ್,
ಕೋಟೆ, ಮುಂಬಯಿ ೧

ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ ಧಾರಾಳ ವೇತನದ ಮೇಲೂ, ಯೋಗ್ಯ ಕಮಿಶನ್ನಿನ ಮೇಲೂ, ಆರ್ಗನಾಯಜರರೂ ಏಜಂಟರೂ ಬೇಕಾಗಿದ್ದಾರೆ. ಸುಶಿಕ್ಷಿತ-ಅನುಭವಿಕ ಸದ್‌ಗೃಹಸ್ಥರು ಮೇಲಿನ ವಿಳಾಸಕ್ಕೆ ಬರೆದುಕೊಳ್ಳುವುದು.



೫೫ವರ್ಷಗಳಿಂದ ಅನುಭವವಪಟ್ಟ

ಕರ್ಕ್ ಮತ್ತು ಕಂಪನಿಯ

ಜ್ವರದ ಗುಳಿಗೆ

ಬಾಟ್ಲಿಗೆ ೧-೮-೦

ಎಲ್ಲ ಜ್ವರಗಳ ಮೇಲೂ ಮಹೌಷಧ.

ವಿಳಾಸ:—

ಗಣೇಶ ರಾಮಚಂದ್ರ ಕರ್ಕ್ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

# 'ಕನ್ನಡ' ಎಂಬುದಕಿಂತ 'ಕಂನಾಡು' ಎನ್ನುವುದೇ ಲೇಸು.

( ಒಂದು ಚರ್ಚಾತ್ಮಕ ಲೇಖನ )

ಶ್ರೀ. ಶಂ. ಬಾ. ಜೋಶಿ, ಧಾರವಾಡ

★

**'ಕನ್ನಡ' ಎಂದರೆ ಭಾಷೆಯ ಹೆಸರೆಂಬ ನಂಬುಗೆಯು ಎಲ್ಲರಲ್ಲಿಯೂ ಮನೆ ಮಾಡಿಕೊಂಡಿದೆ; ದೇಶವೆಂಬ ಅದರ ಮೂಲಾರ್ಥವೇ ಮರೆತು ಹೋಗಿದೆ. 'ಕನ್ನಡ'ದ ಮೂಲರೂಪವು 'ಕಂನಾಡು' ಎಂದು ಸಿದ್ಧಪಡಿಸುವ ಹೊತ್ತು ಈಗ ಬಂದಿದೆ!**

★

ಅರಿವು ಮೂಸಿದಂತೆ ಮಾತಿನಲ್ಲಿ ತಪ್ಪು-ತಡೆಗಳು ಹೆಚ್ಚಾಗುತ್ತವೆ. ಅರ್ಥದಲ್ಲಿ ಕೊರತೆ, ತಬ್ಬರೂಪಗಳಲ್ಲಿ ವಿಕೃತಿ ಇದೆಲ್ಲವೂ ಆಡುವವರ ಅರಿವುಗೇಡಿತನದ ಕುರುಹು. ಆದುದರಿಂದ ನಾಡಿನ ಎಳ್ಗೆಯನ್ನು ಹಾರಯಿಸುವವರು ತಮ್ಮ ನಾಡ ನುಡಿಯು ಹದಗೆಡದಂತೆ ಎಚ್ಚರಾಗಿರುವುದು ಕರ್ತವ್ಯವಾಗಿದೆ.

ಪಂಪ-ರನ್ನರ ಕಾಲದ ನುಡಿಯು ಬೆಡಗು, ಅಂದಿನ ನಮ್ಮ ನಾಡಿನ ಹಿರಿಯ ಬೆಳಕಿನ ಸಾಕ್ಷಿಯಾಗಿದೆ. ಆದರೆ ಆ ಸುಮಾರಿನಿಂದಲೇ, ಏಳೆ ಅದಕ್ಕೂ ಮುಂಚಿನಿಂದಲೂ,ಸಂಸ್ಕೃತ-ಪ್ರಾಕೃತಗಳ ಮಿತಿಮೀರಿದ ಆಘಾತಕ್ಕೆ ಸಿಕ್ಕು ನಮ್ಮ ನುಡಿಯು ಗಾಸಿ-ಬೀಸಿಯಾಗುತ್ತ ನಡೆದುದನ್ನು ಮರೆಯಲಿಕ್ಕಾಗದು ಮುಂದು-ಮುಂದಿನ ಕಾಲದಲ್ಲಿ ಇನ್ನೂ ಕೆಲವು ಪರಭಾಷೆಗಳ ಸುಳಿಯಲ್ಲಿ ಸಿಕ್ಕು ಜನಗಳಲ್ಲಿ ತಮ್ಮತನದ ನೆನಹು ಶೂನ್ಯವಾಗುತ್ತ ಬಂದಿತು. ಪರಭಾಷೆಯ ಪದಗಳು ಮಾತಿನಲ್ಲಿ ಹೆಚ್ಚು ಹೆಚ್ಚಾಗಿ ನುಸುಳಿಕೊಂಡುವು. ಅವುಗಳ ಶುದ್ಧಲೇಖನಕ್ಕೆ ಇರುವ ಇಂಬು ನಮ್ಮ ನುಡಿಗೆ ಇಲ್ಲದಾಯಿತು. ನಮ್ಮ ನುಡಿಯ ಅಶುದ್ಧ ರೂಪಗಳೇ ಶುದ್ಧ, ಶುದ್ಧರೂಪಗಳು ಅಶುದ್ಧವೆನ್ನುವಷ್ಟರ ವರೆಗೂ ನಮ್ಮ ತಿಳಿವಳಿಕೆ ಬಂದಿತು.

ಯಾಕಾ, ಯಾನಾ, ಹಾಲಾ, ಮಸರಾ, ಭೆಕ್ಕಿ (ಬೆಂಕೆ), ಮುಂಡ್ರು (ಕುಳ್ಳಿರು) ಇಂತೀ ಬಗೆಯ ತೀರ ವಿಕೃತಿಯ ಕಾಲವೊಂದಾಯ್ತು. ಆದರೆ ನಮ್ಮಲ್ಲಿ ತಮ್ಮತನದ ಅರಿವು ಸ್ವಲ್ಪ ತಲೆದೋರಿದ ಬಳಿಕ ಆ ಬಗೆಯ ಮಾತಿನ ರೀತಿಗೆ ತಡೆಯುಂಟಾಯಿತು. ೧೯ನೆಯ ಶತಮಾನದ ಕೊನೆಯ ಭಾಗ, ೨೦ನೆಯ ಶತಕದ ಮೊದಲಿನ ಸುಮಾರಿಗೆ ಇದ್ದ ನಮ್ಮ ಗದ್ಯಶೈಲಿಯೇ ಇದಕ್ಕೆ ಉದಾಹರಣವಾಗಿದೆ. ಇಂದು ಮಾತಿನಲ್ಲಿ ಯಾಳೆ, ಕ್ಯಾಂಗ, ಮ್ಯಾಲೆ, ಕ್ವಾಣಿ, ಪ್ಯಾಟಿ, ಏತಿ, ಅಕ್ಕದ, ಆಗತದ, ಬ್ಯಾಳೆ ಎಂಬೀ ಬಗೆಯಾಗಿ ಮನೆಯಲ್ಲಿ ಮಾತನಾಡುತ್ತಿದ್ದರೂ ಬರೆವಣಿಗೆಯ ಶಿಷ್ಟಸಂಪ್ರದಾಯದ ಪುಟ್ಟವು ಇದಕ್ಕೂ ಮೇಲಾಗಿದೆ. ನಾಟಕ, ಕಾದಂಬರಿ ಮೊದಲಾದಕಡೆಯ ಸಂವಾದ ಲೇಖನದಲ್ಲಿ ಆ ಪಾತ್ರಕ್ಕನುಗುಣವಾದ ಭಾಷೆಯನ್ನು ಹಾಕುವುದು ಸ್ವಾಭಾವಿಕವಾದುದರಿಂದ, ಅಲ್ಲಿ ಮಾತ್ರ ಈ ಮಾತುಗಳನ್ನು ಕಾಣಬಹುದು. 'ನಾಳಿನ ಬರೆವಣಿಗೆ ಇಂದಿನ ಮಾತಿನಂತೆಯೆ ಆಗುವುದು; ಆದಕಾರಣ ಈಗಲೆ ನಾವು ಮಾತಾಡುವಂತೆಯೆ ಏಕೆ ಬರೆಯಬಾರದು?' ಎಂದು ಕೆಲವರ ವಿಚಾರ. ಮಾತಿಗೂ ಬರೆವಣಿಗೆಗೂ ಕೆಲವೊಂದು ಅಂತರವು ಯಾವಾಗಲೂ ಉಳಿದೇ ಉಳಿಯುವುದು. ಅದನ್ನು ಇಲ್ಲದಂತೆ ಮಾಡುವುದು ಸಾಧ್ಯವಿಲ್ಲ. ಈ ಅಂತರವು ಇಲ್ಲದ ಭಾಷೆಯೆ ಇಲ್ಲ ಆದುದರಿಂದ ಮಾತಿಗೂ ಬರೆಪಕ್ಕೂ ಅಂತರವೇ ಉಳಿಯಬಾರದೆಂದು ಭಾಷೆಯ ಮೇಲಿರುವ ವ್ಯಾಕರಣದ ಹಿತಕರವಾದ ಸಂರಕ್ಷಣೆಯನ್ನು ಬಂಧನವೆಂದು ಭಾವಿಸಿ, ಕಿತ್ತೊಗೆಯುವುದರಿಂದ ಲೇನಾಗಲಾರದು; ಭಾಷೆಯ ಶುದ್ಧಸ್ವರೂಪದ ವಿಷಯದಲ್ಲಿರುವ ಶಿಷ್ಟರ ಆಗ್ರಹವು ಇಷ್ಟವಾದುದೇ ಸರಿ.

'ಭಾಷೆಯು ಮಾತಿನಂತಿರಬೇಕು' ಎಂಬ ಮಾತಿನಲ್ಲಿ ಹುರುಳಿಲ್ಲದಿಲ್ಲ, ಆದರೆ ಬರೆಯತಕ್ಕ ಭಾಷೆಯು ಯಾರ ಮಾತನ್ನು ಅನುಸರಿಸಿರಬೇಕು? — ಎಂಬುದು ಒಂದು ಮಹತ್ತ್ವದ ಪ್ರಶ್ನೆಯಾಗಿದೆ.

ನಮ್ಮಲ್ಲಿ ವಿದ್ವಾಂಸರೆನಿಸಿಕೊಂಡು ಗಣ್ಯರಾದವರೆಲ್ಲ ತಮ್ಮ ನುಡಿಗಿಂತ ಪರಭಾಷೆಯ ಪಾಂಡಿತ್ಯವನ್ನು ಪಡೆದವರೇ ಆಗಿರುವುದುಂಟು. ಆದರಿಂದ ಅವರು ನಮ್ಮ ನುಡಿಗಿಂತ ತಮ್ಮ ಅಭ್ಯಾಸದ ಭಾಷೆಯ ಶುದ್ಧಿಯ ಕಡೆಗೇ ಒಲವುಳ್ಳವರಾಗಿದ್ದರೆ ಸೋಜಿಗವಿಲ್ಲ. ನಮ್ಮ ನುಡಿಯಲ್ಲಿ ಒಂದು ಕಾಲಕ್ಕೆ ತದ್ಭವಗಳ ಅವಶ್ಯಕತೆ ಹೆಚ್ಚಾಗಿದ್ದಿತು. ದರುಮ (ಧರ್ಮ), ಕಾರಿಯು ಅಥವಾ ಕಾರೇ (ಕಾರ್ಯ), ಜಂಜೆ (ಸಂಧ್ಯಾ) ಇವೇ ಮೊದಲಾದುವು

ಅಸಹಾಯಕತೆ ಸ್ಪಷ್ಟವಾಗಿ ಮೂಡಿದೆ. ನಿಂಬಿಯ ಅಧಿಕಾರದಲ್ಲಿ ಅವರಿಗೆ ರೊಟ್ಟಿತಪ್ಪಿದುದರ ರೊಚ್ಚು ಅನೇಕ ಕಂಗಾಲರಲ್ಲಿ ಕಿಡಿಎಬ್ಬಿಸಿದರೂ ಅವರ ದೂರನ್ನು ಯಾರು ಕೇಳಬೇಕು? ಶಾಮೂ—ಮೊದಲಿನ "ಭಾಳ ಧರ್ಮಿಷ್ಠರು" ಆದ ಶಾಮೂ ಆಗಿರಲಿಲ್ಲ.

ಅಂಬಲಿಯ ಅಭಿಷೇಕಕ್ಕೆ ಪ್ರಾರಂಭವಾಯಿತು. ಆ ಹೊತ್ತು ಅದೇಕೋ ಶಾಮೂ ಪಜ್ಜು ಯ ಮೇಲ್ವಿಚಾರಣೆಮಾಡಲು ಸ್ವತಃ ನಿಂತಿದ್ದ. ಒಂದೊಂದೇ ಸಾಲನ್ನು ದಾಟುತ್ತ ಗಂಭೀರವಾಗಿ ಹೆಜ್ಜೆಹಾಕುತ್ತ, ಸಂಭ್ರಮದ ಸಮಾರಂಭ ಮಾಡಿಸಿದ ಮದುವೆಯ ಯಜಮಾನನಂತೆ ಸಾಗಿದ್ದ. ಆ ಸಾಲಿನ ತುದಿಯಲ್ಲಿ ದಾರಿದ್ರ್ಯ-ಹತ ಮುದುವನೊಬ್ಬನು ಕೂಗಿದ: "ಬುದ್ಧೀ!"

ಶಾಮೂ ಕಣ್ಣರಳಿಸಿ ಮುದುಕನನ್ನು ಕೆಕ್ಕರಿಸಿ ನೋಡಿದ.

"ಅಲ್ಲಾ ಬುದ್ಧಿ! ವಾರಕ್ಕ ಒಂದಿನಾ ಆದರೂ ರೊಟ್ಟೀ ತುಣುಕು ಕಾಣಸಾಕಿಲ್ವೇ? ಈ ಅಂಬಲೀ ನೀರು ಕುಡಿದು.."

"ಎಲೇ ಮುದುಕಾ, ಛತ್ರವೆಂದರೆ ಮದುವೆಯ ಮನೆ ಎಂದು ತಿಳಿದೀಯಾ! ಈ ಹೊತ್ತು ರೊಟ್ಟಿ ಬೇಕಾದ ಬಾಯಿಗೆ ನಾಳೆ ಹೋಳಿಗೆ ಬೇಡವಾದೀತೆ! ಬಿಟ್ಟಿ ಕೂಳು ತಿಂದ ನಾಲಿಗೆ ಬಹಳ ಪುರುಕು ಆದಂತೆ ಕಾಣುತ್ತದೆ! ಯಾರಪ್ಪನ ಮನೆಯಗಂಟು.." ಬಸಪ್ಪ ರೇಗಿ ನುಡಿದು ಮಾತಿನ ಕೊನೆಯೊಡನೆ ಶಾಮೂನ ಹೆಗಲ ಮೇಲೆ ಕೈಹಾಕಿ ಕಿಲಕಿಲನೆ ನಕ್ಕ; ಶಾಮೂ ತತ್ತರಿಸಿದ.

"ನಮ್ಮಪ್ಪ ಕುಬೇರಪ್ಪನವರು.." ಮುದುಕ ಮುಂದು-ವರಿಸುವುದರಲ್ಲಿದ್ದ. ಆ ಹೊತ್ತಿಗೆ ಅವನ ತಟ್ಟಿಯಲ್ಲಿ ಅಂಬ-ಲಿಯೂ ತುಂಬಿತು. ಬಸಪ್ಪ ಕಿಡಿಕಿಡಿಯಾದ "ಅಂಬಲಿ ಕುಡಿದ ಸೊಕ್ಕೆ?" ಎಂದು ಗದ್ದರಿಸಿದ. ಮುದುಕ ಸುಮ್ಮನಾಗಲಿಲ್ಲ.

"ಸೊಕ್ಕೆಲ್ಲಿಂದ ಬಂದೀತು ಸೆಟ್ಟರೆ! ನಿಂಬಿವ್ಯನೋರ ನಂಜು ಕುಡಿದು ಛತ್ರೆಲ್ಲಾ...." "ಮುದುಕಾ!" ಸೆಟ್ಟಿ ಗದ್ದರಿಸಿದ.

ಶಾಮೂ ಯಾವ ವಿಚಾರದಲ್ಲಿದ್ದನೋ, ಅವನ ಹೃದಯಕ್ಕೆ ಯಾವ ಬರೆ ತಟ್ಟಿತೊ, ಒಮ್ಮೆಲೆ ಮುದುಕನ ಅಂಬಲಿ ತುಂಬಿದ ತಟ್ಟಿಯನ್ನು ಝಾಡಿಸಿ ಒದೆದ. "ಹಾ! ಹಾ! ಶಾಮಣ್ಣೋರೆ" ಎಂಬ ಧನಿ ಸಾವಿರ ಬಾಯಿಗಳಿಂದ ಬಂದಿತು. ತಟ್ಟಿ ಸಿಡಿದು ಮುದುಕನ ಮೊಮ್ಮಗನ ತಲೆಗೆ ಒಳಿತಾಗಿ ಗಾಯ ಮಾಡಿತು. ನೆಲದ ಮೇಲೆ ಸೋರಾಡಿದ ಅಂಬಲಿಯಲ್ಲಿ ಹುಡುಗನ ತಲೆಯ ರಕ್ತ ಕೂಡಿಕೊಂಡಿತು. ಹುಡುಗ ಕಿಟ್ಟನೆ ಕಿರಿಚಿ ಬಿದ್ದು ಬಿಟ್ಟಿತು. ಮುದುಕ ಟಣ್ಣನೆ ಹಾರಿ ಮೊಮ್ಮಗನನ್ನು ತೊಡೆಯ ಮೇಲೆ ಹಾಕಿಕೊಂಡ.

ಶಾಮೂ ಇದೆಲ್ಲ ಅನರ್ಥವನ್ನೂ ನೋಡಿದ. ಅವನ ಮೈ-ಯೆಲ್ಲ ಗದಗುಟ್ಟಿ ನಡುಗುತ್ತಿದ್ದಿತು. ಮುಖವು ಕೆಂಪಗಾಗಿ ಕಣ್ಣುಗಳು ರಕ್ತಮಯವಾಗಿದ್ದುವು. ಪಣೆಯ ಮೇಲೆ ಬೆವರು ಸುರಿಯಹತ್ತಿತು. ಅದನ್ನು ಒರಸಿಕೊಳ್ಳಲು ಕೈ ನೇವರಿಸಿ ದಾಗ ಹುಡುಗನ ಸಿಡಿದ ರಕ್ತ ಕೈತುಂಬ ಮೆತ್ತಿತು. ಶಾಮೂ ಭ್ರಮಿಷ್ಟನಾದಂತಾದ. ಆಲ್ಲಿ ನಿಂತರೆ ತಾನು ಬಿದ್ದು ಬಿಡುವೆ ನೆಂಬ ಸಂಶಯವಾಯಿತೇನೋ ಸರ್ರನೆ ನಡೆದುಬಿಟ್ಟ. ಅವನ ಬೆನ್ನ ಹಿಂದೆ "ಅಯ್ಯೋ! ಅಯ್ಯೋ!" ಎಂಬ ಧ್ವನಿ ಕೇಸರಿಟ್ಟಿತು.

ಅಂದು ಸಾವಿರ ದರಿದ್ರ ಕೈಗಳು ಆ ಹುಡುಗನಿಗೆ ಮಣ್ಣು ಕೊಟ್ಟುವು. ಸಾವಿರ ಹೊಟ್ಟೆಗಳು ಆಹೊತ್ತು ಉಪವಾಸ ಬಿದ್ದುವು. ಛತ್ರದ ಅಂಬಲಿಯ ಹರಿವಿಗಳ ತುಂಬಿದ ಜಾಯನ್ನು ತೆರೆಯುವ ಪ್ರಸಂಗ ಆ ಹೊತ್ತು ಬರಲೇ ಇಲ್ಲ.


ದಿ ವಸಂತ ಇನ್ಶುರನ್ಸ್ ಕಂಪನಿ, ಲಿಮಿಟೆಡ್

ದಿವಾನ್ ಬಹಾದ್ದೂರ್ ಹೀರಾಲಾಲ ಕಾಜಿ: ಅಗ್ರಸ್ಥರು

ಸಹಕಾರಿ ಸಂಘದ ಸಭಾಸದರಿಗೆ ಪಟ್ಟಿಯಲ್ಲಿ ೭½ ಮತ್ತು ೭½ ಟಕ್ಕೆ ಸೂಟ ಕೊಡಲಾಗುವುದು.

ಗತಿಸಿದ ವರ್ಷಗಳಲ್ಲಿ ಪೂರ್ಣ ಮಾಡಲಾದ ವಿಮೆ .... ೪೫,೫೦,೦೦೦
ಈ ವರೆಗಿನ ವಿಮೆ .... .... ೧,೦೦,೦೦,೦೦೦ } ಕ್ಕೆ ಮಿಕ್ಕಿದೆ.

ಸಾಮಾನ್ಯ ಪೂರ್ಣ ಮತ್ತು ಲೋಕಪ್ರಿಯ ವಿಮಾ ಯೋಜನೆಗಳು.

ಪ್ರಭು ಎಂಡ್ ಸನ್ಸ್
ಚೀಫ್ ಏಜಂಟ್
೨೬ — ಆ ಸರ್ ಫಿರೋಜಶಹಾ ಮೇಥಾ ರೋಡ್,
ಕೋಟೆ, ಮುಂಬಯಿ ೧

ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ ಥಾದಾಳ ವೇತನದ ಮೇಲೂ, ಯೋಗ್ಯ ಕಮಿಶನ್ನಿನ ಮೇಲೂ, ಆರ್ಗನೈಜರರೂ ಏಜಂಟರೂ ಬೇಕಾಗಿದ್ದಾರೆ. ಸುಶಿಕ್ಷಿತ-ಅನುಭವಿಕ ಸದ್‌ಗೃಹಸ್ಥರು ಮೇಲಿನ ವಿಳಾಸಕ್ಕೆ ಬರೆದುಕೊಳ್ಳುವುದು.

ಜನವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರದ ಗುಳಿಗೆ
ಬಾಟ್ಲಿಗೆ ೧-೮-೦
ಎಲ್ಲ ಜ್ವರಗಳ ಮೇಲೂ
ಮಹೌಷಧ.
ವಿಳಾಸ:—
ಗಣೇಶ ರಾಮಚಂದ್ರ ಕರ್ಕ
ಮತ್ತು ಕಂಪನಿ
ಗಿರಗಾಂವ, ಮುಂಬಯಿ.

# 'ಕನ್ನಡ' ಎಂಬುದಕಿಂತ 'ಕಂನಾಡು' ಎನ್ನುವುದೇ ಲೇಸು.

( ಒಂದು ಚರ್ಚಾತ್ಮಕ ಲೇಖನ )

ಲೇ. ಶಂ. ಬಾ. ಜೋಶಿ, ಧಾರವಾಡ

★

**'ಕನ್ನಡ' ಎಂದರೆ ಭಾಷೆಯ ಹೆಸರೆಂಬ ನಂಬುಗೆಯು ಎಲ್ಲರಲ್ಲಿಯೂ ಮನೆ ಮಾಡಿಕೊಂಡಿದೆ; ದೇಶವೆಂಬ ಅದರ ಮೂಲಾರ್ಥವೇ ಮರೆತು ಹೋಗಿದೆ. 'ಕನ್ನಡ'ದ ಮೂಲರೂಪವು 'ಕಂನಾಡು' ಎಂದು ಸಿದ್ಧಪಡಿಸುವ ಹೊತ್ತು ಈಗ ಬಂದಿದೆ!**

★

ಅರಿವು ಮಾಸಿದಂತೆ ಮಾತಿನಲ್ಲಿ ತಪ್ಪು-ತಡೆಗಳು ಹೆಚ್ಚಾಗುತ್ತವೆ. ಅರ್ಥದಲ್ಲಿ ಕೊರತೆ, ಶಬ್ದರೂಪಗಳಲ್ಲಿ ವಿಕೃತಿ ಇದೆಲ್ಲವೂ ಆಡುವವರ ಅರಿವುಗೇಡಿತನದ ಕುರುಹು. ಆದುದರಿಂದ ನಾಡಿನ ವಿದ್ಯೆಯನ್ನು ಹಾರಯಿಸುವವರು ತಮ್ಮ ನಾಡ ನುಡಿಯು ಹದಗೆಡದಂತೆ ಎಚ್ಚರಾಗಿರುವುದು ಕರ್ತವ್ಯವಾಗಿದೆ.

ಪಂಪ-ರನ್ನರ ಕಾಲದ ನುಡಿಯ ಬೆಡಗು, ಅಂದಿನ ನಮ್ಮ ನಾಡಿನ ಹಿರಿಯ ಬೆಳಕಿನ ಸಾಕ್ಷಿಯಾಗಿದೆ. ಆದರೆ ಆ ಸುಮಾರಿನಿಂದಲೇ, ಏಕೆ ಅದಕ್ಕೂ ಮುಂಚಿನಿಂದಲೂ,ಸಂಸ್ಕೃತ-ಪ್ರಾಕೃತಗಳ ಮಿತಿಮೀರಿದ ಆಘಾತಕ್ಕೆ ಸಿಕ್ಕು ನಮ್ಮ ನುಡಿಯು ಗಾಸಿ-ವೀಸಿಯಾಗುತ್ತ ನಡೆದುದನ್ನು ಮರೆಯಲಿಕ್ಕಾಗದು. ಮುಂದು-ಮುಂದಿನ ಕಾಲದಲ್ಲಿ ಇನ್ನೂ ಕೆಲವು ಪರಭಾಷೆಗಳ ಸುಳಿಯಲ್ಲಿ ಸಿಕ್ಕು ಜನಗಳಲ್ಲಿ ತಮ್ಮತನದ ನೆನಹು ಶೂನ್ಯವಾಗುತ್ತ ಬಂದಿತು. ಪರಭಾಷೆಯ ಪದಗಳು ಮಾತಿನಲ್ಲಿ ಹೆಜ್ಜು ಹೆಚ್ಚಾಗಿ ನುಸುಳಿಕೊಂಡುವು. ಅವುಗಳ ಶುದ್ಧಲೇಖನಕ್ಕೆ ಇರುವ ಇಂಬು ನಮ್ಮ ನುಡಿಗೆ ಇಲ್ಲದಾಯಿತು. ನಮ್ಮ ನುಡಿಯ ಅಶುದ್ಧ ರೂಪಗಳೇ ಶುದ್ಧ, ಶುದ್ಧರೂಪಗಳು ಅಶುದ್ಧವೆನ್ನುವಷ್ಟರ ವರೆಗೂ ನಮ್ಮ ತಿಳಿವಳಿಕೆ ಬಂದಿತು.

ಯಾಕಾ, ಯಾನಾ, ಹಾಲಾ, ಮಸರಾ, ಭಕ್ಕಿ ( ಬೆಂಕೆ ), ಮುಂಡ್ರು ( ಕುಳ್ಳಿರು ) ಇಂತೀ ಬಗೆಯ ತೀರ ವಿಕೃತಿಯ ಕಾಲವೊಂದಾಯ್ತು. ಆದರೆ ನಮ್ಮಲ್ಲಿ ತಮ್ಮತನದ ಅರಿವು ಸ್ವಲ್ಪ ತಲೆದೋರಿದ ಬಳಿಕ ಆ ಬಗೆಯ ಮಾತಿನ ರೀತಿಗೆ ತಡೆಯುಂಟಾಯಿತು. ೧೯ನೆಯ ಶತಮಾನದ ಕೊನೆಯ ಭಾಗ, ೨೦ನೆಯ ಶತಕದ ಮೊದಲಿನ ಸುಮಾರಿಗೆ ಇದ್ದ ನಮ್ಮ ಗದ್ಯಶೈಲಿಯೇ ಇದಕ್ಕೆ ಉದಾಹರಣವಾಗಿದೆ. ಇಂದು ಮಾತಿನಲ್ಲಿ ಯಾಕೆ, ಹ್ಯಾಂಗ, ಮ್ಯಾಲೆ, ಕ್ವಾಣಿ, ಪ್ಯಾಟಿ, ಐತಿ, ಅಕ್ಕದ, ಆಗತದ, ಬ್ಯಾಳೆ ಎಂಬೀ ಬಗೆಯಾಗಿ ಮನೆಯಲ್ಲಿ ಮಾತನಾಡುತ್ತಿದ್ದರೂ ಬರೆವಣಿಗೆಯು ವಿದ್ವತ್ಸಂಪ್ರದಾಯದ ಮಟ್ಟನ್ನು ಇದಕ್ಕೂ ಮೇಲಾಗಿದೆ. ನಾಟಕ, ಕಾದಂಬರಿ ಮೊದಲಾದಕಡೆಯ ಸಂವಾದ ಲೇಖನದಲ್ಲಿ ಆ ಪಾತ್ರಕ್ಕನುಗುಣವಾದ ಭಾಷೆಯನ್ನು ಹಾಕುವುದು ಸ್ವಾಭಾವಿಕವಾದುದರಿಂದ, ಅಲ್ಲಿ ಮಾತ್ರ ಈ ಮಾತುಗಳನ್ನು ಕಾಣಬಹುದು. 'ನಾಳಿನ ಬರೆವಣಿಗೆ ಇಂದಿನ ಮಾತಿನಂತೆಯೆ ಆಗುವ್ದು; ಆದಕಾರಣ ಈಗಲೆ ನಾವು ಮಾತಾಡುವಂತೆಯೆ ಏಕೆ ಬರೆಯಬಾರದು?' ಎಂದು ಕೆಲವರ ವಿಚಾರ. ಮಾತಿಗೂ ಬರೆವಣಿಗೆಗೂ ಕೆಲವೊಂದು ಅಂತರವು ಯಾವಾಗಲೂ ಉಳಿದೇ ಉಳಿಯುವುದು. ಅದನ್ನು ಇಲ್ಲದಂತೆ ಮಾಡುವುದು ಸಾಧ್ಯವಿಲ್ಲ. ಈ ಅಂತರವು ಇಲ್ಲದ ಭಾಷೆಯೆ ಇಲ್ಲ. ಆದುದರಿಂದ ಮಾತಿಗೂ ಬರೆಹಕ್ಕೂ ಅಂತರವೇ ಉಳಿಯಬೇಕೆಂದು ಭಾಷೆಯ ಮೇಲಿರುವ ವ್ಯಾಕರಣದ ಹಿತಕರವಾದ ಸಂರಕ್ಷಣೆಯನ್ನು ಬಂಧನವೆಂದು ಭಾವಿಸಿ, ಕಿತ್ತೊಗೆಯುವುದರಿಂದ ಲೇಸಾಗಲಾರದು; ಭಾಷೆಯ ಶುದ್ಧಸ್ವರೂಪದ ವಿಷಯಕ್ಕಿರುವ ವಿದ್ವತ್ಪರ ಆಗ್ರಹವು ಇಷ್ಟವಾದುದೇ ಸರಿ.

'ಭಾಷೆಯು ಮಾತಿನಂತಿರಬೇಕು' ಎಂಬ ಮಾತಿನಲ್ಲಿ ಹುರುಳಿಲ್ಲದಿಲ್ಲ, ಆದರೆ ಬರೆಯತಕ್ಕ ಭಾಷೆಯು ಯಾರ ಮಾತನ್ನು ಅನುಸರಿಸಿರಬೇಕು? — ಎಂಬುದು ಒಂದು ಮಹತ್ತ್ವದ ಪ್ರಶ್ನೆಯಾಗಿದೆ.

ನಮ್ಮಲ್ಲಿ ವಿದ್ವಾಂಸರೆನಿಸಿಕೊಂಡು ಗಣ್ಯರಾದವರೆಲ್ಲ ತಮ್ಮ ನುಡಿಗಿಂತ ಪರಭಾಷೆಯ ಪಾಂಡಿತ್ಯವನ್ನು ಪಡೆದವರೇ ಆಗಿರುವುದುಂಟು. ಅದರಿಂದ ಅವರು ನಮ್ಮ ನುಡಿಗಿಂತ ತಮ್ಮ ಅಭ್ಯಾಸದ ಭಾಷೆಯ ಪುಷ್ಟಿಯ ಕಡೆಗೇ ಒಲವುಳ್ಳವರಾಗಿದ್ದರೆ ಸೋಜಿಗವಿಲ್ಲ. ನಮ್ಮ ನುಡಿಯಲ್ಲಿ ಒಂದು ಕಾಲಕ್ಕೆ ಶಬ್ದವಗಳ ಅವಶ್ಯಕತೆ ಹೆಚ್ಚಾಗಿದ್ದಿತು. ದರುವು ( ಧರ್ಮ ), ಕಾರಿಯ ಅಥವಾ ಕಾರೇ ( ಕಾರ್ಯ ), ಜಂಜೆ (ಸಂಧ್ಯಾ) ಇವೇ ಮೊದಲಾದುವು

ಶಿಷ್ಟಸಮ್ಮತವಾದ ತದ್ಭವಗಳಾಗಿದ್ದುವು. ಈ ಬಗೆಯ ತದ್ಭವಗಳು ತಲೆದೋರಲು ಕಾರಣವೇನು? ಆ ಮಾತುಗಳನ್ನು ಮೂಲದಂತೆ ಉಚ್ಚರಿಸುವುದಕ್ಕಾಗದೆ, ನಮ್ಮ ನಾಡಿಗರು ತಮ್ಮ ಬಗೆಯಿಂದ ಮಾತನಾಡುವಾಗ ಆಗುವ ಬದಲಾವಣೆಗಳವು. ಆದರೆ ಇಂದು ಆ ಸ್ಥಿತಿಯು ಉಳಿದಿಲ್ಲ. ನಮ್ಮಲ್ಲಿ ಮೊದಲು ಇಲ್ಲದೆ ಇದ್ದ ಮಹಾಪ್ರಾಣ, ಸಂಯುಕ್ತಾಕ್ಷರಗಳ ಉಚ್ಚಾರಾದಿಗಳು ಸಂಸ್ಕೃತ ಭಾಷಾಭ್ಯಾಸದ ನಿಮಿತ್ತದಿಂದ ಸಹಜವಾಗಿ ಬಳಕೆಯಲ್ಲಿ ಬಂದುವು. ಆದರಿಂದ ಸಂಸ್ಕೃತ ಶಬ್ದಗಳು ನಮ್ಮಲ್ಲಿ ಮಾರ್ಪಟ್ಟು ಬಳಕೆಯಲ್ಲಿ ಬರುವ ಕಾರಣವೇ ಇಂದು ಉಳಿದಿಲ್ಲ. ಅಮೃತವೆಂದು ಹೇಳಿದೆ ಅಮರ್ದು ಎಂದರೆ, ಇಂದು ನಗಿಸಿಕೊಳ್ಳಬೇಕಾದೀತು. 'ಹಂಸ' ಎಂದು ಬರೆಯದೆ 'ಹಾಂಸ' ಎಂದು ಉಚ್ಚಾರದಂತೆಯೆ ಮೂಡಿಸಿದರೆ ಅಪೇಕ್ಷಿತ ತನದ ಆರೋಪವು ಬಾರದೆ ಇರದು. 'ಕೃಷ್ಣ' ಎಂಬುದನ್ನು 'ಕ್ರಿಷ್ಣ' ಎಂದು ಲೋಕರೂಢಿಯುಂಟೆಂದು ಹಾಗೆಯೆ ಬರೆಯಗೊಡುವುದುಂಟೆ? ಮೂಲ ಸಂಸ್ಕೃತದ ಅಭ್ಯಾಸವು ಜೀವಂತವಾಗಿರುವವರೆಗೆ ಈ ಬಗೆಯ ಬದಲಾವಣೆಗೆ ಶಿಷ್ಟರು ಯಾರೂ ಒಪ್ಪಲಾರರು.

ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳ ಶಬ್ದಗಳೂ ನಮ್ಮಲ್ಲಿ ಇಂದು ಇದೇ ತೆರನಾದ ಸ್ಥಾನ-ಮಾನಗಳನ್ನು ಪಕ್ಕನಿಂದ ಕೇಳುತ್ತಲಿವೆ. 'ಫಾದರ್' ಎಂಬಲ್ಲಿ 'ಫ'ದ ಉಚ್ಚಾರ ಬೇರೆಯಾಗಿರುವುದರಿಂದ, ಜನರು ಅದನ್ನು ತಪ್ಪಾಗಿ ಉಸಿರಬಾರದೆಂದು 'ಫ'ದ ಕೆಳಗೆ ಎರಡು ಚುಕ್ಕೆಕೊಟ್ಟು ಹೊಸ ಗುರುತನ್ನೂ ನಮ್ಮ ಇಂಗ್ಲಿಷಿನ ಅಭಿಮಾನಿಗಳು ನೇರ್ಪಡಿಸಿಕೊಂದಿರುವರು! ಹಿಂದಿಯೊಳಗಿನ ಕ, ಹ, ಜ ಮೊದಲಾದ ಅಕ್ಷರಗಳ ವಿಶಿಷ್ಟ ಉಚ್ಚಾರದ ಹಪಹಪಿಂದ ನಮ್ಮ ನುಡಿಯ ರೀತಿಯ ಮೇಲೂ ಪರಿಣಾಮವಾಗುತ್ತಿದ್ದುದನ್ನು ಕಾಣಬಹುದಾಗಿದೆ. ಮೂಲ ಇಂಗ್ಲಿಷು, ಮೂಲ ಹಿಂದಿಯಂತೆಯೆ ಆ ಪದಗಳು ಉಳಿಯಬೇಕೆಂಬ ಆತುರವನ್ನು ಆ ಭಾಷೆಯನ್ನು ವಿಶೇಷ ಅಭ್ಯಾಸಮಾಡಿದವರಲ್ಲಿ ಕಾಣುವುದು ಸ್ವಾಭಾವಿಕವಾಗಿದೆ ಆದರೆ ನಮ್ಮ ನುಡಿಯ ಮೂಲಗಾಢವಾದ ಅಭ್ಯಾಸದ ಪರಂಪರೆಯೆ ಇಲ್ಲವಾದುದರಿಂದ, ಜನಗಳಲ್ಲಿ ಇದರ ನಿಜಸ್ವರೂಪದ ಅರಿವು ಮಸುಳಿಸಿದೆ. 'ಕನ್ನಡ' ಎಂದರೆ ಭಾಷೆಯ ಹೆಸರೆಂದು ಜನಸಾಮಾನ್ಯರಲ್ಲಷ್ಟೇ ಅಲ್ಲ, ಬುದ್ಧಿವಂತರೆಂಬವರಲ್ಲಿಯೂ ಇದೇ ಬಗೆಯ ನಂಬುಗೆಯು ಮನೆಮಾಡಿಕೊಂಡಿದೆ. ದೇಶವೆಂಬ ಅದರ ಮೂಲಾರ್ಥವೇ ಮರೆತುಹೋಗಿದೆ! 'ಕನ್ನಡ'ದ ಮೂಲ ರೂಪವು 'ಕಂನಾಡು' ಎಂದು ಸಿದ್ಧಪಡಿಸುವ ಹೊತ್ತು ಬಂದಿದೆ.

'ಡೊಡ್ಡಿನ್ಸ್ತನ' ಎಂದು ಕೆಲವು ದೊಡ್ಡವರೂ ಬರೆಯುವುದು ನಿನ್ನೆ ಮೊನ್ನೆಯ ವರೆಗೆ ವಾಡಿಕೆಯಾಗಿತ್ತು. ಆದರೆ ಇದು ಅಬದ್ಧವೆಂದು ತಿಳಿದವರು ತಿದ್ದಿದ ಮೇಲೆ, ಇದು ಅಪರೂಪವಾಗಿ ಕಾಣಿಸಿಕೊಳ್ಳಲಾರಂಭಿಸಿತು. 'ಕ್ಯಾಮಿ'-(ಕೆಂ)-ಕೇಮೆ ಎಂಬುದಾಗಿ ಬರೆಹದಲ್ಲಿ ಬರಲಾರಂಭಿಸಿದೆ. ಇಂತಹ ಇನ್ನೂ ಹಲವು ಉದಾಹರಣೆಗಳನ್ನು ಕೊಡಬಹುದು. ಇಂದು ನಮ್ಮ ನಾಡಿಗಳಲ್ಲಿ ತಮ್ಮ ನುಡಿಯು ಅಚ್ಚ ಕೆಚ್ಚನದಾಗಬೇಕು; ಅರ್ಥವು ಸಹಜವಾಗಿ ಹೊರಹೊಮ್ಮುವಂತೆ ನುಡಿಯು ಸರಿಯಾದ ರೂಪಗಳಿರಬೇಕೆಂಬ ಹಂಬಲವು ಹೆಚ್ಚಾಗುತ್ತಿರುವುದು ಸಂತೋಷದ ಸಂಗತಿ. 'ಹಣಿಕಿಹಾಕಿದರು' ಎಂಬಲ್ಲಿ 'ಹಣಿಕಿ' ಶಬ್ದಕ್ಕೆ ಅರ್ಥವೇ ಹೊರಡುತ್ತಿದ್ದಿಲ್ಲ; ಆದರೆ ಅದು ಈಗ ಅರ್ಥದಾಯಕವಾಗುವಂತೆ 'ಹಣಿಯಿಕ್ಕಿದರು' ಅಥವಾ 'ಇಣಿಕಿ ನೋಡಿದರು' ಎಂದು ಮಾರ್ಪಟ್ಟಿಲ್ಲವೆ? 'ಹಣಿಕು' ಎಂಬುದಕ್ಕೆ 'ಹಣಿಯಿಕ್ಕು' ಇದುವೆ ಮೂಲ ಪದ. 'ಹಣಿಕಿ ನೋಡು' ಇದರ ಔಚಿತ್ಯವೇ ತಿಳಿಯದೆ, ರೂಢಿಯಿಂದ ಬಂದ ಒಂದು ಸ್ಥೂಲಾರ್ಥವು ಮಾತ್ರ ಇದರಿಂದ ಗೊತ್ತಾಗುವುದು. ಆದರೆ 'ಹಣಿಯಿಕ್ಕಿ ನೋಡು' ಎಂಬಲ್ಲಿ, ಮೆಲ್ಲಗೆ ಬೇರೆಯವರಿಗೆ ಗೊತ್ತಾಗದಂತೆ ನೋಡುವವ— ಹಣಿಯಿಕ್ಕುವ ವ್ಯಕ್ತಿಯ ಚಿತ್ರವೇ ಕಣ್ಣಿದುರಿಗೆ ನಿಲ್ಲುತ್ತದೆ. ಇಂತಹ ಉಚಿತ ಪದವ ತಮ್ಮ ಭಾಷೆಯಲ್ಲಿ ಇದ್ದ ಆನಂದ, ಅಭಿಮಾನಗಳು ನಮ್ಮಲ್ಲಿ ಉಂಟಾಗುವುವು.

ಇಂಗ್ಲಿಷು, ಸಂಸ್ಕೃತ ಮೊದಲಾದ ಭಾಷೆಗಳ ಪದಗಳಲ್ಲಿರುವ ಔಚಿತ್ಯ, ಸೂಕ್ಷ್ಮಾರ್ಥಗಳೇ ಆ ಭಾಷೆಯತ್ತ ಇರುವ ಜನರ ಆಕರ್ಷಣಕ್ಕೆ ಕಾರಣಗಳಾಗಿವೆ. ಆ ಔಚಿತ್ಯವು ನಮ್ಮ ನುಡಿಯಲ್ಲಿಯೂ ಬರಬೇಕಾಗಿದ್ದರೆ ಜನರಿಗೆ ತಾವು ಆಡುವ ಮಾತಿನ ಮೂಲಾರ್ಥ, ರೂಢಾರ್ಥ, ಲಕ್ಷಣಾರ್ಥಗಳು ಆ ಶಬ್ದಗಳಿಂದ ತಟ್ಟನೆ ಹೊಳೆಯಬೇಕು. ಶಬ್ದದೊಳಗಿನ ಅವಯವಾರ್ಥ ಸುಸ್ಪಷ್ಟವಾಗಿ ತಿಳಿಯಬೇಕಾಗಿದ್ದರೆ ಅವನ್ನು ಶುದ್ಧವಾಗಿ ಬರೆಯುವುದು ಅವಶ್ಯಕ. 'ಹಣಿಕಿ ನೋಡು,' 'ಕನ್ನಡ' ಎಂದೀ ಬಗೆಯಾಗಿ ಬರೆವ ವಾಡಿಕೆಯೀ ಹೆಚ್ಚಾದಲ್ಲಿ ನುಡಿಯೊಳಗಿನ ಔಚಿತ್ಯವು ನಷ್ಟವಾಗುವುದು ನಿಶ್ಚಿತ. ಏಕೆಂದರೆ ಅವುಗಳ ರೂಢಾರ್ಥದ ಹೊರತು ನಿಜವಾದ ಹುರುಳು ಏನೆಂಬುದೇ ಗೊತ್ತಾಗುವುದಿಲ್ಲ.

'ಕನ್ನಡ' ಎಂಬುದು 'ಕಂನಾಡು' ಎಂಬುದರ ವಿಕೃತರೂಪವೆಂಬ ಬಗೆಗೆ ಈಗ ಸಂದೇಹವೆ ಇಲ್ಲ. ತೀರ ಮೊದಲು ಕೀರ್ತಿಶೇಷ ಆರ್. ನರಸಿಂಹಾಚಾರ್ಯರು 'ಕಂನಾಡು' ಎಂಬುದು 'ಕನ್ನಡ'ದ ಮೂಲರೂಪವಿರಬೇಕೆಂದು ಊಹಿಸಿದರು. ಆದರೆ ಅದು ಬರಿ ಊಹೆಯೆ ಆಗಿರದೆ, ಒಂದು ಕಾಲಕ್ಕೆ ಅದು ಬಳಕೆಯ ಮಾತಾಗಿದ್ದಿತೆಂದೂ ಈ ಅವಧಿಯಲ್ಲಿ ಬೆಳಕಿಗೆ ಬಂದ ಅನೇಕ ಶಾಸನಗಳಿಂದ ಸಿದ್ಧವಾಗಿದೆ. ಆ ಶಾಸನಗಳಲ್ಲಿ ಕೆಲವು ಪ್ರಕಟವಾಗಿವೆ; ಇನ್ನು ಕೆಲವು ಬೇಗನೆ ಪ್ರಸಿದ್ಧವಾಗಲಿವೆ. 'ಕಂನಾಡು' ಈ ಪ್ರಯೋಗವು ತಮಿಳಿನ ಸಾಹಿತ್ಯ ಮತ್ತು ಶಾಸನಗಳೆರಡರಲ್ಲಿಯೂ ಇದೆ. ಕರ್ನಾಟಕದಲ್ಲಿ ಮತ್ತು

ತೆಲುಗು ಸೀಮೆಯಲ್ಲಿ ದೊರೆತ ಶಾಸನಗಳಲ್ಲಿಯೂ ಕಂನಾಡಿನ ಉಲ್ಲೇಖವು ದೊರೆಯುತ್ತಿದೆ.

ಡಾ ಎಸ್. ವೆಂಕಟರಮಣಯ್ಯನವರು 'ಆಂಧ್ರ ಇತಿಹಾಸ ಪತ್ರಿಕೆ'ಯಲ್ಲಿ ಬರೆದ ಒಂದು ಲೇಖನದಲ್ಲಿ ಶ್ರೀಶೈಲದ ಬಳಿಯ ನಾಡಿಗೆ 'ಕಂನಾಡು' ಎಂದು ಉಲ್ಲೇಖವಿದ್ದುದನ್ನು ಹೇಳಿದ್ದಾರೆ. ಅದಕ್ಕೆ ಬೇರೆಡೆಗಳಲ್ಲಿ 'ಕಣ್ಣ ವಿಷಯ' 'ಕರ್ಣಾಟಸೀಮಾ' ಎಂದೂ ಕರೆದಿರುವುದಾಗಿ ಅವರು ಬರೆದಿರುವರು. ( Andhra Historical Journal X p 95 ). ಮದರಾಸಿನ ವಿಶ್ವವಿದ್ಯಾನಿಲಯದ ತಮಿಳು ಮಹಾಕೋಶದಲ್ಲಿ 'ಕಂನಾಡು' ಬಂದ ಶಾಸನ ಮತ್ತು ಸಾಹಿತ್ಯಗಳ ನಿರ್ದೇಶವನ್ನು ನೋಡಬಹುದಾಗಿದೆ. ('ಕನ್ನಡದ ನೆಲೆ' ಯಲ್ಲಿ ನಾನು ಇವುಗಳನ್ನು ಕೆಲವು ವಿವರಿಸಿದ್ದುಂಟು.)

ಶಾಸನ ಇಲಾಖೆಯ ಶ್ರೀ. ಎನ್. ಲಕ್ಷ್ಮೀನಾರಾಯಣ ರಾಯರು, ಶ್ರೀ. ಪಾಂ. ಭೀ. ದೇಸಾಯಿಯವರು, ಡಾ. ಗಾಯಿಯವರು ನನಗೆ ಈ ವಿಷಯದಲ್ಲಿ ತುಂಬ ಪರಿಶ್ರಮದಿಂದ ನೆರವು ಕೊಟ್ಟು, ನಾಡಿಗೆ ಹೊಸ ಬೆಳಕನ್ನು ನೀಡುವುದಕ್ಕೆ ನೆರವಾದುದಕ್ಕೆ ಅವರನ್ನು ಎಷ್ಟು ಕೊಂಡಾಡಿದರೂ ಕಡಿಮೆ. ಈಗ ಗೊತ್ತಾಗಿರುವ ಕಂನಾಡಿನ ಕೆಲವು ಉಲ್ಲೇಖಗಳನ್ನು ಕೆಳಗೆ ಕೊಟ್ಟಿದೆ:

೧. ವೇಲ್ಪನೂರು (ಕರ್ನೂಲು); ಶಕ ೧೩೪೧, ಇದರಲ್ಲಿ ತಿನೆಯ ಪ್ರತಾಪರುದ್ರನು 'ಕಂನಾಡು' ಆಳುತ್ತಿದ್ದನೆಂದಿದೆ. (ತೆಲುಗು ಶಾಸನ).

೨. ಮಿಟ್ಟಕಂದಾಲ ಗ್ರಾಮ (ಕರ್ನೂಲು); ಶಕ ೧೩೯೫. ಸಂಗಮೇಶ್ವರ ದೇವರಿಗೆ ಕಂನಾಡಿನೊಳಗಿನ ಮಿಟಕಂದ್ಯಾಲ ಗ್ರಾಮವನ್ನು ದತ್ತಿ ಬಿಟ್ಟುದನ್ನು ಹೇಳಿದೆ. (ತೆಲುಗು).

(೩) ಲಿಂಗಾಲ (ಕರ್ನೂಲು); ಶಕ ೧೩೧೪. ಕಂನಾಡಿನೊಳಗಿನ ಜುವ್ವುಟೂರನ್ನು ಕಲ್ಮಠದ ಪರಮ ಶಿವಾಚಾರ್ಯರಿಗೆ ಕೊಟ್ಟುದನ್ನು ಉಲ್ಲೇಖಿಸಿದೆ (ತೆಲುಗು).

(೪) ಜೇಬೋಲು (ಕರ್ನೂಲು) ಶಕ ೧೧೭೧ (?) ವಣಗ ದೇವನೆಂಬ ವೀರನು ಕಾಕತೀಯ ರಾಜನಿಂದ 'ಕಂನಾಡ'ನ್ನು ಪಡೆದು ಆಳುತ್ತಿದ್ದ ವರ್ಣನೆಯಿದೆ. (ಸಂಸ್ಕೃತಭಾಷೆಯಲ್ಲಿದ್ದು 'ಕಂನ್ನಾಂಡು ನಾಮಕಂ ದೇಶಂ ಲಬ್ಧ್ವ' ಎಂದು ಬರೆದಿದೆ).

ಕಂನಾಡಿನ ಉಲ್ಲೇಖಗಳಿಗೆ ಕಂಮುನಾಡಿನ ಅಸ್ತಿತ್ವವು ಇನ್ನೂ ಪುಷ್ಟಿಯನ್ನೀಯುತ್ತದೆ. ಕಂಮುನಾಡಿನ ಉಲ್ಲೇಖಗಳು ಬಹಳ ಪ್ರಾಚೀನಕಾಲದಿಂದಲೂ ದೊರೆಯುತ್ತವೆ. ಕ್ರಿ. ಶ. ೩ನೆಯ ಶತಮಾನದ ಸುಮಾರಿನ ಒಂದು ಶಾಸನದಲ್ಲಿ 'ಕರ್ಮರಾಷ್ಟ್ರ' (ತಯ್ಮನಾಡು) ಬಂದಿದೆಯೆಂದೂ ಅದು ಕಂನಾಡಿಗಿಂತ ಭಿನ್ನವಾಗಿದ್ದು ಅದರ ಉತ್ತರದಲ್ಲಿದ್ದಿತೆಂದೂ ಶ್ರೀ. ದೇಸಾಯಿ ಪಾಂಡುರಂಗರಾಯರು ಕಂಡುಹಿಡಿದಿದ್ದಾರೆ.

ಕಂಮು ಜನಗಳಿಗೆ 'ಕಂಮೆ'ಯವರು, ಎಂದೂ ಹೇಳುವ ವಾಡಿಕೆಯಿದೆ. 'ಕಂಮುನಾಡು' ಇದನ್ನು 'ಕಂಮೆನಾಡು' ಎಂದೂ ಹೇಳಿದ್ದುಂಟು. ಅದರಂತೆ ಕಂನಾಡನ್ನು 'ಕನ್ನೆ'-ನಾಡೆಂದೂ ಉಲ್ಲೇಖಿಸಿದ ಶಾಸನಗಳು ದೊರೆಯುತ್ತವೆ.

(೧) ತ್ರೈಲೋಕ್ಯ ಮಲ್ಲದೇವನ ಕಾಲದ (ಶಕ ೯೮೦) ಒಂದು ಶಾಸನದಲ್ಲಿ 'ಕನ್ನೆ' ಮೂನೂರುಂಟು. ( South Indian Inscriptions IX. Part I. P. 100. )

(೨) ಆದೇ ಗ್ರಂಥದಲ್ಲಿ [ಪು. ೧೦೩] ತ್ರೈಲೋಕ್ಯಮಲ್ಲನ ಶಾಸನದಲ್ಲಿ 'ಕನ್ನೆನಾಡೊಳಗಣ ಶಿವಪುರ, ಅದ ಪ್ರವಿಷ್ಟ ಬಾಡಂ ಜಿವ್ಮಟೂರು' ಎಂದಿದೆ.

[೩] ಕರ್ನೂಲು ಜಿಲ್ಲೆಯ ಸಂಗಮೇಶ್ವರದಲ್ಲಿ 'ಕಂನಡ' ನಾಲ್ಕು ಸಾಯಿರದ ಉಲ್ಲೇಖವಿದೆ; ಮುಂದೆ 'ಕನ್ನೆ' ಮುನ್ನೂರರ ಪಟ್ಟಣವಾದ ಗಂಡನಾರಾಯಣಪುರದ ಹೆಸರನ್ನು ಹೇಳಿದೆ. ಇದು ಸಂಪೂರ್ಣ ಕಂನುಡಿಯ ಶಾಸನ. ಕ್ರಿ. ೧೧೭೨. ಕಲಚುರಿ ರಾಯಮುರಾರಿ ಸೋವಿದೇವನ ಕಾಲದ್ದು.

[೪] ಸಿದ್ಧೇಶ್ವರಗ್ರಾಮ [ಕರ್ನೂಲು]; ಶಕ ೧೧೭೩. ಇರುಗುಣ ಜೋಳನೆಂಬ ನಾಯಕನು 'ಕನ್ನೆ'ಮುನ್ನೂರು ಮುಂತಾದ ನಾಡನಾಳುತ್ತಿದ್ದುದು ಆ ಶಾಸನದಲ್ಲಿದೆ. ಕಂನುಡಿಯಲ್ಲಿ ಬರೆದಿದೆ.

೫. ದಕ್ಷಿಣಭಾರತದ ಶಾಸನಗಳು [South Indian Inscriptions] ಎಂಬ ಮೇಲೆ ಉಲ್ಲೇಖಿಸಿದ ಗ್ರಂಥದ ೧೪೭ನೆಯ ಶಾಸನದಲ್ಲಿ 'ಕನ್ನೆ' ಮುನ್ನೂರಿನ ಉಲ್ಲೇಖವಿದೆ.

[೬] ಅದರಂತೆ ೬೭೧ರಲ್ಲಿ 'ಕನ್ನೆ'ನಾಡಿನ ಹೆಸರು ಬರುವುದು.

[೭] ಇದೇಮೇರೆಗೆ ೬೦೨ರಲ್ಲಿ ಮತ್ತೆ 'ಕಂನೆ' ಮುಂನೂರಿನ ಹಸರು ಉಂಟು.

ಇಂತಹ ಇನ್ನೂ ಹಲವು ಉಲ್ಲೇಖಗಳು ದೊರೆಯುತ್ತವೆ. ಪ್ರಸ್ತುತ ಇವುಗಳ ವಿಸ್ತಾರವು ಇಷ್ಟೆ ನಾಕು.

ಇವೆಲ್ಲ ಆಧಾರಗಳಿಂದ 'ಕನ್ನಡ'ವೆಂಬುದು ಅಬದ್ಧ; ನಿಜ ಪದ; ಇದರ ಮೂಲರೂಪವು ಕಂನಾಡು ಅಥವಾ ಕನ್ನೆನಾಡು ಎಂಬುದೇ ಆಗಿದೆಯೆಂಬುದು ನಿಶ್ಚಿತವಾಗುತ್ತಲಿದೆ. ಅದುದರಿಂದ ಲೇಖನಶುದ್ಧಿಯು ಭಾಷೆಯಲ್ಲಿ ಅವಶ್ಯವೆಂಬ ವಿಚಾರಿಗಳು ಇನ್ನು ಮುಂದೆ 'ಕಂನಾಡು' ಎಂಬುದಾಗಿಯೆ ಈ ಪದವನ್ನು ಬಳಸುವರೆಂದು ಹಾರೈಸಿಯಿಸಿಯಿದೆ.

( ಈ ವಿಷಯವನ್ನು ಕುರಿತು ಕ. ಸಾ. ಪರಿಷತ್ಪತ್ರಿಕೆಯ [illegible] ಬರ ಸಂಚಿಕೆಯಲ್ಲಿಯೂ, 'ಕನ್ನಡದ ನೆಲೆ' ಎಂಬ ಗ್ರಂಥದಲ್ಲಿಯೂ ಬಂದಿರುವ ವಿವರಣೆಯನ್ನೂ ಓದಿ ನೋಡಬಹುದು. —ಲೇ.)

# ಗೋವಾಯಾತ್ರೆ

( ಪ್ರವಾಸ ಪ್ರಬಂಧ )

ಶ್ರೀ. ಎನ್. ಎಸ್. ಗದಗಕರ ಬಿ.ಎ. ಧಾರವಾಡ

★

**ಕನ್ನಡನಾಡಿನ ಒಂದು ಭಾಗವಾಗಿದ್ದರೂ ಇಂದು ವಿದೇಶೀಯ ಪ್ರದೇಶವಾಗಿ ನಿಂತುಕೊಂಡಿರುವ ಗೋವೆಯನ್ನು ಎಲ್ಲರೂ ಒಮ್ಮೆ ನೋಡಬೇಕು. ಅಕ್ಷಯವಾದ ನಿಸರ್ಗಸೌಂದರ್ಯ, ಅಚ್ಚುಕಟ್ಟಾದ ಕೃತ್ರಿಮ ಸೌಂದರ್ಯ, ಎರಡೂ ನಮ್ಮನ್ನು ಬೆರಗುಗೊಳಿಸದೆ ಇರಲಾರವು.**

★

ಧಾರವಾಡದಲ್ಲಿದ್ದಾಗ ತಲೆಹರಟೆ ಹೊಡೆಯುವ ಪ್ರಸಂಗಗಳಲ್ಲಿ 'ಆ ಸೀಮೆ ನೋಡಬೇಕು, ಈ ಬೆಟ್ಟ ಕಾಣಬೇಕು, ಆ ಜಲಪಾತ ಸಂದರ್ಶಿಸಬೇಕು' ಎಂಬ ವಿಚಾರಗಳು ಅನೇಕ ಸಲ ತಲೆಸೋರುತ್ತಿದ್ದುವು. ನಮ್ಮ ಗೋವಾಯಾತ್ರೆಯ ಪ್ರಸ್ತಾಪವಾದರೂ ಒಂದು ದೀಪಾವಳಿಯ ರಾತ್ರಿ, ಹೊಣೆಗಾರಿಕೆಯಿಲ್ಲದ ಮಾತಿನ ಮಾಲೆಯಲ್ಲಿ ಹೊರಟುದು. ಆಮರಗೊಳದಂತಹ ಸಮೀಪದ ನಿಲ್ದಾಣಕ್ಕೆ ಹೋಗಿ ಬರಬೇಕಾದರೆ ಇಪ್ಪತ್ತು ಸಲ ವಿಜೆಮಿಜಿ ಮಾಡಿ, ಅಯವ್ಯಯಪತ್ರಿಕೆ ಸಿದ್ಧಪಡಿಸಿ, ಹೊರಡುವ ವೇಳೆಗೆ ಪೋತೆ ತಪ್ಪಿಸುವ ವಿಚಿತ್ರಬಗೆಯ ತಂಡವ್ವ ನಮ್ಮ ಮೂವರದು— ಕವಿ, ರಾಜಕಾರಣಿ, ನಾನು ಶಿಕ್ಷಕ; ಎಂದಮೇಲೆ ಗೋಪೆಯಂತಹ ಅಪೂರ್ವ ನಾಡಿಗೆ— ಅಂತರ ಹಾಗೂ ನಗದು ಹಣದ ವೆಚ್ಚದ ದೃಷ್ಟಿಯಿಂದ— ನುಡಿದಿನವೇ ಹೊರಡಬೇಕೆನ್ನುವಾಗ ನಮ್ಮ ಸಿದ್ಧತೆ, ಪರ್ಸ್, ಎಷ್ಟು ಲಗಿತ್ತೆಂದು ವಿಸ್ತರಿಸಿ ಹೇಳುವುದೆಂದರೆ, ಕಾಗದ ಸಿಕ್ಕದ ಬೇಳೆಯಲ್ಲಿ ದೊಡ್ಡ ಪ್ರಮಾದವಾಗಬಹುದು.

'ನಗಚ್ಛೇತ್ ಬ್ರಾಹ್ಮಣತ್ರಯಂ', 'ಶ್ರೇಯಾಂಸಿ ಬಹು ವಿಘ್ನಾನಿ' ಎಂದು ಸುಭಾಷಿತಕಾರರ ಶಕುನದ ನಮಸ್ಯೆ ನಮ್ಮನ್ನೆದುರಿಸಿದರೂ, ಕೈಕಾಲು ಕಳೆದುಕೊಳ್ಳುವಷ್ಟು ಅಳ್ಳಿದೆಯವರೂ ಅಸಂಸ್ಕೃತರೂ ನಾವು ಇದ್ದಿಲ್ಲ. ಒದ್ದಿಗಿಂತ ಮನಸ್ಸನ್ನು ಕಲ್ಲು ಮಾಡಿದೆವು. ಅಂತೆಯೇ ಮುಂಜಾವ್ ೧೧-೫೦ಕ್ಕೆ, ಧಾರವಾಡದಿಂದ ಗಾಡಿ ನಿಲ್ದಾಣ ಬಿಡುವ ವೇಳೆಗೆ ಮೂವರೂ ಸುಪಾಸನ ಹಿಡಿದು ಕುಳಿತಿದ್ದೆವು. ಕವಿಮಿತ್ರರು ಪ್ರವಾಸಪ್ರಸಂಗದಲ್ಲಿ ಸಪ್ಲೈರ್ಗೆಂದು ಬೀಡಿ ಹಚ್ಚದಿದ್ದರೆ ಹೇಗೆ? ಕಾವ್ಯವನಿತೆಗೆ ಮೊರೆ ಹೋಗದಿದ್ದರೆ ಹೇಗೆ? 'ತಪ್ಪಿದರೆ ಮುಂದೆ ಅನರ್ಥವಾದೀತೇನೊ' ಎಂಬ ಸಾತ್ತ್ವಿಕ ಭಯದಿಂದ ತೀರ ಭಕ್ತಿಭಾವ ಪುರಸ್ಸರವಾಗಿ ಆ ಕಾರ್ಯಕಲಾಪದಲ್ಲಿ ಮಗ್ನರಾದರು. ಹೊಗೆಯ ಲೀಲಾಜಾಲದಲ್ಲಿ ಬಾಹ್ಯಪ್ರಪಂಚಕ್ಕೆ ತಿಲಾಂಜಲಿ ಇತ್ತರು. ಕವಿ ಎನಿಸಿದ ಪಾಪಕ್ಕಾಗಿ ಕೆಲ ಕ್ಷಣಗಳ ವರೆಗಾದರೂ ಮರೆವಿನ ಆಗರವಾಗಬೇಡವೇ? ಬೀಡಿ ಭಸ್ಮವಾದ ಮೇಲೆ ತಾವೇನೊ, ತಮ್ಮ 'ಗರಿ-ಸಾಂಚಜನ್ಯ'ಗಳೇನೊ! ಅವುಗಳನ್ನು ಮುಂದಿಳೆದುಕೊಂಡು ಧ್ಯಾನಸ್ಥರಾದರು. ಇತ್ತ ರಾಜಕಾರಣಿಗಳು ತಮ್ಮ ಪ್ರೀತಿಯ ರಾಜಕೀಯ ಗ್ರಂಥವಿಲ್ಲದ್ದರಿಂದ, ಪಟಕ್ಕೆ ಬಿದ್ದು ರವೀಂದ್ರರ 'My Reminiscences' ತೆಗೆದು ಕೊಂಡು ಮೋರೆ ತಿರುವಿಕೊಂಡು ಕುಳ್ಳಿರಬೇಕಾಯಿತು. ಜಹಾ, ತಿನಿಸು, ನಮ್ಮ ಪ್ರವಾಸದ ವಸ್ತುಗಳನ್ನು ಸರಿಪಡಿಸಿಕೊಳ್ಳುವುದು, ನೆರೆಹೊರೆಯವರೊಡನೆ ಅಪ್ರಾಸಂಗಿಕ ಜರ್ಜೆ, ಹೆಂಗಳೆಯರ— ಚಿಕ್ಕಮಕ್ಕಳ— ಸದ್ಗೃಹಸ್ಥರ— ರಂಜಕ ಹರಟೆ ನಿರಂತರವಾಗಿದಾಗ, ಗಾಡಿ ಕ್ಯಾಸಲ್‌ರಾಕ್ ದಾಟಿತು. ಪ್ರವಾಸದ ಹೃದಯದಲ್ಲಿ ನಾವು ತಾದಾತ್ಮ್ಯ ತಳೆದೆವು. ಧಾರವಾಡದ ದೈನಿಕ ಜೀವನದ ನೆನಹು ಹಿಂದುಳಿಯಿತು. ಮನದ ಹಕ್ಕಿಯು ಎವೆತೆರೆದಿಕ್ಕುವ ಹೊತ್ತಿನ ಒಳಗೆ ಗಾವುದ ಗಾವುದ ಮುಂದೆ ಹಾರಹತ್ತಿತು.

ಮೊದಮೊದಲು ಘಟ್ಟದೊಳಗಿಂದ ಹೊರಗೆ, ಹೊರಗಿನಿಂದ ಮತ್ತೆ ಹಾವಿನಾಕಾರವಾಗಿ ಒಳಗೆ ಗಾಡಿಯು ಹೋಗುವಾಗ, ಕೇವಲ ಬೆಳಕು-ಕತ್ತಲೆಯ ಅವಿರ್ಭಾವಗಳ ಹೊರತೂ ಯಾವ ಹೊಸ ಭಾವನೆಗಳೂ ಮೊಳೆಯಲಿಲ್ಲ. ಆಗಾಗ ಬರುವ ಆಳವಾದ ಕೊಳ್ಳಗಳ ಹಾಗೂ ದೂಧಸಾಗರದ ರಮಣೀಯ ದೃಶ್ಯವನ್ನು ಕಣ್ಣಾರೆಯುವವರೆಗೆ ನೋಡುವಾಗೆಂದರೆ, ಆಶ್ಚರ್ಯದಿಂದ ಪೂರ್ಣ ಬಾಯ್ದೆರೆದ ಪ್ರವಾಸಿಕರ 'ಆಹಾ, ಉಹು' ಎಂಬ ಉದ್ಗಾರಗಳ ಗಲಭೆಯೇ ಗಲಭೆ. ಮಲೆಗಳ ಮಾಲೆಯನ್ನು ಬಿಂಕವಿಂದ ಸುತ್ತು ವರಿದಂತೆ ಗಾಡಿ ರಭಸದಿಂದ ಹೋಗುವಾಗ, ತುತ್ತತುದಿಯಿಂದ ಬೀಳುವ ಶುಭ್ರನೀರಿನ ಧಾರೆ ಮತ್ತೆ ಮತ್ತೆ ಕಣ್ಣಿಗೆ ಬೀಳುವುದು. ಇಂತಹ ಗಿರಿಕಂದರಗಳಲ್ಲಿ ಅಪಾರ ಹಣಹಾಕಿ ರೇಲ್ವೆಯ ಸೊಬಗಿನ ಸೃಷ್ಟಿಯನ್ನು ನಿರ್ಮಿಸಿದ ಪೋರ್ತುಗೀಜರ ಸಾಹಸಪದ ಕಲ್ಪನೆ ಯಾರಿಗೂ ಬಾರದೆ ಹೋಗದು. ಮುಂಬಯಿ-ಪುಣೆಗಳ ನಡುವೆ ಘಟ್ಟಗಳು ಹತ್ತದರೂ ಇಲ್ಲಿಯದನ್ನು ಅವು ನಾಚಿಸಿಗಟ್ಟವು. ಪ್ರಯತ್ನಪಟ್ಟು ಇಲ್ಲಿಯ ಬೆಟ್ಟಗಳ ಕೊನೆ ನೋಡಲೆಸಗಿದರೆ ಶಿರಸ್ತ್ರಾಣವೆ ನೆಲಕ್ಕೆ ಬಿದ್ದೀತು. ತಲೆಯುಮೇಲಿಲ್ಲದವರಿಗೆ ಅದರ ಹದರಿಕೆಯೆಲ್ಲಿಯದು?

ಕರಂಝೋಲನಂತಹ ನಿಲ್ದಾಣಗಳು— ಹುಲ್ಲಿನ ಚಿಪ್ಪರಗುಡಿಸಿಲುಗಳಿದ್ದ ತಪ್ಪಿಗೆ— ನಮಗೆ ಏನೂ ಮುಹತ್ತ್ವದವಿರಲಿಕ್ಕಿಲ್ಲ. ಆಮಲು ಏರುವವರೆಗೆ ಸ್ವಲ್ಪ ವೆಚ್ಚದಲ್ಲಿ ಕುಡಿದು ಮತ್ತೆ ಉನ್ಮಾದದಿಂದ ಹತ್ತುವ ಜನರ ದೃಷ್ಟಿಯಿಂದ ಆ ನಿಲ್ದಾಣಗಳು

ಅತ್ಯಾವಶ್ಯಕವಾದುವು. ಸ್ವತಃ ಗಾರ್ಡ್ ಎಂಜಿನ್ ಡ್ರೈವರ್ ಇದ್ದರೇ ಈ ಉತ್ಸವದಲ್ಲಿ ಅಧಿಕ ಆಸ್ಥೆ ವಹಿಸುವರೆಂದ ಮೇಲೆ, ಪ್ರವಾಸಿಕರ ಅನುಕೂಲತೆ-ಅನಸುಕೂಲತೆಯ ಕಡೆಗೆ ಲಕ್ಷ್ಯ ಕೊಡುವರಾರು? ಇಂತಹ ಸಮಯನಿಷ್ಠತೆ ಗೋವಾಂತಕ ದೇಶದಲ್ಲೆಲ್ಲ ನೆಲಸಿದೆ? ಆದರೂ ಸಾಮಾನ್ಯತಃ ಆಲ್ಲಿಯ ಜನರಲ್ಲಿ ಸಾಮಾಜಿಕ ಜೀವನವಿದೆ, ರಸಿಕತೆ ಇದೆ; ಆ ನಾಡಿನಲ್ಲಿ ವಿಶಿಷ್ಟ ಬಗೆಯ ಆಡಳಿತವಿದೆ.

ಕಾಲೆಮ್ಮಿನಲ್ಲಿ ಗಾಡಿನಿಲ್ಲಿಸಿ, ಗ್ಯಾಸಿನಿಂದ ಇಡೀ ಗಾಡಿ ಸ್ವಚ್ಛಮಾಡಿ, ಎಲ್ಲರ ಎಲ್ಲ ವಸ್ತುಗಳನ್ನೂ ಪರೀಕ್ಷಿಸಿ 'ಅಯ್ಯೋ ಪ್ರವಾಸದ ಸೌಖ್ಯವೇ' ಎಂದು ಪ್ರಾಮಾಣಿಕ ಪ್ರವಾಸಿಕರು ಹಣೆಹಣೆ ಬಡಿದುಕೊಳ್ಳುವಷ್ಟು ವೇಳೆ ಗಾಡಿ ನಿಲ್ಲಿಸಿ, ಮತ್ತೆ ಬಿಡುವ ದುರ್ಬುದ್ಧಿಯನ್ನು ಅಧಿಕಾರಿಗಳು ಮುಂದು ಮಾಡಿದರು. ಮುಂದೆ ತನ್ನ ಶಾಸ್ತ್ರದಂತೆ ಗಾಡಿ ಹೊರಟಿತು. ಹಾಗೆ ಹೊರಟುದು ಎಷ್ಟು ಹೊತ್ತು ಎನ್ನುವುದು, ರಾತ್ರಿಯಾಗಿ ವಾಸ್ಕೊ ಪ್ಲ್ಯಾಟ್‌ಫಾರ್ಮಿನಲ್ಲಿ ಗದ್ದಲವಾದಾಗ ಗೊತ್ತಾಯಿತು.

ಆಯಿತು. ಗಾಡಿಯ ಸಂದಣಿಯಲ್ಲಿ ಇಷ್ಟು ಹೊತ್ತು ಕುಳಿತು ಬೇಜಾರು ಹೊಂದಿದ ನಮಗೆ 'ಯಾವಾಗ ಇಳಿದೇವೊ ಸ್ವಚ್ಛ ಹವೆ ಉಸುರಾಡಿಸೇವೊ' ಎನಿಸಿತ್ತು. ತಿಂಡಿ ತೀರ್ಥಗಳ ಆತಿವೃಷ್ಟಿ ಈ ಮೊದಲೇ ಆಗಿದ್ದರಿಂದ, ಎರಡು ಮೈಲಿನಲ್ಲಿಯ ಮಾರ್ಮಗೋವಾ ಬಂದರಕ್ಕೆ ನಡೆದುಕೊಂಡೇ ಹೋಗಿ ತಂಗಿದರೆ ನೆಟ್ಟಗಾಗುವುದೆಂದು ನಾನೂ ರಾಜಕಾರಣಿಯೂ ಎಣಿಸಿದ್ದೆವು. ಆದರೆ ತಾನೊಂದು ಬಗೆದರೆ ದೈವವೊಂದು ಬಗೆಯುವುದೆಂಬುದು ಸುಳ್ಳಲ್ಲ. ನಮ್ಮ ವಿಚಾರವನ್ನು ನಮ್ಮ ಕವಿ ಕೇಳಿದರಲ್ಲವೇ? ಮೊದಲೇ ಕಾಲೆಮ್ಮಿನಿಂದ ಸ್ವಲ್ಪ ತಲೆಕೂಲಿಯೆಂದು ಗುಣುಗುಟ್ಟುತ್ತಿದ್ದನು. 'ಈಗ ನನ್ನ ಕಾಲೇ ಏಳವು' ಎಂದು ಬೀದಿಯ ಬದಿ ಹಿಡಿದು ಕುಳಿತುಬಿಟ್ಟ. ನಾವಾದರೂ 'ಇದೇನು ಅನರ್ಥ, ಪರಸ್ಥಳದ ಪ್ರಶ್ನೆ' ಎಂದು ಅವನ ಪರಾಮರಿಕೆ ತೆಗೆದುಕೊಳ್ಳಲುಪಕ್ರಮಿಸಿದೆವು. ನಿಜವಾಗಿಯೂ ಅವನ ಮೈ ಬಿಸಿಯಾಗಿದ್ದಿತು. ಮಂಗತನವೇನೂ ಆಗ ಅಷ್ಟು ಕಾಣಲಿಲ್ಲ. ಚಹಾ ಸಿಕ್ಕರೆ ಸಮಾಧಾನವಾಗುವುದೆಂದು ಅವನ ಹಾರಯಿಕೆ. 'ನಿಂತರೆ ಚಹಾ ಕುಳಿತರೆ ಚಹಾ' ಎನ್ನುವ ಅವನ ಜಟ್ಟ, ನಮಗೇನೂ ಧಾರವಾಡದ ನಿತ್ಯ ಜೀವನದಲ್ಲಿ ಹೊಸದಿದ್ದಿಲ್ಲ. ಮುಂದೆ ಆಲ್ಲಲ್ಲಿ ಅಲೆದಾಡಿ, ಕ್ಯಾಫಿಯಾಸ್ಪಿರಿನ್ ಗುಳಿಗೆ ಕೊಂಡು ತಂದು, ಚಹಾದ ಅಂಗಡಿಗೆ ಬಂದೆವು. ಅಲ್ಲೇನಿದೆ— ದೀಸಾವಳಿಯ ಸಂಭ್ರಮದ ಹೊರತು! ಕೇವಲ ದೀವಿಗೆಗಳ ಭರ್ಜರಿ. ಚಹಾ ಮಾಡುವ ಹುಡುಗರಿಗೂ ಗಲ್ಲೆಯ ಮೇಲೆ ಕೂಡುವ ಮಾಲಕನಿಗೂ ಅಂದು ಸಂಪೂರ್ಣ ಬಿಡುವು. ಆದರೇನು? ನಮ್ಮ ವಿಗಾಗಿ—ತಲೆ ಹಾಗೂ ಆರೋಗ್ಯ ಸಮವಿಲ್ಲದವನಿಗಾಗಿ— ಏಗಾದರೂ ಚಹಾ ಮಾಡಿಕೊಡಬೇಕೆಂದು ಬಿನ್ನವಿಸಿಕೊಂಡೆವು. ಮಾಲಕ ಉಡುಪಿಯವ. ಕನ್ನಡ ಬಲ್ಲವ. ನೆಲೆಯನಿಗೆ ಸ್ವಲ್ಪ ಕಾಯಿಲೆಯ ಲಕ್ಷಣವೆಂದು ವಸ್ತುಸ್ಥಿತಿ ಬಿಚ್ಚಿ ಹೇಳಿದಾಗ, ಅವನ ಜೊಟ್ಟಿಯಲ್ಲಿ— ಸ್ವಲ್ಪ ದೊಡ್ಡದು— ಯಾವ ದೇವರು ಹೊಕ್ಕನೊ— ಅಂತೂ ಮೂವರಿಗೂ ಚಹಾ ತಿನಿಸು ಸಿಕ್ಕುವು. ಕ್ಯಾಫಿಯಾಸ್ಪಿರಿನ್ ಮತ್ತು ಚಹದ ಗುಟುಕಿಗೆ ಕವಿಮಿತ್ರನು ಚೇತರಿಸಿಕೊಂಡೇಳುವನೇನೊ ಮುನ್ನುಗ್ಗುವನೇನೊ ಎಂದು ಎಣಿಸಿದ್ದೆವು. ಆದರೆ ಮುಂದೆ ಒಂದು ಹೆಜ್ಜೆ ಸಹ ಹಾಕಲು ಅಶಕ್ಯವೆಂದುಸಿರಿ ಕದಲದೆ ಕುಳಿತುಬಿಟ್ಟ! ಅಂತರವೋ ಎರಡು ಮೈಲು; ಮೇಲಾಗಿ ಕಾಡಿನಲ್ಲಿಯ ಕಾಳರಾತ್ರಿ; ಜೇಗಾದರೊಮ್ಮೆ ಗೋವೆಗೆ ಮುಟ್ಟಿದರಾಯಿತು ಎಂಬ ಉದ್ದೇಶದಿಂದ ಟ್ಯಾಕ್ಸಿದರ ಕೇಳಿದರೆ, ಅದು ಒಂದೇ ಉಳಿದಿತ್ತಾದ್ದರಿಂದ, ಮೂಲಕನು ಮೂಡು ರೂಪಾಯಿ ಕೇಳಬೇಕೆ? ಇನ್ನೇನು ಮಾಡುವುದೆಂದು 'ಹರಿ ನಿನ್ನ ಚಿತ್ತ' ಎಂದುಸಿರಿ, ಕೇವಲ ಎರಡು ಮೈಲಿನ ಸಲುವಾಗಿ ನಿರರ್ಥಕ ಮೂರು ರೂಪಾಯಿ ತೆತ್ತು, ವಿಚಿತ್ರ ಗೆಳೆಯನನ್ನು— ಕವಿರಾಜನನ್ನು— ಮನೆಗೆ ಮುಟ್ಟಿಸಿದೆವು. ಧನ್ಯ ಧನ್ಯವೆಂದು ಕೊನೆಗೆ ನಮ್ಮ ಬೆನ್ನು ನಾವೇ ತಟ್ಟಿಕೊಂಡೆವು. ಇಲ್ಲದಿದ್ದರೆ ನಮ್ಮ ಆಗಿನ ಕುಶಾಗ್ರ ಬುದ್ಧಿಗೆ ಪರಕೀಯರು ಹೇಗೆ ಪಾರಿತೋಷಕ ಕೊಡಲು ಸಾಧ್ಯವಿತ್ತು?

ರಾತ್ರಿಯನ್ನೆಲ್ಲಾ ಗೋವೆಯಲ್ಲಿ ಸುಸೂತ್ರವಾಗಿ ನಿದ್ರೆಯಲ್ಲಿ ಕಳೆದರೂ, ಮರುದಿನದ ಮುಂಜಾವ ಚಹದ ನಂತರ ತಿರುಗಾಟಕ್ಕೆಂದು ಮೀಸಲಾಯಿತು. ಅಷ್ಟರಲ್ಲಿ ಕವಿ ಮಹಾಶಯರೂ ನೆಟ್ಟಗಾಗಿದ್ದರು. ಮನೆಯ ಮೂಲಕನನ್ನುಳಿದು ನಾವೇ ಮೂವರಿದ್ದುದರಿಂದ, ಪಾಕಶಾಸ್ತ್ರ ವ್ಯವಸ್ಥೆ ನಮ್ಮ ಮೈಮೇಲೆ ಬಿದ್ದುದರಲ್ಲಿ ಯಾವ ಆಶ್ಚರ್ಯ ಎನಿಸಲಿಲ್ಲ. ಹೆಜ್ಜು ನಡೆಯಲಾಗದವರು ಅಡಿಗೆಯ ಮೇಲ್ವಿಚಾರಣೆಗೆ ನಿಯಮಿಸಲ್ಪಟ್ಟರು. ಹೀಗೆ ಸರತಿಯಂತೆ ತಿರುಗಾಟಕ್ಕೆ, ತಣ್ಣೀರು ಸ್ನಾನಕ್ಕೆ ಪ್ರಾರಂಭವಾಯಿತು.


ಒಡೆದ ಕನ್ನಡಿ

( ೧೧ ಹಕಟಿಗಳ ಸಂಕಲನ )

ಇದೀಗ ಪ್ರಕಟವಾಗಿದೆ.

ಲೇಖಕರು : ಎನ್. ಎಸ್. ಗದಗಕರ ಬಿ.ಎ.

'ಶ್ರೀರಂಗ'ರು ಮುನ್ನುಡಿ ಬರೆದಿದ್ದಾರೆ.

ಮಾರಾಟಗಾರರು :

ಮನೋಹರ ಗ್ರಂಥಭಾಂಡಾರ, ಧಾರವಾಡ

# ಬಡತನದ ಬಾಳು

★

'ಆನಂದಕಂದ'ರ ಕಥಾಸಂಗ್ರಹ.

ಕನ್ನಡ ಜನತೆಯ ಜೀವನದ ನಿಜವಾದ ಚಿತ್ರ
ಇದರಲ್ಲಿ ಮೂಡಿದೆ.
ಬೇಕಾದವರು
'ಜಯಂತಿ' ಕಾರ್ಯಾಲಯಕ್ಕೆ
ಬರೆಯಿರಿ.

ಗೋವಾ ಬಂದರವು ಸೌಂದರ್ಯದಧಿದೇವತೆಯ ಆವಾಸ. ಹೆಸರಿಲ್ಲದ—ನಮಗೆ ಗೊತ್ತಾಗದ - ಉತ್ತುಂಗ ವೈಕ್ಷಗಳು, ಹಚ್ಚ ಹಸಿರು ಮುರಿಯುವ ಗುಡ್ಡಗಾಡು ಪ್ರದೇಶ, ಆಳವಾದ ಕೊಳ್ಳ, ಯಾವಾಗಲೂ ಕಣ್ಮಟ್ಟುವ ಸಮುದ್ರದ ದೃಶ್ಯ, ಆದರ ಸಮೀಪದಲ್ಲಿಯ ಚಿಲುಪೆಯರ ಪಾಯ್ದಾಟ—ರಸಿಕರನ್ನು ಮುಗ್ಧಗೊಳಿಸುತ್ತಿದ್ದುವು. ಟಿಕೀಟು ಕೊಂಡುಕೊಂಡು ನೋಡಲು ಬಂದುದಕ್ಕಾಗಿ ತಿರುಗಿ ಹೋಗಬೇಕೆಂಬ ಕಲ್ಪನೆ ತರುವುದು.

ಇಂತಹ ಗೋವೆ ಲಲಿತಲಕ್ಷ್ಮೀನಿವಾಸಸ್ಥಾನವೆನಿಸಿದರೂ 'ಹೆಚ್ಚು ಕಾಲ ಅಲ್ಲಿರಲು ಸಾಧ್ಯವಿಲ್ಲವಲ್ಲಾ ನಮಗೆ!' ಎಂದು ಹಳಹಳಿಸದಿರಲಿಲ್ಲ. ಮೀನ ಹಿಡಿಯುವುದು ಹಿಡಿದದ್ದನ್ನು ತಿನ್ನುವುದು ಅಲ್ಲಿಯವರ ನಿತ್ಯದ ಉದ್ಯೋಗ. ನೀರು ಕುಡಿದಷ್ಟು ಸಹಜವಾಗಿ ಸೆರೆ ಕುಡಿಯುವುದು ಅಲ್ಲಿಯ ಜನರಿಗೆ ರೂಢಿಯಾಗಿದೆ, ರಕ್ತಗತವಾಗಿದೆ. ಆತ್ಯಲ್ಪ ಬೆಲೆಯಲ್ಲಿ ಇಲ್ಲಿ ಬಳ್ಳಿಯ ಪಾನೀಯಗಳು ದೊರೆಯುವುದುಂಟು. ಅಂತೆಯೆ ಸಿಲೋನಿನಲ್ಲಿ ಗಿಜಲ ರೂಪಾಯಿಗೆ ಸಿಕ್ಕುವ ಸೆರೆ ಇಲ್ಲಿ ಟೀಕ್ಕೆ ಸಿಕ್ಕುವುದೆಂದು ಇಲ್ಲಿ ಬಂದು ಬೀಡುಬಿಟ್ಟುಕೊಂಡಿದ್ದ ಸದ್ಬ್ರಾಹ್ಮಣನ ರಸಿಕತೆಗೆ ಏನೆಂದುಸುರುವುದು? ಭಾರತದ ಅವಸ್ಥೆಯನ್ನು ಆ ಅವ್ಯವಸ್ಥಿತ ಮನಸ್ಸಿನ ಮನುಷ್ಯನೆದುರು ಏನು ಜರ್ಜಿಸುವುದು? ಅಂತಪನಲ್ಲಿ ಪರಿವರ್ತನೆ ಹೇಗೆ ತಾನೇ ಸಾಧ್ಯ?

ರೇತಿಮೆ-ಉಣ್ಣೆಯ ಅರಿವೆ, ಫೌಂಟನ್‌ಪೆನ್, ವಾಚ್ ಮೊದಲಾದ ವಸ್ತುಗಳು ಗೋವೆಯಲ್ಲಿ ಬಹಳ ಕಡಿಮೆ ಬೆಲೆಗೆ ದೊರೆಯುವುವೆಂದು ಧಾರವಾಡದಲ್ಲಿ ಪ್ರತೀತಿ ಇದ್ದುದು ನಿಜ. ಆದರೆ ವಸ್ತುಸ್ಥಿತಿ ಅವಲೋಕಿಸಿದಾಗ, ಧಾರವಾಡದಲ್ಲಿದ್ದುದಕ್ಕಿಂತಲೂ ಇಲ್ಲಿ ಒಂದು ತೂಕ ಹೆಚ್ಚಿನ ಬೆಲೆಯವೇ ಎಂದು ಮನವರಿಕೆಯಾಯಿತು. ಕನ್ನಡ ಮಾತನಾಡುವ ಜನರು ಅಲ್ಲಲ್ಲಿ ಕಣ್ಣಿಗೆ ಬೀಳುವರು. ವ್ಯವಹಾರದಲ್ಲಿ ಕೊಂಕಣಿಗೆ ಪ್ರಾಶಸ್ತ್ಯ. ಆದರೆ ಅಡಳಿತವೆಲ್ಲ ಪೋರ್ತುಗೀಜ ಭಾಷೆಯಲ್ಲಿ.

ನಮ್ಮ ಗೋವೆಯು ಗೆಳೆಯರ ಸಹಾಯದಿಂದ ಅದರ ರಾಜಧಾನಿ 'ಪಂಜಿ' ನಗರದ ಪುಣ್ಯದರ್ಶನ ಲಭಿಸಿತು. ಪಂಜಿಯ ಬೀದಿಗಳು, ಕಟ್ಟಡಗಳು, ಅಂಗಡಿಗಳು, ವಿದ್ಯಾನಿಲಯಗಳು ನಿಗ್ರಹಗಳಂತೆ ಇಲ್ಲವೆ ಚಿತ್ರಿತ ವಸ್ತುಗಳಂತೆ ತಿದ್ದಿತೀಡಿ ಮಾಡಿದುವು. ಅಲ್ಲಿಯ ದೇವಾಲಯಗಳೊ? ಅವು ಆಂಗ್ಲ ಪ್ರಾರ್ಥನಾಲಯಗಳಂತೆ ಅಚ್ಚುಕಟ್ಟಾದುವು. ಅಂದವಾದ ಗೋಪುರಗಳುಳ್ಳವು ದೇವಾಲಯಗಳೆಂದರೆ ಸ್ವಚ್ಛತೆ, ಪ್ರಶಾಂತತೆ, ಪಾವಿತ್ರ್ಯಗಳ ನೆಲೆವೀಡು ಎಂಬ ನೈಜ ಕಲ್ಪನೆ ಬರಬೇಕಾಗಿದ್ದಲ್ಲಿ ಇಲ್ಲಿಗೆ ಬಂದು ಕಣ್ತುಂಬ ನೋಡಬೇಕು. ನಮ್ಮಲ್ಲಿಯ ಎಷ್ಟೋ ದೇವಾಲಯಗಳ ಅನಾಥಾವಸ್ಥೆ, ಸುತ್ತುಮುತ್ತಲಿನ ಅನಾರೋಗ್ಯ, ಅವ್ಯವಸ್ಥೆ ಇಲ್ಲಿ ಕಾಣಲಾರವು.

ಪಂಜಿಯನ್ನು ನೋಡಿಕೊಂಡು ಸ್ಟೀಮ್‌ಲಾಂಚಿಗೆ ಮುಟ್ಟಿಸುವ ಬಸ್ ನಿಲ್ದಾಣಕ್ಕೆ ಬಂದೆವು. ಬಸ್ ಹೊರಡುವುದು ಇನ್ನೂ ತಡವಿತ್ತೆಂದು, ಅದೇ ಕೊಂಡುಕೊಂಡ ಉಪ್ಪಿನಕಡಲೆ ತಿನ್ನುತ್ತಾ ಆ ಸುದ್ದಿ ಈ ಸುದ್ದಿ ಮಾತನಾಡುತ್ತ ನಿರುದ್ದಿಶ್ಯರಾಗಿ ನಿಂತಿದ್ದೆವು. ನಮ್ಮ ಕನ್ನಡ ಮಾತು ಕೇಳಿ ಎರಡೂ ಕಾಲು ಹೋದ ಹಳವ. ನೊಬ್ಬ ಸರಿಯುತ್ತ ಬಂದ. ವೇಷದಿಂದಲೇ ಭಿಕ್ಷೆಯವನೆಂದು ತಿಳಿದು ನಾವು ಅವನಿಗೆ ಒಂದಾಣೆ ಕೊಟ್ಟೆವು. ಅವನು ಬಹುಶಃ ಅರೆಹುಚ್ಚನಿರಬೇಕು ಏಕೆಂದರೆ ನಾವು ಭಿಕ್ಷೆಕೊಟ್ಟ ಮರುಕ್ಷಣವೇ ತನ್ನ ಪೂರ್ವೇತಿಹಾಸ ಹೇಳಲು ಪ್ರಾರಂಭಿಸಿದ. ನಮ್ಮಲ್ಲಿಯ ರಾಜಕಾರಣಿಗೆ 'ನಮ್ಮ ಗೌಡರನ್ನು ತೋರಿಸಿರಿ, ನಿಮಗೆ ಗೊತ್ತಿರಲೇಬೇಕು' ಎಂದು ದುಂಬಾಲು ಬಿದ್ದನು. ನಿಜವಾಗಿ ಹೇಳಬೇಕಾದರೆ ನಾವು ಮೂವರೂ ಅವನನ್ನು ಇಲ್ಲಿಯೇ ಮೊದಲಬಾರಿ ಕಂಡದ್ದೆಂದು ಇಪ್ಪತ್ತಿಷ್ಟು ದಿಗಿಲಾಯಿತು. ಅವನ ಸ್ಥಿತಿಗತಿ ಕೇಳಿಕೊಳ್ಳುವಷ್ಟು ತಾಳ್ಮೆಯನ್ನು ನಾವು ಕಡ ತಂದಿದ್ದರೂ, ಹೆಚ್ಚು ವೇಳೆ ನಿಲ್ಲಲು ವೇಳೆ ಇದ್ದಿಲ್ಲ. ಮಬ್ಬಿಗೆ ಬಿದ್ದು ಒಂದು ಗಳಿಗೆ ನಿಂತಿದ್ದರೆ—ಶಿಗ್ಗಾಂವಿಯಲ್ಲಿಯ ಅಣ್ಣತಮ್ಮಂದಿರಲ್ಲಿಯ ಯಾವ ಒಳಜಗಳಕ್ಕಾಗಿ ತನ್ನ ಕಾಲು ಜೋದುಪೋ, ತನ್ನಹೊಲಮನೆ ಹೆಂಡಿರುಮಕ್ಕಳು ಹೇಗೆ ಹೆರವರ ಆಶ್ರಯ ಪಡೆಯಬೇಕಾಯಿತೋ, ತನಗಾದ ಅನ್ಯಾಯದ ಸೇಡಿಗಾಗಿ ಹೇಗೆ ಇನ್ನೂ ಹೊಂಚು ಹಾಕುತ್ತಿರುವನೋ, ಸ್ವದೇಶದ ಜಾತಿ-ಮತ ಪಂಥದ ಗಾಳಿ ಸೋಂಕದ ಆ ಪರನಾಡಿನಲ್ಲಿ ತನ್ನ ಜರಿತಾರ್ಥ ಸಾಗಿದ ಗುಟ್ಟೇನೊ— ಇವೆಲ್ಲವನ್ನೂ ಆ ಹುಚ್ಚ ಜಾಜೂ ತಪ್ಪದೇ ಉಪ್ಪುಸಾರ ಹಚ್ಚಿ ಹೇಳಿ, ಆಂಗ್ಲ ಸಾಹಿತಿ Oliver Goldsmith ನ 'disabled Soldier' ನಂತಹ ಆತ್ಮವೃತ್ತ ನೆನಪಿಗೆ ತರಿಸಿ ನಿಟ್ಟುಸಿರಿಡುವಂತೆ ಮಾಡಬಹುದಾಗಿತ್ತು.

'ಇವೊಂದು ರಾತ್ರಿ ದಯಮಾಡಿ ಇಲ್ಲಿಯೆ ನನ್ನ ಮನೆಯಲ್ಲಿ ಇಳಿದುಕೊಂಡು ಬಡವನ ಆತಿಥ್ಯ ಸ್ವೀಕರಿಸಲೇ ಬೇಕು' ಎಂದು ಅವನು ಕನಿಕರ ಹುಟ್ಟುವಂತೆ ಹೇಳಿಕೊಳ್ಳುವಾಗ 'ಇದೇನು ಇವನ ಸಹಿವಂತಿಕೆ, ಇದೆಂತಹ ಅಂತಃಕರಣ ಪ್ರವೃತ್ತಿ?'

ಎಂದು ನಮಗೆ ಅನಿರ್ವಚನೀಯ ಮರುಕ ಉಂಟಾಯಿತು. ಏನೇ ಆಗಲಿ, ಅವನ ಅಶ್ರಯ ಹೊಂದುವ ಸದ್ಬುದ್ಧಿಯನ್ನು ದೇವರು ನಮಗೆ ದಯೆಪಾಲಿಸಲಿಲ್ಲ. ಹಾಗಾಗಿದ್ದರೆ ಗೋವೆಯ ನರಕವನ್ನೋ ನಂದನವನದ ಐಸಿರಿಯನ್ನೋ ನಾವು ಕಾಣಲು ಅನುವಿತ್ತು. ಅದೆಲ್ಲವೂ ಈಗ ಊಹಾಲೋಕದ ಸಂಗತಿ!

ಎರಡು ಮೂರುದಿನ ನಾವು ಗೋಮಾಂತಕದ ವಿಭಾಗಗಳಲಿ ಉಗಿಹಡಗದ ಪ್ರವಾಸಕ್ಕೆಕೊಂಡಾಗಿನ ಸೂರ್ಯಾಸ್ತದ ಗುಲಾಬಿ, ಗಂಡಸರು ಹೆಂಗಸರೆಂಬ ಭೇದಭಾವವಿಲ್ಲದೆ ನಿಸ್ಸಂಕೋಚವಾಗಿ ಈಜುವ ಉತ್ಸುಕತೆ ಇವುಗಳನ್ನು ನಾವು ಮರೆಯುವಂತಿಲ್ಲ. ಮುಗಿಲು ಮಾರಿಯ ರಾಗರತಿ, ಅಲ್ಲಾದಕರವಾದ ತಂಗಾಳಿ, ಕುಲುಕುಲು ನಗುವ ಅಲರುಗಳ ವೃಕ್ಷರಾಜಿ, ತೀರದ ಕಡಲ ದೃಶ್ಯ, ನಾವಿನಲ್ಲಿಯ ನಾವಿಕರ ವಿಚಿತ್ರ ದೈನಿಕ ಜೀವನ, ಹತ್ತುಹೆಜ್ಜೆ ನಡೆಯುವುದರಲ್ಲಿ ಕಾಲು ಸೋತುಹೆಂದು ಗಕ್ಕನೆ ಕುಳಿತು ಚಹದ ಸತ್ಯಾಗ್ರಹ ಹೂಡುವ ನಮ್ಮ ಕವಿಮಿತ್ರನ ವಿಚಿತ್ರ ಮನೋವ್ಯಾಪಾರ— ಎಲ್ಲವೂ ಅಚ್ಚಳಿಯದೆ, ಚಿತ್ತಭಿತ್ತಿಯಲ್ಲಿ ಚಿತ್ರಕೊರೆದಂತೆ ಬಹುಕಾಲ ಉಳಿಯುವುವ್ವ. ಬಯಲು ಸೀಮೆಯ ಜನರಿಗೆ ಜಾಯಲ್ಲಿ ನೀರು ಹರಿಸುವುವ್ವ.

ಮರುದಿನ ಮುಂಜಾವು ಧಾರವಾಡದ ಟಿಕೀಟು ಕೊಂಡು ಗೋವಾ ಬಿಟ್ಟಾಗ, ಬಹಳ ವೇಳೆ ನಮ್ಮ ಮೂವರಿಗೂ ನಿದ್ರೆಯಗುಂಗು. ಸ್ಪೆನ್ಸರಿನ ಚಹ ಎರಡುಸಲ ದೊರೆತಮೇಲೆ ಕಣ್ಣು ನಿಚ್ಚಳವಾದುವೆನ್ನಲು ಅಡ್ಡಿ ಇಲ್ಲ. ಹಾಗೂ ಹೀಗೂ ಗಾಡಿ ಒಮ್ಮೆ ಕ್ಯಾಸಲ್‌ರಾಕ್ಕಿಗೆ ಬಂದಾಗ, ನಮ್ಮ ಊಟದ ಪರಲು ಹರಿದುಕೊಳ್ಳಬೇಕಾದರೆ ಮೊದಲು ಅಧಿಕಾರಿಗಳ ತಪಾಸಣೆ ಮುಗಿಯಬೇಕಿತ್ತು. ಅದು ಮುಗಿದ ಹೊರತು ನಮ್ಮ ಹಸಿವೆ ಹಿಂಗುವಂತಿದ್ದಿಲ್ಲ. ಅದು ತೀವ್ರ ಮುಗಿಯುವ ಲಕ್ಷಣ ಕಾಣಲಿಲ್ಲ. ಹೀಗಾಗಿ ಬರುಯೋಗುವ ಅಧಿಕಾರಿಗಳ ದರ್ಪದ ಮುಖಮುದ್ರೆ, ಸೂಟು-ಬೂಟು-ಟಾಯ್‌ಗಳ ಥಳಿ, ಕೈಗಡಿಯಾರದ ಮಿನಿಟು ಮುಳ್ಳು ಇವನ್ನು ಮತ್ತೆ ಮತ್ತೆ ನೋಡಿಕೊಳ್ಳುವುದೇ ನಮ್ಮ ಅನಿವಾರ್ಯ ಧ್ಯೇಯವಾಗಿ ಪರಿಣಮಿಸಿತು. ಅಂತೂ ಊಟದ ಕಾಟ ಕಳೆದ ಮೇಲೆ, ಗಾಡಿಯಲ್ಲಿ ತೂಕಡಿಕೆ— ಎದುರಿನವರಿಗೆ ಡಿಕ್ಕಿ ಹೊಡೆಯುವುದು— ಮನಃಪೂರ್ವಕವಾಗಿಯಲ್ಲ!

ಕೊನೆಗೊಮ್ಮೆ ಹೋಂಡಾ ಬಂದಿತು. ಗಾಡಿ ನಿಂತಿತು. ಎಷ್ಟು ಹೊತ್ತೆಂದು ಕೇಳುವಿರಾ? ತಾಳ್ಮೆಗುಣದ ಪರೀಕ್ಷೆಯಾಗಿ ಧಾರವಾಡದ ಕವಿಮಿತ್ರರು ರಾಜಕಾರಣ ಗೆಳೆಯರು ಸುದೀರ್ಘ ಚರ್ಚೆ ಮಾಡಿ ತಮ್ಮ ತಲೆ ಕೆಡಿಸಿಕೊಳ್ಳುವಷ್ಟು—ನನ್ನ ತಲೆ ಕೆಡಿಸುವಷ್ಟು ಕಾಲ! ಆಗಾಗ ಒಳ್ಳೇ ಚಹದ ಕೊರತೆ ಇದ್ದಿಲ್ಲವೆಂತಲೇ ನಾನು ಮಾತ್ರ ಕವಿಗಳಂತೆ ಭಾವನಾ ಜೀವಿಯಾಗದೆ, ರಾಜಕಾರಣಿಯಂತೆ ಕ್ರಾಂತಿಯ ಕಳಸ ಮುಟ್ಟಲಾಗದೆ, ತೀರ ಸಾಮಾನ್ಯ ವ್ಯಕ್ತಿಯಂತೆ ದೀಪಾವಳಿಯ ವಿವಿಧ ಸಂಜೆಕೆಗಳಲ್ಲಿಯು ಕೊಂಕು ವಿಕಾಂಕ, ವ್ಯಂಗ್ಯಪ್ರಬಂಧ, ನೀಳ್ಗತೆ, ರೂಪಕ, ರಸವಿಮರ್ಶೆಗಳಲ್ಲಿ ಸಾಕಷ್ಟು ತನ್ಮಯನಾಗಿದ್ದೆ. ಇಲ್ಲದಿದ್ದರೆ ಇವರ ಮಹಾವಾಗ್ಯುದ್ಧದಲ್ಲಿ ಪಾಮರನಾದ ನನ್ನ ಗತಿ ಏನಾಗಬಹುದಿತ್ತೊ?

ಗೋವೆಗೆ ಹೋಗಿ ಬಂದು ನಾನು ಬೃಹಸ್ಪತಿಯಾಗದಿದ್ದರೂ, ವಿಶಾಲ ವಿಶ್ವದ ವಿವಿಧ ಅನುಭವ ಸಂಸ್ಕಾರ ನನ್ನಿಂದ ಪಡೆಯಲಾಗದಿದ್ದರೂ, ಸುಸಂಸ್ಕೃತ ಗೆಳೆಯರ ಸಹವಾಸದಲ್ಲಿ ತಲೆತುಂಬ ಹರಟುವುದು, ಹೊಟ್ಟೆತುಂಬ ನಗುವುದು, ಎಚ್ಚರತಪ್ಪಿ ನೆಲಕ್ಕೆ ಉರುಳುವಷ್ಟು ಕಾಲ ನಡೆಯುವುದು ಇವನ್ನೆಲ್ಲ ಕಲಿತುದಾಯಿತು. ಗಂಡು-ಹೆಣ್ಣಿನ ಸಮಸ್ಯೆಗಿಂತ ನಿಸರ್ಗದ ಅಲ್ಲಿಯ ಐಸಿರಿ ಮರೆತವನು ಪಾಪಿ 'ಗೋಮಾಂತಕದ ಮಹಿಮೆ ಇಷ್ಟೇಯೆ?' ಎಂದು ಮೂಗು ಏರಿಸಲೂ ಬಾರದು. ಹಿಂದುಸ್ತಾನದ ಉಳಿದ ಭಾಗಗಳಲ್ಲಿ ಇರುವುದು ಅಶಕ್ಯವಾದಾಗ, ಏನೊಂದು ಕಾರಣದಿಂದ ಪರದೇಶದಲ್ಲಿ ಸುಖವಾಗಿ ಕಾಲಕ್ಷೇಪ ಮಾಡುವುದು ಹೆನ್ನು ಎನಿಸಿದರೆ ಗೋವೆಗೆ ಸರಿಯಾವುದು? ಯುರೋಪ, ರತಿಯಾ, ಅಮೇರಿಕಾ ದೇಶಗಳಂತಹ ಯಾಂತ್ರಿಕ ಜಗತ್ತು, ಕಡಲ ಜೆಲುವು; ಜಲಸಂಯಾಟನದ ಉಬ್ಬು, ಮಾದರಿಯ ಅಚ್ಚುಕಟ್ಟುತನ, ಕಲೋಪಾಸನೆ, ತಲೆಬಾಲವಿಲ್ಲದ ವ್ಯಕ್ತಿ ಸ್ವಾತಂತ್ರ್ಯ—ಎಲ್ಲದರ ಸ್ವಾರಸ್ಯವನ್ನು ಸ್ವಲ್ಪದರಲ್ಲಿ ನವಿಮ ತಲೆ ಹಾಗೂ ಒಬ್ಬಿಯನ್ನು ಸರಿಪಡಿಸಿಕೊಳ್ಳಲು ಸಂಧಿ ಕಲ್ಪಿಸಿ ಕೊಡುವ ಗೋಮಾಂತಕವೇ ನಿನಗೆ ಋಣಿಯಾಗದವರಾರು? ಕೊನೆಗೆ ಏನು ಸಿಕ್ಕು ಏನು ಸಿಕ್ಕದಿದ್ದರೂ ಜೇಬಿನಲ್ಲಿಯ ಳಂ ರೂಪಾಯಿ (ಮೂವರವೂ ಕೂಡಿಸಿ) ಛಟ್ ಎನಿಸಿದ ತಪ್ಪಿಗೆ ನಾವಷ್ಟ ಮಾತ್ರ ಗೋಮಾಂತಕಕ್ಕೆ ಋಣಿಯಾಜೆವ್ಯ! ಹೆಚ್ಚೇನು ಹೇಳುವುದು?


ನಾಲ್ವತ್ತು ವರ್ಷಗಳ ಅನುಭವದಿಂದ ಶ್ರೇಷ್ಠವೆನಿಸಿದ

**ಆಯುರ್ವೇದೀಯ ಔಷಧಗಳು.**

ವೈದ್ಯ ಲೋಂಢೆ ಇವರ ಜಳಜ್ವರದ ಗುಳಿಗೆ.
ಸರ್ವಪ್ರಕಾರದ ಜ್ವರಗಳಿಗೆ ಉಪಯುಕ್ತ.
ಅಮೃಂಶಗುಳಿಗೆ—ಸರ್ವಪ್ರಕಾರದ ಅಮೃಂಶದ ಮೇಲೆ ಗುಣಕಾರಿ.
ವಿಜಂಟರನ್ನು ನೇಮಿಸುವುದು ಇದೆ.
ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್— ವೈದ್ಯ ಪಿ ಕೆ. ಲೋಂಢೇ ಫಾರ್ಮಸಿ,
ಪನವೇಲ—ಕುಲಾಬಾ

# ಕರ್ನಾಟಕದ ಚಳುವಳಿಯಲ್ಲಿ ★ ಧಾರವಾಡದ ಭಾಗ

( ಸ್ವಾತಂತ್ರ್ಯಾನಂತರದ ಭಾಗ )

★

ಶ್ರೀ. ಮುಡವೀಡು ಕೃಷ್ಣರಾಯರು, ಧಾರವಾಡ.

**ಕನ್ನಡ ನಾಡಿನ ವಿಚ್ಛೇದದ ಕಾರ್ಯಗಳು ೧೮೫೬ನೆಯ ಶತಮಾನದಲ್ಲಿಯೆ ಪ್ರಾರಂಭವಾಗಿ ಮುಂದುವರಿದಿದ್ದುವು; ಆದರೆ ಜನರಲ್ ಮನ್ರೋನಂತಹ ಪರಕೀಯನೂ ಈ ಸಂಸ್ಕೃತಿ-ಪೂರ್ಣ ರಾಷ್ಟ್ರವನ್ನು ವಿಚ್ಛೇದಗೊಳಿಸಲಾಗದೆಂದು ಆಗ ಎಷ್ಟೊಂದು ಹಂಬಲಿಸಿದ್ದಾನೆಂಬುದನ್ನು ನಾವು ಅರಿತುಕೊಳಬೇಕು.**

೬

ಪ್ರಜೆಯ ದೇಶವಾಯಿಗೆ ಅವಸಾನಕಾಲ ಬಂದ ಲಕ್ಷಣಗಳನ್ನು ಮುಂಗಂಡು, ಈ ಭಾಗದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಸೇನಾಧಿಪತಿಯಾಗಿದ್ದ ಕರ್ನಲ್ ಮನ್ರೋನು, ಕೃಷ್ಣಾ-ತುಂಗ ಭದ್ರಾ ನದಿಗಳ ನಡುವಿನ ಪ್ರದೇಶದ ಜನತೆಯ ಮನೋವೃತ್ತಿಗಳು ತಪುಗೆ ಹೇಗೆ ಅನುಕೂಲವಾಗಿರುವುವೆಂಬುದನ್ನು ಕಂಪನಿಯ ಗವರ್ನರ್ ಜನರಲ್‌ನಿಗೆ ೧೮೦೧-೧೮೧೭ಕ್ಕೆ ಬರೆದ ಪತ್ರದಲ್ಲಿ ವರ್ಣಿಸಿರುವುದನ್ನು ಹಿಂದಿನ ಬರೆಹ [ ಕಳೆದ ಎಪ್ರಿಲ್ ಸಂಚಿಕೆಯ ೪೮೫ ನೆಯ ಪುಟ ]ದಲ್ಲಿ ವಿವರಿಸಲಾಗಿದೆ. ಈ ಮುನ್ನೋಟವು ಕರ್ನಲ್ ಮನ್ರೋನ ಮಟ್ಟಿಗೆ ನಿರಾಸಲಾಗಿರಬಹುದೆಂದು ನಾವು ತಿಳಿಯುವ ಕಾರಣವಿಲ್ಲ. " ಮೈಸೂರಿನ ನಾಲ್ಕನೆಯ ಯುದ್ಧ " ಎಂದರೆ ಟೀಪುವಿನ ವಿರುದ್ಧ ಕಂಪನಿಯು ಹೂಡಿದ ಕೊನೆಯ ಕಾಳಿಗದಲ್ಲಿ ಕಂಪನಿ ಸರಕಾರದ ಪ್ರಮುಖ ದಂಡಾಧಿಕಾರಿಯಾಗಿದ್ದ ಕರ್ನಲ್ ವೆಲಸ್ಲಿಯಲ್ಲಿಯೂ ಈ ಆಕ್ರಮಣಶೀಲ ಭಾವನೆಯು ನೆಲೆಗೊಂಡಿತ್ತೆಂಬುದಕ್ಕೆ ಜೆನ್ನಾಗಿಯೆ ಆಧಾರಗಳುಂಟು. ಧುಂಡಿಯಾ ವಾಘನಂತಹರ ಪುಂಡಾಟಿಕೆಯಿಂದ ಕಂಪನಿಗೆ ವಶವರ್ತಿಯಾಗಿದ್ದ " ಕನ್ನಡ " ಜಿಲ್ಲೆಯ ಸುಂದಾ [ ಸ್ವಾದಿ ] ಭಾಗವನ್ನೂ ಹಾಗೆಯೆ ಮರಾಟರಿಗೆ ಒಪ್ಪಿಸಲಾಗಿದ್ದ ಈ ಧಾರವಾಡ ಭಾಗದ ಪ್ರಜೆಗಳನ್ನೂ ಪಾರುಮಾಡಿ ರಕ್ಷಿಸುವುದಕ್ಕೆ ತನ್ನ ವರಿಷ್ಠಾಧಿಕಾರಿಗಳ ಅಪ್ಪಣೆಯನ್ನು ಪಡೆದು ಇಲ್ಲಿ ಬಂದು ನೆಲಸಿದ ಬಳಿಕ, ಇತ್ತ ಕಡೆಯ ಸ್ಥಿತಿಗತಿಗಳನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸಿ ತಿಳಿದುಕೊಂಡು, ೧೮೦೦ನೆಯ ಜುಲೈ ೭ನೆಯ ತಾರೀಖಿಗೆ ತನ್ನ ಸರಕಾರಕ್ಕೆ ಬರೆದ ಪತ್ರದಲ್ಲಿ " ಈ ಭಾಗದ ಜನರು ಪಟವರ್ಧನರ ಆಳಿಕೆಗೆ ಬೇಸತ್ತು ರಾಜ್ಯಾಧಿಕಾರದ ಬದಲಾವಣೆಯನ್ನು ಬಯಸುತ್ತಾರೆ " ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. ಮುಂದೆ ಒಂದೇ ತಿಂಗಳಿಗೆ ಎಂದರೆ ೧೮೦೦ನೆಯ ಆಗಸ್ಟ್ ೭ನೆಯ ತಾರೀಖಿಗೆ ಕರ್ನಲ್ ವೆಲಸ್ಲಿಯು ತನಗೆ ಸಹಾಯಕ ಸೇನಾನಿಯಾಗಿ ಆಗಿನ್ನೂ " ಮೇಜರ್ " ಪದವಿಯಲ್ಲಿದ್ದ ಟಾಮಸ್ ಮನ್ರೋನಿಗೆ ಬರೆದ ಒಂದು ಪತ್ರದಲ್ಲಿ ತನ್ನ ಆಂತರಂಗವನ್ನು ಬಿಚ್ಚುಮನಸ್ಸಿನಿಂದ ಬರೆದಿದ್ದಾನೆ. ಅದರಲ್ಲಿ ತಮ್ಮ ಬ್ರಿಟಿಶ್ ಕಂಪನಿಯ ರಾಜ್ಯಾಧಿಕಾರವೇ ಈ ಪ್ರದೇಶದಲ್ಲೆಲ್ಲ ಪ್ರಸ್ಥಾಪಿತವಾಗಬೇಕೆಂಬ ಬಲವಾದ ಇಚ್ಛೆಯನ್ನು ಸ್ಪಷ್ಟವಾಡಿದ್ದಾನೆ. ಆತನ ಬರೆವಣಿಗೆ ಹೀಗಿದೆ :— " ಈ ಪ್ರದೇಶವನ್ನೆಲ್ಲ ನಮಗೇ ದಕ್ಕಿಸಿಕೊಳ್ಳುವುದಾಗದಿದ್ದರೆ, ನಾವು ಇಲ್ಲಿಂದ ಹೊರಡುವ ಮೊದಲು ಇತ್ತ ಕಡೆಯ ಜನಾಂಗದಲ್ಲೆಲ್ಲ ಸುಖ-ಸಮಾಧಾನವನ್ನೂ ಶಾಂತಿಯನ್ನೂ ನೆಲೆಗೊಳಿಸಬಹುದಾದ ಒಂದು ಬಲಿಷ್ಠ ಪ್ರಭುತ್ವವನ್ನು ಸ್ಥಾಪಿಸದಿರಲಾರೆವೆಂದು ನಾನು ಎಣಿಸುತ್ತೇನೆ. ಇತ್ತ ಕಡೆಗೆಲ್ಲ ನಾವು ನಮ್ಮ ಸಲುವಾಗಿ ಆದರಬುದ್ಧಿಯನ್ನೇನೋ ಹುಟ್ಟಿಸಿದ್ದೇವೆ; ಇಲ್ಲಿಯ ಪ್ರಮುಖರ ಗುಣ ಸ್ವಭಾವ ಶೀಲಗಳನ್ನೆಲ್ಲ ಅರಿತುಕೊಂಡು ಅವರೊಂದಿಗೆ ಸ್ನೇಹಸಂಬಂಧವನ್ನು ಬೆಳೆಯಿಸಿದ್ದೇವೆ. ಆದುದರಿಂದ ಇತ್ತ ಕಡೆಯ ಪ್ರಮುಖರಾರೂ ಇನ್ನು ಮುಂದೆ, ಈ ಭಾಗದಲ್ಲಿ ಯಾವುದೇ ಗೊಂದಲವಾಗುವುದಕ್ಕೆ ಬೆಂಬಲ ಕೊಡಲಾರರು. ನಮ್ಮಲ್ಲಿ ಪ್ರತಿಭಟನಾಬಲವಿರುವುದನ್ನು ಅವರು ಚೆನ್ನಾಗಿ ಮನಗಂಡಿದ್ದಾರೆ. ಇತ್ತ ಕಡೆಯ ಭೂಭಾಗವನ್ನೂ ಇಲ್ಲಿಯ ಆಡಳಿತ ಕ್ರಮವನ್ನೂ ನಾನು ಸೂಕ್ಷ್ಮವಾಗಿ ನಿರೀಕ್ಷಿಸಿ ತಿಳಿದುಕೊಂಡಿರುವ ಮಟ್ಟಿಗೆ ಹೇಳುವುದಾದರೆ, ಇಲ್ಲಿಯ ಜನರ ಸುಲಿಗೆಯನ್ನೇ ನಡಿಸಿರುವ ಈಗಿನ ಆಡಳಿತಗಾರರಿಗಿಂತ ನಮಗೇ ಹೆಚ್ಚಾಗಿ ಲಾಭವಾಗುವುದೆಂದು ನಾನು ಭಾವಿಸುತ್ತೇನೆ. ಏಂದರೆ ನಮಗೆ ಯಾವ ಹೆದರಿಕೆಯೂ ಇಲ್ಲದೆ ಅವರಿಗೇ ಹೆಚ್ಚಾಗಿ ಹಾನಿಯಾಗುವುದೆಂಬುದು ಖಂಡಿತ." ಕರ್ನಲ್ ವೆಲಸ್ಲಿಯ ಈ ಮನೋಭಾವವೇ ಕಂಪನಿಯ ಹೊಣೆಗಾರ ದಂಡಾಧಿಪತಿಗಳಲ್ಲೆಲ್ಲ ಒಳಗೊಳಗೆ ಹಬ್ಬಿಕೊಂಡಿರಬೇಕೆಂಬುದು ಸ್ಪಷ್ಟವಾಗಿದೆ. ಆದುದರಿಂದಲೇ ೧೮೦೦ರಿಂದ ಮುಂದೆ, ಹೊತ್ತು ಸಿಕ್ಕಾಗೆಲ್ಲ ಅವರು ಇತ್ತ ಕಡೆಗೆ ಬಂದು, ಈ ವಿಸ್ತೀರ್ಣವಾದ ಪ್ರದೇಶದ ಜನಜೀವನವನ್ನು ಸಂಪೂರ್ಣವಾಗಿ ಅರಿತುಕೊಂಡು, ಮುಂದೆ ತಮಗೆ ಸಂಪ್ರಾಪ್ತ

ವಾಗಬಹುದಾದ ಪ್ರಭುತ್ವಾಧಿಕಾರಕ್ಕೆ ತಕ್ಕುದಾದ ಪರಿಸ್ಥಿತಿಯನ್ನು ನಿರ್ಮಿಸುವ ಅಸ್ತ್ರವಾರವನ್ನು ಹಾಕುತ್ತ ನಡೆದರೆಂಬುದು ನಿಃಸಂದೇಹವಾಗಿದೆ.

೧೮೦೩ ರಲ್ಲಿ ಹೋಳಕರನು ಪುಣೆಯ ಪೇಶ್ವೆಯ ವಿರುದ್ಧ ಬಂಡಾಯವನ್ನೇ ಹೂಡಿದಾಗ, ಕರ್ನಲ್ ವೆಲ್ಸ್ಲೆಯು ಪೇಶ್ವೆಯರ ನೆರವಿಗಾಗಿ ಪುಣೆಗೆ ಹೋಗಬೇಕಾಯಿತು. ಆಗಲೂ ಈ ಪ್ರದೇಶದಲ್ಲಿಯೇ ಹಾಯ್ದು, ನಡುನಡುವೆ ನಾಲ್ಕೂ ನಿಟ್ಟುಗಳನ್ನು ನಿರೀಕ್ಷಿಸಿ, ಅಲ್ಲಲ್ಲಿಯ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋದಂತೆ ಉಲ್ಲೇಖವಿದೆ. ಅನಾಯಕತ್ವ ಅರಾಜಕತ್ವಗಳು ಮನೆಮಾಡಿಕೊಂಡಿದ್ದ ಯಾವ ಪ್ರದೇಶದಲ್ಲಾದರೂ ಛಿದ್ರಾನ್ವೇಷಕ ಸ್ವಾರ್ಥಸಾಧಕರ ಕ್ಷುದ್ರ ಮನೋವೃತ್ತಿಗಳ ಜೆಳೆವಣಿಗೆಗೆ ಅವಕಾಶ ದೊರೆತು, ಚಿಕ್ಕ ಪುಟ್ಟ ಆಂತಃಕಲಹಗಳೂ ಪಕ್ಷಪಕ್ಷಗಳ ಬಡಿದಾಟಗಳೂ ನಡುನಡುವೆ ತಲೆಯೆತ್ತಿ, ಸುಖಸಂತೃಪ್ತ ಜನಜೀವನದಲ್ಲಿ ಒಂದು ಬಗೆಯ ಅಸಮಾಧಾನಕ್ಕೆ ಎಡೆಮಾಡುವುದು ತಪ್ಪಿದ್ದಲ್ಲ. ಆದರೆ ಕರ್ನಲ್ ವೆಲಸ್ಲಿಯು ಇತ್ತ ಕಡೆಗೆ ಬರುತ್ತಿದ್ದಾಗಲೆಲ್ಲ, ಪೇಶ್ವೆಯರ ಹೆಸರಿನಿಂದಾಗಲಿ ಸ್ವಂತ ಅಧಿಕಾರದ ಬಲುಮೆಯಿಂದಾಗಲಿ—ಇಲ್ಲಿ ಪುಂಡಾಟಿಕೆಯನ್ನು ನಡಿಸ ಬಯಸುವ ಪ್ರವೃತ್ತಿಯುಳ್ಳವರೆಂದು ಕಂಡುಬಂದವರಿಗೆಲ್ಲ—ತಾನು ಇತ್ತ ಕಡೆಗೆ ಬರುವುದಕ್ಕೂ ತನ್ನವರು ಈ ಪ್ರದೇಶದಲ್ಲಿ ಗಳಿಸಿಕೊಂಡಿದ್ದ ಒಳ್ಳೆಯ ಹೆಸರು ಯಾವ ಕುಂದುಕೊಂದಿಲ್ಲದೆ ಉಳಿಯುವುದಕ್ಕೂ ತಮ್ಮವರ ಬಳಕೆಯು ಇತ್ತ ಕಡೆಗೆಲ್ಲ ಆಸಿರ್ಬಂಧವಾಗಿ ಸಾಗುವುದಕ್ಕೂ ಯಾವ ಬಗೆಯ ಅಡೆತಜೆಯುಂಟಾಗಕೂಡದೆಂಬಂತೆ ಸ್ಪಷ್ಟವಾಗಿ ತಿಳಿಸಿ ಹೇಳಿ, ಒಂದು ಬಗೆಯ ಬೆದರಿಕೆಯನ್ನೇ ಹಾಕಿ, ಕಂಪನಿಯ ವರ್ಚಸ್ಸನ್ನು ಇಲ್ಲಿ ಸ್ಥಿರವಾಗಿ ನೆಲೆಗೊಳಿಸುತ್ತಿದ್ದನು. ಆದುದರಿಂದ ಈ ಭಾಗದಲ್ಲಿ ಯಾವುದೇ ಬಗೆಯ ವಿಶೇಷ ತೊಂದರೆಗಳಿಗೆ ಅವಕಾಶವೇ ಉಂಟಾಗುತ್ತಿರಲಿಲ್ಲ. ಏಂದರೆ ೧೮೦೦ ನೆಯ ಇಸ್ವಿಯಿಂದಲೇ ಇತ್ತ ಕಡೆಗೆಲ್ಲ ಪ್ರತ್ಯಕ್ಷವಾಗದಿದ್ದರೂ ಪರ್ಯಾಯದಿಂದ, ಈಸ್ಟ್ ಇಂಡಿಯಾ ಕಂಪನಿಯ ರಾಜಕೀಯ ಸರ್ವಾಧಿಕಾರದ ಪ್ರಭಾವವೇ ನೇಲುಗೈಯಾಗಿ ನಡೆದು ಬಂದಿತ್ತೆಂಬುದು ಚೆನ್ನಾಗಿಯೇ ನಿದರ್ಶನಕ್ಕೆ ಬರುತ್ತದೆ.

ಕರ್ನಲ್ ವೆಲಸ್ಲೆಯ ತರುವಾಯ ಮೇಜರ್ ಮನ್ರೋನು "ಕರ್ನಲ್"ನಾಗಿ ಇತ್ತ ಕಡೆಯ ದಂಡಾಧಿಪತಿಯಾಗಿ ಬಂದಂತೆ ತೋರುತ್ತದೆ. ಈತನ ಚಟುವಟಿಕೆಗಳೆಲ್ಲವೂ ಕರ್ನಲ್ ವೆಲಸ್ಲೆಯ ಪರಂಪರೆಯನ್ನೇ ಅನುಸರಿಸಿದ್ದುವು ಇತ್ತ ಪೇಶವೆಯನಿಗೆ ಸರವಾಗುವುದು, ಅವನ ಬಂಡುಗಾರ ಸರದಾರರನ್ನು ಪಣ್ಣು ಮಾಡುವುದು, ಕಂಪನಿಗೆ ಪ್ರತ್ಯಕ್ಷ ಅಂಕಿತವಾಗಿದ್ದ ಪ್ರದೇಶದಲ್ಲೆಲ್ಲ ಯಾವ ಪುಂಡಾಟಿಕೆಯೂ ನಡೆಯದಂತೆ ನೋಡಿಕೊಳ್ಳುವುದು, ಪೇಶವೆಯಿಂದ ತಮಗೆ ದಂಡಿನ ವೆಚ್ಚಕ್ಕೆಂದು ಒಪ್ಪಿಸಲ್ಪಟ್ಟ ಧಾರವಾಡ ಸವಣೂರು ಮೊದಲಾದ ಭಾಗಗಳಲ್ಲಿಯೂ ಸುವ್ಯವಸ್ಥಿತವಾದ ಕಾರಭಾರವು ನಡೆಯುವಂತೆ ಬಿಗುವಿನ ಆಡಳಿತವನ್ನು ಸಾಗಿಸುವುದು, ಮೇಲಾಗಿ ಕಂಪನಿಯ ಆಧಿಕಾರಕ್ಕೊಳಪಟ್ಟ ಕನ್ನಡ ಜಿಲ್ಲೆ ಮೊದಲಾದ ಪ್ರದೇಶಗಳಲ್ಲಿ ಪೆಂಢಾರಿಗಳು ನಡೆಸಿದ ಕೊಲೆಸುಲಿಗೆಗಳಿಗೆ ತಡೆಹಾಕುವ ಎತ್ತುಗಡೆ ಮಾಡುವುದು ಇವೇ ಮೊದಲಾದ ಹೆಚ್ಚಿನ ಹೊಣೆಗಾರಿಕೆಯ ಕೆಲಸಗಳನ್ನು ಕರ್ನಲ್ ಮನ್ರೋನು ನಿರ್ವಹಿಸುತ್ತಿದ್ದನು. ಧಾರವಾಡವನ್ನು ತನ್ನ ಮುಖ್ಯಸ್ಥಾನವನ್ನಾಗಿ ಮಾಡಿಕೊಂಡು, ತನ್ನ ಖಿಕ್ಕ ಸಂಗಡಿಗರ ಸಾಹಚರ್ಯದಿಂದ ಪೂರ್ವಕ್ಕೆ ಸೊಂಡೂರನ್ನೊಳಗೊಂಡು ಪಶ್ಚಿಮಕ್ಕೆ ಬೆಳಗಾಂವಿಯನ್ನು ಬಳಸಿ ಕೊಲ್ಲಾಪುರದ ರಾಜ್ಯದ ಗಡಿಯವರೆಗೆ ವಿಸ್ತಾರವಾಗಿ ಹಬ್ಬಿಕೊಂಡಿದ್ದ ಕರ್ನಾಟಕದ ಈ ಪ್ರದೇಶದಲ್ಲೆಲ್ಲ ತನ್ನ ಅಧಿಕಾರ ಸೂತ್ರಗಳನ್ನು ಒಳ್ಳೆ ಬುದ್ಧಿವಂತಿಕೆಯಿಂದ ನಡಿಸುತ್ತಿದ್ದಂತೆ ಇತಿಹಾಸದಲ್ಲಿ ಕಾಣಿಸಲಾಗಿದೆ. ಕರ್ನಲ್ ಮನ್ರೋನಿಗೆ ಹೀಗೆ ಅಧಿಕಾರ ನಡೆಯಿಸಲು ಅನುಕೂಲವಾಗುವಂತೆ ಕಂಪನಿ ಸರಕಾರದ ವರಿಷ್ಠಾಧಿಕಾರಿಗಳು ಈತನಿಗೆ ಸೈನ್ಯಾಧಿಪತ್ಯದ ಸರ್ವಾಧಿಕಾರದೊಂದಿಗೆ ರಾಜ್ಯಭಾರ ನಿರ್ವಹಣದ ಜೇರೆ ಯಾವತ್ತು ಅಧಿಕಾರಗಳನ್ನೂ "ಕಮಿಶನರ್"ಎಂಬ ಸನ್ಮಾನ್ಯ ಪದವಿಗೊಪ್ಪುವಂತೆ ಕೊಟ್ಟುಬಿಟ್ಟ ಉಲ್ಲೇಖವೂ ಉಂಟು. ಹೀಗೆ ಎರಡೂ ಬಗೆಯ ಅಧಿಕಾರಸಂಪನ್ನನಾಗಿ ಕಂಪನಿಯ ಆಡಳಿತವನ್ನು ಇಲ್ಲಿ ಭದ್ರ ಪಡಿಸಲು ಪರಿಶ್ರಮಿಸುತ್ತಿದ್ದ ಕರ್ನಲ್ ಮನ್ರೋನು ಬೀಡುಬಿಟ್ಟ ಸ್ಥಳಗಳಲ್ಲೆಲ್ಲ, ಆತನ ಪಾಳೆಯದ ಪರಿವಾರ ಪ್ರಾಕಾರವು ಸೈನ್ಯಾಧಿಪತಿಯ ಶಿಬಿರಸ್ಥಾನಮಾತ್ರವಾಗಿರದೆ, ಕಂದಾಯದ ಏರಿಳಿತ, ನ್ಯಾಯವಿತರಣೆ, ಹಕ್ಕು-ಬಾಧ್ಯತೆಗಳ ವಿಚಾರ ಮೊದಲಾದ ರಾಜ್ಯಾಂಗ ವ್ಯವಹಾರಗಳನ್ನೆಲ್ಲ ವಿಮರ್ಶಾಪೂರ್ವಕ ನಿರ್ಣಯಿಸುವ ವರಿಷ್ಠ ನ್ಯಾಯಾಸ್ಥಾನವಾಗಿಯೂ ಕಂಗೊಳಿಸುತ್ತಿತ್ತೆಂಬುದು ಅತ್ಯಂತ ಮಹತ್ವದ ಸಂಗತಿಯಾಗಿದೆ.

ಶ್ರೀಶಿವಛತ್ರಪತಿಯ ಪುಣ್ಯಪ್ರತಾಪದಿಂದ ಸ್ಥಾಪಿತವಾಗಿ ಕೆಲ ಕಾಲ ಬೆಳೆದು ಬಂದಿದ್ದ ಮಹಾರಾಷ್ಟ್ರ ಸಾಮ್ರಾಜ್ಯವನ್ನು ಉಳಿಸಿ ಬೆಳಸುವುದಕ್ಕೆ, ಒಂದಾನೊಂದು ಕಾಲಕ್ಕೆ ಆಧಾರಸ್ತಂಭರಾಗಿದ್ದ ಸಿಂಧ್ಯೆ, ಹೋಳಕರ, ಗಾಯಕವಾಡ ಮೊದಲಾದ ಉತ್ತರ ಹಿಂದುಸ್ಥಾನದಲ್ಲಿ ನೆಲೆಗೊಂಡಿದ್ದ ಮರಾಠರ ಪ್ರತಾಪಶಾಲಿ ಮನೆತನಗಳು, ಹಾಗೆಯೇ ಇತ್ತ ದಕ್ಷಿಣದಲ್ಲಿ ಹೊಸತಾಗಿ ತಲೆಯೆತ್ತಿ ಮುಂದಾಗಿದ್ದ ಪಟವರ್ಧನ ಮೊದಲಾದ ಪರಾಕ್ರಮಿ ಸರದಾರರ ನಿಷ್ಠಾವಂತ ಮನೆತನಗಳು ಒಗ್ಗೂಟದಿಂದ ನಡೆದು, ಮುಂದುಕಳಿಗೆ ಬಂದ ಮಹಾರಾಷ್ಟ್ರ ಸಾಮ್ರಾಜ್ಯವನ್ನು ಸಾವರಿಸಿ ಹಿಡಿಯುವಂತೆ ಮಾಡಲು ಅತ್ಯವಶ್ಯವಾಗಿದ್ದ ಸಂಘಟನಾ ಸಾಮರ್ಥ್ಯದ ಯಾವೊಂದು ಗುಣವೂ ಪೇಶವೆ ಬಾಜೀರಾಯನಲ್ಲಿ ಇದ್ದಂತೆ ಕಂಡುಬರಲಿಲ್ಲ. ಆದುದರಿಂದಲೇ ಆತನು ತನ್ನ ಗದ್ದುಗೆಯನ್ನು ಹೇಗಾದರೂ ಉಳಿಸಿಕೊಳ್ಳುವ ಸ್ವಾರ್ಥಕ್ಕೆ ಬಲಿಬಿದ್ದು, ಸ್ವಜನರೆಂಬವರನ್ನು ದೂರಸರಿಸಿ, ಈ ದೇಶದ ಸುಲಿಗೆಗಾಗಿಯೇ ಇಲ್ಲಿ ಬಂದು ನಿಂತು ಎಲ್ಲಕಡೆಗೂ ತನ್ನ ರಾಜಕೀಯ ವರ್ಚಸ್ಸನ್ನು ಏನಕೇನ

ಪ್ರಕಾರದಿಂದ ಪ್ರಸ್ಥಾಪಿಸುತ್ತ ನಡೆದು ಬೇರುಬಿಡಹತ್ತಿದ್ದ ಪರ-
ಕೀಯ ಈಸ್ಟ್ ಇಂಡಿಯಾ ಕಂಪನಿಗೆ ಮೊರೆಹೊಕ್ಕು ತನ್ನ ರಾಜ್ಯ-
ವನ್ನು ಉಳಿಸಿಕೊಳ್ಳಬೇಕೆಂದು ಪ್ರಯತ್ನ ಮಾಡಿದ್ದು ಯಾರಿಗೇನು
ಅರಿಯದ ಮಾತಲ್ಲ. ಈ ಸಂದರ್ಭದಲ್ಲಿ ಈಸ್ಟ್‌ಇಂಡಿಯಾ
ಕಂಪನಿಯು ಯಾವ ಧೋರಣವನ್ನು ಅವಲಂಬಿಸಬೇಕೆಂಬ ಬಗ್ಗೆ
ಇತ್ತಕಡೆಯ ರಾಜಕೀಯ ಸ್ಥಿತಿಗಳನ್ನೆಲ್ಲ ಸೂಕ್ಷ್ಮವಾಗಿ ಪರಾ-
ಮರ್ಶಿಸಿ ತಿಳಿದುಕೊಂಡಿದ್ದ ಕರ್ನಲ್ ಮನ್ರೋನು ಗವರ್ನರ್
ಜನರಲ್ಲನಿಗೆ ಬರೆದ ಪತ್ರದಲ್ಲಿ ( ಇದೇ ಮೇಲ್ಕಾಣಿಸಿದ ೨೮-೧೧-
೧೮೧೭ ರ ಪತ್ರ) ಹೀಗೆ ಸ್ಪಷ್ಟವಾಗಿ ನಿರ್ದೇಶಮಾಡಿದ್ದಾನೆ:—

"ಶಾಂತತೆ—ಸುವ್ಯವಸ್ಥೆಗಳಿಗೆ ಸಂಪೂರ್ಣವಾಗಿ ವಿರವಾಗಿದ್ದ,
ಮತ್ತು ಯಾವುದೇ ತಿದ್ದುಪಾಡಿಗೆ ಒಗ್ಗದಂತಿದ್ದ ಈ ಪ್ರಭುತ್ವ-
ವನ್ನು ಬೇರುಸಹ ಕಿತ್ತಿ ಬಿಸುಟುವುದೇ ಈಗ ಎಲ್ಲಬಗೆಯಿಂದ
ತಕ್ಕುದಾಗಿದೆ; ಅದಕ್ಕೆ ಬದಲಾಗಿ ಬೇರೆ ಪ್ರಭುತ್ವವನ್ನೇರ್ಪಡಿ-
ಸುವುದಾದಲ್ಲಿ ಅದರ ಪ್ರಮುಖನನ್ನು ಪೇಶ್ವೆಯವರ ಸಂಬಂಧಿಕರಲ್ಲಿ
ಆರಿಸಬೇಕೋ ಅಥವಾ ಶಿವಾಜಿಯ ವಂಶಸ್ಥರಲ್ಲಿ ಹುಡುಕಿ ತೆಗೆಯ-
ಬೇಕೋ ಎಂಬುದು ಮಹತ್ತ್ವದ ಪ್ರಶ್ನೆಯಾಗಬಹುದು. ಇಂತಹ
ಯಾವುದೇ ವ್ಯವಸ್ಥೆಯನ್ನು ನಾವು ಮಾಡಬೇಕಾಗಿ ಬಂದರೂ
ಕೃಷ್ಣಾನದಿಯು ದಕ್ಷಿಣ ಪ್ರದೇಶವನ್ನೆಲ್ಲ ಬ್ರಿಟಿಶ್ ಕಂಪನಿಯ
ಆಡಳಿತಕ್ಕೆ ಬಿಟ್ಟುಕೊಡಬೇಕೆಂಬ ಮಾತನ್ನು ಮೊದಲು ಗಟ್ಟಿ
ಮಾಡಿಕೊಳ್ಳಬೇಕು."

ವೆಲಸ್ಲಿಯ ವಿಚಾರಗಳನ್ನೇ ಪ್ರತಿಬಿಂಬಿಸಿದಂತೆ ಸ್ಪಚ್ಛತೋರುವ
ಕರ್ನಲ್ ಮನ್ರೋನ ಈ ಬಿಚ್ಚುಮಾತುಗಳಿಂದ ನಮಗೆ ತಿಳಿ
ಯುವುದೇನು? ಪೇಶವೆ ಬಾಜೀರಾಯನ ಅನುಸಂಧಾನದಂತೆ
ನಡೆದು ಈಸ್ಟ್ ಇಂಡಿಯಾ ಕಂಪನಿಯು ಮಹಾರಾಷ್ಟ್ರ ಸಾಮ್ರಾ-
ಜ್ಯದ ಅವಶೇಷವನ್ನು ಉಳಿಸುವುದಕ್ಕೆ ಮನಸ್ಸು ಮಾಡಿದರೂ,
ಮೊದಲಿನಿಂದಲೂ ಮಹಾರಾಷ್ಟ್ರದ ಹೊರಗಿದ್ದ ಮತ್ತು ಮಹಾ
ರಾಷ್ಟ್ರದ ಜನಜೀವನದೊಂದಿಗೆ ಯಾವುದೇ ಬಗೆಯ ಸಾಮ
ರಸ್ಯವಿಲ್ಲದ ಕೃಷ್ಣೆಯ ದಕ್ಷಿಣಭಾಗವನ್ನು ಮಾತ್ರ ತಾವು ಸರ್ವಥಾ
ಬಿಡತಕ್ಕದ್ದಲ್ಲವೆಂಬ ಸೂಚನೆಯನ್ನು ಕರ್ನಲ್ ಮನ್ರೋನು
ಮುಂದೆ ಚಾಚಿದ್ದಾನೆಂಬುವನ್ನು ನಾವು ಗಮನಿಸಬಹುದಷ್ಟೆ?
ಮದರಾಸ್ ಆಧಿಪತ್ಯದ ಕಂಪನಿ, ಸರಕಾರದ ಆಧಿಕಾರಿಗಳ
ಸಂಬಂಧವೇ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚಾಗಿ
ಬರುತ್ತಿದ್ದ ಮೂಲಕ ಮತ್ತು ಪುಣೆಯ ಪೇಶ್ವೆ ಹಾಗು ಬೇರೆ
ಮಹಾರಾಷ್ಟ್ರ ರಾಜಕಾರಣಗಳ ಸಂಬಂಧವು ಮುಂಬಯಿ ಆಧಿ-
ಪತ್ಯದ ಕಂಪನಿಯ ಸರಕಾರದ ಆಧಿಕಾರಿಗಳೊಂದಿಗೆ ಮಾತ್ರ
ವಿಶೇಷವಾಗಿದ್ದ ಮೂಲಕ, ಬಿ ಆಧಿಕಾರಿಗಳಿಗೆ ಇತ್ತ ಕಡೆಯ
ಜನಜೀವನದ ಪರಿಚಯವಾಗುವಂತೆ ಬಳಕೆ ಬೆಳೆಯಲು ಅವಕಾ-
ಶವೇ ಇರಲಿಲ್ಲ. ಬ್ರಿಟಿಶ್ ಕಂಪನಿಯ ಗೆಳೆತನ ಗಳಿಸಿ ಅದರ
ಮುಖಾಂತರ ತನ್ನ ಗದ್ದುಗೆಯನ್ನುಳಿಸಿಕೊಳ್ಳಲು ಹವಣಿಸಿದ
ಪೇಶ್ವೆ ಬಾಜೀರಾಯನು ತಿರುಗಿಬಿದ್ದು ಇಂಗ್ಲಿಷರೊಡನೆ ಯುದ್ಧ-
ವನ್ನೇ ಹೂಡಿದಾಕ್ಷಣ, ಇತ್ತ ಕರ್ನಲ್ ಮನ್ರೋನೇ ಕನ್ನಡ ಜಿಲ್ಲೆ-
ಸ್ಥರಕ್ಕೆ ಒಳಗಾಗಿದ್ದ ಕರ್ನಾಟಕದ ಈ ಭಾಗದಲ್ಲಿ ಕಂಪನಿಯ
ಆಡಳಿತವನ್ನು ಸ್ಥಿರಗೊಳಿಸಲು ಸರ್ವಸನ್ನಾಹ ಮಾಡಿ, ವಿಜಯ
ಧ್ವಜವನ್ನೇ ಹಿಡಿದನೆಂಬುದು ಆತನ ರಾಜಕಾರ್ಯ ವಿಚಕ್ಷಣ-
ತೆಯ ಸ್ಪಷ್ಟ ದೃಷ್ಟಾಂತವಾಗಿದೆ.

ಇಂಗ್ಲಿಷರೊಡನೆ ಯುದ್ಧ ಹೂಡುವುದನ್ನು ಪೇಶವೆ ಬಾಜೀ-
ರಾಯನು ಗೊತ್ತುಪಡಿಸಿದ ಕೂಡಲೆ; ಅವರಿಗೆ ದಂಡಿನ ವೆಚ್ಚಕ್ಕಾಗಿ
ಒಪ್ಪಿಸಿದ್ದ ಇತ್ತ ಕಡೆಯ ಪ್ರದೇಶವನ್ನೆಲ್ಲ ಆಕ್ರಮಿಸಲು ಆತನು
ತನ್ನ ದಂಡನಾಯಕರಿಗೆ ಅಪ್ಪಣೆ ವಿಧಿಸಿದ್ದನು. ಇದೇ ಹೊತ್ತಿಗೆ
ಮದ್ರಾಸ ಸರಕಾರದವರು ಕರ್ನಲ್ ಮನ್ರೋನ ಅಧಿಕಾರವನ್ನು
ಹೆಚ್ಚಿಸಿ, ಅವನನ್ನು ಜನರಲ್ ಪದವಿಗೆ ಏರಿಸಿದರು. ಪೇಶವೆಯ
ದಂಡನಾಯಕರೊಂದಿಗೆ ಇಪ್ಪೊಂದು ವಿಸ್ತಾರವಾದ ಕ್ಷೇತ್ರದಲ್ಲಿ
ಹೋರಾಡುವುದಕ್ಕೆ ಸಾಕಷ್ಟು ಸೈನ್ಯಬಲವೂ ಆತನಲ್ಲಿದ್ದಿಲ್ಲ. ದಂಡಿನ
ನೆರವು ಕಳಿಸುವುದಕ್ಕೆ ಆತನು ಮದ್ರಾಸ ಸರಕಾರಕ್ಕೆ ಮೇಲಿಂದ
ಮೇಲೆ ಬರೆದನು. ಆದರೆ ಪ್ರಯೋಜನವಾಗಲಿಲ್ಲ. ಆದರೂ
ಜನರಲ್ ಮನ್ರೋನು ಎದೆಗುಂದಲಿಲ್ಲ. ತನಗೆ ವಶವರ್ತಿ-
ಯಾಗಿದ್ದ ಪ್ರದೇಶದ ಜನರಲ್ಲಿ ತಾನು ಹುಟ್ಟಿಸಿದ ನಂಬಿಗೆ,
ಸದ್ಭಾವನೆಗಳ ಬಲದಿಂದ ಅದೇ ಜನರ ದಂಡು ಕಟ್ಟಿ ಆ ಪ್ರದೇಶ-
ವನ್ನು ಅವರಿಂದಲೇ ತನ್ನ ಕಂಪನಿಯ ಅಧಿಕಾರಕ್ಕೆ ಒಳಪಡಿಸುವ
ಅದ್ಭುತ ಹಂಚಿಕೆಯನ್ನು ಹಾಕಿದನು. ಇಂತಹ ಏಳುಸಾವಿರ
ದಂಡಾಳುಗಳನ್ನೂ ಅವರ ನಾಯಕರ ತಂಡಗಳನ್ನೂ ಸಜ್ಜು-
ಗೊಳಿಸಿ, ತನ್ನಲ್ಲಿ ಮೊದಲಿದ್ದ ದಂಡಿನೊಂದಿಗೆ ಈ ದಿಗ್ವಿಜಯವನ್ನು
ಕೈಕೊಂಡನು. ಮುಂದೆ ಐದು ದಿವಸಗಳಲ್ಲಿ ಬಳ್ಳಾರಿಯ ದಂಡಿನ
ಶಿಬಿರದಿಂದ ಹಾಗು ಬ್ರಿಟಿಶರಿಗೆ ವಶವಾಗಿದ್ದ ಪತ್ತಮಂಡಲದ
ಜೇರೆ ಪಾಳೆಯಗಳಿಂದ ಕಂಪನಿಯ ಸೇನಾಧಿಕಾರಿಗಳು ತಮ್ಮ
ತಮ್ಮ ಸೈನ್ಯವನ್ನು ಕಟ್ಟಿಕೊಂಡು ಬಂದು, ಮದರಾಸ ಸರಕಾರದ
ಸೂಚನೆಯಿಂದ ಜನರಲ್ ಮನ್ರೋನಿಗೆ ನೆರವಾದರು. ಬೆಳಗಾಂವಿ,
ವಿಜಾಪುರ, ಸೊಲ್ಲಾಪುರ ಪ್ರದೇಶಗಳಲ್ಲಿಯೂ ಮಹಾರಾಷ್ಟ್ರ
ರಾಜ್ಯದ ಹೆಸರನ್ನು ಅಡಗಿಸಿ, ಈಸ್ಟ್ ಇಂಡಿಯಾ ಕಂಪನಿಯ
ಸರ್ವಾಧಿಕಾರವನ್ನು ಜನರಲ್ ಮನ್ರೋನೇ ಸ್ಥಾಪಿಸಿದನು. ಆತ್ತ
ಮುಂಬಯಿಯ ಕಂಪನಿ ಸರಕಾರವು ಯುದ್ಧದಲ್ಲಿ ಜಯಶಾಲಿ-
ಯಾಗಿ ಪೇಶವೆ ಬಾಜೀರಾಯನನ್ನು ಸಟ್ಟದಿಂದ ತಳ್ಳಿದ ಪ್ರಕಟನೆ-
ಯನ್ನು ಹೊರಡಿಸಿತು. ಅಂದಿನಿಂದ ಎಂದರೆ ಪುಣೆಯ ಪೇಶ್ವಾ-
ಯಿಯು ಪರಿಸಮಾಪ್ತಿಯಿಂದ ಬೆಳಗಾಂವಿ, ಧಾರವಾಡ, ವಿಜಾಪುರ,
ಸೊಲ್ಲಾಪುರಗಳ ಸುತ್ತುಮುತ್ತಲಿನ ಪ್ರದೇಶವೆಲ್ಲವೂ, ಎಂದರೆ
ಜನರಲ್ ಮನ್ರೋನ ನಿಯಮಾನ ನಿಯಂತ್ರಣಗಳಿಗೊಳಗಾಗಿ
ಆಡಳಿತ ನಡೆದಿದ್ದರೂ ಹೆಸರಿಗೆ ಪೇಶವೆಯನರ ಅಂಕಿತವಾಗಿದ್ದಂತೆ
ತಿಳಿಯಲಾಗಿದ್ದ ಕರ್ನಾಟಕದ ಭಾಗವೆಲ್ಲವೂ, ಬ್ರಿಟಿಶ್ ಈಸ್ಟ್
ಇಂಡಿಯಾ ಕಂಪನಿಗೆ ಪ್ರತ್ಯಕ್ಷ ವಶವರ್ತಿಯಾಯಿತೆಂದು ಹೇಳ-
ಬೇಕು. ಈ ಬಗೆಯ ಅವಿರತ ಪರಿಶ್ರಮದಿಂದ, ತೀವ್ರ ಬುದ್ಧಿ

ಮತ್ತೆಯಿಂದ, ಪ್ರಚಂಡ ಸಾಹಸದಿಂದ, ಬ್ರಿಟಿಶ್ ಕಂಪನಿಯ ರಾಜ್ಯವನ್ನು ಇತ್ತ ಕಡೆಗೆ ಅಖಂಡವಾಗಿ ಪ್ರತಿಷ್ಠಿತ ಗೊಳಿಸಿದ ಜನರಲ್ ಮನ್ರೋನು, ೧೮೧೮ ರಲ್ಲಿ ಅಸ್ವಾಸ್ಥ್ಯದ ಮೂಲಕ ಮದರಾಸಿಗೆ ತೆರಳಿದನು.

"ಹೀಗೆ ಪೇಶ್ವೆಯ ಆಡಳಿತಕ್ಕೆ ಹೆಸರಿಗೆ ಮಾತ್ರ ವಶವರ್ತಿಯಾಗಿದ್ದ ಈ ಧಾರವಾಡ ಭಾಗವು, ಈಸ್ಟ್ ಇಂಡಿಯಾ ಕಂಪನಿಯ ಮದರಾಸ ಆಧಿಪತ್ಯಕ್ಕೆ ಒಳಪಟ್ಟ ಅಧಿಕಾರಿಗಳ ಆಳಿಕೆಗೇ ಮೊದಲಿನಿಂದ ಒಳಗಾಗಿದ್ದಿತೆಂಬುದು ಸ್ಪಷ್ಟವಾಗಿದೆ. ಪೇಶವಾಯಿಯನ್ನು ನುಂಗಿ ನೀರು ಕುಡಿದ ಮುಂಬಯಿಯಲ್ಲಿಯ ಬ್ರಿಟಿಶ್ ಕಂಪನಿಯ ಮುಖ್ಯಾಧಿಕಾರಿಯಾಗಿದ್ದ ಮೌಂಟ್ ಸ್ಟುಆರ್ಟ್ ಎಲ್ಫಿನ್‌ಸ್ಟನ್‌ನಿಗೆ ಪೇಶ್ವೆಯರ ರಾಜ್ಯವೆಲ್ಲವೂ ಹಕ್ಕಿನದಾದುದರಿಂದ, ಇತ್ತ ಕಡೆಯ ಆಡಳಿತವು ಮುಂಬಯಿ ಸರಕಾರದ ನಿಯಂತ್ರಣದಲ್ಲಿಯೆ ನಡೆಯಹತ್ತಿತು. ಆದರೆ ಧಾರವಾಡ ಭಾಗಕ್ಕೆ ಮಾತ್ರ ಬಳ್ಳಾರಿಯಲ್ಲಿ ಕಲೆಕ್ಟರನಾಗಿದ್ದ ಮಿ. ಚಾಪಲಿನ್ ಎಂಬ ಮದ್ರಾಸ್ ಸಿವ್ಹಿಲ್ ಸರ್ವೀಸಿನ ಅಧಿಕಾರಿಯನ್ನೇ, ಜನರಲ್ ಮನ್ರೋನ ವಿಶಿಷ್ಟ ಸೂಚನೆಯ ಮೇರೆಗೆ, ಮುಂಬಯಿ ಸರಕಾರದ ನೆರವಿಗೆ ಪ್ರಿನ್ಸಿಪಾಲ್ ಕಲೆಕ್ಟರನ್ನಾಗಿ ತರಿಸಿಕೊಳ್ಳಬೇಕಾಯಿತು. ಈತನು ಕೃಷ್ಣೆಯ ದಕ್ಷಿಣ ಪ್ರದೇಶದ ಆಡಳಿತವನ್ನು ನೋಡುವಂತೆಯೂ ಕೊಲ್ಲಾಪುರದ ರಾಜನ ಮೇಲೆ ಪೋಲಿಟಿಕಲ್ ಏಜಂಟನ ಅಧಿಕಾರವುಳ್ಳವನಾಗಿಯೂ ನೇಮಿಸಲ್ಪಟ್ಟಿದ್ದನು. ೧೮೧೮ ರಿಂದ ೧೮೨೭ ರವರೆಗಿನ ಸಂಕ್ರಮಣಕಾಲವು ಹೇಗೋ ಸಾಗಿತು. ಮುಂದೆ ಈ ಧಾರವಾಡ ಭಾಗವು, ಮುಂಬಯಿ ಸರಕಾರಕ್ಕೆ ಅಧೀನವಾಗಿರಬೇಕೋ, ಮದರಾಸ ಆಧಿಪತ್ಯಕ್ಕೆ ಸೇರಬೇಕೋ ಎಂಬ ಚರ್ಚೆ ನಡೆಯಿತು, ಎರಡೂ ಸರಕಾರಗಳು ಈ ಪ್ರದೇಶವು ತಮ್ಮ ಕಡೆಗಿರುವುದೇ ಯೋಗ್ಯವೆಂದು ಸಾಧಿಸಹತ್ತಿದುವು. ಮರಾಠಾ ಜಹಾಗೀರ್‌ದಾರರ ಹಿತಸಂಬಂಧಗಳನ್ನು ಲಕ್ಷಿಸಿದರೆ, ಈ ಕರ್ನಾಟಕ ಭಾಗದಲ್ಲಿ ಅವರ ಆಸ್ತಿಪಾಸ್ತಿಗಳಿರುವುದರಿಂದ, ಅವರ ಜುಟ್ಟನ್ನೆಲ್ಲ ತಮ್ಮ ಹಿಡಿತದಲ್ಲಿಟ್ಟುಕೊಳ್ಳುವುದೇ ಇಷ್ಟವೆಂದು ಮುಂಬಯಿ ಸರಕಾರದ ಪಕ್ಷಪಾತಿಗಳು ವಾದಿಸಿದರು. ಆದರೆ ಇಷ್ಟು ಹೊತ್ತಿಗಾಗಲೇ ತನ್ನ ಯೋಗ್ಯತೆಯ ಪ್ರಭಾವದಿಂದ ಹಾಗು ಕಂಪನಿಗೆ ಸಲ್ಲಿಸಿದ ಅದ್ಭುತಸೇವೆಯ ಯೋಗದಿಂದ "ಸರ್ ಟಾಮಸ್ ಮನ್ರೋ" ಎಂಬ ಪದವಿಗೇರಿ, ಮದರಾಸು ಆಧಿಪತ್ಯದ ಗವರ್ನರನಾಗಿದ್ದ ಜನರಲ್ ಮನ್ರೋನು, ತನ್ನ ದೀರ್ಘಕಾಲದ ಸಿರೀಕ್ಷಣೆಯಲ್ಲಿ ತನಗೆ ಕಂಡುಬಂದ ಸಂಗತಿಗಳ ಅನುಸಂಧಾನದಿಂದ, ಈ ಧಾರವಾಡ ಭಾಗವು ಮದರಾಸು ಆಧಿಪತ್ಯಕ್ಕೇ ಸೇರಬೇಕೆಂದು ಬಲವಾಗಿ ಪ್ರತಿಪಾದಿಸಿದನು. ಈತನು ತನ್ನ ರಾಯಸದಲ್ಲಿ ಹೀಗೆ ಬರೆದಿರುತ್ತಾನೆ :— "ಮುಂಬಯಿಯ ವಿಶಿಷ್ಟ ಪರಿಸ್ಥಿತಿಯ ಮೂಲಕ ಉತ್ತರದೆಯಿಂದ ದಂಡಿನ ಸಹಾಯವು ಯಾವ ಋತುವಿನಲ್ಲಾದರೂ ಬರಲಾರದು. ಆದರೆ ಮದರಾಸಿನಿಂದ ಮಾತ್ರ ಬೇಕಾದಾಗ ಈ ನೆರವು ದೊರೆಯಬಹುದು. ಮರಾಠಾ ಸರದಾರರ ಸಂಗಡ ವ್ಯವಹಾರದ ಬಿಕ್ಕಟ್ಟಿಂಬುದು ಮದರಾಸ ಸರಕಾರಕ್ಕೆ ಗತಗೋಷ್ಠಿಯೆ ಸರಿ. ಈಗ ಗೆದ್ದುಕೊಂಡಿರುವ ಭಾಗವಲ್ಲವೂ ಮದರಾಸು ಆಧಿಪತ್ಯಕ್ಕೆ ಸೇರಿದರೆ, ಹಳೆಯ ಮರಾಠಾ ರಾಜ್ಯದ ನೆನಪು ಕೂಡ ನಶಿಸಿ ಹೋಗಬಹುದು, ಕರ್ನಾಟಕ ಭಾಗದೊಳಗೆ ನೆಲಸಿದ್ದ ಜಮೀನ್‌ದಾರ ಜಹಾಗೀರ್‌ದಾರರು, ಕೊಂಕಣದಿಂದಲೋ ಕೃಷ್ಣೆಯ ಉತ್ತರದಿಂದಲೋ ಬಂದ ಪರಕೀಯರಾಗಿರುವ ಮೂಲಕ, ಇತ್ತ ಕಡೆಯ ಜನರಲ್ಲಿ ಅವರ ವರ್ಚಸ್ಸು ನಡೆಯುವುದಿಲ್ಲ. ಯಾವುದಾದರೊಂದು ಪ್ರದೇಶವನ್ನು ರಾಜ್ಯ ವಿಭಾಗಕ್ಕೆ ಜೋಡಿಸುವಾಗ, ಆಂತರದ ವಿಚಾರವು ಮಹತ್ವದ್ದಾಗಲಾರದು..... ಧಾರವಾಡ ಜಿಲ್ಲೆಯ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಮದ್ರಾಸಾಧಿಪತ್ಯದ ಜಿಲ್ಲೆಗಳಿರುವುದರಿಂದ, ಆಡಳಿತದ ಅನುಕೂಲವನ್ನು ನೋಡಿದರೂ ಇದು ಮದರಾಸಿಗೆ ಸೇರಬೇಕು. ಮರಾಟರ ಆಕ್ರಮಣಕ್ಕೆ ಇದು ಒಳಗಾಗಿದ್ದರೂ ಈ ಪ್ರದೇಶವು ಮಹಾರಾಷ್ಟ್ರವಾಗಲಾರದು. ಈಗಾಗಲೇ ಮದ್ರಾಸ ಆಧಿಪತ್ಯಕ್ಕೆ ಸೇರಿದ್ದ ಕರ್ನಾಟಕದ ಭಾಗವೇ ಇದಾಗಿದೆ. ಬಳ್ಳಾರಿ, ಸುಂಡಾ (ಸ್ವಾದಿ), ಮೈಸೂರು ಮೊದಲಾದ ಕಡೆಗೆ ಇರುವ ಕನ್ನಡ ಜನಾಂಗದವರೇ ಇಲ್ಲಿ ಇರುವರು. ಅವರಾಡುವ ಭಾಷೆಯನ್ನೇ ಇವರೂ ಆಡುತ್ತಾರೆ. ಇವರವರಲ್ಲಿ ಯಾವುದೇ ಬಗೆಯ ವ್ಯತ್ಯಾಸವಿರುವುದಿಲ್ಲ. ಪರಕೀಯರಾದ ಹಾಗು ಯಾವುದೇ ಪ್ರಾಕೃತಿಕ ಅಥವಾ ಸಾರಂಪರ್ಯಾದ ಸಂಬಂಧವಿಲ್ಲದ ಮರಾಟರೊಡನೆ ಇವರನ್ನು ಕೂಡಿಸುವುದಕ್ಕಿಂತ, ತಮ್ಮ ಜನಾಂಗದವರೊಂದಿಗೆ ಹೊಂದಿಕೆಯಾಗುವಂತೆ ಕೂಡಿಸಿದರೆ, ಇವರಿಗೆ ಹೆಚ್ಚು ಸಮಾಧಾನವಾಗುವುದು. ವಿಭಕ್ತವಾಗಿದ್ದ ಕನ್ನಡಜನಾಂಗವನ್ನು ಒಂದುಗೂಡಿಸಿದ ಶ್ರೇಯಸ್ಸು ನಮಗೆ ಚಿರಂತನವಾಗಿ ದೊರೆಯುವುದು. ಪುಣೆ-ಮುಂಬಯಿಗಳತ್ತ ಕಡೆಗೆ ಯಾವಾಗಲೂ ಹೋರೆ ತಿರುವಿಕೊಂಡಿರಬೇಕಾಗಬಹುದಾದ ಮರಾಟಾ ಜಹಾಗೀರದಾರರ ಜಮೀನ್‌ದಾರರ ಅನುಕೂಲತೆಯನ್ನು ನೋಡುವುದಕ್ಕಿಂತ, ಈ ಶ್ರೇಯಸ್ಸು ಹೆಚ್ಚಿನದಾಗಿದೆ. ಸಹ್ಯಾದ್ರಿಯ ಮೇಲಿರುವ ಅದನ್ನು ಕನ್ನಡಿಗರು, ಮಲಬಾರಿಯಾಗಲಿ ಅದರ ಆತ್ತ ಕಡೆಯ ಕರಾವಳಿ ಸೀಮೆಗಾಗಲಿ ಹೋಗಲು ಮನಸ್ಸು ಮಾಡುವುದಿಲ್ಲ. ಆದರೆ ಪೂರ್ವದ ಘಟ್ಟಗಳ ವರೆಗೆ ಎಲ್ಲಿಗಾದರೂ ಹೋಗಲು ಅವರು ಆಕ್ಷೇಪಿಸುವುದಿಲ್ಲ. ಹಾಗೆಯೆ ಧಾರವಾಡದವನೊಬ್ಬನು ಮುಂಬಯಿಗೆ ಹೋಗುವುದಕ್ಕೆ ಒದಲಾಗಿ ಮದರಾಸಿಗೆ ಹೋಗಲು ಸಿದ್ಧನಾಗುವನೆಂಬುದು ಖಂಡಿತ." (ಮುಂಬಯಿ ಗ್ಯಾಝಿಟಿಯರ್, ಧಾರವಾಡ ಭಾಗ, ಇಂಗ್ಲಿಷ್ ಪ್ರತಿ: ಪುಟ ೪೩೫-೪೩೯ ರ ಟಿಪ್ಪಣಿ)

ಇಪ್ಪತ್ತು ವರ್ಷಗಳಿಗಿಂತ ಹೆಚ್ಚುಕಾಲ ಕನ್ನಡ ಜನರೊಂದಿಗೆ ಹೊಂದಿಕೊಂಡು ಅವರ ಜೀವನದ ಪರಿಜ್ಞಾನವಿತ್ತು, ಮರಾಟರ ಬಹುಬಗೆಯ ಸುಲಿಗೆಗೆ ಕೊಡಾಗಿ ಕಷ್ಟ ಪರಂಪರೆಯನ್ನನುಭವಿಸಿದ

(ಉಳಿದ ಪುಟಕ್ಕೆ ಮುಂದುವರಿದಿದೆ)

# ಅದು ಬೇರೆ

( ಸಣ್ಣಕತೆ )

ಶ್ರೀ. ಮ. ಶ್ರೀಧರಮೂರ್ತಿ, ಚಿತ್ರದುರ್ಗ

★

ಸಿಕ್ಕಿದ ಸಣ್ಣಸಣ್ಣ ಅಧಿಕಾರಗಳ ಬಲದಿಂದಲೂ ಬಡವರಿಂದ ಹಣ ಕಕ್ಕಿಸುವ ವ್ಯವಹಾರವೇ ಎಲ್ಲೆಲ್ಲಿಯೂ ನಡೆದಿದೆ. ಕಾಯಲೆಂದು ನೆಟ್ಟ ಬೇಲಿಯೆ ಮೇಯಲು ತೊಡಗಿದರೆ ಮಾಡಬೇಕೇನು ?

★

೧

ಕಲಾಯಿ ಹುಸೇನ್ ಸಾಬಿ, ಕರಡಿ ಸ್ಟೇಷನ್‌ನಲ್ಲಿ ರೈಲು ಹತ್ತಿ ತಿಪಟೂರು ಸ್ಟೇಷನ್‌ನಲ್ಲಿ ಇಳಿದಾಗ ರಾತ್ರಿ ಹನ್ನೊಂದು ಗಂಟೆಯಾಗಿತ್ತು. ಕರಡಿ ಸ್ಟೇಷನ್‌ನಲ್ಲಿ ಅವನಿಗೆ ಟಿಕೆಟ್ ಕೊಟ್ಟ ಅಧಿಕಾರಿ ಅವನ ಗಂಟು-ಮೂಟೆ ನೋಡಲಿಲ್ಲ. ಹುಸೇನ್ ಸಾಬಿಯ ಗಂಟು-ಮೂಟೆ ಎಂದರೆ ಅದೊಂದು ಜಿಕ್ಕ ಅಂಗಡಿ. ಕಲಾಯಿಮಾಡುವ ಸಾಧನಗಳಾದ ತಿದಿ, ಊದುಗೊಳವಿ, ಪಾರೆ, ಸಣ್ಣ ಸುತ್ತಿಗೆ, ಅದಕ್ಕೂ ಕೊಂಚ ದೊಡ್ಡದಿನ್ನೊಂದು, ''ಸ್ಪೆಸ್'' ವಾರು ಇಕ್ಕಳುಗಳು ನಾಲ್ಕೆಂಟು. ತವರದ ತಗಡು, ಸೀಸದ ಪುಡಿ, ನವಾಸಾಗರದ ಪುಡಿಯ ಡಬ್ಬಿ, ಹಳೆಯ—ಮೂಲೆ ಮೂಲೆಗಳ ವಿವಿಧಾಕಾರದ—ತಾಮ್ರ, ಹಿತ್ತಾಳೆ ತಗಡಿನ ಚೂರುಗಳು; ಅನ್ನ, ಸಾರು, ಮುದ್ದೆ, ರೊಟ್ಟಿ ಮುಂತಾದ ಅಡಿಗೆಗಳನ್ನೆಲ್ಲಾ ಮಾಡಿಕೊಳ್ಳಲು ಅನುಕೂಲವಾಗುವಂತಹ ಮೂರು ನಾಲ್ಕು ಅಲ್ಯೂಮಿನಿಯಂ ಪಾತ್ರೆಗಳು; ಈ ಪಾಳು ಕಂಟ್ರೋಲು-ರೇಷನ್ ಪ್ರಾರಂಭವಾದ ಮೇಲೆ, ಸೇರಿಗೆ ಮೀರದಷ್ಟು ಅಕ್ಕಿ, ಬಂದೆರಡು ಸೇರಿನಷ್ಟು ಹಿಟ್ಟು, ಕೆಲಸ ಹೆಚ್ಚಾಗಿ ಮನಸ್ಸಿಗೆ ತುಂಬಾ ಬೇಸರವಾದಾಗ ಸೇದಲಿಕ್ಕೆಂದು ತಾನೇ ತಯಾರಿಸಿಟ್ಟುಕೊಂಡಿರುವ ಹುಕ್ಕಾ, ಅದರ ಸಾಧನ ಸಾಮಗ್ರಿಗಳು—ಇನ್ನೂ ಏನೇನೋ! ಈ ಎಲ್ಲವನ್ನೂ ಅವನು ತನ್ನ ಹಸಬಿಚೀಲದಲ್ಲಿ ಸೇರಿಸಿಕೊಂಡು, ಕಷ್ಟಪಟ್ಟು ಜೆಗಲಿಗೆ ಎರಿಸಿದನೆಂದರೆ, ಮುಂದಿನೂರಿನಲ್ಲೇ ಇಳಿಸುವುದು. ಯುದ್ಧಕ್ಕೆ ಮುಂಚೆ ರೈಲಿನಲ್ಲಿ ಬೆಂಚಿನ ಕೆಳಗೋ, ಸಾಮಾನಿಡುವ ಹಲಗೆಯ ಮೇಲೋ ಇಡುತ್ತಿದ್ದನಂತೆ; ಈಗ ಅವನಿಗೇ ನಿಲ್ಲಲು ಎಡೆ ದೊರೆಯುತ್ತಿರಲಿಲ್ಲವಾಗಿ, ಅವನ ಹಸಬಿಗೆ ಇನ್ನೆಲ್ಲಿ ಬರಬೇಕು?

ಕರಡಿಯಲ್ಲಿ ಮೂರುದಿನದ ಕೆಲಸ ಸಿಕ್ಕಿತ್ತು ಹುಸೇನ್ ಸಾಬಿಗೆ. ಹಿಂದಿನೂರಿಂದ ತಂದಿದ್ದ ಹಿಟ್ಟು, ಅಕ್ಕಿಯ ಗಂಟನ್ನವನು ಬಿಚ್ಚಲೇ ಇಲ್ಲ. ಆ ಊರಿನ ಗೌಡ್ರು ಚೆನ್ನಕ್ಕ, ತನ್ನಮನೆಯ ಪಾತ್ರೆಗಳನ್ನು ಅವನು ಸೊಗಸಾಗಿ ಕಲಾಯಿ ಮಾಡಿಕೊಟ್ಟದ್ದಕ್ಕೆ ಮೆಚ್ಚಿ ನಾಲ್ಕುಸೇರು ರಾಗಿ ಕೊಟ್ಟಿದ್ದಳು. ಇದರಿಂದ ಅವನ ಗಂಟು ಮೊದಲಿಗಿಂತ ದೊಡ್ಡದಾಗಿತ್ತು.

ಕರಡಿ ಸ್ಟೇಷನ್ನಿನಲ್ಲಿ ಇವನು ರೈಲು ಕಾಯುತ್ತಿದ್ದಾಗ, ಅವನೂರಿನವನೇ ಆದ ಬುಡನ್ ಸಾಬಿ—ಹುಸೇನ್ ಸಾಬಿಯ ದಾಯಾದಿ, ಈಗ ಪೋಲೀಸ್..... ಎಂದೂ ಮಾತಾಡಿಸದವನು ಬಂದು ಮಾತಾಡಿಸಿದ. ಹುಸೇನ್ ಸಾಬಿಯು ಹಸಬಿಯ ಮೇಲೆಯೇ ಕುಳಿತು, ಅವನೇ ಕೊಟ್ಟ ಒಂದು ಗಣೇಶ ಬೀಡಿಯನ್ನೆಳೆದು, ಆನಂತರ—''ತಿಪಟೂರಿಗೆ ಹೋಗ್ತಿಯಾ! ಒಳ್ಳೆಯದಣ್ಣಾ ಹೋಗಿಬಾ'' ಎಂದು ಹೇಳಿ ಹೊರಟುಹೋದ.

ರೈಲುಬರುವ ಹೊತ್ತಾಯಿತು.... ಅಗೋ ಬಂದೇಬಿಟ್ಟಿತು ಎನ್ನುವಾಗ, ಬುಡನ್ ಸಾಬಿ ಮತ್ತೊಬ್ಬ ಪೋಲೀಸನವನೊಂದಿಗೆ ಬಂದ. ಇಬ್ಬರೂ ಹುಸೇನ್ ಹೊತ್ತಿದ್ದ ಗಂಟಿನಕಡೆ ನೋಡುತ್ತಾ ಮುಂದೆ ಹೋದರು.

ಹುಸೇನ್ ಸಾಬಿ ಆ ಭಾರದ ಗಂಟು ಹೊತ್ತು ನಾಲ್ಕು ಗಾಡಿಗಳ ಬಾಗಿಲಲ್ಲಿ 'ಅಚ್ಚೊ' ಎನ್ನಿಸಿಕೊಂಡು, ಐದನೆಯ ಗಾಡಿಯೊಳಕ್ಕೆ ನುಗ್ಗಿದ. ಗಾಡಿಯಲ್ಲಿ ಕೊಂಚ ಜಾಗ ಮಾಡಿಕೊಂಡು ಗಂಟು ಕೆಳಗೆ ಪಾಕ ಕುಳಿತುಕೊಂಡ. ಇನ್ನೇನು ರೈಲು ಹೊರಡಬೇಕು, ಬುಡನ್ನಿನ ಜೊತೆಗೆ ಒಂದಿದ್ದ ಪೋಲೀಸನವನು ಗಾಡಿ ಹತ್ತಿದ. ಸುತ್ತಲೂ ಒಮ್ಮೆ ದೃಷ್ಟಿಸಿ ನೋಡಿ—"ಏಯ್! ಏನದು?" ಎಂದು ಹುಸೇನನನ್ನು ಕೇಳಿದ. ಅವನ ಕೈ ಹುಸೇನನ ಗಂಟನ್ನು ತೋರಿಸುತ್ತಿತ್ತು. "ಇದಾ! ನನ್ನ ಸಾಮಾನಣ್ಣಾ!" ಹುಸೇನ್ ಹೇಳಿದ. ಹುಸೇನ್ ಸಮಾಧಾನ ಸ್ವಭಾವದವ. ನಾಲ್ಕಾರು ಊರು ತಿರುಗಿದವನಾಗಿ ದೌರ್ಜನ್ಯವನ್ನು ಎಲ್ಲಿ ಪ್ರಕಟಿಸಬೇಕು; ಎಲ್ಲಿ ಸೌಜನ್ಯವನ್ನು ತೋರಿಸಬೇಕು?—ಎಂಬುದನ್ನರಿತಿದ್ದ. ಆದರೆ ಆ ಪೋಲೀಸನ ದರ್ಪದೆದುರು ಇವನ ಸೈನ್ಯ ಕೆಲಸ ಮಾಡಲಿಲ್ಲ. "ಏನ್ ಸಾಮಾನು?" ಎಂದವನು ಮರುಪ್ರಶ್ನೆ ಹಾಕಿದ.

"ಕಲಾಯಿ ಮಾಡುವ ಸಾಮಾನಣ್ಣಾ!" ಹುಸೇನ್ ಸಮಾಧಾನವಾಗಿಯೇ ಹೇಳಿದ.

"ಎಲ್ಲಿ ತೆಗ" ಎನ್ನುತ್ತಾ ಪೋಲೀಸನವನು ಒಳಗೆ ಬಂದು ಬೇಲಳ್ಳಿಕೆ ಕೈಹಾಕಿದಾಗ, ಹೇಲುಗಡಿ ಕಟ್ಟಿದ್ದ ರಾಗಿ ಅವನ ಕೈಗೆ ಸಿಕ್ಕಿತು.

"ಚೀಲದಲ್ಲಿ ಕಾಳು ತುಂಬಿಕೊಂಡು ಕಲಾಯಿ ಸಾಮಾನು ಎನ್ನುತ್ತೀಯಾ? ಜಬ್ಬು ನಿನ್ನ ಗಂಟು!" ಪೋಲೀಸನವನ ಬಾಯಿ ಗಾಡಿಯವರನ್ನೆಲ್ಲಾ ನಡುಗಿಸಿತು. ಹುಸೇನನಿಗೆ ಗಾಡಿಯಲ್ಲಿ

ಜಾಗ ಕೊಡಬಾರದೆಂದು ಅವನನ್ನು ಅಡ್ಡಿಪಡಿಸಿ ನೋಕವರು, ಹುಸಿನಗೆ ನಕ್ಕು ಗೇಲಿಮಾಡುವ ಸಿದ್ಧತೆಯಲ್ಲಿದ್ದರು.

ಬೈಲು "ವಿಸಲ್" ಊದಿತು. ಗಾರ್ಡು ಬಾವುಟ ಎತ್ತಿದ್ದವನು ಈ ಗಾಡಿಯ ಒಳಗಲಾಟೆ ನೋಡಿ ಅಲ್ಲಿಗೆ ಬಂದ. ಪೋಲೀಸಿನವನ ಕಣ್ಸನ್ನೆಯಿಂದಲೇ ಬಾವುಟವನ್ನವನು ಮತ್ತೆ ಕಂಕುಳಿಗೆ ಸೇರಿಸಿ ಸ್ಟೇಷನಿನೊಳಕ್ಕೆ ಹೊರಟ.

ಹುಸೇನ್ ಸಾಬಿ ಎಷ್ಟು ವಿಧವಾಗಿ ಕೇಳಿದರೂ ಪೋಲೀಸಿನವನು ಬಿಡಲಿಲ್ಲ. ಚೀಲವನ್ನು ಗಾಡಿಯಿಂದ ಕೆಳಕ್ಕೆ ಎಳೆದೇ ಬಿಟ್ಟ. ಹುಸೇನ್ ಯತ್ನವಿಲ್ಲದೆ ಚೀಲ ಬಿಚ್ಚಲೇಬೇಕಾಯಿತು. ತನಿಖೆ ಕ್ರಮವಾಗಿ ನಡೆಯಿತು. ಪೋಲೀಸಿನವನು ಕಾಲುಪಟ್ಟಿಯಿಂದ ಸೀಸದ ಕಡ್ಡಿ ಕಿತ್ತು, ಜೇಬಿನಲ್ಲಿದ್ದ ಕಾಗದ ಜೂರಿನ ಮೇಲೆ "ನಾಲ್ಕು ಸೇರು ರಾಗಿ, ಒಂದು ಸೇರು ಅಕ್ಕಿ, ಎರಡು ಸೇರು ಹಿಟ್ಟು—ಒಟ್ಟು ೭ ಸೇರು" ಎಂದು ಬರೆದುಕೊಂಡ.

"ಸಾಬು! ನಡೀ ಸ್ಟೇಷನ್‌ಗೆ. ಕಾನೂನು ಗೊತ್ತಾ ನಿನಗೆ? ೫ ಸೇರಿಗಿಂತ ಹೆಚ್ಚಿಗೆ ಒಬ್ಬರ ಹತ್ತಿರ ಏನೂ ಇರಬಾರ್ದು; ನಿನ ಹತ್ತಿರ ೭ ಸೇರಿದೆ....ಎತ್ತು ಗಂಟು....ನಡಿ."

ಹುಸೇನ್‌ಸಾಬಿ ಗಂಟುಕಟ್ಟಿದ. "ಅಲ್ಲಣ್ಣಾ—ಐದು ಸೇರಿಗಿಂತ ಹೆಚ್ಚಿಗೆ ಕಾಳು ಇರಬಾರ್ದೂ, ನಿಜ. ನನ್ಹತ್ರ ಇರೋದಾದ್ರೂ ಅಷ್ಟೇ ಅಲ್ವಾ?"

"ಎರಡು ಸೇರು ಹಿಟ್ಟು ಹೊಟ್ಟೆಗೆ ತಿನ್ನೋದಲ್ವಾ?"

"ಏನೋಣ್ಣಾ! ಮುಕ್ಳುಮುರಿಯೋನು...."

"ಸರ್ಕಾರದ ಕಾನೂನು ಅಂದ್ರೆ ಕಾನೂನು ಕಣಯ್ಯಾ! ಮುಕ್ಕಳು ಇದ್ದೋರಿಗೊಂದು-ಇಲ್ದೋರಿಗೊಂದೇನು?"

"ನಿನ್ನ ಧರ್ಮ ಏನಾರ...." ಇಷ್ಟು ಹೊತ್ತಿಗೆ 'ಗಣೇಶ' ಬೀಡಿ ಸೇದುತ್ತಾ ಬುಡನ್‌ಸಾಬಿ ಅಲ್ಲಿಗೆ ಬಂದ. ಏನೂ ತಿಳಿಯದವನ ಹಾಗೆ "ಕ್ಯಾ ದಾದಾ?" ಎಂದ ಹುಸೇನನನ್ನು ಕುರಿತು.

ಹುಸೇನ್ ತನ್ನ ಕತೆಯನ್ನೆಲ್ಲಾ ಹೇಳಿದ ಮೇಲೆ "ಅಲ್ಲ ದಾದಾ, ತಿಳ್ದೂ ತಿಳ್ದೂ ಕಾನೂನು ಮೀರಿದ ಕೆಲಸ ಮಾಡ್ತೀರಲ್ಲಾ! ಮೊದಲೇ ಕೆಟ್ಟ ಕಾಲ, ಕೆಟ್ಟ ದಿವ್ಸ!.....ಬಾಣ್ಣಾ ಇಲ್ಲಿ" ಎಂದು ಹೆಗಲಮೇಲೆ ಕೈಹಾಕಿ ಕೊಂಚ ದೂರ ಕರೆದೊಯ್ದು. ಅಲ್ಲಿಂದಲ್ಲೇ ಕೂಗಿದ ಚೀಲದ ಬಳಿ ಇದ್ದ ಪೋಲೀಸಿನವನನ್ನು. ಹುಸೇನ್...."ಅಯ್ಯೋ....ಅಷ್ಟೊಂದು ಇಲ್ಲಪ್ಪಾ.. ಇಗಾ-ಇತ್ತಗೋ" ಎಂದು ಕಂಗಾಲಾಗಿ ಎಂಟಾಣೆ ನಾಣ್ಯವನ್ನು ಅವನ ಕೈಗಿಟ್ಟ.

"ನೋಡಪ್ಪಾ ಸಾಬು. ಜಾತಿ ಕೆಟ್ರೂ ಪ್ರಯೋಜ್ನ ಆಗ್ಬೇಕು. ನೀನು ಕೊಡೋದ್ರಾಗೆ ಆಲ್ನೋಡು ಅಲ್ಲಿ....ಗಾರ್ಡುಸಾಹೇಬರು! ಅವರಿಗೆ ಒಂದು 'ವಿಲ್ಸ್' ಪ್ಯಾಕಾದರೂ ಕೊಡಬೇಕು. ಇನ್ನು ನಂಗೆ ಉಳಿಯೋದು ಮೂರಾಣೆ! ನಾನು ಒಂದು ದಿನಕ್ಕೆ ಹತ್ತಾಣೆ ಸಿಗರೇಟ್ ಸೇತ್ತೀನಯ್ಯಾ....ತಗೋ...."

ಹುಸೇನಸಾಬಿಯು ದೈನ್ಯ ಹೆಚ್ಚಾದಷ್ಟೂ ಬುಡನ್ ಗಂಭೀರನಾಗುತ್ತಿದ್ದ; ಗಾರ್ಡು ಅವಸರ ಮಾಡುತ್ತಿದ್ದ, ಪೋಲೀಸಿನವನು ಬೀಗನಾಗುತ್ತಿದ್ದ.

ಕಡೆಗೆ ಹುಸೇನ್‌ಸಾಬಿಯು ಕೈಯಿಂದ ಒಂದು ರೂಪಾಯಿ ಚಾರಿತು.

೨

ಪೋಲೀಸಿನವನು ಕೊಟ್ಟ ಸಿಗರೇಟ್ ಪ್ಯಾಕನ್ನು ಜೇಬಿಗೇರಿಸುತ್ತಾ ಗಾರ್ಡು ಬಾವುಟ ಬೀಸಿದ. ಕರಡಿ ಸ್ಟೇಷನ್‌ನಲ್ಲಿ ಹತ್ತು ನಿಮಿಷ ಹಚ್ಚಾಗಿ ಕಾಲಕಳೆದ ತಪ್ಪಿಗೋ ಏನೋ ಎನ್ನುವಂತೆ, ಬೈಲು ಕರ್ಕಶವಾಗಿ ಕೂಗುತ್ತಾ ಓಡಲಾರಂಭಿಸಿತು.

ಹುಸೇನ್‌ಸಾಬಿ ಕುಳಿತ ಗಾಡಿಗೆ ಬಿಳಿಯ ಬಟ್ಟೆಯ ರೈಲ್ವೆ ನೌಕರನೊಬ್ಬ ಹತ್ತಿದ. "ಟಿಕೆಟ್.ಟಿಕೆಟ್" ಎನ್ನುತ್ತಾ ಕೈಯಲ್ಲಿದ್ದ 'ಪಂಚ್' ಅನ್ನು 'ಟಕ್.ಟಕ್' ಎನ್ನಿಸುತ್ತಾ ಗಾಡಿಯ ಒಂದು ಕಡೆಯಿಂದ ಮತ್ತೊಂದು ಕಡೆಗೆ ನಡೆದಿದ್ದ. ಟಿಕೆಟ್ ಇಲ್ಲದವರ ಪಾಲಿಗೆ ಯಮನಂತಿದ್ದ ಆ ನೌಕರ..

ಹುಸೇನ್ ಸಾಬಿಯ ಸರದಿ ಬಂದಿತು. ಹುಸೇನ್ ಎದ್ದು ನಿಂತು ಜೇಬಿನಲ್ಲಿದ್ದ ಟಿಕೆಟ್ ತೋರಿಸಿದ. ಟಿಕೆಟ್ ನೋಡಿ ಆತ್ಮಸ್ತ್ಥೈಯ ಮುಖಭಾವದಿಂದ, ಅವನ ಗಂಟಿನ ಕಡೆ ಕೈ ತೋರಿಸುತ್ತಾ "ಏ ಕ್ಯಾಹೈ?" ಎಂದು ಕೇಳಿದ ಆ ಗಾರ್ಡು. ಹುಸೇನ್ 'ಮತ್ತೆ ಏನೋ ಬಂತು' ಎಂದುಕೊಳ್ಳುತ್ತಾ ಮೆಲ್ಲಗೆ ದೈನ್ಯದಿಂದ, "ಏ ಮೇರಾ ಸಾಮಾನ್ ಹೈ ಸಾಬ್" ಎಂದ.

"ಕ್ಯಾ ಸಾಮಾನ್?" ಗಾರ್ಡು ಗಂಭೀರವಾಗಿ, ಗಡುಸಾಗಿ ಕೇಳಿದ.

"ಏ ಕಲಾಯಿ ಕರ್ನೆಕಾ....."ಮತ್ತೂ ದೈನ್ಯದಿಂದ ಹುಸೇನ್ ಉತ್ತರ ಕೊಟ್ಟ.

ಗಾರ್ಡು ಗಂಟಿಗೆ ಕೈಹಾಕಿ ಮೇಲೆತ್ತಲು ಪ್ರಯತ್ನಿಸಿ, ವಿಫಲನಾಗಿ, ಗಂಟಿನ ಭಾರವನ್ನು ಪರೀಕ್ಷೆ ಮಾಡಿದ.

"ತುಂಬಾ ತೂಕ ಇದೆ! ಲಗೇಜ್ ಯಾಕೆ ಮಾಡಿಸಲಿಲ್ಲ?" ಎಂದು ಕೇಳಿದ.

ಹುಸೇನ್ ಕಕ್ಕಾಬಿಕ್ಕಿಯಾದ. ಆಗಲೇ ಆ ಗಂಟಿನಲ್ಲಿದ್ದ ಕಾಳಿನ ನೆಪದಿಂದ ಬಂದು ರೂಪಾಯಿ ಕಕ್ಕಿದ್ದ ; ಈಗ ಮತ್ತೆ ಲಗ್ಗೇಜ್! "ಲಗೇಜ್ ಮಾಡಿಸೋ ಅಷ್ಟು 'ವಜನ್' ಇಲ್ಲಾ ಸ್ವಾಮಿ; ನಾನು ಯಾವಾಗ್ಲೂ ಮಾಡ್ಸಿರಲಿಲ್ಲ...." ಎಂದ—ನಮ್ರನಾಗಿ.

"ಯಾವಾಗ್ಲೂ ಮಾಡಿಸ್ದೆ ಇದ್ರೆ.... ನೋಡ್ಕೊಳ್ದೇಂ ತಪ್ಪು; ನಿನ್ನ ತಪ್ಪು! ಈಗ.... ಎಲ್ಲಿತೆಗಿ, ಒಂದೂ ಕಾಲು ರೂಪಾಯಿ!" ಕಂಕುಳಲ್ಲಿದ್ದ ಪುಸ್ತಕ ತೆಗೆದು, ಜೇಬಿನಲ್ಲಿದ್ದ ಸೀಸದ ಕಡ್ಡಿಯ ಮುಚ್ಚಳ ಕಳಚಿ ಬರೆಯಲು ಸಿದ್ಧನಾಗುತ್ತಾ "ಹೂಂ! ತೆಗೆ..... ನಿನ್ನ ಹೆಸರೇನು?" ಎಂದ ಆ ಗಾರ್ಡು.

ಹುಸೇನನ ನಾಲಗೆ ಒಣಗಿದಂತಾಯಿತು. ಗಂಟಲು ಕಟ್ಟಿದಂತಾಯಿತು. ನಿತ್ಯೋಪಯೋಗದ ಸಾಮಾನುಗಳ ಗಂಟೊಂದಕ್ಕೆ ೧೫೧|=೭| ರೂಪಾಯಿ ತೆರುವುದು— ಹುಸೇನನಂತಹ ಮರಿಗಿರಲಿ ಯಾರಿಗಾದರೂ— ನಾಲಗೆ ಒಣಗುವ ಮಾತೇ!

ಸ್ವಲ್ಪ ಕೆಮ್ಮಿ ಗಂಟಲು ಸರಿಪಡಿಸಿಕೊಂಡು "ಮಾಫ್ ಕರ್ನಾ ಸಾಬ್....ತಿಳೀಲಿಲ್ಲ. ಇನ್ನು ಮುಂದೆ ಹೀಗ್ಮಾಡಲ್ಲ....ದೇವ್ರು ಬಡವ...." ಎಂದು ಹಲ್ಲು ಕಿರಿದ.

"ತೆಗಿ-ತೆಗಿ.... ದುಡ್ಡು ತೆಗಿ; ಮಾಫ್ ಕರ್ನಾ-ಗೀಫ್ ಕರ್ನಾ-ಎಲ್ಲಾ ನೆಡೆಯಲ್ಲ! ರೈಲು ಅಂದ್ರೆ ನಮ್ಮಪ್ಪಂದಲ್ಲ." ಗಾರ್ಡು ಜೋರಿದ. ಗಾಡಿಯಲ್ಲಿದ್ದ ಇತರ ಪ್ರಯಾಣಿಕರೆಲ್ಲರ ಟಿಕೇಟ್‌ಗಳನ್ನೂ 'ಚೆಕ್' ಮಾಡಿದ್ದಾಯಿತು. ಮತ್ತೆ ಬಂತು ಹುಸೇನ್ ಸಾಬಿಯ ಸರದಿ.

ಗಾಡಿಯಲ್ಲಿದ್ದ ಹುಸೇನ್ ಸಾಬಿಯ ಸಹಪ್ರಯಾಣಿಕರು ಒಬ್ಬರು, ಅವನು ಬಡವನೆಂದೂ 'ಮಾಫ್' ಮಾಡಬೇಕೆಂದೂ ಸಿಫಾರ್ಸು ಮಾಡಿದರು. ಯಾರ ಸಿಫಾರ್ಸೂ ಫಲಿಸಲಿಲ್ಲ. ಹುಸೇನನ ಗೋಳೂ ಕೆಲಸಕ್ಕೆ ಬರಲಿಲ್ಲ. ಇಷ್ಟುಹೊತ್ತೂ ಸುಮ್ಮನೆ ಕುಳಿತಿದ್ದ ಜರೀ ಪೇಟದವರೊಬ್ಬರು ಮಧ್ಯಸ್ಥಿಕೆಗೆ ಬಂದರು. ಮೊದಲು ಹುಸೇನಸಾಬಿಯನ್ನು ತೆಗಳಿ, ಬೈದರು. ಗಾರ್ಡ್‌ಸಾಹೇಬರ ಪರವಾಗಿ ಮಾತನಾಡುತ್ತಾ—"ಈ ಮುಕ್ಕಳಿಗೆ ರೈಲು ಅಂದರೆ ಒಟ್ಟರ ಬಂಡಿ ಆಗ್ಬೆತಿ. ಪಾಪ! ಸ್ವಾಮೇರು ಈಗ ನಿನ್ನ ಕೈ ಬಿಟ್‌ಬಿಟ್ರೆ, ಪೊಡೆಸ್ಟೋಫ್ ಕಣ್ಲೇನಾರಾ ಬಿದ್ದರೆ ಅವರ ಗತಿ ಏನು?..... ನ್ಯಾಯಕ್ಕೆ ನ್ಯಾಯಾ ಇಟ್ಟೇಕು...." ಎಂದು ಮುಂತಾಗಿ ಹೇಳಿ, ಸಾಹೇಬರನ್ನ 'ಗಿಲೀಟು' ಮಾಡಲು ಮೊದಲಿಟ್ಟರು. "..... ಅದ್ರೂ ಸ್ವಾಮಿ! ನಿಮ್ಮಂತ ಧಣಿಗಳು ಇಪಸಂಫ ಬಡಪಾಯಿಗಳ ಮೇಲೆ ಕನಿಕರ ತೋರಿಸ್ಬೇಕು-ದೇವ್ರು. ಏನೋ ಪಾಪ! ಬಡಪ, ಕಲಾಯಿ ಪಲಾಯಿ ಮಾಡ್ಕೊಂಡು ಜೀವ್ನ ನಡಸ್ಬೇಕು. ....ಕಷ್ಟಕಾಲ.... ಬಂದು ..... ಎಂಟಾಣೆ ತೊಗೊಂಡು ಬಿಟ್ಟಿದಿ ..... ದೇವ್ರು ....."

ಹುಸೇನನ ಕಡೆ ತಿರುಗಿ ಹೇಳಿದರು.... "ಕೊಡು.... ಒಂದೆಂಟಾಣೆ ಕೊಡು ಸ್ವಾಮೀರ್ಗೆ. ಮುಂದಿನ ಸ್ಟೇಷನ್‌ನ್ಯಾಗೆ ಇಳೀತೀತಾನೆ?....." ಎಂದು ಕೇಳಿದರು

ಗಾರ್ಡು ಸಾಹೇಬರು ಇವರಿಗಿಂತ ಘಾಟಿ! ತಿಂಗಳಿಗೆರಡು ದಿನ ರೈಲಲ್ಲಿ ಓಡಾಡೋರ್ಗೆ ಇಷ್ಟು ಬುದ್ಧಿ ಇದ್ರೆ..... ದಿನಕ್ಕೆ ಎರಡು ಬಾರಿ ಓಡಾಡೋರ್ಗೆ ಎಷ್ಟಿರಬೇಕೋ ಅಷ್ಟು ಇತ್ತು ಅವರಿಗೆ. "ಅದೆಲ್ಲಾ ಆಗೋಲ್ಲಾ ಗಾಡ್ರೆ..... ಇನೇನು ಅಂಗ್ನೀನಾ ಚಾಕಾಸಿ ಮಾಡೋಕೆ? ನಾನು ಅಂದಾಜಿನ ಮೇಲೆ ಹೇಳಿರೋದು ಒಂದೂಕಾಲು ರೂಪಾಯೀಂತ.... ತೂಕ ಮಾಡಿದ್ರೆ ಇನ್ನೂ ಹೆಚ್ಚಾಗ್ತದೆ...."

"ಆಯ್ಯೋ... ಇರ್ಲಿ ಬಿಡಿ ಸ್ವಾಮಿ! ಇನ್ನ ಆ ಗಂಟ್ನ ತೂಕಾ ಹಾಕಿ.... ಚೀಟಿ ಹಚ್ಚಿ.... ಯಾಕ್ ದೇವ್ರೂ ಅದೆಲ್ಲಾ ತೊಂದ್ರೆ? .....ಸಾಬು.....ಕೊಡು ಸ್ವಾಮೇರಿಗೆ ಕೊಟ್ಬಿಡು" ಎಂದು ಸಾಬಿಗೆ ಕಣ್ಸನ್ನೆ ಮಾಡಿದ್ರು ಗೌಡ್ರು.

ಹುಸೇನಸಿಗೆ ಮಾತಾಡಲು ಅವಕಾಶವೇ ಇರಲಿಲ್ಲ. ಹೆಚ್ಚಿಗೆ ಮಾತಾಡಿದರೆ ಮತ್ತೇನು ಸುತ್ತಿಕೊಳ್ಳುವುದೋ ಎಂಬ ಭಯ ಬೇರೆ. ಅಂಗಿಯ ಒಳಜೇಬಿಗೆ ಕೈಹಾಕಿ, ಬೀಡಿ-ಚ್ಚಿಂಕಿಪಟ್ಟಣಗಳ ಮಧ್ಯದಿಂದ ಎಂಟಾಣೆ ಚಿಲ್ರೆ ಆರಿಸಿ ಸಾಹೇಬರ ಕೈಗೆ ಇಟ್ಟ!

ಸಾಹೇಬರ ಮುಖ ಕೆಂಪಾಯಿತು! ಎಂಟಾಣೆ ತೆಗೆದು ಹುಸೇನನ ಕೈಯಲ್ಲೇ ಇಟ್ಟರು.... "ನಿಮಗೆ ಇದೆಲ್ಲಾ..... ತಮಾಷೆ ಅಲ್ಸೆ? ಮುಂದಿನ ಸ್ಟೇಷನ್ ಬರ್ಲಿ.... ಇದನ್ನ ತೂಕಾ ಹಾಕ್ಸಿ ಬರಬೇಕಾದ್ದೆಲ್ಲಾ ವಸೂಲು ಮಾಡ್ತೀನೆ...." ಎಂದು ಗುಡುಗಿದರು.

ಗಾಡರ ಮಧ್ಯಸ್ಥಿಕೆ ಮತ್ತೆ ಪ್ರಾರಂಭವಾಯಿತು. ಅವರು ಕಲಿತ ಬುದ್ಧಿಯನ್ನೆಲ್ಲಾ ಖರ್ಚು ಮಾಡಿ ಹನ್ನೆರಡಾಣೆಗೆ 'ವ್ಯಾಪಾರ' ಕುದುರಿಸಿದರು. ಆ ಹೊತ್ತಿಗೆ ತಿಪಟೂರು ಸ್ಟೇಷನ್ ಬಂದೇಬಿಟ್ಟಿತು.

ಹುಸೇನ್ ಸಾಬಿ ಗಾಡಿಯಿಂದ ಇಳಿದು ಗಂಟು ಕೆಳಕ್ಕಿಳಿದುಕೊಂಡ. ಗೇಟಿನ ಗಲಾಟೆ, ನೂಕು-ನುಗ್ಗುಲು ಕಡಿಮೆಯಾಗಲೆಂದುಕೊಂಡು, ಗಂಟನ್ನು ಒಂದು ಕಡೆಗೆ ದೀಪದ ಕಂಬದ

( ೧೦ನೆಯ ಪುಟ ನೋಡಿರಿ )

---

( ೮೫ ನೆಯ ಪುಟದಿಂದ ಮುಂದೆ ಸಾಗಿದ್ದು )

ಕನ್ನಡ ಕುಲದ ಯಥಾರ್ಥ ಪರಿಚಯ ಮಾಡಿಕೊಂಡು, ಅವರಿಗೆ ತನ್ನ ಅಧಿಕಾರದಲ್ಲಿ ತನಗೆ ಶಕ್ಯವಾದ ರೀತಿಯಲ್ಲಿ ಸುಖಸಮಾಧಾನದ ಜೀವನಕ್ಕೆ ಮಾರ್ಗ ಮಾಡಿಕೊಟ್ಟ ಕೀರ್ತಿವಂತನಾದ ಸರ್ ಥಾಮಸ್ ಮನ್ರೋನಂತಹ ಪರಕೀಯ ಸಜ್ಜನಹೃದಯನಲ್ಲಿಯೂ "ಕರ್ನಾಟಕ ಜನಾಂಗತ್ವ"ದ "ಕೆಚ್ಚು ಕನ್ನಡತನ"ದ ಭಾವನೆಗಳನ್ನು ಹುಟ್ಟಿಸಿ, ಬೆಳೆಯಿಸಿ, ಕನ್ನಡ ಜನಾಂಗದ ಏಚ್ಛೇದನವಾಗದಂತೆ ಕೊನೆಯ ವರೆಗೂ ಸ್ಪಷ್ಟಪಾದಿತ್ವದ ಛಿಟ್ಟಿನದೀದ ತನ್ನ ಅಭಿಪ್ರಾಯವನ್ನು ತನ್ನ ವರಿಷ್ಠರೆದುರು ಮಂಡಿಸುವ ಸ್ಥೈರ್ಯವನ್ನು ಒಡಮೂಡಿಸಿದ ಈ ನಮ್ಮ ಧಾರವಾಡ ಭಾಗದ "ಕನ್ನಡ" ಮಯ ಜನಜೀವನಕ್ಕೆ, ಎಂದೆಂದಿಗೂ ಚ್ಯುತಿ ಬಂದಿರಲಿಲ್ಲವೆಂಬುದು ಈ ಐತಿಹಾಸಿಕ ಹಿನ್ನೆಲೆಯಿಂದ ಸಿದ್ಧವಾಗುವುದಿಲ್ಲವೆ? ಆದುದರಿಂದಲೇ ಹೊಸಗನ್ನಡ ನಾಡನ್ನು ಕಟ್ಟುವ ಈಗಿನ ಮಹತ್ಕಾರ್ಯದಲ್ಲಿ, ಇಂತಹ ಧಾರವಾಡವೇ ಎಲ್ಲರಿಗೂ ದಿಕ್ಕು ತೋರುವ ಧ್ರುವತಾರೆಯಾಗಿ ಸಾಹಸಪಟ್ಟು—ಪಡುತ್ತಿರುವುದೂ ಅದರ "ತಿರುಳ್ಗನ್ನಡ" ನಾಡಿನ ಪರಂಪರೆಗೆ ಅನುಸರಿಸಿದ್ದೇ ಇರುವುದೆಂದು ಯಾರಾದರೂ ಮನಗಂಡು ಸಂತಸದಿಂದ ಹಿಗ್ಗಬೇಕಷ್ಟೆ?

# ಅಹಿಂಸೆಯೇ ಧರ್ಮದ ಮೂಲಮಂತ್ರ

ಡಿ. ಶಿ. ಗೋ. ಕುಲಕರ್ಣಿ, ಧಾರವಾಡ

**ನಮ್ಮ ಜನತೆ ಅಹಿಂಸೆಯನ್ನು ಪುರಸ್ಕರಿಸದೆ ಹೋದರೆ, ಭಾರತದಲ್ಲಷ್ಟೆ ಅಲ್ಲ, ಜಗತ್ತಿನಲ್ಲಿಯೆ ಅಶಾಂತಿ-ಅಸ್ವಾಸ್ಥ್ಯಗಳು ತಲೆದೋರುವುವು.**

ಈ ಮಂತ್ರವನ್ನು ಭಾರತವು ತನ್ನ ಒಕ್ಕೂರಲಾದ ಗಾಂಧೀಜಿಯವರಿಂದ ಜಪಿಸಹತ್ತಿ ಕಾಲು ಶತಮಾನವಾಯಿತು. ಅದಕ್ಕೂ ಮೊದಲೇ, ಭಾರತಕ್ಕೆ ಈ ಮಂತ್ರೋಪದೇಶ ಮಾಡಿದ ಋಷಿವರರಾದ ಗಾಂಧೀಜಿಯವರಿಗೆ ಎರಡು ತಪಗಳ ತಪಶ್ಚರ್ಯದ ಸಿದ್ಧಿಯಿತ್ತು. ಇಷ್ಟೊಂದು ದೀರ್ಘಕಾಲ ತಪವನ್ನೆಸಗಿದ ಮೇಲೆ ಸಿದ್ಧಿಯಾಗದೇನು ಮಾಡೀತು! ಆ ಸಿದ್ಧಿಯ ಅರುಣೋದಯವಾಗಿದೆ. ಅರುಣೋದಯವಾದ ಮೇಲೆ ಸೂರ್ಯೋದಯವಾಗದಿದ್ದೀತೆ!

ಈ ಮಾತನ್ನು ಗಾಂಧೀಜಿಯವರೇ ಎಂದಿರುವುದರಿಂದ ನಮಗೂ ಎನ್ನಲು ಅಧಿಕಾರ ಪ್ರಾಪ್ತವಾಗಿದೆ. ಅವರು ತಾ. ೧೭-೪-೪೭ ರ ಹರಿಜನದಲ್ಲಿ ಈ ರೀತಿ ಬರೆದಿದ್ದಾರೆ. "There is little doubt that India is about to reach her cherished goal of Political independence" (ತಾನು ಅಪೇಕ್ಷಿಸಿದ ರಾಜಕೀಯ ಸ್ವಾತಂತ್ರ್ಯದ ಗುರಿಯನ್ನು ಭಾರತವು ಇಂದು ಮುಟ್ಟುವುದರಲ್ಲಿದೆ.) ಇದರಿಂದ ಗಾಂಧೀಜಿಯವರಿಗೆ ಸುಖಸಮಾಧಾನವಿದೆಯಾದರೂ ಇನ್ನೊಂದು ಮಹಾಚಿಂತೆಯು ಅವರನ್ನೀಗ ಅವರಿಸಿದೆ. ಅದೆಂದರೆ ಸ್ವತಂತ್ರ ಭಾರತವು, ನಿನ್ನೆ ಮೊನ್ನೆ ಆಳರಸರಾಗಿದ್ದ ಇಂಗ್ಲಿಷರನ್ನು—ದ್ವೇಷಭಾವವನ್ನೆಲ್ಲ ನುಂಗಿಕೊಂಡು—ಸ್ನೇಹಭಾವದಿಂದ ನಡೆಯಿಸಿಕೊಳ್ಳಬಹುದೇ ಎಂಬುದು. ಈ ಚಿಂತೆ ಅವರನ್ನೀಗ ಹಗಲಿರುಳೂ ಬಾಧಿಸಹತ್ತಿದೆ. ಆಳರಸರ ವಿಷಯವನ್ನಾಗಿ ಭಾರತೀಯರಲ್ಲಿರುವ ದ್ವೇಷ ಯಾರಿಗೆ ತಾನೆ ಗೊತ್ತಿಲ್ಲ? ಇಷ್ಟೆ ದಿನ ತಡೆಗಟ್ಟಿ ನಿಂತ ಆ ದ್ವೇಷ ಇಂದು ಮುಯ್ಯ ತೀರಿಸಿಕೊಳ್ಳಲು ದಾವಾನಲದಂತೆ ದೇಶವನ್ನೇ ವ್ಯಾಪಿಸಲಿಕ್ಕಿಲ್ಲವೇ?.... ಇತ್ಯಾದಿ ವಿಚಾರಗಳೇ ಇಂದು ಗಾಂಧಿಜಿಯವರ ಮನದಲ್ಲಿ ತುಂಬಿಕೊಂಡಿವೆ.

ಇದರಿಂದ ಗಾಂಧೀಜಿಯವರ ಅಹಿಂಸಾಪ್ರತಿಭೆ ಕೇವಲ ಪ್ರತಿಭಾಗಿರದೆ ಅವರ ಸ್ವಧರ್ಮವೇ ಆಗಿರುವುದೆಂಬುದು ಸ್ವಯಂ ಸಿದ್ಧವಾಗುತ್ತದೆ. ದೇಶ-ಕಾಲಗಳನ್ನು ಮೀರಿ ನಿಂತಿರುವ ಅವರ ಈ ಅಹಿಂಸಾಧರ್ಮವು, ಇಂದು ಭಾರತದ ಸ್ವಾತಂತ್ರ್ಯ ಸೂರ್ಯನ ಅರುಣೋದಯದ ಸುಪ್ರಭಾತದಲ್ಲಿ ತನ್ನ ಸಂದೇಶವನ್ನು ಜಗತ್ತಿಗೆ ಸಾರಿ ಹೇಳುತ್ತಿದೆ. ಯಾರೊಡನೆ ಅಖಂಡ ೫೦ ವರ್ಷಗಳ ವರೆಗೆ ಕಾದಿ, ಯಾರಿಂದ ಸ್ವಾತಂತ್ರ್ಯವನ್ನು ಕಷ್ಟದಿಂದ ಪಡೆದನೋ ಅವರ ಕ್ಷೇಮಕ್ಕಾಗಿ ಅದರಲ್ಲೂ ಭಾರತದಿಂದ ಅವರನ್ನು ರಕ್ಷಿಸುವುದಕ್ಕಾಗಿ "ಇಂದು ನಾವೆಲ್ಲ ಪ್ರಾರ್ಥಿಸೋಣ" ಎನ್ನುವ ಹೃದಯದ ವೈಶಾಲ್ಯ, ಇಂದು ಜೀವಿಸುತ್ತಿರುವ ಯಾವನೊಬ್ಬ ವ್ಯಕ್ತಿಗೂ ಸರಿಗಟ್ಟದಂತಿದೆ. ಈ ವಿಚಾರವನ್ನೇ ಮಾಡುತ್ತ ಹಗಲು-ರಾತ್ರಿ ಆ ಮಹಾಮುಹಿಮನು ದೇವನಲ್ಲಿ ತನ್ನ ದೈನ್ಯಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದಾನೆ. **ಯಾವ ಒಂದು ಮಾತಿನಿಂದ ಸೊಂದ ಮನಗಳು ಮಾಯ್ದು ಒಂದಾಗುವುವೊ, ಅಂತಹ ಅವ್ಯಕ್ತ ಮಂತ್ರ** ಒಂದನ್ನು ಅರಸಿ ಪ್ರಾರ್ಥಿಸುತ್ತಿದ್ದಾನೆ. ಇದೇ ಮಹಾ ಆತ್ಮಗಳ ಲಕ್ಷಣ. ಮುಂದೆ ಬರುವ ಅನಿಷ್ಟಗಳನ್ನು ಇಂದು ಅರಿತುಕೊಂಡು ಶಾಂತಿಪಾಠ ಹೇಳುವ ಭವಿಷ್ಯವಾಣಿ ಇಲ್ಲಿದೆ. ಇಂತಹ ಆತನ ಕೂಗಿಗೆ ಓಗೊಡದ ದೈವವಿಲ್ಲ. ಈ ವರೆಗೂ ಕೈ ಹಿಡಿದು ಕರೆದುಕೊಂಡು ಬಂದ ಬೆಳಕು ಮುಂದೂ ಮಹಾತ್ಮರಿಗೆ ಕೈ ನೀಡಿ ಕರೆದೊಯ್ಯುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಇದು ಮಹಾತ್ಮಾಜೀಯವರ ನುಟ್ಟಿಗೆ ಸಂಬಂಧಿಸಿದ ಮಾತಾಯಿತು. ಅವರು ತಮ್ಮ ಕರ್ತವ್ಯವನ್ನು ಸದಾ ಮಾಡುತ್ತಲೇ ಬಂದಿದ್ದಾರೆ; ಆದರೆ ನಾವು?

ನಿಜ. ನಾವೂ ಮಾಡುತ್ತ ಬಂದಿದ್ದೇವೆ. ನಮ್ಮ ನಿರವ್ಯಸಹಕಾರಗಳಿಲ್ಲದೆ ಮಹಾತ್ಮರಿಗೆ ಈ ಸಿದ್ಧಿ ಪ್ರಾಪ್ತವಾಗುತ್ತಿರಲಿಲ್ಲ. ನಿಜ. ಆದರೆ ಇಷ್ಟಕ್ಕೆ ನಮ್ಮ ಕರ್ತವ್ಯ ಮುಗಿಯಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ದೊರೆತೊಡನೆ, ಆದನ್ನು ದೊರೆಕಿಸಿಕೊಟ್ಟ ಗಾಂಧಿಜಿಯವರು ನಮಗೆ ಬೇಡವಾಗಬಾರದು. ಹೆಚ್ಚು ಪ್ರಿಯರಾಗಬೇಕು; ಬೇಕಾದವರಾಗಬೇಕು; ಆತ್ಮೀಯರಾಗಬೇಕು. ಇಂದು ನಾವು ಅವರಿಗೆ ನಮ್ಮ ಪರವಾಗಿ ಬೇಕಾಗಿರುವ ಭರವಸೆಯನ್ನು ಕೊಡಬೇಕು. ನಾವು ಸ್ವತಂತ್ರರಾಗಿಯೂ ನಮ್ಮ ಅಹಿಂಸಾಧರ್ಮವನ್ನು ಬಿಡಬಾರದು. ಗಾಂಧಿಜಿಯವರು ಪ್ರಾರಂಭಿಸಿರುವುದನ್ನು ಕಾಯ್ದುಕೊಂಡು ಹೋಗಬೇಕಾದ ಪರಂಪರೆಯು ಇಲ್ಲಿದೆ. ಅವರ ಹೆಸರಿಗೆ ಕಲಂಕ ತರುವ ಯಾವ ಆಚರಣೆಯನ್ನೂ ಭಾರತೀಯ ಮಾಡಲಾರನೆಂಬ

ಭರವಸೆ ಅವರಿಗೀಗ ಬೇಕಾಗಿದೆ. ಈವರೆಗೂ, ಯಾರು ಏನನ್ನೂ ಕೇಳದೆ ಆ ಕೇವಲ ತಮ್ಮ ಆತ್ಮಬಲದಿಂದಲೆ ನಮಗೆ ಸ್ವಾತಂತ್ರ್ಯವನ್ನು ಗಳಿಸಿ ಕೊಟ್ಟಿರುವರೊ ಅವರು, ಇಂದು ನಮ್ಮಿಂದ ಈ ಭರವಸೆಯ ಭಿಕ್ಷೆ ಬೇಡುತ್ತಿದ್ದಾರೆ. ಭಿಕ್ಷೆಯಲ್ಲ ಇದು ಗುರುದಕ್ಷಿಣೆ.

ಭಾರತದ ಸ್ವಾತಂತ್ರ್ಯಸಾಧನೆಗೆ ಪ್ರತಿಯೊಬ್ಬ ಭಾರತೀಯನೂ ಕೊಟ್ಟ ವಂತಿಗೆಯ ಲೆಕ್ಕ ಮಾಡುವ ದಿನವೊಂದು ಬರಬಹುದು. ಅಂತಹ ಲೆಕ್ಕದಲ್ಲಿ ಗಾಂಧೀಜಿಯವರನ್ನು ಸರಿಗಟ್ಟುವ ವ್ಯಕ್ತಿಗಳು ಹೆಚ್ಚಿಗೆ ಸಿಕ್ಕಲಿಕ್ಕಿಲ್ಲ. ಗಾಂಧೀಜಿಯವರು ಎಲ್ಲರೊಂದಿಗೆ ನೊಂದುಬೆಂದು, ಬಳಲಿತೊಳಲಿ, ಕಷ್ಟಪಟ್ಟಿದ್ದಾರೆ. ಒಂದು ಗುಂಜಿ ತೂಕದಷ್ಟಾದರೂ ಹೆಚ್ಚು ಇನರು ಪಟ್ಟ ಕಷ್ಟವೆಂದು ಲೆಕ್ಕ ಹೊರಡಬಹುದು. ತನಗೆ ಕಷ್ಟಕೊಟ್ಟವರ ಪ್ರತಿ ದ್ವೇಷ ತಾಳುವುದೊಂದೇ ಧರ್ಮವಾಗಿದ್ದರೆ, ನಮಗೆಲ್ಲರಿಗಿಂತ ಹೆಚ್ಚಿನ ದ್ವೇಷ ತಾಳುವ ಅಧಿಕಾರ ಮಹಾತ್ಮಾಜಿಯವರಿಗೆ ಇಂದು ಇರುತ್ತಿತ್ತು. ಆದರೆ ಅವರೇ ಇಂದು ತಮ್ಮ ದ್ವೇಷಭಾವವನ್ನೆಲ್ಲ ಅಳಿದು ಸ್ನೇಹಹಸ್ತ ನೀಡಿರುವುದನ್ನು ನೋಡಿ, ಭಾರತೀಯರೆಲ್ಲರೂ ಮುಂದೆ ಬಂದು ಸ್ನೇಹ ಸಾಹಾರ್ದವನ್ನು ತೋರಿ ಜಗತ್ತಿಗೊಂದು ಪಾಠ ಹಾಕುವರೆಂದು ತುಂಬಾ ನಂಬಿದ್ದೇನೆ. ಇದೇ ಭಾರತೀಯ ಸಂಸ್ಕೃತಿ—ಇದೇ ವಿಶ್ವಭಾರತಿ.

———o———

## ಚುಟುಕಗಳು

ಶ್ರೀ ವಿ. ಜಿ. ಭಟ್ಟ ಬಿ. ಎ. ಕಡತೋಕಾ

### ಅಜ್ಜಿ

ನನ್ನ ಅಜ್ಜಿ ಕಡೆದ ಮಜ್ಜಿಗೆಯನು ಮಾತ್ರ ಕುಡಿವಳು;
ಕಾಫಿ ಚಹ, ಹೆಸರು ಸಹ
ಅವಳಿಗಾಗ; ಸಿಡಿವಳು.

### ಸತ್ಯ

ಮಳೆಯು ಮೋಡ ಕಪ್ಪು,
ಕಡಲ ನೀರು ಉಪ್ಪು;
ಹುಡುಗನೆಂದ ಮಾತು ಮುದುಕ
ತಂದೆಗೆಲ್ಲಾ ತಪ್ಪು!

(ಉಳಿದ ಭಾಗ ಮುಂದಿನ ಸಂಚಿಕೆಯಲ್ಲಿ.)

ಪಕ್ಕಕ್ಕೆ—ಇಟ್ಟು, ಜೇಬಿನಿಂದ 'ಗಣೇಶ' ಬೀಡಿಯೊಂದನ್ನು ತೆಗೆದು ಹಚ್ಚಿದ. ಕರಡಿಯಿಂದ ತಿಪಟೂರಿನ ಪರೆಗೆ ತನಗಾದ ನಷ್ಟವನ್ನು ಆ ಬೀಡಿಯ ಹೊಗೆಯೊಂದಿಗೆ ಮರೆತುಬಿಡಲು ಪ್ರಯತ್ನಿಸುತ್ತಿದ್ದಂತೆಯೆ ರೈಲು ಮುಂದಕ್ಕೆ ಹೊರಟಿತು. ಗಲಾಟೆ ಕೊಂಚ ಕಡಿಮೆಯಾಯಿತು. ಹುಸೇನನ ಪರಿಚಯದ ಗಾಡಿಯವನೊಬ್ಬ ಆಲ್ಲಿಗೆ ಬಂದ ಆ ಹೊತ್ತಿಗೆ—

"ಆಜ್ ಆಯಾ ಕ್ಯಾ ದಾದಾ?" ಎಂದು ಕುಶಲ ಪ್ರಶ್ನೆಮಾಡಿದ. ಮಾತು-ಕತೆ ಮುಗಿದ ಮೇಲೆ ತನ್ನ ಗಾಡಿಗೆ ಕೂಲಿ ಏನೂ ಸಿಕ್ಕಲಿಲ್ಲವೆಂದೂ, ಹುಸೇನನನ್ನು ಊರೊಳಕ್ಕೆ ತಾನು ಕರೆದೊಯ್ಯುವುದಾಗಿಯೂ ಹೇಳಿದ.

ಇನ್ನೇನು ಗಂಟು ಹೊತ್ತುಕೊಂಡು ಹೊರಗೆ ಹೋಗಬೇಕು, "ಯಾರೋ ಅದು?" ಎಂದು ಕೂಗಿದರು ಬಿಳೀ ಕೋಟಿನವರೊಬ್ಬರು.

"ಏನ್ ಸ್ವಾಮಿ?"

"ಟಿಕೆಟ್ ಎಲ್ಲಿ?"

"ಇಕೋ ದೇವ್ರೂ!"

"ಇದೇನಿದು?"

"ಕಲಾಯಿ ಮಾಡೋ ಸಾಮಾನು ದೇವ್ರು!"

"ಇಷ್ಟುದೊಡ್ಡ ಗಂಟು".... ಲಗೇಜ್ ಯಾಕೆ ಮಾಡಿಸಲಿಲ್ಲ?"

"ಇದಷ್ಟಿದೆ ಸ್ವಾಮಿ?.... ಲಗೇಜ್ ಮಾಡ್ಸೋಕೆ?"

"ಎಲ್ಲಿ ತೂಕ ಹಾಕು"—ಹುಸೇನ್ ಇಂದು ಬೆಳಿಗ್ಗೆ ಯಾರ ಮುಖ ನೋಡಿದ್ದನೋ!—ಪಾಪ!

"ಇದಕ್ಕಾಗಲೇ ಲಗ್ಗೇಜ್ ಕೊಟ್ಟೀದೀನಿ ಬುದ್ಧಿ" ಗೋಗರೆಯುವ ಧ್ವನಿಯಿಂದ ಹೇಳಿದ ಹುಸೇನ್.

"ಯಾರಿಗೆ.... ಚೀಟಿ ಎಲ್ಲಿ?"

"ಕರಡಿ ಸ್ಟೇಷನ್‌ನಲ್ಲಿ ಪೋಲೀಸಾತನ್ಗೆ ರೂ ಪಾಯಿ ಕೊಟ್ಟೆ; ಗಾಡೀಲಿ ಗಾರ್ಡ್‌ಸಾಹೇಬರಿಗೆ ಹನ್ನೆರಡಾಣೆ ಕೊಟ್ಟಿ...."

"ಚ್ಚ! ಅದು ಬೇರೆ.... ಲಗೇಜ್ ಎಲ್ಲಿ ಕೊಟ್ಟೆ?"

ಹುಸೇನ್ ಜಾಜಿಗೆ ಮೂರ್ಛೆ ಬರುವಂತಾಯಿತು. ಆಪರೆ ಮಾಡುವನೇನು? ಗಂಟಿಲ್ಲದೆ ಅವನ ಉದ್ಯೋಗ ಹೇಗೆ ನಡೆಯಬೇಕು?

———o———

# ಪ್ರಗತಿ

( ಪುನರ್ವಿಶ್ಲೇಷಣಾತ್ಮಕ ಪ್ರಬಂಧ )

## ಉತ್ತರಾರ್ಧ

ಶ್ರೀ. ನಾಡಿಗೇರ ಲಕ್ಷ್ಮಣರಾಯರು, ಬಿ.ಎ., ಬಿ.ಟಿ. ಪುಣೆ

☆

**ಪ್ರತಿಯೊಬ್ಬ ಮಾನವನೂ ತನ್ನ ಕರ್ತವ್ಯವನ್ನು ಅರಿತು, ಜೀವನವನ್ನು ಪವಿತ್ರಗೊಳಿಸಲು ಪ್ರಯತ್ನಿಸುವುದರಲ್ಲಿಯೆ ಪ್ರಗತಿಯ ದಾರಿಗುಪ್ತಗಾಮಿಯಾಗಿ ಸಾಗಿದೆ. ಇಂತಹ ಪ್ರಯತ್ನಶೀಲರೇ ನಿಜವಂದ ಪ್ರಗತಿಶೀಲರು.**

☆

### ಆರ್ಥಿಕ ಜೀವನ

ಭಾರತೀಯರಿಗೆ ಬಡತನದ ಬಳಲುವಿಕೆಯನ್ನು ಒಣ್ಣಿಸಿ ಹೇಳುವ ಆವಶ್ಯಕತೆಯಿಲ್ಲ. ಆಮೇರಿಕೆ ಮೊದಲಾದ ಔದ್ಯೋಗಿಕ ರಾಷ್ಟ್ರಗಳಲ್ಲಿ ಆರ್ಥಿಕಸ್ಥಿತಿಯನ್ನು ಅಭ್ಯಾಸಿಸಿ ಬಡತನದ ಮಟ್ಟವನ್ನಳೆಯಲು ಎಷ್ಟೋ ಸಮ್ಮೇಲನಗಳು ಕರೆಯಲ್ಪಟ್ಟಿವೆ. ಆ ಸಮ್ಮೇಲನಗಳ ವರದಿಗಳನ್ನು ಓದಿಕೊಂಡು, ಬಡತನವನ್ನು ನೀಗಿಸಲು ಆಗಿಂದಾಗ ಪ್ರಯತ್ನಗಳೂ ನಡೆದುವು. ಬಡತನದ ಕಾರಣಗಳನ್ನು ಸ್ವಲ್ಪದರಲ್ಲಿಯೆ ಕೆಳಗಿನಂತೆ ಹೇಳಬಹುದು:

೧. ಐತಿಹಾಸಿಕ:—ಪರರಾಷ್ಟ್ರಾಧೀನಗಳಾದ ರಾಷ್ಟ್ರಗಳ ಬೆನ್ನುಗಳನ್ನು ಬಡತನವು ಬಿಡುವಂತಿಲ್ಲ. ಇಂಗ್ಲಂಡಿಗೆ ಅಧಿನವಾದ ಆಯರ್ಲಂಡ್, ಮಿತ್ರರಾಷ್ಟ್ರಗಳಿಗೆ ಆಂಕಿತವಾದ ಕಳೆದ ಯುದ್ಧಾನಂತರದ ಜರ್ಮನಿ ಇವು ಅಲ್ಪ ಅವಧಿಯ ಅಧೀನತೆಯ ಉದಾಹರಣೆಗಳು. ಶತಮಾನಗಳವರೆಗೆ ಪರಾಧೀನವಾದ ಹಿಂದುಸ್ತಾನದ ಪರಿಸ್ಥಿತಿಯಂತೂ ಕಲ್ಪನಾತೀತವಾಗಿದೆ.

೨. ಭೌಗೋಲಿಕ:—ಪ್ರಾಕೃತಿಕ ಸೌಕರ್ಯಗಳು, ಅನುಕೂಲ ಹವೆ ಇತ್ಯಾದಿ.

೩. ಜೀವವೈಜ್ಞಾನಿಕ:—ಆರೋಗ್ಯವ್ಯ ವಂಶಪರಂಪರಾಗತವಾದುದರಿಂದ, ಸಂತತಿಯ ಆರೋಗ್ಯವ್ಯ ರಾಷ್ಟ್ರೀಯಸಂಪತ್ತು.

೪. ಮಾನಸಶಾಸ್ತ್ರೀಯ:— ಒಮ್ಮೊಂದೊಮ್ಮೆ ರಾಷ್ಟ್ರ-ರಾಷ್ಟ್ರಗಳನ್ನೇ ಬಡತನದ ಸೆಳವಿನಲ್ಲಿ ಎಳೆಯಲು ಕಾರಣವಾದ ಯುದ್ಧಗಳು; ಸ್ವಾರ್ಥ, ಅಸೂಯೆ, ಅಂಜಿಕೆ, ಆಶೆ, ತಪ್ಪುತಿಳಿವಳಿಕೆ, ಪ್ರಚಾರ ಇತ್ಯಾದಿಗಳ ಪರಿಣಾಮಗಳು.

೫. ಸಾಂಸ್ಕೃತಿಕ:—ಶಿಕ್ಷಣದ ಕೊರತೆ, ರೂಢಿ, ಪದ್ಧತಿ, ಜಡ ಇತ್ಯಾದಿ.

೬. ಹಾಳು, ಅವ್ಯವಸ್ಥೆ, ಜೂಜುಗಾರಿಕೆ, ಅಯೋಗ್ಯತೆ, ಅನಾರೋಗ್ಯತೆ, ಆಲಸ್ಯ, ನಿರುದ್ಯೋಗತನ, ರೋಗ, ಸಾವು ಇತ್ಯಾದಿ.

೭. ರಾಷ್ಟ್ರೀಯ ಸಾಂಪತ್ತಿಕ:—ಉಪ್ಪನ್ನ ಮತ್ತು ಆದನ್ನು ಹಂಚುವಿಕೆಯಲ್ಲಿ ತಾಳ-ಮೇಳಗಳಿಲ್ಲದಿರುವುದು.

ಪ್ರತಿಯೊಬ್ಬ ಮಾನವನು ಸುಖದಿಂದಿರಬೇಕಾದರೆ, ಅವನ ಉಪಜೀವನ, ಆರೋಗ್ಯ, ಅಚ್ಚುಕಟ್ಟುತನ, ಮನೋರಂಜನೆಗಳಿಗೆ ಅತಿಯಾಗಿರದಿದ್ದರೂ ಅವಶ್ಯವೆನಿಸುವಷ್ಟು ಅನುಕೂಲತೆಗಳು ಆಗತ್ಯ. ಇವೆಲ್ಲ ನಮಗೆ ದೊರೆಯಬೇಕಾದರೆ, ಪ್ರತಿಯೊಂದು ರಾಷ್ಟ್ರವೂ ಸ್ವತಂತ್ರವಾಗಿರಬೇಕು. ಅಳುವವರು ಷೇಕ್ಸ್‌ಪಿಯರನ "ಕಿಂಗ್ ಲಿಯರ್" ನಲ್ಲಿಯ ಅರಸನಂತಿರಬೇಕು; ಅವನ ಪ್ರಾರ್ಥನೆಯನ್ನು ಜ್ಞಾಪಕಕ್ಕೆ ತಂದುಕೊಂಡರೆ ಅವನ ಪರಿಚಯ ತಾನೆ ಆಗುವುದು.

" Poor Naked wretches, where so ever ye are,
That bide the petting of this pitiless storm,
How shall your unhoused heads, your unfedsides,
Your looped and windowed ruggedness, defend you,
From seasons such as these ? Oh, I have taken,
Too little care of this. Take physic, pomp;
*Expose thyself to feel what wretches feel,*
*That thou may' st shake the super flux to them,*
And show the Heavens more just."

This is one of the noblest prayers that ever fall from human lips. *If nobady has too much every body will have enough.*

ಪ್ರತಿಯೊಬ್ಬ ಅರಸನೂ, ಸಿರಿವಂತನೂ, ಈ ರೀತಿ ಬಡವರಲ್ಲಿ ಬಡವರಾಗಿ ಜೀವನ ಕಳೆದು ನೋಡಿದರೆ, ಅವರಿಗೆ ಬಡತನದ ಕಾಹಿನ ಕಲ್ಪನೆಯು ಒಂದೇ ಬರುವುದು. ಮಿತಮೀರಿ ಯಾವನೂ ಧನವನ್ನು ಕೂಡಿಡದಿದ್ದರೆ ಅದರ ಕೊರತೆಯಾಗುವುದೂ ಸಾಧ್ಯವಿಲ್ಲ.

ರಾಷ್ಟ್ರದ ಕಲೆ, ಸಂಸ್ಕೃತಿ, ಸಾಹಿತ್ಯ, ವಿಜ್ಞಾನಗಳಿಗೆ ಉತ್ತೇಜನ ಸಿಕ್ಕಬೇಕಾದರೆ, ಸ್ವಾತಂತ್ರ್ಯ ಮತ್ತು ಸಂಪತ್ತು ಬೇಕೇ ಬೇಕು. ಬಡತನದ ಬೇರನ್ನು ಸದಲಿಸಿದ ಹೊರತು ಪ್ರಗತಿ ಅಶಕ್ಯ.

### ಶಾಸನ ಪದ್ಧತಿ

ನ್ಯಾಯವೇ ಶಾಸನಪದ್ಧತಿಯ ಧ್ಯೇಯವಾಗಿರಬೇಕು. ರಾಷ್ಟ್ರಗಳ ಕಟವಾಣಗಳು ಮುಖಂಡರ ಕೈಗಳಲ್ಲಿ. ಮುಖಂಡರಲ್ಲಿ ಎರಡು ತೆರನಾದ ಮುಖಂಡರುಗಳನ್ನು ಕಾಣಬಹುದು:

[ ಅ ] ಮೊದಲನೆಯ ತರಗತಿಯವರು:— ಅನುಯಾಯಿಗಳ ಅಜ್ಞಾನವನ್ನು ತಮ್ಮ ಅಡಿಗಲ್ಲನ್ನಾಗಿರಿಸಿದೆ, ಸಾರ್ವಜನಿಕ ಹಿತ,

ಸದಸದ್ವಿವೇಕ, ಸುಬುದ್ಧಿ, ಸುವಿಚಾರ, ಸತ್ಯಗಳನ್ನು ಸಾಹಾಯ್ಯಕಗಳನ್ನಾಗಿರಿಸಿಕೊಂಡು ನಡೆಯುವವರು.

[ಆ] ಎರಡನೆಯ ತರಗತಿಯವರು:— ಅನುಯಾಯಿಗಳ ಅಜ್ಞಾನವೇ ಇವರ ಕಾರ್ಯರಂಗದ ತಳಗಲ್ಲು. ವ್ಯಕ್ತಿದ್ವೇಷ, ಧರ್ಮದ್ವೇಷ, ಅಜ್ಞಾನ, ಅಂಧಶ್ರದ್ಧೆಗಳೇ ಇವರ ಅಸ್ತ್ರಗಳು; ಇಂಥವರಿಂದ ಅಪೂರ್ಣನಾದ ಮಾನವನು ಪೂರ್ಣನಾಗಬೇಕು. ಭೂತದಯೆಗೆ ಬೆಂಕಿಹಚ್ಚಿ ಆತ್ಮದ ಆರಳನ್ನು ಹುರಿದುಕೊಳ್ಳುವವರಿವರು.

ಈ ಎರಡು ತರದ ಮುಖಂಡರಲ್ಲಿ ಎರಡನೆಯ ತರಗತಿಯವರಿಗೆ ತೀವ್ರ ಬೆಂಬಲದೊರೆಯುವಲ್ಲಿ ಸಂದೇಹವಿಲ್ಲ; ಯಶಸ್ಸು ಸಿಗುವುದೂ ಸುಲಭ; ಆದರೆ ಅದು ನಿತ್ಯವಾದುದಲ್ಲ. ಆದುದರಿಂದ ಪ್ರತಿಯೊಬ್ಬ ಮುಂದುನರೆದ ಸಮಾಜದ ಸದಸ್ಯನೆನಿಸಿಕೊಳ್ಳುವವನು, ಸ್ವತಃ ಮುಖಂಡನಾಗಲು ಸಾಧ್ಯವಿಲ್ಲದಿದ್ದರೂ, ಮುಖಂಡರನ್ನು ಆರಿಸಿಕೊಳ್ಳುವ ಜಾಣತನವನ್ನು ಪಡೆದಿರಬೇಕು. ಭಾರತದಲ್ಲಿ ಈಗ ಜಿನ್ನಾ, ಅಝಾದ್, ಅಂಬೇಡಕರ, ಗಾಂಧೀ, ಸಾವರಕರ, ಜವಾಹರ ನೊಡಲಾದ ಎಷ್ಟೋ ಮುಖಂಡರಿದ್ದಾರೆ. ಅವರಲ್ಲಿ ನಮ್ಮ ಮುಖಂಡನನ್ನಾಗಿ ಯಾರನ್ನು ಇಟ್ಟುಕೊಳ್ಳಬೇಕೆಂಬುದು ಜಾಣತನದ ಮಾತೇ ಸರಿ. ನಮ್ಮ ಮುಖಂಡತ್ವದ ನಿರ್ಧಾರವೇ ನಮ್ಮ ದೇಶವನ್ನು ನಿರ್ಣಯಿಸುವುದು

### ಧಾರ್ಮಿಕ ಜೀವನ:

ಧರ್ಮ:— ಇದೊಂದು ಗಹನ ವಿಚಾರವೇ ಸರಿ. ಇಲ್ಲಿ ಈ ವಿಷಯವನ್ನು ನಾನು ಕೂಲಂಕಷವಾಗಿ ಚರ್ಚಿಸುವುದಿಲ್ಲ. ನನ್ನ ಹಿರಿಯರು 'ಈಗಿನ ಹುಡುಗರಲ್ಲಿ, ತರುಣರಲ್ಲಿ ಧರ್ಮವೇ ಇಲ್ಲ; ಎಲ್ಲರೂ ಧರ್ಮದ್ರೋಹಿಗಳು' ಎಂದು ಹೇಳುವುದು ಸಾಮಾನ್ಯವಾಗಿ ಅನುಭವಕ್ಕೆ ಬರುವ ಸೂತ್ರ! ಆದರೆ ಜೋನಾಥನ್ ಸ್ವಿಫ್ಟನು ಹೇಳಿದಂತೆ, ಪರಸ್ಪರ ದ್ವೇಷ ಹುಟ್ಟಿಸಲು ಸಾಕಷ್ಟಾದ ಧರ್ಮಕ್ಕೆ ನಮ್ಮಲ್ಲಿ ಕೊರತೆಯಿಲ್ಲ.

ಸದ್ಯದ ನಮ್ಮ ಧರ್ಮಕ್ಕೆ ದೆವ್ವ ಬಡಿದಿದೆ. ಭಟ್ಟರೇ ಭೂತಗಳು; ಪಾದ್ರಿಗಳೇ ಪಿಶಾಚಿಗಳು; ಆಚಾರ್ಯ-ಅಯ್ಯನವರುಗಳೇ ಆರಿಷ್ಟರು. ಈ ದೆವ್ವಗಳು ಅಜ್ಞಾನದ ಅಂಧಕಾರದಲ್ಲಿ ಅಲೆದಾಡುತ್ತಿವೆ. ತಪ್ಪು ತಿಳಿವಳಿಕೆಯ ತೊರೆಯ ತೆರೆಗಳಲ್ಲಿ ತೇಲಿ ಮುಳುಗುತ್ತಿವೆ. ದೇವದೂತರೆಂದು ಹೇಳಿಕೊಳ್ಳುವ ಈ ದೆವ್ವಗಳು ಧರ್ಮಕ್ಕೆ ಜಿಗಳಿಗಳಂತೆ ಅಂಟಿಕೊಂಡಿವೆ. ಇವರಿಗೆ ಅಜ್ಞಾನವೇ ಆಧಾರ; ಸುಳ್ಳೇ ಸೂತ್ರ; ಭೇದವೆಣಿಸುವುದೇ ಬೇಕು; ದ್ವೇಷವೇ ದಿಂಡು, ಮೋಸವೇ ಮಾರ್ಗ! ಈ ಸಂದರ್ಭದಲ್ಲಿ ಒಂದು ಕತೆ ನೆನಪಾಗುತ್ತದೆ. ಒಬ್ಬ ಸಾಧುವಿನ ಸಮಾಧಿಯ ಮೇಲೆ ಒಂದು ಮಠವಿತ್ತು. ಅಲ್ಲಿ ಒಬ್ಬ ಸಂನ್ಯಾಸಿ ಇದ್ದನು. ಆ ಸಮಾಧಿಯಲ್ಲಿ ಎಲುವುಗಳಿದ್ದುವು. ಆ ಎಲುಬುಗಳಲ್ಲಿ ದೈವೀ ಶಕ್ತಿಯಿತ್ತು. ಸಮಾಧಿಯನ್ನು ನಿರ್ಮಿಸಿದವರು ಅದರಲ್ಲಿ ಒಂದು ಸಣ್ಣ ಕಂಡಿಯನ್ನು ಬಿಟ್ಟು, ಯಾತ್ರಿಕರು ಅದರಲ್ಲಿ ಕೈಹಾಕಿ ಎಲುವುಗಳನ್ನು ಮುಟ್ಟುವ ಏರ್ಪಾಡು ಮಾಡಿದ್ದರು. ಎಂತಹ ರೋಗವಿದ್ದರೂ ಆ ಎಲುವುಗಳನ್ನು ಮುಟ್ಟಿದಲ್ಲಿ ಮಾಯವಾಗಿ ಬಿಡುತ್ತಿತ್ತು. ಎಷ್ಟೋ ರೋಗಗಳು, ಈ ಎಲುವುಗಳನ್ನು ಮುಟ್ಟಿ ತಮ್ಮ ರೋಗ ನಿವಾರಣೆಯನ್ನು ಮಾಡಿಕೊಂಡಿದ್ದರು. ಮುಂದುವು ಅರ್ಜಿಸಿದುದು ಮರೆಯುವ ಸಂಗತಿಯಲ್ಲ. ಕೆಲದಿನ ಕಳೆದುವು; ಸಂನ್ಯಾಸಿಯ ವ್ಯವಹಾರವು ಇಳಿಮುಖವಾಯಿತು; ಗಿರಾಕಿಗಳು ಕಡಿಮೆಯಾದರು. ಆಗ ಅವನು ತನ್ನ ಒಬ್ಬನೇ ಒಬ್ಬನಾದ ಶಿಷ್ಯನನ್ನು ಕರೆದು, 'ಮಗುವೇ ಜನವಟ್ಟಣೆ ಹೇಗೂ ಕಡಿಮೆಯಾಗಿದೆ; ನಾನೊಬ್ಬನೇ ಯಾತ್ರಿಕರ ಕ್ಷೇಮ ಸಮಾಚಾರ ನೋಡಿಕೊಳ್ಳುವೆ; ನೀನು ನಿನ್ನ ಉಪಜೀವನದ ಮಾರ್ಗ ಕಂಡುಕೊ; ಇಲ್ಲಿಂದ ಹೊರಡು' ಎಂದು ಅವನಿಗೆ ಹೇಳಿ, ಇಷ್ಟು ದಿನಗಳ ವರೆಗಿನ ಅವನ ಸೇವೆಗೆ ಪ್ರತಿಫಲವೆಂದು ಒಂದು ಬಿಳಿಯ ಕತ್ತೆ, ಒಂದಿಸಿತು ಹಣ ಕೊಟ್ಟು ಆಶೀರ್ವದಿಸಿ ಬೀಳ್ಕೊಟ್ಟನು. ಆ ಯುವಕನು ಬಿಳಿಯ ವಾಹನವನ್ನೇರಿ ಹೊರಟನು. ಅವನ ಗುರುವಿತ್ತ ಹಣ ತೀರಿತು ಕೆಲವೇ ದಿನಗಳಲ್ಲಿ. ಹೊಟ್ಟೆಗೆ ಸಿಕ್ಕದೆ ಕತ್ತೆಯೂ ಸತ್ತಿತು. ಕತ್ತೆಯನ್ನೇರಿ ಬಂದವನೂ ಸಾಯುವಂತಾದನು. ಆ ಶಿಷ್ಯನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಮುಂದೇನೂ ತೋಚದೆ ದಿಗಿಲು ಬಿತ್ತು. ಒಮ್ಮೆಲೆ ಒಂದು ವಿಚಾರ ಮಿಂಚಿದಂತಾಗಿ, ಆ ಕತ್ತೆಯನ್ನು ದಾರಿಯ ಪಕ್ಕದಲ್ಲಿ ಹುಗಿದು, 'ಒಬ್ಬ ಸಿದ್ಧಾಪಿ ಸತ್ತಿದ್ದಾನೆ; ಅವನ ಸಮಾಧಿಗಾಗಿ ನೆರವೀಯಿರಿ' ಎಂದು ಬೇಡುತ್ತ ಕುಳಿತನು. ಕೂಡಿದ ಹಣದಿಂದ ಅದರ ಮೇಲೊಂದು ಮಠ ಕಟ್ಟಿಸಿದನು. ಸಾವಿರಾರು ಯಾತ್ರಿಕರು ಆ ಮಠಕ್ಕೆ ಬಂದು ಎಲುವನ್ನು ಮುಟ್ಟಿ ತಮ್ಮ ರೋಗನಿವಾರಣೆ ಮಾಡಿಕೊಳ್ಳುವ ವ್ಯವಸಾಯ ಮತ್ತೆ ನಡೆಯಿತು. ಶಿಷ್ಯನಾಗಿದ್ದ ಸಾಧುವು ಕೆಲವೇ ದಿನಗಳಲ್ಲಿ ಧನವಂತನಾದನು; ಒಂದು ದಿನ ಅವನು ತನ್ನ ರಾಜಧೀವಿಯೊಂದಿಗೆ, ಸಂಸಂಚಾಮುಗಳನ್ನೊಳಗೊಂಡು, ವೃದ್ಧನಾದ ಗುರುವಿನೆಡೆಗೆ ನಡೆದನು. ಇವನ ಆಟ್ಟಾಟೋಪಗಳನ್ನು ಕಂಡು ಗುರುವಿಗೆ ಸೋಜಿಗವಾಯಿತು: 'ಮಗುವೇ ನಿನ್ನ ಊರ್ಜಿತಾವಸ್ಥೆಯ ಕತೆಯನ್ನು ನನಗಷ್ಟು ಹೇಳು' ಎಂದನು. ಒಳ್ಳೆಯ ಗೌರವದಿಂದ ಈ ತರುಣನು ನುಡಿದನು:

"ಮುದುಕರು ಮೂರ್ಖರು; ಯುವಕರು ಯುಕ್ತಿವಂತರು!"

ಗುರುವಿಗೆ ಇನ್ನೂ ಸೋಜಿಗವೆನಿಸಿತು. ಎಲ್ಲರೂ ಹೋದ ಮೇಲೆ ಏಕಾಂತದಲ್ಲಿ ತನ್ನ ಗಳಿಕೆಯ ಗುಟ್ಟನ್ನು ಸವಿಸ್ತಾರವಾಗಿ ಸಾದ್ಯಂತವಾಗಿ, ಶಿಷ್ಯನು ಎಲ್ಲವನ್ನೂ ಹೇಳಿದನು. ಎಲ್ಲವನ್ನೂ ಕೇಳಿದ ಪರಿಸಾಧುವು ಮರುಸಾಧುವಿಗೆ, ಹೇಳಿದನು: "ಮಗುವೇ, ನೀನು ತಾರುಣ್ಯವನ್ನೆಲ್ಲ ನನ್ನೊಡನೆ ಕಳೆದೆ; ಇಲ್ಲಿ ಅನೇಕ ಮಾಟಗಳನ್ನೂ ರೋಗನಿವಾರಣೆಯನ್ನೂ ನೋಡಿದ್ದೀಯೆ. ಇಲ್ಲಿ

(೫ನೆಯ ಪುಟ ನೋಡಿರಿ)

೩೦. ವಿಷನಿಮಿಷಗಳು

( ಬಾಳ ನೆನಹುಗಳು )

★

ಬರೆದವರು ಹಿರೇಮಲ್ಲೂರ ಈಶ್ವರನ್ ; ಪ್ರಕಾಶಕರು ಕೆಳಿಯರ ಕೂಟ, ಬ್ಯಾಡಗಿ. ಬೆಲೆ ೧-೮-೦.

ಕನ್ನಡಸಾಹಿತ್ಯದಲ್ಲಿ ಹೊಸತಾಗಿಯೇ ಅಡಿಯಿಟ್ಟ ತರುಣ ಸಾಹಿತ್ಯಿಕನ ಈ ಹೊಸಬಗೆಯ ಪುಸ್ತಕಕ್ಕೆ ಶ್ರೀಮಾನ್ ಬಿ. ಪಿ. ರಾಜರತ್ನಂ ಅವರು ಮುನ್ನುಡಿ ಬರೆದಿದ್ದಾರೆ. ಪತ್ರರೂಪದಿಂದ ಅವರು ಬರೆದ ಮುನ್ನುಡಿಯಲ್ಲಿ "... ನೀವು ಕೊಟ್ಟಿದ್ದ 'ವಿಷ-ನಿಮಿಷ'ಗಳ ಹಸ್ತಪ್ರತಿಯನ್ನು ಎರಡುಸಲ ಓದಿದೆ. ಬರವಣಿಗೆ ಸೀಯಾಳದಷ್ಟು ಸರಳ. ಆಡಂಬರವಿಲ್ಲ, ಉದ್ರೇಕವಿಲ್ಲ, ಕೃತಕತೆಯಿಲ್ಲ. ಹೊಸತನ ತೋರಿಸಬೇಕೆಂಬ ಹುಚ್ಚು ಹೊಳಪು ಹೆಸರಿಸಲ್ಲಿ ಈಚೀಚೆಗೆ ತೇಲಿ ಬರುತ್ತಿರುವ ಕಶ್ಮಲದ ಕಣ ಒಂದಿಷ್ಟಿಲ್ಲ. ಮಾತುಗಳ ಮಿತಗಮನ ವಸ್ತುವಿಗೆ ತಕ್ಕಂತೆ, ಮಕ್ಕಳ ನಡೆಯಂತೆ ಸಹಜ. ಅಂಥ ಮಿಂಚು, ಗುಡುಗು, ಮಳೆ, ಅಲೆಕಲ್ಲು ಇಲ್ಲದಿದ್ದರೂ 'ಕಂಠಸ್ತಂಭಿತ'ವಾದ ಕಣ್ಣಿನ ಶೇಷ ಉದ್ದಕ್ಕೂ ಹೃದಯಸ್ಪರ್ಶಿಯಾಗಿದೆ." ಎಂದು ಯಥೋಚಿತವಾದ ಮಾತಿನಲ್ಲಿ ಈ ಕೃತಿಯ ಗುಣ ಹೊಗಳಿದ್ದಾರೆ.

ಇದರಲ್ಲಿಯ ೩೦ ನೆನಹಿನ ಚಿತ್ರಗಳೆಲ್ಲ ಕಲ್ಪನಾಲೋಕದುವಲ್ಲ ; ಲೇಖಕರು ಕಂಡು ಅನುಭವಿಸಿದ ಸತ್ಯ ಲೋಕದುವ. ಸಹೃದಯರಾದ ಈ ಲೇಖಕರು, ವಾಸ್ತವ ಸಂಗತಿಗಳನ್ನೆಲ್ಲ ಒಂದು ಬಗೆಯ ಸಾಹಿತ್ಯಸೂತ್ರದಲ್ಲಿ ಅಂದವಾಗಿ ಬಂಧಿಸಿ ಇದರಲ್ಲಿ ಸಂಗ್ರಹಿಸಿದ್ದಾರೆ. ಅವರ ತಮ್ಮಂದಿರು ತಂಗಿಯರು ಇವರ ಅಗಲಿಕೆಯ ನೆನಹುಗಳೇ ಇಲ್ಲಿಯ ಹೆಚ್ಚಿನ ಚಿತ್ರಗಳಿಗೆ ವಸ್ತುಗಳಾಗಿ ನಿಂತಿವೆ. ಎಲ್ಲ ಚಿತ್ರಗಳಲ್ಲಿಯೂ ಲೇಖಕರ ತಾಯಿ ತನ್ನ ಸುಸಂಸ್ಕೃತ ಹೃದಯ, ಉದಾತ್ತ ಮನಸ್ಸು, ಕರುಳಿನ ಒಲವು, ಮಕ್ಕಳ ಅಗಲಿಕೆಯ ಮೂಲಕ ಒದಗಿದ ಕಳವಳ ಇವುಗಳನ್ನು ತೋರಿಸುತ್ತ ಮೂಡಿ ನಿಂತಿರುವಳು. ಇಂತಹ ಸಂಸ್ಕಾರ ಸಂಪನ್ನ ತಾಯ ಬಳಿ ಬಳೆದುದರಿಂದಲೆ ಲೇಖಕರು ಇಷ್ಟೊಂದು ಸಹೃದಯರಾಗಿದ್ದಾರೇನೋ ಎಂದು ಓದಿದವರಿಗೆ ಎನಿಸದೆ ಇರದು.

ತಂದೆ ಕನ್ನಡ ಶಾಲೆಯ ಮಾಸ್ತರಾದರೂ, ಕಲಿತ ಗಂಡುಸಾದರೂ, ಲೇಖಕರ ನೆನಹಿನ ಅರಳಿಕೆಗೆ ಹುಚ್ಚು ಕಾರಣರಾಗಿಲ್ಲ. ತಾಯಿ, ತಮ್ಮಂದಿರಾದ ಶಿವು-ಸಿದ್ದ-ಶಂಕರ-ಶೇಖರರು, ತಂಗಿ ಪಾರ್ವತಿ ಇವರ ವಿಷಯಕವಾದ ಅಳವಾದ ಪ್ರೀತಿ ಈ ಶಬ್ದಚಿತ್ರಗಳ ನಿರ್ಮಿತಿಗೆ ಕಾರಣವಾಗಿದೆ. ಈ ವ್ಯಕ್ತಿಗಳೊಂದಿಗೆ ಹಿನ್ನೆಲೆಯಲ್ಲಿ ಬರುವ— ಹಿರಿಯ ಮಲ್ಲೂರಲ್ಲರುವ— ಬೇರೆ ಬೇರೆ ವ್ಯಕ್ತಿಗಳೂ ಸ್ಥಳ-ಕಾಲಗಳ ಬಣ್ಣನೆಗಳೂ ರಮಣೀಯವಾಗಿ ಚಿತ್ರಿತವಾಗಿವೆ.

ನತ್ತುಹೋದ ತಮ್ಮಂದಿರು-ತಂಗಿಯರ ನೆನಹುಗಳೆ ಈ ಚಿತ್ರಗಳಿಗೆ ಮೂಲವಾಗಿದ್ದರೂ, ಲೇಖಕರ ತಂತ್ರ ಕೆಲವು ನೆನಪುಗಳಿಗೆ ಹಗಲುಗನಸಿನ ಸ್ವರೂಪ ಕೊಟ್ಟಿದೆ; ಇನ್ನು ಕೆಲವು ನೆನಹುಗಳಿಗೆ ಯಕ್ಷಲೋಕದ ಕತೆಯ ಸ್ವರೂಪ ಕೊಟ್ಟಿದೆ. ಆದರೂ ಎಲ್ಲ ಕಡೆಯಲ್ಲಿಯೂ ಕೊನೆಗೆ ಮಿಡಿಯುವ ಕರುಣೆ, ವಾಸ್ತವದ ನೆನಪನ್ನು ನಮ್ಮ ಮನದೆದುರು ನಿಲ್ಲಿಸುತ್ತದೆ. ಆದುದರಿಂದಲೆ ನತ್ತ ಶಿವು, ಸಿದ್ದ, ಶಂಕರ, ಶೇಖರ, ಪಾರ್ವತಿಯರು ಸಹೃದಯ ಪಾಠಕರ ತಮ್ಮಂದಿರು ತಂಗಿ ಆಗುವರು; ತಮ್ಮ ಸಾವಿನ ದುಃಖವನ್ನು ಅವರಿಗೂ ಉಣಿಸುವರು.

ಇಲ್ಲಿಯ ಎಲ್ಲ ಚಿತ್ರಗಳಲ್ಲಿ 'ವಿಷಕನ್ಯೆ', 'ಶಂಕರನಿಗೆ ದಾಹವಿಲ್ಲ' 'ಶೂನ್ಯಜೊಡನೆ', 'ಪಾಂಡವರ ಜಾತ್ರೆ', 'ಮಾದಿ ಪಳ್ಳ ತುಂಬಿ ಬಂದಾಗ', 'ತಾಯಿಕಂಡ ಕನಸು', 'ಮಸಣದಿಂದ ಮನೆಗೆ', 'ಬಹುಮಾನ', 'ಸೀಗೆಮಣ್ಣಿನೆಯ ದಿನ' ಇವು ಉತ್ತಮ ಕಲಾಕೃತಿಗಳು. ಲೇಖಕರು ಭಾವುಕರು— ಭಾವಿಕರು. ಕನಸು, ಶಕುನ, ಪವಾಡಗಳಲ್ಲಿ ನಂಬುಗೆಯುಂಟಾಗುವಂತೆ ಬರೆದ ಇಪರಲ್ಲಿಯ ಕೆಲವು ಚಿತ್ರಗಳನ್ನು ವಾಸ್ತವವಾದಿಗಳು ಒಪ್ಪಲಿಕ್ಕಿಲ್ಲ. 'ಕಲ್ಲುಗಳ ಕಂಬನಿ' ಎಂಬ ಚಿತ್ರವೂ 'ಮಕ್ಕಳ ಲೋಕ' ಎಂಬ ಚಿತ್ರವೂ ಶ್ರೀರವೀಂದ್ರರ ಎರಡು ಸಣ್ಣಕತೆಗಳ ಛಾಯೆಯಲ್ಲಿ ಬಳೆದಂತೆ ಎನಿಸುತ್ತವೆ. 'ಮೋಟು ಪುರಾಣದೊಡನೆ' ಎಂಬ ಚಿತ್ರಲೇಖನದಲ್ಲಿಯ ವ್ಯಂಗ್ಯನಿಯೆ ಒಪಲಾಗಿದೆ; ಮಿಕ್ಕುವುಗಳಲ್ಲಿ ಕಾಣುವ ಸೌಂದರ್ಯ ಪ್ರೀತಿ, ಆದರ್ಶವಾದಗಳು ಇಲ್ಲಿ ಪ್ರಗತಿಶೀಲ ಸಾಹಿತ್ಯಿಕರ ಅತಿವಾಸ್ತವ ವಾದಕ್ಕೆ ಇಳಿದಿವೆ. ಬೋಧದ ತಲೆ ಮೇಲೆ ಅಗಿ ಕಲೆ ತನ್ನ ಮುಖವನ್ನು ಮರಸಿಕೊಂಡಿದೆ. ಈ ಚಿತ್ರದಲ್ಲಿ ಶಿವನ ನೆನಪನ್ನು ಎಳೆಸು ತಂದು ಕೂಡಿಸಿದಂತಾಗಿದೆ ಹೊರತು ಸಹಜವಾಗಿರುವುದಿಲ್ಲ.

'ವಿಷನಿಮಿಷಗಳು' ಎಂಬ ಪುಸ್ತಕದ ಹೆಸರಿನ ಔಚಿತ್ಯದ ಬಗ್ಗೆ ಮುನ್ನುಡಿಕಾರರಂತೆ ನಾವೂ ಸಂದಿಗ್ಧಭಾವದವರಾಗಿದ್ದೇವೆ. ಕನ್ನಡದಲ್ಲಿ 'ವಿಷವೇಳೆ' 'ವಿಷನಿಮಿಷ' ಎಂಬ ಪದಪ್ರಯೋಗಗಳು ಇರುವುವಾದರೂ, ಅವು ಅನುಚಿತಕಾರ್ಯ ನಡೆದ

ವೇಳೆಯನ್ನು ಸೂಚಿಸುವ ಅರ್ಥವುಳ್ಳವುಗಳಾಗಿವೆ. ಇಲ್ಲಿ ಲೇಖಕರ ತಮ್ಮಂದಿರು ತಂಗಿ ಸತ್ತ ನಿಮಿಷ 'ವಿಷನಿಮಿಷ' ವಾದರೂ, ಅವರ ನೆನಪಿನ ನಿಮಿಷಗಳು ಕರುಣೆಯ ರಸನಿಮಿಷಗಳಾಗಿರುವುವು. ಕರುಣೆಗೆ ಸಂಚಾರಿಯಾಗಿ ಅನುರಾಗ, ವಾತ್ಸಲ್ಯ, ಸಖ್ಯ ಮೊದಲಾದ ಭಾವಗಳು ಕಾರ್ಯ ಮಾಡಿರುವುವು. ನೆನಹುಗಳಲ್ಲಿ, ಕಳೆದು ಹೋದವರೊಡನೆ ಇದ್ದಂತಾಗಿ ಲೇಖಕನಿಗೆ ಒಂದು ಬಗೆಯ ರಸಸಂವೇದನೆ ತಲೆದೋರುವುದು; ಕೊನೆಗೆ ಸ್ಥಾಯಿಯಾದ ಕರುಣಾರಸವೇ ಲೇಖಕರ ನಿಟ್ಟುಸಿರಿಗೆ ಕಾರಣವಾಗುವುದು. ಆದುದರಿಂದಲೆ ಈ 'ರಸನಿಮಿಷ'ಗಳನ್ನು 'ವಿಷನಿಮಿಷಗಳು' ಎಂದು ಕರೆದುದು ಅಷ್ಟೊಂದು ಸಮಂಜಸವಾಗಿ ಕಾಣದೆಂದು ನಮಗೆ ಎನಿಸುವುದು.

ಭಾಷೆ ಸರಳವಾಗಿದೆ, ಲಲಿತವಾಗಿದೆ. ಸಂಭಾಷಣೆಯಲ್ಲಿ ಹಳ್ಳಿಗರಾಡುವ ಮಾತಿನ ಸಹಜತೆಯಿರುವುದಾದರೂ, ವರ್ಣನೆಗಳ ಪ್ರಸಂಗಗಳು, ಭಾಷೆಯ ವಿಚಾರದಲ್ಲಿ ಲೇಖಕರ ಹಳೆಯ ಹೊಸ ಸಾಹಿತ್ಯದ ಅಭ್ಯಾಸವನ್ನು ಹೊರದೋರಿಸುವಂತಿವೆ. ಆದರೆ ಸಂಕ್ರಮಣಾವಸ್ಥೆಯ ಭಾಷೆ, ಕೆಲವೊಂದು ಹೊಸ ಪಡೆನುಡಿಗಳನ್ನು ಬಳಸುವಾಗ, ಅಲ್ಲಲ್ಲಿ ಅಭಾಸವನ್ನುಂಟು ಮಾಡುತ್ತದೆ. ಉದಾಹರಣೆಗೆಂದು ಕೆಳಗಿನ ಒಂದು ವಾಕ್ಯ ನೋಡಿ:

"ಆ ಹೊತ್ತಿಗೆ ಎರಡು ಹನಿ ಕಣ್ಣೀರು ಪಳಕ್ಕನೆ ಉಚ್ಚಿ ನೆಲದ ಮೇಲೆ ಬಿದ್ದು ಇಂಗಿ ಹೋದುವು."

'ಕಣ್ಣೀರು ಉಚ್ಚಿ' ಎಂದು ಹೇಳುವುದು ಅಪೂರ್ವ ಪ್ರಯೋಗ. ಕಣ್ಣೀರು ಉದುರಿ, ಉರುಳಿ, ಜಾರಿ, ಸುರಿದು ಎಂದು ಪ್ರಯೋಗಿಸುವುದು ರೂಢಿ. ಇಲ್ಲಿದ್ದ ಅರೂಢ ಪ್ರಯೋಗ ಆಶ್ಚೀಲದ ಅಭಾಸ ಹುಟ್ಟಿಸುತ್ತದೆ. ಇಂತಹ ಕೆಲವು ಸಣ್ಣ ಪುಟ್ಟ ದೋಷಗಳಿದ್ದರೂ, ಶ್ರೀ. ಈಶ್ವರನ್ ಅವರು ಕನ್ನಡಿಗರಿಗೆ ತಮ್ಮ ಈ ಸುಂದರ ಕೃತಿಯನ್ನು ಒದಗಿಸಿಕೊಟ್ಟು ಉಪಕಾರ ಮಾಡಿದ್ದಾರೆಂದು ಯಾರೂ ಒಪ್ಪಬೇಕಾದ ಮಾತು. ಈಶ್ವರನ್ ಅವರ ಕಲೆ ಇನ್ನೂ ಪರಿಣತ ಹೊಂದಲಿ; ಅದರ ಪರಿಪಕ್ವ ಫಲ ಹೆಚ್ಚಾಗಿ ಕನ್ನಡಕ್ಕೆ ದೊರೆಯಲಿ.

—ಬಿ.ಟಿ.ಗೇ. ಕೃಷ್ಣಶರ್ಮ

---

(೧೨ನೆಯ ಪುಟದಿಂದ ಮುಂದೆ ಸಾಗಿದ್ದು)

ಬರುತ್ತಿದ್ದ ಯಾತ್ರಿಕರು ನಿನ್ನ ಕತ್ತೆಯ ತಾಯಿಯ ಎಲುಪನ್ನು ಮುಟ್ಟಿ ಮುಡುಪು ಹಾಕುತ್ತಿದ್ದರು. "... ಈಗ ವಾಸ್ತವಜ್ಞರು ಇಂತಹ ಎಷ್ಟೋ ದೆವ್ವಗಳನ್ನು ಬಿಡಿಸಿದ್ದಾರೆ. ಪ್ರತಿಯೊಬ್ಬನಲ್ಲಿ ಶಾಸ್ತ್ರೀಯ ದೃಷ್ಟಿ ಬೆಳೆದರೆ, ಈ ಎಲ್ಲ ದೆವ್ವಗಳನ್ನೋಡಿಸಿ, ನಿಜವಾದ ಧರ್ಮ ಸ್ಥಾಪಿಸಲು ಸಾಧ್ಯವಾಗುವುದು. ಪ್ರತಿಯೊಬ್ಬ ಸ್ತ್ರೀಯು ದೃಷ್ಟಿಯೂ ಇದರಂತೆಯೇ ಶಾಸ್ತ್ರೀಯ ದೃಷ್ಟಿಯಾಗುವ ತನಕ, ಧರ್ಮವು ಪಿಶಾಚ್ಯ ಪೀಡಿತವಾಗಿಯೆ ಉಳಿಯುವುದು.

### ನಿಜವಾದ ಧರ್ಮವೆಂದರೇನು?

ಧರ್ಮವೆಂದರೆ ಕರ್ತವ್ಯ: ತನ್ನ ಸಲುವಾಗಿ, ದೇವರಿಗಾಗಿ ಒಬ್ಬ ವ್ಯಕ್ತಿಯ ಕರ್ತವ್ಯವೇ ಧರ್ಮ! ವ್ಯಕ್ತಿ ಮತ್ತು ದೇವರ ನಡುವಿರುವ ಸಂಬಂಧವೇ ಧರ್ಮ!! ಈ ಸಂಬಂಧವನ್ನು ಸಂವರ್ಧಿಸುವ ಸಾಧನೆಗಳು ಪರೋಪಕಾರ, ಪರಹಿತ, ಪರಸೇವೆ, ಪರಪ್ರೇಮ, ಪರಗೌರವ, ಪರಸಹಿಷ್ಣುತೆಗಳಾಗಿರಬೇಕು. ದಾನದಂತೆ ಧರ್ಮವಾದರೂ ಮನೆಯಲ್ಲಿಯೆ ಹುಟ್ಟಬೇಕು. ಆದರೆ ಅದು ಅಲ್ಲಿಯೇ ಉಳಿಯಬಾರದು. ಈ ಲೋಕದಲ್ಲಿ ನಮ್ಮ ಅಣ್ಣ–ತಮ್ಮಂದಿರನ್ನು ಅನಾದರಿಸಿ, ಪರಲೋಕವನ್ನು ಪೂಜಿಸುವುದು ಧರ್ಮವಂತೂ ಮೊದಲೇ ಅಲ್ಲ.

ವಿದ್ಯಾರ್ಥಿದಶೆಯಲ್ಲಿ ನಮ್ಮ ಅಂತಃಕರಣಗಳು ಅನೇಕ ಉದಾತ್ತ ಧ್ಯೇಯಗಳಿಂದ ತುಂಬಿ ತುಳುಕುತ್ತಿರುವುವು. ನಮ್ಮ ಬಾಳು ದೀಪದ ಹುಳುಗಳ ಬಾಳಿಗೆ ಸಮನಾಗಿದೆ; ಆ ಹುಳುಗಳು ಹೇಗೆ ನಕ್ಷತ್ರಗಳನ್ನು ಮುಟ್ಟಲು ಆತುರ ಪಡುವುವೋ ಹಾಗೆ ನಮ್ಮ ಮುಂದೆ ಏನಾದರೂ ಮುಟ್ಟುವ ಆತುರ ಆಕಾಂಕ್ಷೆಗಳಿರಬಹುದು. ಆದರೆ ಅವೆಲ್ಲ ದೆವ್ವಬಡಿದ ಧರ್ಮದ ಹಾವಳಿಯಿಂದ ದೂರ ಉಳಿಯಬೇಕು. ವಿದ್ಯಾರ್ಥಿದಶೆಯಲ್ಲಿ ವಿವಿಧ ವಿಚಾರಗಳನ್ನು ಬೀರುವ ಎಲ್ಲ ಧರ್ಮಗಳ ತತ್ತ್ವಗಳನ್ನು ಪ್ರೇಮದ ಸಾಣೆಗೆಯಲ್ಲಿ ಸಾಣೆಸಿ, ಅವೆಲ್ಲವುಗಳನ್ನೂ ಒಂದುಪೂಡುವ ಹಿರಿಗುರಿಯನ್ನು ಮುಟ್ಟಲು ಹವಣಿಸಬೇಕು. ಇದೇ ತರದ ಆಕಾಂಕ್ಷೆಯಿಂದಲೇ ಮಾನವಧರ್ಮವನ್ನು ವಿಶ್ವಧರ್ಮದ ಸಿಂಹಾಸನದಲ್ಲಿ ಮಂಡಿಸಬಹುದು. ಧರ್ಮದ ಮರ್ಮವೇನೆಂದು ಯಾರೂ ಪ್ರಶ್ನಿಸಬಹುದು: 'ನೀತಿಯೇ ಧರ್ಮ! ಪ್ರೀತಿಯೇ ದೇವರು!!" ಇದು ನನ್ನ ಉತ್ತರವು. ಅದರಂತೆ ನಾನು ಆಚರಿಸುತ್ತಲೂ ಇದ್ದೇನೆ. ನಮ್ಮ ಬಾಳಿನಲ್ಲಿ ಪ್ರತಿದಿನ ಆಚಾರ-ವಿಚಾರಗಳು ಸ್ವಚ್ಛವಾಗಿ ಪರಿಶುದ್ಧವಾಗಿದ್ದರೆ, ನಾವು ಮಲಗುವ ಪೂರ್ವದಲ್ಲಿ—ಸಾವಿನ ದವಡೆಯಲ್ಲಿ ಸಿಗುವ ಪ್ರಸಂಗ ಬಂದಾಗ—ಸದಸದ್ವಿವೇಕದ ಸರ್ವವು ಅನಿರೀಕ್ಷಿತವಾಗಿ ಭುಸ್ಸೆಂದು ಬೆದರಿಸಲಾರದು. ಈ ರೀತಿಯಲ್ಲಿ ಪ್ರತಿಯೊಬ್ಬನೂ ತನ್ನ ಜೀವನವನ್ನು ಪವಿತ್ರ ಮಾಡಲು ಪ್ರಯತ್ನಿಸಿದ್ದಾದ್ದಲ್ಲಿ ಪ್ರಗತಿಯ ಒಗಟನ್ನು ಒಡೆದಂತಾಗುವುದು. ಆಗಲೇ ನಿಜವಾದ ಮಾನವ ಪ್ರಗತಿ ಸಾಧಿಸುವುದು.

# ಅಂಚೆಯವರ ಸಾರ್ವತ್ರಿಕ ಮುಷ್ಕರ

ಶ್ರೀ. ಕುಳುಕುಂದ ಶಿವರಾಯ, ಹುಬ್ಬಳ್ಳಿ

( ಈ ತಿಂಗಳಲ್ಲಿಯ ಸರ್ವಜನ ಕುತೂಹಲಕಾರಿಯಾದ ಘಟನೆಯೆಂದರೆ ಅಂಚೆಯ ಜನರ ಸಂಪಿನ ವಿಚಾರ. ಶ್ರೀ. ಕುಳುಕುಂದ ಶಿವರಾಯರು ಈ ಲೇಖನವನ್ನು ಆಯತ್ತ ಸಮಯಕ್ಕೆ ಒದಗಿಸಿಕೊಟ್ಟುದರಿಂದಲೂ, ಇದಕ್ಕೆ ಎಡೆ ಕೊಡುವುದು ಅತ್ಯವಶ್ಯ ಎನಿಸಿದುದರಿಂದಲೂ ನಾಲ್ಕೂ ನಿಟ್ಟಿನ ನೋಟ'ದ ಎಡೆಯನ್ನೇ ಇದಕ್ಕೆ ಕೊಡಲಾಗಿದೆ. ಸಮಯೋಚಿತವಾದ ಈ ಲೇಖನವನ್ನು ಒದಗಿಸಿಕೊಟ್ಟುದ್ದಕ್ಕಾಗಿ ಲೇಖಕರಿಗೆ ಅಭಿನಂದನೆಗಳು. —ಸಂ. ಜ. )

★

ಮೊನ್ನೆ ಜುಲೈ ೧೫ ರ ದಿನದಿಂದಲೆ ಮೊದಲಾಗಿ "ಟಕ್ ಟಕ್" ಬಾಗಿಲು ಬಡಿಯುವದು ನಿಂತಿತು. ಮನಿಯಾರ್ಡರು, ರೆಜಿಸ್ಟರಾದ ಕಾಗದ ಒಂದಿಲ್ಲ : ಬೆಲೆಯ ಕಾಗದ ಪತ್ರ-ಪತ್ರಿಕೆಗಳನ್ನು ಯಾರೂ ತಂದೊಗೆಯಲಿಲ್ಲ. ಓಲೆ ತರುವ ಅಂಚೆಯವರು ಸಂಪು ಹೂಡಿದರು.

೧೯೨೦ ರಲ್ಲಿ ಹಿಂದೊಮ್ಮೆ ಬಾಂಬೆಯಿಯ ಅಂಚೆಜವಾನರು ಸಂಪು ಹೂಡಿದ್ದರು. ನಾಲ್ಕು ತಿಂಗಳ ಕಾಲ ಹೋರಾಡಿ ಜಯಶೀಲರಾಗಿದ್ದರು. ಈಗ ಮತ್ತೆ ಕಾಲು ಶತಮಾನ ಕಳೆದ ಮೇಲೆ ಸಂಪು ನಡೆದಿದೆ. ಈ ಸಂಪು ಸಾರ್ವತ್ರಿಕ ಸಂಪು. ದೀರ್ಘಕಾಲದ ಹೊಯ್ದಾಟದ ಅನಂತರ ಆರಂಭವಾಗಿದೆ.

" ಪಗಾರ ಮತ್ತು ಭತ್ಯೆಯನ್ನು ಹೆಚ್ಚಿಸಬೇಕು; ರಜೆಯ ಪಾಗೂ ವೈದ್ಯಾಪ್ಯವೇತನದ ನಿಯಮಗಳನ್ನು ಬದಲಿಸಬೇಕು; ಕೆಲಸದಿಂದ ಕಿತ್ತೊಗೆಯುವೆದನ್ನು ನಿಲ್ಲಿಸಿ ತಾತ್ಪರ್ತಿಕ ಜನರನ್ನು ಖಾಯಂ ಮಾಡಬೇಕು; ಮೇಲ್ತರಗತಿ-ಕೆಳತರಗತಿ ಭೇದ ಇರಕೂಡದು; ಅಂಚೆಯವರ ಸ್ಥಾನದಿಂದ ಕಾರಕೂನರ ಸ್ಥಾನಕ್ಕೆ ಬೇಕಡ ಖಂರಂತೆ ಜಾಗೆಗಳನ್ನು ಭರತಿ ಮಾಡಬೇಕು; ರಜೆಯ ದಿನಗಳಲ್ಲಿ ಕೆಲಸ ಮಾಡಿದ ಜನರಿಗೆ ವಿಶೇಷ ಪಗಾರ ಕೊಡಬೇಕು; ವೈದ್ಯಾಪ್ಯವೇತನ ಸಿಗುವ ಅವಧಿಯನ್ನು ಸಮಾಪಿಸಿದ ನೌಕರನು ಅಕಸ್ಮಿಕವಾಗಿ ತೀರಿಕೊಂಡರೆ, ಆಪ್ತ ವರ್ಷಗಳ ಒಂದೊಂದು ತಿಂಗಳ ಪಗಾರ 'ಗ್ರಾಚ್ಯುಟಿ' ರೂಪದಿಂದ ಸಿಗಬೇಕು" ಇವು ಅಂಚೆಯವರ ಹನ್ನೆರಡು ಬೇಡಿಕೆಗಳಲ್ಲಿ ಮುಖ್ಯವಾದುವು.

ಅಂಚೆಯವರ ಜೀವನ ದುಃಖದ ಜೀವನ; ಅವರ ಬಾಳುಗುಲಾವರ ಬಾಳು. ಎಲ್ಲರೂ ಇದನ್ನೊಪ್ಪುತ್ತಾರೆ. ೧೫-೨೦ ರೂಪಾಯಿಗಳಷ್ಟು ಸಿಗುವ ವೇತನ ಬಲು ಕಡಿಮೆಯೇ ಸರಿ. ಪೋಸ್ಟ ಮತ್ತು ಟೆಲಿಗ್ರಾಫ್ ಖಾತೆಯಲ್ಲಿ ಎಂಟು ರೂ. ಗಳಷ್ಟು ಕಡಿವ್ಯ ಪಗಾರದವರೂ ಇದ್ದಾರೆ. ಮೂವತ್ತು ವರ್ಷಗಳ ದುಡಿತದ ಬಳಿಕ ಕೆಳತರಗತಿಯ ನೌಕರ ನಿವೃತ್ತನಾದಾಗ, ಅವನಿಗೆ ತಿಂಗಳಿಗೆ ಎಂಟು ರೂಪಾಯಿ ವೇತನ ಸಿಗುತ್ತದೆ. ಅಂಚೆಯವನು ಇಷ್ಟೇ ತಾಸು ದುಡಿಯಬೇಕೆಂಬ ನಿಯಮವಿಲ್ಲ. ದಿನಕ್ಕೆ ಎಂಟುತಾಸು ನ್ಯಾಯವಾದ ದುಡಿತ ಎಂದು ಲೆಕ್ಕ ಹಾಕಿದರೆ, ಆತ ವರ್ಷದಲ್ಲಿ ಒಟ್ಟು ೫೬೫ ದಿನ ದುಡಿದಂತಾಗುತ್ತದೆ!

ಅಂಚೆಯ ನೌಕರರ ಸಂಘದ ಒಂದು ಪ್ರಕಟನೆಯಿಂದಲೇ ನಾಲ್ಕು ಮಾತನ್ನು ಎತ್ತಿ ಹೇಳುವುದಾದರೆ :

" ಒಂದು ಕುಟುಂಬದ ಜೀವನವೇತನವನ್ನಾದರೂ ಕೊಡ್ರಿ. ಹೆಜ್ಜಾದ ಧಾರಣೆಯ ಕಡೆಗೆ ಲಕ್ಷಗೊಟ್ಟು ತುಟ್ಟಿಭತ್ತೆ ಹೆಚ್ಚು ಕೊಡ್ರಿ ಮತ್ತು ದುಡಿತದ ಯೋಗ್ಯ ವೇಳೆಯನ್ನು ನಿಯಮಿಸಬೇಕು. ರೇಲ್ವೆ ಪ್ರಕಾರ ರೇಶನ್ ಸಿಗುವ ವ್ಯವಸ್ಥೆ ಮಾಡಬೇಕು. ಈಗಿದ್ದ ನೌಕರರ ನವಕರಿ ಬಗ್ಗೆ ಆಶ್ವಾಸನೆ ಕೊಡ್ರಿ... ಅಂತಾ ನಮ್ಮ ಬೇಡಿಕೆಗಳು ಅವೆ. ಈ ಬೇಡಿಕೆಗಳನ್ನು ಇದುವರೆಗೂ ಪೂರ್ತಿಗೊಳಿಸಲಿಲ್ಲ. ಆದರೆ [illegible] ಕೃಷ್ಣಪ್ರಸಾದರ ಕಮೀಟಿ ನೇಮಿಸಿದರು. [illegible] ಹೊರಗೆಡವಲಿಲ್ಲಾ. ಅನಂತರ ತೀನ್ಸ್ [illegible] ತಾತ್ಪರ್ತಿಕ ಮಧ್ಯಸ್ಥಿಕೆ ಕಮೀಟಿ ನೇಮಿಸಿ ಅದ್ದು ಸಹಿತ ಇದುವರೆಗೂ ಹೊರಗೆಡವಲಿಲ್ಲಾ. "

ಕೃಷ್ಣಪ್ರಸಾದರು ಪೋಸ್ಟ ಮತ್ತು ಟಿಲಿಗ್ರಾಫ್ ಡಿರೆಕ್ಟರ್ ಜನರಲರು. ೧೯೪೫ರಲ್ಲಿ [illegible] ಮುಂಬೇವೂರರು ಆ ಸ್ಥಾನದಲ್ಲಿದ್ದಾಗ, ಅಂಚೆ ನೌಕರರ ಸಂಭವನೀಯವಾಗಿದೆ ಎಂದು ಕಂಡುಬಂದಿದ್ದರಿಂದ ಸ್ಥಿತಿಗತಿಯನ್ನು ವಿಚಾರಿಸಲು ಬಂದಿದ್ದರು. ಸಮಿತಿಗೆ ಕೃಷ್ಣಪ್ರಸಾದರೇ ಅಧ್ಯಕ್ಷರಾಗಿದ್ದರು. ಸಮಿತಿಯ ವರದಿಯನ್ನೊಪ್ಪಿಸಿತು. ಆದರೆ [illegible] ಬಹಿರಂಗಗೊಳಿಸಲೇ ಇಲ್ಲ.

[illegible] Manchester.

21627
[illegible]TED
[illegible]TER, 12.:

ಆದರೆ, ಆ ವರದಿ ಅಂಜೆಯವರ ದುರ್ಗತಿಯ ಬಗ್ಗೆ ಕಳಕಳಿಯಿಂದ ವಾದಿಸಿತ್ತಂತೆ. ಅಂಜೆಯವರು ತೀರ ನಿರಾಶೆಯ ಜೀವನನಡೆಯಿಸುತ್ತಿದ್ದುದು; ಸಾಲದಲ್ಲಿ ಮುಳುಗಿಸಿದ್ದುದು; ಎಷ್ಟೋ ಸಾವಿರ ಮಂದಿ ಪಕಾಣರ ಸುಲಿಗೆಗೆ ಒಳಗಾಗಿದ್ದುದು– ಈ ಎಲ್ಲ ವಿಷಯಗಳನ್ನೂ ವರದಿಮಾಡಿ, ಅಂಜೆಯವರ ಪರಿಸ್ಥಿತಿಯಲ್ಲಿ ಸುಧಾರಣೆ ಅವಶ್ಯ ಆಗಬೇಕೆಂದು ಸಮಿತಿ ಸೂಚಿಸಿತ್ತು ಎಂಬುದರಿ ಈಗ ಗೊತ್ತಾಗಿದೆ. ಆ ವರದಿಯನ್ನೊಪ್ಪಿಸಿದ ಕೃಷ್ಣಪ್ರಸಾದರೇ ಈಗ ಅಂಜೆಯ ಹಿರಿಯ ಅಧಿಕಾರಿಗಳಾಗಿದ್ದಾರೆ. ತಾವೇ ಹಿಂದೆ ಸೂಚಿಸಿದ ಸುಧಾರಣೆಗಳನ್ನು ಮಾಡಲು ಈಗ ನಿರಾಕರಿಸುತ್ತಿದ್ದಾರೆ!

ಅಂಜೆಯವರ ಎಲ್ಲಾ ಬೇಡಿಕೆಗಳನ್ನೂ ಮಾನ್ಯಮಾಡಿದರೆ ೧೦·೪೫ ಕೋಟಿ ರೂಪಾಯಿ ಖರ್ಚಾಗುವುದು. ೧೯೪೮-೪೯ರಲ್ಲಿ ಅಂಜೆ ಮತ್ತು ತಂತಿ ಖಾತೆಯವರು ಒಟ್ಟು ೬೩·೭೫ ಕೋಟಿ ರೂಪಾಯಿ ಲಾಭಗಳಿಸಿರುವರೆಂಬುದು ನೆನಪಿಡಬೇಕಾದ ವಿಷಯ. ೧೯೩೪ನೆಯ ಇಸವಿಯಿಂದ ಈ ವರೆಗೆ ಇಂತಹ ಲಾಭ ಆಗುತ್ತ ಬಂದಿದೆ. ಅಧಿಕ ಆದಾಯ ತೆರಿಗೆಯ ಮೂಲಕ ೬೫ ಕೋಟಿ ರೂಪಾಯಿ ಪ್ರತಿ ವರ್ಷ ತಾತಾ-ಬಿರ್ಲಾ ಸಂಸ್ಥೆಗಳಿಂದಲೇ ಸರಕಾರಕ್ಕೆ ಸಿಗುತ್ತಿತ್ತು. ಕಳೆದ ಬಜೆಟ್ ಅಧಿವೇಶನದಲ್ಲಿ ಸರಕಾರವೇ ಅದನ್ನು 'ಮನ್ನಾ' ಮಾಡಿತು. ಆ ಉತ್ಪನ್ನ ಹಾಗೆಯೇ ಇರುತ್ತಿದ್ದರೆ, ಅಂಜೆ ನೌಕರರ ಬೇಡಿಕೆಯ ಎಳು ಪಾಲಷ್ಟು ಪರಿಹಾರಕೊಡುವುದು ಸಾಧ್ಯವಿತ್ತು!

ಆದರೆ ಜನರ ಬೇಡಿಕೆಯನ್ನು ಸರಕಾರವಾಗಲಿ ಅಧಿಕಾರಿ ವರ್ಗವಾಗಲಿ ಮಾನ್ಯಮಾಡಿದ ಉದಾಹರಣೆ ಇದೆ ಎಲ್ಲಿ? ಗಿರಣಿ ಕೂಲಿಕಾರರಂತೆ, ಬೀಡಿ ಕೆಲಸಗಾರರಂತೆ, 'ಅತ್ಯಂತ ವಿಧೇಯ ಸೇವಕ'ರಾದ ಅಂಚೆಯ ಜನರೂ 'ಸಂಪ್ರಹೂಡುವಂತಹ ಕ್ರಾಂತಿಕಾರಕ ಕೆಲಸ'ವನ್ನು ಮಾಡಬಲ್ಲರೆಂಬುದನ್ನು ಸರ್ಕಾರ ಕನಸಿನಲ್ಲೂ ಯೋಚಿಸಿರಲಿಲ್ಲ. ಹಿಂದೆ ಎರಡುಬಾರಿ ಯಾಗುನೌಕರರು ಸಂಪಿನ ನೋಟೀಸು ಕೊಟ್ಟಿದ್ದರು. ಅಧಿಕಾರಿಯುವುದು. ತಕ್ಷಣೆ ಕೊಟ್ಟೊಡನೆ ನೋಟೀಸನ್ನು ಹಿಂತೆಗೆದುಪ್ಪರು. ಎರಡನೆಯಬಾರಿ, ಬೇಡಿಕೆಗಳಲ್ಲಿ ಕೆಲವನ್ನು ಧರ್ಮಸೀ ತೀರ್ಪುಕೊಡುವುದಕ್ಕಾಗಿ ನ್ಯಾಯಾಧೀಶರೊಬ್ಬರನ್ನು ಒಬ್ಬ ವ್ಯಕ್ತಿಯೂ ಆಗಿತ್ತು. ಆದರೆ ಅತ್ಯಪ್ಪ ಅಕಾಂತ ನೌಕರರು ನಡುವಿನ್ನ ಬೇಡಿಕೆಗಳನ್ನೂ ಮನ್ನಿಸಲೇಬೇಕೆಂದು ಕೊನೆಯ ಸಂಪವರ್ಧಿಸಿ, ತಮ್ಮ ಹೋರಾಟದ ಕೊನೆಯ ಅಸ್ತ್ರವನ್ನು ಪರಪ್ಪೇವು, ಧರ್ಮ ಅಕ್ರಮವಿದೆ' ಎಂದು ಕೃಷ್ಣಪ್ರಸಾದರು ಬೆದರಿಕೆ ಅದು ಅಲ್ಲಿಯೇ ನಿಂತಿತು. ಸಂಪು ಹೂಡಿ. ಅಣ್ಣ–ತಮ್ಮಂದಿರಿಯುತ್ತಾ ಹೋಯಿತು. ಮುಷ್ಕರ ಹೂಡಿವುದು ಧರ್ಮವಂತರದ ಕಾಳು ಜುಲೈ ೧೫ರಿಂದ ಸಿಕ್ಕಲಾರದೆಂಬ ಅಜ್ಞೆ ಬಂತು. ಅವರು ಸರಕಾರೀ ವಸತಿಗಳನ್ನೂ ಬಿಟ್ಟು ಹೋಗಬೇಕೆಂಬ ಕಟ್ಟಾಜ್ಞೆಯಾಯಿತು. ಕೊನೆಯದಾಗಿ "೭೨ ತಾಸುಗಳಲ್ಲೇ ಮುಷ್ಕರ ಹೂಡಿದವರು ಹಿಂದಿರುಗಿ ಬಂದರೆ ಅವರ ಅಪರಾಧವನ್ನು ಮನ್ನಿಸಲಾಗುವುದು" ಎಂದು ಹೇಳಿದ್ದಾಯಿತು. ಎಲ್ಲ ಉಪಾಯಗಳೂ ನಿರರ್ಥಕವಾದಾಗ, ಆಜ್ಞೆಗಳನ್ನು ಅವಸರವಸರವಾಗಿ ಅಧಿಕಾರಿಗಳು ಹಿಂತೆಗೆದುಕೊಂಡರು.

"ವಿಭಜಿಸಿ ಆಳಬಹುದು" ಎಂದು ಅಧಿಕಾರಿಗಳು ನಂಬಿದ್ದರು. ಅದೂ ಸುಳ್ಳಾಯಿತು. ವಿಭಜನೆ ಸಾಗದೆ ದಿನ ಕಳೆದಂತೆ ಸಂಪಿನ ಬೀಗೆ ಎಲ್ಲೆಡೆಗೂ ಹಬ್ಬಿತು.

ಮುಂಬಯಿಯ ಪೋಸ್ಟ್‌ಮಾಸ್ತರ್ ಜನರಲರಂಥವರು ದಿನಕ್ಕೆ ೫ ರೂಪಾಯಿ, ೧೦ ರೂಪಾಯಿ ಪಗಾರ ಕೊಡುವ ಆಸೆ ತೋರಿಸಿದರೂ ನೌಕರರು ಅವರಿಗೆ ಸಿಗಲಿಲ್ಲ. 'ಸ್ಕೌಟು'ಗಳು ಸಹಾಯಕ್ಕೆ ಬರಲಿಲ್ಲ. ವಿದ್ಯಾರ್ಥಿಗಳು ತಾವೂ ಮುಷ್ಕರ ಹೂಡಿ ಅಂಚೆಯವರೊಡನೆ ಸಹಾನುಭೂತಿ ತೋರಿಸಿದರು.

"ಶಾಂತರೀತಿಯಿಂದ ನೀವು ಮುಷ್ಕರ ನಡೆಯಿಸಿದರೆ ನಿಮಗೆ ಜಯ ಕಟ್ಟಿಟ್ಟದ್ದು" ಎಂದು ಗಾಂಧಿಜಿ ಅಂಚೆಯವರಿಗೆ ಹೇಳಿದರು.

ರಾಷ್ಟ್ರ ಸಭಾಧ್ಯಕ್ಷ ನೆಹರೂ, ಅಂಚೆಯ ನೌಕರರೊಡನೆ ಸಹಾನುಭೂತಿ ತೋರಿಸಿದರು. ಜಿನ್ನಾ ಸಾಹೇಬರು ಅಂಚೆಯವರ ನಾಯಕರಾದ ದಲವಿಯವರನ್ನು ಕಂಡು, ವಿಚಾರ ವಿನಿಮಯ ಮಾಡಿ ಸಹಾನುಭೂತಿ ತೋರಿಸಿದರು. ಕಾಂಗ್ರೆಸ್, ಲೀಗ್, ಕಮ್ಯೂನಿಸ್ಟರು, ಕಾಂಗ್ರೆಸ್ ಸೋಶಿಯಾಲಿಸ್ಟರು— ಎಲ್ಲರೂ ಸಂಪಿಗೆ ಬೆಂಬಲವಿತ್ತರು.

ಅಂಚೆಯ ನೌಕರರ ಸಂಘದ ಮುಖಂಡರೊಳಗಿದ್ದ ಭಿನ್ನಾಭಿಪ್ರಾಯದ ಫಲವಾಗಿ ಮುಷ್ಕರಕ್ಕೆ ನೂಧಕ್ಕೆ ತಗಲಿಲ್ಲ. ಅಂಚೆ ಜವಾನರ ಜತೆಯಲ್ಲಿ ತಂತಿಯವರೂ ಸಂಪು ಹೂಡಿದರು. ಕಾರಕೂನ ವರ್ಗದವರು ಮುಷ್ಕರದ ನೋಟೀಸು ಕೊಟ್ಟರು.

* * *

ಪರಿಸ್ಥಿತಿ ಕೆಡುತ್ತ ಬಂದಂತೆ, ಒಂದು ಲಕ್ಷ ಮುಂದಿಯ ಮುಷ್ಕರದ ಬಿಗುವು ಹೆಚ್ಚುತ್ತ ಬಂದಂತೆ, ಅಧಿಕಾರಿ ವರ್ಗವೂ ಗಾಬರಿಯಾಗಿ ಓಡಾಡುವ ಪ್ರಸಂಗ ಬಂದಿದೆ.

ತೀರ್ಪು ಕೊಡಲು ನ್ಯಾಯಾಧೀಶರಾಗಿ ನೇಮಕ ಹೊಂದಿದ್ದ ರಾಜಾಧ್ಯಕ್ಷರು ತಮ್ಮ ತೀರ್ಮಾನವನ್ನು ಸಿದ್ಧಪಡಿಸಿದ್ದಾರೆ.

ಸಂಪು ಇನ್ನೂ ಉಗ್ರವಾಗಿ ನಡೆದಿದೆ. ಎಷ್ಟೋ ಲಕ್ಷ ಮನೆಗಳಿಗೆ ಕಾಗದ ಪತ್ರಗಳಿನ್ನೂ ಬಂದು ತಲುಪಿಲ್ಲ. "ಓಲೆಯ ತಂದೇ ಓಲೆಯನು" ಎನ್ನುವ ಅಂಚೆಯ ಜೀವಾನನಿಲ್ಲ. "ಟಕ್ ಟಕ್" ಎಂದು ಬಾಗಿಲು ಸದ್ದಾಗುವುದಿಲ್ಲ. ಬಾಗಿಲು ಇನ್ನೂ ಮುಚ್ಚಿಯೇ ಇದೆ.

---

ವಿದ್ಯಾರ್ಥಿದಶೆಯಲ್ಲಿ

ಜಯಂತ

( ಹೊದಿಕೆಯ ಎರಡನೆಯ ಪುಟದಿಂದ ಮುಂದೆ ಸಾಗಿದ್ದು )

ಕನ್ನಡ 'ಕಸ್ತೂರಿ'ಯೂ ಬಹುಕಾಲ ಬಾಳಲಿ. ನಾಡಿನ ಹೆಸರನ್ನು ಮೆರೆಯಿಸಲಿ.

೪೧. **ಬಾಪೂದರ್ಶನ** ( ವ್ಯಕ್ತಿಪರಿಚಯ ) ಲೇಖಕರು ಶ್ರೀ. ನಾಡಿಗ ಕೃಷ್ಣಮೂರ್ತಿ, ಪ್ರಕಾಶಕರು ಶ್ರೀ. ಹಾ. ಶ್ರೀ. ದೊರೆಸ್ವಾಮಿ ಬಿ. ಎಸ್‌ಸಿ. ಮಿತ್ರಸಂಘ ಬೆಂಗಳೂರು ನಗರ. 'ಶ್ವೇತಕುಸುಮಮಾಲೆ'ಯ ೨ನೆಯ ಗ್ರಂಥ. ಕ್ರೌ. ಅ. ೬೮ ಪುಟಗಳು. ಬೆಲೆ ೦-೧೬-೦.

೪೨. **ಕಮಲಾ ನೆಹರು** ( ಚಿಕ್ಕ ಚರಿತ್ರೆ ). ಬರೆದವರು 'ನಾ ಕ್ಸ ಮೂ' ಅವರು. ಪ್ರಕಾಶಕರು ಶ್ರೀ. ಜಿ. ಎಚ್. ರಾಮರಾವ್ ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು. ಶ್ವೇತಕುಸುಮಮಾಲಾ ೩, ಕ್ರೌ. ಅ. ೪೮ ಪುಟಗಳು; ಬೆಲೆ ೦-೪-೦.

೪೩. **ಬಾಪೂಜಿ** (ಪ್ರಬಂಧಸಂಕಲನ). ಸಂಪಾದಕರು ಶ್ರೀ. ನಾಡಿಗ ಕೃಷ್ಣಮೂರ್ತಿ. ಮೈಸೂರಿನ ಶ್ವೇತಕುಸುಮ ಸಾಹಿತ್ಯದ ಮಾಲೆ ೪. ಕ್ರೌ. ಅ. ೪೮ ಪುಟಗಳು. ಬೆಲೆ ೦-೪-೦.

೪೪. **ಕರ್ನಾಟಕ ರಾಷ್ಟ್ರಸೇವಾದಲ** ( ಎರಡು ವರ್ಷಗಳ ಕಾರ್ಯದ ವರದಿ). ಕ್ರೌ. ಧಿ ದ ೧೦ ಪುಟಗಳು. ಕಳುಹಿಸಿದವರು ಕಾರ್ಯದರ್ಶಿ ಕರ್ನಾಟಕ ರಾಷ್ಟ್ರಸೇವಾದಲ, ಧಾರವಾಡ.

ತರುಣರಲ್ಲಿ ಸಮಾಜಹಿತದ ಪ್ರವೃತ್ತಿ ಬೆಳೆಯಬೇಕಾದರೆ, ಇಂತಹ ಸೇವಾದಲಗಳು ಪಾಠಶಾಲೆಗಳಾಗಿ ಪರಿಣಮಿಸಬಲ್ಲುವು. ಸೇವಾದಲದ ಕೇಂದ್ರಗಳು ನಾಡಿನ ಹಳ್ಳಿಹಳ್ಳಿಗಳಲ್ಲಿಯೂ ಕಾಣಬೇಕು. ಆದರ್ಶ ರಾಷ್ಟ್ರಸೇವಕರು ಹೆಚ್ಚತೊಡಗಿದಂತೆ ರಾಷ್ಟ್ರವನ್ನು ತಿಂದುಹಾಕುವ ಕ್ರಿಮಿಗಳ ಸಂಖ್ಯೆ ಕಡಿಮೆಯಾದೀತು. ಸದ್ಯ ಕಾರವಾರ ಜಿಲ್ಲೆಯಲ್ಲಿ ೬೬ ಶಾಖೆಗಳಿದ್ದು ಸೇವಕರ ಸಂಖ್ಯೆ ೨೬೧೬ ಇದೆ. ಬೆಳಗಾಂವಿಯಲ್ಲಿ ೪೨ ಶಾಖೆಗಳಿದ್ದು ೧೫೨೨ ಜನರ ದಲವಿದೆ. ಧಾರವಾಡ ಜಿಲ್ಲೆಯಲ್ಲಿ ೪೧ ಶಾಖೆಗಳಿದ್ದು ಸಂಖ್ಯೆ ೧೬೪೪ ಇದೆ. ವಿಜಾಪುರ ಜಿಲ್ಲೆಯಲ್ಲಿ ೨೭ ಶಾಖೆಗಳಿದ್ದು ದಲದ ಸಂಖ್ಯೆ ೧೧೧೫ ರಷ್ಟಿದೆ. ಬಳ್ಳಾರಿ ಜಿಲ್ಲೆಯಲ್ಲಿ ಒಂದೆ ಒಂದು ಶಾಖೆಯಿದ್ದು ಸೇವಾದಲದ ಸಂಖ್ಯೆ ೪೦ ಇದೆ. ಮೈಸೂರು, ಉತ್ತರ ಕರ್ನಾಟಕದ ಸಂಸ್ಥಾನಗಳು, ನೈಝಾಮ್ ಕರ್ನಾಟಕ ಇಲ್ಲಿ ಎಲ್ಲ ಸೇರಿ ೨೬ ಶಾಖೆಗಳಿದ್ದು ಸಂಖ್ಯೆ ೧೨೫೧ ರಷ್ಟಿದೆ. ಸೇವಾದಲದ ಕಾರ್ಯ ಒಂದು ಪ್ರದರ್ಶನವಾಗಿ ಪರಿಣಮಿಸದೆ, ಪ್ರಯೋಜನಕಾರಿಯಾದರೆ, ಕೆಲವೆ ಕಾಲದಲ್ಲಿ ನಮ್ಮ ನಾಡಿನ ತರುಣ-ತರುಣಿಯರೆಲ್ಲ ಉತ್ಸಾಹ-ಸತ್ತ್ವಗಳಿಂದ ಕೂಡಿದವರಾಗಿ, ಕರ್ತವ್ಯ ಜಾಗೃತಿಯನ್ನು ಹೆಚ್ಚಿಸಿಕೊಳ್ಳಬಹುದು.

---


DYESTUFFS
INTERMEDIATES
AND
CHEMICALS

SIZING AND FINISHING PRODUCTS
MACHINERIES FOR ALL INDUSTRIES
FOR

**COTTON, SILK, ART SILK,
WOOL, JUTE, PAPER.
LEATHER, SOAP, WAX,
COIR, VARNISHES, OILS.**

**Chemicals
Accelerators and
Anti-Oxidants
for
Rubber Industry**

S. K. KABBUR LIMITED

3, BASTION ROAD
FORT, BOMBAY

Telegrams: "DIAZO" Bombay. Telephone: 21627

CORRESPONDENTS IN ENGLAND
KABBUR & Co., LIMITED

RADHA HOUSE
Higher Ardwick, MANCHESTER, 12.:

Telegrams : " Radha," Manchester.

# ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮಿ ಮಾಡುವ ಅನುಕೂಲವುಳ್ಳ ಕರ್ನಾಟಕರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ ( Valuation ) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಪುರಣಮೊಂದಿದ ಪಾಲಿಸಿದಾರರ ವಾರಸನಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ ( Claim ) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ದುಡಿಯಲಿರುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಸಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಮ್. ಗೋವರ್ಧನರಾವ್

# ಸಕ್ಸೆಲರ್

## ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಡಮ್ಮದನಗರ ಇವರಿಂದ ಪ್ರಸಿದ್ಧವಾದುದು.

ತಾ. ೧೫-೬-೪೬ ರಿಂದ ಕೆಳಗೆ ಬರೆದ ಔಷಧಗಳು ಕಿರಕೋಳ ದರದಿಂದ ಎಲ್ಲಾ ಕಡೆಗೆ ಸಿಗುತ್ತವೆ.

(೧) ಕಾಸ್ಟೊ:- ೩೫ ಗುಳಿಗೆಗಳ ೧ ಬಾಟ್ಲಿ ೧-೦-೦
೬೫ ಗುಳಿಗೆಗಳ ೧ ಬಾಟ್ಲಿ ೧-೪-೦

(೨) ರಕ್ತದೋಷಾಂತಕ:- ಸಣ್ಣ ಬಾಟ್ಲಿಗೆ ೧-೪-೦
ದೊಡ್ಡ ಬಾಟ್ಲಿಗೆ ೩-೪-೦

(೩) ಮುಕುಲ:- ಸಣ್ಣ ಬಾಟ್ಲಿಗೆ ೧-೮-೦
ದೊಡ್ಡ ಬಾಟ್ಲಿಗೆ ೫-೪-೦

(೪) ದಂತಮಂಜನ:- ಸಣ್ಣ ಬಾಟ್ಲಿಗೆ ೦-೪-೦
ದೊಡ್ಡ ಬಾಟ್ಲಿಗೆ ೧-೪-೦

ಕಾಸ್ಟೋದ ಬೆಲೆ ಕಡಿಮೆ ಮಾಡಿದಂತೆ ಮುಕುಲ ಮೊದಲಾದವುಗಳ ದರವನ್ನು ಇದಕ್ಕಿಂತ ಕಡಿಮೆ ಮಾಡಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಮಗೆ ವಿಷಾದವೆನಿಸುತ್ತದೆ. ಸಾಧ್ಯವಾದ ಕೂಡಲೆ ಅವುಗಳ ಬೆಲೆಯನ್ನೂ ಕಡಿಮೆ ಮಾಡಲಾಗುವುದೆಂದು ನಮ್ಮ ಗ್ರಾಹಕರಿಗೆ ಆಶ್ವಾಸನ ಕೊಡುತ್ತೇವೆ.


Printed by Mr. V. Y. Jathar at the Karnatak Printing Works, Dharwar, and Published for the Proprietor Jayanti Publications, by M. V. Melligatti at the Jayanti Office, Dharwar.